ಪ್ರಾಯವಾಗಿದೆ. ದೇಶದೊಳಗೆ ಭದ್ರತೆಯುಂಟಾದ ಬಳಿಕ, ಸಂಸ್ಥಾನಗಳ ಸ್ಥಾನ-ಮಾನಗಳು ನಿಶ್ಚಿತವಾದ ಬಳಿಕ ಆಡಳಿತೆಯ ಅನುಕೂಲತೆಗಾಗಿ ಕೆಲವು ಹೊಸ ಪ್ರಾಂತಗಳನ್ನು ನಿರ್ಮಿಸುವ ಆಲೋಚನೆ ಮಾಡಬಹುದೆಂದು ದಾರ ಸಮಿತಿಯು ನಿಷ್ಕರ್ಷ ಮಾಡಿದೆ. ಭಾಷಾವಾರ ಪ್ರಾಂತರಚನೆಯ ಬಗ್ಗೆ ಬಹಳಷ್ಟು ಆಗ್ರಹವಿರುತ್ತಿದ್ದಾಗ್ಯೂ ಈಗಿನ ಸಂಧಿಕಾಲದಲ್ಲಿ ಅವನ್ನು ಮನ್ನಿಸುವದು ಸುರಕ್ಷಿತವಲ್ಲೆಂದು ಸಮಿತಿಯು ಮತವಿದೆ. ವರದಿಯನ್ನು ನೋಡಿ ದೇಶದ ಬಹುಭಾಗಗಳ ಜನರಿಗೆ ಬಹಳ ಸಮಾಧಾನವಾಗಿದೆ. ಸಮಿತಿಯು ಜುಲಾಯಿ ತಾ. ೧೯ರಿಂದ ತಮ್ಮ ಕೆಲಸವನ್ನು ಪ್ರಾರಂಭಿಸಿ ಆಂಧ್ರ ದೇಶ, ತಮಿಳ ನಾಡು, ಕೇರಳ ದೇಶ, ಕರ್ನಾಟಕ, ಮಹಾರಾಷ್ಟ್ರ, ಕೊಂಕಣ, ಮಧ್ಯಪ್ರಾಂತ ಮತ್ತು ವರ್‍ಹಾಡ ಪ್ರದೇಶಗಳಲ್ಲಿ ಸಂಚರಿಸಿ, ಸಾವಿರಾರು ಜನರ ಸಾಕ್ಷಿಗಳನ್ನು ಕೇಳಿಕೊಂಡಿತು; ೧೦೦೦ಕ್ಕಿಂತ ಹೆಚ್ಚಿಗೆ ಲಿಖಿತ ಹೇಳಿಕೆಗಳನ್ನು ಸ್ವೀಕರಿಸಿತು. ಸಮಿತಿಯೊಡನೆ ಸಹಕರಿಸಲು ಸ್ಥಾನಿಕ ಸಹಕಾರಿ ಸಭಾಸದರನ್ನು ನೇಮಿಸಲಾಗಿತ್ತು. ನವಂಬರ ತಾ. ೨೦ರ ವರೆಗೆ ಸಮಿತಿಯವರು ಎಲ್ಲ ಸಭಾಸದರೊಡನೆ ಆಲೋಚನೆ ಮಾಡಿ, ಡಿಸೆಂಬರ ತಾ. ೧೦ಕ್ಕೆ ತಮ್ಮ ವರದಿಯನ್ನು ಒಪ್ಪಿಸಿದರು. ರಾಷ್ಟ್ರದ ಭದ್ರತೆಯ ದೃಷ್ಟಿಯಿಂದ ಭಾಷಾನುಗುಣ ಪ್ರಾಂತ-ರಚನೆಯನ್ನು ಸದ್ಯಕ್ಕೆ ಕೈಕೊಳ್ಳಬಾರದೆಂದು ದಾರ ಸಮಿತಿಯು ಏಕಮತದಿಂದ ಶಿಫಾರಸು ಮಾಡಿದೆ. ಹೊಸ ಪ್ರಾಂತಗಳಲ್ಲಿ ಹೊಸ ಹೊಸ ಹುದ್ದೆಗಳನ್ನು ಪಡೆದು ಅಧಿಕಾರದ ದರ್ಪ ನಡಿಸಲು ಹಾತೊರೆಯುತ್ತಿದ್ದ ಮಹಾನುಭಾವರೆಲ್ಲ ರೊಚ್ಚಿಗೆದ್ದು ದಾರ ಸಮಿತಿಯ ವರದಿಯನ್ನು ಧಿಕ್ಕರಿಸುತ್ತಿದ್ದಾರೆ. ಕಳೆದ ತಾ. ೨೬ನೇಗೆ ನಿಷೇಧ ದಿನವಾಚರಿಸಬೇಕಾಗಿ ಕರ್ನಾಟಕ ಏಕೀಕರಣ ಸಮಿತಿಯವರು ನಿಶ್ಚಯಿಸಿದ್ದರು. ಆದರೆ ಅದಕ್ಕೆ ಅಷ್ಟೇನು ಬೆಂಬಲ ಸಿಕ್ಕಿದ್ದು ತೋರಲಿಲ್ಲ. ಜನತೆಯನ್ನು ಈಗ ಹೊಟ್ಟೆ-ಬಟ್ಟೆಗಳ ಸಮಸ್ಯೆ ಬಾಧಿಸುತ್ತದೆ. ಆ ಸಮಸ್ಯೆ ಬಿಡಿಸಲಿಕ್ಕೆ ಸಕಲ ಪ್ರಮುಖರು ವಿಶೇಷಪ್ರಯತ್ನ ಮಾಡಬೇಕಾಗಿ ಸಮಾಜದ ಅಪೇಕ್ಷೆಯುಂಟು. ಭಾಷಾನುಗುಣ ಪ್ರಾಂತ ರಚನೆಯಿಂದ ಜನಸಾಮಾನ್ಯರಿಗೆ ಬಾಧೆ ಕೊಡುವ ಹೊಟ್ಟೆ-ಬಟ್ಟೆಗಳ ಸಮಸ್ಯೆ ಬಗೆಹರಿಯುವದಿಲ್ಲ. ಹೊಸ ಪ್ರಾಂತಗಳನ್ನು ನಿರ್ಮಿಸುವದರಿಂದ ಜನರ ಮೇಲೆ ಹೊಸ ಹೊಸ ಕರಗಳು ಹೇರಲ್ಪಟ್ಟು ಲೋಕಸಂಕಟವನ್ನುಂಟು ಮಾಡುವ ಸಂಭವವಿದೆ. ನಿತ್ಯದ ಜೀವನ ಸಾಗಿಸುವದೆಂತೆಂಬ ಚಿಂತೆ ಬಹುಜನಸಮಾಜವನ್ನು ಬಾಧಿಸುತ್ತಿರುವಾಗ ಜನಪ್ರಮುಖರೆನಿಸಿಕೊಳ್ಳುವ ಮಹಾನುಭಾವರು ಭಾಷಾನುಗುಣ ಪ್ರಾಂತ-ರಚನೆಯ ಕೋಲಾಹಲವನ್ನು ಎಬ್ಬಿಸುವದು ಮೂರ್ಖತನವೇ ಸರಿ. ಆಚಾರ್ಯ ವಿನೋಬಾ ಭಾವೆಯವರ ಭಾಷೆಯಲ್ಲಿ ಹೇಳಬೇಕಾದರೆ, ರಾಜಾಧಿಕಾರಕ್ಕಾಗಿ ಮತ್ಸರದಿಂದ ನಡಿಸಿದ ಜಗ್ಗಾಟವಿದು. ಅಯೋಗ್ಯರಿಗೆ, ಸ್ವಾರ್ಥಸಾಧಕರಿಗೆ ಈಗ ಇರುವ ಪ್ರಾಂತಗಳಲ್ಲಿ ಹುದ್ದೆಗಳು ಸಿಗುವ ಆಶೆ ಕಡಿಮೆ. ಅವುಗಳನ್ನು ಬೆಳೆಸಿಕೊಳ್ಳುವದಕ್ಕಾಗಿ ಭಾಷಾಭಿಮಾನದ ಹೂಲಿ ಎಬ್ಬಿಸಿ, ಭಾಷೆಗೊಂದು ಪ್ರದೇಶ ಬೇಕು, ಆ ಪ್ರದೇಶಕ್ಕೊಂದು ರಾಜ್ಯಭಾರ ಬೇಕು. ಹೀಗೆ ಸಿದ್ಧಾಂತಗಳನ್ನು ಮಂಡಿಸುತ್ತಲಿರುವರು. ರಾಷ್ಟ್ರೀಯ ಸಭೆಯವರು ಈ ಹಿಂದೆಯೇ ಭಾಷಾವಾರ ಪ್ರಾಂತ-ರಚನೆಯನ್ನು ಕೈಕೊಂಡಿದ್ದರಿಂದಲೂ, ಈಗ ಅದನ್ನು ಪುರಸ್ಕರಿಸಿ ಕಾಲಿಸಬೇಕೆಂದೂ ಆಗ್ರಹವಾಗುತ್ತಿದೆ. ಈಗ ಪರಿಸ್ಥಿತಿ ಬದಲಿದೆಂದೂ, ಬದಲಿದ ಪರಿಸ್ಥಿತಿಗೆ ತಕ್ಕಂತೆ ಯೋಜನೆಗಳನ್ನು ಕೈಕೊಳ್ಳಬೇಕೆಂದೂ ಕರ್ನಾಟಕದ ಪ್ರಮುಖರಾದ ಶ್ರೀ|| ದಿವಾಕರ ರಂಗನಾಥರಾಯರು ಒಪ್ಪುತ್ತಾರೆ. ಆದರೂ ಭಾಷಾನುಗುಣ ಪ್ರಾಂತ-ನಿರ್ಮಾಣ-ಕಾಂಕ್ಷಿ ಮಹಾನುಭಾವರು ಜಯಪುರ ರಾಷ್ಟ್ರೀಯ ಸಭೆಯ ವಿಷಯ-ಚರ್ಚಾ ಮಂಡಳದಲ್ಲಿ ಕೋಲಾಹಲವನ್ನೆಬ್ಬಿಸಿದ್ದರಿಂದ ಈ ಪ್ರಶ್ನೆಯನ್ನು ವಿಚಾರಿಸಿ ವರದಿಯೊಪ್ಪಿಸಲು ಪಂ|| ಜವಾಹರಲಾಲ, ಸರದಾರ ಪಟೇಲ, ಡಾ|| ಪಟ್ಟಾಭಿ ಸೀತಾರಾಮಯ್ಯ ಹೀಗೆ ಮೂವರದೊಂದು ಸಮಿತಿಯನ್ನು ನೇಮಿಸುವ ಗೊತ್ತುವಳಿಯಾಗಿದೆ. ಈ ತ್ರಿಮೂರ್ತಿಗಳು ಸಮಗ್ರ ಪರಿಸ್ಥಿತಿಯನ್ನು ಸಮಾಲೋಚಿಸಿ ತ್ರಿಮಾಸಗಳಲ್ಲಿ ತಮ್ಮ ವರದಿಯನ್ನು ಒಪ್ಪಿಸಬೇಕಾಗಿರುತ್ತದೆ. ಈ ಯೋಜನೆಯಿಂದ ಭಾಷಾವಾರ ಪ್ರಾಂತ-ರಚನೆಯ ಉತ್ಸಾಹಿಗಳು ಸಮಾಧಾನ ಹೊಂದುವರೆಂದು ಆಶಿಸಲಾಗಿತ್ತು. ಆದರೆ ಕರ್ನಾಟಕ ಏಕೀಕರಣ ಸಮಿತಿಯವರು ನಿಷೇಧ ದಿನದ ಪ್ರಕಟನೆಯನ್ನು ಹೊರಡಿಸಿ ತಮ್ಮ ಹುಂಬತನದ ಪ್ರದರ್ಶನ ಮಾಡಿದ್ದಾರೆ.

* * *

ವಿದೇಶಗಳಿಂದ ಆಹಾರ ಸಾಮುಗ್ರಿಗಳನ್ನು ಸರಕಾರವು ಹೆಚ್ಚೆಚ್ಚಾಗಿ ತರಿಸಿಕೊಂಡು ಜನರನ್ನು ಕಾಪಾಡಲು ಸತತೋದ್ಯೋಗ ನಡಿಸಿದೆ. ಸಯಾಮ ದೇಶದಿಂದಲೂ ಬ್ರಹ್ಮದೇಶದಿಂದಲೂ ಅಕ್ಕಿ ತುಂಬಿ ಹಡಗಗಳು ಬರತೊಡಗಿವೆ. ಕಳೆದ ವಾರದಲ್ಲಿ ೩ ಹಡಗಗಳಲ್ಲಿ ಕೂಡಿ ಸುಮಾರು ೯ ಸಾವಿರ ಟನ್ನ ಅಕ್ಕಿ ಬಂದಿದೆ. ದೇಶದೊಳಗೂ ಅಕ್ಕಿಯ ಉತ್ಪತ್ತಿ ಬೆಳಸುವ ಪ್ರಯತ್ನಗಳು ನಡೆದಿವೆ. ಜನಸಂಖ್ಯೆ ಬೆಳೆಯುತ್ತದೆಂದು ಭೀತಿಪಡುವ ಕಾರಣವಿಲ್ಲ. ಜಗತ್ತಿನ ಜನಸಂಖ್ಯೆ ಪ್ರತಿ ವರ್ಷಕ್ಕೆ ೨ ಕೋಟಿಯಿಂದ ಬೆಳೆಯುತ್ತದೆಂದೂ, ೩೫ ವರ್ಷಗಳಲ್ಲಿ ಲೋಕಸಂಖ್ಯೆ ಇಮ್ಮಡಿಯಾಗುವದೆಂದೂ, ಇಂಗ್ಲಂಡ ದೇಶದ ಚೆಲ್ಟನ್‍ಹಮ ಸ್ಥಾನದಲ್ಲಿ ಸೇರಿದ ಅಂತರ್ರಾಷ್ಟ್ರೀಯ ಪರಿಷತ್ತು ಅಭಿಪ್ರಾಯಪಟ್ಟು, ವರ್ಷ-ವರ್ಷಕ್ಕೂ ಬೆಳೆಯುತ್ತಿರುವ ಲೋಕಸಂಖ್ಯೆಯನ್ನು ಪೋಷಿಸಲು ಭೂಮಿಯು ಸಮರ್ಥವಿದೆಂದೂ ನಿರ್ಧಾರ ಮಾಡಿದೆ. ಆಹಾರ ಸೇವನಕ್ರಮದಲ್ಲಿ ಪ್ರತ್ಯಾಸ ಮಾಡಿ, ದೇಹಧಾರಣೆಯನ್ನೇ ಗುರಿಯನ್ನಾಗಿಟ್ಟುಕೊಂಡು, ಅದಕ್ಕೆ ತಕ್ಕಂತೆ ಆಹಾರ ಜಿನಸುಗಳ ಯೋಜನೆ ಮಾಡಿ ಮಿತವಾದ ಜೀವನವನ್ನು ಉಪಭೋಗಿಸಿದರೆ ೧೫೦ ವರುಷಗಳ ತನಕ ಬೆಳೆಯುವ ಜನಸಂಖ್ಯೆಗೆ ಆಹಾರದ ಕೊರತೆ ಆಗಲಿಕ್ಕಿಲ್ಲವೆಂಬು ಆ ಸಭೆಯೊಳಗಿನ ತಜ್ಞರ ಅಭಿಪ್ರಾಯವಾಯಿತು. ಆಹಾರ ಪದಾರ್ಥಗಳನ್ನು ಕ್ರಮಗೊಳಿಸಿದರೆ, ಕೃಷಿಯನ್ನು ಸುಧಾರಿಸಿದರೆ ಅರ್ಧ ಎಕರೆ ಭೂಮಿಯ ಹುಟ್ಟುವಳಿಯಿಂದ ಒಬ್ಬ ಮನುಷ್ಯನ ದೇಹಧಾರಣೆ ನಡೆಯಬಹುದೆಂದು ತಜ್ಞರ ಅಭಿಪ್ರಾಯವಿದೆ. ನಮ್ಮ ದೇಶದೊಳಗೆ ಬಂಜರ ಬಿದ್ದ ಭೂಮಿ ಬಹಳ ಉಂಟು. ಅದನ್ನು ಸಾಗುವಳಿಯಲ್ಲಿ ತರಲು ಸರಕಾರವು ತಕ್ಕಷ್ಟು ಜಾಗ್ರತೆ ಕೊಳ್ಳುವದಿಲ್ಲ. ಪ್ರಧಾನರು ವಿನೋದಕ್ಕಾಗಿ ಸಂಚಾರ ಮಾಡಿ ರಾಜಕೋಶವನ್ನು ಬರಿದು ಮಾಡುತ್ತಿರುವರೆಂದು ಹೊನ್ನಾವರದ ವಕೀಲ ಸಂಘದವರು ಬೇಸಾಯ ಮತ್ತು ಅರಣ್ಯ ಇಲಾಖೆಯ ಮಂತ್ರಿಗಳ ಸಂಚಾರವನ್ನು ಆಕ್ಷೇಪಿಸಿ ಕೈಕೊಂಡ ಠರಾವನ್ನು ಆಳವಾಗಿ ವಿಚಾರಿಸುವದವಶ್ಯವಿದೆ. ಪ್ರಧಾನರು ಮೋಟಾರ ಬಂಡಿಗಳು ಓಡಾಡುವ ಮಾರ್ಗಕ್ಕೆ ಸಂಚರಿಸುತ್ತಾರಲ್ಲದೆ ನಿರ್ಜನ ಕುಗ್ರಾಮಗಳಿಗೆ ಹೋಗಿ ಆ ಗ್ರಾಮಗಳನ್ನು ಸುಧಾರಿಸುವ ಆಲೋಚನೆ ಮಾಡುವದಿಲ್ಲ. ಆಹಾರಧಾನ್ಯಗಳ ಆವಶ್ಯಕತೆ ವಿಗಿಲಾಗಿರುವಾಗ ಅವುಗಳ ಉತ್ಪತ್ತಿಗೆ ಅನುಕೂಲವಿದ್ದ ಭೂಮಿಗಳು ಬಂಜರ ಬೀಳುವದೂ, ಬೇಸಾಯ ಇಲಾಖೆಯ ಮಂತ್ರಿಗಳು ಆ ಬಗ್ಗೆ ದಕ್ಷತೆಯಿಂದ ಯೋಜನೆಗಳನ್ನು ಮಾಡದೆ ಇರುವದೂ ದೈವದುರ್ವಿಲಾಸದ ಸಂಗತಿ. ಹಿಂದುಸ್ಥಾನ ದೇಶ ಉದ್ಯೋಗ-ಪ್ರಧಾನ ದೇಶವಲ್ಲ; ಕೃಷಿಪ್ರಧಾನ ದೇಶವಿದೆ. ಇಂಥ ದೇಶದ ಜನರ ಪೋಷಣೆಗಾಗಿ ಆಹಾರ ಧಾನ್ಯಗಳನ್ನು ವಿದೇಶಗಳಿಂದ ಆಮದು ಮಾಡಬೇಕಾಗುತ್ತಿದ್ದುದು ಲಾಂಛನಾಸ್ಪದ ಸಂಗತಿ. ಎಲ್ಲೂ ಭೂಮಿ ಬಂಜರ ಉಳಿಯದಂತೆ ಸರಕಾರವು ಉಪಾಯಯೋಜನೆ ಮಾಡಬೇಕು.

* * *

ಸಂಸ್ಕೃತ ಭಾಷೆ ಮೃತ ಭಾಷೆಯೆಂದು ಎಣಿಸಲಾಗುತ್ತಿದೆ. ಮೊದಲು ಒರಿಸಾ ಪ್ರಾಂತದ ಗವ್ಹರ್ನರರಾಗಿದ್ದ ಮತ್ತು ಈಗ ಪಶ್ಚಿಮ ಬಂಗಾಲದ ಗವ್ಹರ್ನರರಾಗಿರುವ ಡಾ|| ಕೈಲಾಸನಾಥ ಕಟಜು ಇವರು ಸಂಸ್ಕೃತ ಭಾಷೆ ರಾಷ್ಟ್ರಭಾಷೆಯಾಗಬೇಕಾಗಿ ಕೆಲವು ದಿನಗಳ ಹಿಂದೆ ನುಡಿದ ಮಾತು ಲೋಕಪ್ರಸಿದ್ಧವಿದೆ. ಸಂಸ್ಕೃತದ ಪುರಸ್ಕಾರದಿಂದ ಮುಸಲ್ಮಾನರ ಮನಸ್ಸು ನೋಯುವದೆಂಬ ಭಾವನೆಯನ್ನು ಈಗ ಯಾರೂ ಹಿಡಿಯುವ ಕಾರಣವಿಲ್ಲ. ಕಾಬೂಲದ ವಿಶ್ವವಿದ್ಯಾಪೀಠದವರು ಮೊನ್ನೆ ಸಂಸ್ಕೃತ ಭಾಷೆಯ ಅಭ್ಯಾಸವನ್ನು ವಿದ್ಯಾಪೀಠಕ್ಕೊಪ್ಪಿದ ಎಲ್ಲ ಕಾಲೇಜುಗಳ ವಿದ್ಯಾರ್ಥಿಗಳು ಮಾಡಬೇಕಾಗಿ ವಿಧಿಸಿದ್ದಾರೆ. ಅಫಗಾನಿಸ್ಥಾನದೊಳಗೆ (೧) ಪುಸ್ತು ಮತ್ತು (೨) ಇರಾಣಿ ಹೀಗೆ ೨ ಮುಖ್ಯ ಭಾಷೆಗಳಿವೆ. ಈ ಎರಡೂ ಭಾಷೆಗಳ ಮೂಲವು ಸಂಸ್ಕೃತವೆಂದೂ, ಸಂಸ್ಕೃತ ಭಾಷೆಯ ಪ್ರಭಾವದಿಂದ ಇವೆರಡೂ ಭಾಷೆಗಳಿಗೆ ಸುಸಂಸ್ಕಾರ ದೊರೆತು ಅವುಗಳ ಉತ್ಕರ್ಷವಾಗುವದೆಂದೂ ಕಾಬೂಲ ವಿಶ್ವವಿದ್ಯಾಪೀಠದವರ ಅಂಬೋಣವುಂಟು. ಪ್ಯಾರೀಸ ವಿಶ್ವವಿದ್ಯಾಪೀಠದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾದ ಡಾ|| ಲೂಯಿ ರಿನೋ ಇವರು ಸದ್ಯಕ್ಕೆ ಹಿಂದುಸ್ಥಾನವನ್ನು ಸಂಚರಿಸಬಂದಿದ್ದಾರೆ. ಇವರ ಕೈಕೆಳಗೆ ೪೦ ಮಂದಿ ಸಂಸ್ಕೃತ ಪ್ರಾಧ್ಯಾಪಕರು ಕೆಲಸ ಮಾಡುತ್ತಿದ್ದಾರೆ. ಸಂಸ್ಕೃತ ಭಾಷೆ ಸಮೃದ್ಧ ಭಾಷೆಯೆಂದೂ ಔಷಧೋಪಚಾರ, ಕಲಾಕೌಶಲ್ಯ, ಕಾಯದೆ ಕಾನೂನು, ರಸಾಯನ ಶಾಸ್ತ್ರ, ತತ್ವಜ್ಞಾನ ಮೊದಲಾದ ವಿಷಯಗಳ ಮೇಲೆ ಸಂಸ್ಕೃತದಲ್ಲಿ ಅಮೂಲ್ಯ ಗ್ರಂಥಭಾಂಡಾರವಿರುತ್ತದೆಂದೂ, ಪೌರ್ವಾತ್ಯ-ಪಾಶ್ಚಿಮಾತ್ಯರೊಳಗೆ ಸಂಬಂಧವನ್ನುಂಟು ಮಾಡಲು ಸಂಸ್ಕೃತ ಭಾಷೆಯೇ ಕಾರಣವೆಂದೂ, ಈ ಭಾಷೆಯ ಪ್ರಸಾರ ಹಿಂದೆ ಪೂರ್ವಪಾರ್ಶ್ವದಲ್ಲಿ ಸಯಾಮ ದೇಶದ ವರೆಗೂ, ಪಶ್ಚಿಮೋತ್ತರ ಪಾರ್ಶ್ವದಲ್ಲಿ ಅಫಗಾಣಿಸ್ಥಾನದ ವರೆಗೂ ಆಗಿತ್ತೆಂದು ಆಯಾ ದೇಶಗಳಲ್ಲಿ ಸಿಕ್ಕಿರುವ ಪುರಾತನ ವಸ್ತುಗಳ ಅವಲೋಕನಗಳಿಂದ ಸಿದ್ಧವಾಗುತ್ತದೆಂದೂ ಡಾ|| ಲುಯಿ ರಿನೋ ಇವರು ಹೇಳುತ್ತಾರೆ. ಪುಣೆಯ ಡೆಕ್ಕನ ಕಾಲೇಜಿನವರು ಒಂದು ಹೊಸ ಸಂಸ್ಕೃತ ಕೋಶ ತಯಾರಿಸತೊಡಗಿದ್ದಾರೆ. ಆ ಕೋಶದ ನಿರ್ಮಿತಿಯ ಸಮಿತಿಯಲ್ಲಿ ಡಾ|| ಲೂಯಿ ರಿನೋರವರಿಗೆ ಸೇರಿಸಿಕೊಳ್ಳಲಾಗಿದೆ. ಇಂಥ ಸಮೃದ್ಧ ಸಂಸ್ಕೃತ ಭಾಷೆ ಮೃತಭಾಷೆಯೆಂದು ಎಣಿಸಿ ಅದರ ಕಡೆ ದುರ್ಲಕ್ಷ

ಯಾ ತಾತ್ಸಾರ ಮಾಡುವದು ಉಚಿತವಲ್ಲ

* * *

ಮೊನ್ನೆ ಜಯಪುರದಲ್ಲಿ ನೇರಿದ ರಾಷ್ಟ್ರೀಯ ಸಭೆಯ ಅಧಿವೇಶನಕ್ಕಾಗಿ ಸ್ವಾಗತ ಸಮಿತಿಯವರಿಗೆ ೨೨ ಲಕ್ಷ ರೂ. ಖರ್ಚು ಬಂತು. ಜಯಪುರ ಸಂಸ್ಥಾನಿಕರು ೧೦ ಲಕ್ಷ ರೂ. ಕಾಣಿಕೆ ಕೊಟ್ಟಿದ್ದಾರೆ. ಜಯಪುರದೊಳಗಿನ ಎಲ್ಲ ಸರಕಾರಿ ಕಚೇರಿಗಳಿಗೆ ಈ ಅಧಿವೇಶನದ ಕಾಲಕ್ಕೆ ೧೨ ದಿವಸಗಳ ರಜೆ ಕೊಟ್ಟಿತ್ತು. ವಿದ್ಯಾರ್ಥಿಗಳಿಗೂ ೧೦ ದಿನಗಳ ಬಿಡುವು ಕೊಡಲಾಗಿತ್ತು. ಅಂತು ಗಾಂಧಿ ನಗರದಲ್ಲಿ ೨-೩ ಲಕ್ಷ ಜನರು ಕೂಡಿದ್ದರು. ಇವರೆಲ್ಲರ ಬರ-ಹೋಗುವ ಖರ್ಚು, ಊಟ-ಉಪಚಾರಗಳ ಖರ್ಚು ಪ್ರತ್ಯೇಕವಿದೆ. ... ರಾಷ್ಟ್ರೀಯ ಸಭೆಯು ಈ ರೀತಿ ಜಾತ್ರೆಯ ... ವನ್ನು ಕಳೆದುಕೊಳ್ಳಬೇಕು ... ಲ್ಲೆಂದು ಪಂ. ಜವಾಹರಲಾಲರ ಅಭಿಪ್ರಾಯವಾಗಿದೆ. ರಾಷ್ಟ್ರೀಯ ಸಭೆಯ ಅಧಿವೇಶನಗಳಲ್ಲಿ ಶಾಂತ ರೀತಿಯಿಂದ ರಾಷ್ಟ್ರಕಾರ್ಯವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಪಂಡಿತಜಿಯವರು ಸ್ವಾಗತ ಸಮಿತಿಯ ಅಧ್ಯಕ್ಷ ಮುನ್ಷಿಯವರಿಗೆ ಉದ್ಗರಿಸಿದ್ದಾರೆ. ಜನಜಂಗುಳಿಯ ಮಧ್ಯದಲ್ಲಿ ಶಾಂತ ರೀತಿಯಿಂದ ಚರ್ಚೆ, ವಿಚಾರ ಮತ್ತು ನಿರ್ಣಯ ಮಾಡಲು ತೊಂದರೆಯಾಗುತ್ತದೆಂದು ಅವರ ಅಂಬೋಣ. ರಾಷ್ಟ್ರೀಯ ಸಭೆಯವರು ಈಗ ಸರಕಾರವನ್ನು ರಚಿಸಿರುವದರಿಂದ ಸರಕಾರಕ್ಕೂ ರಾಷ್ಟ್ರೀಯ ಸಭೆಗೂ ಇರುವ ಸಂಬಂಧಗಳ ನಿರ್ಣಯವಾಗಬೇಕು. ಇಂತಹ ಹೊಣೆಗಾರಿಕೆಯ ಕಾರ್ಯಕ್ಕೆ ಪ್ರಶಾಂತ ವಾತಾವರಣ ಅವಶ್ಯವಿದೆ.

* * *

ಜಯಪುರದಲ್ಲಿ ಒಂದು ಮಾತಿನ ನಿರ್ಣಯವಾಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದವರ ಚಟುವಟಿಕೆಗಳು ಹಿಂದು ಸಮಾಜದ ಪರವಾಗಿ ನಿತಾಂತ ಜಾತೀಯತೆಯ ತಳಹದಿಯ ಮೇಲೆ ನಡೆದು ನಾಡಿನಲ್ಲಿ ಅನಿಷ್ಟ ವಾತಾವರಣವನ್ನುಂಟು ಮಾಡುತ್ತಿರುವದರಿಂದ ಆ ಸಂಘದ ವಿರುದ್ಧ ಸರಕಾರವು ಕೈಕೊಂಡ ಉಗ್ರೋಪಾಯಗಳು ಯೋಗ್ಯವಿರುತ್ತವೆಂದು ಸಕಲರೂ ಅಭಿಪ್ರಾಯ ಪಟ್ಟಿದ್ದಾರೆ. ಇಂಥ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುವದು ಅವಿವೇಕವಾಗುವದೆಂದೂ ಸಕಲರ ಅಭಿಪ್ರಾಯವಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೆಲ ಅಭಿಮಾನಿಗಳು "ಹರಿಜನ" ಪತ್ರಕರ್ತರಿಗೆ ಒಂದು ಪತ್ರ ಬರೆದು, ಅವರ ಅಭಿಪ್ರಾಯ ವ್ಯಕ್ತಪಡಿಸಲು ಆಗ್ರಹ ಮಾಡಿದ್ದರು. ಸಂಘವು ವಿಶಿಷ್ಟ ಜಾತಿಯನ್ನು ಎತ್ತಿ ಹಿಡಿದು ಪರಧರ್ಮದವರ ಬಗ್ಗೆ ದ್ವೇಷ ಭಾವನೆಯನ್ನುಂಟುಮಾಡುವವರಿಂದ ಇಂಥ ಸಂಘಗಳು ದೇಶಕ್ಕೆ ಹಿತವಲ್ಲೆಂದು "ಹರಿಜನ"ದ ಸಂಪಾದಕರು ವಿವರಿಸಿದ್ದಾರೆ. ರಾ|| ಸ್ವ|| ಸಂಘದವರು ಸಕಲ ಪರಿಸ್ಥಿತಿಯನ್ನು ಪುನರಾಲೋಚಿಸಿ, ಇನ್ನು ಮುಂದೆ ರಾಷ್ಟ್ರ ಸಂಘಟನೆಯಲ್ಲಿ ನೆರವಾಗುವದುತ್ತಮ

* * *

ಬವಾರ್ ಶೆಲ್ ಕಂಪನಿಯವರು ಚಹಾದ ಪ್ರಚಾರದ ಒಂದು ಹಸ್ತಪತ್ರಿಕೆ ಪ್ರಕಟಿಸಿದ್ದಾರೆ. ಚಹಾದ ಶೋಧ ಕ್ರಿಸ್ತ ಜನ್ಮಕ್ಕೂ ೨೭೩೭ ವರ್ಷ ಪೂರ್ವದಲ್ಲಿ ಆಯಿತು. ಹಿಂದುಸ್ಥಾನದೊಳಗೆ ಈಸ್ಟ ಇಂಡಿಯಾ ಕಂಪನಿಯವರು ಚಹಾದ ಪ್ರಚಾರವನ್ನು [illegible]ನೇ ಇಸವಿಯಲ್ಲಿ ಮಾಡಿದರೆಂದು ಇತಿಹಾಸದ ಮೇಲಿಂದ ತಿಳಿಯುತ್ತದೆ. ಚಹಾ ಕುಡಿಯುವದರಲ್ಲಿ ಬ್ರಿಟಿಶರೇ ಎಲ್ಲರಿಗಿಂತ ಮೇಲು. ಇವರು ಸರಾಸರಿ ತಲಾ ೯ ರತ್ತಲಿನಂತೆ ಚಹಾ ಕುಡಿಯುತ್ತಾರೆ. ಹಿಂದುಸ್ಥಾನದೊಳಗೆ ಚಹಾ ಬೆಳೆ ವಿಪುಲವಾಗಿ ಉಂಟು. ಇಲ್ಲಿಂದ ಬ್ರಿಟನ್ನಿಗೆ ಹೇರಳ ಚಹಾ ರಫ್ತಾಗುತ್ತದೆ. ಆದರೂ ಇಲ್ಲಿ ತಲಾ ½ ರತ್ತಲಿಗಿಂತ ಹೆಚ್ಚು ಚಹಾ ಖರ್ಚಾಗುವದಿಲ್ಲ. ರಷ್ಯಾ ದೇಶದಲ್ಲಿ ಚಹಾದ ಚಟ ತೀರ ಕಡಿಮೆ. ತಲಾ ½ ರತ್ತಲ ಖರ್ಚಾದರೆ ಹೆಚ್ಚಾಯಿತು. ಚಹಾದ ಪ್ರಚಾರವನ್ನು "ಹರಿಜನ" ಪತ್ರಕರ್ತರು ಆಕ್ಷೇಪಿಸುತ್ತಾರೆ. ಇದರಿಂದ ಜನಾಂಗಕ್ಕೆ ಹಿತವಿಲ್ಲೆಂದು ಅವರ ಅಭಿಪ್ರಾಯ. ಅಧಿಕಾರಿಗಳ ಮುಖಾಂತರ ಸರಕಾರವು ಚಹಾದ ಪ್ರಚಾರ ಮಾಡಿ ಚಹಾದ ದುಶ್ಚಟವನ್ನು ಹಬ್ಬಿಸುತ್ತದಾಗಿ ಅವರು ದೂರಿದ್ದಾರೆ. ಚಹಾದ ಸಾಮಾನ್ಯರಿಗಾಗಿ ಈ ರೀತಿ ಖರ್ಚು ಮಾಡುವದು ತಪ್ಪೆಂದು ಅವರ ಅಂಬೋಣ. ಹಿಂದುಸ್ಥಾನದಿಂದ ಪ್ರತಿ ವರ್ಷ ೪೦ ಕೋಟಿ ರತ್ತಲ ಚಹಾ ರಫ್ತಾಗುತ್ತದೆ. ಪ್ರತಿ ೧೦೦ ರತ್ತಲಿಗೆ ರೂ ೧-೬-೦ರಂತೆ ಸರಕಾರವು ರಫ್ತು ತೆರಿಗೆಯನ್ನು ಎತ್ತುವಳಿ ಮಾಡಿ, ಚಹಾ ವ್ಯಾಪಾರದ ಪ್ರಚಾರ ಸಂಘಕ್ಕೆ ಒಪ್ಪಿಸುತ್ತದೆ. ಈ ತೆರಿಗೆಯಿಂದ ಪ್ರತಿ ವರ್ಷ ಸರಾಸರಿ ೫೫ ಲಕ್ಷ ರೂ. ಉತ್ಪನ್ನವಾಗುತ್ತದೆ. ಅದರೊಳಗೆ ½ವನ್ನು ಇಂಗ್ಲಂಡ ದೇಶದಲ್ಲಿ ಖರ್ಚು ಮಾಡಿ, ½ವನ್ನು ಹಿಂದುಸ್ಥಾನದೊಳಗೆ ಖರ್ಚು ಮಾಡುತ್ತಾರೆ. ಚಹಾದ ಏಜಂಟರು ಹಳ್ಳಿ-ಹಳ್ಳಿಗೆ ಹೋಗಿ, ಚಹಾದ ಅಂಗಡಿಗಳನ್ನು ತೆರೆದು, ಫೋನೋಗ್ರಾಫ ಮೊದಲಾದ ವಿನೋದ ಸಾಹಿತ್ಯಗಳನ್ನಿಟ್ಟು, ಹಳ್ಳಿಗರನ್ನು ಚಹಾ ಅಂಗಡಿಗೆ ಆಕರ್ಷಿಸಿ, ೩-೩ ತಿಂಗಳು ಪುಕ್ಕಟೆ ಚಹಾ ಕೊಡುತ್ತಾರೆ! ಚಹಾಪಾನದಿಂದ ಆರೋಗ್ಯ ಕೆಡುತ್ತದೆಂದೂ ಧನ-ಚೈತನ್ಯಗಳ ಹ್ರಾಸವಾಗುತ್ತದೆಂದೂ "ಹರಿಜನ" ಕರ್ತರ ಅಂಬೋಣ. ಸರಕಾರದವರ ಪ್ರಚಾರದಿಂದ ಚಹಾ ಪ್ರಸಾರ ರಭಸದಿಂದ ಸಾಗಿದೆ. ೧೯೩೦ನೇ ಇಸವಿಯಲ್ಲಿ ೪೦ ಲಕ್ಷ ರತ್ತಲ ಚಹಾ ಹಿಂದುಸ್ಥಾನದೊಳಗೆ ಖರ್ಚಾಗಿತ್ತು; ೧೨ ವರ್ಷಗಳಲ್ಲಿ ಈ ಸಂಖ್ಯೆ ೧ ಕೋಟಿ ೩೬ ಲಕ್ಷಕ್ಕೆ ಏರಿತು, ೧೯೪೬ರಲ್ಲಿ ತುದಿಗೆ ೧ ಕೋಟಿ ೬೧ ಲಕ್ಷಕ್ಕೇರಿತು! ಈ ಪ್ರಚಾರದಿಂದ ಜನರ ಆರೋಗ್ಯ ಕೆಟ್ಟು ಹೋಗಿದೆಯೆಂದೂ, ವಿಚಾರವಂತರು ಸ್ವಂತ ಉದಾಹರಣೆಯಿಂದ ಈ ವಿಪತ್ತಿಯನ್ನು ಪರಿಹರಿಸಬೇಕೆಂದೂ "ಹರಿಜನ" ಪತ್ರಕರ್ತರು ಎಚ್ಚರಿಕೆ ಕೊಡುತ್ತಾರೆ. ಬ್ರಿಟಿಶರಂತೆ ಹಿಂದವಾಸಿಗಳೂ ಚಹಾ ಕುಡಿಯಹತ್ತಿದರೆ ಹಿಂದುಸ್ಥಾನದಲ್ಲಿ ಬೆಳೆಯುವ ಚಹ ಹಿಂದೀಯರಿಗೇ ಸಾಲಲಿಕ್ಕಿಲ್ಲ!

* * *

ಹಿಂದುಸ್ಥಾನದಲ್ಲಿ ಸಕ್ಕರೆಯ ಉದ್ದಿಮೆಯನ್ನು ಬಲಪಡಿಸುವದಕ್ಕಾಗಿ ಸರಕಾರವು ವಿದೇಶಿ ಸಕ್ಕರೆಯ ಮೇಲೆ ಆಯಾತ ತೆರಿಗೆಯನ್ನು ಹೇರಿ, ಪ್ರತಿವರ್ಷ ೭೦ ಕೋಟಿಯಂತೆ ಸಕ್ಕರೆ ತಿನ್ನುವವರಿಂದ ಎತ್ತುವಳಿ ಮಾಡಿ ಸಕ್ಕರೆ ಉದ್ಯೋಗದವರನ್ನು ಪ್ರೋತ್ಸಾಹಿಸುತ್ತದೆ. ಆದಾಗ್ಯೂ ಸಕ್ಕರೆಯು ಅಗ್ಗವಿಲ್ಲ. ನಮ್ಮ ದೇಶದೊಳಗೆ ಇನ್ನೂ ದೃಢವಾಗಿರುವದಿಲ್ಲ! ಈಗಲೂ ವಿದೇಶೀ ಸಕ್ಕರೆಯು ಮಣ ಒಂದಕ್ಕೆ ರೂ. ೧೬ರಂತೆ ಸಿಗುತ್ತಿದ್ದಾಗ ಹಿಂದುಸ್ಥಾನದೊಳಗೆ ಬೆಳೆಯುವ ಸಕ್ಕರೆ ರೂ. ೨೫|| ಗೆ ಒಂದು ಬಂಗಾಳಿ ಮಣ ೧೯ರಂತೆ ಮಾರಾಟ ಮಾಡಲು ಕಾರಖಾನೆಯವರಿಗೆ ಪೂರೈಸುವದಿಲ್ಲ! ಇಡೀ ಜಗತ್ತಿನೊಳಗೆ ಸಕ್ಕರೆಯ ಉತ್ಪಾದನೆ ಈ ವರುಷ ೩ ಕೋಟಿ ಟನ್ನುಗಳಷ್ಟಾಗುವದಾಗಿ ಹೇಳುತ್ತಾರೆ. ನಮ್ಮಲ್ಲಿ ರಾಜಾಶ್ರಯವಿರುತ್ತಿದ್ದರೂ ಉತ್ಪತ್ತಿ ಬಹಳ ಕಡಿಮೆಯುಂಟು! ಹಿಂದುಸ್ಥಾನದೊಳಗೆ ೧೨೦ಕ್ಕೆ ೧೧೦ರಷ್ಟು ಸಕ್ಕರೆ ಹುಟ್ಟುತ್ತದೆ. ಅದೇ ಜಾವಾದಲ್ಲಿ ೧೨೦ಕ್ಕೆ ೧೫೦ರಷ್ಟು, ಕ್ಯೂಬಾದಲ್ಲಿ ೧೨೦ಕ್ಕೆ ೨೮೦ರಷ್ಟು, ಆಸ್ಟ್ರೇಲಿಯಾದಲ್ಲಿ ೧೨೦ಕ್ಕೆ ೧೪೦ರಷ್ಟು ಹುಟ್ಟುತ್ತದೆ. ಕಬ್ಬಿನ ಬೆಳವಣಿಗೆಯಾದರೂ ಹಾಗೆಯೇ. ಹಿಂದುಸ್ಥಾನದೊಳಗೆ ಎಕರೆ ೧ರಲ್ಲಿ ೧೨ ಟನ್ನ ಕಬ್ಬು ಹುಟ್ಟುತ್ತಿದ್ದರೆ, ಜಾವಾದಲ್ಲಿ ೫೭ ಟನ್ನ, ಹವಾಯಿಯಲ್ಲಿ ೬೩ ಟನ್ನ, ಫಿಲಿಪಾಯಿನ್ಸದಲ್ಲಿ ೨೭ ಟನ್ನ, ಆಸ್ಟ್ರೇಲಿಯಾದಲ್ಲಿ ೨೧ ಟನ್ನ ಕಬ್ಬು ಬೆಳೆಯುತ್ತದೆ. ಕಬ್ಬಿನ ಕೃಷಿಯಲ್ಲಿಯೂ ಹಿಂದುಸ್ಥಾನ ದೇಶ ಬಹಳ ಹಿಂದುಂಟು. ಶ್ರೀ|| ಕುಮಾರಪ್ಪನವರು "ಹರಿಜನ" ಪತ್ರಿಕೆಯಲ್ಲಿ ಒಂದು ಲೇಖ ಬರೆದು ಸಕ್ಕರೆ ಕಾರಖಾನೆಯವರಿಗೆ ಸರಕಾರವು ಉತ್ತೇಜನ ಕೊಡುವ ಧೋರಣೆ ತಪ್ಪೆಂದು ಪ್ರತಿಪಾದಿಸಿದ್ದಾರೆ. ಬಿಹಾರ ಪ್ರಾಂತದೊಳಗೆ ಭತ್ತ ಬೆಳೆಯುವ ವಿಶಾಲ ಭೂಪ್ರದೇಶದ ಮೇಲೆ ಕಬ್ಬು ಬೆಳೆಸಹತ್ತಿ ಸರಕಾರವು ಆಹಾರ-ಧಾನ್ಯಗಳ ಕೊರತೆಯನ್ನುಂಟು ಮಾಡುವದೆಂದೂ, ಸಕ್ಕರೆಗಿಂತ ಬೆಲ್ಲದಲ್ಲಿ ಪೋಷಕ ದ್ರವ್ಯಗಳು ಮಿಗಿಲಾಗಿರುವದರಿಂದ ಬೆಲ್ಲಕ್ಕೆ ಪ್ರೋತ್ಸಾಹ ಕೊಡುವದು ಹಿತಕರವಿತ್ತೆಂದೂ, ಸಕ್ಕರೆಗೆ ಆಶ್ರಯ ಕೊಟ್ಟು ಬಹುಜನಸಮಾಜವನ್ನು ಸರಕಾರವು ಸುಲಿಯುತ್ತದೆಂದೂ, ಈ ಧೋರಣದಿಂದ ರಾಷ್ಟ್ರದ ಅಪಕರ್ಷವಾಗುತ್ತದೆಂದೂ ಶ್ರೀ|| ಕುಮಾರಪ್ಪನವರು ದೂರಿ, ಈ ರಾಜ್ಯಧೋರಣದಲ್ಲಿ ಅವಶ್ಯವುಳ್ಳ ತಿದ್ದುಪಾಟ ಮಾಡಲು ಸೂಚಿಸಿದ್ದಾರೆ. ಹಿಂದುಸ್ಥಾನ ಸರಕಾರವೂ ಪ್ರಾಂತಿಕ ಸರಕಾರಗಳೂ ಬ್ರಿಟಿಶರ ಕಾಲದಲ್ಲಿ ರೂಢವಾದ ರಾಜ್ಯಭಾರದ ಮೂಲ ತತ್ವಗಳನ್ನು ಆಮೂಲಾಗ್ರ ಪರಿಶೀಲಿಸಿ, ಜನಹಿತಕಾರಿ ರಾಜ್ಯಧೋರಣವನ್ನು ಅನುಸರಿಸಬೇಕೆಂದೂ ಅವರ ಸೂಚನೆಯುಂಟು

* * *

ನಮ್ಮಲ್ಲಿ ಕತ್ತದ ಚಕಾರ್ ಹುರಿ

ಮತ್ತು ಬಾವಿ ಹಗ್ಗಗಳು

ಯೋಗ್ಯ ದರದಲ್ಲಿ ಸಿಗುತ್ತವೆ.

ಚೇರಮನ್, ಕತ್ತದ ಸೊಸಾಯಟಿ ಲಿಮಿಟೆಡ್

ಹೊನ್ನಾವರ (ಉ.ಕ.)

ರೂ. ೧೦ ಇನಾಮು!!

ನಮ್ಮ ಬಾಬತು ಹಂಡ ಬುಡು ಕೋಣ ಮುಂದೆ ಸ್ವಲ್ಪ ಬಗ್ಗಿದ್ದು, ನೀಟ ಬಾಲದ್ದು ಗಬ್ಬದ ಆಕಳು ತಾ. ೨೬-೧೨-೪೮ನೇಗೆ ಮೇಯ ಬಿಟ್ಟದ್ದು ಕಾಣೆಯಾಗಿದೆ. ಈ ಆಕಳ ಪತ್ತೆ ಹಚ್ಚಿಕೊಟ್ಟವರಿಗೆ ರೂ. ೧೦ ಇನಾಮು ಕೊಡಲಾಗುವದು. ಯಲವಳ್ಳಿ, ತಾ. ೧-೧-೧೯೪೯.

ವಿನಾಯಕ ಗಣೇಶ ಭಟ್ಟ, ಯಲವಳ್ಳಿ.

ತಾ. ಕುಮಟಾ.

ನಕಲಿ ಮಾಲು ಬಂದರೆ ಮೋಸಹೋಗಬೇಡಿ!!

ಶ್ರೇಷ್ಠ ದರ್ಜೆಯ ಅಗರಬತ್ತಿಗಳು ಬೇಕಾದರೆ ಈ ಹೆಸರುಳ್ಳ ಊದಬತ್ತಿಗಳನ್ನೇ ಕೊಳ್ಳಿರಿ!!

೧ ಪೃಥ್ವಿರಾಜ ಅಗರಬತ್ತಿ, ೨ ಮಹಾವೀರ ಅಗರಬತ್ತಿ,

೩ ಸುರಂಗಿ ಜವಾಜಿ ಬತ್ತಿ.

ವಿನಾಕಾರಣ ಬೀಸಾಡುವ ಪ್ಯಾಕಿಂಗಿಗೆ ಮರುಳಾಗಬೇಡಿ! ನಿಮ್ಮ ಹಣವು ಹಾಳಾಗುವದು!!

ಚಿತ್ತರಂಜನ ಕಂಪನಿ, ಸಂತೆ-ಪೇಟೆ, ತುಮಕೂರು. (MYSORE)

ಹೊಸ ಒಕ್ಕಲತನದ ಮಸೂದೆಗೆ ಹಿಂದುಸ್ಥಾನದ ಸರ್ವಾಧಿಪತಿ ಶ್ರೀ॥ ಚಕ್ರವರ್ತಿ ರಾಜಗೋಪಾಲಾಚಾರ್ಯರ ಅಂಕಿತ ಬಿದ್ದು, ಕಳೆದ ತಾ. ೨೮ನೇ ಮಂಗಳವಾರದ ಗಾಝೀಟನಲ್ಲಿ ಪ್ರಕಟವಾಗಿ, ಅದು ಕಟ್ಟಳೆಯಾಗಿದೆಂದು ಮುಂಬಯಿ ಸರಕಾರವು ಪ್ರಕಟಿಸಿದೆ. ಒಕ್ಕಲತನದ ಈ ಹೊಸ ಕಾನೂನು ಘಟನಾ ಸಮಿತಿಯಲ್ಲಿ ಮಂಜೂರಾಗಿರುವ ಮೂಲಭೂತ ಹಕ್ಕುಗಳಿಗೆ ವಿಸಂಗತವಾಗಿರುತ್ತದೆಂಬ ಮಾತು ಸ್ಪಷ್ಟವಿದೆ. ದಿವಾಣಿ ನ್ಯಾಯಸ್ಥಾನಗಳ ಅಧಿಕಾರವನ್ನು ಈ ಕಾನೂನಿನ ಒಂದು ಕಲಮು ಕಸಿದುಕೊಂಡಿದೆ. ದಿವಾಣಿ ನ್ಯಾಯಸ್ಥಾನಗಳ ಸರ್ವಾಧ್ಯಕ್ಷತನವನ್ನು ಎಲ್ಲ ಪ್ರಾಂತಿಕ ಮತ್ತು ಕೇಂದ್ರ ಸರಕಾರಗಳು ಮನ್ನಿಸತಕ್ಕದ್ದೆಂದು ಘಟನೆಯಲ್ಲಿ ಸಾರಲ್ಪಟ್ಟದೆ. ಅರ್ಥಾತ ನಡಿಸುವ ಕಾರಭಾರಿ ಇಲಾಖೆಗಳಿಂದ ನ್ಯಾಯ ಇಲಾಖೆಯನ್ನು ಬೇರ್ಪಡಿಸಿ, ನ್ಯಾಯ ಇಲಾಖೆಯು ನ್ಯಾಯವಿಚಾರದ ಯಾವದೇ ಹಕ್ಕು ಕಾರಭಾರಿ ಇಲಾಖೆಯವರಿಗೆ ಇರಕೂಡದೆಂದು ವಿಧಿಸಲಾಗಿದೆ. ಪ್ರತಿಯೊಬ್ಬ ನಾಗರಿಕನಿಗೆ ಸ್ವತ್ತು ಸಂಪಾದನೆ ಮಾಡುವ ಹಕ್ಕುಂಟು. ಆ ಸ್ವತ್ತಿಯನ್ನು ಸ್ವೇಚ್ಛೆಯಂತೆ ವಿನಿಯೋಗಿಸುವ ಒಡೆಯತನದ ಅಧಿಕಾರವೂ ನಾಗರಿಕನಿಗೆ ಉಂಟು. ಈ ಹಕ್ಕನ್ನು ಹೊಸ ಒಕ್ಕಲತನದ ಕಾನೂನು ಪದ್ಧತಿಪೂರ್ವಕವಾಗಿ ಅಪಹರಿಸಿದೆ. ಘಟನಾ ಸಮಿತಿಯು ರಚಿಸಿರುವ ರಾಜ್ಯಘಟನೆಯ ತತ್ವಗಳಿಗೆ ವಿಸಂಗತವಿರುವ ಕೇಂದ್ರ ಮತ್ತು ಪ್ರಾಂತಿಕ ಕಾನೂನುಗಳ ಅರ್ಥವನ್ನು ಆ ಘಟನೆಗೆ ಅನುಸಾರವಾಗಿ ಮಾಡತಕ್ಕದ್ದೆಂದು, ರಾಜ್ಯಘಟನೆಯ ಮಸೂದೆಯನ್ನು ಘಟನಾ ಸಮಿತಿಯಲ್ಲಿ ಮಂಡಿಸುವಾಗ, ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳಾದ ಡಾ॥ ಭೀಮರಾವ ಅಂಬೇಡಕರರವರು ಸ್ಪಷ್ಟ ಹೇಳಿದ್ದುಂಟು. ಪ್ರಾಂತಿಕ ಸರಕಾರವು ಕಾರಭಾರಿ ಇಲಾಖೆಯಿಂದ ನ್ಯಾಯ ಇಲಾಖೆಯನ್ನು ಪೃಥಕ್ಕರಿಸುವ ಮಸೂದೆಯನ್ನು ಇನ್ನೊಂದು ತಿಂಗಳಲ್ಲಿ ಅಂದರೆ ಆಯ-ವ್ಯಯಗಳ ಅಧಿವೇಶನದ ಕಾಲಕ್ಕೆ ಮಂಡಿಸಲಿಕ್ಕಿದೆಯಾಗಿ ಪ್ರಕಟವಾಗಿದೆ. ವಸ್ತುಸ್ಥಿತಿ ಹೀಗಿರುವಾಗ ಸರ್ವಾಧಿಪತಿ ಶ್ರೀ॥ ಚಕ್ರವರ್ತಿ ರಾಜಗೋಪಾಲಾಚಾರ್ಯರು ಘಟನಾ ಸಮಿತಿಯ ಮೂಲಭೂತ ತತ್ವಗಳಿಗೆ ವಿರುದ್ಧವಿರುವ ಅಂಶಗಳಿಂದ ತುಂಬಿದ ಕಾನೂನಿಗೆ ತಮ್ಮ ಅಂಕಿತ ಹಾಕಿದ ಬಗೆ ಹೇಗೆಂದು ಜನಸಾಮಾನ್ಯರಿಗೆ ತಿಳಿಯದು. ಸರ್ವಾಧಿಪತಿಗಳು ಮುಂಬಯಿ ಸರಕಾರದ ಗೌರವ ಕಾಪಾಡುವದಕ್ಕಾಗಿ ತಮ್ಮ ಅಂಕಿತ ಹಾಕಿರಬೇಕೆಂಬದೊಂದು ಗ್ರಹಿಕೆಯುಂಟು. ಆದರೆ ಪ್ರಾಂತಿಕ ಸರಕಾರದ ಗೌರವ-ರಕ್ಷಣೆಗಿಂತ ಬಹುಜನ-ಸಮಾಜದ ಹಿತವನ್ನು ಸರ್ವಾಧಿಪತಿಗಳು ಗಣಿಸಬೇಕಾಗಿತ್ತು. ಘಟನಾ ಸಮಿತಿಯು ಮನ್ನಿಸಿರುವ ಘಟನೆಯನ್ನು ಸರ್ವಾಧಿಪತಿಗಳು ಗಣಿಸುವರೆಂದು ಅಪೇಕ್ಷಿಸಲಾಗಿತ್ತು. ಈಗಿನ ರಾಜ್ಯಭಾರದಲ್ಲಿ ಯಾವದಕ್ಕೂ ಸ್ಥಿರತೆಯಿಲ್ಲ, ಎಲ್ಲವೂ ಅಸ್ಥಿರವಾಗಿ, ಬೇರೆ ಬೇರೆ ಕಟ್ಟಳೆಗಳ ಸ್ಥಾನಮಾನಗಳು ಜನಸಾಮಾನ್ಯರಿಗೆ ಗ್ರಹಿಕೆಯಾಗಲೊಲ್ಲವು. ಅದರಿಂದ ನಾಡಿನಲ್ಲಿ ವ್ಯಾಜ್ಯದ ವಾತಾವರಣವುಂಟಾಗಿದೆ. ಸರಕಾರವು ಪ್ರಾಂತಿಕವಾಗಿರಲಿ ಕೇಂದ್ರವಾಗಿರಲಿ, ಕಟ್ಟಳೆಗಳನ್ನು ಮಾಡುವಾಗ, ಅವನ್ನು ಪಾಲಿಸಬೇಕಾದವರಿಗೆ ತಮ್ಮ ಹಕ್ಕುಬಾಧ್ಯತೆಗಳ ಸರಿಯಾದ ಗ್ರಹಿಕೆಯಾಗುವಂತೆ ಏರ್ಪಾಟು ಮಾಡಬೇಕು. ಘಟನಾ ಸಮಿತಿಯು ಮನ್ನಿಸಿರುವ ಘಟನೆಯ ಕಲಮುಗಳ ಪಾರ್ಶ್ವ-ಭೂಮಿಯಲ್ಲಿ ಹೊಸ ಒಕ್ಕಲತನದ ಕಾನೂನಿನ ಅಂಶಗಳನ್ನು ಪ್ರಾಂತಿಕ ಸರಕಾರವು ಪುನರಾಲೋಚಿಸಬೇಕಾದ ಪ್ರಸಂಗವಿದೆ. ಸರಕಾರವು ಹಾಗೆ ಮಾಡದೆ ಕಾಯದೆಯನ್ನು ಇದ್ದಕ್ಕಿದ್ದಂತೆ ಉಳಿಯಗೊಟ್ಟರೆ ನಾಡಿನಲ್ಲಿ ಅನಾವಶ್ಯಕವಾದ ವ್ಯಾಜ್ಯಗಳುಂಟಾಗಿ ಒಡೆಯ-ಒಕ್ಕಲಿಗರೊಳಗಿನ ಸಂಬಂಧಗಳು ವಿಕೋಪಕ್ಕೆ ಮುಟ್ಟುವ ಭೀತಿಯುಂಟು.

***

ನಮ್ಮಲ್ಲಿಯ ತಾರಿ-ಮಕ್ತೆದಾರರು ತಾರಿ ಹಾಸಲು ವಸೂಲ ಮಾಡುವಾಗ ಜನರಿಗೆ ಮೋಸ ಮಾಡುತ್ತಾರೆ. ತಾರಿ ದಾಟಬಂದ ಸರಕಿನ ಹೊರೆಗಳ ತಾರಿ-ಹಾಸಲು ವಸೂಲ ಮಾಡುವ ಕ್ರಮಗಳು ೩ ಬಗೆಯವಿವೆ: ಒಂದು ಚಕ್ಕಡಿ ತುಂಬ ಸಾಮಾನು ದಾಟಿಸಲಿಕ್ಕೆ ೧ ಆಣೆ ವಸೂಲ ಕೊಳ್ಳಬೇಕೆಂಬುದೊಂದು ನಿಯಮವುಂಟು. ಒಂದು ಟನ್ನಿನ ಮೋಟಾರ ಬಂಡಿಯಲ್ಲಿ ಬಂದ ಸರಕು ೨ ಚಕ್ಕಡಿಗಳಷ್ಟು, ೧॥ ಟನ್ನಿನ ಮೋಟಾರ-ಬಂಡಿಯಲ್ಲಿ ಬಂದ ಸರಕು ೩ ಗಾಡಿಗಳಷ್ಟು ಮತ್ತು ೨ ಟನ್ನಿನ ಮೋಟಾರ ಬಂಡಿ ತುಂಬಿ ಬಂದ ಸರಕು ೪ ಚಕ್ಕಡಿಗಳಷ್ಟು ಇರುತ್ತವೆಂದು ಎಣಿಸಿ, ಆ ಪ್ರಕಾರ ತಾರಿ-ಹಾಸಲು ಮಾಡಬೇಕೆಂದೂ ವಿಧಿಸಿದ್ದುಂಟು. ೨ನೇ ಕ್ರಮದಂತೆ ಪ್ರತಿಯೊರ್ವ ಪ್ರಯಾಣಿಕನು ೧೫ ಸೇರು ಸಾಮಾನನ್ನು ಹಾಸಲು ಇಲ್ಲದೆ ದಾಟಿಸಿಕೊಳ್ಳಬಹುದು, ಅವನ ಸಾಮಾನು ೧೫ ಸೇರು (ಪಕ್ಕಾ)ಗಳಿಗೆ ಮಿಕ್ಕುತ್ತಿದ್ದರೆ, ಆ ಮಿಕ್ಕುವ ತೂಕದ ಪ್ರತಿ ೧೫ ಸೇರುಗಳಿಗೆ ಯಾ ಅವುಗಳ ಅಂಶಕ್ಕೆ ೧ ಪೈಯಂತೆ ಹಾಸಲು ತೆರಬೇಕು. ಆದರೆ ತಾರಿ-ಮಕ್ತೆದಾರರು ಗಾಡಿಯ ಲೆಕ್ಕ ಪೂರ್ಣ ಕಡೆಗಣಿಸಿ, ಗಾಡಿಗಳಲ್ಲಿ ಬಂದ ಪ್ರತಿ ಚೀಲಕ್ಕೆ ೬ ಪೈಗಳಂತೆ ತಾರಿ ಹಾಸಲು ವಸೂಲ ಮಾಡುತ್ತಾರೆ! ೧ ಚಕ್ಕಡಿಯಲ್ಲಿ ಸಾಮಾನ್ಯವಾಗಿ ೮ ಚೀಲ ಸರಕು ಹಿಡಿಯುತ್ತದೆ. ಆ ಬಗ್ಗೆ ಗಾಡಿಯವನಿಂದ ಮಕ್ತೆದಾರರು ಮೇಲೆ ಹೇಳಿದ ಮೊದಲನೇ ಕ್ರಮದಂತೆ ೧ ಆಣೆ ವಸೂಲ ಮಾಡುವ ಬದಲಿಗೆ ೪ ಆಣೆ ವಸೂಲ ಮಾಡುತ್ತಾರೆ! ತಾರಿ ಹಾಸಲಿನ ದರದ ಮಾಹಿತಿಯುಳ್ಳವರಿದ್ದರೆ ಮಕ್ತೆದಾರರು ಅವರ ಹತ್ತರ ಹೇಗಾದರೂ ಸುಧಾರಿಸಿಕೊಳ್ಳುತ್ತಾರೆ. ಮಾಹಿತಿಯಿಲ್ಲದವರು ಮಕ್ತೆದಾರನು ಹೇಳಿದಷ್ಟು ಹಾಸಲು ಕೊಡಬೇಕು! ಸರಕಾರದ ಆಹಾರ-ಧಾನ್ಯಗಳು ತಾರಿ ದಾಟುವಾಗ ನೇಮದಂತೆಯೇ ತಾರಿ ಹಾಸಲು ವಸೂಲಾಗುತ್ತಿರಬೇಕೆಂದು ಜನರು ತಿಳಿಯುತ್ತಿರುವದು ಸಹಜ. ಆದರೆ ಸರಕಾರದವರು ಕೂಡ ಗಾಡಿ-ಹೊರೆಗಳ ಲೆಕ್ಕದಿಂದ ತಾರಿಯ ಹಾಸಲು ಕೊಡದೆ ಚೀಲಗಳ ಲೆಕ್ಕದಿಂದ ಹೆಚ್ಚಿಗೆ ಹಾಸಲು ತೆತ್ತು, ಅದನ್ನು ಸಾಗಾಟದ ಖರ್ಚಿನಲ್ಲಿ ಸೇರಿಸಿ, ಆಹಾರ-ಧಾನ್ಯದ ಮಾರಾಟದ ಧಾರಣೆಯನ್ನು ನಿರ್ಧರಿಸುತ್ತಿರುವರು. ತಾರಿ ದಾಟಿದ ಆಹಾರ-ಧಾನ್ಯಗಳ ಬಗ್ಗೆ ತಾರಿಯವರು ಜಿಲ್ಹಾಧಿಪರ ಕಚೇರಿಯಲ್ಲಿ ಸಾದರಪಡಿಸಿದ ಸಾವಿರಾರು ರೂಪಾಯಿಗಳ ಬಿಲ್ಲುಗಳನ್ನು ಲೆಕ್ಕ-ತಪಾಸಕರು ಕೂಡ, ಈ ಕುರಿತು ನಿಯಮಗಳೇನಿವೆಂಬುದರ ಪರಿಜ್ಞಾನ ಮಾಡಿಕೊಳ್ಳದೆ, ಮಂಜೂರ ಮಾಡಿದ್ದುಂಟು. ತಲಾವತಿ ತಾರಿಯಲ್ಲಿ ಇನ್ನೊಂದು ಬಗೆಯ ಸುಲಿಗೆಯಾಗುತ್ತಿದೆ. ಪ್ರಯಾಣಿಕರನ್ನೂ ಸರಕನ್ನೂ ದಾಟಿಸಲು ಅವಶ್ಯವುಳ್ಳ ದೋಣಿಗಳನ್ನು ತಾರಿಯವನು ಇಡಬೇಕು. ಸರಕು ದಾಟಿಸಿದ ಮತ್ತು ದೋಣಿಯ ಭಾಡಿಗೆ ಕೂಡಿ ತಾರಿಯ ಹಾಸಲಿನ ಪಟ್ಟಿ ತಯಾರಾಗಿದೆ. ಆದರೂ ತಲಾವತಿ ತಾರಿಯವರು ಆಹಾರ-ಧಾನ್ಯಗಳನ್ನು ದಾಟಿಸುವಾಗ ಪ್ರತಿ ದೋಣಿಯ ಭಾಡಿಗೆ ೨ ಆಣೆ ಮತ್ತು ಪ್ರತಿ ಚೀಲಕ್ಕೆ ೬ ಪೈ ಹೀಗೆ ಲೆಕ್ಕ ಮಾಡಿ ಬಿಲ್ಲು ಮಾಡಿ ಅದನ್ನು ಮಂಜೂರ ಮಾಡಿಕೊಳ್ಳುತ್ತಿದ್ದಾರೆ! ಇಂಥ ಸುಲಿಗೆ ನಡೆಯುತ್ತಿರುವದರಿಂದಲೇ ಸರಕಾರಿ ಆಹಾರ-ಧಾನ್ಯಗಳ ದರ ಏರುತ್ತಿದೆ! ಮತ್ತು ಬಡವರಿಗೆ ಸಂಕಟವಾಗುತ್ತಿದೆ!!

***

ಉಗ್ರಾಣಿಗಳಿಗೆ ಸರಕಾರವು ತಿಂಗಳಿಗೆ ರೂಪಾಯಿ ೧೫ರಂತೆ ಸಂಬಳ ಮತ್ತು ರೂ. ೨೫ ತುಟ್ಟಿ-ಭತ್ತೆ ಹೀಗೆ ತಿಂಗಳೊಂದಕ್ಕೆ ಒಟ್ಟು ರೂ ೪೦ ವೇತನ ಕೊಡುವ ಆಲೋಚನೆಯಲ್ಲಿದೆಂದೂ, ಬಹುತರವಾಗಿ ಈ ವರ್ಷದ ಆಯ-ವ್ಯಯಗಳ ಪತ್ರಿಕೆಯಲ್ಲಿ ಈ ಬಗ್ಗೆ ಹಣ ಮಂಜೂರ ಆಗುವ ಸಂಭವವಿದೆಂದೂ ನಂಬಿಗಸ್ತ ಸುದ್ದಿಯುಂಟು.

***

೧೯೪೮ರ ಮುಂಬಯಿಯ ಅಕ್ಕಿ ಗಿರಣಿಗಳಿಗೆ ಪರವಾನೆ ಕೊಡುವ ಆಜ್ಞೆಯಂತೆ ಕೊಡಲಾಗುತ್ತಿದ್ದ ಪರವಾನೆಗಳಲ್ಲಿರುವ ೪ನೇ ಕಲಮಿನ ಪ್ರಕಾರ ಗಿರಣಿಯವರು ತಮ್ಮಲ್ಲಿ ತಯಾರಾಗುತ್ತಿರುವ ಅಕ್ಕಿಯನ್ನು ಒಂದಕ್ಕಿಂತ ಹೆಚ್ಚಿಗೆ ಸಾರೆ ಪಾಲಿಸ ಮಾಡಬರುತ್ತಿದ್ದಿಲ್ಲ. ಹಲ್ಲರ ಇದ್ದ ಗಿರಣಿಗಳಲ್ಲಿ ಭತ್ತವನ್ನು ಒಮ್ಮೆ ಮಾತ್ರ ಹಲ್ಲರದೊಳಗೆ ಹಾಕಿ ತೆಗೆಯಬೇಕೆಂದೂ, ಸ್ವಯಂಗತಿಕ (ಒಟೋಮೆಟಿಕ್) ಯಂತ್ರಗಳಿದ್ದಲ್ಲಿ ಅರ್ಧ ಮೆರಗು ಬರುತ್ತಲೇ ಯಂತ್ರವನ್ನು ನಿಲ್ಲಿಸಿ ಅಕ್ಕಿಯನ್ನು ಹೊರಗೆ ತೆಗೆಯತಕ್ಕದ್ದೆಂತಲೂ ಈ ಕಲಮಿನಲ್ಲಿ ಸ್ಪಷ್ಟೀಕರಣ ಮಾಡಿದ್ದುಂಟು. ಸದ್ಯಕ್ಕೆ ಮುಂಬಯಿ ಸರಕಾರವು, ಆಹಾರಧಾನ್ಯಗಳನ್ನು ಚನ್ನಾಗಿ ಕಾಪಾಡಿಡುವ ದೃಷ್ಟಿಯಿಂದಲೂ, ಅಕ್ಕಿಯೊಳಗಿನ ಪೋಷಕ ಸತ್ವಾಂಶಗಳು ನಾಶವಾಗಬಾರದೆಂಬ ದೃಷ್ಟಿಯಿಂದಲೂ, ಸದ್ಯಕ್ಕೇ ಹೊಸದೊಂದು ಆಜ್ಞೆಯನ್ನು ಹೊರಡಿಸಿ (ತಾ. ೨೩-೧೨-೪೮ರ ಗಾಝೀಟನಲ್ಲಿ ಪ್ರಕಟವಾಗಿದೆ.) ಗಿರಣಿಗಳಲ್ಲಿ ಅಕ್ಕಿಗೆ ಏನೇನೂ ಮೆರಗು (ಪಾಲಿಶ) ಕೊಡಕೂಡದೆಂದೂ ಮೆರಗು ಕೊಡುವದು ಅಪರಾಧವಾಗುವದೆಂದೂ ವಿಧಿಸಿರುತ್ತಾರೆ.

ನೋಟೀಸು.

ಸುಪರಿಂಟೆಂಡಿಂಗ ಎಂಜಿನಿಯರ್, ಕರ್ನಾಟಕ್ ಇರಿಗೇಶನ್ ಸರ್ಕಲ್, ಧಾರವಾಡ.

ಸೂಚನೆ ಮತ್ತು ತಕರಾರ ಮುಂತಾದವುಗಳ ಬಗ್ಗೆ ಭೆಟ್ಟಿಯಾಗುವ ವೇಳೆ:—

ಪ್ರತಿ ದಿನ, ೩ರಿಂದ ೫ ಘಂಟೆಯ ವರೆಗೆ (ಮಂಗಳವಾರ ಮತ್ತು ಸೂಟಿಯ ದಿನಗಳ ಹೊರತಾಗಿ)

—※ ಸಾಧನ ※—

ಕನ್ನಡ ಪಕ್ಷ-ಪತ್ರಿಕೆ

ವಾರ್ಷಿಕ ಚಂದಾ ೩-೮-೦ (ಅಂಚೆ ವೆಚ್ಚ ಸೇರಿ)

ಬಿಡಿ ಪ್ರತಿ ೦-೨-೬

—* ಇಂದೇ ಚಂದಾದಾರರಾಗಿರಿ !! *—

ಪತ್ತೆ:- **ಸಾಧನ ಕಾರ್ಯಾಲಯ,**
ಹೊನ್ನಾವರ (ಉ ಕ)

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ವಿಳಾಸಕ್ಕೆ ಮುಂದಾಗಿ ಬರೆಕೊಂಡಲ್ಲಿ ಯೋಗ್ಯ ರೀತಿ ವ್ಯವಸ್ಥೆಯಿಟ್ಟು ಕಾಶೀ, ಪ್ರಯಾಗ, ಗಯಾ ಕ್ಷೇತ್ರಗಳನ್ನು ಯಾತ್ರಿಕರ ಅನುಕೂಲಕರ ಸ್ವತಃ ಮಾಡಿಸಿಕೊಡುತ್ತೇವೆ. ನಮ್ಮಲ್ಲಿಂದ ಪಟ್ಟೆ ಪೀತಾಂಬರ, ರೇಶಿಮೆ ಬನಾರಸ ರುದ್ರಾಕ್ಷಿ ವಗೈರೆ ಯಾವತ್ತೂ ಸಾಮಾನುಗಳು ಯೋಗ್ಯ ದರದಲ್ಲಿ ಪೂರೈಸಲ್ಪಡುವವು.

ಗೋಕರ್ಣ ಗಣಪತಿ ವಾಸುದೇವ ಭಟ್ಟ,
ಛತ್ರರಗಲ್ಲಿ, ಬನಾರಸ.

ಸ್ಥಾನಿಕ ವೃತ್ತಾಂತ.

ಕುಮಟಾ— ಹವೆಯಲ್ಲಿ ಏಕರೂಪತೆಯಿಲ್ಲ! ಒಂದೆರಡು ದಿನ ಚಳಿ ಬಿದ್ದರೆ, ಮುಂದೆ ಎರಡು ದಿನ ಸೆಕೆಯಾಗುತ್ತದೆ! ಸರಾಗವಾಗಿ ಚಳಿ ಬೀಳದಿರುವದರಿಂದ ಮಾವು ಹೂಬಿಡುವ ಮರಗಳು ಇನ್ನೂ ಹೂ ಬಿಟ್ಟಿಲ್ಲ.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಜಾಹೀರ ನೋಟೀಸು.

ಯಾವತ್ತೂ ಜನರಿಗೆ ಇದರ ಮೂಲಕ ತಿಳಿಯಪಡಿಸುವದೇನಂದರೆ — [illegible] ಗ್ರಾಮದ [illegible] ಸರ್ವೆ ನಂಬರ [illegible] ನೇ ಭಾಗದ [illegible] ನಂ. ೧/೩೪೬, ೧/೩೪೭, ೧/೩೪೮ನೇ [illegible] ರೂ ೫೦೦ (ಐದು ನೂರು) [illegible] [illegible]

ಭಟ್ಕಳ, ತಾ. ೩೦-೧೨-೧೯೪೮.

Pandurang Babaya Raykar.

ಬಗೆಯಿಂದ ಅಂಗಡಿ ಮತ್ತು ಹೋಟೆಲಯವರ ಬಗೆಯಿಂದ ಅಂಗಡಿ ಹೀಗೆ ಸಂಘದವರು ೨ ಅಂಗಡಿಗಳನ್ನು ನಡಿಸುತ್ತಾರಂತೆ. ಸೀಧಾ-ಚೀಟಿದಾರಗಳ ಸಂಖ್ಯೆ ದಿನೇ ದಿನೇ ಬೆಳೆಯುತ್ತಿರುವದರಿಂದ ಸೀಧಾ ಕೊಡಲು ತಾಸುಗಟ್ಟಲೆ ವಿಳಂಬವಾಗುತ್ತಿರುವದು ನಿಜವೆ ... ಅಂಗಡಿಯನ್ನು ... ಅಧಿಕಾರಿಗಳಿಗೆ ... ಮನೇಜರರು ... ಗಳು ... ಮನೇಜರರು ... ಅವರು ... "ಕಲ್ಪನಾ ಸೃಷ್ಟಿಯು" ಇರುವದಿಲ್ಲ ... ಬಗ್ಗೆ ನಾವು ಸ್ವತಂತ್ರ ... ಮನೇಜರರು ... ಎರಡು ಅಂಗಡಿಗಳು ಒಂದಕ್ಕೊಂದು ... ಅವು ಒಂದೇ ... ಗೋಡೌನ ... ಅಂಗಡಿ ... ವ್ಯವಸ್ಥೆಯಾದದ್ದು ಒಂದು ವಿಚಿತ್ರವೇ! ... ಮನೇಜರರು ... ಸಂಘದವರೂ ... ಅಂಗಡಿಯ ... ಸಾವ ಮುಚ್ಚಿಕೊಳ್ಳಲು ... ಸಂಪಾದಕ]

... ಕಾಂಗ್ರೆಸ ಕಮಿಟಿಯ ಅಧ್ಯಕ್ಷರೂ ... ಬಗ್ಗೆ ಮಾಡಿದ ವ್ಯವಸ್ಥಿತ ಯೋಜನೆಯನ್ನು ... ಊರವರೂ ... ವ್ಯವಸ್ಥೆಯಲ್ಲಿ ... ಕಮಿಟಿಯ ... ಜಿಲ್ಲಾಧಿಕಾರಿಗಳು ... ಅಧಿಕಾರದ ... ಜಿಲ್ಲಾಧಿಕಾರಿಗೆ ... ಅಧಿಕಾರ ... ಕಮಿಟಿಯ ... ಜಿಲ್ಲಾಧಿಕಾರಿಗಳು ... ಕಮಿಟಿಯ ...

... ಜಿಲ್ಲಾಧಿಕಾರಿಗಳಿಗೆ ಪ್ರೇಷಿಸಿದ ... ಪ್ರಕಟವಾಗಿದ್ದರೆ ಬಹಳ ಒಳ್ಳೇದಾಗುತ್ತಿತ್ತು!

... ಕಾಂಗ್ರೆಸ ಕಮಿಟಿಯ ಅಧ್ಯಕ್ಷರು ...

"ವೃತ್ತ"ದಲ್ಲಿ ಪ್ರಕಟವಾದಂತೆ ...

ಹೊನ್ನಾವರ— ... ಅಂಗಡಿಯನ್ನು ಅಂಗಡಿ ... ಸಂಘಕ್ಕೆ ... ಜಿಲ್ಲಾಧಿಕಾರಿ ... ಅಂಗಡಿಯನ್ನು ... ಸಂಘದವರು ಅಂಗಡಿಯನ್ನು ... ಅಂಗಡಿಯನ್ನು ... ಅಧಿಕಾರಿಗಳು ... ಅಂಗಡಿಗಾಗಿ ... ಸಂಘದ ... ಅಧಿಕಾರಿಗಳು ... ಅಂಗಡಿಯನ್ನು ... ಜಿಲ್ಲಾಧಿಕಾರಿಗಳು ...?

ಶಿರಾಲಿ— (ತಾ. ೧-೧-೧೯೪೫) ... ಹನುಮಂತ ದೇವಸ್ಥಾನದ ... ರೈತರು ... ರೈತನ ... ರೈತರ ...

... ಭಂಡಾರಿ ... ಪರಿಸ್ಥಿತಿಯಲ್ಲಿ ...

... ಅಸುಕೂಲವಿಲ್ಲ! ... ನಿಯಂತ್ರಣದ ಕಾನೂನಿನ ... ಗ್ರಾಮಗಳಲ್ಲಿ ... ಕಾಂಗ್ರೆಸ ರಾಜ್ಯದಲ್ಲಿ ... ಕಷ್ಟಕರವಾಗಿದೆ!

ಗ್ರಾಮಸ್ಥರು ... ಅಧಿಕಾರಿಗಳು ... ಹೇಳಬೇಕಾಗಿ ಅರಿಕೆಯುಂಟು.

... ಹುಲಿಯು ... ಗ್ರಾಮ-ಪಂಚಾಯತದವರು ... ವ್ಯವಸ್ಥೆ ಮಾಡಿಲ್ಲೆಂದು ... ದೂರುಂಟು.

... ಗ್ರಾಮದ ... ಹುಲಿಯೊಡನೆ ... ಹುಲಿಯನ್ನು ... ಹುಲಿಯನ್ನು ...

ಬೈಲೂರ— ತಾ. ೨೦-೧೨-೪೪ರ "ವೃತ್ತ"ದಲ್ಲಿ ಬೈಲೂರ ಗ್ರಾಮಸ್ಥರ ಮೇಲಿನ ಟೀಕೆಯನ್ನು ... "ವೃತ್ತ"ದಲ್ಲಿ ಬಂದ ಉತ್ತರವನ್ನು ... ಗ್ರಾಮಸ್ಥರು ಗ್ರಾಮ ... ರೈತರು ... ರೈತರಿಗೂ ... ಪಂಚಾಯತಿ ... ಈ ಗ್ರಾಮಸ್ಥರು ... ಮಾಡುತ್ತಾರೆಂಬದೊಂದು ದೂರೂ ಉಂಟು.

ಜಾಹೀರ ನೋಟೀಸು.

ಬಾಳ್ಯಾ ... ಗೌಡಾ ... ತಾ. ೨೨-೧೨-೧೯೪೪ನೇ ಕನ್ನಡ ವೃತ್ತದ ... ನೋಟೀಸಿಗೆ ಉತ್ತರವಾಗಿ ... ನಾನು ... ಗೌಡಾ ಅವರ ಲಗ್ನದ ... ಲಗ್ನವು ... ೨-೩ ... ನನ್ನ ... ನಾನು ... ನನ್ನ ... ೨ನೇ ಲಗ್ನ ... ನನ್ನ ವಿರುದ್ಧ ಅಲ್ಲದ ಸಲ್ಲದ ... ನೋಟೀಸು ... ನನ್ನ ... ನೋಟೀಸ ನನ್ನ ... ಬಾಧಕವಾಗಲ್ಲ.

... ತಾ. ೨ ೧-೪೫

... ನಾಗಮ್ಮಾ ...

[illegible]ಟಕಳ— (ತಾ. ೨೭-೧೨-೧೯೪೮) [illegible] ರ "ವೃತ್ತ"ದಲ್ಲಿ, "ವಿವಿಧ ವಿಷಯಗಳು" ಶೀ[illegible] ಒಂದು ಅಂತ, ಒಂದೇ ಅಧ್ಯಕ್ಷ ಕೆಲ್ಸ[illegible] [illegible] ಆಗಿರುವ ಬೇರೆ ಸಂಘ ಭಟಕಳ ಪೇಟೆಯಲ್ಲ[illegible] ಎಂಬುವಂಗಿ ಉಲ್ಲೇಖಿಸಲ್ಪಟ್ಟು ಆ ಸಂಘ[illegible] ಟೀಕೆಯಾದದ್ದು ಉಂಟು ಆ ಟೀಕೆಯನ್ನು [illegible] ಸಹಕಾರಿ ಸಂಘದ ಚೇರ್ಮನ್ನರು ಬರ[illegible] "ವೃತ್ತ"ದೊಳಗಿನ ಟೀಕೆ ನಮ್ಮ ಸಂಘ[illegible] ನಿರಾಧಾರವಾಗಿರುವದೆಂದು [illegible] [illegible] ನಮ್ಮ ಸಂಘದಲ್ಲಿ ನನ್ನ ಮಗನು [illegible] [illegible]ನೆ ಆದರೆ ನಾನು ಆ ಸಂಘದಲ್ಲಿ [illegible] [illegible] ಇಲ್ಲವೆ ಸ್ವಾರ್ಥ [illegible] [illegible] ಸೇರಿದ್ದುದಿಲ್ಲ ಸಂಘವನ್ನು [illegible] [illegible] ಅಧಿಕಾರದಲ್ಲಿ [illegible] ಮತ್ತು ಅವ್ಯಕ್ತ [illegible] ವೇಳೆ, ಅದನ್ನು [illegible] ಸಂಘದ [illegible] ವಹ[illegible] ಸೇರಿಕೊಂಡು ಅಧ್ಯಕ್ಷತೆಯ [illegible] ನನ್ನ ಕೊರಳಿಗೆ ಹಾಕಿದರು, ಅಂದಿನಿಂದ ನಾನು [illegible] ಸ್ವಾರ್ಥ [illegible] ಅಂದಿನ ಎಷ್ಟೋ [illegible] [illegible] ಬಹಳ [illegible] ಎಷ್ಟೋ ಜನರ ಸೇವೆ [illegible] ಸಂಘದ ಆ ಕಾರ್ಯಕರ್ತರನ್ನು [illegible] [illegible] ಕೊಟ್ಟಿದ್ದಾರೆ, ರೈತರ [illegible] ಸಹಕಾರ [illegible] [illegible] ಭದ್ರತೆಯ [illegible] ಕೊಟ್ಟಿದ್ದಾರೆ [illegible] ನೋಡುತ್ತಿದ್ದು [illegible] [illegible] ಅವನನ್ನು ಅರಿತಿದ್ದಾರೆ [illegible] [illegible] ಇರುವದಿಲ್ಲ ಸ್ವಾರ್ಥ [illegible] ವೃತ್ತ [illegible] ಪ್ರಸಿದ್ಧಿಸುವಂತೆ ಕೋರುತ್ತೇನೆ ಇತ್ಯಾದಿ

(ತಾ ೨೦-೧೨-೪೮) ನಿನ್ನೆ ಸಂಜೆ ಕೋಟೆಯಿಂದ [illegible] [illegible]ದೊಳಗಿನ ಹುಡುಗ [illegible] ಎಂಬವನ [illegible] [illegible] ಬಂದ ಹತ್ತು [illegible] [illegible] ಆತ್ಮಹತ್ಯೆ ಮಾಡಿಕೊಳ್ಳಲು [illegible] [illegible] ಕೋಟೆಯಿಂದ ಪಟೇಲರು [illegible] [illegible] ಮಾಡಲು [illegible] [illegible] ಬರಲೇ ಇಲ್ಲೆಂಬ ಸುದ್ದಿ ಬಂದಿದೆ. ಆ ಪಟೇ[illegible] [illegible] ಗ್ರಾಮ ಪಂಚಾಯತಿ[illegible] [illegible] ಬೇರೊಬ್ಬ ಪಟೇಲರಿಗೆ [illegible] ಪಂಚನಾಮೆ [illegible] ಪಟೇಲರಿಗೆ ಒಪ್ಪಿದ [illegible] ಕೋಟೆಯಿಂದ ಪಟೇಲರಿಗೆ [illegible]ಧಿಕಾರಿಗಳು [illegible] [illegible]ಯಿಂದ ಬರುಗಡೆ [illegible] ಇಲ್ಲವೇ ? ಎಂದು [illegible] ಗ್ರಾಮ ಪಂಚಾಯತಿಯವರು ಕೇಳುತ್ತಾರೆ.

[illegible]ಯ ಸಂಸ್ಥೆಗಳಿಗೆ ಸೀಧಾ-ಅಂಗಡಿ ಮುಂತಾದ [illegible] ಒಪ್ಪಿಸತಕ್ಕದ್ದೆಂದು ಮುಂಬಯಿ ಸರಕಾರವು [illegible] ನಿರ್ಧಾರ ಮಾಡಿದ್ದುಂಟು ಅದಕ್ಕನು[illegible] ಹಿಂದಿನ ಜಿಲ್ಲಾಧಿಪರು ಇಲ್ಲಿಯ [illegible] [illegible] ಕಡೆಗಿದ್ದ ಸೀಧಾ ಅಂಗಡಿಗಳನ್ನು [illegible], [illegible] ಪೈರಿಗೂ "ಅಜಮಲ ಸ್ಟೋರ್ಸ"ದ[illegible] ಕೊಟ್ಟಿದ್ದರು [illegible] ಜಾತೀಯ ಸಂಸ್ಥೆಯಾ[illegible] [illegible] ಸಂಘಕ್ಕೆ ಸೀಧಾ ಅಂಗಡಿ ಮುಂ[illegible] [illegible] ಸಂಸ್ಥೆಯ ಸ್ವರೂಪದ ತಾತ್ಕಾಲಿಕ ಯಾ[illegible] ಸಂಸ್ಥೆಗಳನ್ನು ಒಪ್ಪಿಸಕೂಡದೆಂದು ಸರಕಾ[illegible] [illegible] ಪ್ರಕಟಿಸಿ[illegible] [illegible] ಅದ[illegible] ಹೊಸ ಜಿಲ್ಹಾಧಿಪರಾದ ಡಾ॥ ಅಲ್ಲಾ[illegible] [illegible] ಪೈರ ಕಡೆಗಿದ್ದ ಸೀಧಾ ಅಂಗಡಿಯನ್ನು [illegible] ಯಾವದೇ ತಪ್ಪು ಮಾಡಿರದಿದ್ದರೂ) [illegible] ಸಂಘಕ್ಕೆ ಕೊಡಬೇಕಾಗಿ ವೆನ್ನೆ [illegible] ಹೊಸ ಹುಕುಮು ಹೊರಡಿಸಿದ್ದಾರಂತೆ ! [illegible] ಸಂಘದವರು ಬರೆ ಹಿಂದು ಜನರಿಗೆ ಯಾವ [illegible] ಸುತ್ತಾರೆಂಬುದು ಜಗಜ್ಜಾಹೀರವಿದೆ ಮೇಲಧಿ[illegible] ಜಿಲ್ಹಾಧಿಪರ ನಿರ್ಣಯದ ಒಳ ಅಂತರಂಗವ[illegible] [illegible] ಶೋಧಿಸಬೇಕಾಗಿ ಸೂಚನೆಯಿದೆ

[illegible]ರ್ಸಿ— ಈ ಹಿಂದೆ ಜಾಹೀರ ಮಾಡಿದಂತೆ ವಸೂಲ [illegible] ೨೨-೧೧ ರ ಹೊರತು ತಾ ೨೫ ೧೨ [illegible] ವರೆಗೆ (ಶಿರ್ಸಿಯ ರಾ ವಿಟ್ಠಲ ಪಂಡಿತರ ರೂ ೧೮೦, ರಾ ಎಸ್ ಎಸ್ ಘಂಟಿಕರಿಯವರ ರೂ ೧೦೧, ರಾ। ವೆಂಕಟ್ರಮಣ ಹೊನ್ನಾವರ ಇವರ ರೂ ೫೧, ಮಹಾಲಕ್ಷ್ಮೀ ಸ್ಟೋರ್ಸದವರ ರೂ ೫೧, ಯಲ್ಲಾಪುರದ ರಾ ಎಸ್ ವಿ ವೈದ್ಯರ ರೂ ೫೧, ಕುಮಟಾ ತಾಲೂಕ ಕಚೇರಿಯವರ ರೂ ೧೧೬, ಭಟಕಳ ಮಹಾಲ ಕಚೇರಿಯವರ ರೂ ೨೬, ಕಾರವಾರ ತಾಲೂಕ ಕಚೇರಿಯವರ ರೂ ೧೨೫, ಸುಪೆಯ ಟಿಕೆತಾಲಯದವರ ರೂ ೩೪೧, ಟಪಾಲ ಖಾತೆಯವರು ಕಳಿಸಿ ಕೊಟ್ಟ ರೂ ೧೯೭ ಮತ್ತು ಶಿರ್ಸಿಯ ಪ್ರಾಥಮಿಕ ಶಾಲೆಯವರು ಕಳಿಸಿಕೊಟ್ಟ ರೂ ೧೨೩। ಕೂಡಿ) ಅಂತು ರೂ ೨೦೬೫ ೯-೯ ಈ ಜಿಲ್ಹೆಯ ಗಾಂಧಿ ಸ್ಮಾರಕ ನಿಧಿಗೆ ವಸೂಲ ಬಂದಿರುತ್ತವೆಂದು ನಿಧಿ-ಸಂಗ್ರಹ ಸಮಿತಿಯವರು ತಿಳಿಸುತ್ತಾರೆ

ಇಲ್ಲಿ ಕೂಡಲಿರುವ ಜಿಲ್ಹಾ ವ್ಯವಸಾಯ ಪ್ರದರ್ಶನವನ್ನು ತಾ ೧೬ ತಿಂಗಳ ದಿನ ಪ್ರಾರಂಭಿಸಬೇಕೆಂದು ನಿಶ್ಚಿತವಾಗಿದೆ ಪ್ರದರ್ಶನ ಉದ್ಘಾಟನೆ ಮಾಡಲು ಮುಂಬಯಿ ಸರಕಾರದ ಯಾವತ್ತು ಮಂತ್ರಿಗಳನ್ನು ಇಲ್ಲವೆ ಬೇರೊಬ್ಬ ಮಂತ್ರಿಯನ್ನು ಬಿನ್ನವಿಸಬೇಕೆಂಬ ನಿರ್ಣಯವಾಗಿದೆ ಪ್ರದರ್ಶನದ ಬೇರೆ ಬೇರೆ ಅಂಗಗಳ ವ್ಯವಸ್ಥೆ ಮಾಡುವದಕ್ಕಾಗಿ ಪ್ರತಪ್ರತ್ಯೇಕ ಸಮಿತಿಗಳು ಈಗಾಗಲೇ ನೇಮಕಪಟ್ಟಿವೆ ಪ್ರದರ್ಶನದ ಕಾಲಕ್ಕೆ ಮನರಂಜನೆಯ ಮತ್ತು ವಿಶೇಷ ಪಾವಳಿಯ ಕಾರ್ಯಕ್ರಮಗಳನ್ನು ಏರ್ಪಡಿಸುವ ವಿಚಾರವುಂಟು ಈ ಅಂಗವಾಗಿ ನೆರವು ಸಲ್ಲಿಸುವವರು ರಾ ಪ್ರಿ ಆರ್ ಹೆಗ್ಡೆ, ಶಿರ್ಸಿ ಇವರ ಕಡೆ ಪತ್ರ ವ್ಯವಹಾರ ಮಾಡಬಹುದು

ತಾ ೨೦ ೧೨ ೪೮ರ "ವೃತ್ತ"ದಲ್ಲಿ ಟುಶಿರ್ಸಿಯವರು ತಮ್ಮ ಸಂಘದವರ ವಿರುದ್ಧ ಮಾಡಿದ ಟೀಕೆ ನಿರಾಧಾರವಿರುತ್ತದೆಂದೂ ತಮ್ಮ ಸಂಘದವರ ವಿರುದ್ಧ ಇಲ್ಲ ಸಂಘದ ಯ ಆರೋಪ ಬಂದದ್ದಾಗಲಿ ಶಿಕ್ಷೆಯಾದದ್ದಾಗಲಿ ಇರುವದಿಲ್ಲೆಂದೂ ಹಾದುಗಾರ ಸಂಘಕ್ಕೆ ಸೇರಿದ ರಾ॥ ಪಿ ಜಿ ಭಟ್ಟ ಎಂಬವರು ತಿಳಿಸುತ್ತಾರೆ ಹಾದಿಗಾರ ಸಂಘದ ಜವಳಿ ಅಂಗಡಿ ಶಿರ್ಸಿಯಿಂದ ೬ ಮೈಲು ಅಂತರದಲ್ಲಿದೆ ಯೆಂತೆ ೬ ತಿಂಗಳ ಬಟ್ಟೆಯನ್ನು ಒಮ್ಮೆಲೇ ಒಯ್ಯಬಹುದುತ್ತಿರುವದರಿಂದ ದೂರದ ಹಳ್ಳಿಗಳವರಿಗೆ ಏನೊಂದು ಕಷ್ಟವಾಗಲಿಕ್ಕಿಲ್ಲವಾ" ರಾ। ಭಟ್ಟರು ಸಮಾಧಾನ ಹೇಳುತ್ತಾರೆ

ವೆಂಕಟಾಪುರ ಗ್ರಾಮದ ರೈತನೊಬ್ಬನು ಕಳೆದ ತಾ ೨೧ನೇಗೆ ೧೦ ಚೀಲ ಭತ್ತವನ್ನು ಬನವಾಸಿಯೊಳಗಿನ ಉಗ್ರಾಣಕ್ಕೆ ಕೊಡಲು ತರುತ್ತಿದ್ದಾಗ ಬನವಾಸಿಯ ಸರ್ಕಲ ಇನ್ಸಪೆಕ್ಟರರು ಹಾದಿಯಲ್ಲಿ ಹಿಡಿದು ಜಪ್ತ ಮಾಡಿಟ್ಟ ವರ್ತಮಾನವಿದೆ ಈ ರೈತನು ತನ್ನ ಊರಿನ ಪಟೇಲರ ಕಡೆ ಗ್ರಾಮಾಂತರದ ಅಪ್ಪಣೆ ಚೀಟಿಯನ್ನು ಬೇಡಿದ್ದನಂತೆ ಆದರೆ ಪಟೇಲರ ಕಡೆ ಅಪ್ಪಣೆ ಚೀಟಿ ಕೊಡಲು ಆವಶ್ಯವುಳ್ಳ "ಪಾಸ ಬುಕು" ಇಲ್ಲದ್ದ ಬನವಾಸಿಯಲ್ಲಿರುವ ವೆಂಕಟಾಪುರದ ಠಾಣೆದಾರರಿಂದಲೇ ಪಾಸು ಪಡಕೊಂಡರಾಯಿತು ಎಂದು ರೈತನು ಭಾವಿಸಿ ಬನವಾಸಿಗೆ ಭತ್ತ ತಂದಿದ್ದನಂತೆ ಈ ಎಲ್ಲ ಸಂಗತಿಗಳನ್ನು ರೈತನು ಸರ್ಕಲ್ ಇನ್ಸಪೆಕ್ಟರರಿಗೆ ತಿಳಿಸಿ ಹೇಳಿದರೂ ಅವರು ಕೇಳಲಿಲ್ಲ ! ಈ ಸರ್ಕಲ್ ಇನ್ಸಪೆಕ್ಟರ ಹಿಂದಿನ ಇತಿಹಾಸ ಕುರಿತು ಅವರಿಗೆ ಈ ಭಾಗದಲ್ಲಿ ಸರ್ಕಲ್ ಇನ್ಸಪೆಕ್ಟರರಾಗಿ ಅಧಿಕಾರಿಗಳು ಹ್ಯಾಗೆ ನೇಮಿಸಿದರೆಂದು ಜನರು ಆಶ್ಚರ್ಯಪಡುತ್ತಾರೆ

ಓಣಿಕೈ ದೀಕ್ಷಿತರ ಮನೆಯಲ್ಲಾದ ಘಟನೆಗಳ ಬಗೆ ತಾ ೨೦ ೧೨ ೧೯೪೮ರ "ವೃತ್ತ"ದಲ್ಲಿ ಪ್ರಕಟವಾದ ವರದಿ ವಿಪರ್ಯಸ್ತವಿರುತ್ತದೆಂದು ರಾ। ಓಣಿಕೈ ನಾರಾಯಣ ದೀಕ್ಷಿತರು ಬರೆಯುತ್ತಾರೆ ಈ ನಾರಾಯಣ ದೀಕ್ಷಿತರೂ ಅವರ ಅಣ್ಣ ಗೋವಿಂದ ದೀಕ್ಷಿತರೂ ಈಗ ೭ ವರ್ಷಗಳಿಂದ ಬೇರೆ ಬೇರೆ ಉಳಿಯುತ್ತಾರೆ ಆಸ್ತಿಯ ವಾಂಟಣೆ ಇನ್ನೂ ಆಗಿಲ್ಲ ವಾಂಟಣೆಯನ್ನು ಹಿಂದಿನಿಂದ ಮಾಡುವಾ ಎಂದು ನಂಬಿಗೆ ಕೊಟ್ಟು ಗೋವಿಂದ ದೀಕ್ಷಿತರು ನಾರಾಯಣ ದೀಕ್ಷಿತರಿಗೆ ತುರ್ತಕ್ಕೆ ಒಂದು ತೋಟ ಮಾತ್ರ ಕೊಟ್ಟಿರುತ್ತಾರೆ ಆ ತೋಟದ ಬೆಳೆಯನ್ನು ನಾರಾಯಣ ದೀಕ್ಷಿತರಿಗೆ ಅನುಭವಿಸಗೊಡದೆ, ಅದನ್ನು ಅಪಹರಿಸುವದಕ್ಕಾಗಿ ಗೋವಿಂದ ದೀಕ್ಷಿತರ ಮಗ ದತ್ತಾತ್ರಯನು ಕೆಲವು ಪುಂಡರನ್ನು ಕರೆದಿಟ್ಟುಕೊಂಡಿದ್ದನು ಈ ರೀತಿ ದತ್ತಾತ್ರಯನು ದಾಂಧಲೆ ಮಾಡಲು ಪ್ರವೃತ್ತನಾದ ಬಗ್ಗೆ ಪೋಲೀಸರಲ್ಲಿ ಪಟೇಲರಲ್ಲಿ ಫಿರ್ಯಾದುಗಳು ದಾಖಲಾಗಿದ್ದವು. ಆದರಿಂದ ಪಟೇಲರೂ ಪೋಲೀಸರೂ ಒಂದು ದತ್ತಾತ್ರಯನಿಂದ ದಾಂಧಲೆ ಮಾಡುವದಿಲ್ಲೆಂದು ಬರೆಸಿಕೊಂಡು ಹೋಗಿರುತ್ತಾರೆ ಪೋಲೀಸರನ್ನು ಕಂಡು ದತ್ತಾತ್ರಯನು ಕರೆದಿಟ್ಟ ಪುಂಡರೂ ಹಾರಿ ಹೋದರು ಪೋಲೀಸರು ರಾತ್ರಿ ಒಂದಷ್ಟೇ ಇದ್ದು, ಗೋವಿಂದ ದೀಕ್ಷಿತರ ಕೂಲಿಯಾಳುಗಳನ್ನು ಓಡಿಸಿದ್ದೂ ಇಲ್ಲ, ಅವರು ಓಡಿಸಿದ್ದು ದತ್ತಾತ್ರಯನು ಕರೆದಿಟ್ಟ ಪುಂಡರನ್ನು, ಎಂದು ಮುಂತಾಗಿ ರಾ। ನಾರಾಯಣ ದೀಕ್ಷಿತರು ಬರೆದಿದ್ದಾರೆ ಬೇರೊಬ್ಬರೂ ಈ ಕಥೆಯನ್ನು ಅನುಮೋದಿಸಿ ಪತ್ರ ಬರೆದಿದ್ದಾರೆ

ಯಲ್ಲಾಪುರ— (ತಾ ೩೧-೧೨-೪೮) ವ್ಯವಸಾಯ ಮತ್ತು ವನ ಇಲಾಖೆಗಳ ಮಂತ್ರಿಗಳು ಬುಧವಾರ ತಾ ೨೯ (ನಿನ್ನೆ) ನೇ ಸಂಜೆ ಇಲ್ಲಿಯ ಡಿ ಡಿ ಟಿ ಕೇಂದ್ರ ನೋಡಲು ಬರುತ್ತಾರೆಂಬ ಸುದ್ದಿ ಕೇಳಿ ಇಲ್ಲಿಯವರಿಗೆ ಆಶ್ಚರ್ಯವಾಯಿತು ಏಕೆಂದರೆ ಇಲ್ಲಿ ಈಗ ಡಿ ಡಿ ಟಿ ಕೇಂದ್ರವಿರುವದಿಲ್ಲ ಅದು ಎಂದೋ ಧಾರವಾಡಕ್ಕೆ ಹೋಗಿದೆ ಮಂತ್ರಿಗಳು ಕದಾಚಿತ್ ಅದನ್ನು ಧಾರವಾಡದಿಂದ ಇಲ್ಲಿಗೆ ತಂದು ಸ್ಥಾಪಿಸಿರಬಹುದೆಂಬ ದೊಂದು ಕಲ್ಪನೆ ಜನರಲ್ಲಿ ಉಂಟಾಯಿತು ! ಅದನ್ನು ನೋಡಲೆಂದು ನಿನ್ನೆ ಇಲ್ಲಿ ಬಹಳ ಜನರು ಕೂಡಿದ್ದರು ಮಂತ್ರಿಗಳು ೮ ಘಂಟೆ ರಾತ್ರಿಗೆ ಇಲ್ಲಿ ತಲ್ಪಿದರು ಆಗತಸ್ವಾಗತದ ೬ ಉಪಚಾರಗಳು ಮುಗಿದ ಬಳಿಕ ಕೂಡಿದ ವ್ಯವಸಾಯಗಾರರು ಜಂಗಲ ಪಟ್ಟಿಗಳ ಸಂಬಂಧದಲ್ಲಿ ಸರಕಾರವು ಹಾಕಿದ ಹೊಸ ನಿರ್ಬಂಧಗಳು ಘಾತಕವಿರುತ್ತವೆಂದು ವ್ಯವಸಾಯಗಾರರು ದೂರಿದರು ಈ ನಿಯಮಗಳಂತೆ ಕಡಿಯಬೇಕಾದ ಜಂಗಲ ಪಟ್ಟಿಯಲ್ಲಿರುವ ಕಟ್ಟಿಗೆಯ ಬೆಲೆಯನ್ನು ಜಂಗಲ ಇಲಾಖೆಯವರು ಮಾಡಬೇಕು ಅದರೊಳಗಿಂದ ಪಟ್ಟಿಯ ಸ್ವಚ್ಛತೆಗಾಗಿ ತಗಲುವದೆಂದು ಕಂಡುಬರುವ ವೆಚ್ಚವನ್ನು ಕಳೆದು ಉಳಿದ ಹಣವನ್ನು ಪಟ್ಟಿಯನ್ನು ಆಳುವವನು ಸರಕಾರದಲ್ಲಿ ನೊಡಲು ತುಂಬಬೇಕು ! ಆ ಮೇಲೆ ಪಟ್ಟಿಯನ್ನು ಸುಸ್ಥಿತಿಯಲ್ಲಿಡುತ್ತೇನೆಂಬ ಭದ್ರತೆ ಕೊಡಬೇಕು ! ಆ ಮೇಲೆ ಪಟ್ಟಿಯನ್ನು ಸ್ವಚ್ಛಗೊಳಿಸಿಕೊಳ್ಳಲು ಅನುಮತಿ ದೊರೆಯುವದು ! ಪಟ್ಟಿಯೊಳಗಿನ ಕಟ್ಟಿಗೆಯ ಬೆಲೆಯನ್ನೂ ಅದರ ಸ್ವಚ್ಛತೆಯ ವೆಚ್ಚವನ್ನೂ ನಿರ್ಧರಿಸುವ ಅಧಿಕಾರ ಜಂಗಲ ಖಾತೆಯವರಿಗೆ ಕೊಟ್ಟ ಮೇಲೆ ಆ ಪಟ್ಟಿಗಳು ಜಂಗಲ ಖಾತೆಯವರ ದಾಯಾದಿಗಳಾದ ಒಕ್ಕಲಿಗರಿಗೆ ಎಂದಾದರೂ ಸುಖದಿಂದ ಸಿಗುವ ಸಂಭವವುಂಟೇ ! ಎಂದು ವ್ಯವಸಾಯಗಾರರು ವಾದಿಸಿದರು ಜಂಗಲ ಪಟ್ಟಿಯಲ್ಲಿರುವ ಕಟ್ಟಿಗೆಯ ಬೆಲೆ ಆ ಪಟ್ಟಿಗಳ ಸ್ವಚ್ಛತೆಯ ವೆಚ್ಚವನ್ನು ತೆರಲಾರರೆಂದು ಎಷ್ಟೋ ಜನ ರೈತರು ಸಿದ್ಧಗೊಳಿಸಿದರು ಈ ಹೊಸ ನಿರ್ಬಂಧಗಳನ್ನು ರದ್ದುಗೊಳಿಸದನಕ ಜಂಗಲ ಪಟ್ಟಿಗಳ ಸವಲತ್ತಿನ ಪ್ರಯೋಜನ ವ್ಯವಸಾಯಗಾರರಿಗೆ ಆಗುವದಿಲ್ಲೆಂದು ಬಿಡಿಸಿ ಹೇಳಿದರು ಆದರೆ ಇದ್ಯಾವದೂ ಮಂತ್ರಿಗಳ ತಲೆಯಲ್ಲಿ ಹೋಗಲಿಲ್ಲ ! ಜಂಗಲ ಪಟ್ಟಿಗಳೊಳಗಿನ ಮರಗಳನ್ನು ಯಾಕೆ ಕಡಿಯಬೇಕು ? ಅವು ಬೆಳೆಯುವಷ್ಟು ಕಡಿದರೆ ತೀರದೇ ಸಾಲಲಿಕ್ಕಿಲ್ಲವೇ? ಹೆಚ್ಚೆಂದರೆ ಹೊಲದಲ್ಲಿ ನೆರಳು ಮಾಡುವ ಮರಗಳನ್ನಷ್ಟು ಕಡಿದರಾಯಿತು ಎಂದು ಮುಂತಾಗಿ ಅವರು ವಾದಿಸಹತ್ತಿದರು ! ವ್ಯವಸಾಯಗಾರರು ಆಗ ಜಂಗಲ ಪಟ್ಟಿಗಳ ಸ್ವಚ್ಛತೆಯ ಇತಿಮಿತಿಗಳನ್ನೂ ಕಾರಣಗಳನ್ನೂ ಮಂತ್ರಿಗಳಿಗೆ ತಿಳಿಸಹೇಳಲಾರಂಭಿಸಿದರು ಆಗ ಮಂತ್ರಿಗಳು ಬೇಸರ ಬಂತೇನೋ ! "ನೀವೇ ೧ ತಿಂಗಳು ಮಂತ್ರಿಪದ ನಡಿಸಿ ಈ ಸಮಸ್ಯೆ ಬಿಡಿಸಿ ಬಿಡಿರಲ್ಲ !" ಎಂದು ಉತ್ತರಿಸಿದರು ಅಷ್ಟರಲ್ಲಿ ಲಿಂಗ್ಯಾನಕೊಪ್ಪ ಎಂಬಲ್ಲಿ (ಇಲ್ಲಿಂದ ಸುಮಾರು ೨ ಮೈಲು ದೂರದಲ್ಲಿ) ದೊಡ್ಡ ಪರೋಡೆಯಾದ ವರ್ತಮಾನ ಬಂತು ಆದರಿಂದ ಮಂತ್ರಿಗಳ ಬಳಿ ಕೂಡಿದ ಜನರೆಲ್ಲ ಲಿಂಗ್ಯಾನಕೊಪ್ಪಕ್ಕೆ ಓಡಿಹೋದರು

ಮಂತ್ರಿಗಳು ಇಂದು ಉಳಿದಿದ್ದ ಕಾರ್ಯಕ್ರಮ ರದ್ದುಗೊಳಿಸಿ ಶಿರ್ಸಿಗೆ ಹೊರಟು ಹೋಗಿರುತ್ತಾರೆ

ನೋಟೀಸು.

ಉತ್ತರ ಕಾನಡಾ ಜಿಲ್ಹಾ ಎಗ್ಜಿಕ್ಯೂಟಿವ್ ಇಂಜಿನಿಯರ ಸಾಹೇಬರವರ ಕಚೇರಿಯಿಂದ ಎಲ್ಲ ಜನರಿಗೆ ತಿಳಿಸಲ್ಪಡುವದೇನಂದರೆ:—

೧ ಈ ಜಿಲ್ಹೆಯೊಳಗಿನ ಕೆಳಗೆ ತೋರಿಸಿದ ಕಾಂಗಳನ್ನು ದೋಣಿ ಮತ್ತು ಮೋಟರ ಲಾಂಚ ಸರ್ವಿಸಿನಿಂದ ಉತ್ಪನ್ನ ರೀತಿಯಿಂದ ನಡಿಸುವ ಮತ್ತು ತಾರ ದಾಟಲು ಪಕಾಲ ಮಾಡುವ ಹಕ್ಕಿನ ದೆಸೆಯಿಂದ, ೧೯೪೮ನೇ ಇಸವಿಯ ಎಪ್ರಿಲ ೧ನೇ ತಾರೀಖಿನಿಂದ ಒಂದು ವರ್ಷದ ಬಾಬತು ಹಕ್ಕುಗಳು ಕೆಳಗೆ ತೋರಿಸಿದ ತಾರೀಖಿಗೆ ಮತ್ತು ಮುಕ್ಕಾಮಿನಲ್ಲಿ — ಮಧ್ಯಾಹ್ನ ೨ ಘಂಟೆಗೆ ಬಹಿರಂಗವಾಗಿ ಲಿಲಾಂವು ಮಾಡಲ್ಪಡುವವು ಸವಾಲು ಮಾಡುವ ಇಚ್ಛೆಯುಳ್ಳವರು ಬಂದು ಸವಾಲು ಮಾಡಬಹುದು ಸವಾಲಿನ ಮತ್ತು ಕರಾರನಾಮೆಯ ಶರ್ತುಗಳನ್ನು ಮೆ॥ ಎ ಇಂಜಿನಿಯರ ಸಾಹೇಬರವರ ಕಚೇರಿಯಿಂದ, ಕಚೇರಿಯ ಹೊತ್ತಿನಲ್ಲಿ, ಆದಿತ್ಯವಾರ ಮತ್ತು ರಜೆಗಳ ದಿವಸಗಳ ಹೊರತು, ತಿಳಕೊಳ್ಳಬಹುದು ಜಾಹೀರನಾಮೆಯ ಮತ್ತು ಇತರ ಶರ್ತುಗಳ ಪ್ರತಿಗಳು ತಾ ೨೨-೧-೧೯೪೮ನೇದರ ನಂತರ ಮೆ॥ ಎ ಇಂಜಿನಿಯರ ಸಾಹೇಬರವರಿಗೆ ಅದರ ಬಗ್ಗೆ ಅರ್ಜಿ ಮಾಡಿದರೆ ಅವುಗಳನ್ನು ಪುಕ್ಕಟೆ ಕೊಡಲಾಗುವದು

೨ ಹಕ್ಕು ಬೇಡುವವರು ತಮ್ಮ ಲಾಯಖಿ ಬಗ್ಗೆ ತಮ್ಮ ಸ್ಥಿರ ಆಸ್ತಿ ಎಲ್ಲಿರುವದೋ ಆ ತಾಲೂಕಿನ ಮಾಮಲೇದಾರರ ಅಥವಾ ಮಹಾಲಕರಿಯವರ ಸಹಿಯ ಸರ್ಟಿಫಿಕೇಟು ತರಬೇಕು, ಮತ್ತು ಪ್ರತಿಯೊಂದು ಹಕ್ಕು ಬಾಬತು ಇನ್ನೂರು (೨೦೦-೦-೦) ರೂಪಾಯಿಗಳನ್ನು ನಗದಿಯಾಗಿ ಹಾಜರ ಮಾಡಲು ಸಿದ್ಧರಾಗಿರಬೇಕು ಬನವಾಸಿ ತಾರಿಯ ಬಗ್ಗೆ ಮಾತ್ರ ಇಪ್ಪತ್ತು (೨೦-೦-೦) ರೂ ಹಾಜರ ಮಾಡಿದರೆ ಸಾಕು. ಸವಾಲು ಮುಂಜೂರ ಆದರೆ ಸವಾಲಿನ ಒಂದು ಹನ್ನೆರಡಂಶ ರಕಮನ್ನು ಕೂಡ ನಗದಿಯಾಗಿ ಹಾಜರ ಮಾಡಬೇಕಾಗುವದು ಸವಾಲು ಮುಂಜೂರಾಗದಿದ್ದಲ್ಲಿ ಹಕ್ಕಿನ ಬಾಬತು ಹೀಗೆ ಹಾಜರ ಮಾಡಿದ ಹಣ ತಿರುಗಿ ಕೊಡಲ್ಪಡುವದು.

೩ ಲೋಂಚ ಸರ್ವಿಸದ ಸಲುವಾಗಿ ಸವಾಲು ಮಾಡಿಲಿಚ್ಛಿಸುವವರಿಗೆ ತಾರಿಯ ಹಕ್ಕುಗಳನ್ನು ಎರಡರಿಂದ ಮೂರು ವರ್ಷಗಳ ವರೆಗೆ ಕೊಡಲಾಗುವದು

ನಂ	ತಾರಿಯ ಹೆಸರು.	ತಾರಿಯ ಕ್ಲಾಸು	ತಾಲೂಕ	ಯಾವ ತಾರೀಖಿಗೆ	ಎಲ್ಲಿ	ಯಾರ ಮುಂದೆ
೧	ಹಳದಿಪುರ (ಮಲ್ಲುಕುರ್ವೆ ಮತ್ತು ಗೇರುಸೊಪ್ಪಾ ಪೋರ್ಟ ತಾರಿ ಸಹಿತ)	೨ನೇ	ಹೊನ್ನಾವರ	೩೦—೧—೪೮	ಎಕ್ಸಿಕ್ಯೂಟಿವ್ ಇಂಜಿನಿಯರ್ ಕಚೇರಿ, ಕಾರವಾರ	ಮೆ॥ ಎ ಇಂಜಿನಿಯರ ಸಾಹೇಬರು
೨	ದೀವಗಿ (ಮಿರ್ಜಾನ) ಮತ್ತು ಮಿರ್ಜಾನ ಒಟ್ಟಿಗೆ (ಕೋಡ್ಕಣಿ ಪೋರ್ಟ ತಾರಿಯ ಸಹಿತ)	೩ನೇ	ಕುಮಟಾ			
೩	ವೆಂಕಟಾಪುರ (ಹೆಬಳೆ ಮತ್ತು ತೆಂಗಿನಗುಂಡಿ ಪೋರ್ಟ ತಾರಿಗಳ ಸಹಿತ)	೩ನೇ	ಭಟ್ಕಳ ಪೇಟಾ			
೪	ಉಳವರೆ	೩ನೇ	ಅಂಕೋಲಾ			
೫	ಬನವಾಸಿ	೪ನೇ	ಸಿರ್ಸಿ	೨೬—೧—೧೯೪೮	ಸಬ್ ಡಿವಿಜನಲ್ ಆಫೀಸ, ಪಿ ಡಬ್ಲ್ಯು ಡಿ ಸಿರ್ಸಿ,	ಸಬ್ ಡಿವಿಜನಲ್ ಆಫೀಸರ, ಪಿ ಡಬ್ಲ್ಯು ಡಿ ಸಿರ್ಸಿ.

ನಂ ಜಿ. ೫೯೬೩

ಕಾರವಾರ.
ತಾ ೩೦—೧೨—೧೯೪೮ } **G. N. GODSE.**
ಎಗ್ಜಿಕ್ಯೂಟಿವ್ ಇಂಜಿನಿಯರ್, ಕಾನಡಾ

ಜಾಹೀರ ನೋಟೀಸು.

ಕಾನಡಾ ಜಿಲ್ಹಾ ಕೋರ್ಟಿನಿಂದ—

ಮುಂಬಯಿ ಪ್ರಾಂತದ ಋಣ-ವಿಮೋಚನ ಕಾಯದೆಯಂತೆ (Bombay Agricultural Debtors Relief Act) ದಾಖಲಮಾಡಿದ ಎಲ್ಲ ಅರ್ಜಿಗಳಲ್ಲ, ಪ್ರತಿಯೊಂದು ನೋಟೀಸು ಇಲ್ಲವೆ ಸಮನ್ಸಿನ ಬಗ್ಗೆ ಅರ್ಜದಾರನಿಂದ ಅಥವಾ ಸಂಬಂಧಪಟ್ಟವರಿಂದ ಭತ್ತೆಯ ಬಗ್ಗೆ ರೂ. ೦-೧೨-೦ ರಂತೆ (ಸಮನ್ಸ ಆಗತಕ್ಕವರು ಒಂದೇ ಊರಿನವರಿದ್ದರೆ ಉಳಿದವರಿಗೆ ರೂ. ೦-೬-೦ ರಂತೆ) ಕೋರ್ಟ-ಫೀ ಸ್ಟ್ಯಾಂಪನ್ನು ವಸೂಲ ಮಾಡಬೇಕೆಂದು ಮುಂಬಯಿಯ ಸರಕಾರದ ಹ್ಯಾಕೋರ್ಟಿನವರು ಒಂದು ಆಜ್ಞೆ ಹೊರಡಿಸಿದ್ದಾರೆ

ಆದ್ದರಿಂದ ಈ ಮಾಮಲೆ ಸಂಬಂಧಪಟ್ಟ ಯಾವತ್ತೂ ಜನರಿಗೆ ತಿಳಿಸುವದೇನಂದರೆ, ೧೯೪೮ನೇ ಇಸವಿಯ ಜನವರಿ ಅಂತ್ಯದೊಳಗಾಗಿ, ಇಲ್ಲಿನ ಜಿಲ್ಹೆಯೊಳಗಿನ ಲಾ ಕೋರ್ಟಿನವರು ವಿಧಿಸಿದ ದಿನಾಂಕದೊಳಗಾಗಿ ಸಂಬಂಧಪಟ್ಟವರು ಆಯಾ ಕೋರ್ಟಿಗೆ ಹೋಗಿ, ಕೋರ್ಟು ತಿಳಿಸುವಷ್ಟು ಭತ್ತೆಯನ್ನು ಕೊಡಬೇಕು. ಇದಕ್ಕೆ ಅವರು ತಪ್ಪಿದಲ್ಲಿ, ಕೋರ್ಟಿನವರು ತಮಗೆ ಯುಕ್ತ ಕಂಡ ಮುಂದಿನ ಕಸಿಯನ್ನು ಮಾಡುವರು.

ಕಾನಡಾ ಜಿಲ್ಹಾ ಕೋರ್ಟ,
ಕಾರವಾರ,
ತಾ ೨೦-೧೨-೧೯೪೮. } **V. V. Bhat,**
Clerk of the Court

ಕರ್ನಾಟಕ ಶಾಖೆ.—
ಕೊಪ್ಪೀಕರ ರೋಡ, ಹುಬ್ಬಳ್ಳಿ.

"ನಮ್ಮ ಗ್ರಾಹಕರಿಗೆಲ್ಲ ಹೊಸ ವರ್ಷದ ಶುಭೇಚ್ಛೆಗಳು!"

—— ಶಾಸ್ತ್ರೋಕ್ತ ನಸ್ಯ ತಯಾರಿಕೆಯಲ್ಲಿ ಕರ್ನಾಟಕದಲ್ಲೆಲ್ಲ ಕೀರ್ತಿವೆತ್ತ ——

ಟಿ. ಮೊಹಿದ್ದೀನ್ ಸಾಹೇಬ ಎಂಡ್ ಸನ್,

ನಸ್ಯದ ತಯಾರಕರು, ಕುಮಟಾ. (ಉ ಕಾನಡಾ)

ಗ್ರಾಹಕರ ರುಚಿಗೆ ತಕ್ಕಂತೆ ಹೊಸ ವರ್ಷದಲ್ಲಿ ಕೈಕೊಳ್ಳುವ
—※ ಹೊಸ ಪದ್ಧತಿಯು, ಹೊಸ ತಯಾರಿಕೆಯ ವೈಶಿಷ್ಟ್ಯ!! ※—

THE BANK OF RURAL INDIA LTD.,

(Incorporated in British India Liability of Members limited)

HEAD OFFICE — "Satyabhama Bhavan, **KARWAR.** N K

Offices at.— KARWAR, KUMTA, SIRSI, HONAVAR, YELLAPUR BHATKAL, SIDDAPUR, ANKOLA, HUBLI & DHARWAR

Authorised Capital	Rs.	10,00,000,
Subscribed Capital	Rs	5,00,000;
Paid-up Capital & Reserves	Rs	5,08,502-8-0

Rates of Interest on Deposits:

Current a/c @ 1% p a. *Savings Bank a/c @ 2½%*

Fixed Deposits for 3 months @ 3 per annum.
" " for 6 months @ 3½%
" " for 12 months or more @ 4% "

All kinds of modern Banking business transacted

Karwar,
14-2-1948 } **P X GRAICOUS,**
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ವ..." ಛಾಪಖಾನೆಯಲ್ಲಿ ಮುದ್ರಿಸಿ ಪ್ರ ಸಿ...

ವರ್ಗಣಿಯ ದರ:
ಊರಲ್ಲಿ
ವರ್ಷಕ್ಕೆ ರೂ ೨-೮-೦
ಟಪಾಲವ್ಯಯ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ...೦ ೧-೦
ವಿ. ಪಿ. ಯಿಂದ ತರಿಸುವವರು ವಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ ತೆರಬೇಕು.
ವರ್ಗಣಿ ಮುಂಗಡ ಕೊಡತಕ್ಕದ್ದು

Reg. No. B. 1270. Monday, 10-1-1949.

ಕಾನಡಾವೃತ್ತ

ವರ್ಷ ೩೦] THE KANARA NEWS. [ಸಂಚಿಕೆ ೨೮.

ಕುಮಟಾ:- ಸೋಮವಾರ, ತಾ ೧೦—೧—೧೯೪೯.

ಜಾಹೀರಾತುಗಳ ದರ:
ಕನ್ನಡ ಅಕ್ಷರ ಗಳ ಸಾಮಾನ್ಯ ...
೧ ಸಾಲಿಗೆ ೪ ಆಣೆಯಂತೆ.
ವಿಶಿಷ್ಟ ಇದ್ದಲ್ಲಿ ವಿಶೇಷವಾಗಿ...
ಜಾಹೀರಾತುಗಳ ಬಗ್ಗೆ ತನಗೆ
ಇಲ್ಲವೆ ಪತ್ರದ್ವಾರಾ
ತಿಳಿಸಬಹುದು.

ವಿವಿಧ ವಿಷಯಗಳು

ಕಳೆದ ಶುಕ್ರವಾರ ಭಾರತದ ಸರ್ವಾಧಿಕಾರಿಗಳಾದ ಶ್ರೀಮಾನ್ ಚಕ್ರವರ್ತಿ ರಾಜಗೋಪಾಲಾಚಾರ್ಯರು ಮುಂಬಯಿ ನಗರ ಸಭೆಯವರಿತ್ತ ಬಿನ್ನವತ್ತಳೆಗೆ ಕೊಟ್ಟ ಪ್ರತ್ಯುತ್ತರದಲ್ಲಿ ಹೇಳಿರುವಂತೆ, ಭಾರತವು ಹೊಸ ವರುಷವನ್ನು — ಸನ್ ೧೯೪೯ನೇ ಇಸವಿಯನ್ನು — ಕೆಲವೊಂದು ಶುಭ ಚಿನ್ಹೆಗಳಿಂದ ಪ್ರಾರಂಭಿಸಿದೆ. ೧೯೪೭ನೇ ಇಸವಿಯ ಅಕ್ಟೋಬರ ತಿಂಗಳ ಕೊನೆಯ ವಾರದಿಂದ ಕಾಶ್ಮೀರದಲ್ಲಿ ನಡೆಯುತ್ತಿದ್ದ ಕದನವು ಈ ವರ್ಷದ ಯುಗಾದಿಯ ದಿನ ಹಿಂದುಸ್ಥಾನ ಮತ್ತು ಪಾಕಿಸ್ತಾನ ಸರಕಾರಗಳ ಪರಸ್ಪರ ಒಪ್ಪಿಗೆಯಿಂದ, ನಿಂತಿದೆ. ಕಾಶ್ಮೀರದ ಸಂಬಂಧದಲ್ಲಿ ಹಿಂದುಸ್ಥಾನ-ಪಾಕಿಸ್ತಾನಗಳ ನಡುವಿನ ವಾದ-ವಿವಾದವನ್ನು ಸೌಹಾರ್ದದಿಂದ ಬಗೆಹರಿಸುವದಕ್ಕಾಗಿ ಸಂಯುಕ್ತ ರಾಷ್ಟ್ರಗಳ ಕೂಟದ ಭದ್ರತಾ ಸಮಿತಿಯು ಕಳಿಸಿಕೊಟ್ಟ ಕಾಶ್ಮೀರ ಸೌಹಾರ್ದ ಮಂಡಳವು ಕಳೆದ ಮಳೆಗಾಲದಲ್ಲಿ ಹಿಂದುಸ್ಥಾನ ಮತ್ತು ಪಾಕಿಸ್ತಾನಗಳ ಸರಕಾರಗಳ ಹೇಳಿಕೆ-ಪುರಾವೆಗಳನ್ನು ಕೇಳಿಕೊಂಡು, ಕಾಶ್ಮೀರ ದೇಶವನ್ನು ಸಂದರ್ಶಿಸಿ ಹಾಗೂ ಕಾಶ್ಮೀರ ರಣರಂಗಕ್ಕೂ ಪ್ರತ್ಯಕ್ಷ ಭೆಟ್ಟಿ ಕೊಟ್ಟು, ಈ ಕದನವನ್ನು ನಿಲ್ಲಿಸಲು ಆಗೋಸ್ತ ತಾ. ೧೩ಕ್ಕೆ ಉಭಯ ಸರಕಾರಗಳಿಗೂ ಸಲಹೆಯನ್ನಿತ್ತಿತ್ತು. ಹಿಂದುಸ್ಥಾನ ಸರಕಾರವು ಮಂಡಳದ ಆ ಸೂಚನೆಯಂತೆ ವರ್ತಿಸಲು ಒಪ್ಪಿಗೆಯನ್ನಿತ್ತಿತ್ತು. ಆದರೆ ಪಾಕಿಸ್ತಾನ ಸರಕಾರವು ಕೆಲವು ಕುಂಟ ನೆವಗಳನ್ನು ಮುಂದೆ ಮಾಡಿ ಆ ಸಲಹೆಯನ್ನು ತಿರಸ್ಕರಿಸಿತ್ತು! ಮುಂದೆ ಕಾಶ್ಮೀರ ಮಂಡಳವು ಸ್ವಸ್ಥಾನಕ್ಕೆ ಮರಳಿ, ತನ್ನ ವರದಿಯನ್ನು ಭದ್ರತಾ ಮಂಡಳಕ್ಕೆ ಒಪ್ಪಿಸಿ ವಸ್ತು-ಸ್ಥಿತಿಯನ್ನು ತಿಳಿಸಿತು. ಈ ವರದಿಯಲ್ಲಿ ಭಾರತ ಸರಕಾರದ ಭೂಮಿಕೆ ನಿರ್ದೋಷವಿರುತ್ತದೆಂಬುದನ್ನು ಸ್ವಚ್ಛವಾಗಿ ನಮೂದಿಸಿದ್ದುಂಟು. ಆದರೂ ಪಾಕಿಸ್ತಾನದ ಪ್ರತಿನಿಧಿಗಳಾದ ಸರ್ ಮಹಮ್ಮದ ಝಾಫರುಲ್ಲಾಖಾನರೂ ಅವರ ಸಹೋದ್ಯೋಗಿಗಳೂ ಕಳೆದ ಅಕ್ಟೋಬರ-ನವಂಬರ ತಿಂಗಳಲ್ಲಿ ಪ್ಯಾರೀಸದಲ್ಲಿ ಕೂಡಿದ ಭದ್ರತಾ ಸಮಿತಿಯ ಮುಂದೆ, ಹೈದರಾಬಾದದಲ್ಲಿ ಹಿಂದುಸ್ಥಾನ ಸರಕಾರವು ಅತ್ಯಾಚಾರಗಳನ್ನು ನಡಿಸಿ ಜಾಗತಿಕ ಶಾಂತಿಗೆ ಭಂಗ ತರುತ್ತಿದೆ, ಹಿಂದುಸ್ಥಾನದ ಅಲ್ಪ-ಸಂಖ್ಯ ಮುಸಲ್ಮಾನರ ಮೇಲೆ ಸಾಂಸ್ಕೃತಿಕ ಹಿಂಸೆ ನಡಿಸಿದೆ ಎಂದು ಮುಂತಾಗಿ ಹಲವಾರು ಸಾರೆ ಹಲವಾರು ಆರೋಪಗಳನ್ನು ಒಡ್ಡಿ, ಜಾಗತಿಕ ರಾಷ್ಟ್ರಗಳ ಅಭಿಪ್ರಾಯವನ್ನು ಹಿಂದುಸ್ಥಾನದ ವಿರುದ್ಧ ಪರಿವರ್ತಿಸಲು ಬಹಳ ಪ್ರಯತ್ನ ಮಾಡಿದರು. ಆದರೆ ಭಾರತದ ಮುಖ್ಯ ಮಂತ್ರಿಗಳು ತಮ್ಮ ಲಂಡನ ಯಾತ್ರೆಯ ಕಾಲಕ್ಕೆ ಮಾಡಿದ ಭಾಷಣಗಳಲ್ಲೂ ಲಂಡನದಿಂದ ತಿರುಗಿ ಬರುವಾಗ ಸಂಯುಕ್ತ ರಾಷ್ಟ್ರಗಳ ಕೂಟದ ವಿಶೇಷ ಸಭೆಯಲ್ಲಿ ಮಾಡಿದ ಸಂಸ್ಮರಣೀಯ ಭಾಷಣದಲ್ಲೂ ಜಾಗತಿಕ ರಾಷ್ಟ್ರಗಳ ಮುಂದೆ ತಮ್ಮ ಸ್ವಂತ ಹಾಗೂ ಸ್ವತಂತ್ರ ಭಾರತದ ಉಜ್ವಲ ಭೂಮಿಕೆಯನ್ನು ಸ್ಪಷ್ಟವಾಗಿ ಮಂಡಿಸಿ, ಭಾರತಕ್ಕೆ ಎಷ್ಟೋ ಗೌರವದ ಸ್ಥಾನವನ್ನು ದೊರಕಿಸಿಕೊಟ್ಟದ್ದರಿಂದ ಝಾಫರುಲ್ಲಾಖಾನ ಪ್ರಭೃತಿಗಳ ಪ್ರಯತ್ನ ಪೂರ್ತಿ ನಿಷ್ಫಲವಾಯಿತು! ಝಾಫರುಲ್ಲಾಖಾನರು ಹಾರಿಸಿದ ಬೆದರು ಗುಂಡುಗಳೂ ವ್ಯರ್ಥವಾದವು! ಪ್ರತ್ಯಕ್ಷ ರಣಾಂಗಣದಲ್ಲೂ ಕೂಡ ಪಾಕಿಸ್ತಾನಿಗಳಿಗೂ ಅವರು ಎದ್ದುನಿಲ್ಲಿಸಿದ ಆಝಾದ ಕಾಶ್ಮೀರ ಸರಕಾರದ ಸೈನಿಕರಿಗೂ ಎಲ್ಲೆಲ್ಲೂ ಹಿಂದಡಿಯಿಡುವ ಪ್ರಸಂಗ ಬರುತ್ತಿತ್ತಲ್ಲದೆ ಎಲ್ಲೂ ಅವರು ಮುಂದಡಿಯಿಟ್ಟಿದ್ದಿಲ್ಲ. ಹೀಗಾಗಿ ಪಾಕಿಸ್ತಾನ ಸರಕಾರವು ಮೆತ್ತಗಾಗಿ, ಕೊನೆಗೆ ಯುದ್ಧ ಮುಕ್ತಾಯದ ಸೂಚನೆಯನ್ನು ಸ್ವೀಕರಿಸಲು ಸಿದ್ಧವಾಯಿತು. ಈ ಯುದ್ಧ-ಮುಕ್ತಾಯದ ಬೆನ್ನಿಗೇ ಕಾಶ್ಮೀರ ಮಂಡಳದ ಹೊಸ ವಿಸ್ತೃತ ಸೂಚನೆಗಳು ಪ್ರಕಟವಾಗಿವೆ. ಭಾರತದ ಅಂಬೋಣ ಮನ್ನಿಸಿ ಮಂಡಳವು ಹೊಸ ಸೂಚನೆಗಳನ್ನು ಭಾರತಕ್ಕೂ ಕಾಶ್ಮೀರ ಸರಕಾರಕ್ಕೂ ಅನುಕೂಲವಾಗುವಂತೆ ಮಾರ್ಪಡಿಸಿದೆ. (೧) ಯುದ್ಧ ನಿಂತ ಮೇಲೆ ಪಾಕಿಸ್ತಾನ ಸರಕಾರವು ತನ್ನ ಸೈನ್ಯವನ್ನು ಕಾಶ್ಮೀರದಿಂದ ಹಿಂತೆಗೆದುಕೊಳ್ಳಬೇಕು (೨) ಆಮೇಲೆ ಭಾರತವು ಕಾಶ್ಮೀರದಲ್ಲಿ ಶಾಂತತೆ ಕಾಯಲು ಅವಶ್ಯವುಳ್ಳಷ್ಟೇ ಸೈನ್ಯವನ್ನಿಟ್ಟು ಉಳಿದ ಸೈನ್ಯವನ್ನು ಹಿಂತೆಗೆದುಕೊಳ್ಳಬೇಕು. (೩) ಕಾಶ್ಮೀರಿಗಳು ಹಿಂದುಸ್ಥಾನವನ್ನು ಸೇರಬಯಸುತ್ತಾರೋ ಪಾಕಿಸ್ತಾನವನ್ನು ಸೇರಬಯಸುತ್ತಾರೋ ಎಂಬುದನ್ನು ಕಾಶ್ಮೀರದೊಳಗಿನ ಎಲ್ಲ ಪ್ರೌಢವಯಸ್ಕರ ಮತಗಳನ್ನು ತಕ್ಕೊಂಡು ನಿಶ್ಚಯಿಸುವದುಂಟು. ಈ ಜನ-ಮತ-ಗಣನೆಯು ನಿಷ್ಪಕ್ಷಪಾತವಾಗಿ ನಡೆಯುವಂತೆ ವ್ಯವಸ್ಥೆ ಮಾಡಲು ಭದ್ರತಾ ಮಂಡಳವು ಓರ್ವ ಅಂತರ್ರಾಷ್ಟ್ರೀಯ ಕೀರ್ತಿಯ ಅಧಿಕಾರಿಯನ್ನು ಆರಿಸುವದು. ಆದರೆ ರೀತಿಯಂತೆ ಅವನ ನೇಮಣೂಕಿ ಮಾಡುವ ಅಧಿಕಾರ ಕಾಶ್ಮೀರ ಸರಕಾರದ್ದಿರುತ್ತದೆ. (೪) ಈ ಅಧಿಕಾರಿಗೆ ಬೇಕಾದ ಸಹಾಯವನ್ನು ಹಿಂದುಸ್ಥಾನ-ಪಾಕಿಸ್ತಾನ ಸರಕಾರಗಳೂ ಕಾಶ್ಮೀರ ಸರಕಾರವೂ ನೀಡಬೇಕು (೫) ಕಾಶ್ಮೀರ ಕದನಕ್ಕೆ ಪ್ರಾರಂಭವಾದ ಮೇಲೆ ಸುರಕ್ಷಿತತೆಗಾಗಿ ಕಾಶ್ಮೀರ ಬಿಟ್ಟು ಓಡಿಹೋದ ಜನರು ಪುನಃ ಕಾಶ್ಮೀರಕ್ಕೆ ಬಂದು ಜನಮತಗಣನೆಯಲ್ಲಿ ಭಾಗ ವಹಿಸುವಂತಹ ಸೌಕರ್ಯಗಳನ್ನು ಎಲ್ಲರೂ ಒದಗಿಸಬೇಕು. ಹಾಗೆಯೇ ಹೊರಗಿನಿಂದ ಕಾಶ್ಮೀರದಲ್ಲಿ ಬಂದು ಸೇರಿದ ಪರಸ್ಥರು ಈ ಮತಗಣನೆಯಲ್ಲಿ ಭಾಗ ವಹಿಸದಂತೆ ನೋಡಿಕೊಳ್ಳಬೇಕು ಎಂದು ಮುಂತಾಗಿ ಮಂಡಳದ ಹೊಸ ಗೊತ್ತುವಳಿಯಲ್ಲಿ ಸ್ಪಷ್ಟೀಕರಿಸಲಾಗಿದೆ. ಈ ಗೊತ್ತುವಳಿಯಲ್ಲಿ ಪಾಕಿಸ್ತಾನಿಗಳು ನಿರ್ಮಿಸಿರುವ ಆಝಾದ ಕಾಶ್ಮೀರ ಸರಕಾರಕ್ಕೆ ಮಂಡಳವು ಏನೇನೂ ಮನ್ನಣೆ ಕೊಟ್ಟಿರುವದಿಲ್ಲ. ಈ ಸರಕಾರದ ಸೈನಿಕರು ಜನಮತಗಣನೆಯಾಗುವ ಪೂರ್ವದಲ್ಲಿ ನಿಃಶಸ್ತ್ರಗೊಳಿಸಲ್ಪಡಬೇಕೆಂದು ಮೇಲೆ ಮಂಡಳವು ಸ್ಪಷ್ಟ ಹೇಳಿದೆ. ತಮ್ಮ ಸೈನಿಕರು ಕಾಶ್ಮೀರದೊಳಗಿಂದ ಹೊರಬೀಳಬೇಕಾದರೆ ಹಿಂದುಸ್ಥಾನದ ಸೈನ್ಯವೂ ಅಲ್ಲಿಂದ ಹೊರಬೀಳಬೇಕೆಂದು ಪಾಕಿಸ್ತಾನದ ಆಗ್ರಹವಿತ್ತು. ಮಂಡಳವು ಆ ಮಾತನ್ನು ತಿರಸ್ಕರಿಸಿ ಜನಮತಗಣನೆಯ ಕಾಲಕ್ಕೆ ಶಾಂತತೆ-ಸುವ್ಯವಸ್ಥೆಗಳನ್ನು ಕಾಯಲಿಕ್ಕೆ ಹಿಂದೀ ಸೈನಿಕರಿರಬೇಕೆಂದು ತೀರ್ಮಾನಿಸಿದೆ. ಈ ಹೊಸ ಗೊತ್ತುವಳಿಯನ್ನು ಭಾರತದ ರಾಜಕಾರಣಿಗಳಂತೆ ಕಾಶ್ಮೀರ ಸರಕಾರದ ಮುಖ್ಯ ಪ್ರಧಾನರೂ ಸದ್ಯಕ್ಕೆ ಆ ಸರಕಾರದ ಸೂತ್ರಧಾರಿಗಳೂ ಆಗಿರುವ ಶೇಖ ಅಬ್ದುಲ್ಲಾ ಅವರು ಕೂಡ ಅಂತಃಕರಣಪೂರ್ವಕ ಸ್ವಾಗತಿಸಿದ್ದಾರೆ. ಭಾವಿ ಜನಮತಗಣನೆಯಲ್ಲಿ ಕಾಶ್ಮೀರಿಗಳು ಪ್ರಚಂಡ ಬಹುಮತದಿಂದ ಹಿಂದುಸ್ಥಾನದಲ್ಲಿ ಸೇರಬೇಕೆಂಬ ನಿರ್ಣಯವನ್ನು ಕೊಡುವರೆಂದು ಶೇಖ ಅಬ್ದುಲ್ಲಾ ಅವರು ನಮಗೆ ಖಂಡಾತುಂಡವಾಗಿ ಆಶ್ವಾಸನೆ ಕೊಡುತ್ತಾರೆ. ೧೪ ತಿಂಗಳಿಂದ ಕಾಶ್ಮೀರದಲ್ಲಿ ನಡೆದ ಹಿಂದ-ಪಾಕ ಕದನವು ಈ ಪರಿ ನಿಂತದ್ದು ಒಂದು ದೊಡ್ಡ ಶುಭ ಸೂಚನೆಯಲ್ಲವೇ? ಈ ಕದನದ ದೆಸೆಯಿಂದ ಹಿಂದುಸ್ಥಾನಕ್ಕೆ ದಿನಾಲು ಲಕ್ಷಗಟ್ಟಲೆ ರೂಪಾಯಿ — ರೂ. ೫೦ ಲಕ್ಷ ಎಂದು ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ — ಖರ್ಚಾಗುತ್ತಿತ್ತು, ನಮ್ಮ ಸೈನಿಕರು ಸಹ ಕಾಶ್ಮೀರದ ಅಪರಿಚಿತ ಗುಡ್ಡಗಾಡುಗಳಲ್ಲಿ ಕಷ್ಟಪಡಬೇಕಾಗುತ್ತಿತ್ತು. ಭಾರತದ ಪ್ರಥಮ ಹಿಂದೀ ಸರ್ವ-ಸೇನಾಪತಿಗಳಾಗಿ ನೇಮಕಪಟ್ಟಿರುವ ಜೆ|| ಕರಿಯಪ್ಪನವರು ಹೇಳಿದುವಂತೆ "ದೇವರ ದಯೆಯಿಂದ" ಈ ಎಲ್ಲ ಜರ್ಜರ ಕಷ್ಟವೂ ತಪ್ಪಿದ ಬಗ್ಗೆ ಸಮಸ್ತ ಭಾರತೀಯರಿಗೆ ಹರುಷವಾಗುವದು ಸ್ವಾಭಾವಿಕವೇ ಸರಿ.

* * *

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು: **ಕುಂದಾಪುರ, ದ. ಕ.**

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ ರೂ 3/-ರಂತೆ ಬಡ್ಡಿ.

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸು ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ, ತಾ. ೨೩-೭-೧೯೪೮ } ಕೇ. ವಿಟ್ಠಲದಾಸ ಶೆಣೈ. ಮೆನೆಜಿಂಗ ಡೈರೆಕ್ಟರ

ಏಶಿಯಾ ಖಂಡದ ಆಗ್ನೇಯ ಭಾಗದಲ್ಲಿ [illegible] ಪೂರ್ವದಿಂದ ದಕ್ಷಿಣಕ್ಕೆ, ಜಾವಾ, ಸುಮಾತ್ರಾ ವಗೈರೆ ನಡುಗಡ್ಡೆಗಳಿವೆಯಷ್ಟೆ. ಈ ನಡುಗಡ್ಡೆಗಳ ಸಮೂಹಕ್ಕೆ ಇಂಡೋನೇಶಿಯಾ ಎಂದು ಹೇಳುತ್ತಾರೆ. ಈ ನಡುಗಡ್ಡೆಗಳು ಹಿಂದೆ ಡಚ್ಚರ ಸಾಮ್ರಾಜ್ಯದ ಭಾಗಗಳಾಗಿದ್ದವು. ಕಳೆದ ಮಹಾಯುದ್ಧದಲ್ಲಿ ಹಿಟ್ಲರನು ಡಚ್ಚರ ಮಾತೃಭೂಮಿಯಾದ ಹೊಲಂಡವನ್ನು ಮೂರೆರಡು ವಾರಗಳಲ್ಲಿ ಪಾದಾಕ್ರಾಂತ ಮಾಡಿದ್ದನು. ಹಿಂದಿನಿಂದ ಜಪಾನಿಯರು [illegible] ಅವಧಿಯಲ್ಲಿ ಅವರ ಈ ಇಂಡೋನೇಶಿಯಾವನ್ನೂ ಸ್ವಾಧೀನಪಡಿಸಿಕೊಂಡಿದ್ದರು. ಜಪಾನವನ್ನು ಎದುರಿಸಲಿಕ್ಕೆ ಡಚ್ಚರೇನೂ ಬಂದಿದ್ದಿಲ್ಲ! ಅವರು ಬರುವ ಸ್ಥಿತಿಯಲ್ಲೂ ಇದ್ದಿಲ್ಲ! ಮುಂದೆ ಜಪಾನದ ಪತನವಾದ ಮೇಲೆ ಈ ದೇಶದವರು ಸ್ವತಂತ್ರರಾಗಿ ಸ್ವಾತಂತ್ರ್ಯವನ್ನು ಸಾರಿ, ತಮ್ಮದೇ ಒಂದು ಪ್ರಜಾರಾಜ್ಯ ಸ್ಥಾಪಿಸಿಕೊಂಡರು. ಅಷ್ಟರಲ್ಲಿ ಜರ್ಮನರ ಅಂಕೆಯೊಳಗಿಂದ ಬಿಡುಗಡೆಯಾದ ಡಚ್ಚರಿಗೆ ಪುನಃ ತಮ್ಮ ಸಾಮ್ರಾಜ್ಯ ಕಾಪಾಡಿಕೊಳ್ಳುವ ಮಹತ್ವಾಕಾಂಕ್ಷೆಯುಂಟಾಯಿತು! ಅವರಿಗೆ ಬ್ರಿಟಿಶ ಫ್ರೆಂಚ ಪ್ರಭೃತಿ ಸಾಮ್ರಾಜ್ಯವಾದಿಗಳ ಸಹಾನುಭೂತಿಯೂ ಬೆಂಬಲವೂ ಸಿಕ್ಕಿತು. ಹೀಗಾಗಿ [illegible] ಸಾಮ್ರಾಜ್ಯವಾದಿ ಡಚ್ಚರಿಗೂ ಇಂಡೋನೇಶಿಯಾದ ಪ್ರಜಾರಾಜ್ಯದವರಿಗೂ ಕದನ ಪ್ರಾರಂಭವಾಯಿತು. ಈ ಪ್ರಕರಣವು ಮುಂದೆ ಸಂಯುಕ್ತ ರಾಷ್ಟ್ರಗಳ ಮುಂದೆ ಹೋಗಿ ಭದ್ರತಾ ಮಂಡಳದ ಪ್ರಯತ್ನದಿಂದ ಆ ಕದನವು ನಿಂತಿತು, ಮತ್ತು ಪ್ರಜಾರಾಜ್ಯದವರಿಗೂ ಡಚ್ಚರಿಗೂ ಸಂಧಾನದ ಮಾತುಕತೆಗಳು ನಡೆದಿದ್ದವು. ಆದರೆ ಸಾಮ್ರಾಜ್ಯತೃಷ್ಣೆಯು ಸುಲಭವಾಗಿ ಡಚ್ಚರನ್ನ ಬಿಟ್ಟುಹೋಗುವದೆಂತು? ಅವರಿಂದ ಮುಂದೊಡ್ಡುತ್ತಿದ್ದ ಸೂಚನೆಗಳಲ್ಲಿ ಅದನ್ನು ತಮ್ಮ ಸಾಮ್ರಾಜ್ಯಾಧಿಕಾರ ಕಾಪಾಡಿಕೊಳ್ಳುವ ಪ್ರವೃತ್ತಿ ಕಂಡುಬರುತ್ತಿತ್ತು. ಆದರಿಂದ ಸ್ವಾತಂತ್ರ್ಯದ ಸವಿಗಾಣುತ್ತಿರುವ ಇಂಡೋನೇಶಿಯಾದ ಪ್ರಜಾರಾಜ್ಯ ಪಕ್ಷದವರಿಗೆ ಅವು ಮಾನ್ಯವಾಗುತ್ತಿದ್ದಿಲ್ಲ. ಅವರು ತಮ್ಮ ಪ್ರತಿ-ಸೂಚನೆಗಳನ್ನು ಕಳಿಸಿಕೊಡುತ್ತಿದ್ದರು. ಈ ಆಟ ದೀರ್ಘ ಕಾಲ ನಡೆಯಿತು. ೩ ವಾರಗಳ ಹಿಂದೆ ಡಚ್ಚರು ಸಂಧಾನದ ಈ ಮಾತುಕತೆಗಳನ್ನು ಒಮ್ಮೆಲೇ ಬಿಟ್ಟುಕೊಟ್ಟು ಇಂಡೋನೇಶಿಯಾದ ಪ್ರಜಾರಾಜ್ಯದ ವಿರುದ್ಧ ರಣಕಹಳೆಯನ್ನು ಊದಿತು! ಮತ್ತು ಕೈಗೆ ಸಿಕ್ಕ ಪ್ರಜಾರಾಜ್ಯದ ಪ್ರಮುಖರನ್ನು ಬಂಧಿಸಿತು! ಆಗ ಜಯಪುರದಲ್ಲಿ ನಮ್ಮ ಕಾಂಗ್ರೆಸ್ಸಿನ ಅಧಿವೇಶನ ನಡೆಯುತ್ತಿತ್ತು. ಕಾಂಗ್ರೆಸ್ಸು ಆಗ ಒಂದು ಗೊತ್ತುವಳಿ ಮಾಡಿ, ಡಚ್ಚರ ಈ ಆಕ್ರಮಣವನ್ನು ಸ್ಪಷ್ಟ ಶಬ್ದಗಳಲ್ಲಿ ಖಂಡಿಸಿತು, ಮತ್ತು ಪ್ರಜಾರಾಜ್ಯದ ಹೋರಾಟಕ್ಕೆ ತನ್ನ ಸಂಪೂರ್ಣ ಸಹಾನುಭೂತಿಯನ್ನೂ ತೋರ್ಪಡಿಸಿತು. ಡಚ್ಚರ ಈ ಅತಿಕ್ರಮವನ್ನು ಏಶಿಯಾದ ರಾಷ್ಟ್ರಗಳಲ್ಲದೆ ಆಸ್ಟ್ರೇಲಿಯವೂ ಅಮೇರಿಕೆಯೂ ಧಿಃಕರಿಸಿದವು. ಭದ್ರತಾ ಮಂಡಳವು ಆಗ ಪ್ಯಾರೀಸದಲ್ಲಿತ್ತು. ಅಲ್ಲೂ ಈ ಅತಿಕ್ರಮದ ವಿರುದ್ಧ ದೂರು ದಾಖಲಾಗಿ, ಭದ್ರತಾ-ಮಂಡಳವು ಡಚ್ಚರಿಗೆ ಯುದ್ಧ ನಿಲ್ಲಿಸಿ, ತನ್ನ ಸೌಹಾರ್ದ ಮಂಡಳಕ್ಕೆ ಇಂಡೋನೇಶಿಯಾದೊಳಗಿನ ಸಮಗ್ರ ಪರಿಸ್ಥಿತಿಯ ಅಭ್ಯಾಸ ಮಾಡಲು ಅಸ್ಪದ ಕೊಡಲು ಆದೇಶ ಕೊಟ್ಟಿತು. ಆದರೆ ಸಾಮ್ರಾಜ್ಯಮದದಿಂದ ಉನ್ಮತ್ತರಾದ ಡಚ್ಚರು ಆ ಆದೇಶವನ್ನು ಕೂಡ ಬೇಕೆಂದು ಮನ್ನಿಸಲಿಲ್ಲ! ಆದರಿಂದ ಏಶಿಯಾ ಖಂಡದೊಳಗಿನ ರಾಷ್ಟ್ರಗಳು ಮುಂದಾಗಿ ಡಚ್ಚರಿಗೆ ಬುದ್ಧಿ ಕಲಿಸಬೇಕಾಯಿತು. ಹಿಂದುಸ್ಥಾನವೂ, ಹಿಂದಿನಿಂದ ಪಾಕಿಸ್ತಾನ ಸಿಂಹಲ ದ್ವೀಪಗಳೂ ಡಚ್ಚರಿಗೆ ತಮ್ಮ ದೇಶದೊಳಗಿಂದ ವಿಮಾನಗಳನ್ನು ನಡಿಸಲು ಮೊದಲು ಪ್ರತಿಬಂಧ ಮಾಡಿದವು. ಹಿಂದುಸ್ಥಾನ-ಪಾಕಿಸ್ತಾನಗಳ ಬಂದರಗಳಲ್ಲೂ ಜನರು ಅವರ ಹಡಗಗಳಿಗೆ ಬಹಿಷ್ಕಾರ ಹಾಕಿದರು. ಭಾರತ ಸರಕಾರವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಇಂಡೋನೇಶಿಯಾದಲ್ಲಿ ಡಚ್ಚರು ನಡಿಸಿರುವ ಅತಿಕ್ರಮ ಅತ್ಯಾಚಾರಗಳ ವಿಚಾರ ಮಾಡಿ ಮುಂದೇನು ಮಾಡಬಹುದೆಂಬುದನ್ನು ನಿರ್ಣಯಿಸಲು ಏಶಿಯಾ ರಾಷ್ಟ್ರಗಳ ಪರಿಷತ್ತನ್ನು ಕೂಡಿಸುವ ತನ್ನ ಸಂಕಲ್ಪವನ್ನು ಜಾಹೀರಗೊಳಿಸಿ, ಆಸ್ಟ್ರೇಲಿಯಾದಿಂದ ಇಜಿಪ್ತ ವರೆಗಿನ ೨೦ ರಾಷ್ಟ್ರಗಳಿಗೆ ಈ ಪರಿಷತ್ತಿಗೆ ಬರಲು ನಿಮಂತ್ರಣ ಕೊಟ್ಟಿದೆ. ಮುಂದಿನ ವಾರ ಈ ಪರಿಷತ್ತು ದಿಲ್ಲಿಯಲ್ಲಿ ಕೂಡುವದು. ಪಂ|| ಜವಾಹರಲಾಲರು ಕರೆದಿರುವ ಈ ಪರಿಷತ್ತನ್ನು ಪಾಶ್ಚಾತ್ಯರು ತುಸು ಆಸೆಯಿಂದಲೂ ತುಸು ಸಾಶಂಕ ಬುದ್ಧಿಯಿಂದಲೂ ಕಾಣುತ್ತಿದ್ದಾರೆ! ಹಿಂದುಸ್ಥಾನವು ಏಶಿಯಾದ ಧುರೀಣತ್ವವನ್ನು ವಹಿಸಿಕೊಂಡು ಏಶಿಯಾದ ರಾಷ್ಟ್ರಗಳ ಬೇರೊಂದು ಕೂಟವನ್ನು ರಚಿಸಿ, ತಮ್ಮ ಸಂಯುಕ್ತ ರಾಷ್ಟ್ರಗಳ ಸಂಘಕ್ಕೆ ಬೇರೊಂದು ಪ್ರತಿಸ್ಪರ್ಧಿಯನ್ನು ನಿರ್ಮಿಸುತ್ತಿದ್ದಾರೆಂಬ ಆರೋಪ ಬರತೊಡಗಿದೆ. ಈ ಆರೋಪವನ್ನು ಖಂಡಿಸಿ, ಸಂಯುಕ್ತ ರಾಷ್ಟ್ರಗಳ ಸಂಘದ ಕಾರ್ಯವನ್ನೇ ತಾವು ಮುಂದರಿಸುತ್ತಿದ್ದೇವೆಂದು ಪಂ|| ನೆಹರೂರವರು ಉತ್ತರ ಕೊಟ್ಟಿದ್ದಾರೆ. ಹಿಂದುಸ್ಥಾನವು ಈ ಪರಿಷತ್ತನ್ನು ಕರೆದ ದಿಟ್ಟತನದಿಂದ ವರ್ತಿಸಿದ್ದರ ಪರಿಣಾಮವಾಗಿ ಡಚ್ಚರು ಈಗ ಮೆತ್ತಗಾಗಿದ್ದಾರೆ. ಮತ್ತು ಯುದ್ಧ ನಿಲ್ಲಿಸಿದ್ದಾರೆ. ಇಂಡೋನೇಶಿಯಾದಲ್ಲಿ ಸಂಯುಕ್ತ ರಾಜ್ಯಸಂಘ ನಿರ್ಮಿಸುವದೇ ತಮ್ಮ ಗುರಿಯಾಗಿದ್ದಿತೆಂದು ಹೊಲಂಡದ ಮಹಾರಾಣಿಗಳಾದ ಜುಲಿಯಾನಾ ಇವರು ಮೊನ್ನೆಯೇ ಆಕಾಶವಾಣಿಯ ದ್ವಾರಾ ಜಗತ್ತಿಗೆ ಪ್ರಕಟಿಸಿ, ಇಂಡೋನೇಶಿಯಾದಲ್ಲಿ ಪುನಃ ಸಂಧಾನ ನಡಿಸಲು ತಮ್ಮ ಪ್ರಧಾನ ಮಂತ್ರಿಗಳಾದ ಡಾ|| ವಿಲಿಯಮ್ ಡ್ರೀಸರನ್ನು ಜಾವಾಕ್ಕೆ ಕಳಿಸಿಕೊಟ್ಟಿದ್ದಾರೆ. ಗತವರ್ಷದ ಕೊನೆಯ ಭಾಗದಲ್ಲಿ ಏಶಿಯಾದ ಆಗ್ನೇಯ ಭಾಗದೊಳಗೆ ಹೊತ್ತಿಸಲ್ಪಟ್ಟ ಯುದ್ಧದ ಜ್ವಾಲೆಗಳು ಈ ರೀತಿ ಭಾರತದ ವರ್ಚಸ್ಸಿನ ಫಲವಾಗಿ ಒಮ್ಮೆಲೇ ಆರಿದ್ದು ಹೊಸ ವರುಷದ ಒಂದು ಶುಭ ಚಿನ್ಹವೇ ಸರಿ. ಪಾಶ್ಚಾತ್ಯರ ಒಂದು ಮಾತು ನಿಜ. ಪಂ|| ಜವಾಹರಲಾಲರು ದಿಲ್ಲಿಯಲ್ಲಿ ಕರೆದಿರುವ ಏಶಿಯಾ ಪರಿಷತ್ತಿನ ಪರಿಣಾಮವಾಗಿ ಏಶಿಯಾ ರಾಷ್ಟ್ರಗಳು ಗಾಢ ಪರಸ್ಪರ ಸಂಲಗ್ನವಾಗುವವು, ಒಮ್ಮನಸ್ಸಿನಿಂದ ವರ್ತಿಸಹತ್ತುವವು, ಪಾಶ್ಚಾತ್ಯ ಸಾಮ್ರಾಜ್ಯತಂತ್ರಗಳನ್ನು ಪರಸ್ಪರ ಸಹಕಾರದಿಂದ ಮಣ್ಣು-ಗೂಡಿಸಲು ಕಲಿಯುವವು. ಏಶಿಯಾದ ಧುರೀಣತ್ವವೂ ತಾನಾಗಿ ಭಾರತದ ಕಡೆ ಬರುವದು.

* * *

ಚೀನದಲ್ಲಿ ಕಳೆದ ಯುದ್ಧದ ಕಾಲದಲ್ಲಿ ಕೂಡ ಕಮ್ಯುನಿಸ್ಟರ ಪಕ್ಷವೊಂದಿತ್ತು. ಚೀನದ ಉತ್ತರ ಭಾಗದಲ್ಲಿ ಅಂದರೆ ರಷ್ಯ ದೇಶಕ್ಕೆ ಹೊಂದಿದ ಪ್ರದೇಶದಲ್ಲಿ ಈ ಪಕ್ಷದ ಪ್ರಸ್ಥ ವಿಶೇಷವಿತ್ತು. ಚೀನವು ಜಪಾನ ಯುದ್ಧದಲ್ಲಿ ತೊಡಗಿದಾಗ ಈ ಕಮ್ಯುನಿಸ್ಟರು ಚಾಂಗ ಕೈ ಶೇಕರ ರಾಷ್ಟ್ರೀಯ ಸರಕಾರಕ್ಕೆ ಅಷ್ಟೇನು ತೊಂದರೆ ಕೊಡಲಿಲ್ಲ. ಆದರೆ ಆ ಯುದ್ಧ ಮುಕ್ತಾಯವಾದ ಕೂಡಲೇ ಅವರು ತಲೆಯೆತ್ತಿ ಚೀನದ ಆಡಳಿತೆಯಲ್ಲಿ ತಮ್ಮ ಕೈ ಸೇರಿಸಲು ಪ್ರಯತ್ನಿಸಿದರು. ಈ ಯಾದವೀಯನ್ನು ನಿಲ್ಲಿಸುವದಕ್ಕೆ ಅಮೇರಿಕೆಯ ಪರವಾಗಿ, ಇತ್ತಲಾಗಿ ಅಮೇರಿಕೆಯ ವಿದೇಶ ಮಂತ್ರಿಗಳಾಗಿದ್ದ ಮತ್ತು ಕಳೆದ ವಾರವಷ್ಟೆ ಆ ಪದದಿಂದ ನಿವೃತ್ತರಾಗಿರುವ ಜ|| ಜೊರ್ಜ ಮಾರ್ಶಲ್ಲರು ಪ್ರಯತ್ನ ನಡಿಸಿದ್ದರು. ಆದರೆ ಚೀನ ರಾಷ್ಟ್ರದ ದುರ್ದೈವದಿಂದ ಅವರ ಪ್ರಯತ್ನಗಳು ನಿಷ್ಫಲವಾದವು! ಮತ್ತು ಕಮ್ಯುನಿಸ್ಟರಿಗೂ ಚಾಂಗ-ಕೈ ಶೇಕರ ಸರಕಾರಕ್ಕೂ ದ್ವಂದ್ವ ಪ್ರಾರಂಭವಾಯಿತು. ಚೀನದ ದುರ್ದೈವದಿಂದಲೋ ಅಥವಾ ಚಾಂಗ-ಕೈ-ಶೇಕರ ಸರಕಾರದ ಅಸಮರ್ಥತೆಯಿಂದಲೋ ಚೀನದ ಆರ್ಥಿಕ ಪರಿಸ್ಥಿತಿ ತೀರ ಕೆಟ್ಟುಹೋಗಿದೆ. ಚೀನಿ ಚಲನಕ್ಕೆ ಇಂದು ಬೆಲೆ ಬಹಳ ಕಡಿಮೆಯಾಗಿದೆ! ೮-೧೦ ವರ್ಷಗಳ ಹಿಂದೆ ೨ ಆಕಳುಗಳನ್ನು ಕೊಂಡು ಕೊಡುವ ಶಕ್ತಿಯುಳ್ಳ ೧೦೦ ಚೀನಿ ಡಾಲರುಗಳು ಕಳೆದ ವರ್ಷ ೨ ಬೆಂಕಿ ಪೆಟ್ಟಿಗೆಗಳನ್ನು ಕೂಡ ಕೊಂಡುಕೊಡಲು ಅಸಮರ್ಥವಾದವೆಂದು ಹೇಳುತ್ತಾರೆ. ಇಂತಹ ವಿಘಟಿತ ಪರಿಸ್ಥಿತಿಯಲ್ಲಿ ಕಮ್ಯುನಿಸ್ಟರ ಪಕ್ಷ ಬಲಿತರೆ ಆಶ್ಚರ್ಯವೇನಿಲ್ಲ. ಹಿಂದೆ ೨೦-೨೫ ಸಾವಿರದಷ್ಟೇ ಬಲವಿದ್ದ ಕಮ್ಯುನಿಸ್ಟರು ಇಂದು ಲಕ್ಷಾವಧಿ ಸೈನ್ಯವನ್ನು ರಣರಂಗದಲ್ಲಿ ದುಮುಕಿಸಬಲ್ಲರು. ಆ ಮಾನದಿಂದ ಚಾಂಗ-ಕೈ-ಶೇಕರ ಬಲ ಕಡಿಮೆಯಾಗಿದೆ. ಮೇಲಾಗಿ ರಷ್ಯರ ಬೆಂಬಲವಿರುವ ಕಮ್ಯುನಿಸ್ಟರನ್ನು ಎದುರಿಸಲು ಚಾಂಗ-ಕೈ-ಶೇಕರಿಗೆ ಅಮೇರಿಕೆಯ ಸಹಾಯ ಬೇಕು. ಅಮೇರಿಕೆಯಿಂದ ಸಾಲ ಬೇಕು, ಶಸ್ತ್ರಾಸ್ತ್ರ ಸಾಮಗ್ರಿ ಬೇಕು, ಆ ಸಾಮಗ್ರಿಯನ್ನು ಯುಕ್ತವಾಗಿ ಉಪಯೋಗಿಸಲು ಕಲಿಸಿಕೊಡುವ ತಜ್ಞರು ಬೇಕು. ಮೊದ ಮೊದಲು ಅಮೇರಿಕೆಯು ಚೀನಕ್ಕೆ ಸಹಾಯ ಕಳಿಸಿತು. ಆದರೆ ಚೀನದಲ್ಲಿ ತನ್ನ ಸ್ವಾರ್ಥ ಅಷ್ಟೇನು ಸಾಧಿಸುವಂತಿಲ್ಲೆಂದು ಕಂಡೋ ಏನೋ ಆ ಸಹಾಯವನ್ನು ಈಗ ನಿಲ್ಲಿಸಿದೆ. ಆದರಿಂದ ಇಂದು ಚೀನದ ಯಾದವೀ ಯುದ್ಧದಲ್ಲಿ ಕಮ್ಯುನಿಸ್ಟರ ಮೇಲುಗೈ ಆಗಿದೆ. ಆದ್ದರಿಂದ ಚೀನದ ಮಿತ್ರರು ಕಮ್ಯುನಿಸ್ಟರೊಡನೆ ಸಂಧಾನ ಮಾಡಿಕೊಳ್ಳಲು ಚಾಂಗ-ಕೈ-ಶೇಕರಿಗೆ ಆಗ್ರಹ ಮಾಡಹತ್ತಿದ್ದಾರೆ. ಚಾಂಗ-ಕೈ-ಶೇಕರೂ ಕೂಡ ಈಗ ಹತಾಶರಾಗಿ ಸಂಧಾನಕ್ಕೆ ತಾವು ಸಿದ್ಧರಿದ್ದೇವೆಂದು ಪ್ರಕಟಗೊಳಿಸಿದ್ದಾರೆ. ವಿಮಾನಗಳಿಂದ ಕಮ್ಯುನಿಸ್ಟ-ಹಸ್ತಗತ ಪ್ರದೇಶಗಳಲ್ಲೂ ಅವರ ಸೈನಿಕರ ಸಮುದಾಯಗಳಲ್ಲೂ ಹಸ್ತ-ಪತ್ರಿಕೆಗಳನ್ನು ಚೆಲ್ಲಿಸಿ, ತಮ್ಮ ಸರಕಾರವು ಕಮ್ಯುನಿಸ್ಟರೊಡನೆ ಒಪ್ಪಂದಕ್ಕೆ ಸಿದ್ಧರಿದ್ದೇವೆಂದೂ ಯುದ್ಧ ನಿಲ್ಲಿಸುವದು ಉಭಯತರಿಗೂ ಕಲ್ಯಾಣಕರವೆಂದೂ ಅರುಹಿದ್ದಾರೆ. ಆದರೆ ಕಮ್ಯುನಿಸ್ಟರು ಇನ್ನೂ ಯುದ್ಧ ನಿಲ್ಲಿಸಿಲ್ಲ. ಚೀನದ ರಾಜಧಾನಿಯಾದ ನಾಂಕಿಂಗದ ಕಡೆ ಅವರು ಸೈನ್ಯವನ್ನು ಸಾಗಿಸಲಾರಂಭಿಸಿದ ಸುದ್ದಿಗಳು ಬಂದಿವೆ. ಚಾಂಗ-ಕೈ-ಶೇಕರು ಅಧಿಕಾರಸಂನ್ಯಾಸ ಮಾಡದನಕ ಕಮ್ಯುನಿಸ್ಟರು ಸಂಧಾನಕ್ಕೆ ಒಪ್ಪುವಂತಿಲ್ಲವೆಂದು ಚೀನಿ ಮಂತ್ರಿಮಂಡಳದ ಕೆಲವರು ಭಾವಿಸಿ ಅಧ್ಯಕ್ಷಪದಕ್ಕೆ ತ್ಯಾಗ-ಪತ್ರ ಕೊಡಲು ಚಾಂಗ ಕೈ-ಶೇಕರಿಗೆ ಆಗ್ರಹ ಮಾಡುತ್ತಿದ್ದಾರೆಂಬ ವಾರ್ತೆಯೂ ಬಂದಿದೆ. ಚಾಂಗ-ಕೈ-ಶೇಕರ ವಿರುದ್ಧ ಕಮ್ಯುನಿಸ್ಟರು ಹಗೆ ಹಿಡಿದಂತೆ ತೋರುತ್ತಿದೆ. ಅವರು ತಯಾರಿಸಿರುವ ಚೀನಿ ಯುದ್ಧಾಪರಾಧಿಗಳ ಯಾದಿಯಲ್ಲಿ ಚಾಂಗ-ಕೈ-ಶೇಕರ ಹೆಸರು ಮೊದಲಿಗುಂಟಂತೆ. ಆದರಿಂದ ಚಾಂಗ ಕೈ ಶೇಕರು ತಮ್ಮ ಸುರಕ್ಷಿತತೆಗಾಗಿ ದೇಶತ್ಯಾಗ ಮಾಡಿ, ಅಮೇರಿಕೆ

…ಕ್ಷ ಪ್ರಕ್ರಿಯೆ ನಡೆಯುವ ಸಂಭವವಿದೆ. ಅವರ ಸ್ತ್ಯಯೂ ಕಮ್ಯುನಿಸ್ಟರ ಯುದ್ಧ ಸಂಧಿಗಳಲ್ಲೊ …ದಗಿದ್ದರೆ ಅವರು ಚೀನಿ ಸರಕಾರಕ್ಕೆ ಸಹಾಯ ಕಳಿಸುವಂತೆ ಅಮೇರಿಕೆಗೆ ಮನವೊಲಿಸ …ದು. ೨ ತಿಂಗಳ ಹಿಂದೆ ಅಮೇರಿಕೆಯು ಹೊಂದ… ಅಲ್ಲೇ ಇದ್ದರೆ ಅಂತು ಈ ಚಳಿಗಾಲದ …ಸ್ತ್ಯಯಾಗ ಪದರೊಳಗಾಗಿ ಚೀನವು ಕಮ್ಯುನಿಸ್ಟರ ಅಂಕೆಯಲ್ಲಿ ಹೋಗುವ ಸಂಭವವಿದೆ. …ಆದರೆ ಬ್ರಹ್ಮದೇಶದಲ್ಲೂ ಮಲಯಾ, ಸಯಾಮ ಮೊದಲಾದ ಬ್ರಹ್ಮದೇಶದ ನೆರೆಯಲ್ಲಿರುವ ದೇಶಗಳಲ್ಲೂ ಕಮ್ಯುನಿಸ್ಟರ ಕೈ ಮೇಲಾಗುವ ಸಂಭವ ಉಂಟು. ಈಗಾಗಲೇ ಆ ಪ್ರದೇಶದಲ್ಲಿ ಕಮ್ಯುನಿಸ್ಟರು ಹಾವಳಿ ಹಾಕಹತ್ತಿದ್ದಾರೆ.

* * *

ಪಂ|| ಜವಾಹರಲಾಲರ ಅಪೇಕ್ಷೆಯಂತೆ ನಮ್ಮ ಘಟನಾ-ಸಮಿತಿಯು ಅಷ್ಟು ತ್ವರಿತೆಯಿಂದ ಕಾರ್ಯ ಸಾಗಿಸುವದಿಲ್ಲ. ಈ ತಿಂಗಳ ಕೊನೆಯೊಳಗೆ ಘಟನೆಯ ಕಾರ್ಯವನ್ನು ಮುಗಿಸಬೇಕೆಂದು ಪಂ|| ನೆಹರು ಪ್ರಭೃತಿಗಳ ಅಪೇಕ್ಷೆಯಿತ್ತು. ಆದರೆ ಘಟನಾ ಸಮಿತಿಯೊಳಗಿನ ಕೆಲ ಪಂಡಿತರು ಪ್ರತಿಯೊಂದು ಕಲಮಿಗೂ ತಿದ್ದುಪಡಿಗಳನ್ನು ಸೂಚಿಸುತ್ತ ವಾದ-ವಿವಾದವನ್ನು ಬೆಳಸುತ್ತಿದ್ದಾರೆ. ಅದರಿಂದ ಇನ್ನೂ ಘಟನೆಯ ಮಸೂದೆಯ ಬಹುಭಾಗ ಸಹ ಸಮಿತಿಯಲ್ಲಿ ಸ್ವೀಕೃತವಾಗಿಲ್ಲ. ಈಗಂತೂ ಸಮಿತಿಯು ಕಾನೂನ-ಮಂಡಳದಲ್ಲಿ ರೂಪಾಂತರವಾಗಿ ವಾರ್ಷಿಕ ಆಯ ವ್ಯಯಗಳನ್ನೂ ಅವಶ್ಯದ ಕೆಲವು ಕಾಯದೆಗಳನ್ನೂ ಚರ್ಚಿಸಬೇಕಾಗಿದೆ. ಮೇ ತಿಂಗಳ ವರೆಗೆ ಘಟನೆಯ ಸಿದ್ಧತೆಯ ಕೆಲಸವನ್ನು ತಡೆದಿಡಬೇಕಾಗಿದೆ. ಈ ವರ್ಷ ನೇ ಹೊಸ ಘಟನೆಯಂತೆ ಹೊಸ ಚುನಾವಣೆಗಳನ್ನು ಮಾಡಿಸಬೇಕೆಂದು ಹಿಂದೆ ಹಿಂದುಸ್ಥಾನ ಸರಕಾರದ ಸಂಕಲ್ಪವಾಗಿತ್ತು. ಅದು ಈಗ ಕೈಗೂಡುವಂತಿಲ್ಲ. ಮುಂದಿನ ವರ್ಷದ ಪ್ರಾರಂಭದಲ್ಲಾದರೂ ಈ ಚುನಾವಣೆಗಳನ್ನು ನಡಿಸಬೇಕೆಂದು ಹಿಂದುಸ್ಥಾನ ಸರಕಾರವು ನಿರ್ಧರಿಸಿ, ಮೊನ್ನೆ ಪ್ರಯತ್ನಪಟ್ಟು ಈ ಚುನಾವಣೆಗಳಿಗೆ ಸಂಬಂಧಪಟ್ಟ ಕಲಮುಗಳನ್ನು ಘಟನಾ ಸಮಿತಿಯ ಕಡೆಯಿಂದ ಮಂಜೂರ ಮಾಡಿಸಿಕೊಂಡಿದೆ. ಈ ಚುನಾವಣೆಗಳು ಸಮಸ್ತ ಪ್ರೌಢ ವಯಸ್ಕರ ಮತಗಳಿಂದ ನಡೆಯುವವು. ಮುಂಬಯಿ, ಮದ್ರಾಸ, ಬಿಹಾರ, ಪಶ್ಚಿಮ ಬಂಗಾಲ, ಸಂಯುಕ್ತ ಪ್ರಾಂತ ಮತ್ತು ಪೂರ್ವ ಪಂಜಾಬ ಈ ೬ ಪ್ರಾಂತಗಳಲ್ಲಿ, ಈಗ ಇರುವಂತೆ, ಮೇಲ್ಮನೆ ಮತ್ತು ಕೆಳಮನೆ ಹೀಗೆ ಎರಡೆರಡು ಕಾನೂನ-ಮಂಡಳಗಳುಳಿಯಬೇಕೆಂದು, ಆಯಾ ಪ್ರಾಂತದವರ ಅಭಿಪ್ರಾಯವಾದಂತೆ ನಿರ್ಣಯವಾಗಿದೆ. ಆಸಾಮ, ಒರಿಸಾ ಮತ್ತು ಮಧ್ಯಪ್ರಾಂತ ಈ ೩ ಪ್ರಾಂತಗಳಲ್ಲಿ ಒಂದೊಂದೇ ಕಾನೂನ-ಮಂಡಳ ಉಳಿಯುವದು. ಪ್ರಾಂತಿಕ ಕಾಯದೆ ಮಂಡಳಗಳ ಕೆಳಮನೆಯಲ್ಲಿ ೫೦೦ಕ್ಕೂ ಹೆಚ್ಚಿಗೆ ಸದಸ್ಯರು ಇರತಕ್ಕದ್ದಲ್ಲೆಂಬದೊಂದು ಮರ್ಯಾದೆ … ಲಾಗಿದೆ, ಮತ್ತು ಪ್ರತಿ ೭೫೦೦೦ ಜನರಿಗೆ ಒಬ್ಬೊಬ್ಬ ಪ್ರತಿನಿಧಿಯನ್ನು ಆರಿಸುವ ಹಕ್ಕು ಸಿಗುವಂತೆ ಸದಸ್ಯ-ಸ್ಥಳಗಳನ್ನು ಹಂಚಹಾಕತಕ್ಕದ್ದಿದೆ. ಘಟನಾ ಸಮಿತಿಯ ಸದ್ಯದ ಅಧಿವೇಶನವು ಪ್ರಾಂತಿಕ ಚುನಾವಣೆಗಳಿಗೆ ಸಂಬಂಧಪಟ್ಟ ಕಲಮುಗಳ ಚರ್ಚೆಯನ್ನು ಮುಗಿಸಿ, ಮೊನ್ನೆ ಮುಕ್ತಾಯವಾಯಿತು. ಸಮಿತಿಯು ಘಟನೆಯ ಚರ್ಚೆಗಾಗಿ ಪುನಃ ಮೇ ತಿಂಗಳಲ್ಲಿ ಕೂಡುವದು. ಮುಂಬರುವ ಆಗೋಸ್ತ ೧೫ನೇ ತಾರೀಖಿನಾದರೂ ಘಟನೆಯ ಕೆಲಸವನ್ನು ಮುಕ್ತಾಯಗೊಳಿಸಬೇಕೆಂದು ಅನೇಕರ ಮನೋದಯವಿದೆ.

* * *

ಕೊಬರಿ ಎಣ್ಣೆಯ ಧಾರಣೆಗಳು ಇತ್ತಲಾಗಿ ವಿಪರೀತ ಏರಿವೆ. ಈ ದರಗಳನ್ನು ನಿಯಂತ್ರಿಸಿ ಬಡವರನ್ನು ಕಾಯಬೇಕೆಂದು ಮುಂಬಯಿಯ ಪತ್ರಿಕೆಗಳಲ್ಲಿ ಮೇಲಿಂದ ಮೇಲೆ ಸೂಚನೆಗಳು ಬರುತ್ತಿವೆ. ತೆಂಗಿನೆಣ್ಣೆಯ ಈ ಮಹಾಗತೆಯ ಲಾಭ ಮಾಡಿಕೊಳ್ಳುವದಕ್ಕಾಗಿ ಸ್ವಾರ್ಥಿ ವರ್ತಕರು ಅದರಲ್ಲಿ ಅಗ್ಗ ಎಣ್ಣೆಯನ್ನು ಬೆರಸುವ ಉದ್ಯೋಗ ಪ್ರಾರಂಭಿಸಿದ್ದಾರೆಂಬದೊಂದು ದೂರು ಕೇಳಬರುತ್ತಿದೆ. ಹಿಂದೆ ಶೇಂಗಾ ಎಣ್ಣೆ ಅಗ್ಗವಿದ್ದಾಗ ವರ್ತಕರು ತೆಂಗಿನೆಣ್ಣೆಯಲ್ಲಿ ಶೇಂಗಾ ಎಣ್ಣೆಯನ್ನು ಬೆರಸಿ ಮಾರುತ್ತಿದ್ದ ಸಂಗತಿಯನ್ನು ಜನರು ಅರಿತಿರುವರು. ಆದರೆ ಶೇಂಗಾ ಎಣ್ಣೆಯನ್ನು ಅಥವಾ ಇಂಥದೇ ಬೇರೊಂದು ಎಣ್ಣೆಯನ್ನು ಬೆರಸಿದರೆ, ಆ ಕಳ್ಳತನ ಬೇಗನೇ ಹೊರಬೀಳುತ್ತಿದೆ. ತೆಂಗಿನೆಣ್ಣೆಗೆ ಬೇರೊಂದು ವಾಸನೆಯೂ, ಬಣ್ಣವೂ ಬರುತ್ತಿರುವದರಿಂದ ಕಲಬೆರಕೆ ಮುಚ್ಚಲಾಗುವದಿಲ್ಲ. ಆದರಿಂದ ಕೆಲವು ವರ್ತಕರು ಇತ್ತಲಾಗಿ ತೆಂಗಿನಣ್ಣೆಯಲ್ಲಿ ಶುಭ್ರ ವರ್ಣದ ಮತ್ತು ಯಾವದೇ ವಾಸನೆಯಿಲ್ಲದ "ವ್ಹೈಟ ಒಯ್ಲ" ಎಣ್ಣೆಯನ್ನು ಬೆರಸಿ ಮಾರಲಾರಂಭಿಸಿದ್ದಾರೆಂದು ಮಂಗಳೂರಿನ "ಪ್ರಭಾತ" ಪತ್ರಿಕೆಯಲ್ಲಿ ನಾಗರಿಕರೊಬ್ಬರು ಬರೆದು, ಆರೋಗ್ಯಕ್ಕೆ ಹಾನಿಕರವಾದ ಈ ಮಿಶ್ರಣವನ್ನು ಮಾಡುವ ವ್ಯಾಪಾರಸ್ಥರನ್ನ ಸರಕಾರವು ಕಂಡು ಹಿಡಿದು, ಅವರಿಗೆ ಘೋರ ಶಿಕ್ಷೆ ವಿಧಿಸಬೇಕಾಗಿ ಅಗ್ರಹದ ಸೂಚನೆ ಮಾಡಿದ್ದಾರೆ. "ವ್ಹೈಟ ಒಯ್ಲ" ಇದು ಚಿವಟಿ ಎಣ್ಣೆಯ ವರ್ಗಕ್ಕೆ ಸೇರಿದ ಖನಿಜ ಎಣ್ಣೆಯಾಗಿರುತ್ತದೆ. ಕಾರಖಾನೆಯಲ್ಲಿ ಶಾಸ್ತ್ರೀಯ ಸಂಸ್ಕರಣಗಳನ್ನು ಕೊಟ್ಟು ಅದನ್ನು ಶುದ್ಧಗೊಳಿಸುತ್ತಾರೆ, ಅದರ ವಾಸನೆಯನ್ನೂ ತೆಗೆಯುತ್ತಾರೆ. ಅದು ಬಹಳ ಅಗ್ಗವಾಗಿ ಸಿಗುತ್ತಿದೆ. ಅದನ್ನು ಕೊಬರಿ ಎಣ್ಣೆಯಲ್ಲಿ ಸೇರಿಸಿದರೆ ಕೊಬರಿ ಎಣ್ಣೆಯು ಕೂಡ ಶುಭ್ರವಾಗುತ್ತದೆ, ಆದರಲ್ಲಿ ಅನ್ಯವಾಸನೆಯಿರುತ್ತಿದ್ದರೆ ಅದೂ ಹೋಗುತ್ತದೆ. ಕಳ್ಳ ವರ್ತಕರು ಈ ಎಣ್ಣೆಯನ್ನು ಶುದ್ಧ ಎಣ್ಣೆಯ ಧಾರಣೆಗಿಂತ ಮಣಕ್ಕೆ ೮ ಆಣೆ ಇಲ್ಲವೆ ೧ ರೂ. ಕಡಿಮೆ ಧಾರಣೆಯಿಟ್ಟು ಮಾರುತ್ತಿರುವದರಿಂದ ಜನಸಾಮಾನ್ಯರಿಗೆ ಈ ಕಳ್ಳಾಟಿಕೆ ತಿಳಿಯುವದಿಲ್ಲ! ಇಂತಹ ಮಿಶ್ರ ಎಣ್ಣೆಯು ಆರೋಗ್ಯವನ್ನು ಬೇಗನೆ ಕೆಡಿಸುವದೆಂಬುದಕ್ಕೆ ಸಂದೇಹವಿಲ್ಲ. ಜನರು ತಿನ್ನುವ ತೆಂಗಿನೆಣ್ಣೆಯನ್ನ ಕೊಳ್ಳುವಾಗ ಜಾಗ್ರತೆ ಹಿಡಿಯಬೇಕು. ಎಣ್ಣೆಯ ಬಣ್ಣ ಇಲ್ಲವೆ ವಾಸನೆ-ರಹಿತತನ ನೋಡಿ ಅವರು ಮೋಸಹೋಗ ಕೂಡದು. ಸರಕಾರದವರಾದರೂ ಜನರ ಮರು ಆಹಾರ ಪದಾರ್ಥದಲ್ಲಿ ಈ ಬಗೆಯ ಆರೋಗ್ಯ ಘಾತಕ ಮಿಶ್ರಣವನ್ನು ಮಾಡುವ ಉದ್ಯೋಗವನ್ನ ಕಠೋರತನದಿಂದ ನಿರ್ಮೂಲಿಸಬೇಕು. ಹುಬ್ಬಳ್ಳಿಯ ಕಡೆ ಹಾಲು ಮೊಸರುಗಳಲ್ಲಿ ನೀರು ಬೆರಕೆ ಮಾಡಿ ಮಾರುತ್ತಿದ್ದ ಗೌಳಿಗರನೇಕರಿಗೆ (ಸಂಗಸರಿಗೂ ಕೂಡ) ಶಿಕ್ಷೆಯಾಗುತ್ತಿದ್ದುದನ್ನು ನಾವು ಕೇಳಿದ್ದೇವೆ, ಓದಿದ್ದೇವೆ. ಗೌಳಿಗರ ಆ ಅಪರಾಧಕ್ಕಿಂತಲೂ ವ್ಹೈಟ ಒಯ್ಲ ಮಿಶ್ರಣದ ಈ ಅಪರಾಧ ಎಷ್ಟೋ ಪಾಲು ಘೋರತರವಿರುತ್ತದೆಂಬದನ್ನು ಅಲ್ಲಗಳೆಯಲಾಗದು.

* * *

ಜೋಗದ ವಿದ್ಯುತ್ಕಾರಖಾನೆಯೊಳಗಿನ ವಿದ್ಯುತ್ತನ್ನು ನಮ್ಮ ಜಿಲ್ಹೆಗೆ ಪೂರೈಸುವದು ಅಶಕ್ಯವೆಂದು ಮುಂಬಯಿ ಸರಕಾರದ ಅಭಿಪ್ರಾಯವಾಗಿದೆಂದು ಮೊನ್ನೆಯ ಸಂಚಾರದ ಕಾಲಕ್ಕೆ ಮಾನ್ಯ ಮಲ್ಲಿನಗೌಡಾ ಪಾಟೀಲರು ತಿಳಿಸಿದ್ದಾರೆ. ವಿದ್ಯುತ್ತನ್ನು ಕರೆದ ತಂದು, ಕಂಬ ಮುಂತಾದವುಗಳನ್ನು ಹಾಕಲಿಕ್ಕೆ ಪ್ರತಿ ಮೈಲಿಗೆ ೭೫೦೦೦ ರೂ ಖರ್ಚು ಬರುತ್ತದೆಂದೂ, ಕಾರವಾರ ಜಿಲ್ಹೆಯಲ್ಲಿ ಸಾಕಷ್ಟು ಬಹುದಾದ ವಿದ್ಯುತ್ತಿನ ಮಾಸದಿಂದ ಇಷ್ಟು ಖರ್ಚ ಮಾಡುವದು ಲಾಭದಾಯಕವಾಗಲಿಕ್ಕಿಲ್ಲವೆಂದೂ ಸರಕಾರದವರ ಅಂಬೋಣವಿರುತ್ತದಂತೆ. ಕಾಳಿನದಿಯಲ್ಲಿ ಒಂದು ವಿದ್ಯುತ್ಕಾರಖಾನೆ ಸ್ಥಾಪಿಸಿದರೆ ಕಾನಡಾ ಜಿಲ್ಹೆಗೆ ಅವಶ್ಯವಿದ್ದ ವಿದ್ಯುತ್ತಿನ ಪೂರೈಕೆ ಮಾಡಬರುವದೆಂದು ಸರಕಾರವು ಸಮಗೊಂಡು ಅದ ಸೂಚಿಸಿತ್ತು. ಆದರೆ ಮಿತವ್ಯಯದ ದೃಷ್ಟಿಯಿಂದ ಸರಕಾರವು ಕಾಳಿನದಿಯ ಈ ಯೋಜನೆಯನ್ನು ಮುಂದೂಡಿದೆಂಬ ಸುದ್ದಿ ಪ್ರಕಟವಾಗಿದೆ. ವಿದ್ಯುತ್ತು ಬೇಕಾದಲ್ಲಿ ಸ್ಥಳಿಕ ವಿದ್ಯುತ್ಕಾರಖಾನೆಯನ್ನು ಸ್ಥಾಪಿಸಿಕೊಳ್ಳಿರೆಂದು ಮಾನ್ಯ ಪಾಟೀಲರು ಕಾರವಾರದವರಿಗೆ ಬೋಧಿಸಿದುದರ ಮರ್ಮ ಇದೇ ಇರಬಹುದು.

* * *

ಮುಂಬಯಿ ಸರಕಾರವು ಮುಂಬಯಿ ಕರ್ನಾಟಕಕ್ಕಾಗಿ ಪ್ರತ್ಯೇಕ ವಿಶ್ವವಿದ್ಯಾ-ಪೀಠವನ್ನು ಸ್ಥಾಪಿಸುವದಕ್ಕಾಗಿ ಕಳೆದ ವರ್ಷವೇ ಸ್ಥಾಪಿಸಲ್ಪಟ್ಟ ಪುಣೆಯ ಮಹಾರಾಷ್ಟ್ರ ವಿಶ್ವವಿದ್ಯಾಪೀಠದ ಮಾದರಿಯನ್ನೇ ಮುಂದಿಟ್ಟುಕೊಂಡು, ಒಂದು ಮಸೂದೆಯನ್ನು ತಯಾರಿಸಿ, ತಾ ೫-೧-೧೯೪೯ರ ಗಾಝೆಟನಲ್ಲಿ ಅದನ್ನು ಪ್ರಕಟಿಸಿದೆ.

ಜಾಹೀರ ನೋಟೀಸಿಗೆ ಉತ್ತರ.

ಶ್ರೀ|| ಶ್ರೀನಿವಾಸ ನಾಗಪ್ಪ ಶೆಟ್ಟಿ, ಸಾಕಿನ ಶಿರಾಲಿ ಗ್ರಾಮದ ಪೈಕಿ ಚಿತ್ರಾಪುರ ಇವರು ದಾಖಲ ಕೊಟ್ಟ ಮೇರೆಗೆ ಮಹಾಬಲೇಶ್ವರ ಪಾಂಡುರಂಗ ಶಾನಭಾಗ ವಕೀಲ, ಹೊನ್ನಾವರ ಇವರು, ಪಾಂಡುರಂಗ ಬಾಬಯ್ಯ ರಾಜಾಪುರ ಇವರು ಈ ೩-೧-೧೯೪೯ನೇ ದಿವಸದ 'ಕಾನಡಾವೃತ್ತ'ದ ಸಂಚಿಕೆಯಲ್ಲಿ ಕೊಟ್ಟ ನೋಟೀಸಿಗೆ ಉತ್ತರ ಕೊಡುವದೇನಂದರೆ — ಸದರ ನೋಟೀಸಿನಲ್ಲಿ [illegible] … ಗ್ರಾಮದ ಸ ನಂ ೨ (ಬ) ನೇ [illegible] … [illegible]

ಹೊನ್ನಾವರ, ತಾ ೯-೧-೧೯೪೯

M. M Jalisatgi

ಜಿಲ್ಲಾ ಸಮಾಚಾರ

ಕಾರವಾರ— ಶಾಲೆ ಕಾಲೇಜುಗಳೊಳಗಿನ ಅಭ್ಯಾಸವನ್ನು ಬಿಟ್ಟು ೧೯೪೨ರ ಸ್ವಾತಂತ್ರ್ಯ ಸಮರದಲ್ಲಿ ಧುಮುಕಿದ ಮತ್ತು ಆ ಕಾರಣದಿಂದ ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸಲಾಗದ ವಿದ್ಯಾರ್ಥಿಗಳು ಸರಕಾರಿ ನೌಕರಿಯನ್ನು ಹಿಡಿಯಬಯಸುತ್ತಿದ್ದರೆ, ಅವರ ಶೈಕ್ಷಣಿಕ ನ್ಯೂನತೆಯು ಅಡ್ಡ ಬರಬಾರದೆಂದು ಮುಂಬಯಿ ಸರಕಾರವು ನಿರ್ಣಯಿಸಿದೆ. ಶೈಕ್ಷಣಿಕ ಪಾತ್ರತೆಯ ಅಭಾವವೊಂದನ್ನು ಬಿಟ್ಟು ಇನ್ನಿತರ ದೃಷ್ಟಿಯಿಂದ ಅಂಥ ಅರ್ಜದಾರರು ಯೋಗ್ಯರೆಂದು ನೌಕರಿ ಸ್ಥಳಕ್ಕೆ ಪಾತ್ರರಾಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ಸರಕಾರಕ್ಕೆ ಹಾಗೆ ವರದಿ ಮಾಡಿ ಸರಕಾರದ ನಿರ್ಣಯ ಕೇಳಿಕೊಳ್ಳಬೇಕೆಂದು ಸರಕಾರವು ವಿಧಿಸಿದೆ. ಆದರೆ ಅರ್ಜದಾರರು ಅರ್ಜ ಮಾಡುವಾಗ ತಾವು ೧೯೪೨ರ ಚಳವಳಿಯಲ್ಲಿ ಭಾಗ ವಹಿಸಿದ್ದೆವೆಂದೂ, ಆ ಕಾರಣದಿಂದ ತಮಗೆ ಶೈಕ್ಷಣಿಕ ಯೋಗ್ಯತೆ ಪಡೆಯಲಾಗಲಿಲ್ಲೆಂದೂ ಸಮಾಧಾನಕರ ದಾಖಲೆಗಳನ್ನು ಹಾಜರಪಡಿಸಬೇಕಾಗುವದು.

ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ೧೯೪೬ನೇ ಇಸವಿಯ ನವಂಬರದಿಂದ ತುಟ್ಟಿ ಭತ್ತೆಯ ೨ ೪ ಹಣ ಬೋನಸ್ಸೆಂದು ಕೊಡಬೇಕಾಗಿ ಸರಕಾರವು ನಿರ್ಣಯಿಸಿ ಶಾಲಾ ಬೋರ್ಡಿನ ಪ್ರಾಥಮಿಕ ಶಾಲಾ ಶಿಕ್ಷಕರಿಗೆಲ್ಲ ಅದನ್ನು ಕೊಡಿಸಿದೆ. ಸರಕಾರವು ಈ ಔದಾರ್ಯವನ್ನು ಸಹಾನುಭೂತಿಯನ್ನೂ ಬೋರ್ಡಿನಿಂದ ಒಂದಿಷ್ಟು ಧನಸಹಾಯ ಪಡೆದು ನಡೆಯುತ್ತಿರುವ ಗಾಂವಠಿ ಶಾಲೆಗಳ ಅತ್ಯಂತ ದೀನ ಮತ್ತು ಬಡ ಶಿಕ್ಷಕರಿಗೂ ತೋರಿಸಬೇಕಿತ್ತು. ಕಾರಣ ಆ ಶಿಕ್ಷಕರ ನೆನವು ಸರಕಾರಕ್ಕೆ ಆಗಿಲ್ಲೆಂಬಂತೆ ತೋರುತ್ತಿದೆ. ಸರಕಾರವು ಇನ್ನಾದರೂ ಅವರ ನೆನವು ಮಾಡಿಕೊಂಡು ಅವರಿಗೂ ಯೋಗ್ಯ ಪರಿಹಾರ ಕೊಡಿಸುವ ದಯಮಾಡಬೇಕೆಂದು ಗಾಂವಠಿ ಶಾಲಾ ಶಿಕ್ಷಕರ ಪರಿಚಯವುಳ್ಳವರೊಬ್ಬರು ಬಿನ್ನವಿಸುತ್ತಾರೆ.

(ತಾ ೧-೧-೧೯೪೯) ಇಲ್ಲಿಯ ಕರ್ನಾಟಕ ಸಂಘದವರ ಇದೇ ಬರುವ ತಾ ೮-೯ಕ್ಕೆ ಇಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಲನ ಜರುಗಿಸಬೇಕೆಂದು ನಿಶ್ಚಯಿಸಿದ್ದಾರೆ. ಈ ಸಮ್ಮೇಲನದ ಪ್ರಾರಂಭೋತ್ಸವ ಮಾಡಿಕೊಡಲು ಉದವಕೊಂಡ ಜಗದ್ಗುರುಗಳಾದ ಪೂಜ್ಯ ಶಿವಬಸವ ರಾಜೇಂದ್ರ ಸ್ವಾಮಿಗಳು ತಾ ೭ನೇಗೆ ಇಲ್ಲಿ ಬರುವವರಿದ್ದಾರೆ. ಆ ಕಾಲದಲ್ಲಿ ಅವರದೊಂದು ಸಾರ್ವಜನಿಕ ಪ್ರವಚನವನ್ನು ಮಾಡಿಸುವ ವ್ಯವಸ್ಥೆಯಾಗುತ್ತಲಿದೆ. ಧಾರವಾಡದ ವಿಖ್ಯಾತ ಸಾಹಿತಿಗಳಾದ ಶ್ರೀ ಶಂ ಬಾ ಜೋಶಿಯವರು ಸದರಿ ಸಮ್ಮೇಲನದ ಅಧ್ಯಕ್ಷರಾಗಲು ಒಪ್ಪಿರುತ್ತಾರೆ.

ಅಂಕೋಲೆಯಲ್ಲಿ ಇಂದು ಈವರೆಗೆ ೨೮ ಮಂದಿ ಸ್ತ್ರೀ ಸಂಘದ ಪರವಾಗಿ ಕಾನೂನುಭಂಗ ಮಾಡಿ, ಕೆಲ ೪-೪ ತಿಂಗಳ ಸಾದಾ ಶಿಕ್ಷೆ ಮತ್ತು ದಂಡದ ಶಿಕ್ಷೆಯನ್ನು ಪಡೆದು ಸೆರೆಮನೆ ಸೇರಿದ್ದಾರೆ.

ಅಂಕೋಲಾ— (ತಾ ೧ ೧-೧೯೪೯) ಇಲ್ಲಿಯ ಮುಖ್ಯ ವಿವೇಚನೆಯ ನ್ಯಾಯಾಧೀಶರು ಈವರೆಗೆ ಹನುಮಟ್ಟೆಯ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದ ಚಂದ್ರಶಾಲೆಯ ಮೇಲೆ ತಮ್ಮ ಕೋರ್ಟ ಮಾಡುತ್ತಿದ್ದರು. ನಾಳೆ ತಾ ೪ರಿಂದ ಅವರ ಕೋರ್ಟ ದೊಡ್ಡ ಪೇಟೆಯ ಹನುಮಾನ ಗುಡಿ ಎದುರು ಕಟ್ಟಿಸಿದ ಹೊಸ ಮನೆಯಲ್ಲಿ ಕೂಡುವದೆಂದು ಜಾಹೀರಾಗಿದೆ.

ಗುಂಡಬಾಳ ಹಿಲ್ಲೂರ ವಗೈರೆ ಹೊಳೆಸಾಲಿನ ಇರುವ ಗ್ರಾಮಗಳ ಟಪಾಲಿನ ಬಟವಡೆಯು ಅಂಕೋಲೆಯಿಂದಲೇ ಆಗುತ್ತಿದೆ. ಗುಂಡಬಾಳೆಯು ಇಲ್ಲಿಂದ ೧೪ ಮೈಲು ದೂರವಿದೆ. ಟಪಾಲ ಬಟವಡೆ ಪೇಟೆಯು ಹತ್ತಿರ ಹತ್ತಿಗೆ ಹಣ ಕೊಡಲಾಗುವದಿಲ್ಲ. ಆದರಿಂದ ದಿನ ತಂದ ಮನಿ ಆರ್ಡರ, ಇನ್ಶೂರ ವಗೈರೆ ಇದ್ದರೆ ಆ ಗ್ರಾಮಗಳ ನಿವಾಸಿಗಳು ಇಲ್ಲಿ ಬಂದು ಗುರುತಿನ ಸಾಕ್ಷಿ ಹಾಜರಪಡಿಸಿ, ಅವನ್ನು ಪಡೆಯಬೇಕು. ಮಳೆಗಾಲದಲ್ಲಿ ನದಿಗೆ ನೆರೆ ಬಂದರೆ ಟಪಾಲ ಬಟವಡೆ ಶಿಪಾಯಿಯು ನದಿ ದಾಟಿ ಆಚೆಗೆ ಹೋಗುವದಿಲ್ಲ! ಅದ್ದರಿಂದ ಗುಂಡಬಾಳೆಯಲ್ಲಾಗಲಿ, ಹಿಲ್ಲೂರದಲ್ಲಾಗಲಿ ಒಂದು ಚಿಕ್ಕ ಟಪಾಲ ಕಚೇರಿಯನ್ನು ತೆರೆಯಬೇಕಾಗಿ ಆ ಸೀಮೆಯವರ ಬೇಡಿಕೆಯುಂಟು. ಈ ಟಪಾಲಕಚೇರಿಯನ್ನು ಅಂಕೋಲೆಗೆ ಗಂಟು ಹಾಕುವದಕ್ಕಿಂತ ಗೋಕರ್ಣಕ್ಕೆ ಗಂಟು ಹಾಕಿದರೆ ಒಳ್ಳೇದಾಗುವದು. ಈ ಟಪಾಲಕಚೇರಿ ಆಗುವವರೆಗೆ ಗುಂಡಬಾಳೆ ಹಿಲ್ಲೂರ ಸೀಮೆಯವರ ಟಪಾಲು ಗುಂಡಬಾಳೆಯಿಂದ ೮ ಮೈಲು ಅಂತರದಲ್ಲಿರುವ ಹಿರೇಗುತ್ತಿ ಅಂಚೆಕಚೇರಿಯಿಂದ ಬಟವಡೆ ಮಾಡುವ ವ್ಯವಸ್ಥೆ ಮಾಡಬೇಕಾಗಿಯೂ, ಇಲ್ಲವೆ ಒಂದು ಪೇಟೆಯನ್ನು ಕಡಿಮೆ ಮಾಡಿ ಹಿರೇಗುತ್ತಿ ಅಂಚೆಕಚೇರಿಯಲ್ಲಿ ಒಬ್ಬನನ್ನು ಹೆಚ್ಚಿಸಿದರೆ ಗುಂಡಬಾಳೆ ಸೀಮೆಯವರಿಗೆ ವಾರದಲ್ಲಿ ಎರಡಾವರ್ತಿ ಟಪಾಲು ಬಟವಡೆ ಮಾಡಲು ಅನುಕೂಲವಾಗುವದೆಂತಲೂ ಆ ಸೀಮೆಯವರ ಸೂಚನೆಯಿದೆ. ಅಂಚೆ ಇಲಾಖೆಯ ಅಧಿಕಾರಿಗಳು ಇತ್ತ ಲಕ್ಷ್ಯ ಕೊಡಬೇಕು.

ಹಳಿಯಾಳ— ಜಿಲ್ಲಾ ಗ್ರಾಮೋದ್ಧಾರ ಮಂಡಳದ ಕಾರ್ಯಕರ್ತರು ಕೆಲವು ದಿನಗಳ ಹಿಂದೆ ಅಹಮದನಗರ ಜಿಲ್ಲೆಯ ರಾಹುರಿ ಗ್ರಾಮದಲ್ಲಿ ಜರುಗಿದ ದನಗಳ ಪ್ರದರ್ಶನಕ್ಕೆ ಹೋಗಿ ೧೫ ಹೋರಿ-ಆಕಳುಗಳನ್ನು ಖರೀದಿಸಿ ತಂದಿದ್ದಾರೆ. ಈ ದನಗಳ ಹೋರಿಯನ್ನು ಹಳಿಯಾಳ ತಾಲೂಕಿನ ಬಡಗಿ ಮತ್ತು ಆಕಳುಗಳನ್ನು ಇಲ್ಲಿಯ ಒಕ್ಕಲಿಗರಿಗೆ ಕೊಡಲು ನಿಶ್ಚಯಿಸಿರುತ್ತಾರೆ. ಇದಲ್ಲದೆ ಜಿಲ್ಲೆಯ ಬೇರೆ ಭಾಗಗಳಿಗೂ ಕೆಲವು ಒಳ್ಳೇ ದನಗಳನ್ನು ತರಿಸಿ ಕೊಡುವ ವಿಚಾರ ಜಿಲ್ಲಾ ಗ್ರಾಮೋದ್ಧಾರ ಮಂಡಳದ್ದಿರುವದೆಂದು ತಿಳಿಯುತ್ತದೆ.

ಸಿದ್ದಾಪುರ— (ತಾ ೨೬ ೧೨-೪೮) ಹಲವಾರು ದಿವಸಗಳಿಂದ ಯೋಗ್ಯ ಧಾರಣೆ ಅಂಗಡಿಯವರು ಸರಕಾರಿ ಅಕ್ಕಿಯನ್ನು ಆಗಾಗ ತರಿಸದ ಜನರಿಗೆ ಬಹಳ ಕಷ್ಟ ಕೊಡುತ್ತಾರೆಂಬುದೊಂದು ದೂರು ಕೇಳಬರುತ್ತಿದೆ. ಅಂಗಡಿಯವರು ಹಾವಾಗ ಅಕ್ಕಿಯನ್ನ ಎಂದರೂ ಒಯ್ಯುವದಿಲ್ಲ! ಸರಕಾರದವರು ಒಟ್ಟಿನಿಂದ ಕಳಿಸಿಕೊಟ್ಟ ಅಕ್ಕಿಯನ್ನು ಜನರಿಗೆ ಹಂಚುವದಿಲ್ಲಂತೆ! ಯಾರಾದರೂ ಅಕ್ಕಿ ಕೇಳಿದರೆ ವಾಟಿಗಾರ ಅಂಗಡಿಗೆ ಹೋಗಿರಿ, ಇಲ್ಲವೆ ಮಣಿಗಾರ ಸ್ಮಿತಿ ಪೋಟೆಕೊಟ್ಟ ಭಟ್ಟರಲ್ಲಿ ಅಂಗಡಿಯಾಗುತ್ತದಂತೆ ಅಲ್ಲಿಗೆ ಹೋಗಿರಿ ಎಂದೂ, "ನೀವೆಲ್ಲ 'ಕಾನಡಾವೃತ್ತ'ದಲ್ಲಿ ಟೀಕೆ ಮಾಡುವವರಲ್ಲವೇ? ನಿಮಗೆ ಅಕ್ಕಿ ಇಲ್ಲ ಸಿಗುವದಿಲ್ಲ"ಎಂದೂ ಬೇಸ್ತು ಮಾಡುತ್ತಾರೆ! ಇದರ ಕಾರಣವಿಷ್ಟೇ, ಈ ಅಂಗಡಿಗೆ ಸಂಬಂಧಪಟ್ಟ ಕೆಲವರಲ್ಲಿ ಕಳ್ಳ ಅಕ್ಕಿಯು (ಸರಕಾರಕ್ಕೆ ಸರಿಯಾದ ಮಾಹಿತಿ ಕೊಡದೆ ಬಚ್ಚಿಟ್ಟ ಅಕ್ಕಿಯು) ಸಂಗ್ರಹವುಂಟು. ಅದನ್ನವರು ೪ ೫ ರೂಪಾ

ಪ್ರಕಟನೆ.

ಕಾನಡಾ ಜಿಲ್ಲಾ ಸ್ಕೂಲ ಬೋರ್ಡಿನವರು ಸದ್ಯದಲ್ಲಿಯೇ ಅಮಲಿನಲ್ಲಿ ಬರಬಹುದಾದ ೧೯೪೭ನೇ ಪ್ರಾಯಮರಿ ಎಜ್ಯುಕೇಶನ್ ಅಕ್ಟ ನಂ., ರಿಜಸ್ಟರ್ಡ ಸ್ಟಾಫ್ ಸಿಲೆಕ್ಷನ್ ಕಮಿಟಿಯು ಮುಂಜೂರಿಗೆ ಒಳಪಟ್ಟು ಜಿಲ್ಲೆಯ ಒಬ್ಬ ಎಟೆಂಡನ್ಸ್ ಒಫಿಸರನನ್ನು, ಒಬ್ಬ ಕಾರಕೂನನನ್ನು ಈ ಕೆಳಗೆ ಕಾಣಿಸಿದ ಪಗಾರ ಸ್ಕೇಲಿನ ಮೇಲೆ, ತಾತ್ಪೂರ್ತಿಕವಾಗಿ ನೇಮಿಸುವವರಿದ್ದಾರೆ. ಈ ಸ್ಥಳಗಳಿಗೆ ಉಮೇದವಾರರಾಗಲಿಚ್ಛಿಸುವವರು ಸ್ವಹಸ್ತಾಕ್ಷರದಿಂದ ಬರೆದ ಅರ್ಜಗಳನ್ನು ತಕ್ಕೊಂಡು ತಮ್ಮ ಸ್ವಂತ ಖರ್ಚಿನಿಂದ, ತಾ ೧೭ ೧-೧೯೪೯ನೇ ದಿನ ಸಂಜೆ ೫ ಘಂಟೆಗೆ ಕಾರವಾರ ದಿ ಸ್ಕೂಲ ಬೋರ್ಡ ಕಚೇರಿಯಲ್ಲಿ, ಮೆ॥ ಎಡ್ಮಿನಿಸ್ಟ್ರೇಟಿವ್ ಒಫೀಸರ ದಿ ಸ್ಕೂಲ ಬೋರ್ಡ, ಕಾನಡಾ ಇವರನ್ನು ಭೆಟ್ಟಿಯಾಗತಕ್ಕದ್ದು.

ಅರ್ಜಿಯ ನಮೂನೆ

(೧) ಉಮೇದವಾರರ ಪೂರ್ಣ ಹೆಸರು ಮತ್ತು ಪತ್ತೆ, (೨) ಜಾತಿ, (೩) ಜನ್ಮ ತಾರೀಖು, (೪) ಶೈಕ್ಷಣಿಕ ಯೋಗ್ಯತೆ, (೫) ಗೊತ್ತಿದ್ದ ಭಾಷೆಗಳು (೬) ಹಿಂದಿನ ಅನುಭವ, (೭) ಟಾಯಪಿಂಗ ಮತ್ತು ಶಾರ್ಟಹ್ಯಾಂಡದಲ್ಲಿ ವೇಗ (ಕಾರಕೂನನ ವಿಷಯದಲ್ಲಿ ಮಾತ್ರ)

ಎಟೆಂಡನ್ಸ್ ಒಫೀಸರರ ಪಗಾರ ಸ್ಕೇಲು

(I)	೩ ವರ್ಷ ಶಿಕ್ಷಕನಾಗಿ ಕೆಲಸ ಮಾಡಿದ ಅಥವಾ ೩ ವರ್ಷ ಆಫೀಸಿನ ಅನುಭವವಿದ್ದ ಟ್ರೇಂಡ ಗ್ರ್ಯಾಜ್ಯುಏಟರು	ರೂ ೬೦ ೫ ೧೪೦-E B -೬ ೧೬೦-೮ ೨೦೦
(II)	ಕನಿಷ್ಠ ೧೦ ವರ್ಷ ಶಿಕ್ಷಕನಾಗಿ ಕೆಲಸ ಮಾಡಿದ ಹಾಗೂ ಎಸ್ ಟಿ ಸಿ ಪರೀಕ್ಷೆಯಲ್ಲಿ ಪಾಸಾದ, ನೊನ್-ಗ್ರ್ಯಾಜ್ಯುಏಟರು ಅಥವಾ ಮೆಟ್ರಿಕ್ ಪಾಸಾದವರು	ರೂ ೬೦-೩ ೮೫-E B ೪ ೧೨೫-೫ ೧೪೦
(III)	ಕನಿಷ್ಠ ೧೫ ವರ್ಷ ಪ್ರಾಥಮಿಕ ಶಿಕ್ಷಕನಾಗಿ ಕೆಲಸ ಮಾಡಿದ ಟ್ರೇಂಡ ಶಿಕ್ಷಕರು	ರೂ ೬೦-೩-೮೫ E B -೪-೧೨೫ ೫ ೧೪೦

ಕಾರಕೂನರ ಪಗಾರ ಸ್ಕೇಲು

(I)	ಮೆಟ್ರಿಕ್ ಅಥವಾ ಎಸ್ ಎಲ್ ಸಿ ಪಾಸಾದವರು	ರೂ ೫೫-೩-೮೫ E B -೪-೧೨೫-೫-೧೩೦

ಸೂಚನೆ (ಅ) ಮೇಲೆ ತೋರಿಸಿದ ಪಗಾರ ಸ್ಕೇಲಿನ ಹೊರತಾಗಿ ತುಟ್ಟಿ ಭತ್ತೆ (ಪಗಾರದ ಜೊತೆಗೆ) ಕೊಡಲ್ಪಡುವದು (ಬ) ಯಾರೂ ಯಾವದೇ ಬಗೆಯ ವಶೀಲಿಯನ್ನು ಹಚ್ಚಕೂಡದು. ಯಾರಾದರೂ ಹಾಗೆ ಮಾಡಿದಲ್ಲಿ ಅಂಥವರ ಅರ್ಜಿಯನ್ನು ವಿಚಾರಕ್ಕೆ ತಿಳಿಯುವದಿಲ್ಲ

ಕಾನಡಾ ಜಿಲ್ಲಾ ಸ್ಕೂಲ ಬೋರ್ಡ ಕಚೇರಿ
ಕಾರವಾರ
ತಾ ೪ ೧ ೧೯೪೯

G S. Bhat, Kekkar,
ಚೆಅರಮನ್,
ದಿ ಸ್ಕೂಲ ಬೋರ್ಡ, ಕಾನಡಾ

ಮಾರ್ಗದಿಂದ ಹುಬ್ಬಳ್ಳಿಯಿಂದ ತರುತ್ತಿದ್ದರೆ ಹಾಗೂ ಧಾನ್ಯವನ್ನು ಒಯ್ದು ಅವರಿಗೆ ಸರಿಯಾಗಿ ಹಂಚುವರೆ ಈ ಅಕ್ಕಿಗೆ ಗಿರಾಕಿಗಳೇ ಸಿಗಲಿಕ್ಕಿಲ್ಲೆಂಬ ಹೇಳುತ್ತಿದ್ದರು ... ಅಂಗಡಿಯವರು ಸರಕಾರಿ ಅಕ್ಕಿಯನ್ನು ಒಯ್ಯದೆ ... ಅಕ್ಕಿಗೆ ಬೇಡಿಕೆ ಮಾಡಿಕೊಳ್ಳುತ್ತಿದ್ದಾರೆಂದು ಕೂಡ ... ಕಂಡು ಹಿಡಿದಿರುತ್ತಾರೆ. ಜಿಲ್ಲಾಧಿಕಾರಿ ಈ ... ಯನ್ನು ಒಂದೇ ಬೇರೆಯವರಿಗೆ ಒಪ್ಪಿಸಬೇಕು. ... ಈ ಅಂಗಡಿಗೆ ಸಂಬಂಧಪಟ್ಟವರ ಮತ್ತು ಅವರ ... ಅಕ್ಕಿಯ ಸಂಗ್ರಹವನ್ನೆಲ್ಲ ... ಅಕ್ಕಿಯು ಕಲ್ಲು ಸಂಕೆಯು ... ಬೇಕು ಅಂದರೆ ಮಾತ್ರ ಜನರಿಗೆ ಸುಖವಾಗುವದು.

ಕಂಟ್ರೋಲ್ ಧೋರಣೆಯ ಕಾನಭೋಳೆಗರು ಈ ಧೋರಣೆಗೆ ... ಅವರಿಗೆ ... ಆಗುವದಿಲ್ಲ! ಅವರನ್ನು ಕಂಡರೆ ಬಡವರು ಬೆದರುತ್ತಾರೆ. ... ನಿಯಂತ್ರಣದ ಕಾಲದಲ್ಲಿ ಅವರು ನಡಿಸಿದ ... ಜನರ ... ನಿಯಂತ್ರಣ ... ದಿಂದ ಅವರ ... ಬಂದಿದೆ ... ಅವರಿಗೆ ... ಹೊಸ ... ಸಿಕ್ಕಿದಂತಾಗಿದೆ! ... ಈ ಕಾನಭೋಳೆಗೆ ಎಂದು ... ಆಗುವದು ಎಂದು ಜನರು ಹಾದಿ ನೋಡುತ್ತಿದ್ದಾರೆ. ... ಅಧಿಕಾರಿಗಳು ಈ ಜನರನ್ನು ಕಾಯುವ ವ್ಯವಸ್ಥೆ ಮಾಡಬೇಕಾಗಿ ಇರುತ್ತದೆ.

ಭಟ್ಕಳ— (ತಾ ೬-೧-೪೯) ಕೆಲವು ದಿನಗಳಿಂದ ಕಾನೂನು-ಭಂಗ ಮಾಡಿ ... ಸಂಘದ ಸ್ವಯಂಸೇವಕರು ಇಲ್ಲಿ ಬಂಧನದಲ್ಲಿ ... ಅವರ ವಿಚಾರಣೆಯಾಗಿ, ಮೆಜಿಸ್ಟ್ರೇಟರು ಅಪ್ಪರಿಗೆ ೧-೧ ವರ್ಷದ ಶಿಕ್ಷೆ ಮತ್ತು ೫೦ ೧೦೦ ರೂ ದಂಡ ಹಾಗೂ ಉಳಿದವರಿಗೆ ... ತಿಂಗಳ ಶಿಕ್ಷೆ ಮತ್ತು ೧೦೦-೧೦೦ ರೂ ದಂಡ ವಿಧಿಸಿದ್ದಾರೆಂದು ಸುದ್ದಿ ಬಂದಿದೆ.

ಪಟ್ಟಣಗಳ ಮೇಲೆ ಧಾಳಿ ಬಹಳ ಆಗುತ್ತಿದೆ. ... ಕಳ್ಳತನಕ್ಕೆ ... ಇಲ್ಲ.

ನಗರದ ಬದಿಯಲ್ಲಿ ... ನೀರು ... ನಗರ ... ಈ ಬಗ್ಗೆ ... ಮೇಲೆ ... ವೆಂದು ... ! ಜನರು ಈ ಬಗ್ಗೆ ಜಿಲ್ಲಾಧಿಕಾರಿ ... ಅರ್ಜಿ ಮಾಡಿದ ಸುದ್ದಿಯುಂಟು.

ಬೈಲೂರು— (ತಾ ೬-೧-೪೯) ಬೈಲೂರ ... ನಗರ ... ಮಾಡಬಾರದೆಂದು ... ಮತ್ತು ... ಮಾಡಿದವರಲ್ಲಿ ... ಕಾನಭೋಳೆಗರ ... ಆದರೆ ... ಅವರು ಬರೆಯುತ್ತಾರೆ. ... ಅರ್ಜಿಯನ್ನು ... ಕಾನಭೋಳೆಗರಿಗೆ ಅಧಿಕಾರಿಗಳು ... ಮಾಡಿದ್ದರಿಂದ ... ವಾಗಿದೆಂದೂ ಅವರು ತಿಳಿಸುತ್ತಾರೆ.

ಮುರುಡೇಶ್ವರ— (ತಾ ೪-೧-೪೯) ಇಲ್ಲಿಯ ... ಯಿಂದ ದೇವಿಮನೆ ಮಾರ್ಗವಾಗಿ ಅಡವಿಗೆ ... ದ ಹಾದಿಯೊಂದುಂಟು. ಅಲ್ಲೊಂದು ರಸ್ತೆ ಬೇಕೆಂದು ... ಬಹಳ ... ಕೊಡಿ ... ಯಿಂದ ... ಕಯಾರಿಸುತ್ತಿದ್ದಾರೆ. ಆದರೆ ಒಂದು ... ಯಿಂದ ... ಮಾರ್ಗದ ... ಆಗುವದು ಸಾಧ್ಯವುಂಟೇ? ಜಿಲ್ಲಾ ಬೋರ್ಡಿನವರಾಗಲಿ ಗ್ರಾಮ ಪಂಚಾಯತದವರಾಗಲಿ ಈ ಕೆಲಸ ಕೈಕೊಳ್ಳುವರೇ ... ಜನರ ಬೇಡಿಕೆ ಹಾಗೆಯೇ ಉಂಟು.

ಶಿರಾಲಿ— (ತಾ ೬-೧-೧೯೪೯) ಈ ಗ್ರಾಮದ ಗುಮ್ಮಂತ್ರೆಯ ಬಳಿಯಲ್ಲಿ ... ಹೊಳೆಯ ಗುಂಟವೂ ಸುಮಾರು ೨೦೦ ಎಕರೆ ಭೂಮಿ ಇದ್ದು ... ೧೦ ವರ್ಷಗಳಿಂದ ... ಗ್ರಾಮದಲ್ಲಿ ... ಎಕರೆ ಹೊಲಗಳು ... ಆಹಾರದ ಕೊರತೆಯು ಈ ಕಾಲದಲ್ಲಿ ಅವನ್ನು ಹಾಗೆಯೇ ಉಳಿಸಿಕೊಳ್ಳುವದು ವಿಚಾರ ... ಈ ಭೂಮಿಯನ್ನು ... ಅಧಿಕಾರಿಗಳು ... ಮಾಡಿ, ಸರಕಾರದವರು ಕೂಡಲೇ ಅದನ್ನು ... ಯೋಜನೆ ಮಾಡಬೇಕು.

ಈ ಗ್ರಾಮದ ಕಾನಭೋಳೆಗರು ... ರೈತರ ... ಕೆಲಸಗಾರರನ್ನು ನೇಮಿಸಿ ... ಎಂದು ... ! ... ಮಾಡಿ, ... ನೇಮಿಸುವದಿಲ್ಲ! ಆದರಿಂದ ... ಈ ... ದಿಂದ ತೊಂದರೆಯಾಗಿದೆ! ... ಈ ... ಗಳು ... ಹೊಲಗಳಲ್ಲಿ ... ಮಾಡುತ್ತವೋ ಏನೋ!

ಕುಮಟಾ— ತಾ. ೧-೧-೧೯೪೯ರಿಂದ ಮುಂದೆ ... ಇಲ್ಲದ ... (wines)ಗಳನ್ನು ... ತಯಾರಿಸಬಾರದೆಂದು ಮುಂಬಯಿ ಸರಕಾರವು ಒಂದು ಅಜ್ಞೆಯನ್ನು ಹೊರಡಿಸಿದೆ. ಇಂತಹ ... ಗಳನ್ನು ತಯಾರಿಸಲಿಚ್ಛಿಸುವವರೂ ಈಗಾಗಲೇ ಅವನ್ನು ತಯಾರಿಸುತ್ತಿರುವ ವ್ಯಕ್ತಿಗಳೂ ಸಂಸ್ಥೆಗಳೂ ... ಜಿಲ್ಲೆಯ ಜಿಲ್ಲಾಧಿಕಾರಿಗೆ ಅರ್ಜಿ ಮಾಡಿ ಪರವಾನಿಗೆಗಳನ್ನು ಪಡೆಯಬೇಕಾಗಿ ಸರಕಾರವು ಜಾಹೀರ ಪಡಿಸಿದೆ.

೧೯೪೮ರ ಮುಂಬಯಿಯ ಭೂಮಿಯನ್ನು ಪಡೆಯುವ ಕಾಯ್ದೆಯ (Land Requisition) ಕಾಯಿದೆಯ ಕಲಮು ೫ರ (೧), (೨), (೩), (೪)ನೇ ಉಪಕಲಮುಗಳನ್ನೂ ಹಾಗೂ ೧೧ ೧೨, ೧೪ನೇ ಕಲಮುಗಳನ್ನೂ ... ಸರಕಾರಕ್ಕೆ ಕೊಟ್ಟ ಅಧಿಕಾರಗಳನ್ನು ... (ಇನ್ನು ಕೆಲವು ಅಧಿಕಾರಗಳಿಂದ) ... ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ (ತಮ್ಮ ಅಧಿಕಾರ ಕ್ಷೇತ್ರದಲ್ಲಿ) ... ಮುಂಬಯಿ ಸರಕಾರವು ವಿಧಿಸಿದೆ.

ಬೇಸಾಯ ಮತ್ತು ಅರಣ್ಯ ಖಾತೆಯ ಮಂತ್ರಿಗಳು ... ಕಾರ್ಯಕ್ರಮದಲ್ಲಿ, ... ಕಾರ್ಯವು ... ಗಜನಿಯನ್ನು ... ಮಂತ್ರಿಗಳು ಈ ಗಜನಿಯನ್ನು ... ಗಜನಿಯು ... ಎಕರೆ ಹೊಲಗಳು ... ಕೃಷಿ ... ಯೋಜನೆಯನ್ನು ಮಾಡುವ ... ಮಂತ್ರಿಗಳಿಂದ ... ಯಿಂದ ಈ ಗಜನಿ ... ಗಳನ್ನು ನೋಡಲೆಂದು ಹೊರಟು ಹೋಗಿದ್ದರು. ಅವರ ... ಮಂತ್ರಿಗಳು ... ಜನರ ಅಪೇಕ್ಷೆಯಂತೆ ... ಗಜನಿಯನ್ನು ... ಗಜನಿಯು ... ವರೆಗೆ ... ಹೋಗಬಲ್ಲದೇ ಎಂದು ... ದರಿಂದ ಗಜನಿಯು ವರೆಗೆ ಮಾರ್ಗವಿಲ್ಲೆಂದು ... ಬಂದೊಡನೆ ಗಜನಿಯು ... ಬಹಳ ... ಕಂಡುಕೊಂಡು (!) ಮುಂದೆ ... ಗಜನಿಗಳನ್ನು ನೋಡಲೆಂದು ಬಂದ ... ಮಂತ್ರಿ ... ಮಾರ್ಗದ ಮೇಲಿಂದಲೇ ಗಜನಿಗಳನ್ನು ನೋಡಿದ್ದರು! "ಗಜನಿಗಳ ... " ಎಂದು ಅವರು ಉದ್ಗರಿಸಿದ್ದರಂತೆ! ಮಂತ್ರಿ ಉಪಮಂತ್ರಿಗಳ ... ಅವರ ... ಜನತೆಯ ... ಈ ಅಧಿಕಾರಿಗಳ ... ಉದ್ಧಾರದ ... ಫಲ ... ಯೋಜನೆ ಆಗುವದೆಂದು ನಂಬುವದಾದರೂ ಹೇಗೆ?

ಜಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡಿದ ಫ್ರೋಂಡು ... ಕಾನಭೋಳೆ ... ಆದ ನಾನು ... ಜನರಿಗೆ ಈ ನೋಟೀಸಿನ ... ಕೊಡುವದೇನೆಂದರೆ —

ನನ್ನ ತಂದೆ ... ಭಂಗಿ ... ಒಂದು ... ಹುಚ್ಚನಾಗಿದ್ದು ... ಹೊರಟು ಹೋಗಿದ್ದಾನೆ ... ನನ್ನ ಹಿರೀ ... ತಂದೆಗೆ ... ನನ್ನ ... ಆಸ್ತಿಗಳನ್ನು ... ನನ್ನ ತಂದೆಗೆ ನಾನೊಬ್ಬನೇ ... ನನ್ನ ತಂದೆ ... ನಾನೇ ... ಈಗ ನನ್ನ ತಂದೆಯವರು ... ನನಗೆ ... ನನ್ನ ತಂದೆಯು ... ಗಳನ್ನು ... ನನ್ನ ... ನನ್ನ ತಂದೆಗೆ ಅಧಿಕಾರವಿರುವದಿಲ್ಲ ... ವದಕ್ಕಾಗಿ ಈ ಮೂಲಕ ಜಾಹೀರ ಮಾಡುತ್ತೇನೆ.

ಹಳದೀಪುರ ತಾ ೬-೧-೧೯೪೯

ಫ್ರೋಂಡು ಜಾಯಾ ಕಾದಬೈಲ, ಹಳದೀಪುರ

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ.

ನಮ್ಮ ... ಮುಂದಿನಂತೆ ... ಕಾಶೀ, ಪ್ರಯಾಗ, ಗಯಾ ... ಗಳನ್ನು ಯಾತ್ರಿಕರ ... ಸ್ವತಃ ... ಬಿಟ್ಟು ... ಯಾತ್ರೆಗೆ ... ಸಾಮಾನುಗಳು ... ದರದಲ್ಲಿ ... ಸಿಗುವದು.

ಗೋಕರ್ಣಕರ ಗಣಪತಿ ವಾಸುದೇವ ಭಟ್ಟ,
ಪತ್ಥರಗಲ್ಲಿ, ಬನಾರಸ.

ಸಾದರ ಸ್ವೀಕಾರ ಮತ್ತು ವಿಮರ್ಶೆ.

ಸೇವಾದಲದ ರೌಪ್ಯ-ಮಹೋತ್ಸವ ಸಂಚಿಕೆ-

ಡಾ॥ ನಾರಾಯಣರಾವ ಹರ್ಡೀಕರರು ೧೯೨೩ರಲ್ಲಿ ಮುಂದಾಗಿ ಸ್ಥಾಪಿಸಿದ ಹಿಂದುಸ್ಥಾನಿ ಸೇವಾದಲದ ಕಾರ್ಯವು ಹಿಂದೀ ಸ್ವಾತಂತ್ರ್ಯ-ಸಮರದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲ್ಪಡಲು ಅರ್ಹವಿರುವುದೆಂಬುದಕ್ಕೆ ಸಂದೇಹವಿಲ್ಲ. ೧೯೩೦-೩೧ರ ಸತ್ಯಾಗ್ರಹದಲ್ಲಿ ಕಂಡು ಬರುತ್ತಿದ್ದ ವ್ಯವಸ್ಥೆಯೂ ಸಂಘಟನೆಯೂ ೧೯೨೧-೨೨ರ ಸತ್ಯಾಗ್ರಹದಲ್ಲಿ ಕಂಡುಬರುತ್ತಿದ್ದಿಲ್ಲೆಂಬುದನ್ನು ಯಾರೂ ಒಪ್ಪುವರು. ೧೯೩೦-೩೧ರ ಸತ್ಯಾಗ್ರಹದ ಆಂದೋಲನದೊಳಗಿನ ಸಂಘಟಿತ ಕಾರ್ಯದ ಶ್ರೇಯಸ್ಸು ಹಿಂದುಸ್ಥಾನಿ ಸೇವಾದಲದಲ್ಲಿ ಸಂಘಟನೆಯ ಮರ್ಮವನ್ನು ಕಲಿತು, ಭಾರತದ ಬೇರೆ ಬೇರೆ ಭಾಗಗಳಲ್ಲಿ ರಾಷ್ಟ್ರೀಯ ವೃತ್ತಿಯ ಸ್ವಯಂಸೇವಕರ ಹಾಗೂ ಸ್ವಯಂಸೇವಿಕೆಯರ ದಲಗಳನ್ನು ಸಂಘಟಿಸಿ ಜನತೆಯಲ್ಲಿ ವಿಶೇಷವಾಗಿ ಯುವಕರಲ್ಲಿ ನಿರ್ಮಿಸಿದ ಶಿಸ್ತಿನ ಶೌರ್ಯ ವೃತ್ತಿಗೆ ಸಲ್ಲಬೇಕೆಂದು ನಮ್ಮ ಪ್ರಾಮಾಣಿಕ ಅಭಿಪ್ರಾಯವಿದೆ. ಡಾ॥ ಹರ್ಡೀಕರರ ಸೇವಾದಲಗಳು ನಿಜವಾಗಿಯೂ ಅಹಿಂಸಾತ್ಮಕ ಸೈನಿಕ ಪಥಕಗಳಿದ್ದವೆಂದು ಹೇಳಬಹುದು. ೧೯೨೩ರಿಂದ ೧೯೩೧ರ ವರೆಗೆ ಹಿಂದುಸ್ಥಾನಿ ಸೇವಾದಲವು, ಅದಕ್ಕೆ ಕೊಂಗ್ರೆಸ್ಸಿನ ಪ್ರೋತ್ಸಾಹ ಮತ್ತು ಆಶೀರ್ವಾದದ ಬೆಂಬಲವಿದ್ದಿತ್ತಾದರೂ ಸ್ವತಂತ್ರವಿತ್ತು. ೧೯೩೧ರ ಮಳೆಗಾಲದಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳವು ಸೇವಾದಲವನ್ನು ತನ್ನ ಅಂಕೆಯಲ್ಲಿ ತಕ್ಕೊಳ್ಳಬೇಕೆಂದು ತೀರ್ಮಾನಿಸಿ, ಅದರ ಪುನರ್ರಚನೆಯ ಯೋಜನೆಯನ್ನೂ ಮಾಡಿತು. ಆದರೆ ಈ ಯೋಜನೆ ಕಾರ್ಯರೂಪದಲ್ಲಿ ಇಳಿಯುವ ಮೊದಲೇ ೧೯೩೨ರ ಕ್ರಾಂತಿಯುಗಾದಿಯ ದಿನವೇ ೧೯೩೨-೩೩ರ ಸತ್ಯಾಗ್ರಹ ಸಮರಾರಂಭವಾಗಿ ಸೇವಾದಲದ ಎಲ್ಲ ಶಾಖೆಗಳೂ ಶಿಬಿರಗಳೂ ಕಾನೂನಬಾಹ್ಯ ಸಂಸ್ಥೆಗಳಾದವು. ಮುಂದೆ ಸತ್ಯಾಗ್ರಹವು ನಿಂತು ಕೊಂಗ್ರೆಸ-ಸಮಿತಿಗಳು ಕಾನೂನಮಾನ್ಯ ಸಂಸ್ಥೆಗಳಾಗಿ ಕಾರ್ಯವನ್ನಾರಂಭಿಸಿದರೂ, ಆಳರಸರ ವಿಶೇಷ ಅವಕೃಪೆಗೆ ಗುರಿಯಾದ ಸೇವಾದಲವು ೧೯೩೭ರಲ್ಲಿ ಕೊಂಗ್ರೆಸ್ಸು ಅಧಿಕಾರ ಸ್ವೀಕಾರ ಮಾಡಿ ಪ್ರಾಂತಿಕ ರಾಜ್ಯಭಾರವನ್ನು ಕೈವಶ ಪಡೆಕೊಳ್ಳುವ ವರೆಗೂ ಕಾನೂನಬಾಹಿರ ಸಂಸ್ಥೆಯಾಗಿ ಉಳಿಯಿತು! ಈ ದೀರ್ಘಕಾಲೀನ ಮಧ್ಯಂತರದಲ್ಲಿ ಸೇವಾದಲದ ದಲಪತಿಗಳೂ ನಾಯಕರೂ ಚದರಿ ಹೋಗಿ, ಬೇರೆ ಬೇರೆ ಉದ್ಯೋಗಗಳನ್ನು ಹಿಡಿದರು. ಅದರಿಂದ ಸೇವಾದಲದ ಪುನಃ ಘಟನೆಯಾಗಲಿಲ್ಲ. ಆದರೂ ೧೯೪೨ರ ಕೊನೆಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಸೇವಾದಲದವರು ಸಮಗ್ರ ಭಾರತವನ್ನೇ ಬೆರಗಿಸಿದ ಶೌರ್ಯ-ವೀರ್ಯಗಳ ಪ್ರವೃತ್ತಿಯ ಜನತೆಯನ್ನು ಆಳರಸರ ಆಹ್ವಾನವನ್ನು ಯಶಸ್ವಿಯಾಗಿ ಎದುರಿಸಲು ಅಣಿಗೊಳಿಸಿದವೆಂಬುದನ್ನು ಮರೆಯತಕ್ಕದ್ದಲ್ಲ. ಇದೇ ಕಳೆದ ಡಿಸೆಂಬರ ತಾ. ೨೮ಕ್ಕೆ ಆ ಸೇವಾದಲ ಸಂಸ್ಥೆಯ ರೌಪ್ಯ ಮಹೋತ್ಸವ ಯಾನೆ ಬೆಳ್ಳಿಹಬ್ಬವಾಯಿತು. ಈ ಸಮಯದಲ್ಲಿ ಆ ಸೇವಾದಲದ ೨ ಉಜ್ವಲ ತಾರೆಗಳಾದ ಶ್ರೀಮಾನ್ ಬಿಂದುಮಾಧವ ಬಾರ್ಕೆ ಮತ್ತು ಶ್ರೀಮಾನ್ ರಾಮಚಂದ್ರ ಕಾಂಗುಡಕರ ಇವರು ತನ್ನ [illegible] ಮೇಲ್ಕಾಣಿಸಿದ ಸಾದರ ಸಂಚಿಕೆಯನ್ನು ಹೊರಡಿಸಿ, ಡಾ॥ ಹರ್ಡೀಕರರೂ ಅವರ ಸಹೋದ್ಯೋಗಿಗಳೂ ಶಿಸ್ತಿನಿಂದ ಅವಿಶ್ರಾಂತ ದುಡಿದು ಸಂಘಟಿಸಿದ ಸೇವಾದಲದ ಚಿರಸ್ಮರಣೀಯ ಕಾರ್ಯದ ನೆನಪು ಜನತೆಗೆ ಮಾಡಿಕೊಟ್ಟಿರುತ್ತಾರೆ. ೧೨೭ ಪುಟಗಳುಳ್ಳ ಈ ಪುಸ್ತಿಕೆಯಲ್ಲಿ ಸೇವಾದಲದ ಸಂಕ್ಷಿಪ್ತ ಇತಿಹಾಸವೂ ಸೇವಾದಲವು ಮಾಡಿದ ವಿವಿಧ ಕಾರ್ಯದ ಬಗ್ಗೆ ಮತ್ತು ದೇಶಸೇವೆಯ ಬಗ್ಗೆ ಸೇವಾದಲದಿಂದ ರಾಷ್ಟ್ರಕಾರ್ಯದ ಸ್ಫೂರ್ತಿ ಪಡೆದ ಹಲವಾರು ದೇಶಸೇವಕರ ಲೇಖನಗಳೂ ಪ್ರಕಟವಾಗಿವೆ. ಅನೇಕ ಛಾಯಾಚಿತ್ರಗಳಿಂದ ಪುಸ್ತಿಕೆಯ ಸೌಂದರ್ಯವೂ ಉಪಯುಕ್ತತೆಯೂ ಮಿಗಿಲಾಗಿದೆ. ಹುಬ್ಬಳ್ಳಿಯ "ಜಯಹಿಂದ" ಪತ್ರಿಕೆಯ ಕಚೇರಿಯವರು ಇದನ್ನು ಪ್ರಕಟಿಸಿ ಕನ್ನಡ ನಾಡಿಗೊಂದು ಅಮೂಲ್ಯ ಕಾಣಿಕೆಯನ್ನಿತ್ತಿದ್ದಾರೆ.

ಸೋವನೀ (ಸಾಯನ್ಸ-ಪ್ರಯೋಗಾಲಯಗಳಿಗೆ ಬೇಕಾಗುವ ಸಾಮಾನು ತಯಾರಿಸುವರು) ೨೩೯, ಗಿರ್ಗಾಂವ ರೋಡ, ಮುಂಬಯಿ ೪ ಇವರ ಹೊಸ ವರ್ಷದ ಕೆಲೆಂಡರ:— ಸದರಿ ಕೆಲೆಂಡರು ಕೆಂಪು, ಹಳದಿ, ನೀಲಿ ಮತ್ತು ಕಪ್ಪು ಹೀಗೆ ೪ ಬಣ್ಣಗಳಿಂದ ಅಚ್ಚು ಹಾಕಲ್ಪಟ್ಟಿರುತ್ತದ್ದು ಬಹಳ ಚಿತ್ತಾಕರ್ಷಕವಾಗಿದೆ

ಪತ್ರಿಕಾ-ಪ್ರಕಟನೆ

೧೯೪೮ರ ಅರಳೆ ಬಟ್ಟೆಯ ವ್ಯಾಪಾರಗಳಿಗೆ ಪರವಾನೆ ಕೊಡುವ ಆಜ್ಞೆಯ ಎಲ್ಲ ಅಂಶಗಳಿಂದ, ಲಾಡಿ (ಟ್ರೇಪ), ಪರದೆ (ಟೇಪ್ಸ್) ಛತ್ರಿ ಕೊಡೆಗಳ ಅರಿವೆ, ಕೆನ್ವಾಸ, ನೀರು ಮುಂತಾದ್ದು ಸೋರುವ ವಸ್ತ್ರ, ಚಿಂದಿಗಳು, ಗಾಯದಪಟ್ಟಿ (ಬೆಂಟ,) ಓಂಜಾಳ ಅರಿವೆ (ಗೌಜ) ಬೆಂದೇಜ ಮಾಡುವ ವಸ್ತ್ರ ಮತ್ತು ನೇವಾರ ಇವುಗಳ ವ್ಯಾಪಾರ ಮಾಡುವವರನ್ನು ಹೊರಪಡಿಸುವ ಆಜ್ಞೆಯೊಂದನ್ನು ಮುಂಬಯಿ ಸರಕಾರವು ಹೊರಡಿಸಿದೆ. ಕಾರಣ ಪರವಾನೆಯಿಲ್ಲದ ಯಾರೂ ಈ ಜಾತಿಗಳ ಬಟ್ಟೆಗಳನ್ನು ಮಾರಬಹುದು. ತಾ ೧೮-೧೨-೧೯೪೮ರ ಮೊದಲು ಗಂಟು ಕಟ್ಟಿದ ಈ ಜಾತಿಯ ಬಟ್ಟೆಗಳ ಸಂಗ್ರಹ ತಾ. ೩೦-೧೧-೧೯೪೮ನೇಗೆ ಉಳ್ಳವರು ಕೂಡ ಯಾವದೇ ನಿರ್ಬಂಧವಿಲ್ಲದೆ ತಮ್ಮ ಗಿರಾಕಿಗಳಿಗೆ ಅವನ್ನು ಮಾರಲಿಕ್ಕೆ ಯೋಗ್ಯಂತಲೂ ಸರಕಾರವು ನಿರ್ಣಯಿಸಿದೆ.

(ಜಿಲ್ಲಾಧಿಪರ ಆಪೇಕ್ಷೆಯಂತೆ ಪ್ರಕಟಿಸಿದ್ದು.)

ನಮ್ಮಲ್ಲಿ ಕತ್ತದ ಚಕ್ರಾ ಹುರಿ ಮತ್ತು ಬಾವಿ ಹಗ್ಗಗಳು ಯೋಗ್ಯ ದರದಲ್ಲಿ ಸಿಗುತ್ತವೆ.

ಚೇಅರಮನ್, ಕತ್ತದ ಸೊಸೈಟಿ ಲಿಮಿಟೆಡ್.
ಹೊನ್ನಾವರ (ಉ.ಕ.)

ಪತ್ರಿಕಾ-ಪ್ರಕಟನೆ.

ಮುಂಬಯಿಯ ಪ್ರಾಂತಿಕ ಟೆಕ್ಸಟೈಲ ಕಂಟ್ರೋಲರರು ತಾ. ೧೮-೧೨-೧೯೪೮ಕ್ಕೆ ಹೊರಡಿಸಿದ ಪಿ. ಟಿ. ಸಿ./೬೪೨ನೇ ಪ್ರಕಟನೆಯತ್ತ ಜನರ ಲಕ್ಷವನ್ನು ಸೆಳೆಯಲಾಗುತ್ತಿದೆ. ಸದರಿ ಪ್ರಕಟನೆಯಂತೆ—

(೧) ಕೈಮಗ್ಗದ ಅರಿವೆ ಮತ್ತು

(೨) ನೂಲು ತೆಗೆಯುವ ಯಂತ್ರ (Plant) ಇಲ್ಲದ ಉತ್ಪಾದಕನು ತಯಾರಿಸಿದ ಅರಿವೆ

ಇವುಗಳ ಸಂಬಂಧದಲ್ಲಿ ೧೯೪೮ರ ಅರಿವೆಯ ನೂಲು-ಬಟ್ಟೆಗಳ (ಸಾಗಾಟದ ನಿಯಂತ್ರಣದ) ಆಜ್ಞೆಯ ೩ (೨) ನೇ ಕಲಮಿನನ್ವಯ ವಿಶೇಷ ಸಾಗಾಟದ (transport) ಅಪ್ಪಣೆ-ಚೀಟಿಗಳನ್ನು ಕೊಡುವ ಅಧಿಕಾರವನ್ನು

(೧) ಎಲ್ಲ ಜಿಲ್ಲಾ ಮೆಜಿಸ್ಟ್ರೇಟರಿಗೂ,

(೨) ಸಾಂಗಲಿಯೊಳಗಿನ ಮುಖ್ಯ ಅಧಿಕಾರಿಗೂ,

(೩) ಅಹಮದಾಬಾದನಲ್ಲಿರುವ ಡೆಪ್ಯುಟಿ ಪ್ರಾಂತಿಕ ಟೆಕ್ಸಟೈಲ ಕಂಟ್ರೋಲರರಿಗೂ,

(೪) ಸೊಲ್ಲಾಪುರದಲ್ಲಿರುವ ಅಸಿಸ್ಟಂಟ ಟೆಕ್ಸಟೈಲ ಕಂಟ್ರೋಲರರಿಗೂ ಕೊಡಲಾಗಿದೆ.

೨. (೧) ಹಿಂದುಸ್ಥಾನದ ಹೊರಗಿಂದ ತರಿಸಿದ ನೂಲು ಮತ್ತು ಅರಿವೆಯ ಹಾಗೂ

(೨) ತಯಾರಿಸಿದ (ready made) ಬಟ್ಟೆಗಳ ನಿರ್ಯಾತಕ್ಕೆ ಬೇಕಾಗುವ ಅಪ್ಪಣೆಚೀಟಿಗಳನ್ನು (ಈ ಹಿಂದಿನಂತೆ) ಮುಂಬಯಿಯ ಪ್ರಾಂತಿಕ ಟೆಕ್ಸಟೈಲ ಕಂಟ್ರೋಲರರೇ ಕೊಡುವರು.

೩. ಅದೇ ರೀತಿ ಕೈಮಗ್ಗದ ಅರಿವೆಯನ್ನೂ, ನೂಲು ತೆಗೆಯುವ ಯಂತ್ರವಿಲ್ಲದ ಉತ್ಪಾದಕನು ತಯಾರಿಸಿದ ಅರಿವೆಯನ್ನೂ ಬೃಹನ್-ಮುಂಬಯಿಯಿಂದ ಹೊರಗೆ ನಿರ್ಯಾತ ಮಾಡಲು ಅವಶ್ಯವುಳ್ಳ ಅಪ್ಪಣೆ-ಚೀಟಿಗಳನ್ನು ಕೂಡ (ಹಿಂದಿನಂತೆ) ಮುಂಬಯಿಯ ಪ್ರಾಂತಿಕ ಟೆಕ್ಸಟೈಲ ಕಂಟ್ರೋಲರರೇ ಕೊಡುವರು.

(ಜಿಲ್ಲಾಧಿಪರ ಆಪೇಕ್ಷೆಯಂತೆ ಪ್ರಕಟಿಸಿದ್ದು.)

SALES TAX NOTICE.

ಮಾರಾಟಗಳ ಮೇಲಿನ ಕರದ ವಿಷಯದ ನೋಟೀಸು.

ಮುಂಬಯಿ ಪ್ರಾಂತದಲ್ಲಿಯ ಹಾಗೂ ಸೇರಿಕೊಂಡ ಸಂಸ್ಥಾನಗಳಲ್ಲಿಯ ವ್ಯವಹಾರದ [illegible] ಸ್ಥಳಗಳ ಬಗ್ಗೆ ಯಾವನೇ **ನೋಂದಿಸಲ್ಪಡದಿದ್ದ ವ್ಯಾಪಾರಸ್ಥನ** ಒಟ್ಟು ಉತ್ಪನ್ನವು **ಸನ್ ೧೯೪೮ನೇ ಇಸವಿಯ ಏಪ್ರಿಲ ತಿಂಗಳ ೧ನೇ ತಾರೀಖಿನಿಂದ ಸನ್ ೧೯೪೮ನೇ ಇಸವಿಯ ಡಿಸೆಂಬರ ತಿಂಗಳ ೩೧ನೇ ತಾರೀಖಿನ ವರೆಗಿನ** ಅವಧಿಯಲ್ಲಿ—

(೧) ಆಮದು ಮಾಡುವವನ, ತಯಾರ ಮಾಡುವವನ ಅಥವಾ ತಯಾರು ಮಾಡುವ ಕೃತಿಯನ್ನು ಮಾಡುವವನ ಬಾಬತಿನಲ್ಲಿ ೧೦,೦೦೦ ರೂಪಾಯಿಗಳಿಗೆ,

ಅಥವಾ

(೨) ಇತರ ಯಾವನೇ ವ್ಯಾಪಾರಸ್ಥನ ಬಾಬತಿನಲ್ಲಿ ೩೦,೦೦೦ ರೂಪಾಯಿಗಳಿಗೆ:—

ಮೀರಿದರೆ ಅವನು **ಸನ್ ೧೯೪೯ನೇ ಇಸವಿಯ ಮಾರ್ಚ ತಿಂಗಳ ೧ನೇ ತಾರೀಖಿನಿಂದ** ತನ್ನ ಮಾರಾಟಗಳ ಮೇಲೆ **ಮಾರಾಟಗಳ ಮೇಲಿನ ಕರವನ್ನು ಕೊಡಲು ಪಾತ್ರನಾಗುವನು.** ಮತ್ತು ಅವನು **ಸನ್ ೧೯೪೯ನೇ ಇಸವಿಯ ಜನವರಿ ತಿಂಗಳ ೩೧ನೇ** ತಾರೀಖಿನ ಮುಂಚೆ ತನ್ನ [illegible] ಜಿಲ್ಲೆಯ ಸೇಲ್ಸ ಟ್ಯಾಕ್ಸ ಅಧಿಕಾರಿಯ ಕಡೆಗೆ ೨ನೇ ನಮೂನೆಯಲ್ಲಿ **ನೋಂದಣಿಯ ಸಲುವಾಗಿ ಅರ್ಜಿಯನ್ನು ಮಾಡತಕ್ಕದ್ದು**

ಯಾವನ ರೋಖ ಉತ್ಪನ್ನವು ಯಾವದೊಂದು ವರ್ಷದಲ್ಲಿ ೧೦,೦೦೦ ರೂಪಾಯಿಗಳಿಗೆ ಮೀರದಿದ್ದರೂ ಅಥವಾ ಮೀರುವ ಸಂಭವವಿರುವದಿದ್ದರೂ ಅಂಥ ಯಾವನೇ ವ್ಯಾಪಾರಸ್ಥನು ಸಹ ಐಚ್ಛಿಕವಾಗಿ ನೋಂದಿಸಿಕೊಳ್ಳಬಹುದು.

ತಾ. ೧-೧೨-೧೯೪೮.

ವ್ಹಿ. ಎಲ್. ಗಿಡವಾನಿ,
ಡೆಪ್ಯುಟಿ ಕಮೀಶನರ ಆಫ್ ಸೇಲ್ಸ ಟ್ಯಾಕ್ಸ,
ಮುಂಬಯಿ ಪ್ರಾಂತ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ, (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ" ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಬೇರೆಊರಿನವರಿಗೆ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ವ್ಹಿ. ಪಿ. ಯಿಂದ ಹಣ ತರಿಸುವವರು ವ್ಹಿ. ಪಿ. ವೆಚ್ಚ ಅಧಿಕ ಕೊಡಬೇಕು.
ವರ್ಗಣಿ ಮುಂಗಡ ಕೊಡತಕ್ಕದ್ದು

Reg. No. B. 1270. Monday, 17-1-1949.

ಕಾನಡಾವೃತ್ತ

ವರ್ಷ ೪೦.] THE KANARA NEWS. [ಸಂಚಿಕೆ ೩೯.

ಕುಮಟೆ:- ಸೋಮವಾರ, ತಾ. ೧೭-೧-೧೯೪೯.

ಜಾಹೀರಾತುಗಳ ದರ:
ಸ್ಥಳವನ್ನು ... ೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಕಮ್ಮಿ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ವಿವಿಧ ವಿಷಯಗಳು

ಸದ್ಯದ ಕೊಂಗ್ರೆಸ ರಾಜ್ಯದಲ್ಲಿ ಎಲ್ಲೆಲ್ಲೂ ಸಮಾಜ-ಪುನರ್ಘಟನೆಯ ವಿಚಾರ ಕೇಳುತ್ತಿದೆ. ಸಮಾಜ ಧಾರಣೆಗೆ ಅತ್ಯವಶ್ಯವಿರುವ ಹೊಟ್ಟೆ-ಬಟ್ಟೆಗಳ ಪೂರೈಕೆಯ ವಿಚಾರವೊಂದನ್ನು ಬಿಟ್ಟು ಸಮಾಜ-ಸುಧಾರಣೆಯ ವಿವಿಧ ಪ್ರಕಾರಗಳು ನಡೆದಿವೆ. ದೇವಸ್ಥಾನಗಳಿಗೆ ಹೋಗುವ ಆತುರತೆಯಿಲ್ಲದ ನಾಸ್ತಿಕ ಜನಗಳಿಗೆ, ಹರಿಜನ ಮಂದಿರ ಪ್ರವೇಶದ ಕಾನೂನಿನಿಂದ, ದೇವದರ್ಶನದ ಸ್ಫೂರ್ತಿಯಾಗಿ ವಿವಾದಗಳುಂಟಾಗಿವೆ. "ಹರಿಜನ" ಪತ್ರಿಕರ್ತರು ಈ ಕುರಿತು ಎಚ್ಚರಿಕೆಯನ್ನೂ ಕೊಡಬೇಕಾಯಿತು. ಭಕ್ತಿಹೀನರಿಗೆ ದೇವಾಲಯದಲ್ಲಿ ಪ್ರವೇಶ ಮಾಡಲು ಅಧಿಕಾರವಿಲ್ಲೆಂದೂ, ಮಂದಿರ-ಪ್ರವೇಶದ ಕಾನೂನನ್ನು ಕಿಡಿಗೇಡಿ ಕೊಂಗ್ರೆಸ್ಸಿಗರು ಸಮಾಜದೊಳಗೆ ಕಲಹಗಳನ್ನುಂಟು ಮಾಡಲು ಉಪಯೋಗಿಸುವದು ಅಸಭ್ಯವೆಂದೂ "ಹರಿಜನ"ಕರ್ತರು ನಿಷೇಧಿಸಬೇಕಾಯಿತು. ಅದೇ ತರಗತಿಯ ಇನ್ನೊಂದು ಕಾನೂನನ್ನು ನಮ್ಮ ಮುಂಬಯಿಯ ಕೊಂಗ್ರೆಸ ಸರಕಾರವು ಘಟಿಸತೊಡಗಿದೆ. ಜಾತಿಯವರನ್ನು ಬಹಿಷ್ಕರಿಸುವದು ಶಾಸನಾರ್ಹವೆಂದೂ, ಯಾರೊಬ್ಬರಿಗೆ ಬಹಿಷ್ಕಾರ ಕೊಟ್ಟ ಜಾತಿಯ ಅಧಿಕಾರಿಗೂ ಬಹಿಷ್ಕಾರ ಹಾಕಬೇಕೆಂದು ಅಭಿಪ್ರಾಯ ಕೊಟ್ಟವರಿಗೂ ಅಪರಾಧಿಗಳೆಂದೆಣಿಸಿ ಅವರಿಗೆ ರೂ. ೧೦೦೦ಗಳ ತನಕ ದಂಡ ವಿಧಿಸಬೇಕೆಂದೂ ನಮ್ಮ ಮುಂಬಯಿ ಸರಕಾರವು ಹೊಸದೊಂದು ಕಟ್ಟಳೆ ಮಾಡುವ ಸಂಕಲ್ಪ ಮಾಡಿದೆ. ಬಹಿಷ್ಕಾರ ಹಾಕುವ ರೂಢಿಯಿರಬಹುದು, ಶ್ರಮವಿರಬಹುದು, ಪರಂಪರೆಯಿರಬಹುದು; ಆದರೆ ಅವನ್ನೆಲ್ಲ ಅಲಕ್ಷಿಸಿ, ಬಹಿಷ್ಕಾರವೆಂಬ ಶಬ್ದ ಬಂದ ಕೂಡಲೆ ಅದು ಶಾಸನಾರ್ಹವೆಂದು ಎಣಿಸಿ ಬಹಿಷ್ಕಾರ ಕೊಡುವದಕ್ಕೆ ಸಂಬಂಧಪಟ್ಟವರನ್ನು ಅಪರಾಧಿಗಳೆಂದು ಗಣಿಸಿ ಶಾಸನ ಮಾಡಬೇಕೆಂದು ಸರಕಾರದ ಅಭಿಪ್ರಾಯ. ಪ್ರಾಂತಿಕ ಸರಕಾರದ ಮನ್ನಣೆ ಪಡೆಯಬೇಕೆಂಬದೊಂದು ನಿರ್ಬಂಧವಿದೆ ಆದರೆ ಈಗಿನ ಪ್ರಾಂತಿಕ ಸರಕಾರದ ಪ್ರತಿಷ್ಠೆಯನ್ನೂ ಬುದ್ಧಿಶಾಲಿತ್ವವನ್ನೂ ನೆನೆದರೆ, ಶಾಂತತ್ವವಿಲ್ಲದೆ ಈ ಕಟ್ಟಳೆಯ ಪ್ರಯೋಗ ನಡೆಯುವದೆಂದೂ ಆಯಾ ಸಮಾಜಗಳಲ್ಲಿ ಪರಂಪರೆಯಿಂದ ನಡೆದಬಂದ ಸಭ್ಯತನ ನಷ್ಟವಾಗಿ ಪೋಲಿಗಳ ರಾಜ್ಯವಾಗುವದೆಂದೂ ಭಾವಿಸಲಡ್ಡಿಯಿಲ್ಲ.

ಜಾತಿಗಳ ಅಸ್ತಿತ್ವ ಅಷ್ಟೇನು ಗರ್ಹಣೀಯವಿರುವದಿಲ್ಲ. ಜಾತಿಯೆಂದರೆ ಅದೊಂದು ಸಂಸ್ಥೆಯೆಂದೂ ಅದಕ್ಕೆ ನಿಯಮಗಳುಂಟೆಂದೂ, ಆ ನಿಯಮಗಳನ್ನು ಪಾಲಿಸಿಕೊಂಡು ಸಮಾಜದ ವೈಶಿಷ್ಟ್ಯವನ್ನು ಕಾಪಾಡುವ ಸಂಸ್ಥೆಯೆಂದೂ ಮದ್ರಾಸ ಹೈಕೋರ್ಟಿನ ನ್ಯಾಯಮೂರ್ತಿಗಳಾಗಿದ್ದ ದಿವಂಗತ ಸರ್ ಶಂಕರನ್ ನಾಯರವರು ತಮ್ಮದೊಂದು ತೀರ್ಮಾನದಲ್ಲಿ ಹೇಳಿದ್ದಾರೆ. ಪ್ರತಿಯೊಂದು ಜಾತಿಗೆ ತನ್ನ ಅಂತರ್ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಹಕ್ಕು ಇರುವದಾಗಿ ಬೇರೆ ಬೇರೆ ನ್ಯಾಯಸ್ಥಾನಗಳು ಇವರಿಗೂ ಹೇಳುತ್ತ ಬಂದಿವೆ. ಜಾತಿಯ ಕಟ್ಟುಗಳನ್ನು ಪಾಲಿಸದಿದ್ದ ಜನರಿಗೆ ಜಾತಿಯವರು ಬಹಿಷ್ಕಾರ ಹಾಕಲು ಅಧಿಕಾರಪಟ್ಟಿರುವರೆಂದೂ ಅವು ಒಪ್ಪಿಕೊಂಡಿವೆ. ಜಾತಿಯ ನಿಯಮ-ನಿರ್ಬಂಧಗಳನ್ನೂ ಕಟ್ಟು-ಕಟ್ಟಳೆಗಳನ್ನೂ ಪಾಲಿಸದ ವ್ಯಕ್ತಿಗಳನ್ನು, ಜಾತಿಯಿಂದ ಬಹಿಷ್ಕರಿಸಲಾಗದಿದ್ದರೆ ಆ ಜಾತಿ ಸಂಸ್ಥೆಯನ್ನು ನಡಿಸಿಕೊಂಡು ಹೋಗುವದು ಅಶಕ್ಯವಾಗುವದು. ಜಾತಿ-ಸಂಸ್ಥೆಗಳನ್ನು ಮುರಿದು, ಸಕಲರೂ ಒಂದೇ ವರ್ಗದವರೆಂದು ಎಣಿಸಬೇಕೆಂಬ ವಿಚಾರ ಅನೇಕ ಮಹಾನುಭಾವರಲ್ಲಿ ನಡೆದದೆಂಬದು ನಿಜ. ಕೇಂದ್ರ ಸರಕಾರದಲ್ಲಿ ಸೇರಿದ ಶ್ರೀ|| ದಿವಾಕರ ರಂಗನಾಥರಾಯರು ವಿಧಿಮಂಡಳದಲ್ಲಿ ಜಾತಿಗಳನ್ನು ಮುರಿಯಬೇಕೆಂಬ ಅರ್ಥದ ಒಂದು ಗೊತ್ತುವಳಿ ಸೂಚಿಸಿದ್ದರೆಂದೂ, ಆ ಗೊತ್ತುವಳಿ ಮಂಜೂರಾಗುವ ಪೂರ್ವದಲ್ಲೇ ಹುಬ್ಬಳ್ಳಿಯ ದಿವಾಣಿ ಕೋರ್ಟಿನಲ್ಲಿ ಒಂದು ದಿನ ಸಾಕ್ಷಿ ಕೊಡುವಾಗ ರಾಯರ ತಮ್ಮ ಜಾತಿ ಹೇಳದೆ ಕಾಯಿದೆ ಭಂಗದ ಸತ್ಯಾಗ್ರಹವನ್ನಾಚರಿಸಿ, "ನುಡಿಯಂತೆ ನಡೆ, ನಡೆಯಂತೆ ನುಡಿ" ಎಂಬ ವಚನದಂತೆ ವರ್ತಿಸಿ ಪುರುಷಾರ್ಥ ಸಾಧಿಸಿದರೆಂದೂ ಹುಬ್ಬಳ್ಳಿಯ ಪತ್ರಿಕೆಗಳಲ್ಲಿ ಹಿಂದೊಮ್ಮೆ ಪ್ರಕಟವಾಗಿತ್ತು! ಯಾವದೊಂದು ಕಟ್ಟಳೆಯನ್ನು ಸಂಘಟಿತ ಸರಕಾರದ ಕಡೆಯಿಂದ ಮಾನ್ಯ ಮಾಡಿಸಿಕೊಂಡು ರೂಢಗೊಳಿಸಿಕೊಳ್ಳುವ ಮೊದಲು ಅವುಗಳನ್ನು ಈ ಸರಿ ಕಾಯದೆ-ಭಂಗದ ಮಾರ್ಗದಿಂದ ಅಮಲಿನಲ್ಲಿ ತರಲಾರಂಭಿಸಿದರೆ, ಕಲಿಗೊಂಡು ದುರ್ಬುದ್ಧಿಯಾಗಿ ಅರಾಜಕತೆಯುಂಟಾಗುವದು ಎಂಬುದನ್ನು ಈ ಮಹಾನುಭಾವರು ಮರೆಯುತ್ತಾರೆ! ಶ್ರೀ|| ದಿವಾಕರ ರಂಗನಾಥರಾಯರಂಥವರು ಇಂಥ ಅವಿಚಾರಕ್ಕೀಡಾದದ್ದು ವಿಷಾದಕರ. ಜಾತಿ ಬೇಡಾದವರು, ಜಾತಿಯ ನಿಯಮಗಳನ್ನು ಪಾಲಿಸಲಾಗದವರು, ಜಾತಿ ಬಿಟ್ಟು ಹೊರಗೆ ಹೋಗಲಿಕ್ಕೆ ಯಾರದೂ ಆಕ್ಷೇಪವಿಲ್ಲ. ಜಾತಿ-ಸಂಸ್ಥೆಯಿಂದ ಸಮಾಜಕ್ಕೆ ಹಿತವಿರುವದೆಂದೂ, ಅದನ್ನು ಸರಿಯಾಗಿ ಕಾಪಾಡಿಕೊಂಡರೆ ಸಮಾಜದ ಧಾರಣೆಯಾಗಿ, ಸಮಾಜದ ಉತ್ಕರ್ಷವಾಗುತ್ತದೆಂದೂ ಎಣಿಸುವ ವಿಚಾರವಂತರೂ ಅಗಣಿತರಿದ್ದಾರೆ. ಸರ ಶಂಕರನ್ ನಾಯರರು ತಮ್ಮ ತೀರ್ಪಿನಲ್ಲಿ ಹೇಳಿದಂತೆ, ರೂಢಿಯಿಂದ ನಡೆದು ಬಂದ, ನಿಯಮಗಳಂತೆ ನಡೆಯುವ ಜನ-ಸಮುದಾಯಕ್ಕೆ ಜಾತಿಯೆಂದು ಹೇಳುತ್ತಾರೆ. "A caste may be taken to be a combination of a number of persons governed by a body of usages." ವಿವಾಹ, ಉದ್ಯೋಗ, ಧಾರ್ಮಿಕ ವಿಧಿ, ಆಚಾರ-ವಿಚಾರ ಮೊದಲಾದವುಗಳ ಸಂಬಂಧದಲ್ಲಿ ತಮಗೆ ಸರಿ ಕಂಡ ನಿಯಮಗಳನ್ನು ಮಾಡಿ, ಅವುಗಳನ್ನು ತಮ್ಮವರಿಂದ ಪಾಲಿಸಿಕೊಳ್ಳುವದು ಜಾತಿ-ಸಂಸ್ಥೆಯ ಉದ್ದೇಶವಿರುತ್ತದೆ. ವ್ಯಕ್ತಿಗಿಂತ ಸಂಸ್ಥೆ ಮೇಲೆಂಬುದು ನಿರ್ವಿವಾದ. ಸಂಸ್ಥೆಗಳನ್ನು ಪ್ರೋತ್ಸಾಹಿಸಬೇಕೆಂಬುದಾಗಿ ಸದ್ಯದ ಸರಕಾರದ್ದೂ ಅಭಿಪ್ರಾಯವಿದೆ. ಜಾತಿ-ಸಂಸ್ಥೆ ಸರಕಾರದಲ್ಲಿ ರಜಿಸ್ಟರ ಆದ ಸಂಸ್ಥೆಯು ಅಲ್ಲ ನಿಜ. ರಜಿಸ್ಟರ ಆಗದಿರುವ ಸಂಸ್ಥೆಗಳೆಲ್ಲ ನಾಶ ಹೊಂದಬೇಕೆಂದು ಸರಕಾರದ್ದು ಮನೀಷೆಯು ಇರುತ್ತದಾದರೆ ಆ ಪ್ರಕಾರ ಒಂದು ರಾಜಶಾಸನವನ್ನು ಸರಕಾರವು ಹೊರಡಿಸಬಹುದಾಗಿತ್ತು! ಆದರೆ "Freedom of Association" ಯಾನೆ ಸಂಘ-ಸ್ವಾತಂತ್ರ್ಯ ಪ್ರಜೆಗಳ ಮೂಲಭೂತ ಹಕ್ಕೆಂದೂ ಅದನ್ನು ಹಿಂದುಸ್ಥಾನದ ಪ್ರಜಾ-ರಾಜ್ಯವು ಮನ್ನಿಸುವದೆಂದೂ ಘಟನಾ ಸಮಿತಿಯು ಸದ್ಯಕ್ಕೇ ನಿರ್ಧರಿಸಿದ್ದುಂಟು. ಜಾತಿ-ಶಬ್ದವಾಚ್ಯ ಜನ-ಸಮುದಾಯಗಳನ್ನು ಸಂಘ-ಸ್ವಾತಂತ್ರ್ಯದ ಮೂಲಭೂತ ಹಕ್ಕಿಗೆ ಎರವು ಮಾಡಲಿಕ್ಕೆ ಬರಲಾರದು. ಪ್ರತಿಯೊಂದು ಸಂಘಕ್ಕೆ ನಿಯಮಗಳುಂಟು. ಅವನ್ನು ಉಲ್ಲಂಘಿಸಿದವರಿಗೆ ಶಾಸನ ಮಾಡಬರುತ್ತದೆ. ಸಂಸ್ಥೆಯ ನಿಯಮಗಳನ್ನು ಉಲ್ಲಂಘಿಸುವವರಿಗೆ ಸಂಸ್ಥೆಯಿಂದ ಹೊರಪಡಿಸುವ ಅಧಿಕಾರ ಪ್ರತಿಯೊಂದು ಸಂಸ್ಥೆಗೆ ಸ್ವಾಭಾವಿಕವಾಗಿ ಉಂಟು. ಆ ಹಕ್ಕು ಇಲ್ಲದ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು: **ಕುಂದಾಪುರ, ದ. ಕ.**

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ ರೂ. 3/-ರಂತೆ ಬಡ್ಡಿ.

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸು ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೨೭-೭-೧೯೪೮

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡ್ಯಾರೆಕ್ಟರ.

ಪ್ಪರೆ ಯಾವದೇ ಸಂಸ್ಥೆ ಎಂದೂ ನಡೆಸುವಂತಿಲ್ಲ ಮತ್ತು ಜಾತಿ ಬೇಡಾದವರಿಗೆ, ಜಾತಿಯ ನಿಯಮಗಳನ್ನು ಉಲ್ಲಂಘಿಸುವವರಿಗೆ ಬಹಿಷ್ಕಾರ ಕೊಟ್ಟರೆ ಅನ್ಯಾಯವಾಗುವಂತಿಲ್ಲ ಯಾವದೇ ನೀತಿಯ ಭಂಗವೂ ಆಗುವಂತಿಲ್ಲ. ವಸ್ತುಸ್ಥಿತಿ ಹೀಗಿರುವಾಗ ಪ್ರಾಂತಿಕ ಸರಕಾರವು ಬಹಿಷ್ಕಾರದ ಹೊಸ ಅಪರಾಧವನ್ನು ಕಲ್ಪಿಸಿ ಹೊಸ ಕಟ್ಟಳೆಯನ್ನು ಮಾಡಹೊರಟಿದ್ದೇಕೋ ತಿಳಿಯದು. ಬಹಿಷ್ಕಾರ ಹಾಕುವ ಕ್ರಮದಲ್ಲಿ ಏನಾದರೂ ಅನ್ಯಾಯವಾದರೆ ಆ ಬಗ್ಗೆ ದಿವಾಣಿ ನ್ಯಾಯಸ್ಥಾನಗಳಲ್ಲಿ ಪರಿಹಾರ ಪಡೆಯಲು ತಕ್ಕಷ್ಟು ಅವಕಾಶ ಈ ಹಿಂದೆ ಇತ್ತು, ಈಗಲೂ ಉಂಟು. ನಮ್ಮ ಹಿಂದುಸ್ಥಾನ ಸರಕಾರ ಜಾತ್ಯತೀತ ಸರಕಾರವಿರುತ್ತವೆಂದು ಖ್ಯಾತಿಗೊಂಡಿದೆ ಎಲ್ಲ ಧರ್ಮಗಳ ಜನರಿಗೆ ಆ ಜನಾಂಗದಲ್ಲಿ ತಮ್ಮ ತಮ್ಮ ಆಚಾರ ವಿಚಾರಗಳನ್ನೂ ರೂಢಿ ಪರಂಪರೆಗಳನ್ನೂ ಸ್ವಾತಂತ್ರವಾಗಿ ನಡೆಸಿಕೊಂಡು ಹೋಗುವಲ್ಲಿ ಯಾವದೇ ತೊಂದರೆಯಾಗದೆಂದು ಸರಕಾರವು ಸಂರಕ್ಷಣೆಯ ಆಶ್ವಾಸನ ಕೊಟ್ಟಿದೆ. ಪ್ರತಿಯೊಂದು ಧರ್ಮಕ್ಕೆ ವಿಶಿಷ್ಟ ಆಚಾರ-ವಿಚಾರಗಳುಂಟು. "ಆಚಾರಃ ಪ್ರಥಮೋ ಧರ್ಮಃ" ಎಂಬ ವಚನವುಂಟು. ಆಚಾರವೆಂದರೇ ಧರ್ಮವೆಂಬಂತಾಗುತ್ತದೆ. ಮಾನವನು ಸದಾಚಾರಸಂಪನ್ನನಾಗಿ, ಧಾರ್ಮಿಕನಾಗಿ ವ್ಯವಹರಿಸಬೇಕಾದರೆ ಆತನಿಗೆ ಕೆಲವು ನಿರ್ಬಂಧಗಳಿರಬೇಕು. ನಿರ್ಬಂಧಗಳಿಗೆ ವಿಶಿಷ್ಟ ಬಲವಿರಬೇಕು. ಅಂದರೆ ಮಾತ್ರ ನಿರ್ಬಂಧಗಳು ಪಾಲಿಸಲ್ಪಡುತ್ತವೆ. ಜಾತಿಗಳನ್ನು ಇರಗೊಟ್ಟು ಅವುಗಳ ಘಾತಕ್ಕಾಗಿ ಅವಶ್ಯವಾದ ಬಹಿಷ್ಕಾರದ ಶಾಸನಕ್ರಮವನ್ನು ಸೆಳೆಕೊಳ್ಳುವದು ವಿಚಾರಯೋಗ್ಯವಲ್ಲ. ಸರಕಾರವು ಸುಧಾರಣೆಯ ಹೆಸರಿನಲ್ಲಿ ಗಾಬರಿಯಿಂದ ಏನಾದರೊಂದು ಆಟ ಹೂಡಕೂಡದು. ಬಹಿಷ್ಕಾರ ಶಾಸನದ ಮಸೂದೆಯನ್ನು ಈ ರೀತಿಯಾಗಿ ತಳ್ಳಬೇಕು. ಬೇರೆ ಬೇರೆ ಜಾತಿ-ಸಂಸ್ಥೆಯವರೂ ವಿಚಾರವಂತ ಪ್ರಮುಖರೂ ಸರಕಾರಕ್ಕೆ ಆ ಮಸೂದೆಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ಅರಿಕೆ ಮಾಡಿಕೊಂಡು, ಸಂಕಲ್ಪಿತ ಕಟ್ಟಳೆಯಿಂದಲ್ಲಿ ಸಾಮಾಜಿಕ ಸ್ವಾತಂತ್ರ್ಯಕ್ಕೆ ಮತ್ತು ಏಳ್ಗೆಗಳಿಗೆ ಹಾನಿ ಬರುವದೆಂಬುವದನ್ನು ಅರಿಕೆಬೇಕು.

* *

ಶಿರ್ಸಿಯಲ್ಲಿ ಮ್ಯುನಿಸಿಪಾಲಿಟಿಯ ಜಾಗವನ್ನು ಅತಿಕ್ರಮಿಸಿದ ಆರೋಪ ಬಂದದ್ದರಿಂದ ನೂರಾರು ವರ್ಷಗಳ ಹಿಂದಿನಿಂದ ಇದ್ದ ಏಷ್ಟೋ ಕಟ್ಟಡಗಳನ್ನು ಕಿತ್ತಿ ತೆಗೆಯುವ ಪ್ರಸಂಗ ಬಂದಿದೆ! ಶಿರ್ಸಿಯಲ್ಲಿ ೧೯೩೭ರೊಳಗೆ ಸಿಟಿ ಸರ್ವೇ ಆಯಿತು ಈ ಸಿಟಿ ಸರ್ವೇ ಕಾಲಕ್ಕೆ ಹಳೆಯ ಖೈಮಾಸಿ ದಾಖಲೆಗಳ ಸಹಾಯದಿಂದ ಮ್ಯುನಿಸಿಪಾಲಿಟಿಯ ಜಾಗಾ ಅತಿಕ್ರಮಿಸಿದ್ದರ ಪತ್ತೆಯಾಯಿತು! ಆ ಖೈಮಾಶಿ ದಾಖಲೆಗಳು ಯಾವ ಯುಗದವೆಂದು ಜನರಿಗಾರಿಗೂ ಗೊತ್ತಿಲ್ಲ. ಆ ದಾಖಲೆಗಳಿಂದ ಬಳಿಕ ಮತ್ತು ಶಿರ್ಸಿ ಮ್ಯುನಿಸಿಪಾಲಿಟಿಯ ಘಟನೆಯಾಗುವ ಮುಂಚೆಯೇ ಜನರು ಆ ಆ ಕಾಲದ ಪರಿಸ್ಥಿತಿಗನುಚಿತವಾಗಿ ಮತ್ತು ತಮ್ಮ ತಮ್ಮ ಅನುಕೂಲತೆಯಂತೆ, ಅಂಗಡಿಗಳನ್ನೂ ಮಳಿಗೆಗಳನ್ನೂ ಮನೆಗಳನ್ನೂ ಕಟ್ಟಿಕೊಂಡರು. ೧೯೩೭ ಸಿಟಿ ಸರ್ವೇ ಆಗಿ ಅತಿಕ್ರಮಣದ ಶೋಧ (discovery) ವಾಗುವ ತನಕ ತಮ್ಮ ಹಕ್ಕಿನ ಸ್ಥಳದಲ್ಲಿ ಅತಿಕ್ರಮಣವಾಗಿರುವದೆಂಬ ತಿಳುವಳಿಕೆ ಯಾ ಸಂಶಯ ಮ್ಯುನಿಸಿಪಾಲಿಟಿಗೂ ಇರಲಿಲ್ಲ ಈಗ ಅತಿಕ್ರಮಣವೆಂದು ಕಂಡುಬಂದ ಸ್ಥಳಗಳನ್ನು ಮ್ಯುನಿಸಿಪಾಲಿಟಿಯವರು ಹಿಂದೆ ಎಂದೂ ಅನುಭವಿಸಿದ್ದಿಲ್ಲ ಸಿಟಿ ಸರ್ವೇ ಮಾಡುವ ಅಧಿಕಾರಿಗಳು ಅತಿಕ್ರಮಣ ಕಂಡು ಹಿಡಿದಾಗ ಖೈಮಾಶಿ ದಾಖಲೆಗಳ ಕಾಲದ ಪರಿಸ್ಥಿತಿಯನ್ನಾಗಲಿ ಆ ದಾಖಲೆಗಳ ತರುವಾಯ ಉಂಟಾದ ಸ್ಥಿತ್ಯಂತರಗಳನ್ನಾಗಲಿ ಪರಾಂಬರಿಸಲಿಲ್ಲ ಈ ದಾಖಲೆಗಳಂತೆ ಹಿಂದೆ ಓಣಿಯಿದ್ದಲ್ಲಿ ಈಗ ಕಟ್ಟಣವಾಗಿದೆ, ಕಟ್ಟೋಣವಿದ್ದಲ್ಲಿ ಓಣಿಯಾಗಿದೆ. ಎತ್ತರಗಟ್ಟಿನ ಸ್ಥಳವಿದ್ದಲ್ಲಿ ಹಳ್ಳವಾಗಿದೆ, ಹಳ್ಳವಿದ್ದಲ್ಲಿ ಹೊಲಗಳಾಗಿ ಬೆಳೆಯಾಗುತ್ತಿದೆ! ಹಿಂದಿನ ದಾರಿಗಳಲ್ಲಿ ನಿರ್ನಾಮವಾಗಿ ಹೊಸ ದಾರಿಗಳು ರೂಢಿಯಲ್ಲಿ ಬಂದಿವೆ! ಹೀಗೆ ಅವರ್ಣನೀಯ ವ್ಯತ್ಯಾಸವಾದ ಪರಿಸ್ಥಿತಿಯನ್ನು ಗ್ರಹಿಸದೆ "ಸಿಟಿ ಸರ್ವೇ" ಕೆಲಸ ನಡೆಯಿತು ಅತಿಕ್ರಮಣದ ಪ್ರಕರಣಗಳನ್ನು ವಿಚಾರಿಸಲು ಬಂದ ಅಧಿಕಾರಿಗಳು, ಜನರಿಗೆ ಆಕ್ಷೇಪ ಮಾಡಲು ಕಾನೂನಿನಂತೆ ಅವಕಾಶವಿದ್ದರೂ, ಪ್ರಕರಣಗಳನ್ನು ಪರಿಶೀಲಿಸದೆ ಅತಿಕ್ರಮಣದ್ದೆಂಬ ಜಾಗೆಗಳನ್ನು ಹೆಸರಿಗೆಪೂರ್ತ ಮ್ಯುನಿಸಿಪಾಲಿಟಿಗೆ ಭಾಡಿಗೆ ಕೊಟ್ಟು ಭಾಡಿಗೆಗೆ ಪಡಕೊಂಡು ಪ್ರಕರಣಗಳನ್ನು ಅಂತ್ಯಗೊಳಿಸಬೇಕಾಗಿ ಜನರಿಗೂ ಮ್ಯುನಿಸಿಪಾಲಿಟಿಯವರಿಗೂ ಸಲಹೆ ಕೊಟ್ಟರು ನಿಮ್ಮದೇ ಮ್ಯುನಿಸಿಪಾಲಿಟಿ, ಅದರ ಉತ್ಪನ್ನ ಬೆಳೆದರೆ ನಿಮ್ಮದೇ ಸಂಸ್ಥೆಯ ಉತ್ಪನ್ನ ಬೆಳೆದಂತಾಗುತ್ತದೆ, ಇಷ್ಟಕ್ಕಾಗಿ ಒಡೆದಾಡುವದು ಅನುಚಿತ ಎಂದು ಮಾರ್ಮಿಕವಾಗಿ ಬುದ್ಧಿ ಹೇಳಿದರು. ಅದರಿಂದ ಅತಿಕ್ರಮಣವೆಂದು ಕಂಡು ಹಿಡಿದ ಸ್ಥಳಗಳ ಕಬ್ಜೇದಾರರು ಮ್ಯುನಿಸಿಪಾಲಿಟಿಗೆ ಕರಾರುಗಳನ್ನು ಬರಕೊಟ್ಟು ಆ ಸ್ಥಳಗಳನ್ನು ಭಾಡಿಗೆಗೆ ಪಡಕೊಂಡರು ಕಳೆದ ೧೦ ವರ್ಷಗಳಿಂದ ಈ ಸ್ಥಿತಿ ನಡೆಯುತ್ತ ಬಂದಿದೆ. ಆದರೆ ಈಗ ಮ್ಯುನಿಸಿಪಾಲಿಟಿಯವರು ಭಾಡಿಗೆಹೊಸ ಕರಾರುಗಳನ್ನು ಬರೆಸಿಕೊಳ್ಳಲು ಇಲ್ಲವೆ ಹಿಂದಿನ ಕರಾರುಗಳನ್ನು ಮುಂದರಿಸಲು ಒಡಂಬಡುವದಿಲ್ಲ! ಅತಿಕ್ರಮಣಗಳನ್ನೆಲ್ಲ ಖುಲ್ಲಾ ಪಡಿಸಬೇಕೆಂದು ಹಟ ಹಿಡಿದಿದ್ದಾರೆ! ಅತ್ತ ಕಮಿಶನರರೂ ಒತ್ತಾಯ ಮಾಡುತ್ತಿದ್ದಾರೆ! ಸ್ವತಃ ಸ್ಥಳಕ್ಕೆ ಬಂದು ಅತಿಕ್ರಮಣದ ಸ್ವರೂಪವನ್ನು ನೋಡಿಕೊಳ್ಳಿರಿ ಅವುಗಳನ್ನು ಖುಲ್ಲಾ ಪಡಿಸಿಕೊಂಡರೆ ಮ್ಯುನಿಸಿಪಾಲಿಟಿಗೆ ಏನು ಪ್ರಯೋಜನ ಸಿಗುವದು ನೋಡಿರಿ. ಒಂದೆಡೆ ಅತಿಕ್ರಮಣವಿಲ್ಲ, ಅದಕ್ಕೆ ಹೊಂದಿಕೆಯಾಗಿ ಮತ್ತು ಅದೇ ರೇಷೆಯಲ್ಲಿರುವ ಸ್ಥಳದಲ್ಲಿ ಅತಿಕ್ರಮಣ ಹೊರಟಿದೆ! ಸಿಟಿ ಸರ್ವೇಯವರ ಅತಿಕ್ರಮಣಗಳನ್ನೆಲ್ಲ ಖುಲ್ಲಾ ಪಡಿಸಿದರೆ ಇಡೀ ಪೇಟೆ ರೂಪಗೆಡಾಗುವದು ೧೯೩೭ರಲ್ಲಿ ವ್ಯಯ್ಯ ಬೇಡೆಂದು ವ್ಯಾಖ್ಯಾ ಮಾಡದೆ ರಾಜಿ-ಖುಷಿಯಿಂದ ಪ್ರಕರಣಗಳನ್ನು ನಿಕಾಲೆ ಮಾಡಿಕೊಂಡದ್ದು ಅಪರಾಧವಾಯಿತೆಂದು ಹೇಳಬೇಕೆ? ಅತಿಕ್ರಮಣಗಳನ್ನು ಖುಲ್ಲಾಪಡಿಸಿದರೆ ಲಕ್ಷಾವಧಿ ರೂಪಾಯಿಗಳ ನಷ್ಟ ಒದಗುತ್ತಿದೆ ಜನರಿಗಾಗುವ ಈ ನಷ್ಟಕ್ಕೆ ಪ್ರತಿಯಾಗಿ ಮ್ಯುನಿಸಿಪಾಲಿಟಿಗಾಗಲಿ ಸರಕಾರಕ್ಕಾಗಲಿ ಪ್ರಯೋಜನವಾಗುತ್ತದೋ ನೋಡಿ, ಭಾಡಿಗೆ ಕೊಡಲಿಕ್ಕೆ ಒಪ್ಪಿಗೆಯುಂಟು. ಮ್ಯುನಿಸಿಪಾಲಿಟಿಯು ಜಾಗೆಗಳನ್ನು ಭಾಡಿಗೆಗೆಕೊಡಲು ಕಟ್ಟಳೆಯಂತೆ ಅವಕಾಶವುಂಟು ೧೨ ದಿನ ಇಲ್ಲಿ ಮುಕ್ಕಾಮು ಮಾಡಿ ಸಕಲ ಪರಿಸ್ಥಿತಿಯನ್ನು ಸ್ವತಃ ಕಂಡುಕೊಂಡ

ಪತ್ರಿಕಾ-ಪ್ರಕಟನೆ.

ನಂ ೧೮೦/೪೯ ಡಿ ಎಸ್
ಕಾನಡಾ ಜಿಲ್ಲಾ ಮೆಜಿಸ್ಟ್ರೇಟರ ಕಚೇರಿ,
ಕಾರವಾರ, ತಾ. ೧೦-೧-೧೯೪೯

ಗ್ರಾಮ-ವಿಭಾಗಗಳಲ್ಲಿ ಆಹಾರಧಾನ್ಯಗಳನ್ನೂ ಬಟ್ಟೆಯನ್ನೂ ಹಂಚುವದಕ್ಕಾಗಿ (ಬೇಗನೇ) ಜಾರಿಗೆ ತರಲಿರುವ ಯೋಜನೆಯನ್ನು ಅನುಲಕ್ಷಿಸಿ, ಬಟ್ಟೆ ಮತ್ತು ಆಹಾರಧಾನ್ಯಗಳ ಬಗ್ಗೆ ಸೀಧಾ-ಚೀಟಿ ಪಡೆಯಬಲ್ಲ ಸಾವ ಗ್ರಾಮವಿಭಾಗದ ಗಿರಾಕಿಯು ನಿರ್ದಿಷ್ಟ ನಮೂನೆಯಲ್ಲಿ (ಅವಶ್ಯವಿಲ್ಲ) [illegible] ಭರ್ತಿಸಬೇಕೆಂದು ಸರಕಾರವು ನಿರ್ಧರಿಸಿ ಆ ಬಗ್ಗೆ ಒಂದು ಅರ್ಜಿಯು ಇಲ್ಲವೆ ಪ್ರತಿಜ್ಞಾ ಪತ್ರದ ನಮೂನೆಯನ್ನು ಸಿದ್ಧಗೊಳಿಸಿದೆ. ಈ ನಮೂನೆಯು (ಫಾರ್ಮ) ಗ್ರಾಮಪತ್ರದಲ್ಲಿ ಸಿಗುತ್ತಿದ್ದು ಅಧಿಕೃತ ವ್ಯಾಪಾರಿಯ ಕಡೆಯಿಂದ ಯಾವದೊಂದು ಆವಶ್ಯಕ ಪದಾರ್ಥವನ್ನು ಪಡೆಯಲಿಚ್ಛಿಸುವಾತನು ಸದರಿ ನಮೂನೆಯಲ್ಲೇ ಗ್ರಾಮಾಧಿಕಾರಿ ಕಡೆಗೆ ಅರ್ಜಿಯನ್ನು ಸಾದರಗೊಳಿಸಬೇಕು. ಮತ್ತು ಅರ್ಜಿ ಮಾಡಿದ್ದರ ಪುರಾವೆಯೆಂದು ಅರ್ಜಿಗೆ ಸರಿಯಾಗಿ ಸಹಿ ಮಾಡಬೇಕು. ಇಲ್ಲವೆ ತನ್ನ ಹೆಬ್ಬೆರಳಿನ ಮುದ್ರೆಯನ್ನು ಒತ್ತಬೇಕು. ಅರ್ಜಿದಾರನ ವಿನಹ ಬೇರೆ ಯಾರಾದರೂ ಆ ಅರ್ಜಿಯನ್ನು ಬರೆದಿರುತ್ತಿದ್ದರೆ ಬರೆದ ಗೃಹಸ್ಥನು ತಾನು ಆ ಅರ್ಜಿ ಬರೆದಿರುತ್ತೇನೆಂದು ಕರಾರು ಬರೆದು ಮಾಮೂಲ ರೀತಿಯಿಂದ ತನ್ನ ಸಹಿಯನ್ನು ಹಾಕಬೇಕು.

ಯಾರಾದರೂ ಅಂಥಾ ಅರ್ಜಿಯಲ್ಲಿ ಯಾವದೇ ಸುಳ್ಳದ ವಿವರಗಳನ್ನು ಕೊಡುವಾಗ ಸುಳ್ಳು ವಿಧಾನವನ್ನು ಮಾಡಕೂಡದಲ್ಲ ಯಾ ಸುಳ್ಳು ಮಾಹಿತಿಯನ್ನು ಪೂರೈಸಕೂಡದು, ಅಥವಾ ಯಾವ ವಿಧಾನವು ಇಲ್ಲವೆ ಮಾಹಿತಿಯು ಸುಳ್ಳಿರುತ್ತದೆಂದು ತನಗೆ ಗೊತ್ತುಂಟು ಯಾ ತಿಳಿದಿರಲು ಯೋಗ್ಯ ಕಾರಣವುಂಟು ಅಥವಾ ನಿಜವಿರುತ್ತದೆಂದು ತಾನು ನಂಬುವದಿಲ್ಲ ಅಂಥಾ ವಿಧಾನವನ್ನು ಮಾಡಕೂಡದು ಯಾ ಮಾಹಿತಿಯನ್ನು ಪೂರೈಸಕೂಡದು

M Allahbaksh
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ಉಳವಿಯ ಶ್ರೀ ಚನ್ನಬಸವೇಶ್ವರ ದೇವರ ಜಾತ್ರೆ.

ಈ ಜಾತ್ರೆಯ ಮಹೋತ್ಸವವು ತಾ ೫-೨-೧೯೪೯ರಿಂದ ೧೪-೨-೧೯೪೯ರ ವರೆಗೆ ಜರಗುವದು. ಬೆಳಗಾವಿ ಡಿಸ್ಟ್ರಿಕ್ಟ್ ಪೋಲೀಸ ಎಕ್ಟ ಕಲಮು ೪೫ನೇದರ ಕೆಳಗೆ ಮೆ|| ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ ಸಾಹೇಬ ಕಾನಡಾರವರ ಒಪ್ಪಿಗೆಯ ಪ್ರಕಾರ ಜಾತ್ರೆಗೆ ಬರುವ ಯಾತ್ರಿಕರ ಮೇಲೆ ಈ ಕೆಳಗಿನಂತೆ ಪಿಲ್ಗ್ರಿಮ್ ಟೆಕ್ಸ (ತಲೆಪಟ್ಟಿ) ವಸೂಲ ಮಾಡಲಾಗುವದು

(೧) ೧೫ ವರ್ಷ ವಯಸ್ಸು ಮೇಲ್ಪಟ್ಟವರಿಗೆ ೦—೩—೦

(೨) ೧೫ ವರ್ಷ ಯಾ ಕಡಿಮೆ ವಯಸ್ಸಿನವರಿಗೆ ೦—೨—೦

(ಕಂಕುಳದಲ್ಲಿರುವ ಕೂಸುಗಳಿಗೆ ಪೂರ್ತ ಮಾಫಿ ಇರುವದು.)

ಆರೋಗ್ಯ ರಕ್ಷಣೆಯ ಬಗ್ಗೆ ನಯವಾದ ವ್ಯವಸ್ಥೆ ಸಾರ್ವಜನಿಕ ನೀರಿನ, ದೀಪ ಮುಂತಾದ [illegible] ಬಂದ ಸರಕಾರಿ [illegible] ಸರಿ [illegible] ಲಾಗೂ ಇಲ್ಲ.

Naik P M.
ಮುಖ್ಯಾಧಿಕಾರಿ ಸುಪರ
ಜ. ಕ್ಲಾ. [illegible] ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಮ್ಯುನಿಸಿಪಾಲಿಟಿ.

...ಸರನ್ನು ಕಾಯಬೇಕು.' ತಿಳಿಯುವರು ದೃಷ್ಟಿಯಿಂದ ಪರಿಶೀಲನೆ ಮಾಡಿಕೊಂಡರೆ ಕಲೆಕ್ಟರರು ನಿಷ್ಕರುಣೆಯಿಂದ ನಿರಾಕರಿಸುತ್ತಾರೆ! ಅತಿಕ್ರಮಣ ಹೆಚ್ಚಾಗಿ ಚನ್ನಪಟ್ಟಣ ಪೇಟೆಯಲ್ಲಿ ಇವೆ. ಇಲ್ಲಿ ಮುಖ್ಯ ಮಾರ್ಗ ೩೪ ಫೂಟ ಅಗಲವಿದೆ. ಮುಂದೆ ಈ ಮಾರ್ಗ ಇದಕ್ಕಿಂತ ಸಂಕೋಚವಾಗಿದ್ದರೂ ಅಲ್ಲಿ ಅತಿಕ್ರಮಣಗಳು ತೋರಬೇಕಲ್ಲಿಲ್ಲ. ಇಷ್ಟು ಅಗಲ ಮಾರ್ಗವನ್ನು ಇನ್ನೂ ಅಗಲ ಮಾಡುವ ಪ್ರಸಂಗ ಈಗೇನು ಬಂದಿಲ್ಲ, ಸಮೀಪದಲ್ಲೇ ಮಾಡುವ ಪ್ರಸಂಗ ಬರುವ ಲಕ್ಷಣಗಳು ಇಲ್ಲ. ಮ್ಯುನಿಸಿಪಾಲಿಟಿಯವರು ತಮ್ಮ ಹಕ್ಕಿನ ಮಾರ್ಗದ ಪ್ರದೇಶ ೩೪ ಫೂಟುಗಳಷ್ಟೇ ಇದೆಯೆಂದು ಎಣಿಸಿ, ಮಾರ್ಗದ ಎರಡೂ ಪಕ್ಕಗಳಲ್ಲಿ ಸಿಮೆಂಟಿನಿಂದ ಭದ್ರ ಕಾಲುವೆಗಳನ್ನು ಕಟ್ಟಿಸಿದ್ದುಂಟು. ಈಗ ಮಾರ್ಗ ಅಗಲ ಮಾಡುವವಾದರೆ ಈ ಕಾಲುವೆಗಳನ್ನು ಒಡೆದು ತೆಗೆದು ಪುನಃಸೃಷ್ಟಿ ಮಾಡಬೇಕು! ಇಷ್ಟೆಲ್ಲ ನಷ್ಟ ಮಾಡಿಕೊಂಡು, ಜನರಿಗೂ ಹೇರಳ ನಷ್ಟಕ್ಕೆ ಗುರಿಪಡಿಸಿ ಮಾರ್ಗ ಅಗಲಗೊಳಿಸಿದರೂ, ಅತಿಕ್ರಮಣಗಳ ಅವ್ಯವಸ್ಥೆಯ ಮೂಲಕ, ಮಾರ್ಗವು ಒಂದೇ ರೀತಿಯಿಂದ ರಚನೆಯಾಗದೆ ಓರೆ ಮೋರೆಯಾಗಿ ಎಲ್ಲವೂ ಅಂದಗೇಡಿಯಾಗುವದು. ಮೇಲಾಗಿ ಸರಕಾರವು ಹುಬ್ಬಳ್ಳಿ ರಸ್ತೆಯ ಬದಿಗೆ ಈಗ ಗಾಂವಠಾಣೆಗಳನ್ನು ನಿರ್ಮಿಸಿದೆ. ಬೇಸಾಯದ ಜೀನಸುಗಳ ಮಾರಾಟದ ವ್ಯವಸ್ಥೆಯ ಕಾನೂನಿನನ್ವಯ ಚನ್ನಪಟ್ಟಣದೊಳಗಿನ ಅಡಿಕೆ ಪೇಟೆಯು ಬೇಗನೇ ಹೊರಬದಿಗೆ ಹೋಗತಕ್ಕದ್ದಿದೆ. ಅದರಿಂದ ಚನ್ನಪಟ್ಟಣದೊಳಗಿನ ಜನರ ಓಡಾಟಕ್ಕೆ ಜನಸಂದಣಿಯೂ ಬಹುಮಟ್ಟಿಗೆ ಕುಗ್ಗುವಂತಿದೆ. ಚನ್ನಪಟ್ಟಣದ ವಿಸ್ತರಣೆಯ ಪ್ರಸಂಗವಿಲ್ಲ. ಇನ್ನೊಂದು ವಿಚಾರವೂ ಉಂಟು. ಶಿರ್ಸಿ ಪಟ್ಟಣಕ್ಕೆ ನಗರ-ರಚನೆಯ ಕಾನೂನನ್ನು (Town Planning Act) ಅನ್ವಯಿಸಿ, ನಗರ ರಚನೆಯನ್ನು ಹೊಸದಾಗಿ ಮಾಡಿ, ಶಿರ್ಸಿ ಪಟ್ಟಣವನ್ನು ನವ-ನಗರವನ್ನಾಗಿ ಮಾರ್ಪಡಿಸಬೇಕೆಂದು ಶಿರ್ಸಿ ಮ್ಯುನಿಸಿಪಾಲಿಟಿಯವರ ತೀರ್ಮಾನವಾದದ್ದುಂಟು. ಈ ಯೋಜನೆ ಅಮಲಿನಲ್ಲಿ ಒಂದರೆ ಇಡೀ ಪಟ್ಟಣವನ್ನು ಪುನರ್ಘಟಿಸುವ ಪ್ರಸಂಗ ಬರುವದು. ಆ ಕಾಲದಲ್ಲಿ ಹೊಸ ರಚನೆಗೆ ಅನುಕೂಲವಾಗಿ ಸ್ಥಿತ್ಯಂತರಗಳನ್ನು ಮಾಡಬೇಕಾಗುವದು. ಈಗಿನ ಅತಿಕ್ರಮಣಗಳ ಯುಕ್ತಾಯುಕ್ತತೆಯ ನಿರ್ಣಯವೂ ಆಗ ಆಗುವದು. ಪರಿಸ್ಥಿತಿ ಹೀಗಿರುವಾಗ ಶಿರ್ಸಿಯ ಜನರಿಗೆ, ಪ್ರಮುಖ್ಯವಾಗಿ ಚನ್ನಪಟ್ಟಣದ ಜನರಿಗೆ ಮ್ಯು॥ಯವರಾಗಲಿ ಕಲೆಕ್ಟರರಾಗಲಿ ತಪ್ಪು-ನಷ್ಟ ಕೊಡುವದು ಪ್ರಸಂಗೋಚಿತವಲ್ಲ. ಇದು ಕೇವಲ ವ್ಯಕ್ತಿಯ ಪ್ರಶ್ನೆಯಲ್ಲ, ವ್ಯಕ್ತಿಸಮೂಹಕ್ಕೆ ಸಂಬಂಧಿಸಿದ್ದಾಗುತ್ತದೆ. ಲಕ್ಷಾವಧಿ ರೂಪಾಯಿಗಳ ನಷ್ಟದ ಪ್ರಕರಣವಿದೆ. ಪ್ರಾಂತಿಕ ಸರಕಾರವು ಈ ಇಡೀ ಪ್ರಕರಣವನ್ನು ಪರಿಶೀಲಿಸಿ, ಅವಶ್ಯಕವೆಂದಲ್ಲಿ ವಿಶೇಷ ಅಧಿಕಾರಿಯನ್ನು ನೇಮಿಸಿ, ಅತಿಕ್ರಮಣಗಳ ಸ್ಥಳಿಕ ಚೌಕಶಿ ಮಾಡುವಂತೆಯೂ ಸಾರ್ವಜನಿಕ ಹಿತದ ದೃಷ್ಟಿಯಿಂದ ಅತ್ಯವಶ್ಯವಿದ್ದಲ್ಲಿ ಮಾತ್ರ ಅತಿಕ್ರಮಣಗಳನ್ನು ಖುಲ್ಲಾಪಡಿಸುವಂತೆಯೂ ಅಪ್ಪಣೆ ಮಾಡಿ ಕಳಿಸಿಕೊಡುವದುಚಿತ.

* * *

ಹೊಸ ಒಕ್ಕಲತನದ ಕಾನೂನು ದಿವಾಣಿ ನ್ಯಾಯಸ್ಥಾನಗಳ ಅಧಿಕಾರವನ್ನು ಸಂಪೂರ್ಣ ಅಪಹರಿಸಿತ್ತೆಂಬ ವಾದ ಸರಿಯಾದದ್ದಲ್ಲ. ಮಾಮಲೇದಾರ, ಕಲೆಕ್ಟರ, ರೆವ್ಹಿನ್ಯೂ ಟ್ರಿಬ್ಯುನಲ್ ಎಂಬ ಮೂರು ಅಧಿಕಾರಸ್ಥಾನಗಳು ವಿಚಾರಿಸಬೇಕೆಂದು ಕಾನೂನಿನಲ್ಲಿ ಹೇಳಿರುವ ವಿಷಯಗಳನ್ನು ಮಾತ್ರ ವಿಚಾರಿಸಲಿಕ್ಕೆ ದಿವಾಣಿ ನ್ಯಾಯಸ್ಥಾನಗಳಿಗೆ ಅಧಿಕಾರವಿಲ್ಲೆಂದು ಹೊಸ ಕಾನೂನಿನಲ್ಲಿ ವಿಧಿಸಲಾಗಿದೆ. ಸ್ವಂತ ಸಾಗುವಳಿಗಾಗಿ ಸ್ವಂತ ಭೂಮಿಯನ್ನು ಪಡೆಯಲು ಅಪೇಕ್ಷಿಸಿ ಒಡೆಯರು ಮಾಡತಕ್ಕ ದಾವೆಗಳನ್ನು ನಿರ್ಣಯಿಸುವ ಅಧಿಕಾರ ಮಾಮಲೇದಾರರಿಗೆ ಇದ್ದಿದೆ; ಅವರ ಮೇಲಧಿಕಾರಿಗಳಿಗೆ ಕೊಡಲ್ಪಟ್ಟಿಲ್ಲ. ಅದೇ ರೀತಿ ಗೇಣಿಗೊಪ್ಪಿದ ಭೂಮಿಯನ್ನು ರೈತನು ಹಂಚಿಕೊಂಡಲ್ಲಿ ಅಥವಾ ಬೇರೆಯವರಿಗೆ ಗೇಣಿಗೆ ಕೊಟ್ಟಲ್ಲಿ ಇಲ್ಲವೆ ಸ್ವತಃ ಸಾಗುವಳಿ ಮಾಡದಿದ್ದಲ್ಲಿ ಅಥವಾ ಬೇಸಾಯೇತರ ಕೆಲಸಗಳಿಗೆ ಉಪಯೋಗಿಸಿದಲ್ಲಿ ಇಲ್ಲವೆ ಭೂಮಿ ಹಾಳುಗೆಡಹುವಂತಹ ಕೃತ್ಯ ಮಾಡಿದ್ದಲ್ಲಿ ಒಡೆಯರು ಕಬಜೆ ಬೇಡಿ ಮಾಡಬಹುದಾದ ದಾವೆಗಳ ಇತ್ಯರ್ಥಪಡಿಸುವ ಅಧಿಕಾರ ಮಾಮಲೇದಾರಾದಿ ಮುಲ್ಕೀ ಅಧಿಕಾರಿಗಳಿಗೆ ಕೊಡಲ್ಪಟ್ಟಿಲ್ಲ. ದಿವಾಣಿ ಅಧಿಕಾರಿವರ್ಗಗಳು ಇಂತಹ ದಾವೆಗಳನ್ನು ನಿರ್ಣಯಿಸಲಿಕ್ಕೆ ಹೊಸ ಕಾನೂನಿನ ಪ್ರತಿಬಂಧವಿಲ್ಲ. ಗೇಣಿ ಬಾಕಿ ಬಿದ್ದಲ್ಲಿ ಕಬಜೆ ದಾವೆಗಳನ್ನು ದಿವಾಣಿ ಕೋರ್ಟಿನಲ್ಲೂ ಮಾಮಲೇದಾರರಲ್ಲೂ ಮಾಡಬಹುದು. ಆದರೆ ಮಾಮಲೇದಾರರಲ್ಲಿ ದಾವೆ ಮಾಡಿ ಇತ್ಯರ್ಥ ಪಡೆಕೊಂಡರೆ ಮುಂದೆ ಅವನು ದಿವಾಣಿ ಕೋರ್ಟಿನಲ್ಲಿ ದಾಖಲಪಡಿಸಲು ಪ್ರತಿಬಂಧವಿದೆ. ಕಬಜೆ ಸಿಗಬೇಕೆಂದು ನಿರ್ಣಯವಾದ ಬಳಿಕ ಪ್ರತ್ಯಕ್ಷ ಕಬಜೆ ಕೊಡಿಸುವದು ಮಾತ್ರ ಮಾಮಲೇದಾರರ ಅಧಿಕಾರಕ್ಕೊಳಪಟ್ಟದ್ದಿದೆ. ಒಡೆಯನು ಸ್ವಂತ ಸಾಗುವಳಿಗೆ ಭೂಮಿ ಅಪೇಕ್ಷಿಸಿದ್ದು ಪ್ರಾಮಾಣಿಕತನದ್ದೋ ಹೇಗೆ ಎಂಬ ನಿರ್ಣಯ ಮಾಡುವ ಅಧಿಕಾರ ಮಾಮಲೇದಾರರಿಗೆ ಕೊಡಲ್ಪಟ್ಟಿಲ್ಲ. ಆ ನಿರ್ಣಯಾಧಿಕಾರ ದಿವಾಣಿ ನ್ಯಾಯಸ್ಥಾನಗಳಿಗೆ ಈ ಹಿಂದೆ ಇದ್ದಂತೆ ಈಗಲೂ ಉಂಟು. ಮೇಲಾಗಿ ಈ ಕಾನೂನು ಆಗುವ ಮುಂಚೆ ಅಂದರೆ ತಾರೀಕ ೮-೧೧-೧೯೪೬ರ ಪೂರ್ವದಲ್ಲಿ ಕಬಜೆ ಕೊಳ್ಳಲು ಅಧಿಕಾರಪಟ್ಟ ಸಂಗತಿಗಳಲ್ಲಿ ಹಿಂದಿನ ಕಾನೂನಿನಂತೆಯೇ ಕ್ರಮ ನಡೆಸಬರುತ್ತದೆ. ಮೇಲ್ಕಾಣಿಸಿದ ವಿಷಯಗಳನ್ನಷ್ಟು ಹೊರ್ತುಪಡಿಸಿ ಉಳಿದ ವಿಷಯಗಳೆಲ್ಲ ಮುಲ್ಕಿ ಅಧಿಕಾರಿಗಳಿಗೆ ಒಪ್ಪಿಸಲ್ಪಟ್ಟವೆ. ರೈತ, ಸಂರಕ್ಷಿತ ರೈತ, ಯೋಗ್ಯ ಗೇಣಿ, ನಷ್ಟದ ಮೊಬಲಗು, ಒಕ್ಕಲಿಗನಿಗೆ ಒದಗಿದ ನಷ್ಟ, ಕಟ್ಟಡಗಳ ಕಿರ್ಮತ ಮೊದಲಾದ ವಿಷಯಗಳನ್ನು ಇತ್ಯರ್ಥಪಡಿಸುವ ಯಾವತ್ತು ಅಧಿಕಾರ ಮಾಮಲೇದಾರಾದಿ ಮುಲ್ಕಿ ಅಧಿಕಾರಿಗಳಿಗೆ ಒಪ್ಪಿಸಲ್ಪಟ್ಟದೆ. ಅವನ್ನು ನಿರ್ಣಯಿಸಲು ದಿವಾಣಿ ನ್ಯಾಯಸ್ಥಾನಗಳಿಗೆ ಏನೂ ಅಧಿಕಾರವಿಲ್ಲ.

* * *

ಕುಮಟೆಯೊಳಗಿನ ಬೇಸಾಯ ಪ್ರಯೋಗದ ಹೊಲದ ವಿಸ್ತರಣೆ ಮಾಡಬೇಕೆಂದು ಬೇಸಾಯ ಇಲಾಖೆಯ ಸಂಕಲ್ಪವಾಗಿದೆ. ಅದಕ್ಕಾಗಿ ಸರಕಾರವು ರೂ ೫೦,೦೦೦ ಖರ್ಚು ಮಾಡಿ, ಕುಮಟೆಯೊಳಗಿನ ಕೆಲವು ಗದ್ದೆ ಭೂಮಿ ಕೊಳ್ಳಬೇಕೆಂದು ನಿರ್ಣಯ ಮಾಡಿದ ಸುದ್ದಿಯುಂಟು. ಬೇಸಾಯದ ಸುಧಾರಣೆಯಾಗಬೇಕು, ಆ ಬಗ್ಗೆ ಸರಕಾರವು ಪ್ರಚಾರಕಾರ್ಯ ಕೈಕೊಳ್ಳಬೇಕು, ಎಂಬ ಮಾತು ಒಪ್ಪಿಗೆಯುಂಟು. ಆದರೆ ಕುಮಟೆಯಂಥ ಬೆಳೆಯುತ್ತಿರುವ ಪಟ್ಟಣದಲ್ಲಿ ಸರಕಾರವು ಜನರ ಹೊಲ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಕೃಷಿ ಸುಧಾರಣೆಯ ಪ್ರಯೋಗ ಮಾಡುವದು ಯೋಗ್ಯವಾದೀತೇನು ಎಂಬದೊಂದು ಪ್ರಶ್ನೆಯಿದೆ. ಪಟ್ಟಣಿಗರು ಗ್ರಾಮಗಳಿಗೆ ಹೋಗಿ ನೆಲೆಸಬೇಕು; ಕುಗ್ರಾಮಗಳು ಸುಗ್ರಾಮಗಳಾಗಬೇಕು, ನಿರ್ಜನ ಗ್ರಾಮಗಳು ಜನಭರಿತವಾಗಬೇಕು, ಗ್ರಾಮೋದ್ಧಾರ, ಗ್ರಾಮೋತ್ಕರ್ಷಗಳಿಂದಲೇ ಹಿಂದುಸ್ಥಾನ ಉದ್ಧಾರ ಹೊಂದಬೇಕು, ಗ್ರಾಮಜೀವನ ಸುಧಾರಿಸಬೇಕು, ಅಂದರೆ ಮಾತ್ರ ರಾಷ್ಟ್ರೋದ್ಧಾರವಾಗುವದೆಂದು ಮಹಾತ್ಮರು ಮುಕ್ತಕಂಠವಾಗಿ ಘೋಷಿಸಿದ್ದುಂಟು. ನಮ್ಮ ಜಿಲ್ಲೆಯಲ್ಲಿ ಘಟ್ಟದ ಕೆಳಗೂ ಘಟ್ಟದ ಮೇಲೂ ಲಕ್ಷಾವಧಿ ಎಕರೆ ಭೂಮಿ ಬಂಜರ ಬಿದ್ದುಕೊಂಡಿದೆ. ಶಿರ್ಸಿ, ಮುಂಡಗೋಡ, ಯಲ್ಲಾಪುರ, ಸುಪಾ, ಹಳಿಯಾಳ ಪ್ರದೇಶಗಳು ಭತ್ತದ ಭಂಡಾರಗಳೆಂದು ಹೇಳಿಸಿಕೊಳ್ಳುತ್ತಿವೆ. ಈ ಪ್ರದೇಶಗಳು ಬಹಳಷ್ಟು ನಿರ್ಜನವಾದರೂ ಘಟ್ಟದ ಕೆಳಗಿನ ಜನರನ್ನು ಆವ್ಹಾನಿಸುತ್ತಿವೆ. ಮುಂಡಗೋಡ ತಾಲೂಕಿನಲ್ಲಿ ಅಂತು ೧೫೦ ಗ್ರಾಮಗಳಿವೆ, ಅವುಗಳಲ್ಲಿ ೬೦ ಗ್ರಾಮಗಳು ನಿರ್ಜನ, ಉಳಿದ ೫೦ರಲ್ಲಿ ವಿರಳ ಜನವಸತಿಯಿದೆ. ಘಟ್ಟದ ಮೇಲ್ಪ್ರದೇಶದಲ್ಲೆಲ್ಲ ಇದೇ ಪರಿಸ್ಥಿತಿಯಿದೆ. ಈ ಗ್ರಾಮಗಳಲ್ಲಿ ವಿಶಾಲವಾದ ಹೊಲಗಳುಂಟು. ಅವನ್ನು ಸರಕಾರವು ಬೇಸಾಯದ ಪ್ರಚಾರಕ್ಕೆ ಮತ್ತು ಪ್ರಯೋಗಕ್ಕೆ ಉಪಯೋಗಿಸಿಕೊಂಡಲ್ಲಿ, ಖರ್ಚಿಲ್ಲದೆ ನಿರ್ಜನ ಗ್ರಾಮಗಳ ಉದ್ಧಾರ ಮಾಡಿದ ಶ್ರೇಯಸ್ಸು ಸರಕಾರಕ್ಕೆ ಪ್ರಾಪ್ತವಾಗುವದು. ನಿರ್ಜನ ಗ್ರಾಮಗಳಲ್ಲಿ ಸಾಗುವಳಿಗೆ ತೊಂದರೆ ಕೊಡುವ ನಿಸರ್ಗದೋಷಗಳು ಬೇಸಾಯದ ಅಧಿಕಾರಿಗಳ ಅನುಭವಕ್ಕೆ ಬಂದು, ಅವುಗಳ ಪರಿಹಾರಕ್ಕೂ ಅನುಕೂಲವಾಗುವದು. ಬೇಸಾಯದ ಸುಧಾರಣೆಗಿಂತ ಬೇಸಾಯದ ಕ್ಷೇತ್ರವನ್ನು ವಿಸ್ತರಿಸುವದು ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಮಹತ್ವದ್ದಿದೆ. ಕುಗ್ರಾಮಗಳಲ್ಲಿ ಬೆಳೆಸಿದ ಬೆಳೆಯನ್ನು ಕಾಪಾಡಿಕೊಳ್ಳುವ ಬಗೆ ಹೇಗೆಂದು ಜನರಿಗೆ ತಿಳಿಯದು. ಬೇಸಾಯ-ಪ್ರಯೋಗ ಮಾಡುವ ಅಧಿಕಾರಿಗಳು ಕುಗ್ರಾಮಗಳನ್ನು ಸಾಗುವಳಿಗೆ ತಂದಲ್ಲಿ ಬಹಳಷ್ಟು ಜನಹಿತವಾಗುವದುಂಟು. ಒಕ್ಕಲಿಗರಿಗೆ ತಮ್ಮ ಒಕ್ಕಲತನದ ಹೋರಿಯನ್ನು ಸುಪುತ್ರ ಸಾಗಿಸಲು ಅವಕಾಶ ದೊರೆತು, ಜನವಸತಿಯುಳ್ಳ ಗ್ರಾಮಗಳಲ್ಲಿ ಒಡೆಯ-ಒಕ್ಕಲಿಗರೊಳಗುಂಟಾದ ವರ್ಗಕಲಹವೂ ದೂರವಾಗುವ ಸಂಭವವಿದೆ. ಸರಕಾರದ ಬೊಕ್ಕಸದೊಳಗಿಂದ ಬೇಕಾದಂತೆ ಹಣ ಸಿಗುತ್ತದೆಂದು ಅದನ್ನು ಸಾರಾಸಾರ ವಿಚಾರವಿಲ್ಲದೆ ಖರ್ಚು ಮಾಡುವ ಧೋರಣವನ್ನು ಸರಕಾರಿ ಅಧಿಕಾರಿಗಳು ತ್ಯಜಿಸತಕ್ಕದ್ದು. ದಿನಂಪ್ರತಿ ಏರುತ್ತಿರುವ ಧಾರಣೆಗಳಿಗೆ ಸರಕಾರದ ತಾರತಮ್ಯಹೀನ ಖರ್ಚೇ ಕಾರಣವಿರುತ್ತದೆಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಟ್ಟು, ಸರಕಾರಕ್ಕೆ ಖರ್ಚನ್ನು ತಗ್ಗಿಸಲು ಸಲಹೆ ಕೊಟ್ಟಿದ್ದಾರೆ. ಬೇಸಾಯ ಮಂತ್ರಿಗಳು ದೀರ್ಘ ವಿಚಾರ ಮಾಡಿ, ಹೊಸ ಹೊಸ ಖರ್ಚಿನ ಬಾಬುಗಳನ್ನು ನಿರ್ಮಿಸಿ ಜನರಿಗೆ ದಣಿಸುವ ಈ ಕ್ರಮವನ್ನು ಬಿಟ್ಟುಬಿಡಬೇಕಾಗಿ ಸೂಚನೆಯಿದೆ.

* * *

ಸರಕಾರದ ದುಂದುಗಾರಿಕೆಯ ಉದಾಹರಣೆಯೆಂದು ಮುಂಡಗೋಡ ತಾಲೂಕಿನ ಇಂದೂರ ಗ್ರಾಮದಲ್ಲಿ ನಡೆದ ಪುನರ್ಘಟನೆಯ ಯೋಜನೆಯನ್ನು ಉಲ್ಲೇಖಿಸಬಹುದು. ನಿರಾಶ್ರಿತರನ್ನು ನೆಲಿಸುವದಕ್ಕಾಗಿ ಹಿಂದುಸ್ಥಾನ ಸರಕಾರವೂ ಪ್ರಾಂತಿಕ ಸರಕಾರವೂ ಶಕ್ಯವಿದ್ದಲ್ಲಿ ಆಶ್ರಯ ಕೊಡಬೇಕೆಂಬ ಮಾತು ಸಿದ್ಧವಿದೆ. ಆದರೆ ಆ ಬಗ್ಗೆ ನಿರರ್ಥಕವಾಗಿ ದುಂದುಗಾರಿಕೆ ಮಾಡಬೇಕೇ? ಇಂದೂರಿನಲ್ಲಿ ಕಳೆದ ಮಳೆ

ಗಾಲದಲ್ಲಿ ೪೦೦ ೫೦೦ ಎಕ್ರೆ ಭೂಮಿ ಸಾಗುವಳಿ ಮಾಡಲಾಗುವುದು. ಆದರೆ ಈ ಸಾಗುವಳಿಗೆ ಎಕರೆಗೆ ರೂ ೬೦೦ರಷ್ಟು ಖರ್ಚು ಬಂದಿದೆಯೆಂದೂ, ಈ ಖರ್ಚಿನಲ್ಲಿ ಇತರ ಅಂದರೆ ಟ್ರಾಕ್ಟರ ಮತ್ತು ಬುಲ್‌ಡೋಝರ ಮೊದಲಾದ ಯಂತ್ರಸಾಮಗ್ರಿಗಳ ಇಲ್ಲವೆ ಆ ಯಂತ್ರಗಳನ್ನು ನಡಿಸುವ ಇಸಮುಗಳ ಖರ್ಚು ಕೂಡಿಲ್ಲ ಎಂದು ತಿಳಿಯುತ್ತದೆ. ಬೇರೆ ಬೇರೆ ತರಬಂದಿಯ ಖರ್ಚು ಪ್ರತ್ಯೇಕವಿದೆ. ನಿರಾಶ್ರಿತರ ವಸಾಹತಿಗಳನ್ನು ನಡೆಯಿಸುವ ಬೇಸಾಯದ ಪ್ರಯೋಗ ಮಾಡಲು ೧ನೇ ತರಗತಿಯ ಬೇಸಾಯ ಅಧಿಕಾರಿಗಳಿದ್ದಾರೆ. ಕುಮಟೆಯ ಬೇಸಾಯ ಪ್ರಯೋಗ ಹೊಲದಲ್ಲಿ ಸಹ ಇಷ್ಟು ಉಚ್ಚ ಅಧಿಕಾರಿ ಇರುವದಿಲ್ಲ. ಇದಲ್ಲದೆ ಜಿಲ್ಲೆಯ ಬೇಸಾಯ ಅಧಿಕಾರಿಗಳು ತಿಂಗಳಲ್ಲಿ ೧೫ ದಿವಸ ಇಂದೂರಿನಲ್ಲಿ ಮುಕ್ಕಾಮು ಮಾಡಿ ಕೃಷಿಕರ್ಮವನ್ನು ಪ್ರೋತ್ಸಾಹಿಸುತ್ತಾರೆ. ಗ್ರಾಮೋದ್ಧಾರ ಮಂಡಳದವರೂ ಮಾಮಲೇದಾರರಿಂದ ಮಂತ್ರಿಗಳ ವರೆಗಿನ ಅಧಿಕಾರಿಗಳೂ ಬೇರೆ ಬೇರೆ ವೇಳೆ ಇಂದೂರನ್ನು ಸಂದರ್ಶಿಸಿ, ಅದು ಹಿಂದುಸ್ಥಾನ ಜನಾಂಗದ ಉತ್ಕರ್ಷದ ಒಂದು ದೊಡ್ಡ ಯೋಜನೆಯೆಂಬಂತೆ ಜಾಹೀರಾತು ಕೊಡುತ್ತಾರೆ. ಈ ಗ್ರಾಮದಲ್ಲಿ ಈ ವರ್ಷ ಹುಟ್ಟಿದ ಬೆಳೆಯೆಷ್ಟೆಂದು ಇನ್ನೂ ತಿಳಿಯಲಿಲ್ಲ. ಬಡವರಾದ ಸ್ಥಳಿಕ ಲಮಾಣಿ ಜನರಿಗೂ ಟ್ರಾಕ್ಟರ ಮತ್ತು ಬುಲ್‌ಡೋಝರಗಳಿಂದ ಹಸನಗೊಳಿಸಿದ ಕೆಲವು ಭೂಮಿಯನ್ನು ಕೊಟ್ಟು, ಉಳಿಯಲಿಕ್ಕೆ ಸಾಮಾನ್ಯ ಗುಡಿಸಲುಗಳನ್ನು ಕಟ್ಟಿಸಿಕೊಟ್ಟಿದ್ದರೆ, ವಿಶೇಷ ಖರ್ಚಿಲ್ಲದೆ ಇಡೀ ಇಂದೂರ ಗ್ರಾಮವು ಸಾಗುವಳಿಯಾಗಿ, ಸರಿಸೂರಿಯ ಗ್ರಾಮಗಳೂ ಸಾಗುವಳಿಯಾಗುವ ಯೋಗ ಬರುತ್ತಿತ್ತು. ಮೇಲ್ವಿಚಾರಣೆ ಮಾಡುವ ಅಧಿಕಾರಿಗಳು ಹೊಲಗಳಲ್ಲಿ ಹುಟ್ಟಿದ ಬೆಳೆ ಕಾಡು ಪಶುಗಳ ಪಾಲಾಗದಂತೆ ಜಾಗ್ರತೆಯನ್ನಷ್ಟು ಕೊಂಡರೆ ಸಾಕಿತ್ತು. ತೀರ ಬಡವರಿದ್ದ ಲಮಾಣಿ ಜನರಿಗೆ ತಗಾವಿ ಸಾಲ ಕೊಟ್ಟು ಆಶ್ರಯ ಕೊಟ್ಟಿದ್ದರೆ ಬೆಳೆ ಬೆಳೆದಾಗ ಆ ಸಾಲ ವಸೂಲ ಮಾಡಿಕೊಳ್ಳಬರುತ್ತಿತ್ತು. ಲಮಾಣಿ ಜನರ ನೆಲಸುವಿಕೆಯಿಂದ ನಿರ್ಜನ ಗ್ರಾಮ ಸಜನವಾಗುತ್ತಿತ್ತು. ನಿರಾಶ್ರಿತರಿಗಾಗಿ ಇಷ್ಟೆಲ್ಲ ಖರ್ಚು ಮಾಡಿದರೂ ಅವರು ಆ ಗ್ರಾಮದಲ್ಲಿ ಕಾಯಂ ಉಳಿಯುವ ಲಕ್ಷಣಗಳಿಲ್ಲ. ಅವರು ಜಾತ್ಯಾ ಕೃಷಿಕರಲ್ಲೆಂದೂ, ಕೃಷಿಯಲ್ಲಿ ಅವರಿಗೆ ಆಸಕ್ತಿಯಿಲ್ಲವೆಂದೂ, ಕೃಷಿಯಿಂದ ಅವರ ಪ್ರಪಂಚ ಸಾಗುವಂತಿಲ್ಲೆಂದೂ ಅವರನ್ನು ಸೂಕ್ಷ್ಮವಾಗಿ ನೋಡಿದವರು ಹೇಳುತ್ತಾರೆ. ಸರಕಾರವು ಇದರಿಂದ ತಕ್ಕ ಬೋಧ ಪಡೆದು, ಸ್ಥಳಿಕ ನಿರಾಶ್ರಿತ ಜನರಿಗೆ ಆಶ್ರಯ ಕೊಟ್ಟು ಪ್ರೋತ್ಸಾಹಿಸುವ ಹೊಸ ಧೋರಣವನ್ನು ಕೈಕೊಳ್ಳಬೇಕು. ಹೊರಗಿನ ನಿರಾಶ್ರಿತರಿಂದಲೇ ಭೂಮಿಯನ್ನು ಸಾಗುವಳಿ ಮಾಡಿಸುವ ಧೋರಣವನ್ನು ಸರಕಾರವು ಇನ್ನೂ ಮುಂದರಿಸಿದರೆ ನಿರಾಶ್ರಿತರ ಸಂಖ್ಯೆ ಇನ್ನೂ ಬೆಳೆದು ಆಶ್ರಿತರೂ ನಿರಾಶ್ರಿತರಾಗುವ ಭೀತಿಯುಂಟು.

* * *

ಕಳೆದ ೨೫ ವರ್ಷಗಳಿಂದ "ಮುಂಬಯಿ ಕ್ರಾನಿಕಲ್" ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದ ಶ್ರೀ|| ಸಯ್ಯದ ಅಬ್ದುಲ್ಲಾ ಬ್ರೆಲ್ವಿ ಇವರು ಆದಿತ್ಯವಾರ ರಾತ್ರಿ ೮|| ಘಂಟೆಗೆ ಹೃದ್ರೋಗದಿಂದ ಆಕಸ್ಮಿತವಾಗಿ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತಿದೆ. ಶ್ರೀ ಬ್ರೆಲ್ವಿಯವರು ೧೮೯೧ರಲ್ಲಿ [illegible] ಪ್ರಸು ಆದರೆ ಅವರಿಗೆ ವಕೀಲವೃತ್ತಿಯನ್ನು ಅನುಸರಿಸುವ ಆಸಕ್ತಿಯಿರಲಿಲ್ಲ. ಪತ್ರಿಕಾ ವ್ಯವಸಾಯವು ಅವರ ಮನಸ್ಸನ್ನು ಆಕರ್ಷಿಸಲಾರಂಭಿಸಿತು. ೧೯೧೧ರಲ್ಲಿ ದಿವಂಗತ ಸರ ಫಿರೋಜಶಹಾ ಮೆಹತಾ ಇವರು ಬ್ರೆಲ್ವಿಯವರ ಬುದ್ಧಿ ಚಾಪಲ್ಯವನ್ನೂ ವಿದ್ವತ್ತೆಯನ್ನೂ ಪರಿಕಿಸಿ ಮುಗ್ಧರಾಗಿ ಅವರಿಗೆ ಆಗ ಬಾಲ್ಯಾವಸ್ಥೆಯಲ್ಲಿದ್ದ "ಕ್ರಾನಿಕಲ್" ಪತ್ರಿಕೆಯ ಉಪಸಂಪಾದಕ ವರ್ಗದಲ್ಲಿ ನೇಮಿಸಿಕೊಂಡರು. ಸ್ವರ್ಗಸ್ಥ ಹಾರ್ನಿಮನ್ನರಾಗ ಕ್ರಾನಿಕಲ್ ಪತ್ರಿಕೆಯ ಮುಖ್ಯಸಂಪಾದಕರಾಗಿದ್ದರು. ಶ್ರೀ|| ಬ್ರೆಲ್ವಿಯವರು ಅವರ ಶಿಷ್ಯರಾಗಿ, ೧೯೧೯ರಲ್ಲಿ ಹಾರ್ನಿಮನ್ನರಿಗೆ ದೇಶಾಂತರದ ಶಿಕ್ಷೆಯಾದಾಗ ಕ್ರಾನಿಕಲ ಪತ್ರಿಕೆಯ ಮುಖ್ಯ ಸಂಪಾದಕರಾಗಿ ಆರಿಸಲ್ಪಡುವಷ್ಟು ಯೋಗ್ಯತೆಯನ್ನು ಸಂಪಾದಿಸಿದರು. ೧೯೨೦ರ ಉತ್ತರಾರ್ಧದಲ್ಲಿ ಶ್ರೀ| ಮಾರ್ಮಡ್ಯೂಕ ಪಿಕಥೋಲ ಇವರು ಕ್ರಾನಿಕಲದ ಸಂಪಾದಕರಾದರು. ಆದರೆ ಅವರು ೧೯೨೪ರಲ್ಲಿ ಬಿಟ್ಟುಹೋದರು. ಅಂದಿನಿಂದ ೨೪ ವರ್ಷಗಳ ವರೆಗೆ ಶ್ರೀ|| ಬ್ರೆಲ್ವಿಯವರು —ಸತ್ಯಾಗ್ರಹದಲ್ಲಿ ಸೇರಿ ತುರಂಗಕ್ಕೆ ಹೋದ ಇಲ್ಲವೆ ವಿದೇಶಗಳಿಗೆ ಹೋದ ಕೆಲವು ಮಧ್ಯಂತರಗಳನ್ನು ಬಿಟ್ಟು— ಕ್ರಾನಿಕಲ ಪತ್ರಿಕೆಯ ಸಂಪಾದಕರಾಗಿದ್ದರು. ಬ್ರೆಲ್ವಿಯವರ ಸಂಪಾದಕತ್ವದಲ್ಲಿ ಕ್ರಾನಿಕಲ ಪತ್ರಿಕೆಯು ತನ್ನ ಪ್ರತಿಷ್ಠೆಯನ್ನು ಬೆಳಸಿಕೊಂಡು, ಸ್ವತಂತ್ರ ವೃತ್ತಿಯ, ಉಜ್ವಲ ರಾಷ್ಟ್ರೀಯ, ಕಾಂಗ್ರೆಸ-ಅಭಿಮಾನಿ ಪತ್ರಿಕೆಯೆಂಬ ಪ್ರಖ್ಯಾತಿಯನ್ನು ಸಂಪಾದಿಸಿತು. ಕಳೆದ ಮಹಾಯುದ್ಧದ ಕಾಲಕ್ಕೆ ಪತ್ರಿಕಾ-ಸ್ವಾತಂತ್ರ್ಯಕ್ಕೆ ಗದೆ ಬರಲಾರಂಭಿಸಿದಾಗ ಶ್ರೀ|| ಬ್ರೆಲ್ವಿಯವರು ಮುಂದಾಗಿ ಅ| ಭಾ|| ಪತ್ರಿಕಾ ಸಂಪಾದಕರ ಸಂಘವನ್ನು ಸ್ಥಾಪಿಸಿ, ಹಿಂದೀ ಪತ್ರಿಕೆಗಳ ಗೌರವವನ್ನೂ ಪ್ರತಿಷ್ಠೆಯನ್ನೂ ಕಾಯ್ದುಕೊಳ್ಳುವ ಪ್ರಯತ್ನ ಮಾಡಿದರು ಮತ್ತು ಅದರಲ್ಲಿ ಯಶಸ್ಸನ್ನು ಸಂಪಾದಿಸಿದರು. ಎರಡು ವರ್ಷಗಳ ಕಾಲ ಅವರು ಈ ಸಂಘದ ಅಧ್ಯಕ್ಷರೂ ಆಗಿದ್ದರು. ಶ್ರೀ|| ಬ್ರೆಲ್ವಿಯವರು ರಾಷ್ಟ್ರೀಯ ಮುಸಲ್ಮಾನರ ಮುಂದಾಳಾಗಿ, ಕೊನೆಯವರೆಗೂ ಕಾಂಗ್ರೆಸ-ಅಭಿಮಾನ ಹಿಡಿದು ಕಾಂಗ್ರೆಸ ಸೇವೆ ಮಾಡಿದ್ದಾರೆ. ಕೆಲ ಕಾಲ ಅವರು ಅ|| ಭಾ|| ಕಾಂಗ್ರೆಸ ಕಾರ್ಯಕಾರಿ ಮಂಡಳದ ಸದಸ್ಯರೂ ಆಗಿದ್ದರು. ತೀರ ಸಾಧು ಸ್ವಭಾವದವರಿದ್ದುದರಿಂದಲೂ, ಸಾದಾ ಜೀವನದ ನಿಷ್ಕಪಟಿಗಳಾಗಿರುತ್ತಿದ್ದುದರಿಂದಲೂ, ಮುಂಬಯಿಯ ಪ್ರಾಂತಾಧಿಪರು ಹೇಳುವಂತೆ, ಶ್ರೀ|| ಬ್ರೆಲ್ವಿಯವರು ಸಕಲರಿಗೂ "ಸನ್ಮಿತ್ರ"ರಾಗಿದ್ದರು. ಅವರ ಅಕಾಲಿಕ ನಿಧನದಿಂದ ಹಿಂದೀ ಪತ್ರಿಕಾಪ್ರಪಂಚದ ಒಂದು ತೇಜಸ್ವಿ ತಾರೆಯು ಕಳಚಿ ಬಿದ್ದಂತಾಗಿದೆ.

* * *

ಶ್ರೀ|| ಬ್ರೆಲ್ವಿಯವರು ನಿಧನ ಹೊಂದಿದ ದಿನವೇ ಮಧ್ಯರಾತ್ರಿ ಮದ್ರಾಸಿನಲ್ಲಿ "ಇಂಡಿಯನ್ ರಿವ್ಯೂ" ಮಾಸಿಕ ಪತ್ರಿಕೆಯ ಸಂಸ್ಥಾಪಕರೂ ಸಂಪಾದಕರೂ ಆಗಿದ್ದ ಶ್ರೀ|| ಜಿ. ಎ. ನಟೇಶನ್ನರು ಪರಂಧಾಮಕ್ಕೆ ತೆರಳಿದ ಸುದ್ದಿಯನ್ನು ನಮೂದಿಸಲು ವಿಷಾದವಾಗುತ್ತಿದೆ. ಶ್ರೀ|| ನಟೇಶನ್ನರು ಅನೇಕ ರಾಷ್ಟ್ರೀಯ ಮುಂದಾಳುಗಳ ಸಂಕ್ಷಿಪ್ತ ಜೀವನ-ಚರಿತ್ರಗಳನ್ನು ಸಂಪಾದಿಸಿ ಪ್ರಕಟಿಸಿ, ಹಾಗೂ ಉಜ್ವಲ ದೇಶಭಕ್ತರನೇಕರ ಲೇಖ-ಭಾಷಣಗಳನ್ನು ಮುದ್ರಿಸಿ ಪ್ರಕಟಿಸಿ, ರಾಷ್ಟ್ರೀಯತೆಯ ಬೆಳವಣಿಗೆಗೂ ವಿಕಾಸಕ್ಕೂ ಅನುಪಮ ಸೇವೆ ಸಲ್ಲಿಸಿದ್ದಾರೆ.

— ಮೊನ್ನೆ ಮುಂಬಯಿಯಲ್ಲಿ ೪ನೆಯ ಕೊಂಕಣಿ ಪರಿಷತ್ತು ಮುಂಬಯಿಯ ನಗರಾಧ್ಯಕ್ಷರಾಗಿರುವ ಡಾ|| ಮಸ್ಕರೇನ್ಹಾಸ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಶ್ರೀ ಚಿತ್ರಾಪುರ ಮಠದ ಶ್ರೀ ಮದಾನಂದಾಶ್ರಮ ಗುರುಗಳು ಪರಿಷತ್ತನ್ನು ಉದ್ಘಾಟಿಸಿ ಆಶೀರ್ವದಿಸಿದರು. ಅವರು ತಮ್ಮ ಪ್ರಾರಂಭಿಕ ಭಾಷಣದಲ್ಲಿ ಒಂದು ಕೊಂಕಣಿ ಶಬ್ದಕೋಶ ತಯಾರಿಸುವ ಅವಶ್ಯಕತೆಯನ್ನು ಪ್ರತಿಪಾದಿಸಿದರು. ಪರಿಷತ್ತಿಗೆ ಸುಮಾರು ೮೦೦ರಷ್ಟು ಪ್ರತಿನಿಧಿಗಳು ಸನ್ನಿಹಿತರಾಗಿದ್ದರು. ಅಧ್ಯಕ್ಷರು ಕೊಂಕಣಿಯನ್ನು ಪ್ರಾದೇಶಿಕ ಭಾಷೆಯನ್ನಾಗಿ ಮನ್ನಿಸುವಂತೆ ಸರಕಾರಕ್ಕೆ ಬಿನ್ನವಿಸಿಕೊಂಡರು.

ಜಾಹೀರ ನೋಟೀಸು

ತುಂಗಭದ್ರಾ ಯಾನೆ ಪದ್ಮಾವತಿ ಬಿನ್ ಧರ್ಮೇಂದ್ರಪ್ಪ ಆಲೂರ ಸಾ|| ಹಾಡವಳ್ಳಿ, ತಾ|| ಭಟಕಳ ಇವರು ಈ ಮೂಲಕ ಜಾಹೀರಪಡಿಸುವದೇನೆಂದರೆ —

ಭಟಕಳ ಪೇಟಾ [illegible] ಗ್ರಾಮದ ಸ|| ನಂ|| ೧, ಕ್ಷೇತ್ರ ೯-೧೧-೬ ಆಕಾರ ರೂ ೨೯-೭-೦ ಕ್ಕೆ ಪ್ಪಿದ ಸ್ಥಳವು ನಮ್ಮ ಮಾಲ್ಕಿಯದಿದ್ದು, ಸದರಿ ಸ್ಥಳದಲ್ಲಿರುವ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ನಿತ್ಯ-ನೈಮಿತ್ತಿಕ ಪೂಜಾದಿ ವಿನಿಯೋಗಗಳನ್ನು ನಡಿಸುವ ವ್ಯವಸ್ಥೆಗಾಗಿ ನಮ್ಮ ತಂದೆಯವರು ಸದರಿ ಸ್ಥಳವನ್ನು ತಾ ೨೪-೯-೧೯೪೧ನೇಗೆ ಮಾಹಾಬಲ ನಾರಾಯಣ ಭಟ್ಟ [illegible] ರಕ್ಷಕ ತಾಯಿ [illegible] ನಾರಾಯಣ ಭಟ್ಟ ಇವರಿಗೆ, [illegible] ಪರಭಾರೆ [illegible] ರೂ ೨೦ ಗೇಣಿ ಕೊಡುವ ಮತ್ತು ಸ್ಥಳದಲ್ಲಿರುವ ೧೨ ಅಂಕಣಗಳ ಮನೆಯನ್ನು [illegible] ಸದರಿ ಗೇಣಿ ಪತ್ರದಿಂದ ಮನೆ-ಹೊದಿಕೆ ಮಾಡಿಬರುವ ಹಾಗೂ ಸದರಿ ದೇವರ ಪೂಜಾದಿಗಳನ್ನು ನಡಿಸಿಬರುವ ಕರಾರಿನಿಂದ, ಕರಾರು ಮೂಲ ಗೇಣಿಗೆ ಕೊಟ್ಟಿದ್ದರು. ಕರಾರಿನಂತೆ ಸದರಿ ದೇವರಲ್ಲಿ ವಿನಿಯೋಗಗಳನ್ನು ನಡಿಸದೆ ಇರುವಲ್ಲಿ ಮೂಲಗೇಣಿ ಹಕ್ಕನ್ನು [illegible] ಸ್ಥಳದ ಕಬಜಾ ಪಡೆಯಲು ನಾವು ಹಕ್ಕುದಾರರಾದೇವೆಂದು ಸದರಿ ಮೂಲಗೇಣಿ ಚೀಟಿಯಲ್ಲಿ ಸ್ಪಷ್ಟ ಉಲ್ಲೇಖವಿದ್ದುಂಟು. ಇತ್ತ ಕೆಲ ಕಾಲದಿಂದ ಮಾಹಾಬಲನೂ ಅವನ ತಾಯಿಯೂ ಸದರಿ ದೇವರ ಪೂಜೆಯ ವಿನಿಯೋಗ ನಡೆಸದೆ ಸ್ಥಳ-ಮನೆಗಳನ್ನು ಬಿಟ್ಟು ಎಲ್ಲಿಗೋ ಹೋಗಿದ್ದಾರೆ. ಮನೆಯೂ ಅಳಿದು ಬಿದ್ದಿದೆ. ಆದರಿಂದ ನಾನೇ ಈಗ ಸ್ಥಳದ ಕಬಜಾ ಮಾಡಿಕೊಂಡಿದ್ದೇನೆ. ಮಾಹಾಬಲ ಭಟ್ಟನು ಈಗ ಈ ಮೂಲಗೇಣಿ ಹಕ್ಕು ಪರಾಧೀನ ಮಾಡುವ ತಯಾರಿಯಲ್ಲಿದ್ದ ವರ್ತಮಾನ ಕೇಳಿ ಬರುತ್ತಿದೆ. ಆದರೆ ಮೇಲಿನಂತೆ ದೇವರ ವಿನಿಯೋಗಕ್ಕಾಗಿ ಗೇಣಿಗೆ ಕೊಟ್ಟ ಭೂಮಿಯನ್ನು ಪರಾಧೀನ ಮಾಡುವ ಹಕ್ಕು ಮಾಹಾಬಲನಿಗೂ ಅವನ ತಾಯಿಗೂ ಇರುವದಿಲ್ಲ. ಆದರಿಂದ ಪರಾಧೀನ ಮಾಡಿಕೊಳ್ಳುವವರಿಗೆ ಏನೂ ಹಕ್ಕು ಸಿಗುವಂತಿಲ್ಲ. ಎಲ್ಲರೂ ತಿಳಿದಿರಬೇಕು.

ತಾ ೧೪-೧-೧೯೪೯

ತುಂಗಭದ್ರಾ ಡಿ ಆಲೂರ

—※ ಸಾಧನ ※—

ಕನ್ನಡ ಪಕ್ಷಪತ್ರಿಕೆ

ವಾರ್ಷಿಕ ಚಂದಾ ೩-೮-೦ (ಅಂಚೆ ವೆಚ್ಚ ಸೇರಿ)

ಬಿಡಿ ಪ್ರತಿ ೦ ೨-೬

—* ಇಂದೇ ಚಂದಾದಾರರಾಗಿರಿ !! *—

ಪತ್ರ- ಸಾಧನ ಕಾರ್ಯಾಲಯ,

ಹೊನ್ನಾವರ (ಉ. ಕ.)

ಜಿಲ್ಲಾ ಸಮಾಚಾರ

ಶಿರ್ಸಿ— (ತಾ ೧೧-೧-೧೯೪೮) [illegible]

[illegible]

[illegible]

[illegible]

ಪತ್ರಿಕಾ-ಪ್ರಕಟನೆ.

[illegible]

(ಜಿಲ್ಲಾಧಿಕಾರ ಅಪ್ಪಣೆಯಂತೆ ಪ್ರಕಟಿಸಿದ್ದು)

[illegible]

ಜಾಹೀರ ನೋಟೀಸು.

[illegible]

ತಾ ೧೪-೧-೧೯೪೮

ಶಂಕರ ಸುಬ್ರಾಯ ಭಟ್ಟ, ಕರ್ಕಿ

ದಿ ಡೆಕ್ಕನ್ ಇಂಜಿನಿಯರಿಂಗ ಲಿ.,
P O ಮಾಧವನಗರ (M S M RLY.)
ಇವರಿಂದ ತಯಾರಿಸಲ್ಪಟ್ಟ
ಕೆಲಸಕ್ಕೆ ಅತ್ಯುತ್ತಮವಾಗಿಯೂ
ಮತ್ತು ಅತಿ ಸುಲಭವಾಗಿಯೂ ನಡೆಯಬಲ್ಲ
(ಬೊಲ್-ಬೇರಿಂಗುಳ್ಳ ವ್ಯವಸ್ಥೆ ಮಾಡಲ್ಪಟ್ಟ).
"ವಾಸುದೇವ" ಕಬ್ಬಿನ ಗಾಣಗಳು!
ಪ್ರದರ್ಶನ ಹಾಗು ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ
ಭೆಟ್ಟಿಯಾಗಿರಿ.
ದಿ ಯಲ್ಲಾಪುರ ಕೋಒಪರೇಟಿವ್ಹ ಸ್ಟೋರ್ಸ ಲಿ.,
ಯಲ್ಲಾಪೂರ. (ಉ. ಕಾನಡಾ)

ಹೊನ್ನಾವರ

ಭಟಕಳ—

ಶಿರಾಲಿ—

ಯಲ್ಲಾಪುರ—

ಹಳಿಯಾಳ—

ಕಾರವಾರ—

ರೂ. ೧೦ ಇನಾಮು !

ರಾಮಾ ಗೋವಿಂದ ಕಾನಭಾಗ, ಬಾ:

ಕರ್ನಾಟಕ ಶಾಖೆ --
ಕೊಪ್ಪೀಕರ ರೋಡ, ಹುಬ್ಬಳ್ಳಿ.

ನೋಟೀಸು.

೧೯೨೩ನೇ ಇಸವಿಯ ಮುಂಬಯಿ ಲೋಕಲ್ ಬೋರ್ಡ ಆಕ್ಟ ಪ್ರಕಾರ ಮಾಡಿದ ಇಲೆಕ್ಷನ್ ರೂಲ ೭ನೇ ದರ ಅನ್ವಯ ಇದರ ಮೂಲಕವಾಗಿ ಕಾನಡಾ ಜಿಲ್ಲೆಯ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದರೆ—

ಇದೇ ಬರುವ ಕಾನಡಾ ಜಿಲ್ಲೆಯ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಇಲೆಕ್ಷನ್ ಬಾಬತು ಈ ಕೆಳಗಿನಂತೆ ಪ್ರೋಗ್ರಾಮ ಠರಾಯಿಸುತ್ತದೆ

೧ ನೇಮಣೂಕಿ ಪತ್ರಗಳನ್ನು ಸ್ವೀಕರಿಸುವ ಅಖೈರ ತಾರೀಖು (ರಿಟರ್ನಿಂಗ ಆಫೀಸರರ ಆಫೀಸಿನಲ್ಲಿ)	೧೯೪೯ನೇ ಇಸವಿಯ ಫೆಬ್ರುವರಿ ತಿಂಗಳ ತಾ ೧೦ನೇ ಗುರುವಾರ
೨ ನೇಮಣೂಕಿ ಪತ್ರಗಳನ್ನು ತಪಾಸ ಮಾಡುವದು. (ರಿಟರ್ನಿಂಗ ಆಫೀಸರರ ಆಫೀಸಿನಲ್ಲಿ)	೧೯೪೯ನೇ ಇಸವಿಯ ಫೆಬ್ರುವರಿ ತಿಂಗಳ ತಾ. ೧೫ನೇ ಮಂಗಳವಾರ
೩ ಡಿಸ್ಟ್ರಿಕ್ಟ ಲೋಕಲ ಬೋರ್ಡ ಇಲೆಕ್ಷನ್ ಬಗ್ಗೆ ಮತಗಳನ್ನು ಕೊಡುವದು (ಮತ ತೆಗೆದುಕೊಳ್ಳುವ ಬಗ್ಗೆ ನೇಮಿಸಿದ ಪೋಲಿಂಗ ಠಾಣೆಗಳಲ್ಲಿ)	ತಾ. ೨೮-೩-೧೯೪೯ನೇ ಸೋಮವಾರ ದಿವಸ ಬೆಳಿಗ್ಗೆ ೮ರಿಂದ ಮಧ್ಯಾಹ್ನ ೧೨ರ ವರೆಗೆ ಮತ್ತು ೧-೩೦ರಿಂದ ೬ರ ತನಕ
೪ ಮತಗಳನ್ನು ಎಣಿಸುವದು (ರಿಟರ್ನಿಂಗ ಆಫೀಸರರ ಆಫೀಸಿನಲ್ಲಿ)	ತಾ ೧-೪-೧೯೪೯ನೇ ಶುಕ್ರವಾರ (ಆಫೀಸ ವೇಳೆಯಲ್ಲಿ)

ನೇಮಣೂಕಿ ಪತ್ರದ ಫಾರ್ಮು ಆಯಾಯ ತಾಲೂಕಿನ ಮಾಮಲೇದಾರ/ಪೇಠೆಯ ಮಹಾಲಕರಿ ಸಾ|| ರ ಕಡೆಯಿಂದ ಪಡೆಯಬಹುದು.

ಯಾವದಾದರೂ ಮತದಾರರ ಸಂಘದ ಬಗ್ಗೆ ಆರಿಸಿ ತೆಗೆಯಲ್ಪಡಬೇಕೆಂದು ಯಾವನಾದರೂ ಮತದಾರನು ಇಚ್ಛಿಸಿದರೆ ಅವನು ಆಯಾ ಮತದಾರರ ಸಂಘದ ಸುಧಾರಿಸಿದ ಮತದಾರರ ಪತ್ರಿಕೆಯಲ್ಲಿ ಯಾರ ಹೆಸರುಗಳು ಅವೆಯೋ ಆ ವ್ಯಕ್ತಿ ಒಬ್ಬರಿಂದ ನೇಮಿಸಲ್ಪಡಬೇಕು ವ ಮತ್ತೊಬ್ಬರಿಂದ ಅನುಮೋದಿಸಲ್ಪಡಬೇಕು. ಅಂಥ ನೇಮಿಸಲ್ಪಡುವವನು ತನಗೆ ಮೆಂಬರನಾಗಿ ಆರಿಸಿ ತೆಗೆದ ಪಕ್ಷಕ್ಕೆ ತಾನು ಕಬೂಲ ಇದ್ದೇನಾಗಿ ಆ ನೇಮಣೂಕಿ ಪತ್ರದ ಮೇಲೆ ಸಹಿ ಮಾಡಬೇಕು. ಅಂಥ ನೇಮಣೂಕಿ ಪತ್ರಗಳನ್ನು ಮೇಲೆ ನಮೂದಿಸಿದ ಹೊತ್ತಿನಲ್ಲಿ ಈ ಕೆಳಗೆ ಕಾಣಿಸಿದ ರಿಟರ್ನಿಂಗ ಆಫೀಸರರು ತಮ್ಮ ಆಫೀಸಿನಲ್ಲಿ ಸ್ವೀಕರಿಸುವರು.

ಡಿಸ್ಟ್ರಿಕ್ಟ ಲೋಕಲ ಬೋರ್ಡ ಮತದಾರ ಸಂಘದ ಬಗ್ಗೆ	ಆಯಾಯ ತಾಲೂಕಿನ ಮಾಮಲೇದಾರ ಸಾ|| ರು ಪೇಠೆಗಳ ಮಹಾಲ್ಕರಿ ಸಾಹೇಬರು

ನೇಮಣೂಕಿ ಪತ್ರಗಳನ್ನು ಕೊಡುವ ಪೂರ್ವದಲ್ಲಿ ಡಿಸ್ಟ್ರಿಕ್ಟ ಲೋಕಲ ಬೋರ್ಡ ಮೆಂಬರ ಆಗಲಿಚ್ಛಿಸುವವರು ರೂ ೧೦೦/- ಒಂದು ನೂರು ರೂಪಾಯಿ ರಿಟರ್ನಿಂಗ ಆಫೀಸರರ ಕಡೆಗೆ ಡಿಪೋಜಿಟ್ ಇಡಬೇಕು ಮತ್ತು ನೇಮಣೂಕಿ ಪತ್ರದ ಸಂಗಡ ಚುನಾವಣೆ ಬಗ್ಗೆ ಪ್ರತಿಜ್ಞಾ ಲೇಖಕ್ಕೆ ಸಹಿ ಮಾಡಬೇಕು. ಚುನಾವಣೆ ಏಜಂಟನು, ಉಮೇದವಾರನು ತಾನೇ ಆಗಬಹುದು ಯಾ ಮೆಂಬರ ಆಗಲಿಕ್ಕೆ ಲಾಯಖ ಇದ್ದಂಥ ಬೇರೆಯವನೂ ಇರಬಹುದು.

ಟೀಪು:— ಮೇಲೆ ನಮೂದಿಸಿದ ಸಂಘದ ಬಾಬತು ಮತಗಳನ್ನು ಕೊಡುವ ಬಗ್ಗೆ ನೇಮಿಸಿದ ಪೋಲಿಂಗ ಠಾಣೆಗಳ ಯಾದಿ ಇದರ ಲಗತ್ತ ಇರುತ್ತದೆ.

ಕಾರವಾರ,
ತಾ ೨೨-೧೨-೪೮.

M. ALLAHBAKSH.
ಕಾನಡಾ ಜಿಲ್ಲೆಯ ಕಲೆಕ್ಟರರು.

ಕಾನಡಾ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಇಲೆಕ್ಷನ್.

ಮತದಾರ ಸಂಘದ ಬಗ್ಗೆ ಮತ ತೆಗೆದುಕೊಳ್ಳುವ ಸ್ಟೇಶನುಗಳು
ಸನ್ 1949 ನೇ ಇಸವಿ.

ಸಂಘದ ಹೆಸರು (1)	ಪೋಲಿಂಗ ಠಾಣೆಗಳ ನಂಬರು ವ ಹೆಸರು (2)
೧ ಬಾಡ ಮತದಾರ ಸಂಘ ಕಾರವಾರ ತಾಲೂಕ.	೧ ಚೆಂಡಿಯ (ಲೋಕಲ್ ಬೋರ್ಡ ಧರ್ಮಶಾಲೆ)
	೨ ಕಡವಾಡ (ಕನ್ನಡ ಶಾಲೆ)
	೩ ಕಾರವಾರ (ಮರಾಠಿ ಹುಡುಗಿಯರ ಶಾಲೆ)
	೪ ನೈತಿಸಾವರ (ನೈತಿ ಫೋರೆಸ್ಟ ಬಂಗಲೆ)
೨ ಚಿತಾಕುಲಾ ಮತದಾರ ಸಂಘ ಕಾರವಾರ	೧ ಅಂಗಡಿ (ಶಿವನಾಥ ದೇವಸ್ಥಾನ)
	೨ ಚಿತಾಕುಲಾ (ಧರ್ಮಶಾಲೆ)
	೩ ಹಣಕೋಣ (ಪಿ ಡಬ್ಲ್ಯು ಡಿ ಸ್ಟೋರ)
	೪ ಕದ್ರಾ (ಧರ್ಮಶಾಲಾ ನಂ ೨)
೩ ಅಂಕೋಲಾ ಮತದಾರ ಸಂಘ, ಅಂಕೋಲಾ ತಾಲೂಕ	೧ ಅಂಕೋಲಾ (ತಾಲೂಕ ಕಚೇರಿ)
	೨ ಅಂಕೋಲಾ (ಗ್ರಾಮಚಾವಡಿ)
	೩ ಹಟ್ಟಿಕೇರಿ (ಹಟ್ಟಿಕೇರಿ ಧರ್ಮಶಾಲೆ)
	೪ ಹಿಲ್ಲೂರ (ಹಿಲ್ಲೂರ ಧರ್ಮಶಾಲೆ)
	೫ ಸುಂಕಸಾಳ (ಸುಂಕಸಾಳ ಗ್ರಾಮಚಾವಡಿ)
	೬ ಉಳವರೆ (ಉಳವರೆ ತಾರಿ ವಿಶ್ರಾಂತಿಗೃಹ)
೪ ಬರ್ಗಿ ಮತದಾರ ಸಂಘ, ಕುಮಟಾ ತಾಲೂಕ	೧ ಗೋಕರ್ಣ (ಗೋಕರ್ಣ ಲೋಕಲ್ ಬೋರ್ಡ ಧರ್ಮಶಾಲೆ)
	೨ ಹನೇಹಳ್ಳಿ (ಹನೇಹಳ್ಳಿ ದೇವತಿ ದೇವಸ್ಥಾನ)
	೩ ಹಿರೇಗುತ್ತಿ (ಲೋಕಲ್ ಬೋರ್ಡ ಧರ್ಮಶಾಲೆ)
	೪ ಕತ್ರಿಗಾಲ (ಕತ್ಗಾಲ ಗ್ರಾಮಚಾವಡಿ)
	೫ ಮಿರ್ಜಾನ (ಮಿರ್ಜಾನ ಲೋಕಲ್ ಬೋರ್ಡ ಧರ್ಮಶಾಲೆ)
೫ ಕೂಜಳ್ಳಿ ಮತದಾರ ಸಂಘ, ಕುಮಟಾ ತಾಲೂಕ	೧ ದೇವಗಿರಿ (ದೇವಗಿರಿ ಗ್ರಾಮಚಾವಡಿ)
	೨ ಗುಡೇಅಂಗಡಿ (ಗುಡೇಅಂಗಡಿ ಲೋಕಲ್ ಬೋರ್ಡ ಕನ್ನಡ ಶಾಲೆ)
	೩ ಹೆಗಡೆ (ಹೆಗಡೆ ಕನ್ನಡ ಶಾಲೆ)
	೪ ಕುಮಟಾ (ಕುಮಟಾ (ಅ) ಕುಂಭೇಶ್ವರ ದೇವಸ್ಥಾನ)
	೫ ಕುಮಟಾ (ಬ) (ಜ್ಯುಬಿಲಿ ಧರ್ಮಶಾಲೆ)
	೬ ಸಾಂತಗಲ್ (ಸಾಂತಗಲ್ ಲೋಕಲ ಬೋರ್ಡ ಸ್ಟೋರ ಹೌಸ)
	೭ ವಾಲಗಳ್ಳಿ (ವಾಲಗಳ್ಳಿ ಕನ್ನಡ ಶಾಲೆ)

ಸಂಘದ ಹೆಸರು (1)	ಪೋಲಿಂಗ ಠಾಣೆಗಳ ನಂಬರು ವ ಹೆಸರು (2)
೭ ಹೊನ್ನಾವರ ಮತದಾರ ಸಂಘ, ಹೊನ್ನಾವರ ತಾಲೂಕ	೧ ಗುಣವಂತೆ (ಗುಣವಂತೆ ಶಂಭುಲಿಂಗ ದೇವಸ್ಥಾನ)
	೨ ಹೊನ್ನಾವರ (ಮಾಮಲೇದಾರ ಕಚೇರಿ)
	೩ ಜಲವಳ್ಳಿಕರ್ಕಿ (ಶ್ರೀ ಚವನ್ನದೇವಸ್ಥಾನ)
	೪ ಮಂಕಿ (ಮಂಕಿ ಗ್ರಾಮಚಾವಡಿ)
	೫ ಉಪ್ಪೋಣಿ (ಶ್ರೀ ಕಾಂತಾದುರ್ಗಾ ದೇವಸ್ಥಾನ)
೮ ಹಳದೀಪುರ ಮತದಾರ ಸಂಘ, ಹೊನ್ನಾವರ ತಾಲೂಕ	೧ ಹಡಿನಬಾಳ (ಹಡಿನಬಾಳ ಕನ್ನಡಶಾಲೆ)
	೨ ಹಳದೀಪುರ (ಹಳದೀಪುರ ಗ್ರಾಮಚಾವಡಿ)
	೩ ಹೊಸಾಕುಳಿ (ಹೊಸಾಕುಳಿ ಮಕ್ಕಿ ದೇವಸ್ಥಾನ)
	೪ ಕರ್ಕಿ (ಕರ್ಕಿ ಗ್ರಾಮಚಾವಡಿ)
	೫ ಕೆಕ್ಕಾರ (ಗ್ರಾಂಟ-ಇನ್-ಎಡ್ ಕನ್ನಡ ಶಾಲೆ)
	೬ ನಗರಬಸ್ತಿಕೇರಿ (ನಗರಬಸ್ತಿಕೇರಿ ಲೋಕಲ್ ಬೋರ್ಡ ಧರ್ಮಶಾಲಾ)
೯ ಭಟಕಳ ಮತದಾರ ಸಂಘ, ಭಟಕಳ ಪೇಟಾ	೧ ಬೆಳಕೆ (ಬೆಳಕೆ ಲೋಕಲ್ ಬೋರ್ಡ ಧರ್ಮಶಾಲೆ)
	೨ ಭಟಕಳ (ಮುಸ್ಲಿಂ ಗರ್ಲ ಸ್ಕೂಲ)
	೩ ಭಟಕಳ (ಮಹಾಲ ಆಫೀಸ ಭಟಕಳ)
	೪ ಹಾಡ್ವಳ್ಳಿ (ಇನ್ಸ್ಪೆಕ್ಶನ್ ಬಂಗ್ಲೆ ಹಾಡ್ವಳ್ಳಿ)
	೫ ಮಾವಳ್ಳಿ (ಮುಸ್ಲಿಂ ಗಂ ಮ ಶಾಲೆ)
	೬ ಕ್ಯಾಕಿಣಿ (ಕನ್ನಡ ಗಂಡು ಮಕ್ಕಳ ಶಾಲೆ ತೆರನಮಕ್ಕಿ)
	೭ ಶಿರಾಲಿ (ಶಿರಾಲಿ ಲೋಕಲ್ ಬೋರ್ಡ ಧರ್ಮಶಾಲಾ ಶಿರಾಲಿ)
೧೦ ಸಿದ್ದಾಪುರ ಮತದಾರ ಸಂಘ, ಸಿದ್ದಾಪುರ ತಾಲೂಕ	೧ ಬಿಳಗಿ (ಲೋಕಲ್ ಬೋರ್ಡ ಧರ್ಮಶಾಲಾ)
	೨ ದೊಡ್ಮನೆ (ಗ್ರಾಮ ಚಾವಡಿ)
	೩ ಹಾರ್ಸಿಕಟ್ಟಾ (ಹಾರ್ಸಿಕಟ್ಟಾ ಧರ್ಮಶಾಲಾ)
	೪ ಹೇರೂರ (ಗ್ರಾಮಚಾವಡಿ)
	೫ ಕಾನಸೂರ (ಕಾನಸೂರ ಗ್ರಾಮಚಾವಡಿ)
	೬ ಕೋಲಶಿರ್ಸಿ (ಲೋಕಲ್ ಬೋರ್ಡ ಕನ್ನಡ ಶಾಲಾ)
	೭ ಮಾವಿನಗುಂಡಿ (ಧರ್ಮಶಾಲಾ)
	೮ ನಿಲ್ಕುಂದ (ನಿಲ್ಕುಂದ ಧರ್ಮಶಾಲಾ)
	೯ ಸಿದ್ದಾಪುರ (ತಾಲೂಕ ಕಚೇರಿ)
೧೧ ಸಿರ್ಸಿ ಮತದಾರ ಸಂಘ ಸಿರ್ಸಿ ತಾಲೂಕ	೧ ಸಿರ್ಸಿ (ಮ್ಯುನಿಸಿಪಲ್ ಆಫೀಸ)
	೨ ಸಿರ್ಸಿ (ತಾಲೂಕಾ ಆಫೀಸ)
	೩ ಬನವಾಸಿ (ಗ್ರಾಮಚಾವಡಿ)
	೪ ಇಸಳೂರ (ಇಸಳೂರ ಗ್ರಾಮಚಾವಡಿ)
	೫ ಹುಲೇಕಲ್ (ಲೋಕಲ್ ಬೋರ್ಡ ಧರ್ಮಶಾಲಾ)
	೬ ಶಿವಗಾಂವ (ಹೆಗಡೆಕಟ್ಟೆಯ ಧರ್ಮಶಾಲೆ)
	೭ ಸಂಪಖಂಡ (ಶಾಲಾ ಸಂಪಖಂಡ)
	೮ ಬದನಗೋಡ (ಲೋಕಲ್ ಬೋರ್ಡ ಧರ್ಮಶಾಲಾ ದಾಸನಕೊಪ್ಪ)
	೯ ಉಂಚಳ್ಳಿ (ಫಾರೆಸ್ಟ ನಾಕಾ)
೧೨ ಯಲ್ಲಾಪುರ ಮತದಾರ ಸಂಘ, ಯಲ್ಲಾಪುರ ತಾಲೂಕ	೧ ಭರತನಳ್ಳಿ (ಗ್ರಾಮಚಾವಡಿ)
	೨ ದೇಹಳ್ಳಿ (ಬಜ್ಜಬೇಣ ಧರ್ಮಶಾಲಾ)
	೩ ಇಡಗುಂದಿ (ಧರ್ಮಶಾಲಾ)
	೪ ಕಿರವತ್ತಿ (ಧರ್ಮಶಾಲಾ)
	೫ ಮಂಚಿಕೇರಿ (ಗ್ರಾಮಚಾವಡಿ)
	೬ ಮಾವಿನಮನೆ (ರಾಮಲಿಂಗ ದೇವಸ್ಥಾನ)
	೭ ನಂದೊಳ್ಳಿ (ಫಾರೆಸ್ಟ ನಾಕಾ)
	೮ ವಜ್ರಳ್ಳಿ (ವಜ್ರಳ್ಳಿ ದವಾಖಾನೆ)
	೯ ಯಲ್ಲಾಪುರ (ತಾಲೂಕ ಆಫೀಸ)
೧೩ ಮುಂಡಗೋಡ ಮತದಾರ ಸಂಘ, ಮುಂಡಗೋಡ ತಾಲೂಕ	೧ ಮುಂಡಗೋಡ (ತಾಲೂಕ ಆಫೀಸ)
	೨ ಪಾಳಾ (ಪಾಳಾ ಗ್ರಾಮಚಾವಡಿ)
೧೪ ಹಳಿಯಾಳ ಮತದಾರ ಸಂಘ, ಹಳಿಯಾಳ ತಾಲೂಕ	೧ ದಾಂಡೇಲಿ (ದಾಂಡೇಲಿ ರೇಂಜರ ಆಫೀಸ)
	೨ ಮನವಳ್ಳಿ (ಮನವಳ್ಳಿ ಗ್ರಾಮಚಾವಡಿ)
	೩ ಮುರಕವಾಡ (ಮುರಕವಾಡ ಗ್ರಾಮದೇವಿ ದೇವಸ್ಥಾನ)
	೪ ಹಳಿಯಾಳ (ಮ್ಯುನಿಸಿಪಲ್ ಆಫೀಸ ಹಳಿಯಾಳ ಮ್ಯುನಿಸಿಪಲ್ ಹದ್ದು)
	೫ ಹಳಿಯಾಳ (ತಾಲೂಕ ಆಫೀಸ)
	೬ ಸಾಂಬ್ರಾಣಿ (ಸಾಂಬ್ರಾಣಿ ಧರ್ಮಶಾಲಾ)
೧೫ ಸುಪಾ ಮತದಾರ ಸಂಘ, ಸುಪಾ ಪೇಟಾ	೧ ಕಾಲಸಾಯಿ (ಕಾಲಸಾಯಿ ದೇವಸ್ಥಾನ)
	೨ ಕುಂಭಾರವಾಡಾ (ಕುಂಭಾರವಾಡಾ ಧರ್ಮಶಾಲಾ)
	೩ ಸುಪಾ (ಸುಪಾ ಗ್ರಾಮಚಾವಡಿ)
	೪ ಅಸೂ (ಅಸೂ ನಾಗನಾಥ ದೇವಸ್ಥಾನ)
	೫ ಗುಂದ (ಗುಂದ ಫಾರೆಸ್ಟರ ನಾಕಾ)
	೬ ಕ್ಯಾಸಲರಾಕ (ಕ್ಯಾಸಲರಾಕ ಧರ್ಮಶಾಲಾ)

ಕಾರವಾರ,
ತಾ ೨೦-೧೨-೪೮.

M. ALLAHBAKSH
ಕಾನಡಾ ಜಿಲ್ಲೆಯ ಕಲೆಕ್ಟರ.

THE BANK OF RURAL INDIA LTD.

(Incorporated in British India, Liability of Members Limited)

HEAD OFFICE — "Satvabhama Bhavan", KARWAR. N K

Offices at :— KARWAR, KUMTA, SIRSI, HONAVAR, YELLAPUR, BHATKAL, SIDDAPUR ANKOLA, HUBLI & DHARWAR

Authorised Capital . Rs. 10,00,000.
Subscribed Capital .. Rs 5,00 000;
Paid-up Capital & Reserves , Rs. 5,08,502-8-0

Rates of Interest on Deposits

Current a/c @ 1% p a. Savings Bank a/c @ 2½%

Fixed Deposits for 3 months @ 3% per annum
, for 6 monnths @ 3½% ,
, for 12 monhs or more @ 4% ,,

All kinds of modern Banking business transacted

Karwar
14-2-1948

P. X GRACIOUS.
MANAGING DIRECTOR

ನಮ್ಮಲ್ಲಿ ಕತ್ತದ ಚಕಾರ್ ಹುರಿ ಮತ್ತು ಬಾವಿ ಹಗ್ಗಗಳು
ಯೋಗ್ಯ ದರದಲ್ಲಿ ಸಿಗುತ್ತವೆ
ಟಿ.ಎಂ.ಎಸ್., ಕತ್ತದ ಸೊಸೈಟಿ ಲಿಮಿಟೆಡ್
ಹೊನ್ನಾವರ (ಉ.ಕ.)

ಕಾಶೀಯಾತ್ರಿಕರಿಗೆ ವಿಶೇಷ ಸೂಚನೆ

ನಮ್ಮ ವಿಳಾಸಕ್ಕೆ ಮುಂದಾಗಿ ಬರೆಯುವದರಿಂದ ಹೋಗ, ಬರುವ ವ್ಯವಸ್ಥೆಯು ಕಾಶೀ, ಪ್ರಯಾಗ, ಗಯಾ ಯಾತ್ರೆಗಳನ್ನು ಯಾತ್ರಿಕರ ಮನಸ್ಸಿನಂತೆ ಸ್ವತಃ ಮಾಡಿಸಿಕೊಡುತ್ತೇವೆ. ನಮ್ಮಲ್ಲಿಂದ ಪಟ್ಟಿ, ಟೋಪಿ, ಶಿವಲಿಂಗ, ರುದ್ರಾಕ್ಷಿ ವಗೈರೆ ಯಾವತ್ತೂ ಸಾಮಾನುಗಳು ಯೋಗ್ಯ ದರದಲ್ಲಿ ದೊರೆಯುವವು.

ಗೋಕರ್ಣ ಗಣಪತಿ ವಾಸುದೇವ ಭಟ್ಟ,
ಪತ್ತರಗಲ್ಲಿ, ಬನಾರಸ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ, (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೮-೦
ಟಪಾಲ ಖರ್ಚು ಸಹ ವರ್ಷಕ್ಕೆ ೩-೧-೦
" ಆರು ತಿಂಗಳಿಗೆ ೧ ೧೦-೦
ಬಿಡಿ ಸಂಚಿಕೆಗೆ " ೦ ೧-೦
ವ್ಹಿ. ಪಿ. ಯಿಂದ ಪತ್ರಿಕೆ ತರಿಸುವವರು ವ್ಹಿ. ಪಿ. ವೆಚ್ಚ ೭ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B. 1270. Monday, 24-1-1949.

ಕಾನಡಾ ವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೩೦.

ಕುಮಟಾ. ಸೋಮವಾರ, ತಾ ೨೪—೧—೧೯೪೯.

ಜಾಹೀರಾತುಗಳ ದರ:
ಕಾಲಮ್ಮಿನ ಒಂದು ಇಂಚು
೧ ಸಾರೆಗೆ ೮ ಆಣೆಯಂತೆ.
ವಿಶೇಷ ಅಥವಾ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪತ್ರ
ವ್ಯವಹಾರ ಮಾಡಿ
ತಿಳಕೊಳ್ಳಬೇಕು.

ವಿವಿಧ ವಿಷಯಗಳು

ಉದಾರವಾದಿ ಪಕ್ಷದ ಪ್ರಮುಖ ಮುಂದಾಳುಗಳೂ ರಾಜಕಾರಣ-ಪಟು ದೇಶಭಕ್ತರೂ ಆಗಿದ್ದ ಸರ್ ತೇಜಬಹಾದ್ದೂರ ಸಪ್ರು ಇವರು, ತಮ್ಮ ವಯಸ್ಸಿನ ೭೪ನೇ ವರುಷದಲ್ಲಿ, ಪ್ರಯಾಗದಲ್ಲಿರುವ ತಮ್ಮ ನಿವಾಸಸ್ಥಾನದಲ್ಲಿ, ಕಳೆದ ಗುರುವಾರ ರಾತ್ರಿ ೧೧|| ಘಂಟೆಗೆ ದಿವಂಗತರಾದರೆಂದು ನಮೂದಿಸಲು ವ್ಯಸನವಾಗುತ್ತದೆ. ಸಪ್ರು ಇವರ ಮನೆತನ ಕಾಶ್ಮೀರಿ ಬ್ರಾಹ್ಮಣರದಿರುತ್ತದೆ. ಅವರ ಹಿರಿಯರು ದಿಲ್ಲಿಯಲ್ಲಿ ವಾಸ್ತವ್ಯ ಮಾಡಿಕೊಂಡಿದ್ದರು. ತೇಜಬಹಾದ್ದೂರರು ೧೮೯೫ರಲ್ಲಿ, ಪ್ರಾಯದ ೨೦ನೇ ವರ್ಷದಲ್ಲಿ, ಇಂಗ್ಲಿಶ ಭಾಷೆಯ ವಿಷಯವನ್ನು ತಕ್ಕೊಂಡು ಎಮ್. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಆ ಪರೀಕ್ಷೆಯಲ್ಲಿ ಪ್ರಥಮ ವರ್ಗದ ಪ್ರಥಮ ಸ್ಥಾನ ಪಡೆದರು. ಆ ಮೇಲೆ ಅವರು ವಕೀಲಿಯ ಅಭ್ಯಾಸ ಮಾಡಿ, ಮೊದಲು ಮುರಾದಾಬಾದದಲ್ಲೂ ನಂತರ ಅಲಹಾಬಾದದಲ್ಲೂ ವಕೀಲಿಯನ್ನು ನಡಿಸಿದರು, ಮತ್ತು ಅಗ್ರಗಣ್ಯ ವಕೀಲರೆಂದು ಕೀರ್ತಿ ಸಂಪಾದಿಸಿದರು. ೧೯೧೩ರಿಂದ ಅವರು ಕಾಯಿದೆ ಮಂಡಳದ ಸದಸ್ಯರಾಗಿಯೂ ಅ|| ಭಾ|| ಕಾಂ|| ಸಮಿತಿಯ ಸದಸ್ಯರಾಗಿಯೂ ನಾಡಿನ ರಾಜಕಾರಣದಲ್ಲಿ ಭಾಗ ವಹಿಸಲಾರಂಭಿಸಿದರು. ೧೯೧೮ರಲ್ಲಿ ಅವರು ಇತರ ಪ್ರಾಗತಿಕರೊಡನೆ ಕಾಂಗ್ರೆಸ್ಸಿನಿಂದ ಹೊರಬಿದ್ದು "ಉದಾರವಾದಿ ಪಕ್ಷ" ವೆಂಬ ಬೇರೊಂದು ಪಕ್ಷ ಕಟ್ಟಿದರು. ಈ ಪಕ್ಷದ ಅಧ್ಯಕ್ಷಪದವನ್ನು ೩ ಸಾರೆ ವಹಿಸಿದ್ದರು. ೧೯೨೦ರಲ್ಲಿ ಮೊಂಟೆಗ್ಯೂ ಸುಧಾರಣೆಗಳು ಅಮಲಿನಲ್ಲಿ ಬಂದ ತರುವಾಯ ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳದ ಸದಸ್ಯರಾಗಿದ್ದರು. ಆ ಕಾಲದಲ್ಲಿ ಅವರು, ವೃತ್ತಪತ್ರಗಳನ್ನು ನಿಯಂತ್ರಿಸುವದಕ್ಕಾಗಿ ೧೯೧೦ರಲ್ಲಿ ರಚಿಸಿದ ಮುದ್ರಣ (ಪ್ರೆಸ್) ಕಾನೂನನ್ನು ರದ್ದುಗೊಳಿಸಿಕೊಂಡರು. ೧೯೩೦ರ ಸತ್ಯಾಗ್ರಹದ ಆಂದೋಲನದ ಕಾಲಕ್ಕೆ ಆಳರಸರಿಗೂ ರಾಷ್ಟ್ರೀಯ ಸಭೆಯವರಿಗೂ ಸಂಧಾನ ಮಾಡಿ ತರುವದಕ್ಕಾಗಿ ಸರ ತೇಜಬಹಾದ್ದೂರರು ಡಾ|| ಮುಕುಂದರಾವ ಜಯಕರರೊಡನೆ ಮಾಡಿದ ಪ್ರಯತ್ನದ ಕಥೆ ಇನ್ನೂ ಜನರ ಸ್ಮರಣೆಯಲ್ಲುಂಟು. ದಿಲ್ಲಿಯಿಂದ ನೆಹರು ಪಿತಾ-ಪುತ್ರರಿದ್ದ ನೈನಿತಾಲದ ತುರುಂಗಕ್ಕೂ ಮಹಾತ್ಮರಿದ್ದ ಯೆರವಡಾ ತುರುಂಗಕ್ಕೂ, ಈ ತುರುಂಗಗಳಿಂದ ತಿರುಗಿ ಅಲ್ಲಿಯ ಸರ್ವಾಧಿಪತಿಗಳ ಭವನಕ್ಕೂ ಸಪ್ರು-ಜಯಕರರು ಹಲವು ಸಾರೆ ಯಾತ್ರೆ-ಪ್ರತಿಯಾತ್ರೆಗಳನ್ನು ಮಾಡಿದ್ದರು. ಅವರ ಪ್ರಯತ್ನ ಕೊನೆಗೆ ನಿಷ್ಫಲವಾಯಿತೆಂಬ ಮಾತು ಬೇರೆ. ದುಂಡು ಮೇಜಿನ ಪರಿಷತ್ತುಗಳಲ್ಲೂ ಸರ್ ತೇಜಬಹಾದ್ದೂರರು ಅಗ್ರಭಾಗ ವಹಿಸಿ, ೧೯೩೫ರ ರಾಜ್ಯಘಟನೆಯನ್ನು ಆದಷ್ಟು ಹಿಂದೀಯರಿಗೆ ಅನುಕೂಲ ಮಾಡಿಕೊಳ್ಳಲು ಪ್ರಯತ್ನಪಟ್ಟಿದ್ದರು. ಸರ್ ತೇಜಬಹಾದ್ದೂರರು ಸಮತೋಲ ವೃತ್ತಿಯ ರಾಜಕಾರಣಪಟುಗಳಿದ್ದರೆಂಬ ಕಾರಣದಿಂದ ಮಹಾತ್ಮಾಜಿಯವರು ಕೂಡ ಅವರ ಮಾತುಗಳನ್ನು ಗೌರವದಿಂದ ಕೇಳಿಕೊಳ್ಳುತ್ತಿದ್ದರು. ೧೯೪೨ರಲ್ಲಿ ಕೂಡ ಅವರು ಆಳರಸರಿಗೂ ರಾಷ್ಟ್ರೀಯ ಸಭೆಯವರಿಗೂ ಸಂಧಾನ ಮಾಡಿ ತರುವದಕ್ಕಾಗಿ ಅಖಿಲ ಭಾರತೀಯ ತ್ರಯಸ್ಥರದೊಂದು ಪರಿಷತ್ತನ್ನು ದಿಲ್ಲಿಯಲ್ಲಿ ಕೂಡಿಸಿದ್ದರೆಂಬುದನ್ನು ಮರೆಯಲಾಗದು. ಆ ಪರಿಷತ್ತಿನ ಸಲಹೆಗಳನ್ನು ಆ ಕಾಲದ ಸರ್ವಾಧಿಪತಿಗಳಾದ ಲಿನಲಿಥಗೋ ದೊರೆಗಳು ಕಡೆಗಣಿಸಿದ್ದರಿಂದ ಸಂತಾಪಗೊಂಡ ಸರ್ ತೇಜಬಹಾದ್ದೂರರು ದೊರೆಗಳ ಆಳಿಕೆಯನ್ನು ಬಹಳ ಕಟುತರವಾಗಿ ಟೀಕಿಸಿದ್ದರು. ಇತ್ತ ೧-೧|| ವರ್ಷಗಳಿಂದ ಸರ್ ಸಾಹೇಬರ ಪ್ರಕೃತಿ ನೆಟ್ಟಗಿದ್ದಿಲ್ಲ. ಕೊನೆಗೆ ಗುರುವಾರ ರಾತ್ರಿ, ಪುತ್ರ-ಪೌತ್ರ-ಪ್ರಪೌತ್ರರೆಲ್ಲ ಸಮೀಪದಲ್ಲಿದ್ದಾಗ, ಅವರ ದೇಹಾವಸಾನವಾಯಿತು. ಅವರ ನಿಧನದಿಂದ ಭಾರತವು ಒಂದು ಅನುಭವಿಕ ರಾಜಕಾರಣಿಯನ್ನು ಕಳಕೊಂಡಿದೆ. ಅವರಿಗೆ ದೇವರು ಸದ್ಗತಿಯನ್ನೀಯಲಿ.

ಮುಂಬಯಿ ಪ್ರಾಂತದೊಳಗಿನ ಒಂದು ಸಮಾಜದವರ ಧಾರ್ಮಿಕ ಹಾಗೂ ಇತರ ಸಾರ್ವಜನಿಕ ಉಪಯೋಗದ ವಿಶ್ವಾಸ-ನಿಧಿ (ಟ್ರಸ್ಟ) ಗಳ ಆಡಳಿತೆಯ ಚೌಕಶಿ ಮಾಡಿ, ಅವುಗಳ ಸುಧಾರಣೆಯ ಬಗ್ಗೆ ಯುಕ್ತ ಕಂಡ ಶಿಫಾರಸುಗಳನ್ನು ಮಾಡುವದಕ್ಕಾಗಿ ಮುಂಬಯಿ ಸರಕಾರವು ಮುಂಬಯಿ ಹಾಯಕೋರ್ಟಿನ ನ್ಯಾಯಾಧೀಶರಾಗಿದ್ದ ನ್ಯಾ|| ಮೂ|| ತೆಂಡೋಲಕರರ ಅಧ್ಯಕ್ಷತೆಯಲ್ಲಿ ಒಂದು ಚೌಕಶಿ ಸಮಿತಿಯನ್ನು ನೇಮಿಸಿತ್ತು. ಆ ಸಮಿತಿಯು ಸರಕಾರಕ್ಕೆ ಒಪ್ಪಿಸಿದ ವರದಿಯು ಬಹಳ ಮನನೀಯವಿದೆ. ವಿಶ್ವಾಸನಿಧಿಗಳ ಆಡಳಿತೆಯನ್ನು ಕಾಲ ಕಾಲಕ್ಕೆ ಪರೀಕ್ಷಿಸಿ ನಿಯಂತ್ರಿಸುವ ವ್ಯವಸ್ಥೆಯಿಲ್ಲದ್ದರಿಂದಲೂ ಆಡಳಿತೆದಾರರ ಮೇಲೆ ಪ್ರಭಾವಿ ಅಂಕೆಯಿಲ್ಲದ್ದರಿಂದಲೂ ವಿಶ್ವಸ್ತರು ಮನಸ್ವಿ ವರ್ತನ ಮಾಡಿ ಪ್ರತಿವರ್ಷ ಲಕ್ಷಾವಧಿ ರೂಪಾಯಿಗಳ ದುರ್ವ್ಯಯ ಮಾಡುತ್ತಿದ್ದದ್ದು ಕಂಡು ಬಂದಿದೆಯಾಗಿ ಸಮಿತಿಯವರು ನಮೂದಿಸಿ, ಈ ಎಲ್ಲ ವಿಶ್ವಾಸನಿಧಿಗಳ ಆಡಳಿತೆಯನ್ನು ಸರಿಯಾಗಿ ನಿಯಂತ್ರಿಸುವದಕ್ಕಾಗಿ ಇಡೀ ಪ್ರಾಂತಕ್ಕೆ ಓರ್ವ ಧರ್ಮಾದಾಯ ಅಧಿಕಾರಿ (ಚೆರಿಟಿ ಕಮಿಶನರ) ಯನ್ನೂ ಅವನ ಕೆಳಗೆ ಕೆಲವು ಪ್ರಾದೇಶಿಕ ಅಧಿಕಾರಿಗಳನ್ನೂ, ಸಹಾಯಕರನ್ನೂ ನೇಮಿಸಬೇಕೆಂದೂ, ಈ ಅಧಿಕಾರಿಗಳಿಗೆ ವಿಶ್ವಾಸನಿಧಿಗಳ ತಪಾಸಣೆ ಮಾಡಿ, ಅವುಗಳ ವಿನಿಯೋಗದ ಬಗ್ಗೆ ಅಧಿಕಾರವಾಣಿಯಿಂದ ಸೂಚನೆಗಳನ್ನು ಕೊಡುವ ಮತ್ತು ಕಾರ್ಯಕಾರ ಮಾಡಿಸುವ ಅಧಿಕಾರ ಕೊಡಬೇಕೆಂದೂ ಸಮಿತಿಯು ಶಿಫಾರಸು ಮಾಡಿದೆ. ಯಾವದೊಂದು ನಿಧಿಯು ಹಣದ ವಿನಿಯೋಗವನ್ನು ಪೂರ್ವ ಸಂಕಲ್ಪಿತ ಕಾರ್ಯಕ್ಕಾಗಿ ಮಾಡಲು ಅಶಕ್ಯವಾದಾಗ, ವಿಶ್ವಸ್ತರು ನ್ಯಾಯಾಸನದ ಅಪ್ಪಣೆ ಪಡಕೊಂಡು ಆ ಹಣವನ್ನು "ತತ್ಸಮ" ಕಾರ್ಯಕ್ಕಾಗಿ ವಿನಿಯೋಗಿಸಬರುತ್ತದೆ. ಕಾಯದೆಯ ಭಾಷೆಯಲ್ಲಿ ಈ ತತ್ವಕ್ಕೆ "ಸ್ಯಾಪ್ರೆಸ್" ಎಂದು ಹೇಳುತ್ತಾರೆ. ಈ ತತ್ವವನ್ನು ವಿಸ್ತರಿಸಿ, ಧಾರ್ಮಿಕ ನಿಧಿಗಳ ಉಳಿತಾಯದ ಹಣವನ್ನು ಧಾರ್ಮಿಕೇತರ ಕಾರ್ಯಗಳಿಗಾಗಿ ವಿನಿಯೋಗಿಸಬರುವಂತೆಯೂ, ಅಂಥ ಉಳಿತಾಯದ ಹಣವನ್ನು ಬೇರೊಂದು ಕಾರ್ಯಕ್ಕೆ ವಿನಿಯೋಗಿಸಲು ಆಜ್ಞೆ ಮಾಡುವ ಅಧಿಕಾರವನ್ನು ಧರ್ಮಾದಾಯ ಅಧಿಕಾರಿಗೆ ಕೊಡುವಂತೆಯೂ ಒಂದು ಕಾನೂನು ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡಿದೆ. ಸಮಿತಿಯು ಇಷ್ಟಕ್ಕೇ ತಡೆಯದೆ, ಯಾವದೊಂದು ಧಾರ್ಮಿಕ ನಿಧಿಯ ಹಣದ ರೂಢ ಮತ್ತು ಪರಂಪರಾಗತ ವಿನಿಯೋಗ-ಕ್ರಮದಿಂದ ಸಮಾಜಕ್ಕೆ ಅಷ್ಟೇನು ಲಾಭವಾಗುವದಿಲ್ಲೆಂದು ಕಂಡು ಬಂದರೆ, ಆ ಸಂಪೂರ್ಣ ವಿನಿಯೋಗ-ಕ್ರಮವನ್ನು ಬದಲಿಸಿ ಅನ್ಯ ಲೋಕೋಪಯೋಗಿ ಕಾರ್ಯಗಳಿಗಾಗಿಯೂ ಸಂಸ್ಥೆಗಳಿಗಾಗಿಯೂ ಆ ನಿಧಿಯನ್ನು ವಿನಿಯೋಗಿಸುವಂತೆ ಯೋಜನೆ ಮಾಡುವ ಸರ್ವಾಧಿಕಾರವನ್ನು ಧರ್ಮಾದಾಯ ಅಧಿಕಾರಿಗೆ ಕೊಡಬೇಕೆಂದು ಅತ್ಯಂತ ಕ್ರಾಂತಿಕಾರಿ ಸೂಚನೆಯನ್ನೊಂದು ಮಾಡಿರುತ್ತದೆ. ಬ್ರಾಹ್ಮಣ-ಸಂತರ್ಪಣೆ, ಸಾಧು-ಬೈರಾಗಿಗಳಿಗೆ ಸೀಧಾ-ದಾನ, ಅನುಪಯುಕ್ತ ಪಶು-ಪಕ್ಷಿ-ಕೀಟಕಗಳಿಗೆ ಅನ್ನದಾನ ಮೊದಲಾದವುಗಳ ಬಗ್ಗೆ ಆಗುವ ವೆಚ್ಚ ಅನವಶ್ಯ ವೆಚ್ಚವೆಂದೂ, ಈ ನಿಧಿಗಳಲ್ಲಿ ಸಂಚಯವಾಗಿ ಬಿದ್ದಿರುವ ಹಣವನ್ನು ಲೋಕೋಪಯೋಗಿ ಸತ್ಕಾರ್ಯಗಳಿಗಾಗಿ ಉಪಯೋಗಿಸಿಕೊಳ್ಳದೆ ಹಾಗೆಯೇ ಉಳಿಯಗೊಡುವದು ಅತ್ಯಂತ ಅಸಂಬದ್ಧವಾಗುತ್ತದೆಂದೂ ಸಮಿತಿ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿ.,

ಹೆಡ್ ಆಫೀಸು: ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಶೇಕಡಾ ರೂ. 3/-ರಂತೆ ಬಡ್ಡಿ.

ಅತಿ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಶೇಕಡಾ 2/-ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಿಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

ಕುಂದಾಪುರ,
ತಾ. ೨೭-೭-೧೯೪೮.

ಕೇ. ವಿಟ್ಠಲದಾಸ ಶೆಣೈ,
ಮೆನೆಜಿಂಗ ಡೈರೆಕ್ಟರ.

ಯು ಅಂಬೋಣವಿದೆ. ಯಃಕಶ್ಚಿತ್ ಧರ್ಮಾದಾಯ ಅಧಿಕಾರಿಗೆ ಹೀಗೆ ಧರ್ಮಾದಾಯ ನಿಧಿಗಳ ವಿನಿಯೋಗಗಳ ಕ್ರಮವನ್ನು ತನಗೆ ಇಷ್ಟ ಬಂದಂತೆ ಬದಲಿಸುವ ಸರ್ವಾಧಿಕಾರ ಕೊಡಬೇಕೆಂಬ ಸಮಿತಿಯು ಮಾಡಿದ ಸೂಚನೆಯು ವಿಚಾರವಂತರಿಗಾರಿಗೂ ಮಾನ್ಯವಾಗುವಂತಿಲ್ಲ. ಧಾರ್ಮಿಕ ಸಂಸ್ಥೆಗಳ ಹಣವನ್ನು ಧಾರ್ಮಿಕೇತರ ಕಾರ್ಯಗಳಿಗಾಗಿ, ವಿಶೇಷವಾಗಿ ಆ ಸಂಸ್ಥೆಗಳ ನಿಕಟ ಸಂಬಂಧವುಳ್ಳ ಜನರ ಒಪ್ಪಿಗೆಯಿಲ್ಲದಂಥಹ ಕಾರ್ಯಗಳಿಗಾಗಿ, ಅಧಿಕಾರ ಬಲದಿಂದ ಇಲ್ಲವೆ ಕಾನೂನಿನ ಬಲದಿಂದ ಸರಕಾರವು ಉಪಯೋಗಿಸಿಕೊಳ್ಳಹತ್ತಿದರೆ, ಸಮಾಜದಲ್ಲಿ ಅಸಮಾಧಾನವುಂಟಾಗುವದಲ್ಲದೆ ಮುಂದೆ ಇಂಥಹ ನಿಧಿಗಳನ್ನು ನಿರ್ಮಿಸಲಿಕ್ಕಾಗಲಿ, ಅವುಗಳಿಗೆ ದಾನ ಧರ್ಮ ಕೊಡಲಿಕ್ಕಾಗಲಿ ಜನರಿಗೆ ಸ್ಫೂರ್ತಿಯೂ ಉತ್ಸಾಹವೂ ಬರುವಂತಿಲ್ಲ. ಆದ್ದರಿಂದ ಪೇಂಡಾರ್ಕರ-ಸಮಿತಿಯ ವರದಿಯನ್ನು ಆಧರಿಸಿ ಕಾಯಿದೆ ಮಾಡುವಾಗ ಸರಕಾರವು ಹಿಂದಿನ ಮುಂದಿನ ಆಲೋಚನೆಯನ್ನು ಮಾಡಬೇಕೆಂದೂ ಧರ್ಮಾದಾಯ ಕೊಟ್ಟ ಜನರ ಅಭಿಪ್ರಾಯವನ್ನು ತಿಳಿಕೊಳ್ಳದೆ ಮಡುಕಿ ಕಾಯಿದೆ ಮಾಡುವ ಹವ್ಯಾಸಕ್ಕೆ ಬೀಳಬಾರದೆಂದೂ ಸೂಚನೆಯಿದೆ

* * *

ತಮ್ಮ ಔಷಧಗಳಲ್ಲಿ ಅಂಥಿಂಥ ಗುಣವಿದೆಂಬು ಜನರಿಗೆ ಮರಳುಗೊಳಿಸುವದಕ್ಕಾಗಿ, ಮನಬಂದಂತೆ ಜಾಹೀರಾತುಗಳನ್ನು ಕೊಡುವದೂ ಔಷಧದ ಬಾಟಲಿ ಯಾ ಪೆಟ್ಟಿಗೆಗಳ ಮೇಲೆ ಮುದ್ರಿಸುವ ಈ ಔಷಧಗಳ ಕಟ್ಟಳೆಯಂತೆ ಅಪರಾಧವಾಗುತ್ತಿದೆಂದ ಸರಕಾರದವರು ಒಂದು ಎಚ್ಚರಿಕೆ ಕೊಟ್ಟದ್ದಾಗಿ ಕುರುಡತನ, ಕಿವುಡುತನ, ಮಧುಮೇಹ, ಅಪಸ್ಮಾರ, ಪ್ರಮೇಹ, ಪ್ರದರ, ಹೆಂಗಸರ ಮುಟ್ಟಿನದೋಷ, ಕ್ಷಯ, ಗ್ರಂಥಿ ಮುಂತಾದ (ಸದರಿ ಕಟ್ಟಳೆಯ ೧೦ನೇ ನಿಯಮದಲ್ಲಿ ಹೇಳಿದ) ರೋಗರುಜಿನಗಳನ್ನು ಗುಣಪಡಿಸುವ ಶಕ್ತಿಯು ಯಾವದೊಂದು ಔಷಧದಲ್ಲಿದೆಯೆಂದು ಜಾಹೀರಾತು ಕೊಟ್ಟು ಬಣ್ಣಿಸುವದು ಅಪರಾಧವಾಗುತ್ತದೆಂದೂ ಇಂಥ ಜಾಹೀರಾತುಗಳನ್ನು ಕೊಡುವವರನ್ನು ಖಟ್ಲೆಗೆ ಗುರಿಪಡಿಸಲಾದೀತೆಂದೂ ಸರಕಾರವು ಪ್ರಕಟನ ಹೊರಡಿಸಿದೆ

NOTIFICATION.

SUPPLIED EVERYWHERE

For particulars please write to

BOMBAY TRADING CO.

129 A. Hill Road. BANDRA. BOMBAY, 20.

ಜಿಲ್ಲಾ ಸಮಾಚಾರ.

ಹಳಿಯಾಳ— [illegible]

ಸಿದ್ದಾಪುರ— [illegible]

ಯಲ್ಲಾಪುರ— [illegible]

ಶಿರಸಿ— [illegible]

[illegible]

SALES TAX NOTICE.

ಮಾರಾಟಗಳ ಮೇಲಿನ ಕರದ ವಿಷಯದ ನೋಟೀಸು.

ಮುಂಬಯಿ ಪ್ರಾಂತದಲ್ಲಿಯ ಹಾಗೂ [illegible] ಸಂಸ್ಥಾನಗಳಲ್ಲಿಯ ವ್ಯವಹಾರದ [illegible] ಗಳ ಬಗ್ಗೆ [illegible] ನೋಂದಾಯಿಸಲ್ಪಡದಿದ್ದ ವ್ಯಾಪಾರಸ್ಥನ [illegible] ಸನ್ ೧೯೪೮ನೇ [illegible] ಏಪ್ರಿಲ್ ತಿಂಗಳ ೧ನೇ ತಾರೀಖಿನಿಂದ ಸನ್ ೧೯೪೯ನೇ ಇಸವಿಯ ಜನವರಿ ತಿಂಗಳ ೩೧ನೇ ತಾರೀಖಿನ ವರೆಗಿನ ಅವಧಿಯಲ್ಲಿ—

(೧) [illegible] ಮಾಡುವರ, [illegible] ಅಥವಾ [illegible] ಬಾಬತಿನಲ್ಲಿ . . ೧೦೦೦೦ ರೂಪಾಯಿಗಳಿಗೆ

ಅಥವಾ

(೨) [illegible] ವ್ಯಾಪಾರದ [illegible] ೩೦,೦೦೦ ರೂಪಾಯಿಗಳಿಗೆ

[illegible] ಸನ್ ೧೯೪೮ನೇ ಇಸವಿಯ ಏಪ್ರಿಲ ತಿಂಗಳ ೧ನೇ ತಾರೀಖಿನಿಂದ [illegible] ಮಾರಾಟದ ಮೇಲಿನ ಕರವನ್ನು ಕೊಡಲು ಪಾತ್ರನಾಗುವನು ಮತ್ತು ಅವನು ಸನ್ ೧೯೪೯ನೇ ಇಸವಿಯ ಫೆಬ್ರುವರಿ ತಿಂಗಳ ೨೮ನೇ ತಾರೀಖಿನ ಮುಂಚೆ, [illegible] ಸೇಲ್ಸ ಟೆಕ್ಸ [illegible] ನೋಂದಣಿಯ ಕಲುವಾಗಿ ಅರ್ಜಿಯನ್ನು ಮಾಡತಕ್ಕದ್ದು.

ಯಾವನ [illegible] ೧೦,೦೦೦ ರೂಪಾಯಿಗಳಿಗೆ [illegible] ಅಥವಾ [illegible] ಯಾವನೇ ವ್ಯಾಪಾರಸ್ಥನು ಸಹ ಐಚ್ಛಿಕವಾಗಿ [illegible] ಕೊಳ್ಳಬಹುದು

ಮುಂಬಯಿ,
ತಾ ೧-೨-೧೯೪೯

ವ್ಹಿ. ಎಲ್. ಗಿಡವಾನಿ,
ಡೆಪ್ಯುಟಿ ಕಮಿಶನರ ಆಫ ಸೇಲ್ಸ ಟ್ಯಾಕ್ಸ
ಮುಂಬಯಿ ಪ್ರಾಂತ.

[illegible]

ಸಿದ್ದಾಪುರ—

[illegible]

ಮುಂಡಗೋಡ— (ತಾ. ೪-೨-೪೯)

[illegible]

(ತಾ ೯-೨-೧೯೪೯) [illegible]

[illegible]

ಭಟಕಳ— (ತಾ ೯-೨-೪೯)

[illegible]

ಗಿಬ್ಬ ಹಾಯಸ್ಕೂಲ, ಕುಮಟಾ

[illegible] ಸುರುವಾಗುತ್ತವೆ. ಆದ್ದರಿಂದ ನಮ್ಮ ಶಾಲೆಯನ್ನು ಸೇರಬಿಚ್ಛಿಸುವ ವಿದ್ಯಾರ್ಥಿಗಳು ಫೆಬ್ರುವರಿ [illegible] ಹೆಸರುಗಳನ್ನು ನೋಂದಿಸಿಕೊಳ್ಳತಕ್ಕದ್ದು. ಬೆಳಿಗ್ಗೆ [illegible] ರಿಂದ ೧೨ರ ವರೆಗೆ ನಮ್ಮ ಆಫೀಸ ತೆರೆದಿರುವದು.

ಕುಮಟಾ } ಹೆಡ್ ಮಾಸ್ತರ,
ತಾ ೧೭-೨-೧೯೪೯ } ಗಿಬ್ ಹಾಯ್ ಸ್ಕೂಲ

ಸಂದರ್ಶಿಸಲು] [ಮರೆಯಬೇಡಿರಿ!!

ಶಿರ್ಶಿ ಗಾಂಧಿ ಚೌಕಿನಲ್ಲಿ ಜರಗುವ

ಉತ್ತರ ಕನ್ನಡ ಜಿಲ್ಲೆಯ

ಶೇತಕಿ ಮತ್ತು ಉದ್ಯೋಗ ಧಂದೆಗಳ ಪ್ರದರ್ಶನದಲ್ಲಿ

ರಾಣಾ ಕೊಮರ್ಶಿಯಲ್ ಕೂಪೋರೇಶನ್ ಲಿ., ಬೆಂಗಳೂರ

ಇವರ ಸ್ಟಾಲನ್ನು ಸಂದರ್ಶಿಸಿ ಯೋಗ್ಯ ಲಾಭವನ್ನು ಮಾಡಿಕೊಳ್ಳಲು

ವ್ಯಾಪಾರಸ್ಥರೂ ಇತರರೂ ಮರೆಯಬಾರದು.

ಸಕಲರಿಗೂ ಅವಶ್ಯವುಳ್ಳ ಸಾಮಾನನ್ನು ಸಕಾಲದಲ್ಲಿ ಪೂರೈಸುವದೇ ನಮ್ಮ ವೈಶಿಷ್ಟ್ಯ! ಅತ್ಯಲ್ಪ ಲಾಭದಿಂದ ವಿಶಾಲ ಸೇವೆ ಸಲ್ಲಿಸುವದೇ ನಮ್ಮ ಗುರಿ!

ಸ್ಟಾಕಿಸ್ಟರಾಗಲಿಚ್ಛಿಸುವವರಿಗೆ ಸುಸಂಧಿ! ವಿವರಗಳಿಗಾಗಿ ಬರೆಯಿರಿ!

ಕಂಪನಿಯ ಶೇರು ಖರೇದಿಸುವವರಿಗೆ ಒಳ್ಳೇ ಲಾಭವಾಗುವ ಸುಸಂಧಿ!!

ಕಂಪನಿಯ ಪ್ರಗತಿಯಲ್ಲಿ ಸಕಲರೂ ಸಹಕರಿಸಿ ಭಾಗಿಗಳಾಗಬೇಕಾಗಿ ಬೇಡಿಕೆ

ವ್ಯವಸ್ಥಾಪಕ ಕೇ ಕೇ ಹೆಗಡೆ.

ಬ್ರೆಂಚ ಮೆನೇಜರ ಶಿರ್ಶಿ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ, (ಸಂಪಾದಕ) ಇವರ ಕುಮಟೆಯಲ್ಲಿರುವ ತಮ್ಮ ಸ್ವಂತ "ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ ಮುಂಗಡವಾಗಿ ವರ್ಷಕ್ಕೆ ರೂ. ೩-೮-೦ ಆರು ತಿಂಗಳಿಗೆ ೧-೧೦-೦ ಪ್ರತಿ ಸಂಚಿಕೆಗೆ ೦-೧-೦ ವರ್ಗಣಿದಾರರು ಪತ್ರವ್ಯವಹಾರ ಮಾಡುವಾಗ ತಮ್ಮ ನಂಬರ ತಿಳಿಸಬೇಕು	Reg. No. B 1270 Monday, 21-2-1949. # ಕಾನಡಾವೃತ್ತ ವರ್ಷ ೩೦] **THE KANARA NEWS.** [ಸಂಚಿಕೆ ೩೪ ಕುಮಟಾ - ಸೋಮವಾರ, ತಾ ೨೧—೨—೧೯೪೯	ಜಾಹಿರಾತುಗಳ ದರ: ಜಾಹಿರಾತುಗಳ ದರದ ಬಗ್ಗೆ ವ್ಯವಸ್ಥಾಪಕರಿಗೆ ಬರೆದು ಕೇಳಬೇಕು

ವಿವಿಧ ವಿಷಯಗಳು

ಪೂಜ್ಯ ಮಹಾತ್ಮಾಜಿಯವರು ಕಳೆದ ವರ್ಷ ಬಿರ್ಲಾ ಭವನದಲ್ಲಿ ನಥುರಾಮನ ಗುಂಡಿನೇಟಿಗೆ ಬಲಿಯಾಗಿ ಕುಸಿದು ಬೀಳುತ್ತಿರುವಾಗ್ಯ ಬಾಯಿಂದ ರಾಮ ರಾಮ" ಎನ್ನುತ್ತ, ಭಗವಂತನ ನಾಮ ಸ್ಮರಣೆ ಮಾಡುತ್ತ ಬಿದ್ದಿದ್ದರೆಂಬುದು ಜಗತ್ತಿಗೆಲ್ಲ ವಿಶ್ರುತವಿದೆ. ಸಾಯುವಾಗ ಈ ಪರಿ ಬಾಯಿಂದ ರಾಮನಾಮೋಚ್ಚಾರಣೆಯಾಗಬೇಕೆಂದರೆ ನಾವು ಯಾವ ವೇಳೆ ಅಷ್ಟು ಭಕ್ತಿಯಿರಬೇಕಾಗುತ್ತದೆ. ಮಹಾತ್ಮರು ರಾಮನಾಮವನ್ನು ಎಷ್ಟು ಭಕ್ತಿಯಿಂದ ಪೂಜಿಸುತ್ತಿದ್ದರೆಂಬುದನ್ನು ತೋರಿಸಲು ಅವರ ಮೊಮ್ಮಗಳಾದ ಮನುಬೆನ್ ಗಾಂಧಿ ಇವಳು ಕಳೆದ ವಾರದ "ಹರಿಜನ"ದಲ್ಲಿ ಒಂದು ಕಥೆ ಹೇಳಿದ್ದಾಳೆ. ಆ ಕಥೆ ಹೀಗಿದೆ — ಮಹಾತ್ಮರು ಸಾಯುವ ಸರಿಯಾಗಿ ಒಂದು ವರ್ಷ ಮುಂಚೆ ಅಂದರೆ ತಾ ೩೦—೧—೧೯೪೭ನೇ ದಿನ ಅವರ ಮುಕ್ಕಾಮು ಅಮ್ಕಿ ಎಂಬ ಊರಲ್ಲಿತ್ತು. ಅಲ್ಲಿ ಅವರಿಗೆ ಆಡಿನ ಹಾಲು ಸಿಗಲಿಲ್ಲ. ಅದರಿಂದ ಆಡಿನ ಹಾಲಿನ ಬದಲು ಅವರು ತೆಂಗಿನ ಕಾಯಿಯ ಹಾಲು ತಕ್ಕೊಂಡರು. ಆ ಹಾಲನ್ನು ಕೂಡ ಆಡಿನ ಹಾಲು ತಕ್ಕೊಳ್ಳುವಷ್ಟೇ (೨೦ ತೊಲೆ) ತಕ್ಕೊಂಡರು! ಅದು ಅವರಿಗೆ ದಕ್ಕಲಿಲ್ಲವೇನೋ! ಅವರಿಗೆ ನೀರಿಂದ ಮೇಲೆ ರೇಚನಗಳಾಗಹತ್ತಿದವು, ತಲೆ ತಿರುಗಲಾರಂಭಿಸಿತು. ಮನು ಗಾಂಧಿಯು ಕೈ ಹಿಡಿದು ನಡೆಯುತ್ತಿದ್ದಾಗಲೂ ಅವರು ಬೀಳಲಿಕ್ಕಾದರು. ಆಗ ಮನುವು ನಿರ್ಮಲ ಬಾಬುವಿನ ಸಹಾಯದಿಂದ ಅಜ್ಜನನ್ನು ಹಾಸಿಗೆಗೆ ಮುಟ್ಟಿಸಿ ಅವರಿಗೆ ಬಿದ್ದುಕೊಂಡಿರಲು ಹೇಳಿದಳು. ಮಹಾತ್ಮರು ಈ ಪರಿ ನಿಶ್ತ್ರಾಣರಾಗಿ ಬಿದ್ದಾಗ ಸುಮ್ಮಗುಳಿಯುವದು ಸರಿಯಾಗಲಿಕ್ಕಿಲ್ಲೆಂದು ಧಾವಿಸಿ ಮನುವು ನೆರೆಯ ಹಳ್ಳಿಯಲ್ಲಿದ್ದ ಡಾ|| ಸುಶೀಲಾ ನಾಯರರಿಗೆ ಒಂದು ಚೀಟಿ ಬರೆದು ಅದನ್ನು ಅವರಿಗೆ ಕಳಿಸಿಕೊಡುವದಕ್ಕಾಗಿ ತಾನು ನಿರ್ಮಲಬಾಬುಗಳನ್ನು ಕರೆಯುತ್ತಿದ್ದಾಗ ಮಹಾತ್ಮರಿಗೆ ಅವಳ ಉದ್ದೇಶದ ಅರಿವಾಯಿತು. ಅವರು ಕೂಡಲೇ ಮನುವನ್ನು ಬಳಿಯಲ್ಲಿ ಕರೆದುಕೊಂಡು ಹೇಳಿದರು 'ನೀನು ಇಂದು ನಿರ್ಮಲಬಾಬುವನ್ನು ಕರೆಯಬೇಡ. ನೀನು ಏನು ಚಿಂತಿಸುತ್ತಿ, ಅದರಿಂದ ನಿನ್ನನ್ನು ನಾನು ಕ್ಷಮಿಸುತ್ತೇನೆ. ಇಂಥ ಪರಿಸ್ಥಿತಿಯಲ್ಲಿ ಚಿಂತೆ ಏನೂ ಮಾಡದೆ ಹೃತ್ಪೂರ್ವಕವಾಗಿ ರಾಮನಾಮದ ಜಪ ಮಾಡಬೇಕು. ನಾನೂ ಆಗ ಅದನ್ನೇ ಮಾಡುತ್ತಿದ್ದೆ. ನೀನು ಕೂಡ ನಿರ್ಮಲನನ್ನು ಕರೆಯುವದರ ಬದಲಿಗೆ ರಾಮನಾಮ ಭಜನೆ ಮಾಡುತ್ತಿದ್ದರೆ ನನಗೆ ಒಳ್ಳೆಯದೆನಿಸುತ್ತಿತ್ತು. ಸುಶೀಲೆಗೆ ನನ್ನ ಸ್ಥಿತಿ ತಿಳಿಸಬೇಡ, ಅವಳಿಗೆ ಕರೆ ಕಳಿಸಬೇಡ. ರಾಮನೇ ನಿಜವಾದ ವೈದ್ಯನು. ನನ್ನಿಂದ ಸೇವೆ ಮಾಡಿಕೊಳ್ಳಬೇಕೆಂದು ಅವನ ಇಚ್ಛೆಯಿರುವಷ್ಟು ಕಾಲ ಅವನು ನನ್ನನ್ನು ಬದುಕಿಸುವನು. ನನ್ನ ಸೇವೆಯು ಅಗತ್ಯವಿಲ್ಲದಿದ್ದರೆ ನನ್ನನ್ನು ಒಯ್ಯುವನು. (ಈ ಮಾತು ನಡೆದಾಗ ಅವರಿಗೆ ನಾನು ಡಾ|| ಸುಶೀಲಾ ನಾಯರರಿಗೆ ಬರೆದ ಚೀಟಿ ದೃಷ್ಟಿಗೆ ಬಿತ್ತು. ಆಗ ಅವರು ಮುಂದರಿಸಿದರು—) ಸುಶೀಲೆಗೆ ಕಳಿಸಲು ನೀನು ಚೀಟಿ ಬರೆದು ಬಿಟ್ಟಿದ್ದೀಯಾ? ಇರಲಿ. ದೇವರು ಇಂದು ನಮ್ಮಿಬ್ಬರನ್ನು ಕಾಪಾಡಿದ್ದಾನೆ. ನಿನ್ನ ಚೀಟಿ ನೋಡುತ್ತಲೇ ಸುಶೀಲೆಯು ತನ್ನ ಕೆಲಸ ಬಿಟ್ಟು ಓಡಿ ಬರುತ್ತಿದ್ದಳು. ಅದು ನನಗೆ ಸೇರುತ್ತಿದ್ದಿಲ್ಲ. ನಿನ್ನ ಮೇಲೂ ನನ್ನ ಮೇಲೂ ನನಗೆ ಸಿಟ್ಟು ಬರುತ್ತಿತ್ತು. ದೇವರ ಕೃಪೆಯಿಂದ ಇಂದು ನನ್ನ ಪರೀಕ್ಷೆ ನಡೆಯಿತು. ರಾಮನಾಮವು ನನ್ನ ಹೃದಯಾಂತರಾಳದಲ್ಲಿ ಹೊಕ್ಕಿರುವದಾದರೆ ನಾನು ಬೇನೆಯಿಂದ ಎಂದೂ ಸಾಯಲಾರೆನು. ನನಗೆ ಮಾತ್ರವೆಂತಲ್ಲ ಪ್ರತಿಯೊಬ್ಬನಿಗೂ ಈ ನಿಯಮವು ಅನ್ವಯಿಸುತ್ತದೆ. ಪ್ರತಿಯೊಬ್ಬನೂ ತನ್ನ ತಪ್ಪುಗಳ ಫಲವನ್ನುಣ್ಣಬೇಕು. ಆ ಧಾರಣೆಯಿಂದಲೇ ನಾನು ಸಧ್ಯದ ಈ ತಾಪವನ್ನು ಅನುಭವಿಸಿದೆ. ಕೊನೆಯ ಉಸಿರು ಹೋಗಬೇಕಾದ ವರೆಗೂ ಮನಸ್ಸಿನ ಬಾಯಲ್ಲಿ ರಾಮನಾಮವಿರುತ್ತಿರಬೇಕು. ಅದಕ್ಕೆ ಬರೇ ಗಿಳಿಯಂತೆ ರಾಮನಾಮವನ್ನುಚ್ಚರಿಸಿದರಾಗದು. ಹನುಮಂತನಂತೆ ಹೃದಯಾಂತರಾಳದಿಂದ ಅದನ್ನು ಉಚ್ಚರಿಸಬೇಕು. ಸೀತಾ ಮಾತೆಯು ಹನುಮಂತನಿಗೆ ರತ್ನಮಾಲೆಯನ್ನು ಕೊಟ್ಟಾಗ ಆ ರತ್ನಗಳಲ್ಲಿ ರಾಮನಾಮ ಬರೆದದ್ದುಂಟೇನೆಂದು ನೋಡಲಿಕ್ಕೆ ಹನುಮಂತನು ಅದನ್ನು ಒಡೆದು ನೋಡಿದನೆಂಬುದಾಗಿ ಕಥೆಯಿದೆ. ಈ ಕಥೆ ನಿಜವಾಗಿಯೂ ನಡೆದ ಕಥೆಯೋ ಇಲ್ಲವೆಂಬುದರ ಶೋಧ ನಮಗೆ ಅಗತ್ಯವಿಲ್ಲ. ಹನುಮಂತನಷ್ಟು ವಜ್ರಕಾಯನಾಗಲು ನಮ್ಮಿಂದ ಸಾಧ್ಯವಿಲ್ಲದಿದ್ದರೂ ನಮ್ಮ ಆತ್ಮಗಳನ್ನು ಅವನ ಆತ್ಮದಷ್ಟೇ ಉನ್ನತಿಗೆ ಮುಟ್ಟಿಸಲು ನಮಗೆ ನಿಶ್ಚಿತವಾಗಿಯೂ ಸಾಧ್ಯವಿದೆ. ಹನುಮಂತನ ಭಕ್ತಿಯನ್ನು ನಾವೂ ಸಾಧಿಸಬಹುದು. ಅಷ್ಟು ಮಾತ್ರವೇ ಅಷ್ಟು ಉನ್ನತ ಮಟ್ಟಕ್ಕೆ ಮುಟ್ಟಲು ಸಾಧ್ಯವಾಗದಿದ್ದರೂ ಅದನ್ನು ಯಲ್ಲಿ ಮನಃಪೂರ್ವಕ ಪ್ರಯತ್ನವನ್ನಾದರೂ ನಾವು ಮಾಡುವಾ. 'ನೀನು ಪ್ರಯತ್ನ ಮಾಡು, ಫಲವನ್ನು ದೇವರಿಗೆ ಬಿಡು" ಎಂದು ಶ್ರೀಮದ್ ಭಗವದ್ಗೀತೆಯು ಹೇಳಿಕೊಟ್ಟಿಲ್ಲವೇ? ನಾವು ಸದಾ ಆ ಮಾರ್ಗದಿಂದ ನಡೆಯಲು ಕಲಿಯಬೇಕು. ಈ ನನ್ನ ವಿವರಣೆಯ ಮೇಲಿಂದ ಯಾರೊಬ್ಬರ ಕಾಹಿಲೆಯ ಬಗ್ಗೆ — ಅದು ನನ್ನದಿರಲಿ, ನಿನ್ನದಿರಲಿ ಯಾ ಇನ್ನೊಬ್ಬರದಿರಲಿ — ನನ್ನ ದೃಷ್ಟಿ ಯಾವ ಬಗೆಯದಿರುತ್ತದೆಂಬುದು ನಿನಗೆ ತಿಳಿಯಿತೆಂದು ನಾನು ತಿಳಿಯುತ್ತೇನೆ." ಅದೇ ದಿನ ಮಹಾತ್ಮರು ಬೇನೆಯಿಂದ ಅಸ್ವಸ್ಥರಾಗಿ ಬಿದ್ದ ಓರ್ವ ಭಗಿನಿಗೆ ಮುಂದಿನಂತೆ ಬರೆದಿದ್ದರಂತೆ — 'ಈಡೀ ಜಗತ್ತಿನಲ್ಲಿ ಒಂದೇ ಒಂದು ಅತ್ಯಂತ ಗುಣಕಾರಿ ಔಷಧವುಂಟು. ಅದ್ಯಾವದೆಂದರೆ ರಾಮನಾಮ. ಅದರ ಭಜನೆಯ ನಿಯಮಗಳಂತೆಯೇ ಅದರ ಭಜನೆ ಮಾಡಿದವರಿಗೆ ಮಾತ್ರ ಅದು ಗುಣಕಾರಿಯಾಗಬಲ್ಲದು. ಆ ನಿಯಮಗಳನ್ನು ಯಾರೂ ಲಕ್ಷಿಸುವದಿಲ್ಲೆಂಬುವೇ ದುಃಖದ ಸಂಗತಿ.' ಇಂತಹ ರಾಮಭಕ್ತರು ರಾಮನಾಮ ಜಪಿಸುತ್ತ ಪ್ರಾಣ ಬಿಟ್ಟರೆ ಅದರಲ್ಲೇನಾಶ್ಚರ್ಯ!

× × ×

— ಬ್ರಿಟಿಶ ಕಾಲದ ಬಿರುದು-ಬಾವಲಿಗಳನ್ನು (ರಾವಸಾಹೇಬ, ರಾವಬಹಾದ್ದೂರ, ಸರ್ ವಗೈರೆ) ಸರಕಾರಿ ಕಾಗದ-ಪತ್ರಗಳಲ್ಲಿ ಯಾವದೇ ಹಿಂದೀಯನ ಸಂಬಂಧದಲ್ಲಿ ಉಲ್ಲೇಖಿಸಕೂಡದೆಂದು ಮದ್ರಾಸ ಸರಕಾರದಂತೆ ಮುಂಬಯಿ ಸರಕಾರವೂ ಆಜ್ಞೆ ಹೊರಡಿಸಿದೆ.

× × ×

— ಮುಂಬಯಿ ಎಸೆಂಬ್ಲಿಯ ಆಯ-ವ್ಯಯದ ಅಧಿವೇಶನಕ್ಕೆ ಶುಕ್ರವಾರದಿಂದ ಪ್ರಾರಂಭವಾಗಿದೆ. ಮೊದಲನೇ ದಿನ ಹಲವಾರು ಚಿಕ್ಕ ಪುಟ್ಟ ಸರಕಾರಿ ಮಸೂದೆಗಳು ಸ್ವೀಕೃತವಾದವು. ಮೊನ್ನೆ ಶನಿವಾರ ಅಬಕಾರಿ ಮಂತ್ರಿಗಳು ಮದ್ಯ ನಿರ್ಬಂಧದ ಹೊಸ ಅಬಕಾರಿ ಮಸೂದೆಯನ್ನು ಮಂಡಿಸಿದ್ದಾರೆ. ಹಿಂದಿನ ಕಾಯದೆಯಲ್ಲಿ ತಿದ್ದುಪಡಿಗಳನ್ನು ಕೂಡಿ ಮದ್ಯಪಾನ

The Agricultural & Industrial Bank, Ltd.,

Regd Office "LAXMI NIVAS Buildings
COONDAPOOR, S Kanara

SEASON DEPOSITS

Maturing on or before 30th June 1949 are now accepted with interest ranging from 2¾% to 3½% per annum

Every kind of Banking business transacted.

For terms etc please apply to any of our following

Branches

1 Coondapoor	7 Ankola	13 Sirsi
2 Mangalore	8 Bhatkal	14 Dharwar
3 Somwarpet	9 Gokarn	15 Gadag
4 Virajpet	10 Honavar	16 Haveri
5 Shimoga	11 Karwar	17 Hubli
6 Nagar	12 Kumta	18 Belgaum

19 BOMBAY (384-M Jaipuria House Kalbadevi Road)

ನ ನಿರೋಧದ ಘೋಷಣೆಯನ್ನು ಯಶಸ್ವಿಯಾಗಿ ಅಮಲಿನಲ್ಲಿ ತರಲು ಗದ್ದಾಂದ [illegible] ಯಿ ದೆಗಳನ್ನೆಲ್ಲ ರದ್ದುಗೊಳಿಸಿ ಹೊಸ ಕಾನೂನು ಮಾಡಬೇಕಾದ ದೆಂದು ಅಬಕಾರಿ ಮಂತ್ರಿಗಳಾದ ಮಾನ್ಯ ಲಕ್ಷ್ಮಣರಾವ ಪಾಟೀಲರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದ್ದಾರೆ ಹೊಸ ಮಸೂದೆಯ ೨೧ ಪ್ರಕರಣಗಳಿವೆ, ೧೪೬ ಕಲಮುಗಳಿವೆ ೧೯೫೦ನೇ ಇಸವಿಯ ಏಪ್ರಿಲ ತಾ ೧ರಿಂದ ಇಡೀ ಮುಂಬಯಿ ಪ್ರಾಂತದಲ್ಲಿ (ಹೊಸದಾಗಿ ಈ ಪ್ರಾಂತಕ್ಕೆ ಸೇರಿಸಲ್ಪಟ್ಟ ಹಾಗೂ ಸೇರಿಸಲ್ಪಡುವ ಸಂಸ್ಥಾನಗಳಲ್ಲಿ ಕೂಡ) ಪೂರ್ಣ ಮದ್ಯ ನಿಷೇಧವ ಮಾಡಬೇಕೆಂಬುದು ಸರಕಾರದ ಸಂಕಲ್ಪವಾಗಿದೆ ಇದರಿಂದ ಸುಮಾರು ೧೩ ಕೋಟಿ ರೂಗಳಷ್ಟು [illegible] ಸರಕಾರದ ಉತ್ಪನ್ನದಲ್ಲಿ ಕೊರತೆಯಾಗ [illegible] ಸರಕಾರದವರು ಅಬಕಾರಿ ಇಲಾಖೆಯನ್ನು ವಿಸರ್ಜಿಸಿ ಮದ್ಯ ನಿರೋಧನದ ಕಾರ್ಯವನ್ನು ಬೇರೆ ಇಲಾಖೆಯ ಮರ ಸಹಾಯದಿಂದಲೂ ಸಹಕಾರಿ ಸಂಘಗಳ ನೆರವಿನಿಂದಲೂ ಸಾಗಿಸಬೇಕೆಂದು ನಿಶ್ಚಯಿಸಿದ್ದಾರೆ ಇಡೀ ಪ್ರಾಂತಕ್ಕೆ ಮದ್ಯ ನಿರೋಧನ ಕಾರ್ಯಕ್ರಮವನ್ನು [illegible] ಪ್ರಾಂತದವರು

* * *

ದಿಲ್ಲಿಯಲ್ಲಿ ಈಗ [illegible] ವಾರಗಳಿಂದ ಕೇಂದ್ರ ಕಾನೂನ ಮಂಡಳದ ಅಧಿವೇಶನ ನಡೆಯುತ್ತಿದೆ ಬೇಂಕಗಳ ಆಡಳಿತೆಯನ್ನು ನಿಯಂತ್ರಿಸುವ ಮಸೂದೆಯೊಂದು ಈಗಾಗಲೇ ಚರ್ಚಿಸಲ್ಪಟ್ಟು ಸ್ವೀಕೃತವಾಗಿದೆ ಬೇಂಕುಗಳ ಆಡಳಿತವನ್ನು ಕಾಲಕಾಲಕ್ಕೆ ತಪಾಸಿಸಲು ಈ ಮಸೂದೆಯು ರಿಝರ್ವ ಬೇಂಕಿಗೆ ಅಧಿಕಾರ ಕೊಡುತ್ತಿದೆ ಹಿಂದು ಕಾಯಿದೆಯ ಕ್ರಾಂತಿಕಾರಿ ಮಸೂದೆಯು ಮಾನ್ಯಯೇ ಮಂಡಳದ ಮುಂದೆ ಮಂಡಿಸಲ್ಪಟ್ಟಿದ್ದು, ಅದರ ಚರ್ಚೆಗೆ ಆರಂಭವಾಗಿದೆ ಕಳೆದ ಬಧವಾರ ರೇಲ್ವೆ ಮಂತ್ರಿಗಳಾದ ಮಾನ್ಯ ಗೋಪಾಲಸ್ವಾಮಿ ಅಯ್ಯಂಗಾರರು ರೇಲ್ವೆ ಇಲಾಖೆಯ ಆಯ-ವ್ಯಯ ಪತ್ರಿಕೆಯನ್ನು ಮಂಡಿಸಿದ್ದಾರೆ ಅದರ ಮೇಲಿನ ಸಾಮಾನ್ಯ ಚರ್ಚೆಗೂ ಆರಂಭವಾಗಿದೆ. ಮಾನ್ಯ ಅಯ್ಯಂಗಾರರ ಅಂದಾಜಿನಂತೆ ಬರಲಿರುವ ೧೯೪೯-೫೦ನೇ ವರುಷದಲ್ಲಿ ರೇಲ್ವೆಗಳಿಂದ ಆದಾಯ ಉತ್ಪನ್ನ ೨೦೫ ಕೋಟಿ ರೂಗಳಷ್ಟು ಸಿಗುವದು, ಅದರೊಳಗಿಂದ ರೇಲ್ವೆ ಆಡಳಿತದ ವೆಚ್ಚ ೧೬೬ ಕೋಟಿ ೭೧ ಲಕ್ಷ ರೂ ಮತ್ತು ಬಡ್ಡಿ ಮೊದಲಾದವನ್ನು ತೆರಲು ೧೯ ಕೋಟಿ ೯೦ ಲಕ್ಷ ರೂ ಕಳೆಯಲಾಗಿ ನಿವ್ವಳ ಲಾಭ ೧೮ ಕೋಟಿ [illegible] ಲಕ್ಷ ರೂ ಉಳಿಯುವದು ೧೯೪೮-೪೯ನೇ ವರ್ಷದಲ್ಲಿ ೨೦೦ ಕೋಟಿ ರೂ ಉತ್ಪನ್ನ ಸಿಗುವದೆಂದೂ ಆಡಳಿತದ ವೆಚ್ಚ ಮತ್ತು ಬಡ್ಡಿ ಮುಂತಾದ್ದು ಹೋಗಲಾಗಿ ೯ ಕೋಟಿ ೪೪ ಲಕ್ಷ ರೂ ನಿವ್ವಳ ಲಾಭ ಉಳಿಯುವದೆಂದೂ ಮಂತ್ರಿಗಳು ಸಂಪೂರ್ಣ ಪರಿಸ್ಥಿತಿಯ ಅವಲೋಕನೆಯಿಂದ ಅಂದಾಜು ಮಾಡಿದ್ದಾರೆ

* * *

ಇದೇ ಬರುವ ಮಾರ್ಚ ೯ರಿಂದ ಅಖಿಲ ಭಾರತದೊಳಗಿನ ರೇಲ್ವೆ ನೌಕರರು ತಮಗೆ ಸಾಕಷ್ಟು ಸಂಬಳ-ಭತ್ಯೆಗಳೂ ಬೇರೆ ಸೌಕರ್ಯಗಳೂ ಸಿಗಲಿಲ್ಲೆಂಬ ಕಾರಣದಿಂದ, ಸಂಪು ಹೂಡಬೇಕೆಂಬ ದೊಂದು ಆಂದೋಲನ ನಡೆದಿತ್ತು ಕಮ್ಯುನಿಸ್ಟರ ಪ್ರಭಾವಕ್ಕೊಳಗಾದ ಕೆಲವು ರೇಲ್ವೆ-ಕೆಲಸಗಾರರ ಸಂಘಗಳು ಸಂಪು ಹೂಡಬೇಕೆಂಬ ಠರಾವನ್ನೂ ಮಾಡಿದ್ದವು ಆದರೆ ಕಳೆದ ವಾರ ಶ್ರೀ॥ ಜಯಪ್ರಕಾಶ ನಾರಾಯಣರ ಅಧ್ಯಕ್ಷತೆಯಲ್ಲಿ ಸೇರಿದ ಅಖಿಲ ಭಾರತ ರೇಲ್ವೆ ಮಜದೂರ ಫೆಡರೇಶನದ ಕಾರ್ಯಕಾರಿ ಮಂಡಳವು ಸಂಪು ಹೂಡಕೂಡದೆಂಬ ನಿರ್ಣಯವನ್ನು ಮಾಡಿದೆ ಈ ಸಭೆಯಲ್ಲಿ ಸಹ ಕಮ್ಯುನಿಷ್ಟ ಪಂಥದ ಪ್ರತಿನಿಧಿಗಳಿದ್ದರು ಅವರಿಗೆ ಶ್ರೀ॥ ಜಯಪ್ರಕಾಶರ ನಿರ್ಣಯವು ರುಚಿಸಲಿಲ್ಲ! ಮುಖ್ಯಮಂತ್ರಿಯವರ ನಿರ್ಣಯವನ್ನು ಪ್ರತಿಭಟಿಸಿ ಈ ಕಮ್ಯುನಿಸ್ಟರು ಸಂಪು ಹೂಡಿಸುವ ಪ್ರಯತ್ನದಲ್ಲಿದ್ದಾರೆ! ಆದರೆ ಈ ವಿಧ್ವಂಸಕ ಚಟುವಟಿಕೆಗಳನ್ನು ಪ್ರತಿಬಂಧಿಸಲು ಹಿಂದ ಸರಕಾರವು ನಿರ್ಧರಿಸಿದ್ದು ಎಲ್ಲ ಸಂಶಯಿತ ಕಮ್ಯುನಿಸ್ಟರ ಬಂಧನ ಮಾಡಬೇಕೆಂಬ ಆದೇಶವನ್ನೂ ಕೊಟ್ಟಿದೆ ಅದರಂತೆ ಮೊನ್ನೆ ಶನಿವಾರ ಮುಂಬಯಿ ಕಲಕತ್ತಾ, ಮದ್ರಾಸ, ಹುಬ್ಬಳ್ಳಿ ವಗೈರೆ ಪ್ರಮುಖ ನಗರಗಳ ನೂರಾರು ಕಮ್ಯುನಿಸ್ಟ ಪ್ರಮುಖರ ಬಂಧನಗಳಾಗಿವೆ

* * *

ಪಾಶ್ಚಿಮಾತ್ಯ ದೇಶಗಳಲ್ಲೀಗ ಇನ್‌ಫ್ಲುಯೆಂಝಾ (ಶೀತಜ್ವರ) ಬೇನೆಯು ಹಬ್ಬಿ ಹರಡುತ್ತಿದೆ ಯೆಂತಲೂ [illegible] ನಮ್ಮ ದೇಶಕ್ಕೂ ಹಬ್ಬಿದ [illegible] ಕಾಲವಾದೊಳಗನೆ [illegible] ವರ್ಣನರು ಹೇಳುತ್ತಾರೆ ೧೯೧೮ನೇ ಇಸವಿಯ ಕೊನೆಗೆ ಈ ಬೇನೆಯು ಇಡೀ ಹಿಂದುಸ್ಥಾನದಲ್ಲಿ ಹಾಹಾಕಾರವನ್ನೆಬ್ಬಿಸಿದ ದೃಶ್ಯ ಇನ್ನೂ ನಮ್ಮ ಸ್ಮರಣೆಯಲ್ಲಿ ಅಚ್ಚಳಿಯದೆ ಇದೆ ಈ ಬೇನೆಯ ಒಂದೇ ೪ ತಿಂಗಳಲ್ಲಿ ಹಿಂದುಸ್ಥಾನದಲ್ಲಿ ಸುಮಾರು [illegible] ಲಕ್ಷ ಜನರು ಅಸುನೀಗಿದರೆಂದು, ಕಾಯಿದೆ ಮಂಡಳದಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ, ಹಿಂದ ಸರಕಾರದ ಪ್ರತಿನಿಧಿಗಳು ಜಾಹೀರ ಪಡಿಸಿದ್ದರು ಮೊದಲನೇ ಮಹಾಯುದ್ಧದಲ್ಲಿ ಹಿಂದುಸ್ಥಾನಕ್ಕೆ ದೊರೆತ ದೊಡ್ಡ ಉಂಬಳಿ ಇದೇ ಆಗಿತ್ತು ಈ ಸಲ ಅಂತಹ ಪ್ರಸಂಗ ಬರದಂತೆ ಜನರು ಜಾಗರೂಕರಾಗಿರಬೇಕು ನೆಗಡಿ, ಕಫದ ಉದ್ಭವ, ಕೆಮ್ಮು, ಮೈಯ್ಯೆಲ್ಲ ನೋವು ಇವು ಈ ಬೇನೆಯ ಲಕ್ಷಣಗಳಾಗುತ್ತವೆ ಈ ಲಕ್ಷಣಗಳು ತೋರುತ್ತಲೇ ಜನರು ವಿಳಂಬ ಮಾಡದೆ ಡಾಕ್ಟರರ ಇಲ್ಲವೆ ವೈದ್ಯರ ಉಪಚಾರ ಮಾಡಿಕೊಳ್ಳುವದುಚಿತ ಈ ಬಗ್ಗೆ ನೆರವು ದೊರಕಿಸಲು ಯಾವದೇ ಕಾರಣದಿಂದ ಅನನುಕೂಲವಾದರೆ ಇಲ್ಲವೆ ವಿಳಂಬವಾದರೆ, ಅಲ್ಲಿಯವರೆಗೆ ನಮ್ಮಲ್ಲಿ ಸುಲಭವಾಗಿಯೂ ಸುಲಭದಲ್ಲಿಯೂ ಸಿಗುತ್ತಿರುವ "ವಾಯ್ವಿಡಂಗ" ಬಳ್ಳಿಯ ಬೇರುಗಳ ಇಲ್ಲವೆ ಚಕ್ಕೆಯ ಕಷಾಯವನ್ನು ಬೇನೆ ಹಿಡಿದ ರೋಗಿಗೆ ಕೊಟ್ಟು, ಅವನನ್ನು ಪಥ್ಯದ ಮೇಲೆ ಇಡುವ ಜಾಗ್ರತೆಯನ್ನು ಕೊಳ್ಳಬೇಕು ೧೯೧೮ರ ಹಾವಳಿಯ ಕಾಲಕ್ಕೆ ಈ ಬೇರುಗಳು ಇನ್‌ಫ್ಲುಯೆಂಝಾ ಬೇನೆಯ ಮೇಲೆ ರಾಮಬಾಣ ಔಷಧವಾಗುತ್ತದೆಂದು ಸ್ಥಾನಿಕ ಅಧಿಕಾರಿಗಳು ಮನಗಂಡು, ಹೊರಗಿನ ಬೇರುಗಳನ್ನು ಪರ ಜಿಲ್ಲೆಗಳಿಗೂ ರವಾನಿಸಿಕೊಟ್ಟ ಸಂಗತಿ ನೆನಪಿನಲ್ಲಿಡತಕ್ಕಂಥದಿದೆ

ಪತ್ರಿಕಾ—ಪ್ರಕಟನೆ

[illegible]

[illegible]

[illegible]

[illegible]

[illegible]

ಕಾರವಾರ, ತಾ ೧೭-೨-೪೯ } **M Allahbaksh,** ಕಲೆಕ್ಟರ, ಕಾನಡಾ

NOTIFICATION

Applications are nvited for four tenporary posts of clerks in the Judicial Department of the Kanara District M nim m qualification required is Matriculation or other equivalent examination Knowledge of Kannada essential Candidates knowing typing will be given preference Candidates after their enlistment will have to serve as Section-writers till they are absorbed in clerical vacancies in their turn Applications in candidates own handwriting with copies of certificates regarding qualification and good moral character should reach the U/s on or before the 28th of F ruary 1949 Only those who are below the age of 22 yrs in the case of Advanced Class and [illegible] in the case of Intermediat and Backward Classes should apply

District Court of Kanara
Camp Kumta 21 2-1949

N S SHRIKHANDE.
DISTRICT JUDGE KANARA

ಒಕ್ಕಲಿಗರಿಗೂ ಜಮೀನದಾರರಿಗೂ ವಿನಂತಿ.

[illegible]

ತಾ ೨೧-೨-೪೯ ಸಂಪಾದಕ, "ಕಾನಡಾವೃತ್ತ

ಪ್ರಕಟನೆ.

ನಮ್ಮ ಬಿ ಸಿ ಹೊಸ್ಟೆಲದಲ್ಲಿ ಸೇರಬಯಸುವ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಮತ್ತು ನಡತೆಯನ್ನು ಕುರಿತು ತಮ್ಮ ಹಿಂದಿನ ಶಾಲೆಗಳ ಮುಖ್ಯಾಧ್ಯಾಪಕರ ಪ್ರಶಸ್ತಿಪತ್ರ ಸಹಿತ ತಾ ೨೦—೩—೧೯೪೯ರೊಳಗಾಗಿ ಅರ್ಜಿ ಮಾಡಿಕೊಳ್ಳಬೇಕು. ಹೊಸ್ಟೆಲಿನಲ್ಲಿ IV ರಿಂದ VIIನೇ ಇಯತ್ತೆಯ ವರೆಗಿನ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುವದು.

ಬಂಕಿಕೊಡ್ಲ, ಸುಪರಿಂಟೆಂಡೆಂಟ,
ತಾ ೧೯-೨-೧೯೪೯ ಬಿ ಸಿ ಹೊಸ್ಟೆಲ, ಬಂಕಿಕೊಡ್ಲ

ಜಾಹೀರ ನೋಟೀಸು.

[illegible]

ಸ್ಥಾನಿಕ ವೃತ್ತಾಂತ

ಕುಮಟಾ— [illegible]

[illegible]

ಪ್ರಕಟನೆ.

[illegible]

A. L. Dias,

[illegible]

ಪತ್ರಿಕಾ-ಪ್ರಕಟನೆ.

[illegible]

WANTED AGENTS!
FOR
"VEENA VANASPATI"
VEGETABLE GHEE.
BEST FOR COOKING CONTAINS VITAMINS
PACKED IN ALL SIZE OF TINS
SUPPLIED EVERYWHERE
For particulars please write to
BOMBAY TRADING CO.,
129 A. Hill Road BANDRA. BOMBAY, 20

ದೇವಸ್ಥಾನದ ದುರುಪಯೋಗ!

ಶಿರಸಿ ಶ್ರೀ ಮಾರಿಕಾಂಬೆಯ ಭಂಡಾರದ ದಾವಣಗೆರೆಯಲ್ಲಿ ಜಿಲ್ಲಾ ನ್ಯಾಯಾಲಯದ ತೀರ್ಪು.

[illegible]

[illegible] (malfeasance) [illegible] (mis-feasance) [illegible]

Office of the Area Rationing Authority
and Regional Transport Officer, K R,
Belgaum, 11th February, 1949.

NOTICE.

Numerous instances have come to the notice of the undersigned wherein matters relating to the two offices of the Regional Transport Officer and Area Rationing Authority, Belgaum are mixed up by motor owners in one letter and are addressed to either of the offices for disposal All motor owners are requested to please note that though the above-mentioned two offices are controlled by one officer, they are two separate administrative units, and as such, the applications of the mixed-up nature are sure to cause delay in disposal and inconvenience to the public, as one office among the two will be unaware of the receipt of such application, until the office to which the application is originally addressed, forwards the same after disposal to the other office

2 In order to avoid such complications and in order to enable this office to expedite disposals within a reasonable time, all motor owners are requested to submit their applications to the offices of the Regional Transport Officer and Area Rationing Authority, Belgaum, separately for their respective works, and if this is not possible in peculiar cases of mixed-up work, a copy of the application addressed to the Regional Transport Officer, Belgaum may be sent to the Area Rationing Authority, Belgaum, or vice versa as the case may be

3 Further, it is also observed by the undersigned that all necessary documents required for the disposal of the applications are not being submitted by the motor owners, inspite of the circulars issued by this office, prior to the commencement of every taxation and petrol ration quarter This is creating unnecessary correspondence and inconvenience for the office as well as the motor owners In order to carry out prompt disposal and in the interest of the motoring public, all motor owners are requested to cooperate and, while submitting their applications strictly adhere to the procedure laid down from time to time by way of publications in the papers or through circulars sent individually

D. K. Sukhtankar, Capt
R T O & A R A,
K R, Belgaum.

No Misc 9961 of 1949

[illegible]

ಕಾರವಾರ ಜಿಲ್ಹೆಯ

ಒಕ್ಕಲತನ, ದನಕರು ಮತ್ತು ಔದ್ಯೋಗಿಕ

ಪ್ರದರ್ಶನ

ಈ ಜಿಲ್ಹೆಯಲ್ಲಿ ಮೊದಲನೆಯದಾದ

ಈ ಪ್ರದರ್ಶನವು ದೊಡ್ಡರೀತಿಯಿಂದ ಜರುಗತಕ್ಕದ್ದಿದ್ದು, ಚಿನ್ನದ, ಬೆಳ್ಳಿಯ ಹಾಗೂ ಪ್ರಶಸ್ತಿ-ಪತ್ರಗಳ ರೂಪದಲ್ಲಿ ಇನಾಮುಗಳನ್ನು ಇಡಲಾಗಿದೆ ಒಕ್ಕಲಿಗರೂ, ದನಗಳ ಮಾಲಿಕರೂ ಈಕಡೆಗೆ ಲಕ್ಷ್ಯಕೊಡಬೇಕಾಗಿ ವಿನಂತಿ.

ಪ್ರದರ್ಶನವು ತಾ. ೫ ೩-೧೯೪೯ (5-3-49) ನೇ ದಿವಸ ಜರುಗಲಿದೆ

ಕಾರ್ಯದರ್ಶಿ,
ಪ್ರದರ್ಶನ ಸಮಿತಿ, ಶಿರ್ಸಿ.

ಪಡೆದು ಭಂಡಾರಕ್ಕೆ ಹಾನಿ ಮಾಡಿದ್ದಾರೆಂದು ನ್ಯಾಯಾಧೀಶರ ನಿರ್ಣಯವಾಗಿದೆ

(೫) ವಾದಿ-ಪಕ್ಷದ ೫ನೇ ಆಕ್ಷೇಪವೆಂದರೆ ಕೆಲವು ಸಾಲಗಾರರಿಗೆ ರಿಯಾಯಿತಿ ಕೊಟ್ಟಿದ್ದು ಅನುಚಿತವಿರುತ್ತದೆಂಬುದಾಗಿ. ವಾದಿಗಳು ಈ ಕೆಳಗಿನ ಉದಾಹರಣೆಗಳನ್ನು ಸಿದ್ಧಗೊಳಿಸಿದ್ದಾರೆ (೧) ರಾ॥ ಆಲೂರ ಸಂಗಪ್ಪನವರ ಸಾಲ ನಿಕಾಲಿಯ ಬಗ್ಗೆ ರೂ ೪೦೦ಕ್ಕೆ ಅವರ ಆಸ್ತಿ ಕೊಂಡುಕೊಂಡು, ಅವರಿಗೆ ನಗದು ರೂ ೮೫೦ ಕೊಟ್ಟದ್ದುಂಟು ಇನ್ನು ಹಣ ಅವರಿಗೆ ಕೊಡುತ್ತಿರುವಾಗ ಭಂಡಾರದಿಂದ ರೂ ೧೬೫ ಸೂಟು ಬಿಟ್ಟಿದ್ದು ತಪ್ಪು (೨) ದೇವಾಲಯ ಸಮಿತಿಯ ಅಧ್ಯಕ್ಷರ ಸಾಲ ನಂ ೨ನೇ ಮಾಡಿಯ ೧೯೨೫ ನೇ ಕೃತಿವಾದಿಗಳ ಆರೋಪ ರಾ॥ ನಿಲೇಕರ ವೆಂಕಟರಾಯರು, ಅವರು ಭಂಡಾರಕ್ಕೆ ಸ್ವಯಂ ಕೊಟ್ಟ ಆಸ್ತಿಗಳ ಖರೀದಿ ಬೇರೆ ಆಸ್ತಿಗಳು ವಾಗ, ರೂ ೭೫೦ ಸೂಟು ಬಿಟ್ಟಿದ್ದು ಅನುಚಿತ (೩) ದೇವಾಲಯ ಸಮಿತಿಯ ಟ್ರಸ್ಟಿ ರಾ॥ ಸೋಂದೆ ವಾಸುದೇವ ರಾ॥ ದಿಕ್ಷಿತರ ಇವರಿಗೆ ರೂ ೨೬೭ ಸೂಟು ಬಿಟ್ಟಿದ್ದು ತಪ್ಪು. ಈ ಎರಡು ಸಾಲ ತೀರಿಸಲಿಕ್ಕೆ ಆಸ್ತಿ ಇದ್ದುದರಿಂದ ಸೂಟು ಬಿಟ್ಟಿತ್ತೆಂದು ಮೊಕ್ತೇಸರರು ಮಾಡುವ ಪ್ರತಿಪಾದನೆಯಲ್ಲಿ ಅರ್ಥವಿಲ್ಲ. ದಿಕ್ಷಿತರು ತಮ್ಮ ಆಸ್ತಿಯನ್ನು ಅರ್ಪಣ ಮಾಡಿದವರು ೧೯೪೧ರಲ್ಲಿ ಸಮಿತಿಯ ಬಾಂಡ್ ಸೋಂದೆ ವಾಸುದೇವ ಅರ್ಚಕ ವೇ॥ ಗೋಪಾಲಕೃಷ್ಣ ಭಟ್ಟರ ಹೆಸರಲ್ಲಿ ರೂ ೧೪೫೦ಕ್ಕೆ ಲಿಲಾವಾಗಿದ್ದು, ಮತ್ತು ಇನ್ನು ಅವನ್ನು ರೂ ೪೫೦೦ಕ್ಕೆ ಮಾರಿಸಿದ್ದಾರೆಂಬುದನ್ನು ಉಲ್ಲೇಖಿಸಿ, ಮೊಕ್ತೇಸರು ಕೊಟ್ಟ ಸೂಟು ಅಧಿಕಾರಬಾಹ್ಯವಿತ್ತೆಂದು ನ್ಯಾಯಾಧೀಶರು ಅಭಿಪ್ರಾಯ ವ್ಯಕ್ತಗೊಳಿಸಿರುತ್ತಾರೆ (೪) ರಾ॥ ಶಂಭುಯ್ಯಾ ಹಿರಗಿ ಎಂಬವರು ೧೯೨೯ರಲ್ಲಿ ರೂ ೬೦೦೦ ಸಾಲ ತೆಗೆದಿದ್ದರು. ಈ ಸಾಲಕ್ಕೆ ರಾ॥ ಬಸಲಿಕೊಪ್ಪ ಗಣೇಶ ಭಟ್ಟರೂ ಇಸ್ಲಿಭಟ್ಟರೂ ಜಾಮೀನುದಾರರಿದ್ದರು ಈ ಸಾಲದ ವಸೂಲಿಯ ಬಗ್ಗೆ ಮುಂದೆ ದಾವೆಯಾಗಿ ಡಿಕ್ರಿಯಾಯಿತು. ಶಂಭುಯ್ಯನ ಆಸ್ತಿಯನ್ನು ಗಣೇಶಭಟ್ಟರು ಕೊಂಡು ಕೊಂಡು ಡಿಕ್ರಿ ಹಣವನ್ನು ತೀರಿಸುವ ಪೂರ್ಣ ಜವಾಬದಾರಿಯನ್ನು ಹೊತ್ತರು. ಈ ಗಣಪಭಟ್ಟರಿಂದ ರೂ. ೬೦೦೦ ಮಾತ್ರ ವಸೂಲ ಮಾಡಿ ಮೊಕ್ತೇಸರರು ಅವರಿಗೆ ರೂ. ೩೦೦೦ ಸೂಟ ಬಿಟ್ಟಿದ್ದಾರೆ. ಈ ಶಂಭುಯ್ಯರು ರಾ॥ ನಿಲೇಕರ ವೆಂಕಟರಾಯರ ರೈತರಾಗಿದ್ದಾರೆಂಬುದನ್ನೂ ಬಸಲಿಕೊಪ್ಪ ಭಟ್ಟರು ರೂ ೨೦೦೦ ಕ್ಕೇನು ತೀರಿಸ ದೊಡ್ಡ ಜಮೀನದಾರರಿದ್ದಾರೆಂಬುದನ್ನೂ ನ್ಯಾಯಾಧೀಶರು ನಮೂದಿಸಿ, ಈ ಸೂಟು ಸರ್ವಥಾ ಅನ್ಯಾಯದ್ದಿರುತ್ತದೆಂದು ನಿರ್ಧರಿಸಿದ್ದಾರೆ (೫) ೧೯೩೩ರ ಮಾರ್ಚ ೨೬ರ ಸುಮಾರಿಗೆ ಬಲಿ ಕೊಟ್ಟ ಪರ್ಯಾಯ ಕಟ್ಟೆ-ಕಾಣಿಕೆ ವಸೂಲ ಮಾಡುವ ಹಕ್ಕನ್ನು ರೂ ೩೩೨೫ಕ್ಕೆ ಗುತ್ತಿಗೆಗೆ ಪಡೆದ ಚಿಕ್ಕಯ್ಯನಿಗೆ, ಕೆಲವರು ಬ್ರಾಹ್ಮಣರು ಬಲಿಯ ವಿರುದ್ಧ ಆಂದೋಲನವನ್ನೆಬ್ಬಿಸಿದ್ದರಿಂದ, ನಷ್ಟವಾಯಿತೆಂಬ ಕಾರಣ ಹೇಳಿ ರೂ. ೩೦೦ ಸೂಟ ಬಿಟ್ಟಿದ್ದು ಅನುಚಿತವೆಂದು ನ್ಯಾಯಾಧೀಶರ ಮತವಾಗಿದೆ. ಈ ಸೂಟು ಬಿಟ್ಟಿದ್ದು ಹೆಚ್ಚೆಂದರೆ ತಪ್ಪು ತಿಳುವಳಿಕೆಯಿಂದು ಎನಿಸಲ್ಪಡಬೇಕಾಗಿ ಪ್ರತಿವಾದಿ ಪಕ್ಷದವರು ಮಾಡಿದ ಸೂಚನೆಯನ್ನು ನ್ಯಾಯಾಧೀಶರು ತಿರಸ್ಕರಿಸಿ, ಮೊಕ್ತೇಸರರ ವರ್ತನೆಯನ್ನು ಸಮರ್ಥಿಸಲಿಕ್ಕೆ ಸಾಧ್ಯವೇ ಇಲ್ಲೆಂದು ಹೇಳಿದ್ದಾರೆ ವಾದಿಗಳು ದಾವೆಯ ಪಟ್ಟಿಯಲ್ಲಿ ಕೊಟ್ಟ ಮೇಲೆ ಈ ಸೂಟುಗಳನ್ನು ಕೊಟ್ಟದ್ದರಿಂದ ಅವು ಅನುಚಿತವೆಂದೂ ಅವರು ಮೇಲೆ ಹಾಗೆ ಬರೆದಿದ್ದಾರೆ

(೬) ವಾದಿಗಳ ೬ನೇ ಆಕ್ಷೇಪವೆಂದರೆ ಪರ್ಯಾಯ ಜಾತ್ರೆಗಳ ಕಾಲಕ್ಕೆ ಕೂಡಿದ ಕೆಲವೊಂದು ಹಣದ ವಂಚನೆಯಾಗಿರುತ್ತದೆಂಬುದಾಗಿರುತ್ತದೆ. ಈ ಜಾತ್ರೆಗಳ ಕಾಲದಲ್ಲಿ ದೇವರ ಮುಂದೆ ಒಂದು "ಕಡಾಹ" ಇಡುತ್ತಾರೆ. ಜಾತ್ರೆಗೆ ಬಂದ ಭಕ್ತರು ಈ ಕೊಪ್ಪರಿಗೆಯಲ್ಲಿ ಕಾಣಿಕೆ ಹಣವನ್ನು ಆಭರಣಗಳನ್ನೂ ಹಾಕುತ್ತಾರೆ. ಅದಲ್ಲದೆ ಈ ಜಾತ್ರೆಗಳ ಕಾಲಕ್ಕೆ ಕಾಯಿ ಒಡೆದು ಕೊಡುವ ಹಕ್ಕು, ಬಲಿಕೊಟ್ಟ ಪ್ರಾಣಿಗಳ ಕಟ್ಟೆ-ಕಾಣಿಕೆ ವಸೂಲ ಮಾಡುವ ಹಕ್ಕು, ಬೀದಿಗೆ-ಅಂಗಡಿಗೆ, ಫಲಾಹಾರ ಮೊದಲಾದವುಗಳ ಕಾಣಿಕೆಯನ್ನು ವಸೂಲ ಕೊಳ್ಳುವ ಹಕ್ಕು, ಅಂಗಡಿಗಳ ಭಾಡಿಗೆ ವಸೂಲ ಮಾಡುವ ಹಕ್ಕು ಮೊದಲಾದ ಹಕ್ಕುಗಳನ್ನು ಗುತ್ತಿಗೆಗೆ ಕೊಡುವದರಿಂದಲೂ ಕೆಲವೊಂದು ಉತ್ಪನ್ನ ಭಂಡಾರಕ್ಕೆ ಸಿಗುತ್ತದೆ. ಈ ಗುತ್ತಿಗೆಗಳ ಬಾಬು ವಸೂಲಾದ ಹಣವನ್ನು ಮೊಕ್ತೇಸರರು ಪ್ರತ್ಯೇಕ ಇಟ್ಟು ಅವುಗಳ ಲೆಕ್ಕವನ್ನಿಟ್ಟಿಲ್ಲ ಅದನ್ನು "ಕಡಾಹ"ದಲ್ಲೇ ಹಾಕುತ್ತಾರೆ ವಸೂಲ ಬಂದ ಎಲ್ಲ ಹಣವನ್ನು ಅವರು ಬರೆಯುತ್ತಿರಲು ಸಂಭವವಿದ್ದಿಲ್ಲವೆಂತಲೂ, ಕೆಲವೊಂದು ಹಣ ಅವರು ದುರುಪಯೋಗಪಡಿಸಿದ್ದಾರೆಂತಲೂ ವಾದಿಗಳ ಆರೋಪವುಂಟು. ಗುತ್ತಿಗೆಗಳ ಬಾಬು ಮೊಕ್ತೇಸರರ ಕಡೆ ವಸೂಲ ಬಂದ ಹಣವನ್ನು ಪ್ರತ್ಯೇಕ ಇಡದೆ ಕಡಾಹದಲ್ಲಿ ಹಾಕುವ ಈ ಪದ್ಧತಿಯು ಬಹಳ ಆಕ್ಷೇಪಾರ್ಹವಿರುತ್ತದೆಂದೂ ಈ ಪದ್ಧತಿಯಿಂದ ವಂಚನೆ ಮಾಡಲು ಸಾಧ್ಯವಾಗುತ್ತದೆಂಬ ವಾದಿಗಳ ಹೇಳಿಕೆ ಸಾಧಾರವಿದ್ದರೂ ಅದರಿಂದಲೂ ನ್ಯಾಯಾಧೀಶರು ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ

(೭) ದೇವರ ಬಂಗಾರದ ಮುದ್ರೆಯೊಂದು ಕಾಣೆಯಾಗಿದೆ ಅದಕ್ಕೆ ಎಷ್ಟು ತೂಕ ಬಂಗಾರವಿತ್ತೆಂಬುದು ತಿಳಿಯುವದಿಲ್ಲ ಆ ಮುದ್ರೆಯನ್ನು ಮೊಕ್ತೇಸರರು ಕಳಕೊಂಡರೆಂದು ಹೇಳಲಾಗುತ್ತದೆ ಮೊಕ್ತೇಸರರು ಬೇರೆಯವರಿಂದ ಕಳೆದು ಹೋದ ಜಿನಸುಗಳ ಬೆಲೆಯನ್ನು ಕಷ್ಟದಿಂದ ವಸೂಲ ಮಾಡುತ್ತಾರೆ. ಈ ಬಂಗಾರದ ಮುದ್ರೆಯ ಬೆಲೆಯನ್ನು ಮಾತ್ರ ಅವರು ವಸೂಲ ಮಾಡಿಲ್ಲ ಇದು ಅನುಚಿತ ಪಕ್ಷಪಾತವೆಂದು ನ್ಯಾಯಾಧೀಶರ ಮತವಾಗಿದೆ.

(೮) ಮೊಕ್ತೇಸರರು ಬೇಕಾಗಿ ಕಳೆದೆಂದು ಭಂಡಾರದಿಂದ ಕೆಲವು ಹಣವನ್ನು ಕೊಡದೇ ಬೇರೆಕಡೆ ತೆಗೆದು ಬಳಸಿಕೊಳ್ಳುತ್ತಾರೆಂಬ ವಾದಿಗಳ ದೂರಿಗೆ ಲೆಕ್ಕ ಸಾಕ್ಷ್ಯ ಪೂರಾವೆ ಸಿಗುತ್ತದೆಂದು ಕೆಲವೊಂದು ಉದಾಹರಣೆಗಳನ್ನು ಉದ್ಧರಿಸಿ ನ್ಯಾಯಾಧೀಶರು ತೀರ್ಮಾನಿಸಿದ್ದಾರೆ

(೯) ವಾದಿಗಳ ಕೊನೆಯ ದೂರು: ದೇವರ ಬಾಬು ಕೆಲವು ಕರೊಗೇಟ ತಗಡುಗಳನ್ನು ಮೊಕ್ತೇಸರರು ಸ್ವಂತ ವಾಸಿಗೆ ಹಾಕಿದ್ದಾರೆಂಬುದಾಗಿರುತ್ತದೆ. ದೇವಸ್ಥಾನದ ಮುಂದೆ-ಹಿಂದೆ ತಗಡಿನದೊಂದು ಸಭಾಮಂಟಪವಿತ್ತು. ಅದಕ್ಕೆ ೪೦೦ ತಗಡುಗಳಿದ್ದವು ಈಗ ೨೫೦ ತಗಡುಗಳು ಮಾತ್ರ ಉಳಿದಿವೆ ಇದರ ತಗಡುಗಳನ್ನು ದಾಸ್ವಾಟ ಮೊಕ್ತೇಸರ ರಾ॥ ಧ. ಕೃಷ್ಣನವರು ಒಯ್ದಿದ್ದಾರೆಂದು ವಾದಿಗಳ ಹೇಳಿಕೆಯಿದೆ. ನ್ಯಾಯಾಧೀಶರು ತಮ್ಮ ಮುಂದೆ ಬಂದ ಪುರಾವೆಯನ್ನೆಲ್ಲ ಪರಿಶೀಲಿಸಿ, ದಾಸ್ವಾಟ ಮೊಕ್ತೇಸರರು ಕೆಲವು ತಗಡುಗಳನ್ನು ದುರುಪಯೋಗ ಮಾಡಿದ್ದಾರೆಂಬ ನಿರ್ಣಯಕ್ಕೆ ಬಂದಿರುತ್ತಾರೆ.

ಮೇಲಿನ ವಿವರಣೆಯಿಂದ ಎರಡೂ ದಾವೆಗಳಲ್ಲಿ ಪ್ರತಿವಾದಿಗಳು ವಿಶ್ವಾಸ-ಭಂಗ, ದುರಾಚರಣೆ, ಅನ್ಯಾಯಾಚರಣೆ ಮತ್ತು ಕರ್ತವ್ಯಚ್ಯುತಿಗಳ ಅಪರಾಧ ಮಾಡಿದ್ದು ಸಿದ್ಧವಾಗಿದೆಂದೂ, ಮೊಕ್ತೇಸರರು ಹಾಗೂ ದೇವಾಲಯ ಸಮಿತಿಯ ಅಧ್ಯಕ್ಷರು ಮತ್ತು ಚಿರಮಾನ್ಯರೂ ಹಲವಾರು ಅಪರಾಧ ಕೃತ್ಯಗಳಿಗೆ ಪ್ರತ್ಯಕ್ಷ ಹೊಣೆಗಾರರಾಗಿರುತ್ತಾರೆಂತಲೂ, ಇಂಥ ಸದಸ್ಯರು ದೇವರ ಭಂಡಾರದ ಮೇಲ್ವಿಚಾರಣೆಯನ್ನು ಸರಿಯಾಗಿ ನಡೆಸದೆ ಮೊಕ್ತೇಸರರಿಗೆ ಮೋಸ ಹಲವು ನಡೆಸಲು ಮುಕ್ತದ್ವಾರ ಮಾಡಿಕೊಟ್ಟು ಅದರಿಂದ ತಪ್ಪು ಗಾರರಾಗಿರುತ್ತಾರೆಂದೂ ನ್ಯಾಯಾಧೀಶ ರಾ॥ ಮಿರ್ಜಕರರು ನಿರ್ಣಯಿಸಿ, ಅವರಿಗೆ ಅಧಿಕಾರ-ಭ್ರಷ್ಟ ಮಾಡಿರುತ್ತಾರೆ, ಮತ್ತು ಭಂಡಾರದ ಯೋಗ್ಯ ವ್ಯವಸ್ಥೆ ಮಾಡು

ಈ ಕೆಲುವಾಗಿ ಸಂಬಂಧಪಟ್ಟ ಇನ್ನು ತಿಳುವಳಿಕೆಯ ಒಂದು ಯೋಜನೆಯನ್ನು ತಯಾರಿಸಬೇಕಾಗಿಯೂ ಈ ಯೋಜನೆ ತಯಾರಾಗಿ ಹೊಸ ಮೊಕ್ತೇಸರರೂ ದೇವಾಲಯ ಸಮಿತಿಯ ಸದಸ್ಯರೂ ನೇಮಿಸಲ್ಪಟ್ಟು ಬರುವವರೆಗೆ ದೇವರ ಭಂಡಾರದ ಆಸ್ತಿಪಾಸ್ತಿ ನಡೆಸಲಿಕ್ಕೆ ಒಬ್ಬ "ರಿಸೀವ್ಹರ"ನನ್ನು ನೇಮಿಸಬೇಕಾಗಿಯೂ, ಆಯಾ ಮೊಕ್ತೇಸರರಿಂದ ಇಲ್ಲವೆ ದೇವಾಲಯ ಸಮಿತಿಯ ಸದಸ್ಯರಿಂದ ದೇವರ ಭಂಡಾರಕ್ಕೆ ಆಗಿರುವ ಹಾನಿಯನ್ನು, ಲೆಕ್ಕ-ಪತ್ರಗಳ ಸಂಶೋಧನೆಯಿಂದ, ಕಂಡುಹಿಡಿಯಲಿಕ್ಕೆ ಒಬ್ಬ ಕಮಿಶನರರನ್ನು ನೇಮಿಸಬೇಕಾಗಿಯೂ ಹುಕುಮು ಮಾಡಿರುತ್ತಾರೆ.

ಸೇವು-ಹಿತದ ದಾವೆಗಳನ್ನು ವ್ಯವಹರಿಸಲಿಕ್ಕೆ ಕಳೆದ ೭ ೮ ತಿಂಗಳ ರೂ. ಖರ್ಚ ಬಂತೆಂದು ರಾ॥ ಕೃಷ್ಣರಾವ ಮಾಂಜರೇಕರ ಇವರು ಹೇಳುತ್ತಾರೆ. ಕೋರ್ಟ ಖರ್ಚು ವಿವರದ ಬರಲು ತೀರ್ಪು ಪ್ರಕಾರ ವಸೂಲ ಮಾಡಬೇಕಾಗುವದು, ಮಾಡಬೇಕಾಗುವದು. ದಾವೆಯ ಕೆಲಸವು ಮುಗಿದಿರುವದಿಲ್ಲ, ಅಧಿಕಾರ ಯೋಜನೆ ತಗ್ಗಿ ಆಗಬೇಕಾದ್ದುಂಟು ಇನ್ನೂ ಮಾಡಬೇಕಾಗುವದು. ಮೇಲಾಗಿ ಪ್ರತಿವಾದಿಗಳು ಹಾಯಿಕೋರ್ಟಿಗೆ ಅಪೀಲು ಮಾಡುವರೆಂಬ ಸುದ್ದಿಯಿದೆ ಅಲ್ಲಿ ಕೂಡ ಖರ್ಚು ಮಾಡಬೇಕಾಗುವದರಿಂದ ಈ ಎಲ್ಲ ಕೆಲಸಗಳಿಗೆ ಸಾರ್ವಜನಿಕರು ಮುಕ್ತಹಸ್ತದಿಂದ ಶ್ರೀ ಮಹಾಬಲೇಶ್ವರನ ಭಂಡಾರದ ಬಗ್ಗೆ ಆಸ್ಥೆಯುಳ್ಳವರು ತಮಗೆ ಸಹಾಯ ಮಾಡಬೇಕೆಂದೂ ರಾ॥ ಮಾಂಜರೇಕರ ಬಿನ್ನವಿಸಿದ್ದಾರೆ.

ಟೆಂಡರ ನೋಟೀಸು.

ನಂ ೧೮೦ (ಟ್ರಿಸ್ಪೋರ್ಟ್) — ಕಾನಡಾ ಜಿಲ್ಲೆಯೊಳಗಿನ ಬೇಲೇಕೇರಿ ಬಂದರದಿಂದ ರವಾನೆಯಾಗುವ ಹೊನ್ನಾವರ, ಭಟಕಳ ಬಂದರಗಳಿಗೆ ಮಚವೆಗಳಿಂದ ಸಾಗಿಸಲ್ಪಡುವ ಆಹಾರ-ಧಾನ್ಯಗಳ ಚೀಲಗಳನ್ನು ಒಯ್ಯಬೇಕಾಗಿದೆ. ಅದ್ದರಿಂದ ಮಚವೆಗಳಿಂದ ಸರಕಾರಿ ಆಹಾರ-ಧಾನ್ಯಗಳನ್ನು ಸಾಗಿಸುವವರು ೨—೩—೧೯೪೯ಕ್ಕೆ ಆ ಅವಧಿಗಾಗಿ ಸಪ್ತ ಟೆಂಡರಗಳನ್ನು ಕಳಿಸಬೇಕಾಗಿ ಕಾನಡಾ ಜಿಲ್ಲೆಯ ಕಲೆಕ್ಟರರು ಅಪೇಕ್ಷಿಸುತ್ತಾರೆ

ಟೆಂಡರ ಕಳಿಸುವವರು ಬೇಲೇಕೇರಿಯಿಂದ ಕಾರವಾರ, ಹೊನ್ನಾವರ ಮತ್ತು ಭಟಕಳ ಬಂದರಗಳಿಗೆ ಒಯ್ದು ಕೊಡಲಾಗುವ ಆಹಾರಧಾನ್ಯಗಳ ಪ್ರತಿ ಟನ್ನಿಗೆ ಎಷ್ಟು ಸಾಗಾಟದ ವೆಚ್ಚ ಆಕರಿಸಲಾಗುವದೆಂಬುದನ್ನು ನಮೂದಿಸಲೇ ಬೇರೆ ಬೇರೆ ಬಂದರಗಳಿಗೆ ಬೇರೆ ಬೇರೆ ದರಗಳನ್ನು ಕೊಡತಕ್ಕದ್ದು. ಟೆಂಡರ ಕೊಡುವವರು ಈ ಸಾಗಾಟದ ಕೆಲಸಕ್ಕೆ ತಾವು ಕೊಡಲಿರುವ ಮಚವೆಯ ನಂಬರವನ್ನೂ ಆ ಮಚವೆಯು ಎಷ್ಟು ಭಾರ ಹೇರಿಕೊಳ್ಳಬಲ್ಲದೆಂಬುದನ್ನೂ ನಮೂದಿಸಬೇಕು. ಒಯ್ಯತಕ್ಕ ಆಹಾರ-ಧಾನ್ಯಗಳನ್ನು ಮಚವೆಯ ಗುತ್ತಿಗೆದಾರನ ಜಿಮ್ಮೆ ಒಪ್ಪಿಸಿದ ಬಳಿಕ ಧಕ್ಕೆಯವರೆಗೆ, ಸಾಗಾಟದ ವೆಚ್ಚದಿಂದ, ಕೊಡಲಾಗುವದು. ಧಕ್ಕೆಯ ಮೇಲಿಂದ ಅವನ್ನು ಮಚವೆಯ ಮೇಲೆ ಹಾಕಿಕೊಳ್ಳುವ ಹಾಗೂ ಇಳಿಯಲಿಕ್ಕೆ ಬಂದರದ ಧಕ್ಕೆಯ ಮೇಲೆ ಅವನ್ನು ಇಳಿಸಿಕೊಡುವ ವ್ಯವಸ್ಥೆಯನ್ನು ಗುತ್ತಿಗೆದಾರನು ಮಾಡಬೇಕಾಗುವದು ಈ ಕರೆಗಳು ಹೇರಿಕೊಳ್ಳುವ ವೆಚ್ಚ, ಇಳಿಸುವ ವೆಚ್ಚ, "ಹಮಾಲಿ"ಯ ವೆಚ್ಚ ಎಂದು ಮುಂತಾಗಿ ಗುತ್ತಿಗೆಯ ದರದ ಹೊರಗೆ ಹಣ ಸಿಗುವದಿಲ್ಲ

ಈ ಗುತ್ತಿಗೆಯನ್ನು ತಾ. ೧೬-೩-೧೯೪೯ರಿಂದ ತಾ. ೧೫ ೬-೧೯೪೯ರ ವರೆಗಿನ ಮೂರು ತಿಂಗಳ ಅವಧಿಗಾಗಿ ಕೊಡಲಾಗುವದು ಗುತ್ತಿಗೆಯ ಅವಧಿಯನ್ನು ಮುಂದರಿಸುವ ಅಧಿಕಾರ ಕಲೆಕ್ಟರರಿಗಿದೆ. ಟೆಂಡರ ಕಳಿಸುವವರು ರೂ. ೫೦೦ರ ಭದ್ರತೆಯನ್ನು ಕೊಡಬೇಕಾಗುವದು. ಟೆಂಡರು ಅವರ ಹೆಸರಿನ ಮೇಲೆ ಆದ ಬಳಿಕ ಗುತ್ತಿಗೆದಾರನು ಆಹಾರ-ಧಾನ್ಯಗಳ ಜವಾಬ್ದಾರಿ ಹೊತ್ತು ಸಾಗಾಟದ ಕರಾರುಪತ್ರವನ್ನು ಬರೆದುಕೊಡಬೇಕಾಗುವದು.

ಕಾರವಾರ, M Allahbaksh,

ತಾ. ೧೬—೨—೧೯೪೯ ಕಲೆಕ್ಟರ ಕಾನಡಾ ಜಿಲ್ಲೆ

ಇದನ್ನು ವಾಸುದೇವರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ವರಾಜ್ಯ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಊರೊಳಗೆ
ವರ್ಷಕ್ಕೆ ರೂ ೨-೪-೦
ಟಪಾಲ ಮೂಲಕ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧ ೧೦ ೦
ಬಿಡಿ ಸಂಚಿಕೆಗೆ ೦-೧-೦
ವ್ಹಿ. ಪಿ. ಯಿಂದ [illegible]
ವ್ಹಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿಯು ಮುಂಗಡವಾಗಿ ಕೊಡತಕ್ಕದ್ದು

Reg. No. B 1270. Monday, 28-2-1949.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೩೫

ಕುಂದಾಪುರ:- ಸೋಮವಾರ, ತಾ ೨೮—೨—೧೯೪೯.

ಜಾಹೀರಾತುಗಳ ದರ:
[illegible]
[illegible]
[illegible]
[illegible]
ಪತ್ರ ವ್ಯವಹಾರ
[illegible]

ಸುದ್ದಿಗಳ ಸಂದೂಕ.

— ಮುಂಬಯಿಯ ಎಸೆಂಬ್ಲಿಯಲ್ಲಿ ಕಳೆದ ಗುರುವಾರ ಅರ್ಥಮಂತ್ರಿಗಳಾದ ಮಾನ್ಯ ವೈಕುಂಠಲಾಲ ಮೆಹತಾರವರು ೧೯೪೯-೫೦ನೇ ವರ್ಷದ ಪ್ರಾಂತಿಕ ಆಯ-ವ್ಯಯಗಳ ಅಂದಾಜ ಪತ್ರಿಕೆಯನ್ನು ಮಂಡಿಸಿರುತ್ತಾರೆ. ಈ ಅಂದಾಜ ಪತ್ರಿಕೆಯಂತೆ ಸರಕಾರಕ್ಕೆ ಬರುವ ವರ್ಷದಲ್ಲಿ ಒಟ್ಟು ಉತ್ಪನ್ನ ರೂ ೫೫,೪೦,೭೬,೦೦೦ ಸಿಗುವದು. ಒಟ್ಟು ಖರ್ಚು ರೂ ೫೭,೪೦,೭೪,೦೦೦ ಬರುವದು; ಅಂದರೆ ಒಟ್ಟಿಗೆ ರೂ ೩,೩೫,೯೨,೦೦೦ರ ಕೊರತೆ ಬೀಳುವದು. ಪ್ರಾಂತದಲ್ಲಿ ಲೀನವಾದ ಸಂಸ್ಥಾನಗಳ ಲೆಕ್ಕ ಬೇರೆ ಇಡಲಾಗಿದ್ದು, ಅವುಗಳ ಆಯ-ವ್ಯಯಗಳಲ್ಲಿ ರೂ ೬೨,೫೦,೦೦೦ರ ಕೊರತೆ ಬೀಳುವದು. ಹೀಗೆ ಒಟ್ಟು ಕೊರತೆಯು ರೂ ೩,೯೮,೪೨,೦೦೦ ದಷ್ಟಾಗುವದು. ಈ ಕೊರತೆಯ ಮೂಲಕ ಪ್ರಾಂತಿಕ ಸರಕಾರವು ಈ ವರ್ಷ ಯಾವದೇ ಹೊಸ ಬಕವರ್ತಿ? ಯೋಜನೆಗಳನ್ನು ಕೈಕೊಳ್ಳುವಂತಿಲ್ಲ, ಸಾಮಾನ್ಯ ಹೊಣೆಗಳನ್ನಷ್ಟೇ ನಿರ್ವಹಿಸುವದು. ಆಯ-ವ್ಯಯಗಳಲ್ಲಿ ಬರುವ ಕೊರತೆಯನ್ನು ತುಂಬಿ ತರುವದಕ್ಕಾಗಿ ಅರ್ಥಮಂತ್ರಿಗಳು ಕೆಲವೊಂದು ಹೊಸ ಕರಗಳನ್ನು ಕೂಡ್ರಿಸುವ ಸೂಚನೆಗಳನ್ನು ಮಾಡಿದ್ದಾರೆ. ಇನ್ನಿತರ ಕೆಲವು ಪ್ರಾಂತಗಳಲ್ಲಿರುವಂತೆ ಪ್ರಾಂತದೊಳಗಿಂದ ಹೊರಗೆ ಹೋಗುವ ವ್ಯಾಪಾರಿ ಸರಕಿನ ಮೇಲೆ ನಿರ್ಯಾತ ಕರ ಹೇರಬೇಕು, ಮಾರಾಟದ ತೆರಿಗೆಯಿಂದ ಈಗ ಮುಕ್ತವಿರುವ ಹಲವಾರು ಸರಕುಗಳಲ್ಲಿ ಕೆಲವೇ ಜೀವನಾವಶ್ಯಕ ವಸ್ತುಗಳನ್ನು ಮಾತ್ರ ಬಿಟ್ಟು ಇನ್ನುಳಿದ ವಸ್ತುಗಳ ಮಾರಾಟದ ಮೇಲೂ ಕರ ಹೇರಬೇಕು, ಚಿನ್ನ-ಬೆಳ್ಳಿಗಳ ಪೇಟೆಯಲ್ಲಿ ನಡೆಯುವವ್ಯವಹಾರದ ಮೇಲೆ ಸ್ಟ್ಯಾಂಪ ಡ್ಯೂಟಿ ಹೇರಬೇಕು; ಮನೆಗಳಲ್ಲಿ ಉಪಯೋಗಿಸಲ್ಪಡುವ ಹಾಗೂ ಔದ್ಯೋಗಿಕ ಕಾರಖಾನೆಗಳಲ್ಲಿ ಉಪಯೋಗಿಸಲ್ಪಡುವ ವಿದ್ಯುಚ್ಛಕ್ತಿಯ ಮೇಲೆ [illegible] ಯುನಿಟ್ಟುಗಳಿಗೆ ೧ ಪೈಯಂತೆ ತೆರಿಗೆ ಆಕರಿಸಬೇಕು, ಮತ್ತು ಪತ್ತನ? ನಗರಗಳೊಳಗಿನ ಜಾಹೀರಾತುಗಳ ಉತ್ಪನ್ನದ ಮೇಲೆ ಸಹ ಮಾರಾಟ ಕರ ಹೇರಬೇಕು ಎಂದು ಮಾನ್ಯ ಮಂತ್ರಿಗಳು ಸೂಚಿಸಿದ್ದಾರೆ. ಈ ಹೊಸ ಕರಗಳಿಂದ ೪ ಕೋಟಿ ೧೦ ಲಕ್ಷ ರೂ ಗಳಷ್ಟು ಉತ್ಪನ್ನ ಬರುವದೆಂದೂ, ಅದರೊಳಗಿಂದ ಕೊರತೆಯು ನೀಗಿ, [illegible] ರೂ ಉಳಿತಾಯವಾಗುವದೆಂದೂ ಸಚಿವರು ಅಂದಾಜು ಮಾಡಿದ್ದಾರೆ.

ಮುಂಬಯಿಯ ಕೌನ್ಸಿಲಿನ (ಮೇಲ್ಮನೆಯ) ಅಧಿವೇಶನಕ್ಕೆ ನಾಳೆಯಿಂದ ಪ್ರಾರಂಭವಾಗುತ್ತಿದೆ. ಈ ಅಧಿವೇಶನದ ಕಾರ್ಯಕ್ರಮ ಪತ್ರಿಕೆಯು [illegible] ಜಿಲ್ಲೆಯ ಪ್ರತಿನಿಧಿಗಳಾದ ರಾ॥ ಗೋಪಿಯವರು ೧ ಮಸೂದೆ ತಾವು ಮಂಡಿಸುವೆವೆಂದೂ, ೩ ಗೊತ್ತುವಳಿಗಳನ್ನು ಸೂಚಿಸಬಯಸುತ್ತೇವೆಂದೂ ಮುಂದಾಗಿ ತಿಳಿಸಿದಂತೆ ತೋರುತ್ತದೆ. ನಮ್ಮ ಕಾನಡಾ ಜಿಲ್ಲೆಗೆ ಯಾವ ಹಿತವು ಕಾಯುದೆ — [illegible] ಮುಂಬಯಿಯ ದೋ — ಅನ್ವಯ ಪತ್ರಕ್ಕದ್ದೆಂದು ನಿರ್ದಿಷ್ಟಗೊಳಿಸುವದೇ ರಾ॥ ಗೋಪಿಯವರ ಮಸೂದೆಯ ಉದ್ದೇಶ. ಅವರ ಗೊತ್ತುವಳಿಗಳ ಮಥಿತಾರ್ಥ ಹೀಗಿದೆ — (೧) ಮೈಸೂರ ಸರಕಾರವು ಒಂದು ಮಲೆನಾಡ ಯೋಜನೆಯನ್ನು ತಯಾರಿಸಿ ತನ್ನಲ್ಲಿಯ ಮಲೆನಾಡಿನ ಜನರಿಗೆ ಕೊಟ್ಟಿರುವ ಸೌಕರ್ಯ-ಸವಲತ್ತುಗಳನ್ನು ಮುಂಬಯಿ ಸರಕಾರವು ಕಾನಡಾ ಮತ್ತು ಧಾರವಾಡ ಜಿಲ್ಲೆಗಳೊಳಗಿನ ಮಲೆನಾಡ ಪ್ರದೇಶಗಳಿಗೆ ಕೂಡಲೆ ದಯಪಾಲಿಸಬೇಕು. (೨) ಹೊಲ-ಸಾಗುವಳಿ ಕಾನೂನಿನಂತೆ ಬೆಳೆಯ ಸಂಭಾವ್ಯ ಪ್ರಮಾಣವನ್ನು ನಿರ್ಧರಿಸುವದಕ್ಕಾಗಿ ಸರಕಾರವು ಯಾವದೊಂದು ಶಾಸ್ತ್ರೀಯ ಪದ್ಧತಿಯನ್ನು ಅವಲಂಬಿಸಲ್ಲಿ ತರಬೇಕು (೩) ಪ್ರತಿ ವರುಷ ಬೆಳೆ ಕೊಯ್ಯುವ ಬೆಳೆಯ ಮಾಸ ಕಂಡು ಹಿಡಿದು ಪ್ರಕಟಿಸುವ ಪದ್ಧತಿಯ ಬದಲು ಕೆಲವೊಂದು ವರುಷಗಳ ನಿರ್ದಿಷ್ಟ ಅವಧಿಯಲ್ಲಿ ಹೊಲಗಳು ಬೆಳೆಯಬಹುದಾದ ವರಿಷ್ಠ ಬೆಳೆಯ ಮಾನವನ್ನು ನಿರ್ಧರಿಸುವ ಪದ್ಧತಿಯನ್ನು ಸರಕಾರವು ಅನುಸರಿಸುವದು ಒಳಿತು. ವನಸ್ಪತಿ (ಜನ್ನ) ತುಪ್ಪವೆಂದು ಕರೆಯಲ್ಪಡುವ ಪದಾರ್ಥದ ಉತ್ಪಾದನೆಗೂ ಮಾರಾಟಕ್ಕೂ ಮುಂಬಯಿ ಪ್ರಾಂತದಲ್ಲಿ ಪ್ರತಿಬಂಧ ಹಾಕತಕ್ಕದ್ದೆಂಬರ್ಥದ ಗೊತ್ತುವಳಿಯನ್ನು ತಾವು ಮಂಡಿಸುವೆವೆಂದು ರಾ॥ ಶಾಂತಿಲಾಲ ಶಹಾ ಇವರು ಒಂದು ಸೂಚನೆ ಕೊಟ್ಟಿರುತ್ತಾರೆ.

— ಭಾರತ ಸರಕಾರದ ಉಪ-ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಕಳೆದ ವಾರದ ಪ್ರಾರಂಭಕ್ಕೆ ಮದ್ರಾಸ-ಮೈಸೂರುಗಳಿಗೆ ಭೆಟ್ಟಿಯನ್ನಿತ್ತು, ಮೊನ್ನೆ ಶನಿವಾರ ಹೈದರಾಬಾದಕ್ಕೆ ವಿಮಾನದಿಂದ ಹೋಗಿರುತ್ತಾರೆ ಅವರನ್ನು ಬರಮಾಡಿಕೊಳ್ಳಲು ಸ್ವತಃ ನಿಜಾಮರು ಬೇಗಮಪೇಟ ವಿಮಾನ-ನಿಲ್ದಾಣಕ್ಕೆ ಹೋಗಿದ್ದರಂತೆ. ಈ ರೀತಿಯ ಸ್ವಾಗತದ ಸನ್ಮಾನವನ್ನು ನಿಜಾಮರು ಭಾರತದ ಹಿಂದಿನ ಸರ್ವಾಧಿಕಾರಿಗಳ ವಿನಹ ಬೇರಾರಿಗೂ ಇತ್ತಿದ್ದಿಲ್ಲವಂತೆ!

— ರೇಲ್ವೆ ಜನರು ಇದೇ ಬರುವ ತಾ ೯ಕ್ಕೆ ಸಂಪು ಹೂಡಬೇಕೆಂದು ಮಾಡಿದ್ದರು ಅಂಚೆ ಮತ್ತು ತಂತಿ ಇಲಾಖೆಯ ಕೆಲಸಗಾರರ ಅಖಿಲ ಭಾರತೀಯ ಸಂಘವೂ ಈ ತಿಂಗಳ ತಾ ೧ನೇ ದಿನ ಇಲಾಖೆಯ ವರಿಷ್ಠರಿಗೆ ತಮ್ಮ ಸಂಘದವರು ಸಂಪು ಹೂಡುವರೆಂದು ಪೂರ್ವಸೂಚನೆ ಕೊಟ್ಟಿದ್ದರು, ಈ ಸಂಪುಗಳಿಂದ ದೇಶದೊಳಗಿನ ಜನ-ಜೀವನಕ್ಕೂ ವ್ಯವಹಾರಕ್ಕೂ ಅನಸ್ವಾತಿ? ತೊಂದರೆಯಾಗುತ್ತಿತ್ತು. ದೇಶದ ಸುದೈವದಿಂದ ರೇಲ್ವೆಯವರು ಸಂಪು ಹೂಡಕೂಡದೆಂದು ಅ॥ ಭಾ॥ ರೇಲ್ವೆ ಮಂಡಳದವರ ನಿರ್ಣಯವಾಯಿತು. ಆ ನಿರ್ಣಯದಂತೆ ನಡೆಯಲು ಜಿ. ಆಯ್. ಪಿ. ರೇಲ್ವೆ ಕೆಲಸಗಾರರೂ ನಿಶ್ಚಯಿಸಿರುತ್ತಾರೆ. ಅಂಚೆ ಮತ್ತು ತಂತಿ ಕೆಲಸಗಾರರ ಸಂಘದ ವರಿಷ್ಠರೂ ಕೂಡ ಕಳೆದ ಶುಕ್ರವಾರ ಮದ್ರಾಸದಲ್ಲಿ ಕೂಡಿ, ಸದ್ಯದ ಪರಿಸ್ಥಿತಿಯಲ್ಲಿ ಸಂಪು ಹೂಡುವದು ತರವಲ್ಲೆಂದೂ ತಮ್ಮ ಸಂಘದವರ ಕೊರತೆ-ಕಷ್ಟಗಳನ್ನು ಸಂಧಾನದ ಮಾರ್ಗದಿಂದಲೇ ಬಗೆಹರಿಸಿಕೊಳ್ಳಬೇಕೆಂದೂ ಠರಾವ ಮಾಡಿದ್ದಾರೆ. ಆದರೂ ಇಂತಹ ದೇಶ-ಪೀಡಕ ಗಂಡಾಂತರ-ಪ್ರದ ಸಂಪುಗಳನ್ನು ತಡೆಹಿಡಿಯುವದಕ್ಕಾಗಿ ಹಿಂದ ಸರಕಾರವು ತನ್ನ ಪೂರ್ವ ಸಂಕಲ್ಪದಂತೆ ಒಂದು ಕಾನೂನು ಮಾಡಲಿಚ್ಛಿಸಿ, ಅದರ ಮಸೂದೆಯನ್ನು ಕಳೆದ ಶುಕ್ರವಾರ ಕೇಂದ್ರ ಕಾನೂನ ಸಭೆಯಲ್ಲಿ ಮಂಡಿಸಿದೆ. ಸಮಾಜದ ಸ್ವಾಸ್ಥ್ಯಕ್ಕೆ ಅತ್ಯವಶ್ಯವಿರುವ ರೇಲ್ವೆನೌಕರರು, ಅಂಚೆ-ತಂತಿ, ಟೆಲಿಫೋನ ಕಚೇರಿಗಳ ನೌಕರರು, ಸರಕಾರದ ಮದ್ದು-ಗುಂಡು ಶಸ್ತ್ರಾಸ್ತ್ರಗಳ ಉತ್ಪಾದನಗಳೊಳಗಿನ ಹಾಗೂ ಕಾರಖಾನೆಗಳೊಳಗಿನ ನೌಕರರು, ವಿದ್ಯುಚ್ಛಕ್ತಿ ಕಾರಖಾನೆಗಳ ನೌಕರರು ನಾಗರಿಕ ಲೋಕಕ್ಕೆ ನೀರು ಮತ್ತು ದೀಪ ಪೂರೈಸುವ ಉದ್ಯೋಗದವರು, ಹಾಗೂ ದೊಡ್ಡ ಬಂದರಗಳಲ್ಲಿ ಹಡಗಗಳಿಂದ ಸರಕು ಇಳಿಸಿಕೊಳ್ಳುವ ಹಾಗೂ ಹಡಗಗಳಲ್ಲಿ ಸರಕು ಹೇರುವ ಕೆಲಸಗಾರರು "ಅತ್ಯಾವಶ್ಯಕ ನೌಕರರ" (essential services) ವ್ಯಾಖ್ಯೆಯಲ್ಲಿ ಬರುತ್ತಾರೆ. ಈ ನೌಕರರು ಸಂಪು ಹೂಡುವದೂ, ಅವರಿಗೆ ಸಂಪು ಹೂಡ

The Agricultural & Industrial Bank, Ltd.,

Regd Office: "LAXMI NIVAS Buildin

COONDAPOOR, S. Kanara.

SEASON DEPOSITS

Maturing on or before 30th June 1949 are now accepted with interest ranging from 2¼ % to 3½% per annum.

Every kind of Banking business transacted.

For terms etc, please apply to any of our following

Branches.

1 Coondapoor	7 Ankola.	13. Sirsi
2 Mangalore	8 Bhatkal	14. Dharwar
3 Somwarpet	9. Gokarn	15 Gadag
4 Virajpet	10 Honavar.	16. Haveri
5 Shimoga	11. Karwar	17. Hubli.
6 Nagar	12. Kumta	18. Belgaum.

19 BOMBAY (384-M, Jaipuria House, Kalbadevi Road).

ಲು ಪ್ರೇರೇಪಿಸುವದು ಅಥವಾ ಸಹಾಯ ಮಾಡುವದೂ ಅಪರಾಧಗಳೆಂದು ಎಣಿಸಲ್ಪಡಬೇಕೆಂತಲೂ, ಸಂಪು ಹೂಡಿದ ಅಪರಾಧಕ್ಕೆ ೬ ತಿಂಗಳ ಶಿಕ್ಷೆ ಮತ್ತು ೨೦೦೦ ರೂ. ದಂಡ ಮತ್ತು ಸಂಪು ಹೂಡಲು ಪ್ರೇರಣೆ ಯಾ ಪ್ರೋತ್ಸಾಹ ಕೊಟ್ಟ ಅಪರಾಧಕ್ಕೆ ೩ ತಿಂಗಳ ಶಿಕ್ಷೆ ಮತ್ತು ೧೦೦೦ ರೂ. ದಂಡ ಹೇಳಬೇಕೆಂತಲೂ ಸರಕಾರದವರ ವ ಸೂದೆಯು ಬಯಸುತ್ತದೆ ಈ ಕಾನೂನು ೧ ವರ್ಷದ ಮಟ್ಟಿಗೆ ಇದ್ದರೆ ಸಾಕೆಂದು ಸರಕಾರದ ಅಭಿಪ್ರಾಯವಿದೆ

— ಜೊರ್ಜ ಭೂಪತಿಗಳ ಮುಖ-ಮುದ್ರೆಯುಳ್ಳ ಅಂಚೆ-ತಿಕೀಟುಗಳ ಬದಲಾಗಿ ಸ್ವತಂತ್ರ ಭಾರತ ಕ್ಕೊಪ್ಪುವಂತೆ, ಭಾರತದ ಗತ ಇತಿಹಾಸ-ವೈಭವಗಳ ನೆನಹು ಮಾಡಿ ಕೊಡುವ ಚಿತ್ರಗಳುಳ್ಳ ಅಂಚೆ ತಿಕೀಟುಗಳನ್ನು ಹೊರಡಿಸುವ ವ್ಯವಸ್ಥೆಯಾಗಿದೆ ಈ ಹೊಸ ಅಂಚೆ-ತಿಕೀಟುಗಳು ಬರುವ ಏಪ್ರಿಲ ತಾ ೧ರಿಂದ ಹೊರಬೀಳುವವು ಸದ್ಯಕ್ಕೆ ೧೬ ಬಗೆಯ ತಿಕೀಟಗಳು (ಬೇರೆ ಬೇರೆ ಬಣ್ಣಗಳವು) ತಯಾರಾಗಿವೆ ೧ ಬಿಲ್ಲಿಯ ತಿಕೀಟಿನ ಮೇಲೆ ಅಜಂತಾ ಗವಿಯೊಳಗಿನ ನಟನೆಯ ಚಿತ್ರವಿದೆ. ೨ ಬಿಲ್ಲಿಯ ತಿಕೀಟಿನ ಮೇಲೆ ಮೊಹೆಂಜದಾರೋ (ಸಿಂಧ) ಪಟ್ಟಣದ ಭೂಗರ್ಭದಲ್ಲಿ ಸಿಕ್ಕ ಗೂಳಿಯ ಚಿತ್ರವುಂಟು. ೩ ಬಿಲ್ಲಿಗಳ ತಿಕೀಟಿನ ಮೇಲೆ ಹಿಂದುಗಳ ತ್ರಿಮೂರ್ತಿಯ ಚಿತ್ರ ತೆಗೆಯಲಾಗಿದೆ ೧ ಆಣೆಯ ತಿಕೀಟಿನ ಮೇಲೆ ಬೋಧಿಸತ್ವ ಲೋಕೇಶ್ವರನ ಚಿತ್ರ ಹಾಕಲಾಗಿದೆ ೧॥ ಆಣೆಗಳ ತಿಕೀಟಿನ ಮೇಲೆ ಕೋಣಾರಕದ ಸೂರ್ಯಮಂದಿರದೊಳಗಿನ ಕುದುರೆಯ ಚಿತ್ರವುಂಟು. ೨ ಆಣೆಗಳ ತಿಕೀಟಿನ ಮೇಲೆ ಕುಣಿಯುವ ನಟೇಶ್ವರನ ಚಿತ್ರವಿದೆ. ೨॥ ಆಣೆಗಳ ತಿಕೀಟಿನ ಮೇಲೆ ಸಾಂಚಿಯೊಳಗಿನ ಸ್ತೂಪದ ಪೂರ್ವದ್ವಾರದ ಚಿತ್ರವುಂಟು ೩॥ ಆಣೆಗಳ ಸ್ಟಾಂಪುಗಳ ಮೇಲೆ ಬುದ್ಧಗಯೆಯ ಗುಡಿಯ ನೋಟವಿದೆ ೪ ಆಣೆಗಳ ಸ್ಟಾಂಪುಗಳ ಮೇಲೆ ಒಡಿಸಾ ಪ್ರಾಂತದೊಳಗಿನ ಸುಪ್ರಸಿದ್ಧ ಭುವನೇಶ್ವರ ದೇವಾಲಯದ ಆಕೃತಿಯುಂಟು. ೬ ಆಣೆಗಳ ತಿಕೀಟುಗಳ ಮೇಲೆ ವಿಜಾಪುರದ ಗೋಲಗುಮ್ಮಟವಿದೆ. ೮ ಆಣೆಗಳ ಸ್ಟಾಂಪುಗಳಲ್ಲೂ ಒಂದು ಇತಿಹಾಸ-ಪ್ರಸಿದ್ಧ ಮಂದಿರದ ಚಿತ್ರವುಂಟು ೧೨ ಆಣೆಗಳ ತಿಕೀಟುಗಳಲ್ಲಿ ಅಮೃತಸರದೊಳಗಿನ ಶೀಖರ ಸುವರ್ಣ-ಮಂದಿರದ ಛಾಯಾ ಚಿತ್ರವಿದೆ. ೧ ರೂ.ಯ ತಿಕೀಟಿನ ಮೇಲೆ ಚಿತೋಡದೊಳಗಿನ ವಿಜಯ-ಸ್ತಂಭ ಚಿತ್ರಿಸಲ್ಪಟ್ಟಿದೆ ರೂ. ಗಳ ತಿಕೀಟುಗಳಲ್ಲಿ ದಿಲ್ಲಿಯ ಸುಪ್ರಸಿದ್ಧ ಕುತುಬ ಕೋಟಿ ನೋಡಸಿಗುತ್ತದೆ. ೫ ರೂ.ಗಳ ತಿಕೀಟುಗಳಲ್ಲಿ "ಜಗತ್ತಿನ ೭ ಅದ್ಭುತಗಳಲ್ಲಿ ಇದೊಂದು" ಎಂದು ವಿಖ್ಯಾತಿಗೊಂಡ ಆಗ್ರಾದೊಳಗಿನ ತಾಜಮಹಾಲದ ದೃಶ್ಯವಿದೆ. ಮತ್ತು ೧೦ ರೂ.ಗಳ ತಿಕೀಟುಗಳಲ್ಲಿ ೨೩೮ ಅಡಿ ಎತ್ತರವಿರುವ ದಿಲ್ಲಿಯ ಕುತುಬ ಮಿನಾರದ ಚಿತ್ರವುಂಟು.

— ಬಂಗಾಲದ ಪ್ರಮುಖ ಕೊಂಗ್ರೆಸ ಮುಖಂಡರಾ ಸದ್ಯದ ಪಶ್ಚಿಮ ಬಂಗಾಲದ ಮಂತ್ರಿಮಂಡಳದಲ್ಲಿ ಗೃಹಮಂತ್ರಿಗಳೂ ಆಗಿದ್ದ ಬಾಬು ಕಿರಣಶಂಕರ ರಾಯರು ಅಜೆಯ ರವಿವಾರ ತೀರಿಕೊಂಡರು ... ಹಿಂದೀ ರಾಯಭಾರಿಗಳಾಗಿದ್ದ ... ಸಯ್ಯದ ಹುಸೇನರ ಹೃದಯಕ್ರಿಯೆ ನಿಂತು ... ತೀರಿಕೊಂಡ ವರ್ತಮಾನ ಬಂದಿದೆ. ಸಯ್ಯದ ಹುಸೇನರು ದಿವಂಗತ ಹೊರ್ನಿಮನ್ನರ ಕೈಕೆಳಗೆ ... "ಬಾಂಬೆ ಕ್ರಾನಿಕಲ" ಪತ್ರಿಕೆಯ ಉಪಸಂಪಾದಕರಿದ್ದರು ಮುಂದೆ ಪ್ರಯಾಗದಲ್ಲಿ ಹೊರಟ " ಇಂಡಿಪೆಂಡೆಂಟ " ಪತ್ರದ ಪ್ರಥಮ ಸಂಪಾದಕರಾದರು. ೧೯೨೦ರಲ್ಲಿ ಅವರು ಖಿಲಾಫತ್ ಶಿಷ್ಟಮಂಡಳದೊಂದಿಗೆ ವಿಲಾಯತಿಗೆ ಹೋಗಿದ್ದರು ಅಲ್ಲಿಂದ ಅವರು ಅಮೇರಿಕೆಗೆ ಹೋದವರು ಅಲ್ಲೇ ೨೫ ವರ್ಷಗಳ ಕಾಲವುಳಿದು ಆ ದೇಶದಲ್ಲಿ ಭಾರತ—ಸ್ವಾತಂತ್ರ್ಯದ ಪ್ರಚಾರ ಮಾಡಿದ್ದರು. ಮೃತಾತ್ಮರಿಗೆ ದೇವರು ಸದ್ಗತಿಯನ್ನೀಯಲಿ !

— ಸರಕಾರದ ನಿಯಂತ್ರಣಾಜ್ಞೆಗೆ ಅನುಸಾರವಾಗಿ ಕಳೆದ ತಾ ೧೦—೧೧—೪೮ನೇಗೆ ಹಿಂದೀ ಗಿರಣಿಗಳ ಬಟ್ಟೆಯ ವ್ಯಾಪಾರವನ್ನು ನಿಲ್ಲಿಸಿ, ಮುಂಬಯಿ ಪ್ರಾಂತದೊಳಗಿನ ೧೫೬೭೭ ಜವಳಿ ವ್ಯಾಪಾರಿಗಳು ತಮ್ಮ ಕಡೆಗೆ ಅಂದಾಜು ೫,೯೧,೩೨,೬೧೩ ಗಜ (ವಾರ) ಗಿರಣಿ ಬಟ್ಟೆಯ ಶಿಲ್ಕುಂಟೆಂದು ಸರಕಾರಕ್ಕೆ ತಿಳಿಸಿದ್ದರು ವ್ಯಾಪಾರಸ್ಥರು ಒಪ್ಪಿಸಿದ ಶಿಲ್ಕು ಸಂಗ್ರಹದ ಮಾಹಿತಿ ಪತ್ರಿಕೆಗಳನ್ನೆಲ್ಲ ಪರಿಶೀಲಿಸಿ, ಶಿಲ್ಕು ಬಟ್ಟೆಯ ವರ್ಗವಾರಿ ಮಾಡುವದರಲ್ಲಿ ಹಲವು ದಿನಗಳು ಕಳೆದವೆಂದೂ, ಈಗ ಆ ಶಿಲ್ಕಿನ ವ್ಯವಸ್ಥೆಯ ಆಲೋಚನೆ ಸರಕಾರದಲ್ಲಿ ನಡೆದಿದೆಯೆಂದೂ ಪ್ರಕಟವಾಗಿದೆ. ಈ ಸಂಗ್ರಹದಲ್ಲಿರುವ ಶೀಟು, ಟಿಪಿಸ್ಸು ವಗೈರೆ ೧೩ ಬಗೆಯ ಬಟ್ಟೆಯನ್ನ ವ್ಯಾಪಾರಿಗಳು ಯಾವ ನಿರ್ಬಂಧವಿಲ್ಲದೆ ಮಾರಾಟ ಮಾಡಬಹುದೆಂದು ಸರಕಾರವು ಈಗಾಗಲೇ ಅಪ್ಪಣೆ ಮಾಡಿದೆ ಈಗ ಸರಕಾರವು ಇನ್ನೊಂದು ಸವಲತ್ತು ಕೊಟ್ಟು, ಕೈಯಿಂದ ಅಚ್ಚುಹಾಕಿದ ಗಿರಣಿ ಬಟ್ಟೆಯನ್ನು ಸಂಸ್ಕರಣಕಾರರು, ಪ್ರಾಂತಿಕ ಬಟ್ಟೆ ನಿಯಂತ್ರಣಾಧಿಕಾರಿಗಳ ಇಲ್ಲವೆ ತಮ್ಮ ಜಿಲ್ಲೆಯ ಜಿಲ್ಹಾಧಿಪರ ಅಪ್ಪಣೆ ಚೀಟಿಗಳನ್ನು ಪಡಕೊಂಡು, ಪರ-ಪ್ರಾಂತಗಳಿಗೆ ಕಳಿಸಬಹುದಾಗಿದೆಯೆಂದು ಪ್ರಕಟಿಸಿದೆ. ಇಂಥ ಅಪ್ಪಣೆ ಚೀಟಿಗಳು ಕೂಡಲೇ ಸಿಗುವವು ಅಚ್ಚುಹಾಕಿದ ಗಿರಣಿ ಬಟ್ಟೆಯಾದರೂ ಸೀದಾ-ಬಟ್ಟೆಯಲ್ಲಿ ಬರುತ್ತಿರುವದರಿಂದ ಅದನ್ನು ಈ ಪ್ರಾಂತದಲ್ಲಿ ಮಾರಬರುವಂತಿಲ್ಲ ಇನ್ನುಳಿದ ಬಟ್ಟೆಗಳೊಳಗಿನ ಧೋತರಗಳಿಗೂ ಸೀರೆ (ಸಾಡಿ)ಗಳಿಗೂ ಬೇಗನೇ ಬೆಲೆಯ ಮುದ್ರೆಗಳನ್ನು ಹಾಕಿಸಿ, ಅವನ್ನು ಬಟ್ಟೆಯ ಸೀದಾ-ಅಂಗಡಿಗಳಿಗೆ ಕೊಡಿಸುವ ಯೋಜನೆಯಾಗಿದೆ ಬಾಕಿ ಉಳಿಯುವ ಶಿಲ್ಕಿನ ವ್ಯವಸ್ಥೆ ಹಿಂದಿನಿಂದ ಮಾಡಲಾಗುವದಂತೆ

— ಅರಳೆ ನೂಲಿನ ವ್ಯಾಪಾರಸ್ಥರ ಪರವಾನಿಗೆಗಳ ಅವಧಿ ಬರುವ ಮಾರ್ಚ ತಾ. ೩೧ಕ್ಕೆ ಮುಗಿಯುತ್ತದೆಂದೂ ಮುಂದೆ ವ್ಯಾಪಾರ ಮಾಡಬಯಸುವವರು ೫ ರೂ. ಫೀ (ದಲಾಲರು ರೂ ೧೦) ಕಳಿಸಿ ಮತ್ತು ಪ್ರಾಂ॥ ಬಟ್ಟೆ ನಿಯಂತ್ರಣಾಧಿಕಾರಿಗಳಿಗೆ ೩ನೇ ಮಾರ್ಚಿಯಲ್ಲಿ ಅರ್ಜಿ ಮಾಡಿ ಪರವಾನಿಗೆಗಳ ಪುನರುಜ್ಜೀವನ ಮಾಡಿಸಿಕೊಳ್ಳಬೇಕೆಂದೂ ಸರಕಾರವು ಜಾಹೀರಪಡಿಸಿದೆ

— ಈ ವಾರದ ಅಂತ್ಯದಲ್ಲಿ ೩೨ನೇ ಕನ್ನಡ ಸಾಹಿತ್ಯ ಸಮ್ಮೇಲನವು ನಿಜಾಮ-ಹೈದರಾಬಾದದೊಳಗಿನ ಕಲಬುರ್ಗಿ ಪಟ್ಟಣದಲ್ಲಿ, ಶ್ರೀ॥ ಚನ್ನಪ್ಪಾ ಉತ್ತಂಗಿಯವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಇದೇ ಕಾಲಕ್ಕೆ (ಶನಿ-ರವಿವಾರ) ೧೨ನೇ ಕರ್ನಾಟಕ ಏಕೀಕರಣ ಪರಿಷತ್ತೂ ಜರಗುವದು.

— ಕೊಲ್ಹಾಪುರ ಸಂಸ್ಥಾನವನ್ನು ಮುಂಬಯಿ ಪ್ರಾಂತದಲ್ಲಿ ವಿಲೀನಗೊಳಿಸಿಕೊಳ್ಳುವ ಸಮಾರಂಭವು ನಾಳೆ ಮಂಗಳವಾರ ನಡೆಯುವದು ಸಂಸ್ಥಾನದಲ್ಲೆಲ್ಲ ನಾಳೆಯ ದಿನ ಸಾರ್ವಜನಿಕ ಬಿಡುವು ಕೊಡಲಾಗಿದೆ ಮುಂಬಯಿಯ ಮುಖ್ಯ ಮಂತ್ರಿಗಳು ಈ ಸಮಾರಂಭಕ್ಕೆ ಬರುವರೆಂದೂ ತಿಳಿಯುತ್ತದೆ ಈ ವಿಲಯದಲ್ಲಿ ಕೊಲ್ಹಾಪುರದ ಹಾಯಕೋರ್ಟು ಕೂಡ ವಿಲಯಗೊಳ್ಳುವದರಿಂದ ಅದರ ಮುಂದಿರುವ ಪ್ರಕರಣಗಳೆಲ್ಲ ಮುಂಬಯಿ ಹಾಯಕೋರ್ಟಿಗೆ ವರ್ಗಾಯಿಸಲ್ಪಡುವವು

— ಭಾಷಾವಾರ ಪ್ರಾಂತರಚನೆಯ ಸಮಸ್ಯೆಯ ಪುನರ್ವಿಮರ್ಶೆ ಮಾಡಲು ಜಯಪುರ ರಾಷ್ಟ್ರೀಯ ಸಭೆಯಿಂದ ನೇಮಕವಾದ ಜವಾಹರ-ಪಟ್ಟಾಭಿ ವಲ್ಲಭಭಾಯಿ ತ್ರಿಮೂರ್ತಿಗಳು ಬರುವ ಮಾರ್ಚ ತಿಂಗಳ ಕೊನೆಗೆ ತಮ್ಮ ವರದಿಯನ್ನು ಅ॥ ಭಾ॥ ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ಒಪ್ಪಿಸುವರೆಂದು ರಾಷ್ಟ್ರಪತಿ ಪಟ್ಟಾಭಿ ಸೀತಾರಾಮಯ್ಯನವರು ನಾಗಪುರದಲ್ಲಿ ಜಾಹೀರ ಮಾಡಿದ್ದಾರೆ

ಬೇಕಾಗಿದ್ದಾರೆ !

ನಮ್ಮ ಸಂಸ್ಥೆಯಲ್ಲಿ ... ಅನುಭವಿಕ ... ನೇಮಿಸಿಕೊಳ್ಳುವದುಂಟು ... ತಾರೀಖು ೧೦—೩—೧೯೪೯ರ ... ಅನುಭವದ ... ಅರ್ಜಿ ಕಳಿಸತಕ್ಕದ್ದು

ಎಮ್. ಎಸ್. ...,

ತಾ. ೨೬—೨—೪೯] ... ಎಸೋಸಿಯೇಶನ್ ಲಿ., ...

ಕಾರವಾರ ಜಿಲ್ಹೆಯ

ಒಕ್ಕಲತನ, ದನಕರು ಮತ್ತು ಔದ್ಯೋಗಿಕ

ಪ್ರದರ್ಶನ

ಈ ಜಿಲ್ಹೆಯಲ್ಲಿ ಮೊದಲನೆಯದಾದ

ಈ ಪ್ರದರ್ಶನವು ದೊಡ್ಡರೀತಿಯಿಂದ ಜರುಗತಕ್ಕದ್ದಿದ್ದು, ಚಿನ್ನದ, ಬೆಳ್ಳಿಯ ಹಾಗೂ ಪ್ರಶಸ್ತಿ-ಪತ್ರಗಳ ರೂಪದಲ್ಲಿ ಇನಾಮುಗಳನ್ನು ಇಡಲಾಗಿದೆ. ಒಕ್ಕಲಿಗರೂ, ದನಗಳ ಮಾಲಿಕರೂ ಈಕಡೆಗೆ ಲಕ್ಷ್ಯಕೊಡಬೇಕಾಗಿ ವಿನಂತಿ.

ಪ್ರದರ್ಶನವು ತಾ ೫-೩-೧೯೪೯ (5-3-49)ನೇ ದಿವಸ ಜರುಗಲಿದೆ

ಕಾರ್ಯದರ್ಶಿ,

ಪ್ರದರ್ಶನ ಸಮಿತಿ, ಶಿರ್ಸಿ

— ಪಾಕಿಸ್ತಾನ ಸರಕಾರದ ಅದೇಶದಂತೆ, [illegible] ವರ್ಷದ ಪ್ರಾರಂಭಕ್ಕೆ, ಸಿಂಧ ಪ್ರಾಂತದ [illegible] ಪ್ರಯತ್ನದಿಂದ ಬಹಿಷ್ಕಾರ ಮಾಡಲ್ಪಟ್ಟ [illegible] ಹವ್ಯದ ಅಯುಬ ಖ ಖೋ ಅವರಿಗೆ, ಅವರ ಮೇಲಿ [illegible] ಅರೋಪಗಳ ವಿಚಾರಣೆಗಾಗಿ ನೇಮಿಸಲ್ಪಟ್ಟ ವಿಶೇ[ಷ] ನ್ಯಾಯಾಧೀಶರು ಕಳೆದ ಗುರುವಾರ ತಮ್ಮ ತೀರ್ಪು[ನ್ನು] [illegible] (೧) ವಿಶ್ವಾಸಭಂಗ ಮಾಡಿದ್ದು ಮತ್ತು (೨) [illegible] [illegible] ಈ ವಿಷಯದ ಬಗ್ಗೆ ೨ ವರ್ಷ ಕಾರಾವಾಸದ ಶಿಕ್ಷೆಯನ್ನೂ [illegible] ರೂಪಾಯಿಗಳ ದಂಡವನ್ನೂ ವಿಧಿಸಿದ್ದಾರೆ [illegible] ಇವರು ಈ ಶಿಕ್ಷೆಯ ವಿರುದ್ಧ ಅಪೀಲು [ಮಾ]ಡುತ್ತೇವೆಂದು ಹೇಳಿ ಈಗ ಜಾಮೀನಿನ ಮೇಲೆ [ತ]ಮ್ಮ ಬಿಡುಗಡೆ ಮಾಡಿಕೊಂಡಿದ್ದಾರೆ

— ಹಿಂದ ಸರಕಾರವು ಪಾಕಿಸ್ತಾನದ ಪಾಲಿನ ಪೂರ್ಣ ಮದ್ದುಗುಂಡುಗಳನ್ನೂ ಶಸ್ತ್ರಾಸ್ತ್ರಗಳನ್ನೂ ಇನ್ನೂ ಕೊಟ್ಟಿಲ್ಲೆಂದು ಪಾಕಿಸ್ತಾನ ಪ್ರಧಾನ ಮಂತ್ರಿಗಳಾದ ಲಿಯಾಕತ ಅಲಿಖಾನರು ಮೊನ್ನೆಯೇ ದೂರಿಕೊಂಡಿದ್ದರು ಈ ಬಗ್ಗೆ ಹಿಂದ ಸರಕಾರವು ಖುಲಾಸೆ ಮಾಡಿ, ಪಾಕಿಸ್ತಾನಕ್ಕೆ ಸಲ್ಲತಕ್ಕ ಮದ್ದುಗುಂಡುಗಳಲ್ಲಿ ಅರ್ಧದಷ್ಟು ಪಾಲು ಕಳೆದ ವರ್ಷವೇ ಸಂದಿದೆಂದೂ, ಅದರ ಆ ಬಗ್ಗೆ ಕೊಡಬೇಕಾದ ೧೬ ಕೋಟಿ ರೂ ಇನ್ನೂ ಕೊಟ್ಟಿಲ್ಲೆಂದೂ, ಪಾಕಿಸ್ತಾನದ ಕಡೆಗಿರುವ ಹಿಂದುಸ್ಥಾನದ ಪಾಲಿನ ಕೆಲವೊಂದು ಸರಕುಗಳನ್ನು ಪಾಕಿಸ್ತಾನವು ಇನ್ನೂ ಬಿಟ್ಟುಕೊಟ್ಟಿಲ್ಲೆಂದೂ ಜಾಹೀರಪಡಿಸಿದೆ. ಪಾಕಿಸ್ತಾನಿಗಳ ಪ್ರಾಮಾಣಿಕತನದ ಮಾದರಿ ನೋಡಿರಿ!

— ಹಿಂದು ಕಾಯಿದೆಯ ಪುನರ್ಘಟನೆಯ ಮಸೂದೆಯ ಚರ್ಚೆ ಕಳೆದ ವಾರ ಕೇಂದ್ರ ಕಾನೂನ ಮಂಡ[ಳ]ದಲ್ಲಿ ನಡೆಯಿತು. ಈ ಮಸೂದೆಯ ವಿಚಾರವನ್ನು [illegible] ಚುನಾವಣೆಗಳಾಗಿ ಹೊಸ ಕಾನೂನ ಮಂಡಳ [illegible] ವರೆಗೆ ಮುಂದೂಡಿಕೊಳ್ಳಬೇಕೆಂದು [illegible] ವಿಫಲವಾದವು ಮಸೂದೆಯ ಚರ್ಚೆಯನ್ನು ಶಕ್ಯವಾಗುವಷ್ಟು ಸಧ್ಯದ ಅಧಿವೇಶನದಲ್ಲಿ ನಡಿಸಿ, ಅದರ ಪೂರ್ಣತೆಯ ಬಗ್ಗೆ ಅವಶ್ಯ[ಕ]ಂಡರೆ, ಬರುವ [illegible] ನೂತನ ಮಂಡಳದ ವಿಶೇಷ ಅಧಿವೇಶನ ಕೂಡಿಸಲಾಗುವ[ದ]ಂತೆ ಮೂಲ ಮಸೂದೆಯಲ್ಲಿ ಪರಿಶೀಲಕ ಸಮಿತಿಯು ಕೆಲವೊಂದು ತಿದ್ದುಪಡಿಗಳನ್ನು ಮಾಡಿದೆ (೧) ಮೂಲ ಮಸೂದೆಯಲ್ಲಿ ಮಗಳಿಗೆ ತಂದೆಯ ಆಸ್ತಿಯಲ್ಲಿ ಮಗನ ಅರ್ಧದಷ್ಟು ಪಾಲು ಕೊಡುವ [illegible] ಪರಿಶೀಲಕ ಸಮಿತಿಯು ಮಗನಷ್ಟೇ ಪಾಲು ಮಗಳಿಗೆ ಸಿಗಬೇಕೆಂದು ನಿರ್ಣಯಿಸಿದೆ (೨) ದತ್ತ ಸ್ವೀಕಾರದ ಹಿಂದಿನ [illegible] [illegible] ದತ್ತಕ ಸ್ವೀಕಾರದ ದಿನ [illegible] ದತ್ತಕನು ಅಧಿಕಾರಿಯಾಗಬೇಕೆಂದು ಶಿಫಾರಸು ಮಾಡಿದ (೩) ಆಳಿಯ ಸಂತಾನ [illegible] [illegible] ಪದ್ಧತಿಗಳನ್ನು ಈ ಮಸೂದೆಯು ರದ್ದುಗೊಳಿಸಿ ಇಡೀ ಭಾರತದಲ್ಲಿ ಒಂದೇ ಬಗೆಯ ಹಿಂದು [ಕಾಯಿದೆ]ಯನ್ನು ರೂಢಗೊಳಿಸಲು ಹವಣಿಸುತ್ತಿದೆ [illegible] ಮಹತ್ವದ ಸಂಗತಿಯೆಂದರೆ ಈ ಮಸೂದೆಯು ಮಿತಾಕ್ಷರಾ ಪದ್ಧತಿಯೊಳಗಿನ ಅವಿಭಕ್ತ ಕುಟುಂಬದ (co-parcenery) ಕಲ್ಪನೆಯನ್ನು ಸಮೂಲ ರದ್ದುಗೊಳಿಸಿ, ದಾಯಭಾಗದ [illegible] ಪದ್ಧತಿಯನ್ನು ಎತ್ತಿಹಿಡಿಯುತ್ತಿದೆ. ಆದರೂ ಈ ಮಸೂದೆ [illegible] ಹೇಳುವಷ್ಟು [illegible] [illegible] ಡಾ|| ಅಂಬೇಡಕರರು ಹೇಳುತ್ತಾರೆ

— ಉತ್ತರ ಕಾನಡಾ ಜಿಲ್ಲೆಯಲ್ಲಿರುವ [illegible] ಮಂದಿರ ಮಸೀದೆಗಳಿಗೆ ಕೂಡಿ ಸರಕಾರದಿಂದ [illegible] [illegible] ಸರಕಾರದಿಂದ ತಸ್ತೀಕು ಸಿಗುತ್ತಿವೆ ಈ ಜಿಲ್ಲೆಯಲ್ಲಿ ಯಾವದೇ ಮಂದಿರ ಮಸೀದೆಗಳಿಗೆ ಬಿಟ್ಟ ಇನಾಮು ಭೂಮಿಯಿರುವದಿಲ್ಲ ನಾಸಿಕ ಜಿಲ್ಲೆಯೊಳಗಿನ [illegible] ಗುಡಿ-ಮಸೀದೆಗಳಿಗೆ ಕೂಡಿ ರೂ [illegible] ತಸ್ತೀಕು ದೊರೆಯುತ್ತಿದೆ, [illegible] ಎಕರೆ ಇನಾಮು ಭೂಮಿಯುಂಟು ಪುಣೆ ಜಿಲ್ಲೆಯಲ್ಲಿ [illegible] ಮಂದಿರ-ಮಸೀದೆಗಳಿಗೆ ರೂ, [illegible] ೧೦-೦ ತಸ್ತೀಕು ಕೊಡುತ್ತಾರೆ, [illegible] ಎಕರೆ ಇನಾಮು ಭೂಮಿಯುಂಟು. ಬೆಳಗಾಂವ ಮತ್ತು ಪಶ್ಚಿಮ ಖಾನದೇಶ ಜಿಲ್ಲೆಗಳಲ್ಲಿ ಮಾತ್ರ ಯಾವದೇ ದೇವಸ್ಥಾನಕ್ಕೆ ತಸ್ತೀಕೂ ಸಿಗುವದಿಲ್ಲ, ಇನಾಮು ಭೂಮಿಯೂ ಇರುವದಿಲ್ಲ ಹರಿಜನರಿಗೆ ಪ್ರವೇಶ ಕೊಡುವದಿಲ್ಲೆಂಬ ಕಾರಣದಿಂದ ಇನ್ನೂ ವರೆಗೆ ಯಾವದೇ ದೇವಸ್ಥಾನದ ತಸ್ತೀಕು ನಿಲ್ಲಿಸಿರುವದಿಲ್ಲ ಹರಿಜನರಿಗೆ ಪ್ರವೇಶ ಕೊಡಲೊಲ್ಲದ ದೇವಸ್ಥಾನಗಳ ಚೌಕಶಿ ಮಾಡಿ, ಅವುಗಳಿಗೆ ತಸ್ತೀಕು ನಿಲ್ಲಿಸಬಹುದೋ ಹೇಗೆಂಬುದರ ವಿಚಾರವನ್ನು ಮುಂಬಯಿ ಸರಕಾರವು ಮಾಡಲಿದೆ

ಸ್ಥಾನಿಕ ವೃತ್ತಾಂತ

ಕುಮಟಾ— [illegible]

[illegible] ನ್ಯಾಯಾಧೀಶ ರಾ|| ಶ್ರೀ [illegible] ಅವರು ಕಳೆದ [illegible] ಬಂದು, [illegible] [illegible] [illegible] [illegible] [illegible] [illegible] [illegible] [illegible]

[illegible] [illegible] [illegible] [illegible] ಬಂದು, [illegible] [illegible] [illegible]

[illegible] [illegible] [illegible] [illegible] [illegible] [illegible]

[illegible] [illegible] ಬರುವ [illegible]

ಮಂದಿರಲು [illegible] [illegible] [illegible] [illegible] [illegible] [illegible] [illegible]!

ಹೊನ್ನಾವರ— (ಈ [illegible]) [illegible] [illegible] [illegible] [illegible] [illegible] [illegible] [illegible] [illegible] [illegible]?

[illegible]!

THE BANK OF RURAL INDIA LTD.

(Incorporated in British India, Liability of Members limited)

HEAD OFFICE — "Satyabhama Bhavan", KARWAR. N. K

Offices at — KARWAR, KUMTA, SIRSI, HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital . Rs. 10,00 000;
Subscribed Capital .. Rs 5 00 000;
Paid-up Capital & Reserves . Rs. 5,08,502-8-0

Rates of Interest on Deposits:

Current a/c @ 1% p a. *Savings Bank a/c @ 2½%*

Fixed Deposits for 3 months @ 3% per annum
" " for 6 months @ 3½% "
" " for 12 months or more @ 4% "

All kinds of modern Banking business transacted

Karwar, 14-2-1948

P X GRACIOUS,
MANAGING DIRECTOR

ಮಾರ್ಗದ ಮೇಲೆ ಅಲ್ಲಲ್ಲಿ ಬಿದ್ದ ರಾಶಿಗಳುಂಟು! ಅದ ರಿಂದ ಜಕ್ಕಡಿಗಳಿಗೆ ಓಡಾಡುವದಕ್ಕೆ ಅತ್ಯಂತ ಕಷ್ಟವಾಗು ತ್ತದೆ! ಕೆಲವು ಕಡೆ ಕಟ್ಟದ ಗುಪ್ಪೆಗಳ ಮಾಡ್ಡು ಕುಸಿದು ಬಿದ್ದಿವೆ! ಕೆಲವು ಕಡೆ ಅಂಚಿನಿಂದ ಮಾರ್ಗಗಳ ಕಾಗದಲು ಕ್ಕತ್ತೋ, ಇನ್ನೊಂದು ಗಳಿಗೆಯಲ್ಲಿ ಬೀಳುತ್ತವೋ ಎಂಬ ಸ್ಥಿತಿಯಲ್ಲಿದ್ದು ದಾರಿಹೋಕರನ್ನು ಅಂಜಿಸುತ್ತವೆ! ಇಂಜಿ ನೀರ ಇಲಾಖೆಯು ಪರಿಸ್ಥಿತಿಗೆ ಈ ಸ್ಥಿತಿ ಇನ್ನೂ ಗೊತ್ತಾ ಗಲಿಲ್ಲವೇನು?

ಶಿರಾಳಿ— ೪-೫ ವರ್ಷ ಇಲ್ಲಿದ್ದ ಬೇರಾಯ ದ್ರಾಕ್ಷ್ ತ್ತಿಯ ಕೆಲವನ್ನು ಅಧಿಕಾರಿಗಳು ಕಳೆದ ವರ್ಷಗಾಲದ ಲ್ಲಿ ಮಾರಿಕೊಟ್ಟದಕ್ಕೆ ಸ್ಥಳಾಂತರಿಸಿದ್ದಾರೆ. ಕೆಲವು ಇಲ್ಲ ದ್ದಾಗ ಬಹಳ ಜನರು ಅದರ ಪ್ರಯೋಜನ ಪಡೆಯುತ್ತಿ ದ್ದರು. ಮಾರಿಕೊಟ್ಟರವರು ಅದರ ಪ್ರಯೋಜನ ಪಡೆದದ್ದು ಕೇಳಲಿಲ್ಲ. ಕೆಲವ ಸ್ಥಳಾಂತರ ಮಾಡಿ ಸರಕಾರವು ಸಾಧಿಸಿದ ಲಾಭವೇನೆಂಬುದು ಸರಕಾರಕ್ಕೇ ಗೊತ್ತು.

ಇಡಿ ಎಲ್ಲೆಯ ಕಲ್ಲು ಸಂಕ ಬಹಳವಾಗಿದೆ. ಸಂಬಂ ಧಪಟ್ಟವರು ಅದನ್ನು ತೆಗೆಸಬೇಕು!

ಯಲ್ಲಾಪುರ—(ತಾ ೭-೨-೪೯) ಇಲ್ಲಿ ಇನ್ನೂ ಜನರಿಗೆ ಸೀಮೆ-ಅಂಗಡಿ ತೆರೆಯಲ್ಪಟ್ಟಿಲ್ಲ. ಹಳೆಯ ಜನ ರು ಬಾಜಾರಕ್ಕೆ ಸಿಗುವದಿಲ್ಲ! ಅದನ್ನು ಕೊಂಡುಕೊಳ್ಳ ಸರ ಕಾರವು ಪ್ರತಿಬಂಧ ಹಾಕಿದೆ. ಜನರು ಬತ್ತಲೆ ತಿರುಗುವ ಪ್ರಸಂಗ ಬರುತ್ತದೋ ಏನೋ!

ಇಲ್ಲಿಯ ಮುಸ್ಲೀಂ ಗಲ್ಲಿಯವರು ಬೇಡಿದ ಮುಸ್ಲಿಂ ದೂರ ಗಿಸಿದ ಬಾವಿಯನ್ನು ಹಿಂದಿನ ಜಿಲ್ಲಾಧಿಕಾರಿಗಳಾದ ರಾ|| ರಟಿ ಲೋ ಇವರು ಮುಸ್ಲೀಂಗಲ್ಲಿಯಿಂದ ದೂರದಲ್ಲಿರುವ ಇಗಜೆ ಯ ಆವಾರಕ್ಕೆ ಸ್ಥಳಾಂತರಿಸಿದ ಕುತೂಹಲದ ಕಥೆ "ವೃತ್ತ" ದೊಳಗೆ ಈ ಹಿಂದೆ ಪ್ರಕಟವಾಗಿದೆ. ಈ ಮಗಾಗಿ ಸಂಗ್ರಹವು ದಯಪಾಲಿಸಿದ ಬಾವಿಯನ್ನು ಈ ಸಂ ಸ್ಥಾಗೆ ಇಷ್ಟವಿಲ್ಲದ ಸ್ಥಳಕ್ಕೆ ಒಯ್ದು ಬಗ್ಗೆ ಜನರು ಜಿಲ್ಲಾಧಿಕಾರ ಕಡೆ ಒಯ್ದು ದೂರು ನಿಷ್ಫಲವಾಯಿತು. ಎಸೆಂಬ್ಲಿಯ ಸದಸ್ಯ ರಾ|| ಪ್ರಭು ಅವರು ಮಾಡಿದ ಪ್ರಯತ್ನವೂ ನಿಷ್ಫಲವಾಯಿತು. ಜಿಲ್ಲಾ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳು ಬಂದು ಹೌಳಿ ಮಾಡಿ ಕಳಿಸಿದ ವರದಿಯೂ ಕಸದ ಬುಟ್ಟಿಗೆ ಹೋ ಯಿತು; ಬಾವಿ ತೋಡುವ ಅಧಿಕಾರಿಗಳು ಇಗರ್ಜಿಯ ದಫನ ಭೂಮಿಯಲ್ಲೇ ಬಾವಿ ತೋಡಹತ್ತಿದರು! ಜಿಲ್ಲಾಧಿಕಾರಿ ಇಲ್ಲಿ ಬಂದಾಗ ಅವರ ಕಡೆ ಜನರು ಪ್ರತ್ಯಕ್ಷ ದೂರಿತ್ತು ದ್ದಾಗ "ಇಗರ್ಜಿಯ ಕಡೆ ತೋಡಿಸಲ್ಪಡುವ ಬಾವಿಯಿಂ ದ ನಿಮಗೆ ಅನಾನುಕೂಲವಾಗುತ್ತಿದ್ದರೆ, ನಿಮ್ಮ ಕೇರಿಯಲ್ಲಿ ಇನ್ನೊಂದು ಬಾವಿಯನ್ನು ತೆಗೆಸುವಾ" ಎಂದು ಜಿಲ್ಲಾಧಿಕಾರಿ ಹಾರಿಕೆಯ ಉತ್ತರ ಕೊಟ್ಟರು! ಮೊನ್ನೆ ಮುಖ್ಯ ಪ್ರಧಾನರು ಇಲ್ಲಿ ಬಂದಾಗ ಅವರ ಕಡೆ ಗೂ ಮುಸ್ಲೀಂಗಲ್ಲಿಯವರು ತಮ್ಮ ದೂರು ಒಯ್ದಿದ್ದರು. ಆಗ ಅವರು ಜನರ ಅಂಬೋಣವನ್ನು ಚೆನ್ನಾಗಿ ಕೇಳಿಕೊಂಡು, ಬಾವಿಯನ್ನು ಮುಸ್ಲೀಂಗಲ್ಲಿಯವರಿಗೆ ಅನುಕೂಲವಾದ ಸ್ಥಳದ ಲ್ಲೇ ತೋಡಿಸಬೇಕೆಂದು ನಿರ್ಣಯ ಕೊಟ್ಟು, ಹಾಜರ ಇದ್ದ ಜಿಲ್ಲಾಧಿಕಾರಿಗೂ ಅದರಂತೆ ಆಜ್ಞೆ ಮಾಡಿದ್ದರು. ಮುಖ್ಯ-ಪ್ರಧಾನರ ಈ ನಿರ್ಣಯದಿಂದಲಾದರೂ ಅಧಿಕಾರಿ ಗಳು ಸರಿಯಾಗಿ ನಡೆಯಬಹುದೆಂಬ ಆಶೆಯಾಗಿತ್ತು. ಆದರೆ ಆ ಆಶೆಯೂ ಈಗ ನಿರಾಶೆಯಾಗಿದೆ! ಬಾವಿಯ ಕೆಲಸ ಇನ್ನೂ ಇಗರ್ಜಿಯ ಸ್ಥಳದಲ್ಲೇ ನಡೆದಿದೆ!! ನಿನ್ನೆ ಪತ್ತೆ ಭಾಗದ ಶಾಸಕರಾದ ರಾ|| ವಿಜಾಪುರಿಯವರು ಇಲ್ಲಿ ಬಂದಿದ್ದರು. ಮುಸ್ಲೀಂಗಲ್ಲಿಯ ಜನರು ಅವರನ್ನು ಕಂಡು, ತಮ್ಮ ದೂರು ಅವರ ಮುಂದಿಟ್ಟರು. ಅವರಾದರೂ ಮುಖ್ಯ ಮಂತ್ರಿಗಳ ಆಜ್ಞೆಯಂತೆ ಯೋ ಕೆಲಸ ನಡೆಸಲು ಆಜ್ಞಾಪಿಸುವರೆಂಬ ಆಶೆಯು ನಿಟ್ಟುಸಿರಾಗಿದ್ದು, ಅದರ ರಕ್ಷಣೆ ದಿಗ್ ಹೋದಂತಾಯ್ತು

ವರು ಆ ಆಶೆಯನ್ನು ಮಣ್ಣುಗೂಡಿಸಿ ಬಿಟ್ಟಿದ್ದಾರೆ! ಇಷ್ಟು ದಿನ ನೀವು ಕೇಳಿಯ ನೀರು ಕುಡಿಯುತ್ತಿದ್ದಿರಲ್ಲವೇ? ಇಗರ್ಜಿಯ ಸ್ಥಳದಲ್ಲಿ ತೋಡಲ್ಪಡುವ ಬಾವಿ ನಿಮಗೆ ದೂರ ಆಗುತ್ತಿದ್ದರೆ ನೀವು ಹಿಂದಿನಂತೆ ಕೆರೆಯ ನೀರೇ ತಂದು ಕೊಳ್ಳಿರಿ" ಎಂದು ಅವರು ಉತ್ತರ ಕೊಟ್ಟಿ ದ್ದಾರೆ. ಬ್ಯಾಲಸೀಮೆಯಲ್ಲಿ ಎಷ್ಟೋ ಹಳ್ಳಿಗಳ ಜನರು ೪ ೫ ಮೈಲು ದೂರದಿಂದ ನೀರು ತರುತ್ತಿ ದ್ದು, ಇಲ್ಲಿ ಇಷ್ಟು ಸಮೀಪದ ಕೆರೆಯುಂಟೆಂದು ತಮಗೆ ತೋರುವುದಿಲ್ಲವೇ? ಹಾಗೆ ಮಾಡಿಯೂ ತಮ್ಮಂ ತೆ ಮಾಡುತ್ತಿದ್ದಿರೆಂದರೆ ಗಡಿಗೆ ಬಿಟ್ಟರು! ಇಷ್ಟು ಜನರಿಗೆ ಅನ್ಯಾಯವು ಮಾತ್ರ, ಅಧಿಕಾರಿಗಳ ಇಷ್ಟ ಕ್ಕೆ ಗತಿ ಹೀಗಾಗುವದು ಯುಕ್ತವೇನೋ ಎಂದು ವಿಚಾರ ವನ್ನು ಮುಂಬಯಿಯ ಮುಖ್ಯ ಮಂತ್ರಿಗಳೇ ಮಾಡಲಿ.

ಶಿರ್ಸಿ— (ತಾ ೨೬-೨-೪೯) (೧) ಕ್ರಿಶ್ಚಿಯ ನ್ ಕಮಿಟಿಯು ಕಡ್ಡಾಯವಾದ ಆ ಸಭೆ ( ) ಜಿಲ್ಲೆ ಯ ಆರೋಗ್ಯ ಸಂಬಂಧವಾದ ಸ್ಥಿತಿಗತಿಯನ್ನು ಪರಿಶೀಲಿಸುವದು. (೨) ಮುದ್ರಣ ಸ್ವಾತಂತ್ರ್ಯ ಕಾಯಿದೆಯಲ್ಲಿ ಬರುವ ತೊಂದರೆಗಳನ್ನು ಚರ್ಚಿಸುವದು. ಮುಂತಾದ ಕಾರ್ಯಗಳ ನಿರ್ವಹಣೆಗಾಗಿ ಜಿಲ್ಲಾ ಕಾಂಗ್ರೆಸ ಸಮಿತಿಯ ಅಧ್ಯಕ್ಷರು ತಾ ೯-೩-೪೯ನೇ ಆದಿತ್ಯವಾರ ಇಲ್ಲಿ ಯ ಸಮಿತಿಯ ಕಚೇರಿಯಲ್ಲಿ, ಸಮಿತಿಯ ಸಾಧಾರಣ ಸಭೆಯನ್ನು ಕರೆದಿದ್ದಾರೆ.

ಇಲ್ಲಿ ತಾ ೪-೩-೪೯ನೇಗೆ ಪ್ರಾರಂಭವಾಗುವ ಬೇಸಿ ಗೆ ಪ್ರದರ್ಶನದ ಕಾಲಕ್ಕೆ ರಾ|| ಕಮಿಶನರ ಸಾಹೇಬರು ಕೋ ರೀಶಿಪ್ ನ ಅಂಗಡಿಯಲ್ಲಿ ಬಹಳ ಇಚ್ಛೆಯುಳ್ಳ ಕೈಗಾರಿಕೆ ಪದಾರ್ಥಗಳ ಬಗ್ಗೆ ಪ್ರಚಾರ ಮಾಡುತ್ತಾರೆ ಎಂದು ತಿಳಿದು ಬಂದಿದೆ. ಪ್ರತ್ಯಕ್ಷ ಪ್ರಯೋಗ ಮಾಡಿ ತೋರಿಸ ಲಾಗುವದೆಂತಲೂ, ಸರಕಾರದಿಂದ ಬರುವ ಜನ ರಿಗೆ ಇದೊಂದು ಚಿತ್ತಾಕರ್ಷಕವಾಗುವದೆಂತಲೂ ಕೋರ್ಟಿನ ಸ್ಥಾನಿಕ ಪ್ರತಿನಿಧಿಗಳು ತಿಳಿಸುತ್ತಾರೆ.

ಮುಂಬಯಿ ಮಂತ್ರಿಗಳು ಮಾತಿನ ಮಲ್ಲರು

(೧ನೇ ಪುಟದಿಂದ ಮುಂದುವರಿದದ್ದು)

ವಿದ್ಯುತ್-ಶಕ್ತಿಯ ಸಂಬಂಧವಲ್ಲಿ ಮುಖ್ಯ ಪ್ರಧಾ ನರು ಒಂದು ಮಾತನ್ನು ಹೇಳಿದ್ದರು. ಗೇರಸಪ್ಪೆಯ ಧಬಧಬೆಯಲ್ಲಿ ಹುಟ್ಟಿದ ವಿದ್ಯುತ್ ಶಕ್ತಿಯನ್ನು ಸಿದ್ದಾಪುರ ಶಿರ್ಸಿ-ಯಲ್ಲಾಪುರ-ಹಳಿಯಾಳ ಮಾರ್ಗ ವಾಗಿ ದಾಂಡೇಲಿಯ ತನಕ ಒಯ್ಯುವ ಸಂಕಲ್ಪವಾ ಗಿರುವದಾಗಿ ಅವರು ಹೇಳಿ, ನಮ್ಮ ಜಿಲ್ಲೆಯವರಿಗೆ ಕರ್ಣಾನಂದ ಉಂಟುಮಾಡಿದ್ದರು. "ನಿಮ್ಮ ಜಿಲ್ಲೆ ಬಡ ಪ್ರದೇಶವಲ್ಲ, ಅದು ಬಡ ಜಿಲ್ಲೆಯೆಂದು ನಾನ ಎಷ್ಟಕ್ಕೂ ಒಪ್ಪಲಾರೆ. ಇತ್ತ ನೋಡಿರಿ, ನಿಮ್ಮ ಜಿಲ್ಲೆಯೊಳಗಿರುವ ಸೃಷ್ಟಿಸಂಪತ್ತು! ಈ ನಿಮ್ಮ ಪ್ರದೇಶದಲ್ಲಿರುವ ಜನರು ಬಡ ಜನರಾಗಲಾರರು. ಈ ಪ್ರದೇಶದಲ್ಲಿ ೫ ಕಾಗದದ ಮುದ್ರೆ ತಯಾರಿಸುವ ಕಾರಖಾನೆಗಳನ್ನು ಸ್ಥಾಪಿಸಲಿಕ್ಕೆ ಅನುಕೂಲವಿದೆ. ಗೇರಸಪ್ಪೆಯೊಳಗಿನ ವಿದ್ಯುತ್ ಶಕ್ತಿಗೂ ಈ ಜಿಲ್ಲೆ ಯೊಳಗಿನ ಸೃಷ್ಟಿಸಂಪತ್ತಿಗೂ ಗಂಟುಹಾಕಿದರೆ ಇಡೀ ಭೂಪ್ರದೇಶ ಐಶ್ವರ್ಯದಿಂದ ತುಂಬಿತುಳುಕು

ವದು. ಕಾಳೀ ನದಿಯಿಂದ ಆ ವಿದ್ಯುತ್-ಶಕ್ತಿ ಸಿಗಲು ವಿಳಂಬವಾಗುವದರಿಂದ ಗೇರಸಪ್ಪೆಯ ವಿದ್ಯುತ್ ಶಕ್ತಿಯನ್ನು ಈ ಜಿಲ್ಲೆಯೊಳಗೆ ತರಿಸಬೇಕೆಂದು ಸರಕಾರದ ನಿರ್ಣಯವಾಗಿದೆ" ಎಂದೂ ಮುಖ್ಯಮಂತ್ರಿ ಗಳು ಸಾರಿ ಅತಿ ಆಶ್ಚರ್ಯಕ್ಕಾಗಿ ತಾವು ಶ್ರೀ|| ಮಲ್ಲನಗೌಡರನ್ನೂ ಡಾ|| ಗಿಲ್ಡರರವರನ್ನೂ ಬೊಗಳೂರಿಗೆ ಕಳಿಸುತ್ತೇವೆಂದು ಹೇಳಿದರು. ಡಾ|| ಗಿಲ್ಡರರೂ ಶ್ರೀ|| ಮಲ್ಲನಗೌಡರೂ ಮೈಸೂರು ಸರ ಕಾರದೊಡನೆ ಆಲೋಚನೆ ಮಾಡಿ, ಹುಬ್ಬಳ್ಳಿ-ಗದಗ ಮತ್ತು ಧಾರವಾಡ ಜಿಲ್ಲೆಯ ಪ್ರದೇಶಗಳಿಗೆ ವಿದ್ಯು ತ್ತು ತರಿಸುವ ಯೋಜನೆ ಮಾಡಿರುವರೆಂದು ಈಗ ಪ್ರಕಟವಾಗಿದೆ. ಶಿರಸಿಯಿಂದ ವಿದ್ಯುತ್-ಮಾರ್ಗ ವನ್ನು ಹಾವೇರಿಗೆ ಒಯ್ದು, ಅಲ್ಲಿಂದ ಮುಂದೆ ಹುಬ್ಬಳ್ಳಿಗೆ ಒಯ್ಯಬೇಕೆಂಬ ಆಲೋಚನೆ ನಡೆದಿದೆ ಯಂತೆ! ನಮ್ಮ ಜಿಲ್ಲೆಯ ಉತ್ತರ ಪ್ರದೇಶಕ್ಕೆ ಕಾಳೀ ನದಿಯ ವಿದ್ಯುತ್ತಿನ ಪೂರೈಕೆಯಾಗುವಂ ದೂ ಈ ಯೋಜನೆ ಪೂರ್ತಿಯಾಗಲು ೭-೮ ವರ್ಷ ಗಳು ತಗಲುವವೆಂದೂ ಡಾ|| ಗಿಲ್ಡರರು ಹೇಳಿರುವ ರಂತೆ. ಮುಖ್ಯ ಪ್ರಧಾನರು ಕೊಟ್ಟ ವಚನಕ್ಕೆ ಡಾ|| ಗಿಲ್ಡರರ ಮಾತಿಗೂ ಮೇಳ ಬೀಳುವದಿಲ್ಲ. ನಮ್ಮ ಜಿಲ್ಲೆಯೊಳಗೆ ಗೇರಸಪ್ಪೆಯ ವಿದ್ಯುತ್ತನ್ನು ಪೂರೈಸ ಬೇಕೆಂಬ ಆತುರತೆ ಕಾಂಗ್ರೆಸ ಮಂತ್ರಿ-ಮಂಡಳ ಕ್ಕಿಲ್ಲ. ಜೋಗದ ವಿದ್ಯುತ್ತನ್ನು ಹುಬ್ಬಳ್ಳಿಗೆ ಒಯ್ಯು ವ ದಾರಿಯನ್ನಷ್ಟೇ ಅವರು ಹುಡುಕುತ್ತಾರೆ! ಹುಬ್ಬಳ್ಳಿಯಲ್ಲಿ ಹಲವಾರು ಉದ್ಯೋಗಗಳಿವೆ. ಅವು ಗಳ ಉದ್ಧಾರವಾಗಬೇಕೆಂಬುದೇ ಪ್ರಧಾನ-ಮಂಡ ಳದ ಧ್ಯೇಯ. ಮಹಾತ್ಮರ ಹೆಸರಿನಿಂದ ಮಂತ್ರಿಗಳು ಸರ್ವೋದಯದ ಡಂಗುರ ಸಾರುತ್ತಿದ್ದಾಗ ಅದರ ಆಚಾರ ಮಾತ್ರ ತದ್ವಿರುದ್ಧವಾಗಿ ನಡೆದಿದೆ! ಮಂತ್ರಿ ಗಳ ಮಾತಿಗೂ ಕೃತಿಗೂ ಮೇಳಗೂಡುವದಿಲ್ಲೆಂದು "ಕ್ರೊನಿಕಲ್" ಪತ್ರಕರ್ತರು ಬರೆಯಲಿಕ್ಕೆ ಇದೇ ಕಾರಣವಾಗಿದೆ. ಮುಖ್ಯ ಪ್ರಧಾನರು ವಿಚಾರ ಹುಡಿವ ಆತ್ಮಸಂಶೋಧನೆ ಮಾಡಿಕೊಳ್ಳಬೇಕು. ಮತ್ತು ಸರ್ವೋದಯದ ಧ್ಯೇಯಕ್ಕೆ ಅನುಗುಣವಾಗಿ ತಮ್ಮ ನಡಾವಳಿಯನ್ನು ತಿದ್ದಿಕೊಳ್ಳಬೇಕು. ಮುಂಬಯಿಯ "ಟೈಮ್ಸ್" ಕರ್ತರು ಬರೆದಂತೆ ಪ್ರಧಾನರು ಒಕ್ಕ ಮತದ ದರ್ಪ ಬಿಟ್ಟು, ಪ್ರಾಮಾಣಿಕ ಮುಂದಾಳ ರನ್ನು ಕರಸಿಕೊಂಡು, ಶಾಂತ ಚಿತ್ತದಿಂದ ಅವರೊಡ ನೆ ವಿಚಾರ ವಿನಿಯೋಗ ಮಾಡಿ, ಅವರ ಸಮ್ಮತಿ ದೊರೆಯುವಂತೆ ತಮ್ಮ ಯೋಜನೆಗಳಲ್ಲಿ ತಕ್ಕ ತಿದ್ದು ಪಾಟಗಳನ್ನು ಘಟಿಸಿ, ರಾಜ್ಯದಾಡಳಿತೆಯನ್ನು ಸರ್ವ ಸಮ್ಮತವಾಗಿ ನಡೆಸಬೇಕು. ಇದೇ ನಿಜವಾದ ಸರ್ವೋದಯ-ಸಾಧನೆ. ಜಿಲ್ಲಾ ಅಭಿಮಾನಿಗಳು

WANTED AGENTS!
FOR
"VEENA VANASPATI"
VEGETABLE GHEE.
BEST FOR COOKING CONTAINS VITAMINS
PACKED IN ALL SIZE OF TINS.
SUPPLIED EVERYWHERE
For particulars please write to
BOMBAY TRADING CO.,
129 A. Hill Road, BANDRA, BOMBAY, 20.

ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆ

ಮುಂಬಯಿ ಕೆಸಲ್, ತಾ. ೧೫-೨-೧೯೪೭

ಆಜ್ಞೆ.

ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನು, ೧೯೪೬.

ನಂ ೧೬೨೩-ಪ — ೧೯೪೬ನೇ ಇಸವಿಯ ಮುಂಬಯಿಯ ಅವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಕಾನೂನಿನ (೧೯೪೬/ಮುಂಬಯಿಯ ೨೬ನೇ ಕಾನೂನಿನ) ಕಲಮು ೪ ಮತ್ತು ಮುಂಬಯಿ ಸರಕಾರದ ರೆವಿನ್ಯೂ ಖಾತೆಗಳ ಆಜ್ಞೆಯಾದರು [illegible] ೧೯೪೭ನೇ [illegible] ಹೊರಡಿಸಿದ ೧೧೧೩/II ನೇ ನಂಬರದ ಹಾಗೂ ೪-೬-೧೯೪೬ ನೇಗೆ ಹೊರಡಿಸಿದ ೧೧೩೦/II ನೇ ನಂಬರದ ಠರಾವುಗಳು [illegible] ಅಧಿಕಾರವನ್ನುಪಯೋಗಿಸಿ, ಮುಂಬಯಿ ಸರಕಾರವು ಈ ಕೆಳಗಿನ ಆಜ್ಞೆಯನ್ನು ಹೊರಡಿಸಿದೆ,—

(೧) ಈ ಆಜ್ಞೆಯು ೧೯೪೭ರ ಮುಂಬಯಿಯ [illegible] ಹಿಂಡಿಯ (ವ್ಯಾಪಾರದ ಮತ್ತು ಸಾಗಾಟದ ನಿಯಂತ್ರಣದ) ಆಜ್ಞೆಯೆಂದು ಕರೆಯಲ್ಪಡುವದು

(೨) ಇದು ಇಡೀ ಮುಂಬಯಿ ಪ್ರಾಂತಕ್ಕೆ ಈ ಆಜ್ಞೆಗೆ ಜೋಡಿಸಲ್ಪಟ್ಟ ೧ನೇ ಪರಿಶಿಷ್ಟದಲ್ಲಿ [illegible] ಹಿಂಡಿ ಸಂಸ್ಥಾನಗಳಿಗೂ ಅನ್ವಯಿಸುತ್ತದೆ

(೩) ಇದು ಕೂಡಲೆ ಜಾರಿಯಲ್ಲಿ ಬರುವದು

೨ ಈ ಆಜ್ಞೆಯಲ್ಲಿ, ವಿಷಯಾನುರೋಧದಿಂದ ಬೇರೆ ಸಂದರ್ಭಾನುರೋಧದಿಂದ ಬೇರೆ ಅರ್ಥ [illegible]—

(ಅ) "[illegible] ಹಿಂಡಿ" ಎಂದರೆ [illegible] (ಅದರ [illegible]) [illegible] ಹಿಂಡಿ ಎಂದು ತಿಳಿಯಬೇಕು.

(ಬ) "ಹಿಂಡಿ ಸಂಸ್ಥಾನಗಳು" ಎಂದರೆ [illegible]ನೇ ಪರಿಶಿಷ್ಟದಲ್ಲಿ ನಿರ್ದೇಶಿಸಿದ ಹಿಂಡಿ ಸಂಸ್ಥಾನಗಳು ಎಂದು ತಿಳಿಯಬೇಕು.

(ಕ) "ಗಿರಣಿಯವನು" ಎಂದರೆ [illegible] ಹಿಂಡಿಯನ್ನು [illegible] ಎಂದರ್ಥ

(ಡ) "ವ್ಯಾಪಾರಿ" ಎಂದರೆ [illegible] ವ್ಯಕ್ತಿ ಎಂದರ್ಥ.

(ಇ) "ಪರವಾನೆ" ಎಂದರೆ ಈ ಆಜ್ಞೆಯನ್ವಯ [illegible] ಕೊಟ್ಟ ಪರವಾನೆ ಎಂದರ್ಥ

(ಫ) "ಅಪ್ಪಣೆ-ಚೀಟಿ" (permit) ಎಂದರೆ ಈ ಆಜ್ಞೆಯನ್ವಯ [illegible] ಹಿಂಡಿಯನ್ನು [illegible] ಕೊಟ್ಟ ಅಪ್ಪಣೆ-ಚೀಟಿ ಎಂದರ್ಥ

(ಗ) "ಪರವಾನೆ ಕೊಡುವ ಅಧಿಕಾರಿ" ಎಂದರೆ [illegible] ಸರಕಾರದ ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆಯ [illegible] ಎಂದರ್ಥ

(ಹ) "ಪರವಾನೆ-ಧಾರ" ಎಂದರೆ ಈ ಆಜ್ಞೆಯ [illegible] ಕೊಟ್ಟ ಪರವಾನೆಯುಳ್ಳವನು ಎಂದರ್ಥ.

(ಐ) 'ಪರಿಶಿಷ್ಟ' ಎಂದರೆ ಈ ಆಜ್ಞೆಗೆ ಜೋಡಿಸಿದ ಪರಿಶಿಷ್ಟ ಎಂದರ್ಥ

೩ ( ) [illegible] — [illegible] ಹಿಂಡಿಯನ್ನು (ಗಿರಣಿ [illegible]) ಹಿಂಡಿಯ [illegible] ಹಾಗೂ ಅದು [illegible] ಹಿಂಡಿಯು [illegible]), (i) ಹಿಂಡಿ [illegible] ಕೊಡುವ ಸ್ಥಳವು ಮುಂಬಯಿ ನಗರದಲ್ಲಿ ಅಥವಾ ಮುಂಬಯಿ ಉಪನಗರ ಜಿಲ್ಲೆಯಲ್ಲಿ ಇದ್ದರೆ ಮುಂಬಯಿ ಸರಕಾರದ ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆಯ [illegible] ಕೊಟ್ಟ, (ii) [illegible] ಸ್ಥಳವು ಮುಂಬಯಿ ಉಪನಗರ ಜಿಲ್ಲೆ ಬಿಟ್ಟು [illegible] ಜಿಲ್ಲೆಯಲ್ಲಿದ್ದರೆ ಆ ಜಿಲ್ಲೆಯ [illegible] ಕೊಟ್ಟ, ಮತ್ತು (iii) [illegible] ಸ್ಥಳವು [illegible] ಹಿಂಡಿ ಸಂಸ್ಥಾನದಲ್ಲಿದ್ದರೆ ಆ ಸಂಸ್ಥಾನದ [illegible] ಕೊಟ್ಟ ಅಪ್ಪಣೆ-ಚೀಟಿಯಿಲ್ಲದೆ ಮತ್ತು ಆ ಅಪ್ಪಣೆ ಚೀಟಿಯ ಶರತುಗಳಿಗೆ [illegible] ಸಾಗಿಸತಕ್ಕದ್ದಲ್ಲ.

(೨) ಈ ಆಜ್ಞೆಯಂತೆ ಕೊಡಲ್ಪಡುವ ಪ್ರತಿಯೊಂದು ಅಪ್ಪಣೆ-ಚೀಟಿಯು [illegible]ನೇ ಪರಿಶಿಷ್ಟದೊಳಗೆ ಕೊಟ್ಟ ನಮೂನೆಯಲ್ಲಿರಬೇಕು.

(೩) ಮೇಲ್ಕಾಣಿಸಿದ (೧)ನೇ ಉಪಕಲ್ಮಿನಲ್ಲಿಯ [illegible] ಕೊಟ್ಟ ಅಪ್ಪಣೆ ಚೀಟಿಯು, ಆ ಅಪ್ಪಣೆ-ಚೀಟಿಯಂತೆ ಸಾಗಿಸಬೇಕಾದ ಹಿಂಡಿಯನ್ನು ಸಾಗಿಸಿ [illegible], ಇಲ್ಲವೆ ಸಾಗಿಸುವ [illegible] ಅಪ್ಪಣೆ-ಚೀಟಿಯ ಅವಧಿ ಮುಗಿದ [illegible] ಆ ಅಪ್ಪಣೆ ಕೊಟ್ಟ ಅಧಿಕಾರಿಗೆ [illegible] ಒಪ್ಪಿಸಲ್ಪಡಬೇಕು

೪. (೧) [illegible] ೧-೩-೧೯೪೭ನೇ ದಿನ [illegible] ಆಜ್ಞೆ ಅನ್ವಯಿಸುವ ಪ್ರದೇಶದೊಳಗಿನ ಯಾವದೇ ಸ್ಥಳದಲ್ಲಿ ಪರವಾನೆ ಕೊಡುವ ಅಧಿಕಾರಿಯು ಕೊಟ್ಟ ಪರವಾನೆಯಿಲ್ಲದೆ ಮತ್ತು ಆ ಪರವಾನೆಯ [illegible] ಹಿಂಡಿಯನ್ನು [illegible] ಗಿರಣಿಯವನು ಹಿಂಡಿಯನ್ನು [illegible] (ಒಂದಕ್ಕಿಂತ) [illegible] ಪ್ರತಿಯೊಂದು ಸ್ಥಳಕ್ಕೆ ಪ್ರತ್ಯೇಕ ಪರವಾನೆಯನ್ನು ಪಡೆಯತಕ್ಕದ್ದು.

ಈ ಉಪಕಲ್ಮಿನನ್ವಯ ಕೊಡಲ್ಪಡುವ ಪ್ರತಿಯೊಂದು ಪರವಾನೆಯು [illegible]ನೇ ಪರಿಶಿಷ್ಟದಲ್ಲಿ ಕೊಟ್ಟ ನಮೂನೆಯಲ್ಲಿರಬೇಕು.

(೨) ಪರವಾನೆ ಕೊಡುವ ಅಧಿಕಾರಿಯು ಕೊಟ್ಟ ಪರವಾನೆಯನ್ನು ಪಡೆಯದೆ ಮತ್ತು ಆ ಪರವಾನೆಯ ಶರತುಗಳಿಗೆ [illegible] ಆಜ್ಞೆ ಅನ್ವಯಿಸುವ ಪ್ರದೇಶದೊಳಗಿನ ಯಾವದೇ ಸ್ಥಳದಲ್ಲಿ, [illegible] ೧-೩-೧೯೪೭ನೇ ದಿನ [illegible] ಹಿಂಡಿಯನ್ನು [illegible] ಇಲ್ಲವೆ ಮಾರು [illegible] ನಡೆಸತಕ್ಕದ್ದು

ಈ [illegible] ಕೊಡಲ್ಪಡುವ ಪ್ರತಿಯೊಂ

ಪ್ರ ಪರವಾನೆಯು [illegible] ಪರಿಶಿಷ್ಟದಲ್ಲಿ ಕೊಟ್ಟ ನಮೂನೆಯಲ್ಲಿರಬೇಕು

೫ (೧) ಮುಂಬಯಿ ಸರಕಾರದ ಬೇಸಾಯ ಮತ್ತು ಗ್ರಾಮೋದ್ಧಾರ ಖಾತೆಯ [illegible], ಯಾವದೇ ಕಾರಣವನ್ನು ತಿಳಿಸದೆ, ಯಾವದೇ ಗಿರಣಿಯವನಿಗೆ ಇಲ್ಲವೆ ವ್ಯಾಪಾರಿಗೆ ಪರವಾನೆಯನ್ನು ಕೊಡಲು ಒಲ್ಲೆನೆನ್ನಬಹುದು, ಮತ್ತು ಅದೇ ರೀತಿ, ಕಾರಣಗಳನ್ನು ತಿಳಿಸದೆ, ಈಗಾಗಲೆ ಕೊಟ್ಟ ಯಾವ ಪರವಾನೆಯನ್ನು ರದ್ದುಗೊಳಿಸಬಹುದು ಅಥವಾ ಅದಕ್ಕೆ ತಡೆಹಾಕಬಹುದು (suspend) [illegible]

(೨) ಪರವಾನೆ ಕೊಡುವ ಅಧಿಕಾರಿಯು, [illegible] ಅಥವಾ [illegible] ಅಧಿಕಾರಿಯು ([illegible]) ಕಾರಣಗಳನ್ನು ತಿಳಿಸದೆ, ಯಾವನೊಬ್ಬ ಗಿರಣಿಯವನಿಗೆ, ವ್ಯಾಪಾರಿಗೆ ಇಲ್ಲವೆ ಬೇರೆ ವ್ಯಕ್ತಿಗೆ ಅಪ್ಪಣೆ ಚೀಟಿಯನ್ನು ಕೊಡಲಿಕ್ಕೆ ಒಲ್ಲೆನೆನ್ನಬಹುದು, ಮತ್ತು ಯಾವದೇ [illegible] ಕೊಟ್ಟ ಅಪ್ಪಣೆ-ಚೀಟಿಯನ್ನು, ಕಾರಣಗಳನ್ನು ತಿಳಿಸದೆ, ರದ್ದುಗೊಳಿಸಬಹುದು

೬. (೧) [illegible] ಹಿಂಡಿಯ ಸಂಗ್ರಹವುಳ್ಳ ಯಾವನೊಬ್ಬ ಗಿರಣಿಯವನಾಗಲಿ ವ್ಯಾಪಾರಿಯಾಗಲಿ, [illegible] ಹಿಂಡಿಯ ನಿರ್ದಿಷ್ಟ ಪರಿಮಾಣವನ್ನು, ಯಾವದೇ ನಿರ್ದಿಷ್ಟ ವ್ಯಕ್ತಿಗೆ ಇಲ್ಲವೆ ವ್ಯಕ್ತಿಗಳಿಗೆ, ನಿರ್ದಿಷ್ಟ ದರದಿಂದ ಯಾ ದರಗಳಿಂದ, ನಿರ್ದಿಷ್ಟ ಅವಧಿಯೊಳಗೆ ಮತ್ತು ನಿರ್ದಿಷ್ಟ [illegible] ಒಳಪಟ್ಟು, [illegible] ಪ್ರಾಂತಿಕ ಸರಕಾರವು ಆಜ್ಞಾಪಿಸಬಹುದು [illegible] ಸಂಬಂಧಪಟ್ಟ ಗಿರಣಿಯವನು ಯಾ ವ್ಯಾಪಾರಿಯು ಅದನ್ನು ಪಾಲಿಸಬೇಕು.

(೨) ಮೇಲಿನ (೧) ಉಪಕಲ್ಮಿನನ್ವಯ ಹೊರಡಿಸಿದ ಆಜ್ಞೆಯನ್ನು, ಅದರಲ್ಲಿ ನಿರ್ದಿಷ್ಟ ಪಡಿಸಿ ಕೊಟ್ಟ ಅವಧಿಯೊಳಗೆ ಪಾಲಿಸಲು [illegible] ತಪ್ಪಿದರೆ, ಪ್ರಾಂತಿಕ ಸರಕಾರವು (ಇನ್ನೊಂದು ಆಜ್ಞೆ ಹೊರಡಿಸಿ) ಯಾವನೊಬ್ಬ ಅಧಿಕಾರಿಗೆ [illegible] ಯಿಂದ ಸದರಿ ಹಿಂಡಿಯ ಪರಿಮಾಣವನ್ನು ಸ್ವಾಧೀನಪಡಿಸಿಕೊಂಡು ಅದನ್ನು, ಯಾವ ವ್ಯಕ್ತಿಗೆ ಅದನ್ನು [illegible] ಮಾರಬೇಕೆಂದು ವಿಧಿಸಿತ್ತೋ ಆ ವ್ಯಕ್ತಿಯು ಆಜ್ಞೆಯಲ್ಲಿ ನಿರ್ದಿಷ್ಟಗೊಳಿಸಿಕೊಟ್ಟ ಹಿಂಡಿಯ ಪರಿಮಾಣದ ಬೆಲೆಯನ್ನು ಸದರಿ ಅಧಿಕಾರಿಯ ಕಡೆಗೆ ಸಂದಿಸಿದಲ್ಲಿ, ಆ ವ್ಯಕ್ತಿಯ ವಶಕ್ಕೆ ಕೊಡಲು ಅಧಿಕಾರ ಕೊಡಬಹುದು.

೭. ಪರವಾನೆ ಕೊಡುವ ಅಧಿಕಾರಿಗೆ ಇಲ್ಲವೆ ಈ ಬಗ್ಗೆ ಪರವಾನೆ ಕೊಡುವ ಅಧಿಕಾರಿಯಿಂದ ಅಧಿಕಾರಪಟ್ಟ ಬೇರೊಬ್ಬ ಅಧಿಕಾರಿಗೆ ಈ ಆಜ್ಞೆಯ ಯಾವದೇ ಅಂಶದ ಉಲ್ಲಂಘನೆಯಾಗಿದ ಇಲ್ಲವೆ ಆಗುವ ಸಂಭವವಿದೆ (is about to be committed) ಎಂದು ನಂಬ [illegible] ಕಾರಣವಿದ್ದಲ್ಲಿ ಅವನು —

(ಅ) ಯಾವನೊಬ್ಬ ಪರವಾನೆದಾರನಿಗೆ ಅವನು ಸ್ವತಃ ಇಲ್ಲವೆ ಬೇರೊಬ್ಬ ಪರವಾನೆದಾರನ [illegible] ವ್ಯವಹಾರದ ಸಂಬಂಧದಲ್ಲಿ ಅವನ [illegible] ಮಾಹಿತಿಯನ್ನು [illegible] ಒಪ್ಪಿಸಲು ಆಜ್ಞಾಪಿಸಬಹುದು,

(ಬ) ಯಾವನೊಬ್ಬ ಪರವಾನೆದಾರನ ಇಲ್ಲವೆ ಅವನ [illegible] ಪುಸ್ತಕಗಳನ್ನೂ, ಕಾಗದ-ಪತ್ರಗಳನ್ನೂ [illegible] ಹಿಂಡಿಯ ಸಂಗ್ರಹಗಳನ್ನೂ [illegible] ಇಲ್ಲವೆ [illegible],

(ಕ) ಯಾವದೇ ಸ್ಥಳದಲ್ಲಿ ಪ್ರವೇಶ ಮಾಡಿ [illegible] ಮತ್ತು ಯಾವ [illegible] ಸಂಬಂಧ

ಪಟ್ಟಿ ಈ ಆಜ್ಞೆಯು ಭಂಗವಾಗಿದೆ ಯಾ ಆಗುವಂತಿದೆ ಎಂದು ಸಂಶಯ ಪಡಲು ತಕ್ಕ ಕಾರಣವುಂಟೋ ಅಂಥ ಸ್ಥಳಗಳನ್ನು ಶೋಧ ಮಾಡಬಹುದು

ಪರಿಶಿಷ್ಟ ೧

೧ ಅಕ್ಕಲಕೋಟ ೨ ಔಂಧ ೩ ಭೋರ ೪ ಜತ ೫ ಜಮಖಂಡಿ ೬ ಜಂಜಿರ ೭ ಕುರುಂದವಾಡ (ಕಿರಿ) ೮ ಕುರುಂದವಾಡ (ಹಿರಿ) ೯ ಮಿರಜ (ಕಿರಿ) ೧೦ ಮಿರಜ (ಹಿರಿ) ೧೧ ಮುಧೋಳ ೧೨ ಫಲಟಣ ೧೩ ರಾಮದುರ್ಗ ೧೪ ಸಾಂಗಲಿ ೧೫ ಸವಣೂರ ೧೬ ಸಾವಂತವಾಡಿ ೧೭ ವಾಡಿ ಜಹಾಗೀರ ೧೮ ಧರಮಪೂರ ೧೯ ಬಾಲಾಸಿನೋರ ೨೦ ಛೋಟಾ ಉದಯಪುರ ೨೧ ಲುನಾವಾಡಾ ೨೨ ರಾಜಪಿಪ್ಲಾ (ನಾಂದೋಡ ಶಹರ) ೨೩ ಬಾರಿಯಾ ೨೪ ಬಾನ್ಸದಾ ೨೫ ಸಂತ ೨೬ ಕೆಂಬೇ ೨೭ ಇಡಾರ ೨೮ ಜವ್ಹಾರ ೨೯ ವಿಜಯನಗರ ೩೦ ಸಚಿನ ೩೧ ರಾಧನಪುರ ೩೨ ಪಾಲನಪುರ ೩೩ ಜಾಂಬುಘೋಡಾ ೩೪ ಸುರಗಣಾ ೩೫ ಥಾರಾದ ೩೬ ಭಾದರ್ವಾ ೩೭ ಮೋಹನಪುರ ೩೮ ಮಾಲಪುರ ೩೯ ದಾಂತಾ ೪೦ ವಾವ್ ೪೧ ಮಾಲ ೪೨ ಘೋಡಾಸರ ೪೩ ವಾಸ್ನಾ ೪೪ ಕಾಟೋಸಾನ ೪೫ ಸುದಾಸ್ನಾ ೪೬ ಮಾಲಾವ್ನಾ ೪೭ ರಣಾಸನ ೪೮ ಪುನಾದ್ರಾ ೪೯ ಅಂಬಾಲಿಯಾರಾ ೫೦ ಪುನಾದ್ರಾ ೫೧ ಇಲೋಲ ೫೨ ಸಂಜೇಲಿ ೫೩ ಜಂಬೂರಾ

ಪರಿಶಿಷ್ಟ ೨

ಶೇಂಗಾ ಹಿಂಡಿಯ ಸಾಗಾಟದ ಅಪ್ಪಣೆ-ಚೀಟಿ

(೧೯೪೯ರ ಮುಂಬಯಿ ಶೇಂಗಾ ಹಿಂಡಿಯ (ವ್ಯಾಪಾರದ ಮತ್ತು ಸಾಗಾಟದ ನಿಯಂತ್ರಣದ) ಆಜ್ಞೆಯ ೩(೧)ನೇ ಕಲಮಿನನ್ವಯ ಕೊಟ್ಟದ್ದು)

ನಂ

ರಾ ..... ಇವರಿಗೆ ಈ ಕೆಳಗೆ ಕಾಣಿಸಿದ ಶೇಂಗಾ ಹಿಂಡಿಯ ರವಾನನ್ನು ರೇಲ್ವೆಯಿಂದ/ಸಮುದ್ರ ಮಾರ್ಗವಾಗಿ ಈ ಅಪ್ಪಣೆ—ಚೀಟಿಗೆ ಜೋಡಿಸಿರುವ ಪರಿಶಿಷ್ಟದಲ್ಲಿ ನಿರ್ದೇಶಿಸಿರುವ ಶರ್ತು ಮತ್ತು ಕರಾರುಗಳಿಗೊಳಪಟ್ಟು, ಸಾಗಿಸಲು ಅಪ್ಪಣೆ ಕೊಡಲಾಗಿದೆ

೧ ಶೇಂಗಾ ಹಿಂಡಿಯ ರವಾನು (ಟನ್ನ ಹಂಡ್ರೆಡ್ ಯಾ ಚೀಲಗಳು)

೨ ಎಲ್ಲಿಂದ ?

೩ ಎಲ್ಲಿಗೆ ?

೪ ಯಾರಿಗೆ ಕಳಿಸಲ್ಪಡುವದೋ ಅವನ ಹೆಸರು

೫ ರೇಲ್ವೆಯಿಂದ/ಸಮುದ್ರ ಮಾರ್ಗವಾಗಿ

ಪರಿಶಿಷ್ಟ

೧. ಯಾವ ಶೇಂಗಾ ಹಿಂಡಿಯ ರವಾನಿನ ಬಗ್ಗೆ ಈ ಅಪ್ಪಣೆ—ಚೀಟಿ ಕೊಡಲ್ಪಟ್ಟಿರುವದೋ ಆ ರವಾನಿಗಷ್ಟೇ ಇದು ಸಾಸನಬದ್ಧವಾಗಿ ಅನ್ವಯವಾಗದು, ಮತ್ತು ಇದು ಕೊಡಲ್ಪಟ್ಟಂದಿನಿಂದ ೧೦ ದಿನಗಳ ವರೆಗಷ್ಟೇ ಊರ್ಜಿತವಿರುವದು

೨ ಅಪ್ಪಣೆ ಚೀಟಿ ಕೊಟ್ಟ ದಿನದಿಂದ ೧೦ ದಿನಗಳೊಳಗೆ (ಶೇಂಗಾ ಹಿಂಡಿಯ) ರವಾನನ್ನು ಸಾಗಿಸದಿದ್ದರೆ, ಅಪ್ಪಣೆ ಚೀಟಿಯ ಅವಧಿಯನ್ನು ಬೆಳಿಸಿಕೊಡಲಾಗಲಿಕ್ಕಿಲ್ಲ ಅಂಥ ಪರಿಸ್ಥಿತಿಯಲ್ಲಿ ಹಿಂಡಿ ಕಳಿಸುವಾತನು ಹೊಸ ಅಪ್ಪಣೆ—ಚೀಟಿಗಾಗಿ ಅರ್ಜಿ ಮಾಡಬೇಕಾಗುವದು

೩ ಈ ಅಪ್ಪಣೆ—ಚೀಟಿಯನ್ನು ಯಾವದೇ ಕಾಲಕ್ಕೆ ರದ್ದುಗೊಳಿಸಬಹುದು

ತಾ — ೧೯೪೯

ಮುಂಬಯಿ ಸರಕಾರದ ಬೇಕಾಯ ಮತ್ತು ಗ್ರಾಮೋದ್ಯೋಗ ಮಂತ್ರಾಲಯದ ಸೆಕ್ರೆಟರಿ

ಅಪ್ಪಣೆ ಕೊಡುವ ಅಧಿಕಾರಿಯ ಸಹಿ

ಸಂಸ್ಥಾನದ ಮುದ್ರೆ ಅಥವಾ ಕಾರ್ಯಾಲಯದ ಮುದ್ರೆ

ಅಧಿಕಾರಿಯ ಹುದ್ದೆ ಹೆಸರು ರೇಲ್ವೆ ಸ್ಟೇಶನ್ ಮಾಸ್ತರ

ಮುಂಬಯಿಯ ಸಕ್ಕರೆ ಕಲೆಕ್ಟರ

ತಾರೀಖ — — ೧೯೪೯

ಮುಂಬಯಿ ಸರಕಾರದ ಬೇಸಾಯ ಮತ್ತು ಗ್ರಾಮೋದ್ಯೋಗ ಮಂತ್ರಾಲಯದ ಸೆಕ್ರೆಟರಿ

ಅಧಿಕಾರಿಯ ಸಹಿ

ಸಂಸ್ಥಾನದ ಮುದ್ರೆ ಅಥವಾ ಕಚೇರಿಯ ಮುದ್ರೆ

———*———

ಪರಿಶಿಷ್ಟ ೩

ಶೇಂಗಾ ಹಿಂಡಿಯನ್ನು ಶೇಖರಿಸಲು ಗಿರಣಿಯವನಿಗೆ ಪರವಾನೆ

(೧೯೪೯ರ ಮುಂಬಯಿ ಶೇಂಗಾ ಹಿಂಡಿಯ (ವ್ಯಾಪಾರದ ಮತ್ತು ಸಾಗಾಟದ ನಿಯಂತ್ರಣದ) ಆಜ್ಞೆಯ ೪ (ಅ) ಕಲಮಿನನ್ವಯ ಕೊಟ್ಟದ್ದು)

ನಂ (ಸ್ಥಳ) ಇವರಿಗೆ ಗಿರಣಿಯವರಾದ ತಮ್ಮ ಒಡೆತನದ ಗಿರಣಿಯಲ್ಲಿ, ೧೯೪೯ರ ಮುಂಬಯಿಯ ಶೇಂಗಾ ಹಿಂಡಿಯ (ವ್ಯಾಪಾರದ ಮತ್ತು ಸಾಗಾಟದ ನಿಯಂತ್ರಣದ) ಆಜ್ಞೆಯ ಅಂತರ್ಗತವಾದ ಹಾಗೂ ಈ ಕೆಳಗೆ ವಿವರಿಸಿದ ಕರಾರುಗಳಿಗನುಸಾರವಾಗಿ, ಶೇಂಗಾ ಹಿಂಡಿ ಉತ್ಪಾದಿಸುವ ವ್ಯವಹಾರ ನಡೆಸಲು ಪರವಾನೆ ಕೊಡಲಾಗಿದೆ

೧ ಪರವಾನೆ ಧಾರಕರು ತಾನು ಉತ್ಪಾದಿಸಿದ ಶೇಂಗಾ ಹಿಂಡಿಯ ಹಾಗೂ ಅದರ ಕ್ರಯದಿಂದ ಮಾರಾಟ ವ್ಯವಹಾರದ ಪೂರ್ತಿ ಮತ್ತು ನಿಜವಾದ ಲೆಕ್ಕವನ್ನು ಇಡತಕ್ಕದ್ದು ಅಂಥ ಲೆಕ್ಕವನ್ನು ಪರವಾನೆ ಕೊಡುವ ಅಧಿಕಾರಿಯು ಅಥವಾ ಈ ಬಗ್ಗೆ ಅವನಿಂದ ಅಧಿಕಾರವಿತ್ತು ನೇಮಿಸಲ್ಪಟ್ಟ ವ್ಯಕ್ತಿಯು ಯಾವದೇ ಕಾಲಕ್ಕೆ ತಪಾಸಿಸಬಹುದು

೨ ಪರವಾನೆಧಾರಕನು ತನ್ನ ವಶದಲ್ಲಿರುವ ಶೇಂಗಾ ಹಿಂಡಿಯ ಸಂಗ್ರಹವನ್ನು — ಅದು ಅವನ ಸ್ವಂತದ್ದಿರಲಿ, ಬೇರೊಬ್ಬನದಿರಲಿ ಯಾ ಅವನ ಮತ್ತು ಬೇರೊಬ್ಬನ ಭಾಗೀದಾರಿಗೆ ಒಳಪಟ್ಟಿದ್ದಿರಲಿ — ತಪಾಸಿಸಲಿಕ್ಕೆ, ಶೇಂಗಾ ಹಿಂಡಿಯ ಉತ್ಪಾದನೆಯ ಮತ್ತು ಮಾರಾಟದ ವ್ಯವಹಾರಗಳ ಲೆಕ್ಕವನ್ನು ತಪಾಸಿಸಲಿಕ್ಕೆ ಯಾವದೇ ಯೋಗ್ಯ (reasonable) ವೇಳೆಯಲ್ಲಿ, ಪರವಾನೆ ಕೊಡುವ ಅಧಿಕಾರಿಗೆ ಅಥವಾ ಆ ಅಧಿಕಾರಿಯಿಂದ ಈ ಬಗ್ಗೆ ಅಧಿಕಾರವಿತ್ತು ಬಂದ ವ್ಯಕ್ತಿಗೆ ಎಲ್ಲ ಬಗೆಯ ಸೌಕರ್ಯಗಳನ್ನು ಒದಗಿಸಿಕೊಡಬೇಕು

೩ ಪರವಾನೆ ಕೊಡುವ ಅಧಿಕಾರಿಯು ಇಲ್ಲವೆ ಅವನಿಂದ ಈ ಸಂಬಂಧದಲ್ಲಿ ಅಧಿಕಾರವಿತ್ತು ಬಂದ ವ್ಯಕ್ತಿಯು ಕೇಳಿದಾಗ ಪರವಾನೆ ಧಾರಕನು ತನ್ನ ಪರವಾನೆಯನ್ನು ತಪಾಸಣೆಗಾಗಿ ಹಾಜರುಪಡಿಸಬೇಕು.

೪ ತಾ ೩೦ ೧೧ ೧೯೪೮ರ ಪೂರ್ವದಲ್ಲಿ ರದ್ದುಗೊಳಿಸದಿದ್ದರೆ ಇಲ್ಲವೆ ತಡೆಹಿಡಿಯಲ್ಪಡದಿದ್ದರೆ, ಈ ಪರವಾನೆಯು ತಾ ೩೦ ೧೧-೧೯೪೯ರ ವರೆಗೆ ಊರ್ಜಿತವಿರುವದು

೫ ಪರವಾನೆ ಧಾರಕನು ತನ್ನ ಎಲ್ಲ ಗಿರಣಿಯನ್ನು ಶಾಶ್ವತವಾಗಿ ಮುಚ್ಚಿ ಬಿಟ್ಟಿದ್ದರೆ, ಹಾಗೆ ಗಿರಣಿ ಮುಚ್ಚಿದ ದಿನದಿಂದ ಒಂದು ತಿಂಗಳೊಳಗಾಗಿ ಅವನು ತನ್ನ ಪರವಾನೆಯನ್ನು ರದ್ದಿಯಾಗಿಸಲು ಪರವಾನೆ ಕೊಡುವ ಅಧಿಕಾರಿಯ ಕಡೆಗೆ ಹಾಜರಪಡಿಸಬೇಕು

೬ ಪರವಾನೆಧಾರಕನು ಅಥವಾ ಪರವಾನೆ ಕೊಡುವ ಅಧಿಕಾರಿಯು ಅಥವಾ ಈ ಪರವಾನೆಯ ಅವಧಿ ಮುಗಿದ ಬಳಿಕ ಈ ಬಗ್ಗೆ ಅಧಿಕಾರವಿತ್ತು ಬಂದ ವ್ಯಕ್ತಿಯು ಈ ಪರವಾನೆಯಂತೆ ಅಧಿಕಾರವು ಇರದು

೭ ಪರವಾನೆ—ಪತ್ರವು ಕಳೆದು ಹೋಗಿದೆ, ನಷ್ಟವಾಗಿದೆ ಇಲ್ಲವೆ ಒಡೆದು ಅಥವಾ ಬಗೆಯಿಂದ ನಿರುಪಯೋಗಿಯಾಗಿದೆ ಎಂದು ಪರವಾನೆ ಕೊಡುವ ಅಧಿಕಾರಿಗೆ ಮನದಟ್ಟಾದರೆ ಆ ಅಧಿಕಾರಿಯು ಇದರ ಬೇರೊಂದು ಪ್ರತಿಯು (ಡುಪ್ಲಿಕೇಟ್)ನ್ನು ಕೊಡುವನು

ತಾ — — ೧೯೪೯

(ಪರವಾನೆ ಕೊಡುವ ಅಧಿಕಾರಿಯ ಸಹಿ)

ಸನ್ ೧೯೪೯ನೇ ಇಸವಿಯ ಮುಂಬಯಿಯ ಶೇಂಗಾ ಹಿಂಡಿಯ (ವ್ಯಾಪಾರದ ಮತ್ತು ಸಾಗಾಟದ ನಿಯಂತ್ರಣದ) ಆಜ್ಞೆಯನ್ನು ನಾನು/ನಾವು ಓದಿದ್ದು ಗಿರಣಿಯ ಶೇಂಗಾ ಹಿಂಡಿ ಉತ್ಪಾದಿಸಲು ಕೊಟ್ಟ ಪರವಾನೆಯ ಕರಾರುಗಳನ್ನು ಪ್ರಾಮಾಣಿಕತೆಯಿಂದ ಪಾಲಿಸಿಕೊಂಡಿರುತ್ತೇನೆ ಅಲ್ಲದೆ ಕಾಲಕಾಲಕ್ಕೆ ಪರವಾನೆ ಕೊಡುವ ಅಧಿಕಾರಿಯು ಈ ಸಂಬಂಧದಲ್ಲಿ ಅನ್ಯ ಮುಂದೆ ಕೊಡಬಹುದಾದಂಥ ಆದೇಶಗಳಂತೆ ನಡೆಯಲು ನಾನು/ನಾವು ಒಪ್ಪಿಕೊಂಡಿದ್ದೇನೆ (ವೆ)

ತಾ — — ೧೯೪೯ (ಪರವಾನೆಧಾರಕನ ಸಹಿ)

———*———

ಪರಿಶಿಷ್ಟ ೪

ಶೇಂಗಾ ಹಿಂಡಿಯ ಕ್ರಯ-ವಿಕ್ರಯ ಮಾಡುವ ಪರವಾನೆ

(೧೯೪೯ರ ಮುಂಬಯಿಯ ಶೇಂಗಾ ಹಿಂಡಿಯ (ವ್ಯಾಪಾರದ ಮತ್ತು ಸಾಗಾಟದ ನಿಯಂತ್ರಣದ) ಆಜ್ಞೆಯ ೪ (ಬ) ಕಲಮಿನಂತೆ ಕೊಟ್ಟದ್ದು)

ನಂ (ಸ್ಥಳ) ಇವರಿಗೆ ಮುಂಬಯಿ ಪ್ರಾಂತದ ಹಾಗೂ ಹಿಂದೀ ಸಂಸ್ಥಾನಗಳ ಪರವಾನೆಗಳಲ್ಲಿ, ೧೯೪೯ನೇ ಇಸವಿಯ ಮುಂಬಯಿಯ ಶೇಂಗಾ ಹಿಂಡಿಯ (ವ್ಯಾಪಾರದ ಮತ್ತು ಸಾಗಾಟದ ನಿಯಂತ್ರಣದ) ಆಜ್ಞೆಗನುಸಾರವಾಗಿಯೂ ಈ ಕೆಳಗಿನ ಕರಾರುಗಳಿಗನುಸಾರವಾಗಿಯೂ, ಶೇಂಗಾ ಹಿಂಡಿಯನ್ನು ಕೊಂಡುಕೊಳ್ಳುವ ಮತ್ತು ಮಾರುವ ಉದ್ಯೋಗ ನಡೆಸಲು ಪರವಾನೆ ಕೊಡಲಾಗಿದೆ

೧ ಪರವಾನೆಧಾರಕನು ತಾನು ಮಾಡಿದ ಕ್ರಯದಿಂದ ಶೇಂಗಾ ಹಿಂಡಿಯ ಕ್ರಯದ ಮತ್ತು ವಿಕ್ರಯದ ವ್ಯವಹಾರದ ಪೂರ್ತಿ ಮತ್ತು ನಿಜವಾದ ಲೆಕ್ಕವನ್ನು ಇಡಬೇಕು ಈ ಲೆಕ್ಕವನ್ನು ಪರವಾನೆ ಕೊಡುವ ಅಧಿಕಾರಿಯು ಯಾ ಅವನಿಂದ ಈ ಬಗ್ಗೆ ಅಧಿಕಾರವಿತ್ತ ವ್ಯಕ್ತಿಯು ಎಂದು ಬೇಕಾದಾಗ ತಪಾಸಿಸಬಹುದು

೨ ಪರವಾನೆಧಾರಕನು ತನ್ನ ವಶದಲ್ಲಿರುವ ಶೇಂಗಾ ಹಿಂಡಿಯ ಸಂಗ್ರಹವನ್ನು — ಅದು ಅವನ ಸ್ವಂತದ್ದಿರಲಿ, ಬೇರೊಬ್ಬನದಿರಲಿ ಯಾ ಅವನ ಹಾಗೂ ಬೇರೊಬ್ಬನ ಭಾಗೀದಾರಿಗೊಳಪಟ್ಟಿರಲಿ — ತಪಾಸಿಸಲಿಕ್ಕೆ, ಶೇಂಗಾ ಹಿಂಡಿಯ ಕ್ರಯ-ವಿಕ್ರಯಗಳ ವ್ಯವಹಾರಗಳಿಗೆ ಸಂಬಂಧಪಟ್ಟ ಲೆಕ್ಕವನ್ನು ತಪಾಸಿಸಲಿಕ್ಕೆ, ಯಾವದೇ ಯೋಗ್ಯ ಕಾಲದಲ್ಲಿ, ಪರವಾನೆ ಕೊಡುವ ಅಧಿಕಾರಿಗೆ ಯಾ ಈ ಸಂಬಂಧದಲ್ಲಿ ಅವನಿಂದ ಅಧಿಕಾರವಿತ್ತು ಬಂದ ವ್ಯಕ್ತಿಗೆ ಎಲ್ಲ ಬಗೆಯ ಸೌಕರ್ಯಗಳನ್ನು ಒದಗಿಸಿಕೊಡಬೇಕು

೩ ಪರವಾನೆಧಾರಕನು ತನ್ನ ಪರವಾನೆಯನ್ನು ಪರವಾನೆ ಕೊಡುವ ಅಧಿಕಾರಿಯು ಯಾ ಅವನಿಂದ ಈ ಬಗ್ಗೆ ಅಧಿಕಾರವಿತ್ತು ಬಂದ ವ್ಯಕ್ತಿಯು ತಪಾಸಣೆಗೆ ಕೇಳಿದಾಗ ಹಾಜರುಪಡಿಸಬೇಕು

೪ ತಾ ೩೦ ೧೧ ೧೯೪೯ರ ಪೂರ್ವದಲ್ಲಿ ಈ

[illegible]

(ಪರವಾನೆ ಕೊಡುವ ಅಧಿಕಾರಿಯ ಸಹಿ)

[illegible]

(ಪರವಾನೆದಾರನ ಸಹಿ)

ಮುಂಬಯಿಯ ಗವ್ಹರ್ನರರ ಆಜ್ಞೆಯಂತೆ,

D N Mahta,

[illegible]

ಆಜ್ಞೆ. [illegible] ಮುಂಬಯಿ ಕೋಟೆ, [illegible]

ಮುಂಬಯಿಯ ಆವಶ್ಯಕ ವಸ್ತುಗಳ ಹಾಗೂ (ದನಗಳ) ನಿಯಂತ್ರಣದ ಕಾನೂನು, ೧೯೪೪

[illegible]

ಪರಿಶಿಷ್ಟ ೧

[illegible]

ಒಪ್ಪಿಗೆ — [illegible]

[illegible]

(ಎಲ್ಲ ಗಿರಣಿಯ ಕೆಲಸಮಾಡುವವನ ಸಹಿ)

ಮುಂಬಯಿಯ ಗವ್ಹರ್ನರರ ಆಜ್ಞೆಯಂತೆ,

D N Mahta

[illegible]

ಆಜ್ಞೆ. [illegible] ಮುಂಬಯಿ ಕೋಟೆ, [illegible]

ಮುಂಬಯಿಯ ಆವಶ್ಯಕ ವಸ್ತುಗಳ ಹಾಗೂ (ದನಗಳ) ನಿಯಂತ್ರಣದ ಕಾನೂನು, ೧೯೪೪

[illegible]

ಮುಂಬಯಿಯ ಗವ್ಹರ್ನರರ ಆಜ್ಞೆಯಂತೆ,

D N Mahta,

[illegible]

ಮುಂಬಯಿಯ ಮಂತ್ರಿಮಂಡಳದ

ಮಾತಿನ ಮಲ್ಲರು

ಮುಂಬಯಿಯ ಕೊಂಗ್ರೆಸ ಮಂತ್ರಿಮಂಡಳದ ಅರ್ಹತೆಯ ಬಗ್ಗೆ ಜನತೆಯಲ್ಲಿ ಅಸಮಾಧಾನವುಂಟಾಗಿದೆ. ಮುಖ್ಯ ಪ್ರಧಾನರಾದ ಮಾನ್ಯ ಬಾಳಾಸಾಹೇಬ ಖೇರರು ಶಿರ್ಸಿ, ಯಲ್ಲಾಪುರಗಳಲ್ಲಿ ಪ್ರದರ್ಶಿಸಿದ ಅಸಹಿಷ್ಣುತೆ ಕಂಡು ವಿಚಾರವಂತರಿಗೆ ಬೇಸರವಾಗಿದೆ. ಹೊನ್ನಾವರ ವಕೀಲ ಮಂಡಳವು ಅವಿಚಾರಿಯೆಂದು ಶ್ರೀ|| ಖೇರರು ಅಭಿಪ್ರಾಯಪಟ್ಟದ್ದನ್ನು ನೋಡಿ ಜನರಿಗೆ ವಿಷಾದವಾಗಿದೆ. ಬೇಸಾಯ ಮತ್ತು ಅರಣ್ಯ ಇಲಾಖೆಯ ಮಂತ್ರಿ ಮಾನ್ಯ ಪಾಟೀಲರ ಅರ್ಹತೆಯ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಆದರವಿಲ್ಲ. ಈ ಮಂತ್ರಿಗಳು ನಿರ್ಮಲ-ಚಿತ್ತದಿಂದ ಆಡಳಿತೆಯನ್ನು ನಡಿಸುವದಿಲ್ಲೆಂದೂ ಕಾನಡಾ ಜಿಲ್ಲೆಯನ್ನು ಮಲ-ತಮ್ಮನಂತೆ ನಡಿಸುತ್ತಾರೆಂದೂ ಲೋಕಭಾವನೆಯಾಗಿದೆ. ಕಾನಡಾ ಜಿಲ್ಲೆಯೆಂದರೆ ಒಂದು ಸೃಷ್ಟಿಸೊಬಗಿನ ವಿಹಾರಸ್ಥಾನ, ಬೆಳಗಾವಿ-ಧಾರವಾಡ ಕಡೆಯ ದೊಡ್ಡ ಜನರಿಗೆ ಅವಶ್ಯವುಳ್ಳ ವಿಲಾಸ ಸೌಕರ್ಯಗಳನ್ನು ಪೂರೈಸುವ ಪ್ರದೇಶ ಎಂಬದೊಂದು ಭಾವನೆ ರೂಢವಾಗಿದೆ. ಶ್ರೀ|| ಮಲ್ಲನಗೌಡರು ನಮ್ಮ ಜಿಲ್ಲೆಯಲ್ಲಿ ೨-೩ ಬಾರಿ ಸಂಚರಿಸಿದರೇನೋ ನಿಜ. ಆದರೆ ಅವುಗಳಿಂದ ಜನರಿಗೆ ಪ್ರಯೋಜನವಾದದ್ದು ಅಷ್ಟಕ್ಕಷ್ಟೇ! ಪ್ರತಿಯೊಂದು ಸ್ಥಳಕ್ಕೆ ತಲ್ಪುವದಕ್ಕೆ ವಿಳಂಬವಾದರೂ ಅಲ್ಲಿಂದ ಹೊರಡಲಿಕ್ಕೆ ಅವರು ಗಾಬರಿ ಮಾಡುತ್ತಿದ್ದರು! ಕಾಣ ಬಂದವರಿಗೆ ವೇಳೆಯಿಲ್ಲೆಂದು ಹಿಂತಿರುಗಿ ಕಳಿಸುತ್ತಿದ್ದರು! ನಮ್ಮ ಕಾನಡಾ ಜಿಲ್ಲೆ ಜಂಗಲ ಜಿಲ್ಲೆ. ಇಂಥಲ್ಲಿ ಉರುವಲದ ತೊಂದರೆಯಾಗುವದು ಅತ್ಯದ್ಭುತ! ಹೊನ್ನಾವರದ ಜನರು ಇತ್ತ ೨-೩ ವರ್ಷಗಳಿಂದ ಉರುವಲದ ಕಷ್ಟ ಅನುಭವಿಸುತ್ತಿದ್ದಾರೆ. ಈ ಸಂಗತಿಯನ್ನು ಶ್ರೀ|| ಮಲ್ಲನಗೌಡರು ಮೊನ್ನೆ ಬಂದಾಗ ಅವರ ಕಡೆ ಹೇಳಿಕೊಳ್ಳಬೇಕೆಂದು ಅನೇಕ ಜನರು ಹೊನ್ನಾವರ ತಾರಿಯ ಬಳಿಯಲ್ಲಿ ಕಾದುಕೊಂಡು ನಿಂತು, ಅಲ್ಲೇ ಮಾರ್ಗದ ಅಂಚಿಗಿರುವ ಉರುವಲ ಉಗ್ರಾಣ ನೋಡಹೇಳಿದರೆ, ಅದನ್ನು ನೋಡಲು ಮಂತ್ರಿಗಳಿಗೆ ಸಮಯ ದೊರೆಯಲಿಲ್ಲ! ಸಾವಿರಾರು ಎಕರೆ ಗಜನಿ ಭೂಮಿಗಳು, ಕಟ್ಟೆಗಳು ಒಡೆದುಹೋದ್ದರಿಂದ, ಉಪ್ಪುನೀರಿನ ಪಾಲಾಗಿ ಹೋಗುತ್ತಿದ್ದರೂ, ಅವನ್ನು ನೋಡಲು ಅವರಿಗೆ ಮನಸ್ಸಾಗುವದಿಲ್ಲ! ಮೋಟಾರ-ರಸ್ತೆಯ ಅಭಾವದಲ್ಲಿ ಕಾಲು ಹಾದಿಯಿಂದ ನಡೆದು ಗಜನಿ ನೋಡಿದರೆ ಮಂತ್ರಿಪದದ ಗೌರವಕ್ಕೆ ಹಾನಿಯಾಗುತ್ತದೆಂದು ಅವರು ಅಂಜಿದರೋ ಏನೋ! ಜನರೊಡನೆ ಬೆರೆತು ಅವರ ಕಷ್ಟಗಳ ಪ್ರತ್ಯಕ್ಷ ಪರಿಚಯ ಮಾಡಿಕೊಳ್ಳಲು ಈ ಸಂಚಾರಗಳು ಕೈಕೊಳ್ಳಲ್ಪಡುತ್ತವೆ, ಮಂತ್ರಿಗಳ ವಿನೋದಕ್ಕಾಗಿ ಅಲ್ಲ. ಮಂತ್ರಿಗಳ ಇಂಥ ಸಂಚಾರಗಳಿಂದ ಬಹುಜನಸಮಾಜಕ್ಕೆ ಏನೊಂದೂ ಪ್ರಯೋಜನ ದೊರೆತಿಲ್ಲವಾದ್ದರಿಂದಲೇ ಹೊನ್ನಾವರದ ವಕೀಲರು ತಮ್ಮ ತೀರ್ಮಾನ ಮಾಡಿರಬೇಕು. ಮುಖ್ಯ ಮಂತ್ರಿಗಳು ಅವರನ್ನು ಕರೆಯಿಸಿಕೊಂಡು, ಅವರ ಹೇಳಿಕೆಯನ್ನೂ ಕೇಳಿಕೊಂಡು, ತಮ್ಮ ಮನೋಗತ ಅವರಿಗೆ ತಿಳಿಸಿದ್ದರೆ ಅದು ಮುಖ್ಯಮಂತ್ರಿ-ಸ್ಥಾನಕ್ಕೆ ಶೋಭಿಸುತ್ತಿತ್ತು. ಮುಂಬಯಿಯ ಮಂತ್ರಿಗಳ ಅರ್ಹತೆಯ ಬಗ್ಗೆ ಮುಂಬಯಿ ಕ್ರಾನಿಕಲ್ ಪತ್ರಿಕೆಯೂ "ಟೈಮ್ಸ" ಪತ್ರಿಕೆಯೂ ಅಸಮಾಧಾನ ಪ್ರಕಟಿಸಿವೆ. "ಕ್ರಾನಿಕಲ" ಪತ್ರಿಕೆಯು "Deeds, not words" (ಮಾತು ಬೇಡ, ಕೃತಿ ಬೇಕು) ಎಂಬುದಾಗಿ ಒಂದು ಪ್ರಧಾನ ಲೇಖವನ್ನು ಬರೆದು ಕೊಂಗ್ರೆಸ ಪ್ರಧಾನರೆಲ್ಲ ಮಾತಿನ ಮಲ್ಲರೆಂದು ಆ ಪತ್ರಿಕೆಯ ಅಂಬೋಣ. ಮುಂಬಯಿಯ "ಟೈಮ್ಸ"ಕರ್ತರು "Co-operation the key to the National Recovery" ಎಂಬ ತಲೆ-ಬರಹದ ಲೇಖದಲ್ಲಿ ಈಗಿನ ಪ್ರಧಾನರ ನಡಾವಳಿಯನ್ನು ಯಾವ ಧಾಟಿಯಾಗಿ ಬಣ್ಣಿಸಿದ್ದಾರೆ! ಜನರು ಸರಕಾರದೊಡನೆ ಸಹಕರಿಸಬೇಕೆಂದು ಮಂತ್ರಿಗಳು ಮಾಡುತ್ತಿರುವ ವಿನಂತಿಯನ್ನು ಅನುಲಕ್ಷಿಸಿ ಆ ಪತ್ರಿಕೆ ಹೇಳುತ್ತದೆ: "That there is need for co-operation, all except champions of disruption, agree but co-operation does not derive from mental and physical submission to the dictates of a particular group — it grows and flourishes by collaboration which means the adjustment of views and executive practices to the widest possible common denominator of agreed action in pursuit of specific purposes" (ದೇಶದಲ್ಲಿ ಒಡಕು ಹುಟ್ಟಿಸಬೇಕೆಂಬವರನ್ನು ಬಿಟ್ಟರೆ ಉಳಿದವರೆಲ್ಲ ಸಹಕಾರದ ಆವಶ್ಯಕತೆಯನ್ನು ಒಪ್ಪುತ್ತಾರೆ. ಆದರೆ ಒಂದು ವಿಶಿಷ್ಟ ಸಂಗಡದ ಆಜ್ಞೆಗಳನ್ನು ಕಾಯಿಕ ಮತ್ತು ಮಾನಸಿಕ ವಿಧೇಯತೆಯಿಂದ ಪಾಲಿಸುವದು ಸಹಕಾರವಲ್ಲ! ವಿಶಿಷ್ಟ ಗುರಿಗಳ ಸಾಧನೆಗಾಗಿ ಬಹುಜನಸಮಾಜದ ಅಭಿಪ್ರಾಯಗಳನ್ನು ತಿಳಕೊಂಡು ಸ್ವಂತ ಅಭಿಪ್ರಾಯಗಳನ್ನೂ ಆಡಳಿತೆಯ ಕ್ರಮಗಳನ್ನೂ ಲೋಕಾಭಿಪ್ರಾಯಕ್ಕೆ ಸರಿಪಡಿಸಿಕೊಂಡು ಹೋಗುವ ಕ್ರಮವನ್ನನುಸರಿಸಿದರೆ ಮಾತ್ರ ಸಹಕಾರದ ಉತ್ಕರ್ಷವಾಗುತ್ತದೆ) "ಟೈಮ್ಸ" ಕರ್ತರು ಹೊಡೆಗಳಲ್ಲಿ, ಮುಖ್ಯ ಪ್ರಧಾನರು ತಿರಸ್ಕಾರ ಮಾಡಬಹುದಾದಂಥ ಜನರಲ್ಲ. ಕೊಂಗ್ರೆಸ ಪ್ರಧಾನರು ತಾವೇ ಬುದ್ಧಿಶಾಲಿಗಳೆಂದೂ, ಜನತಾಸೇವೆಯ ಪೂರಾ ಮಕ್ತೆ ತಮ್ಮದೆಂದೂ ಆಕ್ಷೇಪಕರೆಲ್ಲ ಜನತೆಯ ದ್ರೋಹಿಗಳೆಂದೂ, ಅವರು ಒಂದು ವಾದದವರ ಇಲ್ಲವೆ ಅಶಾಂತಿ ಜನಕರ ಪಕ್ಷಪಾತಿಗಳೆಂದೂ ಹೇಳಿ ಸ್ವೈರ ವರ್ತನೆ ಮಾಡತೊಡಗಿದ್ದರಿಂದಲೇ ಈಗಿನ ದುರವಸ್ಥೆಯಾಗಿದೆ. ಹೊನ್ನಾವರದ ವಕೀಲರು ನಿರ್ಭಿಡೆಯಿಂದ ವಸ್ತುಸ್ಥಿತಿಯನ್ನು ತಮ್ಮ ಗಮನಕ್ಕೆ ತಂದ ಬಗ್ಗೆ ಮುಖ್ಯ ಮಂತ್ರಿಗಳು ಅವರಿಗೆ ಕೃತಜ್ಞತೆ ಸಲ್ಲಿಸುವ ಬದಲು, ಇಸ್ಪೇಟು ಆಡುವ ನಿರುದ್ಯೋಗಿ ಜನರೆಂದು ಅವರನ್ನು ಸಂಬೋಧಿಸಿ ತುಚ್ಛೀಕರಿಸಿದ್ದು ಅನುಚಿತವೆಂದೇ ಹೇಳಬೇಕು. ಮುಖ್ಯ ಮಂತ್ರಿಗಳು ಈ ಪರಿ ತಮ್ಮ ಹೊಣೆಯನ್ನರಿಯದೆ ವರ್ತಿಸಿದ್ದು ನಿಜವಾಗಿಯೂ ವಿಷಾದಕರ.

ಶ್ರೀ|| ಮಲ್ಲನಗೌಡರ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಏನೊಂದೂ ಆದರವಿಲ್ಲೆಂದು ಮೇಲೆ ಹೇಳಿದೆಯಷ್ಟೆ! ಅದಕ್ಕೆ ಕಾರಣಗಳುಂಟು. ನಮ್ಮ ಜಿಲ್ಲೆಯನ್ನು ಮೂಲೆಗೊತ್ತಲಿಕ್ಕೆ ಈ ಮಂತ್ರಿಗಳು ಅನೇಕ ರೀತಿಯಿಂದ ಪ್ರಯತ್ನಪಟ್ಟಿದ್ದಾರೆ. ಶ್ರೀ|| ಖೇರರು ಮೊನ್ನೆಯ ಸಂಚಾರದ ಕಾಲಕ್ಕೆ ಯಲ್ಲಾಪುರದಲ್ಲಿ ಭಾಷಣ ಮಾಡುವಾಗ ಶ್ರೀ|| ಮಲ್ಲನಗೌಡರ ಕಡೆ ಬೆಟ್ಟು ಮಾಡಿ "ನಿಮ್ಮ ಮಂತ್ರಿಗಳಿಗೆ ನಾವು ಕೇಳಿದ್ದನ್ನು ಕೊಡುತ್ತಲಿದ್ದೇವೆ! ವ್ಯಾಪಾರ ಕೊಲೇಜು ಕೊಟ್ಟಿದ್ದೇವೆ, ಬೇಸಾಯದ ಕೊಲೇಜು ಕೊಟ್ಟಿದ್ದೇವೆ, [illegible] ಕೊಲೇಜು ಕೊಟ್ಟಿದ್ದೇವೆ, ಆಯುರ್ವೇದ ಕೊಲೇಜು ಕೊಟ್ಟಿದ್ದೇವೆ, ವೈದ್ಯಕದ ಕೊಲೇಜನ್ನು ಕೊಟ್ಟಿದ್ದೇವೆ!" ಎಂದು ಹೇಳಿದ್ದುಂಟು. ಶ್ರೀ|| ಮಲ್ಲನಗೌಡರ ಬೇಡಿಕೆಗಳನ್ನೆಲ್ಲ ಮಾನ್ಯಮಾಡಿರುವದರಿಂದ ನಮ್ಮ ಜಿಲ್ಲೆಯು ಉತ್ಕರ್ಷವಾಗಿದೆ ಎಂದು ಶ್ರೀ|| ಖೇರರು ತಿಳಿದಿರಬಹುದು. ಆದರೆ ತಾವು ಕೊಟ್ಟ ಈ ದಾನಗಳಲ್ಲಿ ಒಂದು ದಾನವೂ ಕಾನಡಾ ಜಿಲ್ಲೆಗೆ ಒದಗಿಲ್ಲೆಂದು ಅವರು ಅರಿಯಲ್ಲವೇನೋ! ಅವರು ಕೊಟ್ಟ ಎಲ್ಲ ಕೊಲೇಜುಗಳೂ ಸಂಸ್ಥೆಗಳೂ ಧಾರವಾಡ ಜಿಲ್ಲೆಯ ಪಾಲಿಗೇ ಹೋಗಿವೆ! ವ್ಯಾಪಾರ ಕೊಲೇಜು ಹುಬ್ಬಳ್ಳಿಯ ಪಾಲಿಗೆ ಹೋಯಿತು! ಬೇಸಾಯದ ಕೊಲೇಜಿಗೆ ಧಾರವಾಡದಲ್ಲೇ ಅನುಕೂಲ ವಿಶಾಲ ಸ್ಥಳ ದೊರೆಯಿತು! ಪ್ರಯೋಗ ಶಾಲೆಯ ಅನುಕೂಲತೆಯಿರುವದರಿಂದ ವನವಿದ್ಯೆಯ ಫಾರೆಸ್ಟ ಕಾಲೇಜೂ ಧಾರವಾಡದಲ್ಲೇ ಉಳಿಯಿತು! ಜಂಗಲ ವಿದ್ಯೆಯ ಅಭ್ಯಾಸ ಮಾಡುವ ಸಂಸ್ಥೆಯು ನಮ್ಮ ಜಂಗಲ ಜಿಲ್ಲೆಯಲ್ಲೇ ಇರುವದು ಒಳಿತೆಂಬ ವಿಚಾರ ಕೂಡ ನಮ್ಮ ಜಿಲ್ಲೆಯ ಅಭಿಮಾನಿಗಳೆಂದು ಮುಖ್ಯ ಪ್ರಧಾನರಿಂದ ಹೊಗಳಲ್ಪಟ್ಟ ಶ್ರೀ|| ಪಾಟೀಲರಿಗೆ ಹೊಳೆಯಲೊಲ್ಲದು! ಆಯುರ್ವೇದದ ಮಹಾವಿದ್ಯಾಲಯವಾದರೂ ನಮ್ಮ ಜಿಲ್ಲೆಯೊಳಗೆ ಬರಬಹುದಿತ್ತು. ಯಾಕೆಂದರೆ, ನಮ್ಮ ಜಿಲ್ಲೆಯ ವನಗಳಲ್ಲಿ ಗಿಡಮೂಲಿಕೆಗಳು ವಿಶೇಷವಿರುವದರಿಂದ ಅವುಗಳ ಶೋಧ ಮತ್ತು ಅಭ್ಯಾಸ ಮಾಡಲು ಒಳ್ಳೆ ಅನುಕೂಲವಿತ್ತು. ಆದರೆ ಅದು ಕೂಡ, ಕಾಡುಪಶುಗಳ ಭೀತಿಯಿಂದಲೋ ಏನೋ, ನಮ್ಮ ಜಿಲ್ಲೆಗೆ ಬರಲಿಲ್ಲ! ಪ್ರಯೋಗ ಶಾಲೆಯ ಅನುಕೂಲತೆ ಇದ್ದಲ್ಲಿ ಕೊಲೇಜು, ಕೊಲೇಜು ಇದ್ದಲ್ಲಿ ವಿದ್ಯಾಲಯ ಹೀಗೆ ಒಂದಕ್ಕೊಂದು ಕೂಡಿಸಿ ಮಾಲೆ ಪೋಣಿಸುತ್ತ ಹೋದರೆ, ನಮ್ಮ ಜಿಲ್ಲೆಯೊಳಗೆ ಎಂದೂ ಯಾವದೇ ಸಂಸ್ಥೆ ಬರುವ ಭೀತಿಯಿಲ್ಲ! ಚಿಕ್ಕಪುಟ್ಟ ಸಂಸ್ಥೆಗಳನ್ನು ಸ್ಥಾಪಿಸುವಲ್ಲೂ ಕೂಡ ಕೊಂಗ್ರೆಸ ಮಂತ್ರಿಗಳು ನಮ್ಮ ಜಿಲ್ಲೆಯನ್ನು ಉಪೇಕ್ಷಿಸುತ್ತಿದ್ದಾರೆ. ನಮ್ಮ ಜಿಲ್ಲೆಯೊಳಗೆ ಚಳಿಜ್ವರದ ಬಾಧೆ ಹೆಚ್ಚಿದ್ದರೂ ಮಲೇರಿಯಾ ಪ್ರಯೋಗದ ಕೇಂದ್ರ ಕಚೇರಿಯು ನಮ್ಮ ಜಿಲ್ಲೆಯಿಂದ ಧಾರವಾಡಕ್ಕೇ ಸ್ಥಳಾಂತರಿಸಲ್ಪಡುತ್ತಿದೆ! ಹುಲೇಕಲ್ಲ ಗ್ರಾಮದ ನೆರೆಹೊರೆಯಲ್ಲಿ ಕಟ್ಟಡಗಳಿಲ್ಲೆಂದೂ ಪ್ರಯೋಗಶಾಲೆಯ ಅನುಕೂಲತೆಯಿಲ್ಲೆಂದೂ ಹೇಳಿ, ಹುಲೇಕಲ್ಲದಲ್ಲಿ ತೆರೆಯಬೇಕೆಂದು ಪ್ರಾಂತಿಕ ಸರಕಾರವು ನಿರ್ಧರಿಸಿದ ಬೇಸಾಯ ಮತ್ತು ವನ-ಸಂಶೋಧನದ ಶಾಲೆಯನ್ನು ಕೂಡ ಧಾರವಾಡಕ್ಕೇ ಒಯ್ಯಬೇಕೆಂದು ನಮ್ಮ ಜಿಲ್ಲೆಯ ಅಭಿಮಾನಿಗಳಾದ ಶ್ರೀ|| ಮಲ್ಲನಗೌಡರು ತೀರ್ಮಾನಿಸಿದ್ದಾರೆ! ನಮ್ಮಲ್ಲಿ ವಾಹನ-ಸೌಕರ್ಯವಿಲ್ಲೆಂದೂ, ವಸತಿಗೃಹಗಳ ಅನುಕೂಲತೆಗಳಿಲ್ಲೆಂದೂ ಹೇಳಿ ಶಿಕ್ಷಕರ ತರಬೇತಿಯ ಕೊಲೇಜನ್ನು ಕೂಡ ಬೆಳಗಾಂವ ಜಿಲ್ಲೆಯ ಗೋಕಾಕಕ್ಕೆ ಒಯ್ದಿದ್ದಾರೆ! ಈ ಪ್ರಕಾರ ನಮ್ಮ ಜಿಲ್ಲೆಯ ಹಗೆ ಸಾಧಿಸುವ ಶ್ರೀ|| ಮಲ್ಲನಗೌಡರ ಅರ್ಹತೆಯ ಬಗ್ಗೆ ನಮ್ಮ ಜನರು ಆದರ ತೋರಿಸುವ ಬಗೆ [illegible]? ಶ್ರೀ|| ಖೇರರು ಈ ಪರಿಸ್ಥಿತಿಯನ್ನು ಪರಾಂಬರಿಸದೆ ಹೋದದ್ದು ಶೋಚನೀಯ. ([illegible])

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್" ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಪರಊರಿನ್ನವರಿಗೆ ವರ್ಷಕ್ಕೆ ೩-೧೦-೦
" ೬ ತಿಂಗಳಿಗೆ ೧ ೧೦-೦
ಬಿಡಿ ಸಂಚಿಕೆಗೆ ೦-೧-೦
ವರ್ಗಣಿಯು ಮುಂಗಡವಾಗಿ ಸಲ್ಲತಕ್ಕದ್ದು

Reg. No. B 1270. Monday, 7-3-1949.

ಕಾನಡಾವೃತ್ತ

ವರ್ಷ ೪೦] THE KANARA NEWS. [ಸಂಚಿಕೆ ೩೭

ಕುಮಟಾ - ಸೋಮವಾರ, ತಾ ೭—೩—೧೯೪೯

ಜಾಹೀರಾತುಗಳ ದರ.
ಕೈವಲ್ಯದಲ್ಲಿ ಸಾಲಿಗೆ ... ತಿಂಗಳು
... ಸಾಲಿಗೆ ... ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಕರಾರು
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವುದು

ಶ್ರೀಮತಿ ಸರೋಜಿನಿಯ ಸ್ವರ್ಗಾರೋಹಣ.

ಭಾರತದ ಕೋಗಿಲೆಯೆಂದು ದೇಶ ವಿದೇಶಗಳ ಲ್ಲಿ ಕೀರ್ತಿ ಸಂಪಾದಿಸಿದ ಮತ್ತು ಕಳೆದ ೪೦ ವರ್ಷಗಳಿಂದ ಹಿಂದುಸ್ಥಾನದ ಸ್ವಾತಂತ್ರ್ಯ ಸಂಗ್ರಾಮದಲ್ಲೂ ರಾಜಕಾರಣದಲ್ಲೂ ಸ್ವಯಂಸ್ಫೂರ್ತಿಯಿಂದ ಬೆಳಗುತ್ತಿದ್ದ ಶ್ರೀಮತಿ ಸೌ|| ಸರೋಜಿನಿ ನಾಯುಡು ಇವರು ಕಳೆದ ಮಂಗಳವಾರ ರಾತ್ರಿ ೩|| ಘಂಟೆಯ ಸುಮಾರಿಗೆ ಆಕಸ್ಮಿಕವಾಗಿ ನಿಧನ ಹೊಂದಿದರೆಂದು ಸಮಾಧಿಸಲು ಅತ್ಯಂತ ಖೇದವಾಗುತ್ತಿದೆ. ಇದೇ ಕಳೆದ ಫೆಬ್ರುವರಿ ತಾ ೧೩ನೇಗೆ ದೇವಿ ಸರೋಜಿನಿಯವರು ತಮ್ಮ ವಯಸ್ಸಿನ ೭೦ನೇ ವರುಷದಲ್ಲಿ ಪದಾರ್ಪಣ ಮಾಡಿದ್ದರು. ಅಂದು ಅವರಿಗೆ ದೀರ್ಘಾಯು ರಾರೋಗ್ಯ ಬಯಸಿ ಶುಭ-ಸಂದೇಶ ಕಳಿಸಿದ ಯಾವತಸಿಗೂ ಅವರು ಇಷ್ಟು ಬೇಗ ಭಾರತದ ಕರ್ಮಭೂಮಿಯನ್ನು ಬಿಟ್ಟು, ಸ್ವರ್ಗದ ಪುಣ್ಯ ಭೂಮಿಯನ್ನು ಸೇರುವರೆಂಬ ಸ್ವಪ್ನ ಸಹ ಬಿದ್ದಿದ್ದಿಲ್ಲ. ಇದರಿಂದ ಅವರ ಆಕಸ್ಮಿಕ ನಿಧನದ ವಾರ್ತೆ ಕೇಳಿದಾಗ ಸಮಸ್ತ ಭಾರತೀಯರಿಗೆ ಸಿಡಿಲು ಬಡಿದಂತಾಯಿತೆಂದರೆ ತಪ್ಪಾಗುವಂತಿಲ್ಲ.

ದೇವಿ ಸರೋಜಿನಿಯವರು ೧೯೪೭ನೇ ಇಸವಿಯ ಆಗೋಸ್ತ ತಾ ೧೫ರಿಂದ ಯುಕ್ತ ಪ್ರಾಂತದ ಪ್ರಾಂತಾಧಿಪರಾಗಿದ್ದರೆಂಬುದನ್ನು ಓದುಗರು ಬಲ್ಲರು. ಅಂಥ ಸ್ಥಾನದಲ್ಲಿ ನೇಮಿಸಲ್ಪಟ್ಟಿದ್ದರೂ ಅವರು ಆ ಅಧಿಕಾರದ ಹೊಣೆಯನ್ನು ಸ್ವೀಕರಿಸಿ, ಅದನ್ನು ಯಶಸ್ವಿಯಾಗಿಯೂ ಸರ್ವಸಮ್ಮತವಾಗಿಯೂ ನಿರ್ವಹಿಸಿ, ನಿತಾಂತ ಲೋಕಾದರವನ್ನು ಸಂಪಾದಿಸಿದ್ದರು. ಕಳೆದ ವಾರದ ಪ್ರಾರಂಭಕ್ಕೆ ಪ್ರಯಾಗದಲ್ಲಿರುವ ದಿವಂಗತ ಕಮಲಾ ಹೆಸರು ರುಗ್ಣಾಲಯದಲ್ಲಿ ನೆಹರೂ ಕುಟುಂಬದವರು ಅವರ ಸ್ಮಾರಕವಾಗಿ ಒಂದು ವಿಭಾಗವನ್ನು ತೆರೆಯುವ ಸಮಾರಂಭವೊಂದು ನಡೆಯಿತು. ಆ ಸಮಾರಂಭಕ್ಕಾಗಿ ಭಾರತದ ಸರ್ವಾಧಿಪತಿಗಳಾಗಿರುವ ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯರು ಪ್ರಯಾಗಕ್ಕೆ ಹೋಗಿದ್ದರು. ಅವರನ್ನು ಸ್ವಾಗತಿಸಿ ಸತ್ಕಾರ ಮಾಡಬೇಕೆಂತ ಪ್ರಾಂತದ ಅಧಿನಾಯಿಕೆಯಾದ ಸರೋಜಿನಿ ದೇವಿಯು ಪ್ರಯಾಗದಲ್ಲಿರಬೇಕಿತ್ತು. ಆದರೆ ಅವರು ವಾರ ಕ್ಕೆ ಮುಂಚೆ ತಮ್ಮ ಮೊಮ್ಮಗ ಪ್ರವಾಸದಲ್ಲಿ ಗಿರುವ ಡಾ|| ಬಿಧನಚಂದ್ರ ರಾಯರು ದೇವಿಯವರ ಸ್ಥಿತಿಯನ್ನು ಪರೀಕ್ಷಿಸಿ ಅವರಿಗೆ ಸಂಪೂರ್ಣ ವಿಶ್ರಾಂತಿ ತಕ್ಕೊಳ್ಳಬೇಕೆಂದು ಸಲಹೆ ಕೊಟ್ಟಿದ್ದರು. ಆದ್ದರಿಂದ ಶ್ರೀಮತಿಯವರು ಲಖನೌದ ಸರಕಾರೀ ಭವನದಲ್ಲೇ ಉಳಿದು, ಸರ್ವಾಧಿಪತಿಗಳ ಸ್ವಾಗತ-ಸತ್ಕಾರದ ಪೂರ್ಣ ಜವಾಬ್ದಾರಿಯನ್ನು ಮಂತ್ರಿಗಳಾದ ಪಂ|| ಗೋವಿಂದವಲ್ಲಭ ಪಂತರಿಗೆ ಒಪ್ಪಿಸಿದ್ದರು. ಮತ್ತು ತಮ್ಮ ವೈಯಕ್ತಿಕ ಪ್ರತಿನಿಧಿಗಳಾಗಿ ರಾಜಕುಮಾರನನ್ನ ಕಳಿಸಿಕೊಟ್ಟಿದ್ದರು. ಸೋಮವಾರ- ಮಂಗಳವಾರ ಶ್ರೀಮತಿಯವರಿಗೆ ತಲೆ-ಶೂಲಿಯು ಬಹಳ ಕಷ್ಟ ಕೊಟ್ಟಿತು. ಮಂಗಳವಾರ ಸಂಜೆ ರಾಜವೈದ್ಯರು ತೀವ್ರವೊಂದು ಉಪಚಾರ ಮಾಡಿದ ಮೇಲೆ ಆ ತಲೆ-ಶೂಲಿಯು ಕಡಿಮೆಯಾಗಿ ರಾತ್ರಿ ೧೧ ಘಂಟೆಗೆ ಅವರಿಗೆ ಚಲೋ ನಿದ್ದೆ ಬಿತ್ತು. ೩ ಘಂಟೆ ರಾತ್ರಿಗೆ ಅವರಿಗೆ ಪುನಃ ಎಚ್ಚರವಾಯಿತು. ಆಗ ಅವರಿಗೆ ಒಂದು ಕೆಮ್ಮು ಬಂತಂತೆ. ಆ ಕೆಮ್ಮೇ ಅವರ ಪ್ರಾಣಜ್ಯೋತಿಯನ್ನು ನಂದಿಸಿಬಿಟ್ಟಿತು. ನಿಧನದ ಸಮಯದಲ್ಲಿ ಓರ್ವ ದಾದಿಯ ವಿನಹ ಆಸನ್ನರೊಳ್ ಶ್ರೀಮತಿಯವರ ಒಲಿಯಲ್ಪಟ್ಟಿದ್ದಿಲ್ಲ. ಕುಮಾರಿ ಪದ್ಮಜೆಯೂ ಅವಳ ತಂಗಿ ಲೀಲಾಮಣಿಯೂ ಪ್ರಯಾಗದಲ್ಲಿದ್ದರು. ಮಗಂದಿರಾದ ಡಾ|| ಜಯಸೂರ್ಯ ನಾಯುಡು ಇವರೂ ಪತಿ ದೇವರಾದ ಪ.... (ಡಾ||) ಎಮ್. ಗೋವಿಂದ ರಾಜಲು ನಾಯುಡು ಇವರೂ ಹೈದರಾಬಾದದಲ್ಲಿದ್ದರು. ಶ್ರೀಮತಿಯವರ ನಿಧನದ ವಾರ್ತೆ ಮುಂಜಾನೆ ೫ಕ್ಕೆ ಪ್ರಯಾಗದಲ್ಲಿ ತಿಳಿಯಿತು. ಕೂಡಲೇ ಅವರ ಕುಮಾರಿಗಳೂ, ಸರ್ವಾಧಿಪತಿಗಳೂ, ಪಂ|| ನೆಹರು ಮತ್ತು ಪಂ|| ಗೋವಿಂದ ವಲ್ಲಭ ಪಂತರೂ, ಆ ಕಾಲದಲ್ಲಿ ಯೋಗಾಯೋಗದಿಂದ ಪ್ರಯಾಗದಲ್ಲಿದ್ದ (ಹಿಂದಿನ ಸರ್ವಾಧಿಪತಿಗಳ ಪೈಕಿ ಗಂಗ ಳಾದ) ಲಾರ್ಡ ಮೌಂಟಬೆಟನ್ ರೊಡನೆ ಅವರ ಪುತ್ರಿ ಪಮೇಲಾ ಮೌಂಟಬೆಟನ್ನರೂ ವಿಮಾನದಿಂದ ಲಖನೌಕ್ಕೆ ಹೋದರು. ಹೈದರಾ-ಬಾದದಿಂದ ಡಾ|| ಜಯಸೂರ್ಯರೂ ವಿಮಾನದಿಂದ ಲಖನೌಕ್ಕೆ ತೆರಳಿದರು. ಪ್ರಕೃತಿ ಅಸ್ವಾಸ್ಥ್ಯದಿಂದ ಪತಿ ನಾಯುಡುರವರು ಮಾತ್ರ ಪ್ರಯಾಣವನ್ನು ಕೈಕೊಳ್ಳಲಿಲ್ಲ. ಅಂತು ಬುಧವಾರ ಸಂಜೆ ೪ಕ್ಕೆ ಸರಕಾರಿ ಭವನದಿಂದ ಶ್ರೀಮತಿಯವರ ಕಳೇಬರದ ಸ್ಮಶಾನಯಾತ್ರೆ ರಾಜಮರ್ಯಾದೆಯಿಂದ ಹೊರಟಿತು. ಲಕ್ಷಾವಧಿ ಜನರು ಈ ಮೆರವಣಿಗೆಯಲ್ಲಿ ಸೇರಿದ್ದರು. ಸಂಜೆ ೬ರ ಸುಮಾರಿಗೆ ಪವಿತ್ರ ಗೋಮತೀ ನದಿಯ ತೀರದಲ್ಲಿ, ಶ್ರೀಮತಿಯವರ ದೇಹದ ವಿಧಿವತ್ ಅಂತ್ಯಸಂಸ್ಕಾರ ಜರುಗಿತು, ಮತ್ತು ಭಾರತವನ್ನು ಬೆಳಗಿಸುತ್ತಿದ್ದ ಒಂದು ತೇಜಸ್ವಿ ತಾರೆಯು ಪಂಚ ಮಹಾಭೂತಗಳಲ್ಲಿ ವಿಲೀನವಾಯಿತು.

ಭಾರತಮಾತೆಯ ಕೀರ್ತಿ-ಸೌಭಾಗ್ಯ ಬೆಳಗಿಸಿದ ಮಹಿಳಾ-ಮಣಿ

ಶ್ರೀ|| ಸರೋಜಿನೀ ದೇವಿಯ ಚರಿತ್ರೆ ಬಹಳ ಅದ್ಭುತವಾದ್ದಾಗಿದೆ. ಇವರ ತಂದೆಯವರಾದ ಬಾಬು ಅಘೋರನಾಥ ಚಟ್ಟೋಪಾಧ್ಯಾಯರು ಬಹುಭಾಷಾ ಕೋವಿದ ಬಂಗಾಲಿ ಬ್ರಾಹ್ಮಣರು. ನಿಜಾಮ ರಾಜ್ಯದೊಳಗಿನ ವಿದ್ಯಾ ಇಲಾಖೆಯನ್ನು ಸಂಘಟಿಸುವದಕ್ಕಾಗಿ ಹಿಂದಿನ ನಿಜಾಮರು ಅವರನ್ನು ನಿಯುಕ್ತಿ ಮಾಡಿಕೊಂಡಿದ್ದರು. ಅವರ ಪತ್ನಿ ಶ್ರೀ|| ವರದ ಸುಂದರಮ್ಮನವರೂ ಕೂಡ ವಿದ್ಯಾಸಂಪನ್ನರಿದ್ದರು. ಬಂಗಾಲಿ ಭಾಷೆಯಲ್ಲಿ ಹಲವು ಕವನಗಳನ್ನು ಅವರು ರಚಿಸಿದ್ದರು. ಇಂತಹ ವಿದ್ವಾಂಸ ದಂಪತಿಗಳ ಹೊಟ್ಟೆಯಲ್ಲಿ ಹುಟ್ಟಿದ ಪ್ರಥಮ ಅಪತ್ಯವೇ ಸರೋಜಿನಿ ದೇವಿಯವರು. ದೇವಿಯವರ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಹೈದರಾಬಾದದಲ್ಲೇ ಪೂರ್ಣವಾಗಿ, ಪ್ರಾಯದ ೧೨ನೇ ವರುಷದಲ್ಲಿ ಅವರು ಮದ್ರಾಸ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಈ ಕಾಲದಲ್ಲೇ ಅವರ ಕಾವ್ಯರಚನೆಗೆ ಆರಂಭ ಹಾಕಿತ್ತೆನ್ನಲಾಗಿದೆ. ಒಂದು ದಿನ ಅವರು ಬೀಜಗಣಿತದ ಉದಾಹರಣೆಗಳನ್ನು ಬಿಡಿಸುತ್ತಿರುವಾಗ ಅಂತಃಸ್ಫೂರ್ತಿಯಿಂದ ಒಂದು ಇಂಗ್ಲಿಶ ಕವಿತೆಯನ್ನು ರಚಿಸಿದರಾಗಿ ಹೇಳುತ್ತಾರೆ. ಅವರ ಆ ಜನ್ಮಸಿದ್ಧ ಕವಿತ್ವ ನೋಡಿ ವಿದ್ವಾಂಸರು ಸಹ ಮೋಹಿತರಾದರು. ಮುಂದೆ ೧೬ನೇ ವರುಷ ಪ್ರಾಯದಲ್ಲಿ ಸರೋಜಿನಿಯವರು ಉಚ್ಚ ಶಿಕ್ಷಣ ಪಡೆಯುವದಕ್ಕಾಗಿ ವಿಲಾಯತಿಗೆ ಹೋದರು. ಕೆಲ ಕಾಲ ಲಂಡನ್ನಿನ ಒಂದು ಕೊಲೇಜಿನಲ್ಲೂ, ಕೆಲ ಕಾಲ ಕೇಂಬ್ರಿಜದೊಳಗಿನ ಒಂದು ಕೊಲೇಜಿನಲ್ಲೂ ಅವರು ಓದಿದರು. ಆದರೆ ಕೊಲೇಜ ಅಭ್ಯಾಸದ ಬಗ್ಗೆ ಅವರು ಅಷ್ಟು ಆಸ್ಥೆಯನ್ನು ತೋರಿಸಲಿಲ್ಲ. ಕಾವ್ಯ-ರಚನೆಯು ಅದಾಗಲೇ ಅವರ ಲಕ್ಷ್ಯ ಸೆಳೆದಿತ್ತು. ಈ ತರುಣಿಯ ಕಾವ್ಯ-ಪ್ರತಿಭೆ ಕಂಡು ವಿಖ್ಯಾತ ಇಂಗ್ಲಿಶ ಕವಿಗಳಿಬ್ಬರು ಮುಗ್ಧರಾಗಿ, ಇಂಗ್ಲಿಶ ಪಕ್ಷಿಗಳನ್ನು ಕುರಿತು ಕಾವ್ಯ ರಚಿಸುವದರ ಬದಲು ಭಾರತೀಯ ವಿಷಯಗಳ ಮೇಲೆ ಕಾವ್ಯರಚನೆ ಮಾಡಿ ಭಾರತೀಯ ಸಂಸ್ಕೃತಿಯನ್ನು ಪಾಶ್ಚಾತ್ಯರಿಗೆ ತಿಳಿಹೇಳುವ ಪ್ರಯತ್ನ ಮಾಡಬೇಕಾಗಿ ಬೋಧಿಸಿದರೆಂದು ತಿಳಿಯುತ್ತದೆ. ಶ್ರೀ|| ನಾಯುಡುರವರಂತವರೂ ಅವರ ಮಾತಿಗೊಪ್ಪಿ ಮುಂದೆ ತಮ್ಮ ಕವಿತ್ವವನ್ನೆಲ್ಲ ಭಾರತದ ಸನ್ನಿವೇಶಗಳನ್ನು ಬೆಳಗಿಸುವದರಲ್ಲೇ ವಿನಿಯೋಗಿಸಿದರು. ೧೮೯೮ರಲ್ಲಿ ಅವರು ಭಾರತಕ್ಕೆ ತಿರುಗಿ ಬಂದು ಸಾಮಾಜಿಕ ನಿರ್ಬಂಧಗಳನ್ನು ಲೆಕ್ಕಿಸದೆ, ವಿಜಾತೀಯರಾದ ಆದರೆ ತಮ್ಮ ಮನಸ್ಸಿಗೆ ಒಪ್ಪಿದ ಡಾ|| ಗೋವಿಂದರಾಜಲು ನಾಯುಡುರವರೊಡನೆ ಲಗ್ನವಾದರು. ಈ ದಂಪತಿಗಳ ಸಂಸಾರ ಸುಖದಿಂದ ಸಾಗಿತು. ಅವರಿಗೆ ಇಬ್ಬ ಗಂಡು ಮಕ್ಕಳೂ ಇಬ್ಬ ಹೆಣ್ಣುಮಕ್ಕಳೂ ಹುಟ್ಟಿದರು

ಈ ಕಾಲದಲ್ಲಿ ಸರೋಜಿನಿಯವರ ಕಾವ್ಯರಚನೆಯ ಕೆಲಸ ಸರಾಗವಾಗಿ ಸಾಗಿತ್ತು. ರಾಜಕಾರಣದ ಅಭ್ಯಾಸವೂ ನಡೆದಿತ್ತು. ಆಗಲೇ ದಿವಂಗತ ಗೋಪಾಲಕೃಷ್ಣ ಗೋಖಲೆಯವರು ಈ "ಕೋಗಿಲೆ"ಯು ಭಾರತದ ಕೀರ್ತಿಯನ್ನು ಉಜ್ವಲಗೊಳಿಸುವರೆಂಬ ಭವಿಷ್ಯವನ್ನು ಪ್ರಕಟವಾಗಿ ವರ್ತಿಸಿದ್ದರು. ೧೯೧೦ರ ನಂತರ ಸರೋಜಿನಿಯವರು ರಾಜಕಾರಣದಲ್ಲಿ ಪ್ರವೇಶ ಮಾಡಿದರು, ಮತ್ತು ತಮ್ಮ ವಾಕ್ಚಾತುರ್ಯದಿಂದಲೂ, ಹೃದಯಸ್ಪರ್ಶಿ ಭಾವನಾವ್ಯಾಪ್ತಿ, ಕರ್ಣಾನಂದಕರ ಭಾಷಣಗಳಿಂದಲೂ ಸಾರ್ವಜನಿಕ ಸಭೆ-ಸಮ್ಮೇಳನಗಳಲ್ಲೂ ರಾಜಕೀಯ ಪರಿಷತ್ತುಗಳಲ್ಲೂ ಶೀಘ್ರವೇ ಪ್ರಮುಖ ಸ್ಥಾನ ಪಡೆದರು. ತಮ್ಮ ವಿಶಾಲ ಮತ್ತು ಉದಾರ ವಿಚಾರಗಳಿಂದ ಸಕಲ ಪಕ್ಷೀಯರ ಮನಸ್ಸನ್ನೂ ಆಕರ್ಷಿಸಿದರು. ೧೯೧೮ರಲ್ಲಿ ಮೊಂಟ-ಫರ್ಡ್ ಸುಧಾರಣೆಗಳ ವಿಚಾರ ಮಾಡುವದಕ್ಕಾಗಿ ಕಾಂಜೀವರಮ್‌ದಲ್ಲಿ ಕೂಡಿದ ಮದ್ರಾಸ ಪ್ರಾಂತದ ವಿಶೇಷ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾಗುವ ಮಾನ ಶ್ರೀಮತಿಯವರಿಗೆ ಸಿಕ್ಕಿತ್ತು. ಈ ಪರಿಷತ್ತಿನಲ್ಲಿ ದಿವಂಗತ ಎನಿ ಬೇಝಂಟಮ್ಮನವರ ಪಕ್ಷಕ್ಕೂ ದಿವಂಗತ ಸತ್ಯಮೂರ್ತಿಯವರ ಉದಯೋನ್ಮುಖ ತರುಣರ ಪಕ್ಷಕ್ಕೂ ನಡೆದ ದ್ವಂದ್ವವನ್ನು ಶ್ರೀಮತಿಯವರು ಚಾತುರ್ಯದಿಂದ ಬಗೆಹರಿಸಿದ ಕಥೆ ಅಜರಾಮರವಿದೆ. ಈ ಪರಿಷತ್ತಿನಲ್ಲೇ ಸರೋಜಿನಿಯವರ ಕಾವ್ಯರಚನೆಯ ಮುಕ್ತಾಯವಾಯಿತೆಂದು ಹೇಳಬಹುದು. ಮುಂದಿನ ಆಯುಷ್ಯದಲ್ಲಿ ಅವರು ಕವಿತೆ ಬರೆದದ್ದು ಕಾಣುವದಿಲ್ಲ. ಅವರ ಕಾವ್ಯ-ಸ್ಫೂರ್ತಿಯೆಲ್ಲ, ಪಂ|| ನೆಹರುರವರು ನೊಂದು ನುಡಿದಂತೆ, ಕಾಂಗ್ರೆಸ್ಸಿನ ರಾಜಕಾರಣಕ್ಕೂ ಸ್ವಾತಂತ್ರ್ಯ-ಸಂಗ್ರಾಮದ ಜಂಜಾಟಕ್ಕೂ ಕಾವ್ಯಮಯ ಸ್ವಾರಸ್ಯವನ್ನೂ ಸೌಂದರ್ಯವನ್ನೂ ಕೊಡುವದರಲ್ಲೇ ವ್ಯಯವಾಯಿತು. ೧೯೨೦ರಲ್ಲಿ ಮಹಾತ್ಮರು ಕಾಂಗ್ರೆಸ್ಸಿನ ನಾಯಕತ್ವವನ್ನು ವಹಿಸಿಕೊಂಡ ಮೇಲೆ ದೇವಿಯವರು ಮಹಾತ್ಮರ ನಿಷ್ಠಾವಂತ ಅನುಯಾಯಿಗಳಾಗಿ, ಕೊನೆಯವರೆಗೂ ಗಾಂಧಿ-ತತ್ವಪ್ರಣಾಲಿಯ ಪತಾಕೆಯಾಗಿ ಉಳಿದರು. ೧೯೧೯-೨೦ರಲ್ಲಿ ಶ್ರೀಮತಿಯವರು ವಿಲಾಯತಿಯಲ್ಲಿದ್ದಾಗ ಪಂಜಾಬ ಅತ್ಯಾಚಾರಗಳನ್ನೂ, ಜಾಲಿಯನವಾಲಾಬಾಗದೊಳಗಿನ ಘೋರ ನರಮೇಧದ ಕಥೆಯನ್ನೂ ಕಲ್ಲು ಕರಗುವ ಭಾಷಣಗಳನ್ನು ಕೊಟ್ಟು ವಿಲಾಯತಿಯ ಜನರ ಕಣ್ಣು ತೆರೆದಿದ್ದರು. ೧೯೨೮ರಲ್ಲಿ ಅವರು ಅಮೇರಿಕೆಗೆ ಹೋಗಿ, ಆ ದೇಶವನ್ನೆಲ್ಲ ಸುತ್ತಿ, ತಮ್ಮ ದಿವ್ಯ ವಾಣಿಯಿಂದ ಭಾರತದ ಬಗ್ಗೆ ಆ ಲೋಕದ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿದರು. ಅವರ ಈ ಉತ್ಕೃಷ್ಟ ಸೇವೆಗಾಗಿ ಭಾರತೀಯ ಜನತೆಯು ಅವರಿಗೆ ಆ ವರ್ಷ ಕಾನಪುರದೊಳಗೆ ಸೇರಿದ ಹಿಂದೀ ರಾಷ್ಟ್ರೀಯ ಸಭೆಯ ಅಧಿವೇಶನದ ಅಧ್ಯಕ್ಷಸ್ಥಾನವನ್ನಿತ್ತು ಗೌರವಿಸಿದರು. ೧೯೨೦ರಿಂದ ದೇವಿಯವರು ಅ|| ಭಾ|| ಕಾಂಗ್ರೆಸ ಕಾರ್ಯಕಾರಿ ಮಂಡಳದ ಸದಸ್ಯರಿದ್ದರು. ೧೯೩೦ರಿಂದ ೮-೯ ವರುಷ ಅವರು ಮುಂಬಯಿಯಲ್ಲುಳಿದ(?) ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾಗಿದ್ದರು. ಮಹಾತ್ಮಾಜಿಯವರು ನಡೆಸಿದ ಎಲ್ಲ ಸಂಗ್ರಾಮಗಳಲ್ಲೂ ಶ್ರೀಮತಿಯವರು ಅಗ್ರ ಭಾಗದಲ್ಲಿ ಹೋರಾಡಿ, ಹಲವು ಸಾರೆ ಸರಕಾರದ ಆತಿಥ್ಯವನ್ನೂ ಪಡೆದಿದ್ದರು. ಮಹಾತ್ಮಾಜಿಯವರ ದೀರ್ಘಕಾಲೀನ ಉಪವಾಸಗಳ ಕಾಲಕ್ಕೆ ಅವರು ಮಹಾತ್ಮರಿದ್ದಲ್ಲಿ ಧಾವಿಸಿ ಬಂದು, ಅವರ ಆರೈಕೆಯ ಭಾರವನ್ನು ಸ್ವತಃ ವಹಿಸುತ್ತಿದ್ದರು. ಆದುದರಿಂದಲೇ ಮಹಾತ್ಮರು ವಿನೋದದಿಂದ ದೇವಿಯವರಿಗೆ ತಮ್ಮ ರಕ್ಷಣಕರ್ತ್ರಿಯೆಂದು ಹೆಸರನ್ನಿಟ್ಟಿದ್ದರು. ೧೯೩೧ರಲ್ಲಿ ಶ್ರೀಮತಿಯವರು ಮಹಾತ್ಮಾಜಿಯವರ ಜೊತೆಗೆ ವಿಲಾಯತಿಗೆ ಹೋಗಿ, ಅಲ್ಲಿ ದುಂಡು ಮೇಜಿನ ಪರಿಷತ್ತಿನಲ್ಲಿ ಭಾರತೀಯ ಮಹಿಳಾಲೋಕದ ಪ್ರತಿನಿಧಿಗಳಾಗಿ ಕೆಲಸ ಮಾಡಿದ್ದರು. ೧೯೪೨ರಲ್ಲಿ ಮಹಾತ್ಮರನ್ನು ಬ್ರಿಟಿಶ ಸರಕಾರವು ಬಂಧಿಸಿ ಪುಣೆಯ ಆಗಾಖಾನರ ಬಂಗಲೆಯಲ್ಲಿ ಸೆರೆಯಿಟ್ಟಾಗ, ಶ್ರೀಮತಿ ನಾಯಡುರವರನ್ನು ಕೂಡ ಅದೇ ತುರಂಗದಲ್ಲಿಟ್ಟಿದ್ದರು. ಅವರ ಈ ದೀರ್ಘ ದೇಶಸೇವೆಯನ್ನೂ ವಿಶಾಲ-ಬುದ್ಧಿಮತ್ತೆಯನ್ನೂ, ಜಟಿಲ ರಾಜಕಾರಣವನ್ನು ಕೂಡ ಲೀಲೆಯಿಂದ ಬಿಡಿಸುವ ಅವರ ನೈಪುಣ್ಯವನ್ನೂ ಗಣನೆಗೆ ತಂದು ನೋಡಿ ಸರಕಾರವು ಅವರಿಗೆ, ಸ್ವಾತಂತ್ರ್ಯ ಪ್ರಾಪ್ತಿಯಾದೊಡನೆ, ಯುಕ್ತ-ಪ್ರಾಂತದಂತಹ ಅತಿ ದೊಡ್ಡ ಪ್ರಾಂತದ ಗವರ್ನರರನ್ನಾಗಿ ನೇಮಿಸಿದ್ದರು. ೧॥ ವರ್ಷದ ತಮ್ಮ ಕಾರಕೀರ್ದಿಯಲ್ಲಿ ಸರೋಜಿನೀ ದೇವಿಯವರು ಆ ಪ್ರಾಂತದ ಪ್ರಜೆಗಳನ್ನು ಆತ್ಮೀಯತೆಯಿಂದ ಆಕರ್ಷಿಸಿ ಅವರ ನಿತಾಂತ ಪ್ರೇಮಾದರಗಳನ್ನು ಸಂಪಾದಿಸಿದ್ದರು. ಶ್ರೀಮತಿಯವರ ಅಂತ್ಯಸಂಸ್ಕಾರ ನಡೆದಾಗ ಭಾಷಣ ಮಾಡಲೆದ್ದ ಪಂ|| ಗೋವಿಂದ ವಲ್ಲಭಪಂತರಂತಹ ಧೀರ ವೀರ ವ್ಯಕ್ತಿಗಳು ಕೂಡ, ಹೃದಯ ತುಂಬಿ ಬಂದದ್ದರಿಂದ ಮಾತಾಡಲಾಗದೆ ಕುಳಿತು ಬಿಟ್ಟರೆಂಬ ಸುದ್ದಿ ಬಂದಿದೆ. ಸಂಯುಕ್ತಪ್ರಾಂತದ ಅಧಿಕಾರಿ ವರ್ಗದಲ್ಲೂ ಜನತೆಯಲ್ಲೂ ಎಂತಹ ಸ್ಥಾನವನ್ನು ದೇವಿಯವರು ಗಳಿಸಿದ್ದರೆಂಬುದನ್ನು ಈ ಒಂದೇ ಉದಾಹರಣೆಯಿಂದ ಊಹಿಸಬಹುದಾಗಿದೆ. ಶ್ರೀಮತಿಯವರಿಗೆ ನಾಡಿನ ಮೂಲೆ ಮೂಲೆಗಳಲ್ಲಿ, ವಿದೇಶಗಳಲ್ಲಿ ಕೂಡ, ಇಂದು ಸ್ವಕೀಯರೂ ಪರಕೀಯರೂ ಶ್ರದ್ಧಾಂಜಲಿಗಳನ್ನರ್ಪಿಸುತ್ತಿದ್ದಾರೆ. ಇಂತಹ ನಿರುಪಮ ಮಹಿಳಾರತ್ನವನ್ನೂ ಸತ್ಪುತ್ರಿಯನ್ನೂ ಕಳಕೊಂಡಿರುವ ಹಿಂದಮಾತೆಗೆ ಆಗಿರುವ ದುಃಖಾತಿಶಯವನ್ನು ಬಣ್ಣಿಸಲು ಅಸದಳ. ಮಹಾತ್ಮರು ಕಣ್ಮರೆಯಾದ ೧೩ ತಿಂಗಳಲ್ಲಿ, ಅವರ ಪಟ್ಟಶಿಷ್ಯೆಯಂತಿದ್ದ ಮತ್ತು ಅವರ ಮಾರ್ಗವನ್ನು ಭಾರತೀಯರಿಗೆ ಅಧಿಕಾರವಾಣಿಯಿಂದ ಚೆನ್ನಾಗಿ ಬೋಧಿಸಲು ಸಮರ್ಥರಿದ್ದ ದೇವಿ ಸರೋಜಿನಿಯವರು ಕೂಡ ನಮ್ಮನ್ನು ಅಗಲಿ ಹೋದುದು ನಮ್ಮ ದುರ್ದೈವವೇ ಸರಿ!

ಸ್ಥಾನಿಕ ವೃತ್ತಾಂತ

ಕುಮಟಾ— ಈಗ ಚಳಿ ಕಡಿಮೆಯಾಗಿದೆ, ಈಗ ಉಷ್ಣತೆ ಹೆಚ್ಚಾಗುತ್ತಿದೆ.

ಶ್ರೀ ಚಿತ್ರಾಪುರ ಮಠದ ಶ್ರೀಮದಾನಂದಾಶ್ರಮ ಸ್ವಾಮಿಗಳು ಕಳೆದ ವಾರ ಇಲ್ಲಿ ಆಗಮಿಸಿ, ೩ ದಿನ ಮೊಕ್ಕಾಂ ಮಾಡಿ, [illegible] ಭಕ್ತ-ಮಂಡಳಿಯ ಪೂಜಾದಿ ಸತ್ಕಾರಗಳ ಸ್ವೀಕಾರ [illegible] ಅನುಗ್ರಹ ಮಾಡಿ ಮರಳಿ [illegible] ಹೊರಟು ಹೋಗಿದ್ದಾರೆ.

ಇಂದಿನಿಂದ ಶಾಲೆಯ ಪರೀಕ್ಷೆಗೆ ಆರಂಭವಾಗಿದೆ.

ಹಿಂದೆ ಉಪ್ಪಿನ [illegible] ಈಗ ಉಪ್ಪು ಹುಟ್ಟಿಯಾಗಿದೆ! [illegible] ಉಪ್ಪು [illegible] ಉಪ್ಪಿನ [illegible] ಉಪ್ಪಿನ [illegible] ಉದ್ದೇಶದಿಂದ [illegible] ಗೋವೆಯಿಂದ ಉಪ್ಪು [illegible]!

ಗೋಕರ್ಣದೊಳಗಿನ ಶಿವರಾತ್ರಿ-ಜಾತ್ರೆಯು [illegible] ಗೋಕರ್ಣಕ್ಕೆ ಬಂದ ಜನರಿಗೆ [illegible] ದಿನ [illegible] ಅಧಿಕಾರಿಗಳು [illegible] ಶಿವರಾತ್ರಿಯ ಉಪವಾಸದ [illegible] ದಿನ ಉಪವಾಸ ಮಾಡಿ, [illegible] ಎಂದು ತಿಳಿಯುತ್ತದೆ.

ಕಳೆದ ಶುಕ್ರವಾರ ಶ್ರೀಮತಿ ಸರೋಜಿನಿದೇವಿ ನಾಯಡು ಅವರ ನಿಧನದ ನಿಮಿತ್ತ ಇಲ್ಲಿ ಹರತಾಳ ಆಚರಿಸಲ್ಪಟ್ಟಿತು.

ಕಳೆದ ಗುರುವಾರ ಗೋಕರ್ಣದಲ್ಲಿ [illegible] ಕಾಂಗ್ರೆಸ ಸಮಿತಿಯ [illegible] ಅಧಿಕಾರಿ [illegible] ರಾ|| [illegible] ದೇಶಪಾಂಡೆಯವರು ಅಧ್ಯಕ್ಷರಾಗಿಯೂ, ರಾ|| [illegible] ಉಪಾಧ್ಯಕ್ಷರಾಗಿಯೂ ರಾ|| [illegible] ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಕೆಲವು ದಿನಗಳಿಂದ [illegible] ಮೇಲೆ ಒಂದು ಹುಲಿಯು [illegible]. ಕಳೆದ ತಾ. ೧೪ನೇ ರಾತ್ರಿ [illegible] [illegible] ಆ ಹುಲಿಯನ್ನು [illegible] ಆ ಹುಲಿಯು [illegible] ಉದ್ದವಿತ್ತಂತೆ.

The Agricultural & Industrial Bank, Ltd.,

Regd Office, "LAXMI NIVAS Buildings",
COONDAPOOR, S Kanara.

SEASON DEPOSITS

Maturing on or before 30th June 1949 are now accepted with interest ranging from 2¼% to 3½% per annum

Every kind of Banking business transacted.

For terms etc, please apply to any of our following

Branches.

1	Coondapoor	7	Ankola	13	Sirsi
2	Mangalore	8	Bhatkal	14	Dharwar
3	Somwarpet	9	Gokarn	15	Gadag
4	Virajpet	10	Honavar	16.	Haveri
5	Shimoga	11	Karwar	17	Hubli.
6	Nagar	12	Kumta	18	Belgaum

19 BOMBAY (384-M, Jamuria House Kalbadevi Road)

ವಿವಿಧ ವಿಷಯಗಳು

ಶಿರ್ಸಿಯೊಳಗೆ ಕಾರ್ಯಕರ್ತರ ಸಭೆಯಲ್ಲಿ ನಮ್ಮ ಮುಖ್ಯ ಮಂತ್ರಿ ನಾಮ್ದಾ ಖೇರರು ಹೊಲದೊಡೆಯರ ಬಗ್ಗೆ ಸರ್ವಸಾಮಾನ್ಯವಾಗಿ ಮಾಡಿದ ವಿಧಾನಗಳು ವಿಚಾರವಂತರೆಲ್ಲರಿಗೂ ಒಪ್ಪಿಗೆಯಾಗುವಂತಿಲ್ಲ. ೧೦ ಸಾವಿರ ಎಕರೆ ಹೊಲದ ಒಡೆಯರಿಗೂ ನಮ್ಮ ಜಿಲ್ಲೆಯೊಳಗಿನ ೧-೨ ಎಕರೆ ಭೂಮಿಯುಳ್ಳ ಹೊಲದೊಡೆಯರಿಗೂ ಅವರು ಒಂದೇ ಮಾಲೆಯಲ್ಲಿ ಹಾಕಿದ್ದು ವಿಚಾರಶೀಲತೆಯು ಇಲ್ಲದ ವಿವೇಕಶಾಲಿತ್ವದ ಲಕ್ಷಣವಲ್ಲ! ಇದ್ದ ೧-೨ ಎಕರೆ ಭೂಮಿಯನ್ನು ಸಾಗುವಳಿದಾರರಿಗೆ ದಾನ ಮಾಡಿ ಬೇರೊಂದು ಉದ್ಯೋಗ ಹುಡುಕುತ್ತ ದೇಶಾಂತರಕ್ಕೋ ದ್ವೀಪಾಂತರಕ್ಕೋ ಹೊರಟು ಹೋಗುವದೊಳಿತೆಂದು ಅವರು ಮಾಡಿದ ಉಪದೇಶವು ಅವರ ಪದಕ್ಕೂ ಅಧಿಕಾರಕ್ಕೂ ಪ್ರತಿಷ್ಠೆಗೂ ಎಷ್ಟರ ಮಟ್ಟಿಗೆ ಒಪ್ಪುತ್ತದೆಂದು ಅವರೇ ತಮ್ಮ ಬಿಡುವಿನ ಹೊತ್ತಿನಲ್ಲಿ ಆಲೋಚಿಸಿ ನೋಡಬೇಕಾಗಿ ಅಪೇಕ್ಷೆಯಿದೆ. ನಮ್ಮ ಜಿಲ್ಲೆಯ ಪರಿಸ್ಥಿತಿಯು ಕೊಂಚವಾದರೂ ಪ್ರತೀತಿ ಅವರಿಗೆ ಇರುತ್ತಿದ್ದರೆ ಇಂತಹ ಮಾತು ಅವರ ಬಾಯಿಂದ ಹೊರಬೀಳುತ್ತಿದ್ದಿಲ್ಲ. ನಮ್ಮ ಜಿಲ್ಲೆಯಲ್ಲಿ ಕಾರಖಾನೆಗಳಿಲ್ಲ, ಉದ್ಯೋಗಗಳಿಲ್ಲ, ಉದ್ದಿಮೆಗಳಿಲ್ಲ- ಜನರು ತಾವು ಗಳಿಸಿದ ಗಳಿಕೆಯನ್ನು ಎಲ್ಲಾದರೂ ಅಭಿವೃದ್ಧಿಪಡಿಸಲು ತೊಡಗಿಸಿಡುವಾ ಎಂದರೆ ಭೂಮಿಯ ಹೊರತು ಅವರಿಗೆ ಬೇರೆ ಮಾರ್ಗವಿಲ್ಲ! ಈ ರೀತಿ ಜನರು ಸುರಿಸಿ ಕಷ್ಟಪಟ್ಟು ಗಳಿಸಿದ ಹಣದಿಂದ ಸಂಪಾದಿಸಿದ ಮತ್ತು ಸಂವರ್ಧಿಸಿದ ಹೊಲ ಭೂಮಿಗಳನ್ನು, ಮುಂಬಯಿಯ ಕೊಂಗ್ರೆಸ ಸರಕಾರವು ಕೈಕೊಂಡ ದೇಶೋದ್ಧಾರ (?)ದ ಯೋಜನೆಯನ್ನು ಯಶಸ್ವಿಗೊಳಿಸುವದಕ್ಕಾಗಿ, ರೈತರಿಗೆ ಧರ್ಮ ಮಾಡಿ ಬಡ ಹೊಲದೊಡೆಯರು ಬಲಿ ಚಕ್ರವರ್ತಿಯಂತೆ ಪಾತಾಳಕ್ಕೆ ಹೋಗಬೇಕೆಂದು ನಾಮ್ದಾ ಖೇರ ಸಾಹೇಬರ ಅಭಿಪ್ರಾಯವುಂಟೇನು?

* *

ಶ್ರೀ|| ಖೇರರ ಈ ಧೋರಣೆಯು ಕಮ್ಯುನಿಸ್ಟರ ಧೋರಣೆಯಂತೆ ಕಡೆಯಾಗಿರುತ್ತದೆಂಬುವದಕ್ಕೆ ಸಂದೇಹವಿಲ್ಲ. ತಮ್ಮ ರಾಜ್ಯವಾದರೆ ಎಲ್ಲರಿಗೂ ಉದ್ಯೋಗ ಸಿಗುವದು, ಎಲ್ಲರಿಗೂ ಭೂಮಿಯಲ್ಲಿ ಪಾಲು ಸಿಗುವದು ಎಂದು ಕಮ್ಯುನಿಸ್ಟರು ಹೇಳುತ್ತಾರೆ. ಆದರೂ ಕಮ್ಯುನಿಸ್ಟರ ರಾಜ್ಯವಾದಲ್ಲಿ ಯಾವ [illegible] ಸಾಯುವ ಪಲ್ಲನ ನಿರುದ್ಯೋಗಿ ಮತ್ತು [illegible] ಆಗಿ ಅಲೆದಾಡುವ ಪ್ರಸಂಗ ತಮಗೆ ಬಂದೀತು [illegible] ಸಮಾಧಾನದ ಉದ್ಗಾರಗಳನ್ನು [illegible] ಸ ತ್ರಸ್ತರಾದ ಹೊಲದೊಡೆಯರು ಉದ್ಗರಿಸುತ್ತಾರೆ. ಶ್ರೀ|| ಖೇರರ ಕೊಂಗ್ರೆಸ ರಾಜ್ಯದಲ್ಲಿ ಈ ಸಮಾಧಾನ [illegible] ತೋರುವದಿಲ್ಲ. ಒಡೆಯರು ತಮ್ಮ [illegible] ರೈತರಿಗೆ ದಾನ ಕೊಟ್ಟು ದೇಶಾಂತರಕ್ಕೆ [illegible] ಲೋಕಾಂತರಕ್ಕೆ ಹೊರಟು ಹೋಗಬೇಕೆಂ[illegible] ಶ್ರೀ|| ಖೇರರ ಮಾತಿನ ಅರ್ಥ! ತಮ್ಮ [illegible]ನಂತೆ ಔದಾರ್ಯವಂತರಾಗಿ ಹೊಲ-ಭೂಮಿ[illegible] ಮೇಲೆ ತಾಲುಕೇಪತ್ರನ್ನಿಡುವ ಹೊಲದೊಡೆ[illegible]ಗೆ ತಾವು ಉದ್ಯೋಗ ಕೊಡುತ್ತೇವೆ, ನೌಕರಿ ಕೊಡುತ್ತೇವೆ ಇಲ್ಲವೆ ನಿಮ್ಮ ಸುರಕ್ಷಿತ ಜೀವನ[illegible] ದೊರಕಿಸಿಕೊಡುತ್ತೇವೆ ಎಂಬ [illegible] ಅಭಿಪ್ರಾಯವನ್ನು ಶ್ರೀ|| ಖೇರರು ಕೊಡು[illegible] ಇಂತಹ ಸ್ಥಿತಿಯಲ್ಲಿ ಕೇಳುವದು ಕೊಂ

ಗ್ರೆಸ-ಮಂತ್ರಿಗಳ ರಾಜ್ಯಕ್ಕಿಂತಲೂ ಅವರು ತೆಗಳಿರುಳು ತೆಗಳುತ್ತಿರುವ ಕಮ್ಯುನಿಸ್ಟರ ರಾಜ್ಯವೇ ಮೇಲು ಎಂದು ತೆಗೆಯುತ್ತಿರುವ ಉದ್ಗಾರಗಳು ಅಯುಕ್ತವೆಂದ ಹೇಳುವದು ಹೇಗೆ?

* *

ಇನ್ನಿತರ ಪ್ರಾಂತಗಳಲ್ಲಿ ನಷ್ಟ ಪರಿಹಾರ ಕೊಟ್ಟು ಜಮೀನದಾರಿಯನ್ನು ನಿರ್ಮೂಲಿಸುವ ಉದ್ಯೋಗವನ್ನು ಆರಂಭಿಸಿರುತ್ತಿದ್ದರೆ, ತಾವು ನಷ್ಟಪರಿಹಾರ ಕೊಡದೆ ಸುಲಭವಾಗಿ ಜಮೀನದಾರಿಯನ್ನು ನಷ್ಟಗೊಳಿಸುವ ಮಾರ್ಗವನ್ನು ಅನುಸರಿಸಿದ್ದೇವೆಂದು ಮುಖ್ಯ ಮಂತ್ರಿಗಳು ನುಡಿದ ಮಾತುಗಳನ್ನು ಕೇಳಿದವರು ಅವರ ಗಾಂಧಿ-ಭಕ್ತಿಯ ಬಗ್ಗೆ ಕೊಂಗ್ರೆಸ ನಿಷ್ಠೆಯ ಬಗ್ಗೆ ಶಂಕೆ ಕೊಳ್ಳುತ್ತಿದ್ದಾರೆ. ಯಾರೊಬ್ಬರನ್ನು ಕಷ್ಟಕ್ಕೀಡು ಮಾಡಿ ಇಲ್ಲವೆ ನೋಯಿಸಿ ಅವರ ಆಸ್ತಿಯನ್ನು ಅಪಹರಿಸುವದು ಗಾಂಧೀಜಿಯವರ ತತ್ವಕ್ಕೆ ವಿರುದ್ಧ ಎಂದರೆ ಹಿಂಸೆಯಾಗುತ್ತದೆ. ಪರಿಹಾರ ಕೊಡದೆ ಕಸಿದುಕೊಳ್ಳುವದು ಸುಲಿಗೆಯಾಗುತ್ತದೆ. ನಿಜವಾದ ಗಾಂಧಿ-ಭಕ್ತರು ಇಂತಹ ಹಿಂಸಾಮಯ ಸುಲಿಗೆಯ ಮಾರ್ಗವನ್ನು ಎಂದೂ ಎತ್ತಿ ಹಿಡಿಯುವಂತಿಲ್ಲ. ಸಮದಿನಗಳಲ್ಲಿ ಮೇಲಾಗಿ ಕೊಂಗ್ರೆಸ್ಸು ತನ್ನ ಚುನಾವಣೆಯ ಘೋಷಣೆಯಲ್ಲಿ ಯೋಗ್ಯ ನಷ್ಟಪರಿಹಾರ ಕೊಟ್ಟು ಜಮೀನದಾರಿಯನ್ನು—ಅಂದರೆ ಸರಕಾರ ಮತ್ತು ಸಾಗುವಳಿದಾರರ ನಡುವಿನ ದಲ್ಲಾಳರನ್ನು — ನಷ್ಟಗೊಳಿಸುವುದಾಗಿ ಸ್ಪಷ್ಟವಾಗಿ ಹೇಳಿತ್ತು. ಜಮೀನದಾರರಿಗೆ ನಷ್ಟ-ಪರಿಹಾರ ಕೊಡದೆ ಅವರ ಹೊಲ ಭೂಮಿಗಳನ್ನು ಕಸಕೊಳ್ಳುವ ಆಲೋಚನೆಯನ್ನೇ ಕೊಂಗ್ರೆಸ್ಸು ಮಾಡಿದ್ದಿಲ್ಲ. ಮುಂದಾದರೂ ಮಾಡುವಂತಿಲ್ಲ. ಮಟ್ಟಿಗೆ ಮಹಾತ್ಮಾ ಗಾಂಧಿಯವರ ಬೋಧೆ ಮತ್ತು ಕೊಂಗ್ರೆಸ್ಸಿನ ತತ್ವಗಳ ಜಪವನ್ನೂ ಭಜನೆಯನ್ನೂ ಮಾಡುತ್ತಿರುವ ಶ್ರೀ|| ಖೇರರು ಮತ್ತು ಅವರ ಸಹ ಕಾರ್ಯಕರ್ತರು ಕೊಂಗ್ರೆಸ್ಸಿನ ಘೋಷಣೆಗೆ ತೀರ ವಿಸಂಗತವಿರುವ ಮತ್ತು ಗಾಂಧೀಜಿಯವರ ತತ್ವಗಳ ದೃಷ್ಟಿಯಿಂದ ಅತ್ಯಂತ ಹೇಯವಾದ ಸುಲಿಗೆಯ ಮಾರ್ಗವನ್ನು ಅವಲಂಬಿಸಿದ್ದು, ಅಂತಹ ಸುಲಿಗೆಯ ಮಾರ್ಗವನ್ನು ಒಳ್ಳೇ ಬುದ್ಧಿಚಾತುರ್ಯದಿಂದ ತಾವು ಹಿಡಿದಿದ್ದೇವೆಂದು ಹೊಗಳಿಕೊಳ್ಳಲಿಕ್ಕೂ ಮುಂದಾಗುವದು. ಇದು ಬುದ್ಧಿಚಾತುರ್ಯದ ಲಕ್ಷಣವೇ ಬುದ್ಧಿಮಾಂದ್ಯದ ಲಕ್ಷಣವೇ ಎಂಬುದನ್ನು ಓದುಗರೇ ನಿರ್ಣಯಿಸಲಿ!

* *

ಹಿಂದಿನ ನಮ್ಮ ಆಳರಸರು ಕಾನೂನು-ಮಂಡಳಗಳೊಳಗೆ ತಮಗಿರುವ ಬಹುಮತದ ಬಲದಿಂದಲೂ, ಅಧಿಕಾರದ ಪ್ರಭಾವದಿಂದಲೂ ತಮ್ಮ ಮನಸ್ಸಿಗೆ ಬಂದಂತೆ ಕರಗಳನ್ನು ಹೇರುತ್ತಿದ್ದರು ಕಾನೂನುಗಳನ್ನು ಮಾಡುತ್ತಿದ್ದರು ಆಗ ನಮ್ಮ ಪ್ರತಿನಿಧಿಗಳು ಅವರ ಈ ಸುಲಿಗೆಗೆ "Legalised Loot" ಕಾನೂನುಬದ್ಧ ಸುಲಿಗೆ ಎಂದು ಹೆಸರಿಟ್ಟು ಟೀಕಿಸುತ್ತಿದ್ದರು. ಶ್ರೀ|| ಖೇರರ ಮಂತ್ರಿ ಮಂಡಳವೂ ಕೂಡ ಅದೇ ಮಾರ್ಗವನ್ನು ಹಿಡಿದಿದೆ. ಕಾನೂನು ಮಂಡಳಗಳಲ್ಲಿ ತಮಗೆ ದೊರೆತಿರುವ ಬಹುಮತದ ಬಲದಿಂದ ಅಧಿಕಾರದ ಮದದಿಂದಲೋ ನ್ಯಾಯಾನ್ಯಾಯದ ವಿಚಾರ ಮಾಡದೆ ಒಂದು ವಿಶಿಷ್ಟ ವರ್ಗವನ್ನು ಪ್ರಸನ್ನಗೊಳಿಸುವದಕ್ಕಾಗಿ ಇನ್ನೊಂದು ವರ್ಗದ ಸುಲಿಗೆಯನ್ನು ನಡೆಸಿದ ಈ ಸುಲಿಗೆಗೂ ಬ್ರಿಟಿಶ ಆಳರಸರು ಹಿಂದೆ ನಡೆಸಿದ ಸುಲಿಗೆಗೂ ಇಷ್ಟೇನು ಅಂತರ ತೋರುವದಿಲ್ಲ! ಅದು ಪರಕೀಯರು ನಡೆಸಿದ ಸುಲಿಗೆಯಾಗಿತ್ತು, ಇದು ನಮ್ಮವರು ನಡೆಸಿದ ಸುಲಿಗೆಯಾಗಿದೆ ಇಷ್ಟೇ ಇವುಗಳೊಳಗಿನ ಅಂತರ!

* *

ಈಗ ಎಲ್ಲೆಲ್ಲಿಯೂ "ಸರ್ವೋದಯ"ದ ಮಾತು ಕೇಳಿಬರುತ್ತಿದೆ. ಮಹಾತ್ಮಾಜಿ ಸರ್ವೋದಯದ ವೇಳೆ ಕಟ್ಟಕಡೆಗೆ ತಿಳಿಸಿದ್ದರೆಂದೂ, ಆ ಸರ್ವೋದಯವನ್ನು ನಾವು ಸಾಧಿಸ ಬೇಕಾದ ಕರ್ತವ್ಯ ಉಳಿಸಿದೆ ಎಂದೂ [illegible] ಕಟ್ಟಬೇಕೆಂದು ಹೇಳಲಾಗುತ್ತಿದೆ. ನಮ್ಮ ಮುಂಬಯಿ ಸರಕಾರವೂ ಇನ್ನಿತರರಂತೆ ಸರ್ವೋದಯದ ಉಚ್ಚ ಮಾತುಗಳನ್ನಾಡುತ್ತಿದೆ. ಆದರೆ ಆ ಮಾತಿಗೆ ತಕ್ಕ ಕೃತಿ ಮಾತ್ರ ಇಲ್ಲ! ಸಕಲ, ಸಮಸ್ತರ, ಎಲ್ಲ ವರ್ಗಗಳ ಜನರ ಉದಯವನ್ನು ಅಂದರೆ ಉನ್ನತಿಯನ್ನು ಸಾಧಿಸುವದೇ ಸರ್ವೋದಯದ ಕಾರ್ಯದ ಗುರಿಯಾಗಿರಬೇಕು. ಒಂದು ವರ್ಗವನ್ನು ಹಿಂಸಿಸಿ ಇನ್ನೊಂದು ವರ್ಗದ ಉನ್ನತಿಯನ್ನು ಸಾಧಿಸಲೆತ್ನಿಸುವದು ಸರ್ವೋದಯವಾಗದು. ನಮ್ಮ ಮುಂಬಯಿ ಮಂತ್ರಿ-ಮಂಡಳದ ಧ್ಯೇಯ ಸರ್ವೋದಯವಲ್ಲ "For the greatest good of the greatest number'

ಪತ್ರಿಕಾ—ಪ್ರಕಟನೆ

ಅಟ್ಟೆಯ ಮೇಲೆ ಅಚ್ಚು ಹಾಕಿ [illegible] ಜನರ [illegible] ಈ ಅಚ್ಚು [illegible] ಅಟ್ಟೆಗೆ ಅಚ್ಚು ಹಾಕುವದು ಇಲ್ಲವೆ ಅದರ ಮೇಲೆ [illegible] ಕಳೆಯುವದು (processing) [illegible] ಮುಖ್ಯ ಉದ್ದೇಶ ಅವರ ಪತ್ರದ ಅಚ್ಚು ಹಾಕಿದ ಅಟ್ಟೆ [illegible] ಸಂಗ್ರಹ [illegible] ಅದನ್ನು [illegible] ಕರ್ತವ್ಯ [illegible] ಅಟ್ಟೆಯ ಕೇಳಿ ಅಚ್ಚೆಯ [illegible] ಅಚ್ಚು [illegible] ಅದನ್ನು [illegible] "ಕೇಳಿ-ಅಟ್ಟೆ" [illegible] ಅದರಿಂದ ಮುಂಬಯಿ ಪ್ರಾಂತದಲ್ಲಿ ಅದನ್ನು [illegible] ಮಾಡಲಾಗುವದಿಲ್ಲ, [illegible] ಅಚ್ಚು ಹಾಕಿದ ಅಟ್ಟೆಯನ್ನು [illegible] ಅದರ [illegible] ಪ್ರಾಂತಗಳಿಗೆ ಅದನ್ನು [illegible] ಪ್ರಾಂತದ [illegible] ಅಟ್ಟೆ [illegible] ಸಂಗ್ರಹದ [illegible] ಅದನ್ನು [illegible] (freely) [illegible] (ಪ್ರಕಟನೆ)

(ಮೆಚ್ಚಿದ್ದ ಜನರ ಮೆಚ್ಚಿದ್ದು ಏತಕ ಧಕ್ಕವಿದೆ ನಮ್ಮ ಗುರಿ) ಎಂಬ ಅವರ ವಾಕ್ಯವೇ ಅವರ ಧ್ಯೇಯದ ರೂಪವನ್ನು ಸ್ಪಷ್ಟವಾಗಿ ತೋರಿಸುತ್ತಿದೆ ಬಹುಸಂಖ್ಯಾಕರ ಹಿತಸಾಧನೆಯೇ ಅವರ ಗುರಿಯಾಗಿದೆ ಆ ಬಹುಸಂಖ್ಯಾಕರ ಹಿತ ಮಾಡಲೆಂದು ಅಲ್ಪಸಂಖ್ಯಾಕರ ನಾಶಗ ಮಾಡಲಿಕ್ಕೆ ಅವರು ಹೇಸ ವಂತಿಲ್ಲಂಬುದು ಈ ಅವರ ಉದ್ದೇಶ-ವಾಕ್ಯವು (motto) ತೋರ್ಪಡಿಸುತ್ತಿದೆ ಮಹಾತ್ಮರ ಹತ್ಯೆಯಿಂದ ರಕ್ತವುಬ್ಬಿಂದ ಶ್ರೀ, ಮನೋಹರ ಛಾವರು ಮಹಾತ್ಮರ ಸರ್ವೋದಯದ ಧ್ಯೇಯ ಕ್ಕೂ ಬಹುಸಂಖ್ಯಾಕರ ಹಿತಸಾಧನೆಯ ಧ್ಯೇಯಕ್ಕೂ ಬಹಳ ಅಂತರವುಂಟೆಂದು ಪ್ರತಿಪಾದಿಸಿದ್ದರು ಸರ್ವೋದಯದ ವಿಚಾರದಲ್ಲಿ ಬಹು-ಸಂಖ್ಯಾಕರು ಅಲ್ಪಸಂಖ್ಯಾಕರು ಎಂಬ ಭೇದ ಮಾಡಬರುವದಿಲ್ಲ ಬಹು ಸಂಖ್ಯಾಕರ ಹಿತ ಸಾಧನೆಯು ಘೋರ ಅಪಕೃತ್ಯಕ್ಕೆ ಎಡೆಗೊಡಬಹುದು, ಈ ಧೋರಣವನ್ನು ಪುರಸ್ಕರಿಸಿದರೆ ಸಮಾಜದಲ್ಲಿ ಬಹುಸಂಖ್ಯಾಕರು ಅಲ್ಪಸಂಖ್ಯಾಕರು ಎಂಬ ವರ್ಗಗಳುಂಟಾಗಿ ಅನಾಚಾರ ತಲೆದೋರುವ ಸಂಭವವುಂಟಾಗುತ್ತದೆಂದು ಶ್ರೀ|| ಛಾವರೆಯವರು ಸಿದ್ಧಪಡಿಸಿದ್ದಾರೆ ಶ್ರೀ|| ಛಾವರು ಒಂದು ಕಡೆ ಸರ್ವೋದಯದ ಮಾತುಗಳನ್ನಾಡುತ್ತ ಇನ್ನೊಂದು ಕಡೆ ಬಹುಸಂಖ್ಯಾಕರ ಹಿತ ಮಾಡಲೆಂದು ಅಲ್ಪಸಂಖ್ಯಾಕರನ್ನು ದಮಿಸುತ್ತಿದ್ದಾರೆ ಅವರ ಉಕ್ತಿಗೂ ಕೃತಿಗೂ ಮೇಳ ಬೀಳುವದಿಲ್ಲ

* *

ಕನ್ನಡ ನುಡಿ ಮತ್ತು ಸಂಸ್ಕೃತಿಗಳ ಉತ್ಕರ್ಷಕ್ಕಾಗಿ ಪ್ರತ್ಯೇಕ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಯೋಜನೆಯಾಗಿದ ಮುಂಬಯಿಯ ಎಸೆಂಬ್ಲಿಯಲ್ಲಿ ಆ ಬಗ್ಗೆ ಒಂದು ಮಸೂದೆ ಬರಲಿದೆ ಕನ್ನಡ ನುಡಿಯ ಏಳಿಗಾಗಿ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸಲು ಯಾರದೂ ಅಡ್ಡಿಯಿಲ್ಲ ಆದರೆ ಈ ವಿಶ್ವ-ವಿದ್ಯಾಲಯದ ಸ್ಥಾಪನೆಗಿರಾಜಕಾರಣದ ಹಿನ್ನೆಲೆ ಕಾಣುವ ಧೋರಣೆ ಗಡಿ ನೇಯುವಿದ ಭಾಷಾನುಗುಣ ಪ್ರಾಂತ ನಿರ್ಮಾಣದ ಪ್ರಶ್ನೆ ತೀರ ವಿವಾದಾಸ್ಪದವಾದದ್ದು ಅಂತಹ ಪ್ರಾಂತಗಳ ನಿರ್ಮಾಣವಾದಲ್ಲಿ ಅಖಂಡ ಹಿಂದುಸ್ಥಾನವು ಪುನಃ ಖಂಡಿತವಾಗುವ ಭಯವಿದೆ ಈಗಾಗಲೇ ನಾಡಿನಲ್ಲಿ ಅಂಥ ಲಕ್ಷಣಗಳು ದೃಷ್ಟಿಗೆ ಬೀಳುತ್ತಿವೆ ಆದರಿಂದಲೇ ಪ್ರಾಂತ-ನಿರ್ಮಾಣದ ಸಮಸ್ಯೆ ಮುಂದೂಡಲ್ಪಟ್ಟಿದೆ ಈ ಕರ್ನಾಟಕವೆಂದು ಸಂಬೋಧಿಸಲ್ಪಡುವ ಪ್ರದೇಶದಲ್ಲಿ ಕನ್ನಡಿಗರ ಜೊತೆಗೆ ಇತರ ಸಮಾಜಗಳುಂಟು ನಮ್ಮ ಕಾನಡಾ ಜಿಲ್ಲೆಯೂ ಬೆಳಗಾಂವಿ ಜಿಲ್ಲೆಯೂ ಕರ್ನಾಟಕ ವಿಭಾಗದಲ್ಲಿ ಸೇರಿಸಿಡಿಯಾಗಿವೆ ಇವರಡೂ ಜಿಲ್ಲೆಗಳಲ್ಲಿ ಕೊಂಕಣಿ, ಮರಾಠಿ ಭಾಷೆಗಳ ಪ್ರಚಲಿತವಿರುವ ಪ್ರದೇಶಗಳಿವೆ ಇವನ್ನೆಲ್ಲ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರ-ಕಕ್ಷೆಯಲ್ಲಿ ಬಲಾತ್ಕಾರದಿಂದ ಸೇರಿಸಬೇಕೆಂದು ಧಾರವಾಡಿಗಳ ನಿಗ್ರಹವುಂಟು ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರ ಕಕ್ಷೆಯಲ್ಲಿ ಸಂಪೂರ್ಣ ಬೆಳಗಾಂವಿ, ಕಾರವಾರ ಜಿಲ್ಲೆಗಳನ್ನು ಸೇರಿಸಬೇಕಾಗಿ ಕರ್ನಾಟಕ ಏಕೀಕರಣವಾದಿಗಳು ಹಟ ಹಿಡಿದಿದ್ದಾರೆ ಕನ್ನಡ ನಾಡಿನಲ್ಲಿನ ಕನ್ನಡ ಸಂಸ್ಥೆಗಳಿಗೆ ಒಳಪಡದ ಜನರ ಶಿಕ್ಷಣ ಸಂಸ್ಥೆಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಸೇರಿಸುವದು ಸರ್ವಥಾ ಅನುಚಿತ ಈ ಜನರ ಶಿಕ್ಷಣವನ್ನು ನಿಯಂತ್ರಿಸಲು ಕರ್ನಾಟಕದ ವಿಶ್ವವಿದ್ಯಾಲಯಕ್ಕೆ ಅಧಿಕಾರವಿರಬಾರದು. ಶಿಕ್ಷಣ ಸಂಸ್ಥೆಗಳು ಸ್ವತಂತ್ರ ವಿಚಾರ ಮಾಡಿ, ಸಾಧಕ-ಬಾಧಕ ಸಂಗತಿಗಳನ್ನು ತೂಗಿ ನೋಡಿ ತಮಗೆ ಇಷ್ಟ ಕಂಡಂತ ಕರ್ನಾಟಕ ವಿಶ್ವವಿದ್ಯಾಲಯಕ್ಕಾಗಲಿ ಮುಂಬಯಿ ವಿಶ್ವವಿದ್ಯಾಲಯಕ್ಕಾಗಲಿ ಸೇರಬಹುದೆಂಬ ಸ್ವಾತಂತ್ರ್ಯವನ್ನು ಕೊಡುವದು ಸಯುಕ್ತಿಕ ಮುಂದೆ ಕರ್ನಾಟಕದ ರಾಜ್ಯವಾದ ಮೇಲೆ ಶಿಕ್ಷಣ-ಸಂಸ್ಥೆಗಳ ನಡಾವಳಿಯಿಂದ ಆ ರಾಜ್ಯದ ರಾಜಕಾರಣ್ಯ ಕುಂದು ಬಂದೀತೆಂಬ ಭೀತಿಯುಂಟಾಗುತ್ತಿದೆ. ಆ ಕಾರಣದಲ್ಲಿ ಎಲ್ಲ ಶಿಕ್ಷಣ ಸಂಸ್ಥೆಗಳನ್ನು ಕರ್ನಾಟಕ ವಿಶ್ವವಿದ್ಯಾಲಯವು ಒಪ್ಪಿಕೊಳ್ಳಬಹುದು. ಇದೀಗಲೇ ಕೊಂಕಣಿಗರ ಇಲ್ಲವೆ ಮರಾಠಿಗರ ಸಂಸ್ಥೆಗಳನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಸಬೇಕೆಂದು ಹಟ ಹಿಡಿದು ವೈಮನಸ್ಯ ಬೆಳೆಸುವದು ಸರ್ವದಾ ಶ್ರೇಯಸ್ಕರವಲ್ಲ

* *

ಕಳೆದ ಸೋಮವಾರ ಹಿಂದ ಸರಕಾರದ ಅರ್ಥಮಂತ್ರಿ ಡಾ|| ಜ್ಞಾನ ಮಥಾಯಿಯವರು ೧೯೪೯-೫೦ನೇ ಸಾಲಿನ ಕೇಂದ್ರಸರಕಾರದ ಆಯವ್ಯಯಗಳ ಅಂದಾಜ-ಪತ್ರಿಕೆಯನ್ನು ಕೇಂದ್ರ ಕಾನೂನ ಮಂಡಳದಲ್ಲಿ ಮಂಡಿಸಿದ್ದಾರೆ ೧೯೪೮-೪೯ರಲ್ಲಿ ಅಂದರೆ ಇದೇ ತಿಂಗಳಲ್ಲಿ ಕೊನೆಗೊಳ್ಳುವ ವರುಷದಲ್ಲಿ ಭಾರತ ಸರಕಾರದ ಅಂತು ಉತ್ಪನ್ನವು ೩೫೫|| ಕೋಟಿ ರೂ ಮತ್ತು ವೆಚ್ಚ ೩೫೭|| ಕೋಟಿ ರೂ ಬರುವದೆಂದು ಹಿಂದಣ ಅರ್ಥ ಮಂತ್ರಿಗಳು ಅಂದಾಜ ಮಾಡಿದ್ದರು ಆದರೆ ಪ್ರತ್ಯಕ್ಷ ಆಯವು ೩೩೩|| ಕೋಟಿ ರೂ ಮತ್ತು ಪ್ರತ್ಯಕ್ಷ ವ್ಯಯ ೩೩೯|| ಕೋಟಿ ರೂ. ಬರುವದೆಂದು ಸದ್ಯದ ಅರ್ಥ ಮಂತ್ರಿಗಳು ತಿಳಿಸಿ, ಹೊಸ ವರುಷದಲ್ಲಿ ೩೨೨ ಕೋಟಿ ರೂಪಾಯಿ ಖರ್ಚು ಬರುವದೆಂದು ಲೆಕ್ಕ ಹಾಕಿದ್ದಾರೆ ಉತ್ಪನ್ನದ ಬದಿಯಲ್ಲಿ ಅವರು ಕೆಲವೊಂದು ಕರಗಳ ಪ್ರಮಾಣದಲ್ಲಿ ಕೆಲವೊಂದು ಕಡಿತ ಮಾಡಿ, ಮತ್ತು ಕೆಲವು ಹೊಸ ತೆರಿಗೆಗಳನ್ನು ಹೇರಿ ೩೩೩|| ಕೋಟಿ ರೂ ಗಳಷ್ಟು ಉತ್ಪನ್ನ ಮಾಡಬೇಕೆಂದು ಸೂಚಿಸಿದ್ದಾರೆ ಕರ ಹೇರಿಕೆಯ ಅವರ ಸೂಚನೆಗಳು ಇಂತಿವೆ.— (೧) ಈಗ ೨ ಬಿಲ್ಲಿಗೆ ಸಿಗುತ್ತಿರುವ ಟಪಾಲುಕಾಡಿನ ಬೆಲೆ ೩ ಬಿಲ್ಲಿ ಮಾಡಬೇಕು, ಅಂಚೆ ಕವರಿನ ಬೆಲೆ ೧|| ಆಣೆ ಇದ್ದದ್ದು ೨ ಆಣೆ ಮಾಡಬೇಕು (೨) ಗಿರಣಿಗಳಲ್ಲಿ ತಯಾರಾಗುವ ಜನಸು ಬಟ್ಟೆಯ ಮೇಲೆ ರೂ ೧ಕ್ಕೆ ೪ ಆಣೆಯಂತೆ ವಸೂಲಾಗುತ್ತಿದ್ದ ಕರವನ್ನು ೫ ಆಣೆಯಂತೆ ವಸೂಲ ಮಾಡಬೇಕು, ಮಧ್ಯಮ ಮತ್ತು ಉರುಟು ಬಟ್ಟೆಯ ಮೇಲಿನ ಕರವನ್ನು ಅರ್ಧಾಂಶದಷ್ಟು ತಗ್ಗಿಸಬೇಕು, (೩) ನೋಟುಬುಕ ಬಣಿಯಾರಗಳ ಸೂಂಕವನ್ನು ಇಮ್ಮಡಿ ಮಾಡಬೇಕು. (೪) ಸಿಗರೇಟುಗಳ ಮೇಲೆ ೧೦೦ಕ್ಕೆ ೧೫ರಂತೆ ನಿಯಾರ್ತ ತೆರಿಗೆ ಹೇರಬೇಕು. (೫) ಪೆಟ್ರೋಲಿನ ಮೇಲೆ ಗೆಲನ್ನಿಗೆ ೧೫ ಆಣೆಯಂತೆ ವಸೂಲಾಗುತ್ತಿದ್ದ ಕರವನ್ನು ೧೨ ಆಣೆಗಳಿಗೆ ಏರಿಸಬೇಕು, (೬) ವಿದೇಶಗಳಿಂದ ಬರುವ ಅಡಿಕೆಯ ಪ್ರತಿ ರತ್ತಲಿಗೆ ೫ ಆಣೆಯ ಬದಲು ೭|| ಆಣೆಗಳಂತೆ ಆಯಾತಕರ ವಸೂಲ ಮಾಡಬೇಕು (೭) ಸಕ್ಕರೆಯ ಹಂಡ್ರೆಡ್ವೇಟಿಗೆ ೮ ರೂ ಇರಂತೆ ವಸೂಲಾಗುತ್ತಿದ್ದ ಸುಂಕವನ್ನು ರೂ ೩||ಕ್ಕೆ ಏರಿಸಬೇಕು (೮) ಕಾಗದ, ರಾಜನ ಸಾಮಾನು, ನೂಲು, ಕೃತ್ರಿಮ ರೇಶಿಮೆ, ಕಟ್ಟಿಗೆ ಸಾಮಾನು, ಮಣ್ಣಿನ ಪಾತ್ರೆಗಳು, ಲೋಹದ ಆಭರಣಗಳು ಇವುಗಳ ಮೇಲಿನ ಆಯಾತ ತೆರಿಗೆಯನ್ನೂ ಏರಿಸಬೇಕು ಈ ರೀತಿ ಕರಗಳಲ್ಲಿ ಏರಿಳಿತ ಮಾಡಿದಲ್ಲಿ ಆಯವ್ಯಯಗಳ ಬಾಬಿ ಗೂಡಿ, ೫೫ ಲಕ್ಷ ರೂ ಉಳಿತಾಯುವ ಗುವದೆಂದು ಅರ್ಥ ಮಂತ್ರಿಗಳ ಹೇಳುತ್ತಾರೆ

ಪತ್ರಿಕಾ-ಪ್ರಕಟನೆ.

ಇದೇ ಕಳೆದ ೩೧-೫-೧೯೪೮ರಿಂದ ೩೧-೧೦-೧೯೪೮ರ ಪರ್ಯಂತದ ಬಟ್ಟೆಗಳ ಕಂಟ್ರೋಲ ಕೂಪನುಗಳನ್ನು ಹೊರತು, ಮ್ಯಾಂಚೆಸ್ಟರಿನ ಎಲ್ಲ ಜನರು ನೂಲಿನ ವ್ಯಾಪಾರಿಗಳು ತಾ. ೩೦-೧೧-೧೯೪೮ರ ವರೆಗೆ ಪರಿಪೂರ್ಣಗೊಳಿಸಿ ಇಲ್ಲದ ಉಳಿದ ಜವಳಿ. ಮತ್ತು ನೂಲಿನ ಸಂಗ್ರಹಗಳನ್ನು ನಿಯಂತ್ರಿತ ಅಧಿಕ ನಿಯಂತ್ರಣ ಧೋರಣೆಗಳ ತಕಸೀಲ್ ಅಧಿಕಾರಿಗಳಿಗೆ ಒಪ್ಪಿಸಬೇಕು. ಅನುಕ್ರಮವಾಗಿ ೧೯೪೮ರ ಡಿಸೆಂಬರ ೨೨ ರ ಶಿಲ್ಕು—ಸಂಗ್ರಹದ ಪೂರಾ ವಿವರ ಪತ್ರಿಕೆಗಳು ಸರಕಾರಕ್ಕೆ ಸಾದರಗೊಳಿಸಲ್ಪಟ್ಟಿದ್ದವು ಅವುಗಳನ್ನು ಒಪ್ಪಿಸಿದವರ ಬಳಿ ಶಿಲ್ಕು ಉಳಿದಿದ್ದ ವಸ್ತುಗಳನ್ನು, ಈ ಪರಿಸ್ಥಿತಿಯಲ್ಲಿ ಈಗ ಜಾರಿಗೆ ಶಿಲ್ಕು—ಇರುವಿಕೆಯ ವಿವರ ಪತ್ರಿಕೆಗಳನ್ನು ಕಳುಹಿಸುವದರ ಕುರಿತು ಈ ಶಿಲ್ಕು—ಸಂಗ್ರಹ ವಿಲೆ ಮಾಡುವದರ ಸಂಬಂಧವಾಗಿ ಅವರ ವಿಚಾರ ಮಾಡಿ, ಈ ಕೆಳಗಿನ ನಿರ್ಣಯಗಳನ್ನು ಕೈಕೊಂಡಿದ್ದಾರೆ—

೧ ಈ ಕೆಳಗಿನ ಜಾತಿಗಳ ಬಟ್ಟೆಯನ್ನು ನಿಯಂತ್ರಣದಿಂದ ಹೊರಪಡಿಸಿ, ಅವುಗಳ ಸಂಗ್ರಹವುಳ್ಳವರು ಇವನ್ನು ಅನಿರ್ಬಂಧ ಮಾರಬಹುದಾಗಿ ತಿಳಿಸಲಾಗಿದೆ:—

(೧) ಟೇಪ, (೨) ಟೀಕಿನ್ಸ್, (೩) ಛತ್ರಿ ಕೊಡೆಯ ಬಟ್ಟೆ, (೪) ಕೆನ್ವಾಸ, (೫) ಸೇರು ಮುಂತಾದ್ದು ನೆಟಿಂಗ ಬಟ್ಟೆ, (೬) ಹಂದಿ ಬಟ್ಟೆ (Rags), (೭) ಲಂಬ (೮) ಗೇಜ, (೯) ದಿಂದೇಣ ಅಂಬೆ, (೧೦) ನೇವಾರ, (೧೧) ನೆಕ್ಕ—ಟಾಯ್ ಪಟ್ಟಿ, (೧೨) ಟುವಾಲುಗಳು (ಟುವಾಲತೋಡಿಯಲ್ಲಿ ಬಳಸುವಂಥ ಬಟ್ಟೆಗಳೂ) ಎಲಾಸ್ಟಿಕ ಪಟ್ಟಿ, (೧೩) ಶರಕ್ಯೂಗಳು, (೧೪) ನಾಲ್ಕು ಬದಿಗೆ ಅಂಚು ಕಟ್ಟಿದ ಇಲ್ಲವೆ ಬೇರೆ ಬಗೆಯ ತಿನಾರೆಗಳುಳ್ಳ ಮೇಜಿನ ವಸ್ತ್ರಗಳು, (೧೫) ಕಂಬಳಿಗಳು ಇಲ್ಲವೆ ಜಾಡಿಗಳು ಮತ್ತು (೧೬) ಉಣ್ಣೆಯ ಬಟ್ಟೆಯಂತೆ ಕಾಣುವ ಸರ್ಜ ಯಾ ರಂಗಿನ ಅರವೆ ಬಟ್ಟೆಗಳು

೨ ವ್ಯಾಪಾರಿಗಳ ಶಿಲ್ಕು—ಸಂಗ್ರಹಗಳಲ್ಲಿರುವ ಎಲ್ಲ ಧೋತರಗಳನ್ನೂ, ಸೀರೆಗಳನ್ನೂ, ಅವುಗಳ ಮೇಲೆ ಬೆಲೆ ಮತ್ತು ಮುದ್ರೆಗಳನ್ನು ಹಾಕಿಸಿ, ಸರಕಾರವು ಬೇಗನೇ ತನ್ನ ವಶಕ್ಕೆ (ಬೆಲೆ ಕೊಟ್ಟು) ತೆಗೆದುಕೊಳ್ಳುವ ವ್ಯವಸ್ಥೆ ಮಾಡುವುದು.

೩ ಮೇಲೆ ೧—೨ನೇ ಕಲಮಿನಲ್ಲಿ ಹೇಳಿದ ಬಟ್ಟೆಯನ್ನು ಬಿಟ್ಟು ಉಳಿದ ಬಟ್ಟೆಯ ಸಂಗ್ರಹದ ವ್ಯವಸ್ಥೆಯ ಬಗ್ಗೆ ಹಿಂದಿನಿಂದ ತಿಳಿಸಲಾಗುವದು

ಮೇಲಿನ ಕಲಮು ೧ರಲ್ಲಿ ತಿಳಿಸಿದ ಜಾತಿಗಳ ಬಟ್ಟೆಯುಳ್ಳವರು ಮುಂದಿನ ಆಜ್ಞೆಯ ಹಾದಿ ನೋಡದೆ ಅದನ್ನು ಅನಿರ್ಬಂಧವಾಗಿ ಮಾರಬಹುದು.

ಕಲಮು ೨ರಲ್ಲಿ ಹೇಳಿರುವ (ಧೋತರಗಳು ಮತ್ತು ಸೀರೆಗಳು) ಬಟ್ಟೆಯ ಮೇಲೆ ಬೆಲೆಯ ಮುದ್ರೆಗಳನ್ನು ಹಾಕಿಸುತ್ತಿರುವ ಕ್ರಮವನ್ನು ಸರಕಾರಕ್ಕೆ ಅದನ್ನು ಒಪ್ಪಿಸಿಕೊಳ್ಳುವ ಕ್ರಮವನ್ನು ಅಂತಹ ಬಟ್ಟೆಯ ಸಂಗ್ರಹವುಳ್ಳ ವ್ಯಾಪಾರಿಗಳಿಗೆ ತಿಳಿಸಲಾಗುವದು

(ಸರಕಾರಿ ಪ್ರಕಟನೆ)

WANTED AGENTS!
FOR
" VEENA VANASPATI "
VEGETABLE GHEE.
BEST FOR COOKING CONTAINS VITAMINS.
PACKED IN ALL SIZE OF TINS.
SUPPLIED EVERYWHERE
For particulars please write to.
BOMBAY TRADING CO.,
129 A. Hill Road, BANDRA. BOMBAY, 20.

ಜಿಲ್ಲಾ ಸಮಾಚಾರ

ಭಟಕಳ— ([illegible]) [illegible]

[illegible]

ಕಾರವಾರ— [illegible]

[illegible]

[illegible]

ಭಟಕಳ ಪೇಟೆಯ ಮುಂಗಾರಿ ಭತ್ತದ ಬೆಳೆಯ ಪ್ರಕಟನೆ.

[illegible]

[illegible]

ಪರಿಶಿಷ್ಟ

[illegible]	[illegible]	[illegible]	[illegible]	[illegible]	[illegible]
(೧)	(೨)	(೩)	(೪)	(೫)	(೬)
I	[illegible] I & II, [illegible] I & II, [illegible] I & II [illegible]	[illegible]	Iನೇ [illegible]		[illegible]
	[illegible]	[illegible]	IIನೇ [illegible]		[illegible]
	[illegible]	[illegible]	IIIನೇ [illegible]		[illegible]
III	[illegible]	[illegible]	Iನೇ [illegible]		[illegible]
	[illegible]	[illegible]	IIನೇ [illegible]		[illegible]
		[illegible]	IIIನೇ [illegible]		[illegible]
IV	[illegible]	[illegible]	Iನೇ [illegible]		[illegible]
		[illegible]	IIನೇ [illegible]		[illegible]
		[illegible]	IIIನೇ [illegible]		[illegible]
V	[illegible]	[illegible]	Iನೇ [illegible]		[illegible]
		[illegible]	IIನೇ [illegible]		[illegible]
		[illegible]	IIIನೇ [illegible]		[illegible]
VI	[illegible]	[illegible]	Iನೇ [illegible]		[illegible]
		[illegible]	IIನೇ [illegible]		[illegible]
		[illegible]	IIIನೇ [illegible]		[illegible]

ಟಿಪ್ಪಣಿ — [illegible]

ಭಟಕಳ, [illegible]

L. M NAIK

[illegible], ಭಟಕಳ

[illegible]

ಜಾಹೀರ ನೋಟೀಸಿಗೆ ಉತ್ತರ.

[illegible]

ಚಿದಂಬರ ಸಾಂಬ ಹೆಗಡೆ, ಚಿತ್ರಗೇರಿ

ಜಾಹೀರ ಪ್ರಕಟನೆ.

[illegible]

N A Karnam,

[illegible]

ಶಿಕ್ಷಕರಿಲ್ಲದ ಹಿಂದೀ ಕಲಿಯಿರಿ!

ಕನ್ನಡ ಹಿಂದೀ ಸ್ವಯಂ ಶಿಕ್ಷಕ — [illegible]

[illegible]

ಹಿಂದೀ ಶಬ್ದಕೋಶಗಳು

ಹಿಂದೀ ಶಬ್ದಾರ್ಥ-ಸಾಂಗ್ರಹ — [illegible]

[illegible]

ಹಿಂದೀ ಲೋಕೋಕ್ತಿಯಾಂ — [illegible]

ರವೀಂದ್ರ ಬ್ರದರ್ಸ,

[illegible]

ಇದನ್ನು [illegible] ಕೃಷ್ಣ ಕಾನಡೆ (ಸಂಪಾದಕ) ಇವರು [illegible] ಪ್ರಕಟಿಸಿದರು

ವರ್ಗಣಿಯ ದರ
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲ ದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧ ೧೦-೦
ಬಿಡಿ ಸಂಚಿಕೆಗೆ ೦ ೧-೦
ವ್ಹಿ. ಪಿ. ಯಿಂದ ತರಿಸುವವರು
ವ್ಹಿ. ಪಿ. ವೆಚ್ಚ ಒಟ್ಟಿಗೆ ಕಳಿಸಬೇಕು
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B. 1270 Monday, 14-3-1949.

ಕಾನಡಾವೃತ್ತ

ವರ್ಷ ೩೧.] **THE KANARA NEWS.** [ಸಂಚಿಕೆ ೩೭

ಕುಮಟಾ. ಸೋಮವಾರ, ತಾ ೧೪—೩—೧೯೪೯

ಜಾಹೀರಾತುಗಳ ದರ
[illegible]
೧ ಸಲಕ್ಕೆ ೮ ಆಣೆಯಂತೆ
ವಿಶೇಷ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಕಮ್ಮಿ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು

ವಿವಿಧ ವಿಷಯಗಳು

ನಮ್ಮ ಕೆನರಾ ಜಿಲ್ಲೆಯಲ್ಲಿ, ವಿಶೇಷವಾಗಿ ಕರಾವಳಿಯ ಭಾಗದಲ್ಲಿ ದನಗಳು ಚನ್ನಾಗಿ ಬೆಳೆಯುವದಿಲ್ಲ. ಘಟ್ಟದ ಕಡೆಯಂತೆ ಹುಲ್ಲೂ ಹುಲುಸಾಗುವದಿಲ್ಲ. ಕರಾವಳಿಯ ಹವೆಯು ಅದಕ್ಕೊಂದು ಕಾರಣವಿರುತ್ತಿದ್ದರೂ, ದನಗಳ ಪೌಷ್ಟಿಕ ಆಹಾರದ ಕೊರತೆಯೂ ಮಹರ್ಘತೆಯೂ ಅದರ ಮುಖ್ಯ ಕಾರಣವಿರುತ್ತದೆ. ದನಗಳಿಗೆ ಬೇಕಾಗುವ ಹಿಂಡಿ, ಹತ್ತೀಕಾಳು, ಗೋಧಿ, ಕಡಲೆ ಮೊದಲಾದವುಗಳು ಈ ಜಿಲ್ಲೆಯಲ್ಲಿ ಹುಟ್ಟುವದಿಲ್ಲ. ಅವನ್ನು ನಾವು ಪರ-ಜಿಲ್ಲೆಗಳಿಂದಲೇ ಪಡೆಯಬೇಕಾಗಿದೆ. ಹತ್ತು ೧೨ ವರ್ಷಗಳಿಂದ ನಮ್ಮ ಜಿಲ್ಲೆಯವರಿಗೆ ಹತ್ತಿಕಾಳು ಸಿಗುವದು ಕಷ್ಟವಾಗಿದೆ. ಸಿಕ್ಕರೂ ಅದು ದುರ್ಮಿಳವಷ್ಟೇ ಅಲ್ಲ, ವಿಪರೀತ ತುಟ್ಟಿಯಾಗಿದೆ! ೨ ಮಣಗಳ ಚೀಲಕ್ಕೆ ರೂ ೩೬-೩೭ ಕೊಡಬೇಕಾಗಿದೆ! ಮುಂಬಯಿಯಲ್ಲಿ ಚೀಲದ ದರ ರೂ ೨೦ ಉಂಟಂತೆ. ಅಲ್ಲಿಂದ ಅದನ್ನು ಅನಿರ್ಬಂಧ ತರಿಸಿಕೊಳ್ಳಲು ಸ್ವಾತಂತ್ರ್ಯ ಸಿಕ್ಕರೆ ರೂ ೨೫ಕ್ಕೊಂದು ಚೀಲದಂತೆ ಮಾರಾಟ ಮಾಡಬಹುದೆಂದು ಮುಂಬಯಿ ವ್ಯಾಪಾರದ ಮಾಹಿತಿಯುಳ್ಳ ವರ್ತಕರು ಹೇಳುತ್ತಾರೆ. ಆದರೆ ಮುಂಬಯಿಯಿಂದ ಹತ್ತಿಕಾಳು ಈ ಕರಾವಳಿಯ ಮೇಲಿನ ಇನ್ನಿತರ ಪ್ರದೇಶಗಳಿಗೆ ತೊಂದರೆಯಿಲ್ಲದೆ ಸಾಗುತ್ತಿದ್ದರೂ, ನಮ್ಮ ಜಿಲ್ಲೆಯಲ್ಲಿ ಅದನ್ನು ತರಿಸಿಕೊಳ್ಳಲು ಸರಕಾರದವರ ನಿರ್ಬಂಧವಂತೆ! ಆದರಿಂದ ನಾವು ಒಂದೇ ಹುಬ್ಬಳ್ಳಿಯಿಂದ ತುಟ್ಟಿ ಬೀಳುತ್ತಿರುವ (ಹುಬ್ಬಳ್ಳಿಯಲ್ಲಿ ಒಂದು ಲಕ್ಕೆ ರೂ ೩೦ರಿಂದ ೩೩ರ ವರೆಗೆ ದರವಿದೆ) ಹತ್ತೀಕಾಳನ್ನು, ಹೆಚ್ಚಿಗೆ ಖರ್ಚಿನ ಮೋಟಾರ ಸಾಗಣೆಯ ಸಹಾಯದಿಂದ ತರಿಸಿಕೊಳ್ಳಬೇಕು. ಇಲ್ಲವೆ ನಾವು ಮಾರ್ಗದಿಂದ — ಮುಂಬಯಿಯಿಂದ ವೆಂಗುರ್ಲೆ ಇಲ್ಲವೆ ರತ್ನಾಗಿರಿಗೆಂದು ಹತ್ತಿಕಾಳು ತಂದು, ಅಲ್ಲಿಯ ಸುಂಕದ ಅಧಿಕಾರಿಗಳಿಗೆ ಪ್ರಸನ್ನಗೊಳಿಸಿ ಮತ್ತು ಅಲ್ಲಿಂದ ಹತ್ತೀಕಾಳು ಮಚ್ಚಿ ಹತ್ತಿತೆಂದು ಸುಳ್ಳು ಪ್ರಶಸ್ತಿಪತ್ರ ಪಡೆದುಕೊಂಡು ತರಿಸಿಕೊಳ್ಳಬೇಕಾಗಿದೆ! ನಮ್ಮಲ್ಲೀಗ ಹತ್ತೀಕಾಳು ಅಪರೂಪವಾಗಿರುವದರ ಕಾರಣವಿದೇ.

* * *

ಮುಂಬಯಿಯ ಹತ್ತೀಕಾಳು ನಮ್ಮ ಜಿಲ್ಲೆಯಲ್ಲಿ ಬರದಂತೆ ಸರಕಾರವು ಯಾಕೆ ನಿರ್ಬಂಧ ಹಾಕಿದೆ ಎಂಬುದನ್ನು ಕೇಳಿದರೆ ಓದುಗರು ನಗುವರು! ಮುಂಬಯಿಯ ಹತ್ತೀಕಾಳು ಕುಸು ಹೀನ ಜಾತಿಯದು. ಅದನ್ನು ನಮ್ಮಲ್ಲಿಯ ಹತ್ತಿ ಬೆಳೆಸುವ ಒಕ್ಕಲಿಗರು ಬೀಜವೆಂದು ಉಪಯೋಗಿಸಿ ಎಲ್ಲಾದರೂ ಹತ್ತಿಯ ಬೆಳೆಯನ್ನು ಹಾಳು ಮಾಡ್ಯಾರೆಂಬ ಭೀತಿಯಿಂದ ಸರಕಾರವು ಮೇಲ್ಕಾಣಿಸಿದ ನಿರ್ಬಂಧವನ್ನು ಹೇರಿರುವರೆಂದು ತಿಳಿಯುತ್ತದೆ! ನಮ್ಮ ಜಿಲ್ಲೆಯಲ್ಲಿ ಹತ್ತಿ ಬೆಳೆಯುತ್ತದೆಂದು ಸರಕಾರಕ್ಕೆ ಯಾರು ಮಾಹಿತಿ ಪೂರೈಸಿದರೆಂಬುದು ದೇವರೇ ಬಲ್ಲ! ಯಾವ ಭೂಗೋಲದ ಪುಸ್ತಕವೂ ನಮ್ಮಲ್ಲಿ ಹತ್ತಿ ಬೆಳೆಯುತ್ತದೆಂದು ಹೇಳುವದಿಲ್ಲ. ನಮ್ಮ ಜಿಲ್ಲೆಯ ಸಂಪೂರ್ಣ ಮಾಹಿತಿಯನ್ನು ಒದಗಿಸುವ "ಕೆನರಾ ಗೆಜೆಟಿಯರ" ದಲ್ಲೂ ನಮ್ಮಲ್ಲಿ ಹತ್ತಿ ಬೆಳೆಯುತ್ತದೆಂದು ಹೇಳಿಲ್ಲ. ಆದರೂ ಮುಂಬಯಿ ಸರಕಾರದ ಗರ್ಭ-ಗುಡಿಯೊಳಗಿನ ಯಾರೋ ತಜ್ಞರು ಧಾರವಾಡ ಜಿಲ್ಲೆಯನ್ನೂ ಕೆನರಾ ಜಿಲ್ಲೆಯನ್ನೂ ಒಂದಕ್ಕೊಂದು ಗಂಟು ಹಾಕಿ, ಈ ಪ್ರದೇಶದಲ್ಲಿ ಹತ್ತಿ ಬೆಳೆಯುತ್ತದೆಂದು ಸಿದ್ಧಾಂತ ಬರೆದಿಟ್ಟಿರುವರಂತೆ!! ಆ ತಜ್ಞರು ಬರೆದಿಟ್ಟ "ಪ್ರಮಾಣ ವಾಕ್ಯ" ವನ್ನು ನಂಬಿ ಸರಕಾರದವರು ನಮ್ಮ ಜಿಲ್ಲೆಯನ್ನು ಹತ್ತಿ ಬೆಳೆಯುವ ಪ್ರದೇಶದಲ್ಲಿ ಸೇರ್ಪಡೆ ಮಾಡಿದ್ದಾರೆ! ಈಗಲೂ ಮಾಡುತ್ತಿದ್ದಾರೆ! ಸರಕಾರದವರ ಈ ಭ್ರಮವನ್ನು ದೂರಪಡಿಸಲು ನಮ್ಮಲ್ಲಿಯ ಬೇಸಾಯ ಅಧಿಕಾರಿಗಳಾಗಲಿ ಬೇರೆ ಸರಕಾರಿ ಅಧಿಕಾರಿಗಳಾಗಲಿ ಮುಂದಾಗದಿದ್ದದು ಅತ್ಯಂತ ಶೋಚನೀಯ! ನಮ್ಮಲ್ಲಿ ಮುಂಬಯಿಯ ಹತ್ತಿಕಾಳು ಬರದಂತೆ ಸರಕಾರವು ನಿರ್ಬಂಧ ಹೇರಲಿಕ್ಕೆ ಈ ಭ್ರಮೆಯೇ ಕಾರಣವಾಗಿದೆ. ಜಿಲ್ಲಾಧಿಕಾರಿಗಳು ಕೂಡಲೇ ಈ ಭ್ರಮೆಯನ್ನು ಹೋಗಲಾಡಿಸಿ ಮುಂಬಯಿಯಿಂದ ಹತ್ತಿಕಾಳು ನಮ್ಮಲ್ಲಿಯ ವರ್ತಕರು ತರಿಸಿಕೊಳ್ಳದಂತೆ ಹಾಕಿರುವ ಹಾಸ್ಯಾಸ್ಪದ ನಿರ್ಬಂಧವನ್ನು ವಿಳಂಬವಿಲ್ಲದೆ ತೆಗೆದೊಗೆಯಿಸಿಕೊಳ್ಳಬೇಕು. ಇನ್ನೆರಡು ತಿಂಗಳಲ್ಲಿ ಸಮುದ್ರಮಾರ್ಗವು ಕಟ್ಟಾಗುತ್ತಿದ್ದು ಅಷ್ಟರೊಳಗೆ ನಮ್ಮ ವರ್ತಕರು ನಮಗೆ ಬೇಕಾಗುವಷ್ಟು ಹತ್ತಿಕಾಳು ತರಿಸಿಕೊಳ್ಳಲು ಅನುಕೂಲವಾಗುವಂತೆ ಸದರಿ ನಿರ್ಬಂಧವನ್ನು ಅವರು ಆದಷ್ಟು ತ್ವರೆಯಾಗಿ ರದ್ದುಗೊಳಿಸಿಕೊಳ್ಳಬೇಕು. ಅದೇ ಮೇರೆಗೆ ಹತ್ತಿಕಾಳಿನ ವ್ಯಾಪಾರಕ್ಕೆ ನಮ್ಮಲ್ಲಿಯ ವರ್ತಕರು ಪರವಾನಗಿ ಪಡೆಯಬೇಕೆಂದು ಹಾಕಿದ ಅನವಶ್ಯಕ ನಿಯಮವನ್ನು ರದ್ದುಗೊಳಿಸಿಕೊಳ್ಳಬೇಕು. ಹಾಗೆ ಮಾಡಿದ ಸತ್ತ್ವಯುಕ್ತ ತಿನಿಸಿಲ್ಲದೆ ಸೊರಗುತ್ತಿರುವ ನಮ್ಮ ದನಕರುಗಳಿಗೆ ಬಹಳ ಉಪಕಾರ ಮಾಡಿದಂತಾಗುವದು.

* * *

ನಮ್ಮ ಮುಂಬಯಿ ಸರಕಾರದ ಮುಂದಿನ ವರ್ಷದ ಆಯ ವ್ಯಯಗಳ ಅಂದಾಜ ಪತ್ರಿಕೆ ನೋಡಿ ಯಾರಿಗೂ ವ್ಯಸನವಾಗದಿರದು. ಯುದ್ಧದ ಅತ್ಯಂತ ಕಠಿಣ ಕಾಲದ ಖರ್ಚಿಗಿಂತಲೂ ಈಗ ಸರಕಾರದ ಖರ್ಚು ಬಹಳಷ್ಟು ಹೆಚ್ಚಾಗಿ ಅದನ್ನು ಬಾಯಿಗೂಡಿಸಲು ಅರ್ಥ ಮಂತ್ರಿಗಳು ೪ ಕೋಟಿ ರೂಪಾಯಿಗಳಷ್ಟು ಹೊಸ ತೆರಿಗೆಗಳನ್ನು ಹೇರಿದ್ದಾರೆ. ಯುದ್ಧ ಮುಗಿಯುವದು, ಯುದ್ಧಕಾಲದ ಕರಗಳು ಹೋಗುವವು ಮತ್ತು ಕರಭಾರ ಹಗರಾಗುವದು ಎಂದು ಮನಸ್ಸಿನಲ್ಲಿ ಮಂಡಿಗೆಗಳನ್ನು ತಿನ್ನುತ್ತಿದ್ದ ಬಡ ಜನತೆಗೆ ಅರ್ಥ ಮಂತ್ರಿಗಳು ತಮ್ಮ ಆಯವ್ಯಯ ಪತ್ರಿಕೆಯಿಂದಲೂ ಹೊಸ ತೆರಿಗೆಗಳ ಆಕರಣೆಯ ಸೂಚನೆಯಿಂದಲೂ ನಿರಾಶೆಯ ಮಡುವಿನಲ್ಲಿ ನೂಕಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮುಂಬಯಿ ಸರಕಾರವು ಹೊಸ ಕರಗಳನ್ನು ಹೇರಿ ಮೊದಲೇ ಜರ್ಜರವಾಗಿ ಹೋಗಿರುವ ಜನರನ್ನು ಇನ್ನೂ ಜರ್ಜರಗೊಳಿಸುವದರ ಬದಲು ಹನುಮಂತನ ಬಾಲದಂತೆ ಬೆಳೆದಿರುವ ರಾಜ್ಯದಾಡಳಿತೆಯ ವೆಚ್ಚದಲ್ಲಿ, ಶಕ್ಯವಿದ್ದಷ್ಟೆಲ್ಲ, ಕತ್ತರಿ ಮಾಡಿ ಆಯ-ವ್ಯಯಗಳನ್ನು ಬಾಯಿಗೂಡಿಸುವ ಪ್ರಯತ್ನ ಮಾಡಬೇಕಿತ್ತು. ಜನರ ಸುಖ-ದುಃಖಗಳ, ಕಷ್ಟ ನಷ್ಟಗಳ ಮತ್ತು ಸಾಂಪತ್ತಿಕ ಸ್ಥಿತಿ-ಗತಿಯ ಪರಿಚಯವುಳ್ಳ ಲೋಕನಿಯುಕ್ತ ಸರಕಾರವು ಅನುಸರಿಸಬೇಕಾದ ಮಾರ್ಗವದು.

* * *

ಆದರೆ ಮುಂಬಯಿ ಸರಕಾರವು ಆ ರಾಜಮಾರ್ಗವನ್ನು ಬಿಟ್ಟು ಹೊಸ ಕರಗಳನ್ನು ಹೇರಿ ಜನತೆಯ ಸತ್ವಪರೀಕ್ಷೆ ಮಾಡಲಾರಂಭಿಸಿದೆ! ದುಂದುಗಾರಿಕೆಯನ್ನು ಕಡಿಮೆ ಮಾಡುವ ವಿಚಾರವೇ ಅದರ ತಲೆಯಲ್ಲಿ ಸುಳಿದಿರುವದಿಲ್ಲೆಂದು ವಿಷಾದದಿಂದ ನಮೂದಿಸಬೇಕಾಗಿದೆ. ಯುದ್ಧಕಾಲದಲ್ಲಿ, ಯುದ್ಧದ ನಿರ್ವಹಣೆಗೆ ಅವಶ್ಯವೆಂದು ಹಿಂದಿನ ಆಳರಸರು ಹಲವಾರು ಹೊಸ ಹೊಸ ಖಾತೆಗಳನ್ನು ಪ್ರಾರಂಭಿಸಿ, ಹೊಸ ಹೊಸ ಹುದ್ದೆಗಳನ್ನು ನಿರ್ಮಿಸಿದ್ದರು. ಯುದ್ಧ-ಮುಕ್ತಾಯವಾದ ಮೇಲೆ ಆ

The Agricultural & Industrial Bank, Ltd.,

Regd Office "LAXMI NIVAS Buildings
COONDAPOOR, S Kanara

SEASON DEPOSITS

Maturing on or before 30th June 1949 are now accepted with interest ranging from 2¼% to 3½% per annum

Every kind of Banking business transacted

For terms etc please apply to any of our following

Branches

1 Coondapoor	7 Ankola	13 Sirsi
2 Mangalore	8 Bhatkal	14 Dharwar
3 Somwarpet	9 Gokarn	15 Gadag
4 Virajpet	10 Honavar	16 Haveri
5 Shimoga	11. Karwar	17 Hubli
6 Nagar	12 Kumta	18 Belgaum

19 BOMBAY (331-M, Jaipuria House Kalbadevi Road)

ಖಾತೆಗಳೂ ಹುದ್ದೆಗಳೂ ರದ್ದಾಗಿ ಸರಕಾರ ಯಂತ್ರವು ಪೂರ್ವಸ್ಥಿತಿಗೆ ಬರಬೇಕಾಗಿತ್ತು. ಆದರೆ ನಮ್ಮ ಮುಂಬಯಿಯ ಕೊಂಗ್ರೆಸ ಸರಕಾರವು ತದ್ವಿರುದ್ಧ ಮಾರ್ಗವನ್ನು ಹಿಡಿದು, ಹುದ್ದೆಗಳನ್ನು ಹೆಚ್ಚಿಸುತ್ತ ನಡೆದಿದೆ! ಬೇಸಾಯ ಇಲಾಖೆಯೊಂದನ್ನೇ ಪರೀಕ್ಷಿಸಿದರೂ ಈ ಮಾತಿನ ಮನವರಿಕೆಯಾಗುವಂತಿದೆ. ಕಬ್ಬಿನ ತಜ್ಞ, ಕೊಳೆ ರೋಗದ ತಜ್ಞ, ಕಣೆ ರೋಗದ ತಜ್ಞ, ಗಜನಿ ಭೂಮಿಗಳ ತಜ್ಞ, ಕಾಯಿಪಲ್ಲೆಗಳ ಬೆಳವಣಿಗೆಯ ತಜ್ಞ, ಮಣ್ಣಿನ (ಸೊಯಿಲ್) ತಜ್ಞ, ಬೆಳೆಗಳ ನಾಶ ಮಾಡುವ ಕ್ರಿಮಿ-ಕೀಟಕಗಳ ತಜ್ಞ, ಎಂದು ಮುಂತಾಗಿ ಈ ಇಲಾಖೆಯಲ್ಲಿ ತಜ್ಞರ ಸುಳಿದಾಟ ಬಹಳವಾಗಿದೆ! ಬೇಸಾಯಕ್ಕೆ ನಿಕಟ ಸಂಬಂಧವುಳ್ಳ ಪಶು-ವೈದ್ಯ ಇಲಾಖೆಯಲ್ಲೂ ಬೀಜದ ಹೋರಿಗಳ ತಜ್ಞ, ಕೋಳಿ ಸಂವರ್ಧನೆಯ ತಜ್ಞ, ಕುರಿ ಬೆಳವಣಿಗೆಯ ತಜ್ಞ ಮೊದಲಾದ ತಜ್ಞರ ಬೆಳೆ ಹೆಚ್ಚಾಗಿದೆ! ಈ ತಜ್ಞರ ಕರ್ತವ್ಯ ಕರ್ಮಗಳೇನು, ಅವರಿಂದ ಸಮಾಜಕ್ಕೆ ಆಗುವ ಪ್ರಯೋಜನವೇನು ಎಂಬುದರ ಪತ್ತೆಯೇ ಹತ್ತುವದಿಲ್ಲ. ಕೆಲವು ದಿನಗಳ ಹಿಂದೆ ಓರ್ವ ಹೊಸ ತಜ್ಞ ಹುದ್ದೆದಾರನು ಬಂದು ತನ್ನ ನೇಮಣೂಕಿಯ ಸ್ಥಳಕ್ಕೆ ಒಂದು ಹಾಜರಾದನು. ಆಗ ಅವನ ಗೆಳೆಯನೋರ್ವನು, "ನಿನ್ನ ಕೆಲಸವೇನಯ್ಯಾ?" ಎಂದು ಕೇಳಲಾಗಿ, 'ನೋಡಬೇಕು, ಸ್ವಾಮೀ! ಸರಕಾರದ ಅಪ್ಪಣೆಯಂತೆ ಬಂದು ಹಾಜರಾಗಿದ್ದೇನೆ. ನನ್ನ ಕೆಲಸವೇನೆಂದು ಇನ್ನೂ ತಿಳಿದು ಬಂದಿಲ್ಲ. ಅದು ಬೇಗನೇ ತಿಳಿದು ಬರುವದೆಂಬ ನಿರೀಕ್ಷಣೆಯಲ್ಲಿದ್ದೇನೆ" ಎಂದು ಆತ ಉತ್ತರ ಕೊಟ್ಟನಂತೆ! ನಮ್ಮ ಸೀಧಾ-ಕಚೇರಿಗಳನ್ನೇ ನೋಡಿರಿ. ಕುಮಟಾ ತಾಲೂಕಿನ ೭೦ ಸಾವಿರ ಜನಸಂಖ್ಯೆಯಿಂದ ಸೀಧಾ-ಕ್ಷೇತ್ರಗಳೆಂದು ಘೋಷಿಸಲ್ಪಟ್ಟ ಕುಮಟಾ ಮತ್ತು ಗೋಕರ್ಣ ಈ ಎರಡು ಊರುಗಳ ೧೨ ಸಾವಿರ ಜನಸಂಖ್ಯೆ ಕಳೆಯಲಾಗಿ, ಉಳಿಯುವ ೫೮೦೦೦ ಜನರಿಗೆ ಮಾಮಲೇದಾರರೂ ಅವರ ಕಚೇರಿಯವರೂ, ವಿಶೇಷ ಹೆಚ್ಚಿನ ತಿಬಂದಿಯಿಲ್ಲದೆ, ಆಹಾರ-ಪೂರೈಕೆಯನ್ನೂ ಹಂಚುವಿಕೆಯನ್ನೂ ಮಾಡುತ್ತಾರೆ. ಕುಮಟಾ-ಗೋಕರ್ಣ ಊರುಗಳ ೧೨೦೦೦ ಜನರಿಗೂ ಅವರು ಆಹಾರ ಬಟವಡೆಯನ್ನು ಮಾಡಲಾರರೇ? ಆ ಎರಡು ಊರುಗಳ ೧೨೦೦೦ ಜನರಿಗೆ ಆಹಾರ-ಪೂರೈಕೆಯ ವ್ಯವಸ್ಥೆ ಮಾಡುವದಕ್ಕಾಗಿ, ಪ್ರತಿ ತಿಂಗಳು ೩-೩॥ ಸಾವಿರ ರೂಪಾಯಿಗಳಿಗೂ ಹೆಚ್ಚಿನ ಸಂಬಳ ಪಡೆಯುತ್ತಿರುವ ಪ್ರತ್ಯೇಕ ಸೀಧಾ-ಕಚೇರಿಗಳ ಅವಶ್ಯಕತೆಯಿದೆಯೆ? ಮಂತ್ರಿಗಳ ಸಂಚಾರಗಳ ವೆಚ್ಚವಾದರೂ ಅನವಶ್ಯಕವೆಂದೇ ಹೇಳಬಹುದು. ಏನಾದರೊಂದು ಮಹತ್ವದ ಕಾರ್ಯಕ್ಕಾಗಿ ಯಾ ಯಾವದಾದರೊಂದೆಡೆಯ ಪ್ರತ್ಯಕ್ಷ ಪರಿಸ್ಥಿತಿಯನ್ನು ಮಂತ್ರಿಗಳು ಕಂಡು ಕೊಳ್ಳಬೇಕೆಂದಂತಹ ಪರಿಸ್ಥಿತಿ ಬಂದಾಗ ಮಂತ್ರಿಗಳು ಸಂಚಾರ ಕೈಕೊಳ್ಳುವದು ಯುಕ್ತವಾಗಬಹುದು. ಆದರೆ ಪ್ರದರ್ಶನಗಳ ಉದ್ಘಾಟನೆ, ಸೀಧಾ-ಕೇಂದ್ರಗಳ ಪ್ರಾರಂಭೋತ್ಸವ, ಆ ಶಾಲೆ ಈ ಸಂಸ್ಥೆಯ ಕಟ್ಟಡದ ಅಡಿಗಲ್ಲನ್ನಿಡುವ ಸಮಾರಂಭ ಇವೇ ಮೊದಲಾದ ಪೊಳ್ಳು ಆಡಂಬರದ ಸಮಾರಂಭಗಳಿಗಾಗಿ ಮಂತ್ರಿಗಳು ಸಂಚಾರ ಮಾಡುತ್ತಿರುವದು ವಿಚಾರವಂತಿಕೆಯು ತೋರುವದಿಲ್ಲ. ಇತ್ತಲಾಗಿ ಸರಕಾರದ ಪ್ರಚಾರ ಶಾಖೆಯು ವೆಚ್ಚವು ಬಹಳ ತಲೆಭಾರವಾಗಿದೆ! ಸರಕಾರದವರ ಭಿತ್ತಿ-ಪತ್ರಗಳೇನು? ಅವರ ಕೈಪಿಡಿಗಳೇನು? ನಿಯತಕಾಲಿಕಗಳೇನು? ಅವುಗಳಿಗೇನಾದರೂ ಮಿತಿ ಬೇಡವೇ? ಸರಕಾರವು ನಿರ್ಮಿಸಿರುವ ಹೊಸ ಹೊಸ ಹುದ್ದೆಗಳನ್ನು ನೋಡಿ, ಇದೆಲ್ಲ ಮಂತ್ರಿಗಳ ಬಗಲ ಗೂಸುಗಳಿಗೆ ಇಲ್ಲವೆ ಆಪ್ತೇಷ್ಟರಿಗೆ ಪಂಚಕಜ್ಜಾಯ ಹಂಚುವದಕ್ಕಾಗಿ ಇವುಗಳ ನಿರ್ಮಿತಿಯಾಗುತ್ತಿದೆ ಎಂದು ಕೆಲವರು ಆರೋಪಿಸುತ್ತಿದ್ದಾರೆ. ಇಂತಹ ಆರೋಪಗಳಿಗೆ ಸರಕಾರವು ಆಸ್ಪದ ಮಾಡಿಕೊಡುವದು ಇಷ್ಟವೇನು ಎಂಬುದರ ವಿಚಾರವಾಗಬೇಕು. ಈ ರೀತಿ ಖರ್ಚಿನಲ್ಲಿ ಕತ್ತರಿ ಮಾಡಲು ಬಹಳಷ್ಟು ಇಂಬು ಇರುವಾಗ ಹೊಸ ಹೊಸ ತೆರಿಗೆಗಳನ್ನು ಹೇರಿ ಇದ್ದ ಕರಭಾರದಿಂದಲೇ ನುಗ್ಗಿ ನಗ್ಗಿ ಹೋದ ಪ್ರಜೆಗಳನ್ನು ಇನ್ನೂ ನುಗ್ಗು ಮಾಡುವದು ತರವಲ್ಲವೆಂದು ಪ್ರಾಂತ ಮಂತ್ರಿಗಳಿಗೆ ತಿಳಿಯ ಬೇಡವೇನು?

*

ಒಕ್ಕಲಿಗರಿಗೆ ಒಕ್ಕಲತನದ ಭದ್ರತೆ ಮತ್ತು ಹೊಲದ ಹುಟ್ಟುವಳಿಯಲ್ಲಿ ಹೆಚ್ಚಿನ ಪಾಲು ದೊರಕಿಸಿಕೊಟ್ಟಲ್ಲಿ ಅವರ ಸಂಸಾರ ಸುಖಮಯವಾಗಿ, ಅವರು ನೆಲಗಳ ಕಡೆ ವಿಶೇಷ ಲಕ್ಷ ಕೊಡುವರೆಂದೂ, ಕಷ್ಟಪಟ್ಟು ದುಡಿದ ಫಲವು ದೊರಕುವದೆಂದು ದುಡಿಯುವರೆಂದೂ, ಅದರಿಂದ ಬೆಳೆ ಹೆಚ್ಚುವದೆಂದೂ, ಅದರಿಂದ ನಾಡು ಸಮೃದ್ಧವಾಗುವದೆಂದೂ ಒಕ್ಕಲತನದ ಕಾನೂನಿನ ಪ್ರವರ್ತಕರೂ ಬೆಂಬಲಿಗರೂ ಪ್ರತಿಪಾದಿಸುತ್ತಿದ್ದರು, ಇನ್ನೂ ಪ್ರತಿಪಾದಿಸುತ್ತಿದ್ದಾರೆ. ಆದರೆ ಒಕ್ಕಲತನದ ಕಾನೂನಿನ ಪ್ರತ್ಯಕ್ಷ ಪರಿಣಾಮವೆಂದು ವಿಪರೀತವಾಗಿದು ಕಂಡು ಬರುತ್ತಿದೆ. ಒಕ್ಕಲತನದ ಕಾನೂನು ನಮ್ಮಲ್ಲಿ ೧೯೪೬ರಲ್ಲಿ ಅಂದರೆ ೩ ವರ್ಷಗಳ ಹಿಂದೆ ಅಮಲಿನಲ್ಲಿ ಬಂತು. ಕಾನೂನು ಬಂದಂದಿನಿಂದ ೩ ಬೆಳೆಗಳು ನಮ್ಮ ಕೈಸೇರಿವೆ, ಮತ್ತು ಆ ಮೂರೂ ಬೆಳೆಗಳ ಮಾನವನ್ನು ಅಧಿಕಾರಿಗಳು ಪ್ರತ್ಯಕ್ಷ ಪ್ರಯೋಗಗಳಿಂದಲೂ, ಸಾಧಾರ ಸಪ್ರಮಾಣ ಮಾಹಿತಿಯ ಸಹಾಯದಿಂದಲೂ ಕಂಡುಹಿಡಿದು ಜಾಹೀರ ಪಡಿಸಿದ್ದುಂಟು. ಒಕ್ಕಲತನದ ಕಾನೂನು ನಮ್ಮ ಜಿಲ್ಲೆಗೆ ಅನ್ವಯಿಸಿದ ಪ್ರಥಮ ವರುಷದಲ್ಲಿ, ಅಂದರೆ ೧೯೪೬-೪೭ನೇ ಸಾಲಿನಲ್ಲಿ, ಕುಮಟಾ ತಾಲೂಕಿನ ಸರ್ವೆ ಗ್ರೂಪ Iರ ತರಿ ಭೂಮಿಗಳಲ್ಲಿ ಎಕರೆ ೧ಕ್ಕೆ ಸರಾಸರಿ ೪೨ ಮಣ ಭತ್ತ ಹುಟ್ಟಿತ್ತೆಂದು ಆ ಕಾಲದ ಮಾಮಲೇದಾರ ರಾ॥ ಕಿತ್ತೂರ ಇವರು ನಿರ್ಧರಿಸಿ ಜಾಹೀರ ಮಾಡಿದ್ದರು (ರಾ॥ ಕಿತ್ತೂರರು ಬೇಸಾಯ ಅಧಿಕಾರಿಗಳ ಕಡೆ ಇರುವ ಪ್ರಮಾಣ-ಭೂತ ಮಾಹಿತಿಯ ಆಧಾರದಿಂದಲೂ ಇನ್ನಿತರ ಕೆಲವು ನಂಬಿಗಸ್ತ ಗೃಹಸ್ಥರ ಕಡೆಯಿಂದ ಸಿಕ್ಕ ವಿಶ್ವಸನೀಯ ಮಾಹಿತಿಯಿಂದಲೂ ಬೆಳೆಯ ಮಾನದ ನಿರ್ಣಯ ಮಾಡಿದ್ದರೆಂಬುದನ್ನು ಮರೆಯಲಾಗದು. ರೈತ-ಸಂಘಗಳ ಆಕ್ರೋಶವನ್ನು ಸಮಾಧಾನಗೊಳಿಸುವದಕ್ಕಾಗಿ ಮುಂದೆ ಜಿಲ್ಲಾಧಿಪರೂ ಸರಕಾರದವರೂ ೪೨ರ ಅಂಕೆಯನ್ನು ೩೫ಕ್ಕೆ ಇಳಿಸಿದರೆ ಆ ಮಾತು ಬೇರೆ. ಆ ಇಳಿಸುವಿಕೆಯಿಂದ ರಾ॥ ಕಿತ್ತೂರರು ನಿರ್ಣಯಿಸಿದ ಬೆಳೆಯ ಮಾನ ಅವಾಸ್ತವವಿತ್ತೆಂದು ಹೇಳಲಾಗುವದಿಲ್ಲ) ೨ನೇ ವರುಷದಲ್ಲಿ ಅಂದರೆ ೧೯೪೭-೪೮ರಲ್ಲಿ, ಅಲ್ಲಲ್ಲಿ ಬೆಳೆ ಕೊಯ್ಯುವ ಪ್ರಯೋಗಗಳಾಗಿ, ಸಪ್ರಮಾಣ ಮಾಹಿತಿಯ ಆಧಾರದಿಂದ ಎಕರೆ ೧ಕ್ಕೆ ಸರಾಸರಿ ೩೮ ಮಣ ಹುಟ್ಟಿತ್ತೆಂದು ಸರಕಾರವು ಜಾಹೀರನಾಮೆ ಹೊರಡಿಸಿತು. ಹಾಲೂ ೩ನೇ ವರುಷದಲ್ಲಿ ಅಂದರೆ ೧೯೪೮-೪೯ರಲ್ಲಿ ನಡೆದ ಬೆಳೆಯ ಪ್ರಯೋಗಗಳ ಫಲಿತಾಂಶ ಇದೀಗ ಪ್ರಕಟವಾಗಿದೆ. ಸರ್ವೆ ಗ್ರೂಪ Iರೊಳಗಿನ ತರಿ (ಹೊಂಡದ ಗದ್ದೆ) ಭೂಮಿಗಳಲ್ಲಿ ಮಾಮಲೇದಾರರು ೧ನೇ ವರ್ಗದ ತರಿ, ೨ನೇ ವರ್ಗದ ತರಿ ಎಂದು ೨ ವರ್ಗಗಳನ್ನು ಮಾಡಿ, ಅವುಗಳಲ್ಲಿ ಅನುಕ್ರಮವಾಗಿ ಎಕರೆ ೧ಕ್ಕೆ ಸರಾಸರಿ ೨೯॥ ಮತ್ತು ೨೭॥ ಮಣ (ಅಂದರೆ ಸರಾಸರಿ ೨೮॥ ಮಣ) ಭತ್ತ ಬೆಳೆದಿದೆಂದು ಜಾಹೀರ ಮಾಡಿದ್ದಾರೆ. ೧೯೪೮-೪೯ನೇ ಸಾಲಿನಲ್ಲಿ ಸುವೃಷ್ಟಿಯಾಗಿತ್ತೆಂದೂ, ೧೯೪೭-೪೮ರಲ್ಲಿ ಅತಿವೃಷ್ಟಿ, ಅನಾವೃಷ್ಟಿ ಇಲ್ಲವೆ ಅಸಮವೃಷ್ಟಿಯಾಗಿ ಬೆಳೆ ಹಾಳಾಯಿತೆಂದೂ ಹೇಳಬರುವಂತಿಲ್ಲ. ಈ ವರ್ಷ ಬಿದ್ದ ಮಳೆಗಾಗಲಿ, ಬೀಸುವ ಗಾಳಿಗಾಗಲಿ ನಾವು ದೋಷ ಕೊಟ್ಟರೆ ನಿಸರ್ಗದೇವತೆಯ ದ್ರೋಹ ಮಾಡಿದಂತಾಗುವದು. ಆದ್ದರಿಂದ ಈ ವರ್ಷದ ಬೆಳೆ ಕಡಿಮೆಯಾಗಿರುತ್ತಿದ್ದರೆ ಅದರ ದೋಷವನ್ನು ಸಾಗುವಳಿದಾರರ ಮೇಲೆಯೇ ಹೊರಿಸಬೇಕು. ಈ ಮೂರು ವರ್ಷಗಳ ಅಂಕಿಗಳು— ೪೨, ೩೮, ೨೮॥ ಈ ಅಂಕಿಗಳು — ಬೆಳೆ ಹೆಚ್ಚಾಗುತ್ತಿದ್ದದನ್ನು ತೋರಿಸುತ್ತವೋ ಯಾ ಕಡಿಮೆಯಾಗುತ್ತ ನಡೆದುದನ್ನು ತೋರಿಸುತ್ತವೋ ಎಂಬುದನ್ನು ಒಕ್ಕಲತನದ ಕಾನೂನಿನ ಪ್ರವರ್ತಕರೂ ಸಮರ್ಥಕರೂ ಆಲೋಚಿಸಬೇಕು. ಇನ್ನಿತರ ಜಿಲ್ಲೆಗಳಲ್ಲಿ ಈ ಕಾನೂನಿನ ಪರಿಣಾಮ ಏನೇ ಆಗಿರಲಿ, ನಮ್ಮ ಜಿಲ್ಲೆಯಲ್ಲಿ ಅದರ ಪರಿಣಾಮ ಅನಿಷ್ಟವಾಗಿದೆ ಎಂಬುದನ್ನು ಅಲ್ಲಗಳೆಯಬರುವಂತಿಲ್ಲ. ಒಕ್ಕಲತನದ ಕಾನೂನು ಒಂದನೇ ವರುಷಗಳಲ್ಲಿ ಎಕರೆ ೧ಕ್ಕೆ ೪೨ ಮಣ ಭತ್ತದಷ್ಟಿದ್ದ ಬೆಳೆಯ ಮಾನವು ೨೮॥ ಮಣಕ್ಕೆ (ಅಂದರೆ ಸರಾಸರಿ ೨/೩ಕ್ಕೆ) ಇಳಿದದ್ದು ಶುಭ ಲಕ್ಷಣವಲ್ಲ. ಆದ್ದರಿಂದ ಒಕ್ಕಲತನದ

THE BANK OF RURAL INDIA LTD,

(Incorporated in British India. Liability of Members limited)

HEAD OFFICE — "Satyabhama Bhavan, KARWAR N K

Offices at — KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital .. **Rs 10,00,000.**

Subscribed Capital . **Rs 5,00 000.**

Paid-up Capital & Reserves .. **Rs. 5,08,602-8-0**

Rates of Interest on Deposits.

Current a/c @ 1% p. a. ***Savings Bank a/c @ 2½%***

Fixed Deposits for 3 months @ 3% per annum.

" " for 6 months @ 3½%

" " for 12 months or more @ 4% "

All kinds of modern Banking business transacted

Karwar, 14-2-1948

P X GRACIOUS, MANAGING DIRECTOR

[illegible] ಉಂಟಾಗಿರುವ ಸ್ಥಿತ್ಯಂತರಗಳನ್ನು [illegible] ಸಮಂಜಸವಾಗಿ, [illegible] ಮಾಡಿ ಇಷ್ಟನೆ [illegible] ಅಂಶಗಳನ್ನು ಆ [illegible]ಳಗಿಂದ ತೆಗೆದೊಗೆಯುವ ವ್ಯವಸ್ಥೆ ಮಾಡಬೇಕು. ಹೊಲಗಳಲ್ಲಿ [illegible] ಸಾಮಾನ್ಯವಾಗಿ [illegible] ಬೆಳೆಯನ್ನು ಒಕ್ಕಲಿಗರು ಹುಟ್ಟಿಸಬೇಕು, ಹುಟ್ಟಿಸದಿದ್ದರೆ ಅವನ ಒಕ್ಕಲು [illegible] ರದ್ದಾಗುವದು., ಎಂಬರ್ಥದ ನಿರ್ಬಂಧ ಒಕ್ಕಲತನದ ಕಾನೂನು ಹಾಕುತ್ತಿದ್ದರೆ ಈಗಿನ ಅನಿಷ್ಟ ಪರಿಸ್ಥಿತಿ ಉತ್ಪನ್ನವಾಗುತ್ತಿದ್ದಿಲ್ಲ. ಇನ್ನಾದರೂ ಒಂದು [illegible] ಸರಕಾರವು ಆ ನಿರ್ಬಂಧ ಹಾಕಲಿ ಇಂತಹ ನಿರ್ಬಂಧ ಹಾಕಿದರೆ ಮಾತ್ರ ಈಗ [illegible]ವಾಗಿರುವ ಬೆಳೆಯ ಮಾನವು ಸುಧಾರಿಸುವದು, ಜಿಲ್ಲೆಯ ಆಹಾರ ಪರಿಸ್ಥಿತಿಯೂ ಸುಧಾರಿಸುವದು

[illegible] ಮತದಾರ–ಸಂಘದ ಮತದಾರರಲ್ಲಿ

ಜಾಹೀರ ವಿನಂತಿ.

[illegible] ಜಿಲ್ಲೆಯ ಜನರ [illegible] ಸೇವೆ ಮಾಡಬೇಕೆಂಬ ಹಂಬಲದಿಂದ ನಾನು ಇದೇ ಬರುವ ತಾ. [illegible] ನೇ ದಿನ ನಡೆಯಲಿರುವ [illegible] ಬೋರ್ಡಿನ ಚುನಾವಣೆಗೆ [illegible] ತಾಲೂಕಿನ [illegible] ಮತದಾರ ಸಂಘದಲ್ಲಿ ಉಮೇದವಾರನಾಗಿ ನಿಂತಿದ್ದೇನೆ [illegible] ಮತದಾರ ಸಂಘದ ಜನರು ನನ್ನನ್ನು ಪ್ರೋತ್ಸಾಹಿಸುವರೆಂದು ನಾನು ನಂಬಿದ್ದೇನೆ. ವ್ಯಕ್ತಿಶಃ ಪ್ರತಿಯೊಬ್ಬ ಮತದಾರರನ್ನು [illegible] ಆಗಲಿಕ್ಕಿಲ್ಲ. ಕಾರಣ ಎಲ್ಲ ಮತದಾರ ಬಂಧು–ಭಗಿನಿಗಳು ಈ ಜಾಹೀರ ವಿನಂತಿಯನ್ನು ಮನ್ನಿಸಿ, ಚುನಾವಣೆಯ ದಿನ [illegible] ಮತಗಟ್ಟೆಗೆ ಹೋಗಿ, [illegible] ಮತಗಳಲ್ಲಿ ಒಂದು [illegible] (ಗಣಪತಿಯ ಮುಂದುಗಡೆ × ಎಂಬ ಒಂದೇ ಗುರುತು ಹಾಕಿ) ನನಗೆ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಅಂತ [illegible]

ಗಣಪತಿ ಸೀತಾರಾಮ ಭಾಗವತ.

ತಾ. [illegible] [illegible], [illegible]

BY THE REGIONAL TRANSPORT, AUTHORITY, KARNATAK REGION, BELGAUM.

Read – This Office Notice No 564/4-B/KR of 29-1-49

NOTICE

The persons, intending to apply for permits under the M V Act 1939 to operate diesel powered trucks, were directed (Vide this Office Notice, quoted above) to produce before 1st of March 1949, necessary proof that they have committed themselves to the purchase of diesel powered trucks Under instructions from the Government they are informed that the directions given in the above-said notice have now been cancelled

D K SUKHTANKAR, Capt

Secretary,

Regional Transport Authority, K R, Belgaum

Belgaum, 7-3-49

ಅಂಕೋಲಾ ತಾಲೂಕಿನ ಮುಂಗಾರಿ ಬೆಳೆಯ ಪ್ರಕಟನೆ

೧೯೪೮—೪೯ನೇ ಸಾಲಿನದು.

ನಂ [illegible]— ೧೯೪೭ನೇ [illegible] ಒಕ್ಕಲತನದ ಕಾನೂನಿನ ನಿಯಮಾವಳಿಯ [illegible] ನಿಯಮದ [illegible] ಜಿಲ್ಲೆಯ ಅಂಕೋಲಾ ತಾಲೂಕಿನ ಮಾಮಲೇದಾರರು [illegible] ಪರಿಶಿಷ್ಟದ [illegible] ಪ್ರದೇಶಗಳಲ್ಲಿರುವ [illegible] ನೀರಾವರಿಯಲ್ಲದ ಭೂಮಿಗಳಲ್ಲಿ, ೧೯೪೮—೪೯ನೇ ಸಾಲಿನಲ್ಲಿ, ಪ್ರತಿ ಎಕರೆಗೆ [illegible] ಸರಾಸರಿ ಮುಂಗಾರಿ ಭತ್ತದ ಬೆಳೆ ಬಂದಿರುವದೆಂದು ನಿರ್ಣಯಿಸಿ, ಮಾಡಿ [illegible]

ಪರಿಶಿಷ್ಟ.

ಸ್ಥಾನಿಕ ಪ್ರದೇಶ (ಗ್ರಾಮಗಳು) (೧)	ಭೂಮಿಯ ತರಗತಿ (೨)	ಎಕರೆ ೧ಕ್ಕೆ ಸರಾಸರಿ ಬೆಳೆ. (೩)	
ಸರ್ವೇ ಗ್ರೂಪ —I [illegible] (೧ ರಿಂದ [illegible] ನೇ ಗ್ರಾಮಗಳು)		[illegible]	[illegible]
	Iನೇ ವರ್ಗ ಕಂ	[illegible]	[illegible]
	IIನೇ ವರ್ಗ ಕಂ	[illegible]	[illegible]
	ಬಾಕಿ	[illegible]	[illegible]
	[illegible]	೧೧	—
	[illegible] (ಬಾಕಿ)	೧೦	—
	ಭೂಮಿಯ ವರ್ಗವಾರಿ. Iನೇ ವರ್ಗ ಕಂ— ಎಕರೆ ೧ಕ್ಕೆ [illegible] ಹೆಚ್ಚು ಕಿಮ್ಮತ್ತಿಯುಳ್ಳವು. IIನೇ ವರ್ಗ ಕಂ. — ಎಕರೆ ೧ಕ್ಕೆ [illegible] ಕಿಮ್ಮತ್ತಿಯುಳ್ಳವು. IIIನೇ ವರ್ಗ ಕಂ, (ಬಾಕಿ, [illegible]) — ಎಕರೆ ೧ಕ್ಕೆ [illegible] ಕಡಿಮೆ ಕಿಮ್ಮತ್ತಿಯುಳ್ಳವು		
ಸರ್ವೇ ಗ್ರೂಪ II— [illegible] ([illegible] ನೇ ಗ್ರಾಮಗಳು)	Iನೇ ವರ್ಗ ಕಂ	[illegible]	[illegible]
	IIನೇ ವರ್ಗ ಕಂ	[illegible]	[illegible]
	ಬಾಕಿ	[illegible]	[illegible]
	[illegible]	[illegible]	—
	ಭೂಮಿಯ ವರ್ಗವಾರಿ ಸರ್ವೇ ಗ್ರೂಪ Iರಲ್ಲಿಯಂತೆಯೇ		
ಸರ್ವೇ ಗ್ರೂಪ —III [illegible] ([illegible] ನೇ ಗ್ರಾಮಗಳು)	Iನೇ ವರ್ಗ ಕಂ	[illegible]	[illegible]
	IIನೇ ವರ್ಗ ಕಂ	[illegible]	[illegible]
	ಬಾಕಿ	[illegible]	[illegible]
	ಭೂಮಿಯ ವರ್ಗವಾರಿ ಸರ್ವೇ ಗ್ರೂಪ Iರಲ್ಲಿಯಂತೆಯೇ.		
ಸರ್ವೇ ಗ್ರೂಪ IV— [illegible] ([illegible] ನೇ ಗ್ರಾಮಗಳು)	Iನೇ ವರ್ಗ ಕಂ	[illegible]	[illegible]
	IIನೇ ವರ್ಗ ಕಂ	[illegible]	[illegible]
	ಬಾಕಿ	[illegible]	[illegible]
	ಭೂಮಿಯ ವರ್ಗೀಕರಣ Iನೇ ವರ್ಗದ ಕಂ— ಎಕರೆ ೧ಕ್ಕೆ [illegible] ಹೆಚ್ಚಿಗೆ ಕಿಮ್ಮತ್ತಿಯುಳ್ಳವು. IIನೇ ವರ್ಗದ ಕಂ — ಎಕರೆ ೧ಕ್ಕೆ [illegible] ಕಿಮ್ಮತ್ತಿಯುಳ್ಳವು. IIIನೇ ವರ್ಗದ ಕಂ (ಬಾಕಿ) — ಎಕರೆ ೧ಕ್ಕೆ [illegible] ಕಡಿಮೆ ಕಿಮ್ಮತ್ತಿಯುಳ್ಳವು.		
ಸರ್ವೇ ಗ್ರೂಪ V— [illegible] ([illegible] ನೇ ಗ್ರಾಮಗಳು)	ಕಂ	[illegible]	[illegible]
	ಬಾಕಿ	೧೧	[illegible]
	ಭೂಮಿಯ ವರ್ಗೀಕರಣ ಕಂ ಎಕರೆ ೧ಕ್ಕೆ [illegible] ಹೆಚ್ಚಿಗೆ ಕಿಮ್ಮತ್ತಿಯುಳ್ಳವು ಬಾಕಿ—ಎಕರೆ ೧ಕ್ಕೆ [illegible] ಕಡಿಮೆ ಕಿಮ್ಮತ್ತಿಯುಳ್ಳವು.		
	ಕಂ	[illegible]	[illegible]
	ಬಾಕಿ	೧೦	[illegible]
ಸರ್ವೇ ಗ್ರೂಪ VI— [illegible] ([illegible] ನೇ ಗ್ರಾಮಗಳು)	**ಭೂಮಿಯ ವರ್ಗೀಕರಣ** ಸರ್ವೇ ಗ್ರೂಪ Vರಲ್ಲಿಯಂತೆಯೇ		

ಟಿಪ್ಪಣಿ:— ೧ ಖಂಡಿ [illegible] = [illegible]

ಅಂಕೋಲಾ, ತಾ. [illegible]

V R DALVI

ಮಾಮಲೇದಾರ, ಅಂಕೋಲಾ

ಸ್ಥಾನಿಕ ವೃತ್ತಾಂತ

ಕುಮಟಾ— ಈಗ [illegible] ಬೇಸಿಗೆಯಲ್ಲಿ ಇಲ್ಲಿ ನೀರಿನ ಕೊರತೆಯಾಗುತ್ತದೆ

ಕುಮಟಾ, ಗೋಕರ್ಣ, ಹೊನ್ನಾವರ, ಭಟ್ಕಳ, ಶಿರ್ಸಿ ಈ ಊರುಗಳಲ್ಲಿ ಇದೇ [illegible] ೧೬ರಿಂದ ಪೂರ್ತಿ ಸೀಧಾ ಪದ್ಧತಿಯನ್ನು ಅನುಲಕ್ಷಿಸಿ ತರಲು ಬೇಕಾಗುವ ಸಿದ್ಧತೆಯನ್ನು ಮಾಡಬೇಕಾಗಿ ಮೇಲಿಂದ ಅಪ್ಪಣೆ ಬಂದಿರುತ್ತದಾಗಿ ಒಂದು ಸುದ್ದಿಯುಂಟು

ತಾ ೨೮-೩-೧೯೪೯ನೇ ದಿನ ಪತ್ರಿಕೆಯಲ್ಲಿ [illegible] ಕೊಳ್ಳಲು [illegible] ನಿವಾರಣೆಗಳು ನಡೆಯುತ್ತಿರುವುದರಿಂದ ಜಿಲ್ಲಾಧಿಕಾರಿ ಅದೇ ಜಿಲ್ಲೆಯಲ್ಲಿ ಅಂದು [illegible] ರಜೆ ದಿವಸ ಕೊಡಬೇಕೆಂದು ಅಪ್ಪಣೆ ಮಾಡಿದ್ದಾರೆ

ಪಟ್ಟಣಗಳ [illegible] ಎಂಬ [illegible] ವನ್ನು ಸರಕಾರದವರು ಈಗ ರದ್ದುಗೊಳಿಸಿ, ಸೀಧಾ [illegible] ಅಂಗಡಿಗಳಲ್ಲಿ ಎಲ್ಲರಿಗೂ [illegible] ಗಳ [illegible] ಸೀಧಾ ಬಟ್ಟೆ ಕೊಡಬೇಕೆಂದು ಅಪ್ಪಣೆ ಕೊಟ್ಟಿರುತ್ತಾರೆ

ಕೇರಂಗಾ-ಹಿಂಡಿಯ [illegible] ರೈತರು [illegible] ಅದರೆ ರೈತರಿಗೆ ಬೇಕಾಗುವ ಹಿಂಡಿಯನ್ನು ಸರಿಯಾಗಿ [illegible] ಬೆಲೆಗೆ [illegible] ವ್ಯವಸ್ಥೆಯನ್ನು [illegible] ಮಾಡಿದ್ದೇ! ಕೆಲವು ದಿನಗಳ ಹಿಂದೆ ಇಲ್ಲಿ [illegible] ಕೆಲವು ಹಿಂಡಿ ಬಂದಿತ್ತು. ಅದರ ಮಾರಾಟದ ವ್ಯವಸ್ಥೆ ಇನ್ನೂ ಆದದ್ದು ಕಂಡುಬರುವದಿಲ್ಲ ರೈತರಿಗೆ ಈಗ [illegible] ದುರ್ಲಭವಾಗಿದೆ ಕೇರಂಗಾ ಹಿಂಡಿಯೂ [illegible] ದುರ್ಲಭವಾದರೆ ಅವರ ಗತಿಯೇನು?

ಇತ್ತಲಾಗಿ ಈ ಊರಿನಲ್ಲಿ ಕಳ್ಳರ ಹಾವಳಿ ಹೆಚ್ಚಾಗಿದೆ ೧೦-೧೨ ದಿನಗಳ ಹಿಂದೆ ಶ್ರೀ [illegible] ಒಂದು ಮದುವೆಯ [illegible] ಕಳ್ಳನು ರಾತ್ರಿಯ [illegible] ಪ್ರವೇಶ ಮಾಡಿ [illegible] ಪಾತ್ರೆಗಳಲ್ಲಿ ಒಂದು [illegible] ಅಪಹರಿಸಿಕೊಂಡು ಹೋಗಿದ್ದಾನಂತೆ ಈ ಕಳವಾದ ೨ ದಿನಗಳಲ್ಲಿ ಮಧ್ಯರಾತ್ರಿಯ [illegible] ಆಸ್ಪತ್ರೆಯ [illegible] ಒಬ್ಬ ಕಳ್ಳನು ಒಳನುಗ್ಗಿ ಮಲಗಿದ್ದ [illegible] ಆಭರಣಗಳನ್ನು ಹರಕೊಂಡು ಹೋಗಲು ಪ್ರಯತ್ನಿಸಿದ್ದನು. ಆದರೆ [illegible] ಎಚ್ಚತ್ತು ಗಲಭೆ ಮಾಡಿದ್ದರಿಂದ ಕಳ್ಳನು ಓಡಿ ಹೋದನು ಇನ್ನೂ ಕೆಲವು ಕಡೆ ಕಳವಿನ ಪ್ರಯತ್ನಗಳಾದ ಸುದ್ದಿಯುಂಟು. ಊರಿನಲ್ಲಿ ಪೋಲೀಸರ [illegible] ಕೇಳಿಬರುತ್ತಿದೆ

ಮುಂಬಯಿ ಸರಕಾರದ [illegible] ಮಂತ್ರಿಗಳಾಗಿರುವ ಶ್ರೀ [illegible] ಅವರು [illegible] ಬರಲಿದ್ದು, ಈ [illegible] ನೋಡುವದಕ್ಕಾಗಿ ಮತ್ತು [illegible] ಒಂದು-ನಾಲ್ಕು ಇಲ್ಲಿ ಬರುವರೆಂದು ಸುದ್ದಿಯುಂಟು

ಹೊನ್ನಾವರ— [illegible] ವಾರದಲ್ಲಿ [illegible] ಶಿಕ್ಷಣ [illegible] ಆ [illegible] ಸನ್ಮಾನ [illegible] "ಶ್ರೀ [illegible] ಯಕ್ಷಗಾನ [illegible]" [illegible] ಪ್ರಯೋಗಗಳನ್ನು [illegible] ಮುಂಬಯಿ ಸರಕಾರದ ಶಿಕ್ಷಣ-ಸಚಿವ [illegible] ಶ್ರೀ [illegible] ಗನ್ನು ಮತ್ತು [illegible]

ಗಿದ್ದ ಶ್ರೀ [illegible] ಬಗ್ಗೆ [illegible]

ಶಿರಾಲಿ— ಇಲ್ಲಿಯ [illegible] ನಿವಾಸಿಗಳಾಗಿದ್ದ ಮತ್ತು ಭಾರತ ಸರಕಾರದ ಮಿಲಿಟರಿ ಎಕೌಂಟ್ಸ್ ಕಚೇರಿಯಲ್ಲಿ ನೌಕರರಾಗಿದ್ದ [illegible] ಆನಂದರಾವ [illegible] ಅವರು ಆರು ತಿಂಗಳ [illegible] ಜೇ ಜೇ ಆಸ್ಪತ್ರೆಯಲ್ಲಿ ಶಿವಾಧೀನರಾದರೆಂದು ತಿಳಿಸಲು ವ್ಯಸನವಾಗುತ್ತದೆ. [illegible] ದಿನಗಳ ಧೀರರೂ, ನ್ಯಾಯಪ್ರಿಯರೂ, [illegible] ಆಗಿದ್ದರು [illegible] ದೇವರು [illegible]!

(ತಾ ೪-೩-೪೯) [illegible] ಆಕಸ್ಮಿಕ [illegible] ಆಗುವದಿಲ್ಲೆಂದು [illegible] ದ್ದಾರೆ.

[illegible] ಒಂದು ಹುಲಿ ಬಂದು [illegible] ಅದರಿಂದ ಆ ಕಡೆ ಜನಾವರಗಳನ್ನು [illegible] ದ್ದಾರೆ

(ತಾ ೨೮-೩-೪೯) ಇತ್ತಲಾಗಿ ಊರಲ್ಲಿ [illegible] ಪತ್ರಿಕೆಗಳು [illegible] ದಿನಗಳ ಹಿಂದೆ [illegible] ಎಂಬ ಒಬ್ಬ [illegible] ಗಳನ್ನು [illegible] ಒಬ್ಬರ ಹಿಡಿದರು ಕೆಲವು ದಿನಗಳಿಂದ ಒಂದು [illegible] ಕಳ್ಳನು ಒಳ [illegible] ಪಾತ್ರೆಗಳನ್ನು ಒಯ್ದು [illegible] ಈ ಕಳವನ್ನು [illegible] ಇಲ್ಲಿಯ ಪೋಲೀಸರು [illegible] ಪ್ರಯತ್ನ ಮಾಡುವದಿಲ್ಲವಾದ್ದರಿಂದಲೇ ಕಳವುಗಳು ಹೆಚ್ಚಾಗಿವೆಯೆಂದು ಕೆಲವರು ಹೇಳುತ್ತಾರೆ

ಪ್ರೇತಬಾಧೆ, ಬ್ರಹ್ಮರಾಕ್ಷಸ-ಮಾರಣ ಬಾಧೆ, ಗ್ರಹಬಾಧೆ, ದ್ರವ್ಯಹೀನತೆ, ಉದ್ಯೋಗಹೀನತೆ, ಸಂತತಿಹೀನತೆ ಇತ್ಯಾದಿ ಕಷ್ಟಗಳ ನಿವಾರಣೆಗೆ ಅಷ್ಟ ಮತ್ತು ಉಜ್ವಲ ಚಿತ್ತ ...ನೆಯಾಗುವಂತೆ ಪ್ರಶ್ನೆ-ಕ್ರಿಯೆಗಳೂ ನಡೆಸಿಕೊಡಲಾಗುತ್ತವೆ.

ಈ ಸುಸಂಧಿಯನ್ನು ಕಳಕೊಳ್ಳಬೇಡಿ !
ಶ್ರೀಯವರ ಕೃಪೆಗೆ ಪಾತ್ರರಾಗಿ !!

ಕೊಂದಾಪುರ, ತಾ. ೧೦—೩—೧೯೪೯. } ಭಕ್ತ ಮಂಡಳಿ

ವಿ. ಸೂ :— ಪ್ರಶ್ನೆಯೊಂದರ ಕಾಣಿಕೆ ೦-೮-೦ ಮತ್ತು ಸ್ಟಾಂಪಿನ ಟಿಕೇಟು ಕಳುಹಿಸಿರಿ, ಶ್ರೀ ದೇವರ ಅರ್ಚಕ ವೆಂಕಟೇಶರಿಗೆ ಪತ್ರ ಬರೆದರೂ ಅಭಯ ಹಾಗು ಉತ್ತರ ಸಿಗುವದು.

"ನ ಟಕ್ ಬಿಡಿ-
ಕೊಪ್ಪೀಕರ ರೋಡ, ಹುಬ್ಬಳ್ಳಿ.

ಟೆಂಡರ ನೋಟೀಸು.

[illegible] (lorry mile rates) [illegible]

[illegible]

(೧) [illegible] (zones) [illegible]

(೨) [illegible]

[illegible]

[illegible] (ineffective mileage) [illegible]

(೩) [illegible]

(೪) [illegible]

(೫) [illegible]

(೬) [illegible]

(೭) [illegible]

(೮) [illegible] (Basic ration) [illegible]

[illegible]

(೯) [illegible]

(೧೦) [illegible] (dispose of) [illegible]

(೧೧) [illegible]

(೧೨) [illegible]

[illegible] **M Allahbaksh,**

[illegible]

[illegible] (station) [illegible]

NOTICE.

Public is hereby informed that they may attend the District Magistrate's Office for revalidation of petrol coupons between 1 and 2 P.M. on all working days except Saturday on which day they may come between 10 and 11 A.M.

Karwar, S. G. PRADHAN,
4-4-1949. P. A. to *Collector of Kanara.*

ನಮ್ಮಲ್ಲಿ [illegible] ತಯಾರಾದ
ಬರಹಾ ಹುರಿ, ಬಾವಿ-ಹಗ್ಗ,
ಮ್ಯಾಟಿಂಗ ಮತ್ತು ಬ್ರಶಮೆಟಗಳು
ಯೋಗ್ಯ ದರದಲ್ಲಿ ಸಿಗುತ್ತವೆ
[illegible]
ಹೊನ್ನಾವರ (ಉ. ಕ.)

ಪತ್ರಿಕಾ ಪ್ರಕಟನೆ.

[illegible] (... processors) [illegible] (screen) [illegible] (parties) [illegible]

([illegible])

ಬಗೀ ಗ್ರೂಪ ಮತದಾರರಲ್ಲಿ ಬಿನ್ನಹ.

[illegible]

ಭೈರವಾ ರಾಮನಾಥ [illegible]

[illegible]

ಪತ್ರಿಕಾ–ಪ್ರಕಟನೆ.

[illegible]

ನೋಟೀಸು.

[illegible]

(೧) [illegible] (Salesmen)

(೨) [illegible] (Cashiers)

[illegible]

[illegible], M. Allahbaksh,

[illegible]

[illegible]

([illegible])

ಜಾಹೀರ ವಿನಂತಿ.

[illegible]

[illegible]

THE BANK OF RURAL INDIA LTD.

(Incorporated in British India. Liability of Members limited)

HEAD OFFICE — "Satyabhama Bhavan", KARWAR. N. K.

Offices at — KARWAR, KUMTA, SIRSI, HONAVAR, YELLAPUR BHATKAL SIDDAPUR, ANKOLA, HUBLI & DHARWAR

Authorised Capital , Rs 10,00,000.

Subscribed Capital .. Rs 5,00,000,

Paid-up Capital & Reserves , Rs 5,08,502-8-0

Rates of Interest on Deposits

Current a/c @ 1% p.a. *Savings Bank a/c @ 2½%*

Fixed Deposits for 3 months @ 3% per annum.

" " for 6 months @ 3½%

" " for 12 months or more @ 4% "

All kinds of modern Banking business transacted

Karwar, 14-2-1948

P. X. GRACIOUS,
MANAGING DIRECTOR

[illegible]

ವರ್ಗಣಿಯ ದರ:
ಕುಮುಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ...೦ ೧-೦
ವ್ಹಿ ಪಿ ಯಿಂದ ತರಿಸುವವರು
ವ್ಹಿ ಪಿ ವೆಚ್ಚ ೬ ಆಣೆ ಹೆಚ್ಚಿಗೆ
ಕೊಡಬೇಕು ಹಣವನ್ನು
ಮುಂಗಡ ಕಳಿಸಬೇಕು

Reg. No. B. 1270

Mo :day, 18-4-1949.

ಕಾನಡಾವೃತ್ತ

ವರ್ಷ ೧೧.] THE KANARA NEWS. [ಸಂಚಿಕೆ ೪೨.

ಕುಮುಟಾ:- ಸೋಮವಾರ, ತಾ ೧೮—೪—೧೯೪೯

ಜಾಹೀರಾತುಗಳ ದರ
೧೫ ಪದದ ಒಳಗೆ
೧ ಸಾರಿಗೆ ೮ ಆಣೆಯಂತೆ.
ಬಿಡಿ ಜಾಹೀರಾತುಗಳ ದರ
ಜಾಹೀರಾತುಗಳ ಬಗ್ಗೆ ಪತ್ರ
ವ್ಯವಸ್ಥಾಪಕರಿಗೆ
ಬರೆಯಬೇಕು

ವಿವಿಧ ವಿಷಯಗಳು

ಮುಂದಿನ ತಿಂಗಳಲ್ಲಿ ಲಂಡನದೊಳಗೆ "ಬ್ರಿಟಿಶ ವಸಾಹತುಗಳ ಮುಖ್ಯ ಪ್ರಧಾನರ ಪರಿಷತ್ತು ಕೂಡಲಿದೆ "ಬ್ರಿಟಿಶ ವಸಾಹತುಗಳು" (ಬ್ರಿಟಿಶ ಡೊಮಿನಿಯನ್ಸ) ಎಂಬ ಶಬ್ದಸಮುಚ್ಚಯದ ಅರ್ಥ ಕಾಲ ಕಾಲಕ್ಕೆ ಬದಲಾಗುತ್ತ ನಡೆದಿದೆ, ೧೯ನೇ ಶತಮಾನದ ಪೂರ್ವದಲ್ಲಿದ್ದ ಬ್ರಿಟಿಶ ವಸಾಹತಿನ ಕಲ್ಪನೆ, ರೂಪ ಮತ್ತು ಚಿತ್ರ ಇವು ೨೦ನೇ ಶತಮಾನದ ಪ್ರಾರಂಭದಲ್ಲಿ ಕಂಡುಬರುತ್ತಿದ್ದ ಬ್ರಿಟಿಶ ವಸಾಹತಿನ ಚಿತ್ರ, ರೂಪ ಮತ್ತು ಕಲ್ಪನೆ ಇವುಗಳಿಂದ ತೀರ ಭಿನ್ನವಿದ್ದವು. ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಕಾನಡಾ ಮತ್ತು ನ್ಯೂಝೀಲಂಡ ಇವು ಮೂಲದಲ್ಲಿ ಬ್ರಿಟಿಶ ವಸಾಹತುಗಳಿದ್ದವು, ಅಂದರೆ ಬ್ರಿಟಿಶರು ಸಾಮೂಹಿಕವಾಗಿ ದೇಶಾಂತರ ಮಾಡಿ ನೆಲಸಿದ ವಿಶಾಲ ಪ್ರದೇಶಗಳಿದ್ದವು ಅಲ್ಲಿರುವ ಜನರು ಮೂಲದಲ್ಲಿ ಬ್ರಿಟಿಶ ಪ್ರಜೆಗಳಿದ್ದುದರಿಂದ ಅವರು ಬ್ರಿಟಿಶ ಅರಸ-ಅರಸಿಯರಿಗೂ ಪಾರ್ಲಿಮೆಂಟಿಗೂ ಅಧೀನರಿರುತ್ತಾರೆಂಬ ಕಲ್ಪನೆ ರಾಜ್ಯಕರ್ತರಲ್ಲೂ ನೆಲೆಗೊಂಡಿತ್ತು ಸಮಾಜದಲ್ಲೂ ರೂಢವಿತ್ತು. ಈ ಪ್ರದೇಶಗಳಿಗೆ ಆಗ "ಕೊಲೊನೀಸ" ಎಂಬ ಅನ್ವರ್ಥಕ ಹೆಸರು ಬಿದ್ದಿತ್ತು. ಈ ವಸಾಹತುಗಳ ಮೇಲೆ ಬ್ರಿಟಿಶರ ಸತ್ತೆಯೇ ನಡೆಯುತ್ತಿತ್ತು ಬ್ರಿಟಿಶರ ಯುದ್ಧಗಳೇ ಆಗ ಅವುಗಳಿಗೆ ಅನ್ವಯಿಸುತ್ತಿದ್ದವು, ಎಲ್ಲ ಕಾರಭಾರವೂ ಬ್ರಿಟಿಶ ಮಂತ್ರಿ ಮಂಡಳದ ಅಧೀನವಿತ್ತು. ಆದರೆ ಪ್ರಾಯಸ್ಥ ಮತ್ತು ಪ್ರಬುದ್ಧನಾದ ಮಗನು ಹೇಗೆ ಚಿಕ್ಕಂದಿನಲ್ಲಿದ್ದಂತೆ ತಂದೆಗೆ ಸಂಪೂರ್ಣ ಅಧೀನನಾಗುಳಿಯದೆ ಸ್ವಾತಂತ್ರ್ಯವನ್ನು ಬಯಸುತ್ತಾನೋ ಹಾಗೆಯೇ ಕಾಲ ಉರುಳಿದಂತೆ ಈ ವಸಾಹತು ಪ್ರದೇಶಗಳೂ "ಸ್ವ-ರಾಜ್ಯ" ಬಯಸಲು ತವಕಿಸಿದವು. ಆ ಬಗ್ಗೆ ಹೋರಾಟ ಕಾದಾಟಗಳನ್ನು ನಡೆಸಿದವು ನಮ್ಮಾ ದೇಶವು ಬ್ರಿಟಿಶರ ನೊಗವನ್ನು ಹರಿದೊಗೆಯಲು ಹೇಗೆ ದೀರ್ಘ ಕಾಲ ಪ್ರಯತ್ನ ಮಾಡಬೇಕಾಯಿತೋ, ಬಗೆಬಗೆಯ ಕಷ್ಟಗಳನ್ನು ಅನುಭವಿಸಬೇಕಾಯಿತೋ ಹಾಗೆಯೇ ಈ ವಸಾಹತುಗಳು ಕೂಡ ನಮ್ಮಷ್ಟು ಅಲ್ಲದಿದ್ದರೂ ಕೆಲಮಟ್ಟಿಗೆ ಪ್ರಮಾಣದಿಂದ ಹೋರಾಡಬೇಕಾಯಿತು, ಕಷ್ಟ-ಕ್ಲೇಶಗಳನ್ನು ಸಹಿಸಬೇಕಾಯಿತು ತ್ಯಾಗವನ್ನು ಮಾಡಬೇಕಾಯಿತು.. ಸತ್ತೆಯಲ್ಲಿದ್ದವನು ಅದನ್ನು ಎಂದೂ ಸಂತೋಷದಿಂದ ಬಿಟ್ಟುಕೊಡಲೊಪ್ಪುವದಿಲ್ಲ ತನ್ನ ಕೈಯಲ್ಲಿದ್ದ ಸತ್ತೆಯನ್ನು ಕಾಪಾಡಿಕೊಳ್ಳಲು ಅವನು ಹೆಣಗುತ್ತಾನೆ. ಸತ್ತೆಯ ನೈಸರ್ಗಿಕ ಗುಣ ಧರ್ಮವದು ಬ್ರಿಟಿಶರು ಈ ನಿಸರ್ಗ-ನಿಯಮಕ್ಕೆ ಹೇಗೆ ಅಪವಾದವಾಗಬಲ್ಲರು ? ಆದರೂ ಸತ್ತೆಯ ಪ್ರಶ್ನೆಗಾಗಿ ರಕ್ತ ಹರಿಯುವ ವರೆಗೂ ಅವರು ಎಳೆದಾಡುವ ಪ್ರಸಂಗವನ್ನು ಇಟ್ಟುಕೊಂಡಿಲ್ಲ. ೧೭೭೬ರಿಂದ ೧೭೮೩ರ ತನಕ ರಕ್ತ ಹರಿಯುವ ವರೆಗೂ ಎಳೆದಾಡಿದ್ದರಿಂದ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳನ್ನು ತಾವು ಕಳೆದುಕೊಳ್ಳಬೇಕಾಯಿತೆಂಬುದನ್ನು ಅವರು ಚನ್ನಾಗಿ ನೆನಪಿನಲ್ಲಿಟ್ಟುಕೊಂಡರು, ಆ ನಂತರ ತಮಗೂ ತಮ್ಮ ಅಧೀನವಿರುವ ಪ್ರದೇಶಗಳ ಜನರಿಗೂ ಸತ್ತೆಯ ಬಗ್ಗೆ ಅಥವಾ ರಾಜ್ಯಾಧಿಕಾರದ ಬಗ್ಗೆ ತಿಕ್ಕಾಟ ಅಥವಾ ಜಗ್ಗಾಟಗಳು ನಡೆದಾಗ, ರಕ್ತ ಹರಿಯುವಂತಹ ಪ್ರಸಂಗ ಬಂದ ಕೂಡಲೆ ಅನುನಯದ ನೀತಿಯನ್ನು ಸ್ವೀಕರಿಸಿ, ಪ್ರಜೆಗಳಿಗೆ "ಸ್ವರಾಜ್ಯದಾನ" ಮಾಡುವ ಕ್ರಮವನ್ನು ಇಟ್ಟುಕೊಂಡಿದ್ದಾರೆ ಅದರಂತೆ ೧೮೪೦ರಲ್ಲಿ ಬ್ರಿಟಿಶರು ಕಾನಡಾ ದೇಶಕ್ಕೆ "ಸ್ವರಾಜ್ಯ" ಕೊಟ್ಟರು, ಈ ಶತಮಾನದ ಪ್ರಾರಂಭಕ್ಕೆ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ನ್ಯೂಝೀಲಂಡಗಳಿಗೂ ಸ್ವರಾಜ್ಯ ಕೊಟ್ಟರು. ಈ ಸ್ವರಾಜ್ಯ ಮೊದಲು ಅಂತರ್ಗತ್ಯ ಕಾರಭಾರದ ಮಟ್ಟಿಗೆ ಮಾತ್ರ ಸೀಮಿತಗೊಳಿಸಲ್ಪಟ್ಟಿತ್ತು ವಿದೇಶ-ನೀತಿ, ವಿದೇಶ-ಕಾರಣ ಇಲ್ಲವೆ ವಿದೇಶ-ವ್ಯಾಪಾರ ಇವುಗಳ ನಿಯಂತ್ರಣಾಧಿಕಾರವನ್ನು ಬ್ರಿಟಿಶ ಸರಕಾರವೇ ಇಟ್ಟುಕೊಂಡಿತ್ತು ಆದರಿಂದ ಈ ಪ್ರದೇಶಗಳೂ ಸ್ವರಾಜ್ಯಾಧಿಕಾರ ಪಡೆಯದೆ ಸಂಪೂರ್ಣವಾಗಿ ಬ್ರಿಟಿಶ ಸತ್ತೆಗೆ ಅಧೀನವಾಗಿದ್ದ ಹಿಂದುಸ್ಥಾನ, ಬ್ರಹ್ಮದೇಶ, ಶ್ರೀಲಂಕೆ ಮೊದಲಾದ ಪ್ರದೇಶಗಳೂ ಕೂಡಿ ಈ ಶತಮಾನದ ಪ್ರಾರಂಭದಲ್ಲಿ "ಬ್ರಿಟಿಶ ಸಾಮ್ರಾಜ್ಯ"ವೆಂದು ಸಂಬೋಧಿಸಲ್ಪಡುತ್ತಿದ್ದವು ಮೊದಲನೇ ಮಹಾಯುದ್ಧದ ಕಾಲಕ್ಕೆ ಸ್ವರಾಜ್ಯಾಧಿಕಾರ ಹೊಂದಿದ ವಸಾಹತುಗಳಿಗೆ ಸಾಮ್ರಾಜ್ಯಾಧಿಕಾರದಲ್ಲೂ ಪಾಲು ಬೇಕಾಯಿತು ಯುದ್ಧದ ನಿರ್ವಹಣೆಯಲ್ಲೂ, ಯುದ್ಧೋತ್ತರ-ರಚನೆ-ಘಟನೆಗಳ ನಿಯಂತ್ರಣದಲ್ಲೂ ತಮಗೆ ಪಾಲುಗಾರಿಕೆ ಬೇಕೆಂದು ಅವು ಕೇಳಹತ್ತಿದವು. ಆಗ ಬ್ರಿಟಿಶ ರಾಜ್ಯ-ಕರ್ತರು "ಕೊಮನ್-ವೆಲ್ತ ಒಫ್ ಬ್ರಿಟಿಶ ನೇಶನ್ಸ" ಯಾನೆ ಬ್ರಿಟಿಶ ರಾಷ್ಟ್ರಗಳ ಪಾಲುಗಾರಿಕೆಯ ಸಂಘವೆಂದು ತಮ್ಮ ಸಾಮ್ರಾಜ್ಯಕ್ಕೆ ಹೊಸ ಹೆಸರು ಕೊಟ್ಟು, ಸ್ವರಾಜ್ಯಾಧಿಕಾರ ಪಡೆದ ಕಾನಡಾ, ಆಫ್ರಿಕಾ, ಆಸ್ಟ್ರೇಲಿಯಾ, ನ್ಯೂಝೀಲಂಡ ಇವುಗಳಿಗೆ ಕೆಲವೊಂದು ಹಕ್ಕುಗಳನ್ನೂ ಅಧಿಕಾರಗಳನ್ನೂ ಬಿಟ್ಟುಕೊಟ್ಟರು. ಬ್ರಿಟಿಶರು ಅಧಿಪತ್ಯದ ಅಥವಾ ಯಜಮಾನಿಕೆಯ ಅಧಿಕಾರವನ್ನಷ್ಟೇ ತಮ್ಮ ಕಡೆಗಿಟ್ಟುಕೊಂಡರು. ಈ ಬ್ರಿಟಿಶ ರಾಷ್ಟ್ರಕೂಟಕ್ಕೆ ನಮ್ಮಲ್ಲಿಯ ಹಿಂದು ಅವಿಭಕ್ತ ಕುಟುಂಬದ ಉಪಮೆ ಸರಿಹೋಗುವಂತಿದೆ. ಬ್ರಿಟನ್ನು ಆ ಕುಟುಂಬದ ಯಜಮಾನಿಕೆಯ ಸ್ಥಾನದಲ್ಲಿದೆ ಕುಟುಂಬದೊಳಗಿನ ಜನರು ಹೇಗೆ ಪ್ರಾಯಕ್ಕೆ ಬಂದ ಮೇಲೆ ವೈಯಕ್ತಿಕ ಸ್ವಾತಂತ್ರ್ಯವನ್ನು ಬಯಸುತ್ತಿರುವರೋ ಹಾಗೆಯೇ ಕಾನಡಾ ಮೊದಲಾದ ದೇಶಗಳು ತಮ್ಮ ಮಟ್ಟಿಗೆ ಸ್ವತಂತ್ರವಾಗಿದ್ದವು ಮುಂದೆ ಪ್ರಮೇಣ ಕುಟುಂಬದ ಅಸ್ತಿತ್ವ ಮಹತ್ವ ಟಿಕ್ಕುವಲ್ಲಿ ಪಾಲು ಬೇಡಿದವು ಆದರಿಂದ ಕುಟುಂಬದ ಹಿತಗಳ ವಿಚಾರ ಮಾಡಲು ಕುಟುಂಬದ ಜನರು ಒಟ್ಟಿಗೆ ಸೇರುವಂತೆ ಬ್ರಿಟಿಶ ರಾಷ್ಟ್ರಕೂಟದೊಳಗಿನ ಮುಖ್ಯ ಮಂತ್ರಿಗಳು ಕಾಲಕಾಲಕ್ಕೆ ಒಟ್ಟಿಗೆ ಸೇರಿ ವಿಚಾರ-ವಿನಿಮಯ ಮಾಡುವ ಪ್ರಥೆ ಅಸ್ತಿತ್ವದಲ್ಲಿ ಬಂತು. ಈ ವಿಚಾರ-ವಿನಿಮಯಗಳ ಫಲವಾಗಿ "ಭಾಗೀದಾರಿ"ಯ (Common Wealth) ಘಟಕಗಳ ಸ್ವಾತಂತ್ರ್ಯವೂ ಅಧಿಕಾರವೂ ವಿಶೇಷ ಹೊಂದುತ್ತ ನಡೆದವು ೧೯೩೧ರಲ್ಲಿ ಸ್ವಾಯತ್ತೆಯ ಅಧಿಕಾರ ಹೊಂದಿದ ಐರ್ಲಂಡವು ತನ್ನ ಸ್ವಾತಂತ್ರ್ಯದ ಮರ್ಯಾದೆಯನ್ನು ಬೆಳಸುತ್ತ ಬೆಳೆಯುತ್ತ, ೨ನೇ ಮಹಾಯುದ್ಧದ ಕಾಲದಲ್ಲಿ, ಯುದ್ಧದೊಳಗೆ ತಾನು ತಟಸ್ಥವಾಗುಳಿಯುವೆನೆಂದು ಹೇಳಿ, ಬ್ರಿಟಿಶ ರಾಜ್ಯಕರ್ತರ ವಿನಂತಿಗಳನ್ನೂ ಬೆದರಿಕೆಗಳನ್ನೂ ಸಂಪೂರ್ಣ ಅಲಕ್ಷಿಸಿ, ಕೊನೆಯ ವರೆಗೂ ತಟಸ್ಥವಾಗಿಯೇ ಉಳಿಯಿತು.! ಹಿಂದೆ ಬ್ರಿಟಿಶ ಸರಕಾರವು ಯಾವದೊಂದು ದೇಶದ ವಿರುದ್ಧ ಯುದ್ಧ ಸಾರಿದೊಡನೆ ಅವರ ಸಾಮ್ರಾಜ್ಯದೊಳಗಿನ ಅಥವಾ ಪಾಲುಗಾರಿಕೆಯೊಳಗಿನ ಎಲ್ಲ ದೇಶಗಳೂ ಪ್ರತ್ಯೇಕವಾಗಿ ಯುದ್ಧ ಸಾರಿದ ಆ ಯುದ್ಧದಲ್ಲಿ

The Agricultural & Industrial Bank, Ltd.,

Regd Office "LAXMI NIVAS Buildings",

COONDAPOOR, S Kanara.

SEASON DEPOSITS

Maturing on or *before 30th June 1949* are now accepted with interest ranging from $2\frac{1}{4}$% to $3\frac{1}{4}$% per annum.

Every kind of Banking business transacted.

For terms etc, please apply to any of our following

Branches.

1 Coondapoor	7 Ankola.	13 Sirsi
2 Mangalore	8 Bhatkal	14. Dharwar
3. Somwarpet	9 Gokarn	15 Gadag
4 Virajpet	10 Honavar.	16. Haveri
5 Shimoga	11. Karwar	17. Hubli.
6. Nagar	12. Kumta	18. Belgaum

19 BOMBAY (391-M. Jaipuria House, Kalbadevi Road)

ಸೇರಬೇಕಾಗುತ್ತಿತ್ತು. ೧೯೧೪-೧೮ ರ ಮಹಾ ಯುದ್ಧದಲ್ಲಿ ಕಾನಡಾ ವಗೈರೆ ದೇಶಗಳು ಪ್ರತ್ಯೇಕವಾಗಿ ಯುದ್ಧ ಸಾರಿದ್ದಿಲ್ಲ, ಯುದ್ಧದಿಂದ ಅಲಿಪ್ತವುಳಿಯುವ ಕಲ್ಪನೆಯೂ ಅವುಗಳಿಗೆ ಹೊಳೆಯಲಿಲ್ಲ. ಬಸವಣ್ಣನ ಹಿಂದೆ ಅವನ ಬಾಲವೆಂಬಂತೆ ಬ್ರಿಟನ್ನಿನೊಡನೆ ಅದರ ಅಧೀನವಿದ್ದ ಸಕಲ ದೇಶಗಳೂ ರಾಷ್ಟ್ರಗಳೂ ಚಿಕ್ಕ-ಪುಟ್ಟ ಸಂಸ್ಥಾನಗಳೂ ಕೂಡ ಆ ಯುದ್ಧದಲ್ಲಿ ಸೇರ್ಪಡೆಯಾಗಿದ್ದವು. ೧೯೩೯ರಲ್ಲಿ ೨ನೇ ಮಹಾ ಯುದ್ಧ ಪ್ರಾರಂಭವಾದಾಗ ಈ ಸ್ಥಿತಿಯಲ್ಲಿ ಪೂರ್ತಿ ಬದಲಾವಣೆಯಾಗಿತ್ತು. ಸ್ವತಂತ್ರ ವಸಾಹತುಗಳು ಆಗ ಬಾಲಗಳಾಗಿ ಉಳಿದಿದ್ದಿಲ್ಲ. ೧೯೩೯ರಲ್ಲಿ ಬ್ರಿಟನ್ನು ಜರ್ಮನಿಯ ವಿರುದ್ಧ ಯುದ್ಧ ಸಾರಿದಾಗ ಕೆನಡಾ ವಗೈರೆ ದೇಶಗಳು ವಿಧೇಯ ಮಕ್ಕಳಂತೆ ಆ ಯುದ್ಧದಲ್ಲಿ ಸೇರಿದಾಗ್ಯೂ ದಕ್ಷಿಣ ಆಫ್ರಿಕೆಯನ್ನು ಆ ಯುದ್ಧದಿಂದ ಅಲಿಪ್ತವಿಡುವ ಪ್ರಯತ್ನವನ್ನು ಈಗ ಆಫ್ರಿಕೆಯಲ್ಲಿ ಅಧಿಕಾರ ರೂಢವಾಗಿರುವ ಪಕ್ಷವು ನಡಸಿತ್ತು. ಅವರ ಪ್ರಯತ್ನ ನಿಷ್ಫಲವಾಗಿ ಯುದ್ಧದಲ್ಲಿ ಸೇರಬೇಕೆಂದು ಆಗ ಅಧಿಕಾರದಲ್ಲಿದ್ದ ಜ॥ ಸ್ಮಟ್ಸರು ತಮ್ಮ ಪಾರ್ಲಿಮೆಂಟಿನಲ್ಲಿ ಮಂಡಿಸಿದ ಗೊತ್ತುವಳಿಯು ಬಹುಮತದಿಂದ ಪಾಸಾಯಿತು; ಮತ್ತು ದಕ್ಷಿಣ ಆಫ್ರಿಕೆಯೂ ಯುದ್ಧದಲ್ಲಿ ಸೇರಿತು. ಈ ಉದಾಹರಣೆಯ ಮೇಲಿಂದ ಬ್ರಿಟಿಶ್ ರಾಷ್ಟ್ರ ಕೂಟದೊಳಗಿನ ಸ್ವಾಯತ್ತ ಘಟಕಗಳ ಅಧಿಕಾರ-ಮರ್ಯಾದೆ ಎಷ್ಟು ವಿಶಾಲವಾಗಿದೆಂಬುದು ಸ್ಪಷ್ಟವಾಗುತ್ತದೆ. ೧೯೩೧ರಲ್ಲಿ ಕೂಡಿದ ಬ್ರಿಟಿಶ ಭಾಗೀದಾರಿಯ ಘಟಕಗಳ ಪ್ರತಿನಿಧಿಗಳ ಪರಿಷತ್ತಿನಲ್ಲಿ "ವೆಸ್ಟ ಮಿನಿಸ್ಟರ ಸ್ಟೆಚ್ಯೂಟ" ಎಂಬದೊಂದು ಸನದು ತಯಾರಾಗಿ, ಸ್ವಾಯತ್ತ ಘಟಕಗಳ ಸ್ವಾತಂತ್ರ್ಯಾಧಿಕಾರದ ಮಿತಿ-ಮೇರೆಗಳು ನಿರ್ಣಯಿಸಲ್ಪಟ್ಟಿದ್ದವು. ಈ ಘಟಕಗಳು ಆ ಸನದಿನಂತೆ ಸಂಪೂರ್ಣ ಸ್ವತಂತ್ರವಾದಂತೆಯೇ ಆಗಿವೆ. ಆ ಸನದಿನ ಮೇರೆಗೆಯೇ ಇಂದು ಆಯರ್ಲಂಡವು ಬ್ರಿಟಿಶರ ಭಾಗೀದಾರಿಯೊಳಗಿಂದ ಸಿಡಿದು ಬೇರೆಯಾಗಿದೆ. ಆದರೂ ಈ ಭಾಗೀದಾರಿಯೊಳಗುಳಿಯುವದು ಸ್ವಸಂರಕ್ಷಣೆಯ ದೃಷ್ಟಿಯಿಂದ ಹಿತಾವಹವಿರುವದರಿಂದಲೂ ಬ್ರಿಟಿಶ ರಾಜ್ಯ-ಚಕ್ರದಲ್ಲಿ ಗೌರವದ ಸ್ಥಾನ-ಮಾನಗಳು ಸಿಗುವವೆಂಬ ಭರವಸೆಯಿರುವದರಿಂದಲೂ ಆಸ್ಟ್ರೇಲಿಯಾ ಪ್ರಭೃತಿ ಗೌರವರ್ಣೀಯರ ವಸಾಹತುಗಳು ಈ ಭಾಗೀದಾರಿಯನ್ನು ಕಾಪಾಡಿಕೊಂಡು ಹೋಗಬಯಸುತ್ತಿವೆ.

* * *

೧೯೪೭ರಿಂದ ಈಚೆಗೆ ಈ ಬ್ರಿಟಿಶ ರಾಜ್ಯಚಕ್ರದೊಳಗೆ ೪ ಹೊಸ ಸ್ವಾಯತ್ತ ಘಟಕಗಳು ನಿರ್ಮಾಣವಾಗಿವೆ. ಅವು ಯಾವವೆಂದರೆ ಹಿಂದುಸ್ಥಾನ, ಪಾಕಿಸ್ಥಾನ, ಶ್ರೀಲಂಕೆ ಮತ್ತು ಬ್ರಹ್ಮದೇಶ. ಇವುಗಳಲ್ಲಿ ಬ್ರಹ್ಮದೇಶವು ಈಗಾಗಲೇ ಬ್ರಿಟಿಶರ ಉರುಲು ಹರಕೊಂಡು ಬಿಟ್ಟಿದೆಯೆಂದು ಹೇಳಬಹುದು. ಶ್ರೀಲಂಕೆಯು ಬ್ರಿಟಿಶರ ಸಂಬಂಧ ಕಡಿದುಕೊಂಡು ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗುವಷ್ಟು ಜನಸಂಪನ್ನವಾಗಲಿ ಧನಸಂಪನ್ನವಾಗಲಿ ಇರುವದಿಲ್ಲ. ಪಾಕಿಸ್ತಾನದ ಪರಿಸ್ಥಿತಿಯಾದರೂ ಬ್ರಿಟಿಶರಿಂದ ಸಿಡಿದು ಬೇರೆಯಾಗಿ ವ್ಯವಹರಿಸುವಷ್ಟು ಅನುಕೂಲವಿಲ್ಲ. ಅಖಂಡ ಹಿಂದುಸ್ಥಾನವನ್ನು ಒಡೆದು ಪ್ರತ್ಯೇಕಿಸಿದ ಪಾಕಿಸ್ತಾನವು ತನ್ನ ಕೈಗೊಂಬೆಯಾಗಲ್ಲದಿದ್ದರೂ ನಂಬಿಗಸ್ತ ಅನುಯಾಯಿಯಾಗುಳಿಯುವದೆಂಬ ವಿಶ್ವಾಸದಿಂದಲೇ ಧೂರ್ತ ಬ್ರಿಟಿಶ ರಾಜಕಾರಣಿಗಳು ಪಾಕಿಸ್ತಾನ-ನಿರ್ಮಿತಿಯ ಬೇಡಿಕೆಗೆ ಪ್ರೋತ್ಸಾಹ ಕೊಟ್ಟಿದ್ದರೆಂಬುದೂ, ಕೊನೆಗೆ ಭಾರತದ ವಿಚ್ಛೇದನೆ ಮಾಡಿದರೆಂಬುದೂ ಜನಜನಿತ ವಿಷಯಗಳಾಗಿವೆ. ಆದರಿಂದ ಪಾಕಿಸ್ತಾನವು ಕೆಲವು ಕಾಲವಾದರೂ ಬ್ರಿಟಿಶರ ಪ್ರಭಾವಳಿಯೊಳಗಿಂದ ಹೊರಬೀಳುವಂತಿಲ್ಲ. ಉಳಿದದ್ದು ನಮ್ಮ ಹಿಂದುಸ್ಥಾನವು. ಬ್ರಿಟಿಶ ರಾಜ್ಯಚಕ್ರಕ್ಕೂ ಹಿಂದುಸ್ಥಾನಕ್ಕೂ ಯಾವ ಸಂಬಂಧವುಳಿಯುವದು ಯಾ ಉಳಿಯಬೇಕೆಂಬುದು ಇನ್ನೂ ಅನಿಶ್ಚಿತವಿದೆ. ಬ್ರಿಟಿಶರ ಪಾಲುಗಾರಿಕೆಯು ಅಥವಾ ಕೂಟದ ಸಂಬಂಧ ನಮಗೆ ಬೇಡೆಂದು ಹೇಳುವವರು ನಮ್ಮಲ್ಲಿ ಬಹಳ ಜನರಿದ್ದಾರೆ. ಆ ಪಾಲುಗಾರಿಕೆಯಲ್ಲುಳಿಯುವದು ಇಷ್ಟ ಮತ್ತು ಶ್ರೇಯಸ್ಕರವಿರುತ್ತದೆಂದು ಭಾವಿಸುವ ಅನುಭವಿಕ ರಾಜಕಾರಣಿಗಳೂ ನಮ್ಮಲ್ಲಿ ಬಹಳ ಮಂದಿಯಿದ್ದಾರೆ. ಈ ವಾದದ ಇತ್ಯರ್ಥ ಇನ್ನೂ ಆಗಿಲ್ಲ. ಹಿಂದುಸ್ಥಾನ ಸರಕಾರವಾಗಲಿ ನಮ್ಮ ಘಟನಾ ಸಮಿತಿಯವರಾಗಲಿ ಇನ್ನೂ ಆ ಸಂಬಂಧದ ಕೊನೆಯ ನಿರ್ಣಯವನ್ನು ಮಾಡಿರುವದಿಲ್ಲ. ಭಾರತ ಸರಕಾರದ ಮುಖ್ಯ ಮಂತ್ರಿಗಳೂ ಸದ್ಯಕ್ಕೆ ಭಾರತ ಸರಕಾರದ ವಿದೇಶ ಖಾತೆಯ ಅಧ್ಯಕ್ಷರೂ ಆಗಿರುವ ಪಂ॥ ಜವಾಹರಲಾಲ ನೆಹರೂರವರು, ಕೆಲವೊಂದು ದಂಡಕಗಳನ್ನು ಹಾಕಿ, ಬ್ರಿಟಿಶ ರಾಷ್ಟ್ರ-ಕೂಟದ ಹಾಗೂ ಹಿಂದುಸ್ಥಾನದ ಸಂಬಂಧವನ್ನು ರೂಪಿಸುವ ಹೊಣೆಯನ್ನು ಬ್ರಿಟಿಶರ ಮೇಲೂ ಅವರ ಗೆಳೆಯರ ಮೇಲೂ ಹಾಕಿದ್ದಾರೆ. (೧) ಹಿಂದುಸ್ಥಾನವು ಸ್ವತಂತ್ರ, ಸಾರ್ವಭೌಮ, ಪ್ರಜಾಸತ್ತಾತ್ಮಕ ರಾಷ್ಟ್ರವಾಗುಳಿಯಬಯಸುತ್ತದೆ. (೨) ಹಿಂದುಸ್ಥಾನವು ಬ್ರಿಟಿಶರ ಪಾಲುಗಾರಿಕೆಯಲ್ಲುಳಿಯಬೇಕಾದರೆ ಹಿಂದುಸ್ಥಾನದ ಗೌರವಕ್ಕೂ ಧ್ಯೇಯಕ್ಕೂ ಅನುಕೂಲವಾಗುವಂತೆ ಆ ಪಾಲುಗಾರಿಕೆಯ ಘಟನೆಯಲ್ಲೂ ನಿಯಮಗಳಲ್ಲೂ ತಕ್ಕ ಬದಲಾವಣೆಗಳನ್ನು ಮಾಡಲು ಬ್ರಿಟಿಶ ರಾಜಕಾರಣಿಗಳು ಮುಂದಾಗಬೇಕು. (೩) ಈ ಪಾಲುಗಾರಿಕೆಯಲ್ಲಿ ಉಳಿದ ಮಾತ್ರಕ್ಕೆ ಹಿಂದುಸ್ಥಾನವು ಜಗತ್ತಿನೊಳಗಿನ ಯಾವದೇ ರಾಷ್ಟ್ರದೊಡನೆ ವಿರೋಧ ಕಟ್ಟಿಕೊಳ್ಳಲು ಸಿದ್ಧವಾಗುವಂತಿಲ್ಲ. (೪) ಮೂರನೇ ಮಹಾಯುದ್ಧ ದುರ್ದೈವದಿಂದ ಒದಗಿ ಬಂದಲ್ಲಿ ಹಿಂದುಸ್ಥಾನವು ತಾನಾಗಿ ಅದರಲ್ಲಿ ಬೀಳುವಂತಿಲ್ಲ. (೫) ಏಶಿಯಾ ಖಂಡದಲ್ಲಿ ಇನ್ನು ಮುಂದೆ ಎಲ್ಲೂ "ವಸಾಹತಿನ ರಾಜ್ಯ" (ಪರಕೀಯರ ಅಂಕೆಗೊಳಪಟ್ಟ ಸ್ವಾಯತ್ತ ರಾಜ್ಯವೆಂದು ಇದರ ಅರ್ಥ) ನಡೆಯುವಂತಿಲ್ಲ; ಅದನ್ನು ನಡೆಯಗೊಡಲು ಹಿಂದುಸ್ಥಾನವು ಒಪ್ಪುವಂತಿಲ್ಲ. ಈ ಮಾತುಗಳನ್ನೊಪ್ಪಿಕೊಂಡು ಬ್ರಿಟಿಶರು ಹಿಂದುಸ್ಥಾನದೊಡನೆ ಸಹಕರಿಸಬಯಸುತ್ತಿದ್ದರೆ ಹಿಂದುಸ್ಥಾನವೂ ಅವರೊಡನೆ ಸಹಕರಿಸಲೊಪ್ಪುವದೆಂದು ಪಂ॥ ಜವಾಹರಲಾಲರು ಸ್ಪಷ್ಟಪಡಿಸಿದ್ದಾರೆ.

* * *

ಹಿಂದುಸ್ಥಾನವನ್ನು ಬ್ರಿಟಿಶ ರಾಷ್ಟ್ರಕೂಟದಲ್ಲಿಟ್ಟುಕೊಳ್ಳುವದಕ್ಕಾಗಿ ಬ್ರಿಟಿಶ-ರಾಜಕಾರಣಿಗಳು ಪ್ರಯತ್ನ ಮಾಡುತ್ತಲಿದ್ದಾರೆ. ಕೆಲವರು ಬ್ರಿಟಿಶ ಸಂಬಂಧ-ಸಹಕಾರಗಳಿಂದ ಹಿಂದುಸ್ಥಾನಕ್ಕೆ ಬಹಳ ಲಾಭವುಂಟೆಂದು ತೋರಿಸಿ, ಬ್ರಿಟಿಶ ರಾಷ್ಟ್ರಕೂಟದಲ್ಲುಳಿಯಲು ಹಿಂದುಸ್ಥಾನದ ಮನವೊಲಿಸುತ್ತಿದ್ದಾರೆ. ಹಿಂದುಸ್ಥಾನವು ಬ್ರಿಟಿಶರ ಸಂಬಂಧವನ್ನು ತುಂಡರಿಸಿಕೊಂಡರೆ ಏಕಾಕಿಯಾಗಿ ಪರಚಕ್ರಗಳ ಪೀಡೆಗೆ ಗುರಿಯಾಗುವದೆಂದು ಭೀತಿ ಕೆಲವರು ಬೆದರಿಸುತ್ತಿದ್ದಾರೆ. ಆದರೆ ಹಿಂದುಸ್ಥಾನವು ಈ ಮಾತುಗಳಿಗೆ ಮೋಸಹೋಗಬಾರದು. ಭೀತಿ ಹಾಕಿ ಇಲ್ಲವೆ ಆಮಿಷ ತೋರಿಸಿ ಹಿಂದುಸ್ಥಾನವನ್ನು ಬ್ರಿಟಿಶರ ರಾಷ್ಟ್ರಕೂಟದಲ್ಲಿ ಉಳಿಸಿಕೊಳ್ಳಬಯಸುವವರು ತಮ್ಮ ಸ್ವಾರ್ಥಕ್ಕಾಗಿ ಹಾಗೆ ಮಾಡುತ್ತಾರೆಂಬುದನ್ನೂ ಕೇವಲ ಹಿಂದುಸ್ಥಾನದ ಮೇಲಿನ ಪ್ರೇಮದಿಂದ ಇಲ್ಲವೆ ಹಿಂದುಸ್ಥಾನಕ್ಕೊಂದು ಉಪಕಾರ ಮಾಡಬೇಕೆಂಬ ಬುದ್ಧಿಯಿಂದ ಮಾಡುತ್ತಿರುವದಿಲ್ಲೆಂಬುದನ್ನೂ ಹಿಂದೀಯರು ಚನ್ನಾಗಿ ಬಲ್ಲರು. ಆದರಿಂದ ಹಿಂದೀಯರು ವಿಚಾರಪೂರ್ವಕವಾಗಿ ಮುಂದಡಿಯಿಡಬೇಕಾಗಿದೆ, ತನ್ನ ವಿದೇಶ ಕಾರಣದ ಧ್ಯೇಯ-ಧೋರಣೆಗಳನ್ನು ನಿಶ್ಚಿತಗೊಳಿಸಿಕೊಳ್ಳಬೇಕಾಗಿದೆ. ಯಾರೊಡನೆಯೂ ಹಿಂದುಸ್ಥಾನವು ಶತ್ರುತ್ವದಿಂದಿರಬಯಸುವದಿಲ್ಲ. ಅದೇ ಮೇರೆಗೆ ಯಾರೊಡನೆಯೂ ಅದು ಗಾಢಾಂತರಂಗದ ಮಿತ್ರತ್ವವನ್ನು ಬೆಳಸಲಾರದು. ತನ್ನ ಈ ಧ್ಯೇಯಕ್ಕೆ ಬಾಧೆ ಬರದಂತೆ ಬ್ರಿಟಿಶರ ಪಾಲುಗಾರಿಕೆಯಲ್ಲುಳಿಯಲು ಸಾಧ್ಯವಾಗುವಂತಿದ್ದರೆ ಮಾತ್ರ ಅದು ಆ ಪಾಲುಗಾರಿಕೆಯಲ್ಲುಳಿಯುವದು. ಇಲ್ಲದಿದ್ದರೆ ಆಯರ್ಲಂಡದ ಮಾರ್ಗವನ್ನೇ ಅದು ಅನುಸರಿಸುವದು.

* * *

ಬ್ರಿಟಿಶರು ಹಿಂದುಸ್ಥಾನವನ್ನು ತಮ್ಮ ರಾಷ್ಟ್ರಕೂಟದಲ್ಲುಳಿಸಿಕೊಳ್ಳಲು ಬಯಸುತ್ತಿದ್ದರೂ ಆ ಕೂಟದೊಳಗಿನ ಬೇರೆ ಕೆಲವು ಘಟಕಗಳು ತಮ್ಮ ವರ್ಣ-ದ್ವೇಷದ ಧೋರಣೆಯಿಂದ ಹಿಂದುಸ್ಥಾನವು ಆ ಕೂಟದಿಂದ ಹೊರಬೀಳುವಂತೆ ಮಾಡುತ್ತಿವೆಂಬುದನ್ನು ಮರೆಯಲಾಗದು. ಆಸ್ಟ್ರೇಲಿಯವು ತನ್ನ ವಿಶಾಲ ಭೂಖಂಡವನ್ನು ಬಿಳಿಯರಿಗಾಗಿ ಕಾದಿಡಬಯಸುತ್ತದೆ. ಕಾನಡಾದಲ್ಲೂ ಶ್ವೇತೇತರರಿಗೆ ಪ್ರವೇಶ ಸಿಗುವದು ಕಷ್ಟ. ದಕ್ಷಿಣ ಆಫ್ರಿಕೆಯ ಸರಕಾರವಂತೂ ಅಲ್ಲಿ ಹೋಗಿ ನೆಲಸಿರುವ ಮತ್ತು ಆ ದೇಶದ ಅಭ್ಯುದಯ ಸಾಧಿಸಲು ನೆರವಿತ್ತ ಹಿಂದೀಯರನ್ನು ಹೊರದೂಡುವ ಹೊಂಚು ಹಾಕಿದೆ! ೨-೩ ತಿಂಗಳ ಹಿಂದೆ ಆಫ್ರಿಕೆಯ ಕೆಲವು ಭಾಗಗಳಲ್ಲಿ ಅಲ್ಲಿಯ ಬಿಳಿಯರೂ ಆ ಬಿಳಿಯರು ಎಬ್ಬಿಸಿಕೊಟ್ಟ ದೇಶೀಯ ನಿಗ್ರೋದರೂ ಹಿಂದೀಯರ ವಿರುದ್ಧ ನಡಸಿದ ಅತ್ಯಾಚಾರಗಳು ನಮ್ಮ ಕಣ್ಮುಂದಿವೆ. ಇಂತಹ ವರ್ಣ-ದ್ವೇಷಿ ವರ್ಣಾಭಿಮಾನಿಗಳ ಕುಟುಂಬದಲ್ಲಿ ಸ್ವಾಭಿಮಾನಿ ಭಾರತೀಯರು ಹೇಗೆ ಉಳಿಯಬಲ್ಲರು? ಲಂಡನದಲ್ಲಿ ಸೇರುವ ಮುಖ್ಯ-ಮಂತ್ರಿಗಳ ಪರಿಷತ್ತಿನ ಕಾಲಕ್ಕೆ ಆಫ್ರಿಕೆಯೊಳಗಿನ ಹಿಂದೀಯರ ಪ್ರಶ್ನೆಯನ್ನು ಕುರಿತು ಹಿಂದುಸ್ಥಾನ ಮತ್ತು ಪಾಕಿಸ್ತಾನಗಳ ಮುಖ್ಯ ಮಂತ್ರಿಗಳೊಡನೆ ವಿಚಾರ-ವಿನಿಮಯ ಮಾಡಬೇಕೆಂದು ದ. ಆಫ್ರಿಕೆಯ ಮುಖ್ಯಮಂತ್ರಿ ಡಾ॥ ಮಾಲನರಿಗೆ ಮಾಡಿದ ಸೂಚನೆಯನ್ನು, ಲಂಡನದಲ್ಲಿ ಬಹಳ ದಿನ ಉಳಿಯಲು ಸಾಧ್ಯವಾಗಲಿಕ್ಕಿಲ್ಲೆಂಬ ನೆವ ಹೇಳಿ, ಡಾ॥ ಮಾಲನರು ನಿರಾಕರಿಸಿದ್ದಾರೆ [illegible] ಹಿಂದಿನ. ಇಂತಹ ಅಪಮಾನಗಳನ್ನು ಸಹಿಸಿಕೊಂಡು ಹಿಂದುಸ್ಥಾನವು ಬ್ರಿಟಿಶ ರಾಷ್ಟ್ರಕೂಟದಲ್ಲಿ ಹೋಗುಳಿಯಬೇಕೆಂಬುದನ್ನು ಆ ಕೂಟದವರು ಹೇಳಬಲ್ಲರೇ?

NOTICE.

Public of the North Kanara District while coming for revalidation of petrol coupons should bring with them the registration certificate of their vehicles.

Karwar, 16-4-1949.

S. G. PRADHAN,
P. A. to
Dist Magistrate, Kanara

ಈ ಎಲ್ಲ ವಿಷಯದ ಬರುವ ಮುಖ್ಯ ಮಂತ್ರಿಗಳ ಪರಿಷತ್ತಿನಲ್ಲಿ ನಡೆಯುವುದು. ನಮ್ಮ ಮುಖ್ಯ ಮಂತ್ರಿಗಳಾದ ಪಂ|| ಜವಾಹರಲಾಲರು ಹಿಂದುಸ್ಥಾನದ ಭೂಮಿಕೆಯನ್ನು ಈಗಾಗಲೇ ಪಲವಾವರ್ತಿ ಸ್ಪಷ್ಟ ಪಡಿಸಿರುತ್ತಾರೆ. ಅವರ ಆ ಧೋರಣೆಗೆ ರಾಷ್ಟ್ರವು ಸಂಪೂರ್ಣ ಬೆಂಬಲವನ್ನಿತ್ತಿದೆ. ಕಾಮನವೆಲ್ತು ಬ್ರಿಟಿಶ ಮುತ್ಸದ್ದಿಗಳ ಮಾತಿಗೆ ಮರುಳಾಗಿ ನಮ್ಮ ರಾಷ್ಟ್ರದ ಘನತೆಗೂ ಗೌರವಕ್ಕೂ ಕುಂದು ಬರುವಂತಹ ಯಾವದೇ ನಿಲುಮೆಯನ್ನು ಸ್ವೀಕರಿಸಲಿಕ್ಕಿಲ್ಲೆಂಬ ಭರವಸೆಯನ್ನು ನಾವು ಹಿಡಿಯೋಣ.

* *

ನಮ್ಮ ಮುಂಬಯಿ ಸರಕಾರದ ಮದ್ಯ-ಪ್ರತಿಬಂಧದ ಅಧ್ವಾನಗಳ ಬಗೆಗೆ ಆಶ್ಚರ್ಯಕಾರಕವಾದ ಕಾಯದೆಗಳ ಮೇಲೆ ಕಾಯದೆಗಳೂ, ಹುಕುಮುಗಳ ಮೇಲೆ ಹುಕುಮುಗಳೂ ಬರುತ್ತಿವೆ! ಆದರೆ ಇದರ ಪರಿಣಾಮ ಏನಾಗುವದೆಂದು ಮಾತ್ರ, ಎಷ್ಟೇ ತಲೆ ಕೆರೆದರೂ ಗೋಚರವಾಗುವದಿಲ್ಲ! ನಾಡಿನೊಳಗಿದ್ದ ಮದ್ಯದ ಅಂಗಡಿಗಳೂ ಗಡಂಗಗಳೂ ಮುಚ್ಚಲ್ಪಟ್ಟಿವೆ ಎಂಬುದು ನಿಜ; ಸರಕಾರದವರ ಅಬಕಾರಿ ಉತ್ಪನ್ನ ಮುಳುಗಿದೆಂಬುದೂ ನಿಜ. ಆದರೆ ಮದ್ಯದ ವ್ಯಾಪಾರ ಮಾತ್ರ ಕಡಿಮೆಯಾಗಿಲ್ಲ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವದಾದರೆ, ಮದ್ಯ-ಪ್ರತಿಬಂಧವಿಲ್ಲದಿದ್ದಾಗ ನಡೆಯುತ್ತಿದ್ದ ಮದ್ಯದ ವ್ಯಾಪಾರಕ್ಕಿಂತ ಈಗ ಆ ವ್ಯಾಪಾರ ಹೆಚ್ಚಾಗಿದೆ! ಆಗ ಮದ್ಯ ಕುಡಿಯದಿದ್ದ ವರ್ಗದವರೂ ಈಗ ಮದ್ಯ ಕುಡಿಯಹತ್ತಿದ್ದಾರೆ! ಕಳ್ಳಬಟ್ಟಿ ವ್ಯಾಪಾರ ಕಲ್ಪಕತನದಿಂದ ನಡೆಯುತ್ತಲಿದೆ; ಕಳ್ಳ ಸರಾಯಿಯು ಕಣ್ಣ ಮುಂದೆ ವ್ಯರ್ಥವಾಗಿರುವದರಿಂದಲೂ ಅದರಲ್ಲಿ ಅನೇಕರು ಲಾಭವಾಗುತ್ತಿರುವದರಿಂದಲೂ ಹಿಂದೆ ಮದ್ಯದ ಸಂಸರ್ಗವಿಲ್ಲದಿದ್ದವರು ಕೂಡ ಈಗ ಆ ವ್ಯಾಪಾರದಲ್ಲಿ ಸೇರಿರುತ್ತಾರೆ! ಅಂತು ಸರಕಾರದವರ ಮದ್ಯ ನಿರ್ಬಂಧವೆಂಬುದು ಈಗ ಕಾಯದೆಯ ಪುಸ್ತಕಗಳಲ್ಲಿ ಮಾತ್ರ ಯಶಸ್ವಿಯಾಗಿದೆ ವಿನಹ ವಾಸ್ತವಿಕ ಪ್ರಪಂಚದಲ್ಲಿ ಅದು ಎಳ್ಳಷ್ಟೂ ಯಶಸ್ವಿಯಾಗಿರುವದಿಲ್ಲ.

ಜಾಹೀರ ನೋಟೀಸು.

ಕೆ. ಪಿ. ಸಿ. ಎಜ್ಯುಕೇಶನ್ ಬೋರ್ಡಿನವರ ದಿ ಎಲ್. ಟಿ. ಆಯ್. ಕೊಸ್ಕಾಟೆ, ಹೊನ್ನಾವರ ಇವರಿಂದ:—

[illegible]

ತಾ. ೧೬-೪-೧೯೪೯ರಲ್ಲಿ ಈ ದಿನಾಂಕ [illegible]

ಪ್ರಿನ್ಸಿಪಾಲ್,

K. BALAKRISHNA RAO

ತಾ. ೧೬-೪-೧೯೪೯ [illegible]

ಸ್ಥಾನಿಕ ವೃತ್ತಾಂತ

(೫ನೇ ಪುಟದಿಂದ ಮುಂದರಿಸಿದ್ದು.)

[illegible]

ಅಂಕೋಲಾ— [illegible]

[illegible]

ಯಲ್ಲಾಪುರ— (ತಾ. ೧೫-೪-೧೯೪೯) ಇಲ್ಲಿಯ ದೇವೀ ದೇವಸ್ಥಾನದ ಜಾತ್ರೆಯಾಗುವ ಬೈಲು ಗಾಂವಠಾಣಾ ಕ್ಷೇತ್ರದಲ್ಲಿ ಬರುತ್ತದೆ. ಸರಕಾರದವರು ಜಾತ್ರೆಗಾಗಿ ಅದನ್ನು ಹಾಗೆಯೇ ಬಿಟ್ಟಿರುತ್ತಾರೆ. ಅಲ್ಲಿ ಬಿನ್-ಶೇತಕಿ ಉಪಯೋಗ ಮಾಡಬಾರದೆಂದೂ ಹಣ ಪಡೆದು ಯಾವದೇ ಕ್ರಮ ನಡಿಸಕೂಡದೆಂದೂ ಸರಕಾರದ ಕಟ್ಟಪ್ಪಣೆಯಿದೆ. ಅದರಿಂದ ಹಿಂದೆ ೧೯೩೬ರಲ್ಲಿ ಗದಗದ ನಾಟಕ ಕಂಪನಿಯವರು ಇಲ್ಲಿ ಬಂದಾಗ ಆ ಬೈಲಲ್ಲಿ ತಮ್ಮ ನಾಟ್ಯಗೃಹ ಹಾಕಬೇಕೆಂದು ನಡಿಸಿದ ಖಟಾಟೋಪವೆಲ್ಲ ವ್ಯರ್ಥವಾಯಿತು. ಮೇಲಿನ ಕಟ್ಟಪ್ಪಣೆಯ ಮೂಲಕ ಆ ಬೈಲಲ್ಲಿ ನಾಟ್ಯ-ಮಂದಿರ ಹಾಕಲಿಕ್ಕೆ ಅಪ್ಪಣೆ ಸರ್ವಥಾ ಕೊಡಬರುವದಿಲ್ಲೆಂದು ಆಗಿನ ಜಿಲ್ಲಾಧಿಪರು ಸ್ಪಷ್ಟ ಹೇಳಿದ್ದರು. ಈಗ ಅದೇ ಬೈಲೊಳಗೆ ಕಲಾವೈಭವ ಕಂಪನಿಯ ನಾಟಕ-ಗೃಹ ಹಾಕಲ್ಪಟ್ಟಿದೆ. ಮಾಮಲೇದಾರರು ಆ ಗೃಹ ಕಟ್ಟಿಸಲಿಕ್ಕೆ ಹೇಗೆ ಅಪ್ಪಣೆ ಕೊಟ್ಟರೆಂಬುದು ಒಂದು ದೊಡ್ಡ ಒಗಟಾಗಿ ಕೂತಿದೆ!

ಇಷ್ಟೊಂದು ಸಮೂದಿಸತಕ್ಕ ಸಂಗತಿಯೊಂದರ ಇತ್ತಲಾಗಿ ಊರೊಳಗೆ ಪ್ಲೇಗಿನ ಪ್ರಾದುರ್ಭಾವವಾಗಿದೆ. ಆ ಬಗ್ಗೆ ತಾಲೂಕ ಕಚೇರಿಗೂ ವರದಿಗಳು ಬಂದಿವೆ. ಆದರೂ ಮಾಮಲೇದಾರರು ನಾಟಕಗಳನ್ನು ನೋಡಗೊಡುತ್ತಿದ್ದಾರೆ! ಪ್ಲೇಗಿನ ವರದಿ ಗ್ರಾಮಸ್ಥರಿಂದ ಬಂದ ಮೇಲೆ ನಾಟಕಗಳನ್ನು ನಡೆಯಗೊಡುವದು ತಪ್ಪಾದೀತೆಂಬ ತಿಳುವಳಿಕೆ ಮಾಮಲೇದಾರರಿಗೆ ಇಲ್ಲೆಂದು ತಿಳಿಯಲಾಗದು. ಆದರೆ ಅವರು ಆ ಆರೋಗ್ಯದಿಂದ ಪಾರಾಗಲು ಒಂದು ಹಾದಿ ಹುಡುಕಿದ್ದಾರೆ! ಗ್ರಾಮಸ್ಥರು ವರದಿ ಮಾಡಿದ ಪ್ಲೇಗಿನ ಕೇಸುಗಳು ಪ್ಲೇಗಿನವೇ ಹೇಗೆಂದು ಪ್ರತ್ಯೇಕ ವರದಿಯನ್ನು ಮಾಡಲಿಕ್ಕೆ ಅವರು ಇಲ್ಲಿಯ ಸರಕಾರಿ ಡಾಕ್ಟರರಿಗೂ ಪ್ಲೇಗಿ ಬಂದ್ದು ಅಧಿಕಾರಿಗಳಿಗೂ ವಿಧಿಸಿರುತ್ತಾರೆ! ಅವರ ವರದಿ ಬರುವ ವರೆಗೆ ನಾಟಕಗಳು ನಡೆಯಲೆಂಬುದೇ ಮಾಮಲೇದಾರರ ಈ ಅದ್ಭುತ ಕ್ರಮದ ಇಂಗಿತವೆಂದು ಬೇರೆ ಹೇಳಬೇಕಾಗಿಲ್ಲ! ಕಲಾವೈಭವ ನಾಟಕ ಮಂಡಳಿಯ ಬಗ್ಗೆ ಮಾಮಲೇದಾರರು ಇಷ್ಟೆಲ್ಲ ಸಹ್ಯಾಸಗಳನ್ನು ಏಕೆ ನಡಿಸಿರುವರೆಂಬುದರ ಪತ್ತೆ ಹಚ್ಚುವ ಉಪದ್ವ್ಯಾಪವನ್ನು ಇಲ್ಲಿಯ ಕೆಲ ಉಪದ್ವ್ಯಾಪಿಗಳು ಪ್ರಾರಂಭಿಸಿರುತ್ತಾರೆ.

ಹಳಿಯಾಳ— ತಾ ೩-೦-೪೯ರ "ವೃತ್ತ"ದಲ್ಲಿ ತಮಗೆ ಚಿಮಣಿ ಎಣ್ಣೆ ಕೊಡಲು ಹಳಿಯಾಳದ ಚಿಮಣಿ ಎಣ್ಣೆಯ ವ್ಯಾಪಾರಿಗಳ ಸಂಘದವರು ಕಷ್ಟ ಕೊಟ್ಟರೆಂಬುವಾಗಿ ಓರ್ವ ಗ್ರಾಮೀಣ ಶಾಲಾ-ಶಿಕ್ಷಕರು ಮೂರಿಕೊಂಡದ್ದರ ಸಂಬಂಧವಾಗಿ ಜಿಲ್ಲಾಧಿಪರು ಬರೆಯುತ್ತಾರೆ.— ಓರ್ವ ಶಿಕ್ಷಕನು ಚಿಮಣಿ ಎಣ್ಣೆಯ ವ್ಯಾಪಾರಿಗಳ ಸಂಘದ ಕಡೆ ಎಣ್ಣೆ ಬೇಡಿದ್ದನೆಂಬುದು ನಿಜ. ನಮಗೆ ಶಿಕ್ಷಕನ ಬೇಡಿಕೆ ಪ್ರಾಮಾಣಿಕವಿರುತ್ತದೋ ಹೇಗೆಂಬುದರ ಖಾತ್ರಿ ಮಾಡಿಕೊಳ್ಳುವದಕ್ಕಾಗಿ ಸಂಘದವರು ಅವನಿಗೆ ತನ್ನ ಶಾಲೆಯ ಮುಖ್ಯಾಧ್ಯಾಪಕರ ಪ್ರಶಸ್ತಿ-ಪತ್ರ ತರಲು ತಿಳಿಸಿದ್ದರು. ಆದರೂ ಹೀಗೆ ಮಾಡಿದ್ದು ಆ ಯಾ ಕ್ರ ವಿ ರು ತ್ಧ ದೆ ೦ ಮ ಹೇಳಬರುವಂತಿಲ್ಲ. ಒಂದೇ ಮನೆಯವರು ಬೇರೆ ಬೇರೆ ಹೆಸರು ಹೇಳಿ, ಬೇರೆ ಬೇರೆ ಎಣ್ಣೆಯ ಚೀಟಿಗಳನ್ನು ಪಡೆಕೊಳ್ಳುತ್ತಿರುವ ದುರ್ವ್ಯಾಪಾರ ನಡೆದದ್ದು ಕಂಡು ಬಂದದ್ದರಿಂದ ಎಣ್ಣೆಯ ಚೀಟಿಗಳನ್ನು ಕೊಡುವಾಗ ಅರ್ಜಿದಾರರ ಬೇಡಿಕೆ ಸಮಂಜಸವಿರುತ್ತದೋ ಹೇಗೆಂಬುದರ ಮನವರಿಕೆ ಮಾಡಿಕೊಳ್ಳಬೇಕಾಗಿ ಅವರಿಗೆ ವಸ್ತ್ರ ಕಚೇರಿಯವರು ತಿಳಿಸಿದ್ದುಂಟು. ಕಾರಣ ಶಿಕ್ಷಕನಿಗೆ ಪ್ರಶಸ್ತಿ-ಪತ್ರ ತಂದುಕೊಡಲು ಸಂಘದವರು ಹೇಳಿದ್ದು ಆಕ್ಷೇಪಾರ್ಹವಿರುವದಿಲ್ಲ ಇತ್ಯಾದಿ.

ಸ್ಥಾನಿಕ ವೃತ್ತಾಂತ

ಕುಮಟಾ— [illegible] ಮೇಲಿಂದ [illegible] ದಿನಗಳ ಹಿಂದ [illegible] ದಿನ [illegible] ಸುದ್ದಿಯುಂಟು [illegible] ದಿನ [illegible] ಬಂದಿದೆ.

[illegible] ದಿನ [illegible] ಆರಂಭವಾ[illegible]ಗುತ್ತದೆ. [illegible]

[illegible] ದಕ್ಷಿಣ [illegible] ಏಪ್ರಿಲ [illegible] ಪ್ರಕಟವಾಗು[illegible] ಅಧಿಕೃತ ಸುದ್ದಿ[illegible]

[illegible] ಕನ್ನಡ ಶಾಲೆಯ [illegible]

[illegible]

[illegible] ದಿನ [illegible] ಮೇಲೆ [illegible] "ಸುಂಥಿ" [illegible]

[illegible]

[illegible]

ಜಾಹೀರ ವಿನಂತಿಗೆ ಉತ್ತರ.

[illegible]

ರಾಮಾ ದೇವಪ್ಪ ನಾಯ್ಕ.

ಆಸ್ತಿಕ ಮಹಾಶಯರಲ್ಲಿ ವಿಜ್ಞಾಪನೆ.

[illegible]

ಹೊನ್ನಾವರ—

(ಮುಂದೆ [illegible])

[illegible]

([illegible]) [illegible]

[illegible]

ಭಟ್ಕಳ— ([illegible]) [illegible]

[illegible]

ಸಿದ್ದಾಪುರ— ([illegible]) [illegible]

[illegible]

ಕಾರವಾರ— ([illegible]) [illegible]

[illegible]

[illegible]— [illegible]

[illegible]— ([illegible]) [illegible]

([illegible])

ಪತ್ರಿಕಾ ಪ್ರಕಟನೆ.

ನಂ. ೭೪. — ಆಹಾರ ಧಾನ್ಯಗಳ ಅಂದರೆ ಅಕ್ಕಿ, ಗೋಧಿ, ಬಾಜರಿ, ಜವೆಗೋಧಿ, ಸಮುದ್ರಾಚೆಯ ಜೋಳ (millets) — ಸಿಂಗೋಳ (milo) [illegible] ಮತ್ತು [illegible] ಪದಾರ್ಥಗಳು ಇವುಗಳ [illegible] ಸೀಧಾ-[illegible] ತಾ. ೧-೪-೧೯೪೪ರಿಂದ, [illegible] ಹೊನ್ನಾವರ, ಭಟಕಳ, ಶಿರ್ಸಿ ಮತ್ತು ಗೋಕರ್ಣ ಈ [illegible] [illegible]

(ಜಿಲ್ಹಾಧಿಕಾರಿ ಹೊರಡಿಸಿದ ಪ್ರಕಟನೆಯಿದು.)

ನಮ್ಮಲ್ಲಿ

ತಂಬಾಕು ವ್ಯಾಪಾರಿಗಳಿಗೆ ಬೇಕಾಗುವ ಸೇಲ-ನೋಟ ಬೂಕುಗಳೂ, E B. 3. ಸಣ್ಣ-ದೊಡ್ಡ ಲೆಕ್ಕದ ಬೂಕುಗಳೂ, ಗೇಣಿ-ರಶೀದಿ ಬೂಕುಗಳೂ, ಸೀಧಾ-ಅಂಗಡಿಗಳಿಗೆ ಬೇಕಾಗುವ ಇಂಗ್ಲಿಷ-ಕನ್ನಡ ಕೇಶ ಮೆಮೋ ಬೂಕುಗಳೂ ಯೋಗ್ಯ ದರದಲ್ಲಿ ಸಿಗುತ್ತವೆ.

ಬರೆಯಿರಿ— ಮೆನೇಜರ,

" ಸ್ಟಾರ ಆಫ್ ಕೆನರಾ ಪ್ರೆಸ್ ", ಕುಮಟಾ.

ಪತ್ರಿಕಾ–ಪ್ರಕಟನೆ

ಈ ಕೆಳಗೆ ಕಾಣಿಸಿದ ಜಾತಿಗಳ ಬಟ್ಟೆಯನ್ನು [illegible] ಸರಕಾರವು ನಿರ್ಣಯಿಸಿದೆ.

(ಅ) ಫೆಂಟ್ಸಗಳು, ಸೆಕಂಡುಗಳು (Fents & seconds) ಹಾಗೂ ಸೆಕಂಡುಗಳಲ್ಲೂ [illegible] (rejected) ಬಟ್ಟೆ;

(ಬ) [illegible] ಟುವಾಲುಗಳು, ಪಾಸಿಗೆಯ [illegible] ಒರಸುವ ವಸ್ತ್ರಗಳು (napkins), [illegible] —

(ಕ) [illegible]

[illegible]

(ಅ) ನೋಟೆಗ(ಅ) ಪರಿಚ್ಛೇದದಲ್ಲಿ ಹೇಳಿದ ಬಟ್ಟೆ–

(೧) [illegible] ಆ ಬಟ್ಟೆಯು ೨ [illegible] ಸಿಗುವದು; ಮತ್ತು (೨) ಯಾವ ಬಟ್ಟೆಯು [illegible] ಎಂದು [illegible] ಆ ಬಟ್ಟೆಯು ೧೦ ಗಜಗಳ ವರೆಗಷ್ಟೇ ಸಿಗುವದು.

(ಬ) ನೋಟೆಗ(ಬ) ಪರಿಚ್ಛೇದದಲ್ಲಿ ಹೇಳಿದ ಬಟ್ಟೆ–

ಬಟ್ಟೆಯ ಜಾತಿ.	ಸಿಗುವ ಪ್ರಮಾಣ.
ಚಾದರುಗಳೂ ಜಮಖಾನೆಗಳೂ	೨ ನಗಗಳು.
ಪಾಸಿಗೆಯ ಹೊದಿಕೆಗಳು	೫ ಗಜ.
ಬುರಖಾ ಮಾಡುವ ಬಟ್ಟೆ	೪ ಗಜ.
ಟುವಾಲುಗಳು (ಶುಭ್ರ ಯಾ ಬಣ್ಣದವು)	೨ ನಗಗಳು.
ಒರಸುವ ವಸ್ತ್ರಗಳು	೬ ನಗಗಳು.
ಕಂಬಳಿ (ಬ್ಲೆಂಕೆಟು) ಗಳು	೧ ನಗ

(ಕ) ನೋಟೆಗ(ಕ) ಪರಿಚ್ಛೇದದಲ್ಲಿ ಹೇಳಿದ ಬಟ್ಟೆ–

ಈ ಬಟ್ಟೆಯಾದರೂ ೨ (ಅ) ಪರಿಚ್ಛೇದದಲ್ಲಿ ಕೊಟ್ಟ [illegible] ಸಿಗುವದು. ಆದರೆ ಆ ಪರಿಚ್ಛೇದ [illegible]

[illegible]

(ಜಿಲ್ಹಾಧಿಕಾರ [illegible] ಪ್ರಕಟಿಸಿದ್ದು)

ಪತ್ರಿಕಾ–ಪ್ರಕಟನೆ.

ನಂ ೧೮೦ (ಕಡತ)/೯-೪-೧೯೪೪.

[illegible]

ಆಜ್ಞೆ.

ಕಾನಡಾ ಜಿಲ್ಹೆಯ ಮೆಜಿಸ್ಟ್ರೇಟರ
ಕಚೇರಿ, ಕಾರವಾರ,
ತಾ. ೧೨—೪—೧೯೪೪.

ನಂ. ೫೯ — ೧೯೪೬ನೇ ಇಸವಿಯ [illegible] (೨)ನೆಯ ಉಪ-ಕಲಮು ಹಾಗೂ [illegible] ತಾ. [illegible] ಹೊರಡಿಸಿದ ೩. ೧೧೦ ನಂಬರದ ಸರಕಾರಿ ಪ್ರಕಟನ ಪತ್ರಗಳನ್ನೂ ದೊರೆತ ಅಧಿಕಾರವನ್ನು ಉಪಯೋಗಿಸಿ, ಕಾನಡಾ ಜಿಲ್ಹೆಯ ಜಿಲ್ಹಾ ಮೆಜಿಸ್ಟ್ರೇಟರು ಆಜ್ಞೆ ಹೊರಡಿಸುತ್ತೇನಂದರೆ:— ನಮ್ಮ ಕಚೇರಿಯಿಂದ ತಾ. [illegible] ೧೯೪೪ನೇಗೆ [illegible] ಅಜ್ಞೆಗೆ [illegible] ತಾ. [illegible] ೧೯೪೪ಕ್ಕೆ [illegible] ಈ ದರ ಗಳು ಪುನಃ ತಾ. ೧೮-೧-೧೯೪೪ರಿಂದ ಮುಂದೆ [illegible] ಈ ಬೆಲೆ-[illegible] — ಅದು [illegible] ಎಷ್ಟೆಗಷ್ಟೇ ಅನ್ವಯಿಸುತ್ತದೆ.

M. Allahbaksh,
ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ.

ನಮ್ಮಲ್ಲಿ ಕತ್ತದಿಂದ ತಯಾರಾದ
ಚರಖಾ ಹುರಿ, ಬಾವಿ-ಹಗ್ಗ,
ವ್ಯಾಟಿಂಗ ಮತ್ತು ಬ್ರಶಮೆಟಗಳು
ಯೋಗ್ಯ ದರದಲ್ಲಿ ಸಿಗುತ್ತವೆ
ಚೆಅರಮನ್, ಕತ್ತದ ಸೊಸೈಟಿ ಲಿಮಿಟೆಡ್,
ಹೊನ್ನಾವರ ([illegible]

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ " ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B. 1270. Monday, 25-4-1949.

ಕಾನಡಾವೃತ್ತ

ವರ್ಷ ೩೧.] THE KANARA NEWS. [ಸಂಚಿಕೆ ೪೩.

ಕುಮಟಾ:- ಸೋಮವಾರ, ತಾ. ೨೫—೪—೧೯೪೯.

ವರ್ಗಣಿಯ ದರ:
ಮುಂಗಡವಾಗಿ
ವರ್ಷಕ್ಕೆ ರೂ. ೩-೪-೦
ಅರ್ಧವಾರ್ಷಿಕಕ್ಕೆ ೨-೧-೬
೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ವ್ಹಿ.ಪಿ.ಯಿಂದ ತರಿಸುವವರು ವ್ಹಿ.ಪಿ. ಖರ್ಚು ೬ ಆಣೆ ಹೆಚ್ಚಿಗೆ ಕಳಿಸಬೇಕು. ವರ್ಗಣಿ ಹಣವನ್ನು ಮುಂಗಡ ಕಳಿಸತಕ್ಕದ್ದು.

ಜಾಹೀರಾತುಗಳ ದರ:
೧೦ ಎಲ್ ಇಂಚ್
೧ ಸಾಲಿಗೆ ೮ ಆಣೆಯಂತೆ.
ಹೆಚ್ಚು ಕಾಲದ ಜಾಹೀರಾತುಗಳ
ಜಾಹೀರಾತುಗಳ ಬಗ್ಗೆ ಪತ್ರದ್ವಾರಾ
ತಿಳಿಯಬೇಕು

ಸುದ್ದಿಗಳ ಸಂದೂಕ

— ಮಹಾತ್ಮಾ ಗಾಂಧಿಯವರ ರಾಷ್ಟ್ರೀಯ ಸ್ಮಾರಕ ನಿಧಿಗಾಗಿ ಹಣ ಕೂಡಿಸುವ ಕಾರ್ಯ ಅವರ ಪ್ರಥಮ ಪುಣ್ಯ ತಿಥಿಯವರೆಗಷ್ಟೇ ನಡೆಯತಕ್ಕದ್ದೆಂದು ಹಿಂದೆ ನಿರ್ಣಯವಾಗಿತ್ತು. ಆದರೆ ನಿಧಿ ಸಂಗ್ರಹದ ಕೆಲಸ ಸಮಾಧಾನಕರವಾಗಿ ನಡೆದಿಲ್ಲವೆಂದು ಕಂಡುಬಂದದ್ದರಿಂದ ಆ ಅವಧಿಯನ್ನು ಈ ಏಪ್ರಿಲ ತಿಂಗಳ ಕೊನೆಯ ವರೆಗೆ ಬೆಳೆಸಲಾಗಿದೆ. ನಿಧಿ-ಸಂಗ್ರಹ ಸಮಿತಿಯ ಅಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ಸ್ವತಃ ನಿಧಿಸಂಗ್ರಹಿಸುವದಕ್ಕಾಗಿ ಇತ್ತ ೨-೩ ತಿಂಗಳಿಂದ ದೇಶ-ಸಂಚಾರ ಮಾಡುತ್ತಿದ್ದಾರೆ. ಈ ವಾರ ಅವರು ಕರ್ನಾಟಕಕ್ಕೆ ಬರುವವರಿದ್ದಾರೆ. ಕಳೆದ ವಾರ ಭಾರತದ ಉದ್ಯಮಿಗಾರರು ದಿಲ್ಲಿಯಲ್ಲಿ ಸರದಾರ ಪಟೇಲರ ಮನೆ-ಸ್ಥಾನದಲ್ಲಿ ಸಭೆಗೂಡಿ ಡಾ॥ ರಾಜೇಂದ್ರರ ಕಡೆ ಈ ನಿಧಿಗಾಗಿ ರೂ. ೪,೪೩,೭೪,೫೭೭-೧೫-೬ರ ಹುಂಡಿಯನ್ನು ಒಪ್ಪಿಸಿದ್ದಾರೆ. ಈ ವರೆಗೆ ಕೂಡಿದ ನಿಧಿಯು ೧೦ ಕೋಟಿ ರೂಗಳಿಗೆ ಮಿಕ್ಕಿರುತ್ತದೆಂದು ಡಾ॥ ರಾಜೇಂದ್ರರು ತಿಳಿಸಿದ್ದಾರೆ.

— ಮಹಾತ್ಮಾ ಗಾಂಧಿಯವರ ಕೊಲೆಯ ಖಟ್ಲೆಯಲ್ಲಿ ಆದ ನಿರ್ಣಯದ ವಿರುದ್ಧ ನಥುರಾಮ ಗೋಡಸೆ ಪ್ರಭೃತಿಗಳು ಪೂರ್ವ ಪಂಜಾಬ ಹಾಯಕೋರ್ಟಿಗೆ ಮಾಡಿರುವ ಅಪೀಲಿನ ಸುನಾವಣಿಗೆ ಮುಂದಿನ ಸೋಮವಾರದಿಂದ ಸಿಮಲೆಯಲ್ಲಿ ಪ್ರಾರಂಭವಾಗುವದು. ಈ ವಿಚಾರಣೆಯ ಕಾಲಕ್ಕೆ ಪ್ರವೇಶದ ಅಪ್ಪಣೆ-ಚೀಟಿಯುಳ್ಳವರಿಗಷ್ಟೇ ನ್ಯಾಯಾಲಯದಲ್ಲಿ ಪ್ರವೇಶ ಸಿಗುವದು. ಸರಕಾರಿ ವಕೀಲರೂ ಹಾಯಕೋರ್ಟಿನ ನೌಕರರೂ ಕೂಡ ಅಪ್ಪಣೆ-ಚೀಟಿಗಳನ್ನು ತೋರಿಸಿಯೇ ನ್ಯಾಯಾಲಯದಲ್ಲಿ ಪ್ರವೇಶಿಸಬೇಕಾಗುವದು. ಪತ್ರಿಕಾ-ಪ್ರತಿನಿಧಿಗಳ ಹೊರಗೆ ೫೦ ಮಂದಿ ಪ್ರೇಕ್ಷಕರಿಗಷ್ಟೇ ಪ್ರವೇಶ ಕೊಡಲಾಗುವದು. ನ್ಯಾಯಾಲಯದಲ್ಲಿ ಬರುವ ಯಾರೂ ಕೈಯಲ್ಲಿ ಬಡಿಗೆ, ಕೊಡೆ, ಕೆಮೆರಾ ಮುಂತಾದ್ದು ತರಕೂಡದೆಂದೂ, ಹೆಂಗಸರು ತಮ್ಮ ಕೈಚೀಲಗಳನ್ನು ಕೂಡ ಹೊರಗಿಟ್ಟು ಬರಬೇಕೆಂದೂ ನ್ಯಾಯಸ್ಥಾನದ ಅಪ್ಪಣೆಯಾಗಿದೆ.

— ಬಡೋದಾ ಸಂಸ್ಥಾನವನ್ನು ಮುಂಬಯಿ ಪ್ರಾಂತದಲ್ಲಿ ವಿಲೀನಗೊಳಿಸಿಕೊಳ್ಳುವ ಸಮಾರಂಭವು ಇದೇ ಬರುವ ರವಿವಾರ (ಮೇ ತಾ. ೧) ನಡೆಯುವದು. ಈ ಸಂಸ್ಥಾನಕ್ಕೆ ಸುಮಾರು ೮೦೦೦ ಚದುರ ಮೈಲು ವಿಸ್ತೀರ್ಣವಿದ್ದು, ೩೦ ಲಕ್ಷ ಜನಸಂಖ್ಯೆಯುಳ್ಳದ್ದಿದೆ. ಸಂಸ್ಥಾನವನ್ನು ಬಡೋದಾ, ನವಸಾರಿ, ಮೆಹಸಾಣಾ ಮತ್ತು ಅಮರೇಲಿ ಹೀಗೆ ೪ ಜಿಲ್ಲೆಗಳಲ್ಲಿ ವಿಭಾಗಿಸಲ್ಪಟ್ಟಿತು. ಈ ಸಂಸ್ಥಾನ ಚಿಕ್ಕದಿದ್ದರೂ ಬಡೋದೆಯ ದಿವಂಗತ ಮಹಾರಾಜ ಸರ ಸಯಾಜಿರಾವ ಗಾಯಕವಾಡ ಇವರ ಕಾರಕೀರ್ದಿಯಲ್ಲಿ ಅದು ಸರ್ವಾಂಗೀಣ ಪ್ರಗತಿಯನ್ನು ಸಾಧಿಸಿತ್ತು. ಕೆಲವೊಂದು ವಿಷಯಗಳಲ್ಲಿ ಮುಂಬಯಿ ಪ್ರಾಂತವನ್ನೂ ಹಿಂದೆ ಹಾಕಿತ್ತು. ಆದರಿಂದ ಸಂಸ್ಥಾನದ ಪ್ರಜೆಗಳೊಳಗೆ ತಮ್ಮ ಅರಸು-ಮನೆತನದ ಬಗ್ಗೆ ಬಹಳಷ್ಟು ಭಕ್ತ್ಯಾದರಗಳಿವೆ. ಅಲ್ಲಿಯ ಬಹುಸಂಖ್ಯ ಜನರಿಗೆ ತಮ್ಮ ಸಂಸ್ಥಾನದ ವಿಲಯವಾಗುವದೂ ಅಂಗೊತ್ತಿಗೆಯು ನಷ್ಟವಾಗುವದೂ ಇಷ್ಟವಿಲ್ಲ. ಅಲ್ಲಿಯ ಪ್ರಜಾ ಸಂಘದವರೂ ಈ ವಿಲೀನೀಕರಣಕ್ಕೆ ಆಕ್ಷೇಪ ತಕ್ಕೊಳ್ಳುತ್ತಿದ್ದಾರೆ. ಪ್ರಜೆಗಳ ಮತ (ಸಾರ್ವಮತ) ತಕ್ಕೊಳ್ಳದೆ ಸಂಸ್ಥಾನವನ್ನು ಒಮ್ಮೆಲೇ ಹಿಂದುಸ್ತಾನದಲ್ಲಿ ಸೇರಿಸಿಬಿಡುವದು ಅನ್ಯಾಯ್ಯವೆಂದೂ ಕಾನೂನ-ಬಾಹಿರ ವಿರುದ್ಧವೆಂದೂ ಅವರ ಪ್ರತಿಪಾದನೆಯಿದ್ದು, ಅವರು ಈ ಬಗ್ಗೆ ಬಡೋದೆಯ ಹಾಯಕೋರ್ಟಿನಲ್ಲಿ ದಾವೆಯನ್ನೂ ಹೂಡುವವರಿದ್ದಾರೆ.

— ಮುಂಬಯಿ ಪ್ರಾಂತದಲ್ಲಿ ಈತನಕ ವಿಲೀನವಾದ ಸಂಸ್ಥಾನಗಳ ಆಡಳಿತೆಯನ್ನು ಇಲ್ಲಿಯ ವರೆಗೆ ಪ್ರತ್ಯೇಕವಾಗಿ ನಡಿಸುತ್ತ ಬಂದಿರುತ್ತಾರೆ. ಆದರೆ ಇದೇ ಬರುವ ಮೇ ತಿಂಗಳ ತಾ ೧೫ರಿಂದ ಅವು ಮುಂಬಯಿ ಪ್ರಾಂತದಲ್ಲಿ ಸಂಪೂರ್ಣ ವಿಲಯಗೊಂಡು ಇತರ ಭಾಗಗಳೊಡನೆ ಸಮಾನವಾಗುವವು. ಬಡೋದೆ ಸಂಸ್ಥಾನದ ಕಾರಭಾರ ಮಾತ್ರ ಜೂನ ಕೊನೆಯ ವರೆಗೆ ಸ್ವತಂತ್ರವಾಗಿ ನಡೆಯುವದು. ಆ ಸಂಸ್ಥಾನದ ಸಂಪೂರ್ಣ ವಿಲಯವು ಜುಲಾಯಿ ತಿಂಗಳಲ್ಲಿ ಸಾಧ್ಯವಾಗುವದಂತೆ.

— ಮುಂಬಯಿ ಪ್ರಾಂತದ ಎಸ್. ಎಸ್. ಸಿ. ಪರೀಕ್ಷಾ-ಮಂಡಳದವರ ಅವ್ಯವಸ್ಥಿತ ಕಾರಭಾರದ ಫಲವಾಗಿ ಹಲ ಕೆಲವು ಕೇಂದ್ರಗಳಲ್ಲಿ ಕೆಲವೊಂದು ವಿಷಯಗಳ ಪ್ರಶ್ನ-ಪತ್ರಿಕೆಗಳೇ ಬಂದು ತಲ್ಪಿದ್ದಿಲ್ಲ. ಆ ಕೇಂದ್ರಗಳೊಳಗಿನ ಆ ವಿಷಯಗಳ ಪರೀಕ್ಷಾರ್ಥಿಗಳ ಪರೀಕ್ಷೆಯನ್ನು ಇದೇ ಬರುವ ಶುಕ್ರವಾರ ಮಧ್ಯಾಹ್ನ ಮೂರು ಗಂಟೆಗೆ ತೆಗೆದುಕೊಳ್ಳುವ ಏರ್ಪಾಟಾಗಿದೆ! ಆ ಪರೀಕ್ಷೆಯೊಳಗಿನ ಕೆಲವು ವಿಷಯಗಳ ಅಪರೀಕ್ಷಿತ ಉತ್ತರ-ಪತ್ರಗಳ ಪೊಟ್ಟಣಗಳು ಕಳೆದ ವಾರ ಮುಂಬಯಿ ಸಮೀಪದಲ್ಲಿನ ಘಾಟಕೋಪರ ರೇಲ್ವೆ ಸೈಡಿಂಗದ ಬಳಿಯಲ್ಲಿ ರೇಲ್ವೆ ಹಳಿಗಳ ಮೇಲೆ ಬಿದ್ದಿದ್ದವಂತೆ!! ಪರೀಕ್ಷಕರಿಗಾಗಿ ಅಹಮದಾಬಾದಿಗೆ ಕಳಿಸಲ್ಪಟ್ಟ ಉತ್ತರ-ಪತ್ರಗಳ ಪೆಟ್ಟಿಗೆಗಳನ್ನು ಯಾರೋ ದುಷ್ಕರು ನಡುವೆಯೇ ಒಡೆದು ಅವುಗಳೊಳಗಿನ ಪೊಟ್ಟಣಗಳನ್ನು ಮನಬಂದಂತೆ ಅಸ್ತವ್ಯಸ್ತ ಚೆಲ್ಲಿರಬೇಕೆಂದು ಊಹಿಸಲಾಗುತ್ತಿದೆ. ಘಾಟಕೋಪರದಲ್ಲಿ ಸಿಕ್ಕ ಉತ್ತರ-ಪತ್ರಗಳಲ್ಲಿ ಕಾರವಾರ ಕೇಂದ್ರದ ಇಂಗ್ಲಿಶ ಭಾಷಾ-ವಿಷಯದ ಉತ್ತರ-ಪತ್ರಗಳೂ ಕಂಡುಬಂದ ವರದಿಯುಂಟು. ಅಂತೂ ಸರಕಾರದವರ ಎಸ್ ಎಸ್ ಸಿ. ಪರೀಕ್ಷೆಯೆಂಬುದು ಅವ್ಯವಸ್ಥಿತತನದ ಒಂದು ಉತ್ಕೃಷ್ಟ ಮಾದರಿಯಾಗಿದೆ! ಈ ಅವ್ಯವಸ್ಥೆಯ ಪರಿಣಾಮವು ಎಷ್ಟು ಮಂದಿ ತರುಣರನ್ನು ಬಾಧಿಸುವದೆಂದು ಊಹಿಸುವದೂ ಕಷ್ಟ! ಕಳೆದ ಗುರುವಾರ ಕೂಡಿದ ಮುಂಬಯಿ ನಗರ ಸಭೆಯಲ್ಲೂ ಈ ಅವ್ಯವಸ್ಥೆಯ ಬಗ್ಗೆ ಚರ್ಚೆಯಾಯಿತು. ಪರೀಕ್ಷಾ-ಮಂಡಳದ ಅವ್ಯವಸ್ಥೆಯಿಂದ ಹಾನಿಗೊಳ್ಳುವ ವಿದ್ಯಾರ್ಥಿಗಳ ಪರೀಕ್ಷೆಯನ್ನು ಇನ್ನೊಮ್ಮೆ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಓರ್ವರು ಸೂಚನೆ ತಂದಿದ್ದರು. ಸಭೆಯೊಳಗಿನ ಸಮಾಜಸತ್ತಾವಾದಿ ಸದಸ್ಯರು ಅವ್ಯವಸ್ಥೆಯ ಹೊಣೆಯನ್ನು ಮುಂಬಯಿ ಸರಕಾರದ ವಿದ್ಯಾ ಖಾತೆಯ ಮಂತ್ರಿಗಳಾಗಿರುವ ಮಾನ್ಯ ಖೇರರ ಮೇಲೆ ಹೊರಿಸಿ, ಅವರು ತಮ್ಮ ಅಧಿಕಾರಕ್ಕೆ ರಾಜೀನಾಮೆಯಿತ್ತು ಯೋಗ್ಯ ಪ್ರಾಯಶ್ಚಿತ್ತ ತಕ್ಕೊಳ್ಳಬೇಕೆಂದು ವಾದಿಸಿದರು. ಕೊನೆಗೆ ಈ ವಿಷಯ ಮಹತ್ವದ್ದಿರುವದರಿಂದ ಸೂಚಕರ ಸೂಚನೆಯನ್ನು ಕಾರ್ಪೊರೇಶನ-ವಿಷಯಗಳ ಪರಿಶೀಲನೆ ಮಾಡುವ ಉಪಸಮಿತಿಗೆ ಕಳಿಸಿಕೊಡಬೇಕೆಂದು ಸಭೆಯ ನಿರ್ಣಯವಾಯಿತು. ಕೊಂಗ್ರೆಸ ಮಂತ್ರಿಮಂಡಳದ ಈ "ಅವ್ಯವಸ್ಥೇಷು ವ್ಯಾಪಾರಂ"ದ ಪ್ರತಿಧ್ವನಿಗಳು ಇನ್ನೂ ಎಲ್ಲೆಲ್ಲಿ ಕೇಳಬರುತ್ತವೋ ನೋಡಬೇಕು.

— ಬ್ರಿಟಿಶ ರಾಷ್ಟ್ರಕೂಟದೊಳಗಿನ ಮುಖ್ಯ-ಮಂತ್ರಿಗಳ ಪರಿಷತ್ತಿಗೆ ಕಳೆದ ಶುಕ್ರವಾರದಿಂದ ಪ್ರಾರಂಭವಾಗಿದೆ. ಭಾರತದ ಮುಖ್ಯ ಮಂತ್ರಿ ಪಂ॥ ನೆಹರೂ ಪಾಕಿಸ್ತಾನದ ಮುಖ್ಯ ಮಂತ್ರಿ ಜನಾಬ ಲಿಯಾಕತ,

The Agricultural & Industrial Bank, Ltd.,

Regd. Office. "LAXMI NIVAS Buildings",

COONDAPOOR, S. Kanara.

SEASON DEPOSITS

Maturing on or before 30th June 1949 are now accepted with interest ranging from 2¼% to 3¼% per annum.

Every kind of Banking business transacted.

For terms etc, please apply to any of our following Branches.

1. Coondapoor.	7. Ankola.	13. Sirsi.
2. Mangalore.	8. Bhatkal.	14. Dharwar.
3. Somwarpet.	9. Gokarn.	15. Gadag.
4. Virajpet.	10 Honavar.	16. Haveri.
5. Shimoga.	11. Karwar.	17. Hubli.
6. Nagar.	12 Kumta.	18. Belgaum.

19. BOMBAY. (384-M, Jaipuria House, Kalbadevi Road).

ಅಲ್ಲದೆ ಪಾಕಿಸ್ತಾನ, ಶ್ರೀಲಂಕೆಯ ಮುಖ್ಯ ಪ್ರಧಾನ ಸೇನಾನಾಯಕ, ಆಸ್ಟ್ರೇಲಿಯಾದ ಮಹಾಮಂತ್ರಿ ಮಿ|| ಜೋಸೆಫ್ ಚೆಫ್ಲೀ, ನ್ಯೂಝೀಲಂಡದ ಪಬ್ಲಿಕೋತ್ತಮ ಮಿ|| ಪೀಟರ ಫ್ರೇಜರ, ದಕ್ಷಿಣ ಆಫ್ರಿಕೆಯ ಪ್ರಧಾನಾಮಾತ್ಯ ಡಾ|| ಡೇನಿಯಲ ಮಾಲನ ಹೀಗೆ ೬ ಮಂದಿ ಮುಖ್ಯ ಪ್ರಧಾನರೂ ಕೆನಡಾದ ಮುಖ್ಯ ಮಂತ್ರಿಗಳ ಪರವಾಗಿ ವಿದೇಶ ಮಂತ್ರಿ ಮಿ|| ಲೀಸ್ಟರ ಪಿಯರಸನ್ ಇವರೂ ಲಂಡನದಲ್ಲಿ ಸೇರಿದ್ದಾರೆ. ಬ್ರಿಟಿಶ ಮಹಾ ಪ್ರಧಾನರಾಗಿರುವ ಮಿ|| ಕ್ಲೆಮೆಂಟ ಎಟಲಿ ಇವರು ಇವರೆಲ್ಲರೊಡನೆ ವ್ಯಕ್ತಿಶಃ ಆಲೋಚನೆಯನ್ನೂ ಮಾಡುತ್ತಿದ್ದಾರೆ. ಪ್ರಸ್ತುತ ಪರಿಷತ್ತಿನ ಮುಂದಿರುವ ಒಂದೇ ಒಂದು ಮಹತ್ವದ ಪ್ರಶ್ನೆಯೆಂದರೆ ಬೇಗನೇ (ಅಂದರೆ ಸಧ್ಯಕ್ಕೆ ಘಟನಾ ಸಮಿತಿಯು ಸಿದ್ಧಗೊಳಿಸುತ್ತಿರುವ ಘಟನೆಯು ಪೂರ್ಣವಾಗಿ ಅದು ಜಾರಿಯಲ್ಲಿ ಬಂದ ಮೇಲೆ) "ಸ್ವತಂತ್ರ, ಸಾರ್ವಭೌಮ ಪ್ರಜಾ ರಾಜ್ಯ"ವಾಗಲಿರುವ ಭಾರತವನ್ನು ಹೇಗೆ ಬ್ರಿಟಿಶ ರಾಷ್ಟ್ರಕೂಟದೊಳಗೆ ಇಟ್ಟುಕೊಳ್ಳಬೇಕೆಂಬುದೇ ಆಗಿರುತ್ತದೆ. ಭಾರತವು ಈ ರಾಷ್ಟ್ರಕೂಟದಲ್ಲಿರಬೇಕಾದರೆ ಕೂಟದ ರಚನೆಯಲ್ಲೂ ಪರಸ್ಪರ ಸಂಬಂಧಗಳಲ್ಲೂ ಕೆಲವೊಂದು ಮಾರ್ಪಾಟುಗಳಾಗುವದ ವಶ್ಯವುಂಟು. ಈ ಸಂಬಂಧದಲ್ಲಿ ಹೊರಗಿನಿಂದ ಬಂದಿರುವ ಪ್ರತಿಯೊಬ್ಬ ಮುಖ್ಯ ಮಂತ್ರಿಯು ಒಂದಿಲ್ಲೊಂದು ಯೋಜನೆಯನ್ನು ಸಿದ್ಧಪಡಿಸಿಕೊಂಡು ಬಂದಿರುತ್ತಾರೆಂದೂ ಪರಿಷತ್ತಿನಲ್ಲಿ ಆ ಎಲ್ಲ ಯೋಜನೆಗಳ ವಿಚಾರವಾಗುವದೆಂದೂ ಲಂಡನದೊಳಗಿನ ರಾಜಕೀಯ ಸುದ್ದಿಗಾರರು ಹೇಳುತ್ತಾರೆ. ಈ ವಾರದ ಅಂತ್ಯದವರೆಗೂ ಈ ಪರಿಷತ್ತಿನ ಕೆಲಸ ನಡೆಯಬಹುದೆಂದು ತರ್ಕಿಸಲಾಗಿದೆ.

— ಹಿಂದುಸ್ಥಾನದಲ್ಲಿ ಪ್ರತಿ ಮಿನಿಟಿಗೆ ಒಬ್ಬನಂತೆ (ಅಂದರೆ ದಿನ ಒಂದಕ್ಕೆ ೧೪೪೦ರಂತೆ) ಜನರು ಕ್ಷಯ ರೋಗದಿಂದ ಸಾಯುತ್ತಾರೆಂದೂ ರಾಷ್ಟ್ರದ ಅಮೂಲ್ಯ ಸಂಪತ್ತಾಗಿರುವ ತರುಣರೇ ಹೆಚ್ಚಾಗಿ ಈ ಮಹಾರೋಗಕ್ಕೆ ಬಲಿಯಾಗುತ್ತಾರೆಂದೂ, ಜನತೆಯ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಯಾದನಕ ಈ ರೋಗವನ್ನು ಹುಟ್ಟಡಗಿಸುವದು ಶಕ್ಯವಾಗದೆಂದೂ ಕಳೆದ ಬುಧವಾರ ದಿಲ್ಲಿಯಲ್ಲಿ ಕೂಡಿದ ಭಾರತೀಯ ಕ್ಷಯರೋಗ ಚಿಕಿತ್ಸಕರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಹಿಂದ ಸರಕಾರದ ಆರೋಗ್ಯ-ಮಂತ್ರಿಗಳಾಗಿರುವ ರಾಜಕುಮಾರಿ ಅಮೃತ ಕೌರ ಇವರು ಹೇಳಿರುತ್ತಾರೆ.

— ಬಿಹಾರ ಪ್ರಾಂತದ ಪ್ರಾಂತಾಧಿಪರಾಗಿರುವ ಲೋಕನಾಯಕ ಮಾಧವರಾವ ಅಣೇಯವರು ಕಳೆದ ವಾರ ಮುಝಫರಪುರಕ್ಕೆ ಭೆಟ್ಟಿ ಕೊಟ್ಟಾಗ ಅವರ ಸತ್ಕಾರಕ್ಕಾಗಿ ಸ್ಥಾನಿಕ ಮಹಾಜನರು ಒಂದು ಭೋಜನ ಸಮಾರಂಭವನ್ನು ಏರ್ಪಡಿಸಿದ್ದರು. ಆದರೆ ಭೋಜನಕ್ಕೆ ಪ್ರಾರಂಭ ಮಾಡಬೇಕೆನ್ನುವಷ್ಟರಲ್ಲಿ ಈ ಸಮಾರಂಭದಲ್ಲಿ, ೨೪ ಮಂದಿಗಿಂತ ಹೆಚ್ಚಿಗೆ ಜನರಿಗೆ ಊಟ ಹಾಕಕೂಡದೆಂಬ ನಿರ್ಬಂಧ ಉಲ್ಲಂಘನೆಯಾಗುತ್ತಿದ್ದುದನ್ನು ಕಂಡು ನಾ|| ಅಣೇಯವರು ತಮ್ಮ ಆಸನವನ್ನು ಬಿಟ್ಟು ಹೊರಟು ಹೋದರು. ಅವರ ಹಿಂದೆ ಕಮಿಶನರರೂ ಜಿಲ್ಲಾ ನ್ಯಾಯಾಧೀಶರೂ ಇನ್ನಿತರ ಅಧಿಕಾರಿಗಳೂ ಕೂಡ ಎದ್ದು ಹೋದರಂತೆ! ಭೋಜನ ಸಮಾರಂಭವನ್ನು ಏರ್ಪಡಿಸಿದವರಿಗೆ ಒಳ್ಳೇ ಬಹುಮಾನ ಸಿಕ್ಕಿತು!!

— ಜಗತ್ತಿನ ಯಾವದೇ ರಾಷ್ಟ್ರದಲ್ಲಿ ವೃತ್ತ-ಸ್ವಾತಂತ್ರ್ಯ ಮಾಡಲಿಕ್ಕೂ ಅದನ್ನು ತಮ್ಮ ತಮ್ಮ ಪತ್ರಿಕೆಗಳಿಗೆ ಕಳಿಸಿಕೊಡಲಿಕ್ಕೂ ಯಾವದೇ ವೃತ್ತ-ಪತ್ರ ಪ್ರತಿನಿಧಿಗೆ ಅಡ್ಡಿ ಮಾಡಕೂಡದೆಂದು ಜಗತ್ತಿನ ರಾಷ್ಟ್ರ ಸಂಘವು ಒಂದು ಸರ್ವಸಾಧಾರಣ ನಿಯಮವನ್ನು ಮಾಡಿ, ಆ ವೃತ್ತ-ಸ್ವಾತಂತ್ರ್ಯದ ಪಾಲನ-ಪೋಷಣ ಮಾಡುವದಕ್ಕಾಗಿ ಪತ್ರಿಕಾ ಪ್ರತಿನಿಧಿಗಳದೊಂದು ಉಪ-ಸಮಿತಿಯನ್ನೂ ನಿರ್ಮಾಣ ಮಾಡಿದೆ. ಈ ಉಪಸಮಿತಿಗೆ ಈ ವರ್ಷ ಒಂದು ಹೊಸ ಸದಸ್ಯರನ್ನು ಆರಿಸುವದಿತ್ತು. ಆ ಸ್ಥಾನಕ್ಕೆ "ಹಿಂದುಸ್ಥಾನ ಟೈಮ್ಸ್" ಪತ್ರಿಕೆಯ ಸಂಪಾದಕರಾಗಿರುವ ಶ್ರೀ|| ದೇವದಾಸ ಗಾಂಧಿಯವರು ೧೭ ವಿರುದ್ಧ ೨ ಮತಗಳಿಂದ ಆರಿಸಲ್ಪಟ್ಟಿದ್ದಾರೆ. ಶ್ರೀ|| ಗಾಂಧಿಯವರಿಗೆ ಪ್ರತಿಸ್ಪರ್ಧಿಯಾಗಿ ಹಿಂದೆ ದಿಲ್ಲಿಯಿಂದ ಹೊರಡುತ್ತಿದ್ದ ಮತ್ತು ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಕರಾಚಿಯಿಂದ ಹೊರಡುತ್ತಿರುವ "ಡೊಣ್" ಪತ್ರಿಕೆಯ ಸಂಪಾದಕರಾಗಿರುವ ಮಿ|| ಅಲ್ತಾಫ ಹುಸೇನ ಇವರು ಈ ಚುನಾವಣೆಯಲ್ಲಿ ಹುರಿಯಾಳಾಗಿ ನಿಂತಿದ್ದರಂತೆ! ಅವರಿಗೆ ಪಾಕಿಸ್ತಾನದ್ದೊಂದು ಮತ್ತು ಬ್ರಿಟನದ್ದೊಂದು ಹೀಗೆ ಎರಡೇ ಮತ ಮತಗಳು ಬಿದ್ದವಂತೆ! ಬ್ರಿಟಿಶರ ಪಾಕಿಸ್ತಾನದ ಮೋಹ ಇಲ್ಲೂ ಎದ್ದು ಕಂಡಿತು!

— ಆಯರ್ಲಂಡ ಸರಕಾರವು ಕಳೆದ ಸೋಮವಾರ ತನ್ನ ಸಂಪೂರ್ಣ ಸ್ವಾತಂತ್ರ್ಯವನ್ನೂ ಸಾರ್ವಭೌಮತ್ವವನ್ನೂ ಉದ್ಘೋಷಿಸಿ ಬ್ರಿಟನ್ನನೊಡನೆ ಇದ್ದಿದ್ದ ಬ್ರಿಟಿಶ ರಾಷ್ಟ್ರಕೂಟದೊಡನೆ ಇದ್ದ ತನ್ನ ಸಂಬಂಧವನ್ನೆಲ್ಲ ತುಂಡರಿಸಿಬಿಟ್ಟಿದೆ. ಆ ದಿನ ಆಯರ್ಲಂಡದಲ್ಲೆಲ್ಲ (ಸ್ವತಂತ್ರ ಆಯರ್ಲಂಡದಿಂದ ಪೃಥಕ್ ಇರುವ ಬ್ರಿಟಿಶ ಪಕ್ಷಪಾತಿ ಉತ್ತರ ಆಯರ್ಲಂಡ ಭಾಗವನ್ನು ಬಿಟ್ಟು) ಉತ್ಸವವಾಯಿತು. ಒಸೇ ಜಾರ್ಜ ರಾಜರೂ ಬ್ರಿಟಿಶ ಮಹಾ-ಮಂತ್ರಿ ಮಿ|| ಎಟಲಿಯವರೂ ಕೂಡ ಸ್ವತಂತ್ರ ಆಯರ್ಲಂಡದ ಈ ಜನೋತ್ಸವದ ಕಾಲಕ್ಕೆ ತಮ್ಮ ಪ್ರೇಮ-ಸಂದೇಶಗಳನ್ನು ಕಳಿಸಿಕೊಟ್ಟಿದ್ದರು. ಆಯರ್ಲಂಡದ ಸ್ವಾತಂತ್ರ್ಯಕ್ಕಾಗಿ ಈವರೆಗೆ ಹೋರಾಡಿದ ಮತ್ತು ಕಳೆದ ಮಹಾಯುದ್ಧದಲ್ಲಿ ಕೊನೆಯ ವರೆಗೂ ಆಯರ್ಲಂಡವನ್ನು ಯುದ್ಧದಿಂದ ಅಲಿಪ್ತ ಮತ್ತು ತಟಸ್ಥವಾಗಿಟ್ಟು ವಸ್ತುತಃ ಆಯರ್ಲಂಡದ ಸಂಪೂರ್ಣ ಸ್ವಾತಂತ್ರ್ಯವನ್ನು ಈ ಹಿಂದೆಯೇ ಸಾಧಿಸಿದ ಮಿ|| ಡಿ ವ್ಹಲೇರಾರವರು ಮಾತ್ರ ಈ ಉತ್ಸವದಲ್ಲಿ ಸೇರಲಿಲ್ಲ! ನಮ್ಮ ಹಿಂದುಸ್ಥಾನವನ್ನು ವಿಚ್ಛೇದಿಸಿ ಪಾಕಿಸ್ತಾನವನ್ನು ನಿರ್ಮಿಸಿದಂತೆ ಧೂರ್ತ ಬ್ರಿಟಿಶ ರಾಜಕಾರಣಿಗಳು ಆಯರ್ಲಂಡಕ್ಕೆ ೨೬ ವರ್ಷಗಳ ಹಿಂದೆ ಸ್ವರಾಜ್ಯದಾನ ಮಾಡುವಾಗ ಅದರ ವಿಚ್ಛೇದನೆ ಮಾಡಿ, ದಕ್ಷಿಣ ಆಯರ್ಲಂಡದಿಂದ ಸಂಪೂರ್ಣವಾಗಿ ಪೃಥಕ್ ಇರುವ "ಉತ್ತರ ಆಯರ್ಲಂಡ"ವನ್ನು ನಿರ್ಮಿಸಿದ್ದರು. ಈ ದೇಶವಿಚ್ಛೇದನೆಯು ಆಯರ್ಲಂಡ ಪ್ರಜೆಗಳಿಗೆ ಸಮ್ಮತವಿದ್ದಿಲ್ಲ. ಈಗಲೂ ಅದು ಅವರನ್ನು ಮುಳ್ಳಿನಂತೆ ಚುಚ್ಚುತ್ತಿದೆ. ಉತ್ತರ ಆಯರ್ಲಂಡದಲ್ಲಿ ಹೊರಗಿನಿಂದ ಬಂದು ನೆಲಸಿರುವ ಇಂಗ್ಲಿಶ ಮತ್ತು ಸ್ಕಾಟಿಶ ಜನರು ಪ್ರಾಬಲ್ಯವಿದೆ. ಆದರಿಂದ ಪ್ರತ್ಯೇಕಗೊಂಡ ಆಯರ್ಲಂಡಗಳ ನಡುವೆ ಬಾಂಧವ್ಯ ಭಾವನೆಯೂ ಸೌಹಾರ್ದವೂ ಬಹಳ ಕಡಿಮೆಯಿದೆ. ಮೊನ್ನೆಯ ಉತ್ಸವದ ಕಾಲಕ್ಕೆ ಉತ್ತರ ಆಯರ್ಲಂಡದಲ್ಲೆಲ್ಲ ಕತ್ತಲೆಯ ಸಾಮ್ರಾಜ್ಯ ಕವಿದಿತ್ತಂತೆ! ಆಯರ್ಲಂಡದ ಈ ಇಬ್ಭಾಗಗಳನ್ನು ಒಟ್ಟುಗೂಡಿಸಬೇಕೆಂದೂ ಆ ಪರಿಣತಿಯು ಒದಗಿ ಬರುವ ತನಕ ಆಯರ್ಲಂಡವು ನಿಜವಾದ ಸ್ವಾತಂತ್ರ್ಯ ಸುಖವನ್ನು ಅನುಭವಿಸಲಾರದೆಂದೂ ಈಗ ಆಯರ್ಲಂಡದಲ್ಲಿದ್ದ ಅಧಿಕಾರಾರೂಢವಾಗಿರುವ ಪಕ್ಷವು ಹೇಳುತ್ತಿದೆ. ಡಿ ವ್ಹಲೇರಾ ಇವರ ಮತವೂ ಕೂಡ ಹಾಗೆಯೇ ಇದೆ. ಆದರೆ ಈ ಇಷ್ಟ ಪರಿಣತಿಯನ್ನು ಬ್ರಿಟಿಶ ರಾಷ್ಟ್ರಕೂಟದಲ್ಲಿದ್ದೇ ಸಾಧಿಸುವದು ಹೆಚ್ಚು ಸುಲಭ ಮತ್ತು ಸಾಧ್ಯವಿದ್ದೀತೆಂದೂ ಬ್ರಿಟಿಶರನ್ನು ಅನುನಯದ ಮಾರ್ಗದಿಂದ ಒಲಿಸಿಕೊಂಡು ಈ ಪರಿಣತಿಯನ್ನು ಸಾಧಿಸಲು ಶಕ್ಯವಾಗುತ್ತಿತ್ತೆಂದೂ ಅವರ ಅಭಿಪ್ರಾಯವಿದೆ. ಬ್ರಿಟಿಶರ ಸಂಬಂಧ ತುಂಡರಿಸಿಕೊಂಡು ಈಗಿನ ಸರಕಾರವು ಆ ಪರಿಣತಿಯನ್ನು ದುಃಸಾಧ್ಯ ಕೋಟಿಗೆ ಒಯ್ದು ಮುಟ್ಟಿಸಿದೆಂತಲೂ ಅವರು ಪ್ರತಿಪಾದಿಸುತ್ತಾರೆ. ಆದ ಕಾರಣದಿಂದಲೇ ಮೊನ್ನೆಯ ಉತ್ಸವದಿಂದ ಅವರು ಸಂತಸಗೊಳ್ಳಲಿಲ್ಲ.

— ಮಾನಸಗಿ ದೇವಾಲಯಗಳಲ್ಲೂ ಕೂಡ ಪ್ರವೇಶ ಮಾಡಿ ಪೂಜೆ ಮಾಡುವ ಹಕ್ಕನ್ನು ಹರಿಜನರಿಗೆ ಕೊಡುವ ಮಸೂದೆಯೊಂದು ಕಳೆದ ವಾರ ಮುದ್ರಾಸ ಪ್ರಾಂತದ ಶಾಸನ ಮಂಡಳದ ಮೇಲ್ಮನೆಯ ಮಂಜೂರಿಯನ್ನು ಪಡೆದಿದೆ. ಈ ಮಸೂದೆಯು ಕೆಳಮನೆಯ ಮನ್ನಣೆಯನ್ನು ಮೊದಲೇ ಪಡೆದಿತ್ತು.

— ತಿರುವಾಂಕೂರ ಮತ್ತು ಕೊಚ್ಚಿ ಸಂಸ್ಥಾನಗಳ ಒಕ್ಕೂಟ ರಚಿಸುವ ಪ್ರಯತ್ನಗಳು ಇತ್ತ ಕೆಲವು ವಾರಗಳಿಂದ ನಡೆದಿವೆ. ತಿರುವಾಂಕೂರ ಮಹಾರಾಜರು ತಾವು ಶ್ರೀ ಪದ್ಮನಾಭ ದೇವರ ಪ್ರತಿನಿಧಿಗಳಾಗಿರುವದರಿಂದ ಬೇರೆ ಯಾರಿಗೂ ನಿಷ್ಠೆ ತೋರಲಾರೆವೆಂದು ಹೇಳುತ್ತಿರುವರಂತೆ. ಆದರಿಂದ ಮಹಾರಾಜರು ಸಿಂಹಾಸನ ತ್ಯಾಗ ಮಾಡುವ ಪ್ರಸಂಗ

THE BANK OF RURAL INDIA LTD.

(Incorporated in British India, Liability of Members limited)

HEAD OFFICE.— "Satyabhama Bhavan", **KARWAR.** N. K

Offices at :— KARWAR, KUMTA, SIRSI, HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital	.. **Rs. 10,00,000,**
Subscribed Capital	.. **Rs. 5,00,000;**
Paid-up Capital & Reserves	.. **Rs. 5,03,502-8-0**

Rates of Interest on Deposits:

Current a/c. @ 1% p. a. ***Savings Bank a/c @ 2½%***

Fixed Deposits for 3 months @ 3% per annum.

" " for 6 months @ 3½% .

" " for 12 months or more @ 4% "

All kinds of modern Banking business transacted

Karwar, 11-2-1948. **P. K. GRACIOUS.** MANAGING DIRECTOR

ಬರುತ್ತದೋ ಏನೋ! ಈ ಒಕ್ಕಲಿಗ [illegible] ದರಿ ಕೇರಳ [illegible] ನಿರ್ಮಾಣಕ್ಕೆ ಅನುಕೂಲವಾಗದವೆಂದು ಹೇಳುತ್ತಾರೆ.

— ಮಹಾತ್ಮರು ಸಾಯುವ ಮುಂಚೆ ಒಂದು ಮರಣಶಾಸನ ಬರೆದಿಟ್ಟು ತಮ್ಮ ಸಕಲ ಲೇಖನ-ಭಾಷಣಗಳ ಹಾಗೂ ಗ್ರಂಥಗಳ ಪುನರ್ಮುದ್ರಣದ ಅಧಿಕಾರವನ್ನು ಅಹಮದಾಬಾದಿನೊಳಗಿನ "ನವಜೀವನ ಟ್ರಸ್ಟ್"ಗೆ ಕೊಟ್ಟಿದ್ದರು. ಆ ಶಾಸನದಂತೆ ಅಧಿಕಾರಕ್ಕೆ ಪಡೆಯುವದಕ್ಕಾಗಿ ನವಜೀವನ ಟ್ರಸ್ಟಿನ ಕಾರ್ಯದರ್ಶಿ ಶ್ರೀ|| ನರಹರಿ ಪರೀಖ ಇವರು ಅಹಮದಾಬಾದಿನ ಜಿಲ್ಹಾ ನ್ಯಾಯಾಧೀಶರ ಮುಂದೆ ಅರ್ಜಿ ದಾಖಲಮಾಡಿದ್ದಾರೆ. ಈ ಅರ್ಜಿಯನ್ನು ಮದರಾಸಿನ ಶ್ರೀ|| ಎಸ್. ನಟೇಶನ್ ಇವರ ಪ್ರಕಾಶನ ಸಂಸ್ಥೆಯವರೂ ಶ್ರೀ|| ಎ ಎಸ್. ನಟರಾಜನ್ ಎಂಬವರೂ ವಿರೋಧಿಸುತ್ತಾರೆ. "ದಕ್ಷಿಣ ಆಫ್ರಿಕೆಯೊಳಗಿನ ಸತ್ಯಾಗ್ರಹ" ಎಂಬ ಪುಸ್ತಕವನ್ನು ನಾವು ಮಹಾತ್ಮರ ಸಂಪೂರ್ಣ ಒಪ್ಪಿಗೆಯಿಂದಲೇ ಹಿಂದೆ ಮುದ್ರಿಸಿ ಪ್ರಕಟಿಸಿದ್ದೇವೆಂದೂ ಅದರೊಳಗೆ ಪ್ರಕಟವಾಗಿರುವ ಲೇಖ-ಭಾಷಣಗಳ ಪುನರ್ಮುದ್ರಣದ ಅಧಿಕಾರ ತಮಗೇ ಸಲ್ಲುತ್ತದೆಂದೂ ಶ್ರೀ|| ಎಸ್ ನಟೇಶನ್ನರ ವಾದವಿದೆ. ಆದರೆ ಅವರು ಸ್ವತಃ ನ್ಯಾಯಾಲಯದಲ್ಲಿ ಹಾಜರಾಗಲಿಲ್ಲ; ವಕೀಲರ ಮುಖಾಂತರವೂ ಹಾಜರಾಗಿರುವದಿಲ್ಲ. ತಮ್ಮ ತಕರಾರನ್ನು ಅಂಚೆಯಿಂದಷ್ಟೆ ಕಳಿಸಿ ಕೊಟ್ಟಿದ್ದರು. ಅಂಚೆಯಿಂದ ಬಂದ ತಕರಾರನ್ನು ನ್ಯಾಯಾಲಯವು ವಿಚಾರದಲ್ಲಿ ತಕ್ಕೊಳ್ಳಲಾರದೆಂದು ನ್ಯಾಯಾಧೀಶರು ನಿರ್ಣಯಿಸಿ, ಅವರ ತಕರಾರನ್ನು ತಿರಸ್ಕರಿಸಿದ್ದಾರೆ. ಶ್ರೀ|| ನಟರಾಜನ್ನರು ಮಹಾತ್ಮರ ಜೀವಮಾನದಲ್ಲಿ ಅವರ ಆಪ್ತ ಕಾರ್ಯದರ್ಶಿಗಳಾಗಿದ್ದ ಶ್ರೀ|| ಕಿಶೋರಿಲಾಲ ಮಶ್ರುವಾಲಾ ಇವರ ಒಪ್ಪಿಗೆಯಿಂದ ಮಹಾತ್ಮರ ಕೆಲವು ಲೇಖಗಳನ್ನೂ ಭಾಷಣಗಳನ್ನೂ ಸಂಪಾದಿಸಿ ಪ್ರಕಟಿಸಿದ್ದರು. ಆ ಪ್ರಕಟನೆಯ ಪುನರ್ಮುದ್ರಣದ ಅಧಿಕಾರ ತಮಗುಂಟೆಂದು ನಟರಾಜನ್ನರ ತಕರಾರುಂಟು. ಅವರ ತಕರಾರನ್ನು ನ್ಯಾಯಾಧೀಶರು ವಿಚಾರಕ್ಕೆ ಹಿಡಿದಿದ್ದಾರೆ.

— ಮ್ಯುನಿಸಿಪಾಲಿಟಿಗಳ ಕ್ಷೇತ್ರಗಳಲ್ಲಿ ಒಟ್ಟಾಗುತ್ತಿರುವ ಕಸ-ಕಡ್ಡಿ, ಮಲ-ಮೂತ್ರಗಳಿಂದ ಗೊಬ್ಬರವನ್ನು ತಯಾರಿಸುವ ಹೊಣೆಯನ್ನು ಮ್ಯುನಿಸಿಪಾಲಿಟಿಗಳ ಮೇಲೆ ಹೇರುವದಕ್ಕಾಗಿ [illegible] ಸರಕಾರವು ಒಂದು ಕಾಯಿದೆಯನ್ನು ಮಾಡಲು ಸಂಕಲ್ಪಿಸಿರುತ್ತದೆ. ಈ ಕಾಯಿದೆಯಾದಲ್ಲಿ [illegible] [illegible] ಉಭಯತ್ರ ಗೊಬ್ಬರವು ತಯಾರಾಗಿ ಆಹಾರೋತ್ಪಾದನೆಯ ಕೆಲಸಕ್ಕೆ ಬಹಳ ಉಪಕಾರಕವಾಗುವದೆಂಬ ಸರಕಾರದವರ ಅಭಿಪ್ರಾಯವುಂಟು.

— ಹುಬ್ಬಳ್ಳಿಯಲ್ಲಿ ಕಳೆದ ಒಂದು ವರ್ಷದಿಂದ ಹಾಲಿನಲ್ಲಿ ನೀರು ಬೆರಸಿ ಮಾರಿದ್ದರ ಬಗ್ಗೆ, ಮೊಸರಿನಲ್ಲಿ ಮಜ್ಜಿಗೆಯಲ್ಲಿ ನೀರು ಬೆರಸಿ ಮಾರಾಟ ಮಾಡಿದ್ದರ ಬಗ್ಗೆ ಗೌಳಿಗ ಸ್ತ್ರೀ ಪುರುಷರ ಮೇಲೆ ಖಟ್ಲೆಗಳಾಗುತ್ತಿವೆ. ಅಲ್ಲಿಯ ರಿಸಿಡೆಂಟ ಮೆಜಿಸ್ಟ್ರೇಟರು ಇಂತಹ ಅಪರಾಧಿಗಳಿಗೆ ರೂ ೪೦ ೫೦-೭೦ರ ವರೆಗೆ ದಂಡ ವಿಧಿಸುತ್ತಾರೆ. ಕಳೆದ ವಾರ ಇಂತಹ ಎಂಟು ಖಟ್ಲೆಗಳಾದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನಮ್ಮ ಜಿಲ್ಹೆಯಲ್ಲಿಯೂ ಇಂತಹ ಖಟ್ಲೆಗಳನ್ನ ಪೋಲೀಸರು ಯಾಕೆ ಮಾಡಬಾರದು?

ಸ್ಥಾನಿಕ ವೃತ್ತಾಂತ

([illegible])

ಶಿವನ್ನ ಗೌಡರ [illegible] ಬುದ್ಧಿಯನ್ನು [illegible] ಹೇಳಿದರೆ — [illegible] ! ಶಿವನ್ನ ಗೌಡರ [illegible] ! — ಹೀಗೆ [illegible] ಶಿವನ್ನ ಗೌಡರ [illegible] ಪೋಲೀಸ[illegible] [illegible] ?

ಇವೇ ಮೊದಲಾದ ಪ್ರಶ್ನೆಗಳು ಉದ್ಭವಿಸುತ್ತಿರುವದರಿಂದ ಮತ್ತು ಅವುಗಳಿಗೆ ಆರೋಪಿ ಭಟ್ಟನು ಸಮಾಧಾನಕರ ಉತ್ತರ ಕೊಡಲು ಅಸಮರ್ಥನಾದ್ದರಿಂದ ನ್ಯಾಯಾಧೀಶರು ಅವನ ಸಾಕ್ಷಿಯನ್ನು ನಂಬಲು ಒಪ್ಪಲಿಲ್ಲ. ಮತ್ತು ಬೇರೆ ನಂಬಲರ್ಹವಾದ ಪುರಾವೆಯಿಲ್ಲದ್ದರಿಂದ ಆರೋಪಿತರ ಬಿಡುಗಡೆ ಮಾಡಿದ್ದಾರೆ. ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಗೋಕರ್ಣಸ್ಥರಿಗೆ ಕೆಲವು ಉಪದೇಶದ ಮಾತುಗಳನ್ನೂ ಹೇಳಿದ್ದಾರೆ. ಗೋಕರ್ಣದಂತಹ ಪವಿತ್ರ ಕ್ಷೇತ್ರದಲ್ಲಿ ಇಂತಹ ಕೊಲೆಪಾತಕಗಳಾಗುವದು ಒಂದು ದೊಡ್ಡ ಲಾಂಛನವೆಂದೂ, ಇಂತಹ ಘಟನೆಗಳು ನಡೆಯುತ್ತಿದ್ದರೆ ಯಾತ್ರಿಕರು ಗೋಕರ್ಣಕ್ಕೆ ಬರುವದು ಕಡಿಮೆಯಾಗುವದೆಂದೂ, ಅದ್ದರಿಂದ ಇಂತಹ ಕೊಲೆಪಾತಕಗಳ ನಿಜವಾದ ಅಪರಾಧಿಗಳ ಪತ್ತೆ ಹಿಡಿಯಲು ಗೋಕರ್ಣದ ಜನರು ಪೋಲೀಸರಿಗೆ ತಮ್ಮ ಸಂಪೂರ್ಣ ಸಹಾಯ-ಸಹಕಾರಗಳನ್ನು ನೀಡುವದು ಶ್ರೇಯಸ್ಕರವೆಂದೂ ನ್ಯಾಯಾಧೀಶರು [illegible] ಕ್ಷೇತ್ರವಾಸಿಗಳಿಗೆ ಸ್ಪಷ್ಟ ಎಚ್ಚರಿಕೆ ಕೊಟ್ಟಿದ್ದಾರೆ.

[illegible] ಇದ್ದಲ್ಲೇ [illegible] ! ಅವು ಹ್ಯಾಗೆ [illegible] ಮತ್ತು ಎಲ್ಲಿ [illegible] ಎಂಬುದು ಒಂದು [illegible] ! [illegible] ಪೋಲೀಸರಿಗೆ [illegible] . ಪೋಲೀಸರ [illegible]

[illegible]

ಮುಂಬಯಿ ಪ್ರಾಂತದಲ್ಲಿ [illegible] ([illegible]) [illegible]

[illegible]

[illegible] ಬಗ್ಗೆ ಶ್ರೀ ಎಸ್. ಎಸ್. [illegible], ಜೇ. ಪ್ಪಿ [illegible] ಮತ್ತು ಸಿ. ಡಿ. [illegible] [illegible]

[illegible] ?

(ತಾ ೧-೪-೪೯) ಇಲ್ಲಿಯ ದನಗಳ ಚಿಕಿತ್ಸಾಲಯವು ಬಗ್ಗೆ ಸ್ಥಳ ಹುಡುಕುತ್ತಿದ್ದಾರಂತೆ. ಚಿಕಿತ್ಸಾಲಯವನ್ನು ಎಲ್ಲಿ ತೆರೆದರೆ ಅದರ ಪ್ರಯೋಜನ ಪಡೆಯುವ ಮತ್ತು ಪಡೆಯಬೇಕಾದ ಜನರಿಗೆ ಅನುಕೂಲವಾದೀತು ಎಂಬೀ ದೃಷ್ಟಿಯನ್ನು ಹಿಡಿಯದೆ ಸಿಕ್ಕ ಸಿಕ್ಕ ಬೈಲುಗಳ ಪರೀಕ್ಷಣ ನಡೆದಿದೆಯೆಂಬುದಾಗಿ ಒಂದು ವಾರ್ತೆಯುಂಟು. ಈ ಚಿಕಿತ್ಸಾಲಯದ ಪ್ರಯೋಜನ [illegible] ಸಿಗುತ್ತದೆ [illegible] ಜನರಿಗೂ [illegible] ಬೇಕು ಆ ದೃಷ್ಟಿಯಿಂದ ವಿಚಾರ ಮಾಡಿದಲ್ಲಿ ಸರಕಾರಿ [illegible] ಉತ್ತರಕ್ಕಿರುವ [illegible] ಈ ಚಿಕಿತ್ಸಾಲಯವನ್ನಿಡಲು ಬಹಳ ಅನುಕೂಲವಿದೆಯೆಂದು [illegible] ಬರೆಯುತ್ತಾರೆ

(ತಾ ೨೪-೪-೪೯) ನಮ್ಮ ಜಿಲ್ಹೆಯಲ್ಲಿ ಮುಂಬಯಿ ಪತ್ರಿಕೆಗಳು ತರಿಸಿಕೊಳ್ಳಲಿಕ್ಕೆ [illegible] ಅಪ್ಪಣೆ ಕೊಡಲು ಸರಕಾರಕ್ಕೆ ತಾವು ಶಿಫಾರಸು ಮಾಡಿದ್ದೇವೆಂದು ಜಿಲ್ಹಾಧಿಪರು ಹೇಳಿ ಈಗ ಒಂದು ತಿಂಗಳಾಗುತ್ತ ಬಂತು ಆದರೆ ಇನ್ನೂ ಆ ಅಪ್ಪಣೆ ದೊರೆತಿಲ್ಲ! ಮುಂಬಯಿಯ ಪತ್ರಿಕೆಗಳು ನಮ್ಮಲ್ಲಿ ಬರಲಿಕ್ಕೆ ಸಮುದ್ರ ಮಾರ್ಗವೊಂದೇ ಅನುಕೂಲವಿದೆ. ರೇಲ್ವೆಯಿಂದ ಅದು ತರಿಸಿಕೊಳ್ಳಲು ಸಾಧ್ಯವಿಲ್ಲ. ಒಂದುವೇಳೆ ತರಿಸಿಕೊಂಡರೂ ಖರ್ಚು ಬಹಳ ಬರುತ್ತದೆ. ಸಮುದ್ರ ಮಾರ್ಗವು ಇನ್ನೊಂದು ವಾರದಲ್ಲಿ ಕಟ್ಟಾಗುತ್ತದೆ. ಮಳೆಗಾಲಕ್ಕೆ ಬೇಕಾಗುವ ಪತ್ರಿಕೆಗಳನ್ನು ಈಗಲೇ ತರಿಸಿಕೊಳ್ಳಬೇಕು. ಮೇ ತಿಂಗಳ ಮೊದಲನೇ ವಾರದ ನಂತರ ಸರಕಾರದವರ ಅಪ್ಪಣೆ ದೊರೆತರೆ ಅದರ ಪ್ರಯೋಜನವಾಗುವಂತಿಲ್ಲ. ಕಾರಣ ಜಿಲ್ಹಾಧಿಪರು ತಂತಿಯಿಂದ ಇನ್ನೊಮ್ಮೆ ಇಲ್ಲಿಯ ಪರಿಸ್ಥಿತಿಯನ್ನು ಸರಕಾರಕ್ಕೆ ಬರೆದು ಮುಂಬಯಿಯ ಪತ್ರಿಕೆಗಳು ಮೊದಲೇ ನಮ್ಮ ಜಿಲ್ಹೆಯವರಿಗೆ ದಕ್ಕಿಸಲು ಶಿಫಾರಸು ಮಾಡಬೇಕಾಗಿ ಅಪೇಕ್ಷೆಯಿದೆ

ಸ್ಥಾನಿಕ ವೃತ್ತಾಂತ

ಕುಮಟಾ— [illegible] ಬೇಗನೇ ೧-೨ [illegible] ಲಕ್ಷಣಗಳುಂಟು

[illegible] ಸೀಧಾ-ಅಂಗಡಿಗಳಲ್ಲಿ [illegible]

[illegible]

[illegible]

ಗೋಕರ್ಣದೆಡೆಗೆ [illegible]

[illegible]

ಹಳ್ಳಿಗಳಲ್ಲಿ [illegible]

[illegible] ಸೀಧಾ-ಧಾನ್ಯ [illegible]

ಹೊನ್ನಾವರ— (ತಾ. ೨೨-೪-೪೯) ಇಲ್ಲಿಯ ಸೀಧಾ ಅಧಿಕಾರಿಗಳು [illegible]

[illegible] ಸೀಧಾ-ಅಂಗಡಿಗಳನ್ನು [illegible]

[illegible] ಸೀಧಾ ಅಂಗಡಿಯನ್ನು [illegible], ಅಧಿಕಾರಿಗಳು, [illegible] ಸೀಧಾ ಅಂಗಡಿಯ [illegible]

ಆಸ್ತಿಕ ಮಹಾಶಯರಲ್ಲಿ ವಿಜ್ಞಾಪನೆ.

[illegible], ನೌಕರಿ, ವಿವಾಹ,

[illegible] ವಿಧದ ಸಂಕಟಗಳನ್ನು ಪರಿಹರಿಸಿಕೊಳ್ಳಿರಿ

[illegible] ದೇವರ ಸನ್ನಿಧಿಯಲ್ಲಿ, [illegible] ದೇವರ [illegible] ಉಜ್ವಲವಾಗಿ [illegible]

[illegible] ಗ್ರಹಬಾಧೆ, [illegible]

[illegible]

[illegible]

ವಿ. ಸೂ :— [illegible]

[illegible] ಆಂಗಡಿಯನ್ನು [illegible]

[illegible] ಸೀಧಾ-ಅಂಗಡಿ [illegible]

ಕಿರವತ್ತಿ— ಈ ಹಿಂದೆ ತಿಳಿಸಿದಂತೆ ಕಳೆದ [illegible] ಅಂಸೇಗೆ ಘಟಿಕಳ [illegible] ಪ್ರಾಥಮಿಕ ಶಿಕ್ಷಕರ ಸಮ್ಮೇಲನವು ರಾ॥ [illegible] ಇವರ ಅಧ್ಯಕ್ಷತೆಯಲ್ಲಿ ನಡೆಯಿತು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಿಕ್ಷಕರಿಗೂ ವಿದ್ಯಾರ್ಥಿಗಳ ಪಾಲಕರಿಗೂ ಅವರ ಕರ್ತವ್ಯಗಳ ಅರಿವು ಮಾಡಿಕೊಟ್ಟರು

ಶಿರ್ಸಿ— ಅಡಿಕೆ ಪರಿಷತ್ತಿನ ಸಿದ್ಧತೆಗಳು ಭರದಿಂದ ಸಾಗಿವೆ ಬಿಡ್ಕಿ ಬೈಲಲ್ಲಿ ಪರಿಷತ್ತಿನ ಮಂಟಪ ತಯಾರಾಗುತ್ತಿದೆ ಈ ಪರಿಷತ್ತಿನ ಕಾಲಕ್ಕೆ ಬೇಸಾಯ, ಮತ್ತು ಆರೋಗ್ಯ ಇಲಾಖೆಗಳ ಅಧಿಕಾರಿಗಳು ತೋಟಿಗಾರರಿಗೆ ಬಾಧೆ ಕೊಡುವ ಕೊಳೆ ರೋಗ, ಚಳಿ ಜ್ವರ ಮನ್ನೆರೆ ವಿಷಯಗಳ ಮೇಲೆ ವ್ಯಾಖ್ಯಾನ ಕೊಡಲಿಕ್ಕೂ ಬೇಸಾಯದ ಹುಟ್ಟುವಳಿಯ ಪೀಡೆಯನ್ನು ನಿಯಂತ್ರಿಸುವ ಅಧಿಕಾರಿಗಳು ತಮ್ಮ ನಿಯಂತ್ರಣದ ಯೋಜನೆಯನ್ನು ತಿಳಿಸಿ

ಜಾಹೀರ ನೋಟೀಸು.

[illegible] ದರೆ :— ನನ್ನ ಲಗ್ನವಾಗಿ [illegible]

[illegible]

ಅಂಕೋಲಾ, ತಾ. ೨೨-೪-೧೯೪೯

ಲಕ್ಷ್ಮಣ [illegible], ಅಂಕೋಲಾ

ಹೇಳಿಕೊಳ್ಳುತ್ತಿರುತ್ತಾರೆ. ಜಿಲ್ಲೆಯ ಸಕಲ ತಾಲೂಕುಗಳ ಬ್ರಾಹ್ಮಣರು ಈ ಪುರಸತ್ತಿನ ಪೂರ್ಣ ಪ್ರಯೋಜನ ಪಡೆಯಬೇಕೆಂದೂ ಪರಿಷತ್ತನ್ನು ಯಶಸ್ವಿಗೊಳಿಸಲು ಸನ್ನದ್ಧರಾಗಬೇಕೆಂದೂ ಸ್ವಾಗತ ಸಮಿತಿಯವರು ಬಿನ್ನವಿಸುತ್ತಾರೆ.

ಇಲ್ಲಿ ೨ ಬೇಸಾಯದ ಹುಟ್ಟುವಳಿಯ ಪೇಟೆಯನ್ನು ನಿಯಂತ್ರಿಸುವ ಸಮಿತಿ (ಮಾರ್ಕೆಟ ಕಮಿಟಿ)ಗೆ ರಾ। ತಿಮ್ಮಪ್ಪ ಹೆಗಡೆ ಮೋಟಿನಸರ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ೨ ವರ್ಷಗಳ ಕಾಲ ಅವರೇ ಅಧ್ಯಕ್ಷರಾಗುಳಿಯುವರು.

ಪಂಚಾಯಿತಿ ಸಿರ್ಸಿಯಲ್ಲಿ ಸಂಘಟನೆಯಿಂದ ಶಿವಗ್ರಾಂವರೆಗೆ ಒಂದು ಹಳ್ಳ-ರಸ್ತೆಯುಂಟು. ಈಗ ೩ ವರ್ಷಗಳಿಂದ ಅದರ ಪಾಲಿತಿ ದುರುಸ್ತಿಯಾಗುವದಿಲ್ಲ! ದುರುಸ್ತಿ ಮಾಡಿಸಿರೆಂದು ಬೋರ್ಡಿನವರ ಕಡೆ ಹೇಳಿಕೊಂಡರೆ ದುರುಸ್ತಿಗೆ ತಗಲುವ ಅರ್ಧ ಹಣವನ್ನು ನೀವೇ ಜನರು ಒಟ್ಟುಗೂಡಿಸಿ ಕೊಡಬೇಕೆಂದು ಹೇಳುತ್ತಾರೆ! ಕೆಲವು ದಿನಗಳ ಹಿಂದೆ ಬೋರ್ಡಿನ ಅಧಿಕಾರಿಗಳು ಒಂದು ಜನರಿಗೆ ಕೇಳಿ, ಹಣ ಕೊಡುವದು ಸಾಧ್ಯವಿಲ್ಲೆಂದು ಜನರ ಕಡೆಯಿಂದ ಬರೆಯಿಸಿಕೊಂಡು ಹೋಗಿರುತ್ತಾರಂತೆ. ಈಗ ಚೌಕಶಿ ಮಾಡಿದರೆ, ದುರುಸ್ತಿ ಕೆಲಸ ಯಾರಿಗೋ ಗುತ್ತಿಗೆಗೆ ಕೊಟ್ಟಿರುತ್ತಾರೆಂದು ತಿಳಿಯುತ್ತದೆ. ಇವರೆ ಆ ಗುತ್ತಿಗೆದಾರರು ದುರುಸ್ತಿ ಕೆಲಸ ಏನೇನೂ ಮಾಡಿರುವದಿಲ್ಲ! ಬೋರ್ಡಿನಿಂದ ದುರುಸ್ತಿಯಾಗುವದೆಂಬ ಆಶೆ ಬಿಟ್ಟು ಸಂಘಟನೆಯಿಂದ ೪॥ ಮೈಲು ಉದ್ದ ರಸ್ತೆಯ ದುರುಸ್ತಿಯನ್ನು ನವಿಲಗಾರ ಗ್ರಾಮದ ರೈತರು ಮಾಡಿದ್ದಾರೆ, ಇನ್ನುಳಿದ ೨॥ ಮೈಲುದ್ದ ರಸ್ತೆಯ ದುರುಸ್ತಿ ಶಿವಗ್ರಾಂದ ಪಟೇಲರು ಮಾಡಿಸಿದ್ದಾರೆ. ಈ ದುರುಸ್ತಿಯನ್ನು ತಮ್ಮ ಗುತ್ತಿಗೆದಾರರು ಮಾಡಿಸಿದ್ದಾರೆಂಬ ತಿಳುವಳಿಕೆ ಕೊಟ್ಟು ಬೋರ್ಡಿನ ಓವ್ಹರಸೀಯರರು ಈಗ ತಮ್ಮ ಗುತ್ತಿಗೆದಾರರಿಗೆ ಹಣ ಕೊಡಿಸಲು ಶಿಫಾರಸು ಮಾಡಿದ್ದಾರೆಂದು ತಿಳಿಯುತ್ತದೆ. ಬೋರ್ಡಿನ ಅಧಿಕಾರಿಗಳು ಈ ವಿಷಯಕ್ಕೆ ಲಕ್ಷ್ಯ ಕೊಡುವರೆಂದು ಆ ಸೀಮೆಯ ಕೆಲ ಗೃಹಸ್ಥರು ಎಚ್ಚರಿಕೆ ಕೊಡುತ್ತಾರೆ.

ಕಾರವಾರ ಜಿಲ್ಲಾ ಪ್ರಾ॥ ಶಿ॥ ಪ್ರಸಾರಕ ಸಮಿತಿಯ ಪ್ರಾ॥ ಶಿಕ್ಷಕರ ಸಂಘದ ಅಧಿವೇಶನವೊಂದು ಕಳೆದ ತಾ ೧೧ಕ್ಕೆ ಗುಡ್ನಾಪುರದಲ್ಲಿ ಜರುಗಿತು. ಸಮಿತಿಯ ಅಧ್ಯಕ್ಷರ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಬಹಳ ಟೀಕೆಯಾಯಿತು. ಮುಖ್ಯಾಧ್ಯಾಪಕರು ನಮ್ಮ ಜಿಲ್ಲೆಯನ್ನು ಅಭ್ಯುದಯಗೊಳಿಸುವ ಹೊಂದು [illegible] ನಿಷೇಧ ಮಾಡುವ ಒಂದು ಗೊತ್ತುವಳಿಯೂ ಸಭೆಯಲ್ಲಾದ ಸುದ್ದಿಯುಂಟು. ಪ್ರಾಥಮಿಕ ಶಾಲಾ ಶಿಕ್ಷಕರು ತಮ್ಮ ಅಧಿಕಾರಿಗಳ ವಿಚಾರಗಳನ್ನು ಟೀಕಿಸಿ, ತಮ್ಮ ಅರಿವು ಮೂಡದ ಇಂಥ ದೊಡ್ಡ ಪ್ರಶ್ನೆಗಳಲ್ಲಿ ಸ್ವಾತಂತ್ರ್ಯದಿಂದಿರುವದು ಇಂದಿನ ಅನ್ಯಾಯಕ್ಕೆ ತತ್ವದ ಒಂದು ಲಕ್ಷಣವೆಂದೇ ಹೇಳಬಹುದು.

ಸಿದ್ದಾಪುರ— (ತಾ ೨೦-೪-೪೮) ಗ್ರಾಹಕರ ಅಂಗಡಿಗಳ ಅಕ್ಕಿ-ಭತ್ತಗಳನ್ನು [illegible] ಅಪ್ಪಣೆ-ಚೀಟಿ ಕೇಳಿದರೆ ಇಲ್ಲಿಯ ಅಧಿಕಾರಿಗಳು ಒಂದೆ ಒಬ್ಬ ಭತ್ತ ಕೊಳ್ಳುವರ ಅಪ್ಪಣೆ-ಚೀಟಿ ಕೊಡುವದು ಬೇಕಾಗಿದ್ದರು. ಅವರ ಹಿಂದಿನ "ಲೆವ್ಹಿ" ಯಿಂದ [illegible] ಗ್ರಾಹಕರಿಗೆ ಅಕ್ಕಿ [illegible] ಅಧಿಕಾರಿಗಳು ಗ್ರಾಹಕರಿಗೆ ಅಪ್ಪಣೆ-ಚೀಟಿ ಕೊಡಲು ಒಪ್ಪಿಕೊಂಡಿದ್ದಾರೆ! ಅಕ್ಕಿಯನ್ನು [illegible] ನೋಡಿರಿ. ಮಾರಾಟದ ಗ್ರಾಮದಲ್ಲಿ [illegible] ಅಂಗಡಿಯವರ ಅಕ್ಕಿ-ಭತ್ತ [illegible] ಭತ್ತ ಮಾರಿದ ತರುವಾಯ ಅವರಿಗೆ [illegible] ಅದರ [illegible] ಅವರಿಗೆ [illegible] ಅಕ್ಕಿ [illegible] ಭತ್ತ [illegible] ಅಪ್ಪಣೆ-ಚೀಟಿ [illegible],

ಸಿಗುವದಿಲ್ಲ! ಇಂಥ ಕೊಳ್ಳು-ಭರಾಟೆಗಳಲ್ಲಿ, ಅಂಗಡಿಯ ಅಕ್ಕಿ-ಭತ್ತಗಳನ್ನು ೦॥ [illegible] ಅವರ ಕಾರ್ಯಾಚರಣೆ [illegible] ಪ್ರಸಂಗ ಬಂದಿದೆ! [illegible] ಅಕ್ಕಿ ಅವರ ಅಧಿಕಾರಿಗಳ ಕೈಯಲ್ಲಿ ನಿಯಂತ್ರಣ ಅಧಿಕಾರ ಕೊಟ್ಟಿದ್ದರ ಪರಿಣಾಮವಿದು!

ಮುಂಡಗೋಡ— (ತಾ. ೧೮-೪-೪೮) ಇಲ್ಲಿಂದ ಯಲ್ಲಾಪುರಕ್ಕೆ ಹೋಗುವ ಮಾರ್ಗದಲ್ಲಿಯ ಮತ್ತು ಇಲ್ಲಿಂದ ೪ ಮೈಲಿನ [illegible] ರಸ್ತೆಗಳ ದುರುಸ್ತಿಯ ಕೆಲಸ ನಡೆದಿದೆ. ಈ ದುರುಸ್ತಿಯ ಕೆಲಸ [illegible] ಬಂದ ಬಂದ ಬಂಡಿಗಳು [illegible] ಅಧಿಕಾರಿಗಳು ಇತ್ತ ಲಕ್ಷ್ಯ ಕೊಡಬೇಕಾಗಿ ಅರಿಕೆಯುಂಟು.

ಯಲ್ಲಾಪುರ— (ತಾ. ೨೨-೪-೪೮) ಕಳೆದ ವಾರದ "[illegible]" ದಲ್ಲಿ ಇಲ್ಲಿಯ [illegible] ಪ್ರಕಟವಾಗಿದ್ದರ ಬಗ್ಗೆ [illegible] ಅದನ್ನು ಓದಿದ [illegible] — [illegible] ಅವರ ಕಾಣಿಕೆ [illegible] ಹೆಸರಿಗೆ [illegible] ಅಂಗಡಿ [illegible] ಆ ದುಡಿಮೆಯನ್ನು ನೋಡಿ [illegible] ಹಿಂದಿನ [illegible] ಆದರೆ [illegible] ಬಾಲ [illegible] ಅವರು [illegible] ಒಂದು [illegible] ಅದರ [illegible] ಒಂದು [illegible] ತಪ್ಪು [illegible] ಅವರ [illegible]

॥ ಶ್ರೀ ದುರ್ಗಾದೇವಿ ಪ್ರಸನ್ನ ॥

ಜಾಹೀರ ವಿನಂತಿ.

[illegible] ಅಂದರೆ [illegible] ಶ್ರೀ ದೇವರ ಕಾರ್ತಿಕ [illegible] ಮಾಡಲು ದೇವರ ಕೆಲಸಗಳಿಗೆ ಸದ್ಭಕ್ತರು [illegible] ಶ್ರೀ ದೇವರ ಕೆಲಸಗಳಿಗೆ ಭಕ್ತರು ಶಕ್ತ್ಯಾನುಸಾರ ಸಹಾಯ ಮಾಡಬೇಕಾಗಿ ವಿನಂತಿಯು.

ವಿ. ಸೂ. — ಈ ಕಾರ್ಯಕ್ಕಾಗಿ ಹಣ ಕಳಿಸುವವರು ಈ ಕೆಳಗಿನ ವಿಳಾಸಕ್ಕೆ ಹಣ ಕಳಿಸಬಹುದು.

ವಿಳಾಸ — ಸುಬ್ರಾಯ ಕೃಷ್ಣ ಹೆಗಡೆ,
ದೊಡ್ಡೇರಿ, ಪೋ ದೇವನಗಿ.

ಬರದ ಕಾರಣ ಬರಲಿಲ್ಲ. [illegible] ಅವರ ಈ ನಡತೆ ಅಕ್ಷಮ್ಯವಾದದ್ದೆಂದು ಹೇಳಲಾಗದು. ಅವರ ಅಧಿಕಾರಿಗಳ ಬರದ ಬಂದ ಕೊಡದೇ [illegible] ಸಾಹೇಬರಿಗೆ ಕೊಟ್ಟ ಅಪ್ಪಣೆಯನ್ನು [illegible] ಕೊಂಡಿದ್ದಾರೆ ಅನ್ನುತ್ತಿದ್ದಾರೆ.

ಕಾರವಾರ— (ತಾ. ೨೪-೪-೪೮) ಕಳೆದ [illegible] ಸಭೆಯ ಗೋಕರ್ಣದಲ್ಲಿ [illegible] ಪ್ರಕರಣ [illegible] ಶಿವಪ್ಪಗೌಡ ಗುರುಸಿದ್ದಪ್ಪಗೌಡ ಪಾಟೀಲ ಇವರ ಕೊಲೆ ಮಾಡಿದ (ಶಿವಪ್ಪಗೌಡ ಇವರು ೧೮ ವರ್ಷ ನಂತರ [illegible] ೫೦ ವರ್ಷ [illegible] ಆ ನಂತರ ಕೊಲೆಯಾದ ಸುದ್ದಿ [illegible]) ಆರೋಪದ ಮೇಲೆ ಒಟ್ಟಿಗೆ ಗುರು ಮಾಡಲ್ಪಟ್ಟ ಗೋಕರ್ಣದ [illegible] ಇವರ ಮೇಲಿದ್ದ ಮೊಕದ್ದಮೆ [illegible] ಇಲ್ಲಿ ಸೆಶನ್ಸ ಕೋರ್ಟಿನಲ್ಲಿ ನಡೆದಿದ್ದು ನಿನ್ನೆ ನ್ಯಾಯಾಧೀಶರು ತೀರ್ಪು ಕೊಟ್ಟು ಆರೋಪಿಗಳು ಕೊಲೆ ಮಾಡಿದರೆಂಬ [illegible] ಪುರಾವೆಯಿಲ್ಲದ್ದರಿಂದ ಎಲ್ಲಾ ಆರೋಪಿಗಳನ್ನು ಬಿಟ್ಟು ಕೊಟ್ಟಿರುತ್ತಾರೆ. ಈ ಸುದ್ದಿ [illegible] ಗೌಡರು [illegible] ಕೊಂದಿದ್ದ ಆಪಾದಿತರೆಲ್ಲರೂ [illegible] ಇವರ ಮೇಲೆ ಕೊಲೆ ಮಾಡಿದ ನಂತರ ೧೧ ತಿಂಗಳ ಬಳಿಕ ಈ ಆರೋಪಿಗಳು

(ಮುಂದೆ ೯ನೇ ಪುಟ ನೋಡಿರಿ)

ಕರ್ನಾಟಕ ಶಾಖೆ.—
ಕೊಪ್ಪೀಕರ ರೋಡ, ಹುಬ್ಬಳ್ಳಿ.

ಕುಮಟಾ ತಾಲೂಕಿನ ಬೆಳೆಯ ಪ್ರಕಟನೆ

(೧೯೪೭-೪೮ನೇ ಸಾಲಿನದು)

[illegible]

ಸ್ಥಾನಿಕ ಪ್ರದೇಶ (೧)	ಭೂಮಿಯ ವರ್ಗ ಮತ್ತು ಜಾತಿ (೨)	ಎಕರೆ ೧ಕ್ಕೆ ಸರಾಸರಿ ಬೆಳೆ (೩)
ಸರ್ವೇ ಗ್ರೂಪ I ರೊಳಗಿನ ಗ್ರಾಮಗಳು	೧ನೇ ವರ್ಗದ ಕರ (ಹೊಂದ) [illegible]	[illegible]
	೨ನೇ ವರ್ಗದ ಕರ (ಮಕ್ಕಿ) [illegible]	[illegible]
	ಗಜನಿ	[illegible]
ಸರ್ವೇ ಗ್ರೂಪ II ರೊಳಗಿನ ಗ್ರಾಮಗಳು	೧ನೇ ವರ್ಗದ ಕರ (ಹೊಂದ) [illegible]	[illegible]
	೨ನೇ ವರ್ಗದ ಕರ (ಮಕ್ಕಿ) [illegible]	[illegible]
	ಗಜನಿ	[illegible]
ಸರ್ವೇ ಗ್ರೂಪ III ರೊಳಗಿನ ಗ್ರಾಮಗಳು	೧ನೇ ವರ್ಗದ ಕರ (ಹೊಂದ) [illegible]	[illegible]
	೨ನೇ ವರ್ಗದ ಕರ (ಮಕ್ಕಿ) [illegible]	[illegible]
ಸರ್ವೇ ಗ್ರೂಪ IV ರೊಳಗಿನ ಗ್ರಾಮಗಳು	೧ನೇ ವರ್ಗದ ಕರ (ಹೊಂದ) [illegible]	[illegible]
	೨ನೇ ವರ್ಗದ ಕರ (ಮಕ್ಕಿ) [illegible]	[illegible]
ಸರ್ವೇ ಗ್ರೂಪ V ರೊಳಗಿನ ಗ್ರಾಮಗಳು	೧ನೇ ವರ್ಗದ ಕರ (ಹೊಂದ) [illegible]	[illegible]
ಸರ್ವೇ ಗ್ರೂಪ VI ರೊಳಗಿನ ಗ್ರಾಮಗಳು	೧ನೇ ವರ್ಗದ ಕರ (ಹೊಂದ) [illegible]	[illegible]
	೨ನೇ ವರ್ಗದ ಕರ (ಮಕ್ಕಿ) [illegible]	[illegible]

[illegible]

GIBB HIGH SCHOOL, KUMTA

All past students of the school are cordially invited to attend the Prize Distribution Ceremony and the Social Gathering of the school from 28—4—1949 to 30—4—1949. Mr. A. N. Sane, the Educational Inspector S. D., will preside.

23—4—1949 J. V. Gavaskar. Headmaster

ಪ್ರಕಟನೆ.

ಕುಮಟಾ ಶೇತಕಿ ಶಾಲೆಯು

[illegible]

ಶೇತಕಿ ಶಾಲಾ, ಕುಮಟಾ, ತಾ. [illegible] — ಎಮ್. ವ್ಹಿ. ಭಾಗವತ, ಸುಪರಿಂಟೆಂಡೆಂಟ, ಶೇತಕಿ ಶಾಲಾ, ಕುಮಟಾ.

ನಮ್ಮಲ್ಲಿ ಕಸ್ತರದಿಂದ ತಯಾರಾದ

ಚರಖಾ ಹುರಿ, ಬಾವಿ-ಹಗ್ಗ,

ಮ್ಯಾಟಿಂಗ ಮತ್ತು ಬ್ರಶಮೆಟಗಳು

ಯೋಗ್ಯ ದರದಲ್ಲಿ ಸಿಗುತ್ತವೆ

ಜೆಂಟಲಮನ್, ಕಸ್ತರ ಸೊಸೈಟಿ ಲಿಮಿಟೆಡ್,

ಹೊನ್ನಾವರ (ಉ. ಕ.)

ಆಜ್ಞೆ.

[illegible]

ಪರಿಶಿಷ್ಟ ೧.

೧ ಛತ್ರ. ೨ ಅಕ್ಕಿ.

ಪರಿಶಿಷ್ಟ ೨.

ಸಂಗ್ರಹದ ಮಾಹಿತಿ ಕೊಡುವ ಮಾದರಿ.

[illegible]

ನಂ. [illegible]

ಕಾರವಾರ, ತಾ. [illegible] — M. Allahbaksh, ಜಿಲ್ಲಾ ಮೆಜಿಸ್ಟ್ರೇಟ, ಕಾರವಾರ.

Public Notice

BOMBAY SALES TAX ACT.

ಸಾರ್ವಜನಿಕ ನೋಟೀಸು.

ಮುಂಬಯಿಯ ಮಾರಾಟಗಳ ಕರದ ಕಾನೂನು.

[illegible]

(೧) [illegible]

[illegible]

ಪರಿಶಿಷ್ಟ ೧.

ಭಾಗ ೧.

ಸರಕುಗಳು.	ಸಾಮಾನ್ಯ ಕರದ ದರವು.
೧	೨
೧. [illegible]	[illegible]
೨. [illegible]	[illegible]

ಭಾಗ ೨

ಸರಕುಗಳು.	ವಿಶಿಷ್ಟ ಕರದ ದರವು.
೧	೨
೧. [illegible]	[illegible]

ಪರಿಶಿಷ್ಟ ೨

ಪ್ರದೇಶಗಳ ಹೆಸರುಗಳು

೧ [illegible]

[illegible]

B. Venkatappiah

[illegible]

(೨) [illegible]

× × ×

[illegible]

× × ×

(೨) [illegible]

(೧) ದೆಹಲಿಯು, ಹಡಗಿನ, ಅಥವಾ ವಿಮಾನದ ... ಅಥವಾ ... ಟ್ರಾನ್ಸ್‌ಪೋರ್ಟ್ ... ಅಥವಾ ... ಮುಖಾಂತರ, ಪಾಂಡಿಚೇರಿ, ... ಚಂದ್ರನಗರ, ... ಹಾಗೂ ... ಎಂಬ ಫ್ರೆಂಚ್ ಪ್ರದೇಶಗಳನ್ನು ಮತ್ತು ... ಹಾಗೂ ... ಎಂಬ ಪೋರ್ಚುಗೀಜ್ ಪ್ರದೇಶಗಳನ್ನು ... ಹಿಂದುಸ್ಥಾನದ ... [illegible]

(೨) ಸದರಿ ... [illegible]

ವಿವರಣೆ — (೨)ನೆಯ ... [illegible]

× × × ×

(೩) ... —

... [illegible]

(೧) ... ಪಾಂಡಿಚೇರಿ, ... ಚಂದ್ರನಗರ, ... ಫ್ರೆಂಚ್ ಪ್ರದೇಶಗಳಿಗೆ ... ಪೋರ್ಚುಗೀಜ್ ಪ್ರದೇಶಗಳಿಗೆ ... [illegible]

... [illegible]

(೨) ... [illegible]

(೩) ... [illegible]

(೪) ... [illegible]

ವಿವರಣೆ — ... ದೆಹಲಿಯು, ಹಡಗಿನ ಅಥವಾ ವಿಮಾನದ ... ಟ್ರಾನ್ಸ್‌ಪೋರ್ಟ್ ... [illegible]

ಆದರೆ ... — ... [illegible]

ಟಿಪ್ಪಣಿ — ೧ ನೇ ... ಹಿಂದುಸ್ಥಾನದ ... ಫ್ರೆಂಚ್ ಹಾಗೂ ಪೋರ್ಚುಗೀಜ್ ಪ್ರದೇಶ ... [illegible]

(೨) ... [illegible]

V. L. GIDWANI,

... ೪೯೬/೫, ಡೆಪ್ಯುಟಿ ಕಲೆಕ್ಟರ್

ಮುಂಬಯಿ, ... ಕಸ್ಟಮ್ಸ್,

ತಾ ೮-೪-೧೯೪೯. ಮುಂಬಯಿ ಪ್ರಾಂತ.

ಪ್ರಕಟನೆ.

... [illegible] ... IVನೇ ... VIನೇ ... VIನೇ, VIIನೇ ... [illegible]

... ತಾ ... -೧೯೪೯.

... [illegible]

ನಮ್ಮಲ್ಲಿ

... ನೋಟ ಬುಕ್ಕುಗಳು, E B 3 ... ಬುಕ್ಕುಗಳು, ... [illegible]

ಬರೆಯಿರಿ — ...

" ... ", ...

Reg. No. B. 1270 Monday, 2-5-1949.

ಕಾನಡಾವೃತ್ತ

THE KANARA NEWS.

ಸೋಮವಾರ, ೨—೫—೧೯೪೯.

[illegible]

ಅಖಿಲ ಭಾರತೀಯ ... ಪರಿಷತ್ತಿನ ... ನೇ ಮಹಾಧಿವೇಶನ

[illegible]

ಸ್ಥಳಿಕ ವಿಷಯಗಳು.

(ಲೇ:- ಸ್ಥಳವಂತಿಕ)

... ಶ್ರೀ ಗಾಂವಕಾರ ... ಅಂಕೋಲಾ ತಾಲೂಕ ಹಿಲ್ಲೂರ ಗ್ರಾಮದಲ್ಲಿ ಮುಂಬಯಿ ಸರಕಾರವು ಪುರಸ್ಕರಿಸಿದ ಗ್ರಾಮೋದ್ಧಾರದ ಹಿಲ್ಲೂರ ಕಾರ್ಯದ ಅಂಕಿ-ಸಂಖ್ಯೆಗಳನ್ನು ... ಸಂಗ್ರಹಿಸಿದ್ದಾರೆ. ಈ ಹಿಲ್ಲೂರ ಗ್ರಾಮದಲ್ಲಿ ಸರಕಾರವು ರೈತ-ಜನರನ್ನು ನೆಲೆಸಗೊಳಿಸುವಾಗ ೬-೬ ಎಕರೆ ಕ್ಷೇತ್ರದ ೩೧ ಹೊಲಗಳನ್ನು ಮಾಡಿದೆ. ಅಂತೂ ಸಾಗುವಳಿಯಾಗಬೇಕಾದ ಪ್ರದೇಶ ೧೮೬ ಎಕರೆಯು ... ಸುತ್ತು ಮುತ್ತಲಿನ ಅಡವಿಯನ್ನು ಸರಕಾರವು ಕಡಿದು ತೆಗೆದಿದೆ. ಈ ಬಗ್ಗೆ ಸರಕಾರಕ್ಕೆ ... ರೂ ಖರ್ಚು ಬಂದಿದೆ. ರೂ ೧೦೦೦ ಖರ್ಚು ಮಾಡಿ ಸರಕಾರವು ಕಟ್ಟೆಗಳನ್ನು ಕಟ್ಟಿಸಿದೆ. ರೂ ... ಖರ್ಚು ಮಾಡಿ ಬಾವಿಗಳನ್ನು ತೋಡಿಸುವ ಕೆಲಸ ನಡೆಸಿದೆ. ಹೀಗೆ ರೂ ... ಸರಕಾರವು ಗ್ರಾಮೋದ್ಧಾರ ಖಾತೆಯು ... ಖರ್ಚು ಮಾಡಿದೆ. ಸಾಗುವಳಿದಾರರಿಗೆ ಮನೆಗಳನ್ನು ಮತ್ತು ಕೊಟ್ಟಿಗೆಗಳನ್ನು ಕಟ್ಟಿಸಿಕೊಡುವದಕ್ಕಾಗಿ ಸರಕಾರವು ರೂ ... ಮಂಜೂರ ಮಾಡಿತ್ತು, ಅವರಲ್ಲಿ ... ರೂ. ಸಾಗುವಳಿದಾರರಿಗೆ ... ಹೂಡುವ ಎತ್ತುಗಳಿಗಾಗಿ ಸರಕಾರವು ಮಂಜೂರ ಮಾಡಿದ ರೂ ...ಲ್ಲಿ ರೂ ... ರೈತರಿಗೆ ಈಗಾಗಲೇ ಕೊಟ್ಟಹೋಗಿದೆ. ಬಿತ್ತುವ ದವಸಗಳಿಗಾಗಿ ಮಂಜೂರಾದ ರೂ ...ರಲ್ಲಿ ರೂ ... ಖರ್ಚಾಗಿದೆ. ಇವಲ್ಲದೆ ಬೀಜದ ಬಗ್ಗೆ ರೂ ..., ಗೊಬ್ಬರದ ಬಗ್ಗೆ ರೂ ..., ಮಳೆಗಾಲದಲ್ಲಿ ರೈತರಿಗೆ ಆಹಾರ ಪೂರೈಸಲು ರೂ ... ಮಂಜೂರಾಗಿತ್ತು. ಈ ಹಣವೆಲ್ಲ ರೈತರಿಗೆ ಕೊಟ್ಟಾಗಿದೆ. ಹೀಗೆ ಅಂತೂ ಮಂಜೂರಾದ ರೂ ...ರಲ್ಲಿ ರೂ ... ಕಳೆದ ವರ್ಷದ ಕೊನೆಯವರೆಗೆ ... ಯೋಗಿಸಲ್ಪಟ್ಟಿದೆ. ಅಂತೂ ... ಹೊಲಗಳ ... ಯಾಗಬೇಕಿತ್ತು. ಅದರಲ್ಲಿ ... ಹೊಲಗಳು ಮಾತ್ರ

[illegible]

NOTICE.

Public of the North Kanara District while coming for revalidation of Petrol Coupons should bring with them the registration certificate of their vehicles.

Karwar, S G PRADHAN
26-4-49 P A to
Dist Magistrate, Kanara

The Agricultural & Industrial Bank, Ltd.,

Regd Office "LAXMI NIVAS Buildings"

COONDAPOOR, S Kanara.

SEASON DEPOSITS

Maturing on or before 30th June 1949 are now accepted with interest ranging from 2¼% to 3½% per annum

Every kind of Banking business transacted

For terms etc, please apply to any of our following

Branches

1 Coondapoor	7 Ankola	13 Sirsi
2 Mangalore	8 Bhatkal	14. Dharwar
3 Somwarpet	9. Gokarn	15 Gadag
4 Virajpet	10 Honavar	16. Haveri
5 Shimoga	11. Karwar	17 Hubli
6 Nagar	12 Kumta	18 Belgaum

19 BOMBAY (384-M, Jaipuria House, Kalbadevi Road)

ಆದರಿಂದ ಪ್ರಪಂಚ ಸಾಗಲಿಲ್ಲ ಆಗ ಅವನು ಭಟ್ಟನಾಗಿ ಪೌರೋಹಿತ್ಯ ಮಾಡಹತ್ತಿದನು! ಭಟ್ಟತನದ ಪ್ರಾಪ್ತಿಗಿಂತ ಹಿಲ್ಲೂರ ರೈತನಾಗುವದರಲ್ಲಿ ಹೆಚ್ಚಿನ ಪ್ರಾಪ್ತಿಯುಂಟೆಂದು ಭಾವಿಸಿ ಅವನು ಈಗ ಹಿಲ್ಲೂರದಲ್ಲಿ ರೈತನಾಗಿದ್ದಾನೆ! ಈತನಿಗೆ ರೂ. ೧೩೦೦ ಕೊಡಬೇಕೆಂದು ಮಂಜೂರಾಗಿತ್ತು. ಅವನಿಂದ ಭತ್ತದ ಕೊಳ್ಳುವದು ಅಗತ್ಯವಿಲ್ಲೆಂದೂ ಬರೆದು ಬಂದಿತ್ತು! ಈ ಸೊನಗಾರ ಭಟ್ಟನು ೨೫ ಮಣ ಭತ್ತ ಬೆಳೆಸಿದ್ದಾನೆ! ರೂ. ೮೦೦ದಷ್ಟು ಹಣ ಈಗಾಗಲೇ ಈತನಿಗೆ ಸಂದಿದೆ. ಅವನು ಮನೆಯನ್ನೂ ಕಟ್ಟಿಸಿಲ್ಲ! ಕೊಟ್ಟಿಗೆಯನ್ನೂ ಕಟ್ಟಿಸಿಲ್ಲ! ಎತ್ತುಗಳನ್ನು ಕೊಂಡಿರುವದಿಲ್ಲ; ಎಮ್ಮೆಯನ್ನೂ ಕೊಂಡಿಲ್ಲ! ಅವನ ವಾಸ್ತವ್ಯವೂ ಹಿಲ್ಲೂರದಲ್ಲಿಲ್ಲ! ಅವನು ಇಸಕೊಂಡ ಹಣ ತಿರುಗಿ ತುಂಬಬೇಕಾಗಿ ಮೇಲ್ಮೆ-ಅಧಿಕಾರಿಗಳು ನೋಟೀಸು ಕೊಟ್ಟರೆ, ತನಗೆ ಇನ್ನೂ ರೂ. ೫೦೦ ಸರಕಾರದಿಂದ ಸಲ್ಲಬೇಕಾಗಿ ಈತನು ನಾಚಿಕೆ ಬಿಟ್ಟು ಎದುರುತ್ತರ ಕೊಡುತ್ತಾನೆ!

ಇನ್ನೊಬ್ಬ ದೇಶಭಕ್ತನ ಕಥೆ ಕೇಳಿರಿ ಇವನು ಮನೆ-ಕೊಟ್ಟಿಗೆಗಳನ್ನು ಕಟ್ಟಿಸಿಲ್ಲ, ಎತ್ತು-ಎಮ್ಮೆಗಳನ್ನು ಕೊಂಡಿರುವದಿಲ್ಲ. ಇವನ ಬಿಡಾರ ಸಹ ಹಿಲ್ಲೂರದಲ್ಲಿಲ್ಲ. ಖಾನಾವಳಿಯಲ್ಲಿ ಊಟ ಮಾಡಿ, ಚಹದ ಅಂಗಡಿಯಲ್ಲಿ ಚಹಾ ಕುಡಿದು ಇವನು ಸಾಗುವಳಿ ಮಾಡುತ್ತಿದ್ದನು. ಇವನು ಬೆಳೆಸಿದ ಬೆಳೆ ೭೦ ಮಣ ಭತ್ತ. ಕೆಲವು ಗೊಣಬೆಗಳನ್ನು ಬಡಿದು ಇವನು ಭತ್ತವನ್ನು ಮನೆಗೆ ಒಯ್ದನು. ಉಳಿದ ೭-೮ ಗೊಣಬೆಗಳು ಕಿಡಿಗೇಡಿಗಳು ಹಚ್ಚಿದ ಬೆಂಕಿಯಿಂದ ಸುಟ್ಟುಹೋದವು! ಸುಟ್ಟುಹೋದ ಆ ಗೊಣಬೆಗಳಿಂದ ಹೆಚ್ಚೆಂದರೆ ೪೦ ಮಣ ಭತ್ತ ಸಿಗುತ್ತಿತ್ತು. ಆದರೂ ಪಟೇಲರು ೮೦ ಮಣ ಭತ್ತ ನಾಶವಾಯಿತೆಂದು ಪಂಚನಾಮೆ ಮಾಡಿದ್ದಾರೆ ಹೀಗಿದ್ದರೂ ಈ ದೇಶಭಕ್ತನು ೨೧೦ ಮಣ ಭತ್ತ ಬೆಂಕಿಯಿಂದ ನಷ್ಟವಾಯಿತೆಂದು ದೂರುತ್ತಿದ್ದಾನೆ! ಸರಕಾರದಿಂದ ಆದಷ್ಟು ಹಣ ಸಾಲಕೊಳ್ಳಬೇಕೆಂಬ ಒಂದೇ ಒಂದು ಉದ್ದೇಶ ಈ ಸಾಗುವಳಿದಾರರಲ್ಲಿ ಮನೆ ಮಾಡಿದೆ! ಪ್ರಾಂತಿಕ ಸರಕಾರಕ್ಕೂ ಹಣದ ಪರಿವೆಯಿಲ್ಲ. ಸಾಗುವಳಿದಾರರ ಯೋಗ್ಯಾಯೋಗ್ಯತೆಯನ್ನು ಸ್ಥಳಿಕ ಅಧಿಕಾರಿಗಳಿಂದ ತಿಳಿಕೊಳ್ಳದೆ, ಭದ್ರತೆಯನ್ನು ಸಹ ಬರಿಸಿಕೊಳ್ಳದೆ ಈ ದೇಶಭಕ್ತರಿಗೆ ಹಣ ಕೊಡಬೇಕೆಂದು ಆ ಸರಕಾರವು ಹುಕುಮು ಮಾಡಿದೆ. ಸಾಗುವಳಿದಾರರಿಗೆ ಕೊಟ್ಟ ರೂ ೮೫೦೦ಕ್ಕೆ ಭದ್ರತೆಯಿಲ್ಲ; ರೂ ೧೮೦೦ಗಳಿಗೆ ಭದ್ರತೆಯುಂಟು. ಈ ಹಣವೆಲ್ಲ ಮುಳುಗಿತೆಂದೇ ಬಲ್ಲವರು ಹೇಳುತ್ತಾರೆ. ಈಗಿನ ಕೊಂಗ್ರೆಸ ಆಢಳಿತೆಯ ವರ್ಣನೆಯನ್ನು ಒಬ್ಬರು ಸೂತ್ರರೂಪದಿಂದ ಹೀಗೆ ಮಾಡಿದ್ದಾರೆ— "Congress administration = British administration − Efficiency + Unscrupulousness" ಕೊಂಗ್ರೆಸ ರಾಜ್ಯಭಾರಕ್ಕೂ ಬ್ರಿಟಿಶ ರಾಜ್ಯಭಾರಕ್ಕೂ ಒಂದು ದೊಡ್ಡ ಅಭ್ಯಂತರವಿದೆ. ಬ್ರಿಟಿಶ ರಾಜ್ಯಭಾರದಲ್ಲಿ ಕಟ್ಟುಇತ್ತು, ದಕ್ಷತೆಯಿತ್ತು. ಕೊಂಗ್ರೆಸ್ ರಾಜ್ಯಭಾರದಲ್ಲಿ ಆ ಕಟ್ಟೂ ಇಲ್ಲ, ದಕ್ಷತೆಯೂ ಇಲ್ಲ. ಹಿಲ್ಲೂರ ಗ್ರಾಮದ ಹೊಲ ಸಾಗುವಳಿ ಯೋಜನೆಯು ಕೊಂಗ್ರೆಸ ಆಢಳಿತೆಯನ್ನೊಂದು ಉತ್ಕೃಷ್ಟ ಮಾದರಿಯಾಗುತ್ತದೆಂದು ಹೇಳಬಹುದು

* * *

ಹಿಲ್ಲೂರ ಯೋಜನೆಯನ್ನು ಸರಕಾರವು ಪುನಃ ಆಲೋಚಿಸುವದೊಳಿತು, ಹಿಲ್ಲೂರದ ಸವಿಸಾವಿರುವ ಗ್ರಾಮಗಳಲ್ಲಿ ವಾಸ್ತವ್ಯವಿರುವ ಇಲ್ಲವೆ ಭೂಮಿ ಮುಳ್ಳ ಜನರಿಗೆ ಹಿಲ್ಲೂರದಲ್ಲಿ ಭೂಮಿ ಕೊಡಬಾರದು ಮನೆಗಳನ್ನೂ ಕೊಟ್ಟಿಗೆಗಳನ್ನೂ ಸರಕಾರವೇ ಕಟ್ಟಿಸಿಕೊಡಬೇಕು. ಹೂಡುವ ಎತ್ತುಗಳನ್ನೂ ಹಿಂಡುವ ಎಮ್ಮೆಗಳನ್ನೂ ಸರಕಾರವೇ ಖರೀದಿಸಿ ಕೊಡಬೇಕು. ಸಾಮಾನ್ಯ ಔಷಧೋಪಚಾರ ಮಾಡಬಲ್ಲ ಸಣ್ಣದೊಂದು ಚಿಕಿತ್ಸಾಲಯವಿರಬೇಕು ಭೂಮಿಯುಳ್ಳವ ರೈತ ಕಸಬಿನವರಿಗಷ್ಟೇ ಭೂಮಿ ಕೊಡಮಾಡಬೇಕು. ಹೀಗೆ ಮಾಡಿದರೆ ಮಾತ್ರ ಹೊಲಗಳ ಸಾಗುವಳಿ ಸರಿಯಾಗಿ ನಡೆದು, ಗ್ರಾಮದ ಪುನರುಜ್ಜೀವನವಾದೀತು. ಸರಕಾರದವರು ಮಾಡಿದ ಖರ್ಚು ಸಾರ್ಥಕವಾದೀತು ಸ್ಥಳಿಕ ಅಧಿಕಾರಿಗಳ ಆಲೋಚನೆಯಿಂದ ಈ ಕೆಲಸ ನಡೆಯಬೇಕು. ಈಗಿನ ಪದ್ಧತಿಯಲ್ಲಿ ಸ್ಥಳಿಕ ಅಧಿಕಾರಿಗಳ ಹೊಣೆ ಕಡಿಮೆಯಾಗುತ್ತದೆ ಕಾಂಗ್ರೆಸ್ಸಿನವರು ಪ್ರಾಂತಿಕ ಸರಕಾರದೊಡನೆ ನೇರವಾಗಿ ವ್ಯವಹರಿಸುವ ಪದ್ಧತಿಯಿಂದ ಕೆಳ-ಅಧಿಕಾರಿಗಳ ಗೌರವಕ್ಕೂ ಕುಂದು ಬರುತ್ತಿದೆ. ಸಾಗುವಳಿದಾರರಿಂದ ತಕ್ಕ ಕೆಲಸ ಮಾಡಿಸಿಕೊಳ್ಳಲು ಅವರಿಗೆ ಶಕ್ಯವಾಗುವದಿಲ್ಲ ಬ್ರಿಟಿಶ ರಾಜ್ಯಭಾರದಲ್ಲಿ ಸ್ಥಳಿಕ ಅಧಿಕಾರಿಗಳಿಗೆ ಮಹತ್ವವಿತ್ತು. ಜನರ ಮೇಲೆ ಅವರ ವರ್ಚಸ್ಸು ಇರುತ್ತಿತ್ತು ಕೊಂಗ್ರೆಸ ರಾಜ್ಯಕರ್ತರಿಗೆ ಯಾವದೇ ಸ್ಥಳಿಕ ಅಧಿಕಾರಿಗಳ ಮೇಲೆ ನಂಬಿಗೆ ಇಲ್ಲದಿದ್ದರೆ ಅವರನ್ನು ವರ್ಗಾಯಿಸಬಹುದು. ಹೊರತು ಅವರ ಮಾನಹಾನಿಯಾಗುವಂತೆ ಮಾಡಕೂಡದು ಸ್ಥಳಿಕ ಅಧಿಕಾರಿಗಳ ಸಹಕಾರದಿಂದಲೂ ಆಲೋಚನೆಯಿಂದಲೂ ಯೋಜನೆಗಳನ್ನು ಕೈಕೊಂಡರೆ ಅವನ್ನು ಸಂಪೂರ್ಣ ಮಾಡಿತೋರಿಸುವ ಹೊಣೆ ಆ ಅಧಿಕಾರಿಗಳ ಮೇಲೆ ಬೀಳದು, ಸಂಕಲ್ಪಿತ ಕಾರ್ಯ ಸಾಧ್ಯವಾಗಬಲ್ಲದು ಈಗಿನ ನಮೂನೆಯಿಂದ, ಜನರಿಂದ ವಸೂಲ ಮಾಡಿದ ಹಣವನ್ನು ಸರಿಯಾಗಿ ವಿನಿಯೋಗಿಸಲು ಸರಕಾರಕ್ಕೆ ತಿಳಿಯುವದಿಲ್ಲೆಂದು ಲೋಕಗ್ರಹಿಕೆಯಾಗುತ್ತದೆ

ಪತ್ರಿಕಾ—ಪ್ರಕಟನೆ

ಸರಕಾರದವರು ತಾ. ೧೮-೪-೧೯೪೯ನೇ ದಿವಸ ಒಂದು ಪತ್ರಿಕಾ-ಪ್ರಕಟನೆಯನ್ನು ಪ್ರಕಟಿಸಿ, ಬಟ್ಟೆಗೆ ಅಚ್ಚು ಹಾಕುವವರು ಬಟ್ಟೆಯ ಮೇಲೆ [illegible]ಗಳನ್ನು ಬಿಡಿಸುವವರು (processors), ಈ ಪ್ರಾಂತದೊಳಗೆ, ಕೆಲವೊಂದು ಜಾತಿಗಳ ರಂಗಿನ ಹಾಗೂ ಅಚ್ಚುಹಾಕಿದ ಬಟ್ಟೆಯನ್ನು ಸ್ಥಳಿಕ ಗಿರಾಕಿಗಳಿಗೆ ಮಾರಲಿಕ್ಕೆ ಮುಕ್ತರೆಂದು ಹೇಳಿಬಿಟ್ಟಿದ್ದಾರೆ. ಜನರು ಆ ಪ್ರಕಟನೆಯತ್ತ ಲಕ್ಷ್ಯ ಕೊಡಬೇಕಾಗಿ ಸೂಚನೆಯಿದೆ.

ಚಿವಾಣಿ ಎಲೆಯನ್ನು ಕೆಳಗೆ ಗೊತ್ತುಪಡಿಸಿದಂತೆ ಕೊಂಡು ಕೊಳ್ಳಲು, ಮಾರಲು ಯಾ ಸಂಗ್ರಹಿಸಿಡಲು ಪರವಾನೆ

೧೯೪೯ನೇ ಇಸವಿಯ ಕಾನಡಾ ಜಿಲ್ಲೆಯ ಚಿವಾಣಿ ಎಲೆಯ ವ್ಯಾಪಾರದ ಪರವಾನೆ ಕೊಡುವ ಅಜ್ಞೆಯ ಅಂಶಗಳಿಗೂ ಈ ಪರವಾನೆಯಲ್ಲಿ (ಇದರಲ್ಲಿ) ನಿರ್ದೇಶಿಸಿದ ಕರಾರು-ಕಟ್ಟಳೆಗಳಿಗೂ ಒಳಪಟ್ಟು ೧ ರಿ ....

ಇವರಿಗೆ ಕೆಳಗೆ ಗೊತ್ತುಪಡಿಸಿದಂತೆ ಚಿವಾಣಿ ಎಲೆಯನ್ನು ಕೊಳ್ಳಲು, ಮಾರಲು ಮತ್ತು ಸಂಗ್ರಹಿಸಿಡಲು ಈ ಮೂಲಕ ಪರವಾನೆ ಕೊಟ್ಟಿದೆ

೨ ಪರವಾನೆ-ಧಾರಿಯು ಈ ಕೆಳಗಿನ ಸ್ಥಳದ(ಗಳ)ಲ್ಲಿ ಮೇಲ್ಕಾಣಿಸಿದ ವ್ಯವಹಾರವನ್ನು ಮಾಡತಕ್ಕದ್ದು

೩ ಪರವಾನೆ ಧಾರಿಯು ಚಿವಾಣಿ ಎಲೆಯ ವ್ಯವಹಾರದ ದೈನಂದಿನ ಲೆಕ್ಕದ ಒಂದು ಪಟ್ಟಿ (ರಜಿಸ್ಟರ)ಯನ್ನು ಇಡತಕ್ಕದ್ದು, ಮತ್ತು ಅದರಲ್ಲಿ —

(೧) ಪ್ರತಿ ದಿನದ ಪ್ರಾರಂಭದ ಶಿಲ್ಕು,

(೨) ಪ್ರತಿದಿನ ಹೊರಗಿನಿಂದ ಬಂದು ಮುಟ್ಟಿದ ಸಂಗ್ರಹ (ಎಲ್ಲಿಂದ ಬಂತು ಎಂಬುದರ ವಿವರ ಸಹಿತವಾಗಿ) ಮತ್ತು

(೩) ಪ್ರತಿ ನಿತ್ಯ ಮಾರಾಟವಾದ ಎಲೆಯ ಪರಿಮಾಣ ಇವುಗಳನ್ನು ಸರಿಯಾಗಿ ನಮೂದಿಸಬೇಕು

೪ ಗೊತ್ತುಪಡಿಸಿದಂತೆ ಚಿವಾಣಿ ಎಲೆ ಕೊಂಡು ಕೊಳ್ಳಲು ಅಧಿಕಾರ ಪಡೆಯದ ಯಾವಾತನಿಗೂ ಪರವಾನೆ ಧಾರಿಯು ಎಂದೂ ಒಂದೇ ವ್ಯವಹಾರದಲ್ಲಿ ಗೊತ್ತುಪಡಿಸಿದ್ದಕ್ಕಿಂತ ಹೆಚ್ಚಾಗಿ ಸದರಿ ಎಲೆಯನ್ನು ಮಾರತಕ್ಕದ್ದಲ್ಲ

೫ ಚಿವಾಣಿ ಎಲೆಯನ್ನು ಕೊಂಡುಕೊಂಡ ಪ್ರತಿಯೊಬ್ಬ ಗಿರಾಕಿಗೆ ಪರವಾನೆ-ಧಾರಿಯು ಒಂದು ಸರಿಯಾದ ಪಾವತಿಯನ್ನಾಗಲಿ ಕ್ರಯದ ಪಟ್ಟಿಯನ್ನಾಗಲಿ ಕೊಡಬೇಕು, ಮತ್ತು ಅದರಲ್ಲಿ ತನ್ನ ಸ್ವಂತ ಹೆಸರು, ವಿಳಾಸ ಮತ್ತು ಪರವಾನೆಯ ನಂಬರ ಹಾಗೂ ಎಲೆ ಕೊಳ್ಳುವವನ ಹೆಸರು, ವಿಳಾಸ ಮತ್ತು (ಪರವಾನೆಯಿದ್ದಲ್ಲಿ) ಪರವಾನೆಯ ನಂಬರ ಇವುಗಳನ್ನಲ್ಲದೆ, ವ್ಯವಹಾರದ ತಾರೀಖು, ಮಾರಾಟ ಮಾಡಿದ ಎಲೆಯ ಪರಿಮಾಣ, ಪ್ರತಿ ಪೆಟ್ಟಿಯ ದರ, ಮಾರಾಟ ಮಾಡಿದ ಒಟ್ಟು ಎಲೆಯ ಬಗ್ಗೆ ಆಕರಿಸಿದ ಬೆಲೆ ಇವುಗಳನ್ನೂ ಕಾಣಿಸಬೇಕು ಮತ್ತು ಜಿಲ್ಲಾ ಮೆಜಿಸ್ಟ್ರೇಟರಿಂದ ಅಧಿಕಾರ ಪಡೆದ ಯಾವದೇ ಅಧಿಕಾರಿಯು ತಪಾಸಣೆಗಾಗಿ ಬೇಕೆಂದು ಕೇಳಿದ ಕೂಡಲೇ ತೋರಿಸಲು ಅನುಕೂಲವಾಗುವ ಹಾಗೆ ಆ ಪಾವತಿಯ ಯಾ ಕ್ರಯದ ಪಟ್ಟಿಯ ಪ್ರತಿಯನ್ನು ತಾನು ಇಟ್ಟುಕೊಳ್ಳಬೇಕು

೬ ಪರವಾನೆ ಧಾರಿಯು ತನ್ನ ಪ್ರತಿಯೊಂದು ಚಿವಾಣಿ ಎಲೆಯ ವ್ಯವಹಾರದ ಸ್ಥಳದಲ್ಲಿ, ಜಿಲ್ಲಾ ಮೆಜಿಸ್ಟ್ರೇಟರು ಚಿವಾಣಿ ಎಲೆಯ ಮಾರಾಟದ ಬೆಲೆಗಳನ್ನು ನಿರ್ಧರಿಸಿ ಹೊರಡಿಸಿದ ಅಜ್ಞೆಯ ಪ್ರತಿಯೊಂದನ್ನು, ಎದ್ದು ಕಾಣುವಂತೆ, ಹಾಗಿ ಅಥವಾ ಹಚ್ಚಬೇಕು

೭ ಚಿವಾಣಿ ಎಲೆಯ ಸಂಗ್ರಹ ಮಾಡುವದಕ್ಕಾಗಲಿ ಮಾರಾಟ ಮಾಡುವದಕ್ಕಾಗಲಿ ತಾನು ಉಪಯೋಗಿಸುತ್ತಿರುವ ಅಂಗಡಿ ಉಗ್ರಾಣ ಯಾ ಇತರ ಸ್ಥಳದಲ್ಲಿರುವ ಶಿಲ್ಕು-ಸಂಗ್ರಹವನ್ನೂ ಚಿವಾಣಿ ಎಲೆಯ ಲೆಕ್ಕವನ್ನೂ ತಪಾಸಿಸುವದಕ್ಕೆ ಜಿಲ್ಲಾ ಮೆಜಿಸ್ಟ್ರೇಟರಿಂದ ಅಧಿಕಾರ ಪಡೆದುಕೊಂಡು ಬಂದ ಯಾವದೇ ಅಧಿಕಾರಿಗೆ ಯೋಗ್ಯ ಹೊತ್ತಿನಲ್ಲಿ ಯಾವತ್ತು ಬಗೆಯ ಅನುಕೂಲತೆಗಳನ್ನು ಪರವಾನೆ ಧಾರಿಯು ಒದಗಿಸಿಕೊಡಬೇಕು

೮ ಚಿವಾಣಿ ಎಲೆಯ ಪೂರವಣಿಯನ್ನು ಸಂಪಾದಿಸುವ ಕ್ರಮ, ಅದರ ಹಂಚುವಿಕೆಯ ಕ್ರಮ, ಕೊಂಡಿಟ್ಟ ವೇಳೆ, ಲೆಕ್ಕವಿಡುವ ಪದ್ಧತಿ ಇವನ್ನು ಅಧಿಕಾರಿಗಳಿಗೆ ಒಪ್ಪಿಸುವ ರೀತಿ ಇವುಗಳ ಸಂಬಂಧದಲ್ಲಿ ಜಿಲ್ಲಾ ಮೆಜಿಸ್ಟ್ರೇಟರಾಗಲಿ, ಮಾಮಲೇದಾರ ಮಹಾಲಕರಿಗಳಾಗಲಿ ಕೊಡಬಹುದಾದ ಅಜ್ಞೆ ಯಾ ಸೂಚನೆಗಳನ್ನು ಪರವಾನೆ ಧಾರಿಯು ಪಾಲಿಸಬೇಕು

೯ ಪರವಾನೆ ಧಾರಿಯು ತನ್ನ ಪರವಾನೆ-ಪತ್ರವನ್ನು ತನ್ನ ವ್ಯವಹಾರದ ಸ್ಥಳದಲ್ಲಿ ಎದ್ದು ಕಾಣುವಂತೆ ತೂಗಿ ಯಾ ಹಚ್ಚಿಡಬೇಕು

೧೦ ಪ್ರತಿ ಸೋಮವಾರ ಪರವಾನೆ ಧಾರಿಯು ಅದರ ಹಿಂದಿನ ಶನಿವಾರ ದಿನ ಕೊನೆಗೊಂಡ ವಾರದ ವ್ಯವಹಾರದ ತಪಶೀಲ ಪತ್ರಿಕೆಯನ್ನು, ಈ ಮಾದರಿಯಲ್ಲಿ ಜಿಲ್ಲಾ ಮೆಜಿಸ್ಟ್ರೇಟ ಕಾನಡಾ ಇವರಿಗೆ ಒಪ್ಪಿಸಬೇಕು, ಮತ್ತು ಅದರ ಒಂದು ಪ್ರತಿಯನ್ನು ತಾಲೂಕಿನ ಮಾಮಲೇದಾರ/ಮಹಾಲಕರಿಗಳಿಗೂ ಒಪ್ಪಿಸಬೇಕು.

ಕಾರವಾರ, ತಾ

ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ಮಾದರಿ ಬ.

ಪರವಾನೆಯ ಬಗ್ಗೆ ಮಾಡತಕ್ಕ ಅರ್ಜಿಯ ನಮೂನೆ

೧ ಅರ್ಜಿದಾರನ ಹೆಸರು

೨ ಅರ್ಜಿದಾರನ ಪೂರ್ಣ ಪತ್ತೆ

೩ ಚಿವಾಣಿ ಎಲೆಯ ಸಂಗ್ರಹ ಮಾಡಲು ಇಲ್ಲವೆ ಮಾರಾಟ ಮಾಡಲು ಅರ್ಜಿದಾರನು ಉಪಯೋಗಿಸ (ಬಯಸು)ವ ವ್ಯವಹಾರ ಸ್ಥಳಗಳು, ಉಗ್ರಾಣಗಳು ಯಾ ಇತರ ಸ್ಥಳಗಳು ಇವುಗಳ ಯಾದಿ (ಸದರಿ ಸ್ಥಳಗಳ ವಿವರಪೂರ್ಣ ವಿಳಾಸಗಳನ್ನು ಕೊಡತಕ್ಕದ್ದು)

೪ ಅರ್ಜಿದಾರನು ಯಾವದೊಂದು ಚಿವಾಣಿ ಎಲೆಯ ಕಂಪನಿಯ ಏಜಂಟ ಯಾ ಸಬ್ ಏಜಂಟನಿರುತ್ತಾನೋ ಹೇಗೆ? ಇರುತ್ತಿದ್ದರೆ ಆ ಕಂಪನಿಯು ಹೆಸರೇನು?

೫ ಪರವಾನೆಯ ಬಗ್ಗೆ ಅರ್ಜಿ ಮಾಡುತ್ತಿರುವ ದಿನ ಅರ್ಜಿದಾರನ ಕೈಯಲ್ಲಿ ಶಿಲ್ಕು ಇರುವ ಎಲೆಯ ಪರಿಮಾಣ

ಪ್ರಕಟಣೆ.

ಕಾನಡಾ ಜಿಲ್ಲೆಯ ಲೋಕಲ್ ಬೋರ್ಡಿನ ಕನ್ನಡ, ಮರಾಠಿ ಮತ್ತು ಉರ್ದು ಶಾಲೆಗಳಲ್ಲಿ ಶಿಕ್ಷಕ-ಶಿಕ್ಷಕಿಯರಾಗಿ ಕೆಲಸ ಮಾಡಬಲ್ಲಂಥ ಮುಂದುವರಿದ, ಮಧ್ಯಮ ಮತ್ತು ಹಿಂದುಳಿದ ವರ್ಗದ ಉಮೇದವಾರರು ತಾ ೩೦-೫-೧೯೪೯ರೊಳಗಾಗಿ ನಮ್ಮ ಕಚೇರಿಗೆ ಮುಟ್ಟುವಂತೆ ಅರ್ಜಿಗಳನ್ನು ಮಾಡಿಕೊಳ್ಳತಕ್ಕದ್ದು. ಅರ್ಜಿಯ ಮುದ್ರಿತ ಮಾದರಿಗಳು ಈ ಕಚೇರಿಯ ಮಾಸ್ತರರ ಕಡೆಗೆ ಸಿಗುತ್ತವೆ. ಉಮೇದವಾರರು ಮುದ್ರಿತ ಮಾದರಿಯಲ್ಲೇ ಅರ್ಜಿ ಮಾಡಬೇಕು. ಮಾದರಿಯು ಪ್ರತಿ ೧೮ ಪೈ ಅರ್ಧ ಆಣೆಯಂತೆ. ಅರ್ಜಿಗಳು ಮುದ್ರಿತ ಮಾದರಿಯಲ್ಲಿ ಇಲ್ಲದಿದ್ದಲ್ಲಿ ಅವುಗಳನ್ನು ಸ್ವೀಕರಿಸುವದಿಲ್ಲ. ಉಮೇದವಾರರು ಕಾನಡಾ ಜಿಲ್ಲೆಯ ನಿವಾಸಿಗಳಿರಬೇಕು.

ಉಮೇದವಾರರಲ್ಲಿರಬೇಕಾದ ಗುಣಗಳ ಪಾತ್ರತೆ.

(ಗಂಡು ಅಥವಾ ಹೆಣ್ಣು)	ಸಾದಾ ಪ್ರಾಥಮಿಕ ಪ್ರಮಾಣ ಪತ್ರ ಪರೀಕ್ಷೆ — ಪಡೆಯಬೇಕಾದ ಗುಣಗಳು	ಶಿಕ್ಷಕ ಪ್ರಾಥಮಿಕ ಪ್ರಮಾಣ ಪತ್ರ ಪರೀಕ್ಷೆ — ಪಡೆಯಬೇಕಾದ ಗುಣಗಳು
(೧) ಮುಂದುವರಿದ ವರ್ಗದವರು	೧೦೦ಕ್ಕೆ ೬೫ ರಂತೆ	೧೦೦ಕ್ಕೆ ೫೦ ರಂತೆ
(೨) ಮಧ್ಯಮ ವರ್ಗದವರು	೧೦೦ಕ್ಕೆ ೫೦ ರಂತೆ	೧೦೦ಕ್ಕೆ ೪೫ ರಂತೆ
(೩) ಹಿಂದುಳಿದ ವರ್ಗದವರು	೧೦೦ಕ್ಕೆ ೪೫ ರಂತೆ	೧೦೦ಕ್ಕೆ ೪೦ ರಂತೆ

ವಿ. ಸೂ — (೧) ೧೦೦ಕ್ಕೆ ೩೫ಕ್ಕಿಂತ ಕಡಿಮೆ ಗುಣಗಳನ್ನು ಪಡೆದವರಿದ್ದು ಉರ್ದು ಉಮೇದವಾರರು ಅರ್ಜಿ ಮಾಡಲಡ್ಡಿಯಿಲ್ಲ. ಮೆಟ್ರಿಕ್, ಟ್ರೇನಿಂಗ ಯಾ ಬೇರೆ ಮೇಲಿನ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಗುಣಗಳ ನಿರ್ಬಂಧವಿಲ್ಲ

(೨) ಮೆಟ್ರಿಕ್ ಪರೀಕ್ಷೆಯಲ್ಲಿ ಇಂಗ್ಲಿಷದಲ್ಲಿ ಉತ್ತೀರ್ಣರಾಗದೆ ಉಳಿದ ವಿಷಯಗಳಲ್ಲಿ ೧೦೦ಕ್ಕೆ ೪೦ರಂತೆ ಗುಣಗಳನ್ನು ಪಡೆದವರು ಸಹ ಅರ್ಜಿ ಮಾಡಬಹುದು. ಅಂಥವರಿಗೂ ಗುಣಗಳ ನಿರ್ಬಂಧವಿಲ್ಲ

(೩) ಮುಂಬಯಿ ಮತ್ತು ಕರ್ನಾಟಕ ಪ್ರಾಂತಗಳ ಸರಕಾರಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಮೇದವಾರರು ಬೆಳಗಾಂವ ಇಲ್ಲವೆ ಧಾರವಾಡ ಜಿಲ್ಲೆಯವರಿದ್ದರೂ ಅಡ್ಡಿಯಿಲ್ಲ

(೪) ಉಮೇದವಾರರು ತಾ. ೧-೬-೪೯ಕ್ಕೆ ೧೮ ವರ್ಷದಿಂದ ೨೪ ವರ್ಷದೊಳಗಿನ ವಯಸ್ಸಿನವರಾಗಿರಬೇಕು. ಟ್ರೇನ್ಡ್ ಇದ್ದವರ ವಯಸ್ಸಿನ ನಿರ್ಬಂಧವನ್ನು ಶಿಥಿಲಗೊಳಿಸುವ ಬಗ್ಗೆ ವಿಚಾರ ಮಾಡಲಾಗುವದು.

(೫) ಉಮೇದವಾರರು ಭೆಟ್ಟಿಗೆ ಕರೆದಾಗ, ತಮ್ಮ ಸ್ವಂತ ಖರ್ಚಿನಿಂದ ಭೆಟ್ಟಿಯಾಗತಕ್ಕದ್ದು.

(೬) ಬೇರೆ ಯಾವದಾದರೊಂದು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದವರು ಇಲ್ಲವೆ ಮಾಡಿದವರು ಸದರ ಸಂಸ್ಥೆಯ ಮುಖ್ಯಾಧಿಕಾರಿಯ ಶಿಫಾರಸ ಮತ್ತು ಅವರ ಮುಖಾಂತರ ಅರ್ಜಿ ಮಾಡತಕ್ಕದ್ದು. ಅಂಥ ಅರ್ಜಿಗಳು ನೇರವಾಗಿ ಬಂದಲ್ಲಿ ಅವುಗಳ ವಿಚಾರವಾಗಲಾರದು

(೭) ಯಾವುದೇ ಶಿಫಾರಸಿನ ಮೂಲಕ ಒತ್ತಾಯ ತರುವ ಅರ್ಜಿಗಳ ವಿಚಾರ ಆಗುವದಿಲ್ಲ

(೮) ಅಪೂರ್ಣ ಮಾಹಿತಿಯುಳ್ಳ ಅರ್ಜಿಗಳ ವಿಚಾರವಾಗಲಿಕ್ಕಿಲ್ಲ

ಡಿಸ್ಟ್ರಿಕ್ಟ ಲೋಕಲ ಬೋರ್ಡ, ಕಾನಡಾ ಇವರ ಕಚೇರಿ, ಕಾರವಾರ
ತಾ ೧೧-೫-೧೯೪೯

G J GUNJIKAR
ಎಡ್ಮಿನಿಸ್ಟ್ರೇಟಿವ್ಹ ಆಫೀಸರ ಮತ್ತು ಸೆಕ್ರೆಟರಿ ಸ್ಕೂಲ
ಬೋರ್ಡ್, ಡಿಸ್ಟ್ರಿಕ್ಟ ಲೋಕಲ ಬೋರ್ಡ ಕಾನಡಾ

ಸನ್ ೧೯೪೯ರ ಕಾನಡಾ ಜಿಲ್ಲೆಯ ಅಡಕೆ ಎಣ್ಣೆಯ ವ್ಯಾಪಾರದ ಪರವಾನಿಗೆಯ ಅರ್ಜಿಗೆ ಜೋಡಿಸಬೇಕಾದ [illegible] ಜಾಗ್ರತೆಯಿಂದ ಬಿಡಿಸಿಕೊಂಡಿರುತ್ತಿದ್ದು ಅವುಗಳನ್ನು [illegible] ಒಪ್ಪಿಗೆಯುಂಟು

ಸ್ಥಳ

ತಾರೀಖು (ಅರ್ಜಿದಾರನ ಸಹಿ)

ಮಾದರಿ ಕ.

ಶನಿವಾರ ತಾ. – –೧೯ ನೇ ದಿನ ಅಂತ್ಯವಾಗುವ ವಾರದಲ್ಲಿ ಬಂದ, ಕೊಟ್ಟ ಮತ್ತು ಶಿಲ್ಕು ಇರುವ ಎಣ್ಣೆಯ ಮಾಹಿತಿಪತ್ರಿಕೆ.

ಹೆಸರು ಪರವಾನಿಗೆ ನಂ

ವಿಳಾಸ

(ಗೆಲನುಗಳಲ್ಲಿ)

೧ ವಾರದ ಪ್ರಾರಂಭದ ಶಿಲ್ಕು

೨ ವಾರದಲ್ಲಿ ಹೊರಗಿಂದ ಬಂದ ಎಣ್ಣೆ

೩ ವಾರದಲ್ಲಿ ಹಂಚಿಹೋದ ಎಣ್ಣೆ

೪ ವಾರದ ಕೊನೆಗೆ ಶಿಲ್ಕು ಇದ್ದ ಎಣ್ಣೆ

ತಾ

(ಪರವಾನಿಗೆದಾರನ ಸಹಿ)

M. Allahbaksh.

ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ಉತ್ತರ ಕನ್ನಡ ಜಿಲ್ಲಾ ಪ್ರಾಥಮಿಕ ಶಿಕ್ಷಕ ಸಂಘ

ನೋಟೀಸು.

ಸಂಘದ ಸಭಾಸದರು, ಸದಸ್ಯರ ಬಗ್ಗೆ ವಿನಂತಿ —

ಸಂಘದ ೧೯೪೮-೪೯ನೇ ಸಾಲಿನ ವಾರ್ಷಿಕ ಅಧಿವೇಶನವು ತಾ ೨೭-೧೧-೧೯೪೯ನೇ ರವಿವಾರ [illegible] ಅಂಕೋಲಾ ೧ನೇ ನಂಬರ ಕನ್ನಡ ಶಾಲೆಯಲ್ಲಿ ಶ್ರೀ [illegible] ಇವರ ಅಧ್ಯಕ್ಷತೆಯಲ್ಲಿ ಜರಗುವದು. ಸದರ ಸಭೆಯಲ್ಲಿ [illegible] ಕಾರ್ಯವನ್ನು [illegible] ಸಂಘದಿಂದ [illegible] ವಿಷಯ [illegible] ಶಿಕ್ಷಕ [illegible] ಅಧಿವೇಶನಕ್ಕೆ ಬರಬೇಕಾಗಿ ವಿನಂತಿ

ಅಂಕೋಲಾ, ತಾ ೧೨-೧೧-೪೯ | ಎಮ್ ಆರ್. ಶೆಟ್ಟಿ, ಉಪಾಧ್ಯಕ್ಷ ಜಿಲ್ಲಾ ಶಿಕ್ಷಕ ಸಂಘ

ಆಸ್ತಿಕ ಮಹಾಶಯರಲ್ಲಿ ವಿಜ್ಞಾಪನೆ

ಒಸ್ಸಾರ, ನೋಡಿರಿ, ವಿಚಾರಿಸಿರಿ,

ಸರ್ವ ವಿಧದ ಸಂಕಟಗಳನ್ನು ಪರಿಹರಿಸಿಕೊಳ್ಳಿರಿ

ದಕ್ಷಿಣ ಕನ್ನಡ ಜಿಲ್ಲಾ [illegible] ಶ್ರೀ ವೆಂಕಟರಮಣ ದೇವರ ಸನ್ನಿಧಿಯಲ್ಲಿ, ಒಂದು [illegible] ಶ್ರದ್ಧೆ ಭಕ್ತಿಯಿಂದ ದೇವರ [illegible] ಬಂದು [illegible] ಉಜ್ವಲವಾಗಿ [illegible]

ಪ್ರೇತಬಾಧೆ, ಗ್ರಹಬಾಧೆ, ದ್ರವ್ಯಹೀನತೆ, ಉದ್ಯೋಗಹೀನತೆ, ಸಂತತಿಹೀನತೆ ಇತ್ಯಾದಿ [illegible] ನಿವಾರಣೆಯಾಗುವಂತೆ [illegible]

ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿ !

ಶ್ರೀಹರಿ ಕೃಪೆಗೆ ಪಾತ್ರರಾಗಿ !!

ಕುಂದಾಪುರ, ತಾ ೧೦-೩-೧೯೪೯ | ಭಕ್ತ ಮಂಡಳಿ

ವಿ. ಸೂ — ಪತ್ರವ್ಯವಹಾರ [illegible] ಶ್ರೀ ದೇವರ [illegible]

ಆಜ್ಞೆ.

ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರ ಕಛೇರಿ,

ಕಾರವಾರ, ತಾ ೯—೧೧—೧೯೪೯

ನಂ ೫೯— ೧೯೪೬ನೇ ಇಸವಿಯ [illegible] (೧೯೪೬ರ [illegible]) [illegible] (–) [illegible] ಹಿಂದುಸ್ತಾನ ಸರಕಾರದ [illegible] ತಾ ೩-೩-೧೯೪೭ಕ್ಕೆ ಹೊರಡಿಸಿದ ಸರಕಾರಿ ಪ್ರಕಟನೆ [illegible] ಅಧಿಕಾರವನ್ನು [illegible] ಕಾನಡಾ ಜಿಲ್ಲೆಯ ಜಿಲ್ಲಾ ಮೆಜಿಸ್ಟ್ರೇಟರು ಈ ವಿಷಯಕ್ಕೆ (ಅಡಕೆ ಎಣ್ಣೆಯ ಬೆಲೆಗಳನ್ನು ನಿರ್ಧರಿಸುವದಕ್ಕೆ) ಸಂಬಂಧಪಟ್ಟ ಹಿಂದಿನ ಎಲ್ಲ ಆಜ್ಞೆಗಳನ್ನು ರದ್ದುಗೊಳಿಸಿ ಅವುಗಳ ಸ್ಥಳದಲ್ಲಿ ಈ (ಕೆಳಗಿನ) ಆಜ್ಞೆಯನ್ನು ಹೊರಡಿಸಿದ್ದಾರೆ ಅದೇನಂದರೆ - ತಾ ೨೩-೪-೧೯೪೯ರಿಂದ ಮುಂದೆ-

(೧) ಅಡಕೆ ಎಣ್ಣೆಯನ್ನು ಈ ಆಜ್ಞೆಗೆ ಜೋಡಿಸಿರುವ ಪರಿಶಿಷ್ಟದ ೧ನೇ ಸ್ತಂಭದಲ್ಲಿ ತೋರಿಸಿರುವ ಸ್ಥಳಗಳಲ್ಲಿ, [illegible] ಸ್ಥಳಗಳ [illegible] ಅದೇ ಪರಿಶಿಷ್ಟದ ೨, ೩, ೪ನೇ ಸ್ತಂಭಗಳಲ್ಲಿ ತೋರಿಸಿರುವ ಬೆಲೆಗಳಿಗಿಂತ ಹೆಚ್ಚಿಗೆ ಬೆಲೆಗೆ ಯಾರೂ ಮಾರಕೂಡದು.

(೨) ಯೋಗ್ಯ ಕಾರಣವಿಲ್ಲದೆ ಯಾವನೇ ಅಡಕೆ ಎಣ್ಣೆಯ ವ್ಯಾಪಾರಿಯು ಸದರಿ ದರದಿಂದ ಬೆಲೆ ಕೊಟ್ಟು ಎಣ್ಣೆ ಬೇಕೆನ್ನುವ ಯಾವಾತನಿಗೂ ಎಣ್ಣೆ ಮಾರಲು ಅಲ್ಲಗಳೆಯಕೂಡದು,

(೩) ಇಂಥ ಪ್ರತಿಯೊಬ್ಬ ವ್ಯಾಪಾರಿಯು ತನ್ನ ವ್ಯವಹಾರದ ಸ್ಥಳದ ಒಂದು ಪ್ರಮುಖ ಭಾಗದಲ್ಲಿ ಸದರಿ ಪರಿಶಿಷ್ಟದ (ಬೆಲೆಯ ಪಟ್ಟಿಯ) ಒಂದು ಪ್ರತಿಯನ್ನು (ಜನರಿಗೆ ಕಾಣುವಂತೆ) ಸದಾ ಅಂಟಿಸಿ ಇಡತಕ್ಕದ್ದು, ಮತ್ತು

(೪) ಇಂಥ ಪ್ರತಿಯೊಬ್ಬ ವ್ಯಾಪಾರಿಯು ಯಾವನೊಬ್ಬ ಗಿರಾಕಿಯು ಬೇಡಿದಲ್ಲಿ, ಅವನಿಗೆ ಸದರಿ ಎಣ್ಣೆಯ ಮಾರಾಟಕ್ಕೆ ಸಂಬಂಧಪಟ್ಟ ಒಂದು ನಗದಿ ಪಾವತಿಯನ್ನು ಇಲ್ಲವೆ ಬೇರೆ ಬಗೆಯ ದಾಖಲೆಯನ್ನು ಕೊಡತಕ್ಕದ್ದು, ಮತ್ತು ಈ ಪಾವತಿಯಲ್ಲಿ ಇಲ್ಲವೆ ದಾಖಲೆಯಲ್ಲಿ (i) ಆ ಗಿರಾಕಿಗೆ ಮಾರಿದ ಎಣ್ಣೆಯ ಜಾತಿ, (ii) ಮಾರಿದ ಎಣ್ಣೆಯ ಪರಿಮಾಣ ಮತ್ತು (iii) ಯಾವ ಬೆಲೆಗೆ ಮಾರಿರುತ್ತದೋ ಆ ಬೆಲೆ ಇವುಗಳ [illegible] ಸಂಪೂರ್ಣ ವಿವರಗಳನ್ನು ಕಾಣಿಸತಕ್ಕದ್ದು

ಈ ಆಜ್ಞೆಯ ಯಾವದೇ ಉಲ್ಲಂಘನೆಯ ಅಪರಾಧದ ವಿಚಾರಣೆ ಮಾಡುವ ನ್ಯಾಯಾಧೀಶರು ಅಪರಾಧಿಗೆ ಕಾನೂನು ವಿಧಿಸಬಹುದಾದ ಇತರ ಯಾವದೇ ಶಿಕ್ಷೆಗೆ ವ್ಯತ್ಯಯವಿಲ್ಲದೆ, ಯಾವ ಅಡಕೆ ಎಣ್ಣೆಯ ಸಂಗ್ರಹದ ಸಂಬಂಧದಲ್ಲಿ ಈ ಆಜ್ಞೆಯ ಉಲ್ಲಂಘನೆಯಾಗಿದೆಂದು ಮನವರಿಕೆಯಾಗುತ್ತದೋ ಆ ಸಂಗ್ರಹವನ್ನು — ಅದರ ಪಾತ್ರೆಗಳನ್ನು ಮುಚ್ಚಳಗಳನ್ನು ಸಹಾ — ಸರಕಾರ ಜಪ್ತು ಮಾಡಲು ಅಪ್ಪಣೆ ಮಾಡಬಹುದು.

ಅನ್ನಂತೆ ಆಜ್ಞೆ ಮಾಡುವದೇನಂದರೆ—

(೫) ಎಲ್ಲ ಜಾತಿಯ ಸಗಟು ಅಡಕೆ ಎಣ್ಣೆಯ ಕಿರಕೋಳ ಮಾರಾಟದ ಬೆಲೆಯು, ೪ ಇಂಪೀರಿಯಲ್ ಗೆಲನುಗಳ ಪ್ರತಿಯೊಂದು ಡಬ್ಬಿಗೆ, ಪರಿಶಿಷ್ಟದ ೨ನೇ ಸ್ತಂಭದಲ್ಲಿ ತೋರಿಸಿದ ಬೆಲೆಗಿಂತ ೩ ಆಣೆಗಳಷ್ಟು ಕಡಿಮೆ ಇರತಕ್ಕದ್ದು

(೬) ಕಿರ್‍ಕೋಳ ಡಬ್ಬಿಗಳಲ್ಲಿ ತುಂಬಿದ, ಎಲ್ಲ ಜಾತಿಗಳ ದೇಶೀ ಮತ್ತು ಸಗಟು ಅಡಕೆ ಎಣ್ಣೆಯ ಕಿರಕೋಳ ಮಾರಾಟದ ಬೆಲೆಯು ಪ್ರತಿ ೪ ಇಂಪೀರಿಯಲ್ ಗೆಲನುಗಳಿಗೆ, ದೇಶೀ ತಗಡಿನ ಡಬ್ಬಿಯೊಳಗಿನ ಎಣ್ಣೆಯ ಬೆಲೆಗಿಂತ ೪ ಆಣೆಗಳಷ್ಟು ಕಡಿಮೆ ಇರತಕ್ಕದ್ದು

(೭) ಬಿಡಿ ಎಣ್ಣೆಯ ಪ್ರತಿಯೊಂದು ಮಾರಾಟದ ಅಂತಿಮ ಬೆಲೆಯನ್ನು [illegible] ಈ ಬಗ್ಗೆ ಲೆಕ್ಕದಲ್ಲಿ ಬಾರದ ಅರ್ಧ ಪೈ ಹೆಚ್ಚಿಗೆ ಇದ್ದಲ್ಲಿ ಪೂರ್ತಿ ಪೈ ಎಂದು ಗಣಿಸಲ್ಪಡಬೇಕು ಅರ್ಧ ಪೈಗಿಂತ ಕಡಿಮೆ ಇರುವ ರಕಮನ್ನು ಬಿಟ್ಟುಬಿಡಬೇಕು

ಪರಿಶಿಷ್ಟ

(ಎಲ್ಲ ಜಾತಿಗಳ ಬಿಳೀ ಬಿಡಿ ಎಣ್ಣೆಯ ದರಗಳು)

ತಾಲೂಕು, ಪೇಟೆ ಮತ್ತು ಸ್ಥಳ	೪ ಗೆಲನ ಎಣ್ಣೆಯುಳ್ಳ ಹೊಸ ದೇಶೀ ತಗಡಿನ ಡಬ್ಬಿಯಲ್ಲಿ ತುಂಬಿದ ೪ ಇಂಪೀರಿಯಲ್ ಗೆಲನ ಎಣ್ಣೆಯ ಕಿರಕೋಳ ಬೆಲೆ (ಡಬ್ಬಿಸಹ)	ಪ್ರತಿ ೨ ಪ್ಯಾಂಟ ಎಣ್ಣೆಯ ಚಿಲ್ಲರೆ ಬೆಲೆಗಳು: ೧ನೇ ಸ್ತಂಭದಲ್ಲಿ ತೋರಿದ ಸ್ಥಳಗಳಲ್ಲಿ, ಆ ಸ್ಥಳದಿಂದ [illegible]	೩ನೇ ಸ್ತಂಭದಲ್ಲಿ ತೋರಿರುವ ಊರುಗಳನ್ನು ಬಿಟ್ಟು ಇತರ ಊರುಗಳಲ್ಲಿ
(೧)	(೨)	(೩)	(೪)
ಕಾರವಾರ	ರೂ [illegible]	[illegible]	[illegible]
ಹೊನ್ನಾವರ, ಕುಮಟಾ, ಅಂಕೋಲಾ	[illegible]	[illegible]	[illegible]
ಶಿರಸಿ, [illegible], ಯಲ್ಲಾಪುರ, [illegible]	[illegible]	[illegible]	[illegible]
[illegible]	[illegible]	[illegible]	[illegible]
ಭಟ್ಕಳ	[illegible]	[illegible]	[illegible]
ಅಂಕೋಲಾ	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]

ಟಿಪ್ಪಣಿ — ಡಬ್ಬಿಗಳಲ್ಲಿಲ್ಲದ ಸಗಟು ಬಗೆಯಾದ (in bulk) ಎಣ್ಣೆ ಕೊಟ್ಟಲ್ಲಿ ಮೇಲೆ ತೋರಿದ ಕಿರಕೋಳ ಬೆಲೆಗಳು ಪ್ರತಿ ೪ ಇಂಪೀರಿಯಲ್ ಗೆಲನಿಗೆ [illegible] ಕಡಿಮೆ ಮಾಡಲ್ಪಡುವವು

M. ALLAHBAKSH ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

ಅ|| ಭಾ|| ಅಡಿಕೆ ಪರಿಷತ್ತಿನ ೪ನೇ ಮಹಾಧಿವೇಶನ.

ಅಖಿಲ ಭಾರತೀಯ ಅಡಿಕೆ ಪರಿಷತ್ತಿನ ೪ನೇ ಮಹಾಧಿವೇಶನವು ಇದೇ ತಿಂಗಳ ತಾ. ೭-೮ನೇ ಶನಿ-ರವಿವಾರ ಶಿರಸಿಯಲ್ಲಿ ನಡೆಯಿತು ಈ ಅಧಿವೇಶನಕ್ಕಾಗಿ ಬಿದ್ರಕಟ್ಟೆಯಲ್ಲಿ ಭವ್ಯವಾದ ಮಂಟಪ ಹಾಕಿದ್ದರು ಸುಮಾರು ೧೦೦೦ ಪ್ರೇಕ್ಷಕ-ಪ್ರತಿನಿಧಿಗಳು ಕೂಡಿದ್ದರು ಶನಿವಾರ ೩ಗಂಟೆಗೆ ಪರಿಷತ್ತಿನ ಕೆಲಸಕ್ಕೆ ಪ್ರಾರಂಭವಾಯಿತು ಸ್ವಾಗತ ಪದ್ಯ ಮೊದಲಾದ ಔಪಚಾರಿಕ ಕ್ರಮಗಳಾದ ಮೇಲೆ ಸ್ವಾಗತಾಧ್ಯಕ್ಷ ಶ್ರೀ ತಿಮ್ಮಪ್ಪ ಹೆಗಡೆ ಮೊಟೆನಸರ ಇವರ ಸ್ವಾಗತ ಭಾಷಣವಾಯಿತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ಜಿಲ್ಲೆಯ ತೋಟಿಗರು ವಹಿಸಿದ ಪ್ರಮುಖ ಭಾಗದ ಉಲ್ಲೇಖ ಮಾಡಿ, ತೋಟಿಗರ ಉತ್ಪತ್ತಿಯ ಮೇಲೆ ಜೀವನ ಸಾಗಿಸುತ್ತಿರುವ ನಮ್ಮ ತೋಟಿಗರ ಬಾಂಧವರು ಈ ಪರಿಷತ್ತಿನಲ್ಲಿ ತುಂಬಾ ಆಸ್ಥೆ ವಹಿಸಿದ್ದಾರೆಂದು ಅವರು ಹೇಳಿದರು ನಮ್ಮ ದೇಶದ ತೋಟಿಗಾರರಲ್ಲಿ ಹಿಂದೆ ಸಂಘಟನೆಯಿದ್ದಿಲ್ಲ, ೧೯೪೪ರಲ್ಲಿ ಬಂದ ಅಡಿಕೆ ಮಂಡಳವು ಅವರನ್ನು ಜಾಗೃತಗೊಳಿಸಿತು, ಅದರ ಪರಿಣಾಮವಾಗಿಯೇ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳು, ಕೊಡಗು ಪ್ರಾಂತ, ಮೈಸೂರು ಮತ್ತು ಮಲಬಾರ ಜಿಲ್ಲೆಗಳೂ ಅವುಗಳೊಳಗಿನ ತೋಟಿಗರೂ ತೋಟಿಗರ ಸಂಸ್ಥೆಗಳೂ ಒಂದಾಗಿ, ಸುಸಂಘಟಿತರಾದರು, ಅಡಿಕೆಯ ವ್ಯಾಪಾರಸ್ಥರೂ ಸಂಘಟಿತರಾದರು, ಈ ಸಂಘಟನೆಯ ಫಲವೇ ಅ|| ಭಾ|| ಅಡಿಕೆ ಮಹಾಮಂಡಳದ ಸ್ಥಾಪನೆ, ಮಹಾಮಂಡಳವು ಪ್ರಯತ್ನಪಟ್ಟು ಶೀಘ್ರದಲ್ಲೇ ಅಡಿಕೆ ಸುಂಕ ರದ್ದುಗೊಳಿಸಿಕೊಂಡಿತು, ವಿದೇಶಿ ಅಡಿಕೆಯ ಮೇಲೆ ಆಯಾತ ತೆರಿಗೆಯನ್ನೂ ಹೆಚ್ಚಿಸಿಕೊಂಡಿತು, ಇನ್ನು ಆ ಮಹಾಮಂಡಳವನ್ನು ಬಲಪಡಿಸಿ, ಅದರ ಕಾರ್ಯಕ್ಷೇತ್ರವನ್ನು ವಿಸ್ತರಿಸಬೇಕಾಗಿದೆ, ಎಂದು ಪ್ರಸ್ತಾಪನೆ ಮಾಡಿ ರಾ|| ಹೆಗಡೆಯವರು ಅಡಿಕೆ ಸುಂಕ ರದ್ದುಗೊಳಿಸಿ, ಅಡಿಕೆ ವ್ಯವಸಾಯವನ್ನು ಸುಧಾರಿಸಲು ಪ್ರಯತ್ನ ನಡೆಸಿದ ಬಗ್ಗೆ ಭಾರತ ಸರಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದರು ಮುಂದೆ ಸಾಗಿ ಅವರು, ಭಾರತದ ವಿಭಜನೆಯ ಪೂರ್ವದಲ್ಲಿ ನಮ್ಮ ಇಡೀ ದೇಶದೊಳಗೆ ೪,೩೩,೪೦೦ ಎಕರೆಗಳಷ್ಟು ಅಡಿಕೆ ತೋಟಗಳಿದ್ದವೆಂದೂ, ವಿಭಜನೆಯ ನಂತರ ಪೂರ್ವ ಬಂಗಾಲದೊಳಗಿನ ೨,೬೨,೭೦೦ ಎಕರೆ ತೋಟಕ್ಕೆ ನಾವು ಎರವಾಗಿರುವೆವೆಂದೂ, ಉಳಿದ ೨,೯೬,೭೦೦ ಎಕರೆ ತೋಟಗಳಲ್ಲಿ ೩೭,೨೦೦ ಎಕರೆ ತೋಟ ಆಸಾಮುದಲ್ಲಿಯೂ ೨,೨೯,೦೦೦ ಎಕರೆ ತೋಟ ಮುಂಬಯಿ, ಮದ್ರಾಸ, ಮೈಸೂರ, ಕೊಡಗು ಮತ್ತು ಮಲಬಾರ ಪ್ರಾಂತಗಳಲ್ಲಿ ಹಬ್ಬಿರುವವೆಂದೂ, ದೇಶ ವಿಭಜನೆಯ ಪೂರ್ವದಲ್ಲಿ ಅಂತು ಅಡಿಕೆಯ ಉತ್ಪನ್ನ ೪೮,೧೦,೦೦೦ ಬಂಗಾಲಿ ಮಣವಿತ್ತೆಂದೂ, ನಮ್ಮ ದೇಶಕ್ಕೆ ಪ್ರತಿ ವರ್ಷ ೬೦,೪೭,೨೦೦ ಮಣ ಅಡಿಕೆ ಬೇಕಾಗುತ್ತದೆಂದೂ, ಕಡಿಮೆ ಬೀಳುವ ಅಡಿಕೆಯನ್ನು ದೇಶದಲ್ಲೇ ಬೆಳೆಸುವ ಪ್ರಯತ್ನ ಮಾಡಬೇಕಾಗುವದೆಂದೂ ವಿವರಿಸಿ, ಅಡಿಕೆ ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಈ ಕೆಳಗಿನ ಸೂಚನೆಗಳನ್ನು ಮಾಡಿದರು — (೧) ಅಡಿಕೆ ವ್ಯವಸಾಯದ ಹಿತರಕ್ಷಣೆಯ ಬಗ್ಗೆ ಒಂದು ಅ|| ಭಾ|| ಅಡಿಕೆ ಸಮಿತಿ ಸ್ಥಾಪಿಸಬೇಕು (೨) ಅಡಿಕೆಯ ಸುಧಾರಣೆ ಮಾಡಲು ಒಂದು ಕೇಂದ್ರ ಸಂಶೋಧನ ಸಂಸ್ಥೆ ಬೇಕು ಅದಕ್ಕೆ ಅಖಿಲ ಪ್ರಯೋಜನ ಪಡೆಯುವ ಶೋಧನಾಗಾರ ಸ್ಥಾಪನೆ ಪ್ರಚಾರದಲ್ಲಿರುವ ವಿಜ್ಞಾನ ಮಾರ್ಗದಿಂದ ಕೊಳೆ ರೋಗ ಹಿಂಗಾರು ಇವುಗಳ ಕೊಳೆ ರೋಗ ಅಡಿಕೆ ಗಿಡಗಳ ನಿಯಂತ್ರಣ ಮಾಡಬೇಕು (೩) ಅಡಿಕೆ ಬಯಸುವ ಕೃಷಿ ಕಡಿಮೆ ಮಾಡುವ ಯಾಂತ್ರಿಕ ವಿಧಾನ ಬೇಕು (೪) ವಿದೇಶಿ ಅಡಿಕೆಯ ಮೇಲೆ ಆಯಾತಾಂತರ ನಿರ್ಬಂಧಗಳನ್ನು ಹೇರಿ, ಅದರ ಆಯಾತವನ್ನೂ ಹಂಚುವಿಕೆಯನ್ನೂ ಹತೋಟಿಯಲ್ಲಿಡಲು ಒಂದು ಸರ್ವಾಧಿಕಾರಿ ಸಂಸ್ಥೆಯನ್ನು ನಿರ್ಮಿಸಬೇಕು (೫) ತೋಟಿಗರ ಅಭಿವೃದ್ಧಿಗೆ ಸಹಾಯ ಮಾಡುವ ದೃಷ್ಟಿಯಿಂದ, ಹೊಸ ತೋಟಗಳ ನಿರ್ಮಾಣಕ್ಕೆ ಸರಕಾರವು ಧನಸಹಾಯ ನೀಡಬೇಕಲ್ಲದೆ, ಕಡಿಮೆ ಬಡ್ಡಿ ದರದಿಂದ ತೋಟಿಗರಿಗೆ ದೀರ್ಘಾವಧಿಯ ಸಾಲಗಳನ್ನು ಕೊಡಬೇಕು (೬) ಘಟ್ಟದ ಮೇಲ್ಭಾಗದ ಕೂಲಿಯಾಳುಗಳ ಕೊರತೆಯಿದ್ದಲ್ಲಿ ಕೂಲಿಕಾರರ ವಸತಿಗಳನ್ನು ಸ್ಥಾಪಿಸಬೇಕು ಇದರ ಜೊತೆಗಾಗಿ ಮಾರ್ಗ ಸೌಕರ್ಯ ಮತ್ತು ಸಾರಿಗೆ ಸೌಕರ್ಯ, ನೀರಾವರಿ ಸೌಕರ್ಯ, ಆರೋಗ್ಯದ ಪ್ರಬಂಧ, ವಿದ್ಯಾಭ್ಯಾಸಗಳ ಸೌಕರ್ಯ ಮೊದಲಾದ ಅನುಕೂಲತೆಗಳನ್ನೂ ಸರಕಾರವು ಒದಗಿಸಿಕೊಡಬೇಕೆಂದು ಶ್ರೀ ಹೆಗಡೆಯವರು ಸೂಚಿಸಿ, ಪರಿಷತ್ತಿನ ಉದ್ಘಾಟಕರ ಮತ್ತು ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು, ಪರಿಷತ್ತು ಉದ್ಘಾಟನೆ ಮಾಡಲು ಮಾನ್ಯ ಮಂತ್ರಿ ಶ್ರೀ ದಿವಾಕರರನ್ನು ವಿನಂತಿಸಿದರು

ಅದರಂತೆ ಶ್ರೀ ದಿವಾಕರರು ತಮ್ಮ ಉದ್ಘಾಟನೆಯ ಭಾಷಣವನ್ನು ಓದಿ ಹೇಳಿದರು ರಾಯರು ತಮ್ಮ ಭಾಷಣದಲ್ಲಿ ಅಡಿಕೆಯ, ವೀಳ್ಯದೆಲೆಯ ಮತ್ತು ತಾಂಬೂಲದ ಸೇವನದಿಂದ ಆಗುವ ಆರೋಗ್ಯದಾಯಕ ಪರಿಣಾಮವನ್ನು ಬಣ್ಣಿಸಿ, ಅಡಿಕೆ ತೋಟಿಗರ ಸೊಬಗನ್ನೂ ಕೊಂಡಾಡಿ ೪೦ ಕೋಟಿ ರೂ ಬೆಲೆಯ ಅಡಿಕೆಯ ಉದ್ಯಮದಲ್ಲಿ ತೊಡಗಿದ ೪೦ ಲಕ್ಷ ಜನರ ಕಡೆ ನಾವು ಉಪೇಕ್ಷಿಸಬಾರದೆಂದೂ, ನಮ್ಮ ದೇಶಕ್ಕೆ ಬೇಕಾಗುವಷ್ಟು ಅಡಿಕೆ ನಮ್ಮಲ್ಲಿ ಬೆಳೆಯುವದಿಲ್ಲೆಂದೂ, ೧೦ ಲಕ್ಷ ಮಣ ಅಡಿಕೆ ಹೊರಗಿಂದ ಪ್ರತಿ ವರ್ಷ ಆಮದಾಗುತ್ತದೆಂದೂ, ಈ ಹೊರಗಿನ ಅಡಿಕೆಯಿಂದ ನಮ್ಮ ಅಡಿಕೆ ವ್ಯವಸಾಯಕ್ಕೆ ಬಾಧೆಯಾಗದಂತೆ ಸರಕಾರವೂ ಜನರೂ ಕೂಡಿ ತಕ್ಕ ಕ್ರಮಗಳನ್ನು ಕೈಕೊಳ್ಳಬೇಕೆಂದೂ, ಅಡಿಕೆ ಮಹಾಮಂಡಳವು ಎಲ್ಲವನ್ನೂ ಸರಕಾರ ಮಾಡಬೇಕೆಂದು ಸುಮ್ಮನೆ ಕುಳಿತುಕೊಳ್ಳದೆ ಅಡಿಕೆ ಉದ್ಯಮದ ಸಂಘಟನೆಯ ಕಾರ್ಯವನ್ನು ಕೈಕೊಳ್ಳಬೇಕೆಂದೂ, ಅಂದರೆ ಸರಕಾರವು ಮಂಡಳಕ್ಕೆ ಅವಶ್ಯವುಳ್ಳ ಬೆಂಬಲ ನೀಡುವದೆಂದೂ ಆಶ್ವಾಸನೆ ಕೊಟ್ಟರು

ಆ ಮೇಲೆ ಪರಿಷತ್ತಿಗೆ ಬಂದ ಸಂದೇಶಗಳನ್ನು ಕಾರ್ಯದರ್ಶಿ ರಾ|| ಆಲೇಕರ ಇವರು ಓದಿ ಹೇಳಿದರು ಭಾರತದ ಸರ್ವಾಧಿಪತಿ ಶ್ರೀ ರಾಜಾಜಿ, ಕೇಂದ್ರ ಸರಕಾರದ ಸಂಪರ್ಕ ಇಲಾಖೆಯ ಮಂತ್ರಿ ಶ್ರೀ ರಫಿ ಅಹಮ್ಮದ ಕಿದವಾಯಿ, ಶೃಂಗೇರಿ ಮಠದ ಜಗದ್ಗುರುಗಳಾದ ಶ್ರೀ ಶಂಕರಾಚಾರ್ಯ ಪ್ರಭೃತಿ ಮಾನ್ಯರಿಂದ ಪರಿಷತ್ತಿಗೆ ಆಶೀರ್ವಾದದ ಸಂದೇಶಗಳು ಬಂದಿದ್ದವು ಸಂದೇಶ-ವಾಚನದ ನಂತರ ಅಡಿಕೆ ಮಹಾಮಂಡಳದ ಗೌರವ ಕಾರ್ಯದರ್ಶಿಗಳಾದ ಶ್ರೀ ಜಿ ಕೆ ಗೋವಿಂದ ಭಟ್ಟರು ಮಂಡಳದ ವರದಿಯನ್ನು ಒಪ್ಪಿಸಿದರು

ತರುವಾಯ ಪರಿಷತ್ತಿನ ಅಧ್ಯಕ್ಷ ಶ್ರೀ ಕೋಟಿ ರಾಮಕೃಷ್ಣ ಕಾರಂತರ ಭಾಷಣವಾಯಿತು ಅಧ್ಯಕ್ಷರು ಪರಿಷತ್ತಿನ ಇತಿಹಾಸವನ್ನೂ ಕಾರ್ಯವನ್ನೂ ಸಂಕ್ಷೇಪವಾಗಿ ತಿಳಿಸಿ ಹೇಳಿ, ಅಡಿಕೆಯ ಉತ್ಪತ್ತಿಯನ್ನು ಬೆಳೆಸುವ ಆವಶ್ಯಕತೆಯನ್ನು ಪ್ರತಿಪಾದಿಸಿದರು ಮತ್ತು ಕೆಲವು ಸೂಚನೆಗಳನ್ನು ಪರಿಷತ್ತಿನ ಮುಂದಿಟ್ಟರು (೧) ಅಡಿಕೆ ಬೆಳೆಯ ಕ್ಷೇತ್ರ — ಅಂದರೆ ಧಾನ್ಯದ ಬೆಳವಣಿಗೆಗೆ ಬಾಧೆ ಬರದಂತೆ — ಹೆಚ್ಚಿಸಬೇಕು (೨) ಅಡಿಕೆ ಕೃಷಿಯನ್ನು ಸುಧಾರಿಸಿ ಉತ್ಪತ್ತಿ ಹೆಚ್ಚಿಸಬೇಕು (೩) ಅಡಿಕೆಯ ಬೆಲೆ ಸ್ಥಿರವಾಗಿ ಹೀನ ಸ್ಥಿತಿಗೆ ಬಾರದಂತೆ ನೋಡಬೇಕು (೪) ತೋಟಿಗರ ಸಾಲ ಪರಿಹಾರಕ್ಕೆ ದಾರಿ ಹುಡುಕಬೇಕು (೫) ಒಂದು ಅಡಿಕೆ ಸಂಶೋಧನಾಲಯ ಸ್ಥಾಪಿಸಬೇಕು (೬) ತೋಟಿಗಾರಿಗೆ ಬಾಧೆ ಕೊಡುತ್ತಿರುವ ಅನಾರೋಗ್ಯವ ಮತ್ತು ಕಾಡು ಪಶುಗಳ ಬಾಧೆಯ ಪರಿಹಾರವಾಗಬೇಕು (೭) ಆ ಬಗೆಯ ಪ್ರಯೋಜನವನ್ನು ತೋಟಿಗರು ಪಡೆಯಬೇಕು (೮) ಅಡಿಕೆ ಮಹಾಮಂಡಳವನ್ನು ಬಲಗೊಳಿಸಬೇಕು ಸಂಸ್ಥೆಯ ಬಲ ನೋಡಿಯೇ ಸರಕಾರವು ಬೆಂಬಲ ನೀಡುವದು ಎಂದು ಮುಂತಾಗಿ ಕೆಲವು ಉಪಯುಕ್ತ ಸೂಚನೆಗಳನ್ನು ಅಧ್ಯಕ್ಷರು ಮಾಡಿದರು

ಮರ ದಿನ ಪರಿಷತ್ತು ಪುನಃ ಸೇರಿ ಕೆಲವು ಗೊತ್ತುವಳಿಗಳಾದವು

ಜಿಲ್ಲಾ ಸಮಾಚಾರ.

ಶಿರಸಿ— (ತಾ. ೫-೫-೪೯) ಪ್ರಾಥಮಿಕ ಶಾಲೆಗಳನ್ನು ಕಟ್ಟಿಸುವ ವಿದ್ಯಾಸಂಸ್ಥೆಗಳಿಗೆ ಸವಲತ್ತಿನ ದರದಿಂದ ಕಟ್ಟಿಗೆ ಕೊಡಲು ಸರಕಾರವು ನಿರ್ಧರಿಸಿದೆ ಕಟ್ಟಿಗೆ ವಿಕಾರಿಸುವ ದರದ ಕಟ್ಟಿಗೆಯಲ್ಲಿ ೪/೧೦ ಭಾಗದಷ್ಟು ಮತ್ತು ೪ ೧೦ ಗಟ್ಟಿ ಮತ್ತು ಬೇರೆ ಕಟ್ಟಿಗೆ ಸರಕಾರ ನಿರ್ದಿಷ್ಟ ದರದಿಂದ ಪೂರೈಸಲಾಗುವದು ನೊಂದ-ಣಿ ಮಾಡಿದರುವ ಸಂಸ್ಥೆಗಳಿಗಷ್ಟೇ ಈ ಸವಲತ್ತು ಸಿಗುವದು. ಈ ಸವಲತ್ತು ಬೇಕಾದವರು ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್ಸ್‌ಪೆಕ್ಟರರಿಗೆ ಬರೆಕೊಳ್ಳಬೇಕು ಅವರು ವ್ಯವಸ್ಥೆ ಮಾಡುವರು.

ಕಳೆದ ತಾ ೪ನೇ ರಾತ್ರಿ ಗಿರಾಕಿಗಳ ಸಹಕಾರ ಸಂಘದ ಅವರ ಅಂಗಡಿಯಲ್ಲಿ ಕಳವಾಗಿ ಸುಮಾರು ೧೦೦೦ ರೂಪಾಯಿ ಕಿಮ್ಮತ್ತಿನ ಮಾಲು ಹೋಗಿತ್ತು ಈ ಬಗ್ಗೆ ಪೋಲೀಸರು ದಕ್ಷತೆಯಿಂದ ಶೋಧಿಸಿ, ತಾ ೨ನೇ ದಿನ ರಾತ್ರಿ ಮಾರ್ಕೆಟ್ಟಿಗೆ ಬಂದ ಕೆಲವು ಬಟ್ಟೆಯನ್ನೂ ಆ ಬಟ್ಟೆ ತಂದವರನ್ನೂ ಬಂಧಿಸಿದರು, ಮತ್ತು ಅವನಿಂದ ಸಿಕ್ಕ ಮಾಹಿತಿಯ ಆಧಾರದಿಂದ ಕಳವಿನ ಬಟ್ಟೆಯನ್ನಿಟ್ಟುಕೊಂಡ ಶ್ರೀನಿವಾಸ ಎಂಬ ಸಿಂಪಿಗನನ್ನು ಬಂಧಿಸಿರುತ್ತಾರೆ ಈ ಕಳವಿನ ತಪಾಸಣೆಯಲ್ಲಿ ಬೇರೆ ಕೆಲವು ಕಳವುಗಳ ಪತ್ತೆಯೂ ಸಿಗಬಹುದೆಂದು ಊಹಿಸಲಾಗಿದೆ

ಬನವಾಸಿ ವಿ ಪಿ ಶಾಲೆಯ ರಾ|| ಗೋಳಿಯವರಿಗೆ ಪಾಲಿಕ್ಕೆ ವರ್ಗವಾಗಿದೆ ಅದರೂ ರಾ|| ಗೋಳಿಯವರು ಬನವಾಸಿಯ ಟಪಾಲ ಕಚೇರಿಯ ಕೆಲಸ ಹಾಗೇ ಇಟ್ಟುಕೊಂಡಿದ್ದಾರೆ! ಇದರ ಕಾರಣವೇನು ?

ಸಿದ್ದಾಪುರ— ಸಿದ್ದಾಪುರ ಶಾಲೆಯಿಂದ ಮುಲ್ಕೀ ಪರೀಕ್ಷೆಗೆ ಕೂತ ೨೨ ಮಂದಿಯಲ್ಲಿ ೧೪ ಮಂದಿ ಉತ್ತೀರ್ಣರಾಗಿದ್ದಾರೆ

ಅವರ ಗುಮಸ್ತ ಶಾಲೆಯ ಶಿಕ್ಷಕ ರಾ|| ಜಾ. ವಂ ಹೆಗಡೆ ಇವರು ಆಚೆಯ ವಾರದಿಂದ ಒಂದು ಪ್ರೌಢ ಶಿಕ್ಷಣ ವರ್ಗ ನಡಿಸುತ್ತಿದ್ದಾರೆ. ಈಗಾಗಲೇ ೨೫ ಮಂದಿ ಆ ವರ್ಗಕ್ಕೆ ಸೇರಿರುತ್ತಾರೆ.

|| ಶ್ರೀ ಗಣಪತಿ ಶ್ರೀ ನಾರಾಯಣೌ ಪ್ರಸನ್ನೌ ||

ಕಾನಸರಕೋಡದ ಗಣಪತಿ

ಶ್ರೀ ನಾರಾಯಣ ದೇವರ

ಪ್ರತಿಷ್ಠೆಯ ಮಹೋತ್ಸವ

ಶ್ರೀ ದೇವಸ್ಥಾನದ ನೂತನ ಮಂದಿರದಲ್ಲಿ ಇದೇ ಬರುವ ವಿರೋಧಿ ಸಂವತ್ಸರದ ಜ್ಯೇಷ್ಠ ಶು|| ೫ದಿನಾ ಬುಧವಾರ (ತಾ ೧-೬-೧೯೪೯) ದಿನ ಸೂರ್ಯೋದಯಾದ ನಂತರ (ಸ್ಟಾಂ ಘಂ ೬ ೫) ಶ್ರೀ ದೇವರ ಪ್ರತಿಷ್ಠೆ ಮಾಡಬೇಕೆಂದು ನಿಶ್ಚಯಿಸಲಾಗಿದೆ, ಅದೇ ದಿನ ಹೊಸದಾಗಿ ಕಟ್ಟಿಸಿದ ರಥದ ಮೇಲೆ ರಥೋತ್ಸವವೂ ಆಗುವದಿರುತ್ತದೆ || ೬ ರಿಂದ ೯ ಮಿತಿಯ ವರೆಗೆ ಗಣಹೋಮ, ಲಘು ರುದ್ರ, ಮಹಾರುದ್ರ ನವಚಂಡೀ ಹವನ ಮುಂತಾದ ವಿಶೇಷ ಉತ್ಸವಗಳೂ ನಡೆಯುವವು ಮತ್ತು ಶು|| ೧೦ಯಾ ಸೋಮವಾರ ಅವಭೃಥವಾಗಿ, ರಾತ್ರಿ ಕೌಲ ಪ್ರದಾನ ಆಗುವದು ಈ ಮಹೋತ್ಸವಕ್ಕೆ ಸಮಸ್ತ ಭಕ್ತರು ತನುಮನ ಧನಪೂರ್ವಕದಿಂದಲಾಗಲಿ ಬಂದು ಯಥಾಶಕ್ತಿ ದೇವತಾಸೇವೆ ಮಾಡಿ, ಮಹಾಗಂಧ ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ಅಪೇಕ್ಷೆಯದೆ

ಕಾನಸರಕೋಡ, ತಾ. ೧ ೫-೪೯

ಶ್ರೀ ದೇವರ ಭಕ್ತರ ಪರವಾಗಿ,

ವೆಂಕಟೇಶ ಮಾಡ್ಲಗಿರಿ ಗಾಯತೊಂಡೆ

ಇದನ್ನು ಸಿ. ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಶಿರಸಿ ಎಂ ಜಿ ಮಾರ್ಗದ ತಮ್ಮ "ನ್ಯೂ ಕನ್ನಡ ಪ್ರೆಸ್ಸಿನಲ್ಲಿ" ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಮುಂಚಿನಲ್ಲಿ
ವರ್ಷಕ್ಕೆ ರೂ ೨-೮-೦
ಟಪಾಲಖರ್ಚು ಸಹ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧ ೧೦-೦
ಬಿಡಿ ಸಂಚಿಕೆಗೆ ೦ ೧-೦
೫ ೬ ಯಿಂದ ಹಣಕಳುಹಿಸಿದರು
೫ ೬ ವರ್ಷ ೬ ಅಂಕೆ ಹುಟ್ಟಿಗೆ
ಕೆರಡೀಳು ವರ್ಗಣಿ ಹಣವನ್ನು
ಮುಂಗಡ ಕಳ್ಳಿಸಬೇಕು

Reg. No. B. 1270 Monday, 23-5-1949.

ಕಾನಡಾವೃತ್ತ

ವರ್ಷ ೩೦.] **THE KANARA NEWS.** [ಸಂಚಿಕೆ ೪೭

ಕುಮಟಾ.- ಸೋಮವಾರ, ತಾ ೨೩—೫—೧೯೪೯.

ಜಾಹೀರಾತುಗಳ ದರ
೧೫ ಎಕ್ ಇಂಚು
೧ ವಾರಿಗೆ ೮ ಅಣೆಯಂತೆ
ದೀರ್ಘ ಅವಧಿಯ ಜಾಹೀರಾತುಗಳ
ಜಾಹೀರಾತುಗಳ ಬಗ್ಗೆ ಪತ್ರವ್ಯವಹಾರ
ಕೆಳಗಿನ ಪತ್ತೆಗೆ ಮಾಡಿರಿ
ಚಿಕಿತ್ಸಾಲಯ

ಸುದ್ದಿಗಳ ಸಂದೂಕ

ಘಟನಾ ಸಮಿತಿಯ ಅಧಿವೇಶನಕ್ಕೆ ಕಳೆದ ಸೋಮವಾರದಿಂದ ಪುನಃ ಪ್ರಾರಂಭವಾಗಿದೆ ಸ್ವಾತಂತ್ರ್ಯ, ಪ್ರಜಾ ಸತ್ತಾತ್ಮಕ ಗಣರಾಜ್ಯ, ಹಿಂದುಸ್ತಾನವು ಬ್ರಿಟಿಶ ರಾಷ್ಟ್ರಕೂಟದಲ್ಲಿ ಉಳಿಯುವದೆಂದು ಪಂ॥ ಜವಾಹರಲಾಲರು ಲಂಡನ್ನಿನಲ್ಲಿ ಕೊಟ್ಟ ಒಪ್ಪಿಗೆಯ ಸಂಬಂಧದಲ್ಲಿ ಚರ್ಚೆ ನಡೆಯಿತು ಕೆಲವು ಸದಸ್ಯರು ಪಂ॥ ಜವಾಹರಲಾಲರ ನಿರ್ಣಯವನ್ನು ಟೀಕಿಸಿದರು. ಆದರೆ ಬಹುಸಂಖ್ಯಾಕ ಸದಸ್ಯರು ಪಂಡಿತಜಿಯವರ ನಿರ್ಣಯಕ್ಕೆ ಹೃತ್ಪೂರ್ವಕ ಬೆಂಬಲ ಕೊಟ್ಟರು. ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಹಿಂದುಸ್ತಾನವು ಬೇರೆ ಯಾವ ಗುಂಪಿಗೂ ಸೇರದೆ ಪ್ರತ್ಯೇಕವಾಗಿ ಉಳಿಯಲಾರದೆಂತಲೂ, ತನ್ನ ಆರ್ಥಿಕ ಉನ್ನತಿಗಾಗಿ ಹಾಗೂ ಸಂರಕ್ಷಣೆಗಾಗಿ ಪರರಾಷ್ಟ್ರಗಳ ಸಹಾಯ-ಸಹಕಾರವನ್ನು ಪಡೆಯುವದು ಅವಶ್ಯವಿರುತ್ತದೆಂತಲೂ, ಇಂತಹ ಪರಿಸ್ಥಿತಿಯಲ್ಲಿ ತನ್ನ ಹಳೆಯ ಸಂಬಂಧಿಕರಾದ ಬ್ರಿಟಿಶ ಸ್ನೇಹ ಸಂಬಂಧವನ್ನೇ ಅದು ಸಂಪಾದಿಸುವದು ಉತ್ತಮ ಮಾರ್ಗವೆಂತಲೂ ವಾದಿಸಿದರು ಪಂ॥ ಜವಾಹರಲಾಲರು ಆವೇಶಯುಕ್ತ ಭಾಷಣ ಮಾಡಿ, ತಾವು, ತಮ್ಮ ಸ್ವಾತಂತ್ರ್ಯ-ಪ್ರತಿಜ್ಞೆಯನ್ನೂ, ಹಿಂದುಸ್ತಾನದ ಗೌರವವನ್ನೂ ಪುನಃ ಪುನಃ ನೆನೆಯುತ್ತಲೇ ರಾಷ್ಟ್ರಕೂಟದೊಡನೆ ಒಪ್ಪಂದ ಮಾಡಿಕೊಂಡಿರುತ್ತೇನೆಂದು ತಿಳಿಸಿಹೇಳಿದರು ಕೊನೆಗೆ ಪಂ॥ ನೆಹರುರವರ ನಿರ್ಣಯವನ್ನು ಎತ್ತಿಹಿಡಿಯುವ ಸೂಚನೆಯು ಸಮಿತಿಯಲ್ಲಿ ಅತಿ ಪ್ರಚಂಡ ಬಹುಮತದಿಂದ ಸ್ವೀಕೃತವಾಯಿತು. ಈ ಪ್ರಕಾರದಿಂದ ದೇಹಲಿಯಲ್ಲಿ ಸೇರಿರುವ ಅಖಿಲ ಭಾರತೀಯ ಕಾಂಗ್ರೆಸ ಸಮಿತಿಯಲ್ಲೂ ಈ ನಿರ್ಣಯಕ್ಕೆ ಪ್ರಚಂಡ ಬಹುಮತದಿಂದ ಮನ್ನಣೆ ದೊರೆತ ಸುದ್ದಿ ಬಂದಿದೆ

— ಹೈದರಾಬಾದ ಸಂಸ್ಥಾನದ ಹಿಂದಿನ (ಲಾಯಕ ಅಲ್ಲಿಯವರ) ಸರಕಾರದವರು ಹಿಂದ ಸರಕಾರದ ವಿರುದ್ಧ ಸಂಯುಕ್ತ ರಾಷ್ಟ್ರಸಂಘದ ಭದ್ರತಾ ಮಂಡಳದ ಎದುರು ದಾಖಲಪಡಿಸಿದ ದೂರನ್ನು ನಿಜಾಮರು ಮುಂದೆ ಹಿಂತೆಗೆದುಕೊಂಡು ಸಂಸ್ಥಾನದ ಪರವಾಗಿ ಹೋದ ಪ್ರತಿನಿಧಿಗಳನ್ನು ಹಿಂಗರೆದುಕೊಂಡಿರುತ್ತಿದ್ದರೂ, ಹೈದರಾಬಾದ ಪ್ರಕರಣದ ಇತ್ಯರ್ಥ ಶಾಂತತೆಯಿಂದ ಆಗಿ ಹೋಗಿರುತ್ತಿದ್ದರೂ ಪಾಕಿಸ್ತಾನದ ವಿದೇಶ ಮಂತ್ರಿ ಸರ್ ಮಹಮ್ಮದ ಝಫರುಲ್ಲಾ ಇವರು ಆ ಪ್ರಕರಣವನ್ನು ಪುನಃ ಕೆದರಿ ತೆಗೆಯಲಾರಂಭಿಸಿದ್ದಾರೆ ! ಹೈದರಾಬಾದದ ದೂರಿನ ಚೌಕಶಿಯನ್ನು ಭದ್ರತಾ ಮಂಡಳವು ಮಾಡಬೇಕಾಗಿ ಅವರು ಕಳೆದ ವಾರ ಪುನಃ ಆ ಪ್ರಶ್ನೆಯನ್ನೆತ್ತಿದ್ದರು ಹಿಂದದ ಪ್ರತಿನಿಧಿಗಳಾಗಿರುವ ಸರ್ ಬೆನೆಗಲ್ಲ ನರಸಿಂಗರಾಯರು ಹೈದರಾಬಾದದ ಪ್ರಶ್ನೆಯಲ್ಲಿ ಕೈ ಹಾಕಲು ಭದ್ರತಾ ಮಂಡಳಕ್ಕೆ ಅಧಿಕಾರವಿಲ್ಲೆಂತಲೂ, ಜಾಗತಿಕ ಶಾಂತಿಗೆ ಧಕ್ಕೆ ತರುವಂತಹ ಪರಿಸ್ಥಿತಿ ಹೈದರಾಬಾದದಲ್ಲಿ ಈಗ ಇರುವದಿಲ್ಲವೆಂದೂ ಮಂಡಳಕ್ಕೆ ತಿಳಿಸಿ ಈ ಪ್ರಶ್ನೆಯನ್ನು ಮೂಲೆಗೊತ್ತಿಬಿಡುವದೇ ನ್ಯಾಯ್ಯ ಮಾರ್ಗವಿರುವದೆಂದು ವಾದಿಸಿದರು ಮಂಡಳವು ಪಾಕಿಸ್ತಾನದ ಪ್ರೇರಣೆಯಿಂದ ಈ ಪ್ರಶ್ನೆಯ ಚರ್ಚೆಯನ್ನು ಆರಂಭಿಸಿದರೆ ಹಿಂದುಸ್ಥಾನವು ಆ ಚರ್ಚೆಯಲ್ಲಿ ಭಾಗ ವಹಿಸಕೂಡದೆಂದು ಹಿಂದ ಸರಕಾರದ ನಿರ್ಣಯವಾಗಿದೆ

— ಕಳೆದ ವರ್ಷ ಕಂಬಿಯಿಂದ ಹೈದರಾಬಾದಕ್ಕೆ ಕಳ್ಳತನದಿಂದ ವಿಮಾನಗಳಲ್ಲಿ ಶಸ್ತ್ರಾಸ್ತ್ರಗಳನ್ನು ಒಯ್ದುಕೊಟ್ಟ ವಿಮಾನಗಳ್ಳ ಸಿಡ್ನೀ ಕಾಟನ್ನನ ವಿರುದ್ಧ ಬ್ರಿಟಿಶ ಸರಕಾರದ ವಿಮಾನ ಖಾತೆಯವರು ಲಂಡನ್ನಿನ ಒಂದು ಫೌಜದಾರಿ ಕೋರ್ಟಿನಲ್ಲಿ, ವಿಮಾನಸಂಚಾರದ ನಿಯಮಗಳ ಭಂಗ ಮಾಡಿದ ಬಗ್ಗೆ, ೪ ಖಟ್ಲೆಗಳನ್ನು ಹೂಡಿದ್ದರು ೨ ಖಟ್ಲೆಗಳನ್ನು ಫಿರ್ಯಾದಿ ಪಕ್ಷದವರು ತಿರುಗಿ ತಕ್ಕೊಂಡರೆ ಇನ್ನೆರಡು ಖಟ್ಲೆಗಳಲ್ಲಿ ಕೊಟನ್ನನಿಗೂ ಅವನ ಸಂಘಾತ್ಯ ಮೆಜಿಸ್ಟ್ರೇಟರು ೬೦೦ ಪೌಂಡು ದಂಡ ವಿಧಿಸಿ, ಖರ್ಚಿನ ಬಗ್ಗೆ ೩೦೦ ಪೌಂಡು ಆರೋಪಿತರು ತೆರಬೇಕೆಂದು ವಿಧಿಸಿರುವರು ಪಾಕಿಸ್ತಾನ ಸರಕಾರದ ಅಧಿಕಾರಿಗಳು ಕೊಟನ್ನನಿಗೆ ಎಲ್ಲ ಬಗೆಯ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದರೆಂಬ ಸಂಗತಿಯು ಈ ಖಟ್ಲೆಯಲ್ಲಿ ಹೊರಬಿದ್ದಿದೆ ! ಹೈದರಾಬಾದ ಸರಕಾರವು (ನಿಜಾಮ ಲಾಯಕ ಅಲ್ಲಿಯವರ ಮಂತ್ರಿ ಮಂಡಳವು) ಸಿಡ್ನೀ ಕೊಟನ್ನನ ಕೂಡ ಕರಾರು ಮಾಡಿಕೊಂಡಿತ್ತೆಂದೂ, ಶಸ್ತ್ರಾಸ್ತ್ರಗಳನ್ನು ತಂದು ಕೊಡುವ ಕೆಲಸಕ್ಕಾಗಿ ಅವನಿಗೆ ೪ ಲಕ್ಷ ಪೌಂಡು ವೇತನ ಕೊಡಲೊಪ್ಪಿತ್ತೆಂದೂ ಈ ಖಟ್ಲೆಯ ಪುರಾವೆಯಲ್ಲಿ ಹೊರಬಿದ್ದಿದೆ ಕೊಟನ್ನನು ತಂದುಕೊಡಬೇಕಾಗಿದ್ದ ಮತ್ತು ಅಂತೆಯೇ ತಂದುಕೊಟ್ಟ ಶಸ್ತ್ರಾಸ್ತ್ರಗಳು ಬ್ರಿಟನ್ನಿನವು ಇರುತ್ತವೆಂಬ ಸಂಗತಿಯೂ ಈ ವಿಚಾರಣೆಯಲ್ಲಿ ಹೊರಬಿದ್ದಿರುತ್ತದೆ

— ಮದ್ಯ-ಮಾದಕಗಳ ಪ್ರತಿಬಂಧವನ್ನು ಬಿಗಿ ಮಾಡುವದಕ್ಕಾಗಿ ಮುಂಬಯಿ ಸರಕಾರವು ಇದೇ ಕಳೆದ ಮಾರ್ಚ ತಿಂಗಳಲ್ಲಿ ಎಸೆಂಬ್ಲಿ-ಕೌನ್ಸಿಲುಗಳಲ್ಲಿ ಮಂಜೂರ ಮಾಡಿಕೊಂಡ ಪಾನ ಪ್ರತಿಬಂಧಕ ಮಸೂದೆಗೆ ಕಳೆದ ವಾರ ಸರ್ವಾಧಿಪತಿಗಳ ಮಂಜೂರಿ ಸಿಕ್ಕಿದೆ ಸರ್ವಾಧಿಪತಿಗಳ ಮಂಜೂರಿ ಸಿಗಲಿಕ್ಕೆ ತಡವಾದದ್ದು ನೋಡಿ ಮುಂಬಯಿಯ ರಾಜಕೀಯ ವರ್ಗಗಳಲ್ಲಿ ಸುಸು ತಳಮಳವುಂಟಾಗಿತ್ತು ಈ ಹೊಸ ಮಸೂದೆಯು ಬೇಗನೇ ಅಮಲಿನಲ್ಲಿ ಬರುವದೆಂದು ಅಬಕಾರಿ ಮಂತ್ರಿ ಮಾನ್ಯ ಲಕ್ಷ್ಮಣ ಪಾಟೀಲರು ಜಾಹೀರ ಮಾಡಿದ್ದಾರೆ

— ಭೋಪಾಳದ ನವಾಬರು ಪಾಕಿಸ್ತಾನ-ಪ್ರೇಮಿಗಳಿದ್ದರೆಂದು ಲೋಕಪ್ರಸಿದ್ಧವಿದೆ ಹಿಂದೀ ಒಕ್ಕೂಟದಲ್ಲಿ ಸೇರದೆ ಸ್ವತಂತ್ರವಾಗುಳಿಯಲು ಹಲವಾರು ಸಂಸ್ಥಾನಿಕರಿಗೆ ಪ್ರೇರಣೆ ಕೊಟ್ಟವರಲ್ಲಿ ಈ ನವಾಬರು ಅಗ್ರಗಣ್ಯರು ಆದರೆ ಅವರ ಆಟ ಯಶಸ್ವಿಯಾಗಲಿಲ್ಲ ! ಈಗ ಈ ನವಾಬರ ಸಂಸ್ಥಾನವು ಕೂಡ ಹಿಂದೀ ಒಕ್ಕೂಟದಲ್ಲಿ ವಿಲೀನವಾಗುವದು ನಿಶ್ಚಿತವಾಗಿದೆ ಭೋಪಾಳದ ಅಧ್ಯಕ್ಷತೆಯನ್ನು ಇದೇ ಬರುವ ಜೂನ ತಾ ೧ರಿಂದ ಮಧ್ಯಭಾರತ ರಾಜ್ಯ ಸಂಸ್ಥಾನದ ಅಧಿಕಾರಿಗಳು ವಹಿಸಿಕೊಳ್ಳುವರೆಂದು ಪ್ರಕಟವಾಗಿದೆ ಈ ಪರಿಣತಿಯಿಂದ ಅಸ್ವಸ್ಥರಾದ ಭೋಪಾಳದ ನವಾಬರು 'ವಿಶ್ರಾಂತಿಗಾಗಿ' ಈ ವಾರ ತಮ್ಮ ಕುಟುಂಬದವರೊಡನೆ ಪ್ಯಾರಿಸ್ಸಿಗೆ ಹೋಗುವರಂತೆ !

— ಅಂತೂ ಕೊನೆಗೆ ಮುಂಬಯಿ ಸರಕಾರದವರ ಜಂಗಲ ಕಾಲೇಜು ಕಳೆದ ತಾ ೧೬ಕ್ಕೆ ಧಾರವಾಡದಲ್ಲಿ ತೆರೆಯಲ್ಪಟ್ಟಿತು. ಅದರ ಉದ್ಘಾಟನೆಯ ಸಮಾರಂಭ ಮಾನ್ಯ ಮಲ್ಲನಗೌಡಾ ಪಾಟೀಲರ ಹಸ್ತದಿಂದ ನೆರವೇರಿತು ಈ ಜಂಗಲ ಕಾಲೇಜನ್ನು ಮಿತವ್ಯಯದ ದೃಷ್ಟಿಯಿಂದ ಧಾರವಾಡದೊಳಗೆ ಈ ಹಿಂದೆಯೇ ತೆರೆಯಲ್ಪಟ್ಟ ಬೇಸಾಯದ ಕಾಲೇಜಿಗೆ ಹೊಂದಿಯೇ ತೆರೆಯಲ್ಪಡುತ್ತದೆಂದೂ ಕೆನರಾ ಜಿಲ್ಲೆಯಲ್ಲಿ ತೆರೆದರೆ ಹೆಚ್ಚಿಗೆ ಖರ್ಚು ಬರುತ್ತಿತ್ತೆಂದೂ, ಖರ್ಚಿನ ದೃಷ್ಟಿಯಿಂದಲೇ ಧಾರವಾಡದಲ್ಲಿ ತೆರೆಯುವ ನಿರ್ಣಯವಾಯಿತೆಂದೂ ಮಾನ್ಯ ಪಾಟೀಲರು ಉದ್ಘಾಟನೆಯ ಸಮಾರಂಭದ ಭಾಷಣದಲ್ಲಿ ನುಡಿದು ತಮ್ಮ ಟೀಕಾಕಾರರಿಗೆ ಉತ್ತರ ಕೊಟ್ಟಿರುತ್ತಾರೆ

(೪- ನೇ ಪುಟ ನೋಡಿರಿ)

The Agricultural & Industrial Bank, Ltd.,

Regd Office "LAXMI NIVAS Buildings",

COONDAPOOR, S Kanara

SEASON DEPOSITS

Maturing on or before 30th June 1949 are now accepted with interest ranging from 2½% to 3½% per annum

Every kind of Banking business transacted

For terms etc., please apply to any of our following

Branches.

1 Coondapoor	7 Ankola	13 Sirsi
2 Mangalore	8 Bhatkal	14 Dharwar
3 Somwarpet.	9 Gokarn	15 Gadag
4 Virajpet	10 Honavar	16 Haveri
5 Shimoga	11 Karwar	17 Hubli
6 Nagar	12 Kumta	18 Belgaum

19 BOMBAY (384-M Jaipuria House, Kalbadevi Road)

ಸ್ಥಾನಿಕ ವೃತ್ತಾಂತ

ಕುಮಟಾ— ಕಳೆದ ತಾ. ೧೦ಕ್ಕೆ ಕೃತ್ತಿಕಾ ಪ್ರವೇಶವಾದಂದಿನಿಂದಲೇ ಈ ವರ್ಷದ ಮಳೆಗಾಲಕ್ಕೆ ಆರಂಭವಾದಂತಾಗಿದೆ. ಆವತ್ತಿನ ಸುಮಾರು ೩-೪ ಇಂಚು ಮಳೆಯಾಗಿದೆ. ನಾಳೆ ರೋಹಿಣೀ ಪ್ರವೇಶವಾಗುವದು.

ಸೀಮೆ-ಅಂಗಡಿಗಳಲ್ಲಿ ಈಗ ಕವಲೆಯೂ ಸಿಗುವದಿಲ್ಲ, ಕವಲಿ-ಬೇಳೆಯೂ ಸಿಗುವದಿಲ್ಲ. ಪ್ರತಿ ಅಂಗಡಿಗೆ ೩-೩ ಚೀಲ ಬೇಳೆ ಕೊಡುವದಾಗಿದ್ದರಿಂದಲೂ, ತಲಾ ೪ಔನ್ಸಿನಂತೆ ಬೇಳೆ ಕೊಡಲಿಕ್ಕೆ ತಿಳಿಸಿದ್ದರಿಂದಲೂ ಶುದ್ಧ ಆ ಬೇಳೆ ತಂದು ಹಂಚುವ ಮತ್ತು ಆ ಬಗ್ಗೆ ಮಾಡಬೇಕಾದ ವೆಚ್ಚವು ಆ ಬೇಳೆಯ ವ್ಯಾಪಾರದಲ್ಲಿ ಸಿಗುವ ದಲಾಲಿಗಿಂತ ಹೆಚ್ಚಿಗೆ ಬರುತ್ತಿದೆಂದು ಅಂಗಡಿಯವರು ದೂರುತ್ತಾರೆ. ಈ ಅಂಗಡಿಗಳಲ್ಲಿ ಸಿಗುವ ಜೋಳದಲ್ಲಂತೂ ಕಸ ಕಡ್ಡಿ, ಕಲ್ಲು ಮತ್ತು ಮಣ್ಣು ಬಹಳವಾಗಿದೆ! ಅಂಗಡಿಯಿಂದ ೧ ಪಾವಲಿ ಜೋಳವನ್ನು ಮನೆಯಲ್ಲಿ ತಂದು ಹಸನಗೊಳಿಸಿದರೆ ಒಂದೇ ೨||-೨|| ಸೇರುಗಳಷ್ಟೇ ಒಳ್ಳೆ ಜೋಳ ಸಿಗುತ್ತಿದೆ! ಹಿಂದಿನ ನಿಯಂತ್ರಣದ ಕಾಲಕ್ಕೆ ಇಂಥಹ ಜೋಳವನ್ನು ಅಂಗಡಿಗಳಿಗೆ ಕಳಿಸಬಾರದೆಂದು ಜಿಲ್ಹಾಧಿಪರು ಅಪ್ಪಣೆ ಮಾಡಿ, ಉಗ್ರಾಣದಲ್ಲಿ ಅದನ್ನು ಹಸನಗೊಳಿಸಿ ಕೊಳ್ಳಲಿಕ್ಕೆ ವಿಧಿಸಿದ್ದರು. ಈಗ ಅಂಥಹ ವ್ಯವಸ್ಥೆ ಮಾಡಲಿಕ್ಕೆ ಬರುವಂತಿಲ್ಲವೇನು?

ಕಳೆದ ತಿಂಗಳ ಕೊನೆಗೆ ಜರುಗಿದ ಇಲ್ಲಿಯ ಗಿಬ್ ಹಾಯಸ್ಕೂಲಿನ ಸಮ್ಮೇಲನದ ಕಾಲಕ್ಕೆ ಸ್ಥಾನಿಕ ಕೊಂಕಣೀ ಭಾಷಾ ಪ್ರಚಾರ ಮಂಡಲದವರು ಕೊಂಕಣೀ ಭಾಷೆಯಲ್ಲಿ ಒಂದು ನಿಬಂಧ-ಸ್ಪರ್ಧೆಯನ್ನು ಏರ್ಪಡಿಸಿದ್ದರು. ಸ್ಪರ್ಧೆಯಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ [illegible] ತಾ ೨೯ನೇ ಸಂಜೆ ಸೇರಿದ ಸಭೆಯಲ್ಲಿ ಇನಾಮುಗಳನ್ನು ಹಂಚಲಾಯಿತು.

ಕುಮಟೆಯ ನಡುಭಾಗದಲ್ಲಿರುವ “ಡಾಂಬರ ರಸ್ತೆ”ಯನ್ನು ನೋಡಿ ಕುಮಟೆಗೆ ಬಂದ ಪರಸ್ಥರು “ಇದೆಂಥ ಡಾಂಬರ ರಸ್ತೆಯಪ್ಪಾ!” ಎಂದು ಪರಿಹಾಸ್ಯ ಮಾಡುತ್ತಾರೆ, ಅಂಥಹ ಮಾರ್ಗದ ಮೇಲೆ ಕುಮಟೆಯ ಜನರು ಹೇಗೆ ನಡೆಯುತ್ತಿರುವರೆಂದೂ ಕೇಳುತ್ತಾರೆ! ಕಳೆದ ಮಳೆಗಾಲದ ಅಂತ್ಯಕ್ಕೆ ಇಂಜನೀರ ಇಲಾಖೆಯವರು ಈ ರಸ್ತೆಯ ಮೇಲೆ ಕೆಲವು ಮಣ್ಣು ಮತ್ತು [illegible] ಹಾಕಿಸಿದ್ದರು, ಅದರಿಂದ ನಾಲ್ಕು ದಿನ ಜನರಿಗೆ ಸುಖವಾಗಿತ್ತು, ಈಗ ಪುನಃ ಮಾರ್ಗದೊಳಗಿನ ಕರಿ ಕಲ್ಲುಗಳು ಹೊರಮೂಡಿ ಕಾಲಿಗೆ ಚುಚ್ಚುತ್ತಿವೆ! ಈ ಮಾರ್ಗವನ್ನು ದುರುಸ್ತಿಗೊಳಿಸುವದು ಸರಕಾರಕ್ಕೆ ಸಾಧ್ಯವಿಲ್ಲವೇ?

ಹೊನ್ನಾವರ— (ತಾ ೧೩-೫-೪೯) ಬಳಕೂರ ಗ್ರಾಮದಲ್ಲಿ ೨ ಬೋರ್ಡ ಶಾಲೆಗಳಿವೆ. ಅವುಗಳ ಈ ವರ್ಷದ ಮಳೆಗಾಲದ ದುರುಸ್ತಿಯ ವೆಚ್ಚ ರೂ ೫೦ಕ್ಕೆ ಮೀರುವಂತಿರುವದರಿಂದ ಅದನ್ನು ಸ್ವತಃ ಬೋರ್ಡಿನವರೇ ಮಾಡಿಸಬೇಕೆಂದು ನಿರ್ಣಯಿಸಿರುತ್ತಾರಂತೆ. ಆದರೆ ಇನ್ನೂ ಆ ದುರುಸ್ತಿಯ ಕೆಲಸಕ್ಕೆ ಆರಂಭವಾಗಿಲ್ಲ! ಆಕಾಶದಲ್ಲಿ ಮೋಡಗಳಾಗಿ ಮಳೆ ಇಂದು ಬೀಳುತ್ತದೋ ನಾಳೆ ಬೀಳುತ್ತದೋ ಎಂಬ ಸ್ಥಿತಿಯುಂಟಾಗಿದೆ. ಮಳೆ ಬಿದ್ದರೆ ಶಾಲೆಯಲ್ಲಿ ನೀರು ಒಳಗೆ ಬಂದು ಒಳಗಿನ ಸಾಮಾನು — ಗೋಡೆಗೆ ಹಚ್ಚಿಟ್ಟ ಚಿತ್ರಪಟ ಮುಂತಾದವು — ಹಾಳಾಗುವವು. ಮಳೆಗಾಲದ ಛಾವಣಿ ಮುಂತಾದವನ್ನು ಎಂದು ಮಾಡಿಸಬೇಕೆಂಬುದು ಬೋರ್ಡಿನವರಿಗೆ ತಿಳಿಯುತ್ತಿಲ್ಲವೇನು?

ಕೆಕ್ಕಾರ ಮಠದ ಶ್ರೀ ರಾಮಚಂದ್ರ ಭಾರತೀ ಸ್ವಾಮಿಗಳು ಕಳೆದ ಫಾಲ್ಗುನ ವ ೧೫ ರಂದು ವೃಂದಾವನಸ್ಥರಾದರಷ್ಟೇ. ಸದರಿ ಗುರುಗಳ ಸಮಾಧಿ ವಗೈರೆ ಮಾಡಲಿಕ್ಕೂ ಚಿಕ್ಕ ಗುರುಗಳನ್ನು ಕಾಶಿಯಿಂದ ಕರೆತಂದು ಅವರ ಪಟ್ಟಾಭಿಷೇಕ ಮಾಡಲಿಕ್ಕೂ ಬಹಳ ಖರ್ಚು ಬಂದದ್ದರಿಂದ ಈ ಸೀಮೆಯೊಳಗಿನ ಶಿಷ್ಯ ವರ್ಗದವರಿಂದ ವಂತಿಗೆಗಳನ್ನು ಎತ್ತುವದು ನಡೆದಿತ್ತು. ಈ ವಂತಿಕೆ

ಕಾನಡಾ ಜಿಲ್ಲಾ ಸ್ಕೂಲ ಬೋರ್ಡಿನ ಚುನಾವಣೆಯ ನೋಟೀಸು ಮತ್ತು ಕಾರ್ಯಕ್ರಮ.

ಕಾನಡಾ ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರ ಕಡೆಯಿಂದ—

ಈ ಜಿಲ್ಲೆಯ ಲೋಕಲ್ ಬೋರ್ಡಿನ ಮತ್ತು ಮ್ಯುನಿಸಿಪಾಲಿಟಿಗಳ ಸದಸ್ಯರುಗಳೊಳಗಿನ ಮತದಾರ ಜನರಿಗೆ ತಿಳಿಯಪಡಿಸುವದೇನಂದರೆ —

೧ ತಾ ೧೯-೩-೧೯೪೯ನೇ ದಿನ ಮುಂಬಯಿ ಸರಕಾರದ ಸರಕಾರಿ ಗೆಝೆಟಿನಲ್ಲಿ ಪ್ರಸಿದ್ಧವಾಗಿರುವ ೭೮೯೬-ಅ, ೭೮೯೩ ಬ ನಂಬರಗಳ ಸರಕಾರಿ ಠರಾವುಗಳೊಡನೆ ಸರವಾಗಿ ತಾ ೧-೫-೧೯೪೯ರಿಂದ ಆರಂಭವಾಗುವ ೩ ವರ್ಷಗಳ ಅವಧಿಯ ಬಗ್ಗೆ ನಮ್ಮ ಕಾನಡಾ ಜಿಲ್ಹೆಯಲ್ಲಿ ಹೊಸ ಜಿಲ್ಹಾ ಸ್ಕೂಲ ಬೋರ್ಡನ್ನು ರಚಿಸಬೇಕಾಗಿರುತ್ತದೆ (ಸದ್ಯದ ಬೋರ್ಡಿನ ಸದಸ್ಯರು ಹೊಸ ಬೋರ್ಡ ರಚನೆಯಾಗುವ ತನಕ ಅಧಿಕಾರ ನಡೆಸುವರು)

೨ ಕಾನಡಾ ಜಿಲ್ಹಾ ಸ್ಕೂಲ ಬೋರ್ಡಿನಲ್ಲಿ ಒಟ್ಟು ೧೩ ಮಂದಿ ಸಭಾಸದರಿರುವರು. ಅವರಲ್ಲಿ ಇಬ್ಬರನ್ನು ಪ್ರಾಂತಿಕ ಸರಕಾರದವರು ನೇಮಿಸುವರು.

೩ ಜಿಲ್ಹಾ ಲೋಕಲ್ ಬೋರ್ಡಿನವರಿಂದ ಚುನಾಯಿಸಲ್ಪಡಬೇಕಾಗಿರುವ ೧೧ ಮಂದಿ ಸಭಾಸದರಲ್ಲಿ ಈ ಕೆಳಗೆ ತೋರಿಸಿದಂತೆ ೮ ಸದಸ್ಯಸ್ಥಾನಗಳು ಕಾಯ್ದಿಡಲ್ಪಟ್ಟಿವೆ. ಉಳಿದ ೩ ಸ್ಥಾನಗಳು ಮಾತ್ರ ಸರ್ವಸಾಮಾನ್ಯ ಸ್ಥಾನಗಳಿರುತ್ತವೆ.

			ಸ್ಥಾನಗಳ ಸಂಖ್ಯೆ
[illegible]	೧	ಸ್ತ್ರೀಯರು	೧
	೨	ಅಲ್ಪಸಂಖ್ಯ ವರ್ಗದವರ - ಮುಸಲ್ಮಾನರು	೧
	೩	ಹಿಂದುಳಿದ ಜಾತಿಗಳ ಜನರು	೧
	೪	ಮೆಟ್ರಿಕ್ಯುಲೇಶನ ಪರೀಕ್ಷೆಯಲ್ಲಿ ಅಥವಾ ೨ ವರ್ಷದ ಟ್ರೇನಿಂಗ ಸರ್ಟಿಫಿಕೇಟ ಪರೀಕ್ಷೆಯಲ್ಲಿ ತೇರ್ಗಡೆಯಾದವರು	೩
	೫	ಸರ್ವಸಾಮಾನ್ಯ ಸ್ಥಳಗಳು	೩
ಕಾದಿಟ್ಟ ಸ್ಥಳಗಳು	೬	ಅಧಿಕೃತ ಮ್ಯುನಿಸಿಪಾಲಿಟಿಗಳ ಪ್ರತಿನಿಧಿಗಳು	೨
		ಒಟ್ಟು	೧೧

ಟಿಪ್ಪಣೆ — ಮೇಲಿನಂತೆ ಆರಿಸಲ್ಪಡಬೇಕಾದ ಸದಸ್ಯರು ಅವರನ್ನು ಆರಿಸುವ ಸ್ಥಾನಿಕ ಅಧಿಕಾರಿ ಸಂಸ್ಥೆಯ ಸದಸ್ಯರಾಗಬೇಕೆಂಬ ನಿರ್ಬಂಧವೇನೂ ಇಲ್ಲ.

೪ ೧೯೪೭ನೇ ಇಸವಿಯ ಮುಂಬಯಿ ಪ್ರಾಥಮಿಕ ಶಿಕ್ಷಣದ (೬೧ನೇ) ಕಾನೂನಿನಂತೆ ಮಾಡಿದ ನಿಯಮಾವಳಿಯ ೬(೫)ನೇ ನಿಯಮದಂತೆ ಮುಂಬಯಿ ಸರಕಾರದವರು ಪ್ರಸಿದ್ಧಪಡಿಸಿದ ೧-೨ನೇ ಚುನಾವಣೆಯ ನಿಯಮಗಳನ್ವಯ — ಕಾನಡಾ ಜಿಲ್ಹಾ ಸ್ಕೂಲ ಬೋರ್ಡಿನ ಚುನಾವಣೆಯ ಬಗ್ಗೆ ಈ ಕೆಳಗೆ ಕಾಣಿಸಿದ ಕಾರ್ಯಕ್ರಮವನ್ನು ನಿಶ್ಚಯಿಸಲಾಗಿದೆ.

ತಪಶೀಲು	ಸ್ಥಳಗಳ ಅನುಕ್ರಮ	ಸ್ಥಳ	ತಾರೀಖು ಮತ್ತು ಹೊತ್ತು.
೧ ನೇಮಣೂಕಿಯ ಪತ್ರಗಳನ್ನು ಸ್ವೀಕರಿಸುವದು (ಚುನಾವಣೆಯ ನಿಯಮ ೪)	೧ ಸ್ತ್ರೀಯರ ಸ್ಥಳ ೨ ಅಲ್ಪಸಂಖ್ಯ ವರ್ಗದ ಮುಸಲ್ಮಾನರ ಸ್ಥಳ ೩ ಹಿಂದುಳಿದ ಜಾತಿಗಳ ಜನರ ಸ್ಥಳ ೪ ಮೆಟ್ರಿಕ್ಯುಲೇಶನ ಅಥವಾ ೨ ವರ್ಷದ ಟ್ರೇನಿಂಗ ಸರ್ಟಿಫಿಕೇಟ ಪರೀಕ್ಷೆಯಲ್ಲಿ ತೇರ್ಗಡೆಯಾದವರು ೫ ಸಾಮಾನ್ಯ ಜಾಗೆಗಳು ೬ ಅಧಿಕೃತ ಮ್ಯುನಿಸಿಪಾಲಿಟಿ ಪ್ರತಿನಿಧಿಗಳು	ಕಾರವಾರದಲ್ಲಿರುವ ಕಾನಡಾ ಜಿಲ್ಹಾ ಲೋಕಲ್ ಬೋರ್ಡ ಕಚೇರಿಯ ಮಾಳಿಗೆಯ ಮೇಲೆ	ತಾ. ೨೦-೬-೧೯೪೯ನೇ ಸೋಮವಾರ ಮುಂಜಾನೆ ೯ರಿಂದ ೧೨ ಘಂಟೆಯ ವರೆಗೆ (ಸ್ಟಾಂ ಟೈ)
೨ ನೇಮಣೂಕಿ ಪತ್ರಗಳ ([illegible] ಚುನಾವಣೆಯ ನಿಯಮ ೫, ೬, ೭)	— ಡಿ —	— ಡಿ —	ಸದರಿ ದಿನ ಸಂಜೆ ೩ ಘಂಟೆಯಿಂದ ಮುಂದೆ
೩ ಮತಗಳನ್ನು ಕೊಡುವದು (ಚುನಾವಣೆಯ ನಿಯಮ ೧೪)	೧ ಸ್ತ್ರೀಯರ ಸ್ಥಳ ೨ ಅಲ್ಪಸಂಖ್ಯ ವರ್ಗದವರ ಮುಸಲ್ಮಾನರ ಸ್ಥಳ ೩ ಹಿಂದುಳಿದ ಜಾತಿಗಳ ಜನರ ಸ್ಥಳ ೪. ಮೆಟ್ರಿಕ್ಯುಲೇಶನ ಅಥವಾ ೨ ವರ್ಷದ ಟ್ರೇನಿಂಗ ಸರ್ಟಿಫಿಕೇಟ ಪರೀಕ್ಷೆಯಲ್ಲಿ ತೇರ್ಗಡೆಯಾದವರು	— ಡಿ —	ತಾ ೮-೭-೧೯೪೯ನೆ ಶುಕ್ರವಾರ ಬೆಳಗ್ಗೆ ೯ರಿಂದ ೧೧ ಘಂಟೆಯ ವರೆಗೆ (ಸ್ಟಾಂ ಟೈ)

೪	ಅಂಥ ಮತಗಳನ್ನು ಎಣಿಸುವದು (ಚುನಾವಣೆಯ ನಿಯಮ ೧೫) ಮತ್ತು ಪರಿಣಾಮ ಜಾಹೀರ ಮಾಡುವದು. (ಚುನಾವಣೆಯ ನಿಯಮ ೧೦)	— ೩ —	— ೩ —	ಅದೇ ದಿನ ಬೆಳಿಗ್ಗೆ ೧೧ರಿಂದ ೧೨ರ ವರೆಗೆ (ಸ್ಟಾಂ. ಟೈ)
೫	ಮತಗಳನ್ನು ಕೊಡುವದು (ಚುನಾವಣೆ ನಿಯಮ ೧೫)	ಸಾಮಾನ್ಯ ಸ್ಥಳಗಳು	— ೩ —	ಮರು ದಿನ ಸಂಜೆ ೪ರಿಂದ ೫ರ ವರೆಗೆ (ಸ್ಟಾಂ. ಟೈ)
೬	ಅಂಥ ಮತಗಳನ್ನು ಎಣಿಸುವದು. (ಚುನಾವಣೆ ನಿಯಮ ೧೫) ಮತ್ತು ಪರಿಣಾಮ ಜಾಹೀರ ಮಾಡುವದು (ಚುನಾವಣೆಯ ನಿಯಮ ೧೬)	— ೩ —	— ೩ —	ಅದೇ ದಿನ ಸಂಜೆ ೫ರಿಂದ ೫ರ ವರೆಗೆ (ಸ್ಟಾಂ ಟೈ)
೭	ಅನಧಿಕೃತ ಮ್ಯುನಿಸಿಪಾಲಿಟಿಗಳಿಂದ ಬಂದ [illegible] ಮತಗಳನ್ನು ಎಣಿಸಿ (ಚುನಾವಣೆ ನಿಯಮ ೧೫) ಪರಿಣಾಮ ಜಾಹೀರಪಡಿಸುವದು. (ಚುನಾವಣೆಯ ನಿಯಮ ೧೬)	೬. ಅನಧಿಕೃತ ಮ್ಯುನಿಸಿಪಾಲಿಟಿಗಳ ಪ್ರತಿನಿಧಿಗಳ ಸ್ಥಳ.	— ೩ —	ಅದೇ ದಿನ ಸಂಜೆ ೫ರಿಂದ ೬ರ ವರೆಗೆ (ಸ್ಟಾಂ ಟೈ)

೫ ಸದರಿ ಸ್ಕೂಲ ಬೋರ್ಡಿನ ಮೇಲ್ಕಾಣಿಸಿದ ಸ್ಥಳಗಳ ಬಗ್ಗೆ ಚುನಾವಣೆಗೆ ಯಾರು ನಿಲ್ಲಬಯಸುತ್ತಾರೋ ಅವರು ೧೯೪೭ನೇ ಇಸವಿಯ ಮುಂಬಯಿಯ ಪ್ರಾಥಮಿಕ ಶಿಕ್ಷಣ ಕಾನೂನಿನ [illegible]ನೇ ಮತ್ತು [illegible]ನೇ ಕಲಮುಗಳನ್ನೂ ೧೯೪೮ನೇ ಇಸವಿಯ ಪ್ರಾಥಮಿಕ ಶಿಕ್ಷಣದ ನಿಯಮಾವಳಿಯ ೪, ೫, ೬ನೇ ನಿಯಮಗಳನ್ನೂ ಲಕ್ಷದಲ್ಲಿಟ್ಟು ತಮ್ಮ ನೇಮಣೂಕಿ-ಪತ್ರಗಳನ್ನು ಕೊಡಬೇಕು

೬ ನೇಮಣೂಕಿ-ಪತ್ರದ ಫಾರ್ಮು ಮತ್ತು ನಮೂನೆಯು ಅಧ್ಯಕ್ಷ, ಜಿಲ್ಹಾ ಲೋಕಲ್ ಬೋರ್ಡ ಕಾನಡಾ ಇವರ ಕಚೇರಿಯಲ್ಲಿ (ಕಾರವಾರದಲ್ಲಿ) ಸಿಗುವವು

ಸ್ಕೂಲ ಬೋರ್ಡಿನ ಸದಸ್ಯರಾಗಿ ಆರಿಸಲ್ಪಡಬಯಸುವ ಉಮೇದವಾರರು, ಅವರು ಕೊಡತಕ್ಕ ನೇಮಣೂಕಿ ಪತ್ರದಲ್ಲಿ, ಜಿಲ್ಹಾ ಲೋಕಲ್ ಬೋರ್ಡಿನ ಒಬ್ಬ ಸದಸ್ಯರಿಂದ ಸೂಚಿಸಲ್ಪಡಬೇಕು, ಇನ್ನೊಬ್ಬ ಸದಸ್ಯರಿಂದ ಅನುಮೋದಿಸಲ್ಪಡಬೇಕು. ಹೀಗೆ ಸೂಚಿಸುವ ಮತ್ತು ಅನುಮೋದಿಸುವ ಸದಸ್ಯರು ನೇಮಣೂಕಿ-ಪತ್ರವನ್ನು ಹಾಜರ ಮಾಡುವ ಕಾಲಕ್ಕೆ ಹಾಜರ ಇರಬೇಕು ಉಮೇದವಾರರು ಸ್ವತಃ ಯಾ ತಮ್ಮ ಸೂಚಕ ಮತ್ತು ಅನುಮೋದಕರ ಕಡೆಯಿಂದ ತಮ್ಮ ನೇಮಣೂಕಿ-ಪತ್ರವನ್ನು ರಿಟರ್ನಿಂಗ ಆಫೀಸರ ಕಡೆಗೆ ಕೊಡತಕ್ಕದ್ದು. ಪ್ರಾಥಮಿಕ ಶಿಕ್ಷಣದ ಕಾಯದೆ ಮತ್ತು ನಿಯಮಗಳಂತೆ ಉಮೇದವಾರರಿಗೆ ಸದಸ್ಯರಾಗುವ್ದು [illegible] ಮೇಲೆ ಬೇಕೆಂದು ರಿಟರ್ನಿಂಗ ಆಫೀಸರು ಹೇಳಿದಲ್ಲಿ ಅಂಥ ಪುರಾವೆಗಳನ್ನು ನೇಮಣೂಕಿ-ಪತ್ರಗಳ ಕೂಡ [illegible] ಉಮೇದವಾರರು ಕೊಡಬೇಕಾಗುವದು

೭ ಚುನಾವಣೆಯ ನಿಯಮ ೩ರನ್ವಯ ಜಿಲ್ಹಾ ಬೋರ್ಡಿನ ಅಧ್ಯಕ್ಷರೇ ಈ ಚುನಾವಣೆಯ ರಿಟರ್ನಿಂಗ ಆಫೀಸರರಾಗುವರು

ಕಾರವಾರ, ತಾ. ೩೦-೪-೪೯	**N. P. Pai,** ಚೀಫ ಆಫೀಸರ,	**V. K. B Balku** ಅಧ್ಯಕ್ಷ, ಜಿಲ್ಹಾ ಲೋಕಲ್ ಬೋರ್ಡ, ಕಾನಡಾ

(೧ನೇ ಪುಟದಿಂದ ಮುಂದರಿದಿದ್ದು)

— ಮುಂಬಯಿ ನಗರ ಸಭೆಯ ನೌಕರಿಯಲ್ಲಿದ್ದ [illegible] ಸಾವಿರ ಭಂಗಿಗಳೂ ಕಸ ಗುಡಿಸುವವರೂ ಇದೇ ತಿಂಗಳ ತಾ ೧೬ರಿಂದ ಪೂರ್ವ ಸೂಚನೆಯನ್ನು ಕೊಡದೆ ಸಂಪು ಹೂಡಿದ್ದಾರೆ. ನಗರ ಸಭೆಯವರು ಸಂಪಿನಲ್ಲಿ ಸೇರದಿರುವ ಜನರ ಸಹಾಯದಿಂದ ಹಾಗೂ ಸ್ವಯಂಸೇವಕರ ಸಹಾಯದಿಂದ ನಗರ-ಸ್ವಚ್ಛತೆಯ ಕೆಲಸ ಮಾಡಲು ನಿರ್ಧರಿಸಿದ್ದಾರೆ ಪೂರ್ವಸೂಚನೆ ಕೊಡದೆ "ಜೀವನಾವಶ್ಯಕ ಸೇವೆ" ಯನ್ನು ಒಮ್ಮೆಲೇ ನಿಲ್ಲಿಸಿದ್ದು ಸಾರ್ವಜನಿಕ ಸುರ-

ಯಾವತ್ತೂ ಅನುಕೂಲತೆಗಳಿಗಾಗಿ

ದಿ

ಕೆನರಾ ಲಾಜ

ಊಟ ಮತ್ತು ವಸತಿ ಗೃಹ

ಮೋಟರ ಸ್ಟೆಂಡ, ಹುಬ್ಬಳ್ಳಿ.

ಮಾಲೀಕ — ಮ್ಯಾನೇಜರ್ ಪೈ.

[illegible] ಎಷ್ಟು ಕೊಡಿತು, ಅವರಲ್ಲಿ ಎಷ್ಟು [illegible], ಉಳಿದ ಹಣದ ವ್ಯವಸ್ಥೆ ಏನಾಯಿತು ಎಂಬುದನ್ನು [illegible] ಪಕ್ಷದ ಶಿಷ್ಯ ಸಮಾಜದಲ್ಲಿ ಜಾಹೀರಪಡಿಸುವವರ [illegible] ಕೇಳ್ಯಾರೆ ಗ್ರಾಮದೊಳಗಿನ ಶಿಷ್ಯರೊಬ್ಬರು ಅರಿಕೆ ಮಾಡುತ್ತಾರೆ.

[illegible] ಪಟ್ಟಣದ ಶ್ರೀ [illegible] ನವರು ನಾಲ್ಕು ವರ್ಷಗಳಿಂದ ದೃಷ್ಟಿಹೀನರಾದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತದೆ. [illegible] ಮುಂಬಯಿಗೆ ಹೋಗಿ [illegible] ನೌಕರಿ ಹಿಡಿದಿದ್ದರು, ಆ ನೌಕರಿಯನ್ನು ಪ್ರಾಮಾಣಿಕತನದಿಂದ ಸಾಗಿಸಿ, ಬಿಡುವಿನ ಹೊತ್ತಿನಲ್ಲಿ ಅವರು ಸಮಾಜಸೇವೆಯನ್ನು [illegible] ಮಾಡುತ್ತಿದ್ದರು. ನಮ್ಮ [illegible] ಬದಿಯಿಂದ ಮುಂಬಯಿಗೆ ಹೋದ ಜನರಿಗೆ ಅವರು [illegible] ಸಾಧ್ಯವಾದ ಮಟ್ಟಿಗೆ ನೆರವನ್ನೀಯುತ್ತಿದ್ದರು. ಸಮಯ ಪ್ರಸಂಗದಲ್ಲಿ ಅವರ ನಿಧನವಾದದ್ದು ನಮ್ಮ [illegible] ದೇ ಹೇಳಬೇಕು ದೇವರು ಅವರ ಆತ್ಮಕ್ಕೆ ಸದ್ಗತಿಯನ್ನೀಯಲಿ!

ಭಟಕಳ— (ತಾ ೭-೫-೪೯) ಈಗ ದೇಶ—ಕಾಲ—ಪರಿಸ್ಥಿತಿಯಲ್ಲಿ ಪೂರ್ಣ ಬದಲಾವಣೆಯಾಗಿರುವದರಿಂದ ಇಲ್ಲಿಯ ಮಜಲಿಸ-ಇಸ್ಲಾಹ ಓ-ತಾಂಜಿಮ ಸಂಸ್ಥೆಯವರು ಜಾತಿ-ಮತ ಪಂಥಗಳ ಭೇದವನ್ನೆಣಿಸದೆ ಸರ್ವರಿಗೂ ತಮ್ಮ ಸಂಸ್ಥೆಯ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದೆಂದು ನಿರ್ಣಯಿಸಿದ್ದಾರೆ ಇಷ್ಟು ದಿನ ಮುಸಲ್ಮಾನರಿಗಷ್ಟೇ ಈ ಸಂಸ್ಥೆಯಲ್ಲಿ ಪ್ರವೇಶವಿತ್ತು

ಸಿದ್ದಾಪುರ— ಸಿದ್ದಾಪುರ ತಾಲೂಕಿನ [illegible] ಗ್ರಾಮದ ಜನಸಂಖ್ಯೆ ೭೦೦ ರಷ್ಟಿದೆ ಅಲ್ಲೊಂದು [illegible] ಶಾಲೆಯುಂಟು ಆ ಶಾಲೆಯಲ್ಲಿ ೫೬ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ ತಮ್ಮ ಈ ಶಾಲೆಯನ್ನು ಸ್ಕೂಲ ಬೋರ್ಡಿನವರು ಒಪ್ಪಿಸಿಕೊಂಡು ನಡಿಸಬೇಕಾಗಿ ಆ ಗ್ರಾಮದವರ ವಿನಂತಿಯಿದೆ

ಅಬಕಾರಿ ಸಚಿವರಾದ ಮಾನ್ಯ ಮಂತ್ರಿ ಶ್ರೀ ದಿನಾಕರರು [illegible] ಶಿರ್ಸಿಗೆ ಹೋಗುತ್ತಿದ್ದಾಗ ಅವರ [illegible] "ಮಕ್ಕಳ ಕಲಾ ಕೂಟ" [illegible] ಅವರಿಗೊಂದು ಮಾನಪತ್ರ ಕೊಟ್ಟಿದ್ದರೆಂದು ತಿಳಿಯುತ್ತದೆ

ಅಂಕೋಲಾ— (ತಾ ೩-೫-೪೯) ಅಂಕೋಲಾ ತಾಲೂಕಿನ [illegible] ಗ್ರಾಮದ ೧ನೇ ನಂ. ೧೦ [illegible] ಶಾಲೆಯ [illegible] ಕೆಲಸವು ಈಗ ಪೂರ್ಣವಾಗಿದ್ದು [illegible] ಅದರ ಉದ್ಘಾಟನೆಯ ಸಮಾರಂಭವು [illegible] ಅವರ ಅಧ್ಯಕ್ಷತೆಯಲ್ಲಿ ಜರಗಿತು. [illegible] ಗ್ರಾಮಗಳಿಂದಲೂ [illegible] ಜನರು ಬಂದಿದ್ದರು ಮುಂಜಾನೆಯಲ್ಲಿ ಶಾರದಾ ಪೂಜೆ, [illegible] ಧಾರ್ಮಿಕ ವಿಧಿಗಳು ರಾತ್ರಿಯಲ್ಲಿ ವಿದ್ಯಾರ್ಥಿಗಳ [illegible] ಒಂದು ಯಕ್ಷಗಾನ ಪ್ರಸಂಗವೂ ನಡೆಯಿತು

[illegible] ಕಾನಡಾದಂತೆ [illegible] ಕಲಕತ್ತೆ [illegible] ಪೂರ್ವಕ [illegible] ಚಿತ್ರವನ್ನು [illegible] ವಿಧಿಸುತ್ತಿದ್ದಾರೆ.

— ಮುಂಬೈ ಸರಕಾರದ [illegible] ವಿರುದ್ಧ ಸರಕಾರದ ಗೋಚರ [illegible] ಅಧಿಕಾರಿಗಳು [illegible] ಹೈಕೋರ್ಟ ವ್ಯಾಯಾಮ [illegible] ದಿನ ಮುಂದೆ [illegible] ನ್ಯಾಯ [illegible] ತಾ ೨ರಿಂದ [illegible] ಬಂದಿರು ಲ್ಯಾಬ [illegible] ಸಚಿವ ಮೊರಾರಜಿ ದೇಸಾಯಿ [illegible] ನ್ಯಾಯಮೂರ್ತಿಗಳ [illegible] ಕೈಗೆ ಬಂದು [illegible] ಕೂಡಲೇ [illegible]

ಜಿಲ್ಲಾ ಸಮಾಚಾರ.

[illegible]

— R —

ಪತ್ರಿಕಾ-ಪ್ರಕಟನೆ

[illegible]

M Allahbaksh,

[illegible]

ಗೌ|| ಸಾ|| ಬ್ರಾ|| ಸ್ತ್ರೀ|| ಲೀಗ, ಮುಂಬಯಿ.

[illegible]

THE BANK OF RURAL INDIA LTD.

(Incorporated in British India, Liability of Members limited)

HEAD OFFICE — "Satvabhama Bhavan", KARWAR. N. K

Offices at — KARWAR, KUMTA SIRSI HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital .. Rs. 10,00,000,
Subscribed Capital .. Rs 5,00 000;
Paid-up Capital & Reserves .. Rs. 5,08,502-8-0

Rates of Interest on Deposits

Current a/c @ 1% p. a. *Savings Bank a/c @ 2%*

Fixed Deposits for 3 months @ 3% per annum.
" " for 6 months @ 3½%
" for 12 months or more @ 4%,

All kinds of modern Banking business transacted

Karwar, 14-2-1948

P X GRACIOUS.
MANAGING DIRECTOR

2349/4-B/KR of 49
Regional Transport Office,
Belgaum, 11-5-49

To

(1) All Stage Carriage Operators
(2) All the goods truck operators (plying for hire)
} in the Karnatak Region.

Subject:- Maximum and minimum fare and freight rates.

Sir, Sirs,

At its meeting held on 11-4-49 the Regional Transport Authority, K R, Belgaum, perused the Home Department Notification No 1449/5 dated 21-2-49 and approved of the fare and freight rates laid down in the said Notification (copy enclosed)

All the Stage Carriage Operators are therefore directed to charge fares at the uniform rate of nine pies per passenger per mile and to submit to this Office triplicate copies of the amended fare tables in respect of each route immediately Similarly, all the Public Carriers Permit-holders are hereby directed to charge freights at the uniform rate of 6 annas per ton mile and 12 annas per lorry mile

The Stage Carriage Operators and the Public Carrier Permit holders are further informed that the maximum and minimum fare and freight rates, laid down in the Notification will be entered in their permits as a condition of the permit

The above mentioned rates will come into effect from the date of this order

Yours Faithfully,
D. K. SUKHTANKAR,
Secretary,
Regional Transport Authority,
K R, Belgaum

NOTIFICATION.

Motor Vehicles Act, 1939

Home Department,
Bombay Castle, 21st Feb, 1949

No 1449/5 —*In exercise of the powers conferred by Sub-Section (1) of Section* 43 of the Motor Vehicles Act, 1939 and having regard to the provisions of clauses (a) to (d) of the said sub Section (1) and after having heard the representatives of the interests affected and having consulted the Provincial and Regional Transport Authorities concerned, the Government of Bombay, is pleased to fix the fares and freights specified in columns 4, 5 and 6 of the Schedule hereto appended as the maximum and minimum fares or freights for the class of Stage carriages or for Public Carriers specified in column 1 to be applicable in the area and on routes specified in columns 2 and 3 of the said Schedule.

S C H E D U L E.

Motor Vehicle 1	Area 2	Routes 3	Maximum 4	Minimum 5	Fares for special class. 6
(a) Stage Carriage other than that referred in (b)	Throughout the Province of Bombay	(i) On routes other than those referred to in (ii)	9 pies per passenger per mile	(a) 1 anna in Municipal or Cantonment areas (b) 3 annas in other areas.	If Upper Class is provided 50% more than the fares chargeable under column 4.
		(ii) On such routes as may be considered by the Regional Transport Authority to be difficult and uneconomic for operating a stage carriage and specified by him in this behalf	12 pies per passenger per mile		
(b) Stage Carriage it any is permitted to perform Special or Express service.	Throughout the province of Bombay	On all routes.		12 pies per passenger mile	- do -
(c) Public Carrier	Throughout the province of Bombay	On all routes		0-12-0 per lorry mile 0-6-0 per ton mile	Plus such additional surcharge varying from 25% to 33⅓% of basic rates if the Regional Transport Authority of the Region concerned consents to such surcharge

By the order of the Governor of Bombay,
V. T DEHEJIA.
Secretary to the Government of Bombay,
Home Department.

ಜಿಲ್ಲಾ ಸಮಾಚಾರ

(ನಮ್ಮ ಪ್ರತಿನಿಧಿಗಳಿಂದ)

ಗಾಂಧಿ ಸ್ಮಾರಕ ನಿಧಿ ಸಂಗ್ರಹಕ್ಕಾಗಿ ಹೊನ್ನಾವರದ ಪ್ರಮುಖ ವ್ಯಾಪಾರಸ್ಥರೂ ಸಾರ್ವಜನಿಕ ಸಂಸ್ಥೆಗಳವರೂ ನೀಡಿದ ದೇಣಿಗೆಗಳನ್ನು ಜಿಲ್ಲಾ ಧುರೀಣರು ನೋಡಿ ಸಂತೋಷಪಟ್ಟು ಸಂಸ್ಥೆಗೆ ದಾನ ಕೊಟ್ಟಿದ್ದಾರೆ, ಮತ್ತು ಪ್ರಯತ್ನಪಟ್ಟು ಅವುಗಳನ್ನು ಆ ಸಂಸ್ಥೆಯ ಅಧ್ಯಕ್ಷ ರಾ|| ಕೇದಗಾಂವಕರ ರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದ್ದಾರೆ.

(ತಾ. ೧೮-೫-೪೯) ಇಲ್ಲಿಯ ಓರ್ವ ಶೆಟ್ಟಿಗೆ ನ್ಯಾಯಾಲಯದ ರಾ|| ಎಲ್. ವ್ಹಿ. ಭಟ್ಟರು ಜಪ್ತಿಗೆ ಬಂದ ಹಲವು ಮರಗಳನ್ನು ಕೊಂಡುಕೊಂಡು ಕಡಿಸುತ್ತಾರೆ ಮತ್ತು ಅವುಗಳ ಮಾರಾಟ ಮಾಡುತ್ತಾರೆ. ಆದರಂತೆ ಅವರು ಕಳೆದ ವರ್ಷ ಮೊದಲಿಗರಾಗಿ ಗ್ರಾಮದ ಕೆಲವು ಗಿಡಗಳನ್ನು ಖರೀದಿ ಮಾಡಿಕೊಂಡು, ಅವುಗಳನ್ನು ರಪ್ತು ಮಾಡಲು ಜಂಗಲ ಅಧಿಕಾರಿಗಳ ಅಪ್ಪಣೆ-ಚೀಟಿ ಬೇಡಿದ್ದ ಆದರೆ ಬೌಂಡರಿಯಲ್ಲಿ ಈ ಮರಗಳಿದ್ದ ಭೂಮಿ ದಿವಾಣಿ ನ್ಯಾಯಾಲಯದಿಂದ ಜಪ್ತ ಮಾಡಲ್ಪಟ್ಟಿರುವದೆಂದು ತಿಳಿದು ಬಂದು ರಾ|| ಭಟ್ಟರು ಆಗ ತಮ್ಮ ಅರ್ಜಿಯನ್ನು ಹಾಗೆಯೇ ಇಡಲು ಜಂಗಲ ಅಧಿಕಾರಿಗಳಿಗೆ ತಿಳಿಸಿ, ತಾವು ಕೊಂಡು ಕೊಂಡ ಮರಗಳನ್ನು ಜಪ್ತಿಯಿಂದ ಬಿಟ್ಟುಕೊಡಲು ದಿವಾಣಿ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡರು. ನ್ಯಾಯಾಲಯದವರು ಕೆಲವೊಂದು ವಿಚಾರ ನಡೆಸಿ, ಮರಗಳ ಮೇಲಿನ ಜಪ್ತಿಯ ಸಂಬಂಧವನ್ನು ರದ್ದುಗೊಳಿಸಿದರು. ಈ ಸಂಗತಿಯನ್ನು ರಾ|| ಭಟ್ಟರು ಉತ್ತರ ಭಾಗದ ಜಂಗಲ ಅಧಿಕಾರಿಗಳಾಗಿರುವ ರಾ|| ಬಿ|| ಶಾಯಿತರವರಿಗೆ ತಿಳಿಸಿ, ತಮ್ಮ ಅರ್ಜಿಯಂತೆ ಮರಗಳನ್ನು ಕಡಿಯಲಿಕ್ಕೂ ಅವುಗಳ ರಪ್ತ ಮಾಡಲಿಕ್ಕೂ ತಮಗೆ ಅಪ್ಪಣೆ ಕೊಡಬೇಕೆಂದು ಬೇಡಿಕೊಂಡರು. ಈ ಮಾತಿಗೆ ಈಗ ಸುಮಾರು ೫-೬ ತಿಂಗಳುಗಳು. ಆದರೂ ರಾ|| ಬಿ|| ಶಾಯಿತರವರು ಇನ್ನೂ ಅಪ್ಪಣೆ ಕೊಡುವದಿಲ್ಲ! ಮರಗಳು ಜಪ್ತಿಯಿಂದ ಬಿಡುಗಡೆಯಾಗಿರುತ್ತವೆಂದು ಹಲವಾರು ಸಲ ಮನವರಿಕೆ ಮಾಡಿಕೊಟ್ಟರೂ ಅವರು ಅಂಜಿಕೊಳ್ಳುವರೇ! ದಿವಾಣಿ ನ್ಯಾಯಸ್ಥಾನವು ಕೊಟ್ಟಿರುವ ಜಪ್ತಿಯನ್ನು ಆ ನ್ಯಾಯಸ್ಥಾನವು ರದ್ದುಗೊಳಿಸಿದಂತೆ ನ್ಯಾಯಾಲಯದ ಸಹಿ-ಶಿಕ್ಕೆಯುಳ್ಳ ಹುಕುಮಿನ ನಕಲು ತೋರಿಸಿದರೂ, ಮಾಮಲೇದಾರರಿಂದ ತಮಗೆ ಈ ಜಪ್ತಿ ರದ್ದಾದ ಬಗ್ಗೆ ಬರೆದು ಬರಬೇಕೆಂದು ಹಟ ಹಿಡಿದು ಕೂತಿದ್ದಾರೆ! ನಮ್ಮಲ್ಲಿಯ ಜಂಗಲ ಅಧಿಕಾರಿಗಳ ಕಾರ್ಯ ಪದ್ಧತಿಯು ಇದೊಂದು ಮಾದರಿಯೆಂದು ಹೇಳಬಹುದು!

೨ ವರ್ಷಗಳ ಹಿಂದೆ ಯಲ್ಲಾಪುರ ತಾಲೂಕ ಕಚೇರಿಯಲ್ಲಿ ಪೂರ್ತಿಕೆ ಆಗಿದೆಯೆಂದು ಓರ್ವ ಅಧಿಕಾರಿಯು ಮೇಲೆ ತ್ತಿ ಎತ್ತಿದರೆಂದು ಪಟ್ಟಿಗೆ ಗುರಿಪಡಿಸಲ್ಪಟ್ಟ ಯಲ್ಲಾಪುರದ ರಾ|| ಅನಂತ ಭಟ್ಟ ಇವರಿಗೆ ಇಲ್ಲಿಯ ರೆಸಿಡೆಂಟ ಮ್ಯಾಜಿಸ್ಟ್ರೇಟರು ನಿನ್ನೆ ತೀರ್ಪು ಕೊಟ್ಟು, ರೂ ೧೦೦ ದಂಡ ವಿಧಿಸಿದ್ದಾರೆ.

ದಾಂಡೇಲಿಯೊಳಗಿನ ವಿಯಂತ್ರಿತ ಬೆಲೆ ಅಂಗಡಿಯವರು ೫-೬ ತಿಂಗಳ ಹಿಂದೆಯೇ ಬೆಲೆ ಏರುತ್ತಿದ್ದರು ಆ ನಂತರ ಬೆಲೆಯನ್ನೇ ಏರ್ಪಡಿಸಿದ್ದಾರೆ! ಆದರಿಂದ ಅಲ್ಲಿಯ ಬಡವರಿಗೆ ಸೋಸಿ ದರದ ಅನ್ನ ಸಿಗಲೊಲ್ಲದು ಅವರು ಅಳಿಯ ಹರಳು ಬಟ್ಟೆಗಳನ್ನೇ ಹಾಕಿಕೊಂಡು ಜೀವಿಸುವರೂ ಕಾಲವರೆಗೆ ಮಾತಾಡಬೇಕಾದ ಪ್ರಸಂಗ ಬಂದಿರುತ್ತದೆಂದು ದಾಂಡೇಲಿಯ ವರದಿಗಾರರು ಬರೆಯುತ್ತಾರೆ.

ಯಲ್ಲಾಪುರ— ಈ ಪಟ್ಟಣದ ಮುಖ್ಯ ಶಾಲೆಗೆ ಇಲ್ಲಿಯ ಗಂಡು ಮಕ್ಕಳ ಶಾಲೆಯಿಂದ ೧೩ ಮಂದಿ ಕಳಿಸಿದ್ದರು. ಅವರಲ್ಲಿ ೮ ಮಂದಿ ಉತ್ತೀರ್ಣರಾಗಿದ್ದಾರೆ.

ಮುಂಡಗೋಡ— (ತಾ. ೧೮-೫-೪೯) ಇಲ್ಲಿ ನಾಲ್ಕು ತಿಂಗಳ ಹಿಂದೆ ರಾ|| ಶೇಷಗಿರಿ ಇವರಿಗೆ ಸೇವಾದಳದ ಪಟ ಪ್ರಮುಖ ಸ್ಥಾನದ ದಳಪತಿ ಆಗಿ ಅಧಿಕಾರಿಯನ್ನಾಗಿ ವರ್ಗ ಮಾಡಿ, ಇಲ್ಲಿ ರಾ|| ವ್ಹಿ ಎಮ್ ಕಾಮತರನ್ನು ನೇಮಿಸಿರುತ್ತಾರೆ. ರಾ|| ಕೋರೆಗಲ್ಲ ಇವರು ಇಲ್ಲಿ ಬಂದು ಬರೇ ೫-೬ ತಿಂಗಳಾಯಿತು. ಅವರು ಬೇಸಾಯ ಶಾಸ್ತ್ರದ ಪದವೀಧರರಿದ್ದು, ಇಂಥವರ ಯೋಜನೆ ರಾಜ್ಯಪೂರ ಯೋಜನೆ ವಗೈರೆ ಬೇಸಾಯಕ್ಕೆ ನಿಕಟ ಸಂಬಂಧವುಳ್ಳ ಯೋಜನೆಗಳಲ್ಲಿ ಆಸ್ಥೆಯಿಂದಲೂ ಆಸಕ್ತಿಯಿಂದಲೂ ಭಾಗವಹಿಸುತ್ತಿದ್ದರು. ಬೇಸಾಯಗಾರರಿಗೆ ಉಪಯುಕ್ತ ಸೂಚನೆ-ಸಲಹೆಗಳನ್ನೂ ಕೊಡುತ್ತಿದ್ದರು. ಆದರಿಂದ ಅವರ ವರ್ಗಾವಣೆಯಿಂದ ಇಲ್ಲಿಯ ಜನರಿಗೆ, ವಿಶೇಷವಾಗಿ ಬೇಸಾಯಗಾರರಿಗೆ ಬಹಳ ಅಸಮಾಧಾನವಾಗಿದೆ. ರಾ|| ಕೋರೆಗಲ್ಲರನ್ನು ಇನ್ನೂ ವರ್ಷದ ತಿಂಗಳು ಇಲ್ಲಿಯೇ ಇಟ್ಟರೆ ಒಳಿತಾಗುವದೆಂದು ಅವರ ಅಂಬೋಣವಿದೆ. ಮೇಲಧಿಕಾರಿಗಳು ಈ ಲೋಕಾಭಿಪ್ರಾಯಕ್ಕೆ ಲಕ್ಷಗೊಟ್ಟು ಈ ವ್ಯವಸ್ಥೆ ಮಾಡಲಿ, ಯಾತಕೆ ಮನ್ನಣೆ ಕೊಡಬಾರದು?

ಈ ಸಾಲಿಯ ಮುಲ್ಕೀ ಪರೀಕ್ಷೆಗೆ ಮುಂಡಗೋಡ ತಾಲೂಕಿನ ೮ ಶಾಲೆಗಳಿಂದ ಹಲವಾರು ವಿದ್ಯಾರ್ಥಿಗಳು ಉತ್ತೀರ್ಣರಾಗಿ ರುವರಂತೆ.

ಶಿರಸಿ— ಇಲ್ಲಿನ ಬೆಳೆಯುವ ಪಟ್ಟಣದೊಳಗಿನ ಕಲ್ಲಿದ್ದಲು ಗಣಿಗಳು ಕೊಡುವ ಪ್ರಾಂತ ಮತ್ತು ದೇಶದ ಕಲ್ಯಾಣ ಇವು ಒಂದೇ ಅಭಿಪ್ರಾಯದಲ್ಲಿ ಬಂದವರು ಅದಕ್ಕೆ ಆರ್ಥಿಕ ಅಭಿವೃದ್ಧಿ ಯಾಗುವಂತಿಲ್ಲ. ಇದರಿಂದ ಕರ್ನಾಟಕ ಏಕೀಕರಣವಾಗಬೇಕು, ಅದಕ್ಕೆ ಸಂಪೂರ್ಣ ಧನದ ಬಗ್ಗೆ ಶಿರಸಿಯಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸಬೇಕು ಎಂದು ಮುಂಬಯಿ ಅಸೆಂಬ್ಲಿಯ ಮಾಜಿ ಸದಸ್ಯರು ಕೆಲವು ದಿನ ಇಲ್ಲಿ ವಾಸ ಮಾಡಿದರು. ಈ ಕೆಲಸಕ್ಕಾಗಿ ಅವರು ಭಾರತ ಸರಕಾರದ ಕೇಂದ್ರ ಮಂತ್ರಿಗಳಾದ ಡಾ|| ಶ್ಯಾಮಪ್ರಸಾದ ಮುಖರ್ಜಿ, ಕೇಂದ್ರ ಸಂಸತ್ತಿನ ಅನೇಕ ಸದಸ್ಯರು ಮತ್ತು ಕರ್ನಾಟಕದ ನಾಯಕರನ್ನು ಕಂಡಿದ್ದರು. ಈಗ ಬೇಸಿಗೆ ಅದಕ್ಕೆ ಅನುಕೂಲವೆಂದು ಅವರು ಪ್ರಯತ್ನ ಮಾಡಬೇಕೆಂದು ಕೆಲವು ಅಧಿಕಾರಿಗಳು ತಿಳಿಸಿದ್ದಾರೆ. ಸಿ. ಪಿ. ರಾಮಸ್ವಾಮಿ ಅಯ್ಯರ್ ಅವರ ಪೂರ್ವ ಸಿದ್ಧತೆಯಂತೆ ಕೇಂದ್ರದ ಸೇವಾವಲಯದವರು ಅತ್ಯಂತ ಉತ್ಸಾಹದಿಂದ ಕೆಲಸ ಮಾಡುತ್ತಿರುವರು. ಈ ಸಂಶೋಧನ ಕೇಂದ್ರದಲ್ಲಿ ಅನೇಕ ಪ್ರಯೋಗಗಳು ನಡೆಯುವವು. ಇದರಿಂದ ಕರ್ನಾಟಕದ ಆರ್ಥಿಕ ಪರಿಸ್ಥಿತಿ ಸುಧಾರಿಸುವದು. ರಾ|| ಕಾಮತರು ಇದಕ್ಕಾಗಿ ರಾ|| ಜನರಲ್ ಕಾರ್ಯಪ್ಪನವರೊಡನೆ ಚರ್ಚಿಸಿದ್ದರು.

ಅದಕ್ಕೆ ಸರಕಾರದ ಸಂಗಡ ಸಹಕರಿಸಿದ ಮಾನವಸೇವೆಯ ಕಾರ್ಯಕರ್ತರುಗಳಿಗೆ ತಿಳಿಸಿ ಇಟ್ಟು ಬಗ್ಗೆ ಸರಕಾರಕ್ಕೆ ಪ್ರತಿನಿಧಿಗಳು ಬಂದ ಕೋರಿಕೆಗಳನ್ನು ಅವರು ತಂದು ಸರಕಾರದ ಕಾರ್ಯಕರ್ತರಿಗೆ ಸಲ್ಲಿಸುವ ಒಂದು ಭಾಗ ಕಟ್ಟಿ ನಾಟಕರಂಗದ ಕಾರ್ಯಕರ್ತರು ನೋಡಲು ೧೯೪೯ನೇ ಇಸವಿ ಬಂದ ಕೋಟೆಗಾರ ಪ್ರತಿನಿಧಿಗಳು ಬೇರೆ ಕ್ಷೇತ್ರದಲ್ಲಿ ಹಾಕಲು ಕೊಡಬೇಕೆಂದು ಹೇಳುವುದು ಅನ್ಯಾಯವೆಂದೂ ಶಾಲೆಗೆಯಿಂದಲೂ ಅವರ ಅಭಿಪ್ರಾಯವಾಯಿತು. ಸರಕಾರದ ಕಾರ್ಯಕರ್ತರಿಂದ ಮೊದಲು ಮಾಡಿದ ಕಾರ್ಯಕ್ರಮ ವಿವರ ಸಂಪಾದನೆಯು ಎಲ್ಲ ಕಾರ್ಯಕ್ರಮವನ್ನು ನಾವು ಕೇಳಿದೆವು. ಶ್ರೀ ಶ್ರೀ ಕುಮಾರ ಅವರ ಪರಿಚಯ ಹಾಗೆ ಮಾಡಿ ಅಧ್ಯಕ್ಷರು ಕಾರ್ಯ ಕರ್ತರ ಪ್ರಶಂಸೆ ಮಾಡಿದರು. ಅದು ಬೇಸರವಾಯಿತು!

ಯಕ್ಷಗಾನ ಸಮ್ಮೇಳನವು ಕೊನೆಗೆ ರಾ|| ಶಂಭು ಹೆಗಡೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಬೆಳೆಯುತ್ತಿರುವ ಯಕ್ಷಗಾನ ಪದ್ಧತಿಗಳಲ್ಲಿ ತಕ್ಕ ಸುಧಾರಣೆ ಮಾಡಿ ಅವುಗಳಿಗೆ ಏಕರೂಪತೆಯನ್ನು ಕೊಡಬೇಕೆಂದು ಸಮ್ಮೇಳನದಲ್ಲಿ ನಿಶ್ಚಯ ಒಂದು ತೀರ್ಮಾನವಾಯಿತು.

ಶ್ರೀ ಮಾರಿಕಾಂಬಾ ದೇವಾಲಯದ ಭಂಡಾರದ ಸಂಬಂಧದಲ್ಲಿ ಆರ್ಯವಾದರವಳಿಗೆ ಆದ ತೀರ್ಪಿನ ವಿರುದ್ಧ ನೆಕ್ಕಿಕೇರಿಯವರು ಮುಂಬಯಿಯ ಹಾಯಕೋರ್ಟಿನಲ್ಲಿ ಅಪೀಲು ದಾಖಲ ಮಾಡಿದ್ದಾರೆ. ಹೈಕೋರ್ಟಿನ ಡಿಕ್ರಿಯ ಅಮಲುಜಾರಿಗೆ ತಡೆಹಾಕಬೇಕೆಂದು ನೆಕ್ಕಿಕೇರಿಯವರು ಮಾಡಿದ ಅರ್ಜಿಯ ಮೇಲೆ, ದೇವಸ್ಥಾನದ ಮೇಲಿನ ಜಪ್ತಿ ರದ್ದು ಆಗಬೇಕು ತಾ. ೧೮ನೇ ಜುಲೈ ವರೆಗೆ ಡಿಕ್ರಿಯ ಅಮಲುಜಾರಿಯನ್ನು ಮುಂದಕ್ಕೆ ಹಾಕಲಾಯಿತು. ಆದಾಗ್ಯೂ ಜಾತ್ರೆ ನಡೆಯುವಂತೆ ವ್ಯವಸ್ಥೆ ಮಾಡಲು ಕಾರ್ಯಕಾರಿ ಮಂಡಳಿಯನ್ನು ನೇಮಿಸಲು ಗಾದಿಯವರು ಬೇಕಾದ ವ್ಯವಸ್ಥೆ ಮಾಡುತ್ತಾರೆಂದು ಸುದ್ದಿ ಬಂದಿದೆ.

ಮಲೆನಾಡಿನ ಸೀಮೆಯ ಒಕ್ಕಲಿಗರಿಗೆ ಭತ್ತದ ಬೀಜ, ಗೊಬ್ಬರ, ಬೇಸಾಯದ ಉಪಕರಣಗಳು ಮೊದಲಾದವನ್ನು ಪೂರೈಸಲು ಈ ತಿಂಗಳ ಪ್ರಾರಂಭದಿಂದ ಬೇಸಾಯ ಇಲಾಖೆಯವರು ಹುಲೇಕಲ್ಲದಲ್ಲಿ ಒಂದು ಕೇಂದ್ರ ತೆರೆದಿದ್ದಾರೆ. ರಾ|| ಆರ್. ಎಸ್. ಭಟ್ಟ ಎಂಬವರು ಅದರ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿದ್ದಾರೆ.

ಸಿದ್ದಾಪುರ— (ತಾ. ೧೫-೫-೪೯) ತಾಲೂಕಿನ ಗ್ರಾಮದಲ್ಲಿ ಶ್ರೀ ಸರಕಾರ ಸರ್ಕಾರೀ ವಾಚನಾಲಯ ವೆಂಬ ವಾಚನಾಲಯವೊಂದು ತೆರೆಯಲ್ಪಟ್ಟಿದೆ. ಕಳೆದ ಮುಕ್ಕರ ಸಂವತ್ಸರದಿಂದ ಈಗ ಈ ವಾಚನಾಲಯಕ್ಕೆ ಸರಕಾರ ದವರಿಂದ ವರ್ಷಕ್ಕೆ ರೂ ೭೫-೦-೦ ಇದರ ಅನುದಾನವು ದೊರೆತು, ರೂ ೧೫-೦-೦ ಇದು ಆಡಳಿತಕ್ಕೆ ಕೆಲ್ಸ ಉಳಿಯುವಂತೆ ಕಾರ್ಯಕರ್ತರುಗಳು ತಿಳಿಸುತ್ತಾರೆ.

ಹಳಗೇರಿ ಶಾಲೆಯಲ್ಲಿ ಈಗ ಇದ್ದ ಶಿಕ್ಷಕರು ವರ್ಗವಾಗಿ ಹೋದ ಮೇಲೆ ಈಗ ಈ ಶಾಲೆಯಲ್ಲಿ ಬರೇ ವಿದ್ಯಾರ್ಥಿಗಳಿದ್ದಾರೆ. ಆದರೆ ಶಿಕ್ಷಕರು ಇಲ್ಲವೇ! ಒಬ್ಬ ಶಿಕ್ಷಕರು ೪ ಎಲ್ಲ ವರ್ಗಗಳನ್ನು ನಡೆಸಿಕೊಂಡು ಹೋಗಬೇಕಾದರೆ ೧೫ ಮಂದಿ ವಿದ್ಯಾರ್ಥಿಗಳಿಗೆ ಕಲಿಸುವದರಲ್ಲಿ ಅನೇಕ ತೊಂದರೆಗಳಾಗುತ್ತವೆ. ಆದರಿಂದ ಇನ್ನೊಬ್ಬ ಶಿಕ್ಷಕರನ್ನು ನೇಮಿಸಬೇಕೆಂದು ಗ್ರಾಮಸ್ಥರು ಶಾಲಾ ಶಿಕ್ಷಣಾಧಿಕಾರಿಗಳಿಗೆ ಅರ್ಜಿ ಮಾಡಿದ್ದರು. ಆದರೆ ಆ ಅಧಿಕಾರಿಗಳು ಇನ್ನೊಬ್ಬ ಶಿಕ್ಷಕರನ್ನು ನೇಮಿಸುವದು ಶಕ್ಯವಿಲ್ಲವೆಂದೂ 'ಶಿಕ್ಷಕ ಪ್ರಾಪ್ತಿಯಿಂದ ಶಿಕ್ಷಣ ಕೊಡಬೇಕೆಂದೂ' ಉತ್ತರಿಸಿದ್ದಾರಂತೆ! ಒಬ್ಬ ಶಿಕ್ಷಕರು ಮಕ್ಕಳೆಲ್ಲರ ಕಾಲಗಳನ್ನು ಕಳೆದು ಬಿಡುವದು ಆಯಿತು ವಿದ್ಯಾರ್ಥಿಗಳನ್ನು ಬೆಲೆಯಾಡಿದ ಮಾತ! ಒಂದೊಂದೆ ಶಿಕ್ಷಣದ ಸಮಸ್ಯೆಯು ಬೇರೆಯಾಗಿ ಪರಿಶೀಲಿಸಿಯಿಂದ ಅದು ಒಂದು ಶಿಕ್ಷಣವು ಎಂದೂ ಸಮಾಧಾನಕರವಾಗುವದಿಲ್ಲ! ಈ ಮಾತು ವಿದ್ಯಾಧಿಕಾರಿಗಳಿಗೆ ತಿಳಿಯದಿದ್ದದ್ದು ಸೋಜಿಗವೇ ಸೈ! ಇಂತಹ ಅಧಿಕಾರಿಗಳ ಕೈಯಿಂದ ಶಿಕ್ಷಣದ ಸುಧಾರಣೆಯಾಗುವದೆಂಬ ಆಶೆ ಹಿಡಿಯಬಹುದೇ?

Mirjanker & Co., ಧಾರಣೆಗಳು. ಕುಮಟಾ, 21-5 49

CYCLE DEALERS, KUMTA. N. Kanara

		ಹೋಲಸೇಲ ದರ (ಮಣದ ಲೆಕ್ಕ)	ರಿಟೇಲ ದರ (ಖಂಡಿ ಲೆಕ್ಕ)
ಅಡಕೆ	(ಚೋಟಿ ಭಾವ)	೮೨—೦—೦	೬—೧೪—೦
ಅಡಕೆ	(ಲಿವ. ಡಾ)	೭೬—೦—೦	೬—೧೨—೦
ಅಡಕೆ	(ಲಿವ. ಡಾ)	೧೧೨—೦—೦	೯—[illegible]—೦
ಮೆಣಸಿಗ	(ಹರಣಿ ಬಾರ)	೧೧೨—೦—೦	೯—೧[illegible]—೦
ಗಜ್ಜರ	(ಸಿಸಿ ಬೆಂಡ್ಲ)	೧೨—೦—೦	[illegible]

ಇದನ್ನು ಹೊನ್ನಾವರದ ಕೃಷ್ಣ ಶಿವನ ಭಾಗವತ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಶ್ರೀ ಜನಸೇವಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲದ್ವಾರಾ ವರ್ಷಕ್ಕೆ ೩-೧೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ವ್ಯ. ಕಿ. ಮುಂದ ಹಣಕೊಡುವವರು
ವ್ಯ.ಪಿ. ವೆಚ್ಚ ೬ ಆಣೆ ಹೆಚ್ಚಿಗೆ
ಕೊಡಬೇಕು. ಲೇಖಕರ ಹಣವನ್ನು
ಮುಂಗಡ ಕಳಿಸತಕ್ಕದ್ದು

Reg. No. B. 1270.   Monday, 30-5-1949.

ಕಾನಡಾವೃತ್ತ

ವರ್ಷ ೩೧] THE KANARA NEWS [ಸಂಚಿಕೆ ೪೮

ಕುಮಟಾ ಸೋಮವಾರ, ತಾ ೩೦—೫—೧೯೪೯

ಜಾಹೀರಾತುಗಳ ದರ:
೧ ಇಂಚು ಉದ್ದ
೧ ಸಾರೆಗೆ ೮ ಆಣೆಯಂತೆ.
ವಿಶಿಷ್ಟ ಜಾಹೀರಾತುಗಳ
ಜಾಹೀರಾತುಗಳ ಬಗ್ಗೆ ಹೆಚ್ಚು
ಟಪ್ಪಾಲ ಪತ್ರವ್ಯವಹಾರ
ತಿಳಿಸಲಾಗುವದು.

ವಿವಿಧ ವಿಷಯಗಳು

ಬರುವ ಜೂನ ತಾ ೧೦ರಿಂದ ಆಗ್ರಾ-ಪ್ರಯಾಗಗಳ ನಡುವೆ, ಪಾಟಣಾ-ಗಯೆಗಳ ನಡುವೆ, ನಾಗಪುರ-ಜಬಲಪುರಗಳ ನಡುವೆ, ಕಾಶಿ-ಪ್ರಯಾಗಗಳ ನಡುವೆ ಮತ್ತು ಲಖನೌ-ಕಾನಪುರಗಳ ನಡುವೆ ದೇವನಾಗರಿ ಲಿಪಿಯಿಂದ ಹಿಂದೀ ಭಾಷೆಯಲ್ಲಿ ಬರೆದ ತಂತಿಗಳನ್ನು ತಂತೀಇಲಾಖೆಯವರು ಸ್ವೀಕರಿಸಿ ಕಳಿಸಿಕೊಡುವರೆಂದು ಪ್ರಕಟವಾಗಿದೆ ಈ ಹಿಂದೀ ತಂತಿಗಳು ಮುಂಜಾನೆಯ ೯|| ಘಂಟೆಯಿಂದ ಸಂಜೆಯ ೪|| ತನಕ ಮಾತ್ರ ಸ್ವೀಕರಿಸಲ್ಪಡುವವೆಂಬದೊಂದು ನಿರ್ಬಂಧವುಂಟು. ಹಾಸಲು ಮತ್ತು ಇನ್ನಿತರ ಇಂಗ್ಲಿಷ ಭಾಷೆಯಲ್ಲಿ ಕಳಿಸಿದ ತಂತಿಗಳಿಗೆ ಅನ್ವಯಿಸುವ ನಿಯಮಗಳೇ ಈ ತಂತಿಗಳಿಗೆ ಅನ್ವಯಿಸುವವು ಈ ಪ್ರಯೋಗ ಯಶಸ್ವಿಯಾದರೆ ಸಮಸ್ತ್ರಬದಿಗೂ ಅದನ್ನು ಬಳಕೆಯಲ್ಲಿ ತರುವರು

***

ಕಳೆದ ಮಾರ್ಚ ತಿಂಗಳ ಉತ್ತರಾರ್ಧದಲ್ಲಿ ಹೈದರಾಬಾದ ಸಹಿತ ಇಡೀ ಹಿಂದುಸ್ಥಾನದ ಸಕ್ಕರೆಯ ಕಾರಖಾನೆಗಳಲ್ಲಿ ೩೦,೧೭,೦೦೦ ಮಣ ಸಕ್ಕರೆ ತಯಾರಾಯಿತು; ೩೨,೭೨,೦೦೦ ಮಣ ಸಕ್ಕರೆ ಪೇಟೆಗಳಿಗೆ ಹೋಯಿತು; ಮತ್ತು (ಹಿಂದಿನ ಶಿಲ್ಕು ೭,೪೪,೮೨,೦೦೦ ಮಣ ಹಿಡಿದು) ೧,೫೨,೬೭,೦೦೦ ಮಣ ಸಕ್ಕರೆ ಶಿಲ್ಕು ಉಳಿಯಿತು. ತಾ. ೧-೧೧-೪೮ರಿಂದ ಮಾರ್ಚ ಕೊನೆಯ ವರೆಗೆ ತಯಾರಾದ ಸಕ್ಕರೆ ೨,೨೮,೫೫,೦೦೦ ಮಣಗಳಷ್ಟಿದ್ದು ಪೇಟೆಗೆ ಕಳಿಸಿದ ಸಕ್ಕರೆ ೧,೯೯,೭೨,೦೦೦ ಮಣಗಳಷ್ಟಿರುತ್ತದೆ ಹಿಂದುಸ್ಥಾನದಲ್ಲಿ ಸದ್ಯಕ್ಕೆ ೧೬೪ ಸಕ್ಕರೆಯ ಕಾರಖಾನೆಗಳುಂಟು.

***

ವಿಮೆಯ ಮಹತ್ವವನ್ನೀಗ ಯಾರಿಗೂ ತಿಳಿಸಿ ಹೇಳಬೇಕಾದ್ದರ ಅಗತ್ಯವಿಲ್ಲ. ಸ್ವತಃ ತನ್ನ ಮೇಲೆ ಬವಣೆ ಬಹುದಾದ ಹಾಗೂ ತನ್ನ ಹಿಂದೆ ತನ್ನನ್ನು ಅವಲಂಬಿಸಿರುವವರ ಕಷ್ಟ-ನಿವಾರಣೆಗಾಗಿ ದುಡಿಯುವ ಪ್ರತಿಯೊಬ್ಬನೂ ವಿಮೆ ತೆಗೆದು, ತನ್ನ ದುಡಿತದೊಳಗಿಂದ ಕೆಲವೊಂದು ಭಾಗವನ್ನು ನೇಮದಿಂದ ಉಳಿತಾಯ ಮಾಡುವ ವ್ರತವನ್ನು ಸ್ವೀಕರಿಸಿ ಪಾಲಿಸುವದೊಳಿತು ಹಿಂದುಸ್ಥಾನದಲ್ಲಿ ವಿಮೆಯ ಪ್ರಚಾರ ಇನ್ನೂ ಸಾಕಷ್ಟಾಗಿಲ್ಲೆಂದು ಹೇಳಬಹುದು. ೧೯೪೭ರಲ್ಲಿ ಅಂತು ೭೪೯ ಕೋಟಿ ರೂ. ಮೊಬಲಗಿನ ೨೯ ಲಕ್ಷ ವಿಮಾ-ಪತ್ರಗಳು ಇಳಿಸಲ್ಪಟ್ಟಿದ್ದವು. ೧ ಲಕ್ಷ ೭೪ ಸಾವಿರ ಜನರು ಈವಾಗ ಭಾರತೀಯ ವಿಮಾ-ಸಂಸ್ಥೆಗಳ ಪ್ರತಿನಿಧಿಗಳಾಗಿ ದುಡಿಯುತ್ತಿದ್ದಾರೆ. ೧೯೪೭ರಲ್ಲಿ ಎಲ್ಲ ವಿಮಾ ಸಂಸ್ಥೆಗಳಿಗೆ ಕೂಡಿ ೪೦ ಕೋಟಿ ರೂ ಉತ್ಪನ್ನ ಸಿಕ್ಕಿತ್ತೆಂದೂ ೧೧ಕೋಟಿ ರೂ.ಗಳು ವಿಮೆ ತೆಗೆದವರಿಗೆ ಇಲ್ಲವೆ ಅವರ ವಾರಿಸದಾರರಿಗೆ ಹಂಚಲ್ಪಟ್ಟವೆಂದೂ ವರದಿಯಾಗಿದೆ.

***

ಹಿಂದುಸ್ಥಾನದಲ್ಲೀಗ ೨ ಕಾರಖಾನೆಗಳು ಕಾಲುಗಾಡಿ (ಸೈಕಲ್ಲು)ಗಳನ್ನು ತಯಾರಿಸುತ್ತಿವೆ ೧೯೪೬ರಲ್ಲಿ ಇವು ೪೬ ಸಾವಿರ ಕಾಲುಗಾಡಿಗಳನ್ನು ತಯಾರಿಸಿದವಂತೆ. ಈ ಉದ್ಯೋಗದಲ್ಲಿ ಇತ್ತಲಾಗಿ ಕೆಲವು ಸುಧಾರಣೆಗಳಾಗಿದ್ದು, ೧೯೪೯, ೧೯೫೦, ೧೯೫೧ ಈ ಮೂರು ವರ್ಷಗಳಲ್ಲಿ ಅನುಕ್ರಮವಾಗಿ ೩೫ ಸಾವಿರ, ೭೦ ಸಾವಿರ ಮತ್ತು ೮೦ ಸಾವಿರ ಕಾಲು-ಗಾಡಿಗಳು ತಯಾರಿಸಲ್ಪಡುವವೆಂದು ಕಾರಖಾನೆಗಳ ಚಾಲಕರು ಹೇಳುತ್ತಿದ್ದಾರೆ ಈ ಉತ್ಪತ್ತಿಗಿಂತ ಜನರ ಬೇಡಿಕೆ ಬಹಳವಿದೆ. ೧೯೪೮ರ ಮೊದಲನೇ ೧೦ ತಿಂಗಳಲ್ಲಿ ಹಿಂದುಸ್ಥಾನ-ಪಾಕಿಸ್ತಾನಗಳಲ್ಲಿ ಕೂಡಿ ೨ ಲಕ್ಷ, ೧೬ ಸಾವಿರ ಕಾಲುಗಾಡಿಗಳು ಆಮದು ಆಗಿವೆಯಂತೆ.

***

೧೯೪೮—೧೯೪೯ನೇ ವರ್ಷದಲ್ಲಿ ಇಡೀ ಹಿಂದುಸ್ಥಾನದೊಳಗೆ ೩೭||ಲಕ್ಷ ಎಕರೆ ಭೂಮಿಯಲ್ಲಿ ಕಬ್ಬು ಬೆಳೆಸಲ್ಪಟ್ಟಿತ್ತು ಈ ಕಬ್ಬಿನಿಂದ ೪೯ ಲಕ್ಷ, ೮೪ ಸಾವಿರ ಬೆಲ್ಲವಾಗುವದೆಂದು ಸರಕಾರದವರು ಲೆಕ್ಕ ಹಾಕಿದ್ದಾರೆ. ಹಿಂದಿನ ವರ್ಷಕ್ಕಿಂತ ೪೦|| ಲಕ್ಷ ಎಕರೆಗಳಲ್ಲಿ ಕಬ್ಬು ಬೆಳೆದಿತ್ತು; ಮತ್ತು ಅದರಿಂದ ೫೮ ಲಕ್ಷ ಮಣ ಬೆಲ್ಲವಾಗಿತ್ತು ೧೯೪೮—೧೯೪೯ರಲ್ಲಿ ಪೂರ್ವ ಪಂಜಾಬ, ಸಂಯುಕ್ತ ಪ್ರಾಂತ, ಹೈದರಾಬಾದ ಮತ್ತು ಮದ್ರಾಸ ಈ ಭಾಗಗಳಲ್ಲಿ ಕಬ್ಬಿನ ಸಾಗುವಳಿ ಕಡಿಮೆಯಾಗಿತ್ತಂತೆ.

***

ಹಿಂದುಸ್ಥಾನದೊಳಗಿನ ಗ್ರಾಮಾಂತರಗಳಲ್ಲಿ ೪ ಕೋಟಿ ತಾಳೇ ಮರಗಳೂ ೧ ಕೋಟಿ "ಖಜೂರಿ" ಮರಗಳೂ ಇವೆಯೆಂದು ಲೆಕ್ಕ ಮಾಡಲ್ಪಟ್ಟಿದೆ ಈ ಮರಗಳ ರಸದಿಂದ ಬೆಲ್ಲ ಮಾಡುವದು ಸಾಧ್ಯವುಂಟು ಆದರೆ ಈ ಮರಗಳು ಹಳ್ಳಿಗಳಲ್ಲಿ ಅಲ್ಲಲ್ಲಿ ಹಬ್ಬಿಕೊಂಡಿರುವದರಿಂದ ದೊಡ್ಡ ಪ್ರಮಾಣದ ಕಾರಖಾನೆ ಹಾಕಿ ಅವುಗಳ ಬೆಲ್ಲ ತಯಾರಿಸಬರುವಂತಿಲ್ಲ ಇದೊಂದು ಹಳ್ಳಿಯ ಉದ್ಯೋಗವಷ್ಟೇ ಆಗಬಲ್ಲದು ಈ ೫ ಕೋಟಿ ಮರಗಳ ರಸದಿಂದ ಬೆಲ್ಲ ಮಾಡಲಾರಂಭಿಸಿದರೆ ಸುಮಾರು ೫೦ ಲಕ್ಷ ಕುಟುಂಬಗಳಿಗೆ ಜೀವನೋಪಾಯ ದೊರಕಿಸಿಕೊಟ್ಟಂತಾಗುವದೆಂದು ತಜ್ಞರ ಅಭಿಪ್ರಾಯವಾಗಿದೆ ಈ ಮರಗಳು ಬಹುಕಾಲ ಬಾಳುತ್ತವಾದ್ದರಿಂದಲೂ, ಹಾಳು ಬೀಳುವ ಭೂಮಿಗಳಲ್ಲಿ ಕೂಡ ಅವು ಬೆಳೆಯುತ್ತವಾದ್ದರಿಂದಲೂ, ಕಬ್ಬಿಗಾಗುವಂತೆ ಕಾಡು ಪ್ರಾಣಿಗಳಿಂದ ಈ ಮರಗಳಿಗೆ ಬಾಧೆ ತಟ್ಟುವದಿಲ್ಲವಾದ್ದರಿಂದಲೂ ಈ ಉದ್ದಿಮೆ ಹೆಚ್ಚು ಸುರಕ್ಷಿತ ಹಾಗೂ ಸುಲಭ ಸಾಧ್ಯ ಉದ್ದಿಮೆಯಾಗಿರುತ್ತದೆ. ೭೦ ತಾಳೇ ಮರಗಳಿಂದ ರೂ ೧೫೦೦ ಬೆಲೆಯ ೬೦೦೦ ರತ್ತಲ ಬೆಲ್ಲವನ್ನು ತಯಾರಿಸಬಹುದಂತೆ. ಇಷ್ಟು ಬೆಲ್ಲ ತಯಾರಿಸಲು ರೂ ೧೫೦ಕ್ಕಿಂತ ಹೆಚ್ಚಿಗೆ ವೆಚ್ಚ ಬರಲಿಕ್ಕಿಲ್ಲವೆಂದು ಬಲ್ಲವರು ಹೇಳುತ್ತಾರೆ. ಅಂದರೆ ಸರ್ವಸಾಧಾರಣವಾಗಿ ೭೦ ತಾಳೇ ಮರಗಳಿಂದ ರೂ. ೧೩೫೦ರಷ್ಟು ನಿವ್ವಳ ಲಾಭ ಪಡೆಯಬರುವಂತಿದೆ ಬೆಲ್ಲ ಮಾಡುವ ಈ ಹೋತೆಯನ್ನು ವರ್ಷದಲ್ಲಿ ೬ ತಿಂಗಳು ಮಾತ್ರ ಮಾಡಬಹುದು. ಈ ಅವಧಿಯಲ್ಲಿ ಯಾರೊಬ್ಬನು ತನ್ನ ಮಡದಿ-ಮಕ್ಕಳೊಡನೆ ಈ ಹೋತೆ ನಡಿಸಿ ತಿಂಗಳೊಂದಕ್ಕೆ ರೂ ೭೫ ಗಳಿಸಬಹುದಂತೆ ೧೫೦ 'ಖಜೂರಿ' ಮರಗಳಿಂದ ರೂ ೭೫೦ ಬೆಲೆಯ ೩೦೦೦ ರತ್ತಲ ಬೆಲ್ಲ ತಯಾರಿಸಬರುತ್ತದೆಂತಲೂ, ಈ ಬಗ್ಗೆ ವೆಚ್ಚ ಬರೇ ರೂ ೧೦೦ ಬರುತ್ತದೆಂತಲೂ ತಜ್ಞರು ತಿಳಿಸುತ್ತಾರೆ. ಮುಂಬಯಿ, ಮಧ್ಯಪ್ರಾಂತ, ಸಂಯುಕ್ತ ಪ್ರಾಂತ, ಪೂರ್ವ ಪಂಜಾಬ, ಪಶ್ಚಿಮ ಬಂಗಾಲ ವಗೈರೆ ಪ್ರಾಂತಗಳ ಸರಕಾರಗಳು ಈ ಗೃಹ-ಉದ್ದಿಮೆಗೆ ಪ್ರೋತ್ಸಾಹ ಕೊಡುವ ಯೋಜನೆಗಳನ್ನು ಈಗಾಗಲೇ ಕೈಕೊಂಡಿರುತ್ತಿದ್ದು, ಈ ಮರಗಳ ರಸದಿಂದ ಬೆಲ್ಲ ತಯಾರಿಸುವ ವಿದ್ಯೆಯನ್ನು ಕಲಿಸಿಕೊಡುವ ಹಲವಾರು ಶಿಕ್ಷಣ-ಕೇಂದ್ರಗಳನ್ನೂ ತೆರೆದಿವೆ ಜನರು ಮನಸ್ಸು ಮಾಡಿದರೆ ಈ ಉದ್ದಿಮೆಯ

The Agricultural & Industrial Bank, Lt

Regd Office. "LAXMI NIVAS Buildings".

COONDAPOOR, S Kanara.

SEASON DEPOSITS

Maturing on or before 30th June 1949 are now accepted with interest ranging from 2¾% to 3½% per annum

Every kind of Banking business transacted.

For terms etc, please apply to any of our following

Branches.

1. Coondapoor	7. Ankola.	13 Sirsi
2 Mangalore	8. Bhatkal	14. Dharwar.
3. Somwarpet.	9 Gokarn.	15. Gadag.
4 Virajpet	10. Honavar.	16. Haveri.
5 Shimoga.	11. Karwar.	17 Hubli.
6 Nagar	12. Kumta	18 Belgaum.

19 BOMBAY. (384-M, Jaipuria House, Kalbadevi Road).

ಅವರ ಹಸ್ತಗತವಾಗುವಂತಿದೆ, ಮತ್ತು ಬಿಟ್ಟದಕ್ಕೆ ಹಾಳಾಗಿ ಹೋಗುತ್ತಿರುವ ನಿಸರ್ಗ-ಸಂಪತ್ತಿನ ಯೋಗ್ಯ ಪ್ರಯೋಜನವೂ ಸಿಗುವಂತಿದೆ

•.•

ನಮ್ಮ ರೇಲ್ವೆಗಳಲ್ಲಿ ಇತ್ತಲಾಗಿ ಜನದಟ್ಟಣೆ ಬಹಳವಾಗುತ್ತಿದೆ. ಪ್ರಯಾಣಿಕರನ್ನಾಗಲಿ ಸರಕುಗಳನ್ನಾಗಲಿ ಸಾಗಿಸಲು ಸಾಕಷ್ಟು ಉಗಿ-ಬಂಡಿಗಳನ್ನು ಕಂಪನಿಯವರು ಬಿಡುತ್ತಿರುವದಿಲ್ಲ ಅದಕ್ಕೆ ಮುಖ್ಯ ಕಾರಣವೆಂದರೆ ರೇಲ್ವೆ ಇಂಜಿನ್ನುಗಳ ಕೊರತೆ— ಈ ಇಂಜಿನ್ನುಗಳೂ ಅದಕ್ಕೆ ಬೇಕಾಗುವ ದೊಡ್ಡ ಬೊಯ್ಲರುಗಳೂ ಪರದೇಶಗಳಿಂದ ಬರಬೇಕು ಯುದ್ಧಕಾಲದಲ್ಲಿ ಅವು ದುರ್ಮಿಳವಾದವು ಈಗಲಾದರೂ ಅವು ಹಿಂದಿನಷ್ಟು ಸಿಗಲೊಲ್ಲವು ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಹಿಂದುಸ್ಥಾನದಲ್ಲೇ ಅವುಗಳ ಉತ್ಪಾದನೆ ಮಾಡಬೇಕೆಂದು ಹಿಂದುಸ್ಥಾನ ಸರಕಾರವು ನಿರ್ಣಯಿಸಿದೆ ಮತ್ತು ಈಗಾಗಲೇ ಈಸ್ಟ ಇಂಡಿಯಾ (ಪಶ್ಚಿಮ ಬಂಗಾಲದಲ್ಲಿ) ರೇಲ್ವೆಯ ಅಸನಸೋಲ ನಿಲ್ದಾಣದಿಂದ ೧೭ ಮೈಲು ಅಂತರದಲ್ಲಿರುವ ಚಿತ್ತರಂಜನ ಎಂಬ ನಗರದಲ್ಲಿ ರೇಲ್ವೆ ಇಂಜಿನ್ನುಗಳನ್ನು ತಯಾರಿಸುವ ದೊಡ್ಡ ಕಾರಖಾನೆಯನ್ನು ತೆರೆಯುವ ಯೋಜನೆಯನ್ನು ಕೈಕೊಂಡಿದೆ ೧೯೫೦ರಷ್ಟೊತ್ತಿಗೆ ಈ ಕಾರಖಾನೆಯು ಪೂರ್ಣವಾಗಿ, ಪ್ರತಿ ವರ್ಷ ೧೨೦ ರೇಲ್ವೆ ಇಂಜಿನ್ನುಗಳನ್ನೂ ೫೦ ಬೊಯ್ಲರುಗಳನ್ನೂ ಪೂರೈಸಲು ಸಮರ್ಥವಾಗುವದೆಂದು ಸರಕಾರದವರು ಪ್ರಕಟಗೊಳಿಸಿರುತ್ತಾರೆ ಈ ಕಾರಖಾನೆಗೆ ೮|| ಕೋಟಿ ರೂ ವೆಚ್ಚ ಬರುವದಂತೆ, ಕಾರಖಾನೆಯ ಕೆಲಸಗಾರರಿಗೆ ಬೇಕಾಗುವ ಮನೆ-ಮಠ ಮುಂತಾದವುಗಳನ್ನು ನಿರ್ಮಿಸಲು ೫|| ಕೋಟಿ ರೂ ಬೇಕಾಗುವದಂತೆ ಕಾರಖಾನೆಯಲ್ಲಿ ಸುಮಾರು ೧೦೦೦೦ ಜನರಿಗೆ ಕೆಲಸ ಸಿಗುವದು. ಅಂತು ಈ ಕಾರಖಾನೆಯ ಪರಿಸರದಲ್ಲಿ ೬೦೦೦ ಕುಟುಂಬಗಳನ್ನು ನೆಲಿಸುವ ಮತ್ತು ಅವುಗಳಿಗೆ ಬೇಕಾಗುವ ಶಾಲೆ ಚಿಕಿತ್ಸಾಲಯ, ಅಂಗಡಿ ಮುಂತಾದವುಗಳನ್ನು ಕಟ್ಟಿಸುವ ಯೋಜನೆಯೂ ಕಾರಖಾನೆ ಕಟ್ಟಿಸುವ ಯೋಜನೆಯಲ್ಲಿ ಒಳಗೊಂಡಿದೆ. ಇವುಗಳ ಖರ್ಚು ಮೇಲೆ ಹೇಳಿದ ೫|| ಕೋಟಿ ರೂ ಗಳಲ್ಲೇ ಸೇರಿದೆ ಸದ್ಯಕ್ಕೆ ರೇಲ್ವೆ ಕಂಪನಿಗಳ ಕಡೆಗಿರುವ ೭೦೦೦ ಇಂಜಿನ್ನುಗಳಲ್ಲಿ ೧೫೯೧ ಇಂಜಿನ್ನುಗಳು ಜೀರ್ಣವಾಗಿ ನಿರುಪಯೋಗವಾಗಿವೆ ಇನ್ನೊಂದು ವರ್ಷದಲ್ಲಿ ಬೇರೆ ೧೭೯ ಇಂಜಿನ್ನುಗಳು ಹಾಳಾಗುವವಂತೆ ಇಂಜಿನ್ನುಗಳ ಸದ್ಯದ ಕೊರತೆಯನ್ನು ನೀಗಿಸಿಕೊಳ್ಳುವದಕ್ಕಾಗಿ ಸರಕಾರವು ಕಾನಡಾದಿಂದ ೩೫೦, ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಂದ ೩೦೩, ಬ್ರಿಟನದಿಂದ ೧೯೦ ಮತ್ತು ಫ್ರಾನ್ಸದಿಂದ ೨೦ ಹೀಗೆ ೮೬೩ ಹೊಸ ಇಂಜಿನ್ನುಗಳನ್ನು ತರಿಸಿಕೊಳ್ಳುವ ವ್ಯವಸ್ಥೆ ಮಾಡಿದೆ

•.•

ಭಾರತದ ವಿಭಜನೆಯಿಂದ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಬಹಳಷ್ಟು ವ್ಯತ್ಯಾಸವಾಗಿರುತ್ತದೆಂಬುದನ್ನು ಓದುಗರು ಅರಿತಿರಬಹುದು ಪಾಕಿಸ್ತಾನದಲ್ಲಿ ಸೆಣಬಿನ ನಾರು. ಗೋದಿ ಮತ್ತು ಅಕ್ಕಿ ವಿಪುಲವಾಗಿ ಬೆಳೆಯುತ್ತಿವೆ ಹಿಂದುಸ್ಥಾನದಲ್ಲಿ ಅವುಗಳ ಕೊರತೆಯುಂಟು ಅದೇ ರೀತಿ ಹಿಂದುಸ್ಥಾನದಲ್ಲಿ ವಿಪುಲವಾಗಿ ಉತ್ಪತ್ತಿಯಾಗುತ್ತಿರುವ ಅರಳೆ-ಬಟ್ಟೆ ಮತ್ತು ಸಕ್ಕರೆ ಇವು ಪಾಕಿಸ್ತಾನಕ್ಕೆ ಬೇಕು. ಎರಡೂ ನಾಡುಗಳು ಸೌಹಾರ್ದದಿಂದುಳಿದು, ಪರಸ್ಪರರಿಂದ ವಿನಿಮಯ ಮಾಡಿಕೊಂಡರೆ ಮಾತ್ರ ಇತ್ತಟ್ಟಿನವರಿಗೂ ಸುಖವಿದೆ ೧೯೪೮ರ ಏಪ್ರಿಲದಿಂದ ಕಳೆದ ಜನವರಿ ವರೆಗೆ ಪಾಕಿಸ್ತಾನದಿಂದ ಹಿಂದುಸ್ಥಾನಕ್ಕೆ ೨,೩೭,೪೫೭ ಅರಳೆಯ ಗಟ್ಟಿಗಳೂ, ೩೦| ಲಕ್ಷ ಗಟ್ಟಿ ಕಚ್ಚಾ ನಾರೂ, ೬೦|| ಸಾವಿರ ಟನ್ನ ಅಕ್ಕಿಯೂ, ೭| ಸಾವಿರ ಟನ್ನ ಬೀಜದ ಗೋದಿಯೂ ಬಂದಿದ್ದವು ಇದಕ್ಕೆ ಪ್ರತಿಯಾಗಿ ಹಿಂದುಸ್ಥಾನವು ೬೨,೪೯೧ ಅರಿವೆಯ ಗಟ್ಟಿಗಳನ್ನೂ, ೬೦ ಸಾವಿರ ಟನ್ನ ಸಕ್ಕರೆಯನ್ನೂ ಕಳಿಸಿದೆ

•.•

೩,೦೦೦ ಮೈಲುಗಳಷ್ಟು ಕರಾವಳಿಯಿರುವ ಹಿಂದುಸ್ಥಾನವು ಸಾಗರವಾಣಿಜ್ಯ ತನ್ನ ವ್ಯಾಪಾರದ ಅನುಕೂಲತೆಗಾಗಿ ಹಾಗೂ ಕರಾವಳಿಯ ಸಂರಕ್ಷಣೆಗಾಗಿ ತಕ್ಕ ಮತ್ತು ತಕ್ಕಷ್ಟು ಹಡಗಗಳನ್ನು ಕಟ್ಟುವ ಉದ್ಯೋಗವನ್ನು ಕೈಕೊಳ್ಳಬೇಕಾಗಿದೆ, ಎರಡೂ ಕರಾವಳಿಗಳಲ್ಲಿ ಸುರಕ್ಷಿತ ಬಂದರಗಳನ್ನೂ ನೌಕಾ ರಾಣ್ಯಗಳನ್ನೂ ಕಟ್ಟಿಕೊಳ್ಳಬೇಕಾಗಿದೆ ಸದ್ಯಕ್ಕೆ ಮುಂಬಯಿ, ಕೊಚ್ಚಿ, ಮದ್ರಾಸ ಮತ್ತು ಕಲಕತ್ತಾ ಈ ೪ ಬಂದರಗಳು ಮಾತ್ರ ಹಿಂದುಸ್ಥಾನದ ದೊಡ್ಡ ಬಂದರಗಳಾಗಿವೆ. ಕರಾಚಿಯು ಪಾಕಿಸ್ತಾನದ ಪಾಲಿಗೆ ಹೋದಂದಿನಿಂದ ಆ ಬಂದರದ ವ್ಯವಹಾರವೆಲ್ಲ ಮುಂಬಯಿ ಬಂದರದ ಮುಖಾಂತರವೇ ಸಾಗಬೇಕಾಗಿದೆ ಅದರಿಂದ ಮುಂಬಯಿಯಲ್ಲಿ ಬಂದ ಬಂದ ಸರಕನ್ನು ಹಡಗಗಳಿಂದ ಇಳಿಸಿಕೊಳ್ಳಲಿಕ್ಕೂ ಹಡಗಗಳ ಮೇಲೆ ಹತ್ತಿಸಲಿಕ್ಕೂ ಕಷ್ಟವಾಗುತ್ತಿದೆ ಅದರಿಂದ ಪಶ್ಚಿಮ ಕರಾವಳಿಯಲ್ಲಿ ಇನ್ನೆರಡು ದೊಡ್ಡ ರೇವುಗಳನ್ನು ಕಟ್ಟಿಸಲು ೧೦ ದ ಸರಕಾರವು ಅಣಿಯಾಗಿದೆ ಅದಕ್ಕಾಗಿ ಕಚ್ಛ ಕಾಠೇವಾಡದ ಪೂರ್ವ ದಂಡೆಯಲ್ಲಿರುವ ಕಂಡ್ಲಾ ಬಂದರವನ್ನು ಸರಕಾರವು ಈಗಾಗಲೇ ಆರಿಸಿದ್ದು ೬ ಕೋಟಿ ರೂ ಖರ್ಚು ಮಾಡಿ ಅಲ್ಲಿ ದೊಡ್ಡ ಬಂದರವನ್ನು ನಿರ್ಮಿಸಲು ಪ್ರಾರಂಭಿಸಿದೆ ಕಂಡ್ಲಾದಿಂದ ಕಾಠೇವಾಡ ಮಾರ್ಗವಾಗಿ ಅಹಮದಾಬಾದ ವರೆಗೆ ರೇಲ್ವೆ ಕಟ್ಟುವ ಯೋಜನೆಯೂ ಸಿದ್ಧವಾಗಿದೆ ಪ್ರತಿ ವರ್ಷ ೩೦ ಲಕ್ಷ ಟನ್ನ ಸರಕಿನ ವ್ಯವಹಾರ ಈ ಬಂದರದ ಮುಖಾಂತರ ನಡೆಯುವದೆಂದು ಅಂದಾಜು ಮಾಡಲಾಗಿದೆ, ಇಷ್ಟರಿಂದಲೇ ಮುಂಬಯಿಯ ಮೇಲಿನ ಭಾರ ಕಡಿಮೆಯಾಗುವಂತಿಲ್ಲವಾದ್ದರಿಂದ ಮುಂಬಯಿ ಮತ್ತು ಕೊಚ್ಚಿಗಳ ನಡುವೆ ಇನ್ನೊಂದು ಮಹಾಬಂದರ ಕಟ್ಟಿಸುವ ಆಲೋಚನೆಯುಂಟು ಈ ಮಹಾಬಂದರವಾಗುವ ಭಾಗ್ಯ ಕಾರವಾರ, ಭಟಕಳ, ಮಲ್ಪೆ ಮತ್ತು ಮಂಗಳೂರ ಈ ನಾಲ್ಕರಲ್ಲಿ ಒಂದರ ಪಾಲಿಗೆ ಬರುವದು ಹಿಂದುಸ್ಥಾನದ ಬಂದರ-ಅಭಿವೃದ್ಧಿ ಸಮಿತಿಯವರು ಈಗಾಗಲೇ ಈ ೪ ಬಂದರಗಳನ್ನು ಪರಿಶೀಲಿಸಿರುತ್ತಿದ್ದು, ಅವರ ಕೊನೆಯ ಆಯ್ಕೆಯು ತಜ್ಞ ಭೂಗರ್ಭ ಪರೀಕ್ಷಕರ ವರದಿಯನ್ನು ಅವಲಂಬಿಸಿದೆ ಮೇಲ್ಕಾಣಿಸಿದ ನಾಲ್ಕು ಬಂದರಗಳೊಳಗಿನ ನೀರಡಿಯಿರುವ ನೆಲದ ಪರೀಕ್ಷೆಯನ್ನು ಈ ತಜ್ಞರು ಈಗ ಮುಗಿಸಿದ್ದಾರೆ ಅವರ ವರದಿಯು ಬೇಗನೇ ಬಂದರ ಸಮಿತಿಯ ಕೈಸೇರುವದು. ತಜ್ಞರೊಬ್ಬರು ಈ ೪ ಬಂದರಗಳ ಗುಣವಿಶೇಷಗಳನ್ನು ಈ ಕೆಳಗಿನಂತೆ ಬಣ್ಣಿಸಿರುತ್ತಾರೆ — (೧) ಕಾರವಾರವು ನಿಸರ್ಗ ನಿರ್ಮಿತ ಬಂದರವಿದೆ, ಎಲ್ಲ ನೈಸರ್ಗಿಕ ಅನುಕೂಲತೆಗಳಿವೆ, ಒಳಭಾಗದ ವ್ಯಾಪಾರದ ಸಂಬಂಧವೂ ಅವಶ್ಯಂಟು (೨) ಭಟಕಳ ಬಂದರವು ಮೈಸೂರಿಗೆ ಅನುಕೂಲವಿದೆ ಮೈಸೂರಿನವರು ಇದೇ ಬಂದರದ ಅಭಿವೃದ್ಧಿಯನ್ನು ಬಯಸುತ್ತಾರೆ. ಈ ಬಂದರದ ಅಭಿವೃದ್ಧಿಯಾದಲ್ಲಿ ತಮ್ಮ ವ್ಯಾಪಾರ-ಉದ್ದಿಮೆಗಳು ಹಿಗ್ಗುವವೆಂದು ಅವರ ಮತವಿದೆ. (೩) ಮಂಗಳೂರು ಸಮುದ್ರದ ಇಳಿತ-ಭರತಗಳ ಮೇಲೆ ಅವಲಂಬಿಸಿಕೊಂಡಿರುವ ಬಂದರವಿದೆ, ಚಿಕ್ಕ ಹಡಗಗಳಷ್ಟೇ ಅದರ ದಂಡೆಯ ವರೆಗೆ ಬರಬಲ್ಲವು ಒಳಭಾಗಗಳ ವ್ಯಾಪಾರ ಹೆಚ್ಚಾಗಿ ಕರಾವಳಿಯ ಜಲಮಾರ್ಗವಾಗಿ ನಡೆಯುತ್ತಿದೆ (೪) ಮಲ್ಪೆಯು ಮಾರ್ಮಗೋವಾ ಮತ್ತು ಕೊಚ್ಚಿ ಇವುಗಳ ನಡುಮಧ್ಯದಲ್ಲಿದ್ದು, ಪಶ್ಚಿಮ ಕರಾವಳಿಯಲ್ಲಿ ವಿಮಾನಗಾರಿಕೆಯ ಅತಿ ದೊಡ್ಡ ಕೇಂದ್ರವಾಗಿದೆ ಬಂದರದ ಹತ್ತಿರ ವಿಶಾಲ ಮರುಭೂಮಿಯೊಂದುಂಟು, ಅಲ್ಲಿ ಯುದ್ಧ ನೌಕಾ-ರಾಣ್ಯವನ್ನೂ ಹಡಗ ಕಟ್ಟಿಸುವ ಗೋದಿಯನ್ನೂ ಕಟ್ಟಲು ಸಾಧ್ಯವುಂಟು ಈ ಬಂದರದ ದಂಡೆಗೆ ಸಮಾಂತರವಾಗಿ ಸಮುದ್ರದಲ್ಲಿ ೧|| ಮೈಲು ಉದ್ದ "ಸೇಂಟ ಮೇರಿಸ ಅಯ್ಲ' ಎಂದು ಸಂಬೋಧಿಸಲ್ಪಡುವ ದ್ವೀಪಾವಳಿಯುಂಟು ಗೋಡೆಯೋಪಾದಿಯಲ್ಲಿ ಕೆಲಸ ಮಾಡಿ ಅದು ಬಂದರವನ್ನು ಬಿರುಗಾಳಿಯಿಂದ ರಕ್ಷಿಸಬಲ್ಲದು. ಈ ಬಂದರದಲ್ಲಿ ಬಂಡೆಗಲ್ಲುಗಳಾಗಲಿ, ಉಸುಬಿನ ರಾಶಿಗಳಾಗಲಿ ಇರುವದಿಲ್ಲ ನಿಸರ್ಗ-ರಕ್ಷಣೆಯುಳ್ಳ ಬಂದರವಿದು ತಜ್ಞರು ಮಾಡಿರುವ ಮಲ್ಪೆಯ ಈ ಗುಣಗೌರವವನ್ನು ನೋಡಿದರೆ ಮಲ್ಪೆಯೇ ಕೊನೆಗೆ ಅಭಿವೃದ್ಧಿಗಾಗಿ ಆರಿಸಲ್ಪಡುತ್ತದೋ ಏನೋ ಎಂದೆನಿಸುತ್ತದೆ

•.•

ಹಿಂದುಸ್ಥಾನದಲ್ಲಿ ಸದ್ಯಕ್ಕೆ ಬೆಳೆಯುತ್ತಿರುವ ಆಹಾರ ಸಾಮಗ್ರಿಯು ಗರಿಷ್ಠದಷ್ಟು ಆಹಾರ-ಉತ್ಪತ್ತಿಯನ್ನು ಹೆಚ್ಚಿಸಿದರೂ, ಜನಸಂಖ್ಯೆ ಬೆಳೆಯುತ್ತಿದ್ದರೂ ಕೂಡ, ೧೯೫೧ರೊಳಗಾಗಿ ಹಿಂದುಸ್ಥಾನದ ಆಹಾರದ ಕೊರತೆ ನೀಗುವದೆಂದು ಹಿಂದ-ಸರಕಾರದ ಬೇಸಾಯ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಕೇ ಎಲ್ ಪಂಜಾಬಿಯವರು ಅತಿಯ ರವಿವಾರ, ತಮ್ಮ ನಭೋವಾಣಿ ಭಾಷಣದಲ್ಲಿ, ಹೇಳಿದ್ದಾರೆ ಎಲ್ಲ ಪ್ರಾಂತಿಕ ಮತ್ತು ಸಂಸ್ಥಾನಿಕ ಸರಕಾರಗಳು ಉತ್ತಮ ಬೀಜ, ಗೊಬ್ಬರ ಮತ್ತು ನೀರಾವರಿಯ ಸೌಕರ್ಯಗಳನ್ನು ಒದಗಿಸಿಕೊಟ್ಟು ಈಗಾಗಲೇ ಸಾಗಾಗುತ್ತಿರುವ ಭೂಮಿಯಿಂದ ಹೆಚ್ಚಿನ ಬೆಳೆ ತೆಗೆಯುವ ಪ್ರಯತ್ನ ನಡೆಸಿವೆಂತಲೂ ಗಿಡಗಂಟೆ ಇದ್ದ ಕಳೆ ಬೆಳೆದ ಬೀಳು ಭೂಮಿಗಳನ್ನು ಟ್ರೆಕ್ಟರಗಳ ಸಹಾಯದಿಂದ ಹಸನಗೊಳಿಸಿ ಸಾಗುವಳಿಯಲ್ಲಿ ತರುವ ಪ್ರಯತ್ನವನ್ನೂ ನಡೆಸಿದೆಯೆಂತಲೂ ಅವರು ತಿಳಿಸಿದ್ದಾರೆ. ಸದ್ಯಕ್ಕೆ ನಮ್ಮ ದೇಶದಲ್ಲಿ ಸಾಗುವಳಿಯಲ್ಲಿ ತರಲು ಶಕ್ಯವಿರುವ ಆದರೆ ಸಾಗುವಳಿಯಾಗದಿರುವ ಭೂಮಿ ೮|| ಕೋಟಿ ಎಕರೆಗಳಷ್ಟಿದೆ ಇದರಲ್ಲಿ ಕನಿಷ್ಠ ೧ ಕೋಟಿ ಎಕರೆ ಭೂಮಿ ಸಾಗುವಳಿಗೆ ಉತ್ತಮವಿದೆ. ಮುಂಬರುವ ೬ ವರ್ಷಗಳಲ್ಲಿ ೬೦ ಲಕ್ಷ ಎಕರೆ ಬಂಜರ ಭೂಮಿಯನ್ನು ಸಾಗುವಳಿಯಲ್ಲಿ ತರುವ ಯೋಜನೆಯನ್ನು ಸರಕಾರವು ಮಾಡಿದೆಂದೂ, ೧೯೫೦ರ ಬೇಸಿಗೆಯೊಳಗಾಗಿ ೮ ಲಕ್ಷ ಎಕರೆ ಭೂಮಿ ಸಾಗುವಳಿಗೆ ಸಿದ್ಧವಾಗುವದೆಂಬ ಆಶೆ ಹೊಂದಲಾಗಿದೆಯೆಂದೂ ಶ್ರೀ ಪಂಜಾಬಿಯವರು ಹೇಳುತ್ತಾರೆ ಕೆರೆ ಬಾವಿಗಳನ್ನು ದುರಸ್ತಿಗೊಳಿಸುವದು, ಉತ್ತಮ ಬೀಜ ಮತ್ತು ಗೊಬ್ಬರ ಪೂರೈಸುವದು ಮುಂತಾದ

ಆಹಾರೋತ್ಪನ್ನದ ವೃದ್ಧಿಯ ಕಾರ್ಯಗಳಿಗಾಗಿ ಕಳೆದ ವರ್ಷ ೧೬ ಕೋಟಿ ರೂ. ಖರ್ಚು ಬಂದಿರುತ್ತದೆ. ಈ ವರ್ಷ ಬಿಹಾರ ಸರಕಾರವು ೬ ಕೋಟಿ ರೂ. ತನ್ನ ಬೊಕ್ಕಸದಿಂದ ಕೊಡಲು ಸಂಕಲ್ಪಿಸಿದೆಯಂತೆ.

* * *

ಫಿಲಿಪ್ಪೈನ್ಸಿನಲ್ಲಿರುವ ಹೈಫಾಂಗ ನಗರವೂ ಬಂದರವೂ ಕಳೆದ ಬುಧವಾರ ಕಮ್ಯುನಿಸ್ಟರ ಕೈಸೇರಿದೆ. ಕಮ್ಯುನಿಸ್ಟರಿಗೆ ಈ ಬಂದರದಲ್ಲಿರುವ ಧಕ್ಕೆಯ ಪ್ರಯೋಜನ ಸಿಗಬಾರದೆಂದು ಸರಕಾರಿ ಪಕ್ಷದ ಸೈನಿಕರು ಅದನ್ನು ಸುರಂಗ ಹಾಕಿ ಹಾರಿಸಿದ್ದರು. ಕೊನೆಯ ತನಕ ಕಾದಾಡಿ ಈ ನಗರದಲ್ಲಿ ಕಮ್ಯುನಿಸ್ಟರ ಗೋರಿ ಕಟ್ಟುತ್ತೇವೆಂದು ಸರಕಾರಿ ಸೈನಿಕರು ಬಾಯಿಂದ ಬಹಳ ಜಂಭವನ್ನು ಕೊಚ್ಚುತ್ತಿದ್ದರು! ಆದರೆ ಕೊನೆಗೆ ಹತಾಶರಾಗಿ ಆ ನಗರವನ್ನು ಕಮ್ಯುನಿಸ್ಟರಿಗೆ ಬಿಟ್ಟುಕೊಟ್ಟು ಪಲಾಯನ ಮಾಡಿದ್ದಾರೆ. ಕಮ್ಯುನಿಸ್ಟ ಸೇನೆಗಳೀಗ ದಕ್ಷಿಣಾಭಿಮುಖವಾಗಿ ಕೂಚು ಮಾಡುತ್ತಿವೆ. ಚೀನ ಸರಕಾರದ ಹಂಗಾಮಿ ರಾಜಧಾನಿಯಾಗಿರುವ ಕೆಂಟಾನವನ್ನು ಅವು ಬೇಗನೇ ಕೈವಶಪಡಿಸಿಕೊಳ್ಳುವ ಸಂಭವವುಂಟು. ಆ ಸೇನೆಗೆ ಇದಿರಾಗುವ ಶಕ್ತಿಯೆ ಅದನ್ನು ಅಡ್ಡಗಟ್ಟುವ ಕಸುವು ಸರಕಾರಿ ಸೈನ್ಯದಲ್ಲಿದ್ದಂತೆ ಕಂಡು ಬರುವದಿಲ್ಲ. ಬ್ರಿಟಿಶರಾಗಲಿ ಅಮೇರಿಕೆಯವರಾಗಲಿ ಚೀನ ಸರಕಾರಕ್ಕೆ ನೆರವನ್ನೀಯುವ ಸಂಭವವೂ ತೋರುವದಿಲ್ಲ. ಚೀನವನ್ನು ಕಮ್ಯುನಿಸ್ಟರ ಪಾಲಿಗೆ ಬಿಟ್ಟುಕೊಟ್ಟು, ಕಮ್ಯುನಿಸ್ಟರು ಮುಂದೆ ಬರದಂತೆ ಮಾಡಲು ಒಂದು ಯೋಜನೆಯನ್ನು ಅಮೇರಿಕೆಯ ಅಧ್ಯಕ್ಷರೂ ವಿದೇಶ ಮಂತ್ರಿಗಳೂ ತಯಾರಿಸಿದ್ದಾರೆಂಬ ವಾರ್ತೆ ಬಂದಿದೆ. ಜಪಾನ, ಫಾರ್ಮೋಸಾ, ಫಿಲಿಪೈನ್ಸ್, ಮಲಯಾ, ಇಂಡೋನೇಶಿಯಾ, ಸಯಾಮ, ಬ್ರಹ್ಮದೇಶ ಮತ್ತು ಹಿಂದುಸ್ಥಾನ ದೇಶಗಳಲ್ಲಿ ಅಂದರೆ ಚೀನದ ಸುತ್ತು ಸಿಮೇಗಳ ಹೊರಗೆ ಕಮ್ಯುನಿಸ್ಟ ಮುನ್ನುಗ್ಗುವಿಕೆ ಬಾರದಂತೆ ಸುತ್ತಲೂ ಬೇಲಿ ಹಾಕುವ ವಿಚಾರ ನಡೆದಿದೆಯಂತೆ. ಈ ಬೇಲಿಯನ್ನು ದಾಟಲು ಕಮ್ಯುನಿಸ್ಟರು ಪ್ರಯತ್ನಿಸಿದರೆ ಅಮೇರಿಕೆಯು ಉಗ್ರ ಉಪಾಯಯೋಜನೆ ಮಾಡುವದಂತೆ.

* * *

ಮಹಾತ್ಮಾ ಗಾಂಧಿಯವರ ಸ್ಮಾರಕ ನಿಧಿಯನ್ನು ಕೂಡಿಸುವ ಅವಧಿ ಕಳೆದ ಎಪ್ರಿಲ ತಿಂಗಳ ಕೊನೆಗೆ ಮುಗಿಯಿತಷ್ಟೇ. ಬಂದಿನ ತನಕ ಅಂತು ರೂ. ೧೦,೯೪,೭೪,೯೪೫-೦-೬ ಈ ನಿಧಿಗೆ ಕೂಡಿಸಿಯೆಂದೂ, ಬಡ್ಡಿ ಸಹಿತ ಸದರಿ ಸ್ಮಾರಕ ನಿಧಿಯ ಒಟ್ಟು ರಕಮು ೧೧,೨೩,೯೯ ...-೨-೧೦ ಆಗಿದೆಯೆಂದೂ ಹೊಸ ದಿಲ್ಲಿಯಲ್ಲಿರುವ ನಿಧಿಯ ಕೇಂದ್ರ ಕಚೇರಿಯಿಂದ ಪ್ರಕಟವಾಗಿದೆ. ಭಾರತದ ಔದ್ಯೋಗಿಕ ಕಂಪನಿಗಳು ಕೂಡಿಸಿಕೊಟ್ಟ ರೂ. ೪,೮೩,೭೪,೫೩೦-೫-೩ ಈ ರಕಮಿನಲ್ಲಿ ಸೇರಿದೆ. ಪಟ್ಟಣ ನಿಧಿ ಕೂಡಿಸಿಕೊಟ್ಟ ಮಾನ ಅಕ್ಷೀಂಪುತ್ರರ ಮುಂಬಯಿಗೆ ಹೋಗುತ್ತದೆ. ಆ ನಗರದಲ್ಲಿ ರೂ. ೨,೩೯,೯೬,೧೦೭ ರಷ್ಟು ನಿಧಿ ಕೂಡಿದೆ. ಪಶ್ಚಿಮ ಬಂಗಾಲದ ಕ್ರಮಾಂಕ ಎರಡನೆಯದು. ಆ ಪ್ರಾಂತದಲ್ಲಿ ೧,೩೭,೨೩ ...-೨ ಕೂಡಿದೆ. ರೂ. ೮೬,೬೩,೧೯೦ ಕೂಡಿಸಿಕೊಟ್ಟು ಸಂಯುಕ್ತ ಪ್ರಾಂತವು ಮೂರನೇ ಸ್ಥಾನ ಗಳಿಸಿದೆ. ಸಂಸ್ಥಾನ ಪ್ರದೇಶಗಳಲ್ಲಿ ಪ್ರಥಮ ಸ್ಥಾನ ಮಾನವು ಹೈದ್ರಾಬಾದಕ್ಕೆ ಸಲ್ಲುತ್ತದೆ. ಅಲ್ಲಿ ರೂ. ೩೦ ಲಕ್ಷ ... ಕೂಡಿದೆ. ಎರಡನೇ ಬರೋಡಾ ಸಂಸ್ಥಾನದಲ್ಲಿ ರೂ. ೧೦,೦೦,... ಕೂಡಿದೆ. ಕರ್ನಾಟಕದಲ್ಲಿ ಕೂಡಿದ್ದ ಒಟ್ಟು ರೂ. ೩,೬೧,...-೧೨-೮.

* * *

ಬಾಳೇಹಣ್ಣು ಹಿಂದುಸ್ಥಾನದಲ್ಲಿ ವಿಪುಲವಾಗಿ ಬೆಳೆಯುತ್ತದೆ. ಅದರ ಉತ್ಪತ್ತಿಯನ್ನು ಇನ್ನೂ ಹೆಚ್ಚಿಸುವದು ಸಾಧ್ಯವುಂಟು. ಬಾಳೆ ಗಿಡದ ಉಗಮವು ಹಿಂದುಸ್ಥಾನವೆಂದು ಇತಿಹಾಸಜ್ಞರ ಅಂಬೋಣವಿದೆ. ಅಲೆಕ್ಝಾಂಡರ ಭಾರತದಿಂದ ಬಾಳೇಗಿಡವನ್ನು ತನ್ನ ದೇಶಕ್ಕೆ ಒಯ್ದನೆಂದು ಹೇಳುತ್ತಾರೆ. ವಾಸಿಸುವ ಜನರೆಲ್ಲ ಬಾಳೇಹಣ್ಣನ್ನು ಬಿಟ್ಟರೆ ಬೇರೆ ಹಣ್ಣು ತಿನ್ನುವ ಪದ್ಧತಿಯಿಲ್ಲ. ಮದ್ರಾಸ ಪ್ರಾಂತದಲ್ಲಿ ಬಾಳೆಗೆ ವಿಶೇಷ ಬೆಲೆ ಬರುತ್ತದೆ. ಇತರ ದೇಶಗಳಿಗೂ ಬಾಳೆ ರಫ್ತು ಮಾಡುವ ಬಗ್ಗೆ ವಿಚಾರ ನಡೆಯುತ್ತದೆಂತೆ. ಬಾಳೆಯ ಉತ್ಪತ್ತಿಯಲ್ಲಿ ಎರಡನೇ ಕ್ರಮಾಂಕ ಬಂಗಾಲದ್ದು. ಆದರೆ ಹಿಂದುಸ್ಥಾನದಲ್ಲಿ ನೂರಾರು ಬಗೆಯ ಬಾಳೆಹಣ್ಣುಗಳಿವೆ. ಬಾಳೇಹಣ್ಣು ತಿನ್ನುವವರಲ್ಲಿ ಬಂಗಾಲಿಗಳು ಮುದ್ರಾಸಿಗಳೂ ಗಣ್ಯರು. ಅವರು ಅನುಕ್ರಮವಾಗಿ ವರ್ಷದಲ್ಲಿ ಸರಾಸರಿ ತಲೆಯೊಂದಕ್ಕೆ ೭೭ ಮತ್ತು ೬೧ ರತ್ತಲು ಬಾಳೇಹಣ್ಣು ತಿನ್ನುತ್ತಿರುವರು. ಸಂಯುಕ್ತ ಪ್ರಾಂತದ ಜನರಿಗೆ ಬಾಳೇಹಣ್ಣಿನ ಮಹತ್ವವೂ ರುಚಿಯೂ ಗೊತ್ತಿಲ್ಲವೇನೋ! ಅವರು ತಿನ್ನುವ ಬಾಳೇಹಣ್ಣಿನ ಸರಾಸರಿ ತಲೆಯೊಂದಕ್ಕೆ ೩ ರತ್ತಲು ಬೀಳುತ್ತದೆ. ಬಾಳೇಹಣ್ಣಿನಷ್ಟು ಪೌಷ್ಟಿಕ ಫಲ ಇನ್ನೊಂದಿಲ್ಲೆಂದು ಆಹಾರಶಾಸ್ತ್ರಜ್ಞರು ಹೇಳುತ್ತಾರೆ. ಬಾಳೇಹಣ್ಣಿನಲ್ಲಿ ಎಲ್ಲ ಬಗೆಯ ಜೀವನ-ಸತ್ವ (ವ್ಹಿಟಮಿನ್ಸ್) ಗಳೂ, "ಪ್ರೋಟೀನ್", "ಫಾಸ್ಫರಸ್", "ಕೆಲ್ಶಿಯಮ್" ಮತ್ತು ಲೋಹಾಂಶವುಂಟು. ಬಾಳೇಹಣ್ಣು ಜೀರ್ಣಿಸಿಕೊಳ್ಳಲು ಕಠಿಣವಾಗುತ್ತದೆಂಬ ಮಾತು ಬಿಟ್ಟರೆ ಯಾವಾಗಲೂ ಕೂತಲ್ಲೇ ಇರುವ ಮನುಷ್ಯನು ಕೆಲವೊಂದು ಬಾಳೆಹಣ್ಣು ತಿಂದು ಹಾಲು ಕುಡಿಯುವದು ಉತ್ತಮವೆಂದು ಆಹಾರ-ಶಾಸ್ತ್ರಜ್ಞ ವೈದ್ಯರು ಹೇಳುತ್ತಾರೆ. ಸಣ್ಣ ಮಕ್ಕಳ-ರೋಗಿಗಳಂತೆ ಕ್ಷಯ ರೋಗಿಗಳಿಗೂ ಬಾಳೇಹಣ್ಣಿನ ಆಹಾರ ಬಹಳ ಪಥ್ಯಕರವಾಗುತ್ತದಂತೆ. ಪ್ರೊಫೆಸರ್ ಕೊಸಿರ್ ಟ್ಟಿಕ ನಿಕ್ಕಿ ರಕ್ತಿಲ ಹಾಲು ಬೇಕು. ಅದನ್ನು ಪೂರೈಸುವ ಸಾಮರ್ಥ್ಯ ನಮಗಿಲ್ಲದಿದ್ದರೆ ಆ ಹಾಲಿನ ಬದಲು ದಿನಾಲೂ ಒಂದೊಂದು ಬಾಳೆಹಣ್ಣು ಕೊಡುವದು ಸಾಧ್ಯವಿದೆಯಲ್ಲವೇ? ಎಂದು ಬಂಗಾಲ ಸರಕಾರದ ಚೌಕಶಿ ಮಂಡಳದವರು ತಮ್ಮ ವರದಿಯಲ್ಲಿಂದ. ಕಡೆ ಒಂದು ಬಾಳೇಹಣ್ಣಿನ ಮಹತಿಯನ್ನು ನಮಗೆ ತೋರಿಸಿಕೊಟ್ಟಿದ್ದಾರೆ. ನಮ್ಮ ಆಹಾರೋತ್ಪತ್ತಿಯ ಯೋಜನೆಯಲ್ಲಿ ಬಾಳೆಯ ಉತ್ಪತ್ತಿಯನ್ನು ಹೆಚ್ಚಿಸುವ ಪ್ರಯತ್ನಕ್ಕೆ ಒಂದು ಪ್ರಮುಖ ಸ್ಥಾನ ಕೊಡಬಹುದಿಲ್ಲವೇ?

ವಿರೋಧಿ ಸಂ|| ದ ಮಳೆಯ ಭವಿಷ್ಯ.

ಈ ಹೊಸಾ ವರ್ಷದಿಂದ ಆಕಾಶಸ್ಥ ಗ್ರಹಗಳ ಯುತಿ ಪ್ರತಿಯುತಿಗಳ ಮೇಲಿಂದ ಪ್ರತಿಷ್ಠ "ಕೇಸರಿ" ಪತ್ರದ ಕೆಲಕಾಲ ಸಂಪಾದಕರಾಗಿದ್ದ ಶ್ರೀ|| ಜನಾರ್ದನಪಂತ ಕರಂದೀಕರರು ಮಳೆಯ ಭವಿಷ್ಯವನ್ನು ಪೂನಾದ "ಕೇಸರಿ" ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದಾರೆ. ಈ ವರ್ಷದ ಮಳೆಯ ಭವಿಷ್ಯವನ್ನು ಅವರು ಮಾರ್ಚ ಕಳೆದ ಬುಧವಾರದ "ಕೇಸರಿ"ಯಲ್ಲಿ ಪ್ರಕಟಿಸಿದ್ದಾರೆ. ಅವರ ಭವಿಷ್ಯವು ಕೆಲಮಟ್ಟಿಗೆ ನಿಜವಾಗುತ್ತದೆಂದು ಮಹಾರಾಷ್ಟ್ರೀಯರ ಪ್ರತೀತಿಯುಂಟು. ಮಹಾರಾಷ್ಟ್ರದ ಕರಂದೀಕರರು ನಮ್ಮಲ್ಲಿಯ ಈ ಭವಿಷ್ಯ ಕೆಲಮಟ್ಟಿಗೆ ಅನ್ವಯಿಸುತ್ತದೆ. ಅಷ್ಟರಿಂದ ಓದುಗರ ಮಾಹಿತಿಗಾಗಿ ಶ್ರೀ ಕರಂದೀಕರರ ಭವಿಷ್ಯದ ಸಾರವನ್ನು ಈ ಕೆಳಗೆ ಕೊಡಲಾಗಿದೆ.

ವಿರೋಧಿ ಸಂವತ್ಸರದಲ್ಲಿ ಏಪ್ರಿಲ ೩೦ ರಿಂದ ಜೂನ ೪ ರ ತನಕ ಬುಧನ ಅಸ್ತ (ಅಂದರೆ ಯುತಿ) ವಾಗುವದು. ಮೇ ೩೦ ರಿಂದ ಜೂನ ೬ ರ ವರೆಗೆ ಅದನು ಪುನಃ ಅಸ್ತನಾಗುತ್ತದೆ. ವಿರೋಧಿ ಸಂವತ್ಸರ ಪ್ರಾರಂಭದ ೧೦ ತಿಂಗಳು ಶುಕ್ರನು ಅಸ್ತನಾಗಿದ್ದನು. ಮೇ ೩೦ ರಂದು ಅವನ ಉದಯವಾಗಿದೆ. ಇದೀಗ ಶುಕ್ರನು ಅಸ್ತನಾಗಿದ್ದು ನಂತರ ಬರುವ ಜೂ. ೨ಕ್ಕೆ ಅವನ ಉದಯವುಂಟು. ಜೂನ ೮ ಮತ್ತು ೨೩ಕ್ಕೆ ರವಿ-ಶುಕ್ರರ ಯೋಗವಿದೆ; ಜುಲೈ ೪ ಮತ್ತು ೧೬ಕ್ಕೆ ಬುಧ-ಶುಕ್ರರ ಯೋಗವಿದೆ, ಜುಲೈ ೩೫ ನೇ ೧೯ರಿಂದ ಆಗೋಸ್ಟ ೫ರ ವರೆಗೆ ಬುಧನ ಅಸ್ತವಿದೆ. ಆಗೋಸ್ಟ ೫ ನೇ ೧೯ರಿಂದ ಸೆಪ್ಟಂ ೭ರ ತನಕ ೧೯ರ ವರೆಗೆ ರವಿಯ ಅಸ್ತ (ಅಂದರೆ ರವಿ-ಶನಿ ಯೋಗ) ವಿದೆ, ಸೆಪ್ಟಂಬರ ೩೦ ಕ್ಕೆ ಬುಧ-ಶನಿ ಯೋಗ ಯುತಿಯುಂಟು, ಅದೇ ೩೦ ೧೧ಕ್ಕೆ ಬುಧ ಶನಿಯನ್ನು ಯುತಿಯಾಗುವದು, ಸೆಪ್ಟಂಬರ ೩೦ ೧೬ ರಿಂದ ಅಕ್ಟೋಬರ ೩೦ ೧೧ರ ತನಕ ಬುಧನು ಪುನಃ ಅಸ್ತನಾಗುವನು, ಅಕ್ಟೋಬರ ೩೦ ೯ಕ್ಕೆ ರವಿ-ಶನಿಯೋಗವಿದೆ, ಅದೇ ಪ್ರಮಾಣದ ತಿಂಗಳಲ್ಲಿ ಮತ್ತು ವಿಶಾಖಾ ತಿಂಗಳ ಪೂರ್ವಾರ್ಧದಲ್ಲಿ ಕರುಗಿ ಬುಧನ ಅಸ್ತವಾಗುವದು.

ಈ ಎಲ್ಲ ಯೋಗಗಳ ಮೇಲಿಂದ ಈ ವರ್ಷ ಮಳೆಗಾಲವು ಮೇ ತಿಂಗಳಿಂದ ಮೊದಲು ಪ್ರಾರಂಭವಾಗುವದೆಂದು ಶ್ರೀ ಕರಂದೀಕರರು ಮಾಡಿದ ಭವಿಷ್ಯದ ಅನುಭವವನ್ನು ನಾವು ಈ ಕೆಳಗೆ ಕೊಡುತ್ತೇವೆ. ಮೇ ತಿಂಗಳಲ್ಲಿ ಬೀಳುವ

ಯಾವತ್ತೂ ಅನುಕೂಲತೆಗಳಿಗಾಗಿ

ದಿ

ಕೆನರಾ ಲಾಜ

ಊಟ ಮತ್ತು ವಸತಿಗೃಹ

ಮೋಟರ ಸ್ಟೆಂಡ, ಹುಬ್ಬಳ್ಳಿ.

ಮಾಲಕ:— ಮ್ಯಾಥಿಯಸ್ ಪೈ.

[illegible]

ಜೂನ— [illegible]

ಜುಲಾಯಿ— [illegible]

ಅಗೋಸ್ತ— [illegible]

ಸಪ್ಟಂಬರ— [illegible]

ಅಕ್ಟೋಬರ— [illegible]

ನವಂಬರ— [illegible]

ಸ್ಥಾನಿಕ ವೃತ್ತಾಂತ

ಕುಮಟಾ— [illegible]

ಕೆನರಾ ಕೊಲೇಜ.

[illegible]

ಕುಮಟಾ, [illegible] | ಎನ್. ಟಿ. ಹೆಗಡೆ, ಚೆಅರಮನ್

[illegible]

ಜಾಹೀರ ಪ್ರಕಟನೆ.

[illegible]

ಮೋನೇಜಿಂಗ ಡಾಯರೆಕ್ಟರ, [illegible]

[illegible]

ಹೊಸ ಕ್ರೂಡ ಆಯಿಲ್ ಇಂಜಿನ ಪ ಚಕ್ಕಿ ಮಾರುವದಿದೆ.

೯—೧೦ H P ಕ್ರೂಡ ಆಯಿಲ್ ಇಂಜಿನ್ (ವಟೆರಲ್) ಬ್ರಿಟಿಶ್ ಮೇಕ, ಸ್ಟೋನ್ ಸ್ಪೀಡ ಮತ್ತು ೧೬" ಡಾಯಮಂಡ ಟ್ಯಾಕ ಎಮರಿ ಚಕ್ಕಿ (ಇಂಡಿಯನ್ ಮೇಕ) ಸಹಿತ ಮಾರುವದಿದೆ. ಕೊಂಡುಕೊಳ್ಳಲಿಚ್ಛಿಸುವವರು ಸಮಕ್ಷ ಭೆಟ್ಟಿಯಾಗಬೇಕು.

ಆಳ್ವೇ ಬ್ರದರ್ಸ,
ಮೇಲಿನ ಪೇಟೆ, **ಹೊನ್ನಾವರ.**

ತ್ವರೆ ಮಾಡಿರಿ! **ಛತ್ರಿಗಳು.** ತ್ವರೆ ಮಾಡಿರಿ.

ನಮ್ಮ ಸಂಗ್ರಹ ತೀರುವ ವರೆಗೆ ಈ ಕೆಳಗಿನ ದರಗಳಲ್ಲಿ ಛತ್ರಿಗಳನ್ನು ಪೂರೈಸುವೆವು

ಗವರ್ನರ	೯—೮—೦
ರೆಕ್ಸ	೮—೬—೦
ವೆಲ್ಡನ್	೭—೩—೦
೩೭೫ (ಹಡಗು ಛಾಪ)	೬—೧೨—೦
ಅಸ್ಟ ಡೇಟ (ಲಿಮಿಟೊ)	೮—೪—೦
ಸ್ಪೇಶಲ (ಲಿಮಿಟೊ)	೮—೬—೦
೨೩೫ (ಲಿಮಿಟೊ)	೬—೧೨—೦
೩೩೫ (ಲಿಮಿಟೊ)	೯—೦—೦
ಮಾಲಬಾರಮೋಲ (ಲಿಮಿಟೊ)	೧೨—೮—೦

ಇಂಗ್ಲೀಶ ಟಿಕ್ಕಟು ಹಿಲ್ಟ

The New Supply Agency,
KUMTA.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಅಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ.
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೮-೦
ಟಪಾಲಿಂದ ವರ್ಷಕ್ಕೆ ೪-೧-೦
ತಿಂಗಳಿಗೆ ೦-೬-೦
ಬಿಡಿ ಸಂಚಿಕೆಗೆ ೦-೧-೦
ಟಪಾಲಿಂದ ಪಡೆಯುವವರು ... ಕಳುಹಿಸಬೇಕು ...
ಮುಂಗಡ ಕಳಿಸಬೇಕು

Reg. No. B. 1270 Monday, 6-6-1949.

ಕಾನಡಾ ವೃತ್ತ

ವರ್ಷ ೪೧.] THE KANARA NEWS [ಸಂಚಿಕೆ ೪೯

ಕುಮಟಾ ಸೋಮವಾರ, ತಾ ೬-೬-೧೯೪೯

ಜಾಹೀರಾತುಗಳ ದರ
ಇಂಚಿಗೆ ...
... ಮಾಡಿಕೊಳ್ಳಲು ...
ಜಾಹೀರಾತುಗಳ ಬಗ್ಗೆ ...
ಇಲ್ಲಿ ಪತ್ರವ್ಯವಹಾರ
ಮಾಡಬೇಕು

ಸುದ್ದಿಗಳ ಸಂಗ್ರಹ

— ಸ್ವತಂತ್ರ ಹಿಂದುಸ್ಥಾನ ಸರಕಾರದ ರಾಜಮುದ್ರೆ ಈಗ ಸಿದ್ಧವಾಗಿದ್ದು ಅದರಲ್ಲಿ ಅಶೋಕ ಚಕ್ರವುಳ್ಳ ಸಿಂಹದ ಸಾರನಾಥ ಸ್ತಂಭದ ಮುಖದಂತೆ ನಿಂತ ಮೂರು ಸಿಂಹಗಳ ಚಿತ್ರವಿದ್ದು, ಕೆಳಗೆ ಸತ್ಯಮೇವ ಜಯತೇ ಎಂಬ ಸಂಸ್ಕೃತ ವಾಕ್ಯವು ದೇವನಾಗರಿ ಲಿಪಿಯಲ್ಲಿ ಕೆತ್ತಲ್ಪಟ್ಟಿದೆ. ಮಹಾತ್ಮರು ಸದಾ ಸರ್ವದಾ ಸತ್ಯವನ್ನು ಬಿಡಬೇಡಿರಿ, ಸತ್ಯಕ್ಕೆ ಸಾವಿಲ್ಲ, ಸತ್ಯವೇ ಸಂತತ ಸುಖ ಕೊಡಬಲ್ಲದು ಎಂದು ಬೋಧಿಸುತ್ತಿದ್ದರು ಮಹಾತ್ಮರ ಅನುಯಾಯಿಗಳಾದ ನಾವು ಅವರ ತತ್ವವನ್ನೇ ನಮ್ಮ ಮುಂದಿಟ್ಟುಕೊಂಡಿದ್ದರ ಸಾಕ್ಷಿಯೆಂದು ಮೇಲಿನ ಸಂಸ್ಕೃತ ಸೂಕ್ತಿಯು ಆರಿಸಲ್ಪಟ್ಟಿದೆ

— ಐತಿಹಾಸಿಕ ಕಲಾಕೃತಿಗಳ ಚಿತ್ರಗಳುಳ್ಳ ಹೊಸ ಬಂದೀ ಟಪಾಲ ತಿಕೀಟುಗಳು ಮುಂಬರುವ ಸ್ವಾತಂತ್ರ್ಯ ದಿನದಂದು ನಾಡಿನಲ್ಲೆಲ್ಲ ಮಾರಾಟಕ್ಕೆ ತೆಗೆಯಲ್ಪಡುವವು ಜಾರ್ಜ ಅರಸರ ಮುಖಮುದ್ರೆಯುಳ್ಳ ಈಗಿನ ತಿಕೀಟುಗಳ ಸಂಗ್ರಹ ತೀರುವ ತನಕ ಹಳೆಯ ಹಾಗೂ ಹೊಸ ತಿಕೀಟುಗಳು ಕೂಡಿಯೇ ಮಾರಲ್ಪಡುವವೆಂದು ಪ್ರಕಟವಾಗಿದೆ

ಸ್ವತಂತ್ರ ಹಿಂದುಸ್ಥಾನದ ಹೊಸ ರಾಜ್ಯಘಟನೆಯ ಚರ್ಚೆ ಈಗ ದಿಲ್ಲಿಯಲ್ಲಿ ನಡೆದಿದೆ ಬರುವ ಸ್ವಾತಂತ್ರ್ಯ ದಿನದೊಳಗಾಗಿ (ಆಗೋಸ್ಟ ತಾ ೧೫) ಅದನ್ನು ಪೂರ್ಣಗೊಳಿಸಬೇಕೆಂಬ ಸಂಕಲ್ಪವುಂಟು ಆದರೆ ಅದು ಕೈಗೂಡುವದೋ ಹೇಗೆಂಬುದನ್ನು ಯಾರು ನಿಶ್ಚಿತವಾಗಿ ಹೇಳಬಲ್ಲರು? ಅದರಿಂದ ಹೊಸ ಘಟನೆಯನ್ನು ಬರುವ ಸ್ವಾತಂತ್ರ್ಯ ದಿನದಂದು ಜಾರಿಯಲ್ಲಿ ತರಲಾಗದಿದ್ದರೆ ಅದನ್ನು ಮುಂಬರುವ ಗಾಂಧಿ-ಜಯಂತಿಯ ದಿನ ಇಲ್ಲವೆ ಜನವರಿ ತಾ ೨೬ನೇ ದಿನ ಆಚರಿಸಲ್ಪಡುವ ಹಳೆಯ ಸ್ವಾತಂತ್ರ್ಯ ದಿನ ದಂದಾದರೂ ಜಾರಿಯಲ್ಲಿ ತರಬೇಕೆಂಬ ಮಾತು ... ಹೊರಬೀಳುತ್ತಿವೆ

— ಹಿಂದುಳಿದ (ಪರಿಶಿಷ್ಟದಲ್ಲಿ ಕಾಣಿಸಿದ) ವರ್ಗಗಳಲ್ಲದೆ ಬೇರೆ ಯಾವ ಸಮಾಜಕ್ಕೂ ಪ್ರತಿನಿಧಿಕ ಸಂಸ್ಥೆಗಳಲ್ಲಿ ಸ್ಥಳಗಳನ್ನು ಕಾಯ್ದಿಡತಕ್ಕದ್ದಲ್ಲೆಂದು ಅಲ್ಪಸಂಖ್ಯಾತರ ಸಲಹಾ ಸಮಿತಿಯು ಮಾಡಿದ ಸೂಚನೆಯು ಘಟನಾ ಸಮಿತಿಯಲ್ಲಿ ಪ್ರಚಂಡ ಬಹುಮತದಿಂದ ಮಂಜೂರಾಗಿದೆ ಹಿಂದುಳಿದ ವರ್ಗಗಳಿಗಾದರೂ ೧೦ ವರ್ಷಗಳ ಕಾಲವಷ್ಟೇ ಕಾಯ್ದಿಟ್ಟ ಸ್ಥಳಗಳ ಸವಲತ್ತು ಸಿಗುವದು ಈ ವಿಷಯದ ಚರ್ಚೆ ನಡೆದಾಗ ಸರದಾರ ಪಟೇಲರು ಮರ್ಮಸ್ಪರ್ಶಿ ಭಾಷಣ ಮಾಡಿ, ತಾವು ಪ್ರತ್ಯೇಕರೆಂಬ ಭಾವನೆಯನ್ನಿಟ್ಟುಕೊಳ್ಳುವ ಮತ್ತು ಪ್ರತ್ಯೇಕ ಮತದಾರ ಸಂಘಗಳನ್ನು ಬೇಡುವ ದ್ವಿರಾಷ್ಟ್ರವಾದಿಗಳು ಹಿಂದುಸ್ಥಾನವನ್ನು ಬಿಟ್ಟು ಹೊರಟುಹೋಗುವದು ಲೇಸೆಂದು ಎಚ್ಚರಿಕೆ ಕೊಟ್ಟರು ಸರಕಾರಿ ನೌಕರಿಗಳಲ್ಲಿ ಸೇರಿರುವ ಜಾತಿವಾರ ಪ್ರಾತಿನಿಧ್ಯದ ತತ್ವವನ್ನು ಈಗ ನಿರ್ಮೂಲಿಸಬೇಕೆಂದು ಆ ಬಗ್ಗೆ ಶೋಧನೆ ಮತ್ತು ವಿಚಾರ ಮಾಡಲು ಕಳೆದ ವರ್ಷ ನೇಮಿಸಲ್ಪಟ್ಟ ದಿವಾಕರ ಉಪ ಸಮಿತಿಯು ಬೇಗನೇ ಘಟನಾ ಸಮಿತಿಗೆ ವರದಿಯನ್ನೊಪ್ಪಿಸುವ ಲಕ್ಷಣಗಳು ಕಂಡುಬರುತ್ತಿವೆ ಮುಂಬಯಿ ಮದ್ರಾಸ ವಗೈರೆ ದಕ್ಷಿಣ ಹಿಂದುಸ್ಥಾನದ ಕೆಲವು ಪ್ರಾಂತಗಳಲ್ಲಿಯೇ ಈ ಜಾತಿವಾರ ಪ್ರಾತಿನಿಧ್ಯದ ಬಾಹುಳ್ಯ ಕಂಡುಬರುತ್ತಿದೆಯಂತೆ

— ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳು ಒಟ್ಟುಗೂಡಿ ಒಂದು ಒಕ್ಕೂಟ ಸ್ಥಾಪಿಸಿಕೊಳ್ಳಬೇಕೆಂಬ ನಿರ್ಧಾರವಾಗಿದ್ದು ಈ ಒಕ್ಕೂಟದ ಪ್ರಾರಂಭೋತ್ಸವ ಇದೇ ಬರುವ ಜುಲಾಯಿ ತಾ ೧ಕ್ಕೆ ಜರುಗುವದು ಈ ಪ್ರಾರಂಭೋತ್ಸವಕ್ಕೆ ಸರದಾರ ಪಟೇಲರನ್ನು ಕರೆತರಬೇಕೆಂದು ಕೊಚ್ಚಿಯ ಮಹಾರಾಜರ ಇಚ್ಛೆಯಿರುತ್ತಿದ್ದು, ಸರದಾರರಿಗೆ ನಿಮಂತ್ರಣ ಕೊಡಲು ಸ್ವತಃ ಆ ಮಹಾರಾಜರೇ ಈಗ ದಿಲ್ಲಿಗೆ ಹೋಗಿರುತ್ತಾರೆ

— ಮೈಸೂರ ಸಂಸ್ಥಾನದಲ್ಲಿ ಮಹಾರಾಜರಿಂದ ನೇಮಕಪಟ್ಟ ದಿವಾಣರೇ ಇಷ್ಟುದಿನ ಸರಕಾರಿ ಅಧ್ಯಕ್ಷತೆಯ ಮೇಲಿದ್ದ ರಿಗಿದ್ದರು ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷರೂ ಅವರೇ ಆಗಿದ್ದರು ಆದರೆ ಲೋಕರಾಜ್ಯದ ಈ ಹೊಸ ಮನ್ವಂತರದಲ್ಲಿ ದಿವಾಣರ ಅಸ್ತಿತ್ವ ಅಸಂಗತವೆನಿಸುತ್ತದೆಂದು ಕಂಡು ಬಂದದ್ದರಿಂದ, ಮಂತ್ರಿಮಂಡಳದ ಒತ್ತಾಯಕ್ಕೆ ಮಹಾರಾಜರು ಇನ್ನು ಮುಂದೆ ದಿವಾಣರನ್ನು ನೇಮಿಸಿಕೊಳ್ಳಕೂಡದೆ ನಿರ್ಣಯಿಸಿರುತ್ತಾರೆ ಈಗಿರುವ ದಿವಾಣ ಸರ್ ಆರ್ಕಾಟ ರಾಮಸ್ವಾಮಿ ಮೊದಲಿಯಾರರು ಇದೇ ಬರುವ ಆಗೋಸ್ಟ ತಾ ೧ಕ್ಕೆ ಸೇವಾನಿವೃತ್ತರಾಗಲಿದ್ದಾರೆ ಅವರ ನಿವೃತ್ತಿಯನಂತರ ಸಂಸ್ಥಾನದಲ್ಲಿ ದಿವಾಣರು ಇರಲಿಕ್ಕಿಲ್ಲ ಕಳೆದ ವಾರದಿಂದ ಮೈಸೂರ ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷಸ್ಥಾನ ಸಹ ಸಭೆಯಿಂದ ಆರಿಸಲ್ಪಟ್ಟ ಶ್ರೀಮಾನ್ ವ್ಹಿ ವೆಂಕಟಪ್ಪನವರ ಕಡೆಗೆ ಹೋಗಿದೆ

— ಮುಂಬಯಿಯ ಜನಸಂಖ್ಯೆ ಈಗ ೩೦ ಲಕ್ಷಕ್ಕೆ ಏರಿದೆ ಆದರೆ ಮುಂಬಯಿಯಲ್ಲಿರುವ ಮನೆಗಳು ೯ ಲಕ್ಷ ಜನರಿಗೆ ಸಾಲುವಷ್ಟೇ ಇವೆ ಉಳಿದ ಜನರಿಗೆ ಕನಿಷ್ಠ ೪ ಲಕ್ಷ ಮನೆಗಳು (ಬಿಡಾರುಗಳು) ದರೂ ಬೇಕು ಇವನ್ನು ಕಟ್ಟಿಸಲಿಕ್ಕೆ ೨೦೦ ಕೋಟಿ ರೂಗಳು ಬೇಕಾಗುವವೆಂದು ಮುಂಬಯಿ ಸರಕಾರದ ಹೌಸಿಂಗ ಕಮಿಶನರರು ತಮ್ಮದೊಂದು ಭಾಷಣದಲ್ಲಿ ಹೇಳಿರುತ್ತಾರೆ

— ಪಡ ಬಿದ್ದಿರುವ ಸರಕಾರಿ ಇಲ್ಲವೆ ಸಾವಕಾರಿ ಹೊಲಗಳಲ್ಲಿ ಆಹಾರ ಧಾನ್ಯಗಳನ್ನು ಬೆಳಸಿದರೆ, ೧೯೪೯ರಿಂದ ೩ ವರ್ಷಗಳ ವರೆಗೆ ಅವುಗಳಿಗೆ ಸರಕಾರ ಕಂದಾಯ ಸೂಟ ಬಿಡಬೇಕೆಂದು ಮುಂಬಯಿ ಸರಕಾರವು ನಿರ್ಧರಿಸಿದೆ

— ಪ್ರಾಂತದೊಳಗಿನ ಎಲ್ಲ ಮಾಧ್ಯಮಿಕ ಶಾಲೆಗಳ ಆವರಗಳಲ್ಲಿ ಆಹಾರೋತ್ಪಾದನೆಯನ್ನು, ವಿಶೇಷವಾಗಿ ಕಾಯಿಪಲ್ಲೆಗಳ ಉತ್ಪತ್ತಿಯನ್ನು ಮಾಡಲು ಶಾಲೆಗಳ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪ್ರೋತ್ಸಾಹ ಕೊಡುವದಕ್ಕಾಗಿ, ಆ ಕಾರ್ಯವನ್ನು ಕೈಕೊಳ್ಳಲು ಮುಂದಾಗುವ ಪ್ರತಿಯೊಂದು ಶಾಲೆಗೆ, ಅವಶ್ಯವಿದ್ದ ಬೀಜ, ಗೊಬ್ಬರ ಮತ್ತು ಬೇಸಾಯ ಸಾಹಿತ್ಯ ಕೊಂಡುಕೊಳ್ಳಲಿಕ್ಕೆ ಅನುಕೂಲವಾಗುವಂತೆ ರೂ ೧೦೦ ರಂತೆ ಧನಸಹಾಯ ಕೊಡಬೇಕೆಂದು ಮುಂಬಯಿ ಸರಕಾರವು ಯೋಜನೆ ಮಾಡಿದೆ ಈಗಾಗಲೇ ಆ ಪ್ರಾಂತದೊಳಗಿನ ೩೦೦ ಶಾಲೆಗಳು ಈ ಯೋಜ

FOR BANKING SERVICE
IN TRADE INDUSTRY AND AGRICULTURE
APPROACH

The Agricultural & Industrial Bank, Ltd.,

(Established in 1934)

Head Off COONDAPOOR, S. Kanara

Branches

1 Ankola	7 Gokarn	13 Nagar
2 Belgaum	8 Haveri	14 Shimoga
3 Bhatkal	9 Hubli	15 Sirsi
4 Coondapoor	10 Karwar	16 Somwarpet
5 Dharwar	11 Kumta	17 Virajpet
6 Gadag	12 Mangalore	18 Honavar

19 BOMBAY (384-M ... House Kalbadevi Road)

CURRENT SAVINGS BANK, AND FIXED DEPOSITS ARE ACCEPTED

For terms apply to the nearest Branch

Coondapoor
1st June 1949

K. Vaman Shenai,
CHAIRMAN

ನೆಯಲ್ಲಿ ಸಹಕರಿಸಲು ಮುಂದಾಗಿವೆಯಂತೆ ನಮ್ಮಲ್ಲೂ ಈ ಯೋಜನೆಯನ್ನು ಕೈಕೊಂಡರೆ ಬಹಳ ಒಳಿತಾದೀತು

- ಹಿಂದುಸ್ಥಾನ ಮತ್ತು ಪಾಕಿಸ್ತಾನಗಳ ನಡುವೆ ಕಾಶ್ಮೀರದ ಬಗ್ಗೆ ನಡೆದಿರುವ ವಿವಾದವನ್ನೂ ಜಗಳವನ್ನೂ ಬಗೆಹರಿಸುವದಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳವು ನೇಮಿಸಿರುವ ಕಾಶ್ಮೀರ ಸಮಿತಿಯು, ತನ್ನಿಂದ ಈ ಕೆಲಸವು ಸಾಧ್ಯವಾಗುವಂತಿಲ್ಲೆಂದು ಭದ್ರತಾ ಮಂಡಳಕ್ಕೆ ಬೇಗನೇ ವರದಿ ಮಾಡುವ ಲಕ್ಷಣಗಳು ತೋರಬರುತ್ತಿವೆಂದು ಸುದ್ದಿಯುಂಟು ಭದ್ರತಾ ಮಂಡಳವೂ ಕೂಡ ಬೇಸತ್ತು " ನಿಮ್ಮ ತಂಟೆಯನ್ನು ನೀವೇ ಬಗೆಹರಿಸಿಕೊಳ್ಳಿರಿ ಎಂದು ಹೇಳಬಹುದೆಂದು ಕೆಲವರು ಊಹಿಸುತ್ತಾರೆ

— ಜರ್ಮನಿಯ ಭವಿತವ್ಯವನ್ನು ರೂಪಿಸುವ ಪ್ರಶ್ನೆಯ ಮೇಲೆ ಮತಭೇದಗಳಾದ್ದರಿಂದ ಚದರಿಹೋದ ಚತುರ್ಮಹಾರಾಷ್ಟ್ರಗಳ (ರಷಿಯಾ, ಅಮೇರಿಕಾ, ಬ್ರಿಟನ ಮತ್ತು ಫ್ರಾನ್ಸ ರಾಷ್ಟ್ರಗಳ) ವಿದೇಶ ಮಂತ್ರಿಗಳ ಸಭೆ ೧|| ವರ್ಷದ ನಂತರ ಪುನ ಕಳೆದ ತಿಂಗಳ ೨೩ ರಿಂದ ಪಾರೀಸದಲ್ಲಿ ಕೂಡಿದೆ, ಆದರೆ ಈ ವರೆಗೆ ಈ ಸಭೆಯಲ್ಲಿ ಯಾವದೇ ಪ್ರಶ್ನೆಯ ನಿರ್ಣಯವಾಗಿಲ್ಲ ! ರಶ್ಯರ ಯೋಜನೆಗಳು ಪಾಶ್ಚಾತ್ಯ ಮಿತ್ರರಿಗೆ ಒಪ್ಪಿಗೆಯಾಗುವದಿಲ್ಲ ! ಮಿತ್ರರ ಯೋಜನೆಗಳು ರಶ್ಯರಿಗೆ ರುಚಿಸುವದಿಲ್ಲ ! ' The East is east the West is west The twain can never meet ' (ಪೂರ್ವವದು ಪೂರ್ವವೇ ಪಶ್ಚಿಮವದು ಪಶ್ಚಿಮವೇ ಆ ಎರಡೂ ದಿಕ್ಕುಗಳು ಒಂದುಗೂಡುವದು ಎಂದಾದರೂ ಸಾಧ್ಯವೇ ?) ಎಂದು ಇಂಗ್ಲಿಶ ಆಸ್ಥಾನ ಕವಿ ರಡಯಾರ್ಡ ಕಿಪ್ಲಿಂಗನು ತನ್ನದೊಂದು ಕವಿತೆಯಲ್ಲಿ ಹೇಳಿರುವ ಮಾತು ಪಾರೀಸದಲ್ಲಿ ಕೂಡಿದ ವಿದೇಶ ಮಂತ್ರಿಗಳ ಕೂಟಕ್ಕೆ ಒಳಿತಾಗಿ ಅನ್ವಯಿಸುತ್ತಿದೆ

— ಕಲಕತ್ತೆಯ ಹೊರಗಿಂದ ಕಲಕತ್ತೆಯ ಸೀಧಾ ಪ್ರದೇಶದಲ್ಲಿ ಕಳ್ಳತನದಿಂದ ಕೆಲವು ಅಕ್ಕಿ ತಂದ ಬಗ್ಗೆ ಪೋಲೀಸರು ಮಾಡಿಕೊಟ್ಟ ಖಟ್ಲೆಯಲ್ಲಿ ಕಲಕತ್ತೆಯ ನಗರ ನ್ಯಾಯಾಧೀಶರೊಬ್ಬರು ಆರೋಪಿಗೆ ಒಂದೇ ಒಂದಾಣೆಯ ದಂಡದ ಮೇಲೆ ಬಿಡುಗಡೆ ಮಾಡಿ ಕಲಕತ್ತೆಯ ಜನರಿಗೆ ಸಿಗುವ ಸೀಧಾ ಅಕ್ಕಿಯ ಪರಿಮಾಣದ ಬಗ್ಗೂ ಅಕ್ಕಿಯ ನಮೂನೆಗಳ ಬಗ್ಗೂ ಮಾಡಿದ ಟೀಕೆ ಈ ಹಿಂದೆ 'ವೃತ್ತ'ದಲ್ಲಿ ಪ್ರಕಟವಾಗಿದೆಯಷ್ಟೇ ಈ ಟೀಕೆಯ ವಿರುದ್ಧ ಬಂಗಾಲ ಸರಕಾರವು ಕಲಕತ್ತೆಯ ಹಾಯಕೋರ್ಟಿಗೆ ಅರ್ಜಿ ಮಾಡಿ, ನಗರ ನ್ಯಾಯಾಧೀಶರ ತೀರ್ಪಿನೊಳಗಿನ ಸದರಿ ಟೀಕೆಯ ಭಾಗವನ್ನು ಕತ್ತರಿಸಬೇಕಾಗಿ ಬೇಡಿಕೆ ಮಾಡಿತ್ತು ನ್ಯಾಯಮೂರ್ತಿಗಳು ಈ ಅರ್ಜಿಯನ್ನು ಕಳೆದ ಬುಧವಾರ ತಿರಸ್ಕರಿಸಿದ್ದಾರೆ. " ನಾವೆಲ್ಲರೂ ಸೀಧಾ ಕಷ್ಟಗಳನ್ನು ಅನುಭವಿಸುತ್ತಿದ್ದೇವೆ ನಮಗೆಲ್ಲರಿಗೆ ಆಗುವ ಆ ಕಷ್ಟಗಳನ್ನು ನಗರ ನ್ಯಾಯಾಧೀಶರು ಧೈರ್ಯದಿಂದ ವ್ಯಕ್ತಗೊಳಿಸಿದ್ದಾರಷ್ಟೇ ! " ಎಂದು ನ್ಯಾ| ಮೂ|| ಮಿತ್ರರು ಉದ್ಗರಿಸಿ, ನ್ಯಾಯಾಧೀಶರ ಟೀಕೆ ಸೀಧಾ-ಪದ್ಧತಿಯನ್ನು ದೂಷಿಸುವದಿಲ್ಲೆಂದಿಷ್ಟೇ ಸರಕಾರಕ್ಕೆ ಆಶ್ವಾಸನೆ ಬೇಕಾದರೆ ಆ ಆಶ್ವಾಸನೆಯನ್ನು ಕೊಡಲಡ್ಡಿಯಿಲ್ಲೆಂದು ಹೇಳಿದರು

— "ವನಸ್ಪತಿ (ತುಪ್ಪ)" ಇಲ್ಲವೆ "ವನಸ್ಪತಿಜನ್ಯ ಪದಾರ್ಥ" ವೆಂದು ಮಾರಲ್ಪಡುವ ವಸ್ತುವಿನಲ್ಲಿ ತುಪ್ಪದ ಯಾವದೇ ಗುಣವಿರುವದಿಲ್ಲ ಮೇಲಾಗಿ ಈ ವಸ್ತುವು ಶರೀರಕ್ಕೆ ಅಪಾಯ ಕಾರಿಯಾಗುತ್ತದೆಂದು ಬಹಳ ತಜ್ಞರ ಅಭಿಪ್ರಾಯವಿದೆ. ಆದರಿಂದ ಈ ' ತುಪ್ಪ ' ದ ನಿರ್ಮಿತಿಯನ್ನು ಪ್ರತಿಬಂಧಿಸಬೇಕೆಂದು ಅವರು ಸರಕಾರಕ್ಕೆ ಒತ್ತಾಯ ಮಾಡುತ್ತಿದ್ದಾರೆ ಸರಕಾರದವರ ಮನೋನಿರ್ಣಯವಿನ್ನೂ ಆಗಲೊಲ್ಲದು ಇನ್ನೂ ಅವರು " ವನಸ್ಪತಿ ಯ ಗುಣಾವಗುಣಗಳ ಪರೀಕ್ಷಣ ಮಾಡಿಸುವದರಲ್ಲಿ ತೊಡಗಿದ್ದಾರೆ. ಆದರೆ ಮೊನ್ನೆಯೇ ಹಿಂದಸರಕಾರವು ಒಂದು ಆಜ್ಞೆ ಹೊರಡಿಸಿ, ಇನ್ನು ಮುಂದೆ "ವನಸ್ಪತಿ ಯನ್ನು ತುಂಬಿ ಪೇಟೆಗೆ ಕಳಿಸುವ ಡಬ್ಬಿಯಾ ಬಾಟಲಿಗಳ ಮೇಲೆ " ವನಸ್ಪತಿ " ಯಾ 'ವನಸ್ಪತಿಜನ್ಯ ಪದಾರ್ಥ ' ವೆಂದು ಪಟ್ಟಿಯನ್ನು ಹಚ್ಚದೆ " ಹೈಡ್ರೋಜನೇಟೆಡ್ ಒಯ್ಲ " (ಜಲಜನಕ ವಾಯುವಿನಿಂದ ಸಂಸ್ಕಾರ ಕೊಟ್ಟ ಎಣ್ಣೆ) ಎಂಬ ಪಟ್ಟಿಯನ್ನು ಹಚ್ಚಬೇಕೆಂದೂ, ಯಾವ ಎಣ್ಣೆಯಿಂದ ತಯಾರಿಸಿದ ಪದಾರ್ಥವೆಂಬುದನ್ನು ಕೂಡ ಪಟ್ಟಿ (ಲೇಬಲ್) ಯಲ್ಲಿ ಕಾಣಿಸಬೇಕೆಂದೂ ವಿಧಿಸಿದೆ ವನಸ್ಪತಿಯನ್ನು ಹೆಚ್ಚಾಗಿ ಶೇಂಗಾ ಎಣ್ಣೆ, ಹತ್ತಿಕಾಳಿನ ಎಣ್ಣೆ ಮತ್ತು ಕೊಬರಿ ಎಣ್ಣೆಗಳಿಂದ ತಯಾರಿಸುತ್ತಾರೆ ಜಲಜನಕ ವಾಯುವಿನ ಸಂಸ್ಕಾರ ಕೊಡುವಾಗ ಎಣ್ಣೆಯೊಳಗಿನ ಕೆಲವು ಅಂಶಗಳೂ ದ್ರವ್ಯಗಳೂ ನಷ್ಟವಾಗುತ್ತವೆಂದು ಸಂಶೋಧಕರ ಅಂಬೋಣವಿದೆ ಭಾರತ ಸರಕಾರದ ಆಜ್ಞೆ ಅಮಲಿನಲ್ಲಿ ಬಂದರೆ ವನಸ್ಪತಿ"ಯು ತುಪ್ಪವಲ್ಲ, ತುಪ್ಪದಂತೆ ತೋರುವ ಎಣ್ಣೆಯು ವಿಕಾರವೆಂದಾದರೂ ಜನರಿಗೆ ತಿಳಿದು ಬರುವದೆಂಬುದೇ ಒಂದು ಸಮಾಧಾನ

— ಚೀನದಲ್ಲಿ ಕಮ್ಯುನಿಸ್ಟರ ಪ್ರಗತಿ ಎಂದಿನಂತೆ ನಡೆದಿದೆ ಅವರ ಸೇನೆಗಳು ಒಂದೆರಡು ವಾರಗಳಲ್ಲಿ ಕಂತ ನವನ್ನು ಕೈವಶಪಡಿಸಿಕೊಂಡ ಸುದ್ದಿ ಬರುವದೆಂದು ನೀವು ನಿರೀಕ್ಷಿಸಬಹುದಾಗಿಲ್ಲ ಕಮ್ಯುನಿಸ್ಟರೊಡನೆ ಶಾಂತಿ ಸಂಧಾನ ನಡೆಸಲು ಅಧಿಕಾರಾರೂಢವಾಗಿದ್ದ ಮಂತ್ರಿಮಂಡಳವು ರಾಜೀನಾಮೆಯನ್ನಿತ್ತಿದೆ ಸ್ವತಃ ಸಂ|| ಚಾಂಗ ಕೈ ಶೇಕರು ಈಗ ರಾಜ್ಯಸೂತ್ರಗಳನ್ನು ಕೈಯ್ಯಲ್ಲಿ ತಕ್ಕೊಂಡಿದ್ದಾರೆ ಆದರೆ ಅತ್ತ ಕೆಲವರು ದಿವಂಗತ ಸನ್-ಯತ್-ಸೇನರ ಧರ್ಮಪತ್ನಿಗೆ ಅಧ್ಯಕ್ಷಪಟ್ಟ ಕಟ್ಟಿ, ಕಮ್ಯುನಿಸ್ಟರಿಗೆ ಸರಕಾರದಲ್ಲಿ ಹೆಚ್ಚಿನ ಅಧಿಕಾರಗಳನ್ನು ಕೊಟ್ಟು ಚೀನದಲ್ಲಿ ಸಮ್ಮಿಶ್ರ ಸರಕಾರ ಸ್ಥಾಪಿಸಿ ಶಾಂತಿಯನ್ನುಂಟು ಮಾಡಬೇಕೆಂಬ ಯೋಜನೆ ನಡೆಸಿದ್ದಾರಂತೆ ಚೀನದ ಪ್ರಮುಖ ರಾಜಕಾರಣಿಗಳಿಬ್ಬರು ಚತುರ್ಮಹಾರಾಷ್ಟ್ರಗಳ ವಿದೇಶ ಮಂತ್ರಿಗಳು ಕೂಡಿರುವ ಪಾರೀಸಕ್ಕೆ ಹೋದ ಸುದ್ದಿಯೂ ಒಂದಿದೆ ಏನೋ ಮಹತ್ವದ ರಾಜಕಾರಣ ಅಲ್ಲಿ ಜೀಯುತ್ತಿರಬೇಕೆಂಬ ಸಂಶಯ ಬರುತ್ತಿದೆ ಇನ್ನೊಂದು ವಾರದೊಳಗೆ ಚೀನದ ಭವಿಷ್ಯ ಯಾವ ರೂಪದ್ದಾಗವದೆಂಬುದು ಸ್ಪಷ್ಟವಾಗುವದು

ಸ್ಥಾನಿಕ ವೃತ್ತಾಂತ

ಕುಮಟಾ— ದಿನಾಲೂ ಮಳೆಯಾಗುತ್ತಿದೆ ಆದರೂ ಹವೆಯಲ್ಲಿ ಉಷ್ಣತೆಯ ಅಂಶ ಹೆಚ್ಚಿಗೆಯುಂಟು, ಮಳೆ ಸರಿಯಾಗಿ ಬೀಳಲಿಕ್ಕೆ ಇನ್ನೂ ಕಾಯಬೇಕಾಗುತ್ತದೆ,

ಈಗ ಶುಕ್ಲ ಪಕ್ಷವೆಂದು ಮ್ಯುನಿಸಿಪಾಲಿಟಿಯು ಮಾರ್ಗಗಳಲ್ಲಿ ದೀಪಗಳನ್ನು ಹಚ್ಚುವದಿಲ್ಲ ! ಮಳೆಗಾಲದಲ್ಲಿ (ಜೂನದಿಂದ ಸಪ್ಟಂಬರ ವರೆಗೆ) ಶುಕ್ಲ-ಕೃಷ್ಣ ಪಕ್ಷಗಳೆಂಬ ಪಕ್ಷಪಾತ ಮಾಡದೆ ಎಲ್ಲ ರಾತ್ರಿಗಳಲ್ಲೂ ದೀಪ ಹಚ್ಚುವ ಹಿಂದಿನ ಪ್ರಘಾತ ಎಂದಿನಿಂದ ರದ್ದಾಗಿದೆಂಬುದು ತಿಳಿಯದು !

ಗೋಕರ್ಣದಿಂದ ಗಂಗಾವಳಿ ಹೊಳೆಯ ಮುಖದ ವರೆಗಿನ ಕಡಲ ದಂಡೆಯ ಮೇಲೆ ಬಹಳ ಕಳ್ಳ ಸಾರಾಯಿ ಬಂದಿಳಿಯುತ್ತಿದ್ದ ಸುದ್ದಿಯುಂಟು, ಸಾರಾಯಿಗಳ್ಳರೂ ಕುಡುಕರೂ ಹಗಲು ಹೊತ್ತಿನಲ್ಲಿ ಸಹ ಕೈಯಲ್ಲಿ ಸಾರಾಯಿಯ ಬಾಟಲಿಗಳನ್ನು ಹಿಡಿದು ಮಾರ್ಗದ ಮೇಲಿಂದ ಹೋಗುತ್ತಿರುವದು ದೃಷ್ಟಿಗೆ ಬೀಳುತ್ತದಾಕೆ ! ಮದ್ಯಪ್ರತಿಬಂಧಕ ಸಿಬಂದಿಯವರು ಎಲ್ಲಿ ಸಮಾಧಿ ತಳೆದಿದ್ದಾರೋ ಏನೋ !

ಹೊನ್ನಾವರ— ಬಳಕೂರ ಶಾಲೆಯು ಮಳೆಗಾಲ ಮುಗಿಯುವ ವರೆಗೆ ಈಗಿನ ಶಾಲಾ ಬಿಲ್ಡಿಂಗಿನಿಂದ ಮುಂಜಾನೆ ಬಂದಿಲ್ಲವಾದ್ದರಿಂದ ಮುಂದಿನ ಕೆಲಸ ಮಾಡಲಿಕ್ಕೆ ಅಡ್ಡಿಯಾಗಿದೆಯೆಂದು ಆ ಬೋರ್ಡಿನ ಅಧ್ಯಕ್ಷರು ಬರೆಯುತ್ತಾರೆ

ಶಿರಸಿ— ಕಳೆದ ತಾ. ೧೬ನೇಗೆ ಮುಂಬಯಿಯ ಒಕ್ಕಲತನದ ಮಂತ್ರಿ ಮಾನ್ಯ ಪಾಟೀಲರು ಇಲ್ಲಿ ಬಂದು, ಜಿಲ್ಹಾ ಗ್ರಾಮೋದ್ಧಾರ ಮಂಡಳದ ಸಭೆಯಲ್ಲಿ ಸರಕಾರದವರ ಆಹಾರ-ಧಾನ್ಯ ಹೆಚ್ಚು ಬೆಳೆಸುವ ಯೋಜನೆಯನ್ನು ವಿವರಿಸಿದರು, ಎಲ್ಲರೂ ಪ್ರಯತ್ನಪಟ್ಟು ಜಿಲ್ಹೆಯನ್ನು ಆಹಾರದೃಷ್ಟಿಯಿಂದ ಸ್ವಾವಲಂಬಿ ಮಾಡಬೇಕೆಂಬುದೇ ಅವರ ಮಾತಿನ ಸಾರಾಂಶವಾಗಿತ್ತು,

ಕರ್ನಾಟಕ ಪ್ರಾಂತದೊಳಗಿನ ವಾಚನಾಲಯಗಳ ಬಗೆಗೆ ಸಲಹೆ ಕೊಡಲು ಸರಕಾರವು ನೇಮಿಸಿದ ಪ್ರಾದೇಶಿಕ ಸಲಹೆಗಾರ ಸಮಿತಿಯಲ್ಲಿ ನಮ್ಮ ಜಿಲ್ಹೆಯ ಪ್ರತಿನಿಧಿಗಳಾಗಿ ರಾ|| ಸಾಹೇಬ ವೆಂಕಟರಮಣ ಹೆಗಡೆಯವರು ನೇಮಿಸಲ್ಪಟ್ಟಿದ್ದಾರೆ,

ಯಲ್ಲಾಪುರ— ಬರುವ ಅಗೋಸ್ತ ತಿಂಗಳಲ್ಲಾಗುವ ಹಿಂದೀ ಪರೀಕ್ಷೆಗಳಿಗೆ ಕೂಡ್ರುವವರ ಅನುಕೂಲಕ್ಕಾಗಿ ಇಲ್ಲಿ ಒಂದು ಹಿಂದೀ ವರ್ಗ ತೆರೆಯಲ್ಪಡುವದು ವಿದ್ಯಾರ್ಥಿಗಳು ಹಿಂದೀ ಪ್ರಚಾರಕರನ್ನು ಕಂಡು ತಮ್ಮ ಹೆಸರು ದಾಖಲು ಮಾಡಿಸಿಕೊಳ್ಳಬಹುದು

ಮೇ ತಿಂಗಳ ೩ನೇ ವಾರದಲ್ಲೇ ಅನಪೇಕ್ಷಿತವಾಗಿ ಮಳೆಯಾಗಹತ್ತಿದ್ದರಿಂದ ಒಕ್ಕಲಿಗರಿಗೆ ಬಹಳ ನಷ್ಟವಾಗಿದೆ ಹಿಂಗಾರ ಬೆಳೆ ಸರಿಯಾಗಿ ಕೊಯ್ಯಲಿಕ್ಕಾಗದೆ ಕಷ್ಟವಾಯಿತು ಒಕ್ಕದೆ ಉಳಿದಿದ್ದ ಬಣವೆಗಳಿಗೂ ಪೆಟ್ಟು ಬಿತ್ತು

ಕೆಲವೆ ಶಾಲೆಯ ಮನೆ ತೀರ ಜೀರ್ಣವಾಗಿದೆ ಈ ಮಳೆಗಾಲದಲ್ಲಿ ಅದು ಬೀಳುವದು ಖಂಡಿತ ಬೋರ್ಡಿನವರು ಆ ಕಡೆ ಲಕ್ಷ ಕೊಡಬೇಕು

ಕೆನರಾ — ಬೊಂಬೇ ಮತ್ತು ಬೊಂಬೇ — ಕೆನರಾ

ಪ್ರಯಾಣಿಕರ ಅನುಕೂಲತೆಗಾಗಿ

ಊಟ ಮತ್ತು ವಸತಿ ಸೌಕರ್ಯದ ನಡುಕೇಂದ್ರ

ಈ

ಕೆ ನ ರಾ ಲಾ ಜ

[ಬೋರ್ಡಿಂಗ ಮತ್ತು ಲಾಜಿಂಗ]

ಅವಶ್ಯ ಸಂದರ್ಶಿಸಿರಿ. ಮೋಟರ-ಸ್ಟಾಂಡ, ಹುಬ್ಬಳ್ಳಿ.

ಮಾಲಕ. — ಮ್ಯಾನೇಜರ.

ಜಿಲ್ಲಾ ಸಮಾಚಾರ.

ಭಟಕಳ— [illegible]

[illegible]

ಕುಮಟಾ— [illegible]

[illegible]

ಪ್ರಕಟಣೆ.

[illegible]

ಜಿಲ್ಲಾ ಸ್ಕೂಲ ಬೋರ್ಡ ಕಚೇರಿ, ಕಾರವಾರ [illegible]

G J GUNJIKAR
ಎಡ್ಮಿನಿಸ್ಟ್ರೇಟಿವ್ ಆಫೀಸರ [illegible]

[illegible]

ಪೆಟ್ರೋಲ-ಕೆರೋಸಿನಗಳ ಏಜನ್ಸಿ.

[illegible] ಪೆಟ್ರೋಲ, ಕೆರೋಸಿನ, [illegible] ಎಲ್ಲ ತರದ ಏಜಂಟರನ್ನು ನೇಮಿಸುವದುಂಟು [illegible] X ( ) 'ಕಾನಡಾವೃತ್ತ'ಕ್ಕೆ [illegible]

ನಮ್ಮಲ್ಲಿ

[illegible] ವ್ಯಾಪಾರಿಗಳಿಗೆ ಬೇಕಾಗುವ ಸೇಲ ನೋಟ ಬೂಕುಗಳೂ, E B 3 ಸಣ್ಣ-ದೊಡ್ಡ ಲೆಕ್ಕದ ಬೂಕುಗಳೂ, ಗೇಣಿ-ರಶೀದಿ ಬೂಕುಗಳೂ, ಸೇಫಾ-ಅಂಗಡಿಗಳಿಗೆ ಬೇಕಾಗುವ ಇಂಗ್ಲಿಷ-ಕನ್ನಡ ಕೇಶ ಮೆಮೋ ಬೂಕುಗಳೂ ಯೋಗ್ಯ ದರದಲ್ಲಿ ಸಿಗುತ್ತವೆ.

ವಿಳಾಸ — ಮೆನೇಜರ,
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

— R —

ಸಮಾರಂಭಗಳಲ್ಲಿ ಖಾದ್ಯಗಳನ್ನು ಹಂಚುವದು.

[illegible] (moffusil) [illegible]

[illegible] (nuts) [illegible]

[illegible]

[illegible]

ಅಂಕೋಲಾ— [illegible]

ಕಾರವಾರ— [illegible]

[illegible]

ADVERTISEMENT.

Matriculates or S. S. C Examination passed persons desiring to undergo the Sub-Overseers' Nine months' Training Course in the Engineering College, Poona at the ensuing session starting from 1-7-49 with stipends from the D. L. B. Kanara, should apply to the U/s by the 20th June 1949. Apply for forms and other details to the D. L. B. Office, Karwar.

V. K. B. BALKUR,
4-6-1949. PRESIDENT,
D. L. B., KANARA.

ಜಾಹೀರ ನೋಟೀಸಿನ ಉತ್ತರಕ್ಕೆ ಪ್ರತ್ಯುತ್ತರ.

[illegible]

ಮಾರುವದಿದೆ.

[illegible]

THE BANK OF RURAL INDIA LTD.

(Incorporated in British India, Liability of Members limited.)

HEAD OFFICE :— "Satyabhama Bhavan", **KARWAR.** N. K.

Offices at :— KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR.

Authorised Capital .. **Rs. 10,00,000;**
Subscribed Capital .. **Rs. 5,00,000;**
Paid-up Capital & Reserves .. **Rs. 5,08,502-8-0.**

Rates of Interest on Deposits:

Current a/c. @ 1% p. a. ***Savings Bank a/c @ 2½%.***

Fixed Deposits for 3 months @ 3% per annum.
" " for 6 monnths @ 3½%
" " for 12 monhs or more @ 4% "

All kinds of modern Banking business transacted.

Karwar, 14-2-1948 **P. X. GRACIOUS,** MANAGING DIRECTOR.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೩-೧೦-೦
" ೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ೦-೧-೦
ವ್ಹಿ. ಪಿ. ಯಿಂದ ಚಂದಾದಾರರು
ವ್ಹಿ. ಪಿ. ಪೆಟ್ಟಿ ೬ ಆಣೆ ಹೆಚ್ಚಿಗೆ
ಕೊಡಬೇಕು, ಚಂದಾದ ಹಣವನ್ನು
ಮುಂಗಡ ಕಳಿಸತಕ್ಕದ್ದು.

Reg. No. B. 1270. Monday, 13-6-1949.

ಕಾನಡಾವೃತ್ತ

ವರ್ಷ ३೦.] THE KANARA NEWS. [ಸಂಚಿಕೆ ೫೦.

ಕುಮಟಾ: ಸೋಮವಾರ, ತಾ. ೧೩—೬—೧೯೪೯.

ಜಾಹೀರಾತುಗಳ ದರ:
೧೬ ಎಕರ್ ಉದ್ದ
೧ ಸಾರಿಗೆ ೪ ಆಣೆಯಂತೆ,
ಹೆಚ್ಚು ಅಲ್ಲದೆ ವಿಶೇಷ ಕಾಲಂನ
ಜಾಹೀರಾತುಗಳ ಬಗ್ಗೆ ಕಮ್ಮಿ
ಅಲ್ಲದೆ ಪತ್ರದ್ವಾರಾ
ತಿಳಿಸಲಾಗುವದು.

ಸ್ಥಳಿಕ ವಿಷಯಗಳು

(ಲೇ:- ಸ್ಥಳವಂತಿಕ)

ಕಾಂಗ್ರೆಸ ಮಂತ್ರಿ-ಮಂಡಳದ ಆಢಳಿತೆಯಲ್ಲಿ ಆಢಳಿತದ ಕಟ್ಟುಗಳೆಲ್ಲ ಶಿಥಿಲವಾಗಿ ಎಲ್ಲೆಲ್ಲೂ ಈಗ ಅವ್ಯವಸ್ಥೆಯುಂಟಾಗಿದೆ. ಪೂರೈಕೆ ಇಲಾಖೆಯ ನಡಾವಳಿಯನ್ನು ವಿಮರ್ಶಿಸಿದರೆ ಈ ಮಾತಿನ ಮನವರಿಕೆಯಾಗುತ್ತಿದೆ. ಈ ವರ್ಷ ಕೃತ್ತಿಕಾ ನಕ್ಷತ್ರದಿಂದಲೇ ಮಳೆಗಾರಂಭವಾಗಿದೆ. ಸರಕಾರದವರ ಹವಾಮಾನ-ತಜ್ಞರು ಕೂಡ ಈ ವರ್ಷ ಮಳೆ ಮುಂಚಿತವಾಗಿಯೇ ಬೀಳುವದೆಂದು ತಿಳಿಸಿದ್ದರು. ಇಂಥ ವಿಷಮ ಕಾಲದಲ್ಲಿ ಸಮುದ್ರ-ಸಾರಿಗೆ ಸುರಕ್ಷಿತವಲ್ಲೆಂದು ಯಾವನೊಬ್ಬ ಮಂದಮತಿಯು ಸಹ ಹೇಳ್ಯಾನು. ಇಂಥ ಕಾಲದಲ್ಲಿ ನಮ್ಮಲ್ಲಿಯ ಬಂದರಗಳು ಹಡಗಗಳ ಓಡಾಟಕ್ಕೆ ಸುರಕ್ಷಿತವಲ್ಲ. ಆದರೂ ಪೂರೈಕೆ ಇಲಾಖೆಯವರು ಮೇ ತಿಂಗಳ ಕೊನೆಗೆ ೮೩೦ ಜವಳಿಯ ಗಂಟುಗಳನ್ನೂ ೪೦೦ ಚಿಲ್ಲರೆ ನೂಲಿನ ಗಂಟುಗಳನ್ನೂ ಮುಂಬಯಿಯಿಂದ ಹಡಗದ್ವಾರಾ ಕಾರವಾರಕ್ಕೆ ಕಳಿಸಿಕೊಡುವ ಸಾಹಸ ಮಾಡುತ್ತಾರೆ! ಸುಮಾರು ೨೫ ಲಕ್ಷ ರೂ. ಬೆಲೆ ಬಾಳುವ ಆ ಗಂಟುಗಳು ಇನ್ನೂ ಕಾರವಾರಕ್ಕೆ ತಲ್ಪಿಲ್ಲ; ಎಲ್ಲಿವೆಂಬ ಪತ್ತೆಯೂ ಇಲ್ಲ!! ಈ ಸರಕು ಬಂದಲ್ಲಿ ಅದನ್ನು ಇಳಿಸಿಕೊಳ್ಳುವದು ಅಶಕ್ಯವೆಂದು ಹಡಗಗಳ ಕಂಪನಿಯ ಸ್ಥಾನಿಕ ಪ್ರತಿನಿಧಿಗಳು ತಿಳಿಸಿದ್ದರಂತೆ. ಇಷ್ಟು ವ್ಯವಹಾರಜ್ಞಾನ ಕೂಡ ಜಿಲ್ಹಾಧಿಕರ ಕಚೇರಿಯೊಳಗಿನ ಬುದ್ಧಿಶಾಲಿ ಮತ್ತು ದಕ್ಷ (!) ಅಧಿಕಾರಿಗಳಿಗೆ ಇರದಿದ್ದದ್ದು ಆಶ್ಚರ್ಯದ ಮಾತೇ ಸರಿ! ಸರಕಾರಕ್ಕೆ ಪ್ರಸ್ತುತ ವ್ಯವಹಾರದಲ್ಲಿ ಎಷ್ಟು ನಷ್ಟವಾಗುವದೆಂದು ಹೇಳಬರುವದಿಲ್ಲ. ಹಡಗ ಹತ್ತಿರ ಸರಕು ಸಮುದ್ರದ ಪಾಲಾಗದೆ ಸುದೈವದಿಂದ ಮುರಗಾಂವ ಬಂದರದಲ್ಲಿ ಇಳಿದರೆ, ನಮ್ಮ ಜಿಲ್ಹಾಧಿಕರ ಕಚೇರಿಯ ದೊಡ್ಡ ಸಂಬಳದ ೧-೨ ಅಧಿಕಾರಿಗಳು ಮುರಗಾಂವಕ್ಕೆ ಹೋಗಿ, ಬಂದಿಳಿದ ಗಂಟುಗಳ ತಪಾಸಣೆ ಮಾಡಿ, ನಡುವೆ ನಷ್ಟವಾದ ಗಂಟುಗಳ ಪಂಚನಾಮೆ ಮಾಡುವರು! ಈ ಬಗ್ಗೆ ಅವರಿಗೆ ಪ್ರವಾಸ-ಭತ್ತೆ ಮುಂತಾದ್ದು ಸರಕಾರದಿಂದ ಕೊಡಬೇಕಾಗುವದು! ಮುರಗಾಂವದಲ್ಲಿ ಬಂದಿಳಿದ ಸರಕು ಮುಂದೆ ಉಗಿಬಂಡಿಯಿಂದ ಅಳಣಾವರಕ್ಕೆ ಬರುವದು; ಅಲ್ಲಿಂದ ಮೋಟಾರಿನಲ್ಲಿ ಕಾರವಾರಕ್ಕೆ ಬರುವದು. ಈ ಸಾಗಾಟದ ಖರ್ಚು ಬೇರೆ ಬರುವದು! ಮಳೆಗಾಲಕ್ಕೆ ಬೇಕಾಗುವ ಸರಕನ್ನು ಸಕಾಲದಲ್ಲೇ ತರಿಸಿಕೊಳ್ಳಬೇಕೆಂಬ ಸಾಮಾನ್ಯ ವ್ಯವಹಾರ ನಮ್ಮ ಬುದ್ಧಿಶಾಲಿ ಅಧಿಕಾರಿಗಳಿಗಿಲ್ಲವಲ್ಲ ಎಂದು ಅಜ್ಞ ಹಳ್ಳಿಗರು ಕೂಡ ನಗೆಯಾಟಿಕೆ ಮಾಡುತ್ತಾರೆ.

* *

ಪೆಟ್ರೋಲ ಎಣ್ಣೆಯ ಪೂರೈಕೆಯ ಆಢಳಿತೆಯಲ್ಲೂ ಇದೇ ಅವ್ಯವಸ್ಥೆ! ಮೋಟಾರ ವಾಹನಗಳ ಮಾಲಕತ್ವಗಾರರೇ ಮೊದಲು ಬಹಳ! ಮೋಟಾರ ತಪಾಸಣೆ ಮಾಡುವವರು ಬೇರೆ; ತಪಾಸಣೆ ಮುಗಿದ ನಂತರ ತೆರಿಗೆ ತುಂಬಿಕೊಂಡು ಪೆಟ್ರೋಲ ಕೂಪನುಗಳನ್ನು ಕೊಡುವ ಅಧಿಕಾರಿಗಳೇ ಬೇರೆ. ಮೋಟಾರ ಬಂಡಿ ಓಡಾಟಕ್ಕೆ ಯೋಗ್ಯವಿರುತ್ತದೆಂದು ಪ್ರಮಾಣಿಯಾದ ನಂತರ ಅದಕ್ಕೆ ಓಡಾಟದ ಪರವಾನೆ ಕೊಟ್ಟು ತೆರಿಗೆಯನ್ನು ತುಂಬಿಕೊಂಡ ಅಧಿಕಾರಿಗಳು ಅವರ ಓಡಾಟಕ್ಕೆ ಅವಶ್ಯವುಳ್ಳ ಪೆಟ್ರೋಲ ಕೂಪನುಗಳನ್ನು ಕೊಡುವದು ಧರ್ಮವಾಗಿರುತ್ತದೆ. ಪೆಟ್ರೋಲ ಪೂರೈಸದೆ ತೆರಿಗೆ ವಸೂಲ ಪಡೆಯುವದು ಸುಲಿಗೆಯಾಗುವದು. ಹಿಂದೆ ಈ ಕೂಪನ್ನುಗಳನ್ನು ತೋರಿಸಿದ ಕೂಡಲೆ ಕಂಪನಿಗಳ ಏಜಂಟರಿಂದ ಪೆಟ್ರೋಲು ಸಿಗುತ್ತಿತ್ತು. ಇತ್ತೀಚೆಗೆ ಹೊಸ ಕ್ರಮವೊಂದು ಜಾರಿಯಲ್ಲಿ ಬಂದಿದೆ. ವಾಹನ-ನಿಯಂತ್ರಣಾಧಿಕಾರಿಗಳು ಕೊಟ್ಟ ಪೆಟ್ರೋಲ ಕೂಪನುಗಳನ್ನು ಜಿಲ್ಹಾಧಿಕರ ಕಡೆಯಿಂದ ಪುನಃ ಸಿಂಧುಗೊಳಿಸಿ (revalidated) ಕೊಳ್ಳಬೇಕಂತೆ! ಈ ಬಗ್ಗೆ ಮೋಟಾರ ಉದ್ದಿಮೆಯವರು ಕಾರವಾರಕ್ಕೆ ಹೋಗಿ ಜಿಲ್ಹಾಧಿಕರ ಕಚೇರಿಯ ಪಾವಟಿಗೆಗಳನ್ನು ಸವೆಸಬೇಕು! ಮತ್ತು ಅಲ್ಲಿಯ ಅಧಿಕಾರಿಗಳ ಕೈಕಾಲು ಹಿಡಿದು, ಕೂಪನುಗಳ ಮೇಲೆ ಅವರ ಸಹಿ-ಶಿಕ್ಕೆ ಮಾಡಿಸಿಕೊಳ್ಳಬೇಕು! ಇಷ್ಟಾದರೂ ಕೂಪನುಗಳಲ್ಲಿ ನಮೂದ ಇರುವ ಪೆಟ್ರೋಲ ಸಿಕ್ಕೇ ಸಿಗುವದೆಂಬ ಭರವಸೆ ಹಿಡಿಯಬರುವದಿಲ್ಲ! ಜಿಲ್ಹಾಧಿಕರ ಕಚೇರಿಯವರಿಗೆ ಲಹರಿ ಬಂದರೆ ಅವರು ಈ ಅಪ್ಪಣೆಯನ್ನು ತಿರುಗಿಸಬಹುದು! ಹಾಗೆ ಅಪ್ಪಣೆ ತಿರುಗಿಸಿ ಪೆಟ್ರೋಲ ಕೊಡಕೂಡದೆಂದು ಪೆಟ್ರೋಲ ಏಜಂಟರಿಗೆ ಜಿಲ್ಹಾಧಿಕರ ಕಚೇರಿಯವರು ಹುಕುಮು ಮಾಡಿದ ಉದಾಹರಣೆಗಳವೆಯಂತೆ! ಪೆಟ್ರೋಲ ಕೂಪನುಗಳನ್ನು ಜಿಲ್ಹಾಧಿಕರಿಂದ ಸಿಂಧುಗೊಳಿಸಿಕೊಳ್ಳಬೇಕೆಂಬ ನಿರ್ಬಂಧ ಹೇರಲು ಒಂದು ಕಾರಣವುಂಟಂತೆ. ಜಿಲ್ಹೆಯೊಳಗಿನ ಪೆಟ್ರೋಲಿನ ಸಂಗ್ರಹ ನೋಡಿಕೊಂಡು ಅದನ್ನು ಸರಿಯಾಗಿ ಹಂಚಬೇಕೆಂಬುದೇ ಈ ಹೊಸ ಏರ್ಪಾಟಿನ ಉದ್ದೇಶವಂತೆ. ಪೆಟ್ರೋಲ-ಕೂಪನುಗಳನ್ನು ಮೋಟಾರ ಉದ್ದಿಮೆಯವರು ಒಮ್ಮೆಲೇ ಹಾಜರಪಡಿಸಿ ಜಿಲ್ಹೆಯೊಳಗಿನ ಪೆಟ್ರೋಲ-ಸಂಗ್ರಹವನ್ನೆಲ್ಲ ಒಮ್ಮೆಲೇ ಒಯ್ದು ಮಾಡಿದರೆ ಕಷ್ಟವಾದೀತೆಂಬ ಭೀತಿ ಈ ನಿರ್ಬಂಧದ ಹಿಂಬದಿಗುಂಟು. ಕೊಟ್ಟ ಪೆಟ್ರೋಲ ಕೂಪನುಗಳಂತೆ ಎಣ್ಣೆ ಪೂರೈಸುವ ವ್ಯವಸ್ಥೆ ಮಾಡಲಾಗದಿದ್ದರೆ ಕೂಪನುಗಳನ್ನು ಕೊಡುವದೇಕೆ? ಅವುಗಳಿಗಾಗಿ ಬೆಲೆಯುಳ್ಳ ಕಾಗದ ಖರ್ಚು ಮಾಡುವದಾದರೂ ಯಾಕೆ? ಎಂಬ ಪ್ರಶ್ನೆಯುಂಟಾಗುತ್ತಿದೆ. ಪೆಟ್ರೋಲ ಕೊಡಿಸುವದಾಗದಿದ್ದಲ್ಲಿ ಮೋಟಾರ-ವ್ಯವಸಾಯದವರಿಂದ ತೆರಿಗೆ ಪಡೆಯುವದು ಅನ್ಯಾಯ. ಜಿಲ್ಹಾಧಿಕರ ಕಚೇರಿಯವರು ನ್ಯಾಯಾನ್ಯಾಯಗಳ ವಿಚಾರವನ್ನು ಮಾಡದೆ ಸೋಡಾ ತಿಕೀಟು ತೆಗೆದಂತೆ ಕೆಲವು ಕೂಪನ್ನುಗಳನ್ನು ಹೆಕ್ಕಿ ತೆಗೆದು ಅವುಗಳನ್ನು ಸಿಂಧು

ಕೆನರಾ ಕೊಲೇಜ.

ಈ ಕೊಲೇಜಿನ ಉದ್ಘಾಟನಾ ಸಮಾರಂಭವು ಇದೇ ಬರುವ ತಾ. ೨೦ನೇ ಸೋಮವಾರ ಮಧ್ಯಾನ್ಹ ೧೨ ಘಂಟೆಗೆ ನೆರವೇರಿಸಲ್ಪಡುವದು. ವಿದ್ಯಾಭಿಮಾನಿಗಳೆಲ್ಲರೂ ಈ ಸಮಾರಂಭಕ್ಕೆ ಬರಬೇಕಾಗಿ ವಿನಂತಿಯಿದೆ.

ಕುಮಟಾ, ತಾ. ೧೧-೬-೪೯. } ಎಸ್. ಟಿ. ಹೆಗಡೆ, ಚೆಯರಮನ್.

FOR BANKING SERVICE
IN TRADE, INDUSTRY, AND AGRICULTURE
APPROACH

The Agricultural & Industrial Bank, Ltd.,

(Established in 1934)

Head Office : COONDAPOOR, S. Kanara.

Branches.

1. Ankola.
2. Belgaum.
3. Bhatkal.
4. Coondapoor.
5. Dharwar.
6. Gadag.
7. Gokarn.
8. Haveri.
9. Hubli.
10. Karwar.
11. Kumta.
12. Mangalore.
13. Nagar.
14. Shimoga.
15. Sirsi.
16. Somwarpet.
17. Virajpet.
18. Honavar.
19. BOMBAY (384-M, Jaipuria House, Kalbadevi Road).

CURRENT, SAVINGS BANK AND FIXED DEPOSITS ARE ACCEPTED.

For terms, apply to the nearest Branch.

Coondapoor. } 1st June, 1949. **K. Vaman Shenai,** CHAIRMAN.

ಗೊಳಿಸಿಕೊಡುತ್ತಾರೆ! ಹಲವು ಕೂಪನುಗಳನ್ನು ಸಿಂಧುಗೊಳಿಸಿಕೊಡಲು ನಿರಾಕರಿಸುತ್ತಾರೆ! ಆಹಾರ ಧಾನ್ಯಗಳ ಸಾಗಾಟಕ್ಕೆ ಪ್ರಾಧಾನ್ಯ ಕೊಡಬೇಕೆಂಬದೊಂದು ಸಿದ್ಧಾಂತವೂ ಉಂಟು ಆದರೆ ಈ ಕಾರ್ಯಕ್ಕೆ ಸಹ ಪೆಟ್ರೋಲ ಕೊಡಿಸಲು ನಿರಾಕರಿಸಿದ್ದುಂಟು! ಪ್ರಯಾಣಿಕರನ್ನೊಯ್ಯುವ ಬಂಡಿಗಳಿಗೆ ಪೆಟ್ರೋಲ ಕೊಟ್ಟು ಉಳಿದರೆ ಜಂಗಲ ಕಂಟ್ರಾಕ್ಟರರಿಗೆ ಹಂಚಬೇಕೆಂಬ ಇನ್ನೊಂದು ವಿಧಿಯು ಉಂಟು. ಪೆಟ್ರೋಲ ಎಣ್ಣೆಯ ಕೊರತೆಯಾಗುತ್ತಿರುವದರಿಂದ ಮೋಟಾರು ಬಂಡಿಗಳ ಓಡಾಟ ಕಡಿಮೆಯಾಗಿದೆ ಆದರಿಂದ ಎಲ್ಲೆಲ್ಲೂ ಮೋಟಾರ-ತಿಕೀಟುಗಳು ಸಿಗದ ಪ್ರವಾಸಿ ಜನರು ಕೊರಗಬೇಕಾಗುತ್ತದೆ ಹೆಂಡಿರು ಮಕ್ಕಳನ್ನು ಕಟ್ಟಿಕೊಂಡು ಬಂದ ಪ್ರಯಾಣಿಕರು ಸಹ ತಿಕೀಟು ಸಿಗದೆ ಬಳಲುತ್ತಿರುವ ನೋಟಗಳು ಒಮ್ಮೊಮ್ಮೆ ಕಣ್ಣಿಗೆ ಬೀಳುತ್ತವೆ ಇಂತಹ ಪರಿಸ್ಥಿತಿಯಲ್ಲಿ ಬೆಟ್ಟದಿಂದ ಕಟ್ಟಿಗೆ ಹೊರತೆಗೆಯಲು ಜಂಗಲ ಕಂಟ್ರಾಕ್ಟರರಿಗೆ ಪೆಟ್ರೋಲ ಕೊಡುವದು ಎಲ್ಲಿಯ ಜಾಣತನವೋ ತಿಳಿಯದು! ಆದರೂ ಅಧಿಕಾರಿಗಳು ಕೆಲವು ಭಾಗ್ಯಶಾಲಿ ಕಂಟ್ರಾಕ್ಟರರಿಗೆ ೩ ಸಾವಿರದಷ್ಟು ಪೆಟ್ರೋಲ ಕೂಪನುಗಳನ್ನು ಒಮ್ಮೆಲೇ ಸಿಂಧುಗೊಳಿಸಿಕೊಟ್ಟ ಉದಾಹರಣೆಗಳಿವೆ! ವಾಡಿಕೆಯಾಗಿ ಇಲ್ಲಿ ಇಡಬೇಕಾದ್ದಕ್ಕಿಂತ ೨-೩ ಸಾವಿರ ಗೆಲನ್ನ ಪೆಟ್ರೋಲು ಪೆಟ್ರೋಲ ಭಂಡಾರಿಗಳ ಕಡೆಗೆ ಹೆಚ್ಚಿಗೆ ಇಲ್ಲಿ ಇರುತ್ತದೆಂದು ಕಂಡು ಒಂದಾಗ್ಯೂ ಪೆಟ್ರೋಲ ಕೂಪನುಗಳನ್ನು ಸಿಂಧುಗೊಳಿಸಿಕೊಡಲಿಕ್ಕೆ ಜಿಲ್ಹಾಧಿಕಾರಿ ಕಚೇರಿಯವರು ಹಿಂಜರಿದದ್ದುಂಟು! ಜಿಲ್ಹಾಧಿಕಾರಿ ಕಚೇರಿಯವರ ಈ ಕೃಪಣತ್ವದಿಂದ ಜಿಲ್ಹೆಯ ಕೆಲವು ಪೆಟ್ರೋಲ-ಉಗ್ರಾಣಗಳಲ್ಲಿ ಪೆಟ್ರೋಲಿನ ವಿಲ್ಹೇವಾರಿಗಾಗಿ ನಮ್ಮ ಜಿಲ್ಹೆಗಾಗಿ ಪೆಟ್ರೋಲ ಹೇರಿಕೊಂಡು ಬಂದ ೩ ವಾಹನಗಳು ತಿರುಗಿ ಹೋದವು! ಆ ಪೆಟ್ರೋಲು ಇಡಲು ಉಗ್ರಾಣಗಳಲ್ಲಿ ಸ್ಥಳವಿಲ್ಲದ್ದರಿಂದ ಅದನ್ನು ತಿರುಗಿ ಕಳಿಸಿಕೊಡಬೇಕಾಯಿತೆಂದು ಏಜಂಟರು ಹೇಳುತ್ತಾರೆ ಮೋಟಾರ ಸಾರಿಗೆಯಷ್ಟೇ ನಮ್ಮ ಜಿಲ್ಹೆಯಲ್ಲಿ ವಾಹನ-ಸೌಕರ್ಯ ಒದಗಿಸುತ್ತಿದೆ ಅದರ ಮಾರ್ಗದಲ್ಲಿ ತೊಡಕುಗಳನ್ನುಂಟು ಮಾಡಿದರೆ ಜನಸಾಮಾನ್ಯರಿಗೆ ಹೇಳಿ ತೀರದ ಕಷ್ಟ ಕೊಟ್ಟಂತಾಗುವದೆಂಬುದನ್ನು ಜಿಲ್ಹಾಧಿಕಾರ ಕಚೇರಿಯೊಳಗಿನ ಅಧಿಕಾರಿಗಳು ಮರೆಯಬಾರದು

ಆಹಾರ ಧಾನ್ಯಗಳ ಸಂಗ್ರಹದ ಹಂಚಿಕೆಯಲ್ಲೂ ಜಿಲ್ಹಾಧಿಕಾರ ಕಚೇರಿಯವರ ಅವಾಂತರ ಕಂಡುಬರುತ್ತಿದೆ ಮಳೆಗಾಲದ ಆಹಾರ ಧಾನ್ಯಗಳನ್ನು ದಾಸ್ತಾನ ಮಾಡುವ ಕೆಲಸ ಸಾಮಾನ್ಯವಾಗಿ ಏಪ್ರಿಲ ಕೊನೆಯೊಳಗೆ ಆಗಬೇಕು ವ್ಯವಹಾರಕುಶಲ ವರ್ತಕರು ಏಪ್ರಿಲ ತಿಂಗಳ ಮಧ್ಯದೊಳಗೆ ತಮ್ಮ ಸಂಗ್ರಹದ ಕೆಲಸ ಮುಗಿಸಿಕೊಳ್ಳುತ್ತಾರೆ ೯ ೫ ವರುಷ ನಿಯಂತ್ರಣ ವ್ಯವಹಾರದ ಅನುಭವ ಪಡೆದ ಜಿಲ್ಹಾಧಿಕಾರ ಕಚೇರಿಗೆ ಈ ವ್ಯವಹಾರಜ್ಞಾನ ಪ್ರಾಪ್ತವಾಗಿರಬೇಕಾಗಿತ್ತು [illegible] ಆದರೆ ಈ ಸಾರೆ ಆಹಾರ ಧಾನ್ಯಗಳನ್ನು ಸಾಗಿಸಿಕೊಡುವ ಮೋಟಾರ ಬಂಡಿಗಳ ಓಡಾಟಗಳನ್ನು ಸ್ವೀಕರಿಸುವ ಕ್ರಮ ಮೇ ತಿಂಗಳ ವರೆಗೂ ನಡೆಯಿತು! ಪೂರೈಕೆ ಇಲಾಖೆಯ ಅಧಿಕಾರಿಗಳು ಬಿಗಿ ಮನಸಿನಿಂದ ಈ ಪರವಾನಗಿಗಳ ವರೆಗೂ ಚಾಲನೆ ಮಾಡಿ ಸರಕಾರದ ವ್ಯವಹಾರ ಕೌಶಲ್ಯವನ್ನು ಮೋಟಾರ-ವ್ಯವಸಾಯಗಳಿಗೆ ತೋರ್ಪಡಿಸಿದರು! ಬ್ರಿಟಿಷರು ಹೋದರೂ ಹಾಗಿದ್ದರೂ ಅವರ ವ್ಯವಸಾಯ ವೃತ್ತಿ ಅವರ ಹಿಂದೆ ಉಳಿದುಕೊಂಡಿದೆ ಮೋಟಾರ ವ್ಯಾಪಾರಿಗಳು [illegible] ಅಧಿಕಾರಿಗಳ ಈ ಚಾಲಕತನ ಪ್ರವಾಸದ ಪ್ರಸಿದ್ಧ ಶಕ್ತಿ-ಭಕ್ತಿಗಳು ಮಳೆ ಬೀಳುವವರೆಗೂ 'ಸ್ವ[illegible] ಉಳಿದವು' ಈಗ ಇವುಗಳ [illegible] ಮಾಡಿ ಮುಮ್ಮಡಿ ಪ್ರಯತ್ನ ಮಾಡಿ ಅವನ್ನು ಅವಸರದಿಂದ ಎಲ್ಲೆಗೆ ಸಾಗಿಸಿಕೊಳ್ಳಬೇಕಾಗಿದೆ ಆಹಾರ ಧಾನ್ಯಗಳನ್ನು ತುಂಬಿಕೊಂಡು ಹೊರಟ [illegible] ಗೇರು [illegible] ಯಲ್ಲಾಪುರದಿಂದ ಒಟ್ಟು ಎಷ್ಟೋ ಮೋಟಾರು ಬಂಡಿಗಳು ಹೊಟ್ಟೆಯ ಕೆಳಗೆ ಒರತೆ [illegible] ಜಿಲ್ಹೆಯೊಳಗಿನ ಸೇತುವೆಗಳು ನಾಶವಾದವು ಆದ್ದರಿಂದ ಸಮಾರು ೨೦ ಮೋಟಾರು ಬಂಡಿಗಳನ್ನು ತುಂಬಿಕೊಂಡಿರುತ್ತಾರಂತೆ! ಸೇತುವೆ ದಕ್ಷಿಣ ದಡಗಳನ್ನು ಸ್ವೀಕರಿಸಿದ ಆಗ ದಡದಿಂದ ಸರಕ ಘಟ್ಟದ ಕೆಳಗೆ ಬಂದು ತಲ್ಪುತ್ತಿತ್ತು ಕೆಲವ ಕಡ ಜಲ ಮಾರ್ಗವಿದ್ದ ದೇಶಸ್ಥಳಕ್ಕೆ ಆನುಕೂಲ ವಾಗುತ್ತಿತ್ತು ಸಮುದ್ರ ಮಾರ್ಗ ಕಷ್ಟದಿಂದ ಘಟ್ಟಕ್ಕೆ ಕಳಿಸಿದ ಹೆಳಯಾನದಿಂದ ಬೇಲೇಕೇರಿಗೆ ತರಿಸಿದ [illegible] ಸಾವಿರ ಚೀಲ ಧಾನ್ಯ ಅಲ್ಲೇ ಉಳಿಯಿತು ಅದನ್ನು ಮನ [illegible] ಗಳಲ್ಲಿ ಹೇರಿ ಘಟ್ಟಕ್ಕೆ ಕಳಿಸಿಕೊಡಬೇಕಾಯಿತು! ಅಷ್ಟು ಭತ್ತ ಸೇರಿದ ಬಂದು ಮಳೆಯು ಗಾಳಿಯಲ್ಲಿ ಸಿಲುಕಿ ಬಿದ್ದದ್ದರಿಂದ ಸುಮಾರು ೨೦ ಚೀಲ ಅಕ್ಕಿ ಪತ್ರಗಳನ್ನು ಸಮುದ್ರದಲ್ಲಿ ಒಗೆಯಬೇಕಾಯಿತಂತೆ ವಾರ್ತೆಯುಂಟು ಮಳೆಯೊಳಗಿನ ಕೆಲವು ಸರಕು ಒಗೆಯುವ ಪ್ರಸಂಗ ಬಂದದ್ದು ನಿಜವಾದರೂ ಒಮ್ಮೆ ಹೀಗೆ ಒಗೆಯಲ್ಪಟ್ಟ ಚೀಲಗಳ ಸಂಖ್ಯೆ ೨೦ ಇರುತ್ತದೆಂದೂ, ಹಾಗೂ ಸಂಜನಿಂದ ಸಹ ಆಗಿರುತ್ತದೆಂದೂ ಇನ್ನೊಂದು ಸುದ್ದಿಯೂ ಬಂದಿದೆ ಗಡಿಬಿಡಿಯಿಂದ ಸಾಗಿಸುವ ಸಂಭ್ರಮದಲ್ಲಿ ಒಡೆದನ್ನು ಅಕ್ಕಿ ಬತ್ತ ನಷ್ಟವಾಗಿದೆಂದ ಲೋಕವಾರ್ತೆಯದೆ ಸೀಧಾ ಅಂಗಡಿಗಳಲ್ಲಿ ಕೂಡ ವಿಕ್ರಯ ಪ್ರಮಾಣವನ್ನು ೬೦೦ದ ಸಲಕ್ಕೆ ಇಳಿಸಿದ್ದರಿಂದ ಈ ವಾರ್ತೆಗೆ ಕೆಲ ಮಟ್ಟಿಗೆ ಪುಷ್ಟಿ ದೊರೆಯುತ್ತಿದೆ ಜಿಲ್ಹೆಯಲ್ಲಿ ಖರೀದಿ ಮಾಡಿದ ಎಷ್ಟೋ ಅಕ್ಕಿ ಭತ್ತಗಳ ಪರಿಮಾಣ ಪ್ರಾಂತಿಕ ಸರಕಾರದಿಂದ ಬಂದ ಆಹಾರಧಾನ್ಯದ ಪರಿಮಾಣ, ಸೀಧಾ ಮತ್ತು ಯೋಗ್ಯ ದರದ ಅಂಗಡಿಗಳಿಗೆ ಹಂಚಿದ ಧಾನ್ಯ ಮತ್ತು ಈಗ ಇರುವ ಶಿಲ್ಕು ಇವುಗಳನ್ನೆಲ್ಲ ವಿವರವಾಗಿ ಪ್ರಕಟಿಸಿದರೆ, ಸಮುದ್ರ ಪಾಲಾದ ಅಕ್ಕಿಯೆಷ್ಟು ದಲ್ಲಿ ನಷ್ಟವಾದ ಧಾನ್ಯವೆಷ್ಟೆಂದು ತಿಳಿಯಬಹುದು ಬಂದ ಹಿಂಡರುಗಳನ್ನು ಸ್ವೀಕರಿಸಿ ಮೋಟಾರು-ಮರಿಗ ಆಹಾರಧಾನ್ಯಗಳನ್ನು ಒಯ್ಯಗೊಡಲಿಲ್ಲ ಒರುತ್ತಿದ್ದ ಸಿಬ್ಬಂದಿ ಪತ್ರ ಈಗ ಪ್ರತ್ಯಕ್ಷ ತಗಲಿದ ಖರ್ಚು ಇವುಗಳ ಲೆಕ್ಕ ಪ್ರಕಟವಾದಲ್ಲಿ ಜಿಲ್ಹಾಧಿಕಾರ ಕಚೇರಿಯವರ ದಕ್ಷತೆಯ ಅರಿವು ಬರುವಂತಿದೆ ಈ ವ್ಯವಹಾರದಲ್ಲಿ ನಿರ್ಣಯದಂತೆ ಹೇಳಲಾಗದಿದ್ದರೂ ಎಲ್ಲ ವ್ಯವಹಾರ ಪ್ರಾಮಾಣಿಕತನದಿಂದ ನಡೆದಿವೆ ಎಂದು ಹೇಳಲಿಕ್ಕೂ ಕಠಿಣವಾಗುತ್ತಿದೆ ಸರಕಾರವು ಈ ಎಲ್ಲ ವಿಷಯಗಳನ್ನು ಆಳವಾಗಿ ಪರಾಂಬರಿಸುವದವಶ್ಯವಿರುತ್ತದೆ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿಮಿಟೆಡ್, ಹೊನ್ನಾವರ.

ಲಿಲಾಂವ ನೋಟೀಸು

ಹೊನ್ನಾವರ ತಾಲೂಕು ಮಾಡೇಶ್ವರದಲ್ಲಿರುವ ರಾ| ಎನ್ ಎಚ್ ಹಮೀದ್ ಇವರಿಗೆ, ಈ ಮೂಲಕ ತಿಳಿಸುವದೇನಂದರೆ — ನೀವು ತಾ. ೨೧-೬-೧೯೪೭ರಲ್ಲಿ ಚಿನ್ನಾಭರಣಗಳ ಆಧಾರ ಮೇಲೆ ಪಡೆದ J. L. No. 4 47ನೇ ಸಾಲ ಆ ಅದರ ಮೇಲಿನ ಬಡ್ಡಿಯನ್ನು ವಾಯಿದೆಗೆ ಸರಿಯಾಗಿ ಕೊಡದೆ ಇರುವದರಿಂದ ನಿಮಗೆ ಕ್ರಮ ಪ್ರಕಾರ ರಜಿಸ್ಟರ್ ನೋಟೀಸು ಕೊಟ್ಟಾಗ್ಯೂ ನಮಗೆ ಅದರ ಪೂರ್ತಿ ಬಾಕಿಯನ್ನು ತೀರಿಸದೆ ಇದ್ದುದರಿಂದ ನಮಗೆ ಹಾಕಲು ಈ ನೋಟೀಸಿನ ಮುಖಾಂತರ ಹಕ್ಕಿದೆಯೆನ್ನು ಬರುವ ತಾ ೨೯-೬-೧೯೪೯ನೇ ಬುಧವಾರದ ಒಳಗೆ ಪೂರ್ತಿ ಮಾಡದೆ ಇದ್ದಲ್ಲಿ ನೀವು ಒತ್ತೆ ಇಟ್ಟ ವಸ್ತುಗಳನ್ನು ಇದೇ ಬರುವ ತಾ ೬-೭-೧೯೪೯ನೇ ಬುಧವಾರ ಹಗಲು ಘಂಟೆ ೧೧ ಕ್ಕೆ ಯಾ ಬೇಂಕಿಗೆ ಯುಕ್ತ ತೋರುವ ದಿನ ಬೇಂಕಿನ ಆವಾರದಲ್ಲಿ ಬಹಿರಂಗವಾಗಿ ಲಿಲಾಂವ ಮಾಡಲಾಗುವದೆಂದು ತಿಳಿದಿರಲಿ

ಹೊನ್ನಾವರ,
ತಾ: ೮-೬-೧೯೪೯ } N. V. Prabhu
AGENT.

ಹೋಮಿಯೋಪಥಿ ಶಿಕ್ಷಣ ವರ್ಗ

ಕಲಿಯಬಲ್ಲವರು ಅದೇ ಜೂನ ತಿಂಗಳೊಳಗಾಗಿ ಪ್ರವೇಶಕ್ಕೆ ಅರ್ಜಿಯನ್ನು ಕಳಿಸಬೇಕು

ಪ್ರಿನ್ಸಿಪಾಲ, ದಿ ಗ್ರೇಟ ಹೋಮಿಯೋಪಥಿ ಕಲೇಜು, ಮರಾಠಾಗಲ್ಲಿ, ಹುಬ್ಬಳ್ಳಿ

ಹುಬ್ಬಳ್ಳಿಗೆ ಬಂದಾಗ

ಕಾನಡಾ ಜಿಲ್ಹಾ ಪ್ರವಾಸಿಕರಿಗೆ ಸುಖ-ಸೌಲಭ್ಯಗಳು ಬೇಕಲ್ಲವೇ ?

ಹಾಗಾದರೆ — ಸದಾ ಸಂದರ್ಶಿಸಿರಿ

ಈ

ಕೆನರಾ ಲಾಜ

[ಊಟ ಮತ್ತು ವಸತಿಗೃಹ]

ಮೋಟರ-ಸ್ಟೆಂಡ, ಹುಬ್ಬಳ್ಳಿ.

ಮಾಲಕ — ಮ್ಯಾನೇಜರ್.

ಸುದ್ದಿಗಳ ಸಂಗ್ರಹ

—ಸ್ವತಂತ್ರ ಭಾರತದ [illegible] ರಾಜ್ಯದ ಘಟನೆ [illegible] ಬರುವ [illegible] ಬರುವ ಜನವರಿ ತಿಂಗಳ [illegible] (ಹೆಚ್ಚು [illegible] ಸ್ವಾತಂತ್ರ್ಯದಿನದಿಂದ) ಅದನ್ನು ಕಾರ್ಯರೂಪದಲ್ಲಿ ತರಬೇಕೆಂದು [illegible] ರ ಕೂಡಿದ [illegible] ಕಾಂಗ್ರೆಸ ಪಕ್ಷದಲ್ಲಿ ನಿರ್ಧರಿಸಲಾಗಿದೆ

— ಭಾರತದಲ್ಲಿ [illegible] ವೃತ್ತಪತ್ರಿಕೆಗಳಿವೆ ಅವುಗಳಲ್ಲಿ ಇಂಗ್ಲಿಷ ಪತ್ರಿಕೆಗಳೇ ಹೆಚ್ಚು. ಭಾಷಾವಾರ ಪತ್ರಿಕೆಗಳ ಸಂಖ್ಯೆಗಳು [illegible] ಇವೆ ಇಂಗ್ಲಿಷ [illegible] ಹಿಂದೀ [illegible] ಉರ್ದು [illegible], ಬಂಗಾಲಿ [illegible], ತಮಿಳು [illegible] ಮರಾಠಿ— [illegible] ತೆಲುಗು — [illegible], ಗುಜರಾಥಿ— [illegible] ಪಂಜಾಬಿ — [illegible] ಕನ್ನಡ— [illegible] ಉರಿಯಾ (ಒರಿಸಾ ಪ್ರಾಂತದ ಭಾಷೆ) - [illegible], ಮಲಯಾಳ— [illegible] ಸಿಂಧಿ— [illegible] ಅಸಾಮಿ — [illegible]

— ಶ್ರೀ ವಾ॥ ಕಲ್ಲಾಪುರ ನರಸಿಂಗರಾಯರ ನಿಧನದಿಂದ ತೆರವಾದ ಮುಂಬಯಿಯ ಕೌನ್ಸಿಲಿನ ಧಾರವಾಡ ಕಾನಡಾ ವ್ಯಾಪಾರ ಸಂಘದ ಪ್ರತಿನಿಧಿಯ ಸ್ಥಳದ ಉಪ-ಚುನಾವಣೆ ಇಂದು ಜರುಗಲಿಕ್ಕಿತ್ತು. ಈ ಚುನಾವಣೆಗೆ ದಿವಂಗತ ದೇಸಾಯಿಯರ ಬಂಧುಗಳಾದ ರಾ॥ ಗುರುರಾವ ದೇಸಾಯಿಯರು ಮತ್ತು ರಾ॥ ನೇಮಚಂದ ಚಂದಪ್ಪ ದೇಸಾಯಿ ಎಂಬ ಇನ್ನೊಬ್ಬರು ಹೀಗೆ ಇಬ್ಬರು ಹುರಿಯಾಳಾಗಿ ನಿಂತಿದ್ದರು. ಆದರೆ ಮೊನ್ನೆ ರಾ॥ ನೇಮಚಂದ ದೇಸಾಯಿಯರು ತಮ್ಮ ಹುರಿಯಾಳುತನ ಹಿಂದೆಗೆದುಕೊಂಡ ಗುರುರಾಯರಿಗೆ ಸದರಿ ಪ್ರತಿನಿಧಿ ಸ್ಥಾನ ಬಿಟ್ಟುಕೊಟ್ಟಿರುತ್ತಾರೆ. ಆದರೂ ರೀತಿಯಂತೆ ಇಂದು ಚುನಾವಣೆಯು ಶಾಸ್ತ್ರ ನಡೆಯ ಬೇಕಂತೆ!

— ಹಿಂದುಸ್ಥಾನದಲ್ಲಿ ತಂಬಾಕು ಎಷ್ಟು ಖರ್ಚಾಗುತ್ತದೆಂಬುದರ ಕಲ್ಪನೆಯನ್ನು [illegible] ಸಾಲಿನ ಬಾಬತ್ತು ಈ ಕೆಳಗೆ ಕೊಟ್ಟ (ಬೆಲೆಯ) ಅಂಕಿಗಳಿಂದ ತಿಳಿದು ಬರುವಂತಿದೆ— ಹುಕ್ಕಾ ತಂಬಾಕು ರೂ [illegible] ಲಕ್ಷ, ಚಿರೂಟಿನ ತಂಬಾಕು ರೂ [illegible] ಲಕ್ಷ, ಬೀಡಿ ತಂಬಾಕು ರೂ [illegible] ಲಕ್ಷ, ಸಿಗರೇಟ ತಂಬಾಕು ರೂ [illegible] ಲಕ್ಷ, ತಿನ್ನುವ ತಂಬಾಕು ರೂ [illegible] ಲಕ್ಷ, ನಾಸಿಪುಡಿ ತಂಬಾಕು ರೂ. [illegible] ಲಕ್ಷ [illegible] ತಂಬಾಕು ರೂ [illegible] ಲಕ್ಷ ಹಿಂದುಸ್ಥಾನದಲ್ಲಿ ಪ್ರತಿ ವರ್ಷ [illegible] ಅಬ್ಜ [illegible] ಕೋಟಿ ಸಿಗರೇಟುಗಳು ಖರ್ಚಾಗುತ್ತಿವೆಯಂತೆ

— ಮಹೇಶ್ವರ ಕೋರ್ಟಿನ [illegible] ಚುನಾವಣೆಯು [illegible] ನ್ಯಾಯಾಧೀಶರು ತಮ್ಮ ತೀರ್ಪನ್ನು [illegible]

— ಹಿಂದುಸ್ಥಾನದೊಳಗೆ ಫ್ರೆಂಚರ ಅಧಿಕಾರದಲ್ಲಿರುವ ಪ್ರದೇಶಗಳು ಫ್ರೆಂಚರ ಅಧಿಪತ್ಯದಲ್ಲಿ ಉಳಿಯಬೇಕು [illegible] ಸ್ವತಂತ್ರ ಹಿಂದುಸ್ಥಾನದಲ್ಲಿ ಸೇರಬಯಸುತ್ತವೆ ಎಂಬುದನ್ನು ಜನಮತದಿಂದ ನಿರ್ಧರಿಸುವ ಯೋಜನೆಯಾಗಿದೆ. [illegible] ಯು [illegible] ಚಂದ್ರನಗರದಲ್ಲಿ ಈ ಜನಮತಗಣನೆಯು ಮುಂದಿನ ರವಿವಾರ (ತಾ [illegible]) ನಡೆಯುವದು. ಪಾಂಡಿಚೇರಿ ಮೊದಲಾದ [illegible] ಪ್ರದೇಶಗಳ ಜನಮತಗಣನೆ [illegible] ತಿಂಗಳಲ್ಲಿ ನಡೆಯುವದು

— ಹಿಂದುಸ್ಥಾನ [illegible] ಸಮಿಗಳು [illegible] ದೊಡ್ಡ ನಿಸರ್ಗದತ್ತ ಸಂಪತ್ತು ಆದರೆ ಅವುಗಳ ನೀರಿನ ಮತ್ತು ಪ್ರವಾಹದ ಉಪಯೋಗ [illegible] ಕೊಳ್ಳುವ ಯೋಜನೆಯನ್ನು ಹಿಂದಿನ ಸರಕಾರವು ಮಾಡಲಿಲ್ಲ! ಆದರೆ ಇಂದಿನ ಪ್ರಜಾರಾಜ್ಯವು ಆ ಕಡೆ ದುರ್ಲಕ್ಷ್ಯ ಮಾಡಬಾರದೆಂತಲೇ [illegible] ಸ್ವತಂತ್ರ್ಯದ ದೊರಕಿದೊಡನೆ ಈ ಸಂಪತ್ತಿನ ಪೂರ್ಣ ಪ್ರಯೋಜನ ಪಡೆಕೊಂಡು ನಾಡಿನ ಆಹಾರ ಸಂಪತ್ತಿಯನ್ನು ಬೆಳಸಿ ಔದ್ಯೋಗಿಕ ಪ್ರಗತಿಯನ್ನು ಸಾಧಿಸಬೇಕೆಂದು ಕೇಂದ್ರ ಸರಕಾರವು [illegible] ಸರಕಾರಗಳೂ ನಿರ್ಧರಿಸಿ [illegible] [illegible] ಯೋಜನೆಗಳನ್ನು ತಯಾರಿಸಿ ಕೊಂಡಿವೆ. ಇಂದಿಗೆ [illegible] (ನೀರಾವರಿಯ ಇಲ್ಲವೆ ವಿದ್ಯುಚ್ಛಕ್ತಿ ನಿರ್ಮಾಣ ಮಾಡುವ) [illegible] ಅಂತೆ ಇವನ್ನು ಕಾರ್ಯರೂಪದಲ್ಲಿ [illegible] ರೂಪಾಯಿಗಳು [illegible] ಬೇಕಾಗುವ ಈ ಎಲ್ಲ ಯೋಜನೆಗಳು [illegible] ನಿಜ ಆದರೆ ಇವುಗಳಿಗೆ [illegible] ಹಣ ಎಲ್ಲಿಂದ ತರಬೇಕು? [illegible] ಯೋಜನೆಗಳನ್ನು [illegible] ಬೇಕಾಗುವ [illegible] ಯಂತ್ರಗಳನ್ನು [illegible] ಎಲ್ಲಿಂದ ತರಬೇಕು? [illegible] ಪ್ರಶ್ನೆಗಳಿವೆ. [illegible] ನೀರಾವರಿಗಳ [illegible] ಪ್ರಾಂತಿಕ ಸರಕಾರಗಳಕಡೆಗಿದೆ. ಅದರಿಂದ [illegible] ಹಿಂದುಸ್ಥಾನದ ನೀರಾವರಿಗಳ ಯೋಜನೆಗಳಲ್ಲಿ ಏಕರೂಪತೆ ಸಾಧಿಸಲು ಕಷ್ಟವಾಗುತ್ತಿದೆ. ಈ ಅಡಚಣೆಯನ್ನು ಹೋಗಲಾಡಿಸುವದಕ್ಕಾಗಿ ಹಾಗೂ ಯಾವ ಯಾವ ನೀರಾವರಿ ಯೋಜನೆಗಳನ್ನು ಮೊದಲು ಕೈಕೊಳ್ಳಬೇಕು, ಯಾವವುಗಳನ್ನು ಹಿಂದೆ ಹಾಕಬಹುದು ಎಂಬುದನ್ನು [illegible] ನಿರ್ಣಯಿಸುವದಕ್ಕಾಗಿ ಈ ತಿಂಗಳಲ್ಲಿ ದಿಲ್ಲಿಯೊಳಗೆ ಎಲ್ಲ ಪ್ರಾಂತಿಕ ಸರಕಾರ ಪ್ರತಿನಿಧಿಗಳ ಒಂದು ಪರಿಷತ್ತನ್ನು ಹಿಂದಸರಕಾರವು ಕೂಡಿಸಲಿದೆ

— ಹಿಂದೀಗಿಂತ ಸಂಸ್ಕೃತ ಭಾಷೆಯೇ ಭಾರತದ ರಾಷ್ಟ್ರೀಯ ಭಾಷೆಯಾಗಲು ಪಾತ್ರವಿದ್ದು ಶಕ್ಯವಿದೆಯೆಂದೂ ಸಂಸ್ಕೃತವೇ ರಾಷ್ಟ್ರೀಯ ಭಾಷೆಯಾಗಿ ಸ್ವೀಕರಿಸಲ್ಪಡಬೇಕೆಂದೂ [illegible] ಕಲಕತ್ತೆಯೊಳಗಿನ ಸಂಸ್ಕೃತ ಪ್ರಚಾರ ಸಮಿತಿಯ ಪರಿಷತ್ತಿನಲ್ಲಿ ಒಂದು ಮಹತ್ವದ ಗೊತ್ತುವಳಿಯಾಗಿದೆ. ಸಂಸ್ಕೃತ ಭಾಷೆ ದುರ್ಗಮವಿರುತ್ತದೆಂಬುದು ಸುಳ್ಳು, ಪಂಡಿತರು ಅದನ್ನು [illegible] ತಿಂಗಳಲ್ಲಿ ಕಲಿಯುತ್ತಾರೆ, ಎಂದು ಪರಿಷತ್ತಿನ ಅಧ್ಯಕ್ಷ ಶ್ರೀ [illegible] ಆಚಾರ್ಯರು ಪ್ರತಿಪಾದಿಸಿದ್ದಾರೆ

[illegible] ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ [illegible] ಮತ್ತು [illegible] ಮುಂಬಯಿಯ [illegible] ಎಸ್ ಬಿ [illegible] ಇವರ ಅಧ್ಯಕ್ಷತೆಯಲ್ಲಿ ಜರುಗಿತು

[illegible] ಬಗೆಗೆ ಬಂದ ಅರ್ಜಿಗಳನ್ನು [illegible] ಗೋವೆಯಿಂದ [illegible] ಪ್ರತಿನಿಧಿಗಳು [illegible] ಬಂದಿದ್ದರು [illegible] ಗೋವೆಯಿಂದ ಕೂಡಲೆ [illegible] ಜನಮತ ಗಣನೆಯು ಅವಶ್ಯಕವಿದ್ದು [illegible] ಸ್ವತಂತ್ರ ಭಾರತದಲ್ಲಿ ಸೇರಿಸಬೇಕು, ಎಂದ ಈ ಅಧಿವೇಶನದಲ್ಲಿ ಮಹತ್ವದ ಗೊತ್ತುವಳಿಯಾಗಿದೆ

ಹಿಂದುಸ್ಥಾನದಲ್ಲಿ [illegible] ಎಕರೆ [illegible] ಸಂಪತ್ತು [illegible] ಅಡಿಕೆ [illegible] ಮಾಗುತ್ತಿದೆ. ಪ್ರಾಂತವಾರ ಅಂಕಿಗಳು ಇಂತಿವೆ — (ಉತ್ಪಾದನೆಯು [illegible] ದಲ್ಲಿ ತೋರಿಸಿದೆ) [illegible] ([illegible] ಎಕರೆ) [illegible] ಮಣ [illegible] ([illegible] ಎಕರೆ) [illegible] ಮಣ [illegible] ([illegible]) [illegible] ಮಣ [illegible] ([illegible]) [illegible] ಮಣ ಆಸಾಮ ([illegible] ಎಂ) [illegible] ಮಣ [illegible] ([illegible]) [illegible] ಮಣ [illegible] ([illegible] ಎಕರೆ) [illegible] ಮಣ. ಮುಂಬಯಿ ಪ್ರಾಂತದಲ್ಲಿ [illegible] ಅಡಿಕೆ ನಮ್ಮ ಜಿಲ್ಲೆಯಲ್ಲಿ ಬೆಳೆಯುತ್ತಿವೆ [illegible], [illegible] ಜಿಲ್ಲೆಗಳ ಅಡಿಕೆ ಬೆಳೆ [illegible]

ಸ್ಥಾನಿಕ ವೃತ್ತಾಂತ (೫ನೇ ಪುಟದಿಂದ ಮುಂದೆ)

[illegible]! ಬೇಗನೆ [illegible] ಬಂದವರೇ [illegible] ಅವರ ಮಹಿಮೆಯಂತೆ! [illegible] ([illegible] ಗ್ರಾಮಸೇವೆ' [illegible]) ರಾ॥ [illegible] ಹೊಂದಿರುವರನ್ನು [illegible] ಅವರೆ ರಾ॥ ಹೊಂದಿರುವವರು ಮುಂದೆ [illegible] 'ಸಾಧ್ಯವಿದ್ದಷ್ಟು [illegible] ಬಿಟ್ಟುಬಿಡದೆ ನಾನು [illegible]' ಎಂದು [illegible] ರಾ॥ ಹೊಂದಿರುವವರಿಂದ್ದ ನಮ್ಮ ಮುಂದಿನ [illegible] ಗಳನ್ನು [illegible] ಅವರ [illegible] ಗಳನ್ನು [illegible] ವನ್ನು ಇನ್ನು ಯಾರೂ [illegible] ಸಿಗದಾಗದಲ್ಲ! [illegible] ಮುಂದಿನ [illegible] ರಾ॥ [illegible] ಗೆ [illegible] ಗಂಟುಹಾಕಲು [illegible] ಸರಕಾರದವರು [illegible] ರಾ॥ [illegible] ಹೊಂದಿರುವವರನ್ನು [illegible] ಅವರೆ ಸರಕಾರದವರೂ [illegible] ಸರ್ವೋದಯ [illegible] ಪ್ರಾರಂಭಿಸಲು ಯಾವ ಪ್ರದೇಶ ಯೋಗ್ಯವಿದೆ ಎಂಬುದನ್ನು [illegible] ಮಹತ್ವ [illegible] ಎಂಬ [illegible] ಹೊಂದಿರುವವರ [illegible] ಲಕ್ಷವನ್ನು [illegible] ಮುಂದೆ [illegible] ಬಿಟ್ಟಿರುತ್ತಾರೆಂಬ [illegible] ಇದೆ! [illegible] ಸಾಹುಕಾರರೂ, ರಾ॥ ಸಾ॥ ಆ ಹೊಂದಿರುವವರೂ [illegible] ತಾವಿರುವ [illegible] ತಾಲೂಕಿನಲ್ಲಿ "ಸರ್ವೋದಯ" ಮಾಡಿಸಲು [illegible] ಅವರಿಂದೆ ಸರಕಾರಕ್ಕೆ ಶಿಫಾರಸು ಮಾಡಿದ್ದಾರೆಂಬ ಸುದ್ದಿಯೂ ಉಂಟು

ಪೆಟ್ರೋಲ-ಕೆರೋಸಿನಗಳ ಏಜನ್ಸಿ

[illegible] ಜಿಲ್ಲೆಯ [illegible] ಮುಖ್ಯ ಸ್ಥಳಗಳಲ್ಲಿ ಪೆಟ್ರೋಲ, ಕೆರೋಸಿನ, ಡೀಝಲ ಮತ್ತು ಲ್ಯುಬ್ರಿಕೇಟಿಂಗ ಎಣ್ಣೆ [illegible] ಏಜಂಟರನ್ನು ನೇಮಿಸುವದಿದೆ. [illegible] ಇದಕ್ಕೆ [illegible] ಅರ್ಜಿ [illegible] ಕಾನಡಾವೃತ್ತ [illegible]

FOR COLLEGE & SCHOOL BOOKS AND

Other [illegible] please pay a Visit to

M/s. M. M Pai Bros.

Booksellers & Stationery Merchants,

High School Road KUMTA.

ಸ್ಥಾನಿಕ ವೃತ್ತಾಂತ

ಕುಮಟಾ— ಕಳೆದ ಮಂಗಳವಾರ ಮೃಗ ಮಳೆ ಗಾರಂಭವಾಯಿತು ಈ ಮಳೆ ಮೊದಲಿನ ಎರಡು ದಿನ ಜೋರಾಗಿ ಸುರಿಯಿತು ಆದರೆ ಗುರುವಾರದಿಂದ ಮಂದ ವಾಗಿದೆ ಹಗರಿನಲ್ಲಿ ಉರಿಬಿಸಿಲು ಕಾಯುತ್ತಿದೆ, ಇಗಳ ನಲ್ಲಿ ಚಳಿ [illegible] ದಿನ ಹೊಳಪು [illegible] ಭವಿಷ್ಯ [illegible] ಬಿನ್ನಗಳು ಕಾಣುತ್ತಿವೆ

ಕಳೆದ [illegible] ಕಚೇರಿ [illegible] ಜಿಲ್ಲಾ ಬೇಸಾಯ ಅಧಿಕಾರಿಗಳು [illegible] ವಿನಾಯಕರಾಯರೂ [illegible] ಬಿತ್ತಿ ಜಿಲ್ಲೆಯನ್ನು [illegible] ದೃಷ್ಟಿಯಿಂದ [illegible] ಮಾಡಿರೆಂದು [illegible] ಕಾರ್ಯದಲ್ಲಿ [illegible] ಯಾವ ಯಾವ ಬಗೆಯ [illegible] ಶಿವರಾಯರೂ [illegible] ಇಂಗ್ಲಂಡ-ಅಮೇರಿಕೆಗಳಲ್ಲಿ [illegible] ಪ್ರತಿಪಾದಿಸಿದರು

[illegible] ಅಂಗಡಿಗಳಲ್ಲಿ [illegible] ಎಂದು ಮಂತ್ರಿಯಾಗಿ, ಈ ಅಂಗ ಡಿಗಳಲ್ಲಿ [illegible] ಪ್ರಮಾಣದಿಂದ [illegible] ೧೯೪೯ ರ [illegible] ವೃತ್ತ [illegible] ಜಿಲ್ಲಾಧಿಪರು ಮುಂದಿನಂತೆ ಉತ್ತರ ಕೊಟ್ಟಿರುತ್ತಾರೆ — ಎಲ್ಲ ಜನರಿಗೆ ಯಾವದೇ ಬಗೆಯ [illegible] ಅವರಿಗೆ ಬೇಕಷ್ಟು [illegible] ಅಧಿಕಾರಿಗಳಿಗೂ [illegible] ಅವಶ್ಯವುಳ್ಳ [illegible] ಸಂಪಾದಿಸಿ [illegible] ಆಹಾರ-ಧಾನ್ಯಗಳಲ್ಲಿ [illegible] (Extra) [illegible] ಮುಂತಾದ್ದು [illegible] ಅಂಗಡಿಗಳಿಗೂ [illegible] ಆಹಾರ-ಧಾನ್ಯದಲ್ಲಿ [illegible] ಇಡಲಾಗಿದೆ

ಕನಾಂ ಕೊಲೇಜಿನ ಉದ್ಘಾಟನೆಯ ಸಿದ್ಧತೆಗಳು [illegible] ಅವಶ್ಯವುಳ್ಳ [illegible] ಕೊಲೇಜಿನಲ್ಲಿ ಪ್ರವೇಶ [illegible] ವಿದ್ಯಾರ್ಥಿಗಳು [illegible]

[illegible] ಬರೆಯುತ್ತಾರೆ — ದಿನಾಗ ನ್ಯಾಯಾಲಯಗಳಿಂದ [illegible] ಮಾಡಲ್ಪಟ್ಟಿ [illegible] ಗ್ರಾಮ [illegible] ಆಮಲಿನಲ್ಲಿದೆ [illegible] ಗ್ರಾಮಸ್ಥರು [illegible] ಎಂದಿನ್ನೂ [illegible] ಎಂಬುದನ್ನು [illegible] ಉಲ್ಲೇಖ ಮಾಡಲ್ಪಟ್ಟ [illegible] ಪಂಚ [illegible] ಗ್ರಾಮಸ್ಥರಿಗೆ [illegible] (೩) [illegible] ನಿವಾರಿಸಲ್ಪಟ್ಟ [illegible] ಸಂಗತಿಯನ್ನು [illegible] ಮುಲ್ಕೀ ಅಧಿಕಾರಿಗಳಿಗೆ [illegible] ಮುಲ್ಕೀ [illegible] ಇದ್ದರಿಂದ [illegible] ನ್ಯಾಯಾಧೀಶರು [illegible] ಕೊಳ್ಳಬೇಕೆಂದೂ [illegible] ನಿಯಮ ಮಾಡಬೇಕಾಗಿ ಆರಿಕೆಯಿದೆ

ಹೊನ್ನಾವರ— ಹಳದೀಪುರ-ಗ್ರಾಮದ ದಕ್ಷಿಣ ಭಾಗದ [illegible] ಅಂಗಡಿಯ [illegible] ನಾಯ್ಕರ [illegible] ಯಾವಾಗ [illegible] ಪರಮೇಶ್ವರ ನಾಯ್ಕರ ಎಂಬ [illegible] ಕವಿಮಾಟ [illegible] ವೆಂಕಟರಮಣ ನಾಯ್ಕರು [illegible] ಬಿಟ್ಟಿದ್ದರು [illegible] ಉಗ್ರಾಣದಲ್ಲಿ [illegible] ಮಾಡಿಕೊಂಡ [illegible] ಹಳದೀಪುರ [illegible] ಬರೆದುಕಳಿಸುತ್ತಾರೆ

[illegible] ಹಳದೀಪುರ ಹೊನ್ನಾವರ ಕಕ್ಕೇಟಿನ [illegible] ಹಳದೀಪುರ ಗ್ರಾಮದ ಮಧ್ಯ [illegible] ಹೊನ್ನಾವರದಿಂದ [illegible] ಹಳದೀಪುರ ಹೊನ್ನಾವರ [illegible] ಅನುಕೂಲವಾಗುವದೆಂದು ಹಳದೀಪುರ ಗ್ರಾಮ [illegible] ಬರೆಯುತ್ತಾರೆ

ಶಿರಸಿ— [illegible] ಜನರಿಗೆ ಬೇಕಾದ [illegible] ಹಾಗೂ [illegible] ಬಂಜಾರ ಮಾಡಿ [illegible] ಬೇಸಾಯ [illegible] ಬೀಜಗಳನ್ನು ಸಂಗ್ರಹಿಸಿ [illegible] ಆಹಾರ ಬೆಳೆಸುವ ಯೋಜನೆಯದೊಂದು [illegible] ಆಹಾರ [illegible] ಜಿಲ್ಲಾಧಿಪರು [illegible]

([illegible] ೧೯೪೯) ಕಳೆದ [illegible] ಸಿದ್ಧಾಪುರದ [illegible] ಎಂಬಾತನ [illegible] ಭಟ್ಟ [illegible] ಪೋಲೀಸರು [illegible] ಕಲಂ [illegible] ಕ್ರಿಯಾ-ಪಕ್ರ [illegible] ಸಂಬಂಧವಿಲ್ಲದ [illegible] ನ್ಯಾಯಾಧೀಶರು [illegible] ಶಂಕರ ಭಟ್ಟರಿಗೆ [illegible]

ಈ ತಾಲೂಕಿನ [illegible] ಗ್ರಾಮದಲ್ಲಿ ಜನರು ಕಳೆದ [illegible] ಶ್ರೀ ಸಿದ್ಧಿವಿನಾಯಕ ವಿದ್ಯಾಲಯ [illegible] ಶಾಲೆಯನ್ನು ತೆರೆದಿರುತ್ತಾರೆ

ಕಳೆದ [illegible] ಬಾಳನಕೊಪ್ಪದಲ್ಲಿ [illegible] ಶ್ರೀ ಬಸವರಾಜೇಂದ್ರ [illegible] ವೃದ್ಧರ [illegible]

ಸಿದ್ದಾಪುರ— (೩೦ [illegible] ೪೯) ಪ್ರಾದೇಶಿಕ [illegible] ತಾಲೂಕಿನಲ್ಲಿ [illegible] ಶಿಕ್ಷಣ [illegible] ಸಂಸ್ಥೆಗಳ [illegible] ಮಾಲ್ಕಂ [illegible]

(೩೦ [illegible] ೪೯) [illegible] ಪೋಲೀಸರು [illegible]

[illegible] ಗೇಣವನ್ನು ಇಸಕೊಂಡನೆಂದೂ, ಆದರ [illegible] ಕಕ್ಷಿಗಾರರು [illegible] ಮಾಡದೆ [illegible] ಹಣವನ್ನು ತಾನೇ [illegible] ಕಕ್ಷಿಗಾರರು [illegible] ಇದೇನೂ [illegible] ತಿಳಿಯಲಿಲ್ಲೆಂದೂ, [illegible] ಪಾಸತಿಗಳು [illegible] ಮೋಲೆ [illegible] ಹಣದ [illegible] ಮಾಡಿದ್ದನೆಂಬ [illegible] ತಿಳಿದು ಬಂತೆಂದೂ, [illegible] ಬಹಳಷ್ಟು ರೈತರಿಗೆ [illegible] ಪಕ್ಷದ [illegible] ಕಥೆಗಳನ್ನು ಹೇಳಿದರು [illegible] ರೈತ ಸಂಘದ [illegible] ಗೋಕರ್ಣದಲ್ಲಿ ಸಂಘದ ಅಧಿಕೃತ ಪ್ರತಿನಿಧಿಯಾಗಿ ವ್ಯವಹರಿಸುತ್ತಾನೆ

ಕಾರವಾರ— (ತಾ. ೩೧-೫-೪೯) [illegible]

[illegible]

ಅಂಕೋಲಾ— [illegible]

[illegible]

ಹಳಿಯಾಳ— (ತಾ ೩೦-೫-೪೯) [illegible]

[illegible]

ಮುಂಡಗೋಡ— (ತಾ ೧-೬-೧೯೪೯) [illegible]

[illegible]

([illegible])

ವಾರ್ತೆಗಳು.

[illegible]

NOTICE.

Through the auspices of the Bombay Social Hygiene Council, the Government of Bombay, have made arrangements for free distribution of Anti-Venereal drugs to the poor patients attending the Civil Hospital, Karwar.

All the public are hereby informed that Anti-venereal treatment will be given at the Civil Hospital, Karwar, free of charge to the poor patients suffering from venereal diseases.

Karwar] **H G Sattur,**
3 6 1949.] M S (Bom) B M S Cl.I,
Civil Surgeon, Karwar

ವ್ಯಾಪಾರಸ್ಥರಿಗೆ ವಿನಂತಿ.

[illegible]

G D MALGIKAR,
Booking & Forwarding Agent,
Post Box No 4092,
BOMBAY, No. 7

ಎಸ್. ಎಸ್. ಸಿ. ಪರೀಕ್ಷೆಯ ಫಲಿತಾಂಶ.

[illegible]

ಕಾರವಾರ (ಸರಕಾರಿ) ಹಾಯಸ್ಕೂಲಿನಿಂದ [illegible]

ಸೆಂಟ್. ಮಾಯಕೇಲ ಕೋನ್ವೆಂಟ ಹಾಯಸ್ಕೂಲಿನಿಂದ [illegible]

ಕುಮಟೆಯ ಗಿಬ್ಬ ಹಾಯಸ್ಕೂಲಿನಿಂದ [illegible]

[illegible]

ಹೆಸರು	ಪಡೆದ ಗುಣಗಳು
[illegible]	[illegible]

[illegible]

NOTICE.

Applications are invited from female candidates between the ages of 21 and 30 for training in secondary Dais Course of Six months at this hospital from 16th June 1949 on a stipend of Rs 4/- and uniform allowance of Rs. 5/- P M Only those who have passed Fourth Standard Kannada, Marathi or English and who are domiciled in North Kanara District only, need apply to the undersigned and appear for an interview at their own on 16th June 1949, at 11 A M at this Hospital No guarantee of selection is given

Civil Hospital Karwar, 2nd June, 1949 — **H G SATTUR** Civil Surgeon Karwar.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ್ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270. Monday, 20-6-1949.

ಕಾನಡಾವೃತ್ತ

ವರ್ಷ ೩೦.] THE KANARA NEWS. [ಸಂಚಿಕೆ ೫೧.

ಕುಮಟಾ- ಸೋಮವಾರ, ತಾ ೨೦-೬-೧೯೪೯.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೮-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ,, ೦-೧-೦
ವ್ಹಿ. ಪಿ. ಯಿಂದ ಹಣ ಕಳಿಸುವವರು ವ್ಹಿ. ಪಿ. ವೆಚ್ಚ ೬ ಆಣೆ ಹೆಚ್ಚಿಗೆ ಕೊಡಬೇಕು. ವರ್ಗಣಿ ಹಣವನ್ನು ಮುಂಗಡ ಕಳಿಸತಕ್ಕದ್ದು.

ಜಾಹೀರಾತುಗಳ ದರ:
೧೪ ಎಮ್ ಉದ್ದ
೧ ಇಂಚಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ [illegible].

ಕೆನರಾ ಕೊಲೇಜು ಜಿಲ್ಲೆಯ ಉತ್ಕರ್ಷದ ಸೋಪಾನವಾಗಲಿ !

ಕಾನಡಾವೃತ್ತ

ವಿರೋಧಿ ಸಂ|| ಜ್ಯೇಷ್ಠ ಕೃಷ್ಣ ೮ವಿ, ಸೋಮವಾರ

ಕೆನರಾ ಕೊಲೇಜು
ನಮ್ಮ ಜಿಲ್ಲೆಯ ಕೀರ್ತಿಮುಖ !

ಕೆನರಾ ಕೊಲೇಜ ಸಮಿತಿಯವರು ಕಳೆದ ೬ ವರ್ಷಗಳಿಂದ ಸತತವಾಗಿ ನಡಿಸಿದ ದೀರ್ಘ ಪರಿಶ್ರಮವು ಇಂದು ಸಫಲವಾಗಿ ನಾವು ಇಷ್ಟು ದಿನ ಉತ್ಕಂಠೆಯಿಂದಲೂ ಉತ್ಸುಕತೆಯಿಂದಲೂ ನಿರೀಕ್ಷಿಸುತ್ತಿದ್ದ ಕೆನರಾ ಕೊಲೇಜು ಇಂದು ಮಧ್ಯಾಹ್ನದ ಅಭಿಜನ್ಮುಹೂರ್ತದಲ್ಲಿ ತೆರೆಯಲ್ಪಟ್ಟು, ಜಿಲ್ಲೆಯ ತರುಣ-ತರುಣಿಯರಿಗೆ ಜ್ಞಾನದಾನ ಮಾಡುವ ಪವಿತ್ರ ಕಾರ್ಯವನ್ನು ಪ್ರಾರಂಭಿಸುವದೆಂದು ನವ ಓದಿಸಲು ನಮಗಿಂದು ಪರಮ ಹರುಷವೆನಿಸುತ್ತಿದೆ ನಮ್ಮ ಜಿಲ್ಲೆಯು ಬಡತನದ ಬೀಡೆಂಬುದಕ್ಕೆ ಸಂಶಯವಿಲ್ಲ ಇನ್ನಿತರ ಜಿಲ್ಲೆಗಳಲ್ಲಿ ಕೊಲೇಜು ತೆರೆಯುವ ಕಲ್ಪನೆ ಹೊರಟ ನಾಲ್ಕಾರು ತಿಂಗಳಲ್ಲಿ ಅವಶ್ಯವುಳ್ಳ ನಿಧಿಯು ಸಂಗ್ರಹವಾಗಿ ಸಂಕಲ್ಪಿತ ಕೊಲೇಜು ಅಸ್ತಿತ್ವದಲ್ಲಿ ಬರುತ್ತಿದೆ ಆದರೆ ನಮ್ಮ ಜಿಲ್ಲೆಯವರು ಯೋಜಿಸಿದ ಕೊಲೇಜು ಮೂರ್ತ ರೂಪವನ್ನು ಹೊಂದಬೇಕಾದರೆ ೬ ವರ್ಷಗಳ ಕಾಲ ಬೇಕಾಯಿತು ! ಇಂತಹ ಬಡತನದ ಮೂಲಕ, ಬುದ್ಧಿಶಕ್ತಿಯಲ್ಲಿಯೂ ಜ್ಞಾನ ಸಂಪಾದನೆಯ ಆಸಕ್ತಿಯಲ್ಲಿಯೂ ನಮ್ಮ ಜಿಲ್ಲೆಯವರು ಇತರರಿಗಿಂತ ಹಿಂದೆ ಇರುವದಿಲ್ಲವಾದರೂ, ನಮ್ಮ ತರುಣರನೇಕರು ಉಚ್ಚ ಶಿಕ್ಷಣ ಪಡೆಯುವ ತಮ್ಮ ಲಾಲಸೆಯನ್ನು, " ಉತ್ಪದ್ಯಂತೇ ವಿಲೀಯಂತೇ ದರಿದ್ರಾಣಾಂ ಮನೋರಥಾಃ " ಎಂಬ ಸುಭಾಷಿತಕ್ಕನುಸಾರವಾಗಿ, ನಡುವೆಯೇ ಬಿಟ್ಟುಕೊಟ್ಟು, ಹೇಗೋ ಜಗ ಪ್ರಪಂಚ ಸಾಗಿಸುವ ಪ್ರಸಂಗ ಒದಗುತ್ತಿದೆ ವಿದ್ಯೆಯಲ್ಲಿ ನಮ್ಮ ಜಿಲ್ಲೆಯು ಹಿಂದುಳಿಯಲು ಇದೇ ಮೂಲ ಕಾರಣ ಇಂದಿನಿಂದ ಪ್ರಾರಂಭವಾಗುವ ಕೆನರಾ ಕೊಲೇಜು ಆ ಕೊರತೆಯನ್ನು ನೀಗಿಸಿ, ಜಿಲ್ಲೆಯ ಬಡ ವಿದ್ಯಾರ್ಥಿಗಳಿಗೂ ಕೂಡ ಸರಸ್ವತೀ ದೇವಿಯ ಅಂತರ್ಗೃಹದಲ್ಲಿ ಪ್ರವೇಶ ಮಾಡಲು ಮುಕ್ತದ್ವಾರ ಮಾಡಿಕೊಡುವದೆಂದು ನಾವು ನಂಬುತ್ತೇವೆ ಆದರಿಂದ ಈ ಕೊಲೇಜು ನಮ್ಮಲ್ಲಿಯ ಬಡವರ ಭಾಗ್ಯನಿಧಿಯಾಗಿರುತ್ತದೆಂದೂ ನಾವು ಎಣಿಸುತ್ತೇವೆ

ನಮ್ಮಲ್ಲಿ ಈಗ ಹೇಳತಕ್ಕ ಉದ್ಯೋಗ-ಉದ್ಯಮಗಳಲ್ಲಿ ವ್ಯಾಪಾರವ ವರೂ ತಕ್ಕಷ್ಟಿಲ್ಲ ಜಿಲ್ಲೆಯ ಜನಸಾಮಾನ್ಯರು ವಿದ್ಯೆಯಲ್ಲಿ ಹಿಂದುಳಿದಿದ್ದರಿಂದಲೇ ಈ ಅವಸ್ಥೆಯಾಗಿರುತ್ತದೆಂದು ನಮ್ಮ ಅಭಿಪ್ರಾಯವಿದೆ ವಿದ್ಯೆಯ ಪ್ರಸಾರವಾಗಿ ಸುಶಿಕ್ಷಿತರ ಸಂಖ್ಯೆ ಬೆಳೆದರೆ, ಆ ಸುಶಿಕ್ಷಿತರು ತಮ್ಮ ಪ್ರತಿಭೆಯ ಪ್ರಭಾವದಿಂದ ಯಾವ ಬೇಕಾದ ಉದ್ಯೋಗಗಳನ್ನು ಪ್ರಾರಂಭಿಸಲಿಕ್ಕೂ ಇದ್ದ ಉದ್ಯೋಗಗಳನ್ನು ಪುನರ್ಘಟಿಸಲಿಕ್ಕೂ ಸಿದ್ಧರಾಗುತ್ತಾರೆ ಆದರಿಂದ ಇಂದು ತೆರೆಯಲ್ಪಡುತ್ತಿರುವ ಕೆನರಾ ಕೊಲೇಜು ನಮ್ಮ ಜಿಲ್ಲೆಯ ಏಳಿಗೆಯ ನಿಶ್ಶ್ರೇಣಿಕೆಯಾಗುವದೆಂದೂ ನಾವು ಸದೆ ನಂಬಿದ್ದೇವೆ

ಜಿಲ್ಲೆಯ ಈ ಭಾಗ್ಯಮಂದಿರವನ್ನು ಕಟ್ಟಲು ನೆರವಾದ ಸಕಲರಿಗೂ ನಾವು ನಮ್ಮ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇವೆ ಅನೇಕರು ಈ ಕಾರ್ಯಕ್ಕಾಗಿ ಪರಿಶ್ರಮಪಟ್ಟಿದ್ದಾರೆಂಬುದನ್ನು ನಾವು ಬಲ್ಲೆವು ಅವರಲ್ಲಿ ತಾರತಮ್ಯ ಮಾಡುವದು ಒಂದು ದೃಷ್ಟಿಯಿಂದ ಅನುಚಿತವಾಗಬಹುದು ಆದರೂ ಕೆಲವು ವಿಶಿಷ್ಟ ವ್ಯಕ್ತಿಗಳು ಮಾಡಿರುವ ಪರಿಶ್ರಮದ ಹಾಗೂ ತ್ಯಾಗದ ವಿಷಯ ಉಲ್ಲೇಖಿಸ ದಿರಲು ಸಾಧ್ಯವಿಲ್ಲ ಕೆನರಾ ಕೊಲೇಜ ಸಮಿತಿಯ ಗವರ್ನಿಂಗ ಬೋಡಿಯ ಅಧ್ಯಕ್ಷರಾಗಿರುವ ರಾ| ನಾರಾಯಣ ಹೆಗಡೆಯವರೂ ಕಾರ್ಯದರ್ಶಿಗಳಾಗಿರುವ ರಾ|| ಲಕ್ಷ್ಮಣ ಕಾಮತರೂ ತಮ್ಮ ಇತರ ವ್ಯವಸಾಯಗಳನ್ನು ಕಡೆಗಣಿಸಿ ಕೊಲೇಜಿನ ಕೆಲಸಕ್ಕಾಗಿ ತಮ್ಮ ಇಡೀ ವೇಳೆಯನ್ನು ವಿನಿಯೋಗಿಸುತ್ತಿದ್ದಿಲ್ಲವಾದರೆ ಕೆನರಾ ಕೊಲೇಜಿನ ಉದ್ಘಾಟನೆ ಇಷ್ಟು ಬೇಗ ಜರಗುತ್ತಿದ್ದಿಲ್ಲ ಆನೇ ಮಾಂಗ ಸಮಿತಿಯ ಅಧ್ಯಕ್ಷರಾಗಿರುವ ಡಾ| ಅಣ್ಣಪ್ಪ ಬಾಕಿರೇ ಯವರ ನೇತೃತ್ವ, ಸಹಾಯ, ಸಹಕಾರ ಸಿಗುತ್ತಿದ್ದಿಲ್ಲವಾದರೆ ಕೊಲೇಜನ್ನು ಕಾಣುವ ನಮ್ಮ ಕನಸು ಇನ್ನೂ ಕನಸಾಗಿಯೇ ಉಳಿಯುತ್ತಿತ್ತು ನಿತಾಂತ ಪಿತೃವಾತ್ಸಲ್ಯದಿಂದ ಅವರು ನಮ್ಮ ಕೊಲೇಜನ್ನು ಸಾಕಿ ಸಲಹುವ ಭಾರವನ್ನು ಹೊತ್ತಿದ್ದಾರೆ ಅವರ ಈ ಋಣವನ್ನು ನಮ್ಮ ಜಿಲ್ಲೆಯು ಎಂದಿಗೂ ತೀರಿಸಲಾರದು ಕೊಲೇಜಿಗೆ ಪರವೆಯ ಹಿಂದಿನಿಂದ ಅಮೂಲ್ಯ ಸಹಾಯ ಮಾಡಿದ ಇನ್ನೂ ಕೆಲವು ಮಹನೀಯರಿದ್ದಾರೆ ಅವರು ಸ್ವತಃ ಅಜ್ಞಾತರಾಗಿ ಉಳಿಯಬಯಸುತ್ತಿರುವಾಗ ಅವರ ನಾಮನಿರ್ದೇಶ ಮಾಡುವದು ಉಚಿತವಾಗಲಾರದು ಈ ಮಹನೀಯರಿಗೆಲ್ಲ ನಾವು ನಮ್ಮ ಜಿಲ್ಲೆಯವರ ಪರವಾಗಿ ಪ್ರೇಮದ ಧನ್ಯವಾದಗಳನ್ನು ಅರ್ಪಿಸುತ್ತೇವೆ

ಸುದೈವದಿಂದ ನಮ್ಮ ಕೊಲೇಜಿಗೆ ತರುಣರೂ ಉತ್ಸಾಹಿಗಳೂ ಕರ್ತವ್ಯದಕ್ಷರೂ ಆದ ಪ್ರಾಚಾರ್ಯ-ಪ್ರಾಧ್ಯಾಪಕರು ದೊರೆತಿದ್ದಾರೆ ಅವರ ಸಂಕ್ಷಿಪ್ತ ಪರಿಚಯವನ್ನು ನಾವು ಇದೇ ಸಂಚಿಕೆಯಲ್ಲಿ ಬೇರೆಡೆ ಕೊಟ್ಟಿರುತ್ತೇವೆ ಇನ್ನಿತರ ಕಡೆ ತಮಗೆ ಸಿಗಬಹುದಾದ ಹೆಚ್ಚಿನ ವೇತನ-ವಿಲಾಸಗಳ ಆಸೆಯನ್ನು ತೊರೆದು ಅವರು ನಮ್ಮ ಬಡ ಜಿಲ್ಲೆಗೆ ಸೇವೆ ಸಲ್ಲಿಸಲು ದೀಕ್ಷಾಬದ್ಧರಾಗಿ ಬಂದಿರುತ್ತಾರೆ ಅವರಿಗೂ ಈ ಶುಭ ಸಂದರ್ಭದಲ್ಲಿ ನಾವು ಅಭಿನಂದನೆಗಳನ್ನು ಸಲ್ಲಿಸ ಬಯಸುತ್ತೇವೆ

ಅಂತು ಕೊನೆಗೆ ಜಗನ್ನಿಯಾಮಕನ ಕೃಪೆಯಿಂದ ನಮ್ಮ ಜಿಲ್ಲೆಯ ಭಾಗ್ಯಮಂದಿರವೊಂದು ತೆರೆಯಲ್ಪಟ್ಟಿದೆ ಇದರ ಸಂಪೂರ್ಣ ಲಾಭವನ್ನು ನಮ್ಮ ತರುಣರು ಪಡಕೊಂಡು ಜಿಲ್ಲೆಯನ್ನು ಬೆಳಗಲೆಂದೂ, ಜಿಲ್ಲೆಗೆ ಕೀರ್ತಿಯನ್ನು ತರಲೆಂದೂ ನಾವು ಹಾರೈಸುತ್ತೇವೆ

ಕಾನಡಾ ಜಿಲ್ಲೆಯ ಭಾಗ್ಯಮಂದಿರದ ಮಹಾದ್ವಾರ.



ಸದ್ಯಕ್ಕೆ ಈ ಮಂದಿರದಲ್ಲಿ ಕೊಲೇಜಿನ ವರ್ಗಗಳು ನಡೆಯುವವು.

ಕೆನರಾ ಕೊಲೇಜ.

ಸಂಕ್ಷಿಪ್ತ ಇತಿಹಾಸ.

ಇಂದಿನಿಂದ ಕುಮಟೆಯಲ್ಲಿ ಚಿರ-ನಿರೀಕ್ಷಿತ ಕೆನರಾ ಕೊಲೇಜು ಪ್ರಾರಂಭವಾಗುತ್ತಿದೆ. ಈ ಶುಭ ಸಮಯದಲ್ಲಿ ಈ ಕೊಲೇಜಿನ ಹಾಗೂ ಅದನ್ನು ಸ್ಥಾಪಿಸಿ ನಿಯಂತ್ರಿಸುವ ಕೆನರಾ ಕೊಲೇಜ ಸೊಸಾಯಟಿಯ ಸಂಕ್ಷಿಪ್ತ ಇತಿಹಾಸವನ್ನು, ಸಂಸ್ಥೆಯು ಅತಿವರೆಗೆ ಮಾಡಿದ ಪವಿತ್ರ ಕಾರ್ಯದ ಇತಿಹಾಸವನ್ನೂ, ಕೊಲೇಜಿನಲ್ಲಿ ಸದ್ಯಕ್ಕೆ ಸೇರಿರುವ ಆಚಾರ್ಯ-ಪ್ರಾಧ್ಯಾಪಕರ ಗುಣಗೌರವವನ್ನೂ ವಾಚಕರ ಮುಂದಿಡಬಯಸುತ್ತೇವೆ. ಈಗ ಪ್ರಕಟಿಸಲ್ಪಡುತ್ತಿರುವ ಕೆಲವೊಂದು ವಿವರಗಳೂ ವಿಷಯಗಳೂ ಹಿಂದೆ "ವೃತ್ತ"ದಲ್ಲಿ ಪ್ರಕಟವಾಗಿದ್ದರೂ ಅವನ್ನೆಂದು ಸಂಕಲಿಸಿ ವಾಚಕರ ಮುಂದಿಡುವದು ಅನುಚಿತವಾಗಲಾರದು.

ಕೆನರಾ ಕೊಲೇಜಿನ ಕಲ್ಪನೆ ಹೊರಟಿದ್ದು ೧೯೪೫ರ ಮೇ ತಿಂಗಳಲ್ಲಿ. ನಮ್ಮ ಜಿಲ್ಲೆಯಲ್ಲಿ ಆಗ ೧೦-೧೧ ಹಾಯಸ್ಕೂಲುಗಳಾಗಿದ್ದವು; ಪ್ರತಿ ವರ್ಷ ೩೫೦ಕ್ಕೆ ಮೇಲ್ಪಟ್ಟು ವಿದ್ಯಾರ್ಥಿಗಳು ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಿದ್ದರು; ಅವರಲ್ಲಿ ಕನಿಷ್ಠ ೩೦೦ ಮಂದಿಯಾದರೂ ಉಚ್ಚ-ಶಿಕ್ಷಣ ಪಡೆಯಲು ಅರ್ಹರಿರುತ್ತಿದ್ದಾಗ್ಯೂ ಪರ-ಜಿಲ್ಲೆಗಳಿಗೆ ಹೋಗಿ ಕಲಿಯಲು ಅಸಮರ್ಥರಿರುವ ಎಷ್ಟೋ ಮಂದಿ ತಮ್ಮ ಶಿಕ್ಷಣವನ್ನು ಅಷ್ಟಕ್ಕೇ ಮುಕ್ತಾಯಗೊಳಿಸುತ್ತಿದ್ದರು. ನಮ್ಮ ಜಿಲ್ಲೆಯಲ್ಲೇ ಒಂದು ಕೊಲೇಜು ತೆರೆದಲ್ಲಿ ಇವರಿಗೂ ಅನುಕೂಲವಾಗುವದು; ಬಗೆಬಗೆಯ ಕಷ್ಟ ಸಹಿಸಿ ಪರಸ್ಥಳಗಳಿಗೆ ಹೋಗಿ ಉಚ್ಚ ವಿದ್ಯಾಭ್ಯಾಸ ಮಾಡುತ್ತಿರುವ ಯುವಕರಿಗೂ ಅನುಕೂಲವಾಗುವದು; ಎಂಬದೊಂದು ಕಲ್ಪನೆ ಕುಮಟೆಯ ಕೆಲವು ಮಹಾಜನರ ತಲೆಯಲ್ಲಿ ಸುಳಿಯಹತ್ತಿತು. ಕುಮಟೆಯ ಪುರ-ಪ್ರಮುಖರಾಗಿರುವ ಶ್ರೀ|| ಅಣ್ಣಪ್ಪ ರಾಮಚಂದ್ರ ಪೈ ಇವರು ಈ ಕಲ್ಪನೆಯನ್ನು ವಿಚಾರ-ರಂಗಕ್ಕೆಳೆಸುವದಕ್ಕಾಗಿ, ೧೯೪೫ ಮೇ ತಿಂಗಳ ಕೊನೆಗೆ, ಕುಮಟೆಯ ಗಿಬ್ಬ ಹಾಯಸ್ಕೂಲಿನಲ್ಲಿ ಜಿಲ್ಲೆಯ ಪ್ರತಿನಿಧಿಗಳದೊಂದು ಸಭೆಯನ್ನು ಕರೆದಿದ್ದರು. ಸದರಿ ಸಭೆಗೆ ಬಂದ ಗೃಹಸ್ಥರು ಕೊಲೇಜು ತೆರೆಯುವ ಆವಶ್ಯಕತೆಯನ್ನು ಒಪ್ಪಿಕೊಂಡು, ಜಿಲ್ಲೆಯ ಮಧ್ಯಸ್ಥಳವಾಗಿರುವ ಕುಮಟೆಯಲ್ಲೇ ಅದನ್ನು ತೆರೆಯುವದೊಳಿತೆಂಬುದನ್ನೂ ಒಪ್ಪಿಕೊಂಡರು; ಮತ್ತು ಸದರಿ ಕೊಲೇಜಿಗಾಗಿ ನಿಧಿ ಸಂಗ್ರಹಿಸಲಿಕ್ಕೂ, ಅವಶ್ಯವುಳ್ಳ ಇತರ ಏರ್ಪಾಡುಗಳನ್ನು ಮಾಡಲಿಕ್ಕೂ ಚಿಕ್ಕದೊಂದು ಮಂಡಳವನ್ನು ನೇಮಿಸಿದರು. ಆದರೆ ಈ ಕಾರ್ಯ ಸರಿಯಾಗಿ ನಡೆಯಬೇಕಾದರೆ ಒಂದು ಸಂಘಟಿತ ಮತ್ತು ವಿಶ್ವಾಸಪಾತ್ರ ಸಂಸ್ಥೆಯಿರಬೇಕು ಎಂಬ ವಿಚಾರ ಬಂದದ್ದರಿಂದ ಅದೇ ವರ್ಷದ ಜೂನ-ಜುಲೈಯ ತಿಂಗಳಲ್ಲಿ "ಕೆನರಾ ಕೊಲೇಜ ಸೊಸಾಯಟಿ" ಎಂಬ ಸಂಸ್ಥೆಯು ನಿರ್ಮಾಣವಾಯಿತು ಮತ್ತು ಅದರ ಘಟನೆಯೂ ಸಿದ್ಧವಾಯಿತು. ಮುಂದೆ ತಾ. ೧೪-೧೦-೧೯೪೫ಕ್ಕೆ ಕುಮಟೆಯಲ್ಲಿ, ಮುಂಬಯಿಯ ಹಾಯಕೋರ್ಟಿನ ವಕೀಲ ಶ್ರೀ|| ಗಣೇಶ ಪದ್ಮನಾಭ ಮುರ್ಡೇಶ್ವರ ಇವರ ಅಧ್ಯಕ್ಷತೆಯೊಳಗೆ ಕೂಡಿದ ಪ್ರಮುಖರ ಸಭೆಯಲ್ಲಿ ಕೆಲವೊಂದು ತಿದ್ದುಪಡಿಗಳ ಸಹಿತ ಆ ಘಟನೆ ಮಾನ್ಯವಾಗಿ, ತಾ. ೧೬-೧೦-೪೫ನೇ ದಿನ, ಪಾರ್ಥಿವ ಸಂವತ್ಸರದ ವಿಜ್ಯಾ (ವಿಜಯಾ) ದಶಮಿಯ ಸುಮುಹೂರ್ತದಲ್ಲಿ, ಆ ಘಟನೆಗೆ ಸಭಿಕರು ತಮ್ಮ ಅಂಕಿತಗಳನ್ನಿಟ್ಟು, ಸೊಸಾಯಟಿಯ ಪ್ರಾಣಪ್ರತಿಷ್ಠೆ ಮಾಡಿದರು ಮತ್ತು ಸೊಸಾಯಟಿಯನ್ನು (೧೮೬೦ರ ೨೧ನೇ ಕಾನೂನಿನಂತೆ) ನೋಂದಿಸಿಕೊಳ್ಳಲು ಸರಕಾರಕ್ಕೆ ಅರ್ಜಿಯನ್ನು ಕಳಿಸಿದರು. ಘಟನೆಯಂತೆ ಸೊಸಾಯಟಿಯ ಕಾರಭಾರ ನಡೆಸಲು ಶ್ರೀ|| ಮುರ್ಡೇಶ್ವರ ಇವರ ಅಧ್ಯಕ್ಷತೆಯಲ್ಲಿ ೧೪ ಜನರದೊಂದು ಕೌನ್ಸಿಲ ಮತ್ತು ಸಮಿತಿಯೂ ಶ್ರೀ|| ನಾರಾಯಣ ತಿಮ್ಮಣ್ಣ ಹೆಗಡೆಯವರ ಅಧ್ಯಕ್ಷತೆಯಲ್ಲಿ ೯ ಗೃಹಸ್ಥರಿಂದೊಡಗೂಡಿದ ಒಂದು ಗವ್ಹರ್ನಿಂಗ ಬೋಡಿ ಯಾನೆ ಕಾರಭಾರಿ ಮಂಡಳವೂ ಅದೇ ಸಭೆಯಲ್ಲಿ ರಚಿಸಲ್ಪಟ್ಟವು. ಸಂಕಲ್ಪಿತ ಕೊಲೇಜಿಗೆ ಕುಮಟೆಯೇ ಯೋಗ್ಯ ಸ್ಥಳವಿರುತ್ತದೆಂಬ ಹಿಂದಿನ ನಿರ್ಣಯವನ್ನು ಸದರಿ ಸಭೆಯು ತಿರುಗೊಮ್ಮೆ ದೃಢಪಡಿಸಿ, ಕೊಲೇಜಿಗೆ ಬೇಕಾಗುವ ನಿಧಿಯನ್ನು ಕೂಡಿಸಲು ಒಂದು ನಿಧಿ-ಸಂಗ್ರಾಹಕ ಸಮಿತಿಯನ್ನು ನೇಮಿಸಿತು.

ನಿಧಿ-ಸಂಗ್ರಹ.

ಆದರೆ ಯಾವ ಕಾರ್ಯಕ್ಕಾದರೂ "ಸರ್ವಾರಂಭಾಸ್ತಂಡುಲಾಃ ಪ್ರಸ್ಥ-ಮೂಲಾಃ" ಎಂಬ ಉಕ್ತಿಗನುಸಾರವಾಗಿ ನಿಧಿ ಬೇಕಲ್ಲವೇ? ಅದರಲ್ಲೂ ಕೊಲೇಜೆಂಬುದು ಒಂದು ದೊಡ್ಡ "ಬಿಳೇ ಆನೆ"! ಕೊಲೇಜು ಕಟ್ಟಿ ನಡಿಸಲಿಕ್ಕೆ ಏನಿಲ್ಲೆಂದರೂ ಕನಿಷ್ಠ ೫-೫ ಲಕ್ಷ ರೂಪಾಯಿ ಬೇಕು. ಅದನ್ನು ಕೂಡಿಸಲು ನೇಮಿಸಲ್ಪಟ್ಟ ಸಭೆಯು ಒಂದು ಸಮಿತಿಯನ್ನು ನೇಮಿಸಿತಷ್ಟೇ. ಆದರೆ ಸಮಿತಿಗೆ ಪ್ರೋತ್ಸಾಹ ಕೊಡುವಂತಹ ಶ್ರೀಮಂತರು ನಮ್ಮ ಜಿಲ್ಲೆಯಲ್ಲಿ ಎಲ್ಲಿದ್ದಾರೆ? ಸುದೈವದಿಂದ ಸಮಿತಿಯ ಕಾರ್ಯದ ಆರಂಭ ಜಸ್ಮಾಗಿ ಆಯಿತು. ಕಾರಭಾರಿ ಮಂಡಳದ ಅಧ್ಯಕ್ಷರೂ ನಿಧಿ-ಸಂಗ್ರಹ ಸಮಿತಿಯ ನಾಯಕರೂ ಆದ ಶ್ರೀ|| ನಾರಾಯಣ ತಿ. ಹೆಗಡೆಯವರು ಸಭೆಯಲ್ಲೇ ತಾವು ನಿಧಿಗೆ ರೂ ೧೦೦೦೦ ಕೊಡುತ್ತೇವೆಂದು ವಾಗ್ದಾನ ಕೊಟ್ಟು ಹಿಂದುಗಡೆ ಆ ಹಣವನ್ನು ಪಸೂಲು ಸಹ ಕೊಟ್ಟರು. ಸೊಸಾಯಟಿಯ ಸ್ಥಾಪನೆಯಾದ ಕೂಡಲೆ ಊರಲ್ಲೂ ನಿಧಿ-ಸಂಗ್ರಹವಾಯಿತು. ಒಂದೇ ತಿಂಗಳಲ್ಲಿ ಸುಮಾರು ರೂ. ೬೫೦೦೦ದ ಅಂಕಿಗಳು ಸಿಕ್ಕವು. ಆದರೆ ನಮ್ಮ ಜಿಲ್ಲೆಯ ಸರ್ವಸಾಮಾನ್ಯ ಬಡತನದ ಮೂಲಕ ನಿಧಿ-ಸಂಗ್ರಹದ ಕಾರ್ಯ ಅಷ್ಟೇನು ದ್ರುತಗತಿಯಿಂದ ಸಾಗಲಿಲ್ಲ. ಈ ಬಗ್ಗೆ ಸಂಗ್ರಾಹಕರನ್ನು ದೂಷಿಸಿ ಪ್ರಯೋಜನವಿಲ್ಲ. ನಿಧಿ-ಸಂಗ್ರಹ ಸಮಿತಿಯ ಶ್ರೀ|| ನಾರಾಯಣ ತಿಮ್ಮಣ್ಣ ಹೆಗಡೆಯವರು ತಮ್ಮ ವೃದ್ಧಾಪ್ಯವನ್ನೂ ಶ್ರೀ|| ಲಕ್ಷ್ಮಣ ಸುಬ್ರಾಯ ಕಾಮತರು ತಮ್ಮ ವ್ಯವಸಾಯವನ್ನೂ ಲೆಕ್ಕಿಸದೆ ಈ ನಿಧಿ-ಸಂಗ್ರಹಕ್ಕಾಗಿ ಊರು ಊರು ತಿರುಗಾಡಿದ್ದಾರೆ; ಮತ್ತು ದಾತೃಗಳ ಬೆನ್ನು ಹಿಡಿದು ಅಂಕಿಗಳನ್ನು ಸಂಪಾದಿಸಿದ್ದಾರೆ. ಮುಂಬಯಿಯಿಂದ ಬೆಂಗಳೂರ ವರೆಗೆ ಹಲವಾರು ಸಾರೆ ಸಂಚಾರ ಮಾಡಿ, ಅಲ್ಲಲ್ಲಿರುವ ನಮ್ಮ ಜಿಲ್ಲೆಯ ಧನವಂತರನ್ನೂ ಸಿರಿವಂತರನ್ನೂ ಕಂಡು ಹಿಡಿದು, ಅವರಿಂದ ಆದಷ್ಟು ಹಣ ಎತ್ತುವ ಮಾಡುವ ಪ್ರಯತ್ನ ಮಾಡಿದ್ದಾರೆ. ಅವರ ಆ ಪ್ರಯತ್ನಗಳಿಗೆ ಬೇಕಷ್ಟು ಪ್ರೋತ್ಸಾಹ ಮಾತ್ರ ಸಿಗಲಿಲ್ಲ. ಆದರೂ ಸಮಿತಿಯವರು ನಿರಾಶರಾಗಲಿಲ್ಲ. ಸಂಕಲ್ಪಿತ ಕೊಲೇಜನ್ನು ಸ್ಥಾಪಿಸಿಯೇ ತೀರುವೆವೆಂಬ ದೃಢ ನಿರ್ಧಾರದಿಂದ ಅವರು ತಮ್ಮ ಕಾರ್ಯವನ್ನು ನಡಿಸಿದ್ದಾರೆ. ಅವರ ಹಾಗೂ ಇತರ ನಿಧಿ-ಸಂಗ್ರಾಹಕರ ಪ್ರಯತ್ನದಿಂದ ಈ ವರೆಗೆ ಸುಮಾರು ೨ ಲಕ್ಷ ೧೫ ಸಾವಿರ ರೂಪಾಯಿಗಳಷ್ಟು ನಿಧಿ ಕೂಡಿದೆ.

ಸರಕಾರದವರ ಭೂದಾನ.

ಸೊಸಾಯಟಿಯನ್ನು ನೋಂದಿಸಿಕೊಳ್ಳುವ ಬಗ್ಗೆ ಮಾಡಿದ ಅರ್ಜಿಯು ಮಂಜೂರಾಗಿ ತಾ. ೪-೧-೧೯೪೬ರಂದು ಸೊಸಾಯಟಿಯು ನೋಂದಿಸಲ್ಪಟ್ಟಿತು. ಕೂಡಲೆ ಸಮಿತಿಯವರು ಭಾವಿ ಕೊಲೇಜಿಗಾಗಿ ಸ್ಥಳ ಹುಡುಕಲಾರಂಭಿಸಿದರು; ಮತ್ತು ಈಗ ಕೊಲೇಜಿಗೆ ಸಿಕ್ಕಿರುವ ಸ್ಥಳವನ್ನು ಸಂಪಾದಿಸಲು ಯತ್ನ ಮಾಡಲಾರಂಭಿಸಿದರು. ದೈವೀ ಕೃಪೆಯಿಂದ ಅವರ ಆ ಪ್ರಯತ್ನ ಶೀಘ್ರದಲ್ಲೇ ಸಫಲವೂ ಆಯಿತು. ಆ ಕಾಲದಲ್ಲಿ ನಮ್ಮ ಜಿಲ್ಲೆಯ ಜಿಲ್ಲಾಧಿಪತಿಗಳಾಗಿದ್ದ ಕೆಪ್ಟನ್ ಪ್ರಿ. ನಂಜಪ್ಪಾ ಇವರು ತಾ. ೧-೩-೧೯೪೭ಕ್ಕೆ ಜಂಗಲ ಇಲಾಖೆಯವರಿಗೆ ಸೇರಿದ ಸದರಿ ಪ್ರದೇಶದಲ್ಲಿ ೩೮ ಎಕರೆಗಳಷ್ಟು ವಿಸ್ತೀರ್ಣ ಕ್ಷೇತ್ರವನ್ನು ಕೊಲೇಜಿಗೆ, ಕಂದಾಯ ಆಕರಣೆ ಮಾಡದೆ, ಭೂದಾನ ಮಾಡಿಕೊಡಲು ಸರಕಾರಕ್ಕೆ ಶಿಫಾರಸು ಮಾಡಿದರು; ಅವರ ಹಿಂದಿನಿಂದ ಜಿಲ್ಲಾಧಿಪರಾಗಿ ಬಂದಿದ್ದ ಶ್ರೀ|| ಛತ್ರೇಸಿಂಗ ರಾಣಾರವರೂ ಆ ಶಿಫಾರಸನ್ನು ಎತ್ತಿಹಿಡಿದರು; ಮತ್ತು ಸರಕಾರವು ಕೂಡ ದೊಡ್ಡ ಮನಸ್ಸು ಮಾಡಿ ತಾ. ೨೫-೩-೧೯೪೭ಕ್ಕೆ ಸದರಿ ೩೮ ಎಕರೆ ಸ್ಥಳವನ್ನು ಕೊಲೇಜ ಸೊಸಾಯಟಿಗೆ ದಾನ ಮಾಡಿಕೊಡಲು ಅಪ್ಪಣೆ ಕೊಟ್ಟರು. ಅದರಂತೆ ಅದೇ ಬೇಸಿಗೆಯಲ್ಲಿ ಮುಲ್ಕೀ ಇಲಾಖೆಯವರು ಗಡಿಕಲ್ಲು ಹಾಕಿ ಆ ಸ್ಥಳಗಳನ್ನು ಸೊಸಾಯಟಿಯ ಕಬಜೆಗೆ ಒಪ್ಪಿಸಿದರು.

ಅದೊಂದು ಸ್ವರ್ಗ-ಸುಂದರ ಸ್ಥಳ.

ಸರಕಾರದವರು ದಾನ ಕೊಟ್ಟ ಈ ಸ್ಥಳದ ಸೊಬಗನ್ನು ಶಬ್ದಗಳಿಂದ ಬಣ್ಣಿಸಲಸದಳ. ಈ ಸ್ಥಳವು ಕುಮಟಾ ನಗರದ ಹೊರಭಾಗದಲ್ಲಿ ತಪ್ಪಲಿನಂತಹ ಒಂದು ಉನ್ನತ ಸ್ಥಳದಲ್ಲಿದೆ. ಸ್ಥಳದ ಬೆನ್ನಿಗೇ ಗುಡ್ಡವುಂಟು. ಮುಂದುಗಡೆ ಬೆಟ್ಟವಿದೆ. ಅದರ ಆಚೆ ೩-೩|| ಫರ್ಲಾಂಗ ಅಂತರದಲ್ಲಿ ಅಘನಾಶಿನೀ ನದಿ ಹರಿಯುತ್ತಿದೆ. ಮೇಲಾಗಿ ಜಿಲ್ಲೆಯೊಳಗಿನ ಮುಖ್ಯ ಮಾರ್ಗಗಳ ಅಂಚಿಗೇ ಈ ಸ್ಥಳವುಂಟು. ಉತ್ತಮ ಹವೆಯುಳ್ಳ ಈ ಸ್ಥಳದಲ್ಲಿ ನೀರಿಗೂ ಕೊರತೆಯಿಲ್ಲ. ಭೂಗರ್ಭದಲ್ಲಿ ವಿಪುಲ ಜಲಾಶ್ರಯವಿದೆ. ಶ್ರೀ|| ರಾಣಾರವರು ಈ ಸ್ಥಳ ನೋಡಿದ ಕೂಡಲೆ ಹರುಷಭರಿತರಾಗಿ, (what a god-given site! " (ಎಷ್ಟು ಸುಂದರ ಸ್ಥಳ ದೇವರು ಕೊಟ್ಟಿದ್ದಾನೆ!) ಎಂದು ಉದ್ಗರಿಸಿದ್ದರೆಂಬುದು ಉಲ್ಲೇಖನೀಯವಿದೆ. ಹೋದ ವರುಷ ಸ್ಥಾನಿಕ ತಪಾಸಣೆಗಾಗಿ ಬಂದ ಮುಂಬಯಿ ವಿಶ್ವವಿದ್ಯಾಲಯದ ಶಿಷ್ಟರು ಕೂಡ ತಮ್ಮ ವರದಿಯಲ್ಲಿ, 'The environs are such as will afford more opportunities for out-door life and sport with the hill, the forest, the river and the sea nearby." (ಹತ್ತಿರವೇ ಗುಡ್ಡ, ಹೊಳೆ ಮತ್ತು ಸಮುದ್ರಗಳುಳ್ಳ ಈ ಸ್ಥಳದ ಸನ್ನಿವೇಶವು ವಿದ್ಯಾರ್ಥಿಗಳ ಹೊರಜೀವನಕ್ಕೂ ಆಟ-ಪಾಟಗಳಿಗೂ ಅಪೂರ್ವ ಅನುಕೂಲತೆಗಳನ್ನು ಒದಗಿಸಿಕೊಡಬಲ್ಲದು.) ಎಂದು ಈ ಸ್ಥಳದ ಸೌಂದರ್ಯವನ್ನೂ ಸೌಕರ್ಯವನ್ನೂ ಮನ

ದಣಿ ಹೊಗಳಿದ್ದಾರೆ. ಮುಖ್ಯ ಕೊಲೇಜಿನ ಮಂದಿರವನ್ನಲ್ಲದೆ ಕೊಲೇಜಿನ ಅಂಗೋಪಾಂಗ ಇಮಾರತುಗಳನ್ನೂ ಇಲ್ಲಿ ಕಟ್ಟಬಹುದು. ವಿದ್ಯಾರ್ಥಿನಿಲಯಗಳನ್ನೂ ಕಟ್ಟಬಹುದು. ಕೊಲೇಜಿಗೆ ಅವಶ್ಯವಿರುವ ಕ್ರೀಡಾಂಗಣವನ್ನೂ ನಿರ್ಮಿಸಿಕೊಳ್ಳಬಹುದು. ಅಷ್ಟು ವಿಶಾಲ ಕ್ಷೇತ್ರ ಈ ಸ್ಥಳದಲ್ಲಿದೆ. ರೂ. ೫೦೦೦೦ ಬೆಲೆ ಕೊಟ್ಟರೂ ಬೇರೊಂದೆಡೆ ಅಂತಹ ಸ್ಥಳ ಸಿಗಲಾರದು. ಕೊಲೇಜಿಗಾಗಿ ಈ ಸ್ಥಳ ದೊರೆತದ್ದು, ನಾವು ೨ ವರುಷಗಳ ಹಿಂದೆ ಹೇಳಿದಂತೆ, ಕೊಲೇಜಿನ ಭಾಗ್ಯೋದಯದ ಪೂರ್ವಚಿನ್ಹೆಯೇ ಸರಿ.

ಡಾ|| ಬಾಳಿಗಾರವರ ಅಮೃತ ಹಸ್ತದಿಂದ ಶಂಕುಸ್ಥಾಪನೆ

ಕೆನರಾ ಕೊಲೇಜಿಗೆ ಸರಕಾರದಿಂದ ಮೇಲೆ ಹೇಳಿದ ಸ್ವರ್ಗ-ಸುಂದರ ಸ್ಥಳ ಸಿಕ್ಕ ಸಮಯದಲ್ಲೇ ನಿಧಿ-ಸಂಗ್ರಾಹಕ ಸಮಿತಿಯವರಿಗೆ ಮುಂಬಯಿಯ ಕೀರ್ತಿಶಾಲಿ ಶಸ್ತ್ರಕ್ರಿಯಾ ಪಂಡಿತರಾದ ಡಾ|| ಅಣ್ಣಪ್ಪಾ ವೆಂಕಟರಾವ ಬಾಳಿಗಾರವರ ಪರಿಚಯವಾಯಿತು. ಸಮಿತಿಯವರು ಡಾ|| ಬಾಳಿಗಾರವರಲ್ಲಿ ಕೊಲೇಜ ನಿಧಿಗಾಗಿ ಅವರ ವಂತಿಗೆಯ ಅಂಕೆಯನ್ನು ದೊರಕಿಸಲು ಹೋಗಿದ್ದರು. ಆದರೆ ಡಾಕ್ಟರರು ಸಮಿತಿಯವರಿಗೆ ಅವರ ಅಪೇಕ್ಷೆಯಂತೆ ಒಂದೇ ೧—೨ ಸಾವಿರ ರೂಪಾಯಿಗಳ ಅಂಕೆಯನ್ನು ಕೊಟ್ಟು ಕಳಿಸದೆ, ಕೆನರಾ ಕೊಲೇಜಿನ ಬಗ್ಗೆ ನಿತಾಂತ ಪಿತೃವಾತ್ಸಲ್ಯವನ್ನು ತೋರ್ಪಡಿಸಿ, ಕೊಲೇಜ ಸಮಿತಿಯವರಿಗೆ ಬೇಕಾಗುವ ಸಕಲ ಸಹಾಯವನ್ನು ನೀಡುವ ಆಶ್ವಾಸನೆ ಕೊಟ್ಟರು. ಅವರ ಆ ವಾತ್ಸಲ್ಯ ನೋಡಿ, ಅವರನ್ನು ಕಾಣ ಹೋದ ಶಿಷ್ಟರಿಗೆ ಅವರ ಕಡೆಯಿಂದಲೇ ನಮ್ಮ ಕೊಲೇಜಿನ ಕೋನಶಿಲೆಯನ್ನು ಕೂಡ್ರಿಸಿಕೊಂಡು ಅವರಿಗೇ ಕೊಲೇಜ-ಸಮಿತಿಯ ನಾಯಕತ್ವವನ್ನು ಒಪ್ಪಿಸುವ ಸ್ಫೂರ್ತಿಯುಂಟಾಯಿತು. ಅದರಂತೆ ಶಿಷ್ಟರು ಅವರಿಗೆ ಕೊಲೇಜಿನ ಮುಖ್ಯ ಕಟ್ಟಡದ ಶಂಕುಸ್ಥಾಪನೆ ಮಾಡಿಕೊಡಬೇಕೆಂದು ಅಲ್ಲೇ ನಿಮಂತ್ರಣೆಯನ್ನು ಕೊಟ್ಟರು. ಡಾ|| ಬಾಳಿಗಾರವರಾದರೂ ಆ ನಿಮಂತ್ರಣೆಯನ್ನು ಸ್ವೀಕರಿಸಿ ತಾ ೧೬-೬-೧೯೪೭ನೇ ಶುಕ್ರವಾರ ಮುಂಜಾನೆ, ಜ್ಯೋತಿರ್ವಿದರು ಹೇಳಿಕೊಟ್ಟ ಶುಭ ಮುಹೂರ್ತದಲ್ಲಿ, ಕೊಲೇಜ ಮಂದಿರದ ಶಂಕು-ಸ್ಥಾಪನೆ ಮಾಡಿಕೊಟ್ಟರು.

ನಿಧಿಸಂಗ್ರಹದ ಮಂದತ್ವವೂ ಕಟ್ಟೋಣದ ಸಾಹಿತ್ಯಗಳ ಕೊರತೆಯೂ.

ಶಂಕು-ಸ್ಥಾಪನೆಯಾದಾಗ ಸುಮಾರು ೮೦೦೦೦ ರೂ ಗಳು ಸಮಿತಿಯ ಕಡೆ ವಸೂಲ ಬಂದಿದ್ದವು. ಸುಮಾರು ರೂ. ೬೫೦೦೦ ರಷ್ಟು ವಾಗ್ದತ್ತ ಹಣ ವಸೂಲ ಬರುವದಿತ್ತು. ೧೯೪೭ರ ಉತ್ತರಾರ್ಧದಲ್ಲಿ ನಿಧಿ-ಸಂಗ್ರಹದ ಕೆಲಸ ಅಷ್ಟೇನು ನಡೆಯಲಿಲ್ಲ. ಅವರಿಂದಲೂ ಕಟ್ಟೋಣದ ಸಾಹಿತ್ಯಗಳು ಆಗ ದುರ್ಲಭವಾದ್ದರಿಂದಲೂ ಕೊಲೇಜ ಸಮಿತಿಯವರು ಕೊಲೇಜಿನ ಮುಖ್ಯ ಮಂದಿರದ ಕಾರ್ಯವನ್ನು ಹಿಂದೂಡಿ, ಸದ್ಯಕ್ಕೆ ೧೫೭ ಅಡಿ ಉದ್ದ ಮತ್ತು ೧೨೨ ಅಡಿ ಅಗಲವಾದ ಮತ್ತು ನಡುವೆ ಅಂಗಳವಿರುವ, ಒಂದೇ ಅಂತಸ್ತಿನ ಚತುರಸ್ರ ಇಮಾರತನ್ನು ಕಟ್ಟಿಸಿಕೊಳ್ಳುವಾ ಎಂದು ನಿರ್ಧರಿಸಿ, ೧೯೪೮ರ ಬೇಸಿಗೆಯಲ್ಲಿ ಆ ಇಮಾರತಿನ ಕೆಲಸವನ್ನು ಪ್ರಾರಂಭಿಸಿದರು. ಆ ಇಮಾರತು ಈಗ ಪೂರ್ಣವಾಗಿದೆ. ಇದರಲ್ಲಿ ೭ ದೊಡ್ಡ (೩೦' × ೨೨') ಕೋಣೆಗಳೂ, ೬ ಮಧ್ಯಮ ಆಕಾರದ (೨೦' × ೨೨') ಕೋಣೆಗಳೂ, ೬ ಸಣ್ಣ (೨೦' × ೧೦') ಕೋಣೆಗಳೂ ಇವೆ. ಈ ಇಮಾರತಿಯಲ್ಲೇ ಈಗ ಕೊಲೇಜಿನ ವರ್ಗಗಳು ನಡೆಯಲಿವೆ. ವಿದ್ಯಾರ್ಥಿಗಳ ವಸತಿ-ಸ್ಥಾನಗಳಿಗಾಗಿ ಹಾಗೂ ಆಚಾರ್ಯರ ಮತ್ತು ವಿದ್ಯಾರ್ಥಿನಿಲಯದ ಮೇಲ್ವಿಚಾರಕರ ವಾಸ್ತವ್ಯಕ್ಕಾಗಿ ಇನ್ನೊಂದು ಚತುರಸ್ರ ಇಮಾರತು ಕೂಡ ಸಿದ್ಧವಾಗುತ್ತಲಿದೆ. ಈ ಎರಡೂ ಇಮಾರತುಗಳ ಖರ್ಚು ೩|| ಲಕ್ಷ ರೂಪಾಯಿಗಳಿಗೆ ಮುಟ್ಟುವದೆಂದು ಹೇಳುತ್ತಾರೆ. ಇನ್ನೂ ಎಷ್ಟೋ ಕೆಲಸಗಳಾಗಬೇಕಾಗಿವೆ. ಕೊಲೇಜ-ಸ್ಥಳವನ್ನು ಸ್ವಚ್ಛಗೊಳಿಸಿಕೊಂಡು, ಅದರ ಸುತ್ತಲೂ ಪ್ರಾಕಾರ ಕಟ್ಟಿಸುವದವಶ್ಯವುಂಟು. ಕ್ರೀಡಾಂಗಣವನ್ನೂ, ವ್ಯಾಯಾಮ ಶಾಲೆಯನ್ನೂ ತಯಾರಿಸುವದು ಬಾಕಿಯುಳಿದಿದೆ.

ಸಮಿತಿಯು ಸದ್ಯಕ್ಕೆ ಸಾಲಗಾರವಾಗಿದೆ.

ಮೇಲಿನಂತೆ ಸಮಿತಿಯು ಈ ವರೆಗೆ ಕೂಡಿಸಿದ ಹಣವೆಲ್ಲ ಸದ್ಯಕ್ಕೆ ತಯಾರಾಗಿರುವ ಮತ್ತು ತಯಾರಾಗುತ್ತಿರುವ ಕಟ್ಟಡಗಳಿಗಾಗಿ ಖರ್ಚಾಗಿ ಹೋಗಿದೆ. ಇಂತಹ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ನಿಯಮಗಳಂತೆ ರೂ. ೫೫೦೦೦ದ ಭದ್ರತೆಯ ಇಡುಗಂಟನ್ನು ವಿಶ್ವವಿದ್ಯಾಲಯದ ಕಡೆಗಿಟ್ಟು, ಕೊಲೇಜಿಗೆ ಬೇಕಾದ ಸಕಲ ಸಾಹಿತ್ಯ-ಸಲಕರಣೆಗಳನ್ನು ಒದಗಿಸಿಕೊಂಡು ಈ ವರ್ಷವೇ ಕೊಲೇಜು ತೆರೆಯುವದು ಸಾಧ್ಯವಾದೀತೆಂದು ಯಾರಿಗೂ — ಕೊಲೇಜ ಸಮಿತಿಯ ಗರ್ಭಗುಡಿಯೊಳಗಿನವರಿಗೂ ಕೂಡ — ಕಂಡು ಬಂದಿದ್ದಿಲ್ಲ. ಆದರೆ ನಮ್ಮ ಕೊಲೇಜ ಸಮಿತಿಯ ಅಧ್ಯಕ್ಷರಾಗಿರುವ ಡಾ|| ಬಾಳಿಗಾರವರ ಆತ್ಮವಿಶ್ವಾಸ ಬಲು ದೊಡ್ಡದು. ಹಣದ ಅಡಚಣೆಯಿಂದು ಹೇಳಿ ಕೈಕಾಲು ಬಿಡಬೇಡಿರೆಂದು ಅವರು ತಮ್ಮ ಸಹಕಾರಿಗಳಿಗೆ ಹೇಳಿ, ಕೊಲೇಜಿಗೆ ಮಾನ್ಯತೆ ದೊರಕಿಸುವದಕ್ಕಾಗಿ ಕಳೆದ ಅಕ್ಟೋಬರದಲ್ಲೇ ಅರ್ಜಿ ಮಾಡಿಸಿದರು; ಮತ್ತು ಕೊಲೇಜಿನಲ್ಲಿ ಇದೇ ವರ್ಷವೇ ಶಾಸ್ತ್ರೀಯ (ಸಾಯನ್ಸ) ಶಿಕ್ಷಣದ ಏರ್ಪಾಡು ಮಾಡಬೇಕೆಂದು ಹಟ ಹಿಡಿದು, ಆ ಬಗ್ಗೆ ಅವಶ್ಯವುಳ್ಳ ಸಕಲ ಸಾಹಿತ್ಯಗಳನ್ನೂ ಖರೀದಿಸಿಕೊಂಡರು. ಕಳೆದ ತಿಂಗಳಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಕಡೆಗೆ ರೂ. ೩೫೦೦೦ದ ಇಡುಗಂಟನ್ನು ಇಡಲಾಗಿದೆ. (ಉಳಿದ ರೂ. ೨೦೦೦೦ನ್ನು ಮುಂದಿನ ತಿಂಗಳಲ್ಲಿ ಕೊಡಬೇಕಾಗುವದು) ಈ ಬಗ್ಗೆ ಇನ್ನಿತರ ಸಾಹಿತ್ಯಗಳ ಖರೀದಿಯ ಬಗ್ಗೂ ಡಾ|| ಬಾಳಿಗಾರವರು ಸುಮಾರು ಮೂರ್ನಾಲ್ಕು ಲಕ್ಷ ರೂಪಾಯಿಗಳನ್ನು (ಹೊರತು ರೂ. ೧೦೦೦೦ ವಂತಿಗೆಯ ಹೊರತು) ಖರ್ಚು ಮಾಡಿರುತ್ತಾರೆ. ಅವರ ಈ ಸಾಲವನ್ನು ಸಮಿತಿಯು ತೀರಿಸಬೇಕಾಗಿದೆ. ಕೊಲೇಜಿಗೆ ಬೇಕಾದ ಕುರ್ಚಿ-ಟೇಬಲು, ಬೆಂಚು ಮುಂತಾದ ಸರಂಜಾಮು ಇನ್ನೂ ಪೂರ್ಣ ತಯಾರಾಗಿಲ್ಲ ಈ ಸರಂಜಾಮಿನ ವೆಚ್ಚ ರೂ. ೬೦೦೦೦ ವನ್ನು ಬರುವದೆಂದು ಅಂದಾಜು ಮಾಡಲಾಗಿದೆ. ಅದರಿಂದ ಸಮಿತಿಯು ಇದೀಗ ಸುಮಾರು ೧|| ಲಕ್ಷ ರೂ ಗಳ ಸಾಲದಲ್ಲಿದೆಯೆಂದು ಹೇಳಿದರೆ ತಪ್ಪಾಗುವಂತಿಲ್ಲ. ಅಷ್ಟು ಹಣವನ್ನಾದರೂ ಜಿಲ್ಲೆಯ ಧನವಂತರು ಕೂಡಲೆ ಪೂರೈಸಿ, ತಮ್ಮನ್ನು ನಿಶ್ಚಿಂತಗೊಳಿಸಬೇಕಾಗಿಯೂ ಇನ್ನೂ ಆಗಬೇಕಾದ ಕಾರ್ಯವನ್ನು ಕೈಕೊಂಡು ಕೊಲೇಜನ್ನು ಸರ್ವಾಂಗಸುಂದರ ಮಾಡಲು ತಮಗೆ ಹುರುಪು ಕೊಡಬೇಕಾಗಿಯೂ ಕೊಲೇಜ ಸಮಿತಿಯ ಪ್ರಾರ್ಥನೆಯಿದೆ.

ಕೊಲೇಜಿನ ಮೇಲೆ ಜಗನ್ನಿಯಾಮಕನ ಕೃಪಾಕಟಾಕ್ಷವಿದೆ.

ಜಿಲ್ಲೆಯ ಕೆಲವೊಂದು ಪ್ರದೇಶಗಳ ಜನರು ಕೆನರಾ ಕೊಲೇಜಿನ ಬಗ್ಗೆ ಅನಾಸ್ಥೆ ಯಾ ತಿರಸ್ಕಾರ ತಳೆಯುತ್ತಿದ್ದುದು ಇಲ್ಲವೆ ನಿಧಿ-ಸಂಗ್ರಹವು ಮಂದಗತಿಯಿಂದ ಸಾಗಿದ್ದುದು ನೋಡಿ ಜಿಲ್ಲೆಯವರಾಗಲಿ ಸ್ವತಃ ಕೊಲೇಜ ಸಮಿತಿಯವರಾಗಲಿ ನಿರಾಶೆಗೊಳ್ಳುವ ಕಾರಣವಿಲ್ಲ. ನಮ್ಮ ಈ ಕೊಲೇಜಿನ ಮೇಲೆ ಈಶ್ವರನ ಅನುಗ್ರಹ ಸಂಪೂರ್ಣವಾಗಿ ಉಂಟು. ಈ ಮಾತು ನಮಗೆ ಪದೇ ಪದೇ ದೃಗ್ಗೋಚರವಾಗಿದೆ. ಕೊಲೇಜಿನ ಸ್ಥಾಪನೆಯ ವಿಷಯ ದೃಷ್ಟಿಪಥದಲ್ಲಿ ಬರುವ ಮೊದಲೇ ಜಿಲ್ಹಾಧಿಪರು ಆ ಕೊಲೇಜಿಗಾಗಿ ೩೮ ಎಕರೆಯಷ್ಟು ವಿಸ್ತೀರ್ಣ ಮತ್ತು ಹೃದಯಂಗಮ ಪ್ರದೇಶವನ್ನು ಭೂದಾನ ಮಾಡಿಕೊಡಲು ಸಿದ್ಧರಾದುದು ಆ ದೈವೀ ಕೃಪೆಯ ಮೊದಲನೇ ನಿದರ್ಶನ. ನಮ್ಮ ಜಿಲ್ಲೆಯವರಲ್ಲದ ಡಾ|| ಬಾಳಿಗಾರವರಲ್ಲಿ ನಮ್ಮ ಕೊಲೇಜಿನ ಬಗ್ಗೆ ನಿಸ್ಸೀಮ ಪಿತೃವಾತ್ಸಲ್ಯವನ್ನು ಉತ್ಪಾದಿಸಿದ "ಅಂತರಾ ಕೋಽಪಿ ಹೇತುಃ" (ಅದೃಶ್ಯ ಹಸ್ತವು) ದೈವಸಂಕಲ್ಪವೇ ಆಗಿರುತ್ತದೆಂದು ನಮ್ಮ ಭಾವಿಕ ಭಾವನೆಯಾಗಿರುತ್ತದೆ. ಇದೇ ಕಳೆದ ಮಾರ್ಚ ತಿಂಗಳಲ್ಲಿ ನಡೆದ ಘಟನೆ — ಕೊಲೇಜಿನ ಅಧ್ಯಾಪಕ ವರ್ಗವನ್ನು ಸಮಿತಿಯವರು ನೇಮಿಸಿಕೊಂಡದ್ದು ಕಂಡುಬರುವ ದಿಲ್ಲಾದ್ದರಿಂದ ಕೊಲೇಜಿಗೆ ಸರ್ಕಾರ ಮನ್ನಣೆ ಕೊಡುವದು ಉಚಿತವಲ್ಲೆಂದು "ಎಕೆಡೆಮಿಕ್ ಕೌನ್ಸಿಲ"ದವರು (ಮುಂಬಯಿ ವಿಶ್ವವಿದ್ಯಾಲಯದ) ಸಿಂಡಿಕೇಟಿಗೆ ವರದಿ ಮಾಡಿದ್ದು, ಈ ವರದಿಯು ಸಿಂಡಿಕೇಟಿನ ಮುಂದೆ ವಿಚಾರಕ್ಕೆ ಬಂದ ಸಮಯದಲ್ಲೇ ಕಾಕತಾಲೀಯ ನ್ಯಾಯದಿಂದ ಪ್ರಾಧ್ಯಾಪಕ ಗೋರೆಯವರನ್ನು ಡಾ|| ಬಾಳಿಗಾ ಮತ್ತು ಕೊಲೇಜ ಸಮಿತಿಯ ಕಾರ್ಯದರ್ಶಿಗಳಾಗಿರುವ ಶ್ರೀ|| ಲಕ್ಷ್ಮಣ ಕಾಮತ ಇವರು ಕೊಲೇಜಿನ ಆಚಾರ್ಯ ಪದಕ್ಕೆ ನೇಮಿಸಿಕೊಂಡು ಆ ಮಾತನ್ನು ವಿಶ್ವವಿದ್ಯಾಲಯದ ರಜಿಸ್ಟ್ರಾರರಿಗೆ ತಿಳಿಸಿದ್ದು ಮತ್ತು ಶ್ರೀ|| ಗೋರೆಯವರ ನೇಮಣೂಕಿ ಮಾಡಿದ್ದನ್ನು ಕಂಡು ವಿಶ್ವವಿದ್ಯಾಲಯದ ಸಿಂಡಿಕೇಟಿನವರೂ ಉಪಕುಲಪತಿಗಳಾಗಿರುವ ಮಹಾಮಹೋಪಾಧ್ಯಾಯ ಕಾಣೇಯವರೂ ಎಕೆಡೆಮಿಕ್ ಕೌನ್ಸಿಲಿನ ವರದಿಯನ್ನು ಬದಿಗೊತ್ತಿ, ಕೆನರಾ ಕೊಲೇಜಿನ ವಿಷಯದ ಪುನರ್ವಿಚಾರ ಮಾಡಿ ಅನುಕೂಲ ವರದಿಯನ್ನು ಒಪ್ಪಿಸಲು ಸೂಚಿಸಿದ್ದು — ಒಂದು ದೈವತಂತ್ರವೇ ಎಂದು ನಾವು ಈ ಹಿಂದೆಯೇ ತಿಳಿಸಿದ್ದೇವೆ. ನಮ್ಮ ಕೊಲೇಜಿನ ಮೇಲೆ ದೇವರ ಅನುಗ್ರಹ ಉಂಟೆಂಬುದಕ್ಕೆ ಮೊನ್ನೆಯೇ ನಡೆದ ಇನ್ನೊಂದು ಕಥೆ ಸಮರ್ಪಕ ನಿದರ್ಶನವಾಗಿರುತ್ತದೆ. ಕೊಲೇಜಿನಲ್ಲಿ ಶಾಸ್ತ್ರೀಯ ಶಿಕ್ಷಣದ ಪ್ರಾಯೋಗಿಕ (practical) ಭಾಗವನ್ನು ಕಲಿಸಲು ಒಂದು ಗ್ಯಾಸ-ಉತ್ಪಾದಕ ಯಂತ್ರ ಬೇಕಾಗುತ್ತದೆ. ಅಂಥ ಯಂತ್ರಗಳು ಈಗ ದುರ್ಲಭವಾಗಿವೆ. ಯಂತ್ರದ ಬಗ್ಗೆ "ಆರ್ಡರ" ಕೊಟ್ಟ ೬-೮ ತಿಂಗಳಲ್ಲಿ ಅವು ಸಿಗುವದು ದುರಾಪಾಸ್ತ! ಆದರೆ ನಮ್ಮ ಕೊಲೇಜಿನವರು ಆರ್ಡರ ಕೊಟ್ಟ ಕೆಲವೇ ದಿನಗಳಲ್ಲಿ ಆ ಯಂತ್ರ ಸಿಕ್ಕಿತು! ಮತ್ತು ಮುಂಬಯಿ ಬಂದರಕ್ಕೂ ಬಂದುಮುಟ್ಟಿತು!

ಂದೇ ಕಾಲಕ್ಕೆ ಒರ್ವರ ಕೊಟ್ಟ ಬೇರೆ ಕೆಂತ್ರ 'ಕಾಲೇಜುಗಳಿಗೆ ಇದು ಇನ್ನೂ ಸಿಕ್ಕಿಲ್ಲವಂತೆ!' ಈ ಯಂತ್ರವನ್ನು ಮುಂಬಯಿ ಬಂದರಿಯಲ್ಲಿ ಹಾಕಿ ತರುವದು ಕಷ್ಟಸಾಧ್ಯವಿದ್ದುದರಿಂದ ಮುಂಬಯಿಯ ಕಾಲಾಳರು, ಮರ್ಗಳಿಗಳ ವಿಚಾರ ಮಾಡದೆ ಯಂತ್ರದ ವಿಷಯವನ್ನು ತಿಳಿಸದೆ (ಯಾಕೆಂದರೆ ಇಂತಹ ೮ ಬಂದರಿನಲ್ಲಿ ಬಿಟ್ಟ ಮಚವೆಗಳೊಳಗಿನ ಸರಕುಗಳ ವಿಮೆಯನ್ನು ಯಾವ ಕಂಪನಿಯೂ ಇಳಿಸುವದಿಲ್ಲ) ಮೇ ೩೦ ರ [illegible] ಸುಮಾರಿಗೆ ಅದನ್ನು ಈ ಕಡೆ ಬರುವ ಒಂದು ಮಚವೆಯ ಮೇಲೆ ಹತ್ತಿಸಿದರು! ಈ ಮಚವೆಯು ಮುಂಬಯಿ ಬಿಟ್ಟ ಮರುದಿನವೇ ಪಶ್ಚಿಮ ಕರಾವಳಿಯಲ್ಲಿ ಮಳೆಗಾಲಕ್ಕಾರಂಭವಾಗಿರುವ ಮತ್ತು ಸಮುದ್ರದಲ್ಲಿ "ತುಫಾನ" ಗಾಳಿ ಬೀಸಲಾರಂಭಿಸಿರುವ ವಾರ್ತೆ ಪ್ರಕಟವಾಯಿತು! ಇಂತಹ ಪರಿಸ್ಥಿತಿಯಲ್ಲಿ ಗ್ಯಾಸ ಯಂತ್ರ ಹೇರಿದ ಮಚವೆಯು ಸುರಕ್ಷಿತವಾಗಿ ಕುಮಟೆಯ ಬಂದರ ಕಾಣುವದೆಂದು ನಂಬಿಗೆ ಹಿಡಿಯುವದು ಹ್ಯಾಗೆ? ಆದರಿಂದ ಈ ಕಾಲದಲ್ಲಿ ಮಚವೆ ಹತ್ತಿದ ತಮ್ಮ ಯಂತ್ರ ನಷ್ಟವಾಯಿತೆಂದೇ ಕೊಲೇಜಿನ ಚಾಲಕರ ಭಾವನೆಯಾಯಿತು. ಯಂತ್ರದ ಆಶೆಯನ್ನೇ ಅವರು ಬಿಟ್ಟಂತಾಗಿತ್ತು! ಒಂದು ವೇಳೆ ದೇವರ ಅನುಗ್ರಹದಿಂದ ಮಚವೆಯು ಸುರಕ್ಷಿತ ಉಳಿದರೂ ಅದು ರತ್ನಾಗಿರಿ ಇಲ್ಲವೆ ವೆಂಗುರ್ಲೆಯ ಬದಿಗೆ ಎಲ್ಲಾದರೂ ಆಶ್ರಯ ಹೊಂದುವದೆಂದೂ, ಅಲ್ಲಿಂದ ಆ ಯಂತ್ರವನ್ನು ಕುಮಟೆಗೆ ತರಿಸಿಕೊಳ್ಳುವದು ದುಸ್ಸಾಧ್ಯವಾಗುವದೆಂದೂ ಅವರು ಹೇಳುತ್ತಿದ್ದರು. ಆದರೆ ಈಶ್ವರೀ ಚಮತ್ಕಾರ ಹೇಗುಂಟು ನೋಡಿರಿ! ಮುಂಬಯಿ ಬಿಟ್ಟ ಮೂರನೇ ದಿನ ಆ ಮಚವೆಯು ಸುರಕ್ಷಿತವಾಗಿ ತದಡಿ ಬಂದರವನ್ನು ತಲ್ಪಿತು! ಅದರ ಸಂಗಡ ಬಿಟ್ಟ ೨-೩ ಮಚವೆಗಳು ಮಾತ್ರ ದುರ್ಗತಿಗೀಡಾದವು! ಕೆನರಾ ಕೊಲೇಜಿನ ಗ್ಯಾಸ-ಯಂತ್ರವೇ ಆ ಮಚವೆಯನ್ನು ಕಾಪಾಡಿತೆಂದು ಭಾವಿಕರನೇಕರು ಹೇಳುತ್ತಾರೆ! ಈ ಪರಿ ದಯಾಘನ ಭಗವಂತನ ಅನುಗ್ರಹ ನಮ್ಮ ಕೊಲೇಜಿನ ಮೇಲೆ ಪೂರ್ಣವಾಗಿ ಇರುತ್ತಿರುವದರಿಂದ ಅದರ ಭವಿತವ್ಯ ಉಜ್ವಲವಾಗುವದೆಂದು ನಾವು ವಿಶ್ವಾಸ ತಳೆದಿದ್ದೇವೆ.

ಕೊಲೇಜ ನಿಧಿಗೆ ಸಿಕ್ಕ ಕೆಲವು ಅಂಕಿಗಳು

ಶೇಠ ನವೀನಚಂದ ಮುಫತಲಾಲ	ರೂ	೧೫೦೦೦
ಡಾ॥ ಅಣ್ಣಾಪ್ಪಾ ವೆಂ. ಬಾಳಿಗಾ	"	೧೨೦೦೦
ಶ್ರೀ॥ ನಾರಾಯಣ ತಿಮ್ಮಣ್ಣ ಹೆಗಡೆ	"	೧೦೦೦೦
" ದಾಸಾ ವಿಠೋಬ ಶಾನಭಾಗ, ದಲಾಲ		೬೫೦೦

(ಇವರು ೧೦೦೦೦ ರೂ ಕೊಡುವ ವಚನ ಕೊಟ್ಟಿರುತ್ತಿದ್ದು ಅದರ ಭರ್ತಿಗೆ ೩॥ ಸಾವಿರ ಬೇಗನೆ ಒಪ್ಪಿಸುತ್ತೇವೆಂಗಿ ತಿಳಿಸಿರುವಂತೆ)

ಕುಮಟಾ ನಗರ ಸಭೆ	"	೨೦೦೦
ಶ್ರೀ॥ ರಾಮಕೃಷ್ಣ ಎನ್ ಕಲಬಾಗ, ಮುಂಬಯಿ	"	೨೦೦೦
" ಮಹಾಬಲೇಶ್ವರ ಭಟ್ಟ ಗೋಕ.	"	೨೦೦೦
" ಮಂಗೇಶ ನಾರಾಯಣ ಕುಲಕರ್ಣಿ, ಮುಂಬಯಿ	"	೨೦೦೦

(ಔದ್ಯೋಗಿಕ ಶಿಕ್ಷಣದ ವಿಭಾಗದ ಮಾಡುವದಕ್ಕೆಂದು ರೂ. ೫೦೦೦೦ ಬೇರೆ ಕೊಡಲು ಇವರು ಒಪ್ಪಿದ್ದಾರೆ)

ಈ ಕೊಲೇಜು ಈಗ ಆದಾಯ ತೆರಿಗೆ ಕಾ. ನಿ ನ ಕಲಮು ೧೫ ಬದಲ್ಯಯ ಸರಕಾರವಾನ್ಯ ಧರ್ಮ ಸಂಸ್ಥೆಗಳ ಯಾದಿಯಲ್ಲಿ ಸೇರಿದೆ ಆದರಿಂದ ಈ ಕೊಲೇಜಿಗೆ ಕೊಟ್ಟ ಧರ್ಮಾದಾಯದ ಹಣದ ಮೇಲೆ ಆದಾಯ-ತೆರಿಗೆ ಇಲಾಖೆಯವರು ಆದಾಯ ತೆರಿಗೆಯನ್ನಾಗಲಿ, ಮೇಲ್ತೆರಿಗೆ (super tax) ಆಕರಿಸುವಂತಿಲ್ಲ.

ಕೊಲೇಜ ಸೊಸೈಟಿಯ ಸದ್ಯದ ಕೌನ್ಸಿಲು

ಕೆನರಾ ಕೊಲೇಜ ಸೊಸಾಯಟಿಯ ಸದ್ಯದ ಕೌನ್ಸಿಲದಲ್ಲಿ ಈ ಕೆಳಗಿನ ಗೃಹಸ್ಥರಿದ್ದಾರೆ —

ಅಧ್ಯಕ್ಷ — ಡಾ॥ ಎ ವ್ಹಿ ಬಾಳಿಗಾ, ಮುಂಬಯಿ ಉಪಾಧ್ಯಕ್ಷ ಶ್ರೀ ಮಹಾಬಲೇಶ್ವರಭಟ್ಟ ಗೋಪಿ ಸದಸ್ಯರು — ೧ ಸೌ॥ ಗಿರಿಜಾಬಾಯಿ ಮಾಪಾರಿಕರ ೨ ಶ್ರೀ॥ ಗಣೇಶ ಭಟ್ಟ ಚಿತ್ರಿಗಿ ೩ ಜನಾಬ ಒಸ್ತಾ ಅಲ್ಲಿನ ಕೇಬ ೪ ಶ್ರೀ ವೆಂಕಟೇಶ ದೇಶಪಾಂಡೆ, ಹಳಿಯಾಳ ೫ ಪ್ರ। ಪ್ಹಿ ವ್ಹಿ ಕಾಮತ ಟಿಳಕ ಕೊಲೇಜ, ಪುಣೆ ೬ ಡಾ। ಬಿ ಪಿ ದಿವಗಿ ಮುಂಬಯಿ ೭ ಡಾ॥ ಆರ್ ಎಸ್ ನಾಡಕರ್ಣಿ ಮುಂಬಯಿ ೮ ಶ್ರೀ॥ ಎಚ್ ಗಣಪತರಾವ, ಮುಂಬಯಿ ೯ ಶ್ರೀ॥ ಎಮ್ ವ್ಹಿ ನಾಯಕ (ಬಿಲ್ಡಿಂಗ ಕಂಟ್ರಾಕ್ಟರ) ಮುಂಬಯಿ ೧೦ ಶ್ರೀ ಗೋಪಾಲ ಎಮ್ ಪೈ (ಬಿಲ್ಡಿಂಗ ಕಂಟ್ರಾಕ್ಟರ), ಮುಂಬಯಿ ೧೧ ಶ್ರೀ॥ ಬಿ. ಎಸ್ ಕೆಂಡದಕಣಿ, ಮುಂಬಯಿ ೧೨ ಶ್ರೀ॥ ಗಣೇಶ ಪಿ ಮಡೆಶ್ವರ, ಹಾಯಕೋರ್ಟ ವಕೀಲ, ಮುಂಬಯಿ.

ಸೊಸೈಟಿಯ ಕಾರ್ಯಕಾರಿ ಮಂಡಳ

ಸೊಸೈಟಿಯ ಸದ್ಯದ ಕಾರ್ಯಕಾರಿ ಮಂಡಳದಲ್ಲಿ ಈ ಕೆಳಗಿನವರಿದ್ದಾರೆ —

ಅಧ್ಯಕ್ಷರು — ಶ್ರೀ॥ ನಾರಾಯಣ ತಿ ಹೆಗಡೆ

ಕಾರ್ಯದರ್ಶಿ - ಶ್ರೀ॥ ಲಕ್ಷ್ಮಣ ಸು ಕಾಮತ

ಕೋಶಪಾಲಕರು -- ಶ್ರೀ॥ ಭಗವಾನದಾಸ ಭಾಟಿಯಾ

ಸದಸ್ಯರು — ಶ್ರೀ॥ ಅಣ್ಣಪ್ಪ ರಾಮಚಂದ್ರ ಪೈ, ಶ್ರೀ॥ ವಿಶ್ವೇಶ್ವರ ತಿ ಹೆಗಡೆ (ವಕೀಲ), ವ್ಹಿ. ಆರ್. ಕಾಮತ (ವಕೀಲ) ಹೊನ್ನಾವರ, ಸದಾಶಿವ ಮಾಸೂರಕರ, ಆಲ್ಫ್ರೆಡ್ ಫರ್ನಾಂಡೀಸ ಮತ್ತು ಡಾ॥ ಆರ್. ಆರ್ ನಾಡಕರ್ಣಿ.

ಕೊಲೇಜಿನ ಅಧ್ಯಾಪಕ-ವರ್ಗ

ಆಚಾರ್ಯ (ಪ್ರಿನ್ಸಿಪಾಲ)— ಶ್ರೀ॥ ನಾರಾಯಣ ಅನಂತ ಗೋರೆ, ಎಮ್ ಏ.

[ಇವರು ರತ್ನಾಗಿರಿ ಜಿಲ್ಹೆಯ ದೇವಗಡದವರು. ಪ್ರಾಯ ೪೧ ವರ್ಷ ಇಂಟರ ಪರೀಕ್ಷೆಯಲ್ಲಿ ೧ನೇ ಜಗನ್ನಾಥ ಶಂಕರ ಶೇಟ ಸಂಸ್ಕೃತ ಪಾರಿತೋಷಕ ಪಡೆದಿದ್ದು ಬಿ ಏ. ಪರೀಕ್ಷೆಯಲ್ಲಿ ೧ನೇ ತರಗತಿಯಲ್ಲಿ ಉತ್ತೀರ್ಣರಾದವರು ೧೯೩೭ರಲ್ಲಿ ಎಮ್ ಏ ಪರೀಕ್ಷೆಯನ್ನು ೨ನೇ ತರಗತಿಯನ್ನು ಉತ್ತೀರ್ಣರಾದರು ೧೯೩೯ರಿಂದ ೧೯೪೮ರ ವರೆಗೆ ಪುಣೆಯ ಸರ ಪರಶುರಾಮಭಾವು ಕೊಲೇಜಿನಲ್ಲಿ ಸಂಸ್ಕೃತ ಮತ್ತು ಅರ್ಧಮಾಗಧಿಯ ಪ್ರಾಧ್ಯಾಪಕರಾಗಿದ್ದರು ಇತ್ತ ೨ ವರ್ಷ ಅಂಧೇರಿ ಕೊಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದರು. ಇವರು ಸಂಶೋಧನ ಕಾರ್ಯ ಬಹಳ ಮಾಡಿದ್ದಾರೆ ಹಲವಾರು ಗ್ರಂಥಗಳನ್ನೂ ಲೇಖನಗಳನ್ನೂ ಬರೆದಿರುತ್ತಾರೆ ೧೯೪೧ರಲ್ಲಿ "ಪೂನಾ ಓರಿಯಂಟಲಿಸ್ಟ" ಎಂಬ ನಿಯತಕಾಲಿಕದ ಪುನರ್ಘಟನೆ ಮಾಡಿ, ೭ ವರ್ಷ ಅದನ್ನು ಸಂಪಾದಿಸಿದ್ದರು ೧೯೪೨ರಿಂದ "ಸ್ವಾಧ್ಯಾಯ" ಮಾಸಿಕದ ಪಂಡಿತ ಸಾತವಳೇಕರರ ನೇತೃತ್ವದಲ್ಲಿ, "ಜರ್ನಲ್ ಆಫ್ ಓರಿಯಂಟಲ್ ಸ್ಟಡೀಸ" ಎಂಬ ನಿಯತಕಾಲಿಕವನ್ನು ನಡಿಸುತ್ತಿದ್ದಾರೆ ಶ್ರೀ॥ ಗೋರೆಯವರ ಸಂಶೋಧನಾತ್ಮಕ ಲೇಖನಗಳಿಗೆ ಪ್ರಖ್ಯಾತ ಸಂಸ್ಕೃತ ಪಂಡಿತರಾಗಿರುವ ಮಹಾಮಹೋಪಾಧ್ಯಾಯ ಪಾಂಡುರಂಗ ಕಾಣೆಯವರ ಹಾರ್ದಿಕ ಮೆಚ್ಚುಗೆಯನ್ನು ಪಡೆದಿದೆ ಸುಪ್ರಸಿದ್ಧ ಫ್ರೆಂಚ ಪ್ರಾಚ್ಯವಿದ್ಯಾಕೋವಿದರಾಗಿರುವ ಪ್ರಾ॥ ಲುಯಿ ರೇನೋರವರು ಗೋರೆಯವರಿಗೆ ತಮ್ಮದೊಂದು ಪತ್ರದಲ್ಲಿ ಬರೆದಿದ್ದಾರೆ - "You are an excellent teacher You seem to be active and energetic and endowed with a clear mind". ಶ್ರೀ॥ ಗೋರೆಯವರು ಸಂಸ್ಕೃತವನ್ನು ಕಲಿಸುವರು]

Notice to Motor Owners in the Karnatak Region.

Owners of motor vehicles residing in the Karnatak Region are informed that the tax for one or more quarters in the next financial year 1949 50 has to be paid so as to reach this office on or before 15 7 49 in respect of motor vehicles bearing regional registration marks, and on or before 30—6—49 in respect of vehicles registered elsewhere. Tax can be paid in (1) Cash (2) **Crossed cheques drawn on the Imperial Bank of India, Belgaum only** (3) Chalans or by (4) Money Orders at the Regional Transport Office, Belgaum between 11 A. M and 3 P M on week days and between 9-30 A M to 11 A M on Saturdays

2 Payment of tax should be accompanied by (1) Registration Certificates of the vehicle (2) Certificate of Insurance as required by Chapter VIII of the India Motor Vehicles Act, 1939 in respect of all types of vehicles either registered in this Province or elsewhere covering third party risks and (3) a declaration in form 'A1' or 'F1' as the case may be No tax token or disc will be issued nor the registration certificate endorsed unless the above requirements are duly complied with.

3 Non-use intimation of vehicles which are kept idle should be submitted before the date on which the tax tokens or discs already issued for such vehicle expire, as required by Rule 26 of the B M V Tax Rules 1940, failing which owners will be liable to pay tax and penalty due until the date they notify the non-use of their vehicles to this Office

No 3608 /3-T/KR of 49
Regional Transport Office,
Belgaum, 13 6 49

D K SUKHTANKAR, Capt,
Regional Transport Officer,
K R, Belgaum

[illegible] (ವ್ಯಾಕರಣ-ಪ್ರಿನ್ಸಿಪಾಲ)— ಶ್ರೀ|| ವಿಶ್ವಂಭರ ಸೀಲಕಂಠ ಶಟಗೇರಿ, ಎಮ್. ಎಸ್. ಸಿ.

[ಇವರು ನಮ್ಮ ಅಂಕೋಲೆಯವರು ಪ್ರಾಯ ವರ್ಷ ೪೧ ಕಳೆದ ೧೦ ವರ್ಷಗಳಿಂದ ಮುಂಬಯಿಯ ಮಿಲಿಟರಿ ಮತ್ತು ಸಿದ್ಧಾರ್ಥ ಕೊಲೇಜುಗಳಲ್ಲಿ ರಸಾಯನ (ಕೆಮಿಸ್ಟ್ರೀ) ಶಾಸ್ತ್ರದ ಅಧ್ಯಾಪಕರಾಗಿದ್ದರು ಸಿದ್ಧಾರ್ಥ ಕೊಲೇಜಿನ ರಾಸಾಯನಿಕ ಪ್ರಯೋಗ ಶಾಲೆಯ ವ್ಯವಸ್ಥೆ ಮಾಡಿಕೊಟ್ಟವರು ಇವರೇ ಎಂದು ಕೇಳುತ್ತೇವೆ ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಈ ಮಹಾಶಯರು ಸತ್ಯಾಗ್ರಹ-ಸಮರದಲ್ಲಿ ಸೇರಿ, ೧ ವರ್ಷದ ತನಕ ಸ್ವರಾಜ್ಯಾಶ್ರಮವಾಸದ ತಪಸ್ಸನ್ನು ಆಚರಿಸಿದ್ದಾರೆ ಇವರು ರಸಾಯನ ಶಾಸ್ತ್ರವನ್ನು ಕಲಿಸುವರು]

ಇಂಗ್ಲಿಶ ಪ್ರಾಧ್ಯಾಪಕರು:— ಶ್ರೀ|| ಜಿ. ಎ. ಕುಲಕರ್ಣಿ, ಎಮ್. ಎ.

[ಇವರು ಬೆಳಗಾಂವಿಯವರು ಇಂಗ್ಲಿಶ ಮತ್ತು ಅರ್ಧಮಾಗಧಿ ಭಾಷೆಗಳನ್ನು ತಕ್ಕೊಂಡು ಎಮ್. ಎ. ಪರೀಕ್ಷೆಯಲ್ಲಿ, ೨ನೇ ತರಗತಿಯಲ್ಲಿ ತೇರ್ಗಡೆ ಹೊಂದಿದ್ದಾರೆ ೧೯೪೭ರಿಂದ ಬಸವೇಶ್ವರ ಕೊಲೇಜಿನಲ್ಲಿ ಇಂಗ್ಲಿಷ ಕಲಿಸುತ್ತಿದ್ದರು ಹೋದ ವರ್ಷ ಮೆಟ್ರಿಕ್ ಪರೀಕ್ಷೆಯ ಇಂಗ್ಲಿಷ ಭಾಷಾವಿಷಯದ ಪರೀಕ್ಷಕರಾಗಿದ್ದರು]

ಪ್ರಾಣಿಶಾಸ್ತ್ರ-ಶರೀರ ರಚನಾಶಾಸ್ತ್ರಗಳ ಪ್ರಾಧ್ಯಾಪಕರು:— ಶ್ರೀ|| ಡಿ. ಡಿ. ನವಲೆ, ಎಮ್. ಎಸ್. ಸಿ

[ಪ್ರಾಯ ವರ್ಷ ೩೪ ೧೯೪೧ರಿಂದ ೧೯೪೫ರ ವರೆಗೆ ಪುಣೆಯ ಪೇಸಾಯದ ಕೊಲೇಜಿನಲ್ಲೂ, ಸರ್ ಪರಶುರಾಮಭಾವು ಕೊಲೇಜಿನಲ್ಲೂ ಪ್ರಾಣಿ-ಶಾಸ್ತ್ರದ ಪ್ರಾಯೋಗಿಕ ಶಿಕ್ಷಕರಾಗಿದ್ದರು ೧೯೪೫ರಿಂದ ಮೊನ್ನೆ ತನಕ ಬೆಳಗಾಂವದೊಳಗಿನ ಮರಾಠಾ ಮಂಡಳ ಕೊಲೇಜಿನಲ್ಲಿ ಶರೀರರಚನಾ-ಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಇತ್ತ ೩ ವರ್ಷಗಳಿಂದ ಇಂಟರ ಸಾಯನ್ಸ ಪರೀಕ್ಷೆಯ ಪರೀಕ್ಷಕರೂ ಆಗಿದ್ದರು]

ತರ್ಕಶಾಸ್ತ್ರ ತತ್ವಜ್ಞಾನಗಳ ಪ್ರಾಧ್ಯಾಪಕರು ಶ್ರೀ|| ಎಸ್. ಎಚ್. ಶೇಕಶೇಕರ, ಎಮ್. ಎ

[೧೯೪೫ರಲ್ಲಿ ಎಮ್. ಎ. ಪರೀಕ್ಷೆಯೊಳಗೆ ೧ನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದಾರೆ. ೧೯೪೬ ೪೭ರಲ್ಲಿ ಮಧ್ಯಪ್ರಾಂತದ ಚಾಂದಾದಲ್ಲಿರುವ ರಾಜಕೀಯ ಆರ್ಟ್ಸ್ ಕೊಲೇಜಿನಲ್ಲಿ ತರ್ಕಶಾಸ್ತ್ರ ಮತ್ತು ತತ್ವಜ್ಞಾನಗಳ ಪ್ರಾಧ್ಯಾಪಕರಾಗಿದ್ದರು. ಕಳೆದ ವರ್ಷ ಸುರತದೊಳಗಿನ ಎಮ್. ಟಿ. ಬಿ. ಕೊಲೇಜಿನಲ್ಲಿ ತರ್ಕಶಾಸ್ತ್ರವನ್ನು ತತ್ವಜ್ಞಾನವನ್ನು ಕಲಿಸುತ್ತಿದ್ದರು]

ಇತಿಹಾಸ-ಅರ್ಥಶಾಸ್ತ್ರಗಳ ಪ್ರಾಧ್ಯಾಪಕರು ಶ್ರೀ|| ಎಲ್. ಟಿ. ಶಪಾರ್, ಎಮ್. ಎ

[ಇವರು ಮುರಾಂಬಿಯವರಿದ್ದಾರೆ ಇತಿಹಾಸ ಮತ್ತು ಅರ್ಥಶಾಸ್ತ್ರ ಈ ವಿಷಯಗಳ ಅಭ್ಯಾಸ ಮಾಡಿ ಎಮ್. ಎ. ಪರೀಕ್ಷೆಯಲ್ಲಿ ೨ನೇ ತರಗತಿಯಲ್ಲಿ ತೇರ್ಗಡೆಯಾಗಿರುತ್ತಾರೆ. ಇತ್ತಲಾಗಿ ಸುರತ ಕೊಲೇಜಿನಲ್ಲಿ ಅಧ್ಯಾಪಕರಾಗಿದ್ದರು]

ಕನ್ನಡ ಪ್ರಾಧ್ಯಾಪಕರು — ಶ್ರೀ|| ಕೇ. ಜಿ ಶಾಸ್ತ್ರಿ, ಎಮ್. ಎ

[ಇವರು ಗೋಕರ್ಣದವರು ಕನ್ನಡ ಮತ್ತು ಸಂಸ್ಕೃತ ತಕ್ಕೊಂಡು, ೨ನೇ ತರಗತಿಯ ಎಮ್. ಎ. ಆಗಿದ್ದಾರೆ ಕಳೆದ ೪ ವರ್ಷಗಳಿಂದ ಹಾಯಸ್ಕೂಲುಗಳಲ್ಲಿ ಕನ್ನಡ ಮತ್ತು ಸಂಸ್ಕೃತ ಕಲಿಸಿ ಅಧ್ಯಾಪನದ ಅನುಭವ ಪಡೆದವರಿದ್ದಾರೆ]

ಗಣಿತಶಾಸ್ತ್ರದ ಪ್ರಾಧ್ಯಾಪಕರು — ಶ್ರೀ|| ಲಕ್ಷ್ಮಣ ಸುಬ್ರಾಯ ಕಾಮತ, ಎಮ್. ಎ

[ನೇತನ-ಪ್ರಾಪ್ತ ಗಣಿತಶಾಸ್ತ್ರಜ್ಞರು ಇವರು [illegible] ಶಿಕ್ಷಣದಿಂದ ಕೊಲೇಜ ಸಮಿತಿಯು ಕಾರ್ಯದರ್ಶಿಗಳಾಗಿರುವ ಶ್ರೀ ಕಾಮತರು ಈ ಶಾಸ್ತ್ರವನ್ನು ನೇತನಮಿಲ್ಲದೆ ಕಲಿಸುವವರಾಗಿದ್ದಾರೆ. ಕಾಮತರು ಗಣಿತದ ಪ್ರಾಧ್ಯಾಪಕರಾಗುವ ಯೋಗ್ಯತೆಯುಳ್ಳವರಿದ್ದಾರೆ. ೧೫ ವರ್ಷಗಳ ಹಿಂದೆ, ಕಲ ಕಾಲ ಗಿಬ್ಬ ಹಾಯಸ್ಕೂಲಿನಲ್ಲೂ ಕೆಲ ಕಾಲ ಪುಣೆಯ ಒಂದು ಕೊಲೇಜಿನಲ್ಲೂ ಶಿಕ್ಷಣದ ಕಾರ್ಯ ಮಾಡಿದವರಿದ್ದಾರೆ ಅವರು ಯಶಸ್ವಿ ಅಧ್ಯಾಪಕರಾದಾರೆಂಬ ಖಾತ್ರಿಯುಂಟು]

— ಮುಂಬಯಿಯ ಪ್ರಮುಖ ಉದ್ಯೋಗಸ್ಥರೂ ಸರಕಾರ ಸ್ವತಂತ್ರರೂ ಆಗಿರುವ ಶ್ರೀ ಎ. ಎಲ್. ಚಂದಾವರಕರ, ಬಿ. ಎಸ್. ಸಿ. ಇವರು ಶ್ರೀ ಮಹಾಬಲ [illegible] ಭಟ್ಟ ಇವರ ಸ್ಮರಣದಲ್ಲಿ ಬೊಂಬೇ ಕೋ ಒಪರೇಟಿವ್ ಇನ್ಶೂರನ್ಸ ಸೊಸಾಯಿಟಿ, ಲಿ., ಮುಂಬಯಿ ಈ ಸಂಸ್ಥೆಯ ಅಧ್ಯಕ್ಷ ಮತ್ತು ಚಿರಮನ್ನರಾಗಿ ಆ ನಲ್ಲಿದ್ದಾರೆ.

[illegible] ಪ್ರಕೃತಿಗಳ ಆಸೀಲಿನ ತೀರ್ಪು ಬರುವ ಮುಕ್ತಾಯ ಕೊಡಲ್ಪಡುವದು.

ಪತ್ರಿಕಾ-ಪ್ರಕಟನೆ

ಬಿಳೇ (bleached ಗಂಜ ಆದನ್ನು) ೫ ಗಜ ಉದ್ದ (ಬಣ್ಣ ಹಾಕಿದ ಅಥವಾ ಅಚ್ಚು ಹಾಕಿದ) ಸೀರೆಗಳನ್ನು — ಅವು ಬಿನಗು, ಮಧ್ಯಮ ಯಾ ಉರುಟು ಇರಲಿ — ಮುಂಬಯಿ ಪ್ರಾಂತದ ಎಲ್ಲ ಪ್ರದೇಶಗಳಲ್ಲಿ ಸೀರಾ ಬಟ್ಟೆಯ ಪ್ರಮಾಣದ ಆಕಾರವಿಲ್ಲದ ಮಾರಲೇ ಕೆಂದು ಸರಕಾರವು ನಿರ್ಧರಿಸಿದೆ. ಈ ಸೀರೆಗಳು [illegible] ಯೊಂದರ ಪ್ರತಿಯೊಬ್ಬನಿಗೆ ೨ ಇದ್ದವೆ, ಒಂದು ಕುಟುಂಬಕ್ಕೆ ೪ ಮಾತ್ರ ಸಿಗುವವು. ಅವು ಸರಕಾರಿ ಜನತಾ ಅಂಗಡಿಗಳಲ್ಲಿ ಮಾತ್ರ ಮಾರಾಟವಾಗುವವು.

ನೋಟೀಸು.

ನಾನು ಅಂದ್ರೇಆ ಸೋಂ ಸಾಲ್ವಾದೋರ ದಿಯಾಸ ಮುಕಾಂ ಬೋಳೆಸಿದ್ ತಾಲೂಕ ಹೊನ್ನಾವರ ಇವಳು ಈ ಮೂಲಕ ಜಾಹೀರಪಡಿಸುವದೇನೆಂದರೆ .—

ನನ್ನ ಗಂಡ ಸಾಲ್ವಾದೋರ ಕೈತಾನ ದಿಯಾಸ ಇವನು ಕೆಲವು ವರ್ಷಗಳ ಹಿಂದೆ, ನನ್ನ ಮೈದುನ ಇಂಕಾಸಿಯ ಕೈತಾನ ದಿಯಾಸ ಇವನು ಕಳೆದ ಅವಧಿಯಲ್ಲಿ ಮರಣಪಟ್ಟಿರುತ್ತಾರೆ. ನನ್ನ ಮೈದುನನು ಮದುವೆಯಾಗಿದ್ದಿಲ್ಲ ನನಗೆ ಮೂವರು ಆನ ಗಂಡು ಮಕ್ಕಳು ಮ ಒಂದು ಹೆಣ್ಣು ಮಗುವಿಯು ಇರುತ್ತಾರೆ. ಅವರೆಲ್ಲ ಅಪ್ರಾಪ್ತರಿದ್ದು ನಾನು ಅವರ ರಕ್ಷಕಳಿದ್ದೇನೆ ಅಪ್ರಾಯಸ್ಥರ ಕುಟುಂಬಕ್ಕೆ ಹೊನ್ನಾವರ ತಾಲೂಕಿನ ಬೋಳೆಸಿದ ಗ್ರಾಮದ ಸ ನಂ ೧೦೬ನೇದರಲ್ಲಿ ೨ (ಎರಡು) ಪಡಗಿ-ಕುಳಗಿ ಹಕ್ಕಿನ ಜಂಗಿಪ ಜಾಗಾಯಿತಗಳಿರುತ್ತವೆ. ಮೇಲ್ಕಂಡ ನನ್ನ ಮೈದುನನ ಮರಣದ ನಂತರ ನನ್ನ ಗಂಡನ ಅವಿವಾಹಿತ ಸಹೋದರಿ ಮೇರಿ ಸ್ಯಾಸ್ಟಲಿನ ದಿಯಾಸ ಮು ಬೋಳೆಸಿದ ಈಕೆ ಮಾಕಿನ್ ಬೋಳೆಸಿದ ಇವಳು ಮೇಲ್ಕಂಡ ಸ್ಥಳಗಳಲ್ಲಿ ಏನೂ ಹಕ್ಕಿಲ್ಲದಿರುವ ಗಮ್ಮ ಸಿರಾಧಾರ ಹಕ್ಕು ಹೇಳುತ್ತಿರುತ್ತಾಳೆ ಅವಳು ಸದರಿ ಸ್ಥಳಗಳನ್ನು ಸಂಬಂಧಿಸ ವಾಸುವ ಸಂಭವವಿದೆ ಕಾರಣ ಆವಳಿಂದ ಮೇಲ್ಕಂಡ ಆಸ್ತಿಗಳನ್ನು ಯಾರೂ ಕ್ರಯ, ಅಡವು ವಗೈರೆ ಬಾಧ್ಯತೆಗಳಿಂದ ಪಡೆಯಬಾರದು. ಅಂಥ ಸಂಬಂಧೀ ವಹಿವಾಟುಗಳ ಅಪ್ರಾಯಸ್ಥರನ್ನು ಬಾಧಿಸತಕ್ಕವು ಇರುವದಿಲ್ಲ, ಯಾವಾದರೂ ಆವಳಿಂದ ಸದರಿ ಪಡಗಿ-ಕುಳಗಿ ಹಕ್ಕನ್ನು ಸಂಬಂಧಿಸಿ ವಹಿವಾಟು ಮಾಡಿಕೊಂಡಲ್ಲಿ ಅದರಿಂದ ಆಗುವ [illegible] ನಷ್ಟಕ್ಕೆ ಜವಾಬದಾರರೆಂಬ ಸಂಗತಿ ಜಾಹೀರ ಮಾಡುತ್ತೇನೆ.

ಹೊನ್ನಾವರ, ತಾ. ೧೦-೬-೧೯೪೯ನೇ ಇಸವಿ

● ಈ ಎಡಗೈ ಹೆಬ್ಬೆಟ್ಟಿನ ಗುರುತು ಅಂದ್ರೇಆ ಸೋಂ ಸಾಲ್ವಾದೋರ ದಿಯಾಸ ಇವಳದಿರುತ್ತದೆ

THE REGIONAL TRANSPORT AUTHORITY.
KARNATAK REGION, BELGAUM

NOTICE.

In exercise of the powers conferred by Section 68 of the Motor Vehicles Act, 1939, all goods trucks operators operating their Vehicles in the Karnatak Region, are hereby directed to stop their vehicles at the Cotton Check Stations, established by the Agricultural Department at various places on the roadside, under Cotton Transport Act 1923, and get their vehicles inspected by the Naka Karkuns at the Cotton Check Stations without fail.

The above directions will come into effect immediately, and failing to comply with these directions, the goods trucks operators shall render their goods trucks permits liable for departmental action.

No. 3673 /4-B/KR of 1949
Regional Transport Office, K. R.
Belgaum, 14–6–1949.

D K SUKHTANKAR, Capt
Secretary,
Regional Transport Authority
Karnatak Region, Belgaum

THE BANK OF RURAL INDIA LTD.

(Incorporated in British India, Liability of Members limited.)

HEAD OFFICE — "Satyabhama Bhavan", **KARWAR**, N. K

Offices at — KARWAR, KUMTA SIRSI, HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital	**Rs 10,00,000,**
Subscribed Capital	**Rs 5,00 000,**
Paid-up Capital & Reserves	**Rs 5,08,502-8-0**

Rates of Interest on Deposits.

Current a/c @ 1% p a. ***Savings Bank a/c @ 2½%***

Fixed Deposits for 3 months @ 3% per annum.
" " for 6 months @ 3½% "
" " for 12 months or more @ 4% "

All kinds of modern Banking business transacted

Karwar, 14-2-1948

P. X GRACIOUS,
MANAGING DIRECTOR

ಸ್ಥಾನಿಕ ವೃತ್ತಾಂತ

ಕುಮಟಾ— ಆಗಾಗ ಮಳೆಯಾಗುತ್ತಲಿದೆ ಆದ ರೂ ಹೊಳೆಗೆ ನೀರು ತುಂಬಿಲ್ಲ. ಹೋದ ಇದೇ ವಾರದಲಿ ಬರೇ ೪|| ಇಂಚು ಮಳೆಯಾಗಿದೆ ... [illegible]

[illegible]

ಹೊನ್ನಾವರ— ಇಲ್ಲಿಯ ನ್ಯೂ ಇಂಗ್ಲಿಶ ಶಾಲೆ ಯಿಂದ ಈ ವರ್ಷ ೨೨ ಶಾಲೆಯ ವಿದ್ಯಾರ್ಥಿಗಳೂ ... [illegible]

[illegible]

ಜಾಹೀರ ವಿನಂತಿ.

[illegible]

ಕುಮಟಾ, ತಾ ೧೩—೬—೪೯

Kagal Manohar alias Narayan Ramachandra Pai.

ವ್ಯಾಪಾರಸ್ಥರಿಗೆ ವಿನಂತಿ.

ಮುಂಬಯಿಯಿಂದ ನಿಮಗೆ ಬೇಕಾಗುವ ಮಾಲನ್ನು ಯೋಗ್ಯ ರೀತಿಯಿಂದ ಮೋಟಾರದ್ವಾರಾ ವಿಳಂಬವಿಲ್ಲದೆ ಬೆಳಗಾಂವ, ಹುಬ್ಬಳ್ಳಿ, ಶಿರಸಿ, ಕುಮಟಾ ಮೊದಲಾದ ಸ್ಥಳಗಳಿಗೆ ಕಳಿಸಿಕೊಡುವ ವ್ಯವಸ್ಥೆ ಇಟ್ಟಿದ್ದೇವೆ. ಬೇಕಾದವರು ಕೆಳಗಿನ ವಿಳಾಸದ ಮೇಲೆ ಪತ್ರ ವ್ಯವಹಾರ ನಡಿಸಬಹುದು.

G. D MALGIKAR,
Booking & Forwarding Agent,
Post Box No 4092,
BOMBAY, No. 7

ಡಿಸ್ಟ್ರಿಕ್ಟ ಬೋರ್ಡ ಆಫ್ ಸುಪರವಾಯಜಿಂಗ ಯೂನಿಯನ್ಸ ಲಿ. ಎಜ್ಯುಕೇಶನ್ ಕಮಿಟಿ, ಉ. ಕನ್ನಡ.

ಸರಕ್ಯೂಲರ ನಂ. ೨

[illegible]

R. V. PANDIT,
ಚೇರಮನ್, ಎಜ್ಯುಕೇಶನ್ ಕಮಿಟಿ, ಉ. ಕನ್ನಡ

ಹುಬ್ಬಳ್ಳಿ ಸಮೀಪಿಸಿದಾಗ ತಲೆಯೊಳಗೇಕೆ ಇಷ್ಟು ವಿಚಾರ !!!

ಕೂಡಲೇ ಆಗಮಿಸಿರಿ

ದಿ

ಕೆನರಾ ಲಾಜ

[ಊಟ ಮತ್ತು ವಸತಿಗೃಹ]

ಮೋಟರ–ಸ್ಟೆಂಡ, ಹುಬ್ಬಳ್ಳಿ.

ಮಾಲಕ — ವ್ಯಾಳಪ್ಪ ಪೈ.

ಇದನ್ನು ಪಾಂಡುರಂಗ ಕೃಷ್ಣ ಕಾಣಭಂಗಿ ಸಂಪಾದಕರು ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲ ಖರ್ಚದೊಡನೆ ವರ್ಷಕ್ಕೆ ೩-೧೦-೦
" ೬ ತಿಂಗಳಿಗೆ ೧ ೧೦-೦
ಬಿಡಿ ಸಂಚಿಕೆಗೆ ೦ ೧-೦
ಮುಂದಿನಿಂದ ಹಣಕಳಿಸುವವರು
... ಅರ್ಧ ... ಕಳಿಸಬೇಕು ವರ್ಗಣಿ ಹಣವನ್ನು
ಮುಂಗಡ ಕಳಿಸಬೇಕು

Reg. No. B. 1270 Monday, 27-6-1949.

ಜಾಹೀರಾತುಗಳ ದರ
೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ಹೆಚ್ಚು ಅಕ್ಷರ ... ಸಾಲಿನ
ಜಾಹೀರಾತುಗಳ ಬಗ್ಗೆ ವಿಚಾರ
ಅಲ್ಲದೆ ಪತ್ರವ್ಯವಹಾರ
ವ್ಯವಸ್ಥಾಪಕ

ಕಾನಡಾವೃತ್ತ

ವರ್ಷ ೩೦.] THE KANARA NEWS [ಸಂಚಿಕೆ ೫೦

ಕುಮಟಾ ಸೋಮವಾರ, ತಾ ೨೭-೬-೧೯೪೯

ಸುದ್ದಿಗಳ ಸಂದೂಕ

— ನೇತಾಜಿ ಸುಭಾಸಚಂದ್ರ ಬೋಸರು ಖಂಡಿತ ಸತ್ತಿಲ್ಲೆಂದು ಜಪಾನಿ ಯುದ್ಧಾಪರಾಧಿಗಳ ವಿಚಾರಣೆಗಾಗಿ ನೇಮಿಸಲ್ಪಟ್ಟ ಅಂತರರಾಷ್ಟ್ರೀಯ ನ್ಯಾಯಾಲಯದ ಹಿಂದಿನ ಸದಸ್ಯರಾಗಿದ್ದ ಡಾ|| ರಾಧಾ-ವಿನೋದ ಪಾಲರವರು ಮೊನ್ನೆ ನಾಗಪುರದಲ್ಲಿ ಸೇರಿದ ಅ| ಭಾ| ವಕೀಲರ ಪರಿಷತ್ತಿನ ಅಧ್ಯಕ್ಷಸ್ಥಾನ ವಹಿಸಲು ನಾಗಪುರಕ್ಕೆ ಬಂದಾಗ, ಬೋಸರ ಅನುಯಾಯಿಗಳೂ ನಾಗಪುರದ ಪ್ರಸಿದ್ಧ ಫಾರ್ವರ್ಡ ಬ್ಲಾಕಿನ ಮುಂದಾಳು ಆಗಿರುವ ಶ್ರೀ|| ಆರ. ಎಸ್ ರುಯಿಕರ ಇವರ ಕಡೆ ಹೇಳಿದರೆಂಬದೊಂದು ವಾರ್ತೆ ಪ್ರಕಟವಾಗಿದೆ. ಯುದ್ಧಾಪರಾಧಿಗಳ ವಿಚಾರಣೆಗಾಗಿ ಜಪಾನಕ್ಕೆ ಹೋದಾಗ, ನೇತಾಜಿ ಸುಭಾಸರು, (ಪ್ರಕಟಿತ ದಿನಾಂಕ) ವಿಮಾನದ ಅಪಘಾತದಲ್ಲಿ ತೀರಿಕೊಂಡರೆಂಬ ಸಂಗತಿ ಪೂರ್ಣ ನಿರಾಧಾರವಿರುತ್ತದೆಂದು ಅಮೇರಿಕೆಯ ಮತ್ತು ಬ್ರಿಟನ್ನಿನ ಗುಪ್ತ-ಚಾರರ ಸಹಾಯದಿಂದ ತಮಗೆ ತಿಳಿದುಬಂತೆಂದು ಡಾ|| ಪಾಲರು ಹೇಳುತ್ತಾರೆ. ಡಾ|| ಪಾಲರು ಅಂತರರಾಷ್ಟ್ರೀಯ ಪ್ರಖ್ಯಾತಿಯ ನ್ಯಾಯಾಧೀಶರಿರುತ್ತಾರೆ. ಸಾಕಷ್ಟು ಪುರಾವೆಯಿಲ್ಲದೆ ಅವರು ಯಾವದೇ ನಿಶ್ಚಿತ ವಿಧಾನವನ್ನು ಮಾಡುವಂತಿಲ್ಲ.

— ಅಫಘಾಣಿಸ್ತಾನಕ್ಕೂ ಪಾಕಿಸ್ತಾನಕ್ಕೂ ಇತ್ತ ಕೆಲವು ದಿನಗಳಿಂದ ಶಬ್ದ-ದ್ವಂದ್ವ ನಡೆಯುತ್ತಿದೆ. ಗಡಿನಾಡಿನೊಳಗಿನ ಹಾಗೂ ಗಡಿಯಾಚೆಯ ೭೦ ಲಕ್ಷ ಪಠಾಣರಿಗೆ ಸ್ವಾತಂತ್ರ್ಯ ಕೊಡಬೇಕೆಂದೂ ಈ ಪಠಾಣರನ್ನು ಬ್ರಿಟಿಶರು ಪಾಕಿಸ್ತಾನಕ್ಕೆ ಒಪ್ಪಿಸಿದ್ದು ನ್ಯಾಯ್ಯವಾಗಿಲ್ಲೆಂದೂ ಅಫಗಾಣಿಸ್ತಾನದ ಅಂಬೋಣ. ಪಾಕಿಸ್ತಾನ ಸರಕಾರವು ಸಕಾಲದಲ್ಲಿ ಎಚ್ಚರಾಗಿ ಈ ಜನರಿಗೆ ಸ್ವಾತಂತ್ರ್ಯ ಕೊಡದಿದ್ದರೆ ಗಡಿನಾಡಿನ ಪಠಾಣ-ಪ್ರದೇಶದಲ್ಲೂ ಅಫಗಾಣಿಸ್ತಾನ ಗಡಿನಾಡುಗಳ ಗಡಿಯಲ್ಲೂ ಬಂಡಾಯವಾಗುವದು ನಿಶ್ಚಿತವೆಂದು ಸಹ ಲಂಡನದಲ್ಲಿರುವ ಅಫಘಾಣ ರಾಯಭಾರಿಯು ಪಾಕಿಸ್ತಾನಕ್ಕೆ ಎಚ್ಚರಿಕೆ ಕೊಟ್ಟಿರುತ್ತಾನೆ. ಪಠಾಣರ ಈ ಪ್ರಶ್ನೆಯನ್ನು ಬ್ರಿಟಿಶ ಸರಕಾರವು ಮಧ್ಯಸ್ಥಿಕೆ ವಹಿಸಿ ಬಿಡಿಸಬೇಕೆಂಬ ಪ್ರಯತ್ನವೂ ನಡೆದಿದೆ.

— ಕಾಶ್ಮೀರಿಗಳನ್ನು ಪಾಕಿಸ್ತಾನದ ಕಡೆಗೆ ಒಲಿಸಿಕೊಳ್ಳುವದಕ್ಕಾಗಿ ಪಾಕ ಮುಖ್ಯ ಮಂತ್ರಿ ಲಿಯಾಕತ ಅಲ್ಲಿಖಾನರು ಈಗ ಹೊಸದೊಂದು ತಂತ್ರ ಹೂಡಿದ್ದಾರೆ. ಹಿಂದೀ ಸರಕಾರದ ವಶದಲ್ಲಿರುವ ಕಾಶ್ಮೀರ ದೇಶದ ಜನರು ಆಹಾರ ಸಿಗದೆ ಉಪವಾಸ ಸಾಯುತ್ತಿದ್ದಾರೆಂಬದೊಂದು ಅಪ-ಸಿದ್ಧಾಂತ ಹಬ್ಬಿಸಿ ಬ್ರಿಟಿಶರ ಗೋಳಿಸಿ ಕಾಶ್ಮೀರಿಗಳಿಗೆ ಬೇಕಾದ ಆಹಾರ ಧಾನ್ಯಗಳನ್ನು ಪುಕ್ಕಟೆಯಾಗಿ ಪೂರೈಸಲು ತಮ್ಮ ಸರಕಾರವು ಸಿದ್ಧವಿದ್ದಾಗಿ ಅವರು ಮೊನ್ನೆಯೇ ಒಂದು ವಾರ್ತಿಕ ಬಾಣ ಬಿಟ್ಟಿದ್ದರು! ಇದಕ್ಕೆ ಕಾಶ್ಮೀರ ಸರಕಾರವು ಸಮರ್ಪಕ ಉತ್ತರ ಕೊಟ್ಟು ಕಾಶ್ಮೀರಕ್ಕೆ ಸಾಕಷ್ಟು ಆಹಾರವನ್ನು ಹಿಂದ ಸರಕಾರವು ಪೂರೈಸುತ್ತಿದೆಂದೂ, ಕಾಶ್ಮೀರಿಗಳ ಮುಖ್ಯ ಆಹಾರ ಧಾನ್ಯವಾದ ಅಕ್ಕಿಯು ಈಗ ಕಾಶ್ಮೀರದಲ್ಲಿ ರೂ ೧ಕ್ಕೆ ೫ ಶೇರಿನಂತೆ ಸಿಗುತ್ತಿದೆಂದೂ ಅದೇ ಅಕ್ಕಿಯ ದರ ಪಶ್ಚಿಮ ಪಂಜಾಬದಲ್ಲಿ ರೂ ೧೭ ೧೭ ಮತ್ತು ಪೂರ್ವ ಪಾಕಿಸ್ತಾನದಲ್ಲಿ ರೂ ೫೦ ( ) ಇರುತ್ತದೆಂದೂ, ಲಿಯಾಕತರು ಮೊದಲು ತಮ್ಮ ಪಾಕಿಸ್ತಾನಿಗಳಿಗೆ ಆಹಾರದ ಪೂರೈಕೆ ಮಾಡುವದೊಳಿತೆಂದೂ ತಿಳಿಸಿದೆ.

— ಮಹಾತ್ಮರ ಕೊಲೆಯ ಒಗ್ಗೆ ಶಿಕ್ಷೆ ವಿಧಿಸಲ್ಪಟ್ಟ ನಥುರಾಮ ಗೋಡಸೆ ಪ್ರಭೃತಿಗಳು ಪಂಜಾಬ ಹಾಯಕೋರ್ಟಿಗೆ ಮಾಡಿದ ಅಪೀಲಿನ ತೀರ್ಪು ಕಳೆದ ಮಂಗಳವಾರ ಓದಿ ಹೇಳಲ್ಪಟ್ಟಿತು. ಮೂವರು ನ್ಯಾಯಾಧೀಶರು ಕೊಲೆಯ ಒಳಸಂಚು ನಡೆದದ್ದು ನಿಜವೆಂದು ನಿರ್ಧರಿಸಿ ಗೋಡಸೆ ಮತ್ತು ನಾರಾಯಣ ಆಪಟೆ ಇವರಿಬ್ಬರಿಗೆ ವಿಧಿಸಲ್ಪಟ್ಟ ದೇಹಾಂತ ಶಿಕ್ಷೆಯನ್ನೂ, ಕರಕರೆ, ಮದನಲಾಲ ಮತ್ತು ಗೋಪಾಳ ಗೋಡಸೆ ಇವರ ಜನ್ಮಠೇಪಿನ ಶಿಕ್ಷೆಯನ್ನೂ ದೃಢಪಡಿಸಿರುತ್ತಾರೆ. ಆದರೆ ಪ್ರಾ|| ಪರಚುರೆಯವರು ಈ ಒಳಸಂಚಿನಲ್ಲಿ ಸೇರಿದ್ದು ಸಂಶಯಾಸ್ಪದವಿರುತ್ತದೆಂದೂ, ಶಂಕರ ಕಿಸ್ತಯ್ಯನು ತನ್ನ ಯಜಮಾನ ಬಡಗೆಯು ಹೇಳಿದಂತೆ ನಡೆಯುತ್ತಿದ್ದನೇ ವಿನಹ ಒಳಸಂಚಿನಲ್ಲಿ ಅವನ ಅಂಗವಿತ್ತೆಂದು ಹೇಳಬರುವದಿಲ್ಲೆಂದೂ ಅಭಿಪ್ರಾಯಪಟ್ಟು ಇಬ್ಬರಿಗೂ ಬಿಡುಗಡೆ ಮಾಡಿರುತ್ತಾರೆ. ಗೋಪಾಳ ಗೋಡಸೆಯು ತನ್ನ ಹಿರಿಯ ಅಣ್ಣನ ಆಜ್ಞಾನುವರ್ತಿಯಾಗಿ ಕೆಲಸ ಮಾಡುತ್ತಿದ್ದನೆಂದೂ, ಕೊಲೆಯ ಒಳಸಂಚಿನಲ್ಲಿ ಅವನು ಅಷ್ಟೇನು ಪ್ರಾಶಸ್ತ್ಯದ ಇಲ್ಲದೆ ಕೌತುಕ್ಯದಿಂದ ಭಾಗ ವಹಿಸಿದ್ದು ಕಂಡುಬರುವದರಿಂದೂ ಹಿರಿಯ ನ್ಯಾಯಾಧೀಶರಾದ ನ್ಯಾ| ಪ ಪ|| ಒ ಡಾರಿಯವರು ಪ್ರತಿಪಾದಿಸಿ, ಸರಕಾರವು ಅವನಿಗೆ ದಯೆತೋರಿಸಬೇಕೆಂದು ಶಿಫಾರಸು ಮಾಡಿದ್ದಾರೆ. ಮದನಲಾಲನ ತಾರುಣ್ಯ ನೋಡಿ (ಅವನಿಗೆ ೨೦ ವರ್ಷ ಪ್ರಾಯವಂತೆ) ಅವನಿಗೂ ದಯೆ ತೋರಿಸಬೇಕೆಂದು ನ್ಯಾ|| ಮೂ|| ಅಚ್ಛುರಾಮರ ಅಭಿಪ್ರಾಯವಿತ್ತು. ಆದರೆ ತರುಣನಿದ್ದರೂ ಮದನಲಾಲನು ಮಾನವ ಜೀವಿತದ ಬೆಲೆಯನ್ನು ಕಡೆಗಣಿಸುವಷ್ಟು ಕ್ರೂರನಿರುವದರಿಂದ ಅವನು ದಯೆಗೆ ಪಾತ್ರನಿರುವದಿಲ್ಲವಾಗಿ ನ್ಯಾ|| ಮೂ|| ಭಂಡಾರಿ ಮತ್ತು ಭೋಸಲಾ ಇವರು ತೀರ್ಮಾನಿಸಿದ್ದಾರೆ. ದೇಹಾಂತ ಶಿಕ್ಷೆಯನ್ನೇ ರದ್ದುಗೊಳಿಸಬೇಕೆಂದು ಇತ್ತೀಚಿಗೆ ರೂಢವಾಗುತ್ತಿರುವ ವಿಚಾರಸರಣಿಯ ಸ್ವಾ ಮಹಾತ್ಮರ ಕೊಲೆಗಡಕರಿಗೆ ದಯೆ ತೋರಿಸಿದರೆ ಮಹಾತ್ಮರ ಆತ್ಮಕ್ಕೆ ಸಮಾಧಾನವಾಗುವದೆಂಬ ವಿಚಾರಸರಣಿಯನ್ನೂ ಮುಂದೊತ್ತಿ ಹಿಂದು ಮಹಾಸಭೆಯವರು ಈಗ ಆಪಟೆ ಗೋಡಸೆಯವರ ಶಿಕ್ಷೆಯನ್ನು ಪ್ರಾಂತಾಧಿಕಾರಿಗಳಿ, ಸರ್ಕಾರವಿರಲಿ ಆಜನ್ಮ ಕರಿ ನೀರಿನ ಶಿಕ್ಷೆಗೆ ಇಳಿಸಬೇಕೆಂದು ವಾದಿಸಹತ್ತಿದ್ದಾರೆ!

FOR BANKING SERVICE
IN TRADE, INDUSTRY, AND AGRICULTURE
APPROACH

The Agricultural & Industrial Bank, Ltd.,

(Established in 1934)

Head Office **COONDAPOOR,** S Kanara.

Branches

1	Ankola	7	Gokarn	13	Nagar
2	Belgaum	8	Haveri	14	Shimoga
3	Bhatkal	9	Hubli	15	Sirsi
4	Coondapoor	10	Karwar	16	Somwarpet
5	Dharwar	11	Kumta	17	Virajpet
6	Gadag	12	Mangalore	18	Honavar

19 BOMBAY (384-M Jaipuria House Kalbadevi Road)

CURRENT SAVINGS BANK AND FIXED DEPOSITS ARE ACCEPTED

For terms apply to the nearest Branch

Coondapoor, 1st June 1949 } **K. Vaman Shenai,** CHAIRMAN

ಕೆನರಾ ಕಾಲೇಜಿನ ಉದ್ಘಾಟನೆ.

ಈ ಹಿಂದೆ ಪ್ರಕಟವಾದಂತೆ ಕೆನರಾ ಕಾಲೇಜಿನ ಉದ್ಘಾಟನೆಯ ಸಮಾರಂಭವು ಕಳೆದ ಸೋಮವಾರ ಮಧ್ಯಾಹ್ನ ೩ಕ್ಕೆ ವಿಜೃಂಭಣೆಯಿಂದಲೂ, ಅಪೂರ್ವ ಉತ್ಸಾಹದಿಂದಲೂ ನಡೆಯಿತು. ಮೇಘರಾಜನೂ ಕೂಡ ಅಂದು ಪ್ರಾತಃಕಾಲದಿಂದ ಅಪರಾಹ್ನದ ೪ ಘಂಟೆಯ ವರೆಗೆ ವಿಡುವು ತಕ್ಕೊಂಡು ಅನುಗ್ರಹಿಸಿದ್ದನು. ಅದರಿಂದ ಸಾವಿರಾರು ಜನರು ಈ ಸಮಾರಂಭಕ್ಕಾಗಿ ನೆರೆದಿದ್ದರು. ಕಾನಡಾದ ಮಂಡಳದ ಸಭಾಸದರಾಗಿರುವ ಶ್ರೀ|| ಶಾಸ್ತ್ರಿ, ಗೋಪಿ ಮತ್ತು ಕಮಿಷನರ ಇವರೂ, ಸ್ಥಳಿಕ ಪ್ರಮುಖರೂ ಅಧಿಕಾರಿಗಳೂ ಸಭೆಯಲ್ಲಿ ಪ್ರಾಮುಖ್ಯದಿಂದ ತೋರುತ್ತಿದ್ದರು. ಕಾರ್ಯಭಾರಿ ಮಂಡಳದ ಅಧ್ಯಕ್ಷರಾದ ರಾ|| ನಾರಾಯಣ ಹೆಗಡೆಯವರು ಸಭಿಕರನ್ನೂ ವಿದ್ಯಾರ್ಥಿಗಳನ್ನೂ ಹೃತ್ಪೂರ್ವಕ ಸ್ವಾಗತಿಸಿ, ಕಾಲೇಜಿನ ಅಸ್ತಿತ್ವದಲ್ಲಿ ತರಲು ನೆರವಾದ ಡಾ|| ಬಾಳಿಗಾ ಮೊದಲಾದ ಸಕಲರಿಗೂ ತಮ್ಮ ಅಭಿವಂದನೆಗಳನ್ನು ಅರ್ಪಿಸಿದರು. ತರುವಾಯ ಕಾಲೇಜ ಸಮಿತಿಯ ಕಾರ್ಯದರ್ಶಿಗಳಾದ ರಾ|| ಲಕ್ಷ್ಮಣ ಕಾಮತರು ಕಾಲೇಜ ಕಾರ್ಯದ ಈ ವರೆಗಿನ ಸಂಕ್ಷಿಪ್ತ ಇತಿಹಾಸವನ್ನೂ ಕಾಲೇಜ ನಿಧಿಗೆ ವಂತಿಗೆ ಕೊಟ್ಟು ನೆರವಾದವರ ಹೆಸರುಗಳನ್ನೂ ಓದಿ ಹೇಳಿ ನೂತನ ಕಾಲೇಜಿಗೆ ಬಂದ ಆಶೀರ್ವಾದಗಳನ್ನೂ ಶುಭೇಚ್ಛೆಯ ಸಂದೇಶಗಳನ್ನೂ ಓದಿ ಹೇಳಿದರು. ಶ್ರೀ ಗೋಕರ್ಣ ಪರ್ತಗಾಳಿ ಮಠದ ಶ್ರೀ ದ್ವಾರಕಾನಾಥತೀರ್ಥ ಸ್ವಾಮಿಗಳೂ ಶ್ರೀ ಚಿತ್ರಾಪುರ ಮಠದ ಶ್ರೀಮದಾನಂದಾಶ್ರಮ ಸ್ವಾಮಿಗಳೂ ನೂತನ ಮಹಾವಿದ್ಯಾಲಯಕ್ಕೆ ದೀರ್ಘಾಯುಷ್ಯ ಮತ್ತು ಉತ್ತರೋತ್ತರ ಅಭಿವೃದ್ಧಿಯನ್ನು ಕೋರಿ ಆಶೀರ್ವಾದದ ತಂತಿಗಳನ್ನು ಕಳಿಸಿದ್ದರು. ಭಟಕಳದ ಮೌಲಾನಾ ಸಾಹೇಬ, ಧಾರವಾಡದ ರಾ|| ಚಿತ್ತಾಲ ಬಂಧುಗಳು, ಜಿಲ್ಲಾಧಿಕಾರಿ ರಾ|| ಅಲ್ಲಾಬಕ್ಷ, ರಾ|| ವ್ಹಿ. ವ್ಹಿ. ಕಾಮತ (ಹುಬ್ಬಳ್ಳಿ), ಕರ್ನಾಟಕ ವಣಿಕ್ ಸಂಘದ ಕಾರ್ಯದರ್ಶಿಗಳಾಗಿರುವ ರಾ|| ಆರ್. ವ್ಹಿ. ಶಿರೂರ, ಮುಂಬಯಿಯ ರಾ|| ಎಚ್. ಗಣಪತರಾವ, ಶಿರ್ಸಿಯ ಮಾರಿಕಾಂಬಾ ಹಾಯಸ್ಕೂಲಿನ ಮುಖ್ಯಾಧ್ಯಾಪಕರು, ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕಿನ ಮೆನೇಜಿಂಗ ಡಾಯರೆಕ್ಟರ ರಾ|| ವಿಟ್ಠಲದಾಸ ಶೆಣೈ, ಮುಂಬಯಿಯ ದಲಾಲ ರಾ|| ದಾಸಾ ವಿಠೋಬ ಕಾನಭಾಗ, ಸಿಂಡಿಕೇಟ ಬೇಂಕಿನ ಮೆನೇಜಿಂಗ ಡಾಯರೆಕ್ಟರ ಡಾ|| ಟಿ. ಮಾಧವ ಪೈ, ಹುಬ್ಬಳ್ಳಿಯ ರಾ|| ಚಂದ್ರಶೇಖರ ಕರಬಿ, ಮುಂಬಯಿಯ ಬಿಲ್ಡಿಂಗ ಕಂಟ್ರಾಕ್ಟರ ರಾ|| ಎಸ್. ವ್ಹಿ. ನಾಯಕ ಮೊದಲಾದವರು ಶುಭಸಂದೇಶಗಳನ್ನು ಕಳಿಸಿದ್ದರು. ಇಲ್ಲಿಯ ಗೀತಾವಾಚನ ಮಂದಿರದ ಕಾರ್ಯದರ್ಶಿ ವೇ|| ಅನಂತ ಭಟ್ಟರು ಸಂಸ್ಕೃತ-ಶ್ಲೋಕಾತ್ಮಕ ಆಶೀರ್ವಾದಪರ ಸಂದೇಶ ಕಳಿಸಿದ್ದರು.

ಸಂದೇಶ ವಾಚನವಾದ ಮೇಲೆ ಕಾಲೇಜಿನ ಆಚಾರ್ಯ ರಾ|| ಗೋರೆಯವರೂ ಚಿಕ್ಕದೊಂದು ಭಾಷಣ ಮಾಡಿ ಸಕಲರೂ ಕಾಲೇಜಿಗೆ ತಮ್ಮ ಅಂತಃಕರಣಪೂರ್ವಕ ಸಹಕಾರವನ್ನು ನೀಡಬೇಕೆಂದು ಬಿನ್ನವಿಸಿದರು. ಆ ನಂತರ ಕಾರವಾರದ ವಕೀಲ ರಾ|| ಹಳದೀಪುರ ಕೃಷ್ಣರಾಯರ ಹೃದಯಸ್ಪರ್ಶಿ ಉದ್ಘಾಟನೆಯ ಭಾಷಣವಾಯಿತು. ಕಾನಡಾ ಜಿಲ್ಲೆಯು ಬುದ್ಧಿಮತ್ತೆಯಲ್ಲಿ ಕಡಿಮೆಯಿಲ್ಲ, ಕರ್ನಾಟಕದ ಬೇರೆ ಜಿಲ್ಲೆಗಳಿಗಿಂತ ಕಾನಡಾ ಜಿಲ್ಲೆಯೇ ಹೆಚ್ಚಿಗೆ ಬುದ್ಧಿಮತ್ತೆಯನ್ನೂ ವಿದ್ವತ್ತೆಯನ್ನೂ ತೋರ್ಪಡಿಸಿದೆ. ಈ ಜಿಲ್ಲೆಯ ಸರ್ ನಾರಾಯಣ ಚಂದಾವರಕರರು ೪೮ ವರ್ಷಗಳ ಹಿಂದೆ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು, ಅವರು ಮುಂದೆ ಮುಂಬಯಿ ಹಾಯಕೋರ್ಟಿನ ನ್ಯಾಯಾಧೀಶರೂ, ಮುಂಬಯಿಯ ಕಾಯಿದೆ ಮಂಡಳದ ಪ್ರಥಮ ಹಿಂದೀ ಅಧ್ಯಕ್ಷರೂ ಆದರು. ಈ ಜಿಲ್ಲೆಯವರು ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯಲ್ಲಿ ಮೊದಲನೇ ಸ್ಥಾನ ಪಡೆದಿದ್ದಾರೆ (ನಾಡಕರ್ಣಿ ಮತ್ತು ಚಿತ್ತಾಲ), ಈ ವರ್ಷದ ಎಸ್. ಎಸ್. ಸಿ. ಪರೀಕ್ಷೆಯಲ್ಲಿ ಈ ಜಿಲ್ಲೆಯ ಕುಮಾರಿ ವಿಶಾಲಾಬಾಯಿಯು ಇಡೀ ಪ್ರಾಂತದ ವಿದ್ಯಾರ್ಥಿನಿಗಳಲ್ಲಿ ಮೊದಲನೇ ಹಾಗೂ ಕರ್ನಾಟಕದ ಎಲ್ಲ ವಿದ್ಯಾರ್ಥಿಗಳಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾಳೆ ಎಂಬ ಕೆಲವು ಉದಾಹರಣೆಗಳನ್ನು ಕೊಟ್ಟು ಅವರು ನಮ್ಮ ಜಿಲ್ಲೆಯು ಪ್ರತಿಭಾವಂತರ ಬೀಡಾಗಿರುವದೆಂಬುದನ್ನು ಸಿದ್ಧಗೊಳಿಸಿದರು ಮತ್ತು ಇಂತಹ ಜಿಲ್ಲೆಯನ್ನು ಸರಕಾರದವರು ಉಪೇಕ್ಷಿಸುತ್ತಿರುವದನ್ನು ಕಟುತರವಾಗಿ ಟೀಕಿಸಿದರು. ಮತ್ತು ಕಾಲೇಜಿನ ವಿದ್ಯಾರ್ಥಿಗಳು ಜಿಲ್ಲೆಯ ಪರಂಪರೆಯನ್ನು ಉಜ್ವಲಗೊಳಿಸಿ ಕಾಲೇಜಿಗೂ ಜಿಲ್ಲೆಗೂ ಕೀರ್ತಿ ತಂದು ಕೊಡಬೇಕಾಗಿ ಬೋಧಿಸಿದರು. ಕೊನೆಗೆ ಆಭಾರ ಮನ್ನಣೆ ಮತ್ತು ರಾಷ್ಟ್ರಗೀತಗಳಾಗಿ ಸಮಾರಂಭವು ಮುಕ್ತಾಯವಾಯಿತು.

ಆಚೆಯ ವಾರ (ತಾ|| ೧೮ನೇ ಶನಿವಾರ) ಮುಂಬಯಿ ವಿಶ್ವವಿದ್ಯಾಲಯದ ಶಿಷ್ಟರು ಈ ಕಾಲೇಜಿನ ತಪಾಸಣೆಗಾಗಿ ಬಂದಿದ್ದರು. ಅವರು ಆರ್ಟ್ಸ ಶಾಖೆಯ ೧ನೇ ವರ್ಷದ ವರ್ಗದಲ್ಲಿ ೭೫ ಮತ್ತು ಸಾಯನ್ಸ ಶಾಖೆಯ ೧ನೇ ವರ್ಷದ ವರ್ಗದಲ್ಲಿ ೬೦ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅಪ್ಪಣೆ ಕೊಟ್ಟಿರುವರೆಂದು ತಿಳಿಯುತ್ತದೆ. ಸಾಯನ್ಸ ಶಾಖೆಗೆ ಈಗಾಗಲೇ ಅದಕ್ಕಿಂತ ಹೆಚ್ಚಿಗೆ ವಿದ್ಯಾರ್ಥಿಗಳು ಪ್ರವೇಶ ಬೇಡಿರುವರೆಂದೂ ತಿಳಿಯುತ್ತದೆ. ಆದರಿಂದ ಶಿಷ್ಟರು ಹಾಕಿಕೊಟ್ಟ ಮಿತಿಯನ್ನು ಬೆಳೆಸಿಕೊಡಬೇಕಾಗಿ ಕಾಲೇಜ ಅಧಿಕಾರಿಗಳು ವಿಶ್ವವಿದ್ಯಾಲಯದ ವರಿಷ್ಠರಿಗೆ ಮನವಿ ಮಾಡಿಕೊಂಡಿರುತ್ತಾರಂತೆ.

ಶ್ರೀಮತಿ ಸರಸ್ವತೀಬಾಯಿ ಮತ್ತು ರಮಾಬಾಯಿ ಹೊನ್ನಾವರಕರ ಇವರು ಕಾಲೇಜಿನ ಪ್ರಾರಂಭದ ದಿನವೇ ರೂ. ೧೦೦೦ ವಸೂಲ ಕೊಟ್ಟು, ಕಾಲೇಜ ನಿಧಿಗೆ ಅಂತು ರೂ. ೫೦೦೦ ವಂತಿಗೆ ಕೊಡುವ ತಮ್ಮ ವಚನವನ್ನು ಪೂರ್ಣಗೊಳಿಸಿರುತ್ತಾರೆಂದು ತಿಳಿಯುತ್ತದೆ.

— ಈ ಹಿಂದೆ ತಿಳಿಸಿದಂತೆ ಕಳೆದ ತಾ|| ೧೯ನೇ ರವಿವಾರ ಚಂದ್ರನಗರದಲ್ಲಿ ಜನಮತಗಣನೆಯಾಯಿತು. ೭೪೬೩ ಜನರು ಭಾರತದಲ್ಲಿ ಸೇರ್ಪಡೆಯಾಗಲಿಚ್ಛಿಸುತ್ತೇವೆಂದೂ, ಬರೇ ೧೧೪ ಜನರು ತಾವು ಫ್ರೆಂಚರ ಆಧಿಪತ್ಯದಲ್ಲಿ ಉಳಿಯಬಯಸುತ್ತೇವೆಂದೂ ಮತ ಕೊಟ್ಟರು. ಈ ನಿರ್ಣಯಕ್ಕನುಸಾರವಾಗಿ ಚಂದ್ರನಗರವನ್ನು ಮುಂದಿನ ಜುಲಾಯಿ ತಿಂಗಳಲ್ಲಿ (ಬಹುಶಃ ಫ್ರೆಂಚರ ಸ್ವಾತಂತ್ರ್ಯ ದಿನವಾದ ಜುಲಾಯಿ ತಾ|| ೧೪ರಂದು) ಭಾರತಕ್ಕೆ ಒಪ್ಪಿಸಿಕೊಡಲಾಗುವದು.

ಸ್ಥಾನಿಕ ವೃತ್ತಾಂತ

ಕುಮಟಾ— ಮೃಗಶಿರಾ ನಕ್ಷತ್ರವು ಕಳೆಯುವ ದಿನ ಚನ್ನಾಗಿ ಮಳೆ ಸುರಿಯಿತು. ಅಂದು (ಮಂಗಳವಾರ) ಸುಮಾರು ೫ ಇಂಚು ಮಳೆಯಾಗಿತ್ತು. ಆರ್ದ್ರೆಯ ಮೊದಲಿನ ೨ ದಿನ ಸ್ವಲ್ಪ ತಾಪ ತೋರಿಸಿದ್ದರೂ ಈಗ ಚನ್ನಾಗಿ ತೋರಿಸುತ್ತಿದೆ. ಕಳೆದ ವಾರ ಸುಮಾರು ೧೪-೧೫ ಇಂಚು ಮಳೆಯಾಗಿದೆ, ಮತ್ತು ಈ ವರೆಗೆ ಬಿದ್ದ ಒಟ್ಟು ಮಳೆ ೫೦ ಇಂಚಿನಷ್ಟಾಗಿದೆ.

ಸೀಧಾ-ಅಂಗಡಿಗಳಲ್ಲಿ ಈಗ ಅಕ್ಕಿ ಕೊಡುವದನ್ನು ನಿಲ್ಲಿಸಿದ್ದಾರೆ, ಅಕ್ಕಿಯ ಶಿಲ್ಕು ಕಡಿಮೆಯಾಗಿರುವದಂತೆ.

ಮ್ಯು|| ಯ ಮಾರ್ಗ-ದೀಪಗಳ ವ್ಯವಸ್ಥೆ ಸಮಾಧಾನಕರವಿರುವದಿಲ್ಲ. ನಿನ್ನೆ ಅಮಾವಾಸ್ಯೆಯ ರಾತ್ರಿ ಆಗಿರುತ್ತಿದ್ದಾಗ್ಯೂ ಎಷ್ಟೋ ದೀಪಗಳು — ೩, ೪ ಮಾರ್ಗಗಳು ಕೂಡಿರುವ ಸಂದಿಗಳೊಳಗಿನ ದೀಪಗಳು ಕೂಡ — ಉರಿಯುತ್ತಿಲ್ಲ. ಇದರ ಕಾರಣವೇನೆಂದು ನಗರಸಭೆಯು ಚೌಕಶಿ ಮಾಡಬೇಕು.

ಜಿಲ್ಲೆಯ ಎಲ್ಲ ಟಿನನ್ಸಿ ಕೋರ್ಟುಗಳಲ್ಲಿ ಕೂಡಿ ಕಳೆದ ಮೇ ತಿಂಗಳಲ್ಲಿ ೩೦೧ ಹೊಸ ಟಿನನ್ಸಿ ದಾವೆಗಳಾದವು, ೩೫೪ ದಾವೆಗಳ ನಿಕಾಲೆಯಾಯಿತು; ಮತ್ತು ತಿಂಗಳ ಕೊನೆಗೆ ೧೦೪೮ ದಾವೆಗಳು ಇನ್ನು ಉಳಿದವು. ೮೨ ದಾವೆಗಳಲ್ಲಿ ಒಡೆಯರಿಗೆ ಕಬಜೆ ಸಿಕ್ಕಿದೆ, ೧೫೬ ದಾವೆಗಳಲ್ಲಿ ರೈತರ ಕಡೆಗೆ ಕಬಜೆ ಉಳಿಯಬೇಕೆಂದು ನಿರ್ಣಯವಾಗಿದೆ, ೬೭ ದಾವೆಗಳಲ್ಲಿ ಒಡೆಯರ ಗೇಣಿ ಕೊಡಿಸಲಾಗಿದೆ. ಸ್ವಂತ ಸಾಗುವಳಿಗಾಗಿ ಹೊಲದ ಕಬಜೆ ಬೇಡಿ ಮಾಡಿದ ೮೦ ದಾವೆಗಳ ವಿಚಾರ ಸದರಿ ತಿಂಗಳಲ್ಲಾಗಿ, ೪೫ ದಾವೆಗಳಲ್ಲಿ ಒಡೆಯರಿಗೆ ಕಬಜೆ ಕೊಡಬೇಕೆಂದು ತೀರ್ಪಾಗಿದೆ. ೧೧ ದಾವೆಗಳಲ್ಲಿ ಸಮಂಜಸ ಗೇಣಿ ನಿರ್ಣಯ ಮಾಡಿಕೊಡಲಾಗಿದೆ. ೧೧೯ ರೈತರು ಸ್ವಖುಷಿಯಿಂದ ಹೊಲದ ಕಬಜೆ ಒಡೆಯರಿಗೆ ಬಿಟ್ಟುಕೊಟ್ಟಿರುತ್ತಾರಂತೆ.

ಒಕ್ಕಲಿಗರಿಗೆ ಬೇಕಾದ ಕೃತ್ರಿಮ (ಹಿಂಡಿ) ಗೊಬ್ಬರ ಈ ಕೆಳಗಿನವರಲ್ಲಿ ಸಿಗುವದೆಂದು ಕುಮಟಾ ಮಾಮಲೇದಾರರು ತಿಳಿಸುತ್ತಾರೆ —

ಗೋಕರ್ಣ— ಸಹಕಾರಿ ಸಂಘ. ಹನೇಹಳ್ಳಿ— ವಿವಿಧೋದ್ದೇಶಗಳ ಸಂಘ. ಕದಡಿ— ರಾ|| ಪುತ್ತು ಕಾನಭಾಗ. ಹಿತ್ತಲಮಕ್ಕಿ— ರಾ|| ಸೀತಾರಾಮ ಇವರ ಅಂಗಡಿಯಲ್ಲಿ. ಹಿರೇಗುತ್ತಿ— ರಾ|| ದಿರನ್ನಾ ನಾಯ್ಕರಲ್ಲಿ. ಬರ್ಗಿ— ಬೇಸಾಯ ಕಚೇರಿ. ಕೋಡಕಣಿ— ರಾ|| ಗಣಪಯ್ಯ ಕಾನಭಾಗರಲ್ಲಿ. ಹೆಗಡೆ— ಗ್ರಾಮ ಪಂಚಾಯತ ಕಚೇರಿ. ದೀವಗಿ— ಪಟೇಲರಲ್ಲಿ. ಉಪ್ಪಿನಪಟ್ಟಣ— ಗ್ರಾ. ಸ. ಕಮಿಟಿಯ ಕಚೇರಿ. ಮೂರೂರ— ಗ್ರಾಮ ಪಂಚಾಯತ ಕಚೇರಿ. ವಾಲಗಳ್ಳಿ— ರಾ|| ನಾಗಪ್ಪ ನಾಯ್ಕರಲ್ಲಿ. ಧಾರೇಶ್ವರ— ಗ್ರಾಮ ಚಾವಡಿ. ಹಂದಿಗೋಣ— ರಾ|| ಗೋವಿಂದ ಶೆಣೈಯವರ ಅಂಗಡಿ. ಕುಮಟಾ— ನೆಲ್ಲೀಕೇರಿಯಲ್ಲಿರುವ ಬೇಸಾಯ ಕಚೇರಿ. ಚಿತ್ರಗಿ— ರಾ|| ವೆಂಕಟರಮಣ ಕಾನಭಾಗರಲ್ಲಿ. ಗುಡೇಅಂಗಡಿ— ರಾ|| ಶಿವಪ್ಪ ಪಟಗಾರರಲ್ಲಿ. ಬಾಡ— ರಾ|| ಸೀತಾರಾಮ ನಾಯ್ಕರಲ್ಲಿ. ಅಘನಾಶಿನಿ— ವಿ. ಎಲ್. ಪಂಡಿತರ ವಖಾರಿ. ಕಾಲಕಾಲಕ್ಕೆ ರೈತರು ಈ ಅನುಕೂಲತೆಯ ಲಾಭ ಪಡೆದು ಹೆಚ್ಚು ಆಹಾರ ಧಾನ್ಯ ಬೆಳೆಸುವರೆಂದು ಸರಕಾರದವರು ಹಾರೈಸುತ್ತಾರೆ.

— ಪಾಕಿಸ್ತಾನವನ್ನು ಬಿಟ್ಟು ಬಂದ ಹಿಂದೂ-ಶೀಖ ನಿರಾಶ್ರಿತರು ತಮ್ಮ ಹಿಂದೆ ಬಿಟ್ಟು ಬಂದ ಆಸ್ತಿಯ ಮೌಲ್ಯ ೧೪ ಅಬ್ಜ ರೂಪಾಯಿಗಳಷ್ಟು ಆಗುತ್ತದೆಯೆಂದೂ, ಹಿಂದುಸ್ಥಾನವನ್ನು ಬಿಟ್ಟು ಪಾಕಿಸ್ತಾನಕ್ಕೆ ಓಡಿದ ಮುಸಲ್ಮಾನರು ಇಲ್ಲಿ ಬಿಟ್ಟಿರುವ ಆಸ್ತಿಯ ಬೆಲೆ ೨ ಅಬ್ಜ ರೂ. ಆಗುತ್ತದೆಂದೂ ಅಧಿಕೃತ ನಿರೀಕ್ಷಕರು ಲೆಕ್ಕ ಹಾಕಿರುತ್ತಾರೆ.

ಜಿಲ್ಲಾ ಸಮಾಚಾರ

(ಆಯಾ ಸ್ಥಳದಿಂದ ಬಂದವುಗಳು.)

[illegible]

ಹೊನ್ನಾವರ— [illegible]

[illegible]

(ತಾ. ೨೪-೬-೪೯) [illegible]

[illegible]

ಆನೆ" ಆಗುತ್ತದೆ ಎನೋ !

[illegible]

ನೋಟೀಸು.

[illegible]

ಧಾರವಾಡ, ತಾ. ೨೪-೬-೧೯೪೯.

V. B. Deshpande,

ಕಾರ್ನಟಕ ಟ್ರಾನ್ಸ್ ಅಫೀಸರ,

"ಬಿ" ವಾರ್ಡ, ಧಾರವಾಡ

ಹಿಂದೀ ಪುಸ್ತಕಗಳು !

ಪ್ರಥಮಾ, ಮಧ್ಯಮಾ, ರಾಷ್ಟ್ರಭಾಷಾ ಮುಂತಾದ ಪರೀಕ್ಷೆಗಳಿಗೆ ಹಿಂದೀ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.—

ಮ್ಯಾನೇಜರ,

ನವ್ಯದ ಅಂಗಡಿ, ಕುಮಟಾ. ([illegible])

ಜಾಹೀರ ನೋಟೀಸು.

ಕುಮಟಾ ಮ್ಯುನಿಸಿಪಲ್ ಆಫೀಸಿನಿಂದ—

[illegible]

ಕುಮಟಾ ಮ್ಯುನಿಸಿಪಾಲಿಟಿಯ ವಾರ್ಡ ನಂಬರ A, B, C, D, E, ಮತ್ತು F ಇವುಗಳಲ್ಲಿಯ [illegible] ಮ್ಯುನಿಸಿಪಲ್ ಆಫೀಸಿನಲ್ಲಿ ಇಡಲಾಗಿದೆ.

[illegible]

KUMTA, 25 6—1949

B M. Pai,
President,
Municipality Kumta

ಜಾಹೀರ ನೋಟೀಸು.

[illegible]

N. K. Pai, R. K. Pai

THE REGIONAL TRANSPORT AUTHORITY,
KARNATAK REGION BELGAUM

NOTICE.

Applications in the prescribed form 'P Co P A' which can be had from this Office, are invited for grant of permits to operate taxi cabs in the Karnatak Region, from persons who hold authorisation to drive public service vehicles or from Unions, Associations or Societies in the Karnatak Region whose membership is restricted to the owner-drivers and the non-owner drivers provided they hold authorisation to drive taxis

All applications should be submitted so as to be received in this Office on or before 15-7-1949, and those received after this date will not be entertained

Applications should clearly state the authorisation badge held by the applicants and should be complete in all respects and if incomplete, they will be treated as invalid

Permits will be granted on temporary basis in accordance with the existing instructions from Government and issued as and when the petrol quota allotted to this Region permits

No 4048 /1 B KR of 1949
Regional Transport Office K R
Belgaum 25th June, 1949

D K SUKHTANKAR, CAPT.
Secretary, Regional Transport Authority,
Karnatak Region, Belgaum

ಜಿಲ್ಲಾ ಸಮಾಚಾರ

ಹಳಿಯಾಳ— (ತಾ ೧೭-೬-೪೯) ತಾ ೮-೧೧-೪೮ರ "ವೃತ್ತ"ದಲ್ಲಿ ದಾಂಡೇಲಿಯೊಳಗಿರುವ ಸರಕಾರಿ ಕರಗಸ ಕಾರಖಾನೆಯ ಗಿರಣಿಗಳ ಮತ್ತು ಕಟ್ಟಿಗೆ ಉಗ್ರಾಣದ ವ್ಯವಹಾರದ ವಿರುದ್ಧ ಪ್ರಕಟವಾದ ಟೀಕೆಯನ್ನು ಅನುಲಕ್ಷಿಸಿ ಪುಣೆಯಲ್ಲಿರುವ ಕನ್ಸರ್ವೇಟರ ಒಫ್ ಫಾರೆಸ್ಟ (ಯುಟಿಲಿಝೇಶನ್ ಮತ್ತು ಇಂಜಿನಿಯರಿಂಗ ಸರ್ಕಲ್) ಇವರು ಬರೆಯುತ್ತಾರೆ — (೧) ಸದರಿ ಕರಗಸ ಕಾರಖಾನೆಯ ಗಿರಣಿಗಳ ವಿಗತವಾದ ಮತ್ತು ಪ್ರತ್ಯೇಕ ಲೆಕ್ಕವಿಡುತ್ತದೆ, ಮತ್ತು ಸರಕಾರದ ಆಜ್ಞೆಯಂತೆ ಪ್ರತಿ ವರ್ಷ ಲಾಭ ಹಾನಿಯ ಪತ್ರಿಕೆಯನ್ನು ತೆಗೆದು ಸರಕಾರಿ ಲೆಕ್ಕ ತಪಾಸಕರ ಕಡೆಯಿಂದ ಪರಿಶೋಧಿಸಿಕೊಳ್ಳುತ್ತಾರೆ ಈ ಲೆಕ್ಕದ ಮೇಲಿಂದ ಸದರಿ ಕರಗಸ ಕಾರಖಾನೆಯ ಗಿರಣಿಗಳ ವ್ಯವಹಾರದಲ್ಲಿ ಪ್ರತಿ ವರ್ಷ ತಕ್ಕಷ್ಟು (handsome) ಲಾಭವಾದದ್ದು ಕಂಡುಬರುತ್ತದೆ ಗಿರಣಿಗಳ ಕಾರಭಾರದಲ್ಲಿ ಅವ್ಯವಸ್ಥೆಯಾಗಿರುತ್ತಿದ್ದರೆ ಈ ಲಾಭ ಸಿಗುತ್ತಿದ್ದಿಲ್ಲವಷ್ಟೇ? (೨) ಬೇರೆ ಬೇರೆ ಖಾತೆಗಳಿಗೆ ಬೇಕಾದ ಕಟ್ಟಿಗೆ ಸರಂಜಾಮು (furniture) ತಯಾರಿಸಿಕೊಡಲಿಕ್ಕೆಂದು ತಕ್ಕಂಥ ಕಟ್ಟಿಗೆಯ ಸರಿಯಾದ ಲೆಕ್ಕವಿಡುತ್ತಾರೆ, ಮತ್ತು ಸಂಬಂಧಪಟ್ಟ ಕಾರಖಾನೆಯ ಅಂದಾಜು ಪತ್ರಿಕೆಯನ್ನು ತಜ್ಞ ಅಧಿಕಾರಿಯು ಮಂಜೂರ ಮಾಡಿದ ಮೇಲೆಯೇ ಅದನ್ನು ಬಿಟ್ಟುಕೊಡುತ್ತಾರೆ ಯಾವದೇ ಕಟ್ಟಿಗೆಯನ್ನು ನಿರುಪಯೋಗಿಯೆಂದು ಬೀಸಾಡುವದಿಲ್ಲ ಪೇಟೆಯಲ್ಲಿ ಕೂಡಲೇ ಎದ್ದುಹೋಗದಂಥ (not marketable) ಕಟ್ಟಿಗೆಯನ್ನು ಬೇರೆ ರೀತಿ ಹಾಕಿಟ್ಟು ಮಾರುತ್ತಾರೆ ಅದರಿಂದ ಬಂದ ಹಣವನ್ನು ಲೆಕ್ಕದಲ್ಲಿ ತೋರಿಸುತ್ತಾರೆ (೩) "ಜಯ ಕರ್ನಾಟಕ ಗಿರಣಿ"ಯ ಕರಗಸಗಳು ಹಳೆಯ ಕಾಲದವಾಗಿದ್ದವು ಕಟ್ಟಿಗೆಯು ಮಿತವ್ಯಯ ಹೊಂದಿಕೆಯಾಗದೆಂದು ಜಂಗಲ ಇಲಾಖೆಯವರು ಇಟ್ಟುಕೊಂಡ ಧೋರಣೆಗನುಸಾರವಾಗಿ ಆ ಗಿರಣಿಯನ್ನು ಮುಚ್ಚಬೇಕಾಯಿತು. ಯುದ್ಧಕಾಲದಲ್ಲಿ ಕೆಲಸದ ಒತ್ತಡವನ್ನು ಸುಧಾರಿಸಲಿಕ್ಕೆಂದು ಪ್ರಾರಂಭಿಸಿದ ಹಳ್ಳಿಯ ಗಿರಣಿಗಳನ್ನು ಶಾಂತಿ ಕಾಲದ ಸಾಧಾರಣ ಕೆಲಸವಷ್ಟೇ ಮಾಡುವದರಿಂದಾಗ ಚಾಲೂ ಇಟ್ಟು ಪ್ರಯೋಜನವಿಲ್ಲೆಂದು ಅವನ್ನು ಮುಚ್ಚಲಾಯಿತು (೪) ದಾಂಡೇಲಿಯ ಪೋಲೀಸರೂ ಅಲ್ಲಿಯ ಕಟ್ಟಿಗೆ ಉಗ್ರಾಣದ ಅಧಿಕಾರಿಯೂ ಸಹಕಾರದಿಂದ ವರ್ತಿಸಿ, ಅಲ್ಲಿಯ ಜಂಗಲ ಪ್ರದೇಶದಲ್ಲಿ ಯೋಗ್ಯ ವ್ಯವಸ್ಥೆಯನ್ನಿಟ್ಟಿದ್ದಾರಲ್ಲದೆ, ಗುನ್ಹೆಗಳಾದಲ್ಲಿ ಕೂಡಲೆ ಅವುಗಳ ತನಿಖೆ ನಡೆಸುತ್ತಾರೆ (೫) "ವೃತ್ತ"ದ ಸುದ್ದಿಗಾರನು ಹೇಳುವ ಕಟ್ಟಿಗೆಯ ಕಳವಿನ ಚೌಕಶಿ ಮಾಡಲಾಗಿ ಇಬ್ಬರು ಮನುಷ್ಯರು ತಮ್ಮ ಅಪರಾಧವನ್ನು ಒಪ್ಪಿಕೊಂಡರು ಜಂಗಲ ಕಾಯದೆಯ ೬೮ನೇ ಕಲಮಿನನ್ವಯ ಅವರಿಂದ ದಂಡ ವಸೂಲ ಮಾಡಿ ಅವರ ಪ್ರಕರಣಗಳನ್ನು ರಾಜಿಯಿಂದ ನಿಕಾಲ ಮಾಡಿರುತ್ತಾರೆ

ಇಲ್ಲಿಯ ವಿವಿಧೋದ್ದೇಶಗಳ ಸಹಕಾರಿ ಸಂಘದ ಕಡೆ ಸರಕಾರದವರು ಬಟ್ಟೆ ಮಾರುವ ಮಕ್ತೆಯುಂಟು ಸಂಘದ ಅಂಗಡಿಯೊಳಗಿನ ಮಾರಾಟಗಾರ ರಾ॥ ದೇಶಪಾಂಡೆಯವರು ಸರಕಾರಿ ಜವಳಿಯನ್ನು ಕಳ್ಳಪೇಟೆಗೆ ಕಳಿಸುತ್ತಾರೆಂದು ಜಿಲ್ಲಾಧಿಕಾರಿಗೆ ಅರ್ಜಿ ಹೋಗಿತ್ತಂತೆ ಆ ಅರ್ಜಿ ಮಾಮಲೇದಾರರ ಕಡೆಗೆ ಚೌಕಶಿಗೆ ಬಂದಿತ್ತು ಮಾಮಲೇದಾರರು ಅರ್ಜಿಯ ಚೌಕಶಿ ಮಾಡುವಾಗ ಅರ್ಜಿಯಲ್ಲಿ ನಮೂದಿಸಿದ ಕೊಟ್ಟಿಗೆ ಇವರ ಅಂಗಡಿಯಲ್ಲಿ ನಡೆದಲು ಝಡತಿ ಮಾಡಿದರು ಆಗ ಕೆಲವು ಕಳ್ಳ ಅಂದ ಸಿಕ್ಕಿತೇ? ಯಾವ ಆಧಾರದಿಂದ ತಪ್ಪು ಕೊಟ್ಟವನ ಅಂಗಡಿಯಲ್ಲಿ ಝಡ್ತಿ ಮಾಡಿದಿರಿ?" ಎಂದು ಈಗ ರಾ॥ ದೇಶಪಾಂಡೆಯವರು ಮಾಮಲೇದಾರರಿಗೆ ಬೆದರಿಕೆಯ ಪ್ರಶ್ನೆ ಮಾಡುತ್ತಾರಂತೆ ಮಾಮಲೇದಾರರ ನಡತೆಯ ವಿರುದ್ಧ ಮಂತ್ರಿಗಳ ಕಡೆ ಅರ್ಜಿ ಮಾಡುತ್ತೇವೆಂದು ಒದರುತ್ತಿರುವರೂ ಹೇಳುತ್ತಾರಂತೆ ಸದರಿ ದೇಶಪಾಂಡೆಯವರ ಮೇಲೂ ಅವರ ಸಂಘಕ್ಕೆ ಸೇರಿರುವ ಬೇರೆ ಕೆಲವರ ಮೇಲೂ ಹಿಂದೆ ನಿಯಂತ್ರಣಾಜ್ಞೆಗಳ ಉಲ್ಲಂಘನೆ ಮಾಡಿದ ಬಗ್ಗೆ ಖಟ್ಲೆಗಳಾಗಿದ್ದವು ಅವು, ಹ್ಯಾಗೋ ಏನೋ, ಈಗ ಮುಕ್ತಾಯವಾಗಿ ಹೋಗಿವೆಯಂತೆ ಅದ್ದರಿಂದಲೇ ಸಂಘದವರು ಪ್ರಸ್ತುತ ಧೈರ್ಯದಿಂದ ಕಳ್ಳ ಸಂತೆಯನ್ನು ನಡೆಸುತ್ತಿರುವರೆಂದು ಜನರ ಅಂಬೋಣವಿದೆ ಸಹಕಾರಿ ಸಂಘದ ಕಡೆಗಿರುವ ಅರಿವೆಯ ಅಂಗಡಿಯನ್ನು ಈ ವಿವಿಧೋದ್ದೇಶಗಳ ಸಂಘವು ಎತ್ತಿಹಾಕುವ ಹೊಂಚು ಹಾಕಿದೆಯೆಂದು ಸುದ್ದಿಯುಂಟು! ಇದರಿಂದ ಅರಿವೆ ಅಂಗಡಿ ನಡೆಸಲು ಆಗುವದಿಲ್ಲವಾಗಿ ಸಹಕಾರಿ ಸಂಘದವರ ಕಡೆಯಿಂದ ಈ ಸಂಘದ ಅಧ್ಯಕ್ಷರು ಬರೆಯಿಸಿ ಹಾಕಿಸುತ್ತಾರಂತೆ!

ಮೇಲಧಿಕಾರಿಗಳಿಂದ ಬಂದ ಪರಿಪತ್ರಗಳನ್ನೂ ಆಜ್ಞೆಗಳನ್ನೂ ಇಲ್ಲಿಯ ಕನ್ನಡ ಶಾಲೆಯ ಮುಖ್ಯಾಧ್ಯಾಪಕರು ತಮ್ಮ ಸಹಾಯಕ ಶಿಕ್ಷಕರಿಗೆ ತೋರಿಸದೆ ಬಚ್ಚಿಡುತ್ತಾರೆಂಬ ದೂರೊಂದು ದೂರು ಕೇಳಬರುತ್ತಿದೆ ಮುಖ್ಯಾಧ್ಯಾಪಕರ ಈ ನಡತೆ ಯುಕ್ತವಿರುತ್ತದೇನೆಂಬುದರ ವಿಚಾರವನ್ನು ಮೇಲಧಿಕಾರಿಗಳು ಮಾಡಬೇಕು

ಯಲ್ಲಾಪುರ— (ತಾ ೧೪-೬-೪೯) ತಾ ೪-೪-೪೯ರ "ವೃತ್ತ"ದಲ್ಲಿ ಕಿರವತ್ತಿಯೊಳಗಿನ ಸರಕಾರಿ ಉಗ್ರಾಣದ ಕೆಲಸ ಮಾಡುತ್ತಿದ್ದ ಮುದ್ದತ್ತ ಗಾಂವಕರ ರಾ॥ ಶೆಟ್ಟಿಯವರ ವಿರುದ್ಧ ಪ್ರಕಟವಾದ ಟೀಕೆಯನ್ನು ಅನುಲಕ್ಷಿಸಿ ಜಿಲ್ಹಾಧಿಕಾರಿ ಬರೆಯುತ್ತಾರೆ ರಾ॥ ಶೆಟ್ಟಿಯವರ ವಿರುದ್ಧ ಮಾಡಲಾದ ಆರೋಪಗಳು ನಿರಾಧಾರವಿರುತ್ತವೆ ಅವರು ಚಲೋ ಭತ್ತವನ್ನು ಕೊಡದೆ ಮುಗ್ಗು ಭತ್ತದಲ್ಲಿ ಸೇರಿಸುತ್ತಾರೆಂಬ ಬಗ್ಗೆ ರಿಪೋರ್ಟು ಈ ಕಚೇರಿಗೆ ದೊರಕಿದ್ದಿರುವದಿಲ್ಲ ಇನ್ನು ೨೬ ಖಂಡಿ ಭತ್ತ ತಂದ ಒಕ್ಕಲಿಗನಿಗೆ ೨೫ ಖಂಡಿಗಳ ಪಾವತಿ ಕೊಟ್ಟರೆಂಬ ಕಥೆಯ ವಿವರಗಳು ಹೀಗಿವೆ ತಾ ೧೮-೨-೪೯ನೇ ದಿನ ಕೆಲವು ರೈತರು ಸುಮಾರು ೬೮ ಖಂಡಿ ಭತ್ತ ತಂದಿದ್ದರು ಆ ಭತ್ತದಲ್ಲಿ ಧೂಳು ಮತ್ತು ಜೊಳ್ಳು ಭತ್ತ ಬಹಳಷ್ಟು ಮಿಶ್ರವಿತ್ತು ರಾ॥ ಶೆಟ್ಟಿಯವರು ಅದನ್ನು ಹಸನಗೊಳಿಸಿ ಕೊಡಬೇಕೆಂದು ಹೇಳಿದರು ಅದರಂತೆ ರೈತರು ಭತ್ತವನ್ನು ಹಸನಗೊಳಿಸಿಕೊಟ್ಟರು ಆ ರೈತರಲ್ಲಿ ಭೀಮಾ ಪವಾರ ಮತ್ತು ನಾಗ್ಯಾ ಗಾಂವಕರ ಎಂಬವರಿಬ್ಬರು ಅನುಕ್ರಮವಾಗಿ ೨೫ ಮತ್ತು ೧೪ ಖಂಡಿ ಭತ್ತದ ಚೀಟಿ (ಬಿಲ)ಗಳನ್ನು ಮಾಡಿಸಿ ತಂದಿದ್ದರು ಆದರೆ ಅವರು ಅನುಕ್ರಮವಾಗಿ ೨೫ ಮತ್ತು ೧೫ ಖಂಡಿ ಭತ್ತ ಉಗ್ರಾಣದಲ್ಲಿ ಒಪ್ಪಿಸಿಕೊಟ್ಟರು ಅದರಂತೆ ಅವರಿಗೆ ಪಾವತಿಗಳನ್ನು ಮಾಡಿಕೊಟ್ಟರು ಆದರೆ ಮುಂದೆ ಹಣ ಎಣಿಸಿಕೊಡುವಾಗ ಭೀಮಾನು ತಾನು ೨೬ ಖಂಡಿ ಭತ್ತ ತಂದಿದ್ದೆನೆಂತಲೂ ನಾಗ್ಯಾನ ಲೆಕ್ಕಕ್ಕೆ ಚುಕ್ಕಿಗೆ ಜಮೆಯಾದ ೧ ಖಂಡಿ ತನ್ನದಿರುತ್ತದೆಂತಲೂ ತಕರಾರು ಮಾಡಿದನು ಈ ತಕರಾರನ್ನು ಮುಂದೆ ಭೀಮಾ ಮತ್ತು ನಾಗ್ಯಾ ಇಬ್ಬರೂ ತಮ್ಮೊಳಗೆ ನಿಕಾಲ ಮಾಡಿಕೊಂಡರು ಮತ್ತು ಭೀಮಾನು ತನ್ನ ದೂರನ್ನು ಹಿಂತೆಗೆದುಕೊಂಡನು ಈ ಪ್ರಕರಣದಲ್ಲಿ ರಾ॥ ಶೆಟ್ಟಿಯವರದೇನೂ ತಪ್ಪಿಲ್ಲ ಅವರು ತಮ್ಮ ಕಡೆ ಪ್ರತ್ಯಕ್ಷ ಬಂದ ಭತ್ತದ ಬಗ್ಗೆ ಪಾವತಿಗಳನ್ನು ಮಾಡಿಕೊಟ್ಟಿರುತ್ತಾರೆ ಇತ್ಯಾದಿ

ಶಿರಸಿ— (ತಾ ೨೩-೬-೪೯) ಇಲ್ಲಿಯ ನಗರ ಸಭೆಯವರು ಮಾರ್ಗಗಳ ಮೇಲೆ ಹಚ್ಚಲೆಂದು ಆಚೆಯ ವರ್ಷ ಹೊಸ ದೀಪಗಳನ್ನು ತರಿಸಿ, ಅವುಗಳನ್ನು ಹಚ್ಚುವದಕ್ಕಾಗಿ ಪ್ರತ್ಯೇಕ ಇಬ್ಬರನ್ನು ಸಹ ನೇಮಿಸಿದ್ದಾರೆ ಊರಿನ ದೀಪಗಳನ್ನು ಹಚ್ಚಲು ಬೇರೊಬ್ಬ ನೌಕರನಿದ್ದಾನೆ ಆದರೆ ಮಾರ್ಗಗಳ ಮೇಲೆ ಬೆಳಕು ಮಾತ್ರ ಬೀಳುವದಿಲ್ಲ! ದೀಪಗಳನ್ನು ಹಚ್ಚುವವನು ದೀಪ ಹಚ್ಚಿ ಹೊರಟುಹೋದ ಕೆಲವೇ ಹೊತ್ತಿನಲ್ಲಿ ಅವು ನಂದಿಹೋಗುತ್ತವೆ! ಅದು ಎಣ್ಣೆಯ ದೋಷವೋ, ದೀಪಗಳ ದೋಷವೋ, ಯಾ ಎಣ್ಣೆ ಹಾಕುವದರಲ್ಲಿ ಕೃತ್ರಿಮವಾಗುತ್ತಿದ್ದುದರ ದೋಷವೋ ಪರಮಾತ್ಮನೇ ಬಲ್ಲನು! ದೀಪಗಳು ಸರಿಯಾಗಿ ಉರಿಯುತ್ತಿರುವದಿಲ್ಲವಾದರೂ ಹಣ ಮಾತ್ರ ಲೆಕ್ಕದಲ್ಲಿ ಸರಿಯಾಗಿ ಖರ್ಚು ಬೀಳುತ್ತಿದೆ! ಇದೇನೆಂದು ನಗರ ಸಭೆಯವರು ಚೌಕಶಿ ಮಾಡಬೇಕು

ಶಿಂಪಿ ಗಲ್ಲಿಯಲ್ಲಿ ಮೊನ್ನೆ ಪುನಃ ಕೆಲವು ಕಳವಿನ ಬಟ್ಟೆ ಸಿಕ್ಕಿದೆಯಂತೆ ಈ ಬಗ್ಗೆ ಪೋಲೀಸರು ಇಬ್ಬರನ್ನು ಸೆರೆ ಹಿಡಿದಿರುತ್ತಾರೆ ಪೋಲೀಸ ಖಾತೆಯ ಈ ಸಾರೆ ಜಾಗ್ರತೆಯಿಂದ ನಡೆದದ್ದರ ಪರಿಣಾಮವಾಗಿ ಸನ್ನೆ ಶಿಂಪಿಗಲ್ಲಿಯ ಹಿಂದಿನ ಬೈಲಲ್ಲಿ ಕೆಲವು ಕಳವಿನ ಬಟ್ಟೆ ಬಂದು ಬಿದ್ದಿತ್ತು

"Skoda" "National" "Ruston"

"ಸ್ಕೋಡಾ," "ನೆಶನಲ್," "ರಸ್ಟನ್,"

ಮೊದಲಾದ ಡೀಝಲ ಒಯ್ಲ ಇಂಜಿನ್ನುಗಳೂ ಓಟ್ಸನ ಚಕ್ಕಿಗಳೂ ಯೋಗ್ಯ ದರದಿಂದ ಸಿಗುವವು ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ —

G. D MALGIKAR,
Booking & Forwarding Agent,
Post Box No 4092,
BOMBAY, No. 7.

ಜಾಹೀರ ನೋಟೀಸು

ಘಟಕಳ ಪೇಟೆ ಶಿಕ್ರಿ ಗ್ರಾಮದ ಸುಬ್ರಾಯ ಶೇಷಗಿರಿ ಹೆಬ್ಬಾರ ಹಿಂದುಸ್ತಾನ ಈತನು ಈ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನೆಂದರೆ —

ನಮ್ಮ ದಾಯಾದಿ ಕುಟುಂಬದ ಮಂಜಯ್ಯ ಸುಬ್ರಾಯ ಹೆಬ್ಬಾರ ಇವರು ತಾ ೨೫-೧೨-೧೯೪೮ಕ್ಕೆ ಮೃತಪಟ್ಟಿದ್ದು, ಅವರ ಹೆಂಡತಿ ಮಹಾಲಕ್ಷ್ಮಿ ಎಂಬವಳು ಇರುತ್ತಾಳೆ ಸದ್ರಿಯವಳು ಮೃತ ಗಂಡನ ಆಸ್ತಿಯಲ್ಲಿ ಏನೊಂದೂ ಬಾಕ್ಷಿ ವಗ್ಗೆರೆ ಮಾಡದೆ ಆರಾಮದಿಂದ ಬೇರೆ ಕಡೆ ಇದ್ದು, ಈಗ ಏಳೇ ಕಡೆ ಕೆಲವು ಜನರ ಮಾಲೋಭನೆಯಿಂದ ಸದ್ರಿ ಮೃತನ ಸ್ಥಿರ-ಚರ ಸೊತ್ತನ್ನು ಪರಾಧೀನತೆ ಮಾಡುವದು ತಿಳಿದಿರುತ್ತದ್ದು, ಸದರಿ ಮೃತನ ಹೆಂಡತಿ ಮಹಾಲಕ್ಷ್ಮಿಗೆ ಜೀವಮಾನ ವರೆಗೆ ಸದರಿ ಕುಟುಂಬದ ಸ್ಥಿರ-ಚರ ಆಸ್ತಿ ಉಪಭೋಗಿಸುವದಷ್ಟೇ ಹೊರತು ವಿಕ್ರಿ ಮಾಡಿ ಜೀವನ ಸಾಗಿಸಬೇಕೆಂಬುದು ಅವಶ್ಯವಿಲ್ಲ ಸದರಿ ಮೃತ ಮಂಜಯ್ಯ ಹೆಬ್ಬಾರರು ನಿಪುತ್ರಿಕರಾಗಿ ಮರಣಪಟ್ಟಿದ್ದರಿಂದಲೂ ಸಮೀಪದ ದಾಯಾದಿಯೂ ನಾನೇ ಇರುವದರಿಂದಲೂ ಸದರಿ ಮೃತನ ಉತ್ತರಕ್ರಿಯಾದಿಗಳನ್ನು ಸಹ ನಾನೇ ನಮ್ಮ ಸ್ವಂತ ಖರ್ಚಿನಿಂದ ಮಾಡಿಸುತ್ತೇವೆ

ಕಾರಣ ಸದರಿ ಮೃತ ಮಂಜಯ್ಯ ಹೆಬ್ಬಾರರ ಕುಟುಂಬದ ಆಸ್ತಿಯನ್ನು ಸದರಿ ಮಹಾಲಕ್ಷ್ಮಿ ಕಡೆಯಿಂದ ಖರೀದಿ ವಗೈರೆ ಯಾರಾದರೂ ಮಾಡಿಕೊಂಡಲ್ಲಿ ಸಿಂಧುವಾಗಲಾರದು ತಿಳಿಯಬೇಕು ತಾ ೨೧-೬-೪೯

ಸುಬ್ರಾಯ ಶೇಷಗಿರಿ ಹೆಬ್ಬಾರ, ಶಿಕ್ರಿ

[illegible] ನೋಡುತ್ತಿದ್ದಾರೆ !

ಸಿದ್ದಾಪುರ— (ತಾ [illegible]) [illegible]

[illegible]

[[illegible] —ಸಂಪಾದಕ]

[illegible]

[illegible]

(ಮುಂದೆ ೩ನೇ ಪುಟ ನೋಡಿರಿ)

ಆಜ್ಞೆ.

ನಂ ೫೯
ಕಾನಡಾ ಜಿಲ್ಹಾ ಮೆಜಿಸ್ಟ್ರೇಟರ ಕಚೇರಿ,
ಕಾರವಾರ, ತಾ [illegible]

[illegible] P 110 [illegible]

M Allahbaksh
ಜಿಲ್ಹಾ ಮೆಜಿಸ್ಟ್ರೇಟ್, ಕಾನಡಾ

ನಮ್ಮ ಪವಿತ್ರ
ಗಣಪತಿ ಹಬ್ಬಕ್ಕೆ ಶ್ರೇಷ್ಠ, ಪವಿತ್ರ
ಅಗರಬತ್ತಿಗಳನ್ನು ಉಪಯೋಗಿಸಿ.
ಪೃಥ್ವಿರಾಜ ಅಗರಬತ್ತಿ
ಮಹಾವೀರ ಅಗರಬತ್ತಿ
[illegible] ಸ್ಪೆಶಲ್ ಸುವಾಸನೆ,
ಬಹಳ ಆನಂದವಾಗಿವೆ
ಚಿತ್ರರಂಜನ ಕಂಪನಿ, ಸಂತೇಪೇಟೆ, [illegible]

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.
ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲಾಜಿಂಗ
ದಿ
ಕೆನರಾ ಲಾಜ
[ಊಟ ಮತ್ತು ವಸತಿಗೃಹ]
ಮೋಟರ–ಸ್ಟೆಂಡ, ಹುಬ್ಬಳ್ಳಿ.
ಮಾಲಿಕ – ವಿಠ್ಠಲಪ್ಪಾ ಶೈ.

The Area Rationing Authority, Karnatak Region, Belgaum.

NOTICE.

To

All the Motor Vehicle Owners in the Karnatak Region (including the merged States viz: Sangli, Miraj Sr., Miraj Jr., Jamkhandi, Jath, Ramdurg, Mudhol, Savanur, Kurandwad Sr. Kurandwad Jr., and Wadi Jahagir)

Subject. Issue of Petrol Ration for July August & September 1949 quarter.

Basic petrol ration for July, August and September 1949 quarter will be issued at the following centres on the dates and at the places shown against each centre :—

Dist	Centre	Location	Date	Time
Dharwar	Hubli	Traveller's Bungalow, Hubli.	25—6—49 to 28—6—49	11-30 a. m. to 4 p. m.
Karwar.	Karwar.	Dist. Bungalow, Karwar	30—6—49 and 1—7—49	-do-
Bijapur.	Bijapur	Traveller's Bungalow, Bijapur,	30—6—49 and 1—7—49	-do-
Sangli.	Sangli.	-do- , Sangli,	26—6—49 to 28—6—49	-do
Belgaum.	Belgaum	A. R. A.'s Office from 27—6—49 onwards.		11 a. m. to 3 p. m.

Petrol ration will be issued even if the tax for the ensuing quarter July-September 1949 has not been paid at the time of issue of coupons, but the coupons shall be returned to this office in full if tax is not paid by the 15th of July 1949. Extra-provincial vehicles will, however, obtain their ration after payment of tax.

Vehicles bearing State registration marks will not be entitled for their ration unless such vehicle owners re-register their vehicles under regional numbers.

The prescribed application forms can be had from each distribution centre or from the office of the Area Rationing Authority, Belgaum.

Regarding submission of applications for issue of ration, the following procedure should, invariably be followed :—

(*a*) **Cars, Motor Cycles & Motor Boats:—** Applications in form H signed by the registered owners should be accompanied by the registration certificate (and certificate of Survey in the case of motor boats), without these, no applications will be accepted.

(*b*) **Goods vehicles (on petrol) and Taxi cabs:—** Applications in form H signed by the registered owners should be submitted together with a true copy of the log account of April, May and June 1949 quarter, duly signed by the registered owners, registration certificate(s), Certificate(s) of fitness and permit(s).

(*c*) **Goods vehicles on Producer gas plants :—** Applications as in para (b) above, along with the valid Producer gas plant certificate(s).

(*d*) **Stage Carriages :—** Applications in form I (giving particulars of all routes and trips allotted) should be submitted together with valid 'A' part of the permit, copy of the log account for the quarter ending 30-6-49 duly signed by the Managing Director of the Company or a responsible person of the company, Certificate(s) of Fitness, P. G. P. Certificate(s), if the vehicles are fitted with P. G. Ps.

(*e*) **Trade Numbers :—** Ration for trade numbers will be issued at the head office at Belgaum only. Application in form 'J' should be submitted together with the registration certificate and copy of the log account (in the prescribed form) for the April-June 1949 quarter.

Applications by post received at the Camp Office will not be considered and will only receive attention after the return of the camp offices to headquarters.

Issue of supplementary coupons for cars and motor cycles and special coupons for Police and Local bodies will not be made at Camp offices. Applications in form K and G respectively together with registration certificates and log account should be made to the Area Rationing Authority, Belgaum.

Applications signed by persons other than registered owners shall not be accepted under any circumstances. Persons deputed by the registered owners for receiving coupons on their behalf will carry an authority letter from the owners and in no cases, these deputees be allowed, as stated above, to sign for the owners on the application forms.

This Office will not be responsible for any impersonation.

No. P. R. O.-2637 of 1949
Area Rationing Office, K. R.,
Belgaum, 18th June, 1949

D. K. SUKHTANKAR, Capt.
AREA RATIONING AUTHORITY,
Karnatak Region, B E L G A U M

ಜಾಹೀರನಾಮೆ.

ಕಾನಡಾ ಜಿಲ್ಲಾ ಲೋಕಲ್ ಬೋರ್ಡ ಕಚೇರಿಯಿಂದ—

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಸುವದರಲ್ಲಿ ಬರುತ್ತದಲ್ಲಾ ಏನಂದರೆ :—

ಈ ಕೆಳಗೆ ನಮೂದಿಸಿರುವ ಲೋಕಲ್‌ಬೋರ್ಡ ಕಾಮಗಾರಿಗಳನ್ನು ಕಂಟ್ರಾಕ್ಟಿಗೆ ಕೊಡತಕ್ಕದ್ದಿರುತ್ತದೆ ಸದರಿ ಕಾಮಗಾರಿಗಳನ್ನು ಕಂಟ್ರಾಕ್ಟಿಗೆ ಪಡೆಯಲಿಚ್ಛಿಸುವವರು ಇದೇ ಬರುವ ತಾ. ೭—೭—೧೯೪೯ನೇ ಗುರುವಾರ ಮಧ್ಯಾನ್ಹ ೧೨ ಘಂಟೆಯೊಳಗೆ ಈ ಕೆಳಗೆ ಸಹಿ ಮಾಡುವವರ ಕಚೇರಿಯಲ್ಲಿ ಮುಟ್ಟುವಂತೆ ಮೋಹರಬಂದ ಮಾಡಿದ ಟೆಂಡರುಗಳನ್ನು ಕಂಟ್ರಾಕ್ಟ ರಕಮಿನ ಮೇಲೆ ಶೇಕಡಾ ೧-೦-೧ ರಂತೆ "ಅರ್ನೆಸ್ಟ ಮನಿ" ಸಹಿತ ತಂದುಕೊಡಬೇಕು ಅವನ್ನು ಈ ಕೆಳಗೆ ಸಹಿ ಮಾಡುವವರು ತಾ. ೭—೭—೧೯೪೯ನೇ ಗುರುವಾರ ಸಾಯಂಕಾಲ ೫ ವೇಳೆಗೆ ಒಡೆದು ಅವಶ್ಯವಾದ ಮಂಜೂರಿಯು ಬಗ್ಗೆ ಕಾನಡಾ ಜಿಲ್ಲಾ ಲೋಕಲ್ ಬೋರ್ಡಿನ ಸ್ಟೆಂಡಿಂಗ ಕಮಿಟಿ ವ ಜನರಲ್ ಮೀಟಿಂಗಿನ ಮುಂದೆ ಇಡುವರು ಟೆಂಡರ ಕೊಟ್ಟವರ ಕಂಟ್ರಾಕ್ಟ ಮಂಜೂರ ಮಾಡುವದು ಯಾ ಬಿಡುವದು ಸ್ಟೆಂಡಿಂಗ ಕಮಿಟಿ ವ ಬೋರ್ಡಿನವರ ಅಧಿಕಾರಕ್ಕೆ ಒಳಪಟ್ಟಿದ್ದಿರುವದು. ನಾಮಂಜೂರ ಮಾಡಿದ ಅರ್ಜಿಯ ಬಾಬತು ಕಾರಣ ತಿಳಿಸಲಿಕ್ಕೆ ಅವರು ಒಪ್ಪದಾಗಲಿಕ್ಕಿಲ್ಲ ಕಾಮಗಾರಿ ಮಂಜೂರಾದ ಕೂಡಲೆ ಮಂಜೂರಾದ ಟೆಂಡರ-ಅರ್ಜದಾರರಿಗೆ ತಿಳಿಸಲಾಗುವದು. ವ ಅವರು ಶೇಕಡಾ ೧೦—೦—೦ರಂತೆ ಆಗುವ ಸೆಕ್ಯೂರಿಟಿ ಡಿಪೋಜಿಟ ರಕಮನ್ನು ಮಂಜೂರಿಯ ಹುಕುಂ ತಲ್ಪಿದ ೭ ದಿವಸಗಳೊಳಗೆ ಹಾಜರ ಮಾಡಬೇಕು ಮತ್ತು ಸ್ಟಾಂಪ ಕಾಗದದ ಮೇಲೆ ಕಾಯಿದೇಶೀರ ಕರಾರು ಪತ್ರ ಬರಕೊಡತಕ್ಕದ್ದು ಇದಕ್ಕೆ ತಪ್ಪಿದಲ್ಲಿ ಅಂಥವರ ಟೆಂಡರು ಕೂಡಲೇ ರದ್ದು ಮಾಡಲಾದೀತು ಮತ್ತು ಕಟ್ಟಿದ ಅರ್ನೆಸ್ಟ ಮನಿ ಫೊರಫೀಟ ಮಾಡಲಾದೀತು.

ಪ್ಲೆನ ಎಸ್ಟಿಮೇಟ ವ ಕರಾರ ಶರ್ತ ವಗೈರೆ ಬೇಕಾದ ಮಾಹಿತಿಯನ್ನು ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಇಂಜಿನಿಯರರ ಕಚೇರಿಯಲ್ಲಿ ಯಾ ಸಂಬಂಧಪಟ್ಟ ಆಯಾ ಲೋಕಲ್ ಬೋರ್ಡ ಡಿವ್ಹಿಜನಲ್ ಓವ್ಹರಸೀಯರರ ಕಚೇರಿಯಲ್ಲಿ ನೋಡಿಕೊಳ್ಳಬಹುದು.

ಕಾಮಗಾರಿಗಳ ವಿವರ:—

ನಂ.	ಕಾಮಗಾರಿಗಳ ಹೆಸರು	ಎಸ್ಟಿಮೇಟಿನ ಪೂರ್ಣ ರಕಂ
	ಕಾರವಾರ ಡಿವ್ಹಿಜನ.	
	ಕಾರವಾರ ತಾಲೂಕ	
೧	ಸೇಜವಾಡ-ಸಿದ್ದರ ರಸ್ತೆ ಮೈಲ ನಂಬರ ೮/೮ರಲ್ಲಿ ಹೊಸದಾಗಿ ಡ್ರೇನ ಕಟ್ಟುವದು ವ ಅದೇ ರಸ್ತೆ ಮೈಲ ನಂಬರ ೮/೮ ವ ೯/೧ರಲ್ಲಿ ಸ್ಪೆ. ರಿ.	೧೮೫೮
೨	ಅಂಗಡಿ ಚಿತಾಕುಲಾ ರಸ್ತೆ ಮೈಲ ನಂಬರ ೦/೮ ವ ೧/೧ರಲ್ಲಿ ದುರಸ್ತಿಸಿದ ಖಡಿ ಪಸರ್‍ಯಾಸುವದು.	೮೨೮
೩	ಮಲ್ಲಾಪುರ-ಇಡಗುಂದಿ ರಸ್ತೆ ಮೈಲ ನಂಬರ ೧೬/೫ರಲ್ಲಿ ಕಟ್ಟಿಗೆ ಮುಚ್ಚಳದ ಮೋರಿಯ ಸ್ಪೆ. ರಿ. ..	೧೭೮೦
೪	ಶೇಜವಾಡ ಕೆರಿಯೊಳಗಿನ ಕೆಸರು ತೆಗೆದು ದುರುಸ್ತ ಮಾಡುವದು. (ವ್ಹಿಲೇಜ ವಾಟರ ಸಪ್ಲಾಯ ಕಾಮಗಾರಿ).	೬೩೨೧
೫	ಮಲ್ಲಾಪುರ-ಇಡಗುಂದಿ ರಸ್ತೆ ಮೈಲ ನಂಬರ ೨/೨ರಲ್ಲಿ ಧಾವೆ ಕಲ್ಲಿನ ಮೋರಿ ಸ್ಪೆ. ರಿ. ...	೧೬೫
೬	ಕೋಡಿಬಾಗ ಶೇಜವಾಡ ರಸ್ತೆ ಮೈಲ ನಂಬರ ೦/೭ರ ರಟೇನಿಂಗ ವ್ಹಾಲದ ಸ್ಪೆ. ರಿ. .	೭೦
೭	ಮಲ್ಲಾಪುರ ಇಡಗುಂದಿ ರಸ್ತೆ ಮೈಲ ನಂಬರ ೯/೬ರಲ್ಲಿ ಕಲ್ವರ್ಟದ ಸ್ಪೆ. ರಿ. ..	೨೩೫೦
೮	ಸದರ ರಸ್ತೆ ಮೈಲ ನಂಬರ ೨/೨ರಲ್ಲಿ ಕಲ್ವರ್ಟದ ಸ್ಪೆ. ರಿ.	೬೭೦
೯	ಮಾಜಾಳಿ ಅಸನೋಟಿ ರಸ್ತೆ ಮೈಲ ನಂಬರ ೧/೩ ರಿಂದ ೧/೭ರಲ್ಲಿ ಸ್ಪೆ. ರಿ.	೪೧೬೦
೧೦	ಸೇಜವಾಡ ಸಿದ್ದರ ರಸ್ತೆ ಮೈಲ ನಂಬರ ೨/೬ ವ ೨/೭ರಲ್ಲಿ ಸ್ಪೆ. ರಿ. ..	೧೨೩೦
೧೧	ನಂದನಗದ್ದಾ ಸುಂಕೇರಿ ರಸ್ತೆ ಮೈಲ ನಂಬರ ೦/೧ರಿಂದ ೦/೩ರ ವರೆಗೆ ಸ್ಪೆ. ರಿ.	೨೫೬೦
೧೨	ಮಾಜಾಳಿ ಅಸನೋಟಿ ರಸ್ತೆ ಮೈಲ ನಂಬರ ೧/೮ ರಿಂದ ೨/೪ ರಲ್ಲಿ ಸ್ಪೆ. ರಿ.	೪೯೨೫
	ಅಂಕೋಲಾ ತಾಲೂಕ	
೧೩	ಕೇಣಿ ಕುಮುಟಾ ಕೋಸ್ಟ ರಸ್ತೆ ಮೈಲ ನಂಬರ ೧೭/೫ರಲ್ಲಿ ಖಡಿ ಪಸರಾಯಿಸುವದು.	೮೨೩
೧೪	ಅಂಕೋಲಾ ಬೊಬ್ರುವಾಡಾ ರಸ್ತೆ ಮೈಲ ನಂಬರ ೦/೬ ವ ೦/೮ರಲ್ಲಿ ಖಡಿ ಪಸರ್‍ಯಾಸುವದು.	೨೮೦
೧೫	ಅಂಕೋಲಾ ಹಿಚಕಡ ರಸ್ತೆ ಮೈಲ ನಂಬರ ೦/೬ ವ ೦/೪ರಲ್ಲಿ ಖಡಿ ಪಸರ್‍ಯಾಸುವದು ..	೪೩೦
೧೬	ಅಗಸೂರ ಗುಂಡಬಾಳಾ ರಸ್ತೆ ಮೈಲ ನಂಬರ ೨/೫ರಲ್ಲಿ ಮೋರಿ ತಿರುಗಿ ಕಟ್ಟುವದು	೧೫೩೦
೧೭	ಕೇಣಿ ಕುಮಟಾ ಕೋಸ್ಟ ರಸ್ತೆ ಮೈಲ ನಂಬರ ೧೭/೫ ರಲ್ಲಿ ಸಂಕದ ಹಳ್ಳ ಕಾಲು ಸಂಕದ ಸ್ಪೆ. ರಿ.	೧೦೪೦
೧೮	ಬೆಳ್ಸೆ ಚಂದುಮಠ ರಸ್ತೆ ಮೈಲ ನಂಬರ ೦/೭ರಲ್ಲಿ ಡ್ರೇನದ ಸ್ಪೆ. ರಿ. ..	೬೦೩
೧೯	ವೆಂಕಟ್ರಮಣ ದೇವಸ್ಥಾನ ರಸ್ತೆ ಜಂಕ್ಷನದಲ್ಲಿ ಅರ್ಧವಟ್ ಆದ ಮೋರಿ ಪೂರ್ಣಪಡಿಸುವದು	೯೦೦
೨೦	ನಾರಾಯಣ ದೇವಸ್ಥಾನ ರಸ್ತೆ ಜಂಕ್ಷನದಲ್ಲಿ ಆಯರಿಶ ಡ್ರೇನ ಕಟ್ಟುವದು .	೨೨೦
	ಕೂಪಾ ಪೇಠಾ	
೨೧	ಶೆಂಪೊಳ್ಳಿ ಶಿರ್ಸಿ ರಸ್ತೆ ಮೈಲ ನಂಬರ ೭ರಿಂದ ೧೦ರ ವರೆಗಿನ ಭಾಗದಲ್ಲಿ ಡಬ್ಬಲ್ ಗಟಾರ (ಕೆಚವ್ಹಿಟೆಂ ಡ್ರೇನ್ಸ) ತಯಾರಿಸುವದು .	೭೩೨
೨೨	ಜನಲಬೇಟ ಸ್ಪ್ರಿಂಗದ ಸ್ಪೆ. ರಿ.	೬೬೮
೨೩	ಜಗಲಬೇಟ ರಸ್ತೆಯ ಸ್ಪೆ. ರಿ. ..	೨೭೫೦
೨೪	ಶೆಂಪೊಳ್ಳಿ ಶಿರ್ಸಿ ರಸ್ತೆ ಮೈಲ ನಂಬರ ೭ರಲ್ಲಿ ಕಟ್ಟಿಗೆ ಮುಚ್ಚಳದ ಮೋರಿಯ ಸ್ಪೆ. ರಿ. .	೯೪೯೦
೨೫	ಕುಂಬಾರವಾಡಾ ಉಳ್ವಿ ರಸ್ತೆ ಮೇಲೆ ಗಾರ್ಡ-ಸ್ಟೋನ್ಸಗಳನ್ನು ಹುಗಿಯುವದು	೧೨೬೦
೨೬	ಸುಪಾ ಕಂಪೌಂಡರರ ಕ್ವಾರ್ಟರ್ಸದ ಸ್ಪೆ. ರಿ.	೩೧೭೫
	ಹೊನ್ನಾವರ ಡಿವ್ಹಿಜನ.	
	ಕುಮುಟಾ ತಾಲೂಕ	
೨೭	ಕುಮುಟಾ ಸಿದ್ದಾಪುರ ರಸ್ತೆ ಮೈಲ ನಂಬರ ೧೦ ೬ನೇದರಲ್ಲಿ ಕಲ್ವರ್ಟದ ಸ್ಪೆ. ರಿ.	೬೦೫
೨೮	ಸದರ ರಸ್ತೆ ಮೈಲ ನಂಬರ ೧ ೧ರಲ್ಲಿ ಡಿ ಡಿ	೩೫೮
೨೯	ಕುಮುಟಾ ಮೂರೂರ ರಸ್ತೆ ಮೈಲ ನಂಬರ ೯ ೧ರಲ್ಲಿ ಪೂಲಿನ ಸ್ಪೆ. ರಿ.	೮೧೦
೩೦	ಕೇಣಿ ಕುಮುಟಾ ಕೋಸ್ಟ ರಸ್ತೆ ಮೇಲೆ ಸಾಣಿಕಟ್ಟಾ ಮತ್ತು ತದಡಿಗಳ ನಡುವೆ ರಸ್ತೆ ಸ್ಪೆ. ರಿ. .	೭೦೦
೩೧	ಡಿ ಡಿ ಡಿ	೧೩೦೦
೩೨	ಸದರ ರಸ್ತೆ ಮೈಲ ನಂಬರ ೨೨ ೭ರಿಂದ ೨೪ ೧ರ ನಡುವೆ ಸ್ಪೆ. ರಿ. .	೨೩೪೦

೩೩	ಬಗ್ರೋಣ ಊರಕೇರಿ ರಸ್ತೆ ಮೈಲ ನಂಬರ ೦/೭ ರಲ್ಲಿ ಪೂಲಿನ ಸ್ಟೆ. ರಿ.	೩೯೫೫
	ಹೊನ್ನಾವರ ತಾಲೂಕ	
೩೪	ಕತಗಾಲ ಹೊನ್ನಾವರ ರಸ್ತೆ ಮೇಲೆ ನೀಲಕೋಡ ಘಟ್ಟದಂಭಾಗ ಸುಧಾರಿಸುವದು ..	೨೫೦೦
೩೫	ಸದರ ರಸ್ತೆ ಮೈಲ ನಂಬರ ೯/೬ ರಲ್ಲಿ ಕಲ್ವರ್ಟದ ಸ್ಪೆ. ರಿ.	೩೦೦
೩೬	ಸದರ ರಸ್ತೆ ಮೈಲ ನಂಬರ ೧೧/೨ ರಲ್ಲಿ ಡಿ ಡಿ. ..	[illegible]
೩೭	ಸದರ ರಸ್ತೆ ಮೇಲಿನ ಚಂದಾವರ ಕೊಜವೇ ಸ್ಪೆ. ರಿ.	೧೦೦೦
೩೮	ಕಡತೋಕಾ ನವಿಲಗೋಣ ರಸ್ತೆ ಮೈಲ ನಂಬರ ೦/೮ ರಲ್ಲಿ ಕಟ್ಟಿಗೆ ಮುಚ್ಚಳದ ಮೋರಿಯು ಸ್ಪೆ. ರಿ.	೫೩೦
೩೯	ಡಿ ಡಿ ೦/೫ ರಲ್ಲಿ ಡಿ ಡಿ	೭೨೩
೪೦	ಕೆರೆಕೋಣ ಹೆಬ್ಬಾನಕಾನ ರಸ್ತೆ ಮೈಲ ನಂಬರ ೨/೧ ರಲ್ಲಿ ಕಟ್ಟಿಗೆ ಮುಚ್ಚಳದ ಮೋರಿ ಸ್ಪೆ. ರಿ.	೯೦೦
೪೧	ಹೊಸಾಕುಳಿ ಸಾಲಕೋಡ ರಸ್ತೆ ಮೈಲ ನಂಬರ ೧/೨ ರಲ್ಲಿ ಮೋರಿಯು ಸ್ಪೆ. ರಿ. ..	೩೬೩
೪೨	ಕತಗಾಲ ಹೊನ್ನಾವರ ರಸ್ತೆ ಮೈಲ ನಂಬರ ೯/೭, ೯/೬ ವ ೯/೫ ರಲ್ಲಿ ಖಡಿ ಹಾಕುವದು	೨೧೩೦
೪೩	ಗೇರಸಪ್ಪಾ ವಿಲೇಜ ರಸ್ತೆಯು ಸ್ಪೆ. ರಿ. ..	೩೨೨
೪೪	ಹೆಬ್ಬಾರನಕೇರಿ ಸಾಂತಗಲ ರಸ್ತೆ ಮೈಲ ನಂಬರ ೧/೭ನೇದರಲ್ಲಿ ಕಟ್ಟಿಗೆ ಮುಚ್ಚಳದ ಮೋರಿ ಸ್ಪೆ. ರಿ.	೬೦೬
೪೫	ಕೆಕ್ಕಾರ ಜಡ್ಡಿಗದ್ದೆ ರಸ್ತೆ ಮೈಲ ನಂಬರ ೦/೫ ರಲ್ಲಿ ಕಟ್ಟಿಗೆ ಮುಚ್ಚಳದ ಮೋರಿ ಸ್ಪೆ. ರಿ. ...	೯೧೦
	ಭಟಕಳ ಪೇಠಾ	
೪೬	ಪಟ್ಟಿಹಕ್ಕಲ ಕಟಗಾರ ರಸ್ತೆ ಮೈಲ ನಂಬರ ೦/೧ರಿಂದ ೧/೮ರವರೆಗೆ ರಸ್ತೆ ಸುಧಾರಿಸುವದು....	೩೯೦೨
	ಸಿದ್ದಾಪುರ ತಾಲೂಕ	
೪೭	ಸಿದ್ದಾಪುರ ಮಂಕಿಬೈಲ ರಸ್ತೆ ಮೈಲ ನಂಬರ ೨೩/೨ರಲ್ಲಿ ಮೋರಿಯು ಸ್ಪೆ. ರಿ.	೩೯೧೫
೪೮	ಡಿ ೨೨/೩ ಡಿ ಡಿ	೧೬೦೫
೪೯	ಡಿ ೨೦/೬ ಡಿ ಡಿ	೩೦೮೫
೫೦	ಡಿ ೧೧/೫ ಡಿ ಡಿ	೩೨೩೨
೫೧	ಡಿ ೧೪/೬ ಡಿ ಡಿ	೪೨೦೪
೫೨	ಡಿ ೧೭/೪ ಡಿ ಡಿ	೯೧೭
೫೩	ಸದರ ರಸ್ತೆ ಮೈಲ ನಂಬರ ೮ ವ ೧೪ರಲ್ಲಿ ಖಡಿ ಹಾಕುವದು	೬೦೨೬
೫೪	ಮಾವಿನಗುಂಡಿ ಧರ್ಮಶಾಲೆ ಇಮಾರತಿಯು ಸ್ಪೆ. ರಿ.	೨೧೯೨
	ಶಿರಸಿ ತಾಲೂಕ	
೫೫	ಬನವಾಸಿ ಮಳಗಿ ರಸ್ತೆ ಮೈಲ ನಂಬರ ೧/೬ ರಲ್ಲಿ ಹಾಡಲಗಿ ಕೆರೆ ಹತ್ತರ ಸ್ಪೆ. ರಿ.	೧೧೬೫
೫೬	ಕೊಳಗಿಬೀಸ ಹೇರೂರ ರಸ್ತೆ ಮೈಲ ನಂಬರ ೪/೬ ವ ೫/೮ ರಲ್ಲಿ ಡಿಪ್ಪುಗಳ ಸ್ಪೆ. ರಿ.	೧೩೮
೫೭	ಹಲಸಗಿ ಬಸ್ಸವಳ್ಳಿ ರಸ್ತೆಯು ಸ್ಪೆ. ರಿ.	೧೦೦೦
೫೮	ಬನವಾಸಿ ಮಳಗಿ ರಸ್ತೆ ಮೈಲ ನಂಬರ ೩/೪, ೬/೩ರ ಸ್ಪೆ. ರಿ.	೮೭೦
೫೯	ಸಂಪಖಂಡ ಬಾವಿಯು ಸ್ಪೆ. ರಿ.	೩೬೦
೬೦	ರಾಗಿಹೊಸಳ್ಳಿ ಬಾವಿಯ ಸ್ಪೆ. ರಿ.	೪೮೦
೬೧	ದೇಗಡೆಕಟ್ಟಾ ಬಾವಿಯು ಸ್ಪೆ. ರಿ.	೧೨೨
೬೨	ಖುರ್ಸೆ ಬಾವಿಯು ಸ್ಪೆ. ರಿ.	೧೬೩
೬೩	ಅಮ್ಮಿನಳ್ಳಿ ಸಿಲಕುಂದ ರಸ್ತೆ ಸ್ಪೆ. ರಿ.	೧೦೦
	ಹಳಿಯಾಳ ಡಿವ್ಹಿಜನ	
	ಮುಂಡಗೋಡ ತಾಲೂಕ	
೬೪	ಮುಂಡಗೋಡ ಅಂಗಡಿ ರಸ್ತೆ ಮೈಲ ನಂಬರ ೬/೫ರಲ್ಲಿ ಹ್ಯೂಮ ಪ್ಯಾಪ ಡ್ರೇನ ಕಟ್ಟುವದು (ಹ್ಯೂಮ ಪ್ಯಾಪ ಖರೀದಿಸಿವ್ಹಾ) ...	೫೪೦
೬೫	ಮಳಗಿ ಬದನಗೋಡ ರಸ್ತೆ ಮೇಲೆ ದಾಸ್ತಾನಿಸಿದ ಖಡಿ ಹಸರ್ಲ್ಯಾಸುವದು.....	೭೫೦
೬೬	ಮುಂಡಗೋಡ ಅಂಗಡಿ ರಸ್ತೆ ಮೈಲ ನಂಬರ ೪/೨ರಲ್ಲಿ ಸ್ಲಬ ಡ್ರೇನದ ಸ್ಪೆ. ರಿ.	೮೦೦
೬೭	ಗುಂಜಾವತಿ ಧರ್ಮಶಾಲೆ ಇಮಾರತಿಯು ಸ್ಪೆ. ರಿ.....	೧೮೪೦
	ಯಲ್ಲಾಪುರ ತಾಲೂಕ.	
೬೮	(ಅ) ಯಲ್ಲಾಪುರ ಶಹರದೊಳಗಿನ ಮುಖ್ಯ ಲ್ಯಾನ ಗಲ್ಲಿ ರಸ್ತೆ ಜರೂರ್‍ಯಾತ ರಿಪೇರಿ.	೧೬೬೦
	ಹಳಿಯಾಳ ತಾಲೂಕ	
೬೮	ಮಂದನಳ್ಳಿ ರಸ್ತೆ ಮೈಲ ನಂಬರ ೦/೧ ರಲ್ಲಿ ದಾಸ್ತಾನಿಸಿದ ಖಡಿ ಪಸರಾಯಿಸುವದು.	೩೯೮
೬೯	ಹವಗಿ ರಸ್ತೆಯು ಮೇಲೆ ದಾಸ್ತಾನಿಸಿದ ಖಡಿ ಪಸರಾಯಿಸುವದು.	೨೯೬
೭೦	ದಾಸಗಿ ರಸ್ತೆ ಮೈಲ ನಂಬರ ೦/೩ ವ ೦/೪ ರಲ್ಲಿ ಖಡಿ ಪಸರಾಯಿಸುವದು.	೭೨೦
೭೧	ಹಳಿಯಾಳ ಕಾವಲವಾಡ ರಸ್ತೆ ಮೈಲ ನಂಬರ ೨ ೩ ೫/೪, ೭/೧ ವ ೭/೨ ರಲ್ಲಿ ದಾಸ್ತಾನಿಸಿದ ಖಡಿ ಪಸರಾಯಿಸುವದು.	೧೧೫೬
೭೨	ಹಳಿಯಾಳ ಕಾವಲವಾಡ ರಸ್ತೆ ಮೈಲ ನಂಬರ ೦/೪ರಿಂದ ೦/೭ ವರೆಗೆ ದಾಸ್ತಾನಿಸಿದ ಖಡಿ ಪಸರಾಯಿಸುವದು.	೬೮೨
೭೩	ಸದರ ರಸ್ತೆ ಮೈಲ ನಂಬರ ೫/೩ ವ ೫/೪ ರಲ್ಲಿ ಗಾರ್ಡ ಸ್ಟೋನ್‍ನ ಹಚ್ಚುವದು.....	೬೯೮
೭೪	ತೇರಗಾಂವ ರಸ್ತೆ ಸ್ಪೆ. ರಿ.....	೮೦೦
೭೫	ಮುತ್ತಲಮುರಿ ರಸ್ತೆಯು ಸ್ಪೆ. ರಿ.	೬೫೪
೭೬	ಹಳಿಯಾಳ ಸಾತಮನೆ ರಸ್ತೆಯು ಸ್ಪೆ. ರಿ.	೧೯೧೩

KARWAR,
22—6—49.

V. K. B. Balkur,
PRESIDENT,
D. L. B. Kanara.

NOTICE.

Offers are invited from persons having previous experience in the business, for running a hotel or restaurant at Jog in Siddapur Taluka, North Kanara District, at their own cost in a temporary structure to be provided by Government on a nominal rent, for the purpose. A copy of the conditions and any further particulars required can be had free of cost on written application. Applications giving particulars as to ability, experience etc., should reach the Undersigned not later than 31st August 1949.

No. Kan. 20/CB.
Office of the Ex. Engr., Kan. Dn.,
Karwar, 2 st June, 1949.

G N. GODSE,
Executive Engineer,
Kanara Division,

WANTED.

Immediately a graduate competent to teach Kannad and History to the Higher Classes in the Hindu High School, Karwar. Retired trained Kannad Primary-School teachers may also apply.

Chairman,
Karwar Education Society.
23—6—49. **Karwar**

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ(ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

1949-50

—[Star of Kanara Press, Kumta.]—

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ರೂ. ೩|
ಅಂಚೆಯಿಂದ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ವ್ಹಿ. ಪಿ.ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳ್ಹಿಸತಕ್ಕದ್ದು.

Reg. No. B. 1270. Monday, 4-7-1949.

ಕಾನಡಾವೃತ್ತ

ವರ್ಷ ೩೭.] **THE KANARA NEWS.** [ಸಂಚಿಕೆ ೧.

ಕುಮಟಾ:- ಸೋಮವಾರ, ತಾ. ೪—೭—೧೯೪೯.

ಜಾಹೀರಾತುಗಳ ದರ
೧೫ ಎಮ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಅಥವಾ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಥವಾ ಪತ್ರದ್ವಾರಾ
ತಿಳಿಸಲಾಗುವದು.

ವಿವಿಧ ವಿಷಯಗಳು

ಸಂಯುಕ್ತ ಪ್ರಾಂತಗಳ ಶಾಸನ ಸಭೆಯ ಅಧ್ಯಕ್ಷರಾಗಿರುವ ಶ್ರೀ|| ಪುರುಷೋತ್ತಮ ದಾಸ ಟಂಡನ ಇವರು ಕಾಂಗ್ರೆಸ್ಸಿಗರಿಗೂ ಇನ್ನಿತರ ಸಾರ್ವಜನಿಕ ಕಾರ್ಯಕರ್ತರಿಗೂ ಒಂದು ಉಜ್ವಲ ಉದಾಹರಣೆಯನ್ನು ಹಾಕಿಕೊಟ್ಟಿದ್ದಾರೆ. ಭಾರತ ಸರಕಾರಕ್ಕೆ ಬೇಕಾಗುವ ನೌಕರರನ್ನು ಆರಿಸಿಕೊಡುವ ಕಾರ್ಯವನ್ನು ಸರಕಾರದವರ "ಪಬ್ಲಿಕ್ ಸರ್ವಿ್ಹಸ ಕಮಿಶನ್" ಎಂಬ ಮಂಡಳವು ಮಾಡುತ್ತದೆಂಬುದನ್ನು ಓದುಗರು ಅರಿತಿರಬಹುದು. ಯಾವದೊಂದು ಉಚ್ಚ ನೌಕರಿಯ ಸ್ಥಳವನ್ನು ತುಂಬುವದಾದರೆ ಈ ಮಂಡಳದವರು ಜಾಹೀರ ಪ್ರಕಟನೆಯನ್ನು ಹೊರಡಿಸಿ, ಉಮೇದವಾರರ ಅರ್ಜಿಗಳನ್ನು ಬರಮಾಡಿಕೊಳ್ಳುತ್ತಾರೆ. ಪ್ರಕಟನೆಯಲ್ಲಿ ಉಮೇದವಾರರೊಳಗೆ ಇರಬೇಕಾದ ಶೈಕ್ಷಣಿಕ ಯಾ ಇತರ ಪಾತ್ರತೆಗಳ ಉಲ್ಲೇಖವಿರುತ್ತದೆ. ಕೆಲವು ದಿನಗಳ ಹಿಂದೆ ಹೀಗೆಯೇ ಒಂದು ಸ್ಥಳಕ್ಕಾಗಿ ಅರ್ಜಿಗಳನ್ನು ಕರೆಯುವಾಗ ಉಮೇದವಾರರು ಪ್ರಥಮ ತರಗತಿಯಲ್ಲಿ ಎಮ್. ಎ. ಪರೀಕ್ಷೆ ಉತ್ತೀರ್ಣರಾದವರಿರಬೇಕೆಂದು ಮಂಡಳದವರು ತಮ್ಮ ಪ್ರಕಟನೆಯಲ್ಲಿ ಸ್ಪಷ್ಟವಾಗಿ ನಮೂದಿಸಿದ್ದರು. ಶ್ರೀ|| ಟಂಡನರವರ ಚಿರಂಜೀವನೊಬ್ಬನು ಆ ಸ್ಥಳಕ್ಕಾಗಿ ಅರ್ಜಿ ಕಳಿಸಿದ್ದನಂತೆ. ಆದರೆ ಅವನು ಎಮ್. ಎ. ಪರೀಕ್ಷೆಯಲ್ಲಿ ೨ನೇ ತರಗತಿಯೊಳಗೆ ತೇರ್ಗಡೆಯಾದವನಾಗಿದ್ದನು. ಮಂಡಳದವರು ನಮೂದಿಸಿದ ಶೈಕ್ಷಣಿಕ ಪಾತ್ರತೆ ಅವನಲ್ಲಿದ್ದಿಲ್ಲ. ಆದರೂ ಶ್ರೀ|| ಟಂಡನರ ಮಗನೆಂಬ ದೊಡ್ಡ ಪಾತ್ರತೆ ಅವನಲ್ಲಿತ್ತಲ್ಲವೇ! ಅವನ ಅರ್ಜಿಯನ್ನು ಕಡೆಗಣಿಸುವದು ಹೇಗೆಂದು ಮಂಡಳದವರಿಗೆ ಪೇಚು ಬಿತ್ತು! ಮತ್ತು ಆ ಅರ್ಜಿಯನ್ನು ಸ್ವೀಕರಿಸಲು ಅನುಕೂಲವಾಗಬೇಕೆಂದು ಮಂಡಳದವರು ತಮ್ಮ ನಿಯಮವನ್ನೇ ಸ್ವಲ್ಪ ಬದಲಿಸಲು ತಯಾರಾದರು! ಈ ಸುದ್ದಿ ಹೇಗೋ ಶ್ರೀ|| ಟಂಡನರ ಕಿವಿಗೆ ಮುಟ್ಟಿತು. ಆಗ ಇವರು ಮಂಡಳಕ್ಕೆ ಪತ್ರ ಬರೆದು, ನಿರ್ದಿಷ್ಟ ಶೈಕ್ಷಣಿಕ ಪಾತ್ರತೆಯಿಲ್ಲದ ತಮ್ಮ ಚಿರಂಜೀವನಿಗೆ ಮಂಡಳದವರು ಆರಿಸಕೂಡದೆಂದೂ, ಆರಿಸಿದರೆ ಅದೊಂದು ಕಾನೂನ-ವಿರುದ್ಧ ಕೃತ್ಯವಾಗುವದೆಂದೂ ಎಚ್ಚರಿಕೆ ಕೊಟ್ಟರಂತೆ. ಶ್ರೀ|| ಪುರುಷೋತ್ತಮ ಟಂಡನರ ಈ ಪತ್ರದಿಂದ, ಭಾರತ ಸರಕಾರದ ಹಾಗೂ ಬೇರೆ ಬೇರೆ ಪ್ರಾಂತಿಕ ಸರಕಾರಗಳ ನೌಕರರ ಆಯ್ಕೆ ಮಾಡುವ ಅಧಿಕಾರಿಗಳು ತಕ್ಕ ಬೋಧೆಯನ್ನು ಪಡೆಯುವರೆಂದು ಆಶಿಸುತ್ತೇವೆ.

ಬಾಬು ಟಂಡನ್ನರ ಮಗನ ವಿಷಯದಲ್ಲಿ ಆಯ್ಕೆ ಮಂಡಳದವರು ತಮ್ಮ ನಿಯಮವನ್ನು ಸಡಲಿಸಲು ಉದ್ಯುಕ್ತರಾದದ್ದು ನೋಡಿದರೆ, ಅರ್ಜಿದಾರನ ಗೋತ್ರ-ಸಂಬಂಧಗಳನ್ನು ಅಲಕ್ಷಿಸಲಾಗದೆ ಅಥವಾ ಉನ್ನತಪದಾರೂಢ ವ್ಯಕ್ತಿಗಳನ್ನು ಅಪ್ರಸನ್ನಗೊಳಿಸಲಾಗದೆ ಆಯ್ಕೆ-ಅಧಿಕಾರಿಗಳು ಹಿಂದೆ ಸಹ ತಮ್ಮ ನಿಯಮಗಳಲ್ಲಿ ತಾತ್ಕಾಲಿಕ ಬದಲಾವಣೆಗಳನ್ನು ಮಾಡಿ ಅಪಾತ್ರರನ್ನು ಪಾತ್ರರನ್ನಾಗಿ ಮಾಡಿರಬೇಕೆಂಬ ಸಂಶಯ ಬಾರದೆ ಉಳಿಯುವದಿಲ್ಲ. ಕೆಲವು ಕಾಲ ಹಿಂದೆ ಓರ್ವ ಪ್ರಾಂತಾಧಿಪತಿಗಳ ಶೈಕ್ಷಣಿಕ ಪಾತ್ರತೆಯಿಲ್ಲದ ಮಗನೊಬ್ಬನಿಗೆ ನೌಕರರ [illegible]-ಮಂಡಳದವರು ವಿದೇಶಗಳೊಳಗಿನ ನೌಕರ ವರ್ಗದಲ್ಲಿ ಸೇರಿಸಿಕೊಂಡಿದ್ದರೆಂಬ ಸುದ್ದಿಯನ್ನು ನಾವು ಕೇಳಿದ್ದೆವು. ಬಾಬು ಟಂಡನ್ನರ ಮಗನ ಅರ್ಜಿಯ ಕಥೆಯ ಮೇಲಿಂದ ಹಿಂದಿನ ಆ ಸುದ್ದಿ ಸಾಧಾರವಿರಬೇಕೆಂದು ತೋರುತ್ತಿದೆ. ಕೇಂದ್ರ ಶಾಸನ-ಮಂಡಳದ ಸದಸ್ಯರಾದರೂ ಈ ಬಗ್ಗೆ ಸರಕಾರಕ್ಕೆ ಪ್ರಶ್ನೆ ಕೇಳಿ, ನಿಜಸ್ಥಿತಿಯನ್ನು ಬಹಿರಂಗಗೊಳಿಸಿಕೊಳ್ಳಬೇಕಾಗಿ ಸೂಚನೆಯಿದೆ. ಸ್ವತಂತ್ರ ಭಾರತದೊಳಗಿನ ಆಯ್ಕೆ-ಮಂಡಳಗಳ ಕಾರಭಾರವಾದರೂ ಉಚ್ಚ ನ್ಯಾಯಾಲಯಗಳ ವ್ಯವಹಾರದಷ್ಟೇ ಸಂಶಯಾತೀತ ಮತ್ತು ನಿರಪವಾದವಾಗಿರಬೇಕಾದುದು ಅತ್ಯಗತ್ಯವಿದೆ.

* * *

ಪಾಕಿಸ್ತಾನಿ ಮುಸಲ್ಮಾನರನೇಕರು ಹಿಂದುಸ್ಥಾನದಲ್ಲುಳಿದು, ರಾಷ್ಟ್ರದ ಜೀವ-ನಾಡಿಗಳಂತಿರುವ ಕಬ್ಬಿಣ, ಉಕ್ಕು, ಎಣ್ಣೆ ಮೊದಲಾದವುಗಳ ಕಾರಖಾನೆಗಳಲ್ಲಿ ತಮ್ಮ ಪ್ರಸ್ಥ ಬೆಳಸಿಕೊಂಡಿದ್ದಾರೆಂಬ ಸಂಗತಿ ಹಿಂದುಸ್ಥಾನ ಸರಕಾರದ ತಿಳುವಳಿಕೆಗೆ ಬಂದಿದ್ದು, ನಮ್ಮ ರಾಷ್ಟ್ರದ ಬಗ್ಗೆ ಪ್ರೇಮ, ನಿಷ್ಠೆ ಮತ್ತು ಅಭಿಮಾನಗಳಿಲ್ಲದ ಇಂತಹ ಜನರನ್ನು ರಾಷ್ಟ್ರದ ಸುರಕ್ಷಿತತೆಗೆ ಸಂಬಂಧವುಳ್ಳ ಯಾವದೇ ಕಾರ್ಯಾಲಯದಲ್ಲಾಗಲಿ ಕಾರಖಾನೆಯಲ್ಲಾಗಲಿ ಇಟ್ಟುಕೊಳ್ಳುವದು ಅಕ್ಷೇಮಕರವೆಂದು ಹಿಂದ ಸರಕಾರವು ಎಲ್ಲ ಪ್ರಾಂತಿಕ ಸರಕಾರಗಳಿಗೆ ತಿಳಿಸಿದೆಯೆಂದು "ರೆಡಿಕಲ್ ಹ್ಯುಮನಿಸ್ಟ" ಎಂಬ ಪತ್ರಿಕೆಯು ಪ್ರಕಟಪಡಿಸಿದೆ. ಜಮಶೇಟಪುರದಲ್ಲಿರುವ ಟಾಟಾ ಕಂಪನಿಯ ಉಕ್ಕು-ಕಬ್ಬಿಣಗಳ ಕಾರಖಾನೆಯಲ್ಲಿ ಈಗ ೮೦೦೦ ಮುಸಲ್ಮಾನ ನೌಕರರಿದ್ದಾರೆ. ಅವರಲ್ಲಿ ೩೨೦೦ ಮಂದಿ ಪಶ್ಚಿಮ ಪಾಕಿಸ್ತಾನದವರಿರುತ್ತಾರಂತೆ! ಆಸಾಮದೊಳಗಿನ ಒಂದು ಎಣ್ಣೆಯ ಕಾಂಪನಿಯಲ್ಲಿ ದುಡಿಯುವ ನೌಕರರೊಳಗಿನ ನಾಲ್ಕನೇ ಒಂದಂಶದ ನೌಕರರು ಪಾಕಿಸ್ತಾನಿಗಳಿರುತ್ತಾರೆ! ಹಿಂದುಸ್ಥಾನ-ಪಾಕಿಸ್ತಾನಗಳೊಳಗೆ ಇನ್ನೂ ಸೌಹಾರ್ದ ನೆಲೆಸಲಿಲ್ಲ; ಪರಸ್ಪರ ವಿಶ್ವಾಸವೂ ನೆಲಿಸಿರುವದಿಲ್ಲ. ಎರಡೂ ದೇಶಗಳೊಳಗೆ ಘರ್ಷಣೆಗಳು ನಡೆದೇ ಇವೆ. ಈ ಘರ್ಷಣೆಗಳು ವಿಕೋಪಕ್ಕೆ ಮುಟ್ಟಿ ಕೈ-ಕೈ ಮಾಡುವ ಪ್ರಸಂಗ ಬಂದರೆ, ಮೇಲೆ ಹೇಳಿದ ಪಾಕಿಸ್ತಾನಿಗಳು ಘಾತ ಮಾಡಲಿಕ್ಕಿಲ್ಲೆಂಬ ವಿಶ್ವಾಸ ಹಿಡಿಯಲಾಗುತ್ತಿದೆಯೇ? ಆದ್ದರಿಂದ ಪಾಕಿಸ್ತಾನಿ ಮುಸಲ್ಮಾನರನ್ನು ಕ್ರಮವಾಗಿ ಕಡಿಮೆ ಮಾಡಿ ಅವರ ಸ್ಥಳದಲ್ಲಿ ಹಿಂದೀಯರನ್ನು ನೇಮಿಸಿಕೊಳ್ಳುವದು ಅವಶ್ಯವಿರುತ್ತದೆಂಬ ತಿಳುವಳಿಕೆಯನ್ನು ಹಿಂದೀ ಕಾರಖಾನೆದಾರರಿಗೆ ಮಾಡಿಕೊಡಬೇಕಾಗಿ ಹಿಂದಸರಕಾರವು ಎಲ್ಲ ಪ್ರಾಂತಿಕ ಸರಕಾರಗಳಿಗೆ ತಿಳಿಸಿರುತ್ತದಂತೆ.

* * *

ಎಸ್. ಎಸ್. ಸಿ. ಪರೀಕ್ಷೆಯ ಚಾಲಕರ ಅವ್ಯವಸ್ಥಿತ ಕಾರಭಾರದ ವಿಚಿತ್ರ ಪ್ರಕಾರಗಳು ಈಗ

FOR BANKING SERVICE
IN TRADE, INDUSTRY, AND AGRICULTURE
APPROACH

The Agricultural & Industrial Bank, Ltd.,

(Established in 1934)

Head Office : **COONDAPOOR**, S. Kanara.

Branches.

1. Ankola	7. Gokarn.	13. Nagar.
2. Belgaum.	8. Haveri.	14. Shimoga.
3. Bhatkal.	9. Hubli.	15. Sirsi.
4. Coondapoor.	10. Karwar.	16. Somwarpet.
5. Dharwar.	11. Kumta.	17. Virajpet.
6. Gadag.	12. Mangalore.	18. Honavar.

19. BOMBAY. (381-M, Jaipuria House, Kalbadevi Road.).

CURRENT, SAVINGS BANK AND FIXED DEPOSITS ARE ACCEPTED.

For terms, apply to the nearest Branch.

Coondapoor, 1st June, 1949. } **K. Vaman Shenai,** CHAIRMAN.

ಹಿಂದೊಂದಾಗಿ ಹೇಳಲಾಗುತ್ತಿವ ಶಾಲೆಯಲ್ಲಿ ಉತ್ತೀರ್ಣನಾಗದ ಒಬ್ಬ ಶಾಲಾವಿದ್ಯಾರ್ಥಿಯು ಅವಶ್ಯವುಳ್ಳ ಶಿಕ್ಷಣವನ್ನು ತೆಗೆದು ಪರೀಕ್ಷಾ ಮಂಡಳದ ಕಡೆಯಿಂದ ತನ್ನ ಗುಣಗಳ ಪತ್ರಿಕೆಯನ್ನು ತರಿಸಿದ್ದು ಎಲ್ಲ ವಿಷಯಗಳಲ್ಲಿ ಅವನು ಉತ್ತೀರ್ಣನಾಗಿದ್ದನೆಂದು ಆ ಪತ್ರಿಕೆ ಹೇಳುತ್ತಿದೆ! ಅವನ ಉತ್ತೀರ್ಣರಾದ ವಿದ್ಯಾರ್ಥಿಗಳ ಯಾದಿಯಲ್ಲಿ ಅವನ ಹೆಸರು ಯಾಕೆ ಪ್ರಕಟವಾಗಿಲ್ಲ! ... ವಿದ್ಯಾರ್ಥಿ ... ಯಲ್ಲಿ ... ಉತ್ತೀರ್ಣನಾಗಿದ್ದನೆಂದು ... ಬೇಕೋ ... ತೀರ್ಗಡೆಯಾಗಿಲ್ಲೆಂದು ... ಬೇಕೋ ಎಂಬುದೊಂದು ಒಗಟಿನ ರೂಪವಾಗಿದೆ ... ದಲೂ ಕಂಡುಹಿಡಿಯಲು ... ಕೆ ಒಂದಿಷ್ಟು ... ತರ್ಕ ... ಪರೀಕ್ಷೆಯಲ್ಲಿ ... ಉತ್ತೀರ್ಣನಾಗಿದ್ದೇನೆಂಬ ... ವಿದ್ಯಾರ್ಥಿಯ ಭೂಮಿತಿಯ ಉತ್ತರ ಪತ್ರಿಕೆಗಳಲ್ಲಿನ ಉತ್ತರಗಳನ್ನು ಪರೀಕ್ಷಕರು ತಪಾಸಿಸದೆ ಒಟ್ಟು ಬಿಟ್ಟಿದ್ದರೆಂಬ ಇನ್ನೊಂದು ವಿಚಿತ್ರ ಪ್ರಸಂಗವು ಹುಟ್ಟಿದೆ! ಬೇರೆ ಯಾವ ವಿದ್ಯಾರ್ಥಿಯು ನಿಜವಾಗಿಯೂ ಉತ್ತೀರ್ಣನಾಗಿರುತ್ತಿದ್ದರೂ ಯಾದಿಯಲ್ಲಿ ... ಗಳ ಯಾದಿಯಲ್ಲಿ ... ದಿರುವ ... ಎಷ್ಟು ... ರೆಂಬು ಯಾರು ಬಲ್ಲರು? ಈ ಬಗೆಯ ಬಂದ ಪ್ರಕರಣಗಳನ್ನು ನೋಡಿದರೆ ಉತ್ತರ-ಪತ್ರಿಕೆಗಳನ್ನು ತಪಾಸಿಸುವ ಕೆಲವು ಪರೀಕ್ಷಕರು ಹುಡುಗಾಟಿಕೆಯಿಂದ ವರ್ತಿಸುತ್ತಾರೆಂದು ಹೇಳಬೇಕಾಗಿದೆ. ಅಲ್ಲದೆ ಉತ್ತೀರ್ಣರಾದ ವಿದ್ಯಾರ್ಥಿಗಳ ಯಾದಿಗಳನ್ನು ತಯಾರಿಸಿದ ಅಧಿಕಾರಿಯು ನಿಷ್ಕಾಳಜಿತನದಿಂದ ಕೆಲಸ ಮಾಡುತ್ತಾರೆಂದು ಹೇಳಬೇಕಾಗಿದೆ. ಪರೀಕ್ಷಾ ಮಂಡಳದವರು ಈ ಅವ್ಯವಸ್ಥಿತ ಕಾರಭಾರ ನೋಡಿ ವಿದ್ಯಾರ್ಥಿ-ಲೋಕದಲ್ಲಿ ಮಾತ್ರವಲ್ಲ ... ದಲ್ಲೂ ತೀವ್ರ ಅಸಮಾಧಾನವುಂಟಾಗಿದೆ. ಮಂಡಳದವರು ತಮ್ಮ ಹೊಣೆಗಾರಿಕೆಯನ್ನರಿತು ಉತ್ತೀರ್ಣರಾಗದಿರುವ ಎಲ್ಲ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ತಿರುಗಿ ... ಪರೀಕ್ಷಕರ ... ಎಚ್ಚರಿಕೆಯಿಂದ ... ವಿದ್ಯಾರ್ಥಿಗಳ ಪ್ರಕಟಣೆ ... ಪ್ರಕಟಗೊಳಿಸುವದು ಅವಶ್ಯವಿದೆ ... ದವರು ಕೂಡ ಪರೀಕ್ಷಾ ... ಕಾರಭಾರವನ್ನು ... ವ್ಯವಸ್ಥಿತಗೊಳಿಸುವ ಕ್ರಮ ಕೈಕೊಳ್ಳಬೇಕಾಗಿದೆ ...

* *

ನಮ್ಮಲ್ಲಿ ಈಗ ... ವಸ್ತುಗಳ ... ಯಾವದೇ ನ ... ಗಸ್ತು ವ್ಯಾಪಾರಿಯು ಹಿಡಿಯುವದಿಲ್ಲ ... ಕಡಿಮೆ ... ಎಲ್ಲೆಯನ್ನು ... ಗಳು ... ವ್ಯಾಪಾರಿಗಳು ತಮ್ಮ ... ಧರ್ಮದ ... ಗಳ ... ಬೆಲೆಯನ್ನಿಡುವ ... ತಮ್ಮ ... ಎಷ್ಟು ... ಎಂದು ಹೇಳುತ್ತಾರೆ! ಈ ... ಎಲ್ಲಿಯು ಎಲ್ಲಿಂದ ಬರುತ್ತದೆಂಬುದು ತಿಳಿಯದಂತಾಗಿದೆ. ... ಎಳೆಯಲ್ಲಿ ವ್ಯಾಪಾರಿ ... ಮಂಗಳೂರಿನಲ್ಲಿ ... ಪೇಟೆಯಲ್ಲಿ ... ತಿಳಿಯದಾಗಿದೆ ... ಈ ... ಯು ಎಲ್ಲಿ ನಡೆದಿರುತ್ತಿದ್ದರೂ ಇಂತಹ ... ದಿಂದ ಇಡೀ ವರ್ತಕ ಲೋಕದ ... ತ್ತಿದೆಂಬುದನ್ನು ನಮ್ಮ ನಾಡಿನ ವರ್ತಕರು ಲಕ್ಷ್ಯದಲ್ಲಿಡಬೇಕು ... ಅಸ್ವಾಭಾವಿಕವಾಗುತ್ತದೆಂದು ತಿಳಿಯಬೇಕು. ... ದು ಬಗೆಯ ... ಮಿಶ್ರ ಮಾಡಿ ... ಗಳನ್ನು ಮಾರಾಟ ಮಾಡುವ ಚಟು ನಮ್ಮ ... ವರ್ತಕಲೋಕದಲ್ಲಿ ಹಬ್ಬಿಕೊಂಡಿದೆಂಬುದು ನಮಗೆ ... ತ್ತದೆ. ಇಂತಹ ವ್ಯಾಪಾರದಿಂದ ಕೆಲ ... ಕಲಿ ... ಬೆಳಕಿಗೆ ಒಂದು ಹೆಸರು ಕೆಡುವ ... ವರ್ತಕರಿಗೆ ಲಾಭವಾಗುತ್ತಿರಬಹುದು. ಆದರೆ ... ದುರ್ವ್ಯಾಪಾರವನ್ನಾರಂಭಿಸಿದರೆ ತಮ್ಮ ... ಕೊನೆಗೆ ಹಾಳಾಗಿ ... ಯಾಗುವದೆಂಬುದನ್ನು ವ್ಯಾಪಾರಸ್ಥರು ಚನ್ನಾಗಿ ಅರಿತಿರಬೇಕು. ... ರಾಜಕಾರಣವಾಗಲಿ ಸಮಾಜ ... ವಾಗಲಿ ನಾವು ಎಷ್ಟೇ ... ಆದರೆ ಅವರ ವ್ಯಾಪಾರಿ ಪ್ರಮಾಣಿಕತೆಯನ್ನು ... ಹೊಗಳಲೇ ಬೇಕು. ಅವರ ಪ್ರತಿಯೊಂದು ... ಯಲ್ಲಾಗಲಿ ತೂಕದಲ್ಲಾಗಲಿ, ಗುಣದಲ್ಲಾಗಲಿ ರೂಪದಲ್ಲಾಗಲಿ ಎಂದೂ ... ಕಡಿಮೆಯಾಗುವಂತಿಲ್ಲ. ... ಪಟ್ಟಿಗಳಲ್ಲಿ ... ಯಾ ... ಗಳಲ್ಲಿ ... ವ ... ಕಟ್ಟಿಟ್ಟಿಕೆಯನ್ನು ಅವರು ಎಂದೂ ಮಾಡುವದಿಲ್ಲ. ಆ ಪ್ರಾಮಾಣಿಕತನವೂ ವ್ಯಾಪಾರಿ ನೀತಿ ಮತ್ತೂ ನಮ್ಮಲ್ಲಿಯ ವರ್ತಕರಲ್ಲಿ ಕಂಡುಬರುವದಿಲ್ಲೆಂದೂ ನಮ್ಮ ವ್ಯಾಪಾರಿಗಳು ತಮ್ಮ ಅನೀತಿಯಿಂದ ನಮ್ಮ ದೇಶದ ಹೆಸರನ್ನು ಜಗತ್ತಿನೊಳಗೆ ಕಲಂಕಿತಗೊಳಿಸಹತ್ತಿರುವರೆಂದೂ ನಮೂದಿಸಲು ನಮಗೆ ... ವಿದೇಶಗಳಲ್ಲಿರುವ ನಮ್ಮ ರಾಷ್ಟ್ರದ ಪ್ರತಿನಿಧಿಗಳು ಈ ... ನಮ್ಮ ... ವ್ಯಾಪಾರಿಗಳು ವಿದೇಶಗಳಿಗೆ ಕಳಿಸಿದ ಬಟ್ಟೆಗಳು ... ಕಳಿಸಿದ ... ಗುಣಗಳುಳ್ಳವು ಇಲ್ಲದಿರುವದರಿಂದಲು ವಿದೇಶಿ ವ್ಯಾಪಾರಿಗಳು ... ಬೇಕಾಗುತ್ತದೆಂದೆಲ್ಲ, ಹೀಗೆ ... ಇರುತ್ತ ನಂತಲೂ ವಿದೇಶಗಳೊಳಗಿನ ನಮ್ಮ ಪ್ರತಿನಿಧಿಗಳು ನಮ್ಮ ಸರಕಾರಕ್ಕೆ ತಿಳಿಸಿ, ಈ ... ಗಳನ್ನು ... ವರ್ತಕರು ಕೂಡಲೆ ನಿಲ್ಲಿಸದಿದ್ದರೆ ನಮ್ಮ ... ವಿದೇಶಿ ವ್ಯಾಪಾರವು ... ಳಿಯುವದೆ ... ಎಚ್ಚರಿಕೆಯನ್ನು ವರ್ತಕ ಲೋಕಕ್ಕೆ ... ಕೊಡಲು ... ಇನ್ನು ಮುಂದೆ ... ನಮ್ಮಲ್ಲಿಯ ವ್ಯಾಪಾರಿ ... ಎಚ್ಚರಿಕೆಯನ್ನು ನಮ್ಮಲ್ಲಿಯ ವ್ಯಾಪಾರಿ ವರ್ಗದವರು ... ಲಕ್ಷ್ಯದಲ್ಲಿಟ್ಟು ತಮ್ಮ ನಡತೆಯನ್ನು ಸುಧಾರಿಸಿಕೊಳ್ಳಬೇಕು. ಮತ್ತು ... ಯು ... ಸುಖಪಡಲಾರನು ... ಉತ್ಪಾದಕ ವರ್ತಕ ವರ್ಗಗಳು ಬಹಳ ಮಟ್ಟಿಗೆ ವ್ಯಾಪಾರಿಗಳ ಪ್ರಾಮಾಣಿಕತೆ ಮತ್ತು ... ಗಳನ್ನು ಅವಲಂಬಿಸುತ್ತವೆ. ದೇಶದ ಶೀಲದ ಮೌಲ್ಯವಾದ ನವು ಕೂಡ ಹೆಚ್ಚಾಗಿ ವ್ಯಾಪಾರಿ-ವರ್ಗದವರ ಶೀಲದ ಮೇಲಿಂದಲೇ ಆಗುತ್ತದೆಂಬುದನ್ನು ನಮ್ಮ ವ್ಯಾಪಾರಿಗಳು ಗಮನಿಸಬೇಕು.

* *

ಪರಕೀಯ ಬ್ರಿಟಿಶರ ರಾಜ್ಯ ಹೋಗಿ ಈಗ ನಾಡಿನಲ್ಲಿ ಜನತೆಯ ರಾಜ್ಯ ಬಂದಿರುತ್ತಿದ್ದರೂ ನಮ್ಮ ಜಂಗಲ ಇಲಾಖೆಯವರು ನಮ್ಮ ಜನರ ದಾಯಾದ ಮತ್ಸರವನ್ನು ಮತ್ತು ಹಗೆತನವನ್ನು ಇನ್ನೂ ಬಿಟ್ಟಿಲ್ಲ. ನಮ್ಮ ಜಿಲ್ಲೆಯವರ ಜಂಗಲ ಕಷ್ಟಗಳ ಚೌಕಶಿಗಾಗಿ ... ಲ್ಲಿ ಮುಂಬಯಿ ಸರಕಾರವು ನೇಮಿಸಿದ ಕಮಿಟಿಯು ತನ್ನ ವರದಿಯಲ್ಲಿ ಹೇಳಿದಂತೆ (ನಮ್ಮ) ಜಿಲ್ಲೆಯ ಬೇಸಾಯಗಾರರ ಹಿತಸಂಬಂಧಗಳ ರಕ್ಷಣೆಗಿಂತ ಜಂಗಲ-ರಕ್ಷಣೆಗೇ ಸರಕಾರವು ಮಹತ್ವ ಕೊಡುತ್ತಿದೆ" ... ರಲ್ಲಿ ಈ ಕೇಂದ್ರ ಸರಕಾರದಲ್ಲಿ ಮಂತ್ರಿಗಳಾಗಿರುವ ಶ್ರೀ ರಂಗರಾವ ದಿವಾಕರರು ಮುಂಬಯಿಯ 'ಕ್ರಾನಿಕಲ' ಪತ್ರಿಕೆಯಲ್ಲಿ ಒಂದು ಲೇಖ ಬರೆದು, ನಮ್ಮ ಜಂಗಲ ಕಷ್ಟಗಳನ್ನು ಈ ರೀತಿ ಬಣ್ಣಿಸಿದ್ದರು — "ಉತ್ತರ ಕಾನಡಾ ಜಿಲ್ಲೆಯಲ್ಲಿ ಮನುಷ್ಯರನ್ನು ಉಪೇಕ್ಷಿಸಿ ಸರಕಾರವು ವನಸಂಪತ್ತಿನ ಹಾಗೂ ಕಾಡು-ಮೃಗಗಳ ಜೋಪಾಸನೆಯು ಕಡೆಗೆ ಹೆಚ್ಚು ಲಕ್ಷ್ಯ ಪೂರೈಸುತ್ತಿದೆ. ಈ ಜಿಲ್ಲೆಯ ಬೆಟ್ಟದ ಮಧ್ಯದಲ್ಲಿ ನೂರಾರು ಹೊಲ-ಹಿತ್ತಲುಗಳಿವೆ. ಅವುಗಳಲ್ಲಿ ದೊಡ್ಡ ದೊಡ್ಡ ಕುಟುಂಬಗಳು ವಾಸ್ತವ್ಯ ಮಾಡಿಕೊಂಡು ಆ ಹೊಲ-ಹಿತ್ತಲುಗಳ ಉತ್ಪತ್ತಿಯಿಂದ ತಮ್ಮ ಜೀವನ ಸಾಗಿಸುತ್ತವೆ. ಹೊಲದ ಬೇಸಾಯಕ್ಕೆ ಅವಶ್ಯವುಳ್ಳ ದನಕರುಗಳನ್ನು ಅವರು ಸಾಕುತ್ತಾರೆ. ಹೊಲದ ಸುತ್ತಲೂ ಅಡವಿಯುಂಟು. ಅಲ್ಲಿ ಹೊಲಕ್ಕೆ ಬೇಕಾಗುವ ಸೊಪ್ಪುಂಟು, ಜೀವಕ್ಕೆ ಬೇಕಾದ ಉರುವಲವುಂಟು, ಕೊಟ್ಟಿಗೆ, ಬೇಲಿ ಮುಂತಾದವುಗಳಿಗೆ ಬೇಕಾದ ಸಾಹಿತ್ಯ ಸಲಕರಣೆಗಳನ್ನು ಪೂರೈಸಿಕೊಳ್ಳಲು ಅವಶ್ಯವುಳ್ಳ ಬಿದಿರು-ಕಟ್ಟಿಗೆಗಳುಂಟು. ದನಗಳಿಗೆ ಬೇಕಾದ ಮೇವು ಉಂಟು. ಆದರೆ ಜನರು ಇವ್ಯಾವುವರ ಪ್ರಯೋಜನ ಪಡೆಕೊಳ್ಳಲಾರರು. ಬೆಟ್ಟದಲ್ಲಿ ಪ್ರವೇಶ ಮಾಡ ತಮಗೆ ಇರುವ ... ಹಕ್ಕನ್ನು ಅವರು ... ಕೊಂಡರೆ ಅದು ಕಾಯಿದೆಯಂತೆ ಅಪರಾಧವಾಗುತ್ತಿದೆ! ದನಗಳನ್ನು ಬೆಟ್ಟಕ್ಕೆ ಹೊಡೆದರೆ ಅದೂ ಗುನ್ಹೆಯಾಗುತ್ತಿದೆ! ಬೆಟ್ಟದೊಳಗಿನ ಕಾಡು ... ಬಂದು ತಮ್ಮ ಹೊಲವನ್ನು ಕೆಡಿಸಿದರೂ, ಅಲ್ಲ ಕೊಲೆಯನ್ನು ... ಹಾವುಗಳ ... ದರಿಂದ ಉಂಟಾಗುವ ... ಚಳಿಜ್ವರದ ... ತಿಂದು ಕಾಡುತ್ತಿದ್ದರೂ ಆ ದುರ್ದೈವಿ ಜನರು ಜಂಗಲ ... ಭಯದಿಂದ ಸುಮ್ಮಗೆ ಕುಳಿತುಕೊಂಡು ಬಂದದ್ದನ್ನೆಲ್ಲ ಅನುಭವಿಸಬೇಕು! ಇಂತಹ ಪರಿಸ್ಥಿತಿಯಲ್ಲಿ ... ಹೊಲ-ಹಿತ್ತಲುಗಳೂ ... ಅಂತ ... ತಿವಾರೀ ... ಪಡುವಂತಹದೇನಿದೆ?" ... ಶ್ರೀ ... ರವರು ... ಬಣ್ಣಿಸಿದ ಈ ಪರಿಸ್ಥಿತಿಯನ್ನು ... ಸ್ಥಿತಿ ... ಉಂಟು ... ದರೆ ... ವರ್ಷ ... ವನ್ನು ... ಕೇಂದ್ರದ ಸರಕಾರವು ಈ ಪರಿಸ್ಥಿತಿಯನ್ನು ಸುಧಾರಿಸಿಂದು ಬೇಸಾಯಗಾರರಿಗೆ ಕೆಲವು ... ಸವಲತ್ತುಗಳನ್ನು ಕೊಡುತ್ತಿದೆನೋ ... ಆದರೆ ಆ ಸವಲತ್ತುಗಳಿಗೆ ಹಲವಾರು ನಿರ್ಬ-

ಗೊಂಡ ಹಾಕಲ್ಪಟ್ಟಿವೆ ! ಈ ನಿರ್ಬಂಧಗಳನ್ನೆಲ್ಲ ಪಾಲಿಸಿ ಆ ಸವಲತ್ತುಗಳ ಪ್ರಯೋಜನ ಮಾಡಿಕೊಳ್ಳುವದು ತೀರ ಕಠಿಣ. ಅಸರಿ ದ ಸರಕಾರದವರು ಔದಾರ್ಯ (!) ದಿಂದ ದಯಪಾಲಿಸಿದ ಸವಲತ್ತುಗಳ ಪ್ರಯೋಜನ ಪಡಕೊಂಡ ಜನರು ತೀರ ವಿರಳರು. ಸರಕಾರಕ್ಕೆ ಬೇಸಾಯಗಾರರ ಸಂರಕ್ಷಣೆಯ ಆಸಕ್ತಿಯು ಇದ್ದರೆ ತಾವು ದಯಪಾಲಿಸಿದ ಸವಲತ್ತುಗಳ ಪ್ರಯೋಜನವನ್ನು ಜನರು ಯಾಕೆ ಪಡಕೊಳ್ಳುವದಿಲ್ಲ, ಅವರಿಗೆ ಏನು ತೊಂದರೆ ಆಗುತ್ತಿವೆ ಎಂಬುದರ ಚೌಕಶಿಯನ್ನು ಅದು ಮಾಡುತ್ತಿತ್ತು. ಆದರೆ ಅಂತಹದನ್ನೇನೂ ಮಾಡದೆ, ಎಲ್ಲೋ ಯಾರೋ ಜಂಗಲ-ಸವಲತ್ತುಗಳ ದುರುಪಯೋಗ ಮಾಡಿದ್ದರ ನೆವ ಮುಂದೊಡ್ಡಿ ಸರಕಾರವು ಆ ಸವಲತ್ತುಗಳನ್ನು ರದ್ದುಗೊಳಿಸುವ ಭೀತಿ ಹಾಕುತ್ತಿದೆ ! ಸರಕಾರದವರು ಹೇಳುವ ಜಂಗಲ-ಸವಲತ್ತುಗಳ ದುರುಪಯೋಗದ ಕದಾಕು ನಡೆದದ್ದು ಎಲ್ಲಿ ಮತ್ತು ಎಂದು ಎಂಬುದು ಪ್ರಕಟವಾಗಿಲ್ಲ. ದುರುಪಯೋಗ ಮಾಡಿದ ಆರೋಪಕ್ಕೆ ಗುರಿಯಾದ ಜನರು ಬುದ್ಧಿಪೂರ್ವಕವಾಗಿ ಸರಕಾರಿ ನಿರ್ಬಂಧಗಳನ್ನು ಮುರಿದರೋ ಯಾ ಅವುಗಳನ್ನು ಪಾಲಿಸಲು ಅಶಕ್ತರಾಗಿ ಅವನ್ನು ಮುರಿದರೋ ಎಂಬುದರ ಖುಲಾಸೆಯೂ ಸರಕಾರಿ ಪ್ರಕಟನೆಯಲ್ಲಿಲ್ಲ. ಅದೇನಿದ್ದರೂ ಯಾರೋ ಮಾಡಿದ ತಪ್ಪನ್ನು ಇಡೀ ಬೇಸಾಯ-ವರ್ಗದ ಮೇಲೆ ಹೊರಿಸಲೆತ್ನಿಸುವದು ಅಸಮಂಜಸವಿರುತ್ತವೆಂಬುದನ್ನು ಸರಕಾರವು ಮರೆಯಕೂಡದು.

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

ರಂಗೇರಿ ಸೀನ ಯಲ್ಲ ಹಿಂದೆ ಒಂದು ಗ್ರಾಮ [illegible]

ಕಾರವಾರ— (ತಾ ೩-೭-೪೯) [illegible]

[illegible]

[illegible]

[illegible]

ಅನಿಯ ಮರ ಮುಂಕೇರಿಯ ಹೊಲಿಯೊಳಗೊಂದು [illegible]

WANTED

Immediately a B Sc (B T preferred) for the New High School, Baad, (Karwar) Pay and D A as per Govt Scales

K R HALDIPURKAR,
Chairman
Premier Education Society,
BAAD (Karwar)

1-7-1949

[illegible]

[illegible]

ಅಂಕೋಲಾ— (ತಾ ೩-೭-೪೯) [illegible]

[illegible]

ನಮ್ಮಲ್ಲಿ

ರೇಶನ ಕಾರ್ಡಿನ ಹೊರತಾಗಿ, ಎಲ್ಲ ಬಗೆಯ ಧೋತ್ರಗಳು, ಸೀರೆಗಳು ವಾಯಿಲ್ಸ, ಕೋಟಿಂಗ, ಶರ್ಟಿಂಗ ವಗೈರೆ ಅರಿವೆಗಳು, ಪುರುಷರ ಉಡುವ ಮತ್ತು ಹೆಂಗಸರು ಉಡುವ ಸೀರೆಗಳು ಸಹ ಯೋಗ್ಯ ದರದಿಂದ ಸಿಗುತ್ತವೆ

ಭಿಕ್ಕು ವೈಕುಂಠ ಕಾಮತ,
ನೆಲ್ಲೇಕೇರಿ, ಕುಮಟಾ.

ನಮ್ಮಲ್ಲಿ

ಗೇಣಿಬಾಕಿ ದಾವಾ ಫಾರ್ಮುಗಳೂ
ಕಬ್ಜಾ ದಾವಾ ಅರ್ಜಿ ಫಾರ್ಮುಗಳೂ ಸಿಗುತ್ತವೆ.
" ಸ್ಟಾರ್ ಆಫ್ ಕೆನರಾ ಪ್ರೆಸ್ ", ಕುಮಟಾ.

ಬ್ರಿಟಿಶ ಪತ್ರಿಕಾ-ಪ್ರಪಂಚ.

ಬ್ರಿಟನ್ನಿನೊಳಗಿನ ಪತ್ರಿಕೆಗಳ ಸಾಂಪತ್ತಿಕ ಪರಿಸ್ಥಿತಿ, ನಿಯಂತ್ರಣ, ಆಡಳಿತ ಮತ್ತು ಯಜಮಾನತನ ಇವುಗಳನ್ನು ಪರಿಶೋಧಿಸಿ, ಪತ್ರಿಕಾ ಪ್ರಪಂಚದ ಸುಧಾರಣೆಗಾಗಿ ಯಾವದೊಂದು ಕಾನೂನು ಯಾ ಕಾನೂನ-ಬದ್ಧ ಯೋಜನೆ ಮಾಡುವದು ಅವಶ್ಯವುಂಟೇನೆಂದು ಚೌಕಶಿ ಮಾಡಿ ಸರಕಾರಕ್ಕೆ ತಿಳಿಸಲಿಕ್ಕೆಂದು ಬ್ರಿಟಿಶ ಸರಕಾರವು ೨ ವರ್ಷಗಳ ಹಿಂದೆ ಸರ್ ಡೇವಿಡ್ ರಾಸ್ ಇವರ ಅಧ್ಯಕ್ಷತೆಯಲ್ಲಿ ಒಂದು ಮಹಾಜ್ಞೆಯುಳ್ಳ ಸಮಿತಿ (ರೊಯಲ್ ಕಮಿಶನ) ಯನ್ನು ನೇಮಿಸಿತು. ಸಮಿತಿಯ ವರದಿಯು ಮೊನ್ನೆ ಪ್ರಕಟವಾಗಿದೆ. ಪತ್ರಿಕಾ ಪ್ರಪಂಚವನ್ನು ನಿಯಂತ್ರಿಸುವದಕ್ಕಾಗಿ ಇಲ್ಲವೆ ಅದರೊಳಗಿನ ಅನಿಷ್ಟ ಅಂಗಗಳಿಗೆ ಬುದ್ಧಿ ಕಲಿಸುವದಕ್ಕಾಗಿ ಹೊಸ ಕಾಯಿದೆ ಮಾಡುವದು ಅಗತ್ಯವಿಲ್ಲೆಂದೂ, ಪತ್ರಿಕಾ-ಪ್ರಪಂಚದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲಿಕ್ಕೂ, ಪತ್ರಿಕಾ-ವ್ಯವಸಾಯಿಗಳ ಶಿಕ್ಷಣದ ವ್ಯವಸ್ಥೆ ಮಾಡಲಿಕ್ಕೂ, ತಪ್ಪು ದಾರಿ ಹಿಡಿಯುವ ಪತ್ರಿಕೆಗಳಿಗೆ-ಬುದ್ಧಿ ಮಾರ್ಗ ಹೇಳಲಿಕ್ಕೂ ಪತ್ರಿಕಾ-ಪ್ರಪಂಚದ ನೀತಿಮತ್ತೆಯ ಮಟ್ಟವನ್ನು ಏರಿಸಲಿಕ್ಕೂ ೨೦ ಪತ್ರಿಕಾ ವ್ಯವಸಾಯಿಗಳು ಮತ್ತು ೫ ಹೊರಗಿನವರು ಇರುವ ಒಂದು ಪತ್ರಿಕಾಕರ್ತರ ಮಂಡಳವನ್ನು ಸ್ಥಾಪಿಸಬೇಕೆಂದೂ ಸಮಿತಿಯು ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.

ಬ್ರಿಟನ್ನಿನಲ್ಲಿ (ಇಂಗ್ಲಂಡ, ವೇಲ್ಸ ಮತ್ತು ಸ್ಕಾಟಲಂಡ ಈ ಮೂರು ದೇಶಗಳಿಂದೊಡಗೂಡಿದ ದ್ವೀಪದಲ್ಲಿ) ಇಂದು ೧೧೨ ಸರ್ವ-ಸಾಮಾನ್ಯ ಮಾಹಿತಿಯ ದೈನಿಕಗಳಿವೆ. ಇವುಗಳಲ್ಲಿ ೯ ಪತ್ರಿಕೆಗಳು ಲಂಡನ್ನಿನಿಂದ ಹೊರಡುತ್ತಿವೆ. ಇಡೀ ರಾಷ್ಟ್ರದಲ್ಲಿ ಅವುಗಳ ಪ್ರಸಾರವುಂಟು. ಆದ್ದರಿಂದ ಈ ಪತ್ರಿಕೆಗಳಿಗೆ ರಾಷ್ಟ್ರೀಯ ಪತ್ರಿಕೆಗಳೆನ್ನುತ್ತಾರೆ. ಉಳಿದ ೧೦೩ ಪತ್ರಿಕೆಗಳು ನಾಡಿನ ಇತರ ನಗರಗಳಲ್ಲಿ ಪ್ರಕಟವಾಗುತ್ತಿದ್ದು, ಅವು ಸ್ಥಾನಿಕ ಸ್ವರೂಪದವಿರುತ್ತವೆ. ೧೯೩೭ರಲ್ಲಿ ಎಲ್ಲ ರಾಷ್ಟ್ರೀಯ ಮತ್ತು ಸ್ಥಾನಿಕ ದಿನ-ಪತ್ರಿಕೆಗಳು ಕೂಡಿ ೧ ಕೋಟಿ ೭೮ ಲಕ್ಷ ಪ್ರತಿಗಳನ್ನು ಮುದ್ರಿಸಿ ಮಾರುತ್ತಿದ್ದವು. ೧೯೪೭ರಲ್ಲಿ ಆ ಸಂಖ್ಯೆ ೨ ಕೋಟಿ ೮೫ ಲಕ್ಷಕ್ಕೆ ಏರಿದೆ. ಅಂದರೆ ಇಂದು ಬ್ರಿಟನ್ನಿನಲ್ಲಿ ಸರಾಸರಿ ಪ್ರತಿ ಎರಡು ಮನುಷ್ಯರು ಒಂದು ದಿನ ಪತ್ರಿಕೆಯನ್ನು ಕೊಂಡುಕೊಳ್ಳುತ್ತಾರೆ. ಆದಿತ್ಯವಾರದ ಪತ್ರಿಕೆಗಳ ಮಾರಾಟವೂ ಬಹಳ ಹೆಚ್ಚಿದೆ. ೧೯೩೭ರಲ್ಲಿ ಅವು ೧೫೭ ಲಕ್ಷ ಪ್ರತಿಗಳನ್ನು ಹೊರಡಿಸುತ್ತಿದ್ದವು. ೧೯೪೭ರಲ್ಲಿ ಈ ಸಂಖ್ಯೆ ೨೯೩ ಲಕ್ಷಕ್ಕೇರಿತ್ತೆಂದು ತಿಳಿಯುತ್ತದೆ. ಸರ್ವ-ಸಾಮಾನ್ಯ ವಿಷಯಗಳಲ್ಲದೆ ದಿನಪತ್ರಿಕೆಗಳಲ್ಲದೆ ಹಣಕಾಸಿನ ವಿಷಯ, ಕ್ರೀಡಾಂಗಣ ಮೊದಲಾದ ವಿಶಿಷ್ಟ ವಿಷಯಗಳಿಗೆ ಮೀಸಲಾಗಿಟ್ಟ ಇಲ್ಲವೆ ವಿಶಿಷ್ಟ ಪಂಗಡಗಳ ಹಿತಸಂಬಂಧಗಳನ್ನಷ್ಟೇ ಚರ್ಚಿಸುವ ಬೇರೆ ೨೨ ದಿನ ಪತ್ರಿಕೆಗಳಿವೆ.

ಇಡೀ ಬ್ರಿಟನ್ನಿನಲ್ಲಿ ಕೂಡಿ ವಾರದಲ್ಲಿ ಒಮ್ಮೆ, ಎರಡು ದಿನ ಇಲ್ಲವೆ ಮೂರು ದಿನ ಹೊರಡುವ ಪತ್ರಿಕೆಗಳು ೧೧೬೨ ಇವೆ. ಇಂಗ್ಲಂಡದ ೫೮೧, ವೇಲ್ಸದ ೫೫ ಮತ್ತು ಸ್ಕಾಟಲಂಡದ ೧೧೦ ನಗರಗಳಲ್ಲಿ ಸ್ಥಾನಿಕ ಸ್ವರೂಪದ ವಾರಪತ್ರಿಕೆಗಳಿವೆ.

ಯುದ್ಧಕಾಲದಿಂದೀಚೆಗೆ ಪತ್ರಿಕೆಗಳ ಕಾಗದದ ಕೊರತೆಯಾಗಿರುವದರಿಂದ (ಹೊರಗಿಂದ ಕಾಗದ ತರಲು ಡಾಲರ ಹಣ ಕೊಡಬೇಕಾಗುತ್ತದೆ. ಈ ಡಾಲರಗಳನ್ನು ಬ್ರಿಟನರು ಬಹಳ ಮಿತವ್ಯಯದಿಂದ ಖರ್ಚು ಮಾಡುತ್ತಾರೆ) ಬ್ರಿಟಿಶ ದಿನ-ಪತ್ರಿಕೆಗಳು ೪ ಪುಟಗಳನ್ನಷ್ಟೇ ಪ್ರಕಟಿಸುತ್ತಿವೆ. ಇತ್ತೀಚೆಗೆ ದಿನ ಬಿಟ್ಟು ದಿನ ೬ ಪುಟಗಳನ್ನು ಕೊಡಲಾರಂಭಿಸಿವೆ.

ನಂ ೧೩೦/ಫ್ರೋಜನ್ ಕ್ಲೋಥ್
ಕಾರವಾರ, ತಾ ೨೬-೬-೧೯೪೮

ಪತ್ರಿಕಾ-ಸೂಚನೆ.

(ತಡೆಹಿಡಿದಿಟ್ಟ ಬಟ್ಟೆ)

ತಾ ೩೦-೧೧-೧೯೪೭ನೇ ದಿನ ತಡೆಹಾಕಿಟ್ಟ ಬಟ್ಟೆಯ ಸಂಗ್ರಹಗಳಿಗೆ ಸಂಬಂಧಿಸಿದ ಈ ಪ್ರಾಂತದಲ್ಲಿಯ ವ್ಯಾಪಾರಸ್ಥರು ಸರಕಾರಕ್ಕೆ ವೇಳೆಯಿಂದ ಮೇಲೆ ಮಾಡಿಕೊಂಡ ವಿನಂತಿಗಳನ್ನು ಲಕ್ಷಿಸಿ, ಈ ಸಂದರ್ಭದಲ್ಲಿ ಈವರೆಗೆ ಹೊರಡಿಸಲಾದ ಎಲ್ಲ ಆಜ್ಞೆಗಳನ್ನು ರದ್ದುಗೊಳಿಸಿ, ತಡೆಹಾಕಿಟ್ಟ ಸಂಗ್ರಹಗಳನ್ನು ಅನಿರ್ಬಂಧವಾಗಿ ಈ ಪ್ರಾಂತದಲ್ಲಿ ವ್ಯಾಪಾರಸ್ಥರಿಗೆ ಮಾರಗೊಡಬೇಕೆಂದು ಸರಕಾರದವರು ನಿರ್ಣಯಿಸಿದ್ದಾರೆ. ಕಾನಡಾ ಜಿಲ್ಹೆಯ ಪೆಟ್ರೋಲ ಕಡೆಗೆ ತಮ್ಮ ಸಂಗ್ರಹಗಳನ್ನು ಹಿಂದೆ ತಿಳಿಸಿದಂಥ ವ್ಯಾಪಾರಸ್ಥರು ತಾತ್ಪೂರ್ತಿಕ ಪರವಾನಗಿಗಳ ಬಗ್ಗೆ ನಿರ್ದಿಷ್ಟ ಮಾದರಿಯಲ್ಲಿ, ಅವರ ಕಡೆಗೆ ತಾ ೩೦-೬-೧೯೪೮ಕ್ಕಿಂತ ಪೂರ್ವದಲ್ಲಿ ಅರ್ಜಿ ಮಾಡತಕ್ಕದ್ದು. ಅರ್ಜಿಯ ಮಾದರಿಗಳು ಆಯಾ ತಾಲೂಕಿನ/ಪೇಟೆ [illegible] ಕಚೇರಿಯಲ್ಲಿ, [illegible] ದಿನಗಳಲ್ಲಿ ಕಚೇರಿಯ ಹೊತ್ತಿಗೆ ದೊರೆಯುವವು. ಅರ್ಜಿದಾರರು ಸರಕಾರದ ತಿಜೋರಿಯಲ್ಲಿ ಪರವಾನಿಗೆ ರೂ ೧ ಶುಲ್ಕ ತುಂಬತಕ್ಕದ್ದು, ಮತ್ತು ಹಾಗೆ ಹಣ ತುಂಬಿ ಪಡೆದ ಚಲನ-ಪಾವತಿಯನ್ನು ಮತ್ತು ೧೯೪೭ನೇ ಇಸವಿಯ ಡಿಸೆಂಬರ ತಿಂಗಳಲ್ಲಿ ತಾವು ಒಪ್ಪಿಸಿದ ಶಿಲ್ಕು ಬಟ್ಟೆಯ ಸಂಗ್ರಹದ ಮಾಹಿತಿ-ಪತ್ರಿಕೆಯ ೧ ಪ್ರತಿಯನ್ನು ಅರ್ಜಿಯ ಸಂಗಡ ಕಳಿಸತಕ್ಕದ್ದು. ೧೯೪೮ನೇ ಇಸವಿಯ ಜುಲೈಯ ಮತ್ತು ಆಗೋಸ್ಟ ಈ ೨ ತಿಂಗಳುಗಳಲ್ಲಿ ಈ ಪರವಾನಗಿಗಳು ವಿಧಿ-ಬದ್ಧವಾಗಿ ನಡೆಯುವವು. ತಾ ೩೧-೮-೧೯೪೮ರ ನಂತರ ಅವುಗಳನ್ನು ಯಾವದೇ ಬಗೆಯಿಂದ ಪುನರುಜ್ಜೀವಗೊಳಿಸಿಕೊಡಲಿಕ್ಕಿಲ್ಲ. ತಾ ೩೧-೮-೪೮ರೊಳಗೆ ಮಾರಾಟವಾಗದೆ ಉಳಿದ ಸಂಗ್ರಹಗಳಿಗೆ ವ್ಯಾಪಾರಸ್ಥರೇ ಹೊಣೆಗಾರರಾಗುವರು, ಮತ್ತು ಇಂಥ ಸಂಗ್ರಹದ ಮಾರಾಟಕ್ಕೆ ಹೆಚ್ಚಿನ ಅವಕಾಶವನ್ನು ಕೊಡಲು ಸರಕಾರವು ಒಪ್ಪುವಂತಿಲ್ಲ.

ಈ ತಡೆಹಿಡಿದಿಟ್ಟ ಬಟ್ಟೆಯ ಸಂಗ್ರಹದ ಮಾರಾಟಕ್ಕೆ ತಾ ೧-೭-೧೯೪೮ರಿಂದ ತಾ. ೩೧-೮-೧೯೪೮ರ ವರೆಗಿನ ಅವಧಿಯಲ್ಲಿ ಟಿ ಸಿ ಬಿ ಮುದ್ರೆಯ ಅಥವಾ ಕ್ರಯ ಗೊತ್ತುಪಡಿಸುವ ನಿರ್ಬಂಧಗಳು ಅನ್ವಯಿಸುವದಿಲ್ಲ. ೧೯೪೮ರ ಮುಂಬಯಿಯ ಬಟ್ಟೆ ನೀತಿ ಆಜ್ಞೆಯ ಶಕ್ತಿಯಿಂದ ಈ ಸಂಗ್ರಹವನ್ನು ಹೊರಡಿಸಲಿರುವ ಸಂಗತಿಯನ್ನು ಪರವಾನಗಿಗಳ ಜೊತೆಗೆ ಬರೆದು ಕೊಡಲಾಗುವದು. ಈ ಬಟ್ಟೆಯನ್ನು ವ್ಯಾಪಾರಸ್ಥರಿಗೂ ಮಾರಬಹುದು, ಗ್ರಾಹಕರಿಗೂ ಮಾರಬಹುದು. ಆದರೆ ವ್ಯಾಪಾರಸ್ಥ-ವ್ಯಾಪಾರಸ್ಥರೊಳಗೆ ಮಾರಾಟವಾದಲ್ಲಿ ಮಾರುವ ಹಾಗೂ ಕೊಳ್ಳುವ ವ್ಯಾಪಾರಸ್ಥರಿಬ್ಬರೂ ಪರವಾನಗಿದಾರರಿರಬೇಕು. ಸಂಗ್ರಹವುಳ್ಳ ವ್ಯಾಪಾರಸ್ಥರು (ಅದನ್ನು ಅವರು ಯಾರಿಗೇ ಮಾರಲಿ) ಪ್ರಾಂತಿಕ ಟೆಕ್ಸಟಾಯಿಲ್ ಕಂಟ್ರೋಲರರಿಗೆ ಅಥವಾ ಜಿಲ್ಲಾ ಮೆಜಿಸ್ಟ್ರೇಟರಿಗೆ ಈ ಮೊದಲು ತಿಳಿಸಿದ ಸಂಗ್ರಹಗಳನ್ನಷ್ಟೇ ಮಾರಬೇಕೆಂಬ ನಿರ್ಬಂಧವಿದೆ. ಆದ್ದರಿಂದ ನಿರ್ದಿಷ್ಟಪಡಿಸಿದ ಅವಧಿಯಲ್ಲಿ ತಮ್ಮ ಸಂಗ್ರಹಗಳನ್ನು ಶೀಘ್ರವಾಗಿ ಮಾರಬಹುದಾದ ವ್ಯವಸ್ಥೆ ಮಾಡುವದು ವ್ಯಾಪಾರಸ್ಥರನ್ನೇ ಕೂಡಿದೆ.

ತಡೆ ಹಾಕಿಟ್ಟ ಸಂಗ್ರಹಗಳೊಳಗಿನ ಧೋತರಗಳನ್ನೂ ಸೀರೆಗಳನ್ನೂ ತನ್ನ ಕಡೆಗೆ ತೆಗೆದುಕೊಳ್ಳಬೇಕೆಂದು ಸರಕಾರವು ಈ ಮೊದಲು ನಿರ್ಣಯಿಸಿತ್ತು. ಆ ಧೋತರಗಳನ್ನೂ ಸೀರೆಗಳನ್ನೂ ಈಗ ವ್ಯಾಪಾರಸ್ಥರು, ಮೇಲೆ ವಿವರಿಸಿದಂತೆ, ಪರವಾನಗಿ ಪಡೆದು ಅನಿರ್ಬಂಧ ಮಾರಬಹುದು. ಆದೇ ರೀತಿ ಅವರು ತಮ್ಮ ಹತ್ತಿರ ಯಾವದೇ ಬಗೆಯ ಅಚ್ಚುಹಾಕಿದ ಇಲ್ಲವೆ ಬಣ್ಣ ಹಾಕಿದ ಬಟ್ಟೆಯ ಸಂಗ್ರಹ ತಡೆಹಿಡಿದಿಟ್ಟದ್ದು ಇದ್ದರೆ ಅದನ್ನು ಮಾರಬಹುದು.

ಕದ್ದಿಗೆ ಉಂಟಾಗತಕ್ಕ ನಿರ್ಬಂಧಗಳನ್ನೂ ತಡೆ ಹಾಕಿಟ್ಟ ಬಟ್ಟೆಗಳನ್ನು ಇತರ ಪ್ರಾಂತಗಳಿಗೆ ಕಳಿಸುವ ವಿಷಯದಲ್ಲಿ ಈ ಆಜ್ಞೆಯು ಅನ್ವಯಿಸುವದಿಲ್ಲ.

ನೀತಿ ಆಜ್ಞೆಗನುಸಾರವಾಗಿ ಮುದ್ರೆ ಹೊಂದಿದ ಬಟ್ಟೆ ವ್ಯಾಪಾರಸ್ಥರಿಗೆ ತಮ್ಮ ಅಂಗಡಿಗಳಲ್ಲಿ ಇಂಥ ತಡೆ ಹಾಕಿಟ್ಟ ಬಟ್ಟೆಯನ್ನು ಇಟ್ಟುಕೊಂಡು ಮಾರಾಟ ಮಾಡಲು ಅಪ್ಪಣೆ ಕೊಡಬರುವದಿಲ್ಲ.

M Allahbaksh
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ

THE BANK OF RURAL INDIA LTD.

(Incorporated in British India, Liability of Members limited)

HEAD OFFICE — "Satyabhama Bhavan", KARWAR. N K

Offices at .— KARWAR, KUMTA SIRSI HONAVAR YELLAPUR, BHATKAL SIDDAPUR ANKOLA, HUBLI & DHARWAR

Authorised Capital	Rs 10 00,000.
Subscribed Capital	Rs 5,00 000.
Paid up Capital & Reserves	Rs 5,08,502-8-0

Rates of Interest on Deposits

Current a/c @ 1% p a. *Savings Bank a c @ 2½%*

Fixed Deposits for 3 months @ 3% per annum

" " for 6 months @ 3½%

" " for 12 months or more @ 4%,

All kinds of modern Banking business transacted

Karwar
14-3-1948

P X GRACIOUS,
MANAGING DIRECTOR

ಜಿಲ್ಲಾ ಸಮಾಚಾರ.

ಕುಮಟಾ— ಕುಮಟೆಯು ದೊಡ್ಡ ಶಹರ ಅನ್ನಿಸಿಕೊಳ್ಳುತ್ತದೆ. ಕುಮಟೆ ಮತ್ತು ಚಿತ್ರಗಿ ಹೀಗೆ ೨ ಗ್ರಾಮಗಳು ಕೂಡಿವೆ ಆದರೂ ಈ ಗ್ರಾಮಗಳಿಗೊಂದು ಗ್ರಾಮ-ಚಾವಡಿಯಿಲ್ಲ. ಶಾನಭೋಗರ ಖಾಸ್ಗಿಯಾದ ಮನೆಯೇ ಗ್ರಾಮ-ಚಾವಡಿ! ಸಣ್ಣ ಸಂಬಳದ ಈ ಶಾನಭೋಗರ ಖಾಸ್ಗಿಯಾಗಿ ಭಾಡಿಗೆಯಿಂದ ಹಿಡಿಯುವ ಮನೆ ಎಷ್ಟು ವಿಶಾಲ ಮತ್ತು ಪ್ರಶಸ್ತವಿದ್ದೀತೆಂಬುದನ್ನು ಯಾರೂ ಕಲ್ಪಿಸಿಕೊಳ್ಳಬಹುದು. ಹಿಂದಿನ ಮಾಮಲೇದಾರರೂ ಆಗಾಗ ಬರುತ್ತಿರುವ ಕಷ್ಟ ನಿಂಟರ್ವ್ಯೂರಿಂದಲೂ ಶಾನಭೋಗರು ಆ ಬಿಡಾರದ ಒಂದು ಭಾಗವನ್ನೇ ಶಾನಭೋಗರು ಕೊಡಬೇಕೆಂದು ಊರವರ ಕೆಲಸ ಮಾಡಿಕೊಡುತ್ತಾರೆ! ಶಾನಭೋಗರ ಕಡೆಗೆ ಕೆಲಸವಿದ್ದ ಜನರು ಅಲ್ಲೇ ಹೋಗಿ ತಮ್ಮ ಕೆಲಸವನ್ನು ಪೂರೈಸಿಕೊಳ್ಳಬೇಕು! ಮಾಮಲೇದಾರರು ಇಂತಹ ಸ್ಥಳದಲ್ಲಿ ಹೋಗಬೇಕು, ಹೋಗಿ ಕೂಡ್ರಬೇಕು ಬೇಕಾಗುತ್ತದೆ! ಅದಲ್ಲದೆ ಅಲ್ಲಿ ಕುಮಟೆಯಲ್ಲಿ ಐವರ್ಕೈ ಮೂವರು ಶಾನಭೋಗರು ಬರುತ್ತಾರೆ! ಅವರ ಬಿಡಾರು ಬೇರೆ ಬೇರೆ ಕಡೆಗಾಗುತ್ತವೆ! ಅದರಿಂದ ಶಾನಭೋಗರನ್ನು ಹುಡುಕುವದೇ ಜನರಿಗೆ ಕಷ್ಟ ವಾಗುತ್ತದೆ! ಕೆಲವೊಂದು ಶಾನಭೋಗರು ಎಲ್ಲಾದರೂ ಒಂದು ಚಿಕ್ಕ ಖೋಲಿಯನ್ನು ಭಾಡಿಗೆಗೆ ಹಿಡಿದು ಅಲ್ಲಿ ತಮ್ಮ ಕಚೇರಿಯನ್ನು ತೆರೆಯುತ್ತಾರೆ. ಅವರಿಗೆ ಸಿಗುತ್ತಿರುವ ಪಗಾರ ಅವರ ಬಿಡಾರ ಭಾಡಿಗೆಗೆ ಸಾಲುವದಿಲ್ಲ! ಬೇರೆ ಎಷ್ಟೋ ಗ್ರಾಮಗಳಲ್ಲಿ ಗ್ರಾಮಚಾವಡಿಗಳಿವೆ ಧಾರೇಶ್ವರ, ಬಗ್ಗೋಣದಂತಹ ಹಳ್ಳಿಗಳಲ್ಲಿ ಸಹ ಗ್ರಾಮ-ಚಾವಡಿಗಳಿವೆ ಕುಮಟೆಯಂತಹ ದೊಡ್ಡ ನಗರದಲ್ಲಿ ಅಂತಹದೊಂದು ಗ್ರಾಮಚಾವಡಿಯಿಲ್ಲದಿದ್ದುದು ನಾಚಿಕೆಯ ಸಂಗತಿ! ಸರಕಾರದವರು ಇತ್ತ ಲಕ್ಷ್ಯ ಕೊಟ್ಟು ಕುಮಟಾ ಗ್ರಾಮಸ್ಥರಿಗಾಗಿ ಒಂದು ಗ್ರಾಮ ಚಾವಡಿಯನ್ನು ಕಟ್ಟಿಸುವ ಇಲ್ಲವೆ ಸ್ವತಂತ್ರವಾದ ಒಂದು ಕಚೇರಿಯ ಸ್ಥಳವನ್ನು ಗೊತ್ತುಪಡಿಸಿಕೊಡುವ ವ್ಯವಸ್ಥೆಯನ್ನು ಬೇಗನೇ ಮಾಡಬೇಕಾಗಿ ಅರಿಕೆಯಿದೆ.

ಹೊಲನಗದ್ದೆಯ ಗ್ರಾಮಪಂಚಾಯತಿಯ ವಿರುದ್ಧ ಕಳೆದ ತಿಂಗಳೊಳಗೆ "ವೃತ್ತ"ದಲ್ಲಿ ಬಂದ ಟೀಕೆಯನ್ನು ಅನುಲಕ್ಷಿಸಿ, ಆ ಪಂಚಾಯತಿಯ ನಿಸ್ವಾರ್ಥ ಸಂಚಾಲಕರು ಬರೆಯುತ್ತಾರೆ —

ಪಂಚಾಯತಿಯವರು ಮನೆತೆರಿಗೆಯನ್ನು ೮ ಪಟ್ಟು ಹೆಚ್ಚಿಸಿರುತ್ತಾರೆಂಬುದು ನಿಜ. ಆದರೆ ೬ ೭ ಪಟ್ಟುಗಳೆಂಬುದು ಮಾತ್ರ ಅತಿಶಯೋಕ್ತಿ. ಇದ್ದ ತೆರಿಗೆಯಿಂದ ಗ್ರಾಮದೇವಿಯ ಕೆಲಸ ಸಾಗ ಹಂತಕ್ಕಿಲ್ಲವಾದ್ದರಿಂದಲೇ ಪಂಚಾಯತಿಯವರ, ರೀತಿಯಂತೆ ಠರಾವ ಮಾಡಿ, ಮನೆತೆರಿಗೆಯನ್ನು ಏರಿಸಿದ್ದಾರೆ. ಆ ಕಾಲದಲ್ಲಿ ಊರವರು ಯಾರೂ ಆಕ್ಷೇಪ ತೆಗೆಯಲಿಲ್ಲ! ಈಗ ''ವೃತ್ತ'' ದಲ್ಲಿ ಟೀಕೆ ಬಂದಿದೆ! ಈ ಟೀಕಾಕಾರರು ಹೆಚ್ಚಾಗಿ ಊರೊಳಗಿನ ಪಂಚಾಯತಿಯನ್ನು ಹಿಡಿದವರಾಗಿರುತ್ತಾರೆ. ಗ್ರಾಮದೇವಿಯ ಹೆಚ್ಚಿಸಿದ ಮನೆತೆರಿಗೆಯನ್ನು ಅಕ್ಷೇಪಿಸಿರುವದಿಲ್ಲ. ಗ್ರಾಮಪಂಚಾಯತಿಯಲ್ಲಿ ಈಗ ರೈತರು ಪ್ರವೇಶ ಪಡೆದು, ಅಲ್ಲಿ ತಮ್ಮ ಪ್ರಾಬಲ್ಯ ಸ್ಥಾಪಿಸಿದ್ದು ಕೆಲವು ಜನರಿಗೆ ಹೊಟ್ಟೆಯುರಿ ಎದ್ದಿದೆ! "ವೃತ್ತ" ದಲ್ಲಿ ಟೀಕೆ ಮಾಡಿದವರು ಪಂಚಾಯತಿಯವರು ಮಾಡಿದ ಕೆಲಸವೇನೂ ಕಂಡು ಬಂದಿಲ್ಲದು ಹೇಳಿದ್ದಾರೆ. ಅವರು ಹೇಳುವ [illegible] ಆದರೆ ಆ ಟೀಕೆ ಹಿಂದಿನ ಮುಖಂಡರ ಗ್ರಾಮಪಂಚಾಯತಿಗೆ ಅನ್ವಯಿಸುತ್ತದಲ್ಲದೆ ಹೊಸ್ತಿಲ ಅಧಿಕಾರಾರೂಢರಾಗಿರುವ ಗ್ರಾಮಪಂಚಾಯತಿಗಲ್ಲ ಎಂಬುದನ್ನು ಆ ಟೀಕಾಕಾರರು ಮರೆಯುತ್ತಾರೆ! ಇತ್ಯಾದಿ

ಜಾಹೀರ ನೋಟೀಸು.

ನಂ ೪೨೨/೭೫ (ಅ) ಕುಮಟಾ, ೨೬—೬—೧೯೪೯

ಕುಮಟಾ ತಾಲೂಕ ಕಚೇರಿಯಿಂದ—

ಈ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ —

ವೆ॥ ಕಲೆಕ್ಟರ ಸಾ॥ ರವರ ಹುಕೂಮು ನಂ ೬೫ ತಾ ೧೮—೬—೪೯ರನ್ವಯ ಈ ಕೆಳಗೆ ತೋರಿಸಿದ ಯಾಂತ್ರಿಕ ಸಾಮಾನು, ಗುಡ್ಸ ಟ್ರಕ್ಕ ನೇದಲಾದವುಗಳನ್ನು ರಾ॥ ಡಿ ಎಸ್ ಭಟ್ಟ ಗೋಕ, ಮಾದನಗೇರಿ ಇವರ ಕಡೆಯಿಂದ ಮಿಲ್ಲಿಂಗ ವ್ಯವಹಾರದ ಬಾಬತು ಸರಕಾರಕ್ಕೆ ಬರತಕ್ಕ ಹಣಗಳ ವಸೂಲಿಯ ಬಗ್ಗೆ ಜಾಹೀರ ರೀತಿಯಿಂದ ಲಿಲಾಂವ ಮಾಡಲಾಗುವದು. ಸದರಿ ಲಿಲಾಂವು ತಾ ೯—೭—೧೯೪೯ನೇ ಸೋಮವಾರ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ಮಾದನಗೇರಿ ಗ್ರಾಮದಲ್ಲಿ (ಅಂದರೆ ಸದರಿ ರಾ॥ ಗೋಪಿಯವರ ಗಿರಣಿಯ ಒಂದು ಭಾಗದಲ್ಲಿ) ನಡೆಯುವದು. ಲಿಲಾಂವಿನಲ್ಲಿ ಸವಾಲ ಮಾಡಲಿಚ್ಛಿಸುವವರು ಸದರಿ ಸ್ಥಳದಲ್ಲಿ ಹೊತ್ತಿಗೆ ಸರಿಯಾಗಿ ಹಾಜರಾಗಿದ್ದು ಲಿಲಾಂವಿನಲ್ಲಿ ಬೇಕಾದ ಸಾಮಾನು ಪಡೆಯಬಹುದು. ಲಿಲಾಂವ ಮಾಡಲಾಗುವ ಸಾಮಾನುಗಳನ್ನು ಲಿಲಾಂವಿನ ಕಾಲಕ್ಕೆ ಸವಾಲು ಮಾಡಲಿಚ್ಛಿಸುವವರಿಗೆ ತೋರಿಸಲಾಗುವದು. ಅದಕ್ಕೂ ಮೊದಲು ಅವನ್ನು ನೋಡಲಿಚ್ಛಿಸುವವರು ಮಾದನಗೇರಿ ಗ್ರಾಮಸ್ಥರ ಕಡೆಗೆ ಚೌಕಶಿ ಮಾಡಬಹುದು.

ಲಿಲಾಂವ ಮಾಡಲಾಗುವ ಸಾಮಾನಿನ ವಿವರ

	ಸಾಮಾನಿನ ಹೆಸರು	ಸರಕಾರಿ ಸವಾಲು.
(೧)	ಕಂಪ್ಲೀಟ ಕಂಪ್ಲೀಟ ಇದ್ದ ಹೊರ್ಸ ಪೊವರ ೨೪-೨೫ ಬುಶ್ ಕಂಪನಿಯ ಆಯಿಲ್ ಇಂಜಿನ್ನು (ಚಾಲು ಇದ್ದದ್ದು)	ರೂ. ೭೦೦೦/—
(೨)	ರಾಯಸ್ ಪ್ಲಾಂಟಿನ ಕಂಪ್ಲೀಟ ಸೆಟ್ಟು ೧ (ಪಟ್ಟೆದ ಜಗ್ಗೆರೆ ಯಾವ ತಟ್ಟು ಸಾಹಿತ್ಯ ಸಹಿತ)	೬೦೦೦/—
(೩)	ಸೆಪರೇಟರ ೧ (ಬೇರೆ ಇದ್ದದ್ದು — ಉಪಯೋಗಕ್ಕೆ ಬರುವಂಥಾದ್ದು) ೧	೫೦೦/—
(೪)	ಗುಡ್ಸ ಟ್ರಕ್ಕ ೧ BYX ನಂ ೧೭೬೧— ಸಿಂಗಲ್ ಜೊಂಯ್ಯು (೧೫ ಟನ್)— ಶೆವ್ರೊಲೇಟ್	೫೦೦೦/—
(೫)	(i) ಕುಮಟಾ ತಾಲೂಕ ಮಾದನಗೇರಿ ಗ್ರಾಮದ ಸ ನಂ ೨—ಅ ಹಿಸ್ಸಾ ನಂ ೧ (ಎಕರೆ ೫ ೧೮—೧೧॥ ಪೈಕಿ ಪೋಟ ಖರಾಬ ೫ ಗುಂಠೆ ಆಕಾರ ರೂ ೧೧—೮—೦) ಹಾಗೂ ಈ ಸ್ಥಳದ ೩೦ ಗುಂಠೆ ಕ್ಷೇತ್ರ ದಲ್ಲಿ ಗಿರಣಿ ಇರುವ ಆವಾರಣ ೧ (ನಾಲ್ಕು ಕೋಣೆಗಳುಳ್ಳದ್ದು, ಕಲ್ಲು ಕಂಬ ಮತ್ತು ಮಣ್ಣು ಗೋಡೆಗಳುಳ್ಳ ಸಿಮೆಂಟ ತಗಡಿನ ಹೊದಿಕೆ ಇದ್ದದ್ದು) ಸದರಿ ಸ್ಥಳವನ್ನು ರಾ॥ ಡಿ. ಎಸ್ ಗೋಪಿಯವರು ೫೦ ವರ್ಷಗಳ ಮುದ್ದತ್ತಿನ ಕಂತ್ರಾಟಿಂದ ಪಡೆದಿರುತ್ತಾರೆ	೪೦೦೦/—
	(ii) ಕಟ್ಟಿಗೆಯ ಪ್ಯಾಡ ೧ (೧೬'x೨') ಮತ್ತು ಕಟ್ಟಿಗೆಯ ಪ್ಯಾಪ್ ೧ (೧೦'x೧೫'') ಕಟ್ಟಿಗೆಯ ಹಾರಿ ೧ (೬'x೨॥' — — ಬೆಲ್ಲಂಗ ಇದ್ದದ್ದು)	೧೫೦/—
	(iii) ಕೊಬ್ಬರಿ ಎಣ್ಣೆಯ ಗಾಣ ೧ (೨ ಜೋಡಿಗೆ ಮತ್ತು ಸಂಬಂಧ ಪಟ್ಟ ಎಲ್ಲ ಸಾಮಾನುಗಳ ಸಹಿತ)	೧೫೦೦/—
	(iv) ಹಿಟ್ಟು ಮಾಡುವ ಚಕ್ಕಿ ೨	೬೦೦/—
	ಅಂತೂ ರೂ	೨೪೭೫೦/—

ಲಿಲಾಂವಿನ ಶರತ್ತುಗಳು — (೧) ಲಿಲಾಂವ ಕಾಯಂ ಮಾಡುವದು ವೆ॥ ಕಲೆಕ್ಟರ ಸಾ॥ ರವರ ಮಂಜೂರಿಗೆ ಒಳಪಟ್ಟಿರುತ್ತದೆ.

(೨) ಕೊನೆಯ ಖರೀದಿದಾರರು ಸವಾಲ ರಕಮಿನ ೧/೪ ಹಣವನ್ನು ಲಿಲಾಂವು ಮುಗಿದ ಕೂಡಲೆ ಲಿಲಾಂವ ಮಾಡುವ ಅಧಿಕಾರಸ್ಥರ ಕಡೆಗೆ ಭರಣಾ ಮಾಡತಕ್ಕದ್ದು, ಬಾಕಿ ೩/೪ ಹಣವನ್ನು ಲಿಲಾಂವ ಮಂಜೂರಿಯ ೧೫ ದಿವಸಗಳೊಳಗಾಗಿ ತುಂಬತಕ್ಕದ್ದು ಲಿಲಾಂವಿನ ಉಳಿದ ಶರತ್ತುಗಳನ್ನು ಲಿಲಾಂವ ಕಾಲಕ್ಕೆ ಓದಿ ಹೇಳಲಾಗುವದು •

V B. KULKARNI,
ಮಾಮಲೇದಾರ, ಕುಮಟಾ

ಜಾಹೀರ ನೋಟೀಸು.

ಸ.ಶಿ ರಾ॥ ಪಾಂಡುರಂಗ ಕೃಷ್ಣರಾಯ ಹೆಗಡೆ ಸಾ॥ ಸಾಣೆಕಟ್ಟಾ ಇವರಿಗೆ—

ಕುಮಟಾ ಸ್ಟೇಶನ ಮುಖಾಂತರ ನಾರಾಯಣ ಕೇಶವ ಪೈ, ಮತ್ತು ರಾಘವೇಂದ್ರ ಕೇಶವ ಪೈ ಇವರು ಈ ನೋಟೀಸಿ ಮೂಲಕ ತಿಳಿಸುವದೇನಂದರೆ —

ನಮ್ಮ ಮಾಲ್ಕಿ ಹಕ್ಕಿನ ಸಾಣೆಕಟ್ಟಾ ಸಾಗರಬೈಲ ಬಸ್ತಿನ ಸಹಿಯ ಆಗರ ನಂಬರ ೬೨ ರ ಲಾ (ಆ ತ್ತರಪ್ಪ ದ ಎಂಬಲ್ಲಿದ್ದು) ಈ ಎರಡೂ ಆಗರಗಳನ್ನು ಒಂದು ವರ್ಷದ ಪೂರ್ತ ಖೋತಾಗೆ ಬೆಳೆಗೇಣಿಗೆ ಕೊಟ್ಟಿ ದ್ದೇವೆ ಸದರಿ ನಿಮ್ಮ ಬೆಳೆಗೇಣಿ ಸಾರೆಯನ್ನು ಈ ನೋಟೀಸ ಮೂಲಕ ಅಂತ್ಯಪಡಿಸುತ್ತೇವೆ. ಕಾರಣ ಸದರಿ ಸ್ಥಳಗಳ ಕಬ್ಜಾ ಇದೇ ಬರುವ ೧೯೫೦ನೇ ಇಸವಿಯ ಜನವರಿ ತಿಂಗಳ ೧ನೇ ತಾರೀಖಿನ ದಿವಸ ನೀವು ನಮ್ಮ ವಶಕ್ಕೆ ಒಪ್ಪಿಸಿಕೊಡತಕ್ಕದ್ದು. ಅದಕ್ಕೆ ನೀವು ತಪ್ಪಿದಲ್ಲಿ ನಮ್ಮ ಮೇಲೆ ನಡಿಸಬಹುದಾದ ಕಾಯದೆ ಇಲಾಜಿ ಮತ್ತು ಮಗೆ ಆಗುವ ಲುಕ್ಸಾನಿಗೆ ನೀವೇ ಜವಾಬದಾರರಾಗಿ ವಿರಿ ಹೇಯುವದು ತಾ ೨೭—೬—೧೯೪೯

N K Pai, R K. Pai

ಯಲ್ಲಾಪುರ—

ಮುಂಡಗೋಡ—

THE REGIONAL TRANSPORT AUTHORITY,
KARNATAK REGION, BELGAUM.

NOTICE

Applications in the prescribed form which can be had from this Office, are invited for permits to operate stage Carriage services on the following routes from the existing operators on the route, or from the Joint Stock Companies of all or Majority of the existing operators operating in or around the area or route for which application is made or others including local bodies in the Karnatak Region.

S No.	Name of route
1	Haliyal—Kalghatgi
2	Kalghatgi— Bankapur via Tadas, Indoor, Mundgod.
3	Gudgeri Rly Station to Laxmeshwar
4.	Gudgeri Rly Stn. to Bannikop via Laxmeshwar

All applications should be submitted so as to be received in this Office on or before 15-7-1949 and those received after this date will not be entertained.

Applications should clearly state the time-table proposed to be maintained and the standard rate of fare proposed to be charged per passenger per mile. They should be complete in all respects, and incomplete, they will be treated as invalid.

Permits will be granted on temporary basis in accordance with the existing instructions from Government and issued as and when the petrol quota allotted to this Region permits.

No. 4178 /1-B/KR of 1949, **D K SUKHTANKAR**, CAP
Regional Transport Office, K. R.,] Secretary, Regional Transport Authority
Belgaum, 27-6-1949 Karnatak Region, Belgaum

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.

ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲಾಜಿಂಗ

ದಿ. ಕೆನರಾ ಲಾಜ

[ಊಟ ಮತ್ತು ವಸತಿಗೃಹ]

ಮೋಟರ-ಸ್ಟ್ಯಾಂಡ, ಹುಬ್ಬಳ್ಳಿ.

ಮಾಲಕ: - ಮ್ಯಾಕನ್ನಾಪೈ.

ವರ್ಗಣಿಯ ದರ
ಒಂದು ವರ್ಷಕ್ಕೆ ರೂ ೩
ಆರು ತಿಂಗಳಿಗೆ ೧-೧೦-೦
ಮೂರು ತಿಂಗಳಿಗೆ ೧-೦-೦
ಬಿಡಿ ಸಂಚಿಕೆಗೆ ...೦-೧-೦
ವ್ಹಿ. ಪಿ.ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೇಕಾಗುವದು.
ವರ್ಗಣಿಯು ಹಣವನ್ನು
ಮುಂಗಡ ಕಳಿಸತಕ್ಕದ್ದು.

Reg. No. B. 1270. Monday, 11-7-1949.

ಕಾನಡಾವೃತ್ತ.

ವರ್ಷ ೩೨.] **THE KANARA NEWS.** [ಸಂಚಿಕೆ ೨.

ಕುಮಟಾ:- ಸೋಮವಾರ, ತಾ ೧೧—೭—೧೯೪೯.

ಜಾಹೀರಾತುಗಳ ದರ
೧ಇ ಎರಡು ಅಕ್ಷರ ಸ್ತಂಭದ
ಪ್ರತಿ ಸಾಲಿಗೆ ೫ ಆಣೆಯಂತೆ.
ಹೆಚ್ಚು ಅಥವಾ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಲುವಾಗಿ
ಬಿಲ್ಲದ ಪತ್ರವ್ಯವಹಾರ
ಸಂಪಾದಕರು

ಸ್ಥಳಿಕ ವಿಷಯುಗಳು

(ಲೇ:- ಸ್ಥಳವಂತಿಕ)

ಒಕ್ಕಲತನದ ಕಾನೂನಿನ ಕಾಮಿಟಿಗಳು ಇನ್ನೂ ಸ್ಥಿರವಾಗಲೊಲ್ಲವು. ಮೂಲಗೇಣಿಗೆ ಈ ಕಾನೂನು ಅನ್ವಯಿಸುವದಿಲ್ಲೆಂದು ಕಾರವಾರದ ಹಿಂದಿನ ದಿವಾಣಿ ನ್ಯಾಯಾಧೀಶರು ಒಂದು ದಾವೆಯಲ್ಲಿ ತೀರ್ಮಾನ ಕೊಟ್ಟಿದ್ದರು. ಈಗಿನ ನ್ಯಾಯಾಧೀಶರು ಸಹ ಇತ್ತಲಾಗಿ ೫-೬ ದಾವೆಗಳಲ್ಲಿ ಅದೇ ನಿರ್ಣಯವನ್ನು ಎತ್ತಿಹಿಡಿದಿರುತ್ತಾರೆ. ಈ ನಿಕಾಲೆಗಳು ಹಾಯಕೋರ್ಟ ತನಕ ಹೋಗಿ ಯಾವದೊಂದು ಕೊನೆಯ ನಿರ್ಣಯವಾಗಲು ೨-೩ ವರ್ಷಗಳಾದರೂ ಬೇಕು. ಆದರಿಂದ ದಿವಾಣಿ ನ್ಯಾಯಾಧೀಶರು ಈ ವಿಷಯದ ಮಹತ್ವವನ್ನರಿತು ಹಾಯಕೋರ್ಟಿಗೆ ನೇರವೇ ಈ ವಿವಾದವನ್ನು ಅರುಹಿ ಅದರ ನಿರ್ಣಯ ಪಡಕೊಳ್ಳುವದು ಸಯುಕ್ತಿಕ ತೋರುತ್ತಿದೆ. ಮುಂಬಯಿ ಸರಕಾರವು ಕೂಡ ಈ ತೀರ್ಮಾನವನ್ನು ಅಂಶತಃ ಒಪ್ಪಿಕೊಂಡಂತೆ ತಿಳಿಯುತ್ತದೆ. ಮೂಲಗೇಣಿದಾರರೊಳಗೆ ಸರಕಾರವು ೨ ವರ್ಗಗಳನ್ನು ಕಲ್ಪಿಸಿ, ಮೂಲಗೇಣಿ ಭೂಮಿಯನ್ನು ಸ್ವತಃ ಸಾಗುವಳಿ ಮಾಡದೆ ಬೇರೆಯವರಿಗೆ ಸಾಗುವಳಿಗೆ ಕೊಟ್ಟ ರೈತರಿಗೆ ಒಕ್ಕಲತನದ ಕಾನೂನು ಅನ್ವಯಿಸುವದಿಲ್ಲೆಂದೂ, ಸ್ವತಃ ಸಾಗುವಳಿ ಮಾಡುವ ಮೂಲಗೇಣಿದಾರರಿಗೆ ಒಕ್ಕಲತನದ ಕಾನೂನಿನ ನಿರ್ಬಂಧಗಳು ಅನ್ವಯಿಸುತ್ತವಾಗಿಯೂ ಸರಕಾರದವರ ಕಾಯಿದೆ ಪಂಡಿತರ ಅಭಿಪ್ರಾಯಪಟ್ಟ ಮೇರೆಗೆ ಸರಕಾರವು ಒಂದು ಪರಿಪತ್ರ ಹೊರಡಿಸಿ, ಈ ಅಭಿಪ್ರಾಯದಂತೆ ವಿವಾದಗಳನ್ನು ನಿರ್ಣಯಿಸಲು ಮುಲ್ಕೀ ಅಧಿಕಾರಿಗಳಿಗೆ ತಿಳಿಸಿರುತ್ತದಂತೆ. ಒಂದೇ ರಾಜ್ಯದಲ್ಲಿ ನ್ಯಾಯ ಇಲಾಖೆಗೂ ಮುಲ್ಕೀ ಇಲಾಖೆಗೂ ಈ ಪರಸ್ಪರವಿರೋಧವಾಗುವದು ವಿಚಾರಣೀಯ ವಲ್ಲ. ಒಡೆಯರೂ ಒಕ್ಕಲಿಗರೂ ಅದರಿಂದ ಅನಾವಶ್ಯಕವಾಗಿ ಹಾನಿಗೀಡಾಗುತ್ತಾರೆ. ಸರಕಾರಕ್ಕೂ ಅಪಕೀರ್ತಿ ಬರುತ್ತದೆ. ಸರಕಾರವೂ ನ್ಯಾಯ ಇಲಾಖೆಯೂ ಸಹಮತದಿಂದ ನಡೆಕೊಂಡರೆ ಮಾತ್ರ ರಾಜ್ಯಕ್ಕೆ ಕ್ಷೇಮವುಂಟು. ಆದರಿಂದ ಪ್ರಸ್ತುತ ವಾದವನ್ನು ಸರಕಾರವು ಮುಂಬಯಿ ಹಾಯಕೋರ್ಟಿನ ಮುಂದಿಟ್ಟು ಯಾವದೊಂದು ಕೊನೆಯ ನಿರ್ಣಯವನ್ನು ತ್ವರ್ಯವೇ ಮಾಡಿಕೊಳ್ಳುವದು ಉಚಿತ.

•••

ಹಳಿಯಾಳ ತಾಲೂಕಿನಲ್ಲಿ ಉದ್ಭವಿಸಿರುವ ವಿವಾದವನ್ನೂ ಸರಕಾರವು ನ್ಯಾಯ ಇಲಾಖೆಯಿಂದ ತ್ವರ್ಯ ನಿರ್ಣಯಿಸಿಕೊಳ್ಳಬೇಕು. ಹಿಂದೆ ಉತ್ಪತ್ತಿ-ಪಾಲು ಹೆಚ್ಚು ಸಿಗುತ್ತಿದ್ದಾಗ ಒಡೆಯರು ಕೆಲವೊಂದು ಸಾಗ್ವಳಿಯ ವೆಚ್ಚವನ್ನು ಪೂರೈಸುತ್ತಿದ್ದರು. ಒಡೆಯನೆಂದರೆ ಸೋಮಾರಿಯಾಗಿ ತನ್ನ ಮನೆಯೊಳಗೆ ಕೂತುಕೊಂಡು ಒಕ್ಕಲಿಗರ ಪರಿಶ್ರಮದ ಫಲವನ್ನು ಉಣ್ಣುವ ವ್ಯಕ್ತಿಯೆಂದು ಒಕ್ಕಲತನದ ಕಾನೂನು ಎಣಿಸಿ ಅವನಿಗೆ ಈಗ ೩ರಲ್ಲಿ ೧ ಪಾಲು ಕೊಟ್ಟಿದೆ! ಹೊಲದ ಸಾಗ್ವಳಿಯ ಖರ್ಚಿಗೆ ೧ ಪಾಲು, ಒಕ್ಕಲಿಗನ ಪರಿಶ್ರಮಕ್ಕೆ ೧ ಪಾಲು, ಒಡೆಯನ ಒಡೆತನಕ್ಕಾಗಿ ೧ ಪಾಲು; ಹೀಗೆ ೩ ಪಾಲು ಮಾಡಿ ಕಾನೂನ-ಕರ್ತರು ಅವನ್ನು ಹಂಚಿಹಾಕಿದ್ದಾರೆ. ಆದರೆ ಕಾನೂನಿನಲ್ಲಿ ಈ ವಿವರಗಳಿಲ್ಲ. ಒಕ್ಕಲತನದ ಹೋರಿಯಲ್ಲಿ ಒಡೆಯರ ಅಂಗವೇನೂ ಇರುವದಿಲ್ಲೆಂಬ ಸಿದ್ಧಾಂತ ಮಾಡಿಯೇ ಸರಕಾರದವರು ಈ ಕಾನೂನನ್ನು ರಚಿಸಿದ್ದಾರೆ. ಆದರೂ ಸಾಗ್ವಳಿಯ ವೆಚ್ಚದ ಒಂದಂಶವನ್ನು ಒಡೆಯನೇ ತೆರಬೇಕೆಂದೂ, ಅದನ್ನು ಅವನ ಅಂಶದೊಳಗಿಂದ ಮುರಿದುಕೊಳ್ಳಬೇಕೆಂದೂ, ಆ ಖರ್ಚನ್ನು ಮಾಮಲೇದಾರರು ಯಾ ಪ್ರಾಂತ ಸಾಹೇಬರು ತಮ್ಮ ಮರ್ಜಿಯಂತೆ ನಿರ್ಣಯಿಸತಕ್ಕದ್ದೆಂದೂ ಪ್ರಾಂತಿಕ ಸರಕಾರವು ಒಳ-ಹುಕುಮು ಹೊರಡಿಸಿದೆಯಂತೆ! ಅರ್ಧ ಪಾಲು ಬೇರೆ, ಕೊಟ್ಟ ಪಾಲು ಬೇರೆ ಹೀಗೆ ಬೇರೆ ಬೇರೆ ಪಾಲುಗಳು ಒಕ್ಕಲಿಗರಿಗೆ ದೊರೆತು ಒಡೆಯನ ಸುಲಿಗೆಯಾಗತೊಡಗಿದೆ.

•••

ಹಳಿಯಾಳ ತಾಲೂಕಿನ ವಾಳಾ ಹಳ್ಳಿಯ ೯|| ಎಕರೆ ಭೂಮಿಯೊಂದರಲ್ಲಿ ಒಬ್ಬ ರೈತನು ಸಾಗ್ವಳಿ ಮಾಡಿ ೮೦ ಚೀಲ ಭತ್ತ ಬೆಳಿಸಿದ್ದನು. ಮಾಮಲೇದಾರರು ೬ ಚೀಲ ಭತ್ತ ಆ ಹೊಲದ ಸಾಗ್ವಳಿಯ ಖರ್ಚೆಂದು ಹಿಡಿದು ಫೈಸಲೆ ಮಾಡಿದರು. ಅದರ ಮೇಲೆ ಆದ ಅಪೀಲಿನಲ್ಲಿ ಪ್ರಾಂತ ಸಾಹೇಬರು ಸಾಗ್ವಳಿಯ ಖರ್ಚು ೧೧| ಚೀಲ ಭತ್ತವಾಗುತ್ತದೆಂದು ಹಿಡಿದು ಮಾಮಲೇದಾರರ ಫೈಸಲೆಯಲ್ಲಿ ತಿದ್ದುಪಡಿ ಮಾಡಿದರು. ಹೀಗಾಗಿ ಒಡೆಯನಿಗೆ ೨೭ ಚೀಲ ಭತ್ತ ಸಿಗಬೇಕಾದಲ್ಲಿ ೨೩ ಚೀಲ ಭತ್ತ ಸಿಕ್ಕಿತು! ರೈತನಿಗೆ ೫೭ ಚೀಲ ಭತ್ತ ಸಿಕ್ಕಿತು! ಸಾಗ್ವಳಿಯ ಈ ಖರ್ಚು ನಿರ್ಧರಿಸುವದಕ್ಕೆ ನಿರ್ದಿಷ್ಟ ನೇಮವಿಲ್ಲ. ಎಲ್ಲವೂ ಸೋತ್ರಿಯಾಗಿದೆ! ರೈತನು ಪ್ರಾಂತಿಕ ಸರಕಾರಕ್ಕೆ ಪುನಃ ಅಪೀಲು ಮಾಡುತ್ತಿದ್ದರೆ, ಒಡೆಯನ ಪಾಲಿಗೆ ಇನ್ನೂ ಕತ್ತರಿ ಬೀಳುತ್ತಿತ್ತೋ ಏನೋ! ಒಕ್ಕಲತನದ ಕಾನೂನಿನಂತೆ ಸಾಗುವಳಿಯ ಖರ್ಚು ಪಡೆಯಲಿಕ್ಕೆ ಒಕ್ಕಲಿಗನು ಹಕ್ಕುದಾರನೋ ಹೇಗೆ, ಆ ಖರ್ಚು ಕೊಡಲಿಕ್ಕೆ ಒಡೆಯನು ಜೋಣಿಗಾರನೋ ಹೇಗೆ ಎಂಬ ಪ್ರಶ್ನೆಯು ಅಧಿಕೃತ ನಿರ್ಣಯವಾಗುವದು ಅವಶ್ಯವುಂಟು. ಸರಕಾರವಾಗಲಿ ದಿವಾಣಿ ನ್ಯಾಯಾಧೀಶರಾಗಲಿ ಮುಂಬಯಿ ಹಾಯಕೋರ್ಟಿನ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಿ ಕೊನೆಯ ನಿರ್ಣಯ ಪಡಕೊಳ್ಳುವದೊಳಿತು.

•••

ಒಕ್ಕಲತನದ ಕಾನೂನಿನಂತೆ ೫೦ ಎಕರೆ ಭೂಮಿಯನ್ನು ಯಾವನೊಬ್ಬ ಒಡೆಯನು ಸ್ವಂತ ಸಾಗ್ವಳಿಗಾಗಿ ಪಡಕೊಳ್ಳಬಹುದೆಂದು ಜನರ ತಿಳುವಳಿಕೆಯುಂಟು. ಸರಕಾರವಾದರೂ ಒಡೆಯರ ಸ್ವಂತ ಸಾಗ್ವಳಿಗೆ ಪ್ರೋತ್ಸಾಹ ಕೊಡುತ್ತದೆಂದು ಲೋಕಭಾವನೆಯಾಗಿದೆ. ಆದರೆ ಸ್ವಂತ ಸಾಗ್ವಳಿಗೆ ಭೂಮಿಯು ಕಬಜೆ ಕೊಡಿಸಬೇಕಾಗಿ ಅರ್ಜಿ ಮಾಡಿದರೆ ಮಾಮಲೇದಾರರು ಕೊಡಿಸುವದಿಲ್ಲೆಂದು ಸುರತ ಜಿಲ್ಲೆಯ "ಜೇಡೂತ ಸಂಘ"ದವರು ಕಂದಾಯ ಮಂತ್ರಿ ಮಾನ್ಯ ಮುರಾರಜಿ ದೇಸಾಯರ ಕಡೆಗೆ ನೊನ್ನೆಯೇ ದೂರಿಕೊಂಡಿದ್ದರು. "೫೦ ಎಕರೆಗಳಷ್ಟು ವಿಸ್ತೀರ್ಣ ಭೂಮಿ ಯಾಕೆ ಬೇಕು? ೨೦-೨೫ ಎಕರೆ ಕ್ಷೇತ್ರ ಸ್ವಂತ ಸಾಗ್ವಳಿಗೆ ಸಿಕ್ಕಿದರೆ ಸಾಕಾಗದೇ?" ಎಂದು ಆಗ ಮಂತ್ರಿಗಳು ನುಡಿದರೆಂದು ಸುದ್ದಿಯುಂಟು. ನಮ್ಮ ಜಿಲ್ಲೆಯೊಳಗೆ ಟೆನನ್ಸಿ ಅವ್ವಲ ಕಾರಕೂನರು ಅಷ್ಟು ಕ್ಷೇತ್ರವನ್ನಾದರೂ ಒಡೆಯರಿಗೆ ಸ್ವಂತ ಸಾಗವಳಿಗೆ ಕೊಡಿಸಬೇಕಾಗಿ ಮಂತ್ರಿಗಳು ಒಂದು

FOR BANKING SERVICE
IN TRADE, INDUSTRY, AND AGRICULTURE
APPROACH

The Agricultural & Industrial Bank, Ltd.,

(Established in 1934)

Head Office: **COONDAPOOR,** S. Kanara.

Branches.

1. Ankola	7. Gokarn.	13. Nagar.
2. Belgaum.	8 Haveri.	14. Shimoga.
3. Bhatkal.	9. Hubli.	15. Sirsi.
4. Coondapoor.	10. Karwar.	16. Somwarpet.
5 Dharwar.	11. Kumta.	17. Virajpet.
6. Gadag	12. Mangalore.	18. Honavar.

19. BOMBAY. (384 M. Jaipuria House, Kalbadevi Road.).

CURRENT, SAVINGS BANK AND FIXED DEPOSITS ARE ACCEPTED.

For terms, apply to the nearest Branch.

Coondapoor, 1st June. 1949.

K. Vaman Shenai,
CHAIRMAN.

ಆಜ್ಞಾಪತ್ರವನ್ನು ಹೊರಡಿಸಿದರೆ ನಮ್ಮಲ್ಲಿಯ ಹತಭಾಗ್ಯ ಒಡೆಯರು ಮಂತ್ರಿಗಳಿಗೆ ಚಿರ-ಋಣಿಯಾಗುವರು ನಮ್ಮ ಜಿಲ್ಹೆಯ ಒಡೆಯರಲ್ಲಿ ಬಹು ಸಂಖ್ಯಾಕರು ಸಣ್ಣ ಪುಟ್ಟ ಒಡೆಯರಾಗಿರುತ್ತಾರೆ ಮುಕ್ಕಾಲು ಪಾಲು ಒಡೆಯರ ಆಸ್ತಿ ೧೫ ಎಕರೆಗಳಿಗೆ ಮೀರ್ಕುವದಿಲ್ಲ ಇವರಿಗೆ ಒಕ್ಕಲಿಗರು ಈಗಿನ ನಿಯಂತ್ರಣದ ಮನ್ವಂತರದಲ್ಲಿ ಗೇಣಿಯನ್ನು ಕಾಳಿನ ರೂಪದಲ್ಲಿ ಕೊಡುವದಿಲ್ಲ! ಖಾತೆದಾರರೆಂದು ಅವರಿಗೆ ಅತ್ತ ಕೂಪನ್ನು ಕೂಡ ಸಿಗುವದಿಲ್ಲ! ದೈನ್ಯದಿಂದ ಬೇಡಿಕೊಂಡು ಕೂಪನ ದೊರೆಕಿಸಿದರೂ ಆ ಕೂಪನ್ನಿನ ಅಕ್ಕಿ ಹೊಟ್ಟೆಗೆ ಸಾಲುವದಿಲ್ಲ! ಕೃಷಿಕರ್ಮ ಮಾಡುವಾ ಅಂದರೆ ಹೊಲವೂ ಸಿಗುವದಿಲ್ಲ! ಕೃಷಿಕರ್ಮ ಬಿಟ್ಟು ಬೇರೆ ಉದ್ಯೋಗವೂ ಸಿಗುವದಿಲ್ಲ! ಹೀಗೆ ಒಡೆಯರು ಎಲ್ಲ ಪರಿಯಿಂದಲೂ ಕಷ್ಟದಲ್ಲಿ ಬಿದ್ದಿದ್ದಾರೆ! ಆಪದ್ಧನವೆಂದೂ, ಭದ್ರ ಆಸ್ತಿಯೆಂದೂ ಕಾಪಾಡಿಕೊಂಡಿಟ್ಟ ಆಸ್ತಿಯೂ ಈಗ ಒಕ್ಕಲಿಗರ ಪಾಲಾಗಿ ಬಿಟ್ಟಿದೆ! ಕಾಯದೆಯು ಒಡೆಯರಿಗೆ ದಯಪಾಲಿಸಿದ ಅನುಕೂಲತೆಗಳನ್ನು ಸರಕಾರವು ಗುಪ್ತ ಪರಿಪತ್ರಗಳಿಂದ ಸಂಕೋಚಗೊಳಿಸುವದು ನ್ಯಾಯ್ಯವಲ್ಲ ಸದ್ಯಕ್ಕೆ ಕಾರವಾರದೊಳಗಿನ ಜಿಲ್ಲಾ ನ್ಯಾಯಾಧೀಶರ ಮುಂದೆ ಒಕ್ಕಲತನದ ಕಾನೂನಿನ ಚರ್ಚೆ ನಡೆದಾಗ, ನ್ಯಾಯಾಧೀಶರು ಕಾನೂನಿನ ಉದ್ದೇಶವನ್ನು ಚರ್ಚಿಸತೊಡಗಿದರೆಂದೂ, ಆಗ ಒಕ್ಕಲಿಗರನ್ನು ಮನಸುಳಿಯರನ್ನಾಗಿ ಮಾಡುವದೇ ಈ ಕಾನೂನಿನ ಉದ್ದೇಶವಿರುತ್ತದಾಗಿ ವಕೀಲರು ಉದಾಹರಣಗಳನ್ನು ಕೊಟ್ಟು ಗಾಂಭೀರ್ಯದಿಂದ ಪ್ರತಿಪಾದಿಸಿದರೆಂದೂ ತಿಳಿಯುತ್ತದೆ ಸರಕಾರವು ಕಾನೂನಿನಂತೆ ನಡೆಯುವದಿಲ್ಲೆಂದೂ, ಒಕ್ಕಲಿಗರ ಪಕ್ಷ ಹಿಡಿದು ಒಡೆಯರನ್ನು ಕಾಡುತ್ತದೆಂದೂ ಲೋಕಾಭಿಪ್ರಾಯವಾಗಿದೆ ಇಂಥ ಪ್ರಕಾರಗಳಿಂದ ಸರಕಾರದ ಗೌರವ ಕಡಿಮೆಯಾಗುತ್ತದೆಂಬುದನ್ನು ಮರೆಯಲಾಗದು

⁂

ಅಂಕೋಲೆಯ ಅರ್ಬನ ಸಹಕಾರಿ ಬೇಂಕಿನವರೂ ಸಹಕಾರಿ ಇಲಾಖೆಯವರೂ ಲೆಕ್ಕ ತಪಾಸಕರೂ ಪದ್ಧತಿಯಿಂದ ಪರಸ್ಪರ ಸಹಕಾರ ಮಾಡಿ ಮೋಸಗಾರಿಕೆ ನಡಿಸಿದ ಸಂಗತಿಯೊಂದು ಇತ್ತಲಾಗಿ ಬೈಲಿಗೆ ಬಂದಿದೆ ಅರ್ಬನ ಬೇಂಕಿನಲ್ಲಿ ರೂ ೩,೦೦೦ಕ್ಕೂ ಕಡಿಮೆ ಲ್ಯಾ ಹಣ ಉಳಿಯಬಾರದೆಂಬ ನಿಯಮವುಂಟು ಅರ್ಬನ ಬೇಂಕಿನ ಸದ್ಯದ ಅಧ್ಯಕ್ಷರಿಗೆ ಇಷ್ಟು ಶಿಲ್ಕು ಹಣ ಹಾಗೆಯೇ ನಿರುಪಯೋಗಿಯಾಗಿ ಇರುವದು ಅನ್ಯಾಯಕರವೆಂದು ತೋರಿತು ಅವರು ಬೇಂಕಿನ ಭಂಡಾರದೊಳಗೆ ಯಾವನೊಬ್ಬ ಶೆಟ್ಟಿಯು ಇಲ್ಲದ ಸಾವುಕಾರನ ಹೆಸರಲ್ಲಿ ಬರೆದ ಚೀಟಿಯನ್ನು ಇಟ್ಟು, ಶಿಲ್ಕು ಹಣವನ್ನು ಕಳ್ಳತನದಿಂದ ಬಳಸಿಕೊಳ್ಳತೊಡಗಿದರು! ಬೇಂಕಿಗೆ ನಷ್ಟವಿಲ್ಲದೆ ಸಂಬಳವಿಲ್ಲದೆ ದುಡಿಯುವ ಸಂಘದ ಚಾಲಕರಿಗೆ ಬಡ್ಡಿಯಿಲ್ಲದೆ ಬಂಡವಲು ದೊರೆತು ಪ್ರಯೋಜನವಾಗತೊಡಗಿತು ಲೆಕ್ಕ ತಪಾಸಕರಿಗೂ ಸಹಕಾರಿ ಇಲಾಖೆಯ ಅಧಿಕಾರಿಗಳಿಗೂ ಪರಬಾರಾಯಿ ದೊರೆಯ ಹತ್ತಿತು ಇದಲ್ಲದೆ ರೂ ೯೦೦ರ ಚೆಕ್ಕಿಗೆ ರೂ ೧೯೦ ಖರ್ಚು ಹಾಕಿ ನಡುವಿನ ರೂ ೧೦೦ ಬಳಸಿಕೊಳ್ಳುವ ಕ್ರಮವೂ ಈ ಬೇಂಕಿನಲ್ಲಿ ಉಂಟಂತೆ! ಹುಂಡಿಯ ಹಣವನ್ನು ಹುಂಡಿ ಸ್ವೀಕರಿಸಿದವರು ವಸೂಲ ಕೊಟ್ಟ ಬಳಿಕ ಅದನ್ನು ಲೆಕ್ಕದಲ್ಲಿ ಜಮಾ ಕೊಳ್ಳದೆ ಉಪಯೋಗಿಸಿಕೊಂಡು ಲಾಭ ಪಡೆಯುವ ಪದ್ಧತಿಯೂ ಉಂಟಂತೆ! ಇದೂ ಸಾಲದಿದ್ದರೆ ಇನ್ನೊಂದು ಪದ್ಧತಿಯಿದೆ ಹಣವಿಲ್ಲದಿದ್ದರೂ ಬೇಂಕಿನಲ್ಲಿ ಒಂದು ಖಾತೆ ತೆರೆದು ಕಿಸೆಯೊಳಗೆ ಚೆಕ್ಕ ಬೂಕನ್ನು ಇಟ್ಟುಕೊಂಡು ಶ್ರೀಮಂತಿಕೆ ಮೆರೆಸುವ ಜನರು ಕೆಲವರಿದ್ದಾರೆ ಸ್ಥಳಿಕ ಬೇಂಕಿನ ಮೇಲೆ ಸಾವಿರಾರು ರೂಪಾಯಿಗಳ ಚೆಕ್ಕು ಬರಿಸಿಕೊಂಡು, ಆ ಚೆಕ್ಕಿನ ಹಣ ಲೆಕ್ಕದಲ್ಲಿ ಖರ್ಚ ಹಾಕಿ ಸಂಘದ ಚಾಲಕರು ಅದನ್ನು ಬಳಸಿಕೊಂಡ ಉದಾಹರಣೆಗಳು ಇವೆ ಠೇವುದಾರರು ತಮ್ಮ ಹಣ ತಿರುಗಿ ಪಡೆಯಲು ಬಂದಲ್ಲಿ ಚಿಲ್ಲರೆಯ ಗಂಟುಗಳನ್ನು ತೋರಿಸಿ ಅವರಿಗೆ ಹಿಂದಕ್ಕಟ್ಟುವ ಹಂಚಿಕೆಯೂ ನಡೆದದ್ದುಂಟು ನಿಯಂತ್ರಣಗಳು ರದ್ದಾದ ಬಳಿಕ ಭತ್ತದ ಖರೀದಿಗೆ ಒಂದು ಇಸಮನ್ನು ನೇಮಿಸಿಕೊಂಡು, ಭತ್ತದ ಖರೀದಿಯ ಬಗ್ಗೆ ಬೇಂಕಿನ ಹಣ ಖರ್ಚುಹಾಕಿ, ಖರೀದಿಯಾದ ಭತ್ತವನ್ನು ಸ್ವಾಧೀನಪಡಿಸಿಕೊಳ್ಳದೆ, ಅದನ್ನು ಆ ಇಸಮಿನ ಕಡೆಗೇ ಇರಗೊಟ್ಟು, ಭತ್ತದ ದರ ಏರಿದ ತರುವಾಯ ಏರಿದ ದರದಿಂದ ಅದೇ ಆ ಇಸಮಿನ ಕಡೆಯಿಂದ ಭತ್ತ ಖರೀದಿಸಿತೆಂದು ಮಾಡಿ ೮-೧೦ ಸಾವಿರ ರೂ ಆ ಇಸಮಿಗೆ ಪ್ರಾಪ್ತಿ ಮಾಡಿಕೊಟ್ಟು, ಅದನ್ನು ಮುಂದೆ ಸಂಘದ ಚಾಲಕರು ತಮ್ಮೊಳಗೆ ಹಂಚಿಕೊಂಡು ಬೇಂಕಿಗೆ ಸಲ್ಲಿಸಿದ ಉಚಿತ ಸೇವೆಯ ಋಣಮೋಚನ ಮಾಡಿಕೊಂಡಿದ್ದಾರೆ! ಈ ಅರ್ಬನ ಬೇಂಕಿಗೆ ನಿಯಂತ್ರಣ ಯುಗದಲ್ಲಿ ಒಂದು ಸೀಧಾ ಅಂಗಡಿ ಸಿಕ್ಕಿದೆ ಅದನ್ನು ಬೇಂಕಿನವರು ಸ್ವತಃ ನಡಿಸುವದಿಲ್ಲ ಒಂದು ಒಳ ಕರಾರು ಮಾಡಿಕೊಂಡು ಬೇರೊಬ್ಬನಿಗೆ ಒಪ್ಪಿಸಿದ್ದಾರೆ! ಮತ್ತು ಅಂಗಡಿಯ ಅರ್ಧ ಲಾಭವನ್ನು ಆ ಇಸಮಿಗೆ ಕೊಡುತ್ತಾರೆ, ಉಳಿದ ಅರ್ಧ ಲಾಭವನ್ನು ಬೇಂಕು ಪಡಕೊಳ್ಳುತ್ತಿದೆ ಈ ರೀತಿ ಸಹಕಾರಿ ಬೇಂಕು ಸೀಧಾ ಅಂಗಡಿಯನ್ನು ಬೇರೆಯವರಿಗೆ ಪಾಗಡಿಗೆ ಕೊಟ್ಟು ಲಾಭ ಮಾಡಿಕೊಳ್ಳಬರುತ್ತದೇನೆಂದು ಕೆಲವರು ಪ್ರಶ್ನೆ ಮಾಡುತ್ತಾರೆ ಅರ್ಬನ ಬೇಂಕಿನ ಈ ವಂಚನೆಯ ಪ್ರಕಾರಗಳನ್ನೆಲ್ಲ ಒಬ್ಬರು ರಜಿಸ್ಟ್ರಾರರಿಗೆ ತಿಳಿಸಿದರೆಂದೂ, ಆಗ ಅಸಿಸ್ಟಂಟ ರಜಿಸ್ಟ್ರಾರರು ಅಂಕೋಲೆಯಲ್ಲಿ ಮುಕ್ಕಾಮು ಮಾಡಿ ಅಪರಾಧಿಗಳನ್ನೆಲ್ಲ ಕ್ಷಮಿಸಿದರೆಂದೂ (!) ತಿಳಿಯುತ್ತದೆ! ಬೇಂಕಿನ ಹಣವನ್ನು ಮೋಸಗಾರಿಕೆಯಿಂದ ಉಪಯೋಗಿಸಿಕೊಂಡ ಕಳ್ಳರಿಂದ ಅಸಿಸ್ಟಂಟ ರಜಿಸ್ಟ್ರಾರರು ಬಡ್ಡಿಯನ್ನು ಸಹ ವಸೂಲ ಮಾಡಿದ್ದಾರಂತೆ ಅ|| ರಜಿಸ್ಟ್ರಾರರ ವರ್ತನೆಯನ್ನೂ ಬೇಂಕಿನ ಚಾಲಕರ ನಡಾವಳಿಯನ್ನೂ ಲಂಚ ನಿರ್ಮೂಲನ ಇಲಾಖೆಯವರು ಕೂಲಂಕಷವಾಗಿ ಪರ್ಯಾಲೋಚಿಸಿ, ಅಪರಾಧಿಗಳನ್ನು ನ್ಯಾಯಸ್ಥಾನಕ್ಕೆ ಎಳೆದೊಯ್ಯಬೇಕೆಂದು ಜನರ ಬೇಡಿಕೆಯುಂಟು ಈ ತರದ ವಂಚನೆಯು ಈಗ ೧-೨ ವರ್ಷಗಳಿಂದ ನಡೆಯುತ್ತಿದ್ದರೂ ಅದನ್ನು ಲೆಕ್ಕ ತಪಾಸಕರು ಕಂಡುಹಿಡಿಯದಿದ್ದದ್ದು ಸೋಜಿಗದ ಮಾತೆಂದು ಹೇಳಲಾಗುತ್ತಿದೆ ಹೊರಗಿನವರೊಬ್ಬರು ರಜಿಸ್ಟ್ರಾರರಿಗೆ ಅರ್ಜಿ ಮಾಡುವ ವರೆಗೆ ಸಹಕಾರಿ ಇಲಾಖೆಯ ಅಧಿಕಾರಿಗಳಿಗೆ ಒಳಗಿಂದೊಳಗೆ ನಡೆಯುತ್ತಿದ್ದ ಈ ಕೋಳಿ ದೃಗ್ಗೋಚರವಾಗದಿದ್ದದ್ದು ಆಶ್ಚರ್ಯವೇ ಸರಿ

⁂

ತಾ ೧೩—೬—೧೯೪೯ ರ "ವೃತ್ತ" ದಲ್ಲಿ ನಮ್ಮ ಜಿಲ್ಹೆಯೊಳಗಿನ ಪೆಟ್ರೋಲ ಪೂರೈಕೆಯ ಅಫಲತೆಯಲ್ಲಾದ ಅವ್ಯವಸ್ಥೆಯ ಕುರಿತು ಬಂದ ಟೀಕೆಯನ್ನು ಜಿಲ್ಹಾಧಿಪ ರಾ|| ಅಲ್ಲಾಬಕ್ಷರವರು ಪರಾಂಬರಿಸಿ, ಆ ಬಗ್ಗೆ ತಾ ೮-೭-೪೯ ನೇಗೆ ಖುಲಾಸೆ ಮಾಡಿರುತ್ತಾರೇನಂದರೆ — ಈ ಜಿಲ್ಹೆಗೆ ಬೇಕಾಗುವ ಪೆಟ್ರೋಲ ಎಣ್ಣೆಯ ಪೂರೈಕೆಯನ್ನು ಆಗಿಂದಾಗ ಪರಿಷ್ಕರಿಸಿಕೊಳ್ಳಲು ಅನುಕೂಲವಾಗಬೇಕೆಂದು ಪೆಟ್ರೋಲ-ಕೂಪನ್ನುಗಳನ್ನು ಪುನಃ ಸಿಂಧಗೊಳಿಸಿಕೊಳ್ಳಬೇಕೆಂಬ ನಿರ್ಬಂಧವನ್ನು ವಿಧಿಸಲಾಯಿತು ಆವಶ್ಯಕ ಮತ್ತು ಅನಾವಶ್ಯಕ ಕಾರ್ಯಗಳ ಯೋಗ್ಯಾಯೋಗ್ಯತೆ ನೋಡಿ ಪೆಟ್ರೋಲ ಎಣ್ಣೆ ಹಂಚಿಕೊಡಬೇಕಾಯಿತು ಮಾರ್ಚ ತಿಂಗಳಲ್ಲಿ ಕೆಲವು ಮೋಟರ ಸರ್ವಿಸ್ಸುಗಳನ್ನು ಪೆಟ್ರೋಲಿನ ಬರಗಾಲದ ಮೂಲಕ ಕಡಿಮೆ ಮಾಡುವ ಪ್ರಸಂಗ ಬಂತೆಂಬುದು ನಿಜ ಆದರೆ ನಡಿಸಲಿಕ್ಕೆ ಅಪ್ಪಣೆ ಸಿಕ್ಕ ಮೋಟಾರ ವಾಹನಗಳಿಗೆ ತಕ್ಕಷ್ಟು ಎಣ್ಣೆ ಸಮಾಧಾನಕರವಾಗಿ ಪೂರೈಸೋಣಾಗಿದೆ ಪೆಟ್ರೋಲಿನ ಪೂರೈಕೆ ಸುಧಾರಿಸಿದ ಹಾಗೆ ಸರಕು ಒಯ್ಯುವ ಬಂಡಿಗಳಿಗೂ ಇತರ ಖಾಸಗಿ ವಾಹನಗಳಿಗೂ ಹೆಚ್ಚೆಚ್ಚು ಎಣ್ಣೆ ಪೂರೈಸಲಾಗಿದೆ ತಡೆದಿಟ್ಟ ಮೋಟಾರ ಸರ್ವಿಸ್ಸುಗಳು ಸಹ ಕ್ರಮವಾಗಿ ಪುನಃ ಪ್ರಾರಂಭಿಸಲ್ಪಟ್ಟವೆ ಮಳೆ ಬೀಳುವ ಮುಂಚೆಯೇ ಆಹಾರ ಧಾನ್ಯಗಳನ್ನು ಯಲ್ಲಾಪುರ-ಹಳಿಯಾಳ ಕಡೆಯಿಂದ ತ್ವರ್ಯವಾಗಿ ಹೊರಗೆ ಸಾಗಿಸುವ ಪ್ರಸಂಗವಿದ್ದದರಿಂದ ಆ ಭಾಗದೊಳಗೆ ಮೇ ತಿಂಗಳಲ್ಲಿ ಮಾತ್ರ ಇತರರಿಗೆ ಪೆಟ್ರೋಲ-ಕೂಪನುಗಳನ್ನು ಪುನಃ ಸಿಂಧುಗೊಳಿಸಕೂಡಲಿಲ್ಲ ಈ ಕಚೇರಿಯವರು ಕೂಪನ್ನುಗಳನ್ನು ಸಾರಾಸಾರ ವಿಚಾರ ಮಾಡದೆ ತಮ್ಮ ಲಹರಿಯಂತೆ ಪುನಃ ಸಿಂಧುಗೊಳಿ

ಜಾಹೀರ ನೋಟೀಸು.

ಕುಮಟಾ ಶ್ರೀ ಶಾಂಭೇಶ್ವರ ದೇವ ಹಾಗೂ ಶ್ರೀ ವಿನಾಯಕ (ಉಪ್ಪಿನ ಗಣಪತಿ) ದೇವರ ನಾಲ್ಕು ತಿಂಗಳ ಅರ್ಚಕತನದ ಹಕ್ಕುದಾರ ಶಂಕರ ರಾಮಕೃಷ್ಣ ಭಟ್ಟ ಇವರು ಶ್ರೀ ದೇವರ [illegible] ಕುಮಟಾ ಗ್ರಾಮದ ಸರ್ವೇ ನಂಬರ ೮೨ ಮತ್ತು ೪೧೧ ರ ಸ್ಥಳಗಳ ಅರ್ಚಕತನದ ಜವಾಬದಾರಿಯಿಂದ ಅನುಭವಿಸಿ ಬರಬೇಕೆಂದ ನಿರ್ಬಂಧವಿರುತ್ತದೆ ಹೀಗಿರುವಲ್ಲಿ ಸದರ ಆಸ್ತಿಯನ್ನು ಸದರಿಯವರು ಪರಾಧೀನ ಮಾಡುವ ಆಲೋಚನೆಯಲ್ಲಿರುವದಾಗಿ ತಿಳಿಯುತ್ತದೆ ಸದರಿಯವರು ಶ್ರೀ ದೇವರಲ್ಲಿ ಅರ್ಚಕತನವನ್ನು ಸರಿಯಾಗಿ ನಡಿಸಿ ಬರುವದಿಲ್ಲೆಂದು ಹಲವು ಭಕ್ತರ ಆಕ್ಷೇಪಗಳೂ ಇರುತ್ತವೆ ಸ ನ ೮೧ರಲ್ಲಿ ಅನಾದಿಯಿಂದ ಶ್ರೀ ದೇವರ ಪಕ್ಕದ ಅಶ್ವತ್ಥಕಟ್ಟೆ ಇರುತ್ತದೆ ಆ ಕಟ್ಟೆಯ ಮೇಲೆ ಶ್ರೀ ಹನುಮಂತ ದೇವ ಮತ್ತು ಇತರ ದೇವರ ಮೂರ್ತಿಗಳು ಇದ್ದು ಶ್ರೀ ಹನುಮಂತ ದೇವರ ವಿಗ್ರಹವನ್ನು ಸದರ ಶಂಕರ ಭಟ್ಟರು ತೆಗೆದು ಬಾವಿಕಟ್ಟೆಯ ಮೇಲೆ ಇಟ್ಟಿದ್ದಾರೆ ಇತರ ದೇವರ [illegible] ಬಿದ್ದಿದ [illegible] ಕಲ್ಲುಗಳನ್ನು ಒಂದೊಂದಾಗಿ ತೆಗೆದು ಅಲ್ಲಿ ಸಮತಲ ಮಾಡುವ ಉದ್ಯೋಗ ನಡೆದಿದೆ ಈ ಪ್ರಕಾರದ ಅಕೃತ್ಯಗಳನ್ನು ಮಾಡಿದ ಬಗ್ಗೆ ಅವರ ಮೇಲೆ ಕ್ರಿಮಿನಲ್ [illegible] ಸದರಿಯವರಿಂ ಆಸ್ತಿಯನ್ನು ಯಾರೂ ಯಾವದೇ ರೀತಿಯಿಂದ ಪರಾಧೀನಪಡಿಸಿಕೊಳ್ಳಕೂಡದು, ಮಾಡಿಕೊಂಡರೆ ಶ್ರೀ ದೇವರ ಹಕ್ಕಿಗೆ ಬಾಧಕ ಬರಲಿಕ್ಕಿಲ್ಲ ತಿಳಿಯುವದು

ಕುಮಟಾ, ತಾ ೯-೭-೧೯೪೯

ಶ್ರೀ ದೇವರ ನಿಷ್ಠಕ ಮುಕ್ತೇಸರರು—

ದತ್ತಾತ್ರಯ ಗಣಪಯ್ಯ ಭಟ್ಟ ಕುಂಬೆ [illegible]

ಅನಂತ ರಾಮಕೃಷ್ಣ ಹೆಗಡೆ ಬಗ್ಗೋಣ

ಸ್ಥಾನಿಕ ವೃತ್ತಾಂತ.

ಸವಣೂರ— [illegible]

[illegible]

[illegible]

ಹೊನ್ನಾವರ— [illegible]

[illegible]

ಕೇಳಿದ್ದು, ಕಂಡದ್ದು.

(ಜಿಲ್ಲಾ ಸಂಚಾರಿಯು ಬರೆಯುವ)

[illegible]

[illegible]

[illegible]

* * *

[illegible]

[illegible]

* * *

[illegible]

ಸಿ ಕೊಟ್ಟರೆಂಬ ಆರೋಪ ನಿರಾಧಾರವಾದದ್ದೆಂ ಪ್ರಾದೇಶಿಕ ವಾಹನ ನಿಯಂತ್ರಣಾಧಿಕಾರಿಗಳ ಸಲಹೆಯಂತೆ, ಜಿಲ್ಲೆಯೊಳಗಿರುವ ಪೆಟ್ರೋಲಿನ ಶಿಲ್ಕಿನ ಮತ್ತು ಪೆಟ್ರೋಲು ಕೂಪನ್ನುಗಳ ಪೂರ್ಣ ವಿಚಾರ ಮಾಡಿಯೇ ಅವನ್ನು ಸಿದ್ಧಗೊಳಿಸಿಕೊಟ್ಟಿದೆ ಆಹಾರ ಧಾನ್ಯಗಳನ್ನು ಒಯ್ಯುವ ಯಾವದೇ ವಾಹನಕ್ಕೆ ಪೆಟ್ರೋಲ ಎಣ್ಣೆಯನ್ನು ನಿರಾಕರಿಸಿದ್ದರ ವಿಲ್ಲ ಆಹಾರ ಧಾನ್ಯವನ್ನು ಸಾಗಿಸುವವರಿಗೆ ಮೊದಲ ಪ್ರಾಧಾನ್ಯತೆ ಕೊಡಲಾಗುತ್ತಿತ್ತು ಈ ಜಿಲ್ಲೆಯಲ್ಲಿ ಕಟ್ಟಿಗೆಯ ವ್ಯಾಪಾರ ಅತಿ ಮಹತ್ವದ ಉದ್ದಿಮೆಯಾಗಿರುವದರಿಂದ ಅದಕ್ಕೆ ತಕ್ಕಷ್ಟು ಪೆಟ್ರೋಲ ಕೊಡಲಾಯಿತು ಅಗತ್ಯದ ಸರಕಾರಿ ಕೆಲಸಗಳಿಗೂ ಬಹಳ ಕಟ್ಟಿಗೆಯನ್ನು ಸಾಗಿಸಿಕೊಳ್ಳುವದಿತ್ತು ಹೀಗಾಗಿ ಮಳೆ ಹಿಡಿಯುವ ಮುಂಚೆ ಕಾಡಿನಿಂದ ಕಟ್ಟಿಗೆ ಸಾಗಿಸುವ ಕಾರಣ, ಕೆಲವು ಕಂಟ್ರಾಕ್ಟರರು ಕಟ್ಟಿಗೆಯನ್ನು ಅಡವಿಯೊಳಗಿಂದ ಹೊರತರಬೇಕಿತ್ತು ಆದರೆ ಯಾವದೇ ಕಂಟ್ರಾಕ್ಟರರಿಗೆ ಒಂದೇ ಸಲಕ್ಕೆ ೩೦೦೦ ಗ್ಯಾಲನ್ನ ಪೆಟ್ರೋಲು ಕೊಟ್ಟಿರುವದಿಲ್ಲ ಡಿವಿಜನಲ್ ಫಾರೆಸ್ಟ ಆಫೀಸರರು ಜಂಗಲ ಕಂಟ್ರಾಕ್ಟರರಿಗೆ ಬೇಕಾಗುವ ಪೆಟ್ರೋಲಿನ ಕನಿಷ್ಠ ಮರ್ಯಾದೆಯನ್ನು ತಿಳಿಸಿದ್ದರ ಆ ಮಿತಿಯೊಳಗೇ ಕಂಟ್ರಾಕ್ಟರರಿಗೆ ಪೆಟ್ರೋಲು ಕೊಡಲ್ಪಟ್ಟಿದೆ ಪೆಟ್ರೋಲಿನ ಶಿಲ್ಕು ಕೆಲವು ದಿನ ಕಾಲ ಹೆಚ್ಚಾದದ್ದು ನಿಜವಿದೆ ಆದರೆ ಮಳೆಗಾಲದ ಬಗ್ಗೆ ಸಾಕಷ್ಟು ಎಣ್ಣೆ ಸಂಗ್ರಹಿಸಿ ಇಡಬೇಕಾದ್ದರಿಂದ ಪೆಟ್ರೋಲನ್ನು ಕೈ ಬಿಗಿ ಹಿಡಿದು ಉಪಯೋಗಿಸಬೇಕಾಯಿತು ಈ ಜಿಲ್ಲೆಯ ಬಗ್ಗೆ ಬಂದ ಪೆಟ್ರೋಲ ಎಣ್ಣೆಯ ಪೀಪಾಯಿಗಳನ್ನು ಇಡಲು ಸ್ಥಳವಿಲ್ಲದ್ದರಿಂದ ಬೇರೆ ಕಡೆಗೆ ಕಳಿಸಬೇಕಾಯಿತೆಂಬ ವಿಧಾನ ಸಂಪೂರ್ಣ ಸುಳ್ಳು ಇರುತ್ತದೆ ಈ ಜಿಲ್ಲೆಯಲ್ಲಿ ಮೋಟಾರ ವಾಹನಗಳಷ್ಟೇ ಸಾರಿಗೆಯ ಸೌಕರ್ಯವನ್ನೊದಗಿಸುತ್ತವೆಂಬುದು ನಮಗೆ ಪೂರ್ಣ ಗೊತ್ತಿದೆ ಅಂತೆಯೇ ನಾವು ಕಾಲಕಾಲಕ್ಕೆ ಮೋಟಾರ ವಾಹನಗಳಿಗೆ ಕೈಬಿಟ್ಟು ಪೆಟ್ರೋಲ ಕೊಟ್ಟಿರುತ್ತೇವೆ ಇತ್ಯಾದಿ

* * *

“ಹರಿಜನ” (ತಾ ೨೬-೬-೪೯) ಪತ್ರಿಕೆಯಲ್ಲಿ ಪ್ರಕಟವಾದ ಒಂದೆರಡು ಮಾತುಗಳು ಸ್ಥಳಿಕ ಜನರಿಗೆ ಉದ್ಬೋಧಕವಿದೆ ಕೃತ್ರಿಮ ಗೊಬ್ಬರವನ್ನು ಉಪಯೋಗಿಸಿ ಹೆಚ್ಚೆಚ್ಚು ಬೆಳೆ ಬೆಳೆಸುವ ಹುಚ್ಚಾಟವೊಂದು ಈಗ ನಮ್ಮ ನಾಡಿನೊಳಗೆ ನಡೆದಿದೆ ಕೃತ್ರಿಮ ರೀತಿಯಿಂದ ಮಳೆ ಸುರಿಸುವ ಸಂಶೋಧನೆಯಾಗಿದೆಂದೂ ಪ್ರಕಟವಾಗಿದೆ ಕೃಷಿ-ವ್ಯಾಪಾರಗಳನ್ನು ಕಡೆಗಣಿಸಿ ಶಾಸ್ತ್ರೀಯ ಸಂಶೋಧನೆಗಳಿಂದ ಜನ-ಸುಖ ಸಮೃದ್ಧಿಗೈಯ್ಯುವ ಪ್ರಕಾರಗಳು ನಮ್ಮ ಹಿಂದುಸ್ತಾನದೊಳಗೆ ನಡೆದಿವೆ ವಿದೇಶಗಳಲ್ಲಿ ಕೃಷಿ-ವ್ಯಾಪಾರದ ರಹಸ್ಯ ಗ್ರಹಿಸಿ ಅದಕ್ಕನುಗುಣವಾಗಿ ನಡೆಕೊಳ್ಳುವ ಕ್ರಮ ನಡೆದಿದೆ ಕೃತ್ರಿಮ ಗೊಬ್ಬರದ ಉಪಯೋಗದಿಂದ ಭೂಮಿಯ ನೈಸರ್ಗಿಕ ತೇಜ ಕಡಿಮೆಯಾಗಿ ಕ್ರಮೇಣ ಭೂಮಿ ಬಂಜೆಯಾಗುತ್ತಿದೆ ನಂಜೂಳಿಯ ಹುಳಗಳಿಂದ ಮಣ್ಣಿನಲ್ಲಿ ಬೆಳೆಗೆ ಆವಶ್ಯವುಳ್ಳ ಒಂದು ಗೊಬ್ಬರ ತಯಾರಾಗುತ್ತದಾಗಿ ಅಸ್ಟ್ರೇಲಿಯಾದೊಳಗ ಕಂಡು ಹಿಡಿಯಲಾಗಿದೆ ರಾಸಾಯನಿಕ ಗೊಬ್ಬರಗಳನ್ನು ಹಾಕಿದರೆ ಈ ಹುಳಗಳು ಸತ್ತು ಹೋಗುತ್ತಿವೆ ಆದರಿಂದ ರಾಸಾಯನಿಕ ಗೊಬ್ಬರ ಉಪಯೋಗಿಸಕೂಡದೆಂದೂ ನಂಜೂಳಿ ಹುಳಗಳ ಅಭಿವೃದ್ಧಿಯಾಗುವಂತೆ ಏರ್ಪಾಟು ಆಗಬೇಕೆಂದೂ ಸಿದ್ಧೇಯಾ-

ಗಿನ ಹೆರೋಲ್ಡ್ ಕಾರ್ಡ ಎಂಬವರು ಬರೆದು, ನಂಜೂಳಿ ಹುಳಗಳನ್ನು ಪೋಷಣೆ ಮಾಡುವ ಒಂದು ಸಂಘವನ್ನು ಸಹ ಏರ್ಪಡಿಸಿದ್ದಾರೆ ನಂಜೂಳಿ ಕಾಂಪೋಸ್ಟ ಸಸ್ಯ ಪ್ರಾಣಿಗೆ ಜೀವನಾಧಾರ ಕೊಡುತ್ತದೆಂದೂ, ಅದನ್ನು ಸಾಕಬೇಕೆಂದೂ, ತೋಟದಲ್ಲಿ ಅದನ್ನು ಬಿಳಿಯಗೊಟ್ಟರೆ ಒಳ್ಳೇ ಕಾಯಿಪಲ್ಲೆ ಮತ್ತು ಹೂವು ಬೆಳೆಯುತ್ತವೆ ಎಂದು ಅಭಿಪ್ರಾಯವಿದೆ ೨೫೦ ಹುಳಗಳು ೧ ಪೆಟ್ಟಿಗೆಗೆ ೧ ಪವನಿನಂತೆ ಅವರು ಬೆಲೆ ಇಡಬಯಸುತ್ತಾರೆ ನಮ್ಮಲ್ಲಿಯ ಬೇಸಾಯಗಾರರು ಇದರಿಂದ ತಕ್ಕ ಬೋಧ ಪಡೆದು ತಮ್ಮ ಕೃಷಿಕರ್ಮವನ್ನು ಸುಧಾರಿಸಬೇಕು

ಪ್ರೊ-ಕೋಪೀಯ ಶಾಮೇಶ್ವರ ಶರ್ಮಾ ಇವರು ಆಹಾ ‘ಹರಿಜನ’ ಪತ್ರಿಕೆಯಲ್ಲಿ ಬರೆದ ಇನ್ನೊಂದು ಲೇಖದೊಳಗೆ, ಹಿನ್ನೆಲ ಸೂಡಬಾದ ವಿಷಾದಕರ ಯಗಳಿಂದ ದೂಷಿತ ನಾಶ ಮಾಡಿ ಪ್ರದೂಷವನ್ನು ನಿರ್ಮೂಲಗೊಳಿಸುವ ಪ್ರಕಾರಕ್ಕಿಂತ ಸ್ವಚ್ಛವಾದ ಸೆಗಣಿ ಇಲ್ಲವೆ ಮಣ್ಣು ಮೊದಲಾದ ಸ್ವಾಭಾವಿಕ ವಸ್ತುಗಳಿಂದ ಅದನ್ನು ನಿರ್ಮೂಲಗೊಳಿಸುವ ಕ್ರಮವೇ ಹೆಚ್ಚಿಗೆ ಹಿತಕಾರಿಯಿರುತ್ತದೆಂದು ಅಭಿಪ್ರಾಯಪಟ್ಟಿದ್ದಾರೆ

ಕೆನರಾ ಕಾಲೇಜಿನವರ ಸ್ವಂತ ವಿದ್ಯಾರ್ಥಿ-ವಸತಿಗೃಹವು ಇನ್ನೂ ಪೂರ್ಣ ತಯಾರಾಗದಿರುವದರಿಂದ ಕಾಲೇಜಿನವರು ಸಧ್ಯಕ್ಕೆ ಕುಮಟಾ ತಾಲೂಕ ಕಚೇರಿಯ ಬಳಿಯಲ್ಲಿರುವ ಪಂಡಿತ ಹಾಸ್ಪಿಟಲ್ಲಿನಲ್ಲಿ ತಮ್ಮ ವಸತಿಗೃಹವನ್ನಿಟ್ಟಿದ್ದಾರೆ ಇಲ್ಲಿರುವ ವಿದ್ಯಾರ್ಥಿಗಳಿಗೂ ಶಿಹರದ ದಕ್ಷಿಣ, ಪಶ್ಚಿಮ ಇಲ್ಲವೆ ಉತ್ತರ ಭಾಗದಲ್ಲಿರುವ ಕಾಲೇಜ-ವಿದ್ಯಾರ್ಥಿಗಳಿಗೂ ಕೊಲೇಜಿಗೆ ಹೋಗುವದು ಕಷ್ಟವಾಗುತ್ತಿದೆ ಅವರ ಅನುಕೂಲಕ್ಕಾಗಿ ಯಾವದೊಂದು ಸ್ಥಾನಿಕ ಮೋಟಾರ ಸಾರಿಗೆ ಕಂಪನಿಯವರು ಚಿಕ್ಕದೊಂದು ನಗರ ಸಾರಿಗೆ ಸರ್ವಿಸ್ಸನ್ನು ಇಟ್ಟು, ಕೊಲೇಜು ಪ್ರಾರಂಭವಾಗಲು ೨೦-೨೫ ನಿಮಿಷಗಳಿರುವಾಗ ಮೂರೂ ಕಟ್ಟೆಯ ಸಮೀಪದಿಂದ ಒಂದು ಗಾಡಿಯನ್ನೂ ಹಳೇ ಪೋಲೀಸ-ಶಿಬಿರಗಳದ್ದಲ್ಲಿಂದ ಇನ್ನೊಂದು ಗಾಡಿಯನ್ನೂ ಕೊಲೇಜ-ಮಂದಿರದ ವರೆಗೆ ಓಡಾಡಿಸುವ ಹಾಗೂ ಸಾಯಂಕಾಲದಲ್ಲಿ ಕೊಲೇಜು ಮುಚ್ಚಲ್ಪಟ್ಟ ಮೇಲೆ ಕೊಲೇಜಿನಿಂದ ಹೋಗಬೇಕಾದ ವಿದ್ಯಾರ್ಥಿಗಳನ್ನು ಮೇಲ್ಕಾಣಿಸಿದ ಸ್ಥಳಗಳಿಗೆ ಮುಟ್ಟಿಸುವ ವ್ಯವಸ್ಥೆಯನ್ನಿಟ್ಟರೆ ವಿದ್ಯಾರ್ಥಿವರ್ಗಕ್ಕೆ ಬಹಳ ಉಪಕಾರವಾಗುವಂತಿದೆ ಈ ರೀತಿ ನಗರದಲ್ಲಿ ಮೋಟಾರ-ಸಾರಿಗೆಯನ್ನು ಇಡಲು ಕಂಪನಿಯವರಿಗೆ ಅಧಿಕಾರಿಗಳ ಅಪ್ಪಣೆ ಮುಂತಾದ್ದು ಅವಶ್ಯವಿರುತ್ತಿದ್ದರೆ ಅಧಿಕಾರಿಗಳು ಅದನ್ನು ಕೊಡಲು ದಯಮಾಡಿಸಬೇಕು

* * *

ಹೊನ್ನಾವರ, ಹಳದೀಪುರ ಒದಿಯ ಕೆಲವು ವಿದ್ಯಾರ್ಥಿಗಳು ಊರಲ್ಲೇ ಉಳಕೊಂಡು ಕೊಲೇಜ ಶಿಕ್ಷಣ ಪಡೆಯಬಯಸುತ್ತಾರೆಂದು ತಿಳಿಯುತ್ತದೆ ಆದರೆ ಅವರು ಸಾಮಾನ್ಯ ಮೋಟಾರ ಬಂಡಿಗಳನ್ನು ಅವಲಂಬಿಸಿರಬಾರರು ಸ್ಥಾನಿಕ ಮೋಟಾರ ಸಾರಿಗೆ, ಕಂಪನಿಯವರು “ಅನುಕೂಲ ಹೊತ್ತಿನ ಕೊಲೇಜ-ಸ್ಪೇಶಲ” ಎಂಬ ಸರ್ವಿಸ್ಸು ಇಟ್ಟರೆ ಮಾತ್ರ ಸದರಿ ವಿದ್ಯಾರ್ಥಿಗಳ ಅನುಕೂಲವಾಗುವಂತಿದೆ ಕಾರಣ ವಾಹನ ನಿಯಂತ್ರಣಾಧಿಕಾರಿಗಳು ಹೊನ್ನಾವರದಿಂದ ಕುಮಟೆಯ ತನಕ (ಕೆನರಾ ಕೊಲೇಜಿನ ಮಂದಿರದ ವರೆಗೆ) ಇಂತಹದೊಂದು ಸರ್ವಿಸ್ಸು ಇಡಲು ಒಪ್ಪಿದರೊಂದು ಕಂಪನಿ

ಅಪ್ಪಣೆ ಕೊಡಬೇಕಾಗಿಯೂ ಆ ಬಗ್ಗೆ ಅವಶ್ಯವುಳ್ಳ ಅನುಕೂಲತೆಗಳನ್ನು ಆ ಕಂಪನಿಗೆ ಮಾಡಿಕೊಡಬೇಕಾಗಿಯೂ ಸೂಚನೆಯುಂಟು

--ಮಹಾತ್ಮರ ಕೊಲೆಯ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿರುವ ನಥೂರಾಮ ಗೋಡಸೆ, ನಾರಾಯಣ ಆಪಟೇ ಪ್ರಭೃತಿಗಳು ಪೂರ್ವ ಪಂಜಾಬ ಹಾಯ ಕೋರ್ಟಿನ ತೀರ್ಮಾನದ ವಿರುದ್ಧ ಪ್ರಿವ್ಹಿ ಕೌನ್ಸಿಲಿಗೆ ಅಪೀಲು ಮಾಡಲು ನಿಶ್ಚಯಿಸಿ, ಆ ಬಗ್ಗೆ ತಮಗೆ ಅವಶ್ಯವುಳ್ಳ ಅನುಕೂಲತೆಗಳನ್ನು ಒದಗಿಸಲು ಸರಕಾರಕ್ಕೆ ಬಿನ್ನವಿಸಿರುತ್ತಾರೆ

ಜಿಲ್ಹಾ ಲೋಕಲ ಬೋರ್ಡಿನ ಚುನಾವಣೆ.

ಕಾರವಾರ, ತಾ ೮-೭-೪೯.

ಹೊಸ ಜಿಲ್ಹಾ ಲೋಕಲ ಬೋರ್ಡಿನ ಚುನಾವಣೆ ಇಂದು ನಡೆಯಿತು ಜಿಲ್ಹಾ ಲೋಕಲ್ ಬೋರ್ಡಿನ ೩೦ ಸದಸ್ಯರ ಆರಿಸಿ ಕೊಡಬೇಕಾಗಿದ್ದ ೧೧ ಸ್ಥಳಗಳಿಗೆ ೪೩ ಉಮೇದವಾರರು ನಿಂತಿದ್ದರು! ಆದರೆ ಈ ಚುನಾವಣೆಯು ಅತ್ಯಂತ ಶಾಂತತೆಯಿಂದ ಜರುಗಿತು ಈ ಚುನಾವಣೆಯಲ್ಲಿ ಹರಿಯಾಳುಗಳ ಗುಣಾವಗುಣಗಳ ಇಲ್ಲವೆ ಪಂಥ ಪಕ್ಷಗಳ ವಿಚಾರಕ್ಕಿಂತ ಜಾತಿಧರ್ಮ-ಸದಸ್ಯರು ಪ್ರಾಧಾನ್ಯತೆ ಪಡೆದ, ಪಕ್ಷಾಭಿಮಾನಕ್ಕೂ ವೈಯಕ್ತಿಕತೆಗೂ ಬಲಿಬಿದ್ದು ಮತ ಕೊಟ್ಟರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಈ ಪ್ರಕಾರವನ್ನು ನೋಡಲಾಗದೆ ಬೇಸರಗೊಂಡು ಕೆಲ ಮಟ್ಟಿಗೆ ತಟಸ್ಥರಾದ ಭಾಗವತರು ಜಿಲ್ಹಾ ಲೋಕಲ್ ಬೋರ್ಡಿನ ಅವಸ್ಥೆಗೆ ಉಗುರಿಸಿ ನಿಟ್ಟುಸಿರುಬಿಟ್ಟರೆಂಬ ವರ್ತಮಾನವಿದೆ

ಚುನಾವಣೆಯಲ್ಲಿ ಈ ಕೆಳಗಿನವರು ಆರಿಸಿ ಬಂದಿರು ತ್ತಾರೆ — ಸ್ತ್ರೀಯರ ಸ್ಥಳಕ್ಕೆ — ಸೌ॥ ಉಮಾದೇವಿ ಆನಂದರಾವ ಬಖಾನಾದಾರ (ಅಲ್ಪಸಂಖ್ಯ) ಮುಸಲ್ಮಾನರ ಸ್ಥಳಕ್ಕೆ — ರಾ॥ ಅಂಥರ ರಸೂಲಸಾಬ ಮುಜಾವರ ಹಿಂದುಳಿದವರ ಸ್ಥಳಕ್ಕೆ — ರಾ॥ ರಾಮಾ ಅರಾನಾಯ್ಕ ಶಿಕ್ಷಣಾನುಭವವುಳ್ಳವರ ಸ್ಥಳಗಳಿಗೆ (೪) — ರಾ॥ ರಾ॥ ಜೋಸೆಫ ಶಿವರಾ ಪ್ಯಾಂಗಲೋ, ಗಣಪತಿ ನಾರಾಯಣ ಹೆಗಡೆ, ವಾಸು ಪುರಸೋ ಕದಮ ಸಾರ್ವಜನಿಕ ಸ್ಥಳಗಳಿಗೆ (೫) — ರಾ॥ ರಾ॥ ಮಾರ್ಶಲ್ ಫರ್ನಾಂಡಿಸ್, ಹನುಮಂತ ಕೃಷ್ಣ ಪಾಟೀಲ, ಪುಟ್ಟಣ್ಣಯ್ಯ ಶಿವಲಿಂಗಯ್ಯ ಗೌಡ ಹೆಗ್ಗೋಡುಮನೆ ಅನಧಿಕೃತ ಮು॥ಗಳ ಪ್ರತಿನಿಧಿಗಳು— ರಾ॥ ರಾ॥ ಗಣಪತಿ ಸುಬ್ರಾಯ ರಂಗೋಳ್ಕರ ಮತ್ತು ದಿಗಂಬರ ಮಹಾಬಲೇಶ್ವರ ಶಿರೋಡ್ಕರ (ಕಾರವಾರ) ಜಿಲ್ಹಾ ಲೋಕಲ ಬೋರ್ಡಿನಲ್ಲಿ ಮೊದಲಿನಂತೆ ಆರಿಸಲ್ಪಟ್ಟ ೧೧ ಮಂದಿ ಸದಸ್ಯರನ್ನಲ್ಲದೆ ಇಬ್ಬರು ಸರಕಾರದಿಂದ ನೇಮಕಗೊಳ್ಳುತ್ತಾರೆ ಅಂದರೆ ಸದಸ್ಯರ ಸಂಖ್ಯೆ ೧೩ ಉಂಟು

ಮು॥ಗಳ ಪ್ರತಿನಿಧಿಗಳ ಚುನಾವಣೆ ನಡೆಯುವಲ್ಲಿಂದು ಕೆಲವರ ಆಕ್ಷೇಪವಿದೆ ಮು॥ಗಳು ಮತಗಳನ್ನು ಹಂಚಬಾರದಾಗಿತ್ತಂತೆ ಕೆಲವು ಮು॥ಗಳು ಹಾಗೆ ಹಂಚಿ ಹಾಕಿದ ಎರಡೂ ಮತಗಳನ್ನು ಒಬ್ಬರಿಗೇ ಕೊಟ್ಟಿವೆಯಂತೆ ಇನ್ನೊಂದು ಆಕ್ಷೇಪವೂ ಉಂಟು ಹೊನ್ನಾವರ ಮು॥ಯವರು ತಮ್ಮ ಪರವಾಗಿ ಮತದಾನ ಮಾಡಲು ಉಪಾಧ್ಯಕ್ಷರಿಗೆ ಅಧಿಕಾರಪತ್ರ ಕೊಟ್ಟು, ತಮ್ಮ ಮತಗಳಿಗೆ ಬಂದ ಹರಿಯಾಳುವಿಗೆ ಮತ ಕೊಡಬೇಕೆಂದು ಅವರಿಗೆ ಆದೇಶ ಕೊಟ್ಟಿದ್ದರಂತೆ ಇದು ನಿಯಮದಂತೆ ನಡೆಯದಿರುವದರಿಂದ ಅರ್ಜಿದಾರರು ವಾದಿಸುತ್ತಾರೆ ಈ ಆಕ್ಷೇಪಗಳು ಮು॥ಗಳ ಪ್ರತಿನಿಧಿಗಳ ಚುನಾವಣೆ ಕಾನೂನ-ಬದ್ಧವಾಗಿ ನಡೆದಿಲ್ಲವೆಂದು ನಿರ್ಣಯಿಸಿಕೊಳ್ಳಲು ಅವರ ಪರವಾಗಿ ಆಕ್ಷೇಪಣೆ ನಡೆಸಿರುತ್ತಾರೆ

ಜಿಲ್ಲಾ ಸಮಾಚಾರ.

ಶಿರಸಿ— [illegible]

[illegible]

ಸಿದ್ದಾಪುರ— [illegible]

[illegible]

ಮುಂಡಗೋಡ— (ತಾ ೭-೭-೪೯) [illegible]

[illegible]

ನಮ್ಮಲ್ಲಿ ಸುಪ್ರಸಿದ್ಧ
"ಕಾನನ್‌ದೇವನ್ ಕಂಪನಿ"ಯ
ಚಹಾ
ರೋಕ ದರದಲ್ಲಿ ಸಿಗುತ್ತದೆ.
ವ್ಯಾಪಾರ ಮಾಹಿತಿ ಬಗ್ಗೆ ಬರೆಯಿರಿ—
L. G. MAHALE,
Merchant & Agent,
ANKOLA. (N. K.)

[illegible]

ಕಾನಡಾ ಜಿಲ್ಲಾ ಪ್ರಾಥಮಿಕ ಶಿಕ್ಷಕ ಅರ್ಬನ್ ಬೇಂಕ್, ಲಿ.,

ಹೆಡ್ ಆಫೀಸ ಅಂಕೋಲಾ.

ಜಾಹೀರ ವಿನಂತಿ.

[illegible]

ಅಂಕೋಲಾ, ಅನಂತ ಶಿವರಾಮ ಶೆಟ್ಟಿ,
ತಾ ೭—೭—೪೯. ಸೆಕ್ರೆಟರಿ

ಪತ್ರಿಕಾ—ಪ್ರಕಟನೆ

[illegible]

ತಾ ೨—೭—೧೯೪೯

ಜಿಲ್ಲಾ ಮೆಜಿಸ್ಟ್ರೇಟ್, ಕಾನಡಾ.

ಕರು ಇಲ್ಲಿಂದು ಸರಕಾರವು ತಿಳಿಸಿದ್ದು ತಪ್ಪಿಂದಾ ಸಮಿತಿಯ ಅಂಬೋಣವಿದೆ

ಹಳಿಯಾಳ— ತಾ [illegible] ರ "ವೃತ್ತ"ದಲ್ಲಿ ಪ್ರಕಟವಾದಂತೆ ಕೋಟ್ಯಪ್ಪನವರ ಅಂಗಡಿಯಲ್ಲಿ ಹಳಿಯಾಳ ಮಾಮಲೇದಾರರು ರೈಡ ಮಾಡಿ ಮತ್ತು ಹವಾಲಾ ಮಾಡಿದ ಬಗ್ಗೆ ಶಾವು ಮಾಮಲೇದಾರರ ನಿಷೇಧ ಮಾಡಿದ್ದಾಗಲಿ ಅವರಿಗೆ ತಿಳಿಸಿ ಕೊಟ್ಟಿದ್ದಾಗಲಿ ಇರುವದಿಲ್ಲೆಂದು ಹಳಿಯಾಳದ ವಿವಿಧೋದ್ದೇಶಗಳ ಸಂಘದ ಪರವಾಗಿ ಅಂಗಡಿಯ ಮಾಲಿಕರಾದ ರಾ|| ಎಸ್ ವಾಯ್ ದೇಶಪಾಂಡೆಯವರು ತಿಳಿಸುತ್ತಾರೆ. ಮಾಮಲೇದಾರರು ಕಾಯದೆಯಂತೆ ನಡೆದಿರುವರೆಂದೂ, ಅದರಿಂದ ಅವರ ನಡತೆಯ ಬಗ್ಗೆ ಶಾವು ಆಕ್ಷೇಪ ಕೊಡುವ ಪ್ರಸಂಗವೇ ಇದ್ದಿಲ್ಲೆಂದೂ ಅವರ ಅಂಬೋಣವುಂಟು. ರಾಜಿ ಕೋಟ್ಯಪ್ಪನವರ ಅಂಗಡಿಯ ಶೋಧನೆಯಲ್ಲಿ ಸಿಕ್ಕ ಬಟ್ಟೆಯನ್ನು ಅವರು ಗಿರಾಕಿಗಳ ಕಡೆಯಿಂದ ಕೊಂಡುಕೊಂಡಿದ್ದರಾಗಿಯೂ ಈ ಸಂಗತಿ ಪ್ರೂಢತಿಯ ಕಾಲಕ್ಕೆ ಅವರಲ್ಲಿ ಸಿಕ್ಕ [illegible] ಪಾವತಿಗಳ ಮೇಲಿಂದ ಸಿದ್ಧವಾಗಿರುತ್ತದಾಗಿಯೂ ಅವರು ತಿಳಿಸುತ್ತಾರೆ. ಹಳಿಯಾಳ ವಿವಿಧೋದ್ದೇಶಗಳ ಸಂಘವು ಹಿಂದೆ [illegible] ವರ್ಗದಲ್ಲಿತ್ತಂತೆ. ಈಗ ಅದು [illegible] ವರ್ಗಕ್ಕೆ ಏರಿರುತ್ತದಂತೆ. ಇನ್ನೂ ಸುಧಾರಣೆ ಮಾಡಿ ಈ ಸಂಘವನ್ನು ಅ ವರ್ಗದಲ್ಲಿ ಸೇರಿಸಿಕೊಳ್ಳಲು ಚಾಲಕರು ಯತ್ನಿಸುತ್ತಿರುವರಂತೆ. ಬೇರೆ ಸಹಕಾರಿ ಸಂಸ್ಥೆಯವರು ತಮಗೆ ಬೇಕೆಂದು ವಿಷಯಿಂದ ಬಿಟ್ಟು ಕೊಟ್ಟ ಸರಕಾರವನ್ನು ಅವರ ಅಂಗಡಿಯನ್ನು ಈ ಸಂಘವು ಒಪ್ಪಿಸಿಕೊಳ್ಳಲು ಮನ್ನಾದರೆ ಅದರಲ್ಲಿ ಕೈ ಹಾಕುವ ಬಗ್ಗೆ ವಿಚಾರಿಸುವದೆಂದು ರಾ|| ದೇಶಪಾಂಡೆಯವರು ಪ್ರಕಟಿಸುತ್ತಾರೆ.

ದಾಂಡೇಲಿಯ ಪೋಲೀಸರು ಇತ್ತಕಡೆ ಸಂಚಾರಿಯನ್ನು ಹಿಡಿದಿರುವರು. ಅಲ್ಲಲ್ಲಿಯ ಕಳ್ಳ ಬಟ್ಟೆಗಳನ್ನು ಕಂಡು ಹಿಡಿದು ಒಡೆದು ಹಾಕುತ್ತಾರೆ. ಬಟ್ಟೆಬರೆ ನಾಯಿಯ ಪತ್ತೆ ಹಚ್ಚುತ್ತಿದ್ದಾರೆ. ಸಂಚುಗಳ್ಳರ ವಿರುದ್ಧ ಖಟ್ಲೆಗಳನ್ನು ಮಾಡಿಕೊಡುತ್ತಾರೆ.

ಅಂಕೋಲಾ— (ತಾ ೧೦-೬-೪೯) ಜಂಗಲ ಕಾಮಗಾರಿಗಳ ವಿಧಾನದಲ್ಲಿ ಈ ಸಾರೆ ಅಧಿಕಾರಿಗಳು ಅಪೂರ್ವ ಬದಲ ಮಾಡಿಗಳನ್ನು ಮಾಡಿರುತ್ತಾರೆ. ಕಾಮಗಾರಿಯ ಗುತ್ತಿಗೆ ಪಡೆದವರು ಈ ವರೆಗೆ ಕಾಮಗಾರಿಯ ಕ್ಷೇತ್ರದೊಳಗಿನ ಇವಾರತಿ ಕಟ್ಟಿಗೆಯ ಬಗ್ಗೆ ಸರಕಾರಕ್ಕೆ ಸಲ್ಲಬೇಕಾದ ಹಣವನ್ನು ನಿರ್ದಿಷ್ಟ ಕಂತುಗಳಿಂದ ತೆರುತ್ತಾ ಇದ್ದು ಆ ಕಟ್ಟಿಗೆಯನ್ನು ಮಾರಾಟದ ಸ್ಥಳಕ್ಕೆ ಸಾಗಿಸುತ್ತಿದ್ದರು ಮತ್ತು ಅದನ್ನು ತಮಗಿನ ಕಾಲವಿದ್ದಂತೆ ಮಾರಾಟ ಮಾಡಿ, ಕಾಮಗಾರಿಯ ಕೆಲಸ ಮುಂದರಿಸಲಿಕ್ಕೆ ಹಾಗೂ ಸರಕಾರಕ್ಕೆ ಮುಂದಿನ ಕಂತುಗಳನ್ನು ಪಾವತಿ ಕೊಡಲಿಕ್ಕೆ ಅವಶ್ಯವಿರುವ ಹಣ ಹೊಂದಿಸಿಕೊಳ್ಳುತ್ತಿದ್ದರು. ಆದರೆ ಮೇರೆಗೆ ಮೇ ತಿಂಗಳ ಪ್ರಾರಂಭದೊಳಗಾಗಿ ಎಲ್ಲ ಕಟ್ಟಿಗೆಯನ್ನು ಅಡವಿಯ ಹೊರಗೆ ತರಿಸಿಕೊಂಡು ಮೇ ತಿಂಗಳ ಉತ್ತರಾರ್ಧದಲ್ಲಿ ಬಟ್ಟವನ್ನು ಕಟ್ಟಿ (ಅದರಲ್ಲಿ ಹೊಸ ಪರಿಗಳನ್ನು ನೆಡಲು ಅನುಕೂಲವಾಗುವ ಹಾಗೆ) ಸ್ವಚ್ಛಗೊಳಿಸಿ ಕೊಡುತ್ತಿದ್ದರು. ಮಳೆಗಾಲದ ೬ ತಿಂಗಳಲ್ಲಿ ಕಟ್ಟಿಗೆಯ ಸಾಗಾಟ ಮಾಡಲಾಗದ ನಮ್ಮ ಜಿಲ್ಲೆಯ ಪ್ರದೇಶದಲ್ಲಿ ಈ ವಿಧಾನವೇ ಅನುಕೂಲ ಮತ್ತು ಸಾಧ್ಯವಿರುತ್ತದೆ, ಮತ್ತು ಬಹಳ ಕಾಲದಿಂದ ನಡೆದು ಬಂದಿರುತ್ತದೆ. ಆದರೆ ಈಗ ಅಧಿಕಾರಿಗಳು — ಅದೇಕೋ ತಿಳಿಯದು! — ಈ ವಿಧಾನವನ್ನು ಒಮ್ಮೆಲೆ ನಿಲ್ಲಿಸಿ, ಗುತ್ತಿಗೆದಾರರು ಬಟ್ಟವನ್ನು ಸುಟ್ಟು ಸ್ವಚ್ಛಗೊಳಿಸಿ ಕೊಡುವ ವರೆಗೆ ಕಡಿಯುತ್ತಿದ್ದ ಕಟ್ಟಿಗೆಯು ಬಟ್ಟದಲ್ಲಿ ಉಳಿಯಬೇಕೆಂದ ಹೊಸ ಕರಾರು ಹಾಕಿದರೆ! ಇದರ ಪರಿಣಾಮವೇನಾಗುವದೆಂಬುದನ್ನು ಜಂಗಲ ಅಧಿಕಾರಿಗಳು ಆಲೋಚಿಸಿರುವರೆಂದು ತೋರದು. ಮಳೆಗಾಲದಲ್ಲಿ ಜಂಗಲ ಸಾಗಾಟ ಕೆಲಸ ನಡೆಯುವದಿಲ್ಲ. ಆ ತಿಂಗಳಲ್ಲೇ ನಡೆಯುವೇಕು ಅಷ್ಟರಲ್ಲಿ ಮಳೆಗಾಲ ಪ್ರಾರಂಭವಾಗುತ್ತದೆ. ಆಗ ಕಟ್ಟಿಗೆಯನ್ನು ಪೇಟೆಗೆ ಸಾಗಿಸುವದು ಹ್ಯಾಗೆ ಸಾಧ್ಯ? ಅಕ್ಟೋಬರ ಕೊನೆಯ ವರೆಗೆ ಕಟ್ಟಿಗೆಯು ನವಂಬರ ತಿಂಗಳ ವರೆಗೆ ಬಟ್ಟದಲ್ಲೇ ಮಳೆಗಾಲವನ್ನು ಕಳೆಯಬೇಕಾಗಿ ಬಂದು ಪೇಟೆಗೆ ಕಾರಖಾನೆಯವರೂ ಹಗುರು ಕಟ್ಟಿಗೆಯಿಂದ ಪೇಟೆಗೆ ಮುಂತಾದವುಗಳನ್ನು ಮಾಡಿಸಿಕೊಳ್ಳುವ ಕಾರಖಾನೆದಾರರೂ ಹೇಗೆ ಬದುಕಬೇಕು? ಮಳೆಗಾಲದಲ್ಲಿ ಈ ಬಟ್ಟದಲ್ಲಿ ಬಿದ್ದ ಕಟ್ಟಿಗೆಯು ಈ ಬಾಳಿಯಲ್ಲಿ ಬಡಾಗದೆ ಹ್ಯಾಗೆ ಸುರಕ್ಷಿತವಾಗಿಯುಳಿಯಬಲ್ಲದು? ಇನ್ನೊಂದು ಸಂಗತಿಯೆಂದರೆ, ಕಟ್ಟಿಗೆಯನ್ನು ಬಹಳ ಕಾಲದ ವರೆಗೆ ಪೇಟೆಗೆ ಕಳಿಸಲಾಗದಿರುವದರಿಂದ ಗುತ್ತಿಗೆದಾರರ ಹಣವೆಲ್ಲ ಬಟ್ಟದಲ್ಲಿ ಕೊಳೆಯಬೇಕಾಗುವದು! ಹಿಂದಿನಂತೆ ಅಲ್ಪ ಬಂಡವಲದಿಂದ ಕಾಮಗಾರಿಯನ್ನು ಪೂರೈಸುವದು ಅಸಾಧ್ಯವಾಗಿ ಹೆಚ್ಚು ಬಂಡವಲ ಬೇಕಾಗುತ್ತದೆ. ಇದರಿಂದ ಸಣ್ಣ ಗುತ್ತಿಗೆದಾರರು ಕಷ್ಟಕ್ಕೆ ಈಡಾಗುವ ಕಾಲ ಬಂದಿದೆ. ಅವರ ಕಾಮಗಾರಿಗಳು ಅರ್ಧಕ್ಕೆ ನಿಲ್ಲಬಹುದು, ಅದರಿಂದ ಕೆಲಸಗಾರರು ಹೊಟ್ಟೆಗೆ ಇಲ್ಲದಾಗಬಹುದು. ಅದರಿಂದ ಸರಕಾರಕ್ಕೆ ಹೆಚ್ಚಿನ ಹಾನಿಯಾಗುವದೇ ವಿನಹ ಲಾಭವೇನೂ ಇಲ್ಲ! ಆದರೆ ಇಷ್ಟು ತಿಳುವಳಿಕೆ ನಮ್ಮ ಜಂಗಲ ಅಧಿಕಾರಿಗಳಿಗೆ ಎಲ್ಲಿಂದ ಬರಬೇಕು?

ಅಂಕೋಲಾ ತಾಲೂಕಿನ ಹಳವಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ಜುಗಾರ ಮುಂತಾದವು ಒಳ್ಳೇ ಆರ್ಭಟದಿಂದ ನಡೆಯುತ್ತಿದ್ದು ಗ್ರಾಮಾಧಿಕಾರಿಗಳು ಅವನ್ನು ತಡೆಯುವ ಕ್ರಮವನ್ನೇನೂ ಕೈಕೊಳ್ಳುವದಿಲ್ಲೆಂದೂ ಅಲ್ಲಿಯ ಪ್ರಜೆಗಳು ದೂರುತ್ತಾರೆ.

ಭಟಕಳ— ಈಗ ಅನೇಕ ವರ್ಷ ಬಂದ ಪತ್ತೆಯೊಂದರ ಶಿಕ್ಷಣದಿಂದ ಒತ್ತಾಯದ ಶಿಕ್ಷಣವಿದ್ದ ಹಳ್ಳಿಗಳೊಳಗಿನ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಗ್ಗುತ್ತಿದೆಯೆಂದು ಶಿಕ್ಷಕರು ದೂರುತ್ತಾರೆ. ಒತ್ತಾಯದ ಶಿಕ್ಷಣವಿದ್ದ ಊರವರು, ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲೇ ಬೇಕಾಗಿರುವದರಿಂದ ಮನೆಗೆಲಸಗಳಿಗಾಗಿ ಒತ್ತಾಯವಿಲ್ಲದ ಊರೊಳಗಿನ ಮಕ್ಕಳನ್ನು (ಶಾಲೆ ಬಿಡಿಸಿ) ಕೊಂಡೊಯ್ದು ಕೆಲಸ ತೆಗೆದುಕೊಳ್ಳುತ್ತಿದ್ದಾರಂತೆ! ಒತ್ತಾಯದಿದ್ದ ಗ್ರಾಮದಲ್ಲಿ ಬಂದು ನೆಲೆಸುವ ಪರವೂರ ಮಕ್ಕಳು ಕೂಡ ಶಾಲೆ ಸೇರಬೇಕೆಂದು ನಿಯಮ ಮಾಡಿದರೆ ಮಾತ್ರ ಈ ಅನಿಷ್ಟ ಪ್ರಥೆ ನಿಲ್ಲಬಹುದು.

ಹೊನ್ನಾವರ— (ತಾ [illegible]) ಸರಕಾರದವರ ದವಾಖಾನೆ ಗೇರಸಪ್ಪೆಯಲ್ಲಿ ಒಂದು ಬರುತ್ತದೆ. ನಿರೀಕ್ಷಿಸಲಾಗಿದೆ. ಜನರು ಇದರ ಪ್ರಯೋಜನ ಹೊಂದಬೇಕು. ಜನರು ಇದರ ಮೈಲು ದೂರವಿರುವ ಹೊನ್ನಾವರದೊಳಗಿನ ಡಾಕ್ಟರರನ್ನೇ ಅವಲಂಬಿಸಿಕೊಂಡಿರಬೇಕು!

ಆಲವಳ್ಳಿ ಗ್ರಾಮದ ಓಣಿಯಲ್ಲಿನ ಬಟವಡೆ ಈಗ ಬಹಳ ನಿರಾತಂಕ ಅಂಚೆ-ಕಟ್ಟೆಯಿಂದ ಆಗುತ್ತದೆ. ಆದರೆ ಅಲ್ಲಿಯ ಬಟವಡೆಯು ಶೀಘ್ರವು ವಾರಕ್ಕೊಮ್ಮೆ ಇಲ್ಲವೆ ಎರಡು ದಿನಗಳಿಗೊಮ್ಮೆ ಮಾತ್ರ ಆಗುತ್ತಿದ್ದು ಊರಿಗೆ ಬರುತ್ತಾನೆಂದೂ, ಅದರಿಂದ ತಮಗೆ ಬಂದ ಪತ್ರಗಳು ವಿಳಂಬವಾಗಿ ತಮ್ಮ ಕೈಸೇರುತ್ತವೆಂದೂ ಆ ಊರವರು ದೂರುತ್ತಾರೆ. ಮೇಲಾಧಿಕಾರಿಗಳು ಗಮನ ಹರಿಸಬೇಕು.

ಕುಮಟಾ— ಕುಮಟೆ ಗ್ರಾಮದವರು ಟಪಾಲಿಗೆ ಒಂದು ಪತ್ರ ಹಾಕಬೇಕಾದರೆ ಒಂದೇ ೨ ಮೈಲು ಅಂತರದಲ್ಲಿರುವ ಪೋಸ್ಟಾಫೀಸಿಗೆ ಹೋಗಬೇಕಾಗುತ್ತದೆ. ಇಲ್ಲವೆ ಎರಡು ಮೈಲು ನಡೆದು ಹೋದ ಪೆಟ್ಟಿಗೆಗೆ ಬರಬೇಕಾಗುತ್ತದೆ. ಕುಮಟೆಯಲ್ಲಿ ಒಂದು ಟಪಾಲ ಪೆಟ್ಟಿಗೆ ಇಟ್ಟರೆ ಜನರಿಗೆ ಆಗುವ ಈ ಕಷ್ಟ ತಪ್ಪುವಂತಾದೀತು.

ಹುಬ್ಬಣಗೇರಿಯ ಸರಕಾರಿ ಉಗ್ರಾಣದಲ್ಲಿ ಮಾಳಲು ಬಂದ ಅಕ್ಕಿ ಒಂದು ಕೆಟ್ಟಿದ್ದು ಕೊಡಿಸಲಾಗಿದೆ. ಈ ಪ್ರಕರಣದಲ್ಲಿ ಏನು ತಿಳುವಳಿಕೆಯಾಗಿದೆಯೆಂದು ಆಲೋಚಿಸಲು ಗಿರೀಶ ಅಂಗಡಿಯವರಿಗೆ ಕೇಳಿಕೊಂಡರು. ಸಾರ್ವಜನಿಕರ ಸ್ವಾಸ್ಥ್ಯ ಆ ಪ್ರಕರಣದಲ್ಲಿ ಬರೀ ಕಾಳಜಿಗೊಳಿಸಬೇಕೆಂದು ಅವರಿಗೆ ಭೀತಿ!

ಹಿರೇಗುತ್ತಿಯ ಅಂಚೆ-ಕಟ್ಟೆಯ ಕಾರಭಾರವಿನ್ನೂ ಸುಧಾರಿಸಿಲ್ಲವಂತೆ. ಬಟವಡೆ ಸೇರಿಯು ತಾನೇ ಪತ್ರಗಳನ್ನು ಊರೊಳಗೆ ಮುಟ್ಟಿಸದೆ ದಾರಿಹೋಕರ ಕಡೆ ಕೊಡುತ್ತಾನಂತೆ! ಅವು ಒಮ್ಮೊಮ್ಮೆ ಕಾಣುವೆಗಳಲ್ಲೂ ಬೀಳುತ್ತವಂತೆ! ಆ ಬಟವಡೆಯ ಅಧಿಕಾರಿಗಳು ಈ ಪೇದೆಯನ್ನು ಕರೆದು ಅಂಕೆಯಲ್ಲಿಟ್ಟುಕೊಳ್ಳುವದಿಲ್ಲವಂತೆ! ಅವನ ವಿರುದ್ಧ ದೂರು ಒಯ್ದರೆ ದೂರುಗಾರರ ಕೂಡ ಜಗಳ ಮಾಡುತ್ತಾನಂತೆ! ಮೇಲಧಿಕಾರಿಗಳು ಇತ್ತ ಗಮನ ಹರಿಸಬೇಕು.

ಕಾರವಾರ— (ತಾ [illegible]) ಬೈತಖೋಲ ದೋಣಿಗಳ ಒಂದು ಚಹಾ-ಅಂಗಡಿಯಲ್ಲಿ ಸರಾಯಿಯ ಕಳ್ಳವ್ಯಾಪಾರ ನಡೆದಿದೆಂದು ಸಂಶಯ ಬಂದದ್ದರಿಂದ ಇಲ್ಲಿಯ ಪೋಲೀಸರು ನಿನ್ನೆ ಒಂದು ಗಾರುಡಿ ಮಾಡಿದ ನೋಟು ಕೊಟ್ಟು ಒಬ್ಬ ಪೋಲೀಸ ಗಿರಾಕಿಯನ್ನು ಆ ಅಂಗಡಿಗೆ ಕಳಿಸಿಕೊಟ್ಟರು. ಮತ್ತು ತಾವು ಹಿಂದೆ ಆತನ ಹಿಂದಿರಲು ಗಿರಾಕಿಯು ಅಂಗಡಿಗೆ ಹೋಗಿ ಹೋಗಿ ಒಂದು ಸರಾಯಿ ಬಾಟಲಿಯನ್ನು ಕೇಳಿ ಕೊಂಡನು. ಅಷ್ಟರಲ್ಲಿ ಪೋಲೀಸರು ಹೋಗಿ ದಾಂಧಲೆ ಮಾಡಿ ಆ ಅಂಗಡಿಯವನನ್ನು ಅವನ ನೌಕರನನ್ನು ಸೆರೆಹಿಡಿದರು.

ಅಜೆಯ ವಾರ ಶಾಂತೇರಿಯ ಹೊರ್ಲಾಟದಿಂದ ಸೇಲಬಂದ ಶವವು ಭೈರೆಯ ಒಬ್ಬ ಯುವಕನದಿರುತ್ತದಂತೆ. ಅವನ ತಾ [illegible] ಮನೆಯಿಂದ ಕಾಣೆಯಾಗಿದ್ದನಂತೆ. ಶಾಂತೇರಿಗೆ ಬಂದ ಮೇಲೆ ಅವನೇಕೆ ಆದರಿಂದಿರಬಹುದೆಂಬ ಸಂಶಯ ದಿಂದ ಅವನ ಅಣ್ಣನು ಇಲ್ಲಿಯ ಪೋಲೀಸರಿಗೆ ಅರ್ಜಿ ಮಾಡಿ ಶಾಂತೇರಿಯ ಪಟೇಲರು ಕೂಡ ಆ ಶವ ತನ್ನ ತಮ್ಮನದೇ ಎಂದು ಗುರುತು ಹಿಡಿದು ತನ್ನ ವಶಕ್ಕೆ ತೆಗೆದುಕೊಂಡಿದ್ದಾನೆ.

ನಮ್ಮಲ್ಲಿ

ಗೇಣಿಚೀಟಿ ದಾವಾ ಫಾರ್ಮುಗಳೂ

ಹೊಸ ಟೆನನ್ಸಿ ಕಾಯಿದೆಯಂತೆ ಮಾಡಿದಕ್ಕ

ಕಬ್ಜಾ ದಾವಾ ಅರ್ಜ ಫಾರ್ಮುಗಳೂ ಸಿಗುತ್ತವೆ

'ಸ್ಟಾರ ಆಫ್ ಕೆನರಾ ಪ್ರೆಸ್', ಕುಮಟಾ

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.

ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲಾಜಿಂಗ

ದಿ ಕೆನರಾ ಲಾಜ

['ಊಟ ಮತ್ತು ವಸತಿಗೃಹ]

ಮೋಟರ-ಸ್ಟೆಂಡ, ಹುಬ್ಬಳ್ಳಿ

ಮಾಲಕ — ಮ್ಯಾನೇಜ್ಮೆಂಟ್.

ಇದನ್ನು ಪಾಂಡುರಂಗ ಕೃಷ್ಣ ಕಾನಡಾಗ(ಸಂಪಾದಕ) ಇವರು ಕುಮಟೆಯ ಇರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270 Monday, 18-7-1949.

ಕಾನಡಾವೃತ್ತ

ವರ್ಷ [illegible]] THE KANARA NEWS [ಸಂಚಿಕೆ [illegible]

ಕುಮಟಾ. ಸೋಮವಾರ, ತಾ ೧೮—೭—೧೯೪೯

ವರ್ಗಣಿಯ ದರ

[illegible]

ಜಾಹೀರಾತುಗಳ ದರ

[illegible]

ಸ್ಥಳಿಕ ವಿಷಯಗಳು

ಲೇ. ಸ್ಥಳವಂತಿಕ

ನಮ್ಮ ಜಿಲ್ಲೆಯೊಳಗೆ ಉಗಿಬಂಡಿಯಿಲ್ಲದ್ದರಿಂದ ಪ್ರವಾಸಕ್ಕೂ ಸರಕುಗಳ ಸಾಗಾಟಕ್ಕೂ ಬಹಳ ತೊಂದರೆಯಾಗುತ್ತಿದೆ. ಉಗಿಬಂಡಿಯ ಅಭಾವವಾದ್ದರಿಂದ ನಿಯಂತ್ರಣದ ಮನ್ವಂತರದಲ್ಲಿ ಅನ್ನಧಾನ್ಯಗಳನ್ನು ಅಲ್ಲಲ್ಲಿ ಮುಟ್ಟಿಸಲು ಕಷ್ಟವಾಗಿ ಜನರು ಕೂಳಿಗೆ ತುಟ್ಟಿಯಾಗುವ ಪ್ರಸಂಗ ಒದಗುತ್ತಿದೆ. ಅಘನಾಶಿನಿ, ಗಂಗಾವಳಿ ಮತ್ತು ಪಂಚಗಂಗಾವಳಿ(?) ಹೊಳೆಗಳಿಗೆ ಸಂಕಗಳನ್ನು ಕಟ್ಟಿ ವಾಹನ-ಸೌಕರ್ಯವನ್ನು ಕಲ್ಪಿಸದೆ ಇರುವದರಿಂದ ಒಮ್ಮೊಮ್ಮೆ ಮಳೆಗಾಲದಲ್ಲಿ ನಮ್ಮ ಜಿಲ್ಲೆ ನೆರೆಹೊರೆಯ ಪ್ರದೇಶಗಳಿಂದ ಪೃಥಕ್ಕಾಗುತ್ತಿದೆ. ಘಟ್ಟದ ಮೇಲೆ ಪ್ರಮುಖವಾಗಿ ಶಿರ್ಸಿ, ಸಿದ್ದಾಪುರ ತಾಲೂಕುಗಳಲ್ಲಿ ಮಳೆಗಾಲದೊಳಗೆ ಹಳ್ಳಗಳಲ್ಲಿ ನೀರು ತುಂಬುತ್ತಿರುವದರಿಂದ ಒಳ-ಹಳ್ಳಿಗರು ಬಹಳ ಕಷ್ಟಕ್ಕೀಡಾಗುತ್ತಾರೆ. ಗ್ರಾಮ-ಜೀವನವನ್ನು ಸುಕರಗೊಳಿಸಿ, ಗ್ರಾಮಗಳಲ್ಲಿ ಸುಖಜೀವನದ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂದು ಎಳಸುವ ಗ್ರಾಮೋದ್ಧಾರದ ಮನ್ವಂತರದಲ್ಲಿ, ನಮ್ಮ ಜಿಲ್ಲೆಯೊಳಗಿನ ಬಡ ಹಳ್ಳಿಗರು ಹಿಂದಿನಂತೆ ಇಂದಿಗೂ ಈ ರೀತಿ ಕಷ್ಟಕ್ಕೊಳಪಡುತ್ತಿರಬೇಕಾದುದು ತೀರ ವ್ಯಸನಕರ. ಗ್ರಾಮೋದ್ಧಾರ ಮಂಡಳದವರು ಈ ಕುರಿತು ವಿಷಯದಲ್ಲಿ ಏನೊಂದೂ ವ್ಯವಸ್ಥೆ ಮಾಡಿದ್ದು ತೋರುವದಿಲ್ಲ. ಹಲವೆಡೆ ಸುರಕ್ಷಿತ ಅರಣ್ಯ(?)ಗಳಲ್ಲಿ ಕಾಡು ಪಶುಗಳಿಗೆ ಸುಖವಾಗಿ ವಿಹರಿಸಲು ಅನುಕೂಲವಾಗುವಂತೆ ಅವುಗಳಿಗಾಗಿ ಆಶ್ರಯ-ಸ್ಥಾನ (Sanctuary) ವನ್ನು ನಿರ್ಮಿಸಬೇಕೆಂದು ಮುಖ್ಯ ಪ್ರಧಾನರು ಆಜ್ಞೆಗಳನ್ನು ಹೊರಡಿಸಿದ್ದಾರೆ. ಜನರಿಗಿಂತ ಜಾನುವಾರುಗಳ ಸುಖ-ಸೌಕರ್ಯಗಳಿಗೆ ಹಿಂದಿನ ಬ್ರಿಟಿಶ ಸರಕಾರವು ಹೆಚ್ಚಿಗೆ ಮಹತ್ವ ಕೊಡುತ್ತಿತ್ತೆಂದೂ ಜನರನ್ನು ಅಲಕ್ಷಿಸುತ್ತಿತ್ತೆಂದೂ, ಜನತಾ ಸರಕಾರದ ಆಳ್ವಿಕೆಯಲ್ಲಿ ಜನ-ಸುಖದ ಕಡೆ ಹೆಚ್ಚಿಗೆ ಲಕ್ಷ್ಯ ಪುರೈಸಲ್ಪಡುವದೆಂದೂ ನಮ್ಮ ಜಿಲ್ಲೆಯವರು ಎಣಿಸಿದ್ದರು. ಬ್ರಿಟಿಶ ಸರಕಾರವು ನಮಗೆ ಜಂಗಲ ಸವಲತ್ತುಗಳನ್ನು ವಿಶೇಷ ಕೊಟ್ಟಿರಲಿಲ್ಲ ನಿಜ. ಆದರೆ ಕೊಟ್ಟ ಸವಲತ್ತುಗಳನ್ನು ಹಿಂತೆಗೆದುಕೊಂಡಿದ್ದಿಲ್ಲ. ಕೊಟ್ಟ ಸವಲತ್ತುಗಳ ದುರುಪಯೋಗವಾಯಿತೆಂಬ ನೆವ ಮಾಡಿ ಇಂದಿನ ಜನತಾ ಸರಕಾರವು ಅವನ್ನು ಹಿಂತೆಗೆದುಕೊಂಡು, ನಮ್ಮ ಜಿಲ್ಲೆಯೊಳಗಿನ ಜನರಿಗಿಂತ ಜಾನುವಾರುಗಳನ್ನೇ ಸರಕಾರವು ಪ್ರೀತಿಸುತ್ತದೆಂದೂ ಅವುಗಳ ಅಭ್ಯುದಯವನ್ನೇ ಕಾಂಕ್ಷಿಸುತ್ತದೆಂದೂ ಲೋಕಕ್ಕೆ ಸಿದ್ಧಪಡಿಸಿದೆ! ಅನ್ನಧಾನ್ಯಗಳನ್ನು ಹೆಚ್ಚಿಗೆ ಬೆಳಸಬೇಕಾದರೆ ಬಂಜರ ಭೂಮಿ ಹೆಚ್ಚುಹೆಚ್ಚಾಗಿ ಸಾಗುವಳಿಯಲ್ಲಿ ಬರಬೇಕಾದರೆ ಜನಸಮೃದ್ಧಿಯಾಗಬೇಕು, ಜನವಸತಿಯ ಸೌಕರ್ಯಗಳೂ ಹೆಚ್ಚಾಗಬೇಕು, ಅಲ್ಲಲ್ಲಿ ಜನ-ಜಂವನೋಪಾಯಕ್ಕೆ ಅವಕಾಶ ಸಿಗಬೇಕು. ಗ್ರಾಮೋದ್ಧಾರ ಮಂಡಳದವರು ಈ ಧೋರಣದಿಂದ ಗ್ರಾಮಗಳ ನಿರೀಕ್ಷಣ ಮಾಡಿ, ಯಾವ ಯಾವ ಗ್ರಾಮಗಳಿಗೆ ಎಂತೆಂತಹ ಅನುಕೂಲತೆಗಳು ಬೇಕಾಗಿವೆಂಬುದನ್ನು ತಿಳಕೊಂಡದ್ದು ತೋರುವದಿಲ್ಲ. "ಹೆಚ್ಚು ಧಾನ್ಯ ಬೆಳಸಿರಿ! ಅದೇ ಒಂದು ದೇಶಸೇವೆ" ಎಂಬುದಾಗಿ ದೊಡ್ಡದೊಡ್ಡ ಜಾಹೀರಾತಗಳನ್ನು ಹಂಚಿದ ಮಾತ್ರಕ್ಕೆ ಕಾರ್ಯಭಾಗವಾಗುವದಿಲ್ಲ. ಆಹಾರಧಾನ್ಯ ಬೆಳಸುವವರಿಗೆ ಪ್ರೋತ್ಸಾಹ ಕೊಡಬೇಕು, ಅವರೊಡನೆ ಅತ್ಯಲ್ಪ ಬೆಳಸಬೇಕು. ಆದರೆ ಸದ್ಯಕ್ಕೆ ಈ ಸ್ಥಿತಿ ಇರುವದಿಲ್ಲ. ರೈತರು ಸಾಗುವಳಿ ಸಾಲ ಬೇಡಿದರೆ ಅದು ಸಕಾಲದಲ್ಲಿ ಸಿಗುವದಿಲ್ಲ. ಈ ವರ್ಷ ಸಾಗುವಳಿ ಸಾಲ ಬೇಡಿದ ಜನರಿಗೆ ಇನ್ನೂ ಸಾಗುವಳಿ ಸಿಗದ ಉದಾಹರಣೆಗಳುಂಟು! ಈ ಅಗಲೇ ಅರ್ಧ ಮಳೆಗಾಲ ಮುಗಿದಿದೆ. ಈಗ ಸಾಗುವಳಿ ಸಾಲ ಪಡಕೊಂಡು ಬೆಳೆ ಮಾಡುವದು ಹೇಗೆ? ಸಾಗುವಳಿಯ ಹಂಗಾಮು ತೀರಿತೆಂದು ಮಂಜೂರಿ ಇದ್ದ ಸಾಗುವಳಿಯನ್ನು ರದ್ದು ಮಾಡಿದ ಉದಾಹರಣೆಗಳೂ ಇವೆ. ಕಳೆದ ವರುಷ ಅಂಕೋಲಾ ತಾಲೂಕಿನ ಕೆಲವರು ಬಂಜರ ಬಿದ್ದ ಭೂಮಿಗಳನ್ನು ಸಾಗುವಳಿಗೆ ಪಡೆದು ಸಾಗುವಳಿ ಮಾಡಿದ್ದರು. ಈ ವರುಷವೂ ಆ ಭೂಮಿಗಳನ್ನು ಸಾಗುವಳಿ ಮಾಡಲು ಅವರು ಅಪೇಕ್ಷಿಸಿದ್ದರು. ಆದರೆ ಪಡ ಭೂಮಿಗಳನ್ನು ಸಾಗುವಳಿ ಮಾಡಿಸಲು ಕಾಡು ತೊಟ್ಟು ಮುಲ್ಕಿ ಅಧಿಕಾರಿಗಳು ಅವನ್ನು ಸಾಗು ಮಾಡಬಾರದೆಂದು ಅವರಿಗೆ ನಿಷೇಧಿಸಿದರು! ಬೇರೆ ಯಾರೂ ಅವನ್ನು ಸಾಗ ಮಾಡಲು ಮುಂದಾಗಲಿಲ್ಲ. ಅದರಿಂದ ಕಳೆದ ವರ್ಷ ಸಾಗುವಳಿಯಾದ ಭೂಮಿಗಳು ಈ ವರ್ಷ ಪುನಃ ಪಡ ಬಿದ್ದಿವೆ! ಮುಲ್ಕಿ ಅಧಿಕಾರಿಗಳು ಹೀಗೆ ನಡಕೊಂಡರೆ ಎಲ್ಲ ಪಡ ಭೂಮಿಗಳ ಸಾಗವಳಿ ಮಾಡಿಸಬೇಕೆಂದು ಪ್ರಾಂತಿಕ ಸರಕಾರವು ಮಾಡಿದ ನಿರ್ಧಾರದ ಉದ್ದೇಶವೇನು? ಬಂಜರ ಭೂಮಿಯನ್ನು ಸಾಗುವಳಿ ಮಾಡಬಯಸುವವನ ಒಡೆಯನಾಗಿರಲಿ ಒಕ್ಕಲಿ ನಾಗಿರಲಿ ಕೂಲಿಯಾಳಾಗಿರಲಿ ಕೈಗಾರಿಕೆಯವನಾಗಿರಲಿ, ಅವರೆಲ್ಲರಿಗೆ ಸರಕಾರವು ಬೇಕಾದ ಸಹಾಯ ನೀಡಬೇಕು. ತಗಾವಿ ಸಾಲಗಳನ್ನು ಒಂದೊಮ್ಮೆ ಕೊಡದಿದ್ದರೂ ಅಡ್ಡಿಯಿಲ್ಲ, ಪಡ ಭೂಮಿಗಳನ್ನು ಸಾಗುವಳಿ ಮಾಡಲು ಬೇಕಾಗುವ ಎಲ್ಲ ಅನುಕೂಲತೆಗಳನ್ನು ಅಧಿಕಾರಿಗಳಿಂದ ಒದಗಿಸಿ ಕೊಡುವದು ಗ್ರಾಮೋದ್ಧಾರ ಮಂಡಳದವರು ಮಾಡಬೇಕಾದ ಮುಖ್ಯ ಕಾರ್ಯವಾಗಿದೆ.

* * *

ಸದ್ಯಕ್ಕೆ ಸೇರಿದ ಗ್ರಾಮೋದ್ಧಾರ ಮಂಡಳದ ಸಭೆಯಲ್ಲಿ, ಸಭೆಯ ಕೊನಕೊನೆಗೆ ಲಗುಬಗೆಯಿಂದ ಹವೇರಿಯಿಂದ ಶಿರಸಿಯ ಕಡೆಗೆ ಉಗಿಬಂಡಿ ತರಬೇಕೆಂಬುವೊಂದು ಠರಾವು ಮಾಡಿದ್ದು ತಿಳಿಯುತ್ತದೆ. ಉಗಿಬಂಡಿಯ ಮಾರ್ಗವನ್ನು ನಮ್ಮ ಜಿಲ್ಲೆಯೊಳಗೆ ಎಲ್ಲಿಂದ ಎಲ್ಲಿ ತರಬೇಕೆಂಬ ಬಗ್ಗೆ ಒಂದು ನಿರ್ದಿಷ್ಟ ಸೂಚನೆ ಮಾಡಲು ಹಿಂದುಸ್ಥಾನ ಸರಕಾರದ ಉಗಿಬಂಡಿ ಮಂಡಳದವರು ತಿಳಿಸಿದ್ದರಂತೆ. ಆದಾಗ್ಯೂ ರೇಲ್ವೆ ನಿರ್ಮಾಣ ನಮ್ಮ ಜಿಲ್ಲೆಗೆ ತೀರ ಹತ್ತಿರವಿದೆ. ಆದ್ದರಿಂದ ಹುಬ್ಬಳ್ಳಿ-ಯಲ್ಲಾಪುರ-ಅಂಕೋಲಾ ಇಲ್ಲವೆ ಹಳಿಯಾಳ-ಯಲ್ಲಾಪುರ ಇಡಗುಂದಿ ಕದ್ರಾ-ಸದಾಶಿವಗಡ ಮಾರ್ಗವಾಗಿ ಕಾರವಾರಕ್ಕೆ ಉಗಿಬಂಡಿಯ ಮಾರ್ಗ ರಚಿಸಿ ಕಾರವಾರ ಬಂದರದ ಅಭಿವೃದ್ಧಿ ಮಾಡುವ ಯೋಜನೆಯನ್ನು ಉಗಿಬಂಡಿಯ ಮಂಡಳದವರು ಸೂಚಿಸಿದ್ದರು. ಆ ಕಾರಣದಿಂದಲೇ ನಮ್ಮ ಜಿಲ್ಲೆಗೆ ಉಗಿಬಂಡಿ ಬಂದರೆ ಹುಬ್ಬಳ್ಳಿಯ ಮಹತ್ವ ಕಡಿಮೆಯಾದೀತೆಂದು ಹುಬ್ಬಳ್ಳಿಯವರು ಹೆದರಿ, ಅಂಕೋಲಾ-ಕಾರವಾರ ರೇಲ್ವೆ ಯೋಜನೆಯನ್ನು ವಿರೋಧಿಸುತ್ತಾರೆ. ನಮ್ಮ ಜಿಲ್ಲೆಗೆ ಉಗಿಬಂಡಿಯನ್ನು ತರತಕ್ಕದ್ದಿದ್ದರೆ ಅದನ್ನು ಹುಬ್ಬಳ್ಳಿಯಿಂದ ತರಬೇಕಲ್ಲದೆ ಅಂಕೋಲಾದಿಂದ ತರತಕ್ಕದ್ದಲ್ಲೆಂದು ಹುಬ್ಬಳ್ಳಿಯವರ ಆಗ್ರಹವುಂಟು. ನಮ್ಮ ಜಿಲ್ಲೆಗೆ ಉಗಿಬಂಡಿ

FOR BANKING SERVICE

IN TRADE, INDUSTRY AND AGRICULTURE

APPROACH

The Agricultural & Industrial Bank, Ltd.,

(Established in 1934)

Head Office COONDAPOOR, S Kanara

Branches

1 Ankola	7 Gokarn	13 Nagar
2 Belgaum	8 Haveri	14 Shimoga
3 Bhatkal	9 Hubli	15 Sirsi
4 Coondapoor	10 Karwar	16 Somwarpet
5 Dharwar	11 Kumta	17 Virajpet
6 Gadag	12 Mangalore	18 Honavar

19 BOMBAY (381-31 Jaip ria House Kalbadevi Road)

CURRENT SAVINGS BANK AND FIXED DEPOSITS ARE ACCEPTED

For terms, apply to the nearest Branch

Coondapoor, 1st June 1949

K. Vaman Shenai,
CHAIRMAN

ಯನ್ನು ತರತಕ್ಕದಿದ್ದರೆ ಅದನ್ನು ತಂವಳಿಯುವದೆಗೂ ತರಬೇಕೆಂದು ಯಾರೂ ಒಪ್ಪುವರು. ಗ್ರಾಮೋದ್ಧಾರ ಮಂಡಳದವರು ' ಮೂಲಾರಿಂಸ್ತ್ರತೀಯ ಸಂಪಾಃ " ಎಂಬ ನ್ಯಾಯದಂತೆ ಅತ್ತ ಆಳಗಾವ ರವನ್ನೂ ಬಿಟ್ಟಿದ್ದಾರೆ! ಇತ್ತ ಹುಬ್ಬಳ್ಳಿಯನ್ನೂ ಬಿಟ್ಟಿದ್ದಾರೆ! ವೇಲಿ ಕಂಪನಿಯನ್ನೂ ಬಿಟ್ಟುಕೊಟ್ಟಿರುತ್ತಾರೆ! ಮತ್ತು ಹಾವೇರಿಯಿಂದ ಶಿರಸಿಯು ತನಕ ಉಗಿಬಂಡಿ ತಂದರೆ ಸಾಕೆಂದು ಠೀವರ್ಮಾನಿಸಿದ್ದಾರೆ!! ಇದರ ಅರ್ಥವೇನೆಂದು ಜನಸಾಮಾನ್ಯರಿಗೆ ಗ್ರಹಿಕೆಯಾಗುವದಿಲ್ಲ ಶಿರಸಿಯು ತನಕ ತಂದ ಉಗಿಬಂಡಿಯನ್ನು ಘಟ್ಟದ ಕೆಳಗೆ ತಂದರೆ ಯಾವ ಹಾನಿಯು ಒದಗುವದೆಂದು ಯಾರಿಗೂ ತಿಳಿಯುವದಿಲ್ಲ! ಉಗಿಬಂಡಿಯು ಮಾರ್ಗ ಸಮುದ್ರ ಮಾರ್ಗವನ್ನು ಕೂಡದಿದ್ದರೆ ಆ ಉಗಿಬಂಡಿಯ ಮಾರ್ಗದಿಂದ ನಮ್ಮ ಜಿಲ್ಲೆಗೆ ಅಷ್ಟೇನು ಪ್ರಯೋಜನ ದೊರೆಯುವದಿಲ್ಲ ಶಿರಸಿಯ ಜನರಿಗಷ್ಟು ಉಗಿಬಂಡಿಯಿಂದ ಓಡಾಡಲಿಕ್ಕೆ ಅನುಕೂಲ ಮಾಡಿಕೊಟ್ಟಂತಾಗುವದು ಇಷ್ಟು ಸಂಕುಚಿತ ವಿಚಾರವನ್ನು ಗ್ರಾಮೋದ್ಧಾರ ಮಂಡಳದಂಥ ವಿಶಾಲ ಜಿಲ್ಲೆಯ ಅಭಿವೃದ್ಧಿಯನ್ನು ಬಯಸುವ ಸಂಸ್ಥೆಯವರು ತಳೆದದ್ದು ಸೋಜಿಗವೇ ಸರಿ! ಹಿಂದುಸ್ಥಾನ ಸರಕಾರವು ಮಂಡಳದ ಈ ವಿವೇಕಹೀನ ಅಭಿಪ್ರಾಯವನ್ನು ಅಲಕ್ಷಿಸಿ, ಜಿಲ್ಲೆಯ ಪರಿಸ್ಥಿತಿಯನ್ನು ಸ್ವತಂತ್ರ ದೃಷ್ಟಿಯಿಂದ ಪರಿಶೀಲಿಸಿಕೊಂಡು, ಇಡೀ ಜಿಲ್ಲೆಗೆ ಪ್ರಯೋಜನವಾಗುವಂತಹ ಯೋಜನೆ ಮಾಡಬೇಕಾಗಿ ಸೂಚನೆಯಿದೆ

***

ಕೆಲವು ತಿಂಗಳುಗಳ ಹಿಂದೆ ನಮ್ಮ ಜಿಲ್ಲೆಯ ಮದ್ಯಪಾನನಿರೋಧ ಸಮಿತಿಯ ಸಭೆಯೊಂದು ಸೇರಿದಾಗ ಒಂದು ರಹಸ್ಯದ ಸ್ಫೋಟವಾಯಿತು! ಓರ್ವ ಪೋಲೀಸ ಅಧಿಕಾರಿಯು ಬಳಿಗೆ ಮದ್ಯಸಂಗ್ರಹವಿದ್ದ ಸಂಗತಿಯನ್ನು ಒಬ್ಬರು ಗೌಪ್ಯದಿಂದ ಮೇಲಧಿಕಾರಿಗಳಿಗೆ ತಿಳಿಸಿದರೆಂದೂ ಆ ಮೇಲಧಿಕಾರಿಗಳನ್ನು ಕರಕೊಂಡು ಅವರು ತಪಾಸಣೆಗೆ ಹೋದಾಗ ನಡುಮಧ್ಯದಲ್ಲಿ ಯಾರೋ ಒಬ್ಬರು ಓರ್ವ ಹೆಂಗಸಿನ ಹೆಸರಲ್ಲಿ ತಂತಿ ಕಳುಹಿ ಸದರಿ ಕಳ್ಳ ಪೋಲೀಸ ಅಧಿಕಾರಿಗಳಿಗೆ ಪಾರಾಗಲು ಅವಕಾಶ ಮಾಡಿಕೊಟ್ಟರೆಂದೂ, ಇದರೊಳಗೆ ಮೇಲಧಿಕಾರಿಯ ಅಂಗ ಸಹ ಇತ್ತೆಂದೂ, ಮೇಲಧಿಕಾರಿಗಳು ಹೀಗೆ ರಹಸ್ಯ-ಸ್ಫೋಟ ಮಾಡುತ್ತಿರುವದಾದರೆ ಅಧಿಕಾರಿಗಳೊಡನೆ ಜನಪ್ರಮುಖರು ಸಹಕರಿಸುವದು ಕಠಿಣವಾಗುವದೆಂದೂ ಓರ್ವ ಸಭಿಕರು ಉದ್ಗರಿಸಿದರು. ಈ ಕುರಿತು ಚೌಕಶಿ ಮಾಡಲ್ಪಡುವದಾಗಿ ಸಭೆಯಲ್ಲಿ ವಚನ ಸಿಕ್ಕಿತ್ತು ಅದರೆ ಆ ಮಾತಿಗೆ ಈಗ ದೀರ್ಘ ಕಾಲವಾಗಿರುತ್ತಿದ್ದರೂ ಈ ತನಕ ಏನೂ ಚೌಕಶಿಯಾದದ್ದು ಕಂಡುಬರುವದಿಲ್ಲ! ಪ್ರಾಂತಿಕ ಸರಕಾರವು ಪ್ರಾಂತದೊಳಗಿನ ಕುಡುಕತನವನ್ನು ನಿಶ್ಶೇಷವಾಗಿ ನಿಲ್ಲಿಸಬೇಕೆಂಬ ಘೋರ ನಿರ್ಧಾರವನ್ನೇನೋ ಮಾಡಿದೆ ಅಬಕಾರಿ ಇಲಾಖೆಯ ಮಂತ್ರಿಗಳಾಗಿರುವ ಮಾನ್ಯ ಲಕ್ಷ್ಮಣರಾವ ಪಾಟೀಲರು ಹೆಂಡಕುಡುಕರಿಗೆ ಇನ್ನು ಮುಂದೆ ತಮ್ಮ ಲೋಕ-ರಾಜ್ಯದಲ್ಲಿ ಎಳ್ಳಷ್ಟೂ ಆಶ್ರಯ ಸಿಗಲಿಕ್ಕಿಲ್ಲವೆಂದು ಖಂಡಿತವಾಗಿ ಹೇಳಿದ್ದಾರೆ ಆದರೆ ಅಧಿಕಾರಿಗಳು, ಪ್ರಾಮುಖ್ಯವಾಗಿ ಪೋಲೀಸ ಅಧಿಕಾರಿಗಳು ಮೇಲಿನಂತೆ ರಹಸ್ಯ-ಸ್ಫೋಟ ಮಾಡಿ, ಸುದ್ದಿ ಕೊಟ್ಟವರನ್ನು ಕಷ್ಟಕ್ಕೀಡು ಮಾಡಲಾರಂಭಿಸಿದರೆ ಸರಕಾರದವರ ಮದ್ಯನಿರೋಧನದ ಪ್ರಯೋಗವು ಯಶಸ್ವಿಯಾಗುವದು ಹೇಗೆ?

***

ಬೇಸಾಯ ಖಾತೆಯವರ ಪ್ರದರ್ಶನ ಮಾದರಿಯೊಂದನ್ನು ಸಮೂದಿಸಬಹುದು. ಕುಮಟೆಯ ಬೇಸಾಯ ಕ್ಷೇತ್ರದ ಹೊಲದಲ್ಲಿ ಮಾವಿನ ಸಸಿ-ಗಿಡಗಳನ್ನು ತಯಾರಿಸುತ್ತಾರೆ ಬೇಕಾದಲ್ಲಿ ಒಯ್ಯಲು ಅನುಕೂಲವಾಗಬೇಕೆಂದು ಅವನ್ನು ಮಣ್ಣಿನ ಕುಂಡಿಗಳಲ್ಲಿ ಬೆಳಸುತ್ತಾರೆ ಈ ಕುಂಡಿಗಳು ಕುಮಟೆಯಲ್ಲಿ ಬೇಕಷ್ಟು ತಯಾರಾಗುತ್ತವೆ ಕುಂಡಿಯೊಂದಕ್ಕೆ ೨ ಬಿಕ್ಷಿಯಿಂದ ೧ ಆಣೆಯ ತನಕ ಬೆಲೆಯುಂಟು ಈ ವರೆಗೆ ಅವನ್ನು ಕುಮಟೆಯಲ್ಲೇ ಖರೇದಿಸುತ್ತಿದ್ದರು ಈ ವರುಷ ಹಳಿಯಾಳದಲ್ಲಿ ಕುಂಡಿಯೊಂದಕ್ಕೆ ೨ ಆಣೆಯಂತೆ ಬೆಲೆ ಕೊಟ್ಟು ಖರೇದಿ ಮಾಡಿ, ಅಲ್ಲಿಂದ ೩೦೦ ಕುಂಡಿಗಳನ್ನು ಮೋಟಾರದವರಿಗೆ ಪೆಟ್ರೋಲ ಕೂಪನುಗಳನ್ನು ಪೂರೈಸಿ ಕುಮಟೆಗೆ ತರಿಸಿದ್ದಾರೆ ಅವುಗಳಿಗಾಗಿ ಅಂತು ರೂ ೯೬ ಖರ್ಚು ಬಂದಿರುತ್ತದೆಂದ ಹೇಳುತ್ತಾರೆ ಈ ಕುಂಡಿಗಳಲ್ಲಿ ಪುನಃ ನೂರಿನ್ನೂರು ಕುಂಡಿಗಳು ಸಾಗಾಟದ ಸಮಯದಲ್ಲಿ ಒಡೆದು ಹೋಗಿವೆಯಂತೆ ಅದರಿಂದ ಸುಸ್ಥಿತಿಯಲ್ಲಿರುವ ಕುಂಡಿಯೊಂದಕ್ಕೆ ಸರಾಸರಿ ೧೦ ಆಣೆ ಬೆಲೆ ಬೀಳುತ್ತದಂತೆ! ನಮ್ಮ ಬೇಸಾಯ ಇಲಾಖೆಯವರ ಕಾರಭಾರದ ಮಾದರಿಯಿದ!

ಪ್ರಕಟನೆ.

ಉತ್ತರ ಕನ್ನಡ ಜಿಲ್ಲೆಯ ನ್ಯಾಯ ಖಾತೆಯಲ್ಲಿ (Judicial Department) ತಾತ್ಪೂರ್ತಿಕವಾಗಿ ಉಮೇದವಾರ ಬೇಲೀಫ ರ ಅರಿಕೆಗಳಿದ್ದಿವೆ ಸಂಬಳದ ಪ್ರಮಾಣ — ರೂ ೪೦-೧ ೫೦ ೩-೬೦ ಅರ್ಜದಾರರು ಕನ್ನಡವನ್ನು ಚನ್ನಾಗಿ ಓದು-ಬರೆಯಲು ಬಲ್ಲವರಿರತಕ್ಕದ್ದು ಕನ್ನಡ ಮ್ಯಾಟ್ರಿಕ ಪರೀಕ್ಷೆ ಪಾಸಾದವರಿಗೆ ಪ್ರಾಶಸ್ತ್ಯವನ್ನು ಕೊಡಲಾಗುವದು ಅರ್ಜದಾರನ ವಯಸ್ಸು ೨೫ಕ್ಕೆ ಮೀರಿರಕೂಡದು ಅರ್ಜ ಮಾಡಬಯಸುವವರು ಮೇಲಿನ ಅರ್ಹತೆಗಳ ದಾಖಲೆಗಳೊಂದಿಗೆ ಸ್ವಹಸ್ತದಿಂದ ಬರೆದ ಅರ್ಜಿಗಳನ್ನು ತಾ. ೩೧-೭-೧೯೪೯ರೊಳಗಾಗಿ ಮಾ॥ ಡಿಸ್ಟ್ರಿಕ್ಟ ಜಡ್ಜ ಸಾಹೇಬ, ಕಾರವಾರ ಇವರಿಗೆ ತಲುಪುವಂತೆ ಕಳಿಸತಕ್ಕದ್ದು

ಕಾರವಾರ, ತಾ ೧೫-೭-೪೯. } N S. Shrikhande, District Judge, Kanara.

ಹತ್ತಿಕಾಳು ಮಾರಾಟಕ್ಕಿಟ್ಟಿದೆ!

ಕುಮಟಾ ಕನ್ಸ್ಯೂಮರ್ಸ ಕೋ-ಒಪರೇಟಿವ್ ಸೊಸಾಯಿಟಿ, ಲಿ., ಕುಮಟಾ ಇವರ ಕಡೆಯಿಂದ ಈ ತಾಲೂಕ ಜಾನುವಾರು ಜನರಿಗೆ ತಿಳಿಸುವದೇನಂದರೆ- ನಮ್ಮ ಅಂಗಡಿಯಲ್ಲಿ ಚಲೋ ಹುಬ್ಬಳ್ಳಿ ಹತ್ತಿಕಾಳು ಚೀಲ ೧೫ (೧೪೩ ರತ್ತಲು-ಚೀಲ ಸಹಿತ) ರೂ ೨೫-೮-೦ ಯಂತೆ ಮಾರಲ್ಪಡುತ್ತದೆ ಖಾಯಿಶ ಇದ್ದವರು ಖರೇದಿಸಬೇಕಾಗಿ ಅಪೇಕ್ಷಿಸುತ್ತೇವೆ

ಕುಮಟಾ, ತಾ ೧೩-೭-೪೯ ಚೆಅರಮನ್

ನಮ್ಮಲ್ಲಿ

ಹೊಸ ಟಿನೆನ್ಸಿ ನಿಯಮಗಳಂತೆ ಕಬಜಾ ಕೇಳಿ ಮಾಡತಕ್ಕ ದಾವೆಯ ಫಾರ್ಮು ಗಳೂ ಗೇಣಿ ಬಾಕಿ ದಾವೆಯ ಫಾರ್ಮು ಗಳೂ ಸೇಲ ನೋಟ ಬೂಕುಗಳೂ ಸಿಗುತ್ತವೆ

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

ವಿವಿಧ ವಿಷಯಗಳು.

ಇದೇ ಜುಲಾಯಿ ತಾ ೧ಕ್ಕೆ ಜನ್ಮ ತಾಳಿರುವ ಕೊಚ್ಚಿ ತಿರುವಾಂಕೂರ ಸಂಸ್ಥಾನಗಳ ಒಕ್ಕೂಟವು ಭಾವಿ ಕೇರಳ ಪ್ರಾಂತದ ಅಡಿಗಲ್ಲೆನ್ನಬಹುದೆಂದು ಹೇಳಬಹುದು ಈ ಎರಡು ಸಂಸ್ಥಾನಗಳಿಂದ ವ್ಯಾಪ್ತವಿರುವ ಪ್ರದೇಶವೂ ಮದ್ರಾಸ ಇಲಾಖೆಯಲ್ಲಿ ಸೇರ್ಪಡೆಯಾಗಿರುವ ಮಲಬಾರ ಜಿಲ್ಲೆಯೂ ಕೂಡಿ ಕ್ರಿಸ್ತ ಶಕದ ೯ನೆಯ ಶತಮಾನದ ತನಕ ಒಂದೇ ರಾಜ್ಯವಾಗಿದ್ದವು ಅದಕ್ಕೇ ಇತಿಹಾಸದಲ್ಲಿ ಕೇರಳ ರಾಜ್ಯವೆನ್ನುತ್ತಿದ್ದರು ೯ನೇ ಶತಮಾನದ ಕೊನೆಗೆ ಈ ರಾಜ್ಯವನ್ನು ಆಳುತ್ತಿದ್ದ ಚೇರ-ವಂಶೀಯ ರಾಜನು ರಾಜ್ಯದ ೩ ಖಂಡಗಳನ್ನು ಮಾಡಿ, ಅವನ್ನು ತನ್ನ ೩ ಮಂದಿ ಮಕ್ಕಳಿಗೆ ಹಂಚಿಕೊಟ್ಟಿದ್ದನು ಅಂದು ವಿಭಕ್ತವಾದ ೩ ಖಂಡಗಳು ಅಂದರೆ ತಿರುವಾಂಕೂರ ಮತ್ತು ಕೊಚ್ಚಿ ಸಂಸ್ಥಾನಗಳು ಈಗ ಒಂದಾಗಿವೆ ೩ನೆಯ ಖಂಡವಾದ ಮಲಬಾರ ಜಿಲ್ಲೆಯನ್ನೂ ಈ ಪ್ರದೇಶದ ಆಸಮಂತಾತ್ ಮಲಯಾಳಿ ಭಾಷೆಯನ್ನಾಡುವ ಜನರ ಚಿಕ್ಕ-ಪುಟ್ಟ ಪ್ರದೇಶಗಳನ್ನೂ ಈ ಒಕ್ಕೂಟಕ್ಕೆ ಸೇರಿಸಿದರೆ ೧೦೦೦ ವರ್ಷಗಳ ಹಿಂದೆ ತ್ರಿಖಂಡವಾದ ಕೇರಳ ದೇಶವು ಪುನಃ ಅಖಂಡವಾಗುವದು

ಮೊನ್ನೆ ರಚಿತವಾದ ಈ ಕೇರಳ ಒಕ್ಕೂಟವು ಆಕಾರದಲ್ಲಿ ಸಣ್ಣದಿದ್ದರೂ ಜನಸಂಖ್ಯೆಯ ದೃಷ್ಟಿಯಿಂದ, ಉತ್ಪನ್ನದ ದೃಷ್ಟಿಯಿಂದ ಇಲ್ಲವೆ ಉದ್ಯೋಗಾಭಿವೃದ್ಧಿಗಳ ದೃಷ್ಟಿಯಿಂದ ಬೇರೆ ಒಕ್ಕೂಟಗಳಿಗಿಂತ ಸಮೃದ್ಧವಿರುತ್ತದೆ ಕೊಚ್ಚಿ ಮತ್ತು ತಿರುವಾಂಕೂರ ಈ ಎರಡೂ ಸಂಸ್ಥಾನಗಳ ವಿಸ್ತಾರ ೮೦೦೦ ಚದುರ ಮೈಲುಗಳಷ್ಟುಂಟು, ಜನಸಂಖ್ಯೆ ೭೫ ಲಕ್ಷಗಳಷ್ಟಿದೆ ಅಂದರೆ ಪ್ರತಿ ಚದುರ ಮೈಲಿಗೆ ೯೩೦ ರಷ್ಟು ಜನವಸತಿಯುಂಟು ಹಿಂದುಸ್ಥಾನದ ಬೇರೆ ಯಾವ ಪ್ರಾಂತದಲ್ಲಿ ಯಾ ಸಂಸ್ಥಾನದಲ್ಲಿ ಇಷ್ಟು ದಟ್ಟವಾದ ಜನವಸತಿಯಿರುವದಿಲ್ಲ. ಎರಡೂ ಸಂಸ್ಥಾನಗಳ ಉತ್ಪನ್ನ ೧೩ ಕೋಟಿ ರೂಪಾಯಿಗಳಿಗೆ ಮಿಕ್ಕುತ್ತಿದೆ. ತ್ರಾವಣಕೋರ ಸಂಸ್ಥಾನದಲ್ಲಿ ಶಿಕ್ಷಣ ಪ್ರಸಾರ ಬಹಳ ಆದದ್ದಿದೆ ಅಲ್ಲಿಯ ಗಂಡಸರಲ್ಲಿ ೧೦೦ಕ್ಕೆ ೬೦ರಷ್ಟು ಮಂದಿ ಮತ್ತು ಹೆಂಗಸರಲ್ಲಿ ೧೦೦ಕ್ಕೆ ೪೨ ಮಂದಿ ಸಾಕ್ಷರರಿರುತ್ತಾರೆ ತ್ರಾವಣಕೋರದಲ್ಲಿ ಈಗ ೧೨ ವರ್ಷಗಳಿಂದ ಸ್ವತಂತ್ರ ವಿಶ್ವವಿದ್ಯಾಲಯವಿದೆ ಈ ಎರಡೂ ಸಂಸ್ಥಾನಗಳಲ್ಲಿ ಕೂಡಿ ೩೦೦೦ ಚದುರ ಮೈಲುಗಳಷ್ಟು ವಿಸ್ತಾರವಾದ ಅರಣ್ಯವುಂಟು ಅವುಗಳಲ್ಲಿ ಉತ್ತಮ ಜಾತಿಗಳ ಇಮಾರತ-ಕಟ್ಟಿಗೆ ಸಿಗುತ್ತದೆ ' ಕಲ್ಪವೃಕ್ಷ" ವೆಂದು ಸಂಬೋಧಿಸಲ್ಪಡುವ ತೆಂಗಿನಮರಗಳಂತೂ ಈ ಸಂಸ್ಥಾನಗಳಲ್ಲಿ ವಿಪುಲವಾಗಿ ಬೆಳೆಯುತ್ತಿವೆ ಈ ತೆಂಗಿನ ಮರಗಳಿಂದ ಸಿಗುವ ಕತ್ತವು ಪ್ರತಿ ವರ್ಷ ೧ ಲಕ್ಷ ಟನ್ನಿಗೂ ಮಿಕ್ಕುತ್ತದಂತೆ ಇದರ ಮೇಲಿಂದ ತೆಂಗಿನಕಾಯಿಯ ಉತ್ಪನ್ನ ಎಷ್ಟು ಸಿಗುತ್ತಿರಬಹುದೆಂಬುದರ ಕಲ್ಪನೆಯನ್ನು ನಾವು ಮಾಡಿಕೊಳ್ಳಬಹುದು ಈ ಹೊರತು ಈ ಸಂಸ್ಥಾನಗಳಲ್ಲಿ ಪ್ರತಿ ವರ್ಷ ೨೦೦೦೦ ಟನ್ನ ಮೆಣಸಿನ ಕಾಳು, ೭೦೦೦ ಟನ್ನ ಯಾಲಕ್ಕಿ, ೪॥ ಕೋಟಿ ರತ್ತಲ ಚಹಾ, ೩ ಕೋಟಿ ರತ್ತಲ ಕಾಫಿ ಬೀಜ ಮತ್ತು ೩॥ ಲಕ್ಷ ರತ್ತಲ ರಬ್ಬರ ಬೆಳೆಯುತ್ತಿದೆ ಇದಲ್ಲದೆ ಈ ಸಂಸ್ಥಾನಗಳಲ್ಲಿ ಸಿಗುತ್ತಿರುವ ಮಳಲಿನ

... ವೇಗನ ರುಮಾಯಿಟ್" ಎಂಬ ಕಿಪ್ಲಿಂಗ್ ಪ್ರತಿಕ್ರಿಯೆ ಈ ಪ್ರಶ್ನೆಯೊಳಗಿಂದ ಅಣಕಿಸುತ್ತಿರುವ ಸರ್ಕಾರಕ್ಕೆ ಅಪಖ್ಯಾತಿಯ "ಗೋಲಿಯಾರ್" ಎಂಬ ಅತ್ಯಂತ ಉಪಯುಕ್ತ ಪ್ರಶ್ನೆವನ್ನು ಕೇಳುತ್ತಿರುವುದಂತೆ ೩೦ ವರ್ಷಗಳ ಹಿಂದೆಯೇ ಜರ್ಮನರು ಈ ಮಾಲಿನ ಬೆಲೆಯನ್ನು ಕಂಡುಹಿಡಿದು, ಅದನ್ನು ಕಡಾಗಿಟ್ಟು ತುಂಬಿ ತಮ್ಮ ದೇಶಕ್ಕೆ ಒಯ್ಯುತ್ತಿದ್ದರು! ಎರಡು ಮಹಾಯುದ್ಧಗಳ ಸಮುದ್ರ ದಂಡೆಯ ಮೇಲೆ ವ್ಯಾಪಾರಿಗಳು ಇಷ್ಟು ಉತ್ಸಾಹದಿಂದ ನಡೆಯುತ್ತಿದ್ದು, ಇತ್ತೀಚೆಗೆ ಕೊಚ್ಚಿ-ಲಿಮ್ನೈಟ್ ಎಣ್ಣೆಯಷ್ಟೇ ಉಪಯುಕ್ತವಿರುವ ಕಾರ್ಬನ್-ಲೆಸ್ಟರ್ ಎಣ್ಣೆಯನ್ನು ತಯಾರಿಸುವ ಹಲವಾರು ಕಾರಖಾನೆಗಳೂ ಈ ಸಂಸ್ಥಾನಗಳಲ್ಲಿ ಹುಟ್ಟಿವೆ.

ಸಾಂಸ್ಕೃತಿಕ ಮತ್ತು ವೈದಿಕ ಧರ್ಮದ ದೃಷ್ಟಿಯಿಂದಲೂ ಕೂಡ ಕೇರಳ ದೇಶ ಪ್ರಸಿದ್ಧವಿದೆ. ಭಾರತದಲ್ಲಿ ವೈದಿಕ ಧರ್ಮದ ಪುನರುದ್ಧಾರ ಮಾಡಿದ ಶ್ರೀ ಆದ್ಯಶಂಕರಾಚಾರ್ಯರು ಹುಟ್ಟಿದ್ದು ಇದೇ ಪ್ರಾಂತದಲ್ಲಿ. ಕರ್ನಾಟಕ ಸಂಗೀತವೆಂದು ಸಂಬೋಧಿಸಲ್ಪಡುತ್ತಿರುವ ದಾಕ್ಷಿಣಾತ್ಯ ಸಂಗೀತ ಪ್ರಪಂಚದ ಬೆಳವಣಿಗೆಯಾದದ್ದು ಇದೇ ಪ್ರಾಂತದಲ್ಲೆಂದು ಇತಿಹಾಸಜ್ಞರು ಹೇಳುತ್ತಾರೆ. ೧೭೫೦ನೇ ಇಸವಿಯಲ್ಲಿ ತಿರುವಾಂಕೂರ ಸಂಸ್ಥಾನದ ಮೇಲೆ ಒಂದು ಗಂಡಾಂತರ ಬಂದಾಗ ಆಗಿನ ಅರಸರು ತಮ್ಮ ರಾಜ್ಯವನ್ನು ತಮ್ಮ ಕುಲದೇವರಾದ ಶ್ರೀ ಪದ್ಮನಾಭನಿಗೆ ದಾನ ಮಾಡಿ, ಆ ದೇವರ ಪ್ರತಿನಿಧಿಯಾಗಿ ತಾವು ರಾಜ್ಯಭಾರ ಮಾಡುತ್ತಿದ್ದರು. ಅವರ ತರುವಾಯ ಬಂದ ಅರಸರೂ ಕೂಡ ತಾವು ಶ್ರೀ ಪದ್ಮನಾಭ ಸ್ವಾಮಿಯ ಪ್ರತಿನಿಧಿಗಳೆಂದೇ ಹೇಳಿಸಿಕೊಳ್ಳುತ್ತಿದ್ದರು ವಿನಹ ತಾವು ಸ್ವತಂತ್ರರೆಂದು ಭಾವಿಸುತ್ತಿದ್ದಿಲ್ಲ. ಶ್ರೀ ಪದ್ಮನಾಭಸ್ವಾಮಿಯ ಈ ರಾಜ್ಯದಲ್ಲಿ ಸಂಪನ್ನ ದೇವಾಲಯಗಳ ಸಮೃದ್ಧಿಯಾಗುವದು ಸ್ವಾಭಾವಿಕವೇ. ಇಡೀ ತಿರುವಾಂಕೂರ ಸಂಸ್ಥಾನದಲ್ಲಿ ೩೪೮ ದೊಡ್ಡ ದೇವಾಲಯಗಳೂ ೧೫೩೩ ಸಣ್ಣ ಗುಡಿಗಳೂ ಇರುತ್ತವೆಂದು ಲೆಕ್ಕ ಮಾಡಿದ್ದಾರೆ. ಕೊಚ್ಚಿ ಸಂಸ್ಥಾನದಲ್ಲಿ ೩೩೦ ದೇವಸ್ಥಾನಗಳಿವೆಯಂತೆ. ಈ ಎಲ್ಲ ದೇವಾಲಯಗಳಿಗೆ ಸಂಸ್ಥಾನಗಳ ಬೊಕ್ಕಸಗಳಿಂದ ಲಕ್ಷಗಟ್ಟಲೆ ರೂಪಾಯಿಗಳ ಧನಸಹಾಯ ಸಿಗುತ್ತಿತ್ತು. ಇನ್ನು ಮುಂದೆ ಸಹ ಶ್ರೀ ಪದ್ಮನಾಭ ಸ್ವಾಮಿಯ ಸೇವೆಗೆ ೬ ಲಕ್ಷ ರೂ ಮತ್ತು ಇತರ ದೇವಾಲಯಗಳ ಸೇವೆಗೆ ೪೫ ಲಕ್ಷ ರೂ ಪ್ರತಿ ವರ್ಷ ಹೊಸ ಒಕ್ಕೂಟದ ಉತ್ಪನ್ನದೊಳಗಿಂದ ಸಲ್ಲಿಸಬೇಕೆಂದು ಸಂಸ್ಥಾನಾಧಿಪತಿಗಳು ಹಿಂದ ಸರಕಾರದೊಡನೆ ಮಾಡಿಕೊಂಡ ಕರಾರು-ಪತ್ರದಲ್ಲಿ ಒಂದು ಕಲಮು ಸೇರಿಸಲಾಗಿದೆ. ಈ ಒಕ್ಕೂಟದ ರಾಜಪ್ರಮುಖತ್ವವು ತಿರುವಾಂಕೂರ ಸಂಸ್ಥಾನಾಧಿಪತಿಗೆ ಒಪ್ಪಿಸಲ್ಪಟ್ಟಿದೆ.

* * *

ದೇಶದೊಳಗಿನ ಪರಿಸ್ಥಿತಿಯನ್ನೂ ಕಾಂಗ್ರೆಸ ಸಂಸ್ಥೆಯ ಸ್ಥಿತಿಗತಿಗಳನ್ನೂ ಪರಾಂಬರಿಸುವದಕ್ಕಾಗಿ ಮೊನ್ನೆಯಿಂದ ದಿಲ್ಲಿಯಲ್ಲಿ ಕಾಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಕೂಡಿದೆ. ಈ ಸಭೆಯ ಕಾರ್ಯಕ್ರಮ-ಪಟ್ಟಿಯಲ್ಲಿ ೩೦ ಅತಿ ಮಹತ್ವದ ವಿಷಯಗಳಿವೆಯಂತೆ. ಪಶ್ಚಿಮ ಕಲಕತ್ತೆಯ ಮತದಾರ ಸಂಘದ ಉಪಚುನಾವಣೆಯಲ್ಲಿ ಕಾಂಗ್ರೆಸ ಹುರಿಯಾಳನ್ನು ಅತಿ ಪ್ರಚಂಡ ಬಹುಮತದಿಂದ ಸೋಲಿಸಿ ಶ್ರೀ|| ಶರಚ್ಚಂದ್ರ ಬೋಸರು ಆರಿಸಿಬಂದಿದ್ದರಿಂದ ಬಂಗಾಲ ಪ್ರಾಂತದಲ್ಲಿ ಕಾಂಗ್ರೆಸ್ಸಿನ ಪ್ರತಿಷ್ಠೆಗೆ ಪ್ರಬಲ ಪೆಟ್ಟು ಬಿದ್ದಂತಾಗಿದೆ. ಕಾಂಗ್ರೆಸ್ಸಿಗೆ ಕಲಕತ್ತೆಯಲ್ಲಿ ಈ ರೀತಿ ಸೋಲು ಒದಗಲಿಕ್ಕೆ ಕಾರಣವೇನೆಂಬುದರ ಬಗ್ಗೆ ಕಾಂಗ್ರೆಸ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ|| ಕಲಾ ವೆಂಕಟರಾಯರು ಸ್ಥಾನಿಕ ಚೌಕಶಿ ನಡಿಸಿ, ಕಾಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ತಮ್ಮ ವರದಿಯನ್ನು ಒಪ್ಪಿಸಿರುತ್ತಾರೆ. ಬಂಗಾಲದ ಪರಿಸ್ಥಿತಿ ಸಮಾಧಾನಕರವಿರುವದಿಲ್ಲ. ಅಲ್ಲಿ ಕಮ್ಯೂನಿಸ್ಟರ ಉಪದ್ರವ ಮಿತಿಮೀರಿದೆ. ಪ್ರತ್ಯಕ್ಷ ಕಲಕತ್ತೆಯಲ್ಲಿ ಹಿಂಸಾಚಾರಗಳು ಬಹಳ ಹೆಚ್ಚಾಗಿವೆ. ಆ ನಗರದಲ್ಲಿ ಪ್ರತಿ ತಿಂಗಳು ಸರಾಸರಿ ೫೦೦ ಹಿಂಸಾತ್ಮಕ ಅತ್ಯಾಚಾರಗಳು ಜರಗುತ್ತಿವೆ! ಈ ಪರಿಸ್ಥಿತಿಯನ್ನು ಸ್ವತಃ ಅಭ್ಯಸಿಸಲು ಕಳೆದ ವಾರ ಭಾರತದ ಮುಖ್ಯ ಪ್ರಧಾನ ಪಂ|| ಜವಾಹರಲಾಲ ನಹರೂ ರವರು ಕಲಕತ್ತೆಗೆ ಹೋಗಿದ್ದರು. ಅಲ್ಲಿ ಅವರು ೩ ದಿನ ಇದ್ದು ಬೇರೆ ಬೇರೆ ಪಕ್ಷ-ಪಂಗಡಗಳ ೨೦೦ಕ್ಕೂ ಪ್ರತಿನಿಧಿಗಳನ್ನು ಕಂಡು ಅವರೊಡನೆ ವಿಚಾರ-ವಿನಿಮಯ ಮಾಡಿದ್ದಾರೆ. ಗುರುವಾರ ಸಂಜೆ ಕಲಕತ್ತೆಯ ಪ್ರಸಿದ್ಧ ಮೈದಾನಿನಲ್ಲಿ ೧೦ ಲಕ್ಷ ಜನರು ಕೂಡಿದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಅವರ ಭಾಷಣವಾಯಿತು. ಈ ಸಭೆಗೆ ಬಹಿಷ್ಕಾರ ಹಾಕಬೇಕೆಂದು ಸಮಾಜವಾದಿ ವಗೈರೆ ಕೂಡ ಗ್ರಸ್ತೀಕರ ಪಕ್ಷಗಳ ಪ್ರಮುಖರು ಮೊದಲಿನಿಂದಲೂ ಪ್ರಚಾರ ನಡಿಸಿದ್ದರು, ಮತ್ತು ಜನರನ್ನು ಸೇರಗೊಳ್ಳುವದಕ್ಕಾಗಿ ಪಂಡಿತಜಿಯವರ ಸಭೆಯ ಕಾಲಕ್ಕೇ ಬೇರೊಂದೆಡೆ ಸಭೆ ಸೇರಿಸುವ ಏರ್ಪಾಟು ಮಾಡಿದ್ದರು. ಆದರೆ ಅವರ ಆಟ ಯಶಸ್ವಿಯಾಗಲಿಲ್ಲ. ಅವರ ಸಭೆಗೆ ಬರೇ ೧ ಸಾವಿರ ಜನರು ಕೂಡಿದ್ದರಂತೆ! ಪಂಡಿತಜಿಯವರ ಸಭೆಯಲ್ಲಿಯೂ ಕೆಲವರು ಗೊಂದಲವನ್ನೆಬ್ಬಿಸಿದರು. ಆದರೆ ಪಂಡಿತಜಿಯವರೂ ಜನರೂ ಅದನ್ನು ಲಕ್ಷಿಸದೆ ಸಭೆಯ ಕೆಲಸ ಶಾಂತ ರೀತಿಯಿಂದ ಕೊನೆಗಾಣಿಸಿದರು. ಆದರೂ ಈ ಸಭೆಯ ಒಂದು ಅಂಚಿನಲ್ಲಿ ಒಂದು ಬಾಂಬಿನ ಸ್ಫೋಟವಾಗಿ ಓರ್ವ ಪೋಲೀಸನು ಮಡಿದನಲ್ಲದೆ ೬ ಜನರಿಗೆ ಗಾಯಗಳಾದವು. ಕೆಲವು ಅತ್ಯಾಚಾರಿಗಳು ಕಲಕತ್ತೆಯಲ್ಲಿ ಪಂಡಿತಜಿಯವರ ಪ್ರಾಣ ತೆಗೆಯಲು ನಿರ್ಧರಿಸಿದ್ದರೆಂದೂ ವರದಿಯುಂಟು. ಪಂಡಿತಜಿಯವರು ಸರಕಾರಿ ಭವನಕ್ಕೆ ತಿರುಗಿ ಬರುವಾಗ ಅವರ ಮೇಲೆ ಗುಂಡು ಹಾರಿಸಲೆಂದು ಓರ್ವ ಯುವಕನು ಗುಂಡು ತುಂಬಿದ ಪಿಸ್ತೂಲನ್ನು ಹಿಡಕೊಂಡು ಸರಕಾರಿ ಭವನದ ಪ್ರವೇಶದ್ವಾರದಲ್ಲಿ ಸಂಶಯಾಸ್ಪದ ರೀತಿಯಲ್ಲಿ ಅಡ್ಡಾಡುತ್ತಿದ್ದನಂತೆ! ಅಲ್ಲಿದ್ದ ಪೋಲೀಸ ಅಧಿಕಾರಿಯು ಅವನಿಗೆ ನಿಲ್ಲಿಸಲಾಗಿ ಅವನು ಆ ಅಧಿಕಾರಿಯ ಮೇಲೆ ೩ ಗುಂಡುಗಳನ್ನು ಹಾರಿಸಿದನಂತೆ! ಆದರೆ ಗುಂಡುಗಳು ಗುರಿ ತಪ್ಪಿ ಹೋದವು! ಅಷ್ಟರಲ್ಲಿ ಓರ್ವ ಕುದರೆ-ಸ್ವಾರ ಪೋಲೀಸನು ಓಡಿ ಬಂದು ಆ ಯುವಕನನ್ನು ಬಂಧಿಸಿದನು. ಇದೆಲ್ಲ ನೋಡಿದರೆ ಕಲಕತ್ತೆಯ ಹಾಗೂ ಬಂಗಾಲದ ಪರಿಸ್ಥಿತಿ ಬಹಳ ವಿಷಮ ಮತ್ತು ವಿಷಮಯವಾಗಿರುವಂತೆ ತೋರುತ್ತದೆ. ಪಂ|| ನೆಹರೂರವರು ತಾವು ಕಂಡದ್ದನ್ನೆಲ್ಲ ಕಾಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ನಿವೇದಿಸಿದ್ದಾರೆ. ಮದ್ರಾಸದ ಈಗಣ ಕೆಲವು ಮಂತ್ರಿಗಳ ವಿರುದ್ಧ ಮದ್ರಾಸ ಪ್ರಾಂತದ ಹಿಂದಣ ಮುಖ್ಯ ಮಂತ್ರಿ ಶ್ರೀ|| ಪ್ರಕಾಶಮ್ ಇವರೂ ಅವರ ಪಕ್ಷದವರೂ ಈಗೊಂದು ವರ್ಷದಿಂದ ದುರ್ನಡತೆಯ ಆರೋಪಗಳನ್ನು ಮಾಡುತ್ತಿದ್ದಾರೆ. ಈ ಸಂಬಂಧದಲ್ಲಿ ಚೌಕಶಿ ಮಾಡಲು ಕಾಂಗ್ರೆಸ್ಸಿನ ಹಿರಿಯ ಕಾರ್ಯದರ್ಶಿಗಳಾದ ಶ್ರೀ|| ಶಂಕರರಾವ ದೇವರು ಹೋದ ತಿಂಗಳಲ್ಲಿ ಮದ್ರಾಸಿಗೆ ಹೋಗಿದ್ದರು. ಆವತ್ತು ಆ ಮಂತ್ರಿಗಳು ದೋಷಿಗಳಿರುತ್ತಾರೆಂದು ವರದಿ ಮಾಡಿರುವರಾಗಿ ಇದೀಗ ಒಂದು ಸುದ್ದಿ ಪ್ರಕಟವಾಗಿದೆ. ಶ್ರೀ ದೇವರ ವರದಿಯನ್ನೂ ಕಾಂಗ್ರೆಸ ಕಾರ್ಯಕಾರಿ ಮಂಡಳವು ಸಮಾಲೋಚಿಸುವದು. ಭೂ-ಸುಧಾರಣೆಯ ಬಗ್ಗೆ ಚೌಕಶಿ ಮಾಡಿ ವರದಿಯನ್ನೊಪ್ಪಿಸಲು ನೇಮಕಪಟ್ಟ ಸಮಿತಿಯವರು ಒಪ್ಪಿಸಿರುವ ಮಹತ್ವದ ವರದಿಯನ್ನು ಮಂಡಳವು ಪರಾಂಬರಿಸಬೇಕಾಗಿದೆ. ಬೇಗನೆ ಪ್ರಾಂತಿಕ ಕಾಯದೆ ಮಂಡಳಗಳ ಚುನಾವಣೆಗಳನ್ನು ನಡಿಸಬೇಕೆಂಬ ಸೂಚನೆಯಾದದ್ದುಂಟು. ಅದರ ಆವಶ್ಯಕತೆಯ ವಿಚಾರವನ್ನೂ ಮಂಡಳವು ಮಾಡಬೇಕಾಗಿದೆ. ಇದಲ್ಲದೆ ಕಾಂಗ್ರೆಸ್ಸಿನ ಶುದ್ಧೀಕರಣದ ಅತ್ಯಂತ ಮಹತ್ವದ ಪ್ರಶ್ನೆಯೊಂದು ಮಂಡಳದ ಮುಂದುಂಟು. ಈ ಅತಿ ಜಟಿಲ ಸಮಸ್ಯೆಯನ್ನು ಮಂಡಳವು ಹೇಗೆ ಬಿಡಿಸುತ್ತದೆಂಬುದರ ಕಡೆಗೆ ಅಖಿಲ ಭಾರತದ ಲಕ್ಷ ವೇಧಿಸಲ್ಪಟ್ಟಿದೆ.

* * *

ಧಾರವಾಡದೊಳಗಿನ ಬೇಸಾಯ ಕಾಲೇಜಿಗಾಗಿ ನಡೆದಿರುವ ದುಂದುಗಾರಿಕೆಯನ್ನು ಮುಂಬಯಿಯ 'ಬ್ಲಿಟ್ಝ್' ಪತ್ರಿಕೆಯು ಬೆಳಕಿಗೆ ತಂದಿದೆ. ಈ ಕಾಲೇಜಿಗಾಗಿ ಸರಕಾರವು ೩೦ ಲಕ್ಷ ರೂ. ಮಂಜೂರ ಮಾಡಿದೆಯಂತೆ. ಈ ಹಣವು ಸದ್ವ್ಯಯವಾಗುವದರ ಬದಲು ದುರ್ವ್ಯಯವಾಗುತ್ತದೆಂದು ಸದರಿ ಪತ್ರಿಕೆಯ ಧಾರವಾಡದ ಸುದ್ದಿಗಾರರು ದೂರುತ್ತಾರೆ. ಕಾಲೇಜಿನ ಮಂದಿರಕ್ಕೆ ಬೇಕಾಗುವಷ್ಟು ಇಟ್ಟಂಗಿಗಳು ಧಾರವಾಡದಲ್ಲಿ ರೂ ೩೫ಕ್ಕೆ ೧೦೦೦ದಂತೆ ಸಿಗುತ್ತಿದ್ದರೂ ಮಂದಿರ ಕಟ್ಟಿಸಲು ಮಂಜೂರಾದ ಮಕ್ತೇದಾರರು ರೂ ೭೫ಕ್ಕೆ ೧೦೦೦ ರಂತೆ ಬೆಳಗಾಂವಿ ಜಿಲ್ಲೆಯ ಖಾನಾಪುರದಲ್ಲಿ ಲಕ್ಷಾವಧಿ ಇಟ್ಟಂಗಿಗಳನ್ನು ಖರೀದಿಸಿ ಧಾರವಾಡಕ್ಕೆ

ಶ್ರೀ ಕಾಶೀಮಠದ ಶ್ರೀ ಸುಕೃತೀಂದ್ರ ಸ್ವಾಮಿಗಳ ನಿರ್ಯಾಣ.

ಶ್ರೀ ಕಾಶೀಮಠದ ಗುರುಸ್ವಾಮಿಗಳಾದ ಶ್ರೀಮತ್ ಸುಕೃತೀಂದ್ರ ತೀರ್ಥ ಸ್ವಾಮಿಗಳು ಆಷಾಢ ಶು|| ೧೩ ರವಿವಾರದ ದಿವಸ (ತಾ ೧೦) [illegible]ಯಲ್ಲಿ ಮುಕ್ತರಾದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತದೆ. ಶ್ರೀ ಗುರುಗಳ ಪ್ರಿಯ ಮತ್ತು ಸುವಿನೀತ ಶಿಷ್ಯ ಸ್ವಾಮಿಗಳಾದ ಸುಧೀಂದ್ರ ತೀರ್ಥರ ವಿದ್ಯಾಭ್ಯಾಸವು ಪೂರ್ಣವಾಗಿ, ಅವರು ಶ್ರೀ ಸಂಸ್ಥಾನದ ಆಡಳಿತೆಯನ್ನು ಸ್ವತಃ ಸಾಗಿಸಲು ಸಿದ್ಧರಾಗುವ ಮುಂಚೆಯೇ ಗುರುಗಳು ಸಮಾಧಿಸ್ಥರಾದದು ಶೋಚನೀಯವೇ ಸರಿ. ಆದರೆ ಶ್ರೀಶನ ಇಚ್ಛೆಯ ಮುಂದೆ ಯಾರದೇನು ನಡೆಯುತ್ತದೆ? ಬಂದ ಕಷ್ಟಗಳಿಂದ ಎದೆಗುಂದದೆ ಮುಂದಾಗುವದೇ ನಮ್ಮ ಕರ್ತವ್ಯ ಎಂತ ಶ್ರೀ ಮಠದ ಶಿಷ್ಯರೂ ಅಭಿಮಾನಿಗಳೂ ತಮ್ಮ ಸಾಂತ್ವನ ಮಾಡಿಕೊಂಡು ಶ್ರೀಮತ್ ಸುಧೀಂದ್ರ ತೀರ್ಥ ಸ್ವಾಮಿಗಳಿಗೆ ಧೈರ್ಯ ಕೊಡಬೇಕಾಗಿ ಸವಿನಯ ಅರಿಕೆಯಿದೆ.

ತರಿಸಿಕೊಂಡಿದ್ದಾರಂತೆ! ಇವನ್ನು ತರಿಸಲು ೬೦೦೦ ಗೆಲನ್ ಪೆಟ್ರೋಲನ್ನೂ ಖರ್ಚು ಮಾಡಿರುತ್ತಾರಂತೆ! ಈ ಕೊಠೀಜ ಕಟ್ಟಡದ ನಿಮಿತ್ತದಿಂದ ಧಾರವಾಡ-ಹುಬ್ಬಳ್ಳಿಗಳಲ್ಲಿ ಸಿಮೆಂಟಿನ ಕಳ್ಳ ಸಂತೆಗೆ ಆರಂಭವಾಗಿದೆ! ಇಷ್ಟೆಲ್ಲ ತುಟ್ಟಿ ದರದಿಂದ ಇಟ್ಟಂಗಿಗಳನ್ನೂ ಸಿಮೆಂಟನ್ನೂ ಖರೀದಿಸಿ ಕಟ್ಟಲಾರಂಭಿಸಿದ ಕಟ್ಟಡದ ಭದ್ರತೆ ಎಷ್ಟೆಂದ ಕೇಳುವಿರಾ? ಕೊಲೇಜ ಕಟ್ಟಡದ ಒಂದು ಗೋಡೆಯು ಮೊದಲನೇ ಮಳೆಗೆ ಕುಸಿದು ಬಿದ್ದಿದೆಯಂತೆ! ಇನ್ನೂ ಕೆಲವು ಭಾಗ ಕೊರೆದು ಬೀಳಲು ತಯಾರಾಗಿ ನಿಂತಿದೆಯಂತೆ! ಆದರಿಂದ ಈ ಕಾಲೇಜಿಗೆ ಸರಕಾರವು ಮಂಜೂರ ಮಾಡಿದ ೩೦ ಲಕ್ಷ ರೂ ಗಳು ಅನವಶ್ಯಕ ಖರ್ಚಾಗಿ ಹೋಗಬಹುದೋ ಎಂದು "ಬ್ಲಿಟ್ಜ್" ಪತ್ರಿಕೆಯ ಸುದ್ದಿಗಾರರಿಗೆ ಚಿಂತೆಯುಂಟಾಗಿದೆ

* * *

ಧಾರವಾಡದ ಗ್ರಾಮೋದ್ಧಾರ ಮಂಡಳಿಗಳಲ್ಲೂ ದುಂದುಗಾರಿಕೆ ನಡೆದಿದೆಯೆಂದು ಅದೇ ಸುದ್ದಿಗಾರರು ದೂರುತ್ತಾರೆ "ಹೆಚ್ಚೆಚ್ಚು ಬೆಳೆ ಬೆಳೆಸಿರಿ" ಎಂದು ಮಂಡಳವು ರಭಸದ ಪ್ರಚಾರ ನಡಿಸಿದೆ ಆದರೆ ಮಂಡಳದವರು ಸ್ವತಃ ಬೆಳೆ ಹೆಚ್ಚಿಸಲಿಕ್ಕೆ ಏನು ಮಾಡುತ್ತಿದ್ದಾರೆಂಬುದು ಯಾರಿಗೂ ತಿಳಿಯುವದಿಲ್ಲ! ಮಂಡಳದವರು ಪ್ರತಿ ತಿಂಗಳು ರೂ ೩೦೦ರಷ್ಟು ಭತ್ತೆ ಕೊಡುವ ಮಾತು ಮಾಡಿ ಓರ್ವ ಅಧಿಕಾರಿಯನ್ನು ನೇಮಿಸಿಕೊಂಡಿದ್ದಾರೆ! ಇಷ್ಟು ಭತ್ತೆ ತಿನ್ನುವ ಅಧಿಕಾರಿಯು ಎಷ್ಟು ಬೆಳೆಯನ್ನು ಹೆಚ್ಚಿಸಿದ್ದಾನೆ ಇಲ್ಲವೆ ಜನರಿಂದ ಹೆಚ್ಚಿಸಿಕೊಂಡಿದ್ದಾನೆಂಬುದೂ ತಿಳಿಯಲೊಲ್ಲದು! ಸರಕಾರದ ಪರವಾಗಿ ಜಿಲ್ಲೆಯಲ್ಲಿ ಜಾಹೀರಾತುಗಳಷ್ಟು ಪ್ರಕಟವಾಗುತ್ತಿವೆ, ಮತ್ತು ಆ ಪ್ರಚಾರಕ್ಕಾಗಿ ಬಹಳಷ್ಟು ಹಣ ಸೂರೆಯಾಗುತ್ತಿದೆ, ವಿನಹ ಪ್ರತ್ಯಕ್ಷ ಫಲದಾಯಿ ಕಾರ್ಯವೇನೂ ನಡೆದಿರುವದಿಲ್ಲೆಂದು "ಬ್ಲಿಟ್ಜ್" ಪತ್ರಿಕೆಯ ಸುದ್ದಿಗಾರನ ಅಂಬೋಣ

* * *

ಅದೇ ಸುದ್ದಿಗಾರನು ತಿಳಿಸಿರುವ ಇನ್ನೊಂದು ಸುದ್ದಿಯೂ ಬಹಳ ಸ್ವಾರಸ್ಯವುಳ್ಳದ್ದಿದೆ ಕೊಂಗ್ರೆಸ್ಸಿನಲ್ಲಿ ತುಂಬಿರುವ ಕಾಳೆಯ ಮೇಲೆ ಇದು ಒಳ್ಳೆಯ ಪ್ರಕಾಶವನ್ನು ಬೀರುತ್ತಿದೆ ಸದ್ಯಕ್ಕೆ ಅಬಕಾರಿ ಮಂತ್ರಿಗಳಾದ ಮಾನ್ಯ ಲಕ್ಷ್ಮಣರಾವ ಪಾಟೀಲರು ಧಾರವಾಡ ಜಿಲ್ಲೆಯ ಸಂಚಾರಕ್ಕೆ ಬಂದಾಗ ಒಂದು ಸಭೆಯಾಗಿತ್ತು ಈ ಸಭೆ ನಡೆದಾಗ ಒಬ್ಬರು ಸರದಾರ ಎಸ್ಸು ಸಿಂಗ, "ಇದೀಗ ಇಷ್ಟು ಪೋಲೀಸರನ್ನು ನನ್ನ ಸಹಾಯಕ್ಕೆ ಕೊಡಿರಿ ಅಂದರೆ ಕೊಂಗ್ರೆಸ ಕಮಿಟಿಯ ಅಧ್ಯಕ್ಷರ ಮನೆಯಲ್ಲಿರುವ ಮದ್ಯದ ಸಂಗ್ರಹವನ್ನು ನಾನು ಹಿಡಿದುಕೊಡುತ್ತೇನೆ!" ಎಂದು ಉದ್ಗರಿಸಿದರು! ಮಾನ್ಯ ಮಂತ್ರಿಗಳು ಆಗ ಅವಾಕ್ಕಾದರು! ಕೊಂಗ್ರೆಸ ಪದಾಧಿಕಾರಿಗಳು ಲಂಚ ತಿನ್ನುತ್ತಾರೆಂದು ಸಹಿನಿಶಿ ಮಾಡಿದ ಅರ್ಜಿಗಳು ಕಸ ಕತ್ತಲೆಯಲ್ಲಿ ಹೋಗುತ್ತವೆಂದೂ ಸದರಿ ಸುದ್ದಿಗಾರರು ಆರೋಪ ಮಾಡುತ್ತಾರೆ

* * *

ಅಂಕೋಲೆಯ ಅರ್ಬನ ಸಹಕಾರಿ ಬೇಂಕಿನ ಸಂಬಂಧದಲ್ಲಿ ಕಳೆದ ವಾರದ 'ವೃತ್ತ' ದೊಳಗೆ ಬಂದ ಟೀಕೆಗಳಿಗೆ ವಿನಾ ... ವಿಪರ್ಯಾಸವಿರುತ್ತವೆಂದೂ, ನಿರಾಧಾರವಿರುತ್ತವೆಂದೂ ಬೇಂಕಿನಲ್ಲಿ ನಡೆದ ಘಟನೆಗಳ ಪೂರ್ಣಮಾಹಿತಿ ಪಡೆದುಕೊಂಡ ಬೇಂಕಿನ ಪ್ರತಿಷ್ಠಿತ ಶೇರುದಾರರು ತಿಳಿಸುತ್ತಾರೆ ಬೇಂಕಿನ ಕಾರ್ಯದರ್ಶಿಗ, ಡಾ, ಬಿ. ಆರ್ ಸಿಕಳೀ ಮತ್ತು ಲೆಕ್ಕ ಬರೆಯುವ ಕಾರಕೂನರಾದ ರಾ|| ನಾಗೇಶ ಪ್ರಭುಯವರು ಇದೇ ಕಳೆದ ಎಪ್ರಿಲ ತಿಂಗಳ ಸುಮಾರಿಗೆ ತಮ್ಮ ಸ್ವಾರ್ಥ ಸಾಧನೆಗಾಗಿಯೂ ತನ್ನ ಕೆಲವು ಗೆಳೆಯರಿಗೆ ಉಪಕಾರ ಮಾಡುವದಕ್ಕಾಗಿ ಕೆಲವು ಕೃತ್ರಿಮಗಳನ್ನು ಮಾಡಿದ್ದರಂತೆ ಬೇಂಕಿನ ಚೇರಮನ್-ಮಾನ್ಯ ಶೆಟ್ಟಿಯವರ ಸ್ಥಾನ ಇಲ್ಲದ ಕಾರ್ಯವಾಹಕ ಮಂಡದ ಇತರ ಸದಸ್ಯರ ಅರಿವೇನೂ ಇರದಂತೆ ಕಾರ್ಯದರ್ಶಿಗಳು ಈ ಕೃತ್ರಿಮಗಳ ಪಾಪಸ ಹೇಗೋ ಚೇರಮನ್ನರಿಗೆ ಒಂತು ಆಗ ಅವರು ಬೇಂಕಿಗೆ ತಾತ್ಕಾಲಿಕ ಭೆಟ್ಟಿ ಕೊಟ್ಟು ಬೇಂಕಿನ ಲೆಕ್ಕದ, ಖಜಾನೆಯ ಮತ್ತು ಬೇಂಕಿಗೆ ಬಂದ ಹುಂಡಿ ನೋಟುಗಳು ಮೊದಲಾದವುಗಳ ಪೂರ್ಣ ತಪಾಸಣೆ ಮಾಡಿದರು ನಿಯಮದಂತೆ ಬೇಂಕಿನ ಚೇರಮನ್ನರ ಇಲ್ಲವೆ ವ್ಯವಸ್ಥಾಪಕ ಚೇರಮನ್ನರ ಮಂಜೂರಿ ಇಲ್ಲದೆ ಕಾರ್ಯದರ್ಶಿಯು ಹಲವಾರು ಹುಂಡಿಗಳನ್ನೂ ಅವಧಿಯ ಹುಂಡಿಗಳನ್ನೂ (time-bills) ಮಾರಿಬಿಟ್ಟು ಅವರಿಗೆ ಕಂಡು ಬಂತು, ಆಗ ಅವರು ಹುಂಡಿ ಕೊಟ್ಟ ಜನರಿಗೆ ಒಬ್ಬೊಬ್ಬರಾಗಿ ಕರೆಯಿಸಿ ತಂದು, ಸಾಮ ಮತ್ತು ದಾಮಗಳ ಪ್ರಯೋಗ ಮಾಡಿ, ಅವರಿಂದ ಬೇಂಕಿಗೆ ಬರತಕ್ಕ ಎಲ್ಲ ಹಣವನ್ನು (ಬಡ್ಡಿ ಸಹಿತ) ವಸೂಲ ಮಾಡಿದರು ಚೇರಮನ್ನರು ನಡಿಸಿದ ಈ ಗುಪ್ತ ಚೌಕಶಿಯ ಸುಳಿವು ಹತ್ತಿದ ಕೆಲವರು, ವಸ್ತುಸ್ಥಿತಿಯನ್ನು ತಿಳಕೊಳ್ಳದೆ ಮತ್ತು ಕಾಲ್ಪನಿಕ ಬಾತಗಳನ್ನು ರಚಿಸಿ, ರಜಿಸ್ಟ್ರಾರರಿಗೂ ಅ|| ರಜಿಸ್ಟ್ರಾರರಿಗೂ ಏನೇನೋ ಅರ್ಜಿಗಳನ್ನು ಮಾಡಿದರು! ಆಗ ಅ|| ರಜಿಸ್ಟ್ರಾರರು ಅಂಕೋಲೆಗೆ ಬಂದರು ಚೇರಮನ್ನರು ಅವರಿಗೆ ಎಲ್ಲ ಪರಿಸ್ಥಿತಿಯನ್ನು ಅರುಹಿ, ಅಕ್ರಮಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ ತಾವು ಕೈಕೊಂಡ ಕ್ರಮಗಳನ್ನೂ ಅವು ಯಶಸ್ವಿಯಾದ ಸಂಗಯನ್ನೂ ವಿವರಿಸಿದರು ತಮ್ಮ ದೃಷ್ಟಿಗೆ ಬೀಳದ ಇನ್ನೇನಾದರೂ ಅಕ್ರಮಗಳಿದ್ದರೆ ಅವನ್ನು ತಿಳಕೊಳ್ಳುವದಕ್ಕಾಗಿ ಸರಕಾರಿ ಲೆಕ್ಕ ತಪಾಸಕರಿಂದ ಚೇರಮನ್ನರು ತಪಾಸಣೆಯನ್ನೂ ಮಾಡಿಸಿಕೊಂಡಿರುತ್ತಾರೆಂದು ತಿಳಿಯುತ್ತದೆ ಕೃತ್ರಿಮ ಮಾಡಿದ ರಾ|| ಸಿಕಳೀ ಮತ್ತು ಶೆಟ್ಟಿ ಇವರಿಗೆ ಕಾರ್ಯವಾಹಕರು ಒಡನೆಯೇ ಮಾಡಿ ಬೇಂಕಿನಿಂದ ಹೊರಗ ಹಾಕಿದ್ದಾರೆ, ಮತು ಹಿಂದೆ ಹಲವಾರು ವರ್ಷಗಳವರೆಗೆ ಉಪ-ಕಾರ್ಯದರ್ಶಿಗಳಾಗಿಯೂ ಕೆಲವು ವರ್ಷ ಕಾರ್ಯದರ್ಶಿಗಳಾಗಿಯೂ ಬೇಂಕಿಗೆ ಪ್ರಾಮಾಣಿಕ ಸೇವೆ ಸಲ್ಲಿಸಿದ, ಆದರೆ ನಡುವೆ ಈ ಬೇಂಕನ್ನು ಬಿಟ್ಟುಹೋಗಿದ್ದ ರಾ|| ಉಪೇಂದ್ರ ಪ್ರಭು ಇವರಿಗೆ ಈಗ ಕಾರ್ಯದರ್ಶಿಯ ಪದ ಒಪ್ಪಿಸಿರುತ್ತಾರೆ ಕಾರ್ಯದರ್ಶಿಗಳ ಕೃತ್ರಿಮಗಳನ್ನು ಪರಿಹರಿಸಿ ಬೇಂಕಿನ ಸ್ಥಿತಿಯನ್ನು ಸರಿಗೊಳಿಸಿಕೊಂಡವರು ಚೇರಮನ್ನರೇ ವಿನಹ ಅ|| ರಜಿಸ್ಟ್ರಾರರಲ್ಲ ಅ|| ರಜಿಸ್ಟ್ರಾರರು ಪರಿಸ್ಥಿತಿಯನ್ನು ತಿಳಕೊಂಡು ಹೋಗಿರುತ್ತಾರೆ ವಿನಹ ಯಾವ ನಿರ್ಣಯವನ್ನೂ ಅವರು ಮಾಡಿಲ್ಲ "ಸ್ಥಳವಂತಿಕ"ನು ಸರಕಾರಿ ಇಲಾಖೆಯವರನ್ನು ದಾರಿಯು ಸರಿಯಾಗಿ ಬಲ್ಲವರು ಹೇಳುತ್ತಾರೆ ಆ ಅಧಿಕಾರಿಗಳು ಬೇಂಕಿನವರಿಂದ ಯಾವ ಸಂಬಂಧಾಯಿಯನ್ನೂ ಪಡೆದಿಲ್ಲ ಅಥವಾ ಅಪೇಕ್ಷಿಸಿಲ್ಲ ಬೇಂಕಿನವರಿಗೆ ಅವರು ಯಾವ ದಯೆ ಮಾಯೆಯನ್ನೂ ತೋರಿಸಿಲ್ಲ

ಸದರಿ ಬೇಂಕಿನವರು ತಮ್ಮ ಸೀಧಾ ಅಂಗಡಿಯನ್ನು ಬೇರೆ ಎವರಿಗೆ ಪಗಡಿಗೆ ಕೊಟ್ಟಿರುತ್ತಾರೆಂಬುದು ಪೂರ್ಣ ನಿರಾಧಾರವಾಗಿರುತ್ತದೆಂದು ತಿಳಿಯುತ್ತದೆ ಅಂಗಡಿಯನ್ನು ನಡಿಸಲು ಅವರು ಒಂದು ಸಮಿತಿಯನ್ನೂ ಓರ್ವ ವೇತನವಿಲ್ಲದ ವ್ಯವಸ್ಥಾಪಕರನ್ನೂ ನೇಮಿಸಿರುತ್ತಾರೆ ಈ ವ್ಯವಸ್ಥಾಪಕರಿಗೆ ನಿರ್ದಿಷ್ಟ ಗೌರವ-ವೇತನವನ್ನಷ್ಟೇ ಕೊಡುತ್ತಾರ

ಬೇಂಕಿನ ಪರಿಸ್ಥಿತಿ ಈಗ ಸಂಪೂರ್ಣ ಸಮಾಧಾನಕರವಿದೆ ರಾ|| ಸಿಕಳೀ-ಶೆಟ್ಟಿಯವರು ಮಾಡಿದ ಎಲ್ಲ ಕೃತ್ರಿಮಗಳ ಪರಿಹಾರವಾಗಿದೆ ಅದರಿಂದ ಬೇಂಕಿನ ಸುಸ್ಥಿತಿಯ ಬಗ್ಗೆ ಆಗಲಿ ಆರ್ಥಿಕ ಬಗ್ಗೆ ಆಗಲಿ ಯಾರೂ ಸಂದೇಹ ಇಲ್ಲವೆ ಅವನಂಬಿಗೆ ತಾಳುವ ಕಾರಣವಿಲ್ಲ ಗ್ರಹ ಚಾರವಶಾತ್ ಒಂದು ಗಂಡಾಂತರದೊಳಗಿಂದ ಬೇಂಕು ಸುರಕ್ಷಿತ ಪಾರಾದ ಬಗ್ಗೆ ಬೇಂಕಿನ ಚಾಲಕರನ್ನು ಶೇರುದಾರರನ್ನೂ ಠೇವುದಾರರನ್ನೂ ಅಭಿನಂದಿಸುವದುಚಿತ

* * *

ಬೇರೊಂದೆಡೆ "ಸ್ಥಳವಂತಿಕ"ನು ಅಪೂರ್ಣ ಮಾಹಿತಿಯಿಂದ ಬರೆದಿರುವಂತೆ ಜಿಲ್ಲಾ ಗ್ರಾಮೋದ್ಧಾರ ಮಂಡಳದವರು ಹಾವೇರಿ-ಶಿರ್ಸಿ ಉಗಿಬಂಡಿ ಮಾರ್ಗದ ಸೂಚನೆಯನ್ನಷ್ಟೇ ಮಾಡಿರುವದಿಲ್ಲವೆಂದೂ, ಹಾವೇರಿಯಿಂದ ಶಿರ್ಸಿಗೆ ೧, ಹುಬ್ಬಳ್ಳಿಯಿಂದ-ಶಿರಸಿಗೆ ೧ ಮತ್ತು ತಾಳಗುಪ್ಪೆಯಿಂದ ಭಟಕಳಕ್ಕೆ ೧ ಹೀಗೆ ೩ ರೈಲ್ವೆ-ಮಾರ್ಗಗಳನ್ನು ರಚಿಸುವದು ಅವಶ್ಯವಿರುತ್ತದಾಗಿ ಮಂಡಳವು ಠರಾವು ಮಾಡಿ ಕಳಿಸಿರುತ್ತದೆಂದು ಇದೀಗ ತಿಳಿದು ಬಂದಿದೆ

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.
ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲಾಜಿಂಗ

ದಿ ಕೆನರಾ ಲಾಜ

[ಊಟ ಮತ್ತು ವಸತಿಗೃಹ]

ಮೋಟರ-ಸ್ಟೆಂಡ, ಹುಬ್ಬಳ್ಳಿ.

ಮಾಲಕ: — ಮ್ಯಾನೇಜರು

ಸ್ಥಾನಿಕ ವೃತ್ತಾಂತ.

[illegible]

ಹೊನ್ನಾವರ— [illegible]

ಭಟಕಳ— [illegible]

[illegible]

ನಮ್ಮಲ್ಲಿ ಸುಪ್ರಸಿದ್ಧ
"ಕಾನನ್‌ದೇವನ್ ಕಂಪನಿ" ಯ
ಚಹಾ
ರೋಕ ದರದಲ್ಲಿ ಸಿಗುತ್ತದೆ
ವ್ಯಾಪಾರಿ ಮಾಹಿತಿ ಬಗ್ಗೆ ಬರೆಯಿರಿ —
L. G. MAHALE,
Merchant & Agent,
ANKOLA. (N. K.)

BY THE REGIONAL TRANSPORT OFFICER K R, BELGAUM

NOTICE

In exercise of the powers conferred by the provisions under chapter III of the M V Act 1933 all the owners of Motor vehicles are hereby informed that the old State Registration marks of the marginally noted merged States have become invalid since 1-4-1949 Plying the vehicles with the registration marks of the said States is illegal and if any vehicle is detected with the invalid registration marks it will constitute an offence under Sec 22(1 of the M V. Act 1939 and is liable for action under Sec 129/A of the said Act

(1) Kurundwad (Sr), (2) Kurundwad (Jr)
(3) Miraj (Sr), (4) Miraj (Jr),
(5) Sangli (6) Jath, (7) Jamkhandi,
(8) Mudhol, (9) Ramdurg,
(10) Savanur (11) Wadi Jahagir

No 4770/4-B/KR of 1949,
Regional Transport Office K R,
Belgaum 16—7—

D K SUKHTANKAR, CAPT,
Regional Transport Officer, K R,
Belgaum

ವಾರ್ತೆಗಳು.

— ನಮ್ಮಲ್ಲಿಯಂತೆ ಅವೆಯ ಸೇವಾದಾರರಿಂದ ಮುಂಬಯಿಯಲ್ಲಿಯೂ ಭಾರಿ ಮಳೆ ಬೀಳುತ್ತಿರುವದು ಕೇಳಿ ಬಂದಿದೆ. [illegible] ದಿನಪ್ರತಿ ಅಲ್ಲಿ ಹಾಗೂ ಸುತ್ತು ಮುತ್ತಲಿನ ಪ್ರದೇಶದಲ್ಲಿ ವಿಪರೀತ ಮಳೆ ಬಿದ್ದು ಅದರಿಂದ ನೋಡಿದಗಳಿಂದ ಕವಿದಿ[illegible] [illegible] ಉತ್ತರಕ್ಕಿರುವ [illegible] ವಿಮಾನ-ನಿಲ್ದಾಣದಿಂದ ೧ ಮೈಲು ಅಂತರದಲ್ಲಿರುವ ಘಾಟಿಕೋಪರ ಗುಡ್ಡಕ್ಕೆ ಡಿಕ್ಕಿಯಿಂದ ಮೊ ೬ ಮುಂಬಯಿಗೆ ಹಾರುವದು, ಪೋಲಂಡದ ಕೆ ಎಲ್ ಎಮ್ ಎಂಬ ವಿಮಾನ-ಸಾರಿಗೆ ಕಂಪನಿಯ "ಕ್ಕೃ [illegible]" ಎಂಬ ಪ್ರವಾಸಿಗರ ವಿಮಾನವೊಂದು ಅಪ್ಪಳಿಸಿ ಚೂರುಚೂರಾಯಿತು; ಮತ್ತು ಈ ಅಪಘಾತದಿಂದ ವಿಮಾನಕ್ಕೆ ಬೆಂಕಿ ಬಿದ್ದು ಅದರ ಬಯಲಿನ ಭಾಗಗಳೂ ಅದರೊಳಗಿನ ಜನರೂ ಸುಟ್ಟು ಹೋದರು. ಈ ವಿಮಾನದಲ್ಲಿ ಒಟ್ಟು ೬೪ ಮಂದಿ ಪ್ರವಾಸಿಗರೂ ೧೧ ಮಂದಿ ವಿಮಾನದ ಕೆಲಸಗಾರರೂ ಇದ್ದರು. ಪ್ರವಾಸಿಗರಲ್ಲಿ ೧೮ ಮಂದಿ ಅಮೇರಿಕೆಯ ವಿಖ್ಯಾತ ರತ್ನ ವ್ಯವಸಾಯಿಗಳಿದ್ದರು. ಇಂಡೋನೇಶಿಯಾದಲ್ಲಿ ಹಚ್ಚ [illegible] ಅಲ್ಲಿಯ ಸ್ವಾತಂತ್ರ್ಯ ಕಳ್ಳ ನಡೆದಿರುವ ಹೋರಾಟದ ಪರಿಸ್ಥಿತಿಯನ್ನು ಪ್ರತ್ಯಕ್ಷ ಅಭ್ಯಸಿಸಲು ಈ ರತ್ನ ವ್ಯವಸಾಯಿಗಳು ಮುಖ್ಯವಾಗಿ ಅಮೇರಿಕೆಯಿಂದ ಆಲಿದ ತಿಂಗಳಲ್ಲೇ ಇಂಡೋನೇಶಿಯಾಕ್ಕೆ ಬಂದಿದ್ದರು. ಅಲ್ಲಿಯ ವಿದ್ಯಮಾನಗಳ ಅಭ್ಯಾಸದ ಕೆಲಸ ಮುಗಿದ ಮೇಲೆ ಹೋಲಂಡದಲ್ಲಿ ಹಚ್ಚ ಸರಕಾರದ ಮಂತ್ರಿಗಳನ್ನು ಕಾಣಲೆಂದು ಅವರು ಹೋಲಂಡದ ರಾಜಧಾನಿಯಾಗಿರುವ ಎಮ್ಸ್ಟರ್ಡ್ಯಾಮಕ್ಕೆ ಹೋಗುತ್ತಿದ್ದರು. ಸೋಮವಾರ ಸಂಜೆ ಅವರ ವಿಮಾನವು ಕಲಕತ್ತೆಯಿಂದ ದಿಲ್ಲಿಗೆ ಬಂದಿತ್ತು. ಅಲ್ಲಿ ಪಂ॥ ಜವಾಹರಲಾಲರನ್ನು ಕಾಣಬೇಕೆಂದು ರತ್ನ ವ್ಯವಸಾಯಿಗಳ ಅಪೇಕ್ಷೆಯಿತ್ತು. ಆದರೆ ಪಂಡಿತಜಿಯವರು ಕಲಕತ್ತೆಗೆ ಹೋಗುವ ಗಡಿಬಿಡಿಯಲ್ಲಿದ್ದುದರಿಂದ ಅದು ಸಾಧ್ಯವಾಗಲಿಲ್ಲ. ಮಂಗಳವಾರ ಮುಂಜಾನೆ ಅವರು ತಮ್ಮ ಪ್ರಯಾಣ ಮುಂದರಿಸಿ ಬೆಳಿಗ್ಗೆ ೮ ರ ಸುಮಾರಿಗೆ ಮುಂಬಯಿಗೆ ಬಂದಿದ್ದರು. ಮಳೆಯಲ್ಲಿ ನೋಡಲಿಕ್ಕೆ ಮಸುಕಾಗಿದ್ದುದರಿಂದ ಅವರ ವಿಮಾನಕ್ಕೆ ಕೆಳಗೆ ಇಳಿಯಲಾಗಲಿಲ್ಲ. ಆಗ ಕೆಲ ಕಾಲ ಆಕಾಶದಲ್ಲಿಯೇ ವಿಮಾನವನ್ನು ಆಡಿಸುತ್ತಾ ಗುಡ್ಡಕ್ಕೆ ಅಪ್ಪಳಿಸಿ ಉರಿಯಿತು. ಗುಡ್ಡದ ಮಗ್ಗುಲಲ್ಲಿರುವ ಹಳ್ಳಿಯ ಹತ್ತಿರದಲ್ಲಿ ಬಿದ್ದ ಗುಡ್ಡದ ಅಂಚಿನಲ್ಲಿರುವ ಹೊಲದೊಳಗಿನ ಒಕ್ಕಲಿಗರು ಈ ಅಪಘಾತದ ಸುದ್ದಿಯ ಬಗ್ಗೆ ಕೂಡಲೆ ಸಮೀಪದ ಪೋಲೀಸ ಠಾಣ್ಯಕ್ಕೆ ವರದಿ ಕೊಟ್ಟರು. ಅಲ್ಲಿಂದ ಸಾಂತಾಕ್ರೂಜ ವಿಮಾನ ನಿಲ್ದಾಣಕ್ಕೂ ಮುಂಬಯಿಗೂ ಸುದ್ದಿ ಕಳಿಸಿದರು. ಆಗ ವಿಮಾನ ನಿಲ್ದಾಣದಲ್ಲಿ ವಿಮಾನವಕ್ಕೆ ಪತ್ರಿಕಾ ವ್ಯವಸಾಯಿಗಳ ಸ್ವಾಗತಕ್ಕಾಗಿ ಅಮೇರಿಕಾ ಸರಕಾರದ ಸ್ವಾಗತ ಪ್ರತಿನಿಧಿಗಳು ಕಾದುಕೊಂಡಿದ್ದರು. ಅವರೂ ಮುಂಬಯಿ ೧ ಠಾಣೆಯೊಳಗಿನ ಪೋಲೀಸರೂ ಕೂಡಲೆ ಅಪಘಾತವಾದ ಸ್ಥಳಕ್ಕೆ ಹೋಗಿ ಸ್ತುಟಿತ ಶವಗಳನ್ನು ಸಂಗ್ರಹಿಸಲಾರಂಭಿಸಿದರು. ಶವಗಳೆಲ್ಲ ವಿಕೃತವಾಗಿದ್ದವು. ಇಪ್ಪತ್ತು ಶವಗಳು ಮಾತ್ರ ಗುರುತಿಸಲ್ಪಟ್ಟವು. ಹಿಂದುಸ್ಥಾನದಲ್ಲಿ ಇಂದಿನವರೆಗೆ ಘಡಿಸಿದ ವಿಮಾನ ಅಪಘಾತಗಳಲ್ಲಿ ಇದು ಅತ್ಯಂತ ಭೀಕರವಾದದ್ದು.

— ಹೈದರಾಬಾದ ಸಂಸ್ಥಾನದಲ್ಲಿ ಹಿಂದುಸ್ಥಾನದ ವಿರುದ್ಧ ಹಾಕಲಾಯಸಿದ್ದಿರುವ ಅಸ್ತ್ರಶಸ್ತ್ರ [illegible] ಮೇಲಿನ ನಿಷೇಧ ನಿರ್ಬಂಧಗಳಿಗೆ ಇದೇ ಬರುವ ತಾ ೭೧ ರಿಂದ [illegible] ಅಧಿಕೃತ ಸುದ್ದಿ ಬಂದಿದೆ

ಕಾರಿಕಾರ ಜಾಹೀರ

ಮುಂಬಯಿ ಕಚೇರಿ, ತಾ ೩೦ ಜನವರಿ, ೧೯೪೮

ಆಜ್ಞೆ.

ಮುಂಬಯಿಯ ಆವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಶಾಸನವು, ೧೯೪೬.

ನಂ ೯೮೬/೪೬ — ೧೯೪೬ನೇ ಇಸವಿಯ ಮುಂಬಯಿಯ ಆವಶ್ಯಕ ವಸ್ತುಗಳ ಹಾಗೂ ದನಗಳ (ನಿಯಂತ್ರಣದ) ಶಾಸನದ (೧೯೪೬ರ ೨೪ನೇ ಮುಂಬಯಿ ಶಾಸನದ) ೩ನೇಯ ಕಲಮು ನನ್ನಿಂದ ದೊರೆತ ಅಧಿಕಾರ ನಡೆಸಿಕೊಂಡು ಮುಂಬಯಿ ಸರಕಾರವು ಈ ಕೆಳಗಿನಂತೆ ಆಜ್ಞೆ ವಿಧಿಸುತ್ತದೆ —

೧ (೧) ಚಾಮರಾಜನಗರದ ಮೈಸೂರ ದಿಗ್ವಿಜಯ ಸಿಮೆಂಟ ಕಂಪನಿಯವರು ತಯಾರಿಸಿರುವ ಎಲ್ಲ ಸಿಮೆಂಟಿನ ಬೆಲೆಯು (ರೇಲ್ವೆ ದಾಸ್ತಿ ಸಂದಿ ಕಳಿಸಲ್ಪಟ್ಟಾಗ), ಮುಟ್ಟಿಕೆಯ ರೇಲ್ವೆ ನಿಲ್ದಾಣದ ವರೆಗಿನ ರೇಲ್ವೆ-ಸಾಗಾಟದ ಮಿಶಾನ ಇದ್ದು, ಪ್ರತಿ ಟನ್ನಿಗೆ ರೂ ೯೦ಕ್ಕೂ ಹೆಚ್ಚಿಗೆ ಆಕರಿಸಲ್ಪಡತಕ್ಕದ್ದು.

(೨) ಸಿಮೆಂಟಿನ ಚಿಲ್ಲರೆ ಮಾರಾಟದ ಬೆಲೆಗಳು ಈ ಪರಿಚ್ಛೇದದ (೧)ನೇ ಉಪ ಪರಿಚ್ಛೇದದಲ್ಲಿ ಹೇಳಿರುವಂತೆ ಮುಟ್ಟಿಕೆ [illegible] ದ ವರೆಗಿನ ರೇಲ್ವೆ-ಸಾಗಾಟದ ವೆಚ್ಚ ಸಹಿತ (೧೯) ಆಕರಿಸಲ್ಪಡಬಹುದಾದ ಹೆಚ್ಚು ಬೆಲೆಯನ್ನು, ಸದರಿಯಂತೆ ರೇಲ್ವೆ-ಸಾಗಾಟದ ವೆಚ್ಚ ಸಹಿತ ಸಿಮೆಂಟ ಕಳಿಸಿದಾಗ ಸಿಮೆಂಟ ಕಂಪನಿಯು ಈ ಸಹಿತ ವಿಧಿಸುತ್ತ ಬಂದಿರುವ ಸಾಗಣಾವೆಚ್ಚವನ್ನು ಮಾಡಿಕೆಗೆ ಅನುಗುಣವಾಗಿ ಮಾರಾಟಗಾರನು (ತನ್ನ ಮುನಾಫೆ ಮತ್ತು ವೆಚ್ಚವೆಂದು) ಎಷ್ಟು ಹೆಚ್ಚಿನ ದರವು ಆಕರಿಸಬರುತ್ತಿದ್ದರೋ ಅದಕ್ಕಿಂತ ಹೆಚ್ಚಿಗೆ [illegible] ದ ವಿಕ್ರಿ ತಕ್ಕದ್ದಲ್ಲ. ಇಂತಹ ಬೆಲೆಯನ್ನು ಆಕರಿಸುವಾಗ ಮಾರಾಟಗಾರನು ಈ ಮುಂದಿನ ವೆಚ್ಚದ ಬಾಬುಗಳನ್ನು ಅಂದರೆ — ರೇಲ್ವೆ ಬಂಡಿಯಿಂದ ಸಿಮೆಂಟು ಕೆಳಗೆ ಇಳಿಸಿಕೊಳ್ಳುವ ಮಜೂರಿ, ರೇಲ್ವೆ-ನಿಲ್ದಾಣದಿಂದ ಅದನ್ನು ತನ್ನ ಉಗ್ರಾಣ ಯಾ ಕಟಾರಿಗೆ ಒಯ್ಯಲು ತಗಲುವ ಗಾಡಿಯ ಭಾಡಿಗೆ, ಉಗ್ರಾಣದಲ್ಲಿ ಅದನ್ನು ದಾಸ್ತಾನ ಮಾಡುವ ಕೂಲಿಯಾಳುಗಳಿಗೆ ಕೊಟ್ಟ ಮಜೂರಿ, ಉಗ್ರಾಣದ ಭಾಡಿಗೆ, ಹಾನಿ (wastage) ಮತ್ತು ತನಗೂ ಯಾ ಬೇಕಾದ ನ್ಯಾಯ ಮುನಾಫೆ ಇವುಗಳನ್ನು ಲೆಕ್ಕದಲ್ಲಿ ಹಿಡಿದು ಆಕರಿಸಬೇಕು.

ಅಪವಾದ:— ಈ ಪರಿಚ್ಛೇದದ (೧) ಮತ್ತು (೨)ನೇ ಉಪ-ಪರಿಚ್ಛೇದಗಳಲ್ಲಿ ಹೇಳಿರುವ ಬಂಡಿ ತುಂಬಿ ಬರುವ ಸಿಮೆಂಟಿನ (ರೇಕ) ಬೆಲೆಯೂ ಚಿಲ್ಲರೆ ಮಾರಾಟದ ಬೆಲೆಗಳೂ ಆ ಸಮೀಪದಲ್ಲಿರುವ ಸಿಮೆಂಟ ಕಾರಖಾನೆಯಿಂದ ಪೂರೈಸಲ್ಪಟ್ಟಿರುವ ಸಿಮೆಂಟಿಗೆ ಅನ್ವಯಿಸುತ್ತವೆ. ಅತ್ಯಂತ ದೂರದಲ್ಲಿರುವ ಕಾರಖಾನೆಯಿಂದ ಸಿಮೆಂಟು ಪೂರೈಸಲ್ಪಟ್ಟಿರುವ ಸಂಗತಿಯಲ್ಲಿ, ಬಂಡಿ ತುಂಬಿ (ರೇಕ) ಮಾರಾಟವಾಗುವ ಹಾಗೂ ಚಿಲ್ಲರೆ ಮಾರಾಟ ಮಾಡುವಾಗ ಮಾರಾಟಗಾರರು, ಮೇಲ್ಕಾಣಿಸಿದ ಬೆಲೆಗಳಿಗೆ ಹೆಚ್ಚಿಗೆ ಬೀಳುವ ವಾಹನ ಖರ್ಚಿನ ಬಗ್ಗೆ (freight difference) ಹೆಚ್ಚಿನ ಅಂಶವನ್ನು ಕೂಡಿಸಬಹುದು. ಯಾವದೊಂದು ಪ್ರದೇಶಕ್ಕೆ ಮೊದಲಿಂದ ಮೇಲೆ ಸಮೀಪದ ಕಾರಖಾನೆಯಿಂದ ಸಿಮೆಂಟ ಪೂರೈಸದೆ ದೂರದಲ್ಲಿರುವ ಕಾರಖಾನೆಯಿಂದ ಪೂರೈಸುತ್ತಿರುವಲ್ಲಿ, ಆ ಪ್ರದೇಶಕ್ಕೆ ಬರುತ್ತಿರುವ ಎಲ್ಲ ಸಿಮೆಂಟಿಗೂ ... ಅದು ಸಮೀಪದ ಕಾರಖಾನೆಯಿಂದ ಬಂದಿ ಯಾ ದೂರದಲ್ಲಿರುವ ಕಾರಖಾನೆಯಿಂದ ಬಂದಿರಲಿ — ಮೇಲ್ಕಾಣಿಸಿದ ಬೆಲೆಗಳಲ್ಲದೆ, ರೇಲ್ವೆ-ಸಾಗಾಟದ ವೆಚ್ಚವೆಂದು ಸರಾಸರಿ ಸಾಗಾಟದ ವೆಚ್ಚವನ್ನು ಆಕರಿಸಬಹುದು.

ಅಪವಾದ ೨ — ಪ್ರತಿಯೊಂದು ರೇಕ (ಬಂಡಿಗಟ್ಟಲೆ) ಅಲ್ಲದೆ ಚಿಲ್ಲರೆ ಮಾರಾಟದಲ್ಲಿ, ಮಾರಾಟಗಾರರು ಮೇಲ್ಕಾಣಿಸಿದ ರೇಕ (ಬಂಡಿಗಟ್ಟಲೆ) ಮತ್ತು ಚಿಲ್ಲರೆ ಬೆಲೆಗಳಿಗೆ, ಸಾಗಣಾ, ಇಳಿಸಿ ಹೇರುವ ವೆಚ್ಚದ ಹೆಚ್ಚಳ, ಸುಂಕ (ಆಕ್ಟ್ರಾಯ), ನಗರ-ತೆರಿಗೆ, ಟರ್ಮಿನಲ್ ಟ್ಯಾಕ್ಸ, ಮಾರಾಟದ ತೆರಿಗೆ ಅಥವಾ ಇದ್ದ ತೆರಬೇಕಾಗುತ್ತಿರುವ ಇನ್ನಿತರ ಬಗೆಯ ಕರ, ಸುಂಕಗಳನ್ನು ಇಲ್ಲವೆ ತೆರಿಗೆಯನ್ನು ಕೂಡಿಸಬಹುದು.

೨ ಹಿಂದುಸ್ಥಾನ ಸರಕಾರದವರ ಒಪ್ಪಿಗೆ ಸಿಮೆಂಟ ಎಡ್ವೈಜರರಿಂದ ಯಾ ಮುಂಬಯಿಯಲ್ಲಿರುವ ರೀಜನಲ್ಲ ಒಪ್ಪಿಗೆ ಸಿಮೆಂಟ ಎಡ್ವೈಜರರಿಂದ, ಅಥವಾ ಸದರಿ ಒಪ್ಪಿಗೆ ಸಿಮೆಂಟ ಎಡ್ವೈಜರರ ಕಡೆಯಿಂದ ಯಾ ರೀಜನಲ್ಲ ಒಪ್ಪಿಗೆ ಸಿಮೆಂಟ ಎಡ್ವೈಜರರ ಕಡೆಯಿಂದ ಈ ಸಂಬಂಧದಲ್ಲಿ ಅಧಿಕಾರಪಟ್ಟಿರುವ ವ್ಯಕ್ತಿಯಿಂದ ಲೇಖಿ ಅಧಿಕಾರ ಪತ್ರ ಪಡೆಯದೆ ಯಾರಾದರೂ ಸದರಿ ಸಿಮೆಂಟನ್ನು ಮಾರಾಟ ಮಾಡತಕ್ಕದ್ದಲ್ಲ.

೩. ಮೇಲ್ಕಾಣಿಸಿದ ಆಜ್ಞೆಗಳು ತಾ ೧-೬-೧೯೪೭ರಿಂದ ಅಮಲಿನಲ್ಲಿ ಬರುವವು

ಮುಂಬಯಿ ಸರಕಾರದ ಆಜ್ಞೆಯಂತೆ,

N. K. DRAVID,

ಸರಕಾರದ ಕಾರ್ಯದರ್ಶಿ.

THE BANK OF RURAL INDIA LTD,

(Incorporated in British India, Liability of Members limited.)

HEAD OFFICE — "Satyabhama Bhavan", **KARWAR**, N. K.

Offices at :— KARWAR, KUMTA, SIRSI, HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital	.. Rs. 10,00,000;
Subscribed Capital	.. Rs 5,00,000;
Paid-up Capital & Reserves ..	Rs. 5,08,602-8-0

Rates of Interest on Deposits:

Current a/c @ 1½ p. a, *Savings Bank a/c @ 2½%.*

Fixed Deposits for 3 months @ 3% per annum.

" " for 6 monnths @ 3½%

" " for 12 months or more @ 4% "

All kinds of modern Banking business transacted

Karwar, 14-2-1948

P. X GRACIOUS

MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕಾರವಾರದಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಊರುಟಿಯಲ್ಲಿ ವರ್ಷಕ್ಕೆ ರೂ ೩।
ಅಂಚೆಯಿಂದ ವರ್ಷಕ್ಕೆ ೩-೧-೦
೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ...೦-೧-೦
ವಿ. ಪಿ. ಯಿಂದ ಕಳಿಸಿದರೆ ೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು ಮುಂಗಡ ಕಳಿಸತಕ್ಕದ್ದು.

Reg. No. B. 1270. Monday, 25-7-1949.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೪.

ಕುಮಟಾ:- ಸೋಮವಾರ, ತಾ. ೨೫—೭—೧೯೪೯.

ಜಾಹೀರಾತುಗಳ ದರ:
೧೫ ಎಮ್ ಉದ್ದ ಸ್ತಂಭದ ಪ್ರತಿ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಪತ್ರುಕ್ತ ಇಲ್ಲವೆ ಪತ್ರದ್ವಾರಾ ಠರಾಯಿಸಬೇಕು

ವಿವಿಧ ವಿಷಯಗಳು.

"ಹರಿಜನ" ಪತ್ರಿಕೆಯಲ್ಲಿ ವಿನಯಾಶ್ರಮದ ಶ್ರೀ ಜಿ. ಸೀತಾರಾಮ ಶಾಸ್ತ್ರಿಯವರು ಒಂದು ಲೇಖ ಬರೆದು, ಆಹಾರ-ಧಾನ್ಯಗಳ ಕೊರತೆಯನ್ನು ನೀಗಿಸುವದಕ್ಕಾಗಿ ಸರಕಾರವು ಪುರಸ್ಕರಿಸುತ್ತಿರುವ ಧೋರಣೆಯನ್ನು ವಿಮರ್ಶಿಸಿದ್ದಾರೆ. ನಿಯಂತ್ರಣಗಳ ನಿರ್ಬಂಧಗಳನ್ನು ಹೇರಿ ಮತ್ತು ಸೀಧಾ ಹಂಚುವಿಕೆಯ ಕ್ರಮ ಜಾರಿಯಲ್ಲಿ ತಂದು ಅನ್ನ-ಧಾನ್ಯಗಳ ಕೊರತೆಯ ಕಷ್ಟವನ್ನು ನಿವಾರಿಸಬಯಸುವದು ಘೋರ ತಪ್ಪೆಂದು ಶ್ರೀ|| ಶಾಸ್ತ್ರಿಯವರ ನಿಶ್ಚಿತಾಭಿಪ್ರಾಯವಾಗಿದೆ. ನಿಯಂತ್ರಣ ಮತ್ತು ಸೀಧಾ-ಪದ್ಧತಿಗಳಿಂದ ಜನರಿಗೆ ವ್ಯವಸ್ಥಿತವಾಗ ನಡೆಸಿಕೊಳ್ಳಲಿಕ್ಕೂ ರೀತಿಯಂತೆ ಜೀವನೋಪಾಯ ನಡೆಸಲಿಕ್ಕೂ ತೊಂದರೆಯಾಗುತ್ತದಾಗಿ ಶಾಸ್ತ್ರಿಯವರು ಹೇಳುತ್ತಾರೆ ನಮ್ಮ ದೇಶದಲ್ಲೀಗ ಅನ್ನ-ಧಾನ್ಯಗಳ ಕೊರತೆಯು ಪಂ|| ಜವಾಹರಲಾಲರ ಎಣಿಕೆಯಂತೆ ನೂರಕ್ಕೆ ೧೦ರಷ್ಟು ಇದೆ. ಕೊರತೆಯ ಪ್ರಮಾಣ ೧೦ಂಕ್ಕೆ ೭ರಷ್ಟುಂಟೆಂದು ಸರದಾರ ಪಟೇಲರನ್ನು ಕ್ರಾಂತಿ ವರಿಷ್ಠ ಕಾನೂನ-ಸಭೆಯಲ್ಲಿ ಕೊಟ್ಟ ಅಂಕಿ-ಸಂಖ್ಯೆಗಳನ್ನು ನೋಡಿದರೆ ಆ ಪ್ರಮಾಣ ೧೦೦ಕ್ಕೆ ೬೮ ತನಕ ಇಳಿಯುತ್ತದೆ. ನಮ್ಮಿಷ್ಟು ವಿಶಾಲ ಪ್ರದೇಶದಲ್ಲಿ ಇಷ್ಟು ಸಣ್ಣ ಕೊರತೆಯನ್ನು ಪರಿಹರಿಸಿಕೊಳ್ಳಲು ವಿಶಾಲ ಪ್ರಮಾಣದ ನಿರ್ಬಂಧಗಳನ್ನೇ ಹೇರಿಸುವದಗತ್ಯವಿಲ್ಲ ಆಹಾರ-ಧಾನ್ಯಗಳನ್ನು ಜತನದಿಂದ ಕಾಪಾಡಿದರೆ ಈ ಕೊರತೆಯನ್ನು ನಿರಾಯಾಸವಾಗಿ ತುಂಬಿತರಬಹುದು. ಕೈ-ಕುಟ್ಟಿಗೆಯ ಅಕ್ಕಿಯನ್ನು ಪ್ರಚಾರದಲ್ಲಿ ತಂದರೆ ಆಹಾರ-ಧಾನ್ಯಗಳ ಪ್ರಮಾಣವೂ ಪೌಷ್ಟಿಕಾಂಶಗಳ ಪ್ರಮಾಣವೂ ೧೦೦ಕ್ಕೆ ೨೦ರಷ್ಟು ಹೆಚ್ಚುತ್ತವೆಂದು ವಿನಯಾಶ್ರಮದೊಳಗಿನ ಪ್ರಯೋಗಗಳಿಂದ ಸಿದ್ಧವಾಗಿದೆ. ಮಧ್ಯಪ್ರಾಂತದ ಪ್ರಧಾನರು ಕೂಡ ಪ್ರಯೋಗ ಮಾಡಿ ನೋಡಿ, ಗಿರಣಿ-ಸಿದ್ಧ ಗೋದಿಯ ಹಿಟ್ಟಿನಕಿಂತ ಕಲ್ಲುಗಳ್ಳಿನ ಮೇಲೆ ಬೀಸಿ ತಯಾರಿಸಿದ ಗೋದಿಯ ಹಿಟ್ಟಿನ ಅನ್ನಾಂಶ ೧೦೦ಕ್ಕೆ ೧೫ರಷ್ಟು ಹೆಚ್ಚಿಗಿರುತ್ತದೆಂದು ತಿಳಿಸಿದ್ದಾರೆ ಈ ೨೦ ಮತ್ತು ೧೫ ಅಂಕೆಗಳೊಳಗಿನ ಯಾವದೇ ಪ್ರಮಾಣ ಸ್ವೀಕರಿಸಿದರೂ ಕೊರತೆಯ ಪ್ರಮಾಣದ ೭ಕ್ಕಿಂತ ಅದು ಮಿಗಿಲಾಗುತ್ತಿರುವದರಿಂದ, ಗಿರಣಿಗಳಲ್ಲಿ ಅಕ್ಕಿ, ಹಿಟ್ಟುಗಳನ್ನು ತಯಾರಿಸದಂತೆ ವಿಧಿಸಿದರೆ, ಆಹಾರ-ಧಾನ್ಯಗಳ ಕೊರತೆಯು ತಂತಾನೇ ನೀಗುವಂತಿದೆ ಈಗಿನ ಆಹಾರದ ಅಭಾವತೆಯಿಂದ ಕೋಟಿಗಟ್ಟಲೆ ರೂಪಾಯಿಗಳ ಸೂರೆಯಾಗುತ್ತಿದೆ. ವಿದೇಶಗಳಿಂದ ಆಹಾರ-ಧಾನ್ಯ ತರಿಸಲು ರೂ ೫೫-೬೦ ಕೋಟಿ ಖರ್ಚಾಗುತ್ತಿದೆ. ನಿಯಂತ್ರಣದ ಮತ್ತು ಸೀಧಾ-ಪದ್ಧತಿಯ ಸಿಬಂದಿಯ ಸಂಬಳವೆಂದು ಪುನಃ ಕೋಟ್ಯಾವಧಿ ರೂಪಾಯಿಗಳು ಖರ್ಚಾಗುತ್ತಿವೆ. ಶಾಸ್ತ್ರಿಯವರ ಸೂಚನೆ ಸ್ವೀಕರಿಸಿದರೆ ಅವುಗಳ ಉಳಿತಾಯವಾಗಿ, ಸರಕಾರಕ್ಕೆ ಲಾಭವಾಗುವದು ಜೋಳ, ಬಾಜರಿ ಮೊದಲಾದ ಧಾನ್ಯಗಳನ್ನು ತಿಂದು ಜೀವಿಸುವ ಜನಗಳಿಗೆ ಈಗಿನ ಸೀಧಾ ಪದ್ಧತಿಯಲ್ಲಿ ಗಿರಣಿ ಅಕ್ಕಿ ಹಂಚುವದರಿಂದ, ಅವರಿಗೆ ಗಿರಣಿ ಅಕ್ಕಿ ತಿನ್ನುವ ಚಟವುಂಟಾಗಿ ಅವರ ಬೆಳವಣಿಗೆಯು ಕುಗ್ಗಲಾರಂಭಿಸಿದೆಯಂತೆ. ಸಿಯಂತ್ರಣಗಳು ಬರುವ ಮುಂಚೆ ಜೋಳ, ಬಾಜರಿ, ಜವೆ ಗೋದಿ ಮೊದಲಾದ ಧಾನ್ಯಗಳನ್ನೇ ಅವರು ಸೇವಿಸುತ್ತಿದ್ದರು. ಧಾನ್ಯಗಳಲ್ಲಿ ಗಿರಣಿಯ ಅಕ್ಕಿಗಿಂತ ಹೆಚ್ಚು ಸತ್ವವಿದೆ.

೧೯೪೬—೪೭ನೇ ವರುಷದಲ್ಲಿ ಅನ್ನ-ಧಾನ್ಯಗಳನ್ನು ಬೆಳಸುವ ಕ್ಷೇತ್ರಗಳು ಹಿಗ್ಗುವ ಬದಲು ಕುಗ್ಗಿವೆಯೆಂದು ತಿಳಿಯುತ್ತದೆ. ಭತ್ತ ಬೆಳೆಯುವ ಕ್ಷೇತ್ರ ೧। ಲಕ್ಷ ಎಕರೆಗಳಿಂದ ಕುಗ್ಗಿದೆ ಜೋಳ ಮೊದಲಾದ ಧಾನ್ಯ ಬೆಳೆಯುವ ಕ್ಷೇತ್ರ ೧|| ಲಕ್ಷ ಎಕರೆಗಳಿಂದ ಕುಗ್ಗಿದೆ. ಈ ಪ್ರದೇಶಗಳನ್ನು ಹೊಗೆ ಸೊಪ್ಪು, ಕಬ್ಬು ಮೊದಲಾದವುಗಳಿಗಾಗಿ ಉಪಯೋಗಿಸಿದ್ದು ಕಂಡುಬರುತ್ತಿದೆ. ಆಹಾರ-ಧಾನ್ಯ ಬೆಳಸುವ ಭೂಮಿಗಳ ಆಹಾರೇತರ ಬೆಳೆಗಳ ಉತ್ಪಾದನೆಗೆ ಹೋಗದಂತೆ ಅಧಿಕಾರಿಗಳೂ ಜನರೂ ದಕ್ಷತೆ ವಹಿಸಬೇಕು.

***

ಶ್ರೀ|| ಸೀತಾರಾಮ ಶಾಸ್ತ್ರಿಯವರು ಭೂಮಿಯ ಉತ್ಪತ್ತಿಯನ್ನು ಬೆಳಸುವ ಬಗ್ಗೆ ಕೆಲವು ಸೂಚನೆಗಳನ್ನು ಮಾಡಿದ್ದಾರೆ. ಕೃಷಿಕರಿಗೆ ಬೀಜ-ಗೊಬ್ಬರಗಳನ್ನು ತತ್ಪರತೆಯಿಂದ ಸಕಾಲದಲ್ಲಿ ಪೂರೈಸಬೇಕು; ಮಳೆಗಾಲದಲ್ಲಿ ನೆರೆ ಕಟ್ಟಿ ಬೆಳೆ ನಷ್ಟವಾಗದಂತೆ ಒಡ್ಡು ಮೊದಲಾದವುಗಳನ್ನು ಹಾಕಿಸಿಕೊಡಬೇಕು; ಹೊಲಗಳನ್ನು ಕಾಪಾಡುವ ಇನ್ನಿತರ ಅನುಕೂಲತೆಗಳನ್ನೂ ಒದಗಿಸಿ ಕೊಡಬೇಕು. ನೀರಿನ ಕೊರತೆಯಾಗುವಲ್ಲಿ ನೀರಿನ ಪೂರೈಕೆಯಾಗುವಂತೆ ಏರ್ಪಾಟಾಗಬೇಕು; ಸಗಣಿ ಗೊಬ್ಬರ ಉತ್ತಮ ಗೊಬ್ಬರವೆಂದು ಅನುಭವವುಂಟು; ಅದನ್ನು ವಿಪುಲವಾಗಿ ಒಕ್ಕಲಿಗರಿಗೆ ಪೂರೈಸಬೇಕು. ಸಗಣಿ ಗೊಬ್ಬರ ಸಿಗದಿದ್ದಲ್ಲಿ ಹಿಂಡಿಯ ಗೊಬ್ಬರ ಉಪಯೋಗಿಸಬಹುದು. ಔಡ್ಲ ಹಿಂಡಿ, ನೆಲಗಡ್ಲೆಯ ಹಿಂಡಿ, ಎಳ್ಳ ಹಿಂಡಿ ಮೊದಲಾದವುಗಳನ್ನು ಕೃಷಿಕರಿಗೆ ವಿಪುಲವಾಗಿ ಪೂರೈಸಬೇಕು ಎಣ್ಣೆಯ ಕಾಳು, ನೆಲಗಡ್ಲೆ, ಎಳ್ಳು ಮೊದಲಾದ ಹಿಂಡಿ ಪೂರೈಸುವ ಜೀನಸುಗಳನ್ನು ವಿದೇಶಗಳಿಗೆ ರಪ್ತಾಗಗೊಡಬಾರದು. ಈ ಗೊಬ್ಬರದಿಂದ ೧೦೦ಕ್ಕೆ ೫೦ರಷ್ಟು ಬೆಳೆ ಹೆಚ್ಚಾಗುವದೆಂದು ಹೇಳಲಿಕ್ಕೆ ಏನೂ ಪ್ರತ್ಯವಾಯವಿಲ್ಲ ರಾಸಾಯನಿಕ ಗೊಬ್ಬರವನ್ನು ಎಂದೂ ಉಪಯೋಗಿಸಕೂಡದು. ಅದರಿಂದ ಮಣ್ಣಿನ ಉತ್ಪಾದಕ ಶಕ್ತಿ ಕುಗ್ಗುತ್ತದೆ. ಹುಟ್ಟುವ ಉತ್ಪತ್ತಿಯಲ್ಲೂ ಪೌಷ್ಟಿಕ ಗುಣ ತಕ್ಕಷ್ಟು ಇರುವದಿಲ್ಲ. ಆಹಾರ-ಧಾನ್ಯಗಳನ್ನು ಹೆಚ್ಚೆಚ್ಚಾಗಿ ಬೆಳಸಬೇಕೆಂದು ಪ್ರಚಾರ ಮಾಡುವವರು ಈ ಸಂಗತಿಗಳನ್ನು ಲಕ್ಷದಲ್ಲಿಡತಕ್ಕದ್ದು.

***

ಶ್ರೀ|| ಸೀತಾರಾಮ ಶಾಸ್ತ್ರಿಯವರು ಆಹಾರ ಧಾನ್ಯಗಳ ಕೊರತೆಯನ್ನು ನೀಗಿಸುವದಕ್ಕಾಗಿ ಕೆಲವು ಸೂಚನೆಗಳನ್ನೂ ಮಾಡಿದ್ದಾರೆ ಪಕ್ಷಕ್ಕೊಂದು ದಿನ ಉಪವಾಸ ತೆಗೆಯಬೇಕೆಂದು ಅವರ ಸೂಚನೆಯುಂಟು ಏಕಾದಶಿಗೊಮ್ಮೆ ಉಪೋಷಣ ಮಾಡಿದರೆ ಇಹ-ಪರಗಳೆರಡರಲ್ಲೂ ಸುಖವುಂಟು. ವರ್ಷದಲ್ಲಿ ಮಾಡಿದ ೨೪ ಉಪೋಷಣಗಳಿಂದ ಆಹಾರ-ಧಾನ್ಯಗಳ ಕೊರತೆಯನ್ನು ಸಹಜವಾಗಿ ತುಂಬಿತರಬಹುದೆಂದು ಶಾಸ್ತ್ರಿಯವರ ಅಂಬೋಣ ನೆಲಗಡ್ಲೆ ಮತ್ತು ಬೆಲ್ಲ, ತೆಂಗಿನಕಾಯಿ-ಬೆಲ್ಲ ಅಥವಾ ಎಳ್ಳು-ಬೆಲ್ಲ ಇವುಗಳ ರಸಾಯನದಿಂದ ದೇಹದ ಬೆಳವಣಿಗೆಗೆ ಅವಶ್ಯವುಳ್ಳಷ್ಟು

FOR BANKING SERVICE.
IN TRADE, INDUSTRY, AND AGRICULTURE
APPROACH

The Agricultural & Industrial Bank, Ltd.,

(Established in 1934)

Head Office : **COONDAPOOR,** S. Kanara.

Branches.

1. Ankola	7. Gokarn.	13. Nagar.
2. Belgaum.	8. Haveri.	14. Shimoga.
3. Bhatkal.	9. Hubli.	15. Sirsi.
4. Coondapoor.	10 Karwar.	16. Somwarpet.
5. Dharwar.	11. Kumta.	17. Virajpet.
6. Gadag.	12. Mangalore.	18. Honavar.

19. BOMBAY. (384-M, Jaipuria House, Kalbadevi Road.).

CURRENT, SAVINGS BANK AND FIXED DEPOSITS ARE ACCEPTED.

For terms, apply to the nearest Branch.

Coondapoor. 1st June. 1949 }

Vaman Shenai,
CHAIRMAN

ಪೌಷ್ಟಿಕಾಂಶ ದೊರೆಯುತ್ತದಾಗಿಯೂ ಅವರು ಹೇಳುತ್ತಾರೆ. ಈ ರಸಾಯನದಲ್ಲಿ ೨-೩ ಲಿಂಬೆ ಹಣ್ಣುಗಳ ರಸ ಕೂಡಿಸಿ ಸೇವಿಸಿದರೆ ೨ ದಿನಗಳಿಗೆ ಒಂದು ಊಟ ಮಾಡಿ ಸಹ ನಿರ್ವಾಹ ಮಾಡಬರುತ್ತದಂತೆ. ಈ ರಸಾಯನದಲ್ಲಿ ಜೈವಿಕಾಂಶ, ನೆಣ ಮೊದಲಾದ ದೇಹದ ಬೆಳವಣಿಗೆಗೆ ಅವಶ್ಯವುಳ್ಳ ಯಾವತ್ತೂ ಸತ್ವಗಳು ಉಚಿತವಾಗಿ ಶ್ರೀ|| ಶಾಸ್ತ್ರಿಯವರು ಬರೆಯುತ್ತಾರೆ. ಮಾನಸಿಕ ಏಕಾಗ್ರತೆಗೂ ಈ ರಸಾಯನದ ಸೇವನೆಯಿಂದ ಒಳ್ಳೇ ಅನುಕೂಲವಾಗುತ್ತದಾಗಿ ಅವರ ಅಭಿಪ್ರಾಯವಿದೆ

* * *

ಹಾಲನ್ನು ಹೆಚ್ಚೆಚ್ಚಾಗಿ ಸೇವಿಸಿದರೆ ಅನ್ನ-ಧಾನ್ಯಗಳ ಅವಶ್ಯಕತೆ ಕಲಮಟ್ಟಿಗೆ ಕಡಿಮೆಯಾಗಿ ಉಳಿತಾಯವಾಗುವದೆಂದೂ ಶ್ರೀ|| ಶಾಸ್ತ್ರಿಯವರು ಸೂಚಿಸಿದ್ದಾರೆ. ದನಗಳು ಹೆಚ್ಚೆಚ್ಚು ಹಾಲು ಹಿಂಡಬೇಕಾದರೆ ಅವುಗಳಿಗೆ ಪೌಷ್ಟಿಕ ಆಹಾರ ಕೊಡಬೇಕು. ಬಾಜರಿಯನ್ನು ನೆನಿಸಿ ಅರೆದು ದನಗಳಿಗೆ ಹಾಕಿದರೆ ಹಾಲು ಮತ್ತು ಹೈನ ಹೆಚ್ಚುತ್ತವೆ. ಅದರ ಅಭಾವದಲ್ಲಿ ತೆಂಗಿನ, ಎಳ್ಳಿನ ಅಥವಾ ನೆಲಗಡ್ಲೆಯ ಹಿಂಡಿ ಹಾಕಬಹುದು. ಈ ಹಿಂಡಿಯೊಡನೆ ಉಪ್ಪು ಹಾಕಿ ಕೊಟ್ಟರೆ ಹಾಲಿನ ಪರಿಮಾಣ ಹೆಚ್ಚುತ್ತದೆ. ಆದರೆ ಹಿಂಡಿಯ ಮೇಲೆ ಈಗ ನಿಯಂತ್ರಣವಿದ್ದುದರಿಂದ ದನಗಳಿಗೆ ಅದನ್ನು ಬೇಕಷ್ಟು ಹಾಕಲು ತೊಂದರೆಯಾಗಿದೆ. ಆ ನಿಯಂತ್ರಣ ಮೊದಲು ಹೋಗಬೇಕು.

* * *

ದೇಶದೊಳಗಿರುವ ಅನ್ನಧಾನ್ಯಗಳನ್ನು ಸರಿಯಾಗಿ ಹಂಚಿದರೆ ಒಬ್ಬೊಬ್ಬರಿಗೆ ೧೪—೧೫ ಔನ್ಸು ಧಾನ್ಯ ಸಿಗಲಿಕ್ಕೆ ಏನೂ ತೊಂದರೆಯಿಲ್ಲ. ಈ ಪ್ರಮಾಣದಿಂದ ಧಾನ್ಯ ಹಂಚಿದರೆ ಕಳ್ಳಪೇಟೆಗೆ ಅವಕಾಶವಿರಲಾರದು, ಲಂಚಗುಳಿತನಕ್ಕೂ ಇಂಬು ಉಳಿಯದು. ಸೀಧಾ ಅಧಿಕಾರಿಗಳು ಮೊದಲು ೭ ಔನ್ಸುಗಳಂತೆ ಹಂಚಿದರು, ಈಗ ೧೨ ಔನ್ಸುಗಳಂತೆ ಹಂಚುತ್ತಾರೆ. ಇಷ್ಟು ಅನ್ನ-ಧಾನ್ಯದಿಂದಲೇ ಜನರು ನಿರ್ವಾಹ ಮಾಡಲಾರಂಭಿಸಿದ್ದರೆ ಇಷ್ಟೊತ್ತಿಗೆ ಮುಕ್ಕಾಲು ಪಾಲು ಜನಾಂಗ ಅನಾರೋಗ್ಯದಿಂದ ನರಳುತ್ತಿತ್ತು; ಮರಣ ಸಂಖ್ಯೆಯೂ ಅದ್ಭುತ ಮಟ್ಟಕ್ಕೆ ಏರುತ್ತಿತ್ತು! ಕಳ್ಳ-ಪೇಟೆಯಲ್ಲಿ ವಿಪುಲವಾಗಿ ಅನ್ನಸಾಮಗ್ರಿ ಸಿಗುತ್ತಿರುವದರಿಂದಲೂ ಕಳ್ಳಪೇಟೆಯಿಂದ ಅದನ್ನು ಜನರು ಪೂರೈಸಿಕೊಂಡು ನಿರ್ವಾಹ ಮಾಡುತ್ತಿರುವದರಿಂದಲೂ ಇಂಥ ಆಪತ್ತು ನಮ್ಮ ಜನಾಂಗಕ್ಕೆ ಬಂದಿರುವದಿಲ್ಲ. ದೇಶದವರಿಗೆ ಸಾಲುವಷ್ಟು ಅನ್ನಧಾನ್ಯ ದೇಶದಲ್ಲೇ ಉಂಟು. ಅದನ್ನು ಸರಿಯಾಗಿ ಹಂಚುವ ಕೌಶಲ್ಯ ಈಗಿನ ಅಧಿಕಾರಿಗಳಲ್ಲಿ ಇಲ್ಲ. ಆಹಾರ ಧಾನ್ಯ ಇದ್ದಲ್ಲಿಂದ ಅದು ಬೇಕಾಗಿರುವ ಸ್ಥಳಕ್ಕೆ ಸುಸೂತ್ರವಾಗಿ ಒಯ್ಯಲು ಅನುಕೂಲತೆಗಳಿಲ್ಲ. ಕಾರ್ಯ-ಕುಶಲ ಅಧಿಕಾರಿಗಳ ಅಭಾವದಲ್ಲಿ ಜನರು ನಷ್ಟಪಡುವ ಪ್ರಸಂಗ ಬಂದಿದೆಯೆಂದು ಶ್ರೀ|| ಶಾಸ್ತ್ರಿಯವರು ಬರೆದು, ಸಹಕಾರಿ ಸಂಘಗಳ, ಸಂಬಿಗಸ್ತ ಸಮಾಜ-ಸೇವಕ ಸಂಘಗಳ ಯಾ ಪ್ರಾಮಾಣಿಕ ವರ್ತಕರ ಮುಖಾಂತರ ಆಹಾರ ಧಾನ್ಯಗಳನ್ನು ಜನಸಾಮಾನ್ಯರಿಗೆ ಹಂಚುವ ವ್ಯವಸ್ಥೆಯಾಗಬೇಕಾಗಿ ಸೂಚಿಸಿದ್ದಾರೆ. ನಿಯಂತ್ರಣ ಮತ್ತು ಸೀಧಾ-ವ್ಯವಸ್ಥೆ ಅನವಶ್ಯಕ. ಆಹಾರದ ಕೊರತೆ ಕಲ್ಪಿತವಿದೆ. ವಿಧಾಯಕ ಕಾರ್ಯಕ್ರಮದಿಂದ ಅದನ್ನು ನೀಗಿಸಬಹುದು; ನಿಯಂತ್ರಣದ ಶಾಸನ-ಕ್ರಮಗಳು ಅನೀತಿಯವಿವೆ, ಹೀಗೆ ಶ್ರೀ|| ಶಾಸ್ತ್ರಿಗಳು ನಿರ್ಧಾರದಿಂದ ಪ್ರತಿಪಾದಿಸುತ್ತಾರೆ. ಇಂಥ ವಿಚಾರ-ಸರಣಿ ಮುಂದೆ ಬಂದಿರುವದರಿಂದ ಹಿಂದುಸ್ಥಾನ ಸರಕಾರದ ಆಹಾರ ಸಲಹೆ ಮಂಡಳದಲ್ಲಿ ಈಗ ವಿಚಾರ-ಪರಿವರ್ತನೆಯಾಗುವ ಲಕ್ಷಣಗಳು ತೋರುತ್ತವೆ. ಶ್ರೀ|| ಜಯರಾಮದಾಸ ದೌಲತರಾಮ ಇವರ ಅಧ್ಯಕ್ಷತೆಯಲ್ಲಿ ಸದ್ಯಕ್ಕೇ ಸೇರಿದ ಆಹಾರ ಸಲಹೆ ಸಮಿತಿಯಲ್ಲಿ ಅನ್ನಸಾಮಗ್ರಿಗಳ ನಿಯಂತ್ರಣ ಮತ್ತು ಸೀಧಾ ಪದ್ಧತಿಗಳ ಪುನರ್ವಿಚಾರ ನಡೆಯಿತೆಂದು ತಿಳಿಯುತ್ತದೆ. ಆಹಾರ ಸಾಮಗ್ರಿಗಳ ಸಾಗಾಟಕ್ಕೆ ಹೆಚ್ಚೆಚ್ಚು ಅನುಕೂಲತೆಗಳನ್ನು ಪೂರೈಸಬೇಕೆಂದೂ, ನಿಯಂತ್ರಣ ಮತ್ತು ಸೀಧಾಕ್ರಮಗಳನ್ನು ಸಡಲಿಸಿ, ಅವುಗಳ ವ್ಯವಹಾರವನ್ನು ಜನರೇ ನಡಿಸುವಂತೆ ಪ್ರೋತ್ಸಾಹಿಸಬೇಕೆಂದೂ ಒಂದು ವಿಚಾರ-ಸರಣಿ ಈಗ ಮುಂದೆ ಬಂದಿದೆ. ಆಹಾರ-ಧಾನ್ಯಗಳನ್ನು ಕಡಿಮೆ ದರದಿಂದ ಬಡ ಜನರಿಗೆ ಪೂರೈಸುವಂತೆ ಸರಕಾರವು ಅಲ್ಲಲ್ಲಿ ಅಂಗಡಿಗಳನ್ನಿಡಬೇಕೆಂಬ ಒಂದು ವಿಚಾರವೂ ಪ್ರದುರ್ಭಾವಗೊಂಡಿದೆ. ಇಂಥ ಅಂಗಡಿಗಳ ಏರ್ಪಾಟಿನಿಂದ ಬಡಜನರಿಗೆ ಬೇಕಾದ ಅನ್ನಸಾಮಗ್ರಿ ದೊರೆಯುವದಲ್ಲದೆ ತಮಗೆ ಬೇಕಾದ ಅನ್ನ-ಧಾನ್ಯಗಳನ್ನು ಬೇಕಾದಲ್ಲಿಂದ ಪೂರೈಸಿಕೊಳ್ಳಲು ಬಲ್ಲವರಿಗೆ ನಿರ್ಬಂಧವಿರಲಿಕ್ಕಿಲ್ಲ. ಕಳ್ಳ ಪೇಟೆ, ಕಳ್ಳ-ಗಿರಾಕಿಗಳು ಆಗ ತಾನಾಗಿ ಬಯಲಾಗುವವು. ಹೆಚ್ಚಿನ ದುಡ್ಡು ಕೊಟ್ಟು ಕಳ್ಳನ್ನ ತಿನ್ನುವ ಅನೀತಿಯ ವಾತಾವರಣವೂ ನಿರ್ಮೂಲವಾಗುವದು. ಹಿಂದುಸ್ಥಾನ ಸರಕಾರವು ಇನ್ನು ೧-೨ ವಾರಗಳಲ್ಲಿ ಅನ್ನ-ಧಾನ್ಯಗಳ ನಿಯಂತ್ರಣವನ್ನು ಸಮಾಲೋಚಿಸಿ ಹೊಸ ಘೋಷಣೆಯನ್ನು ಕೈಕೊಳ್ಳುವದೆಂದು ಎಣಿಸಲಾಗಿದೆ. ಆಹಾರ-ಧಾನ್ಯಗಳ ಕೊರತೆಯನ್ನು ನೀಗಿಸಿಕೊಂಡು ಬಡ ಜನರನ್ನು ರಕ್ಷಿಸಲು ನಿಯಂತ್ರಣ, ಸೀಧಾ ಪದ್ಧತಿಗಳು ಶಕ್ತವಾಗಿಲ್ಲ, ಮೇಲಾಗಿ ಅವುಗಳಿಂದ ನಾಡಿನಲ್ಲಿ ಅನೀತಿಯ ವ್ಯವಹಾರ ಮಿಗಿಲಾಗಿದೆ. ಬಹುಜನ ಸಮಾಜದಲ್ಲಿ ಕಳ್ಳ-ಪ್ರವೃತ್ತಿ ಹಬ್ಬಿದೆ. ಪ್ರತಿ ನಿತ್ಯ ಕಳ್ಳ-ಪೇಟೆಯಿಂದ ತಂದ ಕಳ್ಳ ಧಾನ್ಯವನ್ನು ಸೇವಿಸಹತ್ತಿದ ಮನುಷ್ಯನಲ್ಲಿ ಕಳ್ಳ ಪ್ರವೃತ್ತಿ ಹುಟ್ಟಿದರೆ ಯಾರೂ ಆಶ್ಚರ್ಯಗೊಳ್ಳುವ ಕಾರಣವಿಲ್ಲ. ಇದನ್ನೆಲ್ಲ ಆಳವಾಗಿ ಆಲೋಚಿಸಿ ಹಿಂದುಸ್ಥಾನ ಸರಕಾರವು ಹೊಸ ಧೋರಣವನ್ನು ಕೈಕೊಳ್ಳಬೇಕಾದ ಪ್ರಸಂಗ ಬಂದಿದೆ. ಜನಾಂಗದ ಸಾಂಸ್ಕೃತಿಕ ಅಭಿವೃದ್ಧಿಗೆ ಈಗಿನ ನಿಯಂತ್ರಣವೂ ಸೀಧಾ ಕ್ರಮವೂ ಅಡ್ಡ ಬರುತ್ತವೆಂಬುವದಕ್ಕೆ ಯಾವ ಸಂದೇಹವೂ ಇಲ್ಲ

* * *

೧೯೫೧ರಿಂದ ಮುಂದೆ ವಿದೇಶಗಳಿಂದ ಆಹಾರ-ಧಾನ್ಯಗಳನ್ನು ಹಿಂದುಸ್ಥಾನ ಸರಕಾರವು ತರಿಸಲಿಕ್ಕಿಲ್ಲೆಂದು ಭೀಷ್ಮ-ಪ್ರತಿಜ್ಞೆ ತೊಟ್ಟ ಪಂ|| ಜವಾಹಿರಲಾಲರು, ನಾಡಿಗೆ ಬೇಕಾದ ಆಹಾರ-ಧಾನ್ಯಗಳನ್ನು ನಾಡಿನಲ್ಲೇ ಬೆಳಸಬೇಕೆಂದೂ, ಧಾನ್ಯದ ಕೊರತೆಯನ್ನು ಜನರು ಗಡ್ಡೆ-ಗೆಣಸುಗಳನ್ನು ಇಲ್ಲವೆ ಇತರ ಪೂರಕ ಧಾನ್ಯಗಳನ್ನು ತಿಂದು ನೀಗಿಸಬೇಕೆಂದೂ ನಿರ್ಧಾರಪೂರ್ವಕವಾಗಿ ಬೋಧಿಸುತ್ತಿದ್ದಾರೆ. ಪಂಡಿತಜಿಯವರು ಪರೋಪದೇಶ-ಪಂಡಿತರಲ್ಲ; ಆಡಿದಂತೆ ಮಾಡುವ ಧೀರವೀರರಾಗಿರುತ್ತಾರೆ. ಅವರು ತಮ್ಮ ಬಂಗಲೆಯ ಆವಾರದಲ್ಲಿ ಆಹಾರ-ಸಾಮಗ್ರಿ ಬೆಳೆಸುವ ಏರ್ಪಾಟು ಮಾಡಿದ್ದಾರೆಂದು ಆ ಆವಾರವನ್ನು ಪ್ರತ್ಯಕ್ಷ ನೋಡಿಕೊಂಡು "ಪ್ರೆಸ್ ಟ್ರಸ್ಟ ಒಫ್ ಇಂಡಿಯಾ" ದ ದಿಲ್ಲಿಯ ಪ್ರತಿನಿಧಿಯು ವರದಿ ಮಾಡಿದ್ದಾನೆ. ಆ ಆವಾರದಲ್ಲಿ ಈಗ ಉದ್ಯಾನವಿಲ್ಲ! ಹಿಂದಿದ್ದ ಹೂ-ಗಿಡಗಳೆಲ್ಲ ಈಗ ಮಾಯವಾಗಿವೆ! ಸರಕಾರಿ ಸ್ವಾಗತ-ಸಮಾರಂಭಗಳಿಗಾಗಿ ಕೆಲವೊಂದು ಭಾಗವನ್ನು ಮಾತ್ರ ತೆರವಿಟ್ಟು ಇನ್ನುಳಿದ ಭಾಗದಲ್ಲಿ ರಂಟೆ ಹೊಡೆದು ಬೇರೆ ಬೇರೆ ಜಾತಿಯ ಆಹಾರ-ಧಾನ್ಯಗಳನ್ನೂ ಗಡ್ಡೆ-ಗೆಣಸುಗಳನ್ನೂ ಬೆಳಸಲಾರಂಭಿಸಿದ್ದಾರೆ. ಒಂದೆಡೆ ಗೋವಿನ ಜೋಳದ ಸಸಿಗಳು ಈಗಾಗಲೇ ೩ ಅಡಿಗಳಷ್ಟು ಬೆಳೆದಿವೆ. ಕೆಲವೆಡೆ ಗೋದಿಯನ್ನು ಬಿತ್ತಿದ್ದಾರೆ. ಕೆಲ ಭಾಗದಲ್ಲಿ ನೆಲಗಡ್ಲೆ ನೆಟ್ಟಿದ್ದಾರೆ. ಬೇರೆ ಕೆಲ ಭಾಗಗಳಲ್ಲಿ ನಮ್ಮಿತ್ತ ಕಡೆ ಬರಗಾಲಗಡ್ಡೆ ಎಂದು ಕರೆಯಲ್ಪಡುವ ಸಂಜೀವನಿ (ಟಪಿಯೋಕಾ) ಗಡ್ಡೆಗಳ ಸಸಿಗಳನ್ನು ಹಚ್ಚಿದ್ದಾರೆ. ಇನ್ನೊಂದು ಭಾಗದಲ್ಲಿ ಬಾಳೆಯ ಗಿಡಗಳ ಸಾಲುಗಳು ಕಂಗೊಳಿಸುತ್ತಿವೆ. ನಡು ನಡುವೆ ಕುಂಬಳ ಬಳ್ಳಿ, ಬದನೀಗಿಡ ಮೊದಲಾದ ಕಾಯಿಪಲ್ಲೆಗಳನ್ನು ಬೆಳಸುವ ವ್ಯವಸ್ಥೆಯಾಗಿದೆ. ಪಂಡಿತಜಿಯವರ ಸುಪುತ್ರಿಯಾದ ಸೌ|| ಇಂದಿರಾ ಗಾಂಧಿಯವರು ಸ್ವತಃ ಈ ಬೆಳೆಗಳ ಮೇಲ್ವಿಚಾರ ಮಾಡುತ್ತಿದ್ದಾರೆ

ಆಹಾರ-ಕ್ರಮದಲ್ಲೂ ಪಂಡಿತಜಿಯವರು ಹಲವಾರು ಬದಲಾವಣೆಗಳನ್ನು ಮಾಡಿ ದೇಶ-ಬಾಂಧವರಿಗೆ ಮಾರ್ಗದರ್ಶನ ಮಾಡಿರುತ್ತಾರೆ. ತಮ್ಮ ಮನೆಯಲ್ಲಿ ಒಂದು ಕಾಳು ಅಕ್ಕಿಯನ್ನು ತರಕೂಡದೆಂದು ಅವರು ಕಟ್ಟಪ್ಪಣೆ ಮಾಡಿರುತ್ತಾರಂತೆ. ಸೋಮವಾರ ದಿನ ಗೋದಿಯನ್ನು ಬಳಸಕೂಡದೆಂದೂ ಅವರು ನಿಯಮ ಮಾಡಿಕೊಟ್ಟಿದ್ದಾರೆ. ಗೋದಿಯ ಬದಲು ಅಂದು "ಓಟ" ಧಾನ್ಯವನ್ನು ಉಪಯೋಗಿಸುತ್ತಾರೆ. ಇನ್ನುಳಿದ ದಿನಗಳಲ್ಲಿ ಶುದ್ಧ ಗೋದಿಯ ಚಪಾತಿಗಳನ್ನು ಮಾಡದೆ ಗೋದಿಯ ಹಿಟ್ಟಿನಲ್ಲಿ ಗೆಣಸಿನ ಹಿಟ್ಟನ್ನು ಬೆರಸಿ ಚಪಾತಿ ಮಾಡುತ್ತಾರೆ.

ತಮ್ಮಂತೆಯೇ ಸಮಸ್ತ ಭಾರತದೊಳಗಿನ ಸಮಸ್ತ ಅಧಿಕಾರಿಗಳೂ ಜನರೂ ಆಹಾರೋತ್ಪಾದನೆಯನ್ನು ಹೆಚ್ಚಿಸುವ ಕ್ರಮವನ್ನೂ ಆಹಾರ-ಧಾನ್ಯಗಳನ್ನು ಆದಷ್ಟು ಕಡಿಮೆ ಉಪಯೋಗಿಸುವ ಪರಿಪಾಠವನ್ನೂ ನಿಷ್ಠೆಯಿಂದಲೂ ತಾತ್ಪರ್ಯದಿಂದಲೂ ಅನುಸರಿಸುವರೆಂದು ಪಂಡಿತಜಿಯವರು ನಂಬುತ್ತಾರೆ. ದೇಶದ ಆಹಾರೋತ್ಪತ್ತಿಯನ್ನು ಹೆಚ್ಚಿಸಲು ಸರಕಾರಗಳು ಪ್ರಯತ್ನಿಸಬೇಕೆಂಬುದು ನಿಜ. ಆದರೆ ಎಲ್ಲವನ್ನು ಸರಕಾರವೇ ಮಾಡಬೇಕೆಂದು ಹೇಳಿ, ಪ್ರಜೆಗಳು ಆ ದಿಶೆಯಿಂದ ಏನೇನೂ ಪ್ರಯತ್ನ ಮಾಡದಿದ್ದರೆ ಸರಕಾರದಿಂದ ಯಾವ ಕಾರ್ಯವೂ ಆಗುವಂತಿಲ್ಲ. ಜನರು ಮೊದಲು ಟೊಂಕ ಕಟ್ಟಬೇಕು; ಆ ಮೇಲೆ ಸರಕಾರದಿಂದ ಸಹಾಯವನ್ನು ಕೋರಬೇಕು. ಆಗ ಸರಕಾರವು ನೆರವನ್ನೀಯದಿದ್ದರೆ ಅದನ್ನು ದೂರಬಹುದು. ಸರಕಾರವು ಬಂದು ನಮ್ಮ ತೋಟಗಳಲ್ಲಿ ಇಲ್ಲವೆ ಹೊಲ-ಬೇಣಗಳಲ್ಲಿ ಧಾನ್ಯ ಬಿತ್ತಿಕೊಡಬೇಕು, ಗಡ್ಡೆಗೆಣಸುಗಳನ್ನು ಹಚ್ಚಿಕೊಡಬೇಕು, ಕಾಯಿಪಲ್ಲೆಗಳನ್ನು ಹಚ್ಚಿಕೊಡಬೇಕು ಎಂದು ಜನರು ಅಪೇಕ್ಷಿಸಿದರೆ ಅದು ಹುಚ್ಚು ಹುಂಬತನವಾಗುವದು. ಮಾನ್ಯ ಪಂಡಿತ ಜವಾಹರಲಾಲ ನೆಹರುರವರು ಸ್ವೋದಾಹರಣೆಯಿಂದ ತೋರಿಸಿಕೊಟ್ಟ ಮಾರ್ಗದಿಂದ ನಡೆದರೆ ಮಾತ್ರ ನಮ್ಮ ನಾಡಿಗೆ ನೆಮ್ಮದಿಯಾಗುವದು.

ಕೇಳಿದ್ದು, ಕಂಡದ್ದು.

ಯಲ್ಲಾಪುರ ತಾಲೂಕಿನ ದೇಹಳ್ಳಿ ಹೀನ ಚಿಕಿತ್ಸಕರ ಹೇಳಾಗುತ್ತಿದೆ. ವೈದ್ಯಕೀಯ ಉಪಚಾರದ ಅನುಕೂಲತೆಯಿಲ್ಲದ್ದರಿಂದ ಅಲ್ಲಿಯ ಜನರು ವಿವಿಧ ರೋಗತ್ರಯಗಳನ್ನು ಅನುಭವಿಸುತ್ತಿದ್ದರು. ಜನರ ಈ ಕಷ್ಟ ನೋಡಿ ಸರಕಾರಕ್ಕೆ ಕನಿಕರ ಉತ್ಪನ್ನವಾಯಿತು; ಮತ್ತು ೩ ವರ್ಷಗಳ ಹಿಂದೆ ದೇಹಳ್ಳಿಯಲ್ಲಿ ಅದು ಒಂದು ಚಿಕಿತ್ಸಾಲಯವನ್ನು ತೆರೆಯಿತು. ಆದರೆ ಈಗೊಂದು ವರ್ಷದಿಂದ ಈ ದವಾಖಾನೆಯಲ್ಲಿ ಯಾವ ಡಾಕ್ಟರನೂ ಇಲ್ಲ, ವೈದ್ಯನೂ ಇಲ್ಲ! ಔಷಧಗಳ ಕಪಾಟುಗಳಿಗೆಲ್ಲ ಬೀಲಿ ಹಾಕಿಟ್ಟಿದ್ದಾರೆ! ರೋಗಿಗಳು ಚಿಕಿತ್ಸಾಲಯಕ್ಕೆ ಬಂದು ಔಷಧದ ಕಪಾಟುಗಳ ದರ್ಶನವನ್ನಷ್ಟು ಪಡೆದರೆ ಸಾಕು, ಅವರ ರೋಗಗಳು ಮಾಯವಾಗುವವು ಎಂಬ ವಿಚಾರ ಮೇಲಧಿಕಾರಿಗಳ ತಲೆಯಲ್ಲಿ ಮನೆ ಮಾಡಿಕೊಂಡಿದೆಯೋ ಏನೋ!

ಈ ಚಿಕಿತ್ಸಾಲಯದಲ್ಲಿ ಡಾಕ್ಟರ-ವೈದ್ಯರಿಲ್ಲದಿದ್ದರೂ ಕಾಂಪೌಂಡರರಿದ್ದಾರೆ. ಅವರಿಗೆ ಪ್ರತಿ ತಿಂಗಳು ೭೦-೭೫ ರೂ. ಸಂಬಳ ಸಿಗುತ್ತಿದೆ. ಚಿಕಿತ್ಸಾಲಯವಿರುವ ಮನೆಯ ಭಾಡಿಗೆ ಸರಕಾರವು ಸಲ್ಲಿಸುತ್ತಿದೆ. ಡಾಕ್ಟರ-ವೈದ್ಯರ ಅಭಾವದಲ್ಲಿ ಈ ಖರ್ಚ ಮಾಡುತ್ತಿರುವದು ಯಾತ್ಕೋ ಹೇಗೆಂಬುದರ ವಿಚಾರವಾಗಬೇಕು.

ದೇಹಳ್ಳಿಯ ಈ ದವಾಖಾನೆಯನ್ನು ಬೇರೊಂದೆಡೆಗೆ ಒಯ್ಯುವ ಆಲೋಚನೆ ನಡೆದಿದೆ ಎಂಬದೊಂದು ಸುದ್ದಿಯೂ ಉಂಟು. ಈ ಆಲೋಚನೆ ನಡೆಯುತ್ತಿರುವದೂ ನಿಜವಿರುತ್ತಿದ್ದರೆ, ದೇಹಳ್ಳಿಯಲ್ಲಿ ಸರಕಾರದವರು ಹೊಸದಾಗಿ ಈ ದವಾಖಾನೆಯನ್ನು ಯಾಕೆ ತೆರೆದರು ಎಂಬ ಪ್ರಶ್ನೆಯುಂಟಾಗುತ್ತದೆ. ದೇಹಳ್ಳಿಯಲ್ಲಿ ದವಾಖಾನೆಯ ಆವಶ್ಯಕತೆ ಇಲ್ಲದಿದ್ದರೆ ಅದನ್ನು ತೆರೆದದ್ದು ತಪ್ಪಲ್ಲವೇ? ಅದರ ಅವಶ್ಯಕತೆಯು ಮತ್ತು ಉಂಟು ಎಂದು ಅದನ್ನು ತೆರೆದಿರುತ್ತಿದ್ದರೆ ಅದನ್ನು ಈಗ ಮುಚ್ಚುವದು ಸರಿಯಾಗುವದೇನು?

* *

ನಮ್ಮ ಜಿಲ್ಲೆಯ ಪಟೇಲರು ಕಳೆದ ಮಾರ್ಚ ತಿಂಗಳಲ್ಲಿ ಶಿರಸಿಯೊಳಗೆ ಸಭೆ ಸೇರಿ ತಮ್ಮದೊಂದು ಸಂಘವನ್ನು ಸ್ಥಾಪಿಸಿಕೊಂಡಿರುವರಷ್ಟೇ. ಆ ಸಭೆಯನ್ನು ಉದ್ಘಾಟಿಸಿದವರು ಸರಕಾರದವರ ಆಜ್ಞೆಯ ಪ್ರಕಾರಗಳಿಗೆ ಕೇಳು ವಿರೋಧಿಸುವದು ಈ ಸಂಘದ ಉದ್ದೇಶವಿಲ್ಲ. ಸರಕಾರ ಅಧಿಕಾರಿಗಳಿಗೆ ಕೇಳು ಹಾಕುವದಷ್ಟೇ ಅಲ್ಲವೆ ಅವರ ಖಾಸಗಿ ಕೆಲಸ ವಿಷಯಗಳನ್ನೊಪ್ಪಿಸುವ ಅಧಿಕಾರ ಕೂಡ ನಮ್ಮ ಪಟೇಲರಿಗೆ ಇರುವದಿಲ್ಲ. ಪಟೇಲರ ಕಾರ್ಯನಿರ್ವಹಣೆಯ ಮಾರ್ಗದಲ್ಲಿ ಬರುವ ತೊಂದರೆಗಳನ್ನು ನಿವಾರಿಸಿಕೊಳ್ಳುವದು, ಪಟೇಲರ ಕಾರ್ಯ ಸುಗಮ ಸಾಗುವಂತೆ ಅವರ ಸ್ಥಾನಮಾನಗಳ ಗೌರವವನ್ನು ಹೆಚ್ಚಿಸಿಕೊಳ್ಳುವದು, ಪಟೇಲರ ಕುಂದು-ಕೊರತೆಗಳನ್ನು ಹೋಗಲಾಡಿಸಲು ಕಾನೂನುಬದ್ಧ ಮತ್ತು ಸಂಘಟಿತ ರೀತಿಯಿಂದ ಪ್ರಯತ್ನಿಸುವದು ಇವೇ ಸಂಘದ ಪ್ರಧಾನ ಉದ್ದೇಶಗಳಾಗಿವೆ. ಇಂಥ ಈ ಸಂಘಕ್ಕೆ, ೧೯೪೭ರಲ್ಲಾದ ಯಾವದೋ ಒಂದು ಸರಕಾರಿ ಠರಾವಿನ ಆಧಾರ ಹೇಳಿ, ಸರಕಾರವು ಆಕ್ಷೇಪ ಮಾಡುವದಾಗಿದೆ. ಪಟೇಲರು "ಆ ಪಟೇಲ ಸಂಘಕ್ಕೆ ರಾಜೀನಾಮೆ ಕೊಟ್ಟು ಹೊರಬರಬೇಕು ಮತ್ತು ಈ ಬಗ್ಗೆ ರಿಪೋರ್ಟ ಮಾಡಬೇಕು" ಎಂಬ ಫರ್ಮಾನು ಹೊರಡಿಸಿದ್ದಾಗಲಿ ನೋಡಿದರೆ, ನಾವು ಇನ್ನೂ ಪರಕೀಯ ಬ್ರಿಟಿಶ ಸಾಮ್ರಾಜ್ಯವಾದಿ ರಾಜ್ಯದಲ್ಲೇ ಇದ್ದೇವೆಂಬಂತೆ ಅನಿಸುತ್ತದೆ. ಪಟೇಲರು ತಮ್ಮ ತೊಂದರೆಗಳನ್ನು ತಿದ್ದಿಕೊಳ್ಳಲಿಕ್ಕೆ, ತಮ್ಮ ಬೇಡಿಕೆಗಳನ್ನು ಸರಕಾರದವರ ಮುಂದೆ ಸಾಂಘಿಕವಾಗಿ ಇಡಲಿಕ್ಕೆ, ಅಲ್ಲದೆ ಸರಕಾರದವರ ಆಜ್ಞಾಪತ್ರಗಳನ್ನು ಜನರಿಗೆ ತಿಳಿಸಿ ಹೇಳಲಿಕ್ಕೆ ಸಂಘಟಿತರಾಗಕೂಡದೆಂದು ಹೇಳುವದು ಜನತೆಯ ಸರಕಾರಕ್ಕೆ ಎಂದೂ ಶೋಭಿಸುವದಿಲ್ಲ. ನಿಜವಾದ ಜನತಾ-ಸರಕಾರವು, ಸಂಘಟನೆಯ ಮಹತ್ವವನ್ನು ಮನಗಂಡು, ಅಂಥ ಸಂಘಗಳಿಗೆ ಬೇಕಾಗಿ ಪ್ರೋತ್ಸಾಹ ಕೊಡುವದು. ಸರಕಾರದವರು ಪುನರಾಲೋಚನೆ ಮಾಡಿ ಪಟೇಲ ಸಂಘಟನೆಯ ಬಗೆಗಿನ್ನು ಅಂತ-ಕೊಂಡು ಪಟೇಲರ ಸಂಘದ ವಿರುದ್ಧ ಹೊರಡಿಸಿದ ಪತ್ರಕ್ಕೆ ಕೊಂಡರೇ ಓರಿಯನ್ನು ಹಿಂತೆಗೆಯಬೇಕಾಗಿ ಸೂಚನೆಯಾದ.

* * *

ನಮ್ಮ ಅಧಿಕಾರಿಗಳು ಇನ್ನೂ ಬ್ರಿಟಿಶರ ಕಾಲದ ಮನೋವೃತ್ತಿಯನ್ನು ತೊರೆದಿರುವದಿಲ್ಲ. ನಾಡಿಗೆ ಈಗ ಸ್ವಾತಂತ್ರ್ಯ ಸಿಕ್ಕಿದೆ, ಅಂತೆಯೇ ರಾಜ್ಯಾಧಿಕಾರ ಜನತೆಯ ಕೈ ಸೇರಿದೆ, ಹಿಂದಿನ ಜನತೆಯು ದಾಸ್ಯವಿಮುಕ್ತವಾಗಿದ್ದೇವೆ ಎಂಬ ಮಾತನ್ನು ಇನ್ನೂ ಅವರು ಗ್ರಹಿಸಿರುವದಿಲ್ಲ! ಅಥವಾ ಜನತಾ ಸರಕಾರದ ಹೊಸ ಧೋರಣೆಗನುಸಾರವಾಗಿ ತಮ್ಮ ನೀತಿ-ನಡಾವಳಿಗಳಲ್ಲೂ ಕಾಯಿದೆ-ಕಾನೂನುಗಳ ಅನುಲಕ್ಷಣದಲ್ಲೂ ತಕ್ಕ ಮಾರ್ಪಾಟು ಮಾಡಬೇಕು ಎಂಬ ಮಾತವನ್ನು ಅವರು ಅರಿತಿರುವದಿಲ್ಲ. ಹಳೆಯ ಕಾಲದ ರೀತಿಗಳನ್ನೇ ಅವರು ಇನ್ನೂ ಅನುಸರಿಸುತ್ತಿದ್ದಾರೆ! ಒಂದು ಉದಾಹರಣೆ ಕೊಟ್ಟು ಈ ಮಾತನ್ನು ವಿಶದೀಕರಿಸಬಯಸುತ್ತೇನೆ. ಶಿರ್ಸಿ ತಾಲೂಕಿನ ಓಣಿ ಹವಿನಸರದಾರ ರಾ॥ ರಂಗಪ್ಪ ಎಂಬವರು ತಮ್ಮ ಹೊಲದ ಹತ್ತಿರ ಸರಕಾರಿ ಬೆಟ್ಟದಲ್ಲಿರುವ ಒಂದು ಕೆರೆಯನ್ನು ಸ್ವಂತದ ರೊಕ್ಕದಿಂದ ಖರ್ಚ ಮಾಡಿ ದುರುಸ್ತಿ ಮಾಡಿದರು; ಮತ್ತು ಅದರ ನೀರನ್ನು ತಮ್ಮ ತೋಟಕ್ಕೆ ತಿರುಗಿಸಿ, ಅದರ ಸಹಾಯದಿಂದ ಅಡಿಕೆ-ತೆಂಗುಗಳನ್ನು ಬೆಳೆಸಿದರು. ಈ ಕೆರೆಯ ದುರುಸ್ತಿ ಮಾಡುವಾಗ ಅದರ ದುರುಸ್ತಿಗಾಗಿ ಬೆಟ್ಟದಲ್ಲಿ ಪ್ರವೇಶ ಮಾಡುವಾಗ ರಾ॥ ರಂಗಪ್ಪನವರು ಜಂಗಲ ಇಲಾಖೆಯವರ ಪರವಾನಗಿಯನ್ನು ಪಡೆದಿದ್ದಿಲ್ಲ. ಅದರಿಂದ ಜಂಗಲ ಇಲಾಖೆಯವರು ರಾ॥ ರಂಗಪ್ಪನವರ ವಿರುದ್ಧ ಖಟ್ಲೆ ಹೂಡಿದರು. ಆ ಖಟ್ಲೆಯಲ್ಲಿ ಶಿರ್ಸಿಯ ರೆಸಿಡೆಂಟ ಮ್ಯಾಜಿಸ್ಟ್ರೇಟರು ರಂಗಪ್ಪನವರಿಗೆ ೧೦೦ ರೂ. ದಂಡ ತೆರಬೇಕೆಂಬಲೂ ದಂಡ ತೆರದಿದ್ದರೆ ೨ ದಿವಸಗಳ ಶಿಕ್ಷೆ ಅನುಭವಿಸಬೇಕೆಂಬಲೂ ವಿಧಿಸಿದ್ದಾರೆ!

* *

ಸವರಿ ಕೆರೆಯಿಂದ ಜಂಗಲ ಇಲಾಖೆಯವರಿಗೆ ಏನು ಪ್ರಯೋಜನ ಸಿಗುತ್ತಿದ್ದೇ ದೇವರೆ ಬಲ್ಲನು! ರಾ॥ ರಂಗಪ್ಪನವರು ಅದನ್ನು ದುರುಸ್ತ ಮಾಡಿದ್ದರಿಂದ ಅವರ ಗಂಟೇನು ಖರ್ಚಾಯಿತೆಂಬುದೂ ತಿಳಿದಿಲ್ಲ! ಜಂಗಲ ಇಲಾಖೆಯವರು ಸ್ವತಃ ಆ ಕೆರೆಯನ್ನು ದುರುಸ್ತಗೊಳಿಸಿ ಅದನ್ನು, "ಹೆಚ್ಚಿಚ್ಚು ಆಹಾರಧಾನ್ಯ ಬೆಳೆಸಿ" ಎಂದು ಸಮಾಜಕ್ಕೆ ಜನರಿಗೆ ಒಪ್ಪಿಸಬಹುದಾಗಿತ್ತು. ಸರ್ವ ವಿಧದಿಂದಲೂ ಆಹಾರೋತ್ಪಾದನೆಯನ್ನು ಬೆಳೆಸಲು ಟೊಂಕ ಕಟ್ಟಿದ ಜನತಾ ಸರಕಾರದ ಅಂಕಿತದಲ್ಲಿರುವ ಜಂಗಲ ಇಲಾಖೆಯವರು ಅನುಸರಿಸಬೇಕಾದ ರಾಜಮಾರ್ಗವಿದಾಗಿತ್ತು. ಅದನ್ನು ಅನುಸರಿಸಲು ಅವರಿಂದ ಆಗಲಿಲ್ಲ. ರಾ॥ ರಂಗಪ್ಪನವರು ಮುಂದಾದಾಗಲಾದರೂ ಅವರು ಅವರಿಗೆ ನೆರವು ಮತ್ತು ಪ್ರೋತ್ಸಾಹವನ್ನು ಕೊಡಬಹುದಾಗಿತ್ತು. ಹಾಗೆ ಮಾಡದೆ, ನಮ್ಮ ಪರವಾನಗಿಯಿಲ್ಲದೆ ನಮ್ಮ ಬೆಟ್ಟದಲ್ಲಿ ರಂಗಪ್ಪನವರು ಹ್ಯಾಗೆ ಪ್ರವೇಶ ಮಾಡಿದರು ಎಂದು ಜಂಗಲ ಅಧಿಕಾರಿಗಳು ಆಕ್ಷೇಪ ಮಾಡಿ ಖಟ್ಲೆ ಹೂಡಿದ್ದು ಇಲ್ಲದೆ ಇಂಥ ಕ್ಷುಲ್ಲಕ, ಉಪೇಕ್ಷಣೀಯ ವೈಧಿಕ (technical) ಅಪರಾಧ[!]ಕ್ಕಾಗಿ ಮೆಜಿಸ್ಟ್ರೇಟರು ರಂಗಪ್ಪನವರಿಗೆ ರೂ. ೧೦೦ರ ದಂಡ ವಿಧಿಸಿದ್ದು ಎಷ್ಟರ ಮಟ್ಟಿಗೆ ಯುಕ್ತವಿರುತ್ತದೆಂಬುದರ ವಿಚಾರವನ್ನು ಪ್ರಾಂತಿಕ ಸರಕಾರವು ಮಾಡಬೇಕಾಗಿ ಅರಿಕೆ

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಸೋಮವಾರದಿಂದ ಶುಕ್ರವಾರದ ವರೆಗೆ ಮಳೆ ಬಹಳ ಮಂದವಾಗಿತ್ತು. ಅದೇ ಆಗ ನೆಟ್ಟಿ ಮಾಡಿದ ಹೊಲಗಳೊಳಗಿನ ಸಸಿಗಳು ಹಳ್ದಾಗಹತ್ತಿದ್ದವು. ಒಕ್ಕಲಿಗರು ಪುನಃ ಚಿಂತಾತುರರಾಗಿದ್ದರು. ಆದರೆ ನಿನ್ನೆ ರವಿವಾರದಿಂದ ಮೇಘರಾಜನು ಕೃಪೆ ಮಾಡುತ್ತಿದ್ದಾನೆ. ನಿನ್ನೆ ಮತ್ತು ಮೊನ್ನೆ ಕೂಡಿ ಸುಮಾರು ೧೦ ಇಂಚು ಮಳೆ ಸುರಿದಿದೆ.

ಮ್ಯುನಿಸಿಪಾಲಿಟಿಯವರ ಮಾರ್ಗ ದೀಪಗಳ ವ್ಯವಸ್ಥೆ ಇನ್ನೂ ಸರಿಯಾಗಿಲ್ಲ. ನಗರಪಿತರು ರಾತ್ರೆ ೯-೧೦ ಘಂಟೆಗೆ ಊರಲ್ಲಿ ಸಂಚರಿಸಿ ನೋಡಿದರೆ ಅವರಿಗೆ ಈ ಮಾತಿನ ಪ್ರತೀತಿಯಾಗುವಂತಿದೆ. ನಗರಪಿತರು ಇತ್ತ ಲಕ್ಷ ಕೊಡುವರೇ ?

ಬಗ್ಗೋಣ ರಸ್ತೆಯಲ್ಲಿ ಇರುವ ಒಂದು ಸಂಕದ ದುರುಸ್ತಿ ಇದೇ ಮೇ ತಿಂಗಳಲ್ಲಾಗಿತ್ತು. ಈಗ ಆ ಸಂಕ ಅರ್ಧಮರ್ಧ ಮುರಿದು ಬಿದ್ದಿದೆ! ಉಳಿದ ಅರ್ಧ ಭಾಗ ಬೀಳಲು ತಯಾರಾಗಿ ನಿಂತಿದೆ! ಜಿಲ್ಹಾ ಬೋರ್ಡಿನ ಶಿಬಂದಿಯವರು ಮಾಡಿಸುವ ದುರಸ್ತಿಯ ಕೆಲಸವೆ ಮಾದರಿಯದು!

ಕುಮಟೆಯಿಂದ ಸಾಂತಗಲ್ಲಿಗೆ ಹೋಗುವ ಮಾರ್ಗವೂ ಹೊನ್ನಾವರ—ಹೆಬ್ಬಾನಕೇರಿ ಮಾರ್ಗವೂ ಪೂರ್ಣ ಕೆಟ್ಟು ಹೋಗಿವೆ. ಎರಡೂ ಮಾರ್ಗಗಳಲ್ಲಿ ದೊಡ್ಡ ದೊಡ್ಡ ಕೊರಕಲುಗಳಾಗಿವೆ! ಕಾಲುವೆಗಳು ಎಂದೋ ಮುಚ್ಚಿ ಹೋಗಿವೆ! ಈ ಮಾರ್ಗಗಳ ಮೇಲೆ ವಾಹನಗಳನ್ನು ನಡಿಸುವದೂ ಗುದ್ದದ ಮೇಲೆ ಅವನ್ನು ನಡಿಸುವದೂ ಒಂದೇ ಎಂದು ಗಾಡಿಕಾರರನ್ನುತ್ತಾರೆ! ಅದರೂ ಬೋರ್ಡಿನವರು ಅದರ ದುರುಸ್ತಿಯ ವ್ಯವಸ್ಥೆಯನ್ನೇನೂ ಮಾಡಿಲ್ಲ! ಬೋರ್ಡಿನ ಅಧ್ಯಕ್ಷರು ಒಮ್ಮೆ ಈ ರಸ್ತೆ ನೋಡಿಕೊಂಡು ಹೋಗಬೇಕಾಗಿ ಈ ಮಾರ್ಗಗಳ ಅಂಚಿಗಿರುವ ಹಳ್ಳಿಗಳ ಜನರ ಬೇಡಿಕೆಯಿದೆ.

ಶಾಲೆಗಳ ವಿದ್ಯಾರ್ಥಿಗಳ ಸಮವೇಷ [ಯುನಿಫಾರ್ಮ]ಕ್ಕಾಗಿ ಬೇಕಾಗುವ ಮಧ್ಯಮ ಮತ್ತು ಉರುಟು ಬಟ್ಟೆಯನ್ನು ಸರಕಾರದವರು ಸವಲತ್ತಿನ ದರದಿಂದ ಪೂರೈಸಲು ನಿಶ್ಚಯಿಸಿದ್ದಾರೆ. ಶಾಲಾಧಿಕಾರಿಗಳು ತಮಗೆ ಬೇಕಾಗುವ ಬಟ್ಟೆಯ ಬಗ್ಗೆ ಅರ್ಜಿ ಮಾಡಿದಲ್ಲಿ ಜಿಲ್ಹಾಧಿಕಾರಿಗಳು ಸರಕಾರಿ ಉಗ್ರಾಣದಿಂದ ಈ ಬಟ್ಟೆಯನ್ನು, ಕಿರಕೋಳಿ ಅಂಗಡಿಕಾರರಿಗೆ ಮಾರುವ ದರದಿಂದ ಕೊಡಿಸುವರು. ಶಾಲಾಧಿಕಾರಿಗಳು ಮಾತ್ರ ಅದನ್ನು ತಾವು ಕೊಟ್ಟ ಬೆಲೆ ಮತ್ತು ತಗಲುವ ಖರ್ಚು ಇವನ್ನು ಕೂಡಿಸಿ ಬೀಳುವ ಬೆಲೆಗೆ ವಿದ್ಯಾರ್ಥಿಗಳಿಗೆ ಮಾರಬೇಕೆಂಬದೊಂದು ಶರ್ತುಂಟು

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.
ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲಾಜಿಂಗ
ದಿ ಕೆನರಾ ಲಾಜ
[ಊಟ ಮತ್ತು ವಸತಿಗೃಹ]
ಮೋಟರ-ಸ್ಟ್ಯಾಂಡ, ಹುಬ್ಬಳ್ಳಿ.
ಮಾಲಕ:— ಮ್ಹಾಳಪ್ಪ ಪೈ.

ಹೊನ್ನಾವರ— (ತಾ. ೨೧—೭—೪೫) ಈ ತಾಲೂಕಿನಲ್ಲಿ ಚಿಮಣಿ ಎಣ್ಣೆಯ ಬಟವಡೆ ಸರಿಯಾಗಿ ಆಗುವದಿಲ್ಲೆಂದೂ, ಬಹಳಷ್ಟು ಎಣ್ಣೆ ಕಳ್ಳ ಸಂತೆಗೆ ಹೋಗುತ್ತದೆಂದೂ ತಾ. ೧೧-೪-೪೫ರ "ವೃತ್ತ"ದಲ್ಲಿ ಪ್ರಕಟವಾದ ಬಳಿಕ ಸಿವಿಲ್ ಸಪ್ಲಾಯ್ ಖಾತೆಯವರಿಗಾಗಿ ಹೊನ್ನಾವರದ ಮಾಮಲೇದಾರರು ಸುದೀರ್ಘ ಚೌಕಶಿ ಮಾಡಿರುತ್ತಾರೆಂದು ಜಿಲ್ಲಾಧಿಕಾರಿ ತಿಳಿಸುತ್ತಾರೆ. ಎಣ್ಣೆಯ ಪರ್ಮಿಟ ಕಡಿಮೆ ಇರುವದರಿಂದ ಜನರಿಗೆ ಬೇಕಷ್ಟು ಎಣ್ಣೆ ದೊರೆಯುವದಿಲ್ಲ. ಮನೆಯೊಳಗಿನ ಕೋಣೆಗಳ ಲೆಕ್ಕದಿಂದ ಎಣ್ಣೆ ಹಂಚಿಕೊಡುತ್ತಾರೆ. ಇಲ್ಲಿಯ ಎಣ್ಣೆ ಕಂಪನಿಗಳ ಏಜಂಟರ ಲೆಕ್ಕವನ್ನೂ, ಅವರಿಂದ ಎಣ್ಣೆ ಪಡೆದು ಎಣ್ಣೆಯ ಚೀಟಿಯುಳ್ಳ ಜನರಿಗೆ ಎಣ್ಣೆ ಮಾರುತ್ತಿರುವ ಚಿಲ್ಲರೆ ವ್ಯಾಪಾರಿಗಳ ಲೆಕ್ಕವನ್ನೂ ಮಾಮಲೇದಾರರು ತಪಾಸಣೆ ಮಾಡಿ ನೋಡಿದ್ದಾರೆ. ಎಲ್ಲಿಯೂ ಅವರಿಗೆ ತಪ್ಪಾಟಗಳು ನಡೆದದ್ದು ಕಂಡು ಬರಲಿಲ್ಲ. ಚಿಮಣಿ ಎಣ್ಣೆಯ ವ್ಯಾಪಾರದ ಲೈಸನ್ಸಗಳಿಲ್ಲದ ಕೆಲವು ಮಂದಿಗೆ ಲೈಸನ್ಸಗಳು ಬೇಕಾಗಿವೆ. ಅವರು ಅವನ್ನು ದೊರಕಿಸುವದಕ್ಕಾಗಿ ಹಾಲಿ ಎಣ್ಣೆಯ ವ್ಯಾಪಾರ ಮಾಡುತ್ತಿರುವ ಜನರ ವಿರುದ್ಧ ದೋಷಾರೋಪಣೆ ಮಾಡುತ್ತಿದ್ದಾರೆಂದೂ, ಅವರೇ ಕಳ್ಳ ಸಂತೆಯ ಹೂಲಿಯನ್ನೆಬ್ಬಿಸುತ್ತಾರೆಂದೂ ಮಾಮಲೇದಾರರ ನಿರ್ಣಯವಾಗಿದೆ.

ಬೆಳಕೊಂದ ವಿಜಾನ ಪೇಟೆಯ ಹಿಂದಿನ ಮಾರ್ಗ ಪೂರ್ಣ ಕೆಟ್ಟು ಹೋಗಿದೆ. ಇನ್ನೂ ರಾತಿಗಳಿಗೆ ಅದಕ್ಕೆ ಆಸ್ಪದವಿಲ್ಲ! ಆದರೂ ನಗರ ಸಭೆಯವರು ಅದರ ದುರುಸ್ತಿ ವ್ಯವಸ್ಥೆ ಮಾಡುವದಿಲ್ಲ! ಆ ಭಾಗದ ಪ್ರತಿನಿಧಿಗಳು ಚುನಾವಣೆ ಸಮಯ ಬಂದಾಗ, ಜನರ ಮತಗಳನ್ನು ಸೆಳೆಕೊಳ್ಳುವದಕ್ಕಾಗಿ, ಕೈಯ್ಯಲ್ಲೆಂದು ಟೀಪು ಸಕ್ಕೊಂಡು ಅಲೆದಾಡುತ್ತಾರೆ! ಖರ್ಚಿನ ಅಂದಾಜು ಮಾಡುತ್ತಾರೆ! ಕೂಡಲೇ ಮಾರ್ಗ ದುರುಸ್ತ ಮಾಡಿಸುತ್ತೇವೆಂದು, ಅತಿ ಶೀಘ್ರದಲ್ಲಿ ವಚನವನ್ನು ಕೊಡುತ್ತಾರೆ!! ಆದರೆ ಚುನಾವಣೆಯಾದ ಮರುದಿನ ಅದ್ಯಾವದೂ ಅವರಿಗೆ ನೆನಪಿನಲ್ಲಿರುವದಿಲ್ಲ! ಜಿಲ್ಲಾಧಿಕಾರಿ ಒಮ್ಮೆ ಈ ರಸ್ತೆ ನೋಡಬೇಕಾಗಿ ವಿನಂತಿಯಿದೆ.

ಇಲ್ಲಿಯ ಊರವಲ ಉಗ್ರಾಣದಲ್ಲಿ ಈಗ ನೀರೊಳಗ ಉರುವಲ ಮಾರುತ್ತಾರೆ! ಪೆಟ್ರೋಲ ಸುರುವಿದರೂ ಅದಕ್ಕೆ ಥಟ್ಟನೆ ಬೆಂಕಿ ಹತ್ತುವದಿಲ್ಲ! ಇಂಥ ಉರುವಲವನ್ನು ಕೊಡ ತಲಾ ೧ ಮಣಕ್ಕಿಂತ ಹೆಚ್ಚು ಕೊಡಲಾಗುವದಿಲ್ಲೆಂದು ಉಗ್ರಾಣದಾರರು ಹೇಳುತ್ತಾರೆ! ಆ ಮಣ ಕಟ್ಟಿಗೆ ಸಹ ಮನೆಯ ಯಜಮಾನ ಬರಬೇಕಂತೆ! ಇಂಥ ಉಗ್ರಾಣವನ್ನು ಚಾಲೂ ಇಡುವದಕ್ಕಿಂತ ಅದನ್ನು ಸರ-

ಪ್ರಕಟನೆ.

ಉತ್ತರ ಕನ್ನಡ ಜಿಲ್ಲೆಯ ನ್ಯಾಯ ಖಾತೆಯಲ್ಲಿ (Judicial Department) ತಾತ್ಪೂರ್ತಿಕವಾಗಿ ೬ ಉಮೇದವಾರ ಬೇಕಾಗಿದ್ದಾರೆ. ಅವರಿಗೆ ದೊರೆಯುವ ಸಂಬಳದ ಪ್ರಮಾಣ— ರೂ. ೪೦-೧-೫೦-೨-೬೦. ಅರ್ಜಿದಾರರು ಕನ್ನಡವನ್ನು ಚೆನ್ನಾಗಿ ಓದು-ಬರೆಯಲು ಬಲ್ಲವರಿರಬೇಕು. ಕನ್ನಡ ಮುಲ್ಕಿ ಪರೀಕ್ಷೆ ಪಾಸಾದವರಿಗೆ ಪ್ರಾಶಸ್ತ್ಯವನ್ನು ಕೊಡಲಾಗುವದು. ಅರ್ಜದಾರನ ವಯಸ್ಸು ೨೫ಕ್ಕೆ ಮಿಕ್ಕಿರಬಾರದು. ಅರ್ಜಿ ಮಾಡಬಯಸುವವರು ಮೇಲಿನ ಅರ್ಹತೆಗಳ ದಾಖಲೆಗಳೊಂದಿಗೆ ಸ್ವಹಸ್ತದಿಂದ ಬರೆದ ಅರ್ಜಿಗಳನ್ನು ತಾ. ೩೧-೭-೧೯೪೫ರೊಳಗಾಗಿ ಮೆ॥ ಡಿಸ್ಟ್ರಿಕ್ಟ ಜಜ್ಜ ಸಾಹೇಬ, ಕಾರವಾರ ಇವರಿಗೆ ತಲುಪುವಂತೆ ಕಳಿಸತಕ್ಕದ್ದು.

ಕಾರವಾರ, ತಾ. ೧೫-೭-೪೫	**N S. Shrikhande,** District Judge, Kanara.

ಕಾರವು ಮುಚ್ಚುವದೇ ಒಳಿತು! ತಮ್ಮಲ್ಲಿ ಉರುವಲ ಸಿಗುವದಿಲ್ಲೆಂದು ತಿಳಿದು ಉರುವಲ ಪೂರೈಸಿಕೊಳ್ಳುವ ಅನ್ಯ ಮಾರ್ಗವನ್ನಾದರೂ ಹುಡುಕುವ ಜಾಗ್ರತೆಯನ್ನು ಜನರು ತಕ್ಕೊಳ್ಳುವರು.

ಕಳೆದ ವಾರ ಒಂದು ದಿನ ಮಧ್ಯರಾತ್ರಿಯ ಸುಮಾರಿಗೆ ಮಹಳಕೋಣದಲ್ಲಿ ಭಯಂಕರ ಬಿರುಗಾಳಿ ಬೀಸಿದ್ದರಿಂದ ಒಂದು ತೋಟದೊಳಗಿನ ಹಲವಾರು ತೆಂಗು, ಅಡಿಕೆ, ಮಾವು, ಹಲಸು ಮುಂತಾದ ಮರಗಳು ಮುರಿದು ಬಿದ್ದವೆ. ತೋಟಕ್ಕೆ ಸುಮಾರು ರೂ. ೨೦೦೦ದ ಪೆಟ್ಟಿಗೆ ನಷ್ಟವಾಗಿದೆ. ಈ ತೋಟದ ಸಮೀಪವೇ ೨ ಮನೆಗಳವೆ. ಸುತ್ತಲಿನ ಮರಗಳು ಗಾಳಿಯ ಹೊಡೆತಕ್ಕೆ ಪಟಪಟನೆ ಮುರಿದು ಬೀಳುತ್ತಿದ್ದರೂ ಈ ಮನೆಗಳಿಗೆ ಏನೂ ಧಕ್ಕೆಯಾಗಿಲ್ಲವಂತೆ. ಒಳಗಿನ ಜನರು ಸುರಕ್ಷಿತರಿದ್ದಾರೆ. ದೈವ-ಶಕ್ತಿಯೇ ಅವರನ್ನು ಕಾಪಾಡಿತೆಂದು ಹೇಳಬೇಕು.

ಅಂಕೋಲಾ— (ತಾ. ೧-೭-೪೫) ಟಿನಸ್ಸಿ ರಾಯರ ಬಂದರಿನಿಂದ ರೈತರು ಮತ್ತು ಒಡೆಯರು ಇವರೊಳಗಿನ ಅಷ್ಟತ್ವವು ಹೋಗಿ ಹ್ಯಾಗೆ ಶಕ್ತಿ ಉತ್ಪನ್ನವುಂಟಾಗಿದೆಂಬುದನ್ನು ೮-೧೦ ದಿನಗಳ ಹಿಂದೆ ಇಲ್ಲಿಯ ಶ್ರೀ

ಆಜ್ಞೆ.

ಕಾನಡಾ ಜಿಲ್ಲಾ ಮಜಿಸ್ಟ್ರೇಟರ ಕಚೇರಿ, ಕಾರವಾರ, ತಾ. ೧೮-೭-೧೯೪೫

೧೯೪೫ನೇ ಇಸವಿಯ ಆವಶ್ಯಕ ವಸ್ತುಗಳ (ತಾತ್ಪೂರ್ತಿಕ ಅಧಿಕಾರಗಳು) ಕಾನೂನಿನ (೧೯೪೫ರ ೨೪ನೇ ಕಾನೂನಿನ) ೩ನೆಯ ಕಲಮಿನ (೨)ನೆಯ ಉಪಕಲಮಿನನ್ವಯ ಹಾಗೂ ಹಿಂದೂಸ್ಥಾನ ಸರಕಾರದ ಆಹಾರ ಖಾತೆಯ ತಾ. ೩-೩-೧೯೪೭ನೇಗೆ ಹೊರಡಿಸಿದ ೩ ೧೧ನೇ ನಂಬರ ಪ್ರಕಟಣೆಯನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಮತ್ತು ತಾ. ೯-೫-೧೯೪೫ನೇಗೆ (ಚಿಮಣಿ ಎಣ್ಣೆಯ ಧಾರಣೆಗಳನ್ನು ನಿಶ್ಚಿತಗೊಳಿಸುವದಕ್ಕಾಗಿ) ತಾವು ಹೊರಡಿಸಿದ ೪೯ನೇ ನಂಬರದ ಆಜ್ಞೆಯನ್ನು ಅಂಶತಃ ತಿದ್ದಿ, ಕಾನಡಾ ಜಿಲ್ಲೆಯ ಮೆಜಿಸ್ಟ್ರೇಟರು ಆಜ್ಞಾಪಿಸುತ್ತಾರೇನಂದರೆ.— (೧) ಸದರಿ (ತಾ. ೯-೫-೪೫ರ) ಆಜ್ಞೆಗೆ ಜೋಡಿಸಿದ ಪರಿಶಿಷ್ಟಕ್ಕೆ Iನೇ ಪರಿಶಿಷ್ಟವೆಂದು ಕ್ರಮಾಂಕ ಕೊಡಬೇಕು.

(೨) ಸದರಿ ಪರಿಶಿಷ್ಟದಲ್ಲಿ ಕೊಟ್ಟ ಟಿಪ್ಪಣಿಯನ್ನು ಅಳಿದುಹಾಕಬೇಕು.

(೩) ಸದರಿ ಆಜ್ಞೆಗೆ ಈ ಕೆಳಗಿನಂತೆ ಇನ್ನೊಂದು ಪರಿಶಿಷ್ಟವನ್ನು ಜೋಡಿಸಬೇಕು.

IIನೇ ಪರಿಶಿಷ್ಟ

[ಖಾರಿ (in bulk) ಎಣ್ಣೆ ಪೂರೈಕೆಗೆ ಎಲ್ಲ ಮುದ್ರೆಗಳ ಬೆಲೆ ಚಿಮಣಿ ಎಣ್ಣೆಯ ದರಗಳು.]

ತಾಲೂಕ	ಪ್ರತಿ ಇಂಪೀರಿಯಲ್ ಗೆಲನ್ನುಗಳ ಖಾರಿಗೆ ಹೋಲ್‌ಸೇಲ್ ಬೆಲೆ (ರೂ.)	ಪ್ರತಿ ೨ ಟಿನ್ನಿಂಯುಗಳ ದರ ಕೋಲ ಬೆಲೆ. ೧ನೇ ಸ್ತಂಭದಲ್ಲಿ ಕಾಣಿಸಿದ ಸ್ಥಳದಲ್ಲಿ ಹಾಗೂ ಆ ಸ್ಥಳದಿಂದ ೫ ಮೈಲು ಅಂತರದಲ್ಲಿರುವ ಸ್ಥಳಗಳಲ್ಲಿ.	೨ನೇ ಸ್ತಂಭದಲ್ಲಿ ಹೇಳಿದ ಸ್ಥಳಗಳನ್ನು ಬಿಟ್ಟು ಇನ್ನುಳಿದ ಸ್ಥಳಗಳಲ್ಲಿ.
(೧)	(೨)	(೩)	(೪)
ಮುಂಡಗೋಡ	೫-೭-೬	೦-೬-೯	೦-೭-೩

M. Allahbaksh,
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ.

...ಷ್ಟಿ ಗೃಹಸ್ಥರೊಬ್ಬರ ಮನೆಯಲ್ಲಿ ನಡೆದ ಕಥೆಯ ಮೇಲಿಂದ ತಿಳಿಕೊಳ್ಳಬಹುದು. ರೈತ ಸಂಘದ ಸದಸ್ಯನಾಗಿರುವ ಒಬ್ಬ ತರುಣ ಒಕ್ಕಲಿಗನು ತನ್ನ ತಮ್ಮನಿಂದ ಸಲ್ಲಬೇಕಾಗಿರುವ (ಗೇಣಿ ಬಾಕಿ ದಾನೆಯಲ್ಲಿ ಫೈಸಲೆಯಾದ ಪ್ರಕಾರ) ಗೇಣಿಯನ್ನು ಸಲ್ಲಿಸಲೆಂದು ಸದರಿ ಗೃಹಸ್ಥರ ಮನೆಗೆ ಹೋಗಿದ್ದನು. ಫೈಸಲೆಯಾದಷ್ಟು (ರೂ ೧೬-೧-೦) ಹಣ ಕೊಟ್ಟರೆ ಫೈಸಲೆಯಂತೆ ಹಣ ಮುಟ್ಟಿತೆಂದೂ ತನ್ನ ಲೆಕ್ಕದಂತೆ ರೂ. ೨೦ ಕೊಟ್ಟರೆ ಪೂರ್ಣ ಗೇಣಿ ಸಂದಿತೆಂದೂ ಪಾವತಿ ಕೊಡುತ್ತೇನಾಗಿ ಒಡೆಯ-ಗೃಹಸ್ಥರು ಹೇಳಲಾಗಿ ಆ ತರುಣನು ಅವಾಚ್ಯ ಶಬ್ದಗಳಿಂದ ಆ ಗೃಹಸ್ಥರಿಗೆ ಬಯ್ದು ತಿದ್ದ ಮಾಡಿದನಲ್ಲದೆ ಆ ಗೃಹಸ್ಥರ ಮೈ ಮೇಲೆ ಕೈ ಕೂಡ ಎತ್ತಿದನಂತೆ! ಟೆನೆನ್ಸಿ ಕಾಯದೆಯ ಪ್ರತಾಪವಿದು!!

ಕಾರವಾರ— ಹೊಸ ಜಿಲ್ಲಾಧಿಕಾರಿಗಳಾಗಿರುವ ರಾ॥ ಎಮ್. ಕೆ. ಜಾಧವರು ನಿನ್ನೆ ಇಲ್ಲಿಗೆ ಬಂದು ಅಧಿಕಾರ ವಹಿಸಿಕೊಂಡಿದ್ದಾರೆ. ಅವರಿಗೆ ಅಧಿಕಾರ ಬಿಟ್ಟುಕೊಟ್ಟು ರಾ॥ ಅಲ್ಲಾಬಕ್ಷರು ರಜೆಯ ಮೇಲೆ ಹೋಗಿದ್ದಾರೆ.

ಪೇಟೆಯ ಅಭಿವೃದ್ಧಿಯ ದೃಷ್ಟಿಯಿಂದಲೂ, ಕಾಳೀ ನದಿಯ ಕೆಂಪರನ್ನುಳ್ಳ ಆಹಾರ-ಸಂಪತ್ತಿನ ಪೂರ್ಣ ಪ್ರಯೋಜನ ಪಡೆಯಬೇಕೆಂಬ ದೃಷ್ಟಿಯಿಂದಲೂ ಅಸ್ನೋಟಿಯಿಂದ ಬಾಂಡೇಲಿಯ ಮಾರ್ಗವಾಗಿ ಕಾರವಾರದ ತನಕ ಉಗಿಬಂಡಿಯ ಮಾರ್ಗ ಬೇಕೆಂದು ಸರಕಾರಕ್ಕೆ ಬಿನ್ನವಿಸುವ ಗೊತ್ತುವಳಿಯೊಂದು ಕಳೆದ ರವಿವಾರ ಕೂಡಿದ ಇಲ್ಲಿಯ ನಗರಸಭೆಯ ಸಭೆಯಲ್ಲಿ ಸ್ವೀಕೃತವಾಗಿದೆ.

ಇಲ್ಲಿಯ ಮದ್ಯನಿರೋಧನ ಕಾರ್ಯಕರ್ತರಿಗೂ ಅಧಿಕಾರಿಗಳಿಗೂ ಒಂದು ಪೇಚು ಉಂಟಾಗಿದೆ. ಮದ್ಯಪಾನಿಯುಡದು ಕೊಡ ಕಳೆದ ತಿಂಗಳಿಂದ ನಮ್ಮ ಈ ಜಿಲ್ಲೆಯಲ್ಲಿ ಅಪರಾಧವೆಂದೆನಿಸಲ್ಪಡುತ್ತಿದೆ. ಆದರೆ ಇಲ್ಲಿಯ ಒಬ್ಬರಿಗೆ ೧೯೫೦ರ ತನಕವೂ ಸರಾಯ ಕುಡಿಯುವ ಪರವಾನೆ ಕೊಟ್ಟದ್ದುಂಟು. ಅವರಲ್ಲಿದ್ದ ಕಾನೂನ-ಸಮ್ಮತ ಸರಾಯ ಕುಡಿದು ಹೊರಬೀಳುವವರಿಗೆ ಅಪರಾಧಿಯೆಂದು ಎಣಿಸಬರುತ್ತದೋ ಹೇಗೆ ಎಂಬುದು ಒಂದು ಸಮಸ್ಯೆಯಾಗಿದೆಯಂತೆ. ಹೊಸ ಕಾಯಿದೆ ಬಂದ ನಂತರ ಸದರಿ ವ್ಯಾಪಾರಿಗೆ ಸರಾಯಿಯ ವ್ಯಾಪಾರದ ಬಗ್ಗೆ ಕೊಟ್ಟ ಹಳೆಯ ಪರವಾನೆ ರದ್ದಾಯಿತೆಂದು ಕೆಲವರ ವಾದವಂತೆ. ಅದು ರದ್ದಾಗಿಲ್ಲೆಂದು ಬೇರೆ ಕೆಲವರ ಪ್ರತಿವಾದ. ಮದ್ಯನಿರೋಧನಾಧಿಕಾರಿಗಳು ಈ ಬಗ್ಗೆ ಸರಕಾರದವರ ಅಭಿಪ್ರಾಯವನ್ನು ಕೇಳಿದ್ದಾರೆ.

ನೋಟೀಸು.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ ಲಿಮಿಟೆಡ್, ಕುಮಟಾ.

ಸನ್ ೧೯೪೩ನೇ ಇಸ್ವಿ ನವಂಬರ ತಾ. ೨೧ರಲ್ಲಿ ನಮ್ಮ ಬೇಂಕಿನಲ್ಲಿ ರಾ॥ ಕಾಗಾಲ ಗಂಗಾಧರ ನಾರಾಯಣ ಕಾನಭಾಗ ಇವರು ಸಾಧಾರಣ ೬ ತೊಲೆ ಚಿನ್ನದ ಬಾಜುಬಂದ ಒಂದನ್ನು ಅಡವಿಟ್ಟು ರೂ. ೨೫೦ನ್ನು ಪಡೆಕೊಂಡ ಸದರಿ ಹಣ ಮತ್ತು ಈ ವರೆಗೆ ಆಗುವ ೬ ಪಟ ೬ ತಿಂಗಳ ಬಡ್ಡಿಯ ಕೊಟ್ಟಿಲ್ಲಾದ್ದರಿಂದಲೂ, ಸದರಿಯವರಿಗೆ ರಜಿಸ್ಟ್ರ ನೋಟೀಸು ಕೊಟ್ಟಾಗ್ಯೂ ಕೂಡ ಅದು ತಲ್ಪಲಿಲ್ಲಾದ್ದರಿಂದಲೂ, ಅವರ ಈಗಿನ ಪತ್ತೆ ನಮಗೆ ಗೊತ್ತಿರುವದರಿಂದಲೂ, ಈ ಮೂಲಕ ತಿಳಿಸುವದೇನಂದರೆ ಈ ಪ್ರಕಟಣೆಯ ತಾರೀಖಿನಿಂದ ೧೫ ದಿನಗಳೊಳಗೆ ಸದರಿಯವರು ಅಸಲು-ಬಡ್ಡಿ ಸಂಪೂರ್ಣ ಹಣ ಪಾವತಿ ಕೊಟ್ಟು, ದಾಗಿನೆ ಪಡೆದುಕೊಳ್ಳಲು ತಪ್ಪಿದಲ್ಲಿ ತಾ. ೧೦-೮-೧೯೪೫ನೇ ಮಧ್ಯಾಹ್ನ ೩ ಘಂಟೆಗೆ ಸರಿಯಾಗಿ ಸದರಿ ದಾಗಿನೆಯನ್ನು ಬೇಂಕಿನ ಕಚೇರಿಯಲ್ಲಿ ಬೇಂಕಿಗೆ ಯುಕ್ತ ತೋರುವ ರೀತಿಯಲ್ಲಿ ಲಿಲಾವ ಮಾಡಲಾಗುವದು. ದಾಗಿನೆ ನಂಬರ 300/45 — ತಾ. ೨೧-೧೧-೧೯೪೩ ಅರ್ಜುನಾದ

ಕುಮಟಾ, ತಾ. ೨೩-೭-೪೫.

V. S. Shanbhag,
ಏಜಂಟ

ಜಿಲ್ಲಾ ಸಮಾಚಾರ.

ಮುಲ್ಲಾಪುರ— (ತಾ. ೧೨-೭-೪೯) [illegible]

[illegible]

ಮುಂಡಗೋಡ— (ತಾ. ೧೧-೭-೪೯) [illegible]

[illegible]

[illegible]— (ತಾ. ೦-೭-೪೯) [illegible]

[illegible]

(ಒಂದು ಪುಟದ ಮೇಲೆ ಮುಂದುವರಿದಿದೆ)

ಆಜ್ಞೆ.

ಕಾನಡಾ ಜಿಲ್ಲಾ ಮೆಜಿಸ್ಟ್ರೇಟರ ಕಚೇರಿ,

ಕಾರವಾರ, ತಾ. ೧೫-೭-೧೯೪೯.

[illegible]

(೧) [illegible]

(೨) ಜಿಲ್ಲಾ ಪೋಲೀಸ ಅಧಿಕಾರಿ

(೩) ಪೋಲೀಸ ಹೆಡ್ ಕ್ವಾರ್ಟರ

(೪) ಸಬ್-ಇನ್ಸಪೆಕ್ಟರ ದರ್ಜೆಯ ಯಾ ಅದಕ್ಕಿಂತ ಮೇಲ್ಪಟ್ಟ ದರ್ಜೆಯ ಅಬಕಾರಿ ಅಧಿಕಾರಿ

(೫) [illegible] ಇನ್ಸಪೆಕ್ಟರ ಜನರಲ್ [illegible] (Add. Asstt) [illegible] ಸಬ್ ಇನ್ಸಪೆಕ್ಟರ ದರ್ಜೆಯ ಯಾ ಅದಕ್ಕೂ ಹೆಚ್ಚಿನ ದರ್ಜೆಯ ಪೋಲೀಸ ಅಧಿಕಾರಿಗಳು — [illegible]

(೬) ರೀಜನಲ್-ಅಧಿಕಾರಿಗಳು (R. Os)

(೭) [illegible] (C. R. I.)

(೮) [illegible] (R. Is.)

(೯) [illegible] ಅಧಿಕಾರಿಗಳು.

(೧೦) ಜಿಲ್ಲಾ ಹಂಚಿಕೆ ಮೇಲ್ವಿಚಾರಕರು (D. D S)

(೧೧) [illegible] (S H K.s.)

M. Allahbaksh,

ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ.

BY THE REGIONAL TRANSPORT AUTHORITY, K R., BELGAUM.

NOTICE

In exercise of the powers vested in it under Section 19(1) of the M. V. Act, 1939, and Rule 88 (ii), the Regional Transport Authority, Karnatak Region, Belgaum, hereby brings to the notice of the persons concerned that it has decided to award deterrant punishment to the offenders in cases of overloading in passenger buses

All the drivers of Public Service Vehicles and the Conductors in Karnatak Region, are therfore warned that stringent publishment would be inflicted upon them against their Authorisation badges or Conductor's Badges, as the case may be, should they be noticed carrying an overload passenger buses, in excess of the seating capacity allowed by the Government from time to time

No 4351 /4-B/KR of 1949.

Regional Transport Office, K.R.,

Belgaum, 19th July, 1949

D K SUKHTANKAR, CAPT,

Secretary, Regional Transport Authority,

Karnatak Region, Belgaum.

ಮಹಸೀಯರೇ, ನಿಮ್ಮ ವಿಶ್ವಾಸಾರ್ಹ

ಚಿತ್ತರಂಜನ ಕಂಪನಿ, ತುಮಕೂರು ಇವರು

ಗಣಪತಿ ಹಬ್ಬಕ್ಕೆ ಬಹಳ ಉತ್ತಮ ತರದ **ಊದ ಬತ್ತಿ**ಗಳನ್ನು ತಯಾರಿಸಿರುತ್ತಾರೆ ಕ್ವಾಲಿಟಿ ನೀ ಬಂದು ಪೂರೈಸುತ್ತಾರೆ. ನವರೂ ಕೊಂಡು ಉಪಯೋಗಿಸಿ ನೋಡಿ ! ನಮ್ಮ ಹಿಂದೂ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ

[illegible]

ಸಿದ್ದಾಪುರ— [illegible]

[illegible]

[illegible]

ಭಟಕಳ— [illegible]

[illegible]

ಬೈಲೂರ— [illegible]

CIRCULAR

Subject:— Permission to carry excess Passengers in Stage Carriages,

The Government of Bombay have allowed the Stage Carriage Operators to carry an overload to the extent of 25% of the carrying capacity of the vehicle for the period of 3 months from the date of issue hereof subject to the following conditions—

1. The concession is confined to bona fide passengers desiring to board a bus at an intermediate station.

2 Such passengers will have to stand and their number should be limited by the standing room available, subject to the maximum of 25%

3 For the last bus (or in case of greater frequency of buses on a route, for the last two buses), the same concession may be made available even at the starting station, subject to the needs of the intermediate passengers being not neglected The operators of Stage Carriage Services are however required to pay the additional tax at this Office and get the Registration Certificates endorsed to that effect Failure to pay the additional tax within 15 days from the date of issue of this Circular as required under Rule 7 of the Bombay Motor Vehicles Tax Rules 1940, will entail imposition of penalty Insurance (additional) for passengers should also be produced at the time of payment of additional tax.

No 5034 4-7/KR of 1949,
Regional Transport Office K R,
Belgaum, 21st July, 1949

D K SUKHTANKAR, CAPT
Secy, Regional Transport Authority,
Karnatak Region, Belgaum

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ್ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಊರು ಹೊರಊರು ವರ್ಷಕ್ಕೆ ರೂ. ೬
ಅಂಚೆಯ ಆರು ತಿಂಗಳಿಗೆ ೩–೧–೦
ಮೂರು ತಿಂಗಳಿಗೆ ೧–೧೨–೦
ಬಿಡಿ ಸಂಚಿಕೆ ೦–೧–೦
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು

Reg. No. F. 1270. Monday, 1-8-1949.

ಕಾನಡಾವೃತ್ತ

ವರ್ಷ ೪೨] THE KANARA NEWS. [ಸಂಚಿಕೆ ೫

ಕುಮಟಾ:- ಸೋಮವಾರ, ತಾ. ೧—೮—೧೯೪೯.

ಜಾಹೀರಾತುಗಳ
೧೨ ಎಮ್ ಉದ್ದ ಸ್ತಂ
ಭದ ಸಾಲಿಗೆ ೮ ಆಣೆಯ
ವಿಶಿಷ್ಟ ಕಲ್ಲದೆ ದೀರ್ಘಕಾಲ
ಜಾಹೀರಾತುಗಳ ಬಗ್ಗೆ ಪತ್ರ
ವ್ಯವಹಾರ ಮಾಡಬೇಕು.

ವಿವಿಧ ವಿಷಯಗಳು

ಕಳೆದ ವರ್ಷದಂತೆ ಈ ವರ್ಷವೂ ಸರಕಾರದ ಕಡೆಯು ಸ್ವಾತಂತ್ರ್ಯ-ದಿನದ ಉತ್ಸವದ ಕಾಲಕ್ಕೆ ನಾಡಿ ನಲ್ಲೆಲ್ಲ ವೃಕ್ಷಾರೋಪಣದ ಕಾರ್ಯಕ್ರಮವನ್ನು ನಡೆಸಲು ನಿಶ್ಚಯಿಸಿ, ಈ ಕಾರ್ಯಕ್ರಮವನ್ನು ಅನುಸರಿಸಲು ಜನರಿಗೆ ಪ್ರೋತ್ಸಾಹ ಕೊಡುವದ ಕ್ಕಾಗಿ ಬಗೆಬಗೆಯ ಯೋಜನೆಗಳನ್ನು ಮಾಡಿರು ತ್ತಾರೆ ಮುಂಬಯಿ ಸರಕಾರವು ಕಳೆದ ವರ್ಷ ದಂತೆಯೇ ಪ್ರತಿ ಜಿಲ್ಲೆಯಲ್ಲಿ ವೃಕ್ಷಾರೋಪಣದ ಸ್ಪರ್ಧೆಯನ್ನು ನಡಿಸಿ, ಹೆಚ್ಚಿಗೆ ಗಿಡಮರಗಳನ್ನು ನೆಟ್ಟ ೩ ಗ್ರಾಮಗಳಿಗೆ ರೂ. ೨೦೦ ರದೊಂದು, ರೂ. ೧೦೦ ರದೊಂದು ಮತ್ತು ರೂ. ೫೦ರದೊಂದು ಹೀಗೆ ೩–೩ ಇನಾಮುಗಳನ್ನು ಕೊಡಲಾಗುವದೆಂ ದು ಜಾಹೀರಪಡಿಸಿದೆ. ಪ್ರಾಂತದಲ್ಲಿ ಈಗ ಹಿಂದಿನ ೧೯ ಜಿಲ್ಲೆಗಳಲ್ಲದೆ, ಇತ್ತೀಚೆಗೆ ಪ್ರಾಂತದಲ್ಲಿ ವಿಲಯ ಗೊಂಡ ಸಂಸ್ಥಾನಗಳ ಪ್ರದೇಶಗಳನ್ನು ಕೂಡಿಸಿ ರಚಿ ಸಿರುವ ಮೆಹಸಾನಾ, ಬನಾಸ ಕಾಂಠಾ, ಸಾಬರ ಕಾಂಠಾ, ಅಮ್ರೇಲಿ, ಬಡೋದಾ, ಸಾಂಗಲಿ ಮತ್ತು ಕೊಲ್ಹಾಪೂರ ಈ ಹೆಚ್ಚಿನ ೭ ಜಿಲ್ಲೆಗಳೂ ಇವೆ ಈ ೨೬ ಜಿಲ್ಲೆಗಳಲ್ಲಿ (ಪ್ರತಿ ಜಿಲ್ಲೆಗೆ ರೂ ೩೫೦ ರಂತೆ) ಮೇಲಿನಂತೆ ಇನಾಮುಗಳನ್ನು ಹಂಚಲು ರೂ. ೯೧೦೦ ತಗಲುವವು. ಈ ಹೊರತು ಬೃಹನ್-ಮುಂಬಯಿಯ ಯಾವದೊಂದು ಸಂಸ್ಥೆಗೆ ರೂ. ೫೦೦ರದೊಂದು ಇನಾಮು ಮತ್ತು ಡಾಂಗ ಜಿಲ್ಲೆ ಯ ಒಂದು ಹಳ್ಳಿಗೆ ರೂ. ೧೦೦ ರದೊಂದು ಇನಾ ಮು ಕೊಡಲ್ಪಡುವದು. ಇನಾಮುಗಳ ಯೋಜನೆ ಯ ಜೊತೆಗೆ, ಅಲ್ಲಲ್ಲಿಯ ಜನರಿಗೆ ಬೇಕಾಗುವ ಸಸಿಗಳನ್ನು ಬೇಸಾಯ ಇಲಾಖೆ ಇಲ್ಲವೆ ಜಂಗಲ ಇಲಾಖೆಯ ಮುಖಾಂತರ ಪೂರೈಸುವ ವ್ಯವಸ್ಥೆ ಯನ್ನೂ ಸರಕಾರದವರು ಮಾಡಿರುತ್ತಾರೆ.

ವೃಕ್ಷಾರೋಪಣೆಯ ಈ ಕಾರ್ಯಕ್ರಮವು ಒಂದು ದಿನದಲ್ಲಾಗುವಂತಿಲ್ಲ ಆದರಿಂದ ವೃಕ್ಷಾ ರೋಪಣೆಯ ಬಗ್ಗೆ ೧ ಸಪ್ತಾಹ, ೧ ಪಕ್ಷ ಅಥವಾ ೧ ಮಾಸವನ್ನು ನಿಶ್ಚಯಿಸಿ, ಆ ಅವಧಿ ಯಲ್ಲಿ ಈ ಕಾರ್ಯಕ್ರಮವನ್ನಾಚರಿಸತಕ್ಕದ್ದಿರುತ್ತದೆ ಅದರಂತೆ ಕೆಲವು ಕಡೆ ಜುಲೈಯ ತಾ. ೧೫ರಿಂದ ಅಗೋಸ್ತ ತಾ. ೧೫ರ ವರೆಗೆ ವೃಕ್ಷಾರೋಪಣ ಮಾಡುವ ಕಾರ್ಯಕ್ರಮವು ನಡೆದಿದೆ. ಕೆಲವು ಕಡೆ ಅಗೋಸ್ತ ತಿಂಗಳಲ್ಲೇ ಈ ಕಾರ್ಯಕ್ರಮ ಆಚರಿಸ ಬೇಕೆಂದು ಗೊತ್ತುಮಾಡಿದ್ದಾರೆ. ಬೇರೆ ಕೆಲವು ಕಡೆ ಅಗೋಸ್ತ ತಾ ೧೫ರಿಂದ ಮುಂದೆ ೧ ತಿಂಗಳು ಈ ಕಾರ್ಯಕ್ರಮವು ನಡೆಯುವದು ಸರಕಾರದವರ ಇನಾಮು ಪಡೆಯಲಿಕ್ಕೆ ಇಂತಹ ಅವಧಿಯಲ್ಲೇ ಅಥವಾ ಇಂತಿಷ್ಟು ಅವಧಿಯಲ್ಲೇ ಗಿಡಗಳನ್ನು ನೆಡ ಬೇಕು ಎಂಬ ನಿರ್ಬಂಧವಿಲ್ಲ. ಜಾಲೂ ಮಳೆಗಾಲ ದಲ್ಲಿ ನೆಟ್ಟ ಗಿಡಗಳಾದರಾಯಿತು. ಅವನ್ನೆಲ್ಲ ಎಣಿಸಿ ಸ್ಪರ್ಧೆಯಲ್ಲಿ ಗೆದ್ದವರಾರು ಎಂಬುದರ ನಿರ್ಣಯ ಮಾಡಲಾಗುವದು. ಎಣಿಕೆಯ ಕಾಲಕ್ಕೆ ನೆಟ್ಟ ಸಸಿಗಳು ಮಾತ್ರ ಬದುಕಿ ಉಳಿಯಬೇಕು

ನಮ್ಮಲ್ಲೂ ಈ ವೃಕ್ಷಾರೋಪಣದ ಸಂಭ್ರಮ ಹೋದ ವರ್ಷದಂತೆಯೇ ನಡೆಯುವದೆಂದು ಎಣಿಸಬಹುದು. ಆದರೆ ಸರಕಾರದವರ ಕಣ್ಣಿಗೆ ಬೀಳಬೇಕು ಅಥವಾ ಜನರಿಗೆ ಏನೋ ಸಂಭ್ರಮ ನಡೆದದೆಂದು ತೋರಿಸಿಕೊಳ್ಳಲು. ಈ ಸಂಭ್ರಮ ಗಳನ್ನು ನಡಿಸುವದು ಅಯುಕ್ತವಿರುತ್ತದೆ. ನಮಗೆ ಬೇಕಾದದ್ದು ಸಂಭ್ರಮವಲ್ಲ ಯಾ ಉತ್ಸವವಲ್ಲ! ನಮಗೆ ಕಾರ್ಯ ಬೇಕು ದೇಶದೊಳಗಿನ ವೃಕ್ಷ ಸಂಪತ್ತು ಸಾಕಷ್ಟಿಲ್ಲೆಂಬುದರಿಂದಲೇ ಹಿಂದುಸ್ಥಾನ ಸರಕಾರವು ಈ ಕಾರ್ಯಕ್ರಮಕ್ಕೆ ಮಹತ್ವ ಕೊಟ್ಟು ಅದನ್ನು ಪ್ರಚಾರಗೊಳಿಸಿದೆ. ಹಿಂದ ಸರ ಕಾರದ ಆ ಉದ್ದೇಶ ಸಫಲವಾಗಬೇಕಾದರೆ ನಾವು ಉತ್ಸವಕ್ಕೆ ಪ್ರಾಧಾನ್ಯ ಕೊಡದೆ ನಾವು ನೆಡುತ್ತಿರುವ ಗಿಡಗಳ ಸಂಖ್ಯೆಗೆ ಪ್ರಾಧಾನ್ಯ ಕೊಡ ಬೇಕು. ಕಳೆದ ವರ್ಷ ಬಹಳ ಕಡೆಗೆ ನಡೆದದ್ದು ಬರೇ ಗುಲ್ಲು ಅಥವಾ ತಮಾಷೆಯಾಗಿತ್ತೆಂದು ಧೈರ್ಯದಿಂದ ಹೇಳಬಹುದಾಗಿದೆ. ಅದರಿಂದಲೇ ಆಗ ನೆಟ್ಟ ಗಿಡಗಳಲ್ಲಿ ಅರ್ಧಕ್ಕಿಂತ ಹೆಚ್ಚು ಗಿಡಗಳು, ಕಾಲಾಂತರದಲ್ಲಿ ನಮಗೆ ಉರುವಲ ಪೂರೈಸುವ ಬದಲು ಕಳೆದ ಬೇಸಿಗೆಯಲ್ಲೇ ಪೂರೈಸಿ ಬಿಟ್ಟವು! ಇಂತಹ ಪ್ರಕಾರ ನಮಗೆ ಶೋಭಿ ಸುವದಿಲ್ಲ! ಸರಕಾರದವರ ಕಾರ್ಯಕ್ರಮದಲ್ಲಿ ನಮಗೆ ಶ್ರದ್ಧೆಯುಂಟಾಗದಿದ್ದರೆ ಅದನ್ನು ನಾವು ಅನುಸರಿಸುವದೇ ಬೇಡ. ಶ್ರದ್ಧೆಯುಂಟಾಗಿರುತ್ತಿ ದ್ದರೆ ಅದನ್ನು ನಾವು ಶ್ರದ್ಧೆಯಿಂದಲೂ ಆಸ್ಥೆಯಿಂ ದಲೂ ಆಚರಿಸಿ ಅದನ್ನು ಪೂರ್ಣ ಯಶಸ್ವಿಗೊ ಳಿಸಬೇಕು.

ವೃಕ್ಷಾರೋಪಣದ ಈ ಕಾರ್ಯಕ್ರಮದಲ್ಲಿ ಇಂತಹ ಜಾತಿಯ ಗಿಡಗಳನ್ನೇ ನೆಡಬೇಕೆಂದು ಸರಕಾರದವರ ನಿರ್ಬಂಧವಿಲ್ಲ. ಆದರೂ ಉಪಯುಕ್ತ ಗಿಡಗಳನ್ನು ನಾವು ನೆಡಬೇಕಾಗಿ ಸರಕಾರದ ಅಪೇ ಕ್ಷೆಯುಂಟೆಂದು ನಾವು ತಿಳಿಯತಕ್ಕದ್ದು. ನಿರ ಪಯೋಗಿ ಗಿಡಗಳನ್ನು ಜನರು ನೆಡಲಿಕ್ಕಿಲ್ಲೆಂ ತಿಳಿದೇ ಸರಕಾರವು ಈ ವಿಷಯದಲ್ಲಿ ಯಾ ನಿರ್ಬಂಧವನ್ನು ಹಾಕದೆ ಜನರಿಗೆ ಸ್ವಾತಂತ್ರ್ಯ ಕೊಟ್ಟಿರುತ್ತದೆ ಈ ಸ್ವಾತಂತ್ರ್ಯದ ಸದುಪಯೋಗ ಮಾಡಿ ನಾವು ನಮಗೂ ನಮ್ಮ ನಾಡಿಗೂ ಉ ಪಯುಕ್ತವಿರುವ ಗಿಡಗಳನ್ನೇ ವೃಕ್ಷಾರೋಪಣೆಯ ಈ ಕಾರ್ಯಕ್ಕಾಗಿ ಆರಿಸಬೇಕಾಗಿರುತ್ತದೆ ಈ ಸಂಬಂಧದಲ್ಲಿ ಕೆಲವು ಸೂಚನೆಗಳನ್ನು ಮಾಡು ವದು ಅನುಚಿತವಾಗಲಾರದು. (೧) ನಮ್ಮಲ್ಲಿ ತೆಂಗಿನ ಉತ್ಪನ್ನ ಸಾಕಷ್ಟಿರುವದಿಲ್ಲ ಅದನ್ನು ನಾವು ಬೆಳೆಸಬೇಕಾಗಿದೆ ಆದರಿಂದ ಕರಾವಳಿ ಪ್ರದೇ ಶದೊಳಗೆ ಶಕ್ಯವಿದ್ದಲ್ಲಿ ತೆಂಗಿನ ಸಸಿಗಳನ್ನು ನೆಡುವದುತ್ತಮ. (೨) ಹಿಂದೆ ನಮ್ಮಲ್ಲಿ ಹೊಸ ವಗೈರೆ ಎಣ್ಣೆಯ ಬೀಜ ಪೂರೈಸುವ ಮರಗಳ ವಿಪುಲವಾಗಿದ್ದವು ನಮ್ಮ ಅಜ್ಜ-ಮುತ್ತಜ್ಜರ ಕಾಲ ದಲ್ಲಿ ಕಲ್ಲೆಣ್ಣೆಯಿದ್ದಿಲ್ಲ ನಾಡಿನಲ್ಲಿ ಬೆಳೆಯುತ್ತಿದ್ದ ಹೊನ್ನೆ ಮರಗಳ ಬೀಜಗಳಿಂದಲೇ ಬೇಕಾದ ಎಣ್ಣೆಯನ್ನು ಪೂರೈಸಿಕೊಂಡು ಅವರು ಬೇಕಾದಷ್ಟು ಬೆಳಕು ಮಾಡಿಕೊಳ್ಳುತ್ತಿದ್ದರು. ನಾವು ಈಗ ಆ ಮರಗಳನ್ನೆಲ್ಲ ಕಳಕೊಂಡು ಹೊರನಾಡುಗಳಿಂದ ಬರುತ್ತಿರುವ ಕಲ್ಲೆಣ್ಣೆಯ ಮೇಲೆ ಅವಲಂಬಿಸಿ ಕೊಂಡಿದ್ದೇವೆ! ಆದರಿಂದಲೇ ನಾವೀಗ, ಕಲ್ಲೆ ಣ್ಣೆಯ ಸಾಕಷ್ಟು ದೊರೆಯುದ್ದರಿಂದ, ಕತ್ತಲೆ ಯಲ್ಲೇ ರಾತ್ರಿ ಕಳೆಯುವ ಪ್ರಸಂಗ ಬರುತ್ತಿದೆ! ಹಿರಿಯರಂತೆ ನಾವು ಎಣ್ಣೆಯ ಬೀಜಗಳನ್ನು ಪೂರೈಸುವ ಮರಗಳನ್ನು ವಿಪುಲವಾಗಿ ಬೆಳಸಿದ್ದರೆ ಎಣ್ಣೆಯ ಈ ಕಷ್ಟ ನಮಗೆ ಬರುತ್ತಿದ್ದಿಲ್ಲ ಇನ್ನಾದರೂ ಜಾಗೃತರಾಗಿ ನಾವು ಈ ಮರ ಗಳನ್ನು ಬೆಳಸುವಾ. ಸಮುದ್ರ ದಂಡೆಗುಂಟ ಉಸುಬಿನ ದಿನ್ನೆಗಳಲ್ಲಿ ಸಾವಿರಗಟ್ಟಲೆ ಹೊನ್ನೆ

FOR BANKING SERVICE
IN TRADE, INDUSTRY AND AGRICULTURE
APPROACH

The Agricultural & Industrial Bank, Ltd.,

(Established in 1934)

Head Office: **COONDAPOOR**, S Kanara.

Branches.

1. Ankola	7. Gokarn.	13 Nagar.
2 Belgaum.	8 Haveri	14. Shimoga.
3. Bhatkal	9. Hubli.	15 Sirsi
4. Coondapoor.	10 Karwar.	16. Somwarpet
5 Dharwar.	11 Kumta.	17. Virajpet
6 Gadag.	12. Mangalore.	18. Honavar.

19 BOMBAY. (384-M, Jaipuria House, Kalbadevi Road).

CURRENT, SAVINGS BANK AND FIXED DEPOSITS ARE ACCEPTED.

For terms, apply to the nearest Branch.

Coondapoor, 1st June. 1949

K. Vaman Shenai,
CHAIRMAN.

ಮರಗಳನ್ನು ಬೆಳೆಸಲು ಸಾಧ್ಯವುಂಟು (೩) ನಮ್ಮಲ್ಲಿ ಹಿಂದಿದ್ದಷ್ಟು ಮಾವಿನ ಮರಗಳು ಈಗ ಇರುವದಿಲ್ಲ. ಈ ೮—೧೦ ವರುಷಗಳಲ್ಲಿ ನಾವು ಯುದ್ಧಕಾರ್ಯಕ್ಕೆಂದಾಗಲಿ ಬೆಂಕಿಪೆಟ್ಟಿಗೆಯ ಕಾರಖಾನೆಗಳಿಗೆ ಬೇಕಾದ ಕಟ್ಟಿಗೆ ಪೂರೈಸಲಿಕ್ಕೆಂದಾಗಲಿ ಸಾವಿರ ಸಂಖ್ಯೆಯಲ್ಲಿ ಮಾವಿನ ಮರಗಳನ್ನು ಕಡಿದು ತೆಗೆದಿದ್ದೇವೆ! ಅದರಿಂದ ನಮ್ಮಲ್ಲಿ ಮಾವಿನ ಬೆಳೆ ಈಗ ಬಹಳ ಕಡಿಮೆಯಾಗಿದೆ ನಮ್ಮ ಕೈಯಿಂದ ಆದ ಈ ಹಾನಿಯನ್ನು ನಾವು ನಮ್ಮ ಮಕ್ಕಳಿಗೆ ತುಂಬಿಕೊಡಲು ಬದ್ಧರಾಗಿದ್ದೇವೆ. (೪) ಮರಗಳು ನಮಗೆ ಬಹಳ ಬಗೆಯಿಂದ ಉಪಕಾರ ಮಾಡಬಲ್ಲವು ನಮಗೆ ಅವು ಹಣ್ಣು ಹಂಪಲಗಳನ್ನು ಕೊಡಬಲ್ಲವು, ಎಣ್ಣೆಯ ಬೀಜಗಳನ್ನು ಪೂರೈಸಬಲ್ಲವು; ನಮ್ಮ ಹೊಲಹಿತ್ತಲುಗಳಿಗೆ ಬೇಕಾಗುವ ಗೊಬ್ಬರವನ್ನು ಪೂರೈಸಬಲ್ಲವು, ನೆರಳು ಕೊಡಬಲ್ಲವು, ಹವೆಯಲ್ಲಿ ತಂಪುಂಟು ಮಾಡಿ ಶೀತ ಹವೆಯನ್ನು ಒದಗಿಸಬಲ್ಲವು; ಇಮಾರತಿನ ಇಲ್ಲವೆ ಉರುವಲದ ಕಟ್ಟಿಗೆಯನ್ನು ಪೂರೈಸಬಲ್ಲವು. ಮೇಲಾಗಿ ಮಳೆಯ ಮಾನ ವೃಕ್ಷ-ಸಂಪತ್ತಿನ ಮೇಲೆ ಅವಲಂಬಿಸಿರುತ್ತದೆಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು. ವೃಕ್ಷ-ಸಂಪತ್ತು ಕಡಿಮೆಯಾದಲ್ಲಿ ಮಳೆಯ ಮಾನ ಕಡಿಮೆಯಾದ ಉದಾಹರಣೆಗಳಿವೆ. ಅದರಿಂದ ನಾವು ನಮ್ಮ ವೃಕ್ಷಸಂಪತ್ತನ್ನು ಯಾವಾಗಲೂ ಸುಸ್ಥಿತಿಯಲ್ಲಿಡಲು ದಕ್ಷರಾಗಿರಬೇಕು.

* * *

ನೇತಾಜಿ ಸುಭಾಸಚಂದ್ರ ಬೋಸರು ಇನ್ನೂ ಜೀವಂತರಿದ್ದಾರೆಂದೂ ಬೇಗನೇ ಅವರು ಮಾತೃಭೂಮಿಗೆ ಮರಳಿ ಬರುವರೆಂದೂ, ಕಳೆದ ವಾರ ದಾವಣಗೆರೆಯಲ್ಲಿ ಕೂಡಿದ ಕರ್ನಾಟಕ ಯುವಕ ಪರಿಷತ್ತಿನ ಅಧಿವೇಶನದ ಅಧ್ಯಕ್ಷತೆ ವಹಿಸಲು ದಾವಣಗೆರೆಗೆ ಬಂದಾಗ, ನೇತಾಜಿಯವರ ಅಣ್ಣಂದಿರಾದ ಶ್ರೀ| ಶರಚ್ಚಂದ್ರ ಬೋಸರು ಹೇಳಿದ್ದಾರೆ ೧೯೪೫ರ ಆಗೋಸ್ಟ ತಿಂಗಳಲ್ಲಿ ಜಪಾನಿಯರು ಯುದ್ಧ ನಿಲ್ಲಿಸಿ ಮಿತ್ರರಿಗೆ ಶರಣಾಗತರಾಗುವ ನಿಶ್ಚಯ ಮಾಡಿದ ಕೂಡಲೆ ನೇತಾಜಿಯವರು ಒಂದು ವಿಮಾನದಲ್ಲಿ ಕೂತು ಸಿಂಗಾಪುರದಿಂದ ಟೋಕಿಯೋಕ್ಕೆ ಹೋಗಹೊರಟಿದ್ದರೆಂತಲೂ ನಡುವೆ ಅವರ ವಿಮಾನಕ್ಕೆ ಅಪಘಾತವಾಗಿ ಅವರು ತೀರಿಕೊಂಡರೆಂದೂ ಸುದ್ದಿ ಬಂದಿತ್ತಷ್ಟೇ ಈ ವಿಮಾನದ ಅಪಘಾತ ಸ್ವತಃ ನೋಡಿದವರಾರೂ ಮುಂದೆ ಬಂದಿಲ್ಲ ಈ ಅಪಘಾತದ ಬಗ್ಗೆ ಸೂಕ್ಷ್ಮ ಚೌಕಶಿ ನಡಿಸಿದ ಅಮೇರಿಕೆಯ ಇಲ್ಲವೆ ಬ್ರಿಟಿಶ ಅಧಿಕಾರಿಗಳು ಅಪಘಾತದ ಕಥೆಯನ್ನೇ ನಂಬುವದಿಲ್ಲವಾಗಿ ಜಪಾನದಲ್ಲಿ ಸಂಚರಿಸಿ ಬಂದಿರುವ ಡಾ|| ರಾಧಾವಿನೋದ ಪಾಲರು ಹೇಳುತ್ತಾರೆ ವಿಮಾನದ ಅಪಘಾತದ ಕಥೆಯೇ ಹೀಗೆ ನಿರಾಧಾರವಿರುತ್ತಿದ್ದರೆ ಆ ನಿರಾಧಾರ ಅಪಘಾತದಲ್ಲಿ ನೇತಾಜಿಯವರು ಸಾಯುವದು ಎಂತು ಎಂದು ಶ್ರೀ|| ಶರಚ್ಚಂದ್ರ ಬೋಸರ ಪ್ರಶ್ನೆಯುಂಟು ನೇತಾಜಿಯವರು ಸ್ವಿಟ್ಝರ್ಲಂಡದಲ್ಲಿದ್ದಾರೆಂದೂ ಶರಚ್ಚಂದ್ರರ ಸಂಗಡ ಅವರು ಹಿಂದುಸ್ಥಾನಕ್ಕೆ ಬರುವರೆಂದೂ ನಡುವೆ ಒಂದು ಸುದ್ದಿ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು ಇತ್ತಲಾಗಿ ಇನ್ನೊಂದು ವಾರ್ತೆ ಹಬ್ಬಿದೆ. ಸುಭಾಸರು ಕಮ್ಯೂನಿಸ್ಟರ ಹಂತೆಯಲ್ಲಿರುವ ಚೀನದಲ್ಲಿದ್ದಾರೆಂದೂ ಹಿಂದುಸ್ಥಾನ ಸರಕಾರದ ಅಪ್ಪಣೆ ದೊರೆತರೆ ಅವರು ಮಾತೃಭೂಮಿಗೆ ಮರಳಿ ಬರುವರೆಂದೂ ಸುಭಾಸರ ಪುರೋಗಾಮಿ ಪಕ್ಷದವರು ಆ ವಾರ್ತೆಯನ್ನು ಹುಟ್ಟಿಸಿದ್ದಾರೆ ಅಂತೂ ನೇತಾಜಿ ಸುಭಾಸಚಂದ್ರರು ಒಂದು ಅದ್ಭುತ-ರಹಸ್ಯವಾಗಿ ಕೂತಿದ್ದಾರೆ! ೧೯೪೧ರಲ್ಲಿ ಅವರು ಅತಿ ರಹಸ್ಯವಾಗಿ ಭಾರತವನ್ನು ಬಿಟ್ಟು ಹಿಟ್ಲರನ ಜರ್ಮನಿಯಲ್ಲಿ ಪ್ರಕಟವಾಗಿದ್ದರು! ಅಷ್ಟೇ ರಹಸ್ಯವಾಗಿ ಅವರು ಪುನಃ ಭಾರತದಲ್ಲಿ ಪ್ರಕಟವಾದರೂ ಆಗಬಹುದು! ಅದು ಸಂಭವನೀಯವಲ್ಲೆಂದು ಹೇಳುವ ಧೈರ್ಯ ಯಾರಿಗುಂಟು? ಅತ್ಯಂತ ರಹಸ್ಯಮಯ ಸುಭಾಸರ ಸಂಬಂಧದಲ್ಲಿ ಯಾವದೇ ನಿಶ್ಚಯಾತ್ಮಕ ವಿಧಾನ ಮಾಡುವದು ಕಠಿಣ.

* * *

ಈ ಹಿಂದೆ ತಿಳಿಸಿದಂತೆ ಹೈದರಾಬಾದದೊಳಗಿನ ರಝಾಕಾರ ಪುಂಡರ ಶಿರೋಮಣಿಯಾಗಿರುವ ಕಾಶಿಮ ರಜವಿಯ ಮೇಲಿನ ಖಟ್ಲೆಯ ವಿಚಾರಕ್ಕೆ ಕಳೆದ ತಾ. ೨೮ನೇಗೆ ಹೈದರಾಬಾದದ ಹತ್ತಿರ ಇರುವ ತಿರುಮಲಗಿರಿ ಮಿಲಿಟರಿ ಆಸ್ಪತ್ರೆಯ ಕಟ್ಟಡದಲ್ಲಿ ಪ್ರಾರಂಭವಾಗಿದೆ. ಈ ಖಟ್ಲೆಯ ವಿಚಾರಣೆಗಾಗಿ ಮೂವರು ನ್ಯಾಯಾಧೀಶರದೊಂದು ವಿಶೇಷ ನ್ಯಾಯಮಂಡಳ ನೇಮಿಸಲ್ಪಟ್ಟಿದೆ ಈ ಮಂಡಳದಲ್ಲಿ ಮದ್ರಾಸಿನ ಸೆಶನ್ಸ ಜಜ್ಜ ರಾ|| ಜೀ. ಏ. ಪಿಂಟೋ (ಅಧ್ಯಕ್ಷರು), ಹೈದರಾಬಾದಿನ ಸೆಶನ್ಸ ಜಜ್ಜ ಮಿರ್ಜಾ ಅಹಮದ ಅಲಿಖಾನ ಮತ್ತು ನಿವೃತ್ತ ಜಾದಾ ಸೆಶನ್ಸ ಜಜ್ಜ ರಾ|| ಜಗನ್ನಾಥರಾವ ಇವರು ಇರುತ್ತಾರೆ

ಕಾಶಿಮ ರಝವಿಯ ಮೇಲೆ ಮೊದಲನೇ ಆರೋಪ "ಇಮ್ರೋಜ" ಪತ್ರಿಕೆಯ ಸಂಪಾದಕರಾಗಿದ್ದ ದಿವಂಗತ ಶೋಯಬುಲ್ಲಾಖಾನ ಇವರ ಕೊಲೆಗೆ ಪ್ರೋತ್ಸಾಹ ಕೊಟ್ಟದ್ದು ಮತ್ತು ಸಹಾಯ ಮಾಡಿದ್ದು ಎಂದಿರುತ್ತದೆ ಶೋಯಬುಲ್ಲಾಖಾನರು ಹಿಂದ-ಪಕ್ಷಪಾತಿ ರಾಷ್ಟ್ರೀಯ ಧೋರಣೆಯನ್ನು ಪುರಸ್ಕರಿಸುತ್ತಿದ್ದದರಿಂದ ಮತ್ತು ಅವರ ಪತ್ರಿಕೆಯೊಳಗಿನ ಪ್ರಚಾರವು ಕಾಶಿಮ ರಝವಿಯ ಸರ್ವಾಧಿಕಾರಿತ್ವದ ಧೋರಣೆಗೆ ಘಾತಕವಾಗಿದ್ದುದರಿಂದ ಅವರ ಮುಳ್ಳನ್ನು ತೆಗೆದು ಹಾಕುವದಕ್ಕಾಗಿ, ಕಾಶಿಮ ರಝವಿಯು ಈಗ ಈ ಖಟ್ಲೆಯಲ್ಲಿ ಮಾಫಿ ಸಾಕ್ಷಿದಾರನಾಗಿ ಮುಂದೆ ಬಂದಿರುವ ಖಾದರ ಮೋಹಿಯುದ್ದೀನ ಇವನಿಗೆ ತನ್ನ ವಿಶ್ವಾಸದಲ್ಲಿ ತಕ್ಕೊಂಡು, ಅವನಿಗೆ ಕೆಲವು ರಝಾಕಾರರ ಸಹಾಯದಿಂದ ಶೋಯಬುಲ್ಲಾಖಾನರ ಕೊಲೆ ಮಾಡಿಬಿಡಲು ಪ್ರೋತ್ಸಾಹ ಕೊಟ್ಟು, ಆ ಬಗ್ಗೆ ಪಿಸ್ತೂಲ ಮತ್ತು ಗುಂಡುಗಳನ್ನು ಪೂರೈಸಿದನೆಂದೂ, ಮುಂದೆ ಒಂದು ದಿನ ಮಧ್ಯರಾತ್ರಿ (ತಾ ೨೨-೮-೧೯೪೮) ಶೋಯಬುಲ್ಲಾಖಾನರು ತಮ್ಮ ಪತ್ರಿಕೆಯ ಕಚೇರಿಯಿಂದ ಹೊರಬಿದ್ದು ಮನೆಗೆ ಮರಳಿ ಹೋಗುತ್ತಿರುವಾಗ ೨ರಿಂದ ೫ನೇ ವರೆಗಿನ ಆರೋಪಿಗಳು ಅವರ ಮೈಮೇಲೆ ಬಿದ್ದು ಅವರಿಗೆ ಪ್ರಾಣಾಂತಿಕ ಗಾಯಗಳನ್ನು ಮಾಡಿದರೆಂದೂ, ಶೋಯಬುಲ್ಲಾಖಾನರು ಮುಂದೆ ಆಸ್ಪತ್ರೆಯಲ್ಲಿ ಮಡಿದರೆಂದೂ ಫಿರ್ಯಾದಿ ಪಕ್ಷದ ಹೇಳಿಕೆಯುಂಟು. ಮೇಲೆ ಹೇಳಿದ ೨-೩-೪-೫ನೇ ಆರೋಪಿಗಳಲ್ಲಿ ೨ ೫ನೇಯವರು ಮಾತ್ರ ಈಗ ಕಾಶಿಮ ರಝವಿ (೧ನೇ ಆರೋಪಿ) ಯ ಜೊತೆಗೆ ನ್ಯಾಯಾಲಯದಲ್ಲಿ ನಿಲ್ಲಿಸಲ್ಪಟ್ಟಿದ್ದಾರೆ, ೩-೪ನೇಯವರು ಫರಾರಿಯಾಗಿರುತ್ತಾರೆ. ರಝವಿಯ ವಿರುದ್ಧ ಬೀಬಿ ನಗರದಲ್ಲಿ ಕೊಳ್ಳಿ-ಸುಲಿಗೆಗಳನ್ನು ಮಾಡಿಸಿದ ಹಾಗೂ ಅಲ್ಲಂದ ಎಂಬಲ್ಲಿ ಕೊಲೆ ಮಾಡಿಸಿದ ಆರೋಪಗಳೂ ಇವೆ

ತಾ ೨೮ಕ್ಕೆ ಆರೋಪ-ಪತ್ರಿಕೆಯ ವಾಚನದ ಪ್ರಾರಂಭಿಕ ಕಾರ್ಯವಷ್ಟೇ ನಡೆಯಿತು ಕಾಶಿಮ ರಝವಿಯ ಪರವಾಗಿ ಬೆ|| ಅಸ್ಕರ ಯಾರಜಂಗ ಬಹಾದ್ದೂರ, ಸಯ್ಯದ ಬಕರ ಹುಸೇನ ಮತ್ತು ಮುಸ್ತಫಾ ಹುಸೇನ ಇವರು ವಕೀಲ-ಪತ್ರ ಹಾಜರಪಡಿಸಿದ್ದಾರೆ. (ಲಂಡನ್ನಿನ ಸುಪ್ರಸಿದ್ಧ ಬೆರಿಸ್ಟರರೊಬ್ಬರು ಬರುವರೆಂಬ ಸುದ್ದಿಯೂ ಉಂಟು ಈಗ ಈ ಬೆರಿಸ್ಟರರು ಕರಾಚಿಯಲ್ಲಿದ್ದಾರಂತೆ.) ೨-೫ನೇ ಆರೋಪಿತರು ವಕೀಲರನ್ನು ನೇಮಿಸಿರುವದಿಲ್ಲ ನ್ಯಾಯಾಲಯವೇ ಅವರನ್ನು ನೇಮಿಸಬೇಕಾಗಿದೆ. ಖಟ್ಲೆಯ ವಿಚಾರ ಯಾವ ಭಾಷೆಯಲ್ಲಿ ನಡೆಯತಕ್ಕದ್ದೆಂಬದೂ ಒಂದು ನಿರ್ಣಯ ಪ್ರಶ್ನೆಯುಂಟು. ಇಂದು ನ್ಯಾಯಾಲಯವು ಈ ಪ್ರಾಸ್ತಾವಿಕ ವಿಷಯಗಳನ್ನು ನಿರ್ಣಯಿಸಿ, ಬರುವ ಶನಿವಾರದಿಂದ ಖಟ್ಲೆಯ ಸುನಾವಣಿಗೆ ಆರಂಭ ಮಾಡುವದು ಈ ಖಟ್ಲೆಯಲ್ಲಿ ಫಿರ್ಯಾದಿ ಪಕ್ಷದ ೫೩ ಸಾಕ್ಷಿಗಾರರಿರುತ್ತಾರಂತೆ. ಫಿರ್ಯಾದಿ ಪಕ್ಷವನ್ನು ಮದ್ರಾಸಿನ ಸರಕಾರಿ ವಕೀಲ ಯತಿರಾಜ ಇವರು (ಹೈದರಾಬಾದಿನ ಸರಕಾರಿ ವಕೀಲ ರಾ|| ಶ್ರೀಖಂಡೇ ಇವರ ಸಹಾಯದಿಂದ) ಮಂಡಿಸುವರು. ತಾ ೬ರಿಂದ ಮುಂದೆ ಈ ಖಟ್ಲೆಯ ವಿಚಾರ ಪ್ರತಿನಿತ್ಯ ನಡೆಯಬೇಕೆಂದು ಗೊತ್ತಾಗಿದೆ.

* * *

ದಿಲ್ಲಿಯಲ್ಲಿ ಕೂಡಿದ ಕೊಂಗ್ರೆಸ ಕಾರ್ಯಕಾರಿ ಮಂಡಳವು ಪಶ್ಚಿಮ ಬಂಗಾಲ ಪ್ರಾಂತದ ಸಂಬಂಧದಲ್ಲೂ, ಮದ್ರಾಸ ಮಂತ್ರಿ ಮಂಡಳದೊಳ ಕೆಲವು ಮಂತ್ರಿಗಳ ವಿರುದ್ಧ ಬಂದಿರುವ ಆರೋ

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.

ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲಾಜಿಂಗ

ದಿ ಕೆನರಾ ಲಾಜ

[ಊಟ ಮತ್ತು ವಸತಿಗೃಹ]

ಮೋಟರ-ಸ್ಟ್ಯಾಂಡ, ಹುಬ್ಬಳ್ಳಿ.

ಮಾಲಕ: — ಮ್ಯಾಕಪ್ಪಾ ಶೆಟ್ಟಿ.

ಗಳ ಸಂಬಂಧದಲ್ಲೂ ೨ ವಿಸ್ತೃತ ಗೊತ್ತುವಳಿಗಳನ್ನು ಮಾಡಿದೆ. (೧) ಬಂಗಾಲದಲ್ಲಿ ಈಗಿನ ಶಾಸನ ಮಂಡಳಗಳಾಗಲಿ ಕೊಂಗ್ರೆಸ ಕಾರ್ಯಕಾರಿ ಮಂಡಳವಾಗಲಿ ಜನತೆಯ ನಿಜವಾದ ಪ್ರತಿನಿಧಿಗಳಾಗಿರುವದಿಲ್ಲೆಂದು ಕಂಡು ಬಂದಿರುವದರಿಂದ, ಇನ್ನು ೬ ತಿಂಗಳೊಳಗೆ ಪ್ರಾಂತದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು (೧೯೩೫ರ ಘಟನಾ-ಕಾನೂನಿನನ್ವಯ) ನಡಿಸಬೇಕೆಂದೂ, ಮಧ್ಯಂತರದಲ್ಲಿ ಪ್ರಾಂತದ ಕಾರಭಾರ ನಡಿಸಲು ದಕ್ಷ ಜನರಿಂದೊಡಗೂಡಿದ ನೂತನ ಮಂತ್ರಿಮಂಡಳವನ್ನು ನೇಮಿಸಬೇಕೆಂದೂ ಮಂಡಳವು ಅಲ್ಲಿಯ ಕೊಂಗ್ರೆಸ ಮಂತ್ರಿಮಂಡಳಕ್ಕೆ ಆಜ್ಞಾಪಿಸಿದೆ. ಅದೇ ರೀತಿ ಎಲ್ಲ ಪಕ್ಷ-ಪಂಗಡಗಳ ಜನರುಳ್ಳ ಪ್ರಾಂತಿಕ ಕೊಂಗ್ರೆಸ ಕಾರ್ಯಕಾರಿ ಮಂಡಳ ರಚಿಸಬೇಕೆಂದು ಅಲ್ಲಿಯ ಕೊಂಗ್ರೆಸ್ಸಿಗರಿಗೆ ವಿಧಿಸಿದೆ (೨) ಮದ್ರಾಸಿನ ಮಂತ್ರಿಗಳ ವಿರುದ್ಧ ಬಂದಿರುವ ಆರೋಪಗಳ ಪೂರ್ವ-ಪರ ಶೀಲನೆಯನ್ನು ಆ ಪ್ರಾಂತದ ಮುಖ್ಯ ಮಂತ್ರಿಗಳಾಗಿರುವ ಶ್ರೀ|| ಕುಮಾರಸ್ವಾಮಿ ರಾಜಾ ಇವರು, ಪಾರ್ಲಿಮೆಂಟರಿ ಪಕ್ಷದ ಮುಖಂಡರಾದ ಶ್ರೀ|| ಟಿ. ಪ್ರಕಾಶಂ ಇವರ ಸಹಾಯ ಮತ್ತು ಸಹಕಾರ ತೆಗೆದುಕೊಂಡು, ಮಾಡಬೇಕೆಂದೂ ಇದೇ ಬರುವ ಸೆ. ೧೫ರೊಳಗೆ ಕಾರ್ಯಕಾರಿ ಮಂಡಳಕ್ಕೆ ವರದಿಯನ್ನೊಪ್ಪಿಸಬೇಕೆಂದೂ, ಆ ವರದಿಯನ್ನು ಪರ್ಯಾಲೋಚಿಸಿ ಮುಂದಿನ ನಿರ್ಣಯವನ್ನು ಪಂ|| ನೆಹರು, ಸರದಾರ ಪಟೇಲ ಮತ್ತು ಡಾ|| ರಾಜೇಂದ್ರ ಪ್ರಸಾದ ಇವರು ಮಾಡಬೇಕೆಂದೂ ಕಾರ್ಯಕಾರಿ ಮಂಡಳವು ನಿರ್ಧರಿಸಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದಲ್ಲಿ ಪುನಃ ಮಳೆ ಕಡಿಮೆಯಾಗಿತ್ತು. ಆದರೆ ಮೊನ್ನೆ ಶನಿವಾರ ಬಹಳ ಮಳೆ ಬಿದ್ದಿದೆ. ಆದರಿಂದ ಅಘನಾಶಿನಿ ಹೊಳೆಗೆ ನೆರೆ ಬಂದಿದೆ. ಈವರೆಗೆ ಬಿದ್ದ ಒಟ್ಟು ಮಳೆ ೧೦೬ ಇಂಚು ಆಗಿರುತ್ತದೆ.

ಇದೇ ಶ್ರಾವಣ ಶುದ್ಧ ೧ ಶನಿ ಸೋಮವಾರದಂದು ಬರುತ್ತಿರುವ ಗ್ರಹಣವು ಕೆಲವು ಪಂಚಾಂಗಗಳಲ್ಲಿ ಮಾತ್ರ ಕೊಡಲಾಗಿದ್ದು, "ಅತ್ಯಲ್ಪತ್ವಾನ್ ..." ಎಂದು ಕೆಲವು ಪಂಚಾಂಗದೊಳಗಿನ ಹುಣ್ಣಿಮೆಯ ಉಪಾಕರ್ಮ ನಿರ್ಣಯವನ್ನು ತಿದ್ದಿಕೊಳ್ಳಬೇಕೆಂದೂ ಪಂಚಾಂಗಕರ್ತರು ಬಿನ್ನವಿಸುತ್ತಾರೆ.

ಸಿಧಾ ಅಂಗಡಿಗಳಲ್ಲಿ ಈಗ ಅಕ್ಕಿ ಗೋಧಿ (ಅಂದರೆ ತಲಾ ೨। ರತ್ತಲ) ಕೊಡಲಾರಂಭಿಸಿರುತ್ತಾರೆ. ಅಂಗಡಿಗಳಲ್ಲಿ ಸಿಗುವ ಜೋಳದಲ್ಲಿ ಬಹಳಷ್ಟು ಕಾಡು (ಕರಾಯು)ಯ ಭಕ್ಷ ಬೆರಸಿದ್ದು ಇರುತ್ತದೆಂದು ಕೇಳಿಬರುತ್ತದೆ. ಈ ವಿಷಯ ಬೇಗ ಜಾಚು ಎಲ್ಲಿ ಆಗಿದೆ ಎಂಬುದರ ಚೌಕಶಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡಬೇಕಾಗಿ ಅರಿಕೆಯುಂಟು.

ನಗರದಲ್ಲಿ ನಡೆಯುವಾಗ ಮೋಟಾರ ಬಂಡಿಗಳ ವೇಗ ತಾಸಿಗೆ ೮ ಮೈಲುಗಳಿಗಿಂತ ಕಡಿಮೆಯಾಗಬೇಕೆಂದು ಜಿಲ್ಹಾಧಿಕಾರಿ ಅಪ್ಪಣೆಯಾಗಿರುತ್ತದೆ ಅದರಂತೆ ಅಲ್ಲಲ್ಲಿ ಫಲಕಗಳೂ ಹಚ್ಚಲ್ಪಟ್ಟಿವೆ ಆದರೆ ಕೆಲವೊಂದು ಬಂಡಿಗಳು ಈ ಆಜ್ಞೆಯನ್ನು ಉಲ್ಲಂಘಿಸುತ್ತವಂತೆ. ವಿಶೇಷವಾಗಿ ಅಂಕೋಲಾ-ಕಾರವಾರ ಕಡೆಯಿಂದ ಬರುವ ಎಕ್ಸ್‌ಪ್ರೆಸ್ಸಿನ ಬಂಡಿಯು ವೇಗದಿಂದ ನಡೆಯುತ್ತದೆಂದು ಪ್ರಾಥಮಿಕ ಶಾಲಾ-ವಿದ್ಯಾರ್ಥಿಗಳು ದೂರುತ್ತಾರೆ. ಸಬ್‌ಜೈಲದ ಶಾಲೆಯ ವಿದ್ಯಾರ್ಥಿಗಳು ತಿರುಗುವ ಬಜಾರದ ಬೀದಿಯ ಈ ಬಾಡಿಗೆ ರಹದಾರಿಯುಂಟು ಮುಂಜಾನೆ ಶಾಲೆ ಬಿಡುವಾಗ ಈ ಬಂಡಿಯು ಅಂಚೆ ತಕ್ಕೊಂಡು ಶಾಲೆಗೆ ಹೊಂದಿರುವ ಅಂಚೆಕಟ್ಟೆಗೆ ಬರುತ್ತದೆ. ಸಂಜೆಯಲ್ಲಿ ಮಕ್ಕಳು ಶಾಲೆಗೆ ಬರುತ್ತಿರುವಾಗ ಕಟ್ಟೆಯಿಂದ ಹೊರ ಅಂಚೆ ತಕ್ಕೊಂಡು ಹೊರಡುತ್ತದೆ. ಬಂಡಿಯವರು ಜಾಗ್ರತೆ ಕೊಳ್ಳದಿದ್ದರೆ ಶಾಲೆಯ ಮಕ್ಕಳಿಗೆ ಅಪಾಯವಾಗುವ ಸಂಭವವುಂಟು. ಆದ್ದರಿಂದ ಅಂಚೆಕಟ್ಟೆಯಿಂದ ನೆಲ್ಲೀಕೇರಿಯ ಮೋಟಾರ ನಿಲ್ದಾಣದ ವರೆಗೆ ಈ ಬಂಡಿಯು ತಾಸಿಗೆ ೪-೫ ಮೈಲುಗಳಿಗಿಂತ ಹೆಚ್ಚಿಗೆ ವೇಗದಿಂದ ನಡೆಯಬಾರದೆಂದು ಕಟ್ಟುಮಾಡುವದೊಳಿತು.

ಕುಮಟೆಯಿಂದ ಸಂತೇಗುಳಿ ಸೀಮೆಗೆ ಹೋಗುವ ಬಜಾರದ ಮೇಲೆ ಕೆಲವು ಕಾಲಗಳ ದುರುಸ್ತಿಯಾಗಿಲ್ಲ. ಅಲ್ಲಲ್ಲಿ ಬಜಾರದ ಮೇಲೆ ಬಿದ್ದ ಮರಗಳು ಹಾಗೆಯೇ ಬಿದ್ದುಕೊಂಡಿವೆ ಅವನ್ನು ತೆಗೆಯುವ ವ್ಯವಸ್ಥೆ ಮಾಡಬೇಕಾದವರು ಎಲ್ಲಿದ್ದಾರೋ ದೇವರೇ ಬಲ್ಲನು! ಇದರಿಂದ ರಹದಾರಿಗೆ ಬಹಳ ತಪ್ಪುವಾಗುತ್ತದೆ. ಜಿಲ್ಹಾ ಲೋಕಲ್ ಬೋರ್ಡಿನ ಅಧ್ಯಕ್ಷರು ಇತ್ತ ತಮ್ಮ ಲಕ್ಷ್ಯವಿಡುವರೆ?

ಕಾನಡಾ ಜಿಲ್ಹೆಯ ಜಿಲ್ಹಾ ಮೆಜಿಸ್ಟ್ರೇಟರು ಹೊರಡಿಸಿದ

ಪತ್ರಿಕಾ-ಪ್ರಕಟನೆ.

ಅರಳೆ ಬಟ್ಟೆ ವ್ಯಾಪಾರದ ಪರವಾನೆ ಕೊಡುವ ಪದ್ಧತಿಯನ್ನು ಬೇಗನೆ ಸಡಿಲಿಸಲು ಸರಕಾರದವರು ನಿಶ್ಚಯಿಸಿದ್ದಾರೆ. ಆದ್ದರಿಂದ ಅರಿವೆಯ ವ್ಯಾಪಾರ ಮಾಡುವ ಜನರು ಚಿಲ್ಲರೆ ವ್ಯಾಪಾರ ಮಾಡಲಿಚ್ಛಿಸಿ ಅರ್ಜಿ ಮಾಡಿದಲ್ಲಿ ಅವರಿಗೆ ಚಿಲ್ಲರೆ ವ್ಯಾಪಾರದ ಬಗ್ಗೆ ಪರವಾನೆ ಕೊಡಲಾಗುವದು. ಈಗಿದ್ದ ಸರಕಾರ-ಮಾನ್ಯ ಚಿಲ್ಲರೆ ವ್ಯಾಪಾರಸ್ಥರಿಗೆ ಬೇಡಾದ ಉರುಟು ಮತ್ತು ಮಧ್ಯಮ ತರಗತಿಯ ಅರಿವೆಯನ್ನು ಈ ಹೊಸ ಪರವಾನೆದಾರರಿಗೆ ಕೊಡುವದೇ ಸರಕಾರದ ಧ್ಯೇಯವಿರುತ್ತದೆ. ಅರ್ಜಿ ಮಾಡಿದ ಯಾವತ್ತೂ ಜನರಿಗೆ ಕೆಳಗೆ ತೋರಿಸಿದ ಕರಾರುಗಳ ಮೇಲೆ ಪರವಾನೆ ಕೊಡಲಾಗುವದು:-

(೧) ಅರ್ಜಿ ಮಾಡುವವನು ಠೇವಣಿಯ ಪೂರೈಸಿರಬೇಕು.

(೨) ಪರವಾನೆಯ ಅವಧಿಯು ೧ ವರ್ಷದ್ದು ಇರುವದು.

(೩) ವರ್ಷದ ಪರವಾನೆಯ ಶುಲ್ಕ (ಫೀ) ರೂ. ೧೨|| ಇರುವದು.

(೪) ಈ ಪರವಾನೆ-ಧಾರಿಗಳಿಗೆ "ಸ್ಪೇಶಲ್ ರಿಟೇಲ ಡಿಸ್ಟ್ರಿಬ್ಯೂಟರ್ಸ" ಎಂದು ಕರೆಯಲಾಗುವದು.

(೫) ರೋಶ-ವ್ಯಾಪಾರಿಗಳ ಹಾಗೂ ಜಿಲ್ಹಾ ಹೋಲ-ವ್ಯಾಪಾರಿಗಳ ಹತ್ತರ ಹೆಚ್ಚು ಶಿಲ್ಕು ಇದ್ದ ಉರುಟು ಮತ್ತು ಮಧ್ಯಮ ತರಗತಿಯ ಅರಿವೆಯನ್ನು, ಪ್ರಾಂತಿಕ ಟೆಕ್ಸ್‌ಟಾಯಿಲ್ ಕಂಟ್ರೋಲರರು ಇಲ್ಲವೆ ಜಿಲ್ಹಾ ಮೆಜಿಸ್ಟ್ರೇಟರು ಆಗಿಂದಾಗ ಕೊಟ್ಟ ಆರ್ಡರಿನಂತೆ ನವೀ ಪರವಾನೆ-ಧಾರಿಗಳು ಮಾರಾಟ ಮಾಡಬೇಕಾಗುವದು.

(೬) ಸ್ಪೇಶಲ್ ಡಿಸ್ಟ್ರಿಬ್ಯೂಟರರು ಏನೂ ಆಕ್ಷೇಪವಿಲ್ಲದೆ ಮಾರಾಟ ಮಾಡಬಹುದೆಂದು ಪ್ರಾಂತಿಕ ಸರಕಾರವು ಬಿಟ್ಟುಕೊಟ್ಟ ತರಗತಿಯ ವಸ್ತ್ರವನ್ನು ಬಿಟ್ಟು, ಬೇರೆ ಜನಸು ಯಾ ಅತಿ ಸಣ್ಣ ಬಟ್ಟೆಯನ್ನು ಅವರಿಗೆ ಪೂರೈಸುವಂತಿಲ್ಲ.

(೭) ಹೊಸ ಪರವಾನೆಧಾರಿಗಳು ತಮ್ಮ ಆಟೋಟಪಾಲಿಯ ಮೇಲೆಯೇ ತಮ್ಮ ಅಂಗಡಿಯಲ್ಲಿ ಅರಿವೆ ಇಟ್ಟು ವಿಕ್ರಿ ಮಾಡಬೇಕಾಗುವದು. ೯೦ ದಿವಸಗಳ ವರೆಗೂ ವಿಕ್ರಿಯಾಗದೆ ಶಿಲ್ಕು ಉಳಿಯುವ ಇಲ್ಲವೆ ನಿಯಂತ್ರಣ ಹೋದ ಮೇಲೆ ಶಿಲ್ಕು ಉಳಿಯುವ ಬಟ್ಟೆಯನ್ನು ಸರಕಾರದವರು ತಿರುಗಿ ತಕ್ಕೊಳ್ಳಲಿಕ್ಕಿಲ್ಲ.

(೮) ಸರಕಾರದವರು ನೇಮಿಸಿಕೊಟ್ಟ ಮಂಜೂರ ಚಿಲ್ಲರೆ ದರದಿಂದ ಪರವಾನೆ-ಧಾರಿಗಳು ಬಟ್ಟೆಯನ್ನು ಜನರಿಗೆ ಮಾರಾಟ ಮಾಡಬೇಕಾಗುವದು ಅವರಿಗೆ ನೂರಕ್ಕೆ ೭॥ಯಷ್ಟು ಲಾಭಾಂಶ ಸಿಗುವದು, ಅವರಿಗೆ ಸಗಲ ಬರುವಾದ ಎಲ್ಲ ವೆಚ್ಚ ಹಿಡಿದು ಈ ಲಾಭದ ಮರ್ಯಾದೆಯನ್ನು ನಿರ್ಣಯಿಸಿಕೊಡಲಾಗಿದೆ. ಹೊಸ ಪರವಾನೆಧಾರಿಗಳು ಉರುಟು ಮತ್ತು ಮಧ್ಯಮ ತರಗತಿಯ ಬಟ್ಟೆಯನ್ನು ಜಿಲ್ಹಾ ಹೋಲ ಪರವಾನೆದಾರರಿಂದ ಗಿರಣಿ ಬೆಲೆಯ ಮೇಲೆ ನೂರಕ್ಕೆ ೫ ರಷ್ಟು ಬೆಲೆ ಕೊಟ್ಟು, ಹಾಗೂ ಜನಸು ಮತ್ತು ಅತಿ ಸಣ್ಣ ಬಟ್ಟೆಯನ್ನು ಗಿರಣಿ ಬೆಲೆಯ ಮೇಲೆ ನೂರಕ್ಕೆ ೧೨ಯಷ್ಟು ಬೆಲೆ ಕೊಟ್ಟು ಕೊಳ್ಳಬೇಕಾಗುವದು.

(೯) ಸ್ಪೇಶಲ್ ಚಿಲ್ಲರೆ ವ್ಯಾಪಾರಸ್ಥರು ತಮಗೆ ಕೊಡಲಾಗುವ ಬಟ್ಟೆಯ ಮೇಲೆ ಕೆಲಸ್ತಗಳನ್ನು ನಡಿಸಲು (processing) ಇಚ್ಛಿಸಿದ್ದಲ್ಲಿ ಅವರಿಗೆ ಅನುಮತಿ ಕೊಡಲಾಗುವದು. ಆದರೆ ಅಂಥ ಅರಿವೆಯನ್ನು ವಿಕ್ರಿ ಮಾಡುವ ಪೂರ್ವದಲ್ಲಿ ಹೊಸ ಕಾರಖಾನೆಯ ದರದ ಮುದ್ರೆಯನ್ನು ಹಾಕಿಸಬೇಕಾಗುವದು.

(೧೦) ವಿಕ್ರಿ ಮಾಡುವಾಗ ಪ್ರತಿಯೊಬ್ಬರಿಗೆ ಇಂತಿಷ್ಟೇ ಮಾರಬೇಕು ಇಲ್ಲವೆ ಸಿಧಾ-ಚೀಟಿಯ ಮೇಲೆ ಮಾರಬೇಕು ಎಂಬ ತರದ ನಿರ್ಬಂಧಗಳು ಇರುವದಿಲ್ಲ. ಪರವಾನೆ-ಧಾರಿಗಳು ಸಿಧಾ-ಚೀಟಿಯಿಲ್ಲದೆ ಬೇಕಾದವರಿಗೆ ಬೇಕಾದಷ್ಟು ಮಾರಾಟ ಮಾಡಬಹುದು.

(೧೧) ಇದರ ಬಗ್ಗೆ ಸರಕಾರದ ಕಡೆ ಯಾವದೇ ಠರಾವು ಮಾಡಬೇಕಾಗಿರುವದಿಲ್ಲ; ಯಾ ಮುಂಗಡ ಹಣ ಇಡಬೇಕಾದದ್ದು ಇರುವದಿಲ್ಲ.

(೧೨) ಈ ಅರಿವೆಯನ್ನು ಸರಕಾರ-ಮಾನ್ಯ ಚಿಲ್ಲರೆ ವ್ಯಾಪಾರಸ್ಥನಿಗೆ ವಿಕ್ರಿ ಮಾಡಬರುವದಿಲ್ಲ. ಆದರೆ ಒಬ್ಬ ಸ್ಪೇಶಲ್ ಚಿಲ್ಲರೆ ವ್ಯಾಪಾರಸ್ಥನು ಇನ್ನೊಬ್ಬ ಸ್ಪೇಶಲ್ ಚಿಲ್ಲರೆ ವ್ಯಾಪಾರಸ್ಥನಿಗೆ ಮಾರಾಟ ಮಾಡಬಹುದು ಆದರೆ ಅಂಥ ಅರಿವೆಯನ್ನು ಜನರಿಗೆ ಚಿಲ್ಲರೆ ದರಕ್ಕಿಂತ ಹೆಚ್ಚಿಗೆ ದರ ತಕ್ಕೊಂಡು ಮಾರಾಟ ಮಾಡಬರುವಂತಿಲ್ಲ.

(೧೩) ಅಂಥ ಪರವಾನೆ ಧಾರಿಗಳು ತಮಗೆ ಬೇಕಾದ ಬಟ್ಟೆಯನ್ನು ಸರಕಾರ-ಮಾನ್ಯ ಹೋಲ ವ್ಯಾಪಾರಸ್ಥರನ್ನು ಬಿಟ್ಟು, ಗಿರಣಿಯಿಂದ ಇಲ್ಲವೆ ಯಾವದೇ ವ್ಯಾಪಾರಸ್ಥನ ಕಡೆಯಿಂದ ಖರೀದಿ ಮಾಡಲು ಬರುವಂತಿಲ್ಲ.

(೧೪) ಹಳ್ಳಿ-ಪ್ರದೇಶದಲ್ಲಿ ಇಲ್ಲವೆ ಪಟ್ಟಣದಲ್ಲಿ ವ್ಯಾಪಾರಸ್ಥನು ಪ್ರತಿಯೊಂದು ಸಾರೆ ಕಾವು ಕಡಿಮೆಯೆಂದರೆ ೫ ಗಟ್ಟಿ ಖರೀದಿ ಮಾಡುತ್ತೇವೆಂತ ಬರೆದು ಕೊಟ್ಟ ಹೊರತು ಪರವಾನೆ ಸಿಗುವಂತಿಲ್ಲ. ನವರಿ ಪರವಾನೆ ಧಾರಿಗಳಿಗೆ ಖರೀದಿ ಮಾಡಲು ಬಿಟ್ಟುಕೊಟ್ಟ ಬಟ್ಟೆಯಲ್ಲಿ ತಮಗೆ ಬೇಕಾದಷ್ಟೇ ಬಟ್ಟೆ ತಕ್ಕೊಳ್ಳಲು ಬರುವಂತಿಲ್ಲ. ಆದರೆ ತಕ್ಕೆಗೆ ಗಂಟುಗಳನ್ನು ಬೇಡುವವರಿಗೆ ಶಿಲ್ಕು-ಸಂಗ್ರಹದ ಪರಿಸ್ಥಿತಿ ನೋಡಿ ತಕ್ಕವಷ್ಟು ಹೆಚ್ಚು ಗಂಟುಗಳನ್ನು ಕೊಡಲಾಗುವದು ತಾ ೨೮—೭—೪೯.

ನ ಈ ಮಾರ್ಗದ ಮೇಲೆ ಆಸ್ವಾದಿ ಪಂಕ್ತಿ ನೋಡಿ ಕೊಳ್ಳಬೇಕಾಗಿ ಸೂಚನೆಯಾದ

ಕುಮಟಾ-ಅಂಕೋಲಾ ಮಾರ್ಗದ ಕೆಲವು ಭಾಗಗಳಲ್ಲಿ (ಮಿರ್ಜಾನ-ಮಾದನಗೇರಿಗಳ ನಡುವೆ) ಈಗ ಖಡಿ ಹಾಕುವ ಕೆಲಸ ನಡೆದಿದೆ ಈ ಖಡಿ ಹಾಕುವ ನಮೂನೆ ಆಶ್ಚರ್ಯಕರವಿದೆ! ಖಡಿಯು ೨-೩ ಇಂಚುಗಳಷ್ಟು ಇರಬೇಕೆಂದೂ ಇರುತ್ತದೆಂದೂ ಜನಸಾಮಾನ್ಯರ ತಿಳುವಳಿಕೆಯುಂಟು ಆದರೆ ಈ ಭಾಗಗಳಲ್ಲಿ ಹಾಕುವ ಖಡಿಯು ಗುಂಡುಗಲ್ಲುಗಳಷ್ಟು ಗಾತ್ರವಿರುತ್ತದೆ ಆ ಗುಂಡುಗಲ್ಲುಗಳನ್ನೇ ಮಾರ್ಗದ ಮೇಲೆ ಹಾಸುತ್ತಾರೆ ಖಡಿ ಹಾಕುವಾಗ ಮಾರ್ಗವನ್ನು ೧ ೨ ಇಂಚು ಕೆತ್ತಿ ಕೊಂಡು ಖಡಿ ಹಾಸುವದು ಹಿಂದಿನಿಂದ ನಡೆದು ಬಂದ ಪರಿಪಾಠವಾಗಿರುತ್ತದೆ ಆದರೆ ಈ ಭಾಗಗಳಲ್ಲಿ ಹಾಗೇನೂ ಮಾಡದೆ ಇದ್ದ ಹಾಗೆಯೇ ಮೇಲೆಯೇ ಕಲ್ಲು ಹಾಸಿ ಬಿಡುತ್ತಾರೆ! ಈ ಕಲ್ಲುಗಳನ್ನು ಹಾಕುವಾಗ ಪುನಃ ಓಡಾಡುವ ಬಂಡಿ-ವಾಹನಗಳಿಗೆ ಮಾರ್ಗ ಬಿಟ್ಟು ಹಾಸುವದಿಲ್ಲ! ಇಡೀ ಮಾರ್ಗದ ಮೇಲೆ — ಎರಡೂ ಪಾರ್ಶ್ವಗಳಲ್ಲಿ ಒಮ್ಮೆಲೇ ಹಾಕುತ್ತಾರೆ! ಆದರಿಂದ ವಾಹನಗಳಿಗೆ ಬಹಳ ಕಷ್ಟವಾಗುತ್ತದೆ ಒಂದೆರಡು ದಿನ ಮಾತ್ರ ಕಷ್ಟವಾಗುತ್ತದ್ದರೆ ಕಳ್ಳರು ಪಾಪದ ಯಾರೊಬ್ಬರು ಸುಮ್ಮಗುಳಿಯಬಹುದು ಆದರೆ ಈ ಖಡಿ ಹಾಕುವ ಗುತ್ತಿಗೆ ಪಡೆದ ಗೃಹಸ್ಥನು ೪-೬ ಅಥವಾ ೮-೧೦ ಕೂಲಿಗಳನ್ನಷ್ಟೇ ಕೆಲಸಕ್ಕೆ ಹಚ್ಚಿರುವದರಿಂದ ಖಡಿಯು ಕೆಲಸ ವಾರಗಟ್ಟಲೆ ನಡೆಯುತ್ತದೆ! ಹಾಕಿದ ಖಡಿಯು ಮೇಲೆ ಪುನಃ "ರೋಲರ" ತಿರುಗಿಸುವದು ಬಹಳ ಕಡಿಮೆ! ಕಣ್ಣಿಗೆ ಮಣ್ಣು ಹಾಕಲು ಒಂದು ರೋಲರ ತಂದಿಟ್ಟಿದ್ದಾರಷ್ಟೇ ಅದರ ಉಪಯೋಗವಾದದ್ದು ತೋರಿಬರುವದಿಲ್ಲ! ಆದರೆ ಓಡಾಡುವ ಮೋಟಾರ ಬಂಡಿಗಳ ಭಾರದಿಂದ ಖಡಿಯು ರೋಲಿಂಗು ತನ್ನಷ್ಟಕ್ಕೆ ಸಾಗುವದೆಂದು ಗುತ್ತಿಗೆದಾರನ ಭಾವನೆಯಿರಬೇಕು! ಗುತ್ತಿಗೆದಾರನ ಕೆಲಸ ನೋಡಲು ಇಂಜನೀಯರರು ಆಗಾಗ ಬರುತ್ತಿದ್ದರೆ ಇವೆಲ್ಲ ಪ್ರಕಾರಗಳು ಅವರ ಕಣ್ಣಿಗೆ ಬೀಳುತ್ತಿದ್ದವು ಆದರೆ ಅವರು ಅತ್ತ ಸುಳಿಯುವದೇ ಇಲ್ಲವಂತೆ! ಇಂತಹ ಕಾರ್ಯ ಪದ್ಧತಿಯನ್ನು ಕಂಡೇ ಕೆಲವರು ಪಬ್ಲಿಕ್ ವರ್ಕ್ಸ ಖಾತೆಗೆ "ಪಬ್ಲಿಕ್ ವೇಸ್ಟ" ಖಾತೆಯೆಂದು ನಾಮಕರಣ ಮಾಡಿರಬಹುದು

ನೋಟೀಸು.

ಕಾನಡಾ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟರು ಈ ಮೂಲಕ ತಿಳಿಸುವದೇನೆಂದರೆ —

೧೯೪೯ನೇ ಇಸ್ವಿಯ ಮುಂಬಯಿ ಅರಲೆ ನೂಲಿನ ಪಾವಾಟದ ಆಜ್ಞೆಯನ್ವಯ ತಾ ೩೧-೭-೧೯೪೯ ನೇಗೆ ಮುಗಿಯುವ ತ್ರೈಮಾಸಿಕ ಅವಧಿಯ ನೂಲಿನ ಸಂಗ್ರಹದ ಮಾಹಿತಿ-ಪತ್ರಿಕೆಗಳನ್ನು ನೂಲಿನ ವ್ಯವಹಾರದ ಲೈಸನ್ಸು ಹೊಂದಿದವರು ತಾ ೧೦-೮-೧೯೪೯ರೊಳಗೆ ಕಳಿಸಿಕೊಡತಕ್ಕದ್ದು ಮಾಹಿತಿ ಪತ್ರಿಕೆಗಳು ಮೇಲೆ ಹೇಳಿದ ಆಜ್ಞೆಗೆ ಜೋಡಿಸಿದ ೫ನೇ ಮಾದರಿಯಲ್ಲಿ ಪ್ರೊವಿನ್ಸಿಯಲ್ ಟೆಕ್ಸ್‌ಟಾಯಿಲ್ ಕಂಟ್ರೋಲರ, ಮುಂಬಯಿ ಇವರಿಗೆ ಕಳಿಸಲ್ಪಡಬೇಕು ನಮೂನೆ ಮಾದರಿ (ಫಾರ್ಮ) ಯಲ್ಲಿ ಹೇಳಿರುವಂತೆ ಒಂಟಿ ಮತ್ತು ಜೋಡು ನೂಲಿನ ಬಗ್ಗೆ ಪ್ರತ್ಯೇಕವಾದ ಮಾಹಿತಿ ಪತ್ರಿಕೆಗಳನ್ನು ಕಳಿಸತಕ್ಕದ್ದು ಸದರಿ ಅವಧಿಯಲ್ಲಿ ಏನೂ ವ್ಯವಹಾರವಾಗಿರದಿದ್ದಲ್ಲಿ ಪರವಾನೆ-ಧಾರಕರು ನಿದಾರ ಪತ್ರಿಕೆ ಕಳಿಸಬೇಕು ಪ್ರತಿಯೊಂದು ನೂಲಿನ ವ್ಯಾಪಾರದ ಸ್ಥಾನವೆಯುಳ್ಳವರು ಮೇಲೆ ತಿಳಿಸಿದ ಅವಧಿಯೊಳಗಾಗಿ ತನ್ನ ಸಂಗ್ರಹದ ಮಾಹಿತಿಪತ್ರಿಕೆಯನ್ನು ಕಳಿಸತಕ್ಕದ್ದೆಂಬ [illegible]

ಕಾರವಾರ— (ತಾ ೨೭-೭-೪೯) ನಿನ್ನೆ ಜಿಲ್ಲಾಧಿಪರು ಪತ್ರಿಕಾ-ಪ್ರತಿನಿಧಿಗಳ ಸಭೆಯನ್ನು ಕರೆದು ಜಿಲ್ಲೆಯ ಆಹಾರ-ಪರಿಸ್ಥಿತಿಯನ್ನು ವಿವರಿಸಿದರು ಜಿಲ್ಲೆಯಲ್ಲೀಗ ೧೦೨೯೭ ಟನ್ನ ಅಕ್ಕಿ, ೬೪೬ ಟನ್ನ ಗೋದಿ ೬೪೦ ಟನ್ನ ಮಿಲೋ (ಜೋಳ) ಮತ್ತು ೩೪೦ ಟನ್ನ ಮಾಯು (ಅಂದರೆ ೧೨೩೨೨ ಟನ್ನ, ತಿಂಗಳಿಗೆ ಸರಾಸರಿ ೧೯೨೬ ಟನ್ನ ಹಂಚಲ್ಪಡುತ್ತಿದೆ ಆಹಾರಧಾನ್ಯ ಆದರಿಂದ ಶಿಲ್ಲಕ್ಕಿದ್ದ ಧಾನ್ಯ ಡಿಸೆಂಬರ ಕೊನೆಯ ವರೆಗೆ ಸಾಕಾಗುವಂತಿದೆ

ಈ ವರ್ಷ ಭತ್ತದ ಒಟ್ಟು ೬,೬೪,೪೬ ಬಂಗಾಲಿ ಮುಡಿಗಳಷ್ಟು (೨೪೬೦೯ ಟನ್ನ) ಆಗಿದೆ

ಈ ವರ್ಷ ೨೯೦೫ ಎಕರೆ ಸರಕಾರಿ ಪಡ ಭೂಮಿಯನ್ನು ಸಾಗುವಳಿಗೆ ಕೊಟ್ಟಿರುತ್ತಾರೆ ೯೮೬ ರೈತರಿಗೆ ರೂ ೨,೬೦೦೦ ತಗಾವಿ ಕೊಡಲಾಗಿದೆ

ಊರೊಳಗಿನ ಕಾಳಕಟ್ಟೆ ಮುಂತಾದವುಗಳನ್ನು ಗೊಬ್ಬರದ ಗುಂಡಿಗಳಲ್ಲಿ ಹಾಕಿಸಿ "ಕೊಂಪೋಸ್ಟ" ಗೊಬ್ಬರ ತಯಾರಿಸಲು ಕುಮಟಾ, ಶಿರಸಿ ಮತ್ತು ಹಳಿಯಾಳ ಮ್ಯುನ್ಸಿಪಾಲಿಟಿಗಳು ಒಪ್ಪಿಕೊಂಡಿವೆ ಕಾರವಾರ ಮ್ಯುನ್ಸಿಪಾಲಿಟಿಯವರು ಮಾತ್ರ ಕುಣಿಗಳನ್ನು ತೋಡಲು ಸ್ಥಳವಿಲ್ಲೆಂದು ಹೇಳುತ್ತಾರೆ ಮಾಡಿದ್ದಾರಂತೆ

೨-೩ ವರ್ಷಗಳ ಹಿಂದೆ ಜಿ ಲೋ ಬೋರ್ಡಿನವರು ರೂ ೧೩೦೦೦ ಖರ್ಚ ಮಾಡಿ ಸಂಪದನಗದ್ದಾ ಶಿರಸಿಗೆ ಮಾರ್ಗ ಕಟ್ಟಿಸಿದ್ದರೆ ಈ ಮಾರ್ಗ ಕಟ್ಟಿಸುವಲ್ಲಿ ಒಂದು ಪಾಲ್ಯವಿದೆ ಮಾರ್ಗ ಕಟ್ಟಿದ್ದರಿಂದ ಹಳ್ಳವು ಕಟ್ಟಿ ಗದ್ದೆಗಳಿಗೆ ನೀರು ಹೋಗಲು ದಾರಿಯಿಲ್ಲದಂತಾಗಿದೆ! ಇದರಿಂದ ಮಾರ್ಗ ಕಟ್ಟಿದ ಮೇಲೆ ಆ ಹೊಲದವರು ಯಾರೂ ಬೆಳೆ ಬೆಳೆಯದಂತಾಗಿದೆ ಈ ವರ್ಷ ಈ ಕಳ್ಳರು ಜಿಲ್ಲಾಧಿಪರ ವರೆಗೂ ಹೋಗಿ, ಅವರ ಆಜ್ಞೆಯಂತೆ ಮಾರ್ಗ ಕಡಿದು ನೀರು ಹೋಗಲಿಕ್ಕೆ ಒಂದು ತಾತ್ಪುರ್ತಿಕ ಕಾಲುವೆ ಮಾಡಿದ್ದಾರೆ ಆದರೆ ಮುಂದೆ ಕಾಯಂ ವ್ಯವಸ್ಥೆಯಾಗಲಿಲ್ಲ ಅದರಿಂದ ಈ ವರ್ಷ ಪುನಃ ನೀರು ನಿಂತರೆ ಆಗ ಮಾಡುವದೇನೆಂದು ಬೇರೆ ಅಧಿಕಾರಿಗಳು ಬಂದು ಪಳ್ಳವಿದ್ದಲ್ಲಿ ಪುನಃ ಒಂದು ಕಾಲುವೆ ಕಡಿಸಿ ಕೊಟ್ಟರು ಆದರೆ ರಸ್ತೆ ಕಟ್ಟಿಸಿಕೊಡುವ ಗುತ್ತಿಗೆ ಹಿಡಿದವರು ಈಗ ಆ ಕಾಲುವೆಯನ್ನು ಮುಚ್ಚಿಬಿಟ್ಟಿದ್ದಾರೆ! ಬೋರ್ಡಿಗೆ ತಾವು ರಸ್ತೆಯನ್ನು ಒಪ್ಪಿಸಿಕೊಟ್ಟಿಲ್ಲವೆಂದೂ ಅದರಲ್ಲಿ ಕಾಲುವೆ ಕಡಿಯಲಿಕ್ಕೆ ಬೋರ್ಡಿನ ಅಧಿಕಾರಿಗಳಿಗೆ ಅಧಿಕಾರವಿಲ್ಲೆಂದೂ ಅವರ ಅಂಬೋಣ! ಜಿಲ್ಲಾಧಿಪರು ಇದೇನು ಪ್ರಕರಣವೆಂದು ಚೌಕಶಿ ಮಾಡಿ ಜನರಿಗಾಗುವ ಕಷ್ಟ ಪರಿಹರಿಸಬೇಕಾಗಿ ಬೇಡಿಕೆಯಾಗಿದೆ

—R—

ಕಾನಡಾ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟರು ಈ ಮೂಲಕ ತಿಳಿಸುವದೇನೆಂದರೆ —

ಉರುಟು, ನಾಗೂ ಮಧ್ಯಮ ತರಗತಿಯ ಬಟ್ಟೆಯನ್ನು ಇಂತಿಷ್ಟೇ ಕೊಳ್ಳಬೇಕೆಂಬ ನಿರ್ಬಂಧವನ್ನು ತೆಗೆದಿಟ್ಟು ತೆಗೆದು ಹಾಕಬೇಕೆಂದು ಮುಂಬಯಿ ಸರಕಾರವು ನಿರ್ಧರಿಸಿದ್ದರಿಂದ, ಇನ್ನು ಮೇಲೆ ಗ್ರಾಹಕರು ಇಂಥ ಬಟ್ಟೆಯನ್ನು ಅಧಿಕೃತ ರಿಟೇಲರರಿಂದ ಬೇಕಾದಷ್ಟು ಕೊಂಡುಕೊಳ್ಳಬಹುದು ಆದರೆ ಇಂಥ ಕೊಳ್ಳುವಾಗ ಬಟ್ಟೆಯ ಸೀಳಾ ಕಾರ್ಡನ್ನು ಸಾದರ ಪಡಿಸಬೇಕಾಗುವದು ಉರುಟು ಮತ್ತು ಮಧ್ಯಮ ತರಗತಿಯ ಬಟ್ಟೆಯನ್ನು ಎಷ್ಟು ಮಾರಲಾಗಿದೆಯೆಂಬುದನ್ನು ಅಂಗಡಿಯವರು ಆ ಆ ಗ್ರಾಹಕರ ಬಟ್ಟೆಯ ಸೀಳಾ ಕಾರ್ಡಿನ ಮೇಲೆ ನಮೂದಿಸುವರು ಉರುಟು ಮತ್ತು ಮಧ್ಯಮ ತರಗತಿಯ ಬಟ್ಟೆಯ ಬಗ್ಗೆ ಕೊಡಲಾದ ಈ ಸವಲತ್ತುಗಳು ಬೇರೆಡೆ ಆಜ್ಞೆ ಹೊರಡುವ ವರೆಗೆ ಅಮಲಿನಲ್ಲಿರುವವು ತಾ ೨೭-೭-೪೯

ದಿ ಅಂಕೋಲಾ ಅರ್ಬನ್ ಕೋ-ಓಪರೇಟಿವ್ ಕ್ರೆಡಿಟ್ ಬೇಂಕ ಲಿ., ಅಂಕೋಲಾ.

ನೋಟೀಸು.

ಮೆನೇಜಿಂಗ ಕಮಿಟಿಯ ಮೆಂಬರಿಯ ಅರ್ಹತೆಯ ಬಗ್ಗೆ ಇರುವ ಶೇರುಗಳ ಪಾತ್ರತೆಯನ್ನು ಕಡಿಮೆಮಾಡುವದರ ಕುರಿತು ವಿಚಾರ ಮಾಡಲು ಬೇಂಕಿನ ಮೆಂಬರರು ರಿಕ್ವಿಝಿಶನ್ ಮಾಡಿರುವದರಿಂದ ಶುಕ್ರವಾರ ತಾ ೧೨-೮-೧೯೪೯ ನೇ ಸಾಯಂಕಾಲ ೫ ಘಂಟೆ ಸುಮಾರಿಗೆ ಬೇಂಕಿನ ಆಫೀಸಿನಲ್ಲಿ ಸ್ಪೇಶಲ್ ಜನರಲ್ ಮೀಟಿಂಗನ್ನು ಕರೆಯಬೇಕಾಗಿ ನಿಶ್ಚಯಿಸಿರುತ್ತದೆ ಕಾರಣ ಸರ್ವ ಬೇಂಕಿನ ಮೆಂಬರರು ಈ ಮೀಟಿಂಗಿಗೆ ಸಭೆಗೆ ಬರಬೇಕಾಗಿ ಅಪೇಕ್ಷಿಸುತ್ತೇನೆ ಹಾಗೂ ಸದ್ರಿ ದಿವಸ ಸಾಯಂಕಾಲ ಸಭೆ ದೆಸೆಯಿಂದ ಬೇಂಕಿನ ವ್ಯವಹಾರ ನಿಲ್ಲಿಸಲಾಗುವದು

ಅಂಕೋಲಾ, **R H Shetti,**

ತಾ ೩೧-೭-೧೯೪೯ Chairman

ಪತ್ರಿಕಾ-ಪ್ರಕಟನೆ.

ಕಾನಡಾ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟರು ಈ ಮೂಲಕ ಜಾಹೀರಪಡಿಸುವದೇನೆಂದರೆ — ಜನಗಳು ಉತ್ತಮ ತರಗತಿಯ ಬಟ್ಟೆಯನ್ನು ಇಂತಿಷ್ಟೇ ಕೊಳ್ಳಬೇಕೆಂಬ ನಿರ್ಬಂಧವನ್ನು ಸಡಿಲಿಸಿ ತೆಗೆದು ಹಾಕಿದೆಂದು ಮುಂಬಯಿ ಸರಕಾರವು ನಿರ್ಧರಿಸಿದ್ದರಿಂದ ಇನ್ನು ಮೇಲೆ ಗ್ರಾಹಕರು ಇಂಥ ಬಟ್ಟೆಯನ್ನು ಅಧಿಕೃತ ರಿಟೇಲರರಿಂದ ಬೇಕಾದಷ್ಟು ಕೊಂಡುಕೊಳ್ಳಬಹುದು ಆದರೆ ಈ ರೀತಿ ಕೊಳ್ಳುವಾಗ ಬಟ್ಟೆಯ ಸೀಳಾ ಕಾರ್ಡನ್ನು ಸಾದರಪಡಿಸಬೇಕಾಗುವದು ಜನಗಳು ಮತ್ತು ಜನಗಳು ತರಗತಿಯ ಬಟ್ಟೆಯನ್ನು ಎಷ್ಟು ಮಾರಲಾಗಿದೆಯೆಂಬುದನ್ನು ಅಂಗಡಿಯವರು ಆ ಗ್ರಾಹಕರ ಕಾರ್ಡಿನ ಮೇಲೆ ನಮೂದಿಸತಕ್ಕದ್ದು

ಈ ಸವಲತ್ತು ಬರೇ ೩ ತಿಂಗಳುಗಳ ಮಟ್ಟಿಗೆ ಕೊಟ್ಟಿದೆ ನಡುವೆ ಅವಶ್ಯ ಕಂಡರೆ ಸರಕಾರವು ಇದನ್ನು ಹಿಂತೆಗೆದುಕೊಳ್ಳಬಹುದು ಈ ಜಿಲ್ಲೆಯೊಳಗಿನ ಕೋಆಪರೇಟಿವ್ ಅಂಗಡಿಕಾರರ ಮೇಲಿನ ನಿರ್ಬಂಧವನ್ನು ಕಡಿಮೆ ಮಾಡಲಾಗಿದೆ ಕರಬೇಕು ಸದ್ಯ ಹೇಳಲಿ ಹಾಡಿದನ್ನು ಅವರು ಕಾಯ್ದುಕೊಳ್ಳುವದು

ತಾ ೨೯-೭-೧೯೪೯.

ಸ್ಥಿರಾಸ್ತಿಯ ಮೂಲಿ ಹಕ್ಕಿನ ಲಿಲಾಂವ.

ದ ಕ ಜಿಲ್ಲಾ ಕುಂದಾಪುರ ತಾಲೂಕ ಕೊಲ್ಲೂರ ಶ್ರೀ ಮೂಕಾಂಬಿಕಾ ದೇವಸ್ಥಾನದ ಮೂಲಿ ಹಕ್ಕಿನ ಬಾಬ್ತು ಉ ಕ ಜಿಲ್ಲಾ ಹೊನ್ನಾವರ ತಾಲೂಕ ಕಾಸರ [illegible] ಗ್ರಾಮದ ಸರ್ವೇ ನಂಬರ ೩೭೭, ೨೩೪, ೩೭೯ ಕೂಡಾ ೨ ಎಕರೆ, ೩೯ ಗುಂಟೆ ವಿಸ್ತೀರ್ಣದ ತೋಟ ಸ್ಥಳದ ಮೂಲಿ ಹಕ್ಕನ್ನು, ಮದ್ರಾಸ ಹಿಂದೂ ರಿಲೀಜಿಯಸ್ ಎಂಡೋಮೆಂಟ ಬೋರ್ಡಿನ O A 344/48 ನೇ ಪ್ರೊಸೀಡಿಂಗ್ಸನಲ್ಲಿ ಹುಟ್ಟಿದ ಹುಕುಮು ನಂಬರ ೭೬೪೯/ ತಾ ೨೦-೪-೪೯ರ ಪ್ರಕಾರ ಅಧಿಕಾರಗೊಳಿಸಲ್ಪಟ್ಟು, ಸದರ ದೇವಸ್ಥಾನದ ಎಕ್ಸಿಕ್ಯೂಟಿವ ಆಫೀಸರರು, ತಾ ೬-೯-೧೯೪೯ನೇ ದಿನ ಹಗಲು ಘಂಟೆ ೧೧ರಿಂದ ೧೨ರ ಸಮಯದಲ್ಲಿ, ಹೊನ್ನಾವರ ಟ್ರಾವಲರ್ಸ ಬಂಗಲೆಯಲ್ಲಿಯಾದರೆ, ಯಾ ಆ ದಿನ ಸೂಚಿಸಲ್ಪಡುವ ಬೇರೆ ಸಮೀಪದ ಸ್ಥಳದಲ್ಲಿ ಬಹಿರಂಗವಾಗಿ ಹರಾಜಿನಲ್ಲಿ ವಿಕ್ರಯ ಮಾಡುವರು.

ಹರಾಜಿನ ಶರ್ತುಗಳನ್ನು ಬೇರೆ ಮಾಹಿತಿಗಳನ್ನು ಕೆಳಗಿನ ವಿಳಾಸದಲ್ಲಿ ಪಡೆದುಕೊಳ್ಳಬಹುದು.

ಕೊಲ್ಲೂರ, ತಾ ೩೦-೭-೪೯. **Executive Officer,**

SRI MOOKAMBIKA TEMPLE P O KOLLUR S K

ಜಿಲ್ಲಾ ಸಮಾಚಾರ.

[illegible]

ಜಾಹೀರ ನೋಟೀಸು.

[illegible]

BY THE AREA RATIONING AUTHORITY, KARNATAK REGION, BELGAUM

NOTICE.

In view of the drastic cut imposed on the allotment of petrol quota, for the present quarter, all owners of motor vehicles in the Karnatak Region are hereby informed that Government has decided to impose a cut in the petrol ration already issued and that the petrol coupons or special receipts will not be valid for encashment from 1—8—1949 unless they are revalidated either by the Provincial Rationing Authority, Bombay or by the Area Rationing Authorities or by the District Magistrates in the Province. The owners are therefore requested to produce all the coupons or special receipts in their possession, together with Registration Certificate(s) and Permit(s) (in case of goods vehicles, taxi cabs and stage carriages) for revalidation which will commence from 29—7—1949 at the office of the undersigned and at the offices of the District Magistrates, Dharwar, Bijapur, Karwar, and Sangli. The work of revalidation in the offices of the District Magistrates, Dharwar, Bijapur, Karwar and Sangli will be done upto 7—8—1949. In case any motor owner is unable to get his coupons or special receipts duly revalidated by producing them in person or through his representative, he should arrange to send the same to this office by post.

2. It is brought to the notice of the public that in case of failure to produce petrol coupons proportionate to the scheduled cut to be imposed during the current quarter, the same will be recovered from the supplementary ration, if allowed, to the vehicle during the current quarter or from the petrol ration due to the vehicle, during October—December 1949 quarter.

No. P R O – 4639 of 1949
Area Rationing Office,
Belgaum 26th July, 1949

D K SUKHTANKAR, CAPT.
Area Rationing Authority,
Karnatak Region, Belgaum

THE BANK OF RURAL INDIA LTD.

(Incorporated in British India, Liability of Members limited)

HEAD OFFICE — "Satyabhama Bhavan", KARWAR. N K

Offices at .— KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR.

Authorised Capital , Rs. 10,00,000;
Subscribed Capital ,, Rs 5,00,000;
Paid-up Capital & Reserves ,, Rs. 5,08,502-8-0.

Rtes of Interest on Deposits.

Current a/c @ 1% p. a. *Savings Bank a/c @ 2½%.*

Fixed Deposits for 3 months @ 3% per annum.
,, ,, for 6 monnths @ 3½% ,,
,, ,, for 12 monhs or more @ 4% ,

All kinds of modern Banking business transacted

Karwar, 14-2-1948

P X GRACIOUS.
MANAGING DIRECTOR

ಕೊಠಡಿಯು ಕನ್ನಡ ಶಾಲೆಯಲ್ಲಿ ಈಗ ೮೫ ವಿದ್ಯಾರ್ಥಿಗಳಿದ್ದಾರೆ. ಮಕ್ಕಳ ಸಂಖ್ಯೆ ಇನ್ನೂ ಏರುತ್ತಿದೆ. ಆದರೆ ಈ ಮಕ್ಕಳಿಗೆ ಸಾಲುವಷ್ಟು ಸ್ಥಳ ಈಗ ಶಾಲೆ ನಡೆಯುತ್ತಿರುವ ಬಾಡಿಗೆಯ ಮನೆಯಲ್ಲಿ ಇಲ್ಲ. ಆದರಿಂದ ಸದ್ಯಕ್ಕೆ ಬಂದಿರುವ ಅಸಿಸ್ಟಂಟ ಶಿಕ್ಷಕರು ಗ್ರಾಮ ಪಂಚಾಯತಿ ಕಚೇರಿಯಲ್ಲಿ ಕೆಲವು ವರ್ಗಗಳನ್ನು ನಡೆಸುತ್ತಿದ್ದಾರೆ. ಆದರೆ ಪಂಚಾಯತಿಯವರು ಅಷ್ಟು ಕಚೇರಿಯನ್ನು ಶಾಲೆಗಾಗಿ ಎಷ್ಟು ದಿನ ಕೊಟ್ಟಾರು? ಹಿಂದೆ ಈ ಊರಲ್ಲಿ ಬೋರ್ಡಿನ ಮರಾಠಿಯ ಶಾಲೆ ನಡೆಯುತ್ತಿತ್ತು. ಅದು ೪-೫ ವರ್ಷಗಳ ಹಿಂದೆ ಮುರಿದು ಬಿತ್ತು. ಅಂದಿನಿಂದ ಬೋರ್ಡಿನವರು ಬಾಡಿಗೆ ಮನೆಯಲ್ಲಿ ಶಾಲೆ ನಡೆಸುತ್ತಿದ್ದಾರೆ! ಹೊಸ ಇಮಾರತು ಕಟ್ಟಿಸುವ ವ್ಯವಸ್ಥೆ ಮಾಡುವದಿಲ್ಲ! ಬಾಡಿಗೆ ಮನೆ ಸಿಗುವದು ಈಗ ಕಷ್ಟವಾಗಿದೆಂಬುದನ್ನು ನೋಡಿಯಾದರೂ ಬೋರ್ಡಿನವರು ಶಾಲೆ ಕಟ್ಟಿಸುವ ವ್ಯವಸ್ಥೆ ಮಾಡಬಾರದೇ?

ಸದ್ಯಕ್ಕೆ ಶ್ರೀ ಕ್ಷೇತ್ರ ಗೋಕರ್ಣದ ಯಾತ್ರೆಯನ್ನು ಮಾಡಿ ಬಂದ ಯಾತ್ರಿಕರೊಬ್ಬರು ಬರೆಯುತ್ತಾರೆ — ಶ್ರೀ ಮಹಾಬಲೇಶ್ವರ ದೇವಸ್ಥಾನದಲ್ಲಿ ಸರಿಯಾಗಿ ವ್ಯವಸ್ಥೆಯೇ ಕಂಡುಬರಲಿಲ್ಲ. ದೇವರ ಗರ್ಭಗುಡಿಯಲ್ಲಿ ಕತ್ತಲೆಯ ಸಾಮ್ರಾಜ್ಯ ನಡೆದಿದೆ! ಅದರಿಂದ ದೇವರನ್ನು ಕಾಣುವದು ಕಷ್ಟವಾಗಿದೆ! ಗರ್ಭಗುಡಿಯಲ್ಲಿ ೩ ಭದ್ರದೀಪಗಳಿವೆ. ಆದರೆ ಅವುಗಳಿಗೆ ಹೊನ್ನೆಣ್ಣೆಯನ್ನು ಹಾಕುತ್ತಾರೆ! ದೀಪದ ನೆಳಗೆ ಕೀಡ ಬಂದರೆ ಅದನ್ನು ಯಾರೂ ತೆಗೆಯುವದಿಲ್ಲ! ಅದರಿಂದ ಆ ದೀಪಗಳ ಬೆಳಕು ಅಷ್ಟಕ್ಕಷ್ಟೇ! ಹಿಂದೊಮ್ಮೆ ಗೋಕರ್ಣಕ್ಕೆ ಹೋದಾಗ ಶ್ರೀ ದೇವರ ಹಿಂಬದಿಯಲ್ಲಿ ಸುಮಾರು ೫೦-೬೦ (ಚಿಕ್ಕಗಳಂತೆ ತೋರುತ್ತಿದ್ದ) ನಂದಾದೀಪಗಳಿದ್ದವು. ಈ ಸಾರೆ ಅವು ದೃಷ್ಟಿಗೆ ಬೀಳಲಿಲ್ಲ! ಶ್ರೀ ಭದ್ರಕಾಳಿ ದೇವಸ್ಥಾನದಲ್ಲೂ ಈಗ ಅವ್ಯವಸ್ಥೆಯಾಗಿದೆ. ಮುಂಜಾನೆ ೮-೯ ಘಂಟೆಗೇ ಅರ್ಚಕರು ಮಧ್ಯಾಹ್ನದ ಮಹಾಪೂಜೆ ಮುಗಿಸಿ ಸಂಚಾರಕ್ಕೆ ಹೋಗುತ್ತಾರೆ! ೯ ಘಂಟೆಯ ನಂತರ ಯಾರಾದರೂ ದೇವರಲ್ಲಿ ಸೇವೆ ಮಾಡಲೆಂದು ಬಂದರೆ, "ಈಗ ಪೂಜೆಯಾಗಿ ಹೋಯಿತು, ನಾಳೆ ಬನ್ನಿ." ಎಂದು ಹೇಳುತ್ತಾರೆ! ಗೋಕರ್ಣದಂಥ ಮಹಾಕ್ಷೇತ್ರದಲ್ಲಿರುವ ಕ್ಷೇತ್ರದೇವತೆಗಳ ಮಂದಿರಗಳಲ್ಲಿ ಈ ತರದ ಅವ್ಯವಸ್ಥೆಯಾದರೆ ಜನರಲ್ಲಿ ಧಾರ್ಮಿಕತನದ ಅಭಿವೃದ್ಧಿಯಾಗುವದು ಹ್ಯಾಗೆ? ಇತ್ಯಾದಿ.

ಕಾರವಾರ— (ತಾ ೨೫-೬-೪೯) ಕಳೆದ ತಿಂಗಳಲ್ಲಾದ ಶಾಲಾ ಬೋರ್ಡಿನ ಚುನಾವಣೆಯಲ್ಲಿ ಮ್ಯುನಿಸಿಪಾಲಿಟಿಗಳ ಪರವಾಗಿ ಕಾರವಾರದ ವಕೀಲ ರಾ॥ ಕುಲಕರ್ಣಿ ಮತ್ತು ಶಿರಸಿಯ ವಕೀಲ ರಾ॥ ಗಣಪತಿ ಗಂಗೊಳ್ಳಿ ಇವರಿಬ್ಬರು ಆರಿಸಿಬಂದಿದ್ದರಷ್ಟೇ. ರಾ॥ ಕುಲಕರ್ಣಿಯವರಿಗೆ ಕಾರವಾರ ಮತ್ತು ಹಳಿಯಾಳ ಮ್ಯುನಿಗಳ ಕಡೆಯ ೮ ಮತಗಳು ದೊರಕಿದ್ದವು; ರಾ॥ ಗಂಗೊಳ್ಳಿಯವರಿಗೆ ಶಿರಸಿ ಮತ್ತು ಹೊನ್ನಾವರ ಮ್ಯುನಿಗಳ ೮ ಮತಗಳು ದೊರಕಿದ್ದವು. ಆದರೆ ಹೊನ್ನಾವರ ಮ್ಯುನಿಸಿಪಾಲಿಟಿಯವರು ಯಾವ ಹುರಿಯಾಳಿಗೆ ಮತ ಕೊಡಬೇಕೆಂಬುದರ ನಾಮನಿರ್ದೇಶವನ್ನು ಸ್ಪಷ್ಟ ಮಾಡದೆ "ತಮಗೆ ಇಷ್ಟ ಬಂದ ಹುರಿಯಾಳಿಗೆ ಮತ ಕೊಡಲು" ಅಧ್ಯಕ್ಷರಿಗೆ ಅಧಿಕಾರ ಕೊಟ್ಟು ಕಳಿಸಿದ್ದರು. ಹೀಗೆ ಮ್ಯುನಿಯವರು ತಮ್ಮ ಅಧಿಕಾರವನ್ನು ಬೇರೆಯವರಿಗೆ ಕೊಡುವಂತೆ ಬರುವದಿಲ್ಲೆಂದೂ, ಅಂಥ ಕಾನೂನ-ಬಾಹಿರ ಪ್ರತಿನಿಧಿತ್ವದ ಆಧಾರದಿಂದ ಹೊನ್ನಾವರ ನಗರಾಧ್ಯಕ್ಷರು ಕೊಟ್ಟ ಮತಗಳು ಅಸಿಂಧುವಾಗತಕ್ಕವೆಂದೂ, ಆ ಮತಗಳನ್ನು [illegible] ಬೋರ್ಡಿನ ಅಧ್ಯಕ್ಷರು ರದ್ದುಗೊಳಿಸಬೇಕಿತ್ತೆಂದೂ, ತಮ್ಮಂತೆ ಹಾಗೂ ಭಟಕಳದ ಮ್ಯುನಿಯ ಪ್ರತಿನಿಧಿಗಳಂತೆ ರಾ॥ ಗಂಗೊಳ್ಳಿಯವರಿಗೆ ಎರಡೇ (ಸಿಂಧು) ಮತಗಳು ಬಿದ್ದವೆಂದು ಅಧ್ಯಕ್ಷರು ತೀರ್ಮಾನಿಸಿ, (೮ ಮತಗಳನ್ನು ದೊರಕಿಸಿದ ರಾ॥ ಕುಲಕರ್ಣಿಯವರು ಒಂದು ಸ್ಥಳಕ್ಕೆ ನಿರ್ವಿವಾದ ಆರಿಸಿ ಬಂದಿದ್ದರಿಂದ) ಎರಡನೇ ಸ್ಥಳಕ್ಕಾಗಿ ತಮ್ಮ ಮೂವರ ಹೆಸರಲ್ಲಿ ಚೀಟಿಗಳನ್ನು ಹಾಕಿ ಲಾಟರಿ ತೆಗೆಯಬೇಕಿತ್ತೆಂದೂ ಪ್ರತಿಪಾದಿಸಿ, ಸೋತ ಹುರಿಯಾಳುಗಳಾಗಿರುವ ಕುಮಟೆಯ ರಾ॥ ಯಶವಂತ [illegible] ಇವರು ರಾ॥ ಗಂಗೊಳ್ಳಿಯವರ ಚುನಾವಣೆಯನ್ನು ರದ್ದುಗೊಳಿಸುವದಕ್ಕಾಗಿ, ಜಿಲ್ಲಾ ನ್ಯಾಯಾಧೀಶರ ಮುಂದೆ ಚುನಾವಣೆ ತಕ್ರಾರ ಅರ್ಜಿಯನ್ನು ದಾಖಲಮಾಡಿಸಿರುತ್ತಾರೆ.

ಅಂಕೋಲಾ— (ತಾ ೨೫-೬-೪೯) ಹಿಚಕಡ ಕನ್ನಡ ಶಾಲೆಯು ಕಳೆದ ತಾ. ೧೧ರಿಂದ ಮುಚ್ಚಲ್ಪಟ್ಟಿದೆಯಂತೆ! ಇನ್ನಿತರ ಊರುಗಳೊಳಗಿನ ಶಾಲೆಗಳಿಗೆ ಬೇಸಿಗೆಯ ಸೂಟಿ ಕೊಡುವಂತೆ ಈ ಶಾಲೆಗೆ ಮಳೆಗಾಲದ ಸೂಟಿ ಕೊಟ್ಟಿರಬಹುದೆಂದು ಭಾವಿಸುವಾ ಅಂದರೆ ಅದರ ಕಲ್ಪ ಅಸ್ಪದವಿಲ್ಲ. ಹುಡುಗರು ದಿನಾಲೂ ಶಾಲೆಗೆಂದು ಬರುತ್ತಾರೆ ಮತ್ತು ಬಾಗಿಲು ತೆರೆಯದ್ದನ್ನು ನೋಡಿ ಮನೆಗೆ ಹೋಗುತ್ತಾರೆ! ಸೂಟಿ ಕೊಟ್ಟಿದ್ದರೆ ಅವರು ಈ ರೀತಿ ಶಾಲೆಗೆ ಬರುತ್ತಿದ್ದಿಲ್ಲ. ಶಾಲಾ ಬೋರ್ಡಿನವರು ಈ ಶಾಲೆಯನ್ನು ರದ್ದುಗೊಳಿಸಿರುವರೇನು?

ಪತ್ರಿಕಾ-ಪ್ರಕಟನೆ.

ಮುಂಬಯಿ ಸರಕಾರದವರು ನೂಲಿನ ಚಿಲ್ಲರೆ ವ್ಯಾಪಾರಸ್ಥರಲ್ಲಿ ಸದ್ಯಕ್ಕೆ ಇದ್ದ ಸ್ಟಾಕ ಹಾಗೂ ಇನ್ನು ಮುಂದೆ ಅವರಿಗೆ ಕೊಡುವ ನೂಲು ಗ್ರಾಹಕರಿಗೆ ಎಕ್ಸ-ಮಿಲ್ ದರದ ಮೇಲೆ ಈಗ ಜಾರಿಯಲ್ಲಿದ್ದ ೧೧% ದರ ಕಡಿಮೆ ಮಾಡಿ ಇನ್ನು ಮುಂದೆ ೬½% ದಂತೆ ಸಿಗುವ ವ್ಯವಸ್ಥೆಯಾಗುವಂತೆ [illegible] ಈ ಹೊಸ ಹುಕುಮಿನನ್ವಯ ನೂಲಿನ ಬದಲಾವಣೆ ದರವು ಈ ಕೆಳಗಿನಂತಾಗುವದು:—

ಚಿಲ್ಲರೆ ವ್ಯಾಪಾರಸ್ಥರು ಎಕ್ಸ-ಮಿಲ್ ದರದಿಂದ ಗಿರಣಿಯಿಂದ ನೂಲನ್ನು ಕೊಳ್ಳುವರು ಮತ್ತು ಜಿಲ್ಲಾ ಚಿಲ್ಲರೆ ವ್ಯಾಪಾರಿಗಳಿಗೆ ಎಕ್ಸ-ಮಿಲ್ ದರದ ಮೇಲೆ ೪½% ಕ್ಕಿಂತ ಹೆಚ್ಚಿಗಿಲ್ಲದ ದರಕ್ಕೆ ಮಾರಾಟ ಮಾಡುವರು. ಜಿಲ್ಲಾ ಚಿಲ್ಲರೆ ವ್ಯಾಪಾರಿಗಳು ಚಿಲ್ಲರೆ ವ್ಯಾಪಾರಸ್ಥರಿಗೆ, ಗ್ರಾಹಕರಿಗೆ ಹಾಗೂ ೧೯೪೬ನೇ ಇಸ್ವಿಯ ಮುಂಬಯಿ ಹತ್ತಿ ನೂಲು ಮಾರಾಟ ನಿಯಂತ್ರಣದಾಜ್ಞೆಯ (Bombay Cotton Yarn Trade Regulation Order) ಪ್ರಕಾರ ಬರುವ ಲಾಯಸನ್ಸುದಾರರಿಗೆ (ಸರಕಾರ-ಮಾನ್ಯ ವ್ಯಾಪಾರಸ್ಥರ ಹೊರತಾಗಿ) ಎಕ್ಸ-ಮಿಲ್ ದರದ ಮೇಲೆ ೪½%ಕ್ಕಿಂತ ಮೀರದಷ್ಟು ದರಕ್ಕೆ ಮಾರಾಟ ಮಾಡುವರು. ಜಿಲ್ಲಾ ಚಿಲ್ಲರೆ ವ್ಯಾಪಾರಿಗಳು ಹಾಗೂ ಸರಕಾರ-ಮಾನ್ಯ ವ್ಯಾಪಾರಸ್ಥರ ಹೊರತಾಗಿ ಚಿಲ್ಲರೆ ವ್ಯಾಪಾರಸ್ಥರಿಗೆ, ಲಾಯಸನ್ಸುದಾರರಿಗೆ ಹಾಗೂ ಗ್ರಾಹಕರಿಗೆ ಎಕ್ಸ-ಮಿಲ್ ದರದ ಮೇಲೆ ೬½%ಕ್ಕಿಂತ ಮೀರದಷ್ಟು ದರಕ್ಕೆ ಮಾರುವರು. ಮೇಲೆ ಕಾಣಿಸಿದ ಮೂರೂ ತರಹದ ವ್ಯಾಪಾರಸ್ಥರು ಗ್ರಾಹಕರಿಗೆ ಎಕ್ಸ-ಮಿಲ್ ದರದ ಮೇಲೆ ೬½% ಕ್ಕಿಂತ ಮಿಕ್ಕದಷ್ಟು ದರಕ್ಕೆ ಮಾರುವರು.

ಈ ಹುಕುಮಿನಲ್ಲಿ ಮುಂಬಯಿ ಸರಕಾರದವರು ಸರಕಾರ-ಮಾನ್ಯ ವ್ಯಾಪಾರಿಗಳ ಹೊರತಾಗಿ ೧೯೪೬ನೇ ಇಸ್ವಿಯ ಮುಂಬಯಿ ಹತ್ತಿ ನೂಲು ನಿಯಂತ್ರಣದ ಪ್ರಕಾರ ಬರುವ ಲಾಯಸನ್ಸುದಾರರಿಗೆ ಎಕ್ಸ-ಮಿಲ್ ದರದ ಮೇಲೆ ೧೦% ದಂತೆ ಹೆಚ್ಚಿಗೆ ತೆಗೆದುಕೊಂಡು ಬೇರೆ ಲಾಯಸನ್ಸುದಾರರಿಗೆ ಹಾಗೂ ಗ್ರಾಹಕರಿಗೆ ಮಾರಾಟ ಮಾಡಲು ಅನುಮತಿ ಇತ್ತಿದ್ದಾರೆ. [illegible] ಲಾಯಸನ್ಸುದಾರರಿಗೆ ೬½% [illegible] ಗಿರಣಿಯಿಂದ [illegible] ಸರಕಾರದವರು [illegible] ಈ ಹೊಸ [illegible] ಮುಂದಿನ [illegible] ಬರುವದು.

(ಜಿಲ್ಹಾಧಿಕಾರ ಕಚೇರಿಯವರ ಪ್ರಕಟನೆ.)

ಪತ್ರಿಕಾ-ಪ್ರಕಟನೆ.

ಹಿಂದುಸ್ಥಾನದೊಳಗಿನ (ವಿಲೀನವಾದ ಸಂಸ್ಥಾನಗಳನ್ನೊಳಗೊಂಡು) ಪ್ರತಿಯೊಂದು ಗಿರಣಿಯವರು ಟೆಕ್ಸ್‌ಟಾಯ್ಲ ಕಮಿಶನರರು ಹೇರಿದ ಕೆಲವು ನಿರ್ಬಂಧಗಳಿಗೊಳಪಟ್ಟು, ನೂಲು ಬೇಕಾದವರಿಗೆ ತಮ್ಮ ಇಚ್ಛೆಯಂತೆ ಮಾರಲು ಟೆಕ್ಸ್‌ಟಾಯ್ಲ ಕಮಿಶನರರು ಅನುಮತಿ ಕೊಟ್ಟಿದ್ದಾರೆ. ಸೀಧಾ ಪದ್ಧತಿಗೊಳಪಟ್ಟ ಪ್ರದೇಶಗಳಲ್ಲಿ ಮಾತ್ರ ಸಂಬಂಧಪಟ್ಟ ಪ್ರಾವ್ಹಿನ್ಶಿಯಲ್ ಟೆಕ್ಸ್‌ಟಾಯ್ಲ ಕಂಟ್ರೋಲರ ಇವರ ಅನುಮತಿಯ ಹೊರತಾಗಿ ಮಿಲ್ಲ ಮಾಲೀಕರು ನೂಲನ್ನು ತಮ್ಮ ಮನ ಬಂದಂತೆ ಮಾರಾಟ ಮಾಡಲು ಬರುವದಿಲ್ಲ. ಆದರೆ ಪ್ರಾಂತಿಕ ಸ್ಕೀಮಿನಲ್ಲಿ ಶಿಲ್ಲಕ ಇಲ್ಲದ ಕೌಂಟಿನ ನೂಲನ್ನು, ನೂಲಿನ ಲಾಯಸನ್ಸದಾರರು ನೂಲಿನ ಎಕ್ಸ-ಮಿಲ್ಲ ದರದ ಮೇಲೆ ೬½% ದಂತೆ ಸರಕಾರಕ್ಕೆ ಜಮಾ ಮಾಡಲು ಕಬೂಲು ಇದ್ದಲ್ಲಿ ಅಂಥವರು ನೇರವಾಗಿ ಗಿರಣಿಯಿಂದ ನೂಲು ಖರೀದಿಸಲು ಪ್ರಾವ್ಹಿನ್ಶಿಯಲ್ ಟೆಕ್ಸ್‌ಟಾಯ್ಲ ಕಂಟ್ರೋಲರ, ಮುಂಬಯಿ ಇವರ ಆಕ್ಷೇಪವಿಲ್ಲ. ಮೇಲಿನ ನಿಯಮಗಳನ್ವಯ ನಡೆದು ನೂಲು ಖರೀದಿಸಲು ಇಚ್ಛಿಸುವ ಲಾಯಸನ್ಸದಾರರು ಪ್ರಾವ್ಹಿನ್ಶಿಯಲ್ ಟೆಕ್ಸ್‌ಟಾಯ್ಲ ಕಂಟ್ರೋಲರರವರಿಗೆ ಅರ್ಜಿ ಮಾಡಿಕೊಳ್ಳಬೇಕು. ಪ್ರಾವ್ಹಿನ್ಶಿಯಲ್ ಟೆಕ್ಸ್‌ಟಾಯ್ಲ ಕಂಟ್ರೋಲರರವರು ಅರ್ಜಿಗಳನ್ನು ಪರೀಕ್ಷಿಸಿ, ಲಾಯಸನ್ಸದಾರರು ನೂಲನ್ನು ಗಿರಣಿಯಿಂದ ಖರೀದಿಸಬಹುದೋ ಯಾ ಇಲ್ಲವೋ ಎಂಬ ಬಗ್ಗೆ ತಮ್ಮ ನಿರ್ಣಯವನ್ನು ತಿಳಿಸುವರು. ಪ್ರಾವ್ಹಿನ್ಶಿಯಲ್ ಟೆಕ್ಸ್‌ಟಾಯ್ಲ ಕಂಟ್ರೋಲರರು ಒಪ್ಪಿಕೊಂಡಲ್ಲಿ ಅವರು ಲಾಯಸನ್ಸದಾರರಿಗೆ ಎಕ್ಸ-ಮಿಲ್ ದರದ ಮೇಲೆ ೬½% ಸರಕಾರಕ್ಕೆ ಜಮಾ ಮಾಡಲು ತಿಳಿಸುವರು, ಹಾಗೂ ಜಮಾ ಮಾಡಿದ ಬಳಿಕ ಅವರಿಗೆ ಖರೀದಿ ಅಪ್ಪಣೆ ಕೊಡುವರು. ಹೀಗೆ ನೇರವಾಗಿ ಗಿರಣಿಯಿಂದ ಪ್ರಾವ್ಹಿನ್ಶಿಯಲ್ ಟೆಕ್ಸ್‌ಟಾಯ್ಲ ಕಂಟ್ರೋಲರರವರ ಖರೀದಿ-ಅಪ್ಪಣೆಯಂತೆ ನೂಲು ಖರೀದಿಸಿದವರು ಬೇರೆ ನೂಲಿನ ಲಾಯಸನ್ಸದಾರರಿಗೆ (ಸರಕಾರಮಾನ್ಯ ನೂಲಿನ ವ್ಯಾಪಾರಿ Approved distributor) ಬಿಟ್ಟು ಅಥವಾ ಗ್ರಾಹಕರಿಗೆ (consumers) ಎಕ್ಸ-ಮಿಲ್ ದರದ ಮೇಲೆ ೧೦% ದಂತೆ ಹೆಚ್ಚಿಗೆ ತೆಗೆದುಕೊಂಡು ಮಾರಾಟ ಮಾಡಬಹುದಾಗಿದೆ.

ಈ ಪ್ರಾಂತದಲ್ಲಿ ಸರಕಾರ-ಮಾನ್ಯ ನೂಲಿನ ವ್ಯಾಪಾರಿಗಳ ಹೊರತಾಗಿ ಉಳಿದ ಲಾಯಸನ್ಸದಾರರು, ಸರಕಾರಮಾನ್ಯ ಚಿಲ್ಲರೆ ವ್ಯಾಪಾರಿ, ಜಿಲ್ಲಾ ಚಿಲ್ಲರೆ ವ್ಯಾಪಾರಿ ಅಥವಾ ಚಿಲ್ಲರೆ ವ್ಯಾಪಾರಿಗಳಿಂದ ನೂಲನ್ನು ಇತರೇ ಎಕ್ಸ ಮಿಲ್ ದರದ ಮೇಲೆ ೬½% ಹೆಚ್ಚಿಗೆ ಕೊಟ್ಟು ಖರೀದಿಸಬಹುದು ಹಾಗೂ ಈ ಪ್ರಕಾರ ಖರೀದಿಸಿದ ನೂಲನ್ನು ಇತರೇ ಲಾಯಸನ್ಸದಾರರಿಗೆ (ಸರಕಾರಮಾನ್ಯ ನೂಲಿನ ವ್ಯಾಪಾರಿ ಬಿಟ್ಟು) ಯಾ ಗ್ರಾಹಕರಿಗೆ ಹೆಚ್ಚಿಗೆ ಅಂದರೆ ಎಕ್ಸ-ಮಿಲ್ ದರದ ಮೇಲೆ ೧೦% ಹೆಚ್ಚಿಗೆ ತೆಗೆದುಕೊಂಡು ಮಾರಾಟ ಮಾಡಬಹುದು.

ಮೇಲೆ ಕಾಣಿಸಿದ ನಿಯಮವು ಕೂಡಲೆ ಅಮಲಿನಲ್ಲಿ ಬರುವದು.

(ಜಿಲ್ಹಾಧಿಕಾರ ಕಚೇರಿಯವರ ಪ್ರಕಟನೆ)

ನಮ್ಮಲ್ಲಿ

ತಂಬಾಕು ವ್ಯಾಪಾರಿಗಳಿಗೆ ಬೇಕಾಗುವ ನೋಟ ಬುಕ್ಕುಗಳೂ, C B 3 ಫಾರ್ಮ ಪೇಡ, ಬೀಡಿಯ ಬುಕ್ಕುಗಳೂ, [illegible] ಬುಕ್ಕುಗಳೂ, ಶೀಘ್ರ ಲಂಗಡಗಳಿಗೆ ಬೇಕಾಗುವ [illegible] ಬುಕ್ಕುಗಳೂ ಸಿಗುತ್ತವೆ.

ಸ್ವತಂತ್ರ [illegible] ಪ್ರೆಸ್, ಕುಮಟಾ

ಇದನ್ನು ಪಾಂಡುರಂಗ ಕೃಷ್ಣ [illegible] (ಸಂಪಾದಕ) ಇವರು ಕುಮಟೆಯ ತಮ್ಮ "[illegible] ಪ್ರೆಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ರೂ. ೨|
ಅಂಚೆಯಿಂದ ವರ್ಷಕ್ಕೆ ೩-೧-೦
೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ „ ೦-೧-೦
ವಿ. ಪಿ. ಯಿಂದ ಕಳಿಸಿದರೆ
೬ ಆಣೆ ಹೆಚ್ಚಿಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು.

Reg. No. B. 1270. Monday, 8-8-1949.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೬.

ಕುಮಟಾ:- ಸೋಮವಾರ, ತಾ. ೮-೮-೧೯೪೯.

ಜಾಹೀರಾತುಗಳ ದರ
೧೫ ಎಮ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ನಿರ್ಣಯಿಸಲಾಗುವದು

ವಿಧ ವಿಷಯಗಳು

ಬ್ರಿಟಿಶ ಅರಸರ ಮುಖ್ಯ ಚಿತ್ರವುಳ್ಳ ಅಂಚೆ-ತಿಕೀಟುಗಳ ಬದಲು ಹಿಂದುಸ್ಥಾನ ಸರಕಾರವು ಹೊಸ ಅಂಚೆ ತಿಕೀಟುಗಳನ್ನು ತಯಾರಿಸಿದೆಂದು ಹಿಂದೆಯೇ ಓದುಗರಿಗೆ ತಿಳಿಸಿತ್ತು. ಕಳೆದ ಎಪ್ರಿಲ ತಿಂಗಳಲ್ಲೇ ಆ ತಿಕೀಟುಗಳು ಮಾರಾಟಕ್ಕೆ ಬರಲಿದ್ದವು; ಆದರೆ ನಡುವೆ ಏನೋ ಅಡಚಣೆಯಾದ್ದರಿಂದ ಅವು ಆಗ ಬಳಕೆಯಲ್ಲಿ ಬರಲಿಲ್ಲ. ಮುಂದಿನ ಸೋಮವಾರದ ಸ್ವಾತಂತ್ರ್ಯೋತ್ಸವದ ಕಾಲಕ್ಕೆ ಅವು ಬಳಕೆಯಲ್ಲಿ ಬರಲಿವೆ. ಈ ತಿಕೀಟುಗಳು ೧೬ ಪ್ರಕಾರದವು — ಬೇರೆ ಬೇರೆ ಬೆಲೆಯವು— ಇರುತ್ತವೆ. ಅದೇ ರೀತಿ ಆ ತಿಕೀಟುಗಳಲ್ಲಿ ಪ್ರಾಚೀನ, ಅರ್ವಾಚೀನ ಹಿಂದೀ ಕಲಾಕೌಶಲ್ಯದ ೧೬ ಚಿತ್ರಗಳು ಚಿತ್ರಿಸಲ್ಪಟ್ಟಿವೆ. ಬೇರೆ ಬೇರೆ ಬೆಲೆಯ ತಿಕೀಟುಗಳಲ್ಲಿ ಚಿತ್ರಿಸಲ್ಪಟ್ಟಿರುವ ಚಿತ್ರಗಳು ಮುಂದಿನಂತಿವೆ:— ೧ ಬಿಲ್ಲಿಯ ತಿಕೀಟುಗಳಲ್ಲಿ— ಅಜಂತಾ ಗವಿಯೊಳಗಿನ ಆನೆಯ ಕೆತ್ತಿಗೆಯುಳ್ಳ ಒಂದು ಚಿತ್ರ. ೨ ಬಿಲ್ಲಿಯ ತಿಕೀಟುಗಳಲ್ಲಿ— ಕೊಣಾರಕ ಕುದುರೆಯ ಚಿತ್ರ. ೩ ಬಿಲ್ಲಿಯ ತಿಕೀಟುಗಳಲ್ಲಿ— ತ್ರಿಮೂರ್ತಿಗಳ ಚಿತ್ರ. ೧ ಆಣೆಯ ತಿಕೀಟುಗಳಲ್ಲಿ— ಬೋಧಿಸತ್ವ (ಬುದ್ಧ)ನ ಚಿತ್ರ. ೨ ಆಣೆಯ ತಿಕೀಟುಗಳಲ್ಲಿ— ನಟರಾಜನ ಚಿತ್ರ. ೩ ಆಣೆಯ ತಿಕೀಟುಗಳಲ್ಲಿ— ಸಾಂಚಿಯೊಳಗಿನ ಸ್ತೂಪದ ಚಿತ್ರ. ೩|| ಆಣೆಯ ತಿಕೀಟುಗಳಲ್ಲಿ — ಬುದ್ಧಗಯೆಯೊಳಗಿನ ಮಂದಿರದ ಚಿತ್ರ. ೪ ಆಣೆಯ ತಿಕೀಟುಗಳಲ್ಲಿ— (ಒರಿಸಾ ಪ್ರಾಂತದೊಳಗಿನ) ಭುವನೇಶ್ವರ ಗುಡಿಯ ಚಿತ್ರ. ೮ ಆಣೆಯ ತಿಕೀಟುಗಳಲ್ಲಿ— ತಂಜಾವರ ಮಹಾದೇವ ಮಂದಿರದ ಚಿತ್ರ. ೬ ಆಣೆಯ ತಿಕೀಟುಗಳಲ್ಲಿ— ವಿಜಾಪುರದೊಳಗಿನ ಗೋಲ ಘುಮ್ಮಟದ ಚಿತ್ರ. ೧೪ ಆಣೆಗಳ ತಿಕೀಟುಗಳಲ್ಲಿ— (ಅಮೃತಸರದೊಳಗಿನ) ಶೀಖರ ಸುಪ್ರಸಿದ್ಧ ಸುವರ್ಣಮಂದಿರದ ಚಿತ್ರ. ೧ ರೂ.ಯ ತಿಕೀಟುಗಳಲ್ಲಿ— ಚಿತೋಡದೊಳಗಿನ ವಿಜಯಸ್ತಂಭದ ಚಿತ್ರ. ೨ ರೂ.ಗಳ ತಿಕೀಟುಗಳಲ್ಲಿ— ದಿಲ್ಲಿಯೊಳಗಿನ ಪ್ರಖ್ಯಾತ ಕೆಂಪು ಕೋಟೆಯ ಚಿತ್ರ. ೫ ರೂ. ಗಳ ತಿಕೀಟುಗಳಲ್ಲಿ— ಜಗತ್ಪ್ರಸಿದ್ಧ ತಾಜಮಹಾಲದ ಚಿತ್ರ. ೧೦ ರೂ. ಗಳ ತಿಕೀಟುಗಳಲ್ಲಿ— ದಿಲ್ಲಿಯೊಳಗಿನ ಕುತುಬ ಮಿನಾರದ ಚಿತ್ರ. ೧೫ ರೂ. ಗಳ ತಿಕೀಟುಗಳಲ್ಲಿ ಪಾಲಿಟಾನಾ ಹಳ್ಳಿಯ ಶತ್ರುಂಜಯ ದೇವರ ಗುಡಿಯ ಚಿತ್ರ.

ಇದಲ್ಲದೆ ಈ ವರ್ಷದ ಸ್ವಾತಂತ್ರ್ಯೋತ್ಸವದ ಪ್ರೀತ್ಯರ್ಥ, ಅನಂತ ಸೃಷ್ಟಿಯ "ಸ್ಥಿತಿಸ್ಥಾಪಕ ಮತ್ತು ಸಂರಕ್ಷಕ"ನಾಗಿರುವ ಶ್ರೀ ಮಹಾವಿಷ್ಣುವಿನ ಚಿತ್ರವುಳ್ಳ ವಿಶೇಷ ಅಂಚೆ-ಪಾಕೀಟುಗಳನ್ನೂ ಹಿಂದ ಸರಕಾರವು ಹೊರಡಿಸಿದೆ. ಇವು ಸ್ವಾತಂತ್ರ್ಯೋತ್ಸವದ ದಿನ ಅಂಚೆಕಟ್ಟೆಗಳಲ್ಲಿ ಸಿಗುವವು. ಹೊಸ ತಿಕೀಟುಗಳನ್ನು ಇವುಗಳ ಮೇಲೆ ಅಂಟಿಸಲಹುದು. ಸ್ವಾತಂತ್ರ್ಯೋತ್ಸವದ ಕಾಲಕ್ಕೆ ಅಂಚೆ-ತಿಕೀಟುಗಳನ್ನು ರದ್ದುಗೊಳಿಸಲಿಕ್ಕೆ ಸಹ ಒಂದು ವಿಶಿಷ್ಟ ಪದ್ಧತಿಯನ್ನು ಅನುಸರಿಸಲಾಗುವದು. ಎಲ್ಲೋರ ಗವಿಗಳೊಳಗಿನ ಕೈಲಾಸ ಮಂದಿರದ ಹಿಂಬದಿಗಿರುವ ಆನೆಯ ಮುಖದ ಚಿತ್ರವನ್ನೂ, ಅದರಡಿಯಲ್ಲಿ "ಸ್ವಾತಂತ್ರ್ಯ ದಿನ — ತಾ. ೧೫ ಅಗೋಸ್ತ ೧೯೪೯" ಎಂಬ ಅಂಕಿ-ಶಬ್ದಗಳನ್ನೂ ತಿಕೀಟುಗಳ ಮೇಲೆ ಒತ್ತಲಾಗುವದಂತೆ.

* *

ಅಖಿಲ ಭೂಮಂಡಲದೊಳಗಿನ ಸಮಸ್ತ ಜನಾಂಗಗಳ ಸಮಸ್ತ ಜನರ ಒಟ್ಟು ವಾರ್ಷಿಕ ಉತ್ಪನ್ನ ೫,೩೧೦೦೦ ಅಬ್ಜ ಡಾಲರ (ಅಮೇರಿಕೆಯ ನಾಣ್ಯವಿದು. ೧ ಡಾಲರ=ಸರಾಸರಿ ೪ ರೂ)ಗಳಷ್ಟು ಇರುತ್ತದೆಂದು ಜಾಗತಿಕ ಅಂಕಿಶಾಸ್ತ್ರಜ್ಞರು ಕಂಡುಹಿಡಿದಿರುತ್ತಾರೆ. ಅವರು ಮಾಡಿರುವ ಸಂಶೋಧನೆಯಲ್ಲಿ ಉತ್ತರ ಅಮೇರಿಕೆಯವರ (ಅಂದರೆ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳೆಂದು ಸಂಬೋಧಿಸಲ್ಪಡುವ ಮತ್ತು ಜನಸಾಮಾನ್ಯರು ಬರೇ ಅಮೇರಿಕೆಯೆಂದು ಕರೆಯುವ ರಾಷ್ಟ್ರ ಮತ್ತು ಅದರ ಉತ್ತರಕ್ಕೆ ಇರುವ ಕಾನಡಾ ಇವೆರಡು ದೇಶಗಳ ಜನರ) ಉತ್ಪನ್ನ ೨,೪೦,೦೦೦ ಅಬ್ಜ ಡಾಲರ (ಅಂದರೆ ಸಮಗ್ರ ಜಗತ್ತಿನ ಉತ್ಪನ್ನದ ೪೫% ಪಾಲು), ರಶಿಯಾ ಬಿಟ್ಟು ಇನ್ನುಳಿದ ಯುರೋಪ ಖಂಡದೊಳಗಿನ ಎಲ್ಲ ರಾಷ್ಟ್ರಗಳ ಒಟ್ಟು ಉತ್ಪನ್ನ ೧,೪೦,೦೦೦ ಅಬ್ಜ ಡಾಲರ, ಸೋವ್ಹಿಯಟ ರಶಿಯಾದವರ ಉತ್ಪನ್ನ ೫೦೦೦೦ ಅಬ್ಜ ಡಾಲರ, ಏಶಿಯಾ ಖಂಡದೊಳಗಿನ (ರಶಿಯಾ ಬಿಟ್ಟು) ರಾಷ್ಟ್ರಗಳ ಉತ್ಪನ್ನ ೫೮೦೦೦ ಅಬ್ಜ ಡಾಲರ, ದಕ್ಷಿಣ ಮತ್ತು ಮಧ್ಯ ಅಮೇರಿಕೆಯವರ ಉತ್ಪನ್ನ ೧೭೫೦೦ ಅಬ್ಜ ಡಾಲರ, ಆಫ್ರಿಕಾ ಖಂಡದವರ ಉತ್ಪನ್ನ ೧೫೦೦೦ ಡಾಲರ ಮತ್ತು ಆಸ್ಟ್ರೇಲಿಯಾ ವಗೈರೆ ಹಿಂದೀ ಮಹಾಸಾಗರದ ದಕ್ಷಿಣಕ್ಕಿರುವ ರಾಷ್ಟ್ರಗಳ ಉತ್ಪನ್ನ ೮೫೦೦ ಡಾಲರ ಇರುತ್ತದೆಂದು ಕಂಡುಬಂದಿದೆ. ಇದರ ಮೇಲಿಂದ ಉತ್ತರ ಅಮೇರಿಕೆ, ಯುರೋಪ ಮತ್ತು ರಶಿಯಾ ಇವುಗಳ ಉತ್ಪನ್ನವು ಒಟ್ಟು ಜಾಗತಿಕ ಉತ್ಪನ್ನದ ೮೦% ಇರುತ್ತದೆಂದೂ ಜಗತ್ತಿನ ಉಳಿದ ಎಲ್ಲ ಭಾಗಗಳ ಉತ್ಪನ್ನ ೨೦% ದಷ್ಟಿರುತ್ತದೆಂದೂ ಸ್ಪಷ್ಟವಾಗುತ್ತದೆ.

* *

ಕೆಲವಾರು ಸಣ್ಣ ದೊಡ್ಡ ಸಂಸ್ಥಾನಗಳು ಮುಂಬಯಿ ಪ್ರಾಂತದಲ್ಲಿ ವಿಲಯಗೊಂಡಿದ್ದರಿಂದ ಪ್ರಾಂತದ ವಿಸ್ತಾರವು ಈಗ ಹೆಚ್ಚಾಗಿದೆ. ನೂತನವಾಗಿ ಪ್ರಾಂತದಲ್ಲಿ ಸೇರಿರುವ ಭಾಗಗಳಿಗೂ ಪ್ರಾಂತಿಕ ಸರಕಾರದಲ್ಲಿ ಪ್ರಾತಿನಿಧ್ಯ ಕೊಡಲೋಸುಗ ಮುಂಬಯಿ ಸರಕಾರವು ಪ್ರಾಂತಿಕ ಮಂತ್ರಿಮಂಡಳವನ್ನು ವಿಸ್ತರಿಸಿ, ಇತ್ತಲಾಗಿ ಬಡೋದೆಯ ದಿವಾನರಾಗಿದ್ದ ಡಾ|| ಜೀವರಾಜ ಮೆಹತಾ ಮತ್ತು ಫಲಟಣ ಸಂಸ್ಥಾನದ ಸಂಸ್ಥಾನಿಕರಾಗಿದ್ದ ರಾಜಾ ಮಾಲೋಜಿರಾವ ನಿಂಬಾಳಕರ ಇವರಿಬ್ಬರನ್ನು ಮಂಡಳದಲ್ಲಿ ಸೇರಿಸಿಕೊಳ್ಳಲು ನಿಶ್ಚಯಿಸಿದೆ. ಈ ವಾರ ಈ ಹೊಸ ಮಂತ್ರಿಗಳ ಪ್ರತಿಜ್ಞಾವಿಧಿ ಜರಗುವದು. ಮಂತ್ರಿಮಂಡಳದ ಈ ವಿಸ್ತರಣೆಯ ಸುದ್ದಿ ಕೆಲವು ದಿನಗಳ ಹಿಂದೆ ಪ್ರಕಟವಾದ ಕೂಡಲೆ ಕರ್ನಾಟಕದ ಕೆಲವು ಪ್ರಮುಖರಿಗೆ ಮಂತ್ರಿತನದ ಆಶೆಯುಂಟಾಯಿತೆಂಬುದನ್ನು ಈ ಸಂದರ್ಭದಲ್ಲಿ ನಮೂದಿಸಬೇಕಾಗಿದೆ. ಸದ್ಯಕ್ಕಿರುವ ೧೦ ಜನ ಮಂತ್ರಿಗಳಲ್ಲಿ ಓರ್ವರೇ ಕನ್ನಡಿಗರಿದ್ದಾರೆ; ಕರ್ನಾಟಕಕ್ಕೆ ಯೋಗ್ಯ ಪ್ರಾತಿನಿಧ್ಯ ಸಿಕ್ಕಿಲ್ಲ; ಸದ್ಯಕ್ಕೇ ಆಗಲಿರುವ ವಿಸ್ತರಣೆಯಲ್ಲಾದರೂ ಕರ್ನಾಟಕಕ್ಕೆ ಯೋಗ್ಯ ಪ್ರಾತಿನಿಧ್ಯ (?) ಸಿಗುವಂತೆ ಮಾಡಬೇಕು; ಇಲ್ಲದಿದ್ದರೆ ಕರ್ನಾಟಕ-ತುಂಬ ಅಸಮಾಧಾನವೂ ಅಸಂತೋಷವೂ ಹಬ್ಬು

FOR BANKING SERVICE
IN TRADE, INDUSTRY AND AGRICULTURE
APPROACH

The Agricultural & Industrial Bank, Ltd.,

(Established in 1934)

Head Office. **COONDAPOOR,** S. Kanara.

Branches,

1 Ankola	7. Gokarn.	13 Nagar.
2. Belgaum.	8. Haveri.	14. Shimoga.
3. Bhatkal.	9. Hubli.	15. Sirsi.
4. Coondapoor.	10 Karwar.	16. Somwarpet
5. Dharwar.	11. Kumta.	17. Virajpet.
6. Gadag.	12. Mangalore.	18. Honavar.

19. BOMBAY. (384-M. Jaipuria House, Kalbadevi Road.).

CURRENT, SAVINGS BANK AND FIXED DEPOSITS ARE ACCEPTED.

For terms, apply to the nearest Branch.

Coondapoor, 1st June. 1949.

K. Vaman Shenai,
CHAIRMAN.

ವಷ, ಪರಿಸ್ಥಿತಿಯು ಕೈ ಮೀರಿಹೋಗುವದು, ಎಂದು ಮುಂತಾಗಿ ಈ ಅಧಿಕಾರಲೋಲುಪ ಮತ್ತು ಕರ್ನಾಟಕ ಪ್ರಾಂತೀಕರಣದ ಬಗ್ಗೆ ಹೆಣಗಾಡುವ ಮಹನೀಯರು ಮಾನ್ಯ ಖೇರರಿಗೆ ಹಲವಾರು ಕಡೆಯಿಂದ, ಹಲವಾರು ಸಂಸ್ಥೆಗಳ ಹೆಸರಲ್ಲಿ ತಂತಿಗಳನ್ನೂ ವಿನಂತಿ(ಬೆದರಿಕೆ !)-ಪತ್ರಗಳನ್ನೂ ಕಳಿಸಿ ಕೊಟ್ಟಿದ್ದರು। ಅಧಿಕಾರಲೋಲುಪತೆಯು ಈಗ ಯಾವ ಮಟ್ಟಕ್ಕೆ ಮುಟ್ಟಿದೆಂಬುದು ಈ ತಂತಿಗಳಿಂದ ಯಾರಿಗೂ ತಿಳಿಯುವಂತಿತ್ತು। ಕರ್ನಾಟಕೀಯರಿಗೆ ಇನ್ನೊಂದು ಇಲ್ಲವೆ ಇನ್ನೆರಡು ಮಂತ್ರಿಪದಗಳು ಸಿಕ್ಕ ಕೂಡಲೆ ಕರ್ನಾಟಕವೇನು ನಂದನವನವಾಗಲಾರದು. ಕರ್ನಾಟಕದ ಪರವಾಗಿ ಮಂತ್ರಿಮಂಡಳದಲ್ಲಿರುವ ಒಂದೇ ಒಂದು ವ್ಯಕ್ತಿಯು ಕೂಡ ಸಾಕಷ್ಟು ಪ್ರಭಾವಿಯೂ ಮೇಧಾವಿಯೂ ವಿಶಾಲದೃಷ್ಟಿಯೂ ಆಗಿರುತ್ತಿದ್ದರೆ ಅವನಿಂದಾಗುವಷ್ಟು ಪ್ರಯೋಜನ ನಾಲ್ಕಾರು ನಿಸ್ತೇಜ ಮತ್ತು ಅಸಮರ್ಥ ವ್ಯಕ್ತಿಗಳಿಂದ ಆಗಲಾರದೆಂಬುದನ್ನು ನಾವು ಮರೆಯುದಿರೋಣ. ನಮಗೆ ಬೇಕಾದುದು ಹೆಚ್ಚು ಮಂತ್ರಿಪದಗಳಲ್ಲ ನಮ್ಮ ಬೇಕು-ಬೇಡಗಳನ್ನು ಸರಕಾರದ ಮುಂದಿಟ್ಟು, ಅವನ್ನು ಕೃತಿಯಲ್ಲಿಳಿಸಿಕೊಳ್ಳುವ ಪ್ರತಿಭಾವಂತರು. ನಮಗೆ ಬೇಕು ಕರ್ನಾಟಕದ ಪರವಾಗಿ ಸದ್ಯಕ್ಕೆ ಕಾನೂನಮಂಡಳಗಳಲ್ಲಿ ಸ್ಥಾನ ದೊರಕಿಸುವ ಜನರಲ್ಲಿ ಇಂತಹ ಪ್ರತಿಭಾವಂತರಾರೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಂತ್ರಿಮಂಡಳದೊಳಗೆ ಕರ್ನಾಟಕಕ್ಕೆ ಇನ್ನೂ ೧-೨ ಪದಗಳು ಸಿಕ್ಕಿ ಪ್ರಯೋಜನವೇನಾಗಬಲ್ಲದು?

•••

ವಿಲಾಯತಿಯವರು ತಮ್ಮ ಆಹಾರದ ಬಗ್ಗೆ ಯಾವಾಗಲೂ ಪರಾವಲಂಬಿಗಳಿರುತ್ತಾರೆ. ಅವರಿಗೆ ಬೇಕಾಗುವ ಆಹಾರದ ಅರ್ಧದಷ್ಟು ಆಹಾರ ಸಹ ಅವರ ದೇಶದಲ್ಲಿ ಬೆಳೆಯುವದಿಲ್ಲ. ವಿದೇಶಗಳಿಂದಲೇ ಅವರ ಆಹಾರದ ಪೂರೈಕೆಯಾಗುತ್ತಿದೆ. ಕಳೆದ ಮಹಾಯುದ್ಧದ ಕಾಲದಲ್ಲಿ ಜರ್ಮನರು ವಿಲಾಯತಿಯ ಸಮುದ್ರ-ಮಾರ್ಗಗಳಲ್ಲಿ ಜಲಾಂತರ್ಗಾಮಿ ಹಡಗಗಳ ಜಾಲವನ್ನು ಒಡ್ಡಿ, ಆಹಾರ ತುಂಬಿ ವಿಲಾಯತಿಗೆ ಬರುವ ಹಡಗಗಳನ್ನು ಮುಳುಗಿಸಲಾರಂಭಿಸಿದ್ದರಿಂದ ವಿಲಾಯತಿಯವರು ತಮ್ಮ ದೇಶದಲ್ಲೇ ಆದಷ್ಟು ಹೆಚ್ಚು ಆಹಾರ ಬೆಳೆಸಬೇಕಾದ ಪ್ರಸಂಗ ಬಂದಿತು. ಆಗ ಬ್ರಿಟಿಶ ಸರಕಾರವು ಬೇಸಾಯದ ಕಾನೂನನ್ನೊಂದು ರಚಿಸಿ ಸಾಧ್ಯವಿದ್ದಲ್ಲೆಲ್ಲ ಜನರು ಆಹಾರ ಸಾಮಗ್ರಿಯನ್ನು ಬೆಳೆಸಬೇಕೆಂದೂ, ಶಕ್ಯವಿದ್ದಷ್ಟು ಹೆಚ್ಚು ಆಹಾರ-ಸಾಮಗ್ರಿಯನ್ನು ಬೆಳೆಸುವ ಯತ್ನ ಮಾಡಬೇಕೆಂದೂ ನಿರ್ಬಂಧಿಸಿತು. ಅಂತೆಯೇ ಬ್ರಿಟಿಶರು ಕಳೆದ ಮಹಾಯುದ್ಧದ ಘೋರ ಸಂಕಷ್ಟಗಳೊಳಗಿಂದ ಸುರಕ್ಷಿತ ಪಾರಾಗಿ ಕೊನೆಗೆ ವಿಜಯಶ್ರೀಯನ್ನೂ ಸಂಪಾದಿಸಿದರು. ನಮ್ಮ ದೇಶದ ಮುಂದಿರುವ ಸದ್ಯದ ಆಹಾರದ ಕಷ್ಟಗಳನ್ನು ಎದುರಿಸುವದಕ್ಕಾಗಿ ಮದ್ರಾಸ ಪ್ರಾಂತದ ಸರಕಾರವೂ ಇದೀಗ ಬ್ರಿಟಿಶ ಬೇಸಾಯದ ಕಾನೂನಿನಂತಹದೇ ಒಂದು ಕಾನೂನಿನ ಮಸೂದೆಯನ್ನು ಸಿದ್ಧಗೊಳಿಸಿದೆ. (೧) ಇಂತಿಂತಹ ಭೂಮಿಗಳಲ್ಲಿ ಸಾಗುವಳಿದಾರರು ಇಂತಹ ಬೆಳೆಯನ್ನೇ ಬೆಳೆಸಬೇಕು (೨) ಇಂತಿಷ್ಟು ಪ್ರಮಾಣದಿಂದ ಬೆಳೆಯನ್ನು ತಯಾರಿಸಲೇಬೇಕು. (೩) ಬಂಜರ ಬಿದ್ದ ಭೂಮಿಗಳನ್ನು ಸಾಗುವಳಿಯಲ್ಲಿ ತರಲೇಬೇಕು ಎಂದು ಮುಂತಾಗಿ ವಿಧಿಸುವ ಸರ್ವಾಧಿಕಾರವನ್ನು ಈ ಸಂಕಲ್ಪಿತ ಕಾನೂನು ಪ್ರಾಂತಿಕ ಸರಕಾರಕ್ಕೆ ಕೊಡುತ್ತಿದೆಯಲ್ಲದೆ, ಸರಕಾರದ ಆಜ್ಞೆಯಂತೆ ಸಾಗುವಳಿಯ ಕೆಲಸ ಸಾಗಿಸಲು ತಪ್ಪುವವರ ಗೇಣಿಯ ಯಾ ಮಾಲ್ಕಿಯ ಹೊಲಗಳನ್ನು ಕಸಕೊಂಡು ಬೇರೆ ಸಮರ್ಥ ಸಾಗುವಳಿದಾರರಿಗೂ ಸಾಗುವಳಿದಾರ ಸಂಸ್ಥೆಯವರಿಗೂ ಹಂಚಿಕೊಡುವ ಅಧಿಕಾರವನ್ನೂ ಸರಕಾರಕ್ಕೆ ಕೊಡುತ್ತಿದೆ. ಒಕ್ಕಲಿಗನು ಸರಿಯಾಗಿ ಸಾಗುವಳಿ ಮಾಡದಿದ್ದಲ್ಲಿ ಅವನನ್ನು ತಪ್ಪಿಸಲಿಕ್ಕೆ ಸರಕಾರವು ಒಡೆಯನಿಗ ಅಪ್ಪಣೆ ಕೊಡಬಹುದು. ಅದೇ ರೀತಿ ಸ್ವಂತ ಸಾಗವಳಿ ಮಾಡುವ ಹೊಲದೊಡೆಯನು ಸರಿಯಾಗಿ ಸಾಗುವಳಿ ಮಾಡದಿದ್ದಲ್ಲಿ ಅವನ ಹೊಲವನ್ನು ಸರಕಾರವು ಕಸಕೊಂಡು ಬೇರೆಯವರಿಗೆ ಒಪ್ಪಿಸಬಹುದು. ಸರಕಾರವು ಪ್ರತಿ ವರ್ಷ ಬೇರೆ ಬೇರೆ ಬೇಸಾಯದ ಬೆಳಸುಗಳ ಧಾರಣೆಗಳನ್ನು ನಿಶ್ಚಯಿಸಿ, ಅವುಗಳಿಗೆ ಪೇಟೆಯಲ್ಲಿ ಗಿರಾಕಿಗಳು ಸಿಗದಿದ್ದರೆ, ಅವನ್ನು ತಾನೇ ಕೊಂಡುಕೊಳ್ಳುವ ಹೊಣೆಯನ್ನೂ ಹೊರುವದು. ಮದ್ರಾಸ ಸರಕಾರದ ಈ ಮಸೂದೆಯು ಬ್ರಿಟಿಶ ಕಾನೂನನ್ನೇ ಸಂಪೂರ್ಣವಾಗಿ ಅನುಸರಿಸುತ್ತದೆಂದೂ, ನಮ್ಮ ನಾಡಿನ ವಿಶಿಷ್ಟ ಪರಿಸ್ಥಿತಿಗೆ ಅದು ಸರಿಹೋಗುವಂತಿಲ್ಲೆಂದೂ ಟೀಕಾಕಾರರು ಟೀಕಿಸುತ್ತಾರೆ. ಭೂಮಿಗಳು ಬಂಜರ ಬೀಳುತ್ತಿದ್ದುದರ ಕಾರಣಗಳೇನು, ಸರಿಯಾಗಿ ಸಾಗುವಳಿಯಾಗದಿರಲು ಕಾರಣಗಳೇನು ಎಂದು ಮುಂತಾದ ಅಡಚಣೆಗಳನ್ನು ಸರಕಾರವು ಮೊದಲು ಕಂಡು ಹಿಡಿದು ಅವುಗಳ ಪರಿಹಾರ ಕಲ್ಪಿಸುವ ಉದ್ಯೋಗ ಮೊದಲು ಕೈಕೊಳ್ಳಬೇಕೆಂದೂ, ಆ ನಂತರ ಒತ್ತಾಯದಿಂದ ಬೇಸಾಯ ಮಾಡಿಸುವ ಕ್ರಮ ಅನುಸರಿಸಬಹುದೆಂದೂ ಕೆಲವು ಟೀಕಾಕಾರರು ಅನ್ನುತ್ತಾರೆ. ಸಾಗುವಳಿಯ ಕೆಲಸಕ್ಕೆ ಅವಶ್ಯವಿರುವ ನೀರಾವರಿ ವಗೈರೆ ಸೌಕರ್ಯಗಳನ್ನು ಒದಗಿಸಿಕೊಡದೆ ಅಧಿಕಾರಬಲದಿಂದ ಸಾಗುವಳಿ ಮಾಡಿಸುವ ಇಲ್ಲವೆ ಬೆಳೆ ಹೆಚ್ಚಿಸಿಕೊಳ್ಳುವ ಉದ್ಯೋಗಕ್ಕೆ ಕೈ ಹಾಕಿದರೆ ಸರಕಾರವು ನಗೆಗೀಡಾಗುವದೆಂದೂ, ತನ್ನ ಸೆರಗಿನಲ್ಲಿ ಅಪಯಶಸ್ಸು ಕಟ್ಟಿಕೊಳ್ಳುವದೆಂದೂ ಈ ಟೀಕಾಕಾರರ ಪ್ರತಿಪಾದನೆಯುಂಟು. ಈ ಟೀಕಾಕಾರರ ಈ ಅಂಬೋಣ ನಿಜವಿರುತ್ತದಾದರೂ ಮದ್ರಾಸ ಸರಕಾರದ ಮಸೂದೆಯು ಸ್ವಾಗತಾರ್ಹವಿರುತ್ತದೆಂಬದಕ್ಕೆ ಸಂದೇಹವಿಲ್ಲ. ನಮ್ಮ ಮುಂಬಯಿ ಪ್ರಾಂತದಲ್ಲೂ ಇಂತಹ ಕಾನೂನು ಬಂದರೆ, ಒಕ್ಕಲತನದ ಕಾನೂನಿನಿಂದ ಉನ್ಮತ್ತರಾಗಿ "ನಾವು ಬೆಳೆಸಿದ ಬೆಳೆಯಲ್ಲಿ— ನಾವು ಬರೇ ಮೂರು ಕಾಳು ಬೆಳೆಸಿದರೂ ಆ ಬಗ್ಗೆ ಆಕ್ಷೇಪ ಮಾಡದೆ— ಒಡೆಯರು ಮೂರನೇ ಒಂದು ಪಾಲು ತಕ್ಕೊಂಡು ಸುಮ್ಮಗುಳಿಯಬೇಕು!" ಎಂದು ವಾದಿಸುತ್ತಿರುವ ಉಂಡಾಡಿಗ ರೈತರು ಸರಿ ಮಾರ್ಗಕ್ಕೆ ಬಂದಾರು ಮತ್ತು ಒಕ್ಕಲತನದ ಕಾನೂನಿನಿಂದ ನಾಡಿನಲ್ಲಿ ಉಂಟಾಗಿರುವ ಕಲಹ-ವ್ಯಾಜ್ಯ-ತಂಟೆಗಳು ಕಡಿಮೆಯಾದಾವು. ಆದರೆ ಉಂಡಾಡಿಗ ಮತ್ತು ಕಿಲಸಿಗ ಒಕ್ಕಲಿಗರ ಬೆನ್ನು ಚಪ್ಪರಿಸುತ್ತಿರುವ ಮುಂಬಯಿ ಸರಕಾರವು ಇಂತಹ ಯೋಜನೆಯನ್ನು ಕೈಕೊಳ್ಳುವದೆಂದು ಆಶಿಸುವದೆಂತು?

•••

ಸಂಪೂರ್ಣ ಮದ್ಯಪಾನ-ನಿರೋಧನ, ಜೂಜಾಟದ ಪ್ರತಿಬಂಧ ಮುಂತಾದ ಸಾಮಾಜಿಕ ಸುಧಾರಣೆಯ ಯೋಜನೆಗಳನ್ನು ಒಮ್ಮೆಲೇ ಜಾರಿಯಲ್ಲಿ ತರುವ ಹವ್ಯಾಸವನ್ನು ಪ್ರಾಂತಿಕ ಸರಕಾರವು ಬಿಟ್ಟುಕೊಟ್ಟು, ಆಹಾರ-ಪೂರೈಕೆ, ಆರ್ಥಿಕ ಸ್ಥಿತಿಯ ಸುಧಾರಣೆ ಮುಂತಾದ ಅತಿ ಅವಶ್ಯಕ ಮತ್ತು ಅತ್ಯಂತ ಮಹತ್ವದ ಯೋಜನೆಗಳನ್ನು ಕೈಕೊಳ್ಳಬೇಕಾಗಿ ಭಾರತ ಸರಕಾರದ ಪರವಾಗಿ ಮುಖ್ಯ ಪ್ರಧಾನ ಪಂ॥ ಜವಾಹರಲಾಲ ನೆಹರೂರವರು ಕೊಟ್ಟ ಎಚ್ಚರಿಕೆಗೂ ಹೇಳಿಕೊಟ್ಟ ಬುದ್ಧಿಮಾರ್ಗಕ್ಕೂ ಮುಂಬಯಿಯ ಮುಖ್ಯ ಮಂತ್ರಿಗಳಾಗಿರುವ ಶ್ರೀ॥ ಬಾಳಾಸಾಹೇಬ ಖೇರರು ಕೊಟ್ಟ ಉತ್ತರ ನೋಡಿ ನಗು ಬರುತ್ತಿದೆ! ಮದ್ಯನಿರೋಧನದ ಯೋಜನೆಯಿಂದ ಮುಳುಗುತ್ತಿರುವ ೧೧ ಕೋಟಿ ರೂಪಾಯಿಗಳ ಹಾನಿಯನ್ನು ತಾವು ಈಗಾಗಲೇ ಜನತೆಯ ಮೇಲೆ ಬೇರೆ ಕರಗಳನ್ನು ಹೇರಿ ತುಂಬಿ ತಂದಿದ್ದೇವೆಂದೂ, ಮದ್ಯನಿರೋಧನದ ಕಾರ್ಯಕ್ರಮವನ್ನು ತಾವು ಈ ಹಿಂದೆಯೇ ಹಾಕಿಕೊಂಡು, ಅದನ್ನು ಕ್ರಮೇಣ ಕೃತಿಯಲ್ಲಿ ತಂದು ಈಗ ಕೊನೆಯ ಮೆಟ್ಟಿಲನ್ನು ಮುಟ್ಟಿರುತ್ತೇನೆಂದೂ, ಆ ಮೆಟ್ಟಿಲಿಂದ ಈಗ ಹಿಂತಿರುಗುವದಾಗಲಿ ಕೆಳಗಿಳಿಯುವದಾಗಲಿ ಸಾಧ್ಯವಿಲ್ಲೆಂದೂ ಶ್ರೀ॥ ಖೇರರು ಹೇಳುತ್ತಾರೆ. ಇಷ್ಟಕ್ಕೇ ತಮ್ಮ ಮಾತನ್ನು ಅವರು ಮುಗಿಸಿದ್ದರೆ ಯಾರೂ ಆಕ್ಷೇಪಿಸುತ್ತಿದ್ದಿಲ್ಲ. ಆದರೆ ಇನ್ನೂ ಕೆಲವು ಹೆಜ್ಜೆ ಮುಂದೆ ಹೋಗಿ, "ಬರೇ ಹಣಕಾಸಿನ ಪರಿಸ್ಥಿತಿಯನ್ನು ನಾವು ನೋಡುವದು ಸರಿಯಲ್ಲ. ಮನುಷ್ಯ-ಜೀವನದ ಮೇಲಾಗುವ ಪರಿಣಾಮಕ್ಕೆ ನಾವು ಮಹತ್ವ ಕೊಡಬೇಕು. ಮದ್ಯನಿರೋಧನದಿಂದ ನಮ್ಮ ಸರಕಾರದ ಆದಾಯ ೧೧ ಕೋಟಿ ರೂಗಳಷ್ಟು ಕಡಿಮೆಯಾಗುತ್ತಿರಬಹುದು. ಆದರೆ ಅದರಿಂದ ಜನರಿಗೆ ಜೀವನಾವಶ್ಯಕ ಅನ್ನ-ಬಟ್ಟೆಗಳನ್ನು ಪೂರೈಸಿಕೊಳ್ಳಲು ೪೦ ಕೋಟಿ ರೂಗಳು ಸಿಗುವವೆಂಬುದನ್ನು ನಾವು ಮರೆಯತಕ್ಕದ್ದಲ್ಲ. ಅದೇ ನಮಗೆ ಮಹತ್ವದ್ದು" ಎಂದು ಮುಂತಾ।

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.

ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲಾಜಿಂಗ

ದಿ ಕೆನರಾ ಲಾಜ

[ಊಟ ಮತ್ತು ವಸತಿಗೃಹ]

ಮೋಟಾರ-ಸ್ಟ್ಯಾಂಡ, ಹುಬ್ಬಳ್ಳಿ.

ಮಾಲಕ: — ಮ್ಯಾನೇಜಿಂಗ ಪಾರ್ಟ್ನರ.

...ತ್ಯ ವೇದಾಂತವನ್ನು ಹೇಳಿ, ತಮ್ಮ ಮದ್ಯನಿರೋಧನ ಧೋರಣೆ ಸಂಪೂರ್ಣ ಯಶಸ್ವಿಯಾಗಿರುತ್ತದೆಂದೂ, ಅದರಿಂದ ಲೋಕಕಲ್ಯಾಣವಾಗಿದೆಂದೂ, ಭಾಬಿಕ ಜನರಲ್ಲಿ ಭ್ರಾಂತಿಯನ್ನುಂಟು ಮಾಡುವ ಪ್ರಯತ್ನ ಮಾಡಿರುತ್ತಾರೆ! ನಾಡಿನ ನಿಜ ಪರಿಸ್ಥಿತಿಯ ಅರಿವುಳ್ಳ ಯಾವಾತನೂ ಮುಖ್ಯಮಂತ್ರಿಗಳ ಈ ಮೋಹಕ ಮಾತುಗಳಿಂದ ಮೋಸ ಹೋಗಲಾರನು! ಮುಂಬಯಿ ಸರಕಾರದ ಸದ್ಯದ ಮದ್ಯನಿರೋಧನ ಯೋಜನೆಯಿಂದ ಸರಕಾರದವರ ಅಬಕಾರಿ ಉತ್ಪನ್ನ ಮಾತ್ರ ಮುಳುಗಿದೆ, ವಿನಹ ಮದ್ಯಪಾನದ ಚಟವೇನೂ ಕಡಿಮೆಯಾಗಿಲ್ಲೆಂಬುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ೧೦ ವರ್ಷಗಳ ಹಿಂದಿನಗಿಂತ ಈಗ ಸೆರೆ ಕುಡಿಯುವವರು ಹೆಚ್ಚಿಗಿದ್ದಾರೆ! ಹಿಂದೆ ಕುಡಿಯದಿದ್ದ ಸಮಾಜಗಳ ಜನರೂ ಈಗ ಕುಡಿಯಕಲಿತಿದ್ದಾರೆ! ಹಿಂದೆ ಕುಡುಕರು ಅಗ್ಗ ದರದಿಂದ ಸರಕಾರದವರ ಕಾನೂನು-ಸಮ್ಮತ ಸರಾಯಿಯನ್ನು ಕೊಂಡು ಕುಡಿಯುತ್ತಿದ್ದರೆ, ಈಗ ದುಬ್ಬ ಬೆಲೆ ಕೊಟ್ಟು ಕಳ್ಳ ಸರಾಯಿಯನ್ನು ಕೊಂಡು ಕುಡಿಯುತ್ತಿದ್ದಾರೆ! ಸರಕಾರದವರ ಮದ್ಯನಿರೋಧನ ಯೋಜನೆಯಿಂದ ಉಂಟಾದ ಸ್ಥಿತ್ಯಂತರವಿಷ್ಟೇ!! ಮದ್ಯನಿರೋಧನ ಯೋಜನೆಯಿಂದ ಮದ್ಯಪಿಗಳ ಕಡೆ ೪೦ ಕೋಟಿ ರೂಗಳ ಉಳಿತಾಯವಾಗಿರುತ್ತದೆಂಬ ಭ್ರಾಮಕ ಭ್ರಾಂತಿಯನ್ನು ಶ್ರೀ|| ಬಾಳಾಸಾಹೇಬ ಖೇರರು ಕೂಡಲೇ ತೊರೆದು, ಮದ್ಯನಿರೋಧನದ ಯೋಜನೆಯ ಗತಿಗೇಡಾಗಲು ಕಾರಣವೇನೆಂಬುದರ ಆಳವಾದ ಸಂಶೋಧನೆಯನ್ನು ಮಾಡಬೇಕಾಗಿ ಅರಿಕೆಯಿದೆ. ಬರೀ ಕಾನೂನುಗಳಿಂದ, ಮದ್ಯನಿರೋಧನ ಸಮಿತಿಗಳ ಏರ್ಪಾಟಿನಿಂದ, ಚಿತ್ತ-ಪತ್ರಗಳಿಂದ, 'ಸಂಜೀವನಾ'ದಿ ಮಾಸಿಕಗಳಿಂದ, ಮದ್ಯಪಾನದಿಂದಾಗುವ ದುಷ್ಪರಿಣಾಮಗಳನ್ನು ತೋರಿಸಿಕೊಡುವ ನಾಟ್ಯ-ನಾಟಕಾದಿಗಳಿಂದ ಮದ್ಯ-ಪ್ರತಿಬಂಧವೆಂದೂ ಸಾಧ್ಯವಾಗುವಂತಿಲ್ಲ. ಜನತೆಯ ಮನೋಭೂಮಿಕೆಯಲ್ಲಿ ಮದ್ಯದ ಬಗ್ಗೆ ತಾತ್ಸಾರ, ತಿರಸ್ಕಾರ ಮತ್ತು ತಿತಿಕ್ಷೆಯುಂಟಾಗುವಂತಹ ಕ್ರಾಂತಿಯನ್ನಾಗಲಿ ಉತ್ಕ್ರಾಂತಿಯನ್ನಾಗಲಿ ಮಾಡತಕ್ಕದ್ದು ಅವಶ್ಯವುಂಟು. ಸಮಾಜ-ಸುಧಾರಕರೇ ಅದನ್ನು ಕ್ರಮಶಃ ಸಾಧಿಸಬಲ್ಲರು. ಈ ಮಾತನ್ನು ಮುಂಬಯಿ ಸರಕಾರದ ಸದ್ಯದ ಸೂತ್ರಧಾರಿಗಳು ಲಕ್ಷದಲ್ಲಿಡಬೇಕಾಗಿ ಸೂಚನೆಯಿದೆ

ಜಾಹೀರ ನೋಟೀಸಿಗೆ ಉತ್ತರ

[illegible] ಪರಮೇಶ್ವರ ಹೆಗಡೆ [illegible] ಎಂಬ ನಾ ಈ ಮೂಲಕ ತಿಳಿಸುವುದೇನೆಂದರೆ —

ನನ್ನ ಹೆಂಡತಿ ಲಕ್ಷ್ಮಿಯು ಹೆಸರಿನಿಂದ ಕಾನಡಾವೃತ್ತದ [illegible] ತಾರೀಖಿನ ಸಂಚಿಕೆಯಲ್ಲಿ ಸುಳ್ಳು ನೋಟೀಸು ಪ್ರಕಟವಾಗಿರುತ್ತದೆ. ಸದರಿ ನೋಟೀಸಿನಲ್ಲಿ ತಿಳಿಸುವಂತೆ ನಾನು ಮುಂದುವರಿಯುವನಲ್ಲ. ಆಕೆಗೆ ನಮ್ಮ ಊರಿನ [illegible] ದುರ್ಬೋಧಕರು ದುರ್ಬೋಧನೆ ಕೊಟ್ಟು ಸದರಿ ನೋಟೀಸನ್ನು ಪ್ರಕಟನೆಗೆ ಕೊಟ್ಟಿದ್ದಾರೆ. ನನ್ನ ಹಕ್ಕಿನ [illegible] ಸದರಿಯವಳಿಗೆ ಏನೊಂದೂ ಹಕ್ಕಿರುವದಿಲ್ಲ. [illegible] ಬೋಧನೆ ಕೊಟ್ಟು ಆಸ್ತಿ [illegible] ನನ್ನ ಸ್ವಂತ ಹಿತಾಹಿತಗಳನ್ನು ನಾನು ಸಂಪೂರ್ಣ ಅರಿತವನಿದ್ದೇನೆ. [illegible] ನನ್ನ [illegible] ರೀತಿಯಿಂದ [illegible] ಯಾವದೇ ತರದ ಆಕ್ಷೇಪ [illegible] ಈ ಮೂಲಕ ತಿಳಿಸಲಯಿಸುತ್ತೇನೆ.

ತಾ. ೩—೮—೪೯.

ವೆಂಕಟರಮಣ ಪರಮೇಶ್ವರ ಹೆಗಡೆ

ಸ್ಥಾನಿಕ ವೃತ್ತಾಂತ.

ಕುಮಟಾ— ನೊನ್ನೆ ಶನಿವಾರದ ವರೆಗೆ ಆಶ್ಲೇಷಾ ನಕ್ಷತ್ರವೂ ಒಳಗಾಗಿ ಮಳೆ ಸುರಿಯಿತು. ನಿನ್ನೆಯಿಂದ ಹೊಳವು ಬಿದ್ದಿದೆ. ಕಳೆದ ವಾರ ೭—೮|| ಇಂಚು ಮಳೆಯಾಗಿರುತ್ತದೆ. ಮಳೆಗಾಲದ ಪ್ರಾರಂಭದಿಂದ (ಮೇ ತಾ ೧೫ರಿಂದ) ಈ ವರೆಗೆ ಬಿದ್ದ ಮಳೆ ೧೧೧ ಇಂಚು ಆಗಿದೆ.

ಬರುವ ಸೋಮವಾರ ಮುಂಜಾನೆ ೮ ಘಂಟೆಯಿಂದ ಮುಂದೆ ಕೆನರಾ ಕೊಲೇಜಿನವರು ತಮ್ಮ ಕೊಲೇಜಿನ ಆವಾರದೊಳಗೆ, ಸ್ವಾತಂತ್ರ್ಯದಿನದ ಉತ್ಸವದ ಅಂಗವಾಗಿ, ಧ್ವಜವಂದನ, [illegible], ಭಾಷಣ ಮುಂತಾದ ಕಾರ್ಯಕ್ರಮಗಳನ್ನು ಜರುಗಿಸಲಿದ್ದಾರೆ. ಎಲ್ಲರೂ ಈ ಸಮಾರಂಭಕ್ಕೆ ಬರಬೇಕಾಗಿ ಕೊಲೇಜಿನ ಆಚಾರ್ಯರ ವಿನಂತಿಯುಂಟು.

ಕೆನರಾ ಕೊಲೇಜಿನವರು ತಮ್ಮ ವಿದ್ಯಾರ್ಥಿಗಳಿಗೆ ಸಮಾಜಸೇವೆಯ ಪಾಠ ಕಲಿಸಿಕೊಡುವದಕ್ಕಾಗಿ 'ಬಡ ವಿದ್ಯಾರ್ಥಿಗಳ ನಿಧಿ'ಯೊಂದನ್ನು ಸ್ಥಾಪಿಸಿದ್ದಾರೆ. ಈ ವರ್ಷ ಕೊಲೇಜಿನವರು ಕೆಲವೊಂದು ವಿದ್ಯಾರ್ಥಿಗಳಿಗೆ ಮಾಫಿಗಳನ್ನೂ ಅರ್ಧ ಮಾಫಿಗಳನ್ನೂ ಕೊಟ್ಟಿರುತ್ತಾರೆ. ಆದರೆ ಈ ಮಾಫಿಗಳ ಸಂಖ್ಯೆ ಯಾವ ಕೊಲೇಜಿನಲ್ಲಾದರೂ ನಿಯಮಿತವಿರುತ್ತದೆ. ಅದರಿಂದ ಮಾಫಿ ಪಡೆಯಲು ಅರ್ಹರಿರುವ ಅನೇಕ ವಿದ್ಯಾರ್ಥಿಗಳಿಗೆ ಮಾಫಿ ಕೊಡಲು ಸಾಧ್ಯವಾಗುವದಿಲ್ಲ. ಅಂತಹ ವಿದ್ಯಾರ್ಥಿಗಳಿಗೆ ಏನಾದರೂ ಸಹಾಯ ಮಾಡುವ ಉದ್ದೇಶದಿಂದಲೇ ಮೇಲ್ಕಾಣಿಸಿದ ನಿಧಿಯು ನಿರ್ಮಾಣವಾಗಿದೆ! ಈ ನಿಧಿಯ ಸಹಾಯದಿಂದ 'ವಿದ್ಯಾರ್ಥಿಗಳ ಗ್ರಂಥಾಲಯ'ವೊಂದನ್ನು ನಿರ್ಮಾಣ ಮಾಡಿ, ಅದರೊಳಗಿಂದ ತೀರ ಬಡ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ಕಡ ಕೊಡುವ ವ್ಯವಸ್ಥೆ ಮಾಡಬೇಕೆಂದೂ ನಿಧಿಯ ಸಂಸ್ಥಾಪಕರ ಮನೋದಯವಿದೆ. ೨ ವಾರಗಳ ಹಿಂದೆ ಸ್ಥಾಪನೆಯಾದ ಈ ನಿಧಿಗೆ, ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ಪ್ರಯತ್ನದಿಂದ, ಈಗಾಗಲೇ ರೂ ೪೧೦ ಕೂಡಿದೆಯಂತೆ. [illegible] ಗೋರೆಯವರೂ ಶಂಕರ ಚಿಕ್ಕೆರೂರೆ ಎಂಬ ವಿದ್ಯಾರ್ಥಿಯೂ ಗೋಕರ್ಣಕ್ಕೆ ಹೋಗಿ ರೂ ೨೮೦ ಕೂಡಿಸಿದ್ದಾರೆ, ವಿಜ್ಞಾನ ಶಾಸ್ತ್ರದ ಪ್ರಯೋಗ ಶಿಕ್ಷಕ ರಾ|| ನಾರಾಯಣ [illegible] ದೊಳಗಿನ ಶ್ರೀ|| ಭಟ್ಟ ಎಂಬ ವಿದ್ಯಾರ್ಥಿಯೂ ಹೊನ್ನಾವರದಲ್ಲಿ ಸಂಚರಿಸಿ ರೂ ೫೦ ಕೂಡಿಸಿದ್ದಾರೆ. [illegible] ಭಟ್ಟ, ಶ್ರೀ|| [illegible] ಎಂಬಿಬ್ಬ ವಿದ್ಯಾರ್ಥಿಗಳು [illegible] ರೂ ೪೦ ಕೂಡಿಸಿದ್ದಾರೆ. ರಾ|| ಗೋವಿಂದ ವೆಂಕಟೇಶ [illegible] ಇವರು ವಿದ್ಯಾರ್ಥಿಗಳ ಗ್ರಂಥಾಲಯದ ಉಪಯೋಗಕ್ಕಾಗಿ ಒಂದು ಕಪಾಟು ಮಾಡಿಸಿಕೊಡುವ ಆಶ್ವಾಸನೆ ಕೊಟ್ಟಿರುತ್ತಾರಂತೆ. ಸ್ಥಳೀಯ ಜನರೂ ಸದರಿ ಬಡ ವಿದ್ಯಾರ್ಥಿಗಳ ನಿಧಿಗೆ ಸಹಾಯ ಮಾಡಬೇಕಾಗಿ ಕೊಲೇಜಿನ ಆಚಾರ್ಯರೂ [illegible] ವಿನಂತಿಸುತ್ತಾರೆ.

ಉಪ್ಪಿನಪಟ್ಟಣ ಅಂಚೆಕಟ್ಟೆಯ ಟಪಾಲ ಮಾಸ್ತರರು ಕಳೆದ ವಾರ [illegible] ಹೊಂದಿದ್ದರಿಂದ ಅಲ್ಲಿ ಈಗ ಹೊಸ ಟಪಾಲ-ಮಾಸ್ತರರನ್ನು ನೇಮಿಸಬೇಕಾಗಿದೆ. ಅಂಚೆಕಟ್ಟೆ ಎತ್ತಬೇಕೆಂಬ [illegible] ಪ್ರಶ್ನೆಯೂ [illegible] ನಡೆದಿದೆ. ಮುದ್ದು ಉಪ್ಪಿನಪಟ್ಟಣ ಗ್ರಾಮದಲ್ಲಿ [illegible] ಅಲ್ಲಿ ವ್ಯಾಪಾರ-ಉದ್ಯೋಗಗಳೂ ಅಷ್ಟಕ್ಕಷ್ಟೇ. ಎಲ್ಲ ವ್ಯಾಪಾರ-ಉದ್ಯೋಗಗಳು ಕೊಂಡಿಹಿತ್ಲು ಧಕ್ಕೆಯ ಮೇಲೆ ನಡೆಯುತ್ತವೆ. ಉಪ್ಪಿನಪಟ್ಟಣ ಅಂಚೆಕಟ್ಟೆಯ ಪ್ರಯೋಜನ [illegible] ಪಟ್ಟಣ ಗ್ರಾಮಗಳು ಕೂಡ ಕೊಂಡಿಹಿತ್ಲು ಧಕ್ಕೆಯ ನೆರೆಹೊರೆಯಲ್ಲಿ, ಹೊಳೆಯ ಆಚೆ ಇವೆ. ಅದ್ದರಿಂದ ಅಂಚೆ [illegible] ಉಪ್ಪಿನಪಟ್ಟಣ [illegible] ಕಟ್ಟೆಯನ್ನು ಕೊಂಡಿಹಿತ್ಲು ಧಕ್ಕೆಯ ಮೇಲೆ [illegible] ಮತ್ತು ಅಲ್ಲಿಯವರೇ ಆದ ಒಬ್ಬರಿಗೆ ಅದರ ಟಪಾಲ ಮಾಸ್ತರರನ್ನಾಗಿ ನೇಮಿಸುವ ವ್ಯವಸ್ಥೆ ಮಾಡ [illegible] ಒಂದೆ ಟಪಾಲಕಟ್ಟೆ ಉಪ್ಪಿನಪಟ್ಟಣದಲ್ಲಿದ್ದಾಗ ಕೊಂಡಿಹಿತ್ಲದೊಳಗಿನ ವ್ಯಾಪಾರಿ [illegible] ಬಗ್ಗೆ ಗ್ರಾಮಗಳ ಜನರೂ ಕಾರ್ಡು-ಕವರ ಗಳನ್ನು [illegible] ಟಪಾಲು ಪಡೆಯುವದಕ್ಕಾಗಿ ಎಷ್ಟು ಕಷ್ಟ ಮತ್ತು ತೊಂದರೆ ಪಡಬೇಕಾಗುತ್ತಿತ್ತೆಂಬುದನ್ನು ಹೇಳಬೇಕಿಲ್ಲ

ಹೊನ್ನಾವರ— ಕಾಸರಕೋಡದೊಳಗಿನ ಶ್ರೀ ಭಜನೆ ಸಪ್ತಾಹ ಮಂಡಳಿಯವರು ಇದೇ ಶ್ರಾವಣ ಕೃಷ್ಣ ೧ ರಿಂದ ಕೃಷ್ಣ ೯ ಮಿಯು ವರೆಗೆ ಶ್ರೀ ಗೋಪಾಲಕೃಷ್ಣನ ಗುಡಿಯಲ್ಲಿ ಸಪ್ತಾಹ-ಮಹೋತ್ಸವವನ್ನು ಜರುಗಿಸಲು ಸಂಕಲ್ಪಿಸಿದ್ದಾರೆ. ಭಾವಿಕರೆಲ್ಲರೂ ಈ ಉತ್ಸವಕ್ಕೆ ನೆರವಾಗುವರೆಂದು ಮಂಡಳಿಯ ಅಪೇಕ್ಷೆಯುಂಟು

ವೆಂಕಿ— (ತಾ ೪—೮ ೧೯೪೯) [illegible] ಶಾಲೆಯ ಅವ್ಯವಸ್ಥೆ ಇನ್ನೂ ಸುಧಾರಿಸಿಲ್ಲ. ಶಾಲೆಯ ರಜಿಸ್ಟರದಲ್ಲಿ ೪೦ ವಿದ್ಯಾರ್ಥಿಗಳ ಹೆಸರುಗಳು ದಾಖಲ ಇವೆ. ಆದರೆ ಶಾಲೆಯಲ್ಲಿ ಬರೀ ೧೫—೧೬ ಹುಡುಗರು ಕಾಣುತ್ತಾರೆ. ಶಾಲೆಯ ಶಿಕ್ಷಕರು ಮನೆಗೆ [illegible] ಶಾಲೆ ಮಾಡುತ್ತಾರೆ! ಕಳೆದ ತಿಂಗಳಲ್ಲಿ ಶಾಲಾ [illegible] ರಾ|| ಸಜ್ಜನರು ಒಂದು ದಿನ ಸಂಜೆ ೪|| ಘಂಟೆಯ ಸುಮಾರಿಗೆ ಈ ಶಾಲೆಯನ್ನು ನೋಡಲೆಂದು ಬಂದಿದ್ದರು. ಅಂದು ರವಿವಾರ ಯಾ ರಜೆವಾರವಿದ್ದಿಲ್ಲ! ಬೇರೆ [illegible] ದಿನವೂ ಇದ್ದಿಲ್ಲ! ಆದರೂ ರಾ|| ಸಜ್ಜನರು ಬಂದಾಗ

ಮದ್ಯನಿರೋಧನ ಪ್ರಚಾರಕ ಸಾಹಿತ್ಯದ ಸ್ಪರ್ಧೆ

ಜಿಲ್ಲಾ ಮದ್ಯನಿರೋಧನ ಸಮಿತಿಯವರು ಮದ್ಯನಿರೋಧನ ಪ್ರಚಾರಕ ಸಾಹಿತ್ಯದ ಸ್ಪರ್ಧೆಯೊಂದನ್ನು ಏರ್ಪಡಿಸಲು ನಿರ್ಧರಿಸಿದ್ದಾರೆ. ಸ್ಪರ್ಧೆಗೆ ಬರುವ ನಾಟಕ, ಕಥೆಗಳ ಮತ್ತು ಕವನಗಳಿಗೆ ಗುಣಾನುಕ್ರಮದಿಂದ ಬಹುಮಾನಗಳನ್ನು ಕೊಡಲಾಗುವದು.

ನಾಟಕ ಮತ್ತು ಕಥೆಗಳಲ್ಲಿ ಪ್ರತಿಯೊಂದಕ್ಕೆ ೧ನೇ ಬಹುಮಾನ ೫೦ ರೂ, ೨ನೇ ಬಹುಮಾನ ೩೦ ರೂ, ೩ನೇ ಬಹುಮಾನ ೨೦ ರೂ ಹೀಗೆ ೩ ಬಹುಮಾನಗಳೂ, ಕವನಗಳಿಗೆ ೧ನೇ ಬಹುಮಾನ ೨೫ ರೂ, ೨ನೇ ಬಹುಮಾನ ೧೫ ರೂ, ಮತ್ತು ೩ನೇ ಬಹುಮಾನ ೧೦ ರೂ ಹೀಗೆ ೩ ಬಹುಮಾನಗಳೂ ಕೊಡಲ್ಪಡುವವು. ಮುಂದಿನ ೬ ನಂಬರಗಳಿಗೆ ೮ ರೂ ಗಳ ಬಹುಮಾನಗಳನ್ನು ಕೊಡಲಾಗುವದು

(೧) ಬರಹಗಳನ್ನು ಕೆಳಗಿನ ವಿಳಾಸಕ್ಕೆ ತಾ ೧೫—೧೦—೧೯೪೯ರೊಳಗೆ ತಲ್ಪುವಂತೆ ಕಳಿಸಬೇಕು

(೨) ಬರಹಗಳು ಸ್ಪಷ್ಟವಾಗಿ ಕಾಗದದ ಒಂದೇ ಬದಿಗೆ ಬರೆದವು ಇರಬೇಕು

(೩) ಸ್ಪರ್ಧೆಗಾಗಿ ಕಳಿಸುವ ಸಾಹಿತ್ಯವು ಮೊದಲು ಎಲ್ಲಿಯೂ ಪ್ರಸಿದ್ಧವಾಗಿದ್ದಿರಬಾರದು, ಬೇರೆ ಯಾವದೇ ಸ್ಪರ್ಧೆಗೆ ಕಳಿಸಲ್ಪಟ್ಟಿದ್ದು ಇರಬಾರದು, ಅನುವಾದವೂ ಆಗಿರಬಾರದು

(೪) ನಾಟಕವು ಪ್ರಯೋಗಕ್ಕೆ ಯೋಗ್ಯವಾದುದಿರಬೇಕು. [illegible] ನಾಟಕಗಳನ್ನೂ ಕಳಿಸಬಹುದು

(೫) ಪಾರಿತೋಷಕ ಪಡೆದ ಸಾಹಿತ್ಯವನ್ನು ಪ್ರಕಟಿಸಲು [illegible] ಸಮಿತಿಗೆ ಅಧಿಕಾರವಿರುವದು

(೬) ಸ್ಪರ್ಧೆಗಾಗಿ ಬಂದ ಬರಹಗಳನ್ನು ತಿರುಗಿ ಕೊಡಲಾರೆವು

(೭) ಕಾರವಾರ ಜಿಲ್ಲೆಯವರಷ್ಟೇ ಈ ಸ್ಪರ್ಧೆಯಲ್ಲಿ ಸ್ಪರ್ಧಿಸಬಹುದು

ಕಾರವಾರ, | ಎಚ್ ಎಮ್ [illegible],
೪ ೮—೪೯ | ಜಿಲ್ಲಾ ಮದ್ಯನಿರೋಧನ ಅಧಿಕಾರಿ, ಕಾನಡಾ

ಶಾಲೆ ಮುಚ್ಚಲ್ಪಟ್ಟಿತು !! ಶಾಲೆಯಲ್ಲಿ ಇಷ್ಟು ಮಕ್ಕಳು ಬರುತ್ತಿದ್ದಾಗ್ಯೂ ಅದನ್ನು ಸುಧಾರಿಸುವ ಯಾವದೇ ಪ್ರಯತ್ನವನ್ನು ಶಾಲಾ ಬೋರ್ಡಿನವರು ಮಾಡದಿದ್ದುದರ ಕಾರಣವೇನಿರಬಹುದೆಂದು ಎಷ್ಟೇ ತಲೆ ಕೆರೆದರೂ ಹೊಳೆಯುವದಿಲ್ಲ !

ಭಟಕಳ— (ತಾ ೩೦-೮-೪೮) ತಮ್ಮ ಊರಿನಲ್ಲಿಂದು ಗ್ರಾಮ ಪಂಚಾಯಿತಿ ಸ್ಥಾಪಿಸಬೇಕೆಂದು ಗೊರಟೆಯ ಜನರು ಜಿಲ್ಲಾಧಿಪರಿಗೆ ಮನವಿ ಕಳಿಸಿದ್ದಾರಂತೆ

ಸಿದ್ದಾಪುರ— (ತಾ ೩೪-೭-೪೮) ಕಿಲಾರ ಗ್ರಾಮದ ನೆರೆಹೊರೆಯಲ್ಲಿ ಈಗ ಕೆಲವು ದಿನಗಳಿಂದ ಹುಲಿಗಳ ಹಾವಳಿ ಬಹಳವಾಗಿತ್ತು. ಸುಮಾರು ೩೦ ದನಗಳು ಈ ಹುಲಿಗಳ ಪಾಲಾಗಿದ್ದವು ಕಳೆದ ತಾ ೧೯ನೇಗೆ ಹುಲಿಗಳು ಕಿಲಾರ ಗ್ರಾಮದ ರಾ॥ ಭಾಸ್ಕರ ಹೆಗಡೆಯವರ ಒಂದು ಎತ್ತನ್ನು ಕಡಿದವು ರಾ॥ ಭಾಸ್ಕರ ಹೆಗಡೆಯವರು ಆಗ ಸಂಶಯಗೊಂಡು, ಎತ್ತಿನ ರಕ್ತ-ಮಾಂಸ ತಿನ್ನಲು ಹುಲಿಗಳು ತಿರುಗಿ ಬಂದಾಗ ಅವುಗಳಿಗೆ ತಕ್ಕ ಶಾಸನ ಮಾಡಬೇಕೆಂಬ ನಿಶ್ಚಯದಿಂದ ಮರುದಿನ ಎತ್ತು ಸತ್ತು ಬಿದ್ದ ಸ್ಥಳದ ಹತ್ತಿರವೇ ಕಾದುಕೊಂಡು ಕೂತರು ಅಪೇಕ್ಷೆಯಂತೆ ಹುಲಿಗಳು ಎತ್ತಿನ ಫಲಾಹಾರ ಮಾಡಬಂದವು. ಅವು ಸಂಖ್ಯೆಯಲ್ಲಿ ಕಡಿಮೆಯಾದ್ದಿಲ್ಲ, ಆಕಾರದಲ್ಲೂ ಕಡಿಮೆಯಾದ್ದಿಲ್ಲ ೫ ಪಟ್ಟೆ ಹುಲಿಗಳಿದ್ದವು ! ಅವುಗಳನ್ನು ಕಂಡು ಸಾಮಾನ್ಯ ಧೈರ್ಯವಂತನು ಕಂಗೆಟ್ಟು ಸುಮ್ಮನೆ ಬೀಳುತ್ತಿದ್ದನು ಆದರೆ ರಾ॥ ಹೆಗಡೆಯವರು ಧೈರ್ಯ ಕಳೆಕೊಳ್ಳದೆ, ಮನಸ್ಸು ಗಟ್ಟಿ ಮಾಡಿ, ಹುಲಿಗಳು ಎತ್ತಿಗೆ ಬಾಯಿ ಹಾಕುತ್ತಲೇ ಧರಧರನೆ ಗುಂಡುಗಳನ್ನು ಹಾರಿಸಿ, ಆ ೫ ಹುಲಿಗಳಲ್ಲಿ ಮೂರನ್ನು ನೆಲಕ್ಕುರುಳಿಸಿದರು ಇನ್ನೆರಡು ಹುಲಿಗಳು ಪಲಾಯನ ಮಾಡಿದವು ! ಇಷ್ಟು ದೊಡ್ಡ ಬೇಟೆಯನ್ನು ಈ ಜಿಲ್ಲೆಯಲ್ಲಿ ಈ ಹಿಂದೆ ಯಾರೂ ಮಾಡಿದ್ದಿಲ್ಲೆಂದು ಜನರು ಹೇಳುತ್ತಾರೆ

ಅವರಗುಪ್ಪ ಗ್ರಾಮದಲ್ಲಿ ಒಂದು ಗಾಂವಠಿ ಶಾಲೆಯುಂಟು ಅದರಲ್ಲಿ ೬೩ ವಿದ್ಯಾರ್ಥಿಗಳಿದ್ದಾರೆ ಹುಡುಗರು ಹೆಚ್ಚಾಗಿ ವಿದ್ಯೆಯಲ್ಲಿ ಹಿಂದುಳಿದ ವರ್ಗದವರು ಅವರಗುಪ್ಪ ಗ್ರಾಮಕ್ಕೆ ಹಿಂದೆ, ಗ್ರಾಮಸುಧಾರಣಾ ಕಾರ್ಯವನ್ನು ಉತ್ತಮವಾಗಿ ಮಾಡಿ ತೋರಿಸಿದ್ದಕ್ಕೆ, ಸರಕಾರದವರು ಇನ್ನೂರು-ಫಾಲು ಕೊಟ್ಟಿದ್ದರು ಇಂತಹ ಗ್ರಾಮದಲ್ಲಿ ಶಾಲಾ ಬೋರ್ಡಿನವರು ತಾವಾಗಿಯೇ ಒಂದು ಶಾಲೆ ತೆರೆಯಬೇಕಿತ್ತು ! ಅದು ಅವರಿಂದ ಆಗಲಿಲ್ಲ ! ಜನರು ತೆರೆದ ಗಾಂವಠಿ ಶಾಲೆಯನ್ನಾದರೂ ಅವರು ಒಪ್ಪಿಸಿಕೊಳ್ಳಬಹುದಾಗಿತ್ತು ? ಊರವರೂ ಈಗ ೮-೯ ತಿಂಗಳಿಂದ ತಮ್ಮ ಶಾಲೆಯನ್ನು ಒಪ್ಪಿಸಿಕೊಳ್ಳಿರೆಂದು ಬೋರ್ಡಿಗೆ ಆಗ್ರಹ ಮಾಡುತ್ತಿದ್ದಾರೆ. ಆದರೂ ಬೋರ್ಡಿನವರು ಕಿವಿಗೊಡದೆ ಸುಮ್ಮನಿದ್ದಾರೆ ! ಇಂತಹ ಬೋರ್ಡಿನ ಕ್ರಿಯೆಯಿಂದ ವಿದ್ಯಾಪ್ರಸಾರದ ಕಾರ್ಯವೆಂತಾಗಬಲ್ಲದೋ ಏನೋ !

ಅಂಕೋಲಾ— (ತಾ. ೪—೮—೧೯೪೮) ೧೯೪೮-೪೯ನೇ ಸಾಲಿನಲ್ಲಿ ಈ ತಾಲೂಕಿನೊಳಗೆ ಒಂದ ತೆಂಗಿನಕಾಯಿ, ಅಡಿಕೆ, ಬೆಲ್ಲ, ಮತ್ತು ಹಿಂಗಾರಿ ಭತ್ತದ ಬೆಳೆಯ ಸಂಬಂಧವಾಗಿ ಮಾಮಲೇದಾರರು ತಾ. ೧೪-೭-೪೮ನೇಗೆ ಜಾಹೀರನಾಮೆಗಳನ್ನು ಹೊರಡಿಸಿದ್ದಾರೆ ಅಡಿಗೋಣ, ಅಗರಗೋಣ, ಊಳರೆ ವಗೈರೆ ಹೊಳೆಯ ದಂಡೆಗುಂಟ ಇಲ್ಲವೆ ಅಘನಾಶಿನಿ, ಭಾವಿಕೇರಿ ವಗೈರೆ ಸಮುದ್ರ ದಂಡೆಗುಂಟ ಇರುವ ಗ್ರಾಮ (೩೪)ಗಳಲ್ಲಿ ಫಲಕ್ಕೆ ಬಂದ ಪ್ರತಿ ತೆಂಗಿನ ಮರಕ್ಕೆ ೬೦ ಕಾಯಿಗಳಂತೆ ಘಟ್ಟದ ಬದಿಯ ಗುಡ್ಡಗಾಡು ಗ್ರಾಮ (ಅಚವೆ, ಗುಂಡಬಾಳ ವಗೈರೆ ೪೬)ಗಳಲ್ಲಿ ೨೧ ಕಾಯಿಗಳಂತೆ ಮತ್ತು ಉಳಿದ ಗ್ರಾಮಗಳಲ್ಲಿ (ಅಂಕೋಲಾ ವಗೈರೆ ೧೩) ೩೪ ಕಾಯಿಗಳಂತೆ ತೆಂಗು ಉತ್ಪನ್ನ ಬಂದಿರುತ್ತದಾಗಿ ಮಾಮಲೇದಾರರು ನಿರ್ಧರಿಸಿದ್ದಾರೆ ಅಡಿಕೆ ಬೆಳೆಯ ಸಂಬಂಧದಲ್ಲಿ ಕೊಡ್ಲಗದ್ದೆ, ಹೆಗ್ಗಾರ ವಗೈರೆ ಹೆಚ್ಚಾಗಿ ಅಡಿಕೆ ಬೆಳೆಯುವ ೧೧ ಗ್ರಾಮಗಳು, ಊಳರೆ ವಗೈರೆ ಸಾಧಾರಣ ಅಡಿಕೆ ಬೆಳೆಯುವ ೪೮ ಗ್ರಾಮಗಳು ಮತ್ತು ಅಡಿಕೆ ಬೆಳೆಯದ ಗ್ರಾಮಗಳು ಎಂದು ೩ ವರ್ಗ ಮಾಡಿ ೧ನೇ ವರ್ಗದ ಗ್ರಾಮಗಳಲ್ಲಿ ಫಲಕ್ಕೆ ಬಂದ ಪ್ರತಿ ಮರವು ೨ ರತ್ತಲ ಅಡಿಕೆ ಮತ್ತು ೨ನೇ ವರ್ಗದ ಗ್ರಾಮಗಳಲ್ಲಿ ಪ್ರತಿ ಮರವು ೧ ರತ್ತಲು ಅಡಿಕೆ ಕೊಟ್ಟಿತೆಂದು ಮಾಮಲೇದಾರರ ನಿರ್ಣಯವಾಗಿದೆ ಬೆಲ್ಲದ ಬೆಳೆಯ ಮಾನ ೩ನೇ ಗ್ರೂಪಗಳಿಗನುಸಾರವಾಗಿ ಠರಾಯಿಸಲ್ಪಟ್ಟಿದೆ ೧ನೇ ಗ್ರೂಪಿನಲ್ಲಿ ೧ ಎಕರೆಗೆ ೬೬ ಬಂಗಾಲಿ ಮಣಗಳಂತೆ, ೨ನೇ ಗ್ರೂಪಿನಲ್ಲಿ ೭೯ ಬಂ ಮಣಗಳಂತೆ, ೩ನೇ ಗ್ರೂಪಿನಲ್ಲಿ ೫೯ ಬಂ ಮಣಗಳಂತೆ, ೪ನೇ ಗ್ರೂಪಿನಲ್ಲಿ ೬೬ ಬಂ ಮಣಗಳಂತೆ, ೫ನೇ ಗ್ರೂಪಿನಲ್ಲಿ ೫೪ ಬಂ ಮಣಗಳಂತೆ ಮತ್ತು ೬ನೇ ಗ್ರೂಪಿನಲ್ಲಿ ೫೦ ಬಂ ಮಣಗಳಂತೆ ಬೆಲ್ಲದ ಉತ್ಪತ್ತಿಯಾಗಿದೆಯೆಂದು ಠಂಡ.ಹಿಡಿಯಲಾಗಿದೆ ಹಿಂಗಾರಿ ಭತ್ತದ ಉತ್ಪತ್ತಿಯೂ ೩ನೇ ಗ್ರೂಪವಾರ ನಿರ್ಧರಿಸಲ್ಪಟ್ಟಿದೆ ೧-೨-೩ನೇ ಗ್ರೂಪುಗಳಲ್ಲಿ ಎಕರೆಗೆ ೧೦ ಬಂ ಮಣ, ೪-೫ ಗ್ರೂಪುಗಳಲ್ಲಿ ೯ ಬಂ. ಮಣ ಮತ್ತು ೬ನೇ ಗ್ರೂಪಿನ ಹಳ್ಳಿಗಳಲ್ಲಿ ೮ ಬಂ ಮಣ ಹಿಂಗಾರಿ ಭತ್ತದ ಬೆಳೆ ಹುಟ್ಟಿರುತ್ತದಾಗಿ ನಿರ್ಧರಿಸಲಾಗಿದೆ ಈ ನಾಲ್ಕು ಬೆಳೆಗಳೂ ನೀರಾವರಿ ಭೂಮಿಯ ನೀರಾವರಿ ಬೆಳೆಗಳಾಗುತ್ತವೆ.

ಕಳೆದ ತಾ ೩ನೇಗೆ ಹೊನ್ನಬೆಳೆ ಮತ್ತು ಸುತ್ತ ಕೂಲಿಗಾರರ ಸಮಿತಿಯ ಸಭೆಯು ಊರಿನ ಶಾಲೆಯಲ್ಲಿ ಕೂಡಿತ್ತು. ಸಮಿತಿಯ ಉಪಾಧ್ಯಕ್ಷ ರಾ॥ ೩. ಎಸ್. ನಾಯಕರು ಅಧ್ಯಕ್ಷತೆ ವಹಿಸಿದ್ದರು ಜಿಲ್ಲೆಯ ಅಕ್ಕಿಯ ಕೊರತೆ ನೀಗಿಸಲಿಕ್ಕಾಗಿ ಸರಕಾರವು ಬೇರೆ ಜಿಲ್ಲೆಗಳಿಂದ ಅಕ್ಕಿ ತರಿಸಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಶಿಫಾರಸು ಮಾಡುವ ಒಂದು ಗೊತ್ತುವಳಿ, ... ಬಗ್ಗೆ ಈಗ ... ಸರಕಾರದ ... ಮುಂಬಯಿಗೆ ... ಕಳಿಸಬೇಕೆಂದು ಗೊತ್ತುವಳಿ, ... ಕೊಡುವ ... ಅಂಶಗಳನ್ನು ... ಬೇಕೆಂಬ ಒಂದು ಗೊತ್ತುವಳಿ ... ಕೂಲಿಗಾರರಿಗೆ ಭತ್ತ ಕೊಟ್ಟು, ... ದರದಿಂದಲೇ — ಆದರೆ ... ಅಕ್ಕಿಯ ... ದಲ್ಲಿ ಕೊಡುತ್ತಿದ್ದಂತೆ ವಾಹನ ... ಕೊಡದೆ — ಅವರಿಂದ ಬೇಸ್ತಿಗೆ ಅಕ್ಕಿ ಮಾಡಿಸಿಕೊಳ್ಳಬೇಕೆಂಬರ್ಥದ ಮಾಗದೊಂದು ಗೊತ್ತುವಳಿ ಇನ್ನೂ ಕೆಲವು ಗೊತ್ತುವಳಿಗಳಾದವು

BOMBAY SALES TAX ACT

NOTICE.

ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಆಕ್ಟ.

ನೋಟೀಸು.

೧ ಕಮಿಶನ್ ಏಜಂಟರು, ಕನಸ್ಯಾನಮೆಂಟ ಏಜಂಟರು, ಕ್ಲಿಯರಿಂಗ ಏಜಂಟರು ಹಾಗೂ ಇತರರು ಇವರ ಸಹಿತವಾಗಿ ಮುಂಬಯಿ ಪ್ರಾಂತದ ಹೊರಗೆ ವಾಸಿಸುವ ವ್ಯಾಪಾರಸ್ಥರ ಪತಿಯಿಂದ ಸದರಿ ಪ್ರಾಂತದಲ್ಲಿ ಏಜಂಟರೆಂದು ಅಥವಾ ಮುನೇಜರರೆಂದು ಕೆಲಸ ಮಾಡುವ ಅಥವಾ ಇಂಥ ವ್ಯಾಪಾರಸ್ಥರ ಪತಿಯಿಂದ ಸರಕುಗಳನ್ನು ಧಾರಣ ಮಾಡುವ ಯಾವತ್ತೂ ಜನರಿಗೆ ಇದರ ಮೂಲಕ ತಿಳಿಸುವದೇನಂದರೆ— ಈ ಪ್ರಾಂತದಲ್ಲಿಯ ಜನರಿಗೆ ತಮ್ಮನ್ನು ಏಜಂಟರನ್ನಾಗಿ ನೇಮಿಸಿದ ತಮ್ಮ ಹೊರಗಿನ ವ್ಯಾಪಾರಸ್ಥರ ಪತಿಯಿಂದ ತಾವು ಯಾವದೇ ಸರಕುಗಳನ್ನು ಮಾರಾಟ ಮಾಡಿದರೆ ಅಥವಾ ಪೂರೈಸಿದರೆ, ಅಥವಾ ತಮ್ಮನ್ನು ನೇಮಿಸಿದಂಥ ಯಾವ ವ್ಯಾಪಾರಸ್ಥರ ಸಲುವಾಗಿ ತಾವು ಸರಕುಗಳನ್ನು ಧಾರಣ ಮಾಡುತ್ತಿರುವರೋ ಅಂಥ ವ್ಯಾಪಾರಸ್ಥರ ಹೊರ್ತಾಗಿ ಇತರ ವ್ಯಾಪಾರಸ್ಥರ ವಿಲಾಸಕ್ಕೆ, ತಮ್ಮನ್ನು ನೇಮಿಸಿದಂಥ ವ್ಯಾಪಾರಸ್ಥರ ಸೂಚನೆಗಳ ಮೇರೆಗೆ ತಾವು ಸರಕುಗಳನ್ನು ಸದರಿ ಪ್ರಾಂತದಲ್ಲಿಯ ಯಾವದೇ ಸ್ಥಳದಿಂದ ಸದರಿ ಪ್ರಾಂತದ ಹೊರಗಿನ ಸ್ಥಳಗಳಿಗೆ ಕಳಿಸಿಕೊಟ್ಟರೆ ಅವರೇ (ಹೊರಗಿನ ವ್ಯಾಪಾರಸ್ಥರ ಏಜಂಟರು ಮುಂತಾದವರು) ಮುಂಬಯಿಯ ಮಾರಾಟಗಳ ಮೇಲಿನ ಕರದ ವಿಷಯದ ಕಾನೂನಿನ ೨ನೇ ಕಲಮಿನ (ಗ) ರಕಮಿಗೆ ಜೋಡಿಸಲಾದ ವಿವರಣೆಯನ್ವಯ ಇಂಥ ಮಾರಾಟಗಳನ್ನು ಹಾಗೂ ಪುರವಟೆಗಳನ್ನು ಮಾಡುವ ವ್ಯಾಪಾರಸ್ಥರಾಗಿರುವರೆಂದು ತಿಳಿಯತಕ್ಕದ್ದು

೨ ಇಂಥ ಮಾರಾಟಗಳ ಹಾಗೂ ಪುರವಟೆಗಳ ಕೋಶ ಉತ್ಪನ್ನವು ತಾ ೩೦-೩-೧೯೪೭ನೇ ಮುಗಿದ ವರ್ಷದೊಳಗೆ ೩೦,೦೦೦ ರೂಪಾಯಿಗಿಂತ ಅಥವಾ (ಆಮದು ಮಾಡುವವರ ಅಥವಾ ತಯಾರು ಮಾಡುವವರ ಬಾಬತಿನಲ್ಲಿ ೧೫,೦೦೦ ರೂಪಾಯಿಗಿಂತ) ಹೆಚ್ಚಿಗೆ ಇದ್ದರೆ, ಅವರು ತಾ. ೧—೪—೧೯೪೬ ರಿಂದ ಇಂಥ ಮಾರಾಟಗಳ ಹಾಗೂ ಪುರವಟೆಗಳ ಮೇಲೆ ಕರವನ್ನು ಕೊಡಲು ಆ ಪ್ರಕಾರ ಪಾತ್ರರಾಗುತ್ತಾರೆ ಮತ್ತು ಇತರ ಬಾಬತುಗಳಲ್ಲಿ ಅವರ ಕೋಶ ಉತ್ಪನ್ನವು ತಾ ೧—೪—೧೯೪೯ ರಿಂದ ಈ ಮರ್ಯಾದೆಗಳನ್ನು ಮೀರಿದಾಗ್ಗೆ ಅವರು ಕರವನ್ನು ಕೊಡಲು ಪಾತ್ರರಾಗುವರು

೩ ಅದ್ದರಿಂದ, ಅಂಥ ಯಾವತ್ತೂ ಕಮಿಶನ ಏಜಂಟರು, ಕ್ಲೀಯರಿಂಗ್ ಏಜಂಟರು, ಮುಂತಾದವರು ಈಗಾಗಲೇ ನೋಂದಣಿಯ ದಾಖಲೆಗಳನ್ನು ಪಡೆದಿರದಿದ್ದರೆ ಅವರು ನೋಂದಣಿಯ ಸಲುವಾಗಿ ತಮ್ಮ ವಾರ್ಡಿನ, ಶಹರಿನ ಅಥವಾ ಜಿಲ್ಹೆಯ ಸೇಲ್ಸ ಟೆಕ್ಸ ಒಫಿಸರನ ಕಡೆಗೆ ಕೂಡಲೆ ಅರ್ಜಿಯನ್ನು ಮಾಡಬೇಕು ಅವರು ಅವಶ್ಯಕ ತಪೂರಗಳನ್ನು ಸಹ ಪೂರೈಸತಕ್ಕದ್ದು ಮತ್ತು ತಾ ೧ ಏಪ್ರಿಲ ೧೯೪೬ನೇ ಇಸವಿಯಿಂದ ಪ್ರತಿ ಮೂರು ತಿಂಗಳಿನ ಅವಧಿಯ ಬಗ್ಗೆ ಸಲ್ಲತಕ್ಕ ಕರದ ರಕಮನ್ನು ಠರಾಯಿಸಲ್ಪಟ್ಟ ಅವಧಿಯೊಳಗಾಗಿ ಕೊಡತಕ್ಕದ್ದು

೪ ಮೇಲೆ ವಿವರಿಸಿದಂತೆ ಸದರಿ ಕಾನೂನಿನನ್ವಯ ಕರ ಕೊಡಲು ಪಾತ್ರನಿರುವ ಮತ್ತು ತಾ ೩೦-೮-೧೯೪೮ನೇ ಇಸವಿಗಿಂತ ಮುಂಚೆ ನೋಂದಣಿಯ ಸಲುವಾಗಿ ಅರ್ಜಿ ಮಾಡಲು ತಪ್ಪುವ ಯಾವನೇ ಮನುಷ್ಯನು ಸದರಿ ಕಾನೂನಿನ ೧೧ (೫) ನೇ ಕಲಮಿನನ್ವಯ ದಂಡವನ್ನು ಕೊಡಲು ಹಾಗೂ ೨೪ನೇ ಕಲಮಿನನ್ವಯ ಶಿಕ್ಷೆ ಹಾಕಲ್ಪಡಲು ಪಾತ್ರನಾಗುವನು

ನಂ ೩೯೬/೬,
ಮುಂಬಯಿ,
ತಾ. ೨೬—೭—೧೯೪೮

ವ್ಹಿ. ಎಲ್. ಗಿಡವಾನಿ,
ಡೆಪ್ಯುಟಿ ಕಮಿಶನರ್ ಒಫ್ ಸೇಲ್ಸ ಟೆಕ್ಸ
ಮುಂಬಯಿ ಪ್ರಾಂತ

ಜಿಲ್ಲಾ ಸಮಾಚಾರ

[illegible]

PUBLIC NOTICE.

BOMBAY SALES TAX ACT.

Application to Amreli and Okhamandal Districts of Baroda State from 1st August 1949.

ಸಾರ್ವಜನಿಕ ನೋಟೀಸು.

ಮುಂಬಯಿ ಮಾರಾಟಗಳ ಮೇಲಿನ ಕರದ ವಿಷಯದ ಕಾನೂನನ್ನು ೧೯೪೯ನೇ ಇಸವಿಯ ಅಗಸ್ಟ ತಿಂಗಳ ೧ನೇ ತಾರೀಖಿನಿಂದ ಬರೋದೆ ಸಂಸ್ಥಾನದ ಅಮರೇಳಿ ಹಾಗೂ ಓಖಾಮಂಡಳ ಜಿಲ್ಲೆಗಳಿಗೆ ಲಾಗೂ ಮಾಡೋಣ.

[illegible]

೧ ಮುಂಬಯಿ ಪ್ರಾಂತದಲ್ಲಿ ಹಾಗೂ [illegible] — ರೂ ೧೦,೦೦೦ ([illegible] ೧೦೦೦ [illegible])

೨ [illegible] ಅಥವಾ [illegible] — ರೂ ೧೦,೦೦೦

೩. ಇತರ [illegible] ವ್ಯಾಪಾರಸ್ಥನ ಬಾಬತಿನಲ್ಲಿ — ರೂ ೩೦,೦೦೦.

[illegible]

ಸ್ಟಿ. ಎಲ್. ಗಿಡವಾನಿ,

[illegible]

ಮುಂಬಯಿ ಪ್ರಾಂತ

ನಂಬರು [illegible]

ಮುಂಬಯಿ, ತಾ [illegible]

[illegible]

ಮುಂಡಗೋಡ—

(ತಾ. ೨೨-೭-೪೮) [illegible]

[illegible]

ಯಲ್ಲಾಪುರ—

(ತಾ. ೨೦-೭-೪೮) [illegible]

[illegible]

ಹಳಿಯಾಳ—

(ತಾ. ೨೯-೭-೪೮) [illegible]

[illegible]

ಸ್ಥಿರಾಸ್ತಿಯ ಮೂಲಿ ಹಕ್ಕಿನ ಲಿಲಾಂವ.

[illegible] O A 341/48 [illegible]

[illegible]

ಕೊಲ್ಲೂರ, ತಾ ೩೦-೭-೪೮

Executive Officer,

SRI MOOKAMBIKA TEMPLE, P O KOLLUR S K

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "[illegible]ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದ

ಸ್ವಾತಂತ್ರ್ಯೋತ್ಸವದ ಸಂಚಿಕೆ.

Reg. No. B. 1270. Monday, 15-8-1949.

ಕಾನಡಾವೃತ್ತ

ವರ್ಷ ೬೨] THE KANARA NEWS. [ಸಂಚಿಕೆ ೭.

ಕುಮಟಾ - ಸೋಮವಾರ, ತಾ ೧೫—೮—೧೯೪೯

ಇತಿಹಾಸಪ್ರಸಿದ್ಧ ಭಾರತ ಚಕ್ರವರ್ತಿ ಅಶೋಕನ ಚರಿತ್ರೆ.

—*—

ಹಿಂದುಸ್ಥಾನದ ಸದ್ಯದ ಸ್ವಾತಂತ್ರ್ಯದ ಮನ್ವಂತರದಲ್ಲಿ ಸಮ್ರಾಟ್ ಅಶೋಕ ಮಹಾರಾಜನ ಸ್ಮರಣೆಯಾಗುತ್ತಿದೆ ಸ್ವತಂತ್ರ ಭಾರತದ ರಾಜಮುದ್ರೆ ಅಶೋಕನು ಕಟ್ಟಿಸಿದ ಒಂದು ಸ್ತಂಭದ ಚಿತ್ರದಿಂದ ಆರಿಸಲ್ಪಟ್ಟಿದೆ ರಾಷ್ಟ್ರಧ್ವಜದ ಮೇಲೆ ಅಶೋಕಚಕ್ರದ ಅಂಕಿತವನ್ನಿಟ್ಟು ಆ ಸಮ್ರಾಟನ ಪರಂಪರೆಯನ್ನು ಸ್ವತಂತ್ರ ಭಾರತವು ಕಾಲಮಾನಕ್ಕುಚಿತವಾಗಿ ನಡೆಸಿ ಲೋಕಸುಖವನ್ನು ಕಲ್ಪಿಸಬೇಕೆಂದು ನಮ್ಮ ರಾಷ್ಟ್ರವು ನಿರ್ಧಾರ ಮಾಡಿದ ಇಂಥ ಮಹಾಪುರುಷನ ಚರಿತ್ರೆಯನ್ನು ಪ್ರತಿಯೊಬ್ಬ ಭಾರತೀಯನು ಅರಿತುಕೊಂಡು, ಆತನ ಪರಂಪರೆಯನ್ನು ನಡೆಸಿ ಕೀರ್ತಿವಂತನಾಗಲು ಪ್ರಯತ್ನಿಸುವದು ಈಗಿನ ಕಾಲಮಾನದಲ್ಲಿ ಅತ್ಯವಶ್ಯವುಂಟು.

ಸಮ್ರಾಟ ಅಶೋಕ ಮಹಾರಾಜನು ವಿಖ್ಯಾತವಾದ ಮೌರ್ಯ ವಂಶದವನು. ನಂದ ವಂಶದ ೯ ಮಂದಿ ಅರಸರು ೧೧ ವರ್ಷ ಆಳಿದ ತರುವಾಯ ಮೌರ್ಯ ವಂಶದ ಚಂದ್ರಗುಪ್ತನು ಹಿಂದುಸ್ಥಾನದ ಅರಸನಾದನು ಚಂದ್ರಗುಪ್ತನೇ ಮೌರ್ಯ ವಂಶದ ಮೊದಲನೇ ಅರಸನು ಚಂದ್ರಗುಪ್ತನು ಮಹಾ ಪ್ರತಾಪಶಾಲಿಯೂ ಮಹಾ ಚಾತುರ್ಯಶಾಲಿಯೂ ಆಗಿದ್ದನು! ಆತನ ಕಾಲದಲ್ಲಿ ಹಿಂದುಸ್ಥಾನದ ಪರಿಸ್ಥಿತಿ ಬಹಳ ಕಠಿಣವಾಗಿತ್ತು. ಮೇಲಿಂದ ಮೇಲೆ ಪರಚಕ್ರಗಳು ದಾಳಿ ಮಾಡುತ್ತಿದ್ದುದರಿಂದ ಹಿಂದುಸ್ಥಾನವೆಲ್ಲ ಛಿನ್ನವಿಚ್ಛಿನ್ನವಾಗಿತ್ತು. ಗ್ರೀಕ ದೇಶದ ಮಹಾಪ್ರಭು ದೊಡ್ಡ ಅಲೆಕ್ಸಾಂಡರ ಭೂಪನು ಹಿಂದುಸ್ಥಾನದ ಮೇಲೆ ದಂಡೆತ್ತಿಬಂದು ಹಿಂದುಸ್ಥಾನಗಳನ್ನು ಬಹಳ ಹಣಿಸಿದ್ದನು ಆಗಾಗ ಸುಲಿಗೆಗಳಾಗುತ್ತಿದ್ದವು, ಜನರಿಗೆ ಎಲ್ಲಿಯೂ ಸುರಕ್ಷಿತತೆ ಕಾಣುತ್ತಿರಲಿಲ್ಲ; ಎಲ್ಲೆಲ್ಲಿಯೂ ಅರಾಜಕತೆ ಸಲೀತ್ತು ಚಂದ್ರಗುಪ್ತನು ಈ ಕಾಲದಲ್ಲಿ ಆಕ್ರಮಣ ಮಾಡಬಂದ ಅಲೆಕ್ಸಾಂಡರನಿಗೆ ಎದುರಾಳಿಯಾಗಿ ನಿಂತು, ಆತನನ್ನು ಸೋಲಿಸಿ ಹಿಂದುಸ್ಥಾನವನ್ನು ರಕ್ಷಿಸಿದನು ಅಲ್ಲದೆ ಬೇರೆ ಬೇರೆ ರಾಜ್ಯಗಳನ್ನು ಏಕತ್ರ ಮಾಡಿಕೊಂಡು, ಹಿಂದುಸ್ಥಾನದೊಳಗೆ ಎಲ್ಲ ಕಡೆಯಲ್ಲಿಯೂ ಶಾಂತತೆಯನ್ನುಂಟುಮಾಡಿದನು

ಚಂದ್ರಗುಪ್ತನ ತರುವಾಯ ಅವನ ಮಗ ಬಿಂದುಸಾರನು ಪಟ್ಟವನ್ನೇರಿದನು. ಆದರೆ ಬಿಂದುಸಾರನ ಕೀರ್ತಿ ಅಷ್ಟೇನು ಹೇಳತಕ್ಕಂತಹದಲ್ಲ ಈ ಬಿಂದುಸಾರನ ಮಗನೇ ಅಶೋಕವರ್ಧನನು. ಈತನೇ ಸಮ್ರಾಟ ಅಶೋಕನೆಂದು ಕೀರ್ತಿವೆತ್ತನು. ಪಟ್ಟಕ್ಕೆ ಬರುವ ಮೊದಲೇ ಅಶೋಕ ಮಹಾರಾಜನಿಗೆ ರಾಜ್ಯಾಡಳಿತೆಯ ಅನುಭವ ದೊರೆತಿತ್ತು. ಮೊದಲು ತಕ್ಷಶಿಲೆಯಲ್ಲಿಯೂ ಆಮೇಲೆ ಉಜ್ಜಯನಿಯಲ್ಲಿಯೂ ಆಡಳಿತೆಯನ್ನು ನಡಿಸಿ ಅವನು ರಾಜ್ಯಭಾರದ ಅನುಭವ ಪಡೆದಿದ್ದನು ಮೊದಮೊದಲು ಅಶೋಕನು ಸುಖವಿಲಾಸಗಳಲ್ಲಿ ಕಾಲ ಕಳೆಯುತ್ತಿದ್ದನು ಆದರೆ ಮುಂದೆ ಆತನು ನಿಶ್ಚಾಂತ ಧರ್ಮಪರಾಯಣನಾದನು

ಅಶೋಕನ ಸಾಮ್ರಾಜ್ಯವು ಪಶ್ಚಿಮಕ್ಕೆ ಅಫಗಾಣಿಸ್ಥಾನ, ಬಲುಚಿಸ್ಥಾನಗಳ ವರೆಗೂ ಉತ್ತರಕ್ಕೆ ಕಾಶ್ಮೀರದ ವರೆಗೂ ಪೂರ್ವದಲ್ಲಿ ನೇಪಾಳದ ವರೆಗೂ ಹಬ್ಬಿತ್ತು. ಹಿಂದುಸ್ಥಾನದ ತೀರ ದಕ್ಷಿಣಕ್ಕಿರುವ ತಮಿಳ ಸಂಸ್ಥಾನಗಳಷ್ಟೇ ಅಶೋಕನ ಸ್ವಾಧೀನವಾಗಿದ್ದಿಲ್ಲ

ಅಶೋಕನು ಕ್ರಿಸ್ತಶಕ ಪೂರ್ವದ ೨೭೩ರಿಂದ ೨೩೨ರ ತನಕ ಅಂದರೆ ೪೧ ವರ್ಷಗಳ ಕಾಲ ರಾಜ್ಯವಾಳಿದನು ಈತನ ರಾಜ್ಯಭಾರದ ಕಲ್ಪನೆ ಆತನ ಶಿಲಾಲೇಖಗಳಿಂದ ಬರುವಂತಿದೆ ಆತನ ಮನೋವೃತ್ತಿಯನ್ನೂ ರಾಜ್ಯಭಾರದ ವಿಚಾರಗಳನ್ನೂ ಇತಿಹಾಸಕಾರರು ಅವನ ಶಿಲಾಲೇಖಗಳ ಮೇಲಿಂದ ಕಂಡುಹಿಡಿಯುತ್ತಾರೆ. ಕಲಿಂಗ ದೇಶದ ಮೇಲಿನ ಅವನ ಸ್ವಾರಿಯ ವರ್ಣನೆ ಕೊಡುವ ಶಿಲಾಲೇಖದಲ್ಲಿ ಈ ರೀತಿ ಬರೆದಿದೆ ತಾನು ಪಟ್ಟಕ್ಕೆ ಬಂದ ೮ ವರ್ಷಗಳಲ್ಲಿ ಸಮ್ರಾಟನು ಕಲಿಂಗ ದೇಶವನ್ನು ಗೆದ್ದುಕೊಂಡನು ಈ ಸ್ವಾರಿಯಲ್ಲಿ ೧½ ಲಕ್ಷ ಜನರು ಯುದ್ಧಕೈದಿಗಳಾದರು, ೧ ಲಕ್ಷ ಜನರು ಸತ್ತರು, ಅಸಂಖ್ಯ ಜನರು ಕಾಣೆಯಾದರು! ಇದರಿಂದ ಸಮ್ರಾಟನಿಗೆ ಬಹಳ ವ್ಯಸನವಾಯಿತು ಈ ಯುದ್ಧದ ತರುವಾಯ ಸಮ್ರಾಟನ ಅಂತಃಕರಣ ತೀರ ಮಿದುವಾಯಿತು ಸಮ್ರಾಟನ ವಿರುದ್ಧ ಯಾರೂ ಏನೇ ಅಪರಾಧ ಮಾಡಿದಾಗ್ಯೂ ಸಮ್ರಾಟನು ಅದನ್ನು ಸಹಿಸುತ್ತಿದ್ದನು. ಕಾಡು ಜನರ ಮೇಲೆ ಸಹ ಸಮ್ರಾಟನ ಕೃಪಾದೃಷ್ಟಿ ಇತ್ತು. ಕಾಡು ಜನರು ಸದ್ಧರ್ಮದಿಂದ ನಡಕೊಳ್ಳಬೇಕೆಂದು ಸಮ್ರಾಟನ ಅಪೇಕ್ಷೆ ಇತ್ತು ಸಕಲ ಮಾನವರೂ ಸಂಯಮ, ಮನಃಶಾಂತಿ ಮತ್ತು ಸಮಾಧಾನ ಈ ಗುಣಗಳನ್ನು ಸಂಪಾದಿಸಬೇಕೆಂದು ಸಮ್ರಾಟನ ಆಕಾಂಕ್ಷೆ ಇತ್ತು

ಅದೇ ಶಿಲಾಲೇಖದಲ್ಲಿ ಅಶೋಕ ಮಹಾರಾಜನ ಕೆಲವು ವಚನಗಳೂ ಕೊಡಲ್ಪಟ್ಟಿವೆ ಧರ್ಮದಿಂದ ಮಾನವರ ಅಂತಃಕರಣಗಳನ್ನು ತಮ್ಮ ಕಡೆ ಆಕರ್ಷಿಸಿಕೊಳ್ಳುವದೇ ನಿಜವಾದ ವಿಜಯ ಬೌದ್ಧ ಸಂಪ್ರದಾಯ ೬೦೦ ಯೋಜನ ದೂರದ ವರೆಗೆ ಹಬ್ಬಿಕೊಂಡಿದೆ. ದಕ್ಷಿಣಕ್ಕೆ ಚೋಳ, ಪಾಂಡ್ಯ, ಕಾಂಭೋಜ, ಭೋಜ ಮೊದಲಾದ ಪ್ರದೇಶಗಳಲ್ಲಿ ಸಹ ಈ ಸಂಪ್ರದಾಯ ಹಬ್ಬಿದೆ. ಈ ಧರ್ಮದ ಸಹಾಯದಿಂದ ಪ್ರಾಪ್ತವಾದ ವಿಜಯವೇ ಶಾಶ್ವತವಾದ ವಿಜಯವಿದ್ದು ಪರಮಾರ್ಥ-ಸಾಧನೆಗೆ ಉಪಯುಕ್ತವಾದದ್ದಿರುವದರಿಂದ ಅದನ್ನು ಎಲ್ಲರೂ ಪಾಲಿಸತಕ್ಕದ್ದು, ಹೀಗೆ ಅಶೋಕ ಮಹಾರಾಜನು ಅಪ್ಪಣೆ ಕೊಟ್ಟಿದ್ದುಂಟು ಸಕಲ ಪ್ರಜೆಗಳೂ ತನ್ನ ಮಕ್ಕಳೆಂದು ಆತನು ಯಾವಾಗಲೂ ಹೇಳುತ್ತಿದ್ದನು ಅಧಿಕಾರಿಗಳು ಅನ್ಯಾಯದಿಂದ ನಡಕೊಂಡು ಜನರನ್ನು ಪೀಡಿಸಿದರೆ ಆತನಿಗೆ ಬಹಳ ಖೇದವಾಗುತ್ತಿತ್ತು. ಸಮಾಪಾ ಮತ್ತು ತೋಸಲೀ ಪಟ್ಟಣಗಳಲ್ಲಿರುವ ಶಿಲಾಲೇಖಗಳಲ್ಲಿ, ಅಧಿಕಾರಿಗಳನ್ನುದ್ದೇಶಿಸಿ,"ವ್ಯಸನಿಗಳಾಗಬೇಡಿರಿ. ಜನರನ್ನು ಸರಿಯಾಗಿ ನಡಿಸಿಕೊಳ್ಳಿರಿ" ಎಂಬುದಾಗಿ ಆತನು ಹೇಳಿದ್ದುಂಟು ಕಾಡು ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಧರ್ಮಪ್ರಚಾರಕರ ವಿದ್ಯಮಾನ ಧರ್ಮಬೋಧೆ ಮಾಡಿ, ಅವರ ನಡಾವಳಿಯನ್ನು ಸುಧಾರಿಸಿ ಅವರನ್ನು ಸತ್ಪ್ರಜೆಗಳನ್ನಾಗಿ ಅವನು ರೂಪಾಂತರಿಸಿದ್ದನು.

ಅಶೋಕನು ನುಡಿದಂತೆ ನಡೆಯುವ ಮಹಾಪುರುಷನಾಗಿದ್ದನು ಹಿಂದು ಅರಸರು ಪ್ರಜೆಗಳ ದೂರುಗಳನ್ನು ಸ್ವತಃ ಕೇಳಿಕೊಂಡು ನಿರ್ಣಯ ಕೊಡುವ ಪರಂಪರೆಯನ್ನು ಇಟ್ಟುಕೊಂಡಿದ್ದರು. ತೀರ ಕೆಳತರಗತಿಯ ಜನರನ್ನು ಸಹ ಅವರು ಅಲಕ್ಷಿಸುತ್ತಿರಲಿಲ್ಲ ಅಶೋಕನಿಗೆ ಈ ಪರಂಪರೆಯನ್ನು ನಡಿಸಲು ಕೆಲ ಕಾಲ ಅನುಕೂಲವಾಗಿರಲಿಲ್ಲ. ಈಬಗ್ಗೆ ಆತನು ಪಶ್ಚಾತ್ತಾಪ ಪ್ರದರ್ಶಿಸಿ, "ಇನ್ನು ಮುಂದೆ, ನನ್ನ ಭೋಜನದ ಸಮಯವಿರಲಿ, ನಾನು ಅಂತಃಪುರದಲ್ಲಿದ್ದ ಕಾಲವಿರಲಿ, ಯಾ ಬೇರೆ ಯಾವದೇ ಖಾಸಗಿ ಕೆಲಸದಲ್ಲಿ ನಾನು ತೊಡಗಿರುವ ಪ್ರಸಂಗವಿರಲಿ, ಅಧಿಕಾರಿಗಳು ನನ್ನನ್ನು ಕಾಣಬಹುದೆಂ'ದು ಅಧಿಕಾರಿಗಳಿಗೆ ತಿಳಿಸಿಟ್ಟಿದ್ದನು ಪ್ರಜಾಕಾರ್ಯ ಮಾಡಲಿಕ್ಕೆ ಸದಾ ಸರ್ವದಾ ಸಿದ್ಧನಿದ್ದೇನೆಂದೂ ಪ್ರಜೆಗಳಿಗೆ ಸುಖವಾಗುವಂತೆ ದುಡಿಯಲು ತಾನು ಯಾವಾಗಲೂ ಸಿದ್ಧನಿದ್ದೇನೆಂದೂ ಅಶೋಕ ಸಮ್ರಾಟನು ಆಜ್ಞೆಗಳನ್ನೂ ಹೊರಡಿಸಿದ್ದನು.

ಅಶೋಕನ ಕಾಲದಲ್ಲಿ ಮೌರ್ಯ ವಂಶವು ಕೀರ್ತಿ ಶಿಖರವನ್ನು ಮುಟ್ಟಿತ್ತು. ಅಶೋಕನು ತಕ್ಷಶಿಲೆಯಲ್ಲಿ ಮರಣ ಹೊಂದಿದನು. ಆತನ ತರುವಾಯ ಮೌರ್ಯ ವಂಶ ಬಹುಕಾಲ ಬಾಳಲಿಲ್ಲ ೪೬ ವರ್ಷಗಳಲ್ಲಿ ಮೌರ್ಯ ವಂಶದ ಸಾಮ್ರಾಜ್ಯ ಅಂತ್ಯವಾಗಿ, ಹಿಂದುಸ್ಥಾನದಲ್ಲಿ ಶುಂಗ ವಂಶದವರ ಆಳಿಕೆಗೆ ಪ್ರಾರಂಭವಾಯಿತು.

ಅಶೋಕನ ಮೂಲ ರಾಜ್ಯ ಮಗಧ ದೇಶದೊಳಗೆ ಈ ಪ್ರದೇಶ ಮೌರ್ಯ ವಂಶದ ಮೂಲ ದೇಶ. ಪಾಟಲೀಪುತ್ರವು ಈ ದೇಶದ ರಾಜಧಾನಿಯಾಗಿತ್ತು. ಇದು ೯ ಮೈಲುದ್ದ ಪ್ರದೇಶವಾಗಿತ್ತು ಈಗಿನ ಪಾಟ್ನಾ, ಬಂಕಿಪೂರ ಮೊದಲಾದ ನಗರಗಳುಳ್ಳ, ಶೋಣ ಮತ್ತು ಗಂಗಾ ನದಿಗಳು ಕೂಡುವಲ್ಲಿರುವ ಸಂಗಮ ಪ್ರದೇಶವೇ ಈ ಪಟ್ಟಣವಾಗಿತ್ತು. ಅಶೋಕನ ಅರಮನೆಗೆ ೬೪ ಹೆಬ್ಬಾಗಿಲಗಳೂ ೫೭೦ ಗೋಪುರಗಳೂ ಇದ್ದವು. ಇಡೀ ಅರಮನೆ ಕಟ್ಟಿಗೆಯಿಂದ ಕಟ್ಟಿಸಿತ್ತು. ಈ ಅತಿ ಭವ್ಯವಾದ ಅರಮನೆಯ ದರಬಾರದ ಸಂಭ್ರಮವನ್ನು ಬಣ್ಣಿಸಲಸದಳ. ಸಮ್ರಾಟನು ಚಿನ್ನದ ಪಲ್ಲಕ್ಕಿಗಳಲ್ಲಿ ಇಲ್ಲವೆ ಸುಶೋಭಿತವಾಗಿ ಸಿಂಗರಿಸಿದ ಮದ್ದಾನೆಯ ಮೇಲೆ ಕೂತು ಓಲಗಕ್ಕೆ ಬರುವ ನೋಟ ಅಭೂತಪೂರ್ವವಾಗಿತ್ತು. ಅರಮನೆಯಲ್ಲಿ ಏಶಿಯಾ ಖಂಡದಲ್ಲಿ ಚೀನ ದೇಶದಲ್ಲೂ ಸಿಗುತ್ತಿದ್ದ ಯಾವತ್ತೂ ವಿಲಾಸ-ವಸ್ತುಗಳಿದ್ದವು

ಅಶೋಕನ ಕಾಲದ ರಾಜ್ಯಭಾರ ರಾಜಾಧೀನವಾಗಿತ್ತು. ರಾಜನೇ ಕೊನೆಯ ನಿರ್ಣಯ ಕೊಡುತ್ತಿದ್ದನು ರಾಜನಿಗೆ ಸಲಹೆ ಕೊಡಲು ಒಂದು ಪ್ರಧಾನ ಮಂಡಳವಿತ್ತು. ಆ ಪ್ರಧಾನರ ಸಲಹೆ ಪಡೆದು ಅರಸನು ನಡೆಕೊಳ್ಳುತ್ತಿದ್ದನು. ಮೇಲಧಿಕಾರಿಗಳಿಗೆ ಮಹಾಮಾತ್ರರೆಂದು ಸಂಬೋಧಿಸುತ್ತಿದ್ದರು ಇವರ ಸಹಾಯಕರಾಗಿ ಧರ್ಮ-ಮಹಾಮಾತ್ರರೆಂಬ ಹೊಸ ಅಧಿಕಾರಿಗಳು ನೇಮಿಸಲ್ಪಟ್ಟರು ಇವರು ರಾಜ್ಯದಲ್ಲಿ ಅಹಿಂಸೆಯ ತತ್ವವನ್ನು ಹಬ್ಬಿಸಿ ಸಕಲರೂ ಶಾಂತತೆಯಿಂದ ನಡೆಕೊಳ್ಳುವಂತೆ ಜಾಗ್ರತೆ ವಹಿಸುತ್ತಿದ್ದರು. ಪ್ರಾಂತಗಳಿಗೆ ಆಗ ಸ್ವಾಯತ್ತತೆ ಇರಲಿಲ್ಲ. ಮಧ್ಯವರ್ತಿ ಸರಕಾರದ ಆಜ್ಞೆಗಳನ್ನು ಪ್ರಾಂತಿಕ ಅಧಿಕಾರಿಗಳು ಪಾಲಿಸಬೇಕಾಗಿತ್ತು. ಗೋಪ, ನಾಗರಿಕ, ಪ್ರಸ್ಥಿತ, ಆಗತ ಹೀಗೆ ಬೇರೆ ಬೇರೆ ಅಧಿಕಾರಿಗಳಿದ್ದರು ೧೦ರಿಂದ ೪೦ರ ತನಕ ಮನೆಗಳುಳ್ಳ ಪ್ರದೇಶದ ಮೇಲೆ ಅಧಿಕಾರ ನಡಿಸುವ ಅಧಿಕಾರಿಗಳಿಗೆ ಗೋಪರೆಂಬ ಸಂಜ್ಞೆಯಿತ್ತು, ಅವರ ಮೇಲೆ ನಾಗರಿಕರು, ಅವರ ಮೇಲೆ ಪ್ರಸ್ಥಿತರು; ಅವರ ಮೇಲೆ ಆಗತರು; ಹೀಗೆ ಅಧಿಕಾರಿಗಳ ಶ್ರೇಣಿಯಿತ್ತು. ಜನಸಂಖ್ಯೆ, ಜನಕುಲ, ಜನಗೋತ್ರ ಜನರ ಆದಾಯವೆಚ್ಚಗಳನ್ನೆಲ್ಲಾ ಈ ಅಧಿಕಾರಿಗಳು ನೋಡುತ್ತಿದ್ದರು. ಆರೋಗ್ಯ-ರಕ್ಷಣೆ ಇವರ ಕೆಲಸವಾಗಿತ್ತು. ಅರಸರು ಗುಪ್ತಚಾರರನ್ನು ನೇಮಿಸಿ ಜನರ ಪರಿಸ್ಥಿತಿಯನ್ನು ತಿಳಕೊಳ್ಳುತ್ತಿದ್ದರು ಈ ಗುಪ್ತಚಾರರ ದಕ್ಷತೆಯನ್ನು ವಿದೇಶಿ ಪ್ರವಾಸಿಗಳು ಬಹಳ ಪ್ರಶಂಸಿಸಿದ್ದಾರೆ. ಅಶೋಕ ಕಾಲದ ಗುಪ್ತಚಾರರನ್ನು ಅರ್ವಾಚೀನ ಜರ್ಮನ ಗುಪ್ತಚಾರರೊಡನೆ ಹೋಲಿಸಬಹುದೆಂದು ಇತಿಹಾಸಜ್ಞರು ಹೇಳುತ್ತಾರೆ.

ಅಶೋಕನ ಕಾಲದಲ್ಲಿ ಭೂಕಂದಾಯದ ಎತ್ತುವಳಿಯಾಗುತ್ತಿತ್ತು. ಕೃಷಿಗೆ ಅವಶ್ಯವುಳ್ಳ ಜಲಾಶಯಗಳು ಕಟ್ಟಿಸಲ್ಪಟ್ಟಿದ್ದವು ಅಲ್ಲಲ್ಲಿ ಮಾರ್ಗಗಳು ಕಂಗೊಳಿಸುತ್ತಿದ್ದವು. ಆ ಮಾರ್ಗಗಳ ಅಂತರ ತಿಳಿಯುವ ಕಲ್ಲುಗಳೂ ಅಶೋಕನ ಕಾಲದಲ್ಲಿ ರೂಢವಾಗಿದ್ದವು. ಅಶೋಕನ ರಾಜ್ಯದಲ್ಲಿ ಕಳವು ಆಗುತ್ತಿದ್ದಿಲ್ಲೆಂದು ಚೀನಿ ಪ್ರವಾಸಿ ಹೂವೆನ್-ತ್ಸಂಗನು ಬರೆದಿದ್ದಾನೆ. ಅಶೋಕನ ಕಾಲದಲ್ಲಿ ಎಲ್ಲೆಲ್ಲೂ ಶಾಂತಿ ನೆಲಸಿದ್ದರಿಂದ ಸಾಹಿತ್ಯ ಮತ್ತು ಕಲಾಕೌಶಲ್ಯಗಳು ಅಭ್ಯುದಯ ಹೊಂದಿದ್ದವು. ಬೌದ್ಧ ಭಿಕ್ಷುಕರು ನ್ಯಾಯದಾನ ಮಾಡುತ್ತಿದ್ದರು ಅಶೋಕ ಕಾಲದ ಸ್ತೂಪಗಳೂ, ಸ್ತಂಭಗಳೂ, ವಿಗ್ರಹಗಳೂ ಶಿಲಾಲೇಖಗಳೂ ಆ ಕಾಲದ ಸದ್ವಿದ್ಯೆ ಕಲಾಕೌಶಲ್ಯಗಳ ಸಾಕ್ಷಿಯಾಗಿವೆ. ಅಶೋಕನ ಕಾಲದಲ್ಲಿ ಜನಸಾಮಾನ್ಯರು ನೀತಿವಂತರಾಗಿದ್ದರು ಅಶೋಕನು ಪ್ರಚಾರಗೊಳಿಸಿದ ನೀತಿ-ವಿಚಾರಗಳು ಅನೇಕ ಶಿಲಾಲೇಖಗಳಲ್ಲಿ ಕಂಡು ಬರುತ್ತಿವೆ ತಾಯಿ-ತಂದೆಗಳ ಆಜ್ಞೆಗಳನ್ನು ಪಾಲಿಸಬೇಕು, ಜೀವಕೋಟಿಯ ಬಗ್ಗೆ ಆದರ ಹಿಡಿಯಬೇಕು, ಸತ್ಯವನ್ನಾಡಬೇಕು; ಧರ್ಮಾಜ್ಞೆಗಳಿಗನುಸಾರವಾಗಿ ಪ್ರತಿಯೊಬ್ಬರೂ ವರ್ತಿಸಬೇಕು ಗುರುಗಳೊಡನೆ ಮತ್ತು ಆಪ್ತರೊಡನೆ ಶಿಷ್ಯರು ನಮ್ರತೆಯಿಂದ ವರ್ತಿಸತಕ್ಕದ್ದು; ಇದರಿಂದ ಆಯುಷ್ಯವೂ ಸುಖವೂ ವೃದ್ಧಿಹೊಂದುತ್ತಿವೆ. ಹೀಗೆ ಅನೇಕ ಶಿಲಾಶಾಸನಗಳಲ್ಲಿ ಅಶೋಕನು ಬೋಧಿಸಿದ್ದನು. ಟು ಅಧಿಕಾರಿಗಳನ್ನು ಉದ್ದೇಶಿಸಿ ಒರೆದ ಶಿಲಾ-ಶಾಸನವಲ್ಲಿ ಸಹ ಇದೇ ರೀತಿ ಹೇಳಲ್ಪಟ್ಟಿದೆ ಮೇಲಧಿಕಾರಿಗಳು ತಮ್ಮ ಆಧಿಕಾರ ಕ್ಷೇತ್ರದಲ್ಲಿ ಸಂಚರಿಸಿ ಧರ್ಮ ಪ್ರಸಾರ ಮಾಡಬೇಕು ಧರ್ಮದಾನಕ್ಕೆ ಸಮಾನವಾದ ಬೇರೆ ದಾನವಿಲ್ಲ ಪರ ಧರ್ಮವನ್ನು ತಿರಸ್ಕರಿಸಕೂಡದು. ಪಿತ್ರಾಜ್ಞಾ-ಪಾಲನ, ದಾನ, ಸದಾಚಾರ, ಅಹಿಂಸೆ, ಭೂತದಯೆ, ಮಿತಾಹಾರ, ಮಿತವಿಹಾರ ಇವೇ ಅವನು ಮಾಡಿದ ಧರ್ಮಬೋಧೆಯ ಮುಖ್ಯ ವಿಷಯಗಳು. ಬೌದ್ಧ ಧರ್ಮದ ವಿಶೇಷ ಅಭಿಮಾನವನ್ನು ಅಶೋಕನು ತಳೆದಿದ್ದನು ಬುದ್ಧದೇವರ ಸಮಸ್ತ ಆಜ್ಞೆಗಳು ಅಶೋಕನಿಗೆ ಸ್ವಾರಸ್ಯವಾಗಿದ್ದವು

ಇಂಥ ರಾಜ್ಯದಲ್ಲಿ ಸಹ ಲಂಚ ತಿನ್ನುವ ಅಧಿಕಾರಿಗಳಿದ್ದರು! ಲಂಚ ತಿನ್ನುವ ಪ್ರಕಾರಗಳು ೪೦ ಬಗೆಯವು ಇದ್ದವೆಂದು ಆ ಕಾಲದಲ್ಲಿ ರಚಿತವಾದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವರ್ಣಿಸಲ್ಪಟ್ಟಿದೆ ಲಂಚದ ಪ್ರಕರಣಗಳನ್ನು ಹಿಡಿದು ಕೊಟ್ಟವರಿಗೆ ಇನಾಮು ಕೊಡುವ ಏರ್ಪಾಟು ಇತ್ತು.

ಹಿಂದುಸ್ಥಾನದ ಇತಿಹಾಸವು ಚಕ್ರವರ್ತಿ ಅಶೋಕನಿಂದಲೇ ಪ್ರಾರಂಭವಾಗುತ್ತದೆಂದು ಹೇಳಬಹುದು. ಅದಕ್ಕಿಂತ ಮುಂಚಿನ ಅ... ಸರ ಸುಸಂಗತವಾದ ಸಾಧಾರ ಇತಿಹಾಸ ದೊರೆಯುವದಿಲ್ಲ ಈ ತರಳ ಸಿಕ್ಕಿರುವ ಅಶೋಕನ ಇತಿಹಾಸವನ್ನು ಕೂಡ ಶೋಧಕರು ಶಿಲಾಲೇಖಗಳ ನೆರವಿಂದ ತಯಾರಿಸಿದ್ದಾರೆ ಇಂಥ ಅಶೋಕ ಸಮ್ರಾಟನ ಸ್ಮರಣೆಯನ್ನು ಈಹೊತ್ತು ಹಿಂದ ಜನಾಂಗವು ಮಾಡಿ, ಆತನ ಪರಂಪರೆಯನ್ನು ಮುಂದಕ್ಕೆ ರೂಢಗೊಳಿಸುವ ದೃಢ ಪ್ರತಿಜ್ಞೆ ಮಾಡಬೇಕು. ಅಶೋಕನ ನೀತಿ-ವಚನಗಳನ್ನು ಅಧಿಕಾರಿಗಳೂ ಪ್ರಜೆಗಳೂ ನೆನೆದು, ತಮ್ಮ ನಡಾವಳಿಯಲ್ಲಿ ಕಂಡು ಬರುವ ನ್ಯೂನತೆಗಳನ್ನು ಹೋಗಲಾಡಿಸಿ ಸುಖಸಮೃದ್ಧಿ ಹೊಂದಲೆಂದು ಪ್ರಾರ್ಥನೆ

ಪತ್ರಿಕಾ-ಪ್ರಕಟನೆ.

ಎಲ್ಲ ಬಗೆಯ ಖಾದ್ಯ ಹಾಗೂ ಉಪಯುಕ್ತ ಬಟ್ಟೆಗಳನ್ನು ಎಲ್ಲ ಸರಕಾರಿ ಅಂಗಡಿಗಳಲ್ಲಿ ಕೂಡ ಗ್ರಾಹಕರಿಗೆ ಮಾರಾಟ ಮಾಡಲು ಸರಕಾರದವರು ಅನುಮತಿಯನ್ನಿತ್ತಿದ್ದಾರೆ ಆದರೆ ಗ್ರಾಹಕರು ಎಂದಿನಂತೆ ಅವುಗಳನ್ನು ಕೊಳ್ಳುವ ಮೊದಲು ಬಟ್ಟೆಯ ಸೀಧಾ-ಚೀಟಿಗಳನ್ನು ಹಾಜರಪಡಿಸಬೇಕಾಗುವದು ಅವರು ಕೊಂಡುಕೊಂಡ ಬಟ್ಟೆಯನ್ನು ಸೀಧಾ-ಚೀಟಿಗಳಲ್ಲಿ ನಮೂದಿಸಲಾಗುವದು.

ಈ ಸವಲತ್ತು ಕೂಡಲೆ ಅಮಲಿನಲ್ಲಿ ಬರುವದು ಹಾಗೂ ಪುನಃ ಇನ್ನೊಂದು ಆಜ್ಞೆ ಹೊರಡುವ ವರೆಗೆ ಅಮಲಿನಲ್ಲಿರುವದು.

(ಜಿಲ್ಲಾಧಿಕಾರ ಕಚೇರಿಯಿಂದ ಬಂದದ್ದು.)

ನಮ್ಮಲ್ಲಿ

ತಂಬಾಕು ವ್ಯಾಪಾರಿಗಳಿಗೆ ಬೇಕಾಗುವ ಸ್ಟಾಕ ನೋಟ ಬೂಕುಗಳೂ, E B 3. ಸಣ್ಣ-ದೊಡ್ಡ ಲೆಕ್ಕದ ಬೂಕುಗಳೂ, ಗೇಣಿ-ರಶೀದಿ ಬೂಕುಗಳೂ ಸೀಧಾ-ಅಂಗಡಿಗಳಿಗೆ ಬೇಕಾಗುವ ಇಂಗ್ಲಿಷ-ಕನ್ನಡ ಕೇಶಮೆಮೋ ಬೂಕುಗಳೂ ಸಿಗುತ್ತವೆ

ಮ್ಯಾನೇಜರ ಆಫ್ ಕೆನರಾ ಪ್ರೆಸ್, ಕುಮಟಾ

FOR BANKING SERVICE
IN TRADE, INDUSTRY AND AGRICULTURE
APPROACH

The Agricultural & Industrial Bank, Ltd.,

(Established in 1934)

Head Office : COONDAPOOR, S. Kanara.

Branches.

1. Ankola	7 Gokarn.	13. Nagar.
2. Belgaum.	8. Haveri.	14. Shimoga.
3. Bhatkal.	9. Hubli.	15. Sirsi.
4. Coondapoor	10. Karwar.	16. Somwarpe
5 Dharwar.	11. Kumta.	17. Virajpet
6. Gadag.	12. Mangalore	18. Honavar.

19 BOMBAY. (384-M, Jaipuria House, Kalbadevi Road).

CURRENT, SAVINGS BANK AND FIXED DEPOSITS ARE ACCEPTED.

For terms, apply to the nearest Branch.

Coondapoor, 1st June. 1949

K. Vaman Shenai,
CHAIRMAN

ಸ್ಥಾನಿಕ ವೃತ್ತಾಂತ.

(೬ನೇ ಪುಟದಿಂದ ಮುಂದರಿಸಿದ್ದು)

ಮಾಡಿದ ಅಕ್ಕಿಯನ್ನು ಕೊಡಿಸಿ ರಾ॥ ಉಪಾಧ್ಯರ ಇವರು ತಿಂಗಳಿಂದಲೇ ಸರಕಾರಕ್ಕೆ [illegible] ಹಣ ಇನ್ನು ಸದರಿ ರೈತರಿಗೆ ಕೊಟ್ಟಿದ್ದಾರೆಂದೂ [illegible] ಜಿಲ್ಲಾಧಿಕಾರಿಗೆ ತಿಳಿಸಿರುತ್ತಾರಂತೆ.

ಕಳೆದ ಗುರುವಾರ ಕಲ್ಕೇರಿಯ ಶಿರಬಟ್ಟಿಯಲ್ಲಿ ಮೇಯುತ್ತಿದ್ದ ಒಂದು ಎಮ್ಮೆಯನ್ನು, [illegible] ತಗಿಯುವ ಮಾರ್ಗದಿಂದ, [illegible] ಹುಲಸ್ವಾರರು ಹಿಂಬದಿಯಿಂದ [illegible] ಬಂದಿದೆ! ಆ ದುಷ್ಟ ಹುಲಸ್ವಾರರು [illegible] ಕೊರಳ ಎಮ್ಮೆಯು ಭಯಂಕರ ಆಕ್ರೋಶವನ್ನು [illegible] ಏನೆಂದು ನೋಡಲು [illegible] ಆ ಕೊಲೆಗಡುಕರು ಅದೃಶ್ಯರಾದರು! ಆ ಎಮ್ಮೆಯೀಗ ಅಲ್ಲಿಯ ಪಶು ಚಿಕಿತ್ಸಾಲಯದಲ್ಲಿ [illegible] ದುಷ್ಟರು ಎಮ್ಮೆಯ ಮೂತ್ರದ್ವಾರದ [illegible] ಅದರ [illegible] ಗಾಯ ಮಾಡಿರುವದರಿಂದ ಅದು ಬದುಕುವ [illegible]! ಪೋಲೀಸರಲ್ಲಿ ಈ ಸಂಬಂಧದಲ್ಲಿ [illegible] ದಾಖಲಾಗಿರುವದೆಂದು ತಿಳಿಯುತ್ತದೆ. ಪೋಲೀಸರು ಪ್ರಯತ್ನಪಟ್ಟು ಸದರಿ ಎಮ್ಮೆಯ ಕೊಲೆಗಡುಕರ [illegible] ಅವರಿಗೆ ಯೋಗ್ಯ ಶಾಸನ ವಿಧಿಸಲ್ಪಡಬೇಕಾಗಿ ಸೂಚನೆಯಿದೆ.

[illegible]—ಮಾಲಗಳ್ಳಿ—ಊರಕೇರಿ [illegible] ಮೇಲೆ ಮಾಲಗಳ್ಳಿ ಗ್ರಾಮದ ಸರಹದ್ದಿನೊಳಗೆ ಒಂದು ಸಂಕ ಉಂಟು. ಆ ಸಂಕ [illegible] ೩-೪ ವರ್ಷಗಳಾದವು. ಅದರ ಮೇಲಿಂದ ಹಾದು ಹೋಗುವಾಗ [illegible] ಹಾದು ಹೋಗದೇ [illegible] ಆದರೂ ಜಿಲ್ಲಾ [illegible] ಅದನ್ನು ದುರುಸ್ತ ಮಾಡುವ [illegible] ಮಾಡುವದಿಲ್ಲ! ಜಿಲ್ಲಾ ಬೋರ್ಡಿನ [illegible] ಪ್ರತಿನಿಧಿಗಳು ಆ ಸಂಕವನ್ನು ಒಮ್ಮೆ ನೋಡಿಕೊಳ್ಳಬೇಕಾಗಿ [illegible] ಸೀಮೆಯವರು ಬಿನ್ನವಿಸುತ್ತಾರೆ.

ಅನೇಗಾಂದಿಯ [illegible] ಒಂದು ಹುಲಿಯು [illegible]. ಕಳೆದ [illegible] ಒಂದು ದೊಡ್ಡ ಎಮ್ಮೆಯನ್ನು [illegible] ಸುದ್ದಿಯುಂಟು. ೨-೩ ಆಕಳುಗಳನ್ನು ಅದು [illegible] ವಾರ್ತೆಯಿದೆ. ಈ ಹುಲಿಯ ಬೇಟೆ [illegible] ದನಗಳ [illegible]ವಾಗುವದು.

ಟಿನಸ್ಸಿ ಕಾಯಿದೆಯ [illegible] ಎಂಬ ಕಲಮು [illegible] ಶಿರಸಿಯ ದಿವಾಣಿ ನ್ಯಾಯಾಧೀಶರು [illegible] ಅರ್ಜ ಮಾಡಿದ ನಿರ್ಣಯದ ವಿರುದ್ಧ [illegible] ನ್ಯಾಯಾಧೀಶರ ಮುಂದೆ ದಾಖಲಿಸಿದ [illegible] ನ್ಯಾಯಾಧೀಶ ಶ್ರೀ [illegible] ಟಿನನ್ಸಿ ಕಾಯಿದೆ [illegible] ಕೊಟ್ಟಿದ್ದಾರೆ. [illegible] ಈ [illegible]ಯನ್ನು [illegible] ಅದರ ನಿರ್ಣಯವನ್ನು [illegible] ಬಿನ್ನವಿಸಲಾಗುತ್ತಿರಬಹುದೆಂದು ಸುದ್ದಿಯೂ ಉಂಟು.

ಹೊನ್ನಾವರ— (ತಾ. ೮—೮—೪೯) ಮಳೆ

ಚೆನ್ನಾಗಿ ನಡೆಸುತ್ತಿದೆ. ಜುಲಾಯಿ ಕೊನೆಯ ತನಕ ೯೧ ಇಂಚು ಮಳೆಯಾಗಿದೆ.

ಈಗ ಸೀಧಾ ಅಂಗಡಿಗಳಲ್ಲಿ ಕೊಡುತ್ತಿರುವ ಗೋದಿ ಹುಡಿತ್ತು ಜೋಳ ಸೊರಬು ಹಿಡಿದಷ್ಟು ಇರುತ್ತದೆ. ಅದರಲ್ಲಿ ಹಿಟ್ಟೇ ಹೆಚ್ಚಿರುತ್ತದೆ! ಈ ಧಾನ್ಯಗಳನ್ನು ಹಸನಗೊಳಿಸಿ ಕೊಡುವ ವ್ಯವಸ್ಥೆಯಾಗಬೇಕು.

ಸೀಧಾ ಅಂಗಡಿಯವರು ಚಿಲ್ಲರೆ ಹಣ ತಕ್ಕೊಳ್ಳುವದಿಲ್ಲವಂತೆ. ಆದರಿಂದ ಬಡವರು ಪಟಾವ ಕೊಟ್ಟು ಚಿಲ್ಲರೆಯ ರೂಪಾಯಿಗಳನ್ನು ಮಾಡಿಕೊಂಡು ಸೀಧಾ ಕೊಳ್ಳಬೇಕಾದ ಪ್ರಸಂಗ ಬಂದಿದೆ! ಚಿಲ್ಲರೆ ತಕ್ಕೊಳ್ಳುವಂತೆ ಜಿಲ್ಲಾಧಿಪರು ಸೀಧಾ ಅಂಗಡಿಯವರಿಗೆ ಅಪ್ಪಣೆ ಮಾಡಬೇಕಾಗಿ ಅರಿಕೆಯುಂಟು.

ಇಲ್ಲಿ ದಿವಾಣಿ ಜಜ್ಜರಾಗಿದ್ದ ರಾ॥ ದೇಶಪಾಂಡೇಯವರಿಗೆ ಜತ್ತ ಎಂಬಲ್ಲಿಗೆ ವರ್ಗವಾಗಿದ್ದು, ಸವಣೂರ ಸಂಸ್ಥಾನದಲ್ಲಿ ಸೆಶನ್ಸ ಜಜ್ಜರಾಗಿದ್ದ ರಾ॥ ಕುಳಕರ್ಣಿ ಎಂಬವರು ಇಲ್ಲಿಯ ದಿವಾಣಿ ಜಜ್ಜರಾಗಿ ನೇಮಿಸಲ್ಪಟ್ಟಿದ್ದಾರೆ.

ಇಲ್ಲಿಯ ಮಹಿಳಾ ಸಂಘವವರ ಸೀಧಾ-ಬಟ್ಟೆಯ ಅಂಗಡಿಯಲ್ಲಿ ಕಳ್ಳಾಟಿಕೆ ನಡೆಯುತ್ತದಾಗಿ ಒಂದು ದೂರುಂಟು. ಹೊಸ ಜವಳಿ ಬಂದ ಕೂಡಲೆ ಅಂಗಡಿಯವರು ಒಳ್ಳೊಳ್ಳೇ ಬಟ್ಟೆ ತೆಗೆದಿಟ್ಟು ಉಳಿದದ್ದನ್ನಷ್ಟೇ ಮುಂದೆ ಮಾರಾಟಕ್ಕೆ ಇಡುತ್ತಾರಂತೆ. ಕೆಲವು ದಿನಗಳ ಹಿಂದೆ ಒಬ್ಬರು ಬೇರೆ ಕೆಲವು ಜವಳಿ ಕೊಂಡು ಕೊಂಡು, ೨ ವಾರ ಬಾಕಿ ಕೊಡಿರೆಂದು ಹೇಳಿದರಂತೆ. ಆಗ "ಬಾಕಿ ಖರ್ಚಾಗಿದೆ" ಎಂದು ಅಂಗಡಿಯವರು ಹೇಳಿದರಂತೆ. ನಿಜವಾಗಿಯೂ ಖರ್ಚಾಗಿರಬಹುದೆಂದು ತಿಳಿದು ಆ ಗಿರಾಕಿಯು ಹೊರಟುಹೋದನು. ಆದರೆ ಅವನ ಬೆನ್ನಿಗೇ ಬೇರೊಬ್ಬನು ಅಂಗಡಿಗೆ ಬಂದು, ೧ ವಾರಿಗೆ ರೂ. ೩ರಂತೆ ಬೆಲೆ ಕೊಟ್ಟು ೪ ವಾರ ಬಾಕೆ ಕೊಂಡುಕೊಂಡನೆಂದು ಆ ಗಿರಾಕಿಗೆ ತಿಳಿಯಿತು!

[ತಾ. ೧೩-೮-೪೯] ಸೀಧಾ ಇನ್ಸಪೆಕ್ಟರರು ಇತ್ತಲಾಗಿ ಮನೆ-ಮನೆ ಹೊಕ್ಕು ಅಕ್ಕಿಯ ತಪಾಸಣೆ ಮಾಡಲಾರಂಭಿಸಿದ್ದಾರೆ! ಆದರೆ ಅವರು ತಪಾಸಣೆ ಮಾಡುವದು ಹೆಚ್ಚಾಗಿ ಅಕ್ಕಿಯ ಸಂಗ್ರಹವಿಲ್ಲದ ಮತ್ತು ಸೀಧಾ ಅಕ್ಕಿಯನ್ನೇ ತಂದು ಜೀವಿಸುತ್ತಿರುವ ಸೀಧಾ-ಚೀಟಿಧಾರಿಗಳ ಮನೆಯಲ್ಲಿ ಮಾತ್ರ! ಮಾನಗಿಗಟ್ಟಲೆ ಅಕ್ಕಿಯುಳ್ಳವರಲ್ಲಿ ಅವರ ದೃಷ್ಟಿಯೇ ತಿರುಗುವದಿಲ್ಲ! ಈ ಇನ್ಸಪೆಕ್ಟರರಿಗೆ ರುಬ್ಬಿಗೆ ಪಂಚರು ಸಹ ಬೇಕಾಗುವದಿಲ್ಲ! ಜಿಲ್ಲಾಧಿಪರು ಇವರಿಗೆ ಸ್ವಲ್ಪ ಬುದ್ಧಿ ಹೇಳಬೇಕಾಗಿ ಅರಿಕೆಯಿದೆ.

ಚಂದಾವರ ಸೀಮೆಯ ಹೊದಕೆ-ಶಿರೂರ, ಕಡ್ಲೇ ವಸ್ಕರೆ ಗ್ರಾಮಗಳಲ್ಲಿ ಮುಳ್ಳಹೆಗ್ಗೆ ಮತ್ತು ಕಾನಕ್ಕಿ ಎಂಬ ಜಾತಿಗಳ ಭತ್ತ ಬೆಳೆಯುತ್ತಿದೆ. ಅವರ ಹೊರಸೊಲಿ ತುಸು ಕಪ್ಪು ಇರುತ್ತದೆ. ಆದರೆ ಅಕ್ಕಿಯು ಉತ್ತಾರು ಹೆಚ್ಚಿಗೆ ಬರುತ್ತಿದೆ. ಈ ಭತ್ತವನ್ನು ಅಧಿಕಾರಿಗಳು ಹಿಂದೆಲ್ಲ ಮಧ್ಯಮ ತರಗತಿಯಲ್ಲಿ ಸೇರಿಸಿ ಆದರಂತೆಯೇ ಅದನ್ನು ಖರೇದಿಸುತ್ತಿದ್ದರು. ಆದರೆ ಈ ವರ್ಷ ಚಂದಾವರ ಉಗ್ರಾಣದವರು ಅದನ್ನು ೪ನೇ (ಹೀನ) ತರಗತಿಯ ಭತ್ತದಲ್ಲಿ ಸೇರಿಸಿ ಅದರಂತೆ ದರ (ಮಣ ೧ಕ್ಕೆ ಸರಾಸರಿ ರೂ. ೨ರಷ್ಟು ಕಡಿಮೆ!) ಕೊಟ್ಟಿರುತ್ತಾರಂತೆ. ಜನವರಿಯಲ್ಲಿ ಈಬಗ್ಗೆ ತಕ್ರಾರು ಬರಲಾಗಿ ಒಕ್ಕಲಿಗರ ಅರ್ಜಿಯನ್ನು ಮೇಲೆ ಕಳಿಸಿದರೆಂದೂ ಅದು ಮಂಜೂರಾಗಿ ಬಂದ ಮೇಲೆ ಮಧ್ಯಮ ಜಾತಿಯ ಭತ್ತದ ದರದಂತೆ ಹಣ ಕೊಡಲಾಗುವದೆಂದೂ ಸ್ಥಾನಿಕ ಅಧಿಕಾರಿಗಳು ಭರವಸೆ ಕೊಟ್ಟಿದ್ದರಂತೆ. ಆದರೆ ಇನ್ನೂ ಆ ಅರ್ಜಿಯ ಇತ್ಯರ್ಥವಾಗಿಲ್ಲ! ಏಪ್ರಿಲ ತಿಂಗಳಲ್ಲಿ ಜಿಲ್ಲಾಧಿಪರಿಗೆ ಮಾಡಿದ ಅರ್ಜಿಗೂ ಉತ್ತರವಿಲ್ಲ! ಇಂತಹ ಪರಿಸ್ಥಿತಿಯಲ್ಲಿ ಹೆಚ್ಚಿಗೆ ಆಹಾರ ಧಾನ್ಯ ಬೆಳೆಸಲು ತಮಗೆ ಉತ್ತೇಜನ ಎಲ್ಲಿಂದ ಬರುವದೆಂದು ಆ ಸೀಮೆಯ ರೈತರು ಕೇಳುತ್ತಾರೆ.

ಕಡತೋಕಾ ಟಪಾಲ ಕಚೇರಿಯಿಂದ ಈಗ ಕಲ್ಲೆ ಗ್ರಾಮದವರಿಗೆ ವಾರದಲ್ಲಿ ಎರಡಾವರ್ತಿ ಟಪಾಲ-ಬಟವಡೆಯಾಗುತ್ತಿದೆ. ಈ ಬಟವಡೆಯನ್ನು ವಾರದಲ್ಲಿ ಮೂರಾವರ್ತಿಯಾದರೂ ಮಾಡಿಸಬೇಕಾಗಿ ಆ ಗ್ರಾಮದವರ ಬೇಡಿಕೆಯುಂಟು.

ಅಂಕೋಲಾ— ಜುಲೈ ತಾ. ೧೧ಕ್ಕೆ ಅಂಕೋಲೆಯ ಆಂಗ್ಲೋ ಇಂಡಿಯನ ಹೌಸಿನಲ್ಲಿ ರೈತ ಸಂಘದ ಕಾರ್ಯಕರ್ತರ ಸಭೆಯಾಗಿತ್ತು. ರಾ॥ ದಿನಕರ ದೇಸಾಯಿ ಇವರು ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ವಿವಿಧ ವಿಷಯಗಳ ಚರ್ಚೆಯಾಯಿತು. ಕೊಂಗ್ರೆಸ್ಸಿಗರ ಮೇಲೆ ಬಹಳಷ್ಟು ಟೀಕೆಯೂ ಆಯಿತು! ಆದರೆ ಕರ್ಕಿಯ ಸಾಲ್ವಾದೋರ ಎಂಬವರು ಕೊನೆಗೊಂದು ಮರ್ಮಭೇದಿ ಭಾಷಣ ಮಾಡಿದ್ದರಿಂದ ಸಭೆಯಲ್ಲಿ ವಿರಸವಾಗಿಹೋಯಿತು. ನಮ್ಮ ರೈತ ವರ್ಗಕ್ಕೆ ಇಂದಿನಂಥ ಮುಖಂಡರು ಬೇಕಾಗಿಲ್ಲ. ನಿಜವಾಗಿ ಬೆವರು ಸುರಿಸಿ ದುಡಿಯುವ ಚಿಕ್ಕ ರೈತರನ್ನೇ ನಾವು ಮುಂದಾಳುಗಳನ್ನಾಗಿ ಆರಿಸಬೇಕು. ಅಂದರೆ ಮಾತ್ರ ನಮ್ಮ ಕಲ್ಯಾಣವಾಗುವದು. ಇಂದಿನ ಮುಖಂಡರು ಕಳ್ಳ ಸಂತೆ ಮಾಡಿ ಹಣ ಗಳಿಸಿದವರಾಗಿದ್ದಾರೆ! ಇವರು ತಮ್ಮ ರೈತರಿಗೆ ಕಾಯಿದೆಯಂತೆ ಪಾಲು ಸಹ ಕೊಡುವದಿಲ್ಲ. ಇಂಥ ಜನರನ್ನು ಸಂಘದ ಹೊರಗೆ ಹಾಕಬೇಕು. ಎಂದು ಸಾಲ್ವಾದೋರನು ಹೇಳುತ್ತಲೇ "ಕಾರ್ಯಕರ್ತರು" ತಣ್ಣಗಾದರು! ರೈತರೆಲ್ಲರೂ ಸಾಲ್ವಾದೋರನ ಮಾತು ಲಕ್ಷದಲ್ಲಿಡಬೇಕು

ಶಿರಸಿ— (ತಾ. ೧೪-೮-೪೯) **ಈಗ ಪುನಃ ಈ ತಾಲೂಕಿನಲ್ಲಿ ಬೆಂಧಾರಿಗಳ ಉಪದ್ರವಕ್ಕೆ ಪ್ರಾರಂಭವಾಗಿದೆ. ಮೊನ್ನೆ ಇಲ್ಲಿಂದ ಕೆಲವೊಂದು ತೆಂಗಿನಕಾಯಿಯನ್ನು, [illegible]ಗಳನ್ನು [illegible]ಕೊಂಡು ಒಂದು ಗಾಡಿಯು [illegible] ಹೋಗುತ್ತಿದ್ದಾಗ, ಇಲ್ಲಿಂದ ೬-೭ ಮೈಲು ಅಂತರದಲ್ಲಿ ೧೧-೧೨ ಕಳ್ಳರು ಗಾಡಿಯನ್ನು ಅಡ್ಡಗಟ್ಟಿ, ಅದರಲ್ಲಿದ್ದ ಸುಮಾರು ೪೦೦ ರೂ. ಬೆಲೆ ಬಾಳುವ ಸಾಮಾನುಗಳನ್ನು ಅಪಹಾರ ಮಾಡಿದರಂತೆ! ಆ ಗಾಡಿಯವನು ಅಂದೇ ಶಿರಸಿಯಲ್ಲಿ ಒಂದು ಹೊಸ ಚಟರಿಯನ್ನು ಕೊಂಡುಕೊಂಡಿದನಂತೆ. ಧಾಂಡಿಗರಲ್ಲಿ ಒಬ್ಬನು, "ನೀನು ಕೊಂಡುಕೊಂಡಿದ ಹೊಸ ಚಟರಿ ಎಲ್ಲಿದೆ?" ಎಂದು ಗದರಿಸಿ ಕೇಳಿದ್ದನಾಗಿ ತಿಳಿಯುತ್ತದೆ. ಈ ಸಂಗತಿಯು ಮೇಲಿಂದ ಸದರಿ ಬೆಂಧಾರಿಗಳು ಶಿರಸಿಯಿಂದಲೇ ಆ ಗಾಡಿಯ ಬೆನ್ನು ಹಿಡಿದ್ದರೆಂದು ತರ್ಕಿಸಬೇಕಾಗುತ್ತದೆ.**

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.

ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲಾಜಿಂಗ

ದಿ. ಕೆನರಾ ಲಾಜ

[ಊಟ ಮತ್ತು ವಸತಿಗೃಹ]

ಮೋಟರ-ಸ್ಟೆಂಡ, ಹುಬ್ಬಳ್ಳಿ.

ಮಾಲಕ: — ನ್ಯಾಹಪ್ಪಾ ಪೈ.

ಜವಾರಿ ಹತ್ತೀಕಾಳು ಸಿಗುತ್ತಿದೆ!

ರಾಯರ ಪೇಟೆಯಲ್ಲಿರುವ ನಮ್ಮ ಅಂಗಡಿಯಲ್ಲಿ ಹುಬ್ಬಳ್ಳಿಯ ಚಟೋ ಜವಾರಿ ಹತ್ತೀಕಾಳು ಯೋಗ್ಯ ದರದಿಂದ ಮಾರಾಟಕ್ಕೆ ಇಟ್ಟಿದೆ. ದರ ಕೀಲ ೧ಕ್ಕೆ (ಚೀಲ ಸಹಿತ ೧೪೨ ರತ್ತಲು) ರೂ. ೨೩—೪—೦ ಪ ಕ್ವಾರ್ಟರ ೧ಕ್ಕೆ ರೂ. —೧೩—೦ ಬಾಯಸ ಇದ್ದವರು ತೋಕ ಮೂ ಚಿಲ್ಲರೆಯಾಗಿ ಖರೇದಿಸಬಹುದು.

ಶಿರಸಿ, **V. G. Wagh,**

ತಾ. ೧೪—೮—೪೯ ಚೆರಮನ್,

ಶಿರಸಿ ಕೋ. ಕನ್ಸ್ಯೂಮರ್ಸ ಸೊಸೈಟಿ, ಲಿ.

ಸಕಲರೂ ಆಸಕ್ತಿಯಿಂದ ಕೃಷಿಕರ್ಮದಲ್ಲಿ ತೊಡಗಲಿ

— *By courtesy of the Times of India, Bombay*

ಸರ್ವಾಧಿಪತಿ ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯರು ಸ್ವತಃ ರೆಂಟೆ ಹೊಡೆಯುತ್ತಿದ್ದಾರೆ.

ಕಾನಡಾವೃತ್ತ

ಮಿತಿ ಶಕೆ ೧೮೭೦ ಶ್ರಾವಣ ಕೃ|| ೭ಮಿ, ಸೋಮವಾರ.

ಭಾರತಕ್ಕೆ ವಿಜಯವಾಗಲಿ !

ಭಾರತಕ್ಕೆ ವಿಜಯವಾಗಲಿ! ಈ ಹೊತ್ತು ಭಾರತೀಯ ಸ್ವಾತಂತ್ರ್ಯದ ೧ನೇ ವರ್ಧಂತಿಯ ಉತ್ಸವ. ಸಮಸ್ತ ಭಾರತೀಯರು ಇಂದು ಪ್ರಮುದಿತಾಂತಃಕರಣದಿಂದ ಸ್ವತಂತ್ರ ಭಾರತಕ್ಕೆ ವಿಜಯವಾಗಲೆಂದೂ ಭಾರತದ ಸಂಸ್ಕೃತಿ ಲೋಕತುಂಬ ಹಬ್ಬಿ ಜಗತ್ತಿನಲ್ಲೆಲ್ಲ ಸುಖಶಾಂತಿಗಳು ನೆಲಿಸಲೆಂದೂ ಅನನ್ಯಭಾವದಿಂದ ಜಗತ್ಪಾಲಕನ ಕಡೆ ಪ್ರಾರ್ಥಿಸುತ್ತಾರೆ. ನಾವೂ ಈ ಉತ್ಸವದ ಸಂಭ್ರಮದಲ್ಲಿ ಸೇರಿ ಸ್ವತಂತ್ರ ಭಾರತದ ವಿಜಯದುಂದುಭಿ ನಿಖಿಲ ಭೂಮಂಡಳದಲ್ಲಿ ಮೊಳಗಲೆಂದು ಹಾರೈಸುತ್ತೇವೆ. ಸದ್ಯಕ್ಕೆ ಜಗತ್ತಿನಲ್ಲೆಲ್ಲಿಯೂ ಸುಖವಿಲ್ಲ. ಪೌರ್ವಾತ್ಯರಲ್ಲೂ ಪಾಶ್ಚಾತ್ಯರಲ್ಲೂ ಅಸಮಾಧಾನ-ಅಸಂತೋಷಗಳು ಬೇರೆ ಬೇರೆ ಕಾರಣಗಳಿಂದ ಪಸರಿಸಿವೆ. ಯುದ್ಧ ಮುಗಿದು ಇಂದು ೩ ವರ್ಷಗಳಾದರೂ ಜಗತ್ತಿನಲ್ಲಿ ಶಾಂತತೆ ನೆಲಿಸಲಿಲ್ಲ; ಶಾಂತಿಕಾಲದ ಸುಖಸೌಕರ್ಯಗಳೂ ಪ್ರಜೆಗಳಿಗೆ ಲಭಿಸಿಲ್ಲ. ಬ್ರಿಟನ್, ಅಮೇರಿಕಾ, ರಶಿಯಾ ಮೊದಲಾದ ಜನಾಂಗಗಳಲ್ಲಿ ಬೇರುಬಿಟ್ಟ ದ್ವೇಷಾಸೂಯೆಗಳು ಇಂದು ನಾನಾ ರೂಪಗಳನ್ನು ತಳೆದು ಜಗತ್ತನ್ನು ಕಾಡತೊಡಗಿವೆ! ಬ್ರಿಟಿಶ-ಅಮೇರಿಕೆಯವರ ಪ್ರಜಾಪ್ರಭುತ್ವದ ಧರ್ಮದಿಂದ ಜಗತ್ತಿಗೆ ಸುಖವಿಲ್ಲೆಂದೂ, ತಮ್ಮ ಹಿಂಸಾಪ್ರಧಾನ ಸಮಾಜಸತ್ತಾವಾದದಿಂದಲೇ ಜಗತ್ಸುಖವಾಗುವದೆಂದೂ ರಶ್ಯರು ನಿಗ್ರಹ ಹಿಡಿದಿದ್ದಾರೆ. ರಶ್ಯರ ಸಮಾಜಸತ್ತಾವಾದ ಹಬ್ಬಿದರೆ ಸಮಾಜ-ರಚನೆಯೇ ಶಿಥಿಲವಾಗಿ, ಎಲ್ಲೆಲ್ಲೂ ಅರಾಜಕತೆಯುಂಟಾಗಿ ಜಗತ್ತಿಗೆ ಕೇಡು ಒದಗುವದು ನಿಶ್ಚಯವೆಂದು ಬ್ರಿಟಿಶ-ಅಮೇರಿಕೆಯವರು ಅಭಿಪ್ರಾಯಪಟ್ಟು ರಶ್ಯರನ್ನು ಪ್ರತಿಭಟಿಸುತ್ತಿದ್ದಾರೆ! ಲೋಕದೊಳಗಿನ ಕಲಹ-ಕಾರಣಗಳನ್ನು ಶಾಂತ ವಿಚಾರ-ವಿನಿಮಯದಿಂದ ಬಗೆಹರಿಸಿ ಲೋಕಸುಖದ ಯೋಜನೆಗಳನ್ನು ಕಲ್ಪಿಸಲು ಸ್ಥಾಪನೆ ಹೊಂದಿದ ಸಂಯುಕ್ತ ರಾಷ್ಟ್ರಮಂಡಳದ ಪ್ರಮುಖ ಸದಸ್ಯರೊಳಗೆ ವಿರೋಧವುಂಟಾಗಿ, ಹೊಸ ಹೊಸ ಕಲಹ-ಕಾರಣಗಳು ಈಗ ನಿರ್ಮಾಣ ಹೊಂದುತ್ತಿವೆ. ಜಗದೇಕಪ್ರಭುವಾಗಲು ಒಳಗಿಂದೊಳಗೆ ಕಾರಸ್ಥಾನಗಳು ನಡೆದದ್ದು ಕಂಡು ನ್ಯಾಯ-ಪಕ್ಷಪಾತಿ ವ್ಯಾವಹಾರಿಕರು ವ್ಯಸನಪಡುತ್ತಿದ್ದಾರೆ. ಪಾಶ್ಚಾತ್ಯ ರಾಜಕಾರಣಿಗಳ ರಾಜಕಾರಣದಿಂದ ಜಗತ್ಸುಖವಾಗದೆಂದೂ, ಜಗತ್ತಿನಲ್ಲಿ ಸುಖ-ಶಾಂತಿ-ಸಮೃದ್ಧಿಗಳು ನೆಲಿಸಬೇಕಾದರೆ ಸತ್ಯ-ಅಹಿಂಸೆಗಳ ಮಾರ್ಗದಿಂದ ಸ್ವಾತಂತ್ರ್ಯ ಸಂಪಾದಿಸಿದ ಭಾರತವೇ ಟೊಂಕ ಕಟ್ಟಿ ಜಗತ್ತಿಗೆ ಮಾರ್ಗದರ್ಶನ ಮಾಡಬೇಕೆಂದೂ ಲೋಕಾಭಿಪ್ರಾಯವಾಗಿದೆ. ಸಂಯುಕ್ತ ರಾಷ್ಟ್ರ-ಮಂಡಳದ ಮುಖ್ಯ ಕಾರ್ಯದರ್ಶಿಗಳಾದ ಟ್ರಿಗ್ವೇ ಲೀಯವರು ಏಶಿಯಾ ಖಂಡದ ವರ್ಚಸ್ಸು ಈಗ ಬೆಳೆಯುತ್ತಲಿದೆಯೆಂದೂ, ಏಶಿಯಾದ ಗೌರವ ಹೆಚ್ಚುತ್ತಿದೆಂದೂ ಕಳೆದ ಸೋಮವಾರ ಪ್ರಕಟವಾದ ತಮ್ಮ ವಾರ್ಷಿಕ ವರದಿಯಲ್ಲಿ ನಮೂದಿಸಿದ್ದಾರೆ. ಸ್ವತಂತ್ರ ಭಾರತದ ಶಾಂತಿ-ಸಂದೇಶವು ಅಮೇರಿಕಾ ಮೊದಲಾದ ಪಾಶ್ಚಾತ್ಯ ಜನಾಂಗಗಳಲ್ಲಿ ಲೋಕಮಾನ್ಯವಾಗಹತ್ತಿದೆ. ಅಹಿಂಸೆಯ ಮೂರ್ತಿಯಾದ ಪೂಜ್ಯ, ಶ್ರೀ ಮಹಾತ್ಮರ ಸತತೋದ್ಯೋಗದಿಂದ ಹಿಂದಸ್ಥಾನಕ್ಕೆ ಇಂದಿನ ಸ್ಥಾನ-ಮಾನ ಪ್ರಾಪ್ತವಾಗಿದೆಂದು ನಾವು ಮರೆಯಕೂಡದು. ಅವರ ಪರಂ[illegible]ಯನ್ನು ನಮ್ಮ ಮುಖ್ಯ ಮಂತ್ರಿಗಳಾದ ಪಂ|| ಜವಾಹರಲಾಲ ನೆಹರೂರವರೂ ಉಪ-ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರೂ ಮುಂದುವರಿಸಿ ಸ್ವತಂತ್ರ ಭಾರತವನ್ನು ಸಂಘಟಿಸುತ್ತಿದ್ದಾರೆ. ಪಂ|| ಜವಾಹರಲಾಲರು ಕೆಲವು ವಿದೇಶಗಳಲ್ಲಿ ಸಂಚರಿಸಿ ಸ್ವತಂತ್ರ ಭಾರತದ ಲೋಕಶಾಂತಿ ಧೋರಣವನ್ನು ಪ್ರಚುರಗೊಳಿಸಿದ್ದಾರೆ. ಕಳೆದ ವರ್ಷ ಪ್ಯಾರೀಸ ಪಟ್ಟಣದಲ್ಲಿ ಸೇರಿದ ಸಂಯುಕ್ತ ರಾಷ್ಟ್ರ-ಮಂಡಳದ ಸಭೆಯಲ್ಲಿ ಜವಾಹರಲಾಲರಿಗೆ ಸದಸ್ಯರು ಸಂಭ್ರಮದ ಸ್ವಾಗತವನ್ನಿತ್ತು, ಸ್ವತಂತ್ರ ಭಾರತದ ನೀತಿಯನ್ನು ಅವರ ಬಾಯಿಯಿಂದ ಕೇಳಿಕೊಂಡು ಸಂತೋಷಪಟ್ಟ ಸಂಗತಿ ಲೋಕಪ್ರಸಿದ್ಧವಿದೆ. ಪಂ|| ಜವಾಹರಲಾಲರನ್ನು ಅಮೇರಿಕೆಯ ಅಧ್ಯಕ್ಷರಾದ ಟ್ರೂಮನ್ನರು ಪ್ರತ್ಯಕ್ಷ ಕಾಣಲಿಚ್ಛಿಸಿ ಪಂಡಿತಜಿಯವರಿಗೆ ತಮ್ಮ ದೇಶಕ್ಕೆ ಭೆಟ್ಟಿಯನ್ನೀಯಲು ನಿಮಂತ್ರಣ ಇತ್ತಿದ್ದುಂಟು. ಅದರಂತೆ ಜವಾಹರಲಾಲರು ಇದೇ ಬರುವ ಅಕ್ಟೋಬರ ತಿಂಗಳಲ್ಲಿ ಅಮೇರಿಕೆಗೆ ಹೋಗುವರಿದ್ದಾರೆ. ಹಿಂದುಸ್ಥಾನದ ಸ್ನೇಹವನ್ನು ಬ್ರಿಟನ್ ಅಮೇರಿಕೆಯಂಥ ದೊಡ್ಡ ಜನಾಂಗಗಳು ಅಪೇಕ್ಷಿಸುವಷ್ಟು ಸ್ಥಿತ್ಯಂತರವನ್ನು ಸ್ವತಂತ್ರ ಭಾರತಕ್ಕೆ ಸಂಪಾದಿಸಿ ಕೊಟ್ಟ ಸಂಪೂರ್ಣ ಶ್ರೇಯಸ್ಸು ಸ[illegible]ಥಾ ಪಂಡಿತಜಿಯವರಿಗೆ ಸಲ್ಲತಕ್ಕದ್ದೆಂದು ನಾವು ನಮೂದಿಸಿ, ಇಂಥ ಕರ್ತೃತ್ವಶಾಲಿ ಬುದ್ಧಿಶಾಲಿ ಮತ್ತು ವಿಶಾಲದೃಷ್ಟಿಯ ನಾಯಕರನ್ನು ಸ್ವತಂತ್ರ ಭಾರತಕ್ಕೆ, ಸದ್ಯದ ಆಕಸ್ಮಿಕ ಕಾಲದಲ್ಲಿ, ದಯಪಾಲಿಸಿದ ಬಗ್ಗೆ ಜಗದೊಡೆಯನಿಗೆ ನಮ್ಮ ವಿನಮ್ರ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ; ಮತ್ತು ವಿದೇಶ-ಕಾರಣದ ಇಲಾಖೆಯನ್ನು ವಹಿಸಿಕೊಂಡ[illegible] ವಿದೇಶಗಳಲ್ಲಿ ಈ ೨ ವರ್ಷಗಳೊಳಗೆ ಭಾರತದ

ಹೆಚ್ಚೆಚ್ಚು ಆಹಾರಸಾಮುಗ್ರಿ ಬೆಳೆಯಲಿ!

— By courtesy of the Times of India, Bombay.

ದಿಲ್ಲಿಯೊಳಗಿನ ತಮ್ಮ ಬಂಗಲೆಯ ಆವಾರದಲ್ಲಿ
ಪಂಡಿತ ಜವಾಹಿರಲಾಲರು ಸ್ವತಃ ಟ್ರೆಕ್ಟರನ್ನು ನಡಿಸುತ್ತಿದ್ದಾರೆ.

...ಸ್ಥಾನವನ್ನು ಸಂಪಾದಿಸಿಕೊಟ್ಟ ಪಂಡಿತಜಿ ...ಯವರಿಗೆ ದೀರ್ಘಾಯುರಾರೋಗ್ಯ ಪ್ರಾಪ್ತವಾಗ ...ಲೆಂದು ಪ್ರಾರ್ಥಿಸುತ್ತೇವೆ.

...ಪಮುಖ್ಯ ಮಂತ್ರಿಗಳಾದ ಸರದಾರ ವಲ್ಲಭ ಭಾಯಿ ಪಟೇಲರನ್ನೂ ಇಂದು ನಾವು ಅಭಿನಂದಿಸಬೇಕು. ಹಿಂದುಸ್ಥಾನದೊಳಗಿನ ೫೬೫ ಸಂಸ್ಥಾನಗಳ ಅಧಿಪತಿಗಳು ಹಿಂದುಸ್ಥಾನದ ಸಂಘಟನೆಯ ಕಾರ್ಯದಲ್ಲಿ ಬಗೆಬಗೆಯ ವಿಘ್ನಗಳನ್ನು ಒಡ್ಡುವರೆಂದು ಎಣಿಸೋಣವಾಗಿತ್ತು. ಬ್ರಿಟಿಶರ ಆಳಿಕೆಯಲ್ಲಿ ಈ ಸಂಸ್ಥಾನಿಕರಿಗೆ ಬೇರೆ ಬೇರೆ ಮಾನ-ಮರ್ಯಾದೆಗಳು ಸಲ್ಲುತ್ತಿದ್ದವು. ಹಿಂದುಸ್ಥಾನದ ಮೇಲಿನ ಬ್ರಿಟಿಶರ ಸಾರ್ವಭೌಮತ್ವ ಅಸ್ತವಾದೊಡನೆ ಸಂಸ್ಥಾನಿಕರು ತಂತಾನೇ ಸ್ವತಂತ್ರರಾದರೆಂಬ ಒಂದು ಕಲ್ಪನೆ ಉದಯ ಹೊಂದಿತ್ತು. ರಾಜ್ಯಶಾಸ್ತ್ರದ ಆಧಾರ ಹೇಳಿ, ಈ ಸಂಸ್ಥಾನಿಕರ ಸಾರ್ವಭೌಮತ್ವ ಬ್ರಿಟಿಶರ ಕೈಯಿಂದ ಅಸ್ತವಾದ್ದರಿಂದ, ಬ್ರಿಟಿಶರು ಅಸ್ತವಾದ ಕೂಡಲೆ ಸಂಸ್ಥಾನಿಕರು ಪೂರ್ಣ ಸ್ವತಂತ್ರರಾದರೆಂದು ಕೆಲವರು ಸಿದ್ಧಾಂತ ಮಾಡಿದ್ದರು! ಆದರೆ ಸರದಾರ ವಲ್ಲಭಭಾಯಿ ಪಟೇಲರು ಅದ್ಭುತ ಕೌಶಲ್ಯದಿಂದ ಸಂಸ್ಥಾನಿಕರೊಡನೆ ವಿಚಾರವಿನಿಮಯ ಮಾಡಿ, ಸ್ವತಂತ್ರ ಭಾರತದ ಏಕಜೀವ ಸಂಘಟನೆಯ ಆವಶ್ಯಕತೆಯನ್ನು, ಅದಕ್ಕಾಗಿ ಸಂಸ್ಥಾನಿಕರು ನೀಡಬೇಕಾದ ಸಹಾಯ-ಸಹಕಾರಗಳ ರೂಪವನ್ನೂ ತಿಳಿಹೇಳಿ, ಸಂಸ್ಥಾನಗಳನ್ನು ಒಂದೊಂದಾಗಿ ಸ್ವತಂತ್ರ ಭಾರತದೊಳಗೆ ಸೇರಿಸಿಕೊಂಡು, ಇಂದು ನಮ್ಮ ...ನಾಂಗಕ್ಕೆ ಏಕರೂಪತೆಯ ಬಲ ...ರಕಿಸಿಕೊಟ್ಟಿದ್ದಾರೆ. ಹೈದರಾಬಾದದ ನಿಜಾಮರಿಗೆ ಸಾದ್ಯಂತ ಪರಿಸ್ಥಿತಿಯನ್ನು ತಿಳಿಸಿ ಹೇಳಿದಾಗ್ಯೂ ಅವರು ಸ್ವತಂತ್ರ ಭಾರತದ ಸಹಕಾರವನ್ನು, ಸ್ವತಂತ್ರ ಸಾರ್ವಭೌಮರಾಗುವ ಉನ್ಮಾದದಿಂದ, ನಿರಾಕರಿಸಿದ್ದರು! ಕಾಬೂಲದ "ಅನಿಸ" ಪತ್ರಿಕೆಯ ಸಂಪಾದಕರು ಸದ್ಯಕ್ಕೊಂದು ಲೇಖ ಬರೆದು, ನಿಜಾಮರ ಈ ಕೃತಿಯಲ್ಲಿ ಪಾಕಿಸ್ತಾನದ ಅಂಗವಿತ್ತೆಂದೂ ಸ್ವತಃ ನಿಜಾಮರು ಭಾರತದೊಡನೆ ಒಡಂಬಡಿಕೆ ಮಾಡಿಕೊಳ್ಳಲು ಸಿದ್ಧರಿದ್ದರೆಂದೂ, ಆದರೆ ಪಾಕಿಸ್ತಾನವು ಸಕಲ ಮುಸಲ್ಮಾನ ಜನಾಂಗಗಳ ಬೆಂಬಲ ನಿಜಾಮರಿಗೆ ಸಿಗುವದೆಂಬ ನಂಬಿಗೆ ಕೊಟ್ಟದ್ದರಿಂದ ಅವರು ಹಟಮಾರಿಗಳಾಗಿ ವರ್ತಿಸಿದರೆಂದೂ ಪ್ರತಿಪಾದಿಸಿದ್ದಾರೆ. ನಿಜಾಮರು ಪಾಕಿಸ್ತಾನದ ಪ್ರೋತ್ಸಾಹದಿಂದ ವರ್ತಿಸಿರಲಿ ಯಾ ಸ್ವಂತ ವಿಚಾರದಿಂದ ವರ್ತಿಸಿರಲಿ. ಅವರ ವರ್ತನೆಯ ಪೂರ್ವಾಪರಗಳ ವಿಚಾರ ಈವಾಗ ಆವಶ್ಯವಿಲ್ಲ. ನಿಜಾಮರ ಪ್ರತಿಭಟನೆಯನ್ನು ಸರದಾರ ಪಟೇಲರು ಒಂದೇ ಒಂದು ವಾರದೊಳಗೆ ಹಿಮ್ಮೆಟ್ಟಿಸಿ, ಅವರ ರಾಜ್ಯವನ್ನು ಸ್ವತಂತ್ರ ಭಾರತದಲ್ಲಿ ಕೂಡಿಸಿಕೊಂಡು, ಸ್ವತಂತ್ರ ಭಾರತ ಸಂಘಟನೆಯನ್ನು ಪೂರ್ಣಪಡಿಸಿದ್ದಾರೆ. ಇನ್ನುಳಿದ ಒಂದೇ ಒಂದು ನ್ಯೂನತೆ ಸಹ ಕೆಲವೇ ದಿನಗಳಲ್ಲಿ ಪರಿಹಾರ ಹೊಂದುವದೆಂಬ ಆಶೆಯಿದೆ. ಕಾಶ್ಮೀರ ಸಂಸ್ಥಾನದ ಬಗ್ಗೆ ಹಿಂದುಸ್ಥಾನಕ್ಕೂ ಪಾಕಿಸ್ತಾನಕ್ಕೂ ಯುದ್ಧವಾಗುವದೆಂಬ ಅಂಜಿಕೆಯುಂಟಾಗಿತ್ತು. ಆದರೆ ಉಭಯ ಪಕ್ಷಗಳೊಳಗಿನ ವಿಚಾರವಂತರ ಮಧ್ಯಸ್ಥಿಕೆಯಿಂದಲೂ ಸಂಯುಕ್ತ ರಾಷ್ಟ್ರ ಮಂಡಳದ ವರ್ಚಸ್ಸಿನಿಂದಲೂ ಭಾರತವು ಆ ಕುತ್ತಿನೊಳಗಿಂದ ಪಾರಾಗಿದೆ. ಕಾಶ್ಮೀರವು ಭೌಗೋಲಿಕ ದೃಷ್ಟಿಯಿಂದ ಹಿಂದುಸ್ಥಾನದ್ದೆಂಬುದು ನಿರ್ವಿವಾದವಾದದ್ದು. ಜನಮತ ತಿಳಿದುಕೊಂಡು ಆ ಪ್ರದೇಶವನ್ನು ಹಂಚಿಕೊಳ್ಳಲಿಕ್ಕೂ ಭಾರತವು ಸಿದ್ಧವಿದೆ. ಅಲ್ಲಿಯ ಜನರೇ ತಮಗೆ ಇಷ್ಟವಿದ್ದ ನಿರ್ಣಯ ಮಾಡಿ, ಪಾಕಿಸ್ತಾನದ ಅಧಿರಾಜ್ಯ ಬೇಕಾದಲ್ಲಿ ಆ ರಾಜ್ಯವನ್ನು ಸೇರಬಹುದಾಗಿ ಭಾರತವು ಒಪ್ಪುತ್ತಿದೆ. ಆದರೆ ಈ ಕಾಶ್ಮೀರ ಪ್ರಕರಣದಲ್ಲಿ ರುಶ್ಯ ಪ್ರಭು ಸ್ಟೆಲಿನನ ಹಸ್ತಕ್ಷೇಪವಿರಬೇಕೆಂಬ ಸಂದೇಹ ಬರುತ್ತಿದೆ. ರುಶ್ಯದ ಹಿಂಸಾ-ಪ್ರಧಾನ ಸಮಾಜಸತ್ತಾವಾದವನ್ನು ಭಾರತವು ವಿರೋಧಿಸುತ್ತಿದೆ. ಆ ವಾದದಿಂದ ಲೋಕಕ್ಷೇಮವಾಗಲಿಕ್ಕಿಲ್ಲೆಂದು ಭಾರತದ ಮನೋನಿರ್ಧಾರವಾಗಿದೆ. ಅದೊಂದು ಅವ್ಯವಸ್ಥಿತ, ಅರಾಜಕ ಸಮಾಜಘಟನೆ ಎಂದೂ, ಅದರ ಪ್ರಸಾರದಿಂದ ಜನಸಮಾಜದೊಳಗೆ ಕೊಲೆ, ಸುಲಿಗೆ, ಅನಾಚಾರ, ದುರಾಚಾರಗಳು ಹಬ್ಬಿ ಲೋಕನಾಶವಾಗುವದೆಂದೂ ಭಾರತಕ್ಕೆ ನಿಸಃಶ್ಚಯದೆ. ಆ ವಾದವನ್ನು ಭಾರತವು ಪ್ರತಿಭಟಿಸುತ್ತಿರುವದರಿಂದ ರುಶ್ಯಪ್ರಭು ಸ್ಟೆಲಿನನು ಪಾಕಿಸ್ತಾನದ ಗೆಳೆಯನಾಗಿ ಕಾಶ್ಮೀರ ಪ್ರಕರಣದಲ್ಲಿ ಪಾಕಿಸ್ತಾನವನ್ನು ಎತ್ತಿಹಿಡಿಯುತ್ತಿದ್ದಾನೆಂದು ಕೆಲವರು ಊಹಿಸುತ್ತಾರೆ. ಪಂ|| ಜವಾಹರಲಾಲರಿಗೆ ಅಮೇರಿಕೆಯ ಅಧ್ಯಕ್ಷರು ಕೊಟ್ಟ ನಿಮಂತ್ರಣಕ್ಕೆ ಪ್ರತಿಕ್ರಿಯೆಯೆಂದು ಸ್ಟೆಲಿನನು ಪಾಕಿಸ್ತಾನದ ಮುಖ್ಯಮಂತ್ರಿ ಲಿಯಾಕತ ಅಲಿಖಾನರಿಗೆ ಮೊಸ್ಕೋ ಭೆಟ್ಟಿಯ ನಿಮಂತ್ರಣ ಕೊಟ್ಟಿರುತ್ತಾನೆಂದು ಪುಣೆಯ "ಕೇಸರಿ" ಪತ್ರಿಕೆಯ ಲಂಡನ ಪ್ರತಿನಿಧಿಗಳು ಬರೆಯುತ್ತಾರೆ. ಸ್ವಂತ ವಿಚಾರದಿಂದಾಗಲಿ ರುಶ್ಯದ ಸಲಹೆಯಿಂದಾಗಲಿ ಕಾಶ್ಮೀರ ಪ್ರಕರಣದಲ್ಲಿ ಪಾಕಿಸ್ತಾನವು ಅವಿಚಾರದಿಂದ ಸ್ವತಂತ್ರ ಭಾರತವನ್ನು ನೀತಿಬಾಹ್ಯ ಮಾರ್ಗಗಳಿಂದ ಪ್ರತಿಭಟಿಸಿದರೆ ಅದನ್ನು ಸರಿಮಾರ್ಗಕ್ಕೆ ತರುವ ಸಾಮರ್ಥ್ಯ ಸ್ವತಂತ್ರ ಭಾರತಕ್ಕೆ ಉಂಟೇ ಉಂಟು! ಸ್ವತಂತ್ರ ಭಾರತವು ೩ ವರ್ಷಗಳ ಹಸುಗೂಸಾದರೂ ಮಹಾತ್ಮರ ಆಶೀರ್ವಾದದಿಂದ ತಕ್ಕಷ್ಟು ದೈವಬಲ ಅದಕ್ಕೆ ಪ್ರಾಪ್ತವಾಗಿದೆ. ಅನೀತಿಯನ್ನು ಎದುರಿಸುವ ಮಹಾಶಕ್ತಿ ಅದಕ್ಕೆ ಉಂಟು. ಅದರಿಂದ ಕಾಶ್ಮೀರ ಪ್ರಕರಣ ಶೀಘ್ರವೇ ಭಾರತಕ್ಕೆ ಅನುಕೂಲವಾಗಿ ನಿರ್ಣಯ ಹೊಂದುವದೆಂದು ನಮಗೆ ಪೂರ್ಣ ವಿಶ್ವಾಸವಿದೆ. ಭಾರತದ ಪೂರ್ಣತೆಗೆ ಕುಂದು ತರುವ ಇನ್ನೆರಡು ವಿಷಯಗಳುಂಟು. ಫ್ರೆಂಚರೂ ಪೋರ್ತುಗೀಜರೂ ಆಳುತ್ತಿರುವ ಕೆಲವು ಭಾಗಗಳು ಹಿಂದುಸ್ಥಾನದಲ್ಲಿವೆ. ಫ್ರೆಂಚರ ಚಂದ್ರನಗರವಿಂದು ಭಾರತದಲ್ಲಿ ಸೇರುತ್ತದೆ. ದೀರ್ಘ ವಿಚಾರ ಮಾಡಿ ಫ್ರೆಂಚ ಸರಕಾರವು ಚಂದ್ರನಗರವನ್ನು ಹಿಂದುಸ್ಥಾನಕ್ಕೆ ಒಪ್ಪಿಸುವ ನಿರ್ಧಾರ ಮಾಡಿದೆ. ಅವರ ಪಾಂಡಿಚೇರಿಯೂ ಕೂಡ ಇದೇ ರೀತಿ ವರ್ಷಾಂತ್ಯದೊಳಗೆ ಭಾರತದಲ್ಲಿ ಕೂಡಿಕೊಳ್ಳುವದೆಂದು ನಿರೀಕ್ಷಿಸಬಹುದು. ಪಾಂಡಿಚೇರಿಯನ್ನು ಭಾರತಕ್ಕೆ ಒಪ್ಪಿಸಿ ಭಾರತದ ಆಧ್ಯಾತ್ಮಿಕ ಶಕ್ತಿಯನ್ನು ಬೆಳಸಬೇಕಾಗಿ ಯೋಗೀಂದ್ರ ಅರವಿಂದ ಘೋಷರು ಅಭಿಪ್ರಾಯಪಟ್ಟ ಸುದ್ದಿಯೊಂದು ಪ್ರಕಟವಾಗಿದೆ. ಪಾಂಡಿಚೇರಿಯು ಭಾರತದಿಂದ ಬೇರೆ ಉಳಿಯಲಾರದು. ಫ್ರೆಂಚರು ಪ್ರಜಾಪ್ರಭುತ್ವವಾದಿಗಳಾಗಿರುವದರಿಂದ ಪಾಂಡಿಚೇರಿಯ ಜನರ ಅಭಿಪ್ರಾಯವನ್ನು ತಿರಸ್ಕರಿಸಿ ನಡೆಯಲಿಕ್ಕೆ ಫ್ರೆಂಚ ಸರಕಾರಕ್ಕೆ ಸಾಧ್ಯವಿಲ್ಲ. ಪೋರ್ತುಗೀಜ ಸರಕಾ

ರದ ಸ್ಥಿತಿ ಮಾತ್ರ ತೀರ ಭಿನ್ನವಿದೆ. ಗೋವಾ, ದೀವ, ದಮನ ವಸಾಹತುಗಳು ಪೋರ್ತುಗಾಲ ದೇಶದಿಂದ ಸಾವಿರಾರು ಮೈಲು ದೂರವಿದ್ದರೂ ಅವು ಪೋರ್ತುಗಾಲ ದೇಶದ ಭಾಗಗಳೆಂದು ವಾದಿಸಿ ಅವನ್ನು ಕಾಪಾಡಿಕೊಳ್ಳಲು ಪೋರ್ತುಗೀಜ ಸರಕಾರವು ಹುಡುಗಾಟ ನಡೆಸುತ್ತಿರುವದೆ! ಗೋವಾಂತಕದಲ್ಲಿ ಭಾರತದ ಪಕ್ಷ ಹಿಡಿವ ಪ್ರಮುಖರಿಗೆ ಘೋರ ಶಿಕ್ಷೆ ವಿಧಿಸಲ್ಪಡುತ್ತದೆ! ಪೋರ್ಚುಗೀಜ ಆಫ್ರಿಕೆಯಿಂದ ಸೈನಿಕರನ್ನು ತಂದಿಟ್ಟಿದ್ದಾರೆ! ಶಸ್ತ್ರಾಸ್ತ್ರ ತುಂಬಿದ ಹಡಗಗಳು ಮುರಗಾಂವ ಬಂದರದಲ್ಲಿ ಬಂದು ನಿಂತ ಸುದ್ದಿಗಳಿವೆ! ಪೋರ್ತುಗಾಲ ದೇಶಕ್ಕೆ ಬಾಹು ಸ್ಫುರಣವಾಗುತ್ತಿದ್ದರೆ ಅದನ್ನು ನಿಲ್ಲಿಸುವ ಶಕ್ತಿ ಸ್ವತಂತ್ರ ಭಾರತದಲ್ಲುಂಟು. ಗೋವಾಂತಕವು ನೆರೆಯಲ್ಲಿರುವ ನಿಜಾಮ ರಾಜ್ಯಕ್ಕೊದಗಿದ ದುರವಸ್ಥೆಯನ್ನು ಕಂಡು ತಕ್ಕ ಬೋಧ ಪಡೆಯಬೇಕು. ಪಂ|| ಜವಾಹರಲಾಲ ನೆಹರೂರವರು ಹಿಂದುಸ್ಥಾನ ಸರಕಾರದ ಪರವಾಗಿ ರಾಯಭಾರ ನಡೆಸಲು ಶ್ರೀ|| ಮೆನನ್ನರನ್ನು ಪೋರ್ತುಗಾಲಕ್ಕೆ ಕಳಿಸಿದ್ದಾರೆ. ಹಿಂದೀ ವಸಾಹತುಗಳ ಮೇಲಿನ ಪ್ರಭುತ್ವವನ್ನು ತೊರೆಯಲು ಪೋರ್ತುಗೀಜ ಸರಕಾರವು ಕಾಂಬನವನ್ನು ಅಪೇಕ್ಷಿಸುತ್ತಿದ್ದರೆ, ಅದನ್ನು ಕೊಡಲಿಕ್ಕೂ ಹಿಂದುಸ್ಥಾನ ಸರಕಾರವು ಒಡಂಬಡಬಹುದು. ಯುದ್ಧವಾದಲ್ಲಿ ಯುದ್ಧಕ್ಕೆ ತಗಲುವ ಖರ್ಚನ್ನೂ ಹಾನಿಯನ್ನೂ ಎಣಿಸಿ ಅಷ್ಟು ಹಣವನ್ನು ಪೋರ್ತುಗಾಲ ಸರಕಾರಕ್ಕೆ ಕೊಡಬಹುದಾಗಿ ದಿಲ್ಲಿಯೊಳಗಿನ ಕೆಲವು ಪತ್ರಕರ್ತರು ಹಿಂದುಸ್ಥಾನ ಸರಕಾರಕ್ಕೆ ಸಲಹೆ ಕೊಟ್ಟಿದ್ದಾರೆ. ಸಾಮದಿಂದಾಗಲಿ ದಂಡದಿಂದಾಗಲಿ ಹಿಂದುಸ್ಥಾನ ಸರಕಾರವು ಬೇಗನೇ ಭಾರತದೊಳಗಿನ ಪೋರ್ತುಗೀಜ ವಸಾಹತುಗಳನ್ನು ನಿರ್ನಾಮಗೊಳಿಸುವದೆಂಬುದು ನಿಶ್ಚಿತ. ರಾಷ್ಟ್ರ-ನಿರ್ಧಾರವೇ ಈ ಪ್ರಕಾರವಿದೆ. ಹಿಂದ-ಭೂಮಿಯಲ್ಲಿ ಪರಸ್ಪರ ಅಧಿರಾಜ್ಯವಿರದಂತೆ ಉಪಾಯ-ಯೋಜನೆ ಮಾಡಬೇಕಾಗಿ ಜಯಪುರದೊಳಗೆ ನೆರೆದ ರಾಷ್ಟ್ರೀಯ ಸಭೆಯ ನಿರ್ಧಾರವಾಗಿದೆ. ಇಂದಲ್ಲ ನಾಳೆ ಗೋವಾಂತಕವೂ ದೀವ-ದಮನಗಳೂ ಪೋರ್ತುಗೀಜರ ಕೈ ಬಿಡಲೇಬೇಕು. ಪೋರ್ತುಗೀಜರು ದೀರ್ಘ ದೃಷ್ಟಿ ಹಿಡಿದು ತಮ್ಮ ನಡಾವಳಿಯನ್ನು ನಿರ್ಧರಿಸಿಕೊಳ್ಳದಿದ್ದರೆ, ಮುಂದೆ ಅವರು ಪಶ್ಚಾತ್ತಾಪಪಡಬೇಕಾದೀತು. ಅಶೋಕ ಚಕ್ರಾಂಕಿತ ಸ್ವತಂತ್ರ ಭಾರತದ ಧ್ವಜವು ಸಮಗ್ರ ಹಿಂದುಸ್ಥಾನದಲ್ಲಿ ಹಾರಾಡಲೇಬೇಕು. ಅಂತಹ ಸ್ಥಿತ್ಯಂತರವನ್ನು ಸ್ವತಂತ್ರ ಭಾರತವು ಈ ಎರಡು ವರ್ಷಗಳಲ್ಲಿ ಸಾಧಿಸಿದೆ. ಆ ಧ್ಯೇಯಸಾಧನೆಗೆ ಅನುಕೂಲವಾಗಿ ವರ್ತಿಸುವ ನಿರ್ಧಾರವನ್ನು ಸಕಲ ಭಾರತೀಯರು ಮಾಡಬೇಕು.

ಸ್ವತಂತ್ರ ಭಾರತಕ್ಕೆ ವಿಜಯವಾಗಲಿ ಎಂದು ಹೇಳುವದರ ತಾತ್ಪರ್ಯವಿಷ್ಟೇ. ದೇಶದೊಳಗೂ ವಿದೇಶಗಳೊಳಗೂ ಭಾರತಕ್ಕೆ ಶಾಂತಿ ಬೇಕು. ಶಾಂತಿಯ ಮಾರ್ಗದಿಂದಲೇ ಜಟಿಲ ಸಮಸ್ಯೆಗಳನ್ನು ಭಾರತವು ಹಿಂದೆ ಬಿಡಿಸಿದೆ. ಇಂದಾದರೂ ಭಾರತವು ಶಾಂತಿಯ ಮಾರ್ಗದಿಂದಲೇ ಎಲ್ಲ ವಿವಾದಗಳನ್ನು ಬಗೆಹರಿಸಲು ಸರ್ವ ಪ್ರಯತ್ನಗಳನ್ನು ಮಾಡುವದು. ಆಕ್ರಮಣದ ಇಚ್ಛೆ ಭಾರತಕ್ಕೆ ಇರುವದಿಲ್ಲ. ಪ್ರತಿಯೊಂದು ಜನಾಂಗವೂ ಸ್ವತಂತ್ರವಾಗಿ ತನ್ನ ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕೆಂದು ಭಾರತವು ಹಂಬಲಿಸುತ್ತದೆ. ಸ್ವತಂತ್ರ ಭಾರತದ ಜನಕರಾದ ಮಹಾತ್ಮರೂ ನೆಹರೂ-ಪಟೇಲ ಪ್ರಭೃತಿ ಲೋಕನಾಯಕರೂ ಈ ಮಾತನ್ನು ಲೋಕಕ್ಕೆ ಘೋಷಿಸಿದ್ದಾರೆ. ಪ್ರಭಾವಿ ಪಾಶ್ಚಾತ್ಯ ಜನಾಂಗಗಳು ಸ್ವಾರ್ಥಪರಾಯಣವಾಗಿರುವ ಈ ಸಮಯದಲ್ಲಿ ಸ್ವತಂತ್ರ ಭಾರತವೊಂದೇ ಈ ಮಾತನ್ನು ಅಧಿಕಾರವಾಣಿಯಿಂದ ಬೇಗನೇ ಹೇಳಬಲ್ಲದೆಂದು ಎಲ್ಲರೂ ಹೊಗಳುತ್ತಾರೆ. ಅದು ಕಾರಣವೇ ನಾವಿಂದು ಭಾರತಕ್ಕೆ ವಿಜಯವಾಗಲೆಂದೂ ಭಾರತದ ತತ್ವಜ್ಞಾನ ಲೋಕದಲ್ಲೆಲ್ಲ ಪ್ರಚಾರವಾಗಿ ಲೋಕಕಲ್ಯಾಣ ಸಾಧಿಸಲೆಂದೂ ಜಗತ್ಪಾಲಕನನ್ನು ನಾವು ಪ್ರಾರ್ಥಿಸಿದುದಾಗಿರುತ್ತದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಮೊನ್ನೆ ಶನಿವಾರದ ವರೆಗೆ ಆಗಾಗ ಮಳೆಯಾಗುತ್ತಿತ್ತು. ನಿನ್ನೆಯಿಂದ ಬಿಸಿಲು ಬೀಳಹತ್ತಿದೆ. ನಾಳೆ ಮಧ್ಯಾಹ್ನದಲ್ಲಿ ಮಘಾ ಪ್ರವೇಶವಾಗುವದು. ಈ ವರೆಗೆ ಬಿದ್ದ ಮಳೆ ೧೧೮ ಇಂಚು ಆಗಿದೆ.

ಕೆನರಾ ಕಾಲೇಜಿನವರು ಕಳೆದ ವಾರದಿಂದ ತಮ್ಮದೊಂದು ಚರ್ಚಾ-ಕೂಟವನ್ನು ಸ್ಥಾಪಿಸಿದ್ದಾರೆ. ಕಳೆದ ಗುರುವಾರ ಅದರ ಪ್ರಾರಂಭೋತ್ಸವ ಮಾಡಿಕೊಡುವಾಗ ಭಟಕಳದ ರಾ|| ಶಮಸುದ್ದೀನರು (ಎಸೆಂಬ್ಲಿ-ಸದಸ್ಯರು), ನಾಡಿನೊಳಗೆ ಇಂದು ರೂಪಗೊಳ್ಳುತ್ತಿರುವ ಪ್ರಜಾರಾಜ್ಯದಲ್ಲಿ ಮಾತುಗಾರಿಕೆಗೆ ಬಹಳ ಬೆಲೆಯುಂಟೆಂದೂ, ತಮ್ಮ ವಾದವನ್ನು ಜನರ ಮುಂದೆ ಹೃದಯಂಗಮವಾಗಿ ಇಡುವ ಜನರೇ ಜನರ ಮುಂದಾಳುಗಳಾಗಬಲ್ಲರೆಂದೂ ಪ್ರತಿಪಾದಿಸಿ, ಪಕ್ಷ-ಪ್ರತಿಪಾದನೆಯ ಕಲೆಯನ್ನು ಕಲಿಯುವದರ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಿದರು.

ಇಲ್ಲಿಯ ವರ್ತಕರಾಗಿರುವ ರಾ|| ರಾ|| ಡಿ. ಕೇ. ನಾಯಕ ಮತ್ತು ಕಂಪನಿಯವರು ತಮ್ಮ ಕಾಲೇಜಿಗೆ ಗೊಡ್ರೇಜ ಕಂಪನಿಯದೊಂದು ಉಕ್ಕಿನ ನಾಗೊಂದಿಗೆಯನ್ನು ದಾನ ಮಾಡಿದ್ದಾರೆಂದು ಕೆನರಾ ಕಾಲೇಜಿನ ಆಚಾರ್ಯರು ತಿಳಿಸುತ್ತಾರೆ.

ಈ ಹೊತ್ತು ಸ್ವಾತಂತ್ರ್ಯೋತ್ಸವದ ನಿಮಿತ್ತ ತಾಲೂಕ ಕಚೇರಿಯಲ್ಲಿ ಮುಂಜಾನೆ ಎಂಟಕ್ಕೆ ಧ್ವಜಾರೋಹಣ ಧ್ವಜವಂದನೆಗಳೂ, ಪೋಲೀಸರ ಮತ್ತು ಗೃಹರಕ್ಷಕ ದಲದವರ ಅಭಿವಾದನೆಗಳೂ ನಡೆಯುವವು. ಅನಂತರ ಕಚೇರಿಯ ಆವಾರದಲ್ಲಿ ವೃಕ್ಷಾರೋಪಣ ವಿಧಿಯನ್ನು ಮುಗಿಸಿ, ಬೇರೆ ಬೇರೆ ಶಾಲೆಗಳ ವಿದ್ಯಾರ್ಥಿಗಳೂ ಪೋಲೀಸರೂ ಗೃಹರಕ್ಷಕ ದಲದವರೂ ಊರಿನ ಜನರೂ ಮೆರವಣಿಗೆಯಿಂದ ಗಾಂಧಿ-ಚೌಕಿಗೆ ಹೋಗಿ, ಅಲ್ಲಿ ನಗರ ಸಭೆಯ ಕಚೇರಿಯ ಮೇಲೂ ಧ್ವಜಾರೋಹಣ ಮಾಡುವರು. ಅಷ್ಟಾದ ಮೇಲೆ ಚಿತ್ರರಂಜನ ಚಿತ್ರಮಂದಿರದಲ್ಲಿ ಮಾಮಲೇದಾರರ ಅಧ್ಯಕ್ಷತೆಯೊಳಗೆ ಸಾರ್ವಜನಿಕರ ಸಭೆಯಾಗುವದು.

ಕೆನರಾ ಕಾಲೇಜಿನ ಸ್ವಾತಂತ್ರ್ಯೋತ್ಸವದ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಚಿತ್ರಾಪುರ ಮಠದ ಶ್ರೀ ಆನಂದಾಶ್ರಮ ಗುರುಗಳು ವಹಿಸಲೊಪ್ಪಿದ್ದಾರೆ. ಮಧ್ಯಾಹ್ನದಲ್ಲಿ ಕಾಲೇಜಿನ ಆಟಗಾರರು ಮತ್ತು ಗಿಬ್ಸ ಹಾಯಸ್ಕೂಲಿನ ಆಟಗಾರರು ಇವರ ನಡುವೆ ಮಣಕಿ ಮೈದಾನದೊಳಗೆ ಕ್ರಿಕೆಟ-ಪಂದ್ಯಾಟ ನಡೆಯುವದು.

ಇಲ್ಲಿಯ ಸರಕಾರಿ ಖಾದಿ ಅಂಗಡಿಯಲ್ಲಿ ಸೀರೆಗಳು, ಮಲ್ಲು, ವಾಯ್ಲು, ಕೋಟಿಂಗ, ಶರ್ಟಿಂಗ, ಡ್ರಿಲ್ಲ, ಲಾಂಗ-ಕ್ಲಾಥ್, ಟವೆಲ ಮತ್ತು ಹಾಸುಗೆ (ಶೀಟಿಂಗ)ಗಳು ದೊರೆಯುತ್ತವೆಂದು ಅಂಗಡಿಯ ವ್ಯವಸ್ಥಾಪಕರು ತಿಳಿಸುತ್ತಾರೆ.

ಗುಡಗಾರ ಪೇಟೆಯೊಳಗಿನ ಮಾರ್ಗದ ನಡುಭಾಗದಲ್ಲಿ ಈಗ ಕೆಲವು ದಿನಗಳಿಂದ ರಾಡಿ ಬಹಳವಾಗಿದೆ! ಕೋರ್ಟ-ಕಚೇರಿಗಳಿಗೆ ಹೋಗುವ ಜನರೂ, ಗಿಬ್ಸ ಹಾಯಸ್ಕೂಲಿಗೆ ಹೋಗುವ ವಿದ್ಯಾರ್ಥಿಗಳೂ, ಹೆರವಟ್ಟೆಯಿಂದ ಕುಮಟೆಗೆ ಬಂದು ಹೋಗುವ ಜನರೂ ಆ ರಾಡಿ ನೋಡಿ, ಉದ್ವೇಗದಿಂದ ಮ್ಯು|| ಯವರಿಗೆ ದಿನಾಲು ಬೈಗಳ ಪುಷ್ಪಾಂಜಲಿಯನ್ನು ಅರ್ಪಿಸುತ್ತಿದ್ದಾರೆ! ಆ ಪುಷ್ಪಾಂಜಲಿಯು ತಮಗೊಂದು ಭೂಷಣವೆಂದು ಮ್ಯು|| ಯವರು ತಿಳಿಯುತ್ತಾರೋ ಏನೋ!

ಗೋಕರ್ಣದ ರಾ|| ಪರಮೇಶ್ವರ ವಿಶ್ವೇಶ್ವರ ಗಾಡಶಾಸ್ತ್ರಿಯವರು ಈಗ ಭಾರತ ಸರಕಾರದ ಸಾಂಕ ಮಂಡಳದ ಜೊತೆ-ಕಾರ್ಯದರ್ಶಿಯ ಸ್ಥಾನಕ್ಕೆ ನೇಮಿಸಲ್ಪಟ್ಟಿದ್ದಾರೆಂದು ತಿಳಿಯುತ್ತದೆ.

ಒಡೆಯರಿಗೆ ಗೇಣಿ ಕೊಡಲೆಂದು ಗೋಕರ್ಣ ಸೀಮೆಯ ಒಕ್ಕಲಿಗರು ಕಾದಿಟ್ಟ ಅಕ್ಕಿ-ಭತ್ತಗಳನ್ನು ಸಹ ಗ್ರಾಮಾಧಿಕಾರಿಗಳು ಒತ್ತಾಯದಿಂದ ಖರೀದಿಸಿ, ಒಡೆಯರ ಗೇಣಿಯನ್ನು ನಗದಿಯಿಂದ ಕೊಡಲು ರೈತರಿಗೆ ಹೇಳುತ್ತಿದ್ದಾರೆಂದು ಮುಂಬಯಿಯ ತಾ. ೨-೮-೪೯ರ "ಪ್ರಜಾ"ದಲ್ಲಿ ಪ್ರಕಟವಾದ ದೂರು ನಿರಾಧಾರವಾದುದಾಗಿ, ಕುಮಟೆಯ ಮಾಮಲೇದಾರರ ಕಡೆಯಿಂದ ಖುಲಾಸೆ ಮಾಡಿಸಿಕೊಂಡು, ಜಿಲ್ಲಾಧಿಪರು ಬರೆದಿರುತ್ತಾರೆ. ತಮ್ಮ ರೈತರ ಕಡೆಗಿದ್ದ ಭತ್ತವನ್ನು ಗ್ರಾಮಸ್ಥರು ಖರೀದಿಸಿದರೆಂದು ಸಿದ್ಧಮಾಡಿ ತೋರಿಸಲು ಯಾವ ಒಡೆಯನೂ ಶಕ್ತನಾಗಲಿಲ್ಲವಂತೆ. ಗೋಕರ್ಣದೊಳಗಿನ ಬಹಳಷ್ಟು ಒಕ್ಕಲಿಗರು ಒಡೆಯರಿಗೆ ಸಲ್ಲತಕ್ಕ ಗೇಣಿಯನ್ನು ಸಲ್ಲಿಸಿಕೊಡದೆ, ಇದ್ದ ಭತ್ತವನ್ನೆಲ್ಲ ಸರಕಾರದವರು ಖರೀದಿಸಿದರೆಂದು ಒಡೆಯರಿಗೆ ಮೋಸಗಾರಿಕೆಯ ಸುಳ್ಳು ಸಬೂಬು ಹೇಳಹತ್ತಿರುವದರಿಂದ ಒಡೆಯರ ತಪ್ಪು ತಿಳುವಳಿಕೆಯಾಗಿದೆಯೆಂದೂ, ಆ ತಪ್ಪು ತಿಳುವಳಿಕೆಯೇ "ಪ್ರಜಾ"ದೊಳಗೆ ಪ್ರಕಟವಾಗಿರುವ ದೂರಿಗೆ ಮೂಲಾಧಾರವಿರುತ್ತದೆಂದೂ ಮಾಮಲೇದಾರರು ಸ್ಪಷ್ಟ ಮಾಡಿರುತ್ತಾರೆ. ಕೆಲವು ಒಡೆಯರು ತಮಗೆ ಬರಬೇಕಾದ ಗೇಣಿಯನ್ನು ಪರಸ್ಪರ ಒಕ್ಕಲಿಗರಿಂದ ಸರಕಾರದವರು ಖರೀದಿಸಿ ತಮಗೆ ಹಣ ಕೊಡಬೇಕೆಂದು ಹೇಳುತ್ತಿದ್ದಾರೆ. ಅಂಥವರ ರೈತರ ಕಡೆಗಿದ್ದ ಗೇಣಿಯ ಅಕ್ಕಿ-ಭತ್ತವನ್ನೇ ಗ್ರಾಮಸ್ಥರು ಖರೀದಿಸುತ್ತಾರಂತೆ. ಸರಕಾರದವರ ಖರೀದಿಯ ವ್ಯವಹಾರಗಳೆಲ್ಲ ಅನುನಯ ಮಾರ್ಗದಿಂದಲೇ ಆಗಿವೆಯೆಂದೂ ಯಾವ ಮೇಲಿನ ಒತ್ತಾಯವಾಗಿಲ್ಲವೆಂದೂ ಜಿಲ್ಲಾಧಿಪರು ಬರೆಯುತ್ತಾರೆ. ಯೋಗ್ಯ ಅಧಿಕಾರಿಗಳ ಕಡೆಯಿಂದ ಅಪ್ಪಣೆ ಚೀಟಿ ಪಡೆದುಕೊಂಡು ಗ್ರಾಮಾಂತರಗಳಿಂದ ಗೇಣಿಯ ಅಕ್ಕಿ-ಭತ್ತ ಸಾಗಿಸುವಾಗ, ನಡುವೆ ಅದನ್ನು ಹಿಡಿದು ಸರಕಾರದವರು ಖರೀದಿಸುತ್ತಾರೆಂಬುದೂ ನಿಜವಲ್ಲವಂತೆ. ರಾ|| ರಾಯ್ಯ ಉಪಾಧ್ಯರೆಂಬವರ ರೈತನೊಬ್ಬನು ತನ್ನ ಒಡೆಯರಿಗೆ ಗೇಣಿ ಅಕ್ಕಿ ತಂದುಕೊಡಲು ಅಧಿಕೃತ ಅಪ್ಪಣೆ ಚೀಟಿ ಪಡೆಯದೆ ಗೋಕರ್ಣ ಸೀಮಾ-ಕ್ಷೇತ್ರದ ಹೊರಗಿಂದ ೪ ಮೂಟೆ ಅಕ್ಕಿ ಸಾಗಿಸುತ್ತಿದ್ದಾಗ ಸಿಕ್ಕ

(೩ನೇ ಪುಟದ ಮೇಲೆ ಮುಂದುವರಿದಿದೆ)

ಜಿಲ್ಲಾ ಸಮಾಚಾರ.

ಕಾರವಾರ— ನಮ್ಮ ಜಿಲ್ಲೆಯ ಪ್ರಖ್ಯಾತ ಕಲಾಭೂಷಣ ಪಂಡಿತರು ಜನ ಶ್ರೀ ಮಾಂಗೇಶರಾವ ರಾಮಕೃಷ್ಣ ತೇಲಂಗರು—ಬೀನ ಮಾಂಗೇಶರಾಯರೆಂದ ಖ್ಯಾತರಾದ ತೇಲಂಗರವರು ವೃದ್ಧಾಪ್ಯ ಪಟ್ಟವರು— ಕಳೆದ ಗುರುವಾರ (ತಾ. ೧೧) ಅರುಣೋದಯ ಸಮಯದಲ್ಲಿ ತಮ್ಮ ಕೊನೆಯುಸಿರೆಳೆದರೆಂದು ತಿಳಿಸಲು ವಿಷಾದವಾಗುತ್ತದೆ. ತೇಲಂಗರು ಮುಂಬಯಿ ಹಾಯಕೋರ್ಟಿನ ಅಪೀಲ-ಶಾಖೆಯಲ್ಲಿ ನೌಕರಿ ಶಿರಸ್ತೇದಾರರ ಹುದ್ದೆಯವರೆಗೆ ಏರಿ, ೩೫ ವರ್ಷಗಳ ಹಿಂದೆ ನಿವೃತ್ತರಾಗಿದ್ದರು. ಆ ನೌಕರಿಯನ್ನು ಸಾಗಿಸುತ್ತಿರುವಾಗಲೇ ಅವರು ಗಾಯನ-ವಾದನ ವಿದ್ಯೆಯ ಅಭ್ಯಾಸ ನಡೆಸಿ ಅದರಲ್ಲಿ ತುಂಬಾ ಪ್ರಾವೀಣ್ಯ ಸಂಪಾದಿಸಿದ್ದರು. ಚಿತ್ರಕಲೆಯ ಅಭ್ಯಾಸವನ್ನೂ ಅವರು ಮಾಡಿದ್ದರೆಂದು ತಿಳಿಯುತ್ತದೆ. ಅದರ ಜೊತೆಗೆ ಅವರು ಸಂಸ್ಕೃತ ವಾಙ್ಮಯದ ಅಭ್ಯಾಸವನ್ನೂ ಮಾಡಿ ವೇದಾಂತ ಶಾಸ್ತ್ರದ ಗಾಢ ಪರಿಚಯ ಮಾಡಿಕೊಂಡಿದ್ದರು. ಅವರ ಸಿತಾರವಾದನವೂ ಮತ್ತು ಬೀನ (ವೀಣಾ) ವಾದನವೂ ಬಹಳ ಜನಮೋಹಕವಾಗುತ್ತಿತ್ತು. ಅಂತೆಯೇ ಭಾರತದ ಕಲಾವಿದರು ಅವರಿಗೆ "ವೀಣಾ-ವಿಶಾರದ" ಮತ್ತು "ವಿದ್ಯಾ-ಭೂಷಣ" ರೆಂದು ಪದವಿಗಳನ್ನು ಅರ್ಪಿಸಿದರು. ಸಂಸ್ಕೃತದಲ್ಲಿ ಅವರು ಬಹಳಷ್ಟು ಪದ್ಯರಚನೆ ಮಾಡಿದ್ದಾರೆ. ತಮ್ಮ ಸಮಯದಲ್ಲಿ ತೇಲಂಗರಿಗೆ ನ್ಯಾಯದ ಗಂಟೇ ನಡೆಯುತ್ತಿತ್ತಾಗ ತಿಳಿಯುತ್ತದೆ. ಅವರ ನಿಧನದಿಂದ ನಮ್ಮ ಜಿಲ್ಲೆಯು ಶ್ರೇಷ್ಠ ಕಲಾವಿದನನ್ನು ಅನುಭವಿ ಮತ್ತು ವಿಚಾರವಂತ ಪಂಡಿತನನ್ನು ಕಳೆದುಕೊಂಡಿದೆ. ತೇಲಂಗರಿಗೆ ಪರಮಾತ್ಮನು ಸದ್ಗತಿಯನ್ನಿತ್ತು ಅವರ ಪರಂಪರೆಯನ್ನು ಮುಂದರಿಸಲು ಅವರ ಕುಟುಂಬದವರಿಗೆ ಬುದ್ಧಿಶಕ್ತಿಗಳನ್ನೀಯಲೆಂದು ಹಾರೈಸುತ್ತೇವೆ.

(ತಾ. ೧೦-೮-೪೯) ಈ ಊರಲ್ಲಿ ಈಗ ವಿಷಮ ಜ್ವರದ ಬಾಧೆ ಹೆಚ್ಚಾಗಿದೆ. ಅದರ ನಿವಾರಣೆಗಾಗಿ ಮ್ಯುನಿಸಿಪಾಲಿಟಿಯವರು ಜನರಿಗೆ ಪುಕ್ಕಟೆಯಾಗಿ ಮದ್ದು ಹಂಚುವ ವ್ಯವಸ್ಥೆ ಮಾಡಿದ್ದಾರೆ.

ಅದೇ ಬರುವ ಸೋಮವಾರ ದಿನ, ಸ್ವಾತಂತ್ರ್ಯೋತ್ಸವದ ಅಂಗವಾಗಿ, ಮುಂಜಾನೆ ಆರೂವರೆ ಘಂಟೆಗೆ ಧ್ವಜಾರೋಹಣ,-ಧ್ವಜವಂದನೆ, ಆ ನಂತರ ನಗರ ಸಭೆಯ ಆವಾರದಲ್ಲಿ ವ್ಯಾಯಾಮ ಪ್ರದರ್ಶನ, ಆ ನಂತರ ಮಧ್ಯಾಹ್ನ ೪ರಿಂದ ಪೋಲೀಸರ ಮತ್ತು ಶಾಲಾ ಮಕ್ಕಳ ಮೆರವಣಿಗೆ, ಅಲ್ಲಿ ಪೋಲೀಸರ ಕವಾಯತು, ವ್ಯಾಖ್ಯಾನಗಳು ಜರುಗುವವು. ಹಾಗೂ ಅಲ್ಲಿಂದ ತಿರುಗಿ ಬಂದು ನಗರ ಸಭೆಯ ಕಛೇರಿಯವರೆಗೆ ಮೆರವಣಿಗೆ ಬಂದು ಅಲ್ಲಿ ಧ್ವಜಾವರೋಹಣ. ಹೀಗೆ ಕಾರ್ಯಕ್ರಮ ಜರುಗಬೇಕೆಂದು ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ನಿರ್ಣಯಿಸಲಾಗಿದೆ. ಸಂಜೆಯಲ್ಲಿ ಹಿರಿಯ ಜನ ಮಂದಿರದಲ್ಲಿ ಜಿಲ್ಲಾಧಿಪರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಗುವದು.

ಇನ್ನೆ ರಾತ್ರಿ ಗೋವೆಯಿಂದ ಕಳ್ಳತನದಿಂದ ಬೀಡಿ ತಂಬಾಕು ಮತ್ತು ಸಿಗರೇಟುಗಳನ್ನು ತರುತ್ತಿದ್ದ ಹುಬ್ಬಳ್ಳಿಯ ಜನ ಸಾಬ ಮತ್ತು ಭಟಕಳದ ಇಬ್ಬರು ಎಂಬವರಿಗೆ ಪೋಲೀಸರು ಹಿಡಿದಿಟ್ಟಿದ್ದಾರೆ. ಅವರು ತಂದಿರುವ ತಂಬಾಕಿನ ಮತ್ತು ಸಿಗರೇಟ ಪಾಕೀಟುಗಳು ಬಹಳ ಬೆಲೆಯುಳ್ಳದ್ದಾಗಿದೆ. ಅವರು ಮಾಡಿದ ತಂಬಾಕು-ಸಿಗರೇಟುಗಳ ಬೆಲೆ ರೂ. ೨೦೦೦ಕ್ಕೂ ಹೆಚ್ಚಾಗಿರುವದೆಂದು ಹೇಳುತ್ತಾರೆ.

೧—೬—೧೯೪೯ರಿಂದ ಅಮಲಿನಲ್ಲಿ ಬಂದಿರುವ ಹಾಗೂ ಆ ತಾರೀಕಿನ ಹೊರಡಿಸಲ್ಪಟ್ಟ ಮುಂಬಯಿ ಸರಕಾರದ ಗಾಝೆಟಿನಲ್ಲಿ ಪ್ರಕಟವಾಗಿರುವ ಆಹಾರ ಧಾನ್ಯಗಳ (ಸಾಗಾಟ ಮತ್ತು ಕ್ರಯ-ವಿಕ್ರಯಗಳನ್ನು ನಿಯಂತ್ರಿಸುವ) ಹೊಸ ಆಜ್ಞೆಯು, ಜಿಲ್ಲೆಯೊಳಗಿನ ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಅವಲಕ್ಕಿ, ಮಂಡಕ್ಕಿ, ಹೊದಲು ಮುಂತಾದ ಅಕ್ಕಿ-ಭತ್ತಗಳ ರೂಪಾಂತರಿತ ಪದಾರ್ಥಗಳನ್ನು ಅನಿರ್ಬಂಧವಾಗಿ ಒಯ್ಯಲಿಕ್ಕೆ ಬರುವದೆಂದು ಹೇಳುತ್ತದೆ. ಜಿಲ್ಲೆಯ ಹೊರಗೆ ಮಾತ್ರ ಇವನ್ನು ಜಿಲ್ಲಾಧಿಪರ ಅಪ್ಪಣೆ-ಚೀಟಿಯಿಲ್ಲದೆ ಒಯ್ಯಲಾಗುವದಿಲ್ಲ.

ಮುಂಬಯಿ ಸರಕಾರವು ಎಲ್ಲ ಜಿಲ್ಲೆಗಳ ಜಿಲ್ಲಾಧಿಪರಿಗೆ ಒಂದು ಪರಿಪತ್ರ ಕಳಿಸಿ, ವೃಕ್ಷ-ಸಂಪತ್ತಿನ ಜತನದ ಮಹತ್ವವನ್ನರಿತು, ಬರೇ ಸ್ವಾತಂತ್ರ್ಯೋತ್ಸವದ ಕಾಲದಲ್ಲಿಷ್ಟೇ ವೃಕ್ಷಾರೋಪಣದ ಕಾರ್ಯ ಮಾಡದೆ ಇಡೀ ಮಳೆಗಾಲದಲ್ಲಿ ಆ ಕೆಲಸ ನಡಿಸಲು ಪ್ರೋತ್ಸಾಹವನ್ನೀಯತಕ್ಕದ್ದೆಂದು ಆಜ್ಞಾಪಿಸಿದೆ. ಅದೇ ಮೇರೆಗೆ ಸರಕಾರಿ ಸ್ಥಳಗಳಲ್ಲಿರುವ ಗಿಡ-ಮರಗಳನ್ನು ತುಂಟ ಜನರು ಕಡಿದೊಗೆಯದಂತೆ ಯಾ ಅವುಗಳಿಗೆ ಪೆಟ್ಟು ಮಾಡದಂತೆ ಜಾಗ್ರತೆ ವಹಿಸಿ, ಯಾರಾದರೂ ಬುದ್ಧ್ಯಾ ಈ ಮರಗಳನ್ನು ಕಡಿದರೆ ಅಥವಾ ಅವುಗಳಿಗೆ ಪೆಟ್ಟು ಬೀಳುವಂತೆ ಮಾಡಿದರೆ ಅವರ ಮೇಲೆ ಫೌಜದಾರಿ ಕ್ರಮ ನಡಿಸಬೇಕೆಂದು ಅಪ್ಪಣೆ ಮಾಡಿದೆ.

ಊರಗೆಯೊಳಗಿನ ಟಪಾಲ ಕಚೇರಿಯ ಟಪಾಲ ಬಟವಡೆಯು ಸರಿಯಾಗಿ ಆಗುವದಿಲ್ಲೆಂದೂ ಟಪಾಲ ಕಚೇರಿಯವರು ಓದು-ಬರಹವನ್ನರಿಯದ ಓರ್ವನಿಗೆ ಟಪಾಲ-ಬಟವಡೆಯ ಕೆಲಸ ಒಪ್ಪಿಸುತ್ತಾರೆಂದೂ ಒಂದು ಮಾತು ಬಂದಿದೆ. ಅಧಿಕಾರಿಗಳು ಅದರ ಚೌಕಶಿ ಮಾಡಬೇಕು

ಅಂಕೋಲಾ— ಸರಕಾರಿ ಧನಸಹಾಯದಿಂದ ನಡೆಯುವ ಗ್ರಾಮ-ಚಿಕಿತ್ಸಾಲಯಗಳೊಳಗಿನ ವೈದ್ಯ-ಡಾಕ್ತರರು ವಾರದಲ್ಲೊಮ್ಮೆ ಹಳ್ಳಿಗಳಿಗೆ ಭೆಟ್ಟಿ ಕೊಡಬೇಕೆಂದೂ, ತಮ್ಮ ಕ್ಷೇತ್ರದೊಳಗಿನ ಹಳ್ಳಿಗಳಲ್ಲಿ ವ್ಯಾಧಿ ಚುಚ್ಚುವ ಕಾರ್ಯ ಮಾಡಬೇಕೆಂದೂ ಇತ್ತೀಚೆಗೆ ಸರಕಾರದವರು ಒಂದು ನಿಯಮ ಮಾಡಿದ್ದಾರೆ. ಈ ಹೊಸ ಹೊಣೆಯನ್ನು ಸರಿಯಾಗಿ ನಿರ್ವಹಿಸಲು ಸದರಿ ಡಾಕ್ತರ-ವೈದ್ಯರಿಗೆ ಸರಕಾರವು ಒಪ್ಪುವಷ್ಟು ಭತ್ತೆಯನ್ನು ಕೊಡುವದವಶ್ಯವಿರುತ್ತದೆಂದು ಓರ್ವರು ಸೂಚಿಸುತ್ತಾರೆ.

ಹಳಿಯಾಳ— (ತಾ. ೪-೭-೪೯) ಈ ಊರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮುಲ್ಕಿಯ ವರೆಗೆ ಕಲಿಸುವ ಶಾಲೆಗಳಿಲ್ಲದ್ದರಿಂದ ೪-೬ ಮೈಲು ದೂರದಲ್ಲಿರುವ ಸುಮಾರು ೬೦-೫೦ ಮಂದಿ ಹುಡುಗರು ಇಲ್ಲಿಯ ಕನ್ನಡ ಶಾಲೆಗೆ ಬರುತ್ತಾರೆ. ದಿನಾಲು ಅವರು ೨ ಸಾರೆ ನಡಕೊಂಡು ಬರಬೇಕು; ಶಾಲೆ ಬಿಟ್ಟ ಮೇಲೆ ೨ ಸಾರೆ ನಡಕೊಂಡು ಹೋಗಬೇಕು. ಮುಂಜಾನೆ ೧೦॥ ಘಂಟೆಗೆ ಶಾಲೆ ಮುಚ್ಚುತ್ತಾರೆ. ಮಧ್ಯಾಹ್ನ ೨ಕ್ಕೆ ಪುನಃ ಶಾಲೆ ತೆರೆಯಲ್ಪಡುತ್ತದೆ. ನಡುವಿನ ೩॥ ತಾಸು ಹೊತ್ತಿನೊಳಗೆ ಈ ಹುಡುಗರು ಮನೆಗೆ ಮರಳಿ ಹೋಗಿ, ಸ್ನಾನ, ಊಟ ಮುಂತಾದವುಗಳನ್ನು ಮುಗಿಸಿ, ತಿರುಗಿ ಶಾಲೆಗೆ ಬರಬೇಕಾಗುತ್ತದೆ !! ಶಾಲೆಯ ಅಭ್ಯಾಸ ಮಾಡಲಿಕ್ಕೆ ಅವರಿಗೆ ಈ ಮಧ್ಯಂತರದಲ್ಲಿ ವಿರಾಮವೇ ಸಿಗಲೊಲ್ಲದು. ಅದರಿಂದ ಈ ಹುಡುಗರು ಕಲಿಯುತ್ತಿರುವ ವರ್ಗಗಳನ್ನು ಬೆಳಗ್ಗೆ ಮತ್ತು ಮುಂಜಾನೆ ಹೀಗೆ ಎರಡಾವರ್ತಿ ಸೇರಿಸುವದರ ಬದಲು, ಇಂಗ್ಲಿಷ ಶಾಲೆಗಳ ವರ್ಗಗಳಂತೆ ಅವನ್ನು ಮಧ್ಯಾಹ್ನ ೧೧ರಿಂದ ಸಂಜೆ ೫ರ ವರೆಗೆ ಸೇರಿಸುವ ವ್ಯವಸ್ಥೆ ಮಾಡಬೇಕಾಗಿ ಸದರಿ ವಿದ್ಯಾರ್ಥಿಗಳ ತೊಂದರೆಗಳನ್ನು ಕಂಡು ವ್ಯಥೆಗೊಂಡವರೊಬ್ಬರು ಸೂಚಿಸುತ್ತಾರೆ.

ಮ್ಯುನಿಸಿಪಾಲಿಟಿಯ ಕ್ಷೇತ್ರದೊಳಗಿನ ಮಾರ್ಗಗಳು ಬಹಳ ಕೆಟ್ಟುಹೋಗಿವೆ. ಅಲ್ಲಲ್ಲಿ ದೊಡ್ಡದೊಡ್ಡ ಕೊರಕಲುಗಳುಂಟಾಗಿವೆ. ಅವುಗಳಲ್ಲಿ ಮಳೆಯ ನೀರು ನಿಲ್ಲುತ್ತಿರುವದರಿಂದ ಅವು ಎಷ್ಟು ಆಳವೆಂಬುದು ದಾರಿಹೋಕರಿಗೆ ತಿಳಿಯದು. ಅದರಿಂದ ಅವರು ಒಮ್ಮೊಮ್ಮೆ ಎಡವಿ ಬಿದ್ದು ಕಾಲು ಮುರಿದುಕೊಳ್ಳುವ ಪ್ರಸಂಗ ಬರುತ್ತಿದೆ. ರಾತ್ರಿಯ ಕಾಲದಲ್ಲಿ ನಗರ ಸಭೆಯವರ ದೀಪಗಳ ವ್ಯವಸ್ಥೆ ನೆಟ್ಟಗಿರುವದಿಲ್ಲವಾದ್ದರಿಂದ ಈ ಮಾರ್ಗಗಳಲ್ಲಿ ತಿರುಗಾಡುವದು ಅತಿ ಕಷ್ಟವಾಗುತ್ತಿದೆ.

ಊರೊಳಗಿನ ಕೆರೆ-ಬಾವಿಗಳಲ್ಲಿ ಬಹಳ ದಿನಗಳಿಂದ ಕ್ರಿಮಿನಾಶಕ ಔಷಧ ಬಿದ್ದಿರುವದಿಲ್ಲವಾದ್ದರಿಂದ ಊರಲ್ಲಿ ಬಹಳಷ್ಟು ಜನರಿಗೆ ನಾರುಹುಣ್ಣು, ಕಜ್ಜಿ ಮುಂತಾದ ರೋಗಗಳುಂಟಾಗಿವೆ. ನಗರ ಸಭೆಯ ಅಧ್ಯಕ್ಷರವರಿಗೆ ಮೇಲಧಿಕಾರಿಗಳು ತುಸು ಬುದ್ಧಿ ಹೇಳಿ, ಅವರು ಕೂಡಲೇ ಊರೊಳಗಿನ ಮಾರ್ಗಗಳನ್ನು ಸರಿಗೊಳಿಸುವಂತೆಯೂ, ಊರೊಳಗಿನ ಕೆರೆ-ಬಾವಿಗಳಲ್ಲಿ ಕ್ರಿಮಿನಾಶಕ ಮದ್ದು ಹಾಕುವಂತೆಯೂ ಮಾಡಬೇಕಾಗಿ ಅರಿಕೆಯಿದೆ.

(ತಾ. ೧೨-೮-೪೯) ಕೆಲವು ದಿನಗಳಿಂದ ಇಲ್ಲಿ ಮಳೆಯೇ ಇಲ್ಲ. ಭತ್ತದ ಹೊಲಗಳಲ್ಲಿ ಜಿಟ್ಟೆಗಳ ಉಪದ್ರವ ವಿಪರೀತವಾಗಿದೆ. ಅದರಿಂದ ಬಂಗಾರದಂಥ ಭತ್ತದ ಹೊಲಗಳು ಪೂರ್ಣ ಕೆಟ್ಟುಹೋಗಿವೆ. ಉಳಿದ ಹೊಲಗಳಿಗೂ ಹೆಚ್ಚಾಗಿದೆ. ಕಳೆ ತೆಗೆಯುವ ಕೂಲಿಕಾರರು ೧।-೧॥ ರೂ. ದಿನಗೂಲಿ ಬೇಡುತ್ತಿರುವದರಿಂದ ಸಾಗುವಳಿದಾರರು ಕಳೆ ತೆಗೆಯುವದನ್ನೇ ಬಿಟ್ಟಿದ್ದಾರೆ. ಈ ಎಲ್ಲ ಪರಿಸ್ಥಿತಿ ನೋಡಿದರೆ ಈ ವರ್ಷ ೮ ಆಣೆಯಷ್ಟು ಬೆಳೆ ಸಹ ಜನರ ಕೈಸೇರುವದೆಂದು ಹೇಳಬರುವದಿಲ್ಲ.

ಸರಕಾರದವರು ಕಳೆದ ಜೂನ ತಿಂಗಳಲ್ಲಿ ಹೊರಡಿಸಿದ ಠರಾವಿನಂತೆ ಹೆಚ್ಚಿಗೆ ಭತ್ತೆ ಮುಂತಾದವುಗಳನ್ನು ಪಡೆಯಬಯಸುವ ಸೇವಾ-ನಿವೃತ್ತ ಪ್ರಾಥಮಿಕ ಶಾಲಾ ಶಿಕ್ಷಕರು ಅರ್ಜಿಯ ನಮೂನೆಗಳನ್ನು ಪಡಕೊಂಡು, ಒಂದು ಅರ್ಜಿಯನ್ನು ಜಿಲ್ಲಾ ಶಾಲಾ ಬೋರ್ಡಿನ ಆಡ

ಮದ್ಯನಿರೋಧನ ಪ್ರಚಾರಕ ಸಾಹಿತ್ಯದ ಸ್ಪರ್ಧೆ

ಜಿಲ್ಲಾ ಮದ್ಯನಿರೋಧನ ಸಮಿತಿಯವರು ಮದ್ಯನಿರೋಧನ ಪ್ರಚಾರಕ ಸಾಹಿತ್ಯದ ಸ್ಪರ್ಧೆಯೊಂದನ್ನು ಏರ್ಪಡಿಸಲು ನಿರ್ಣಯಿಸಿದ್ದಾರೆ. ಸ್ಪರ್ಧೆಗೆ ಬರುವ ನಾಟಕ, ಕೀರ್ತನ ಮತ್ತು ಕವನಗಳಿಗೆ ಗುಣಾನುಕ್ರಮದಿಂದ ಬಹುಮಾನಗಳನ್ನು ಕೊಡಲಾಗುವದು.

ನಾಟಕ ಮತ್ತು ಕೀರ್ತನ ಇವುಗಳಲ್ಲಿ ಪ್ರತಿಯೊಂದಕ್ಕೆ ೧ನೇ ಬಹುಮಾನ ೫೦ ರೂ., ೨ನೇ ಬಹುಮಾನ ೩೦ ರೂ., ೩ನೇ ಬಹುಮಾನ ೨೦ ರೂ. ಹೀಗೆ ೩ ಬಹುಮಾನಗಳೂ, ಕವನಗಳಿಗೆ ೧ನೇ ಬಹುಮಾನ ೨೫ ರೂ., ೨ನೇ ಬಹುಮಾನ ೧೫ ರೂ., ಮತ್ತು ೩ನೇ ಬಹುಮಾನ ೧೦ ರೂ. ಹೀಗೆ ೩ ಬಹುಮಾನಗಳೂ ಕೊಡಲ್ಪಡುವವು. ಮುಂದಿನ ೬ ನಂಬರಗಳಿಗೆ ೮ ರೂ.ಗಳ ಬಹುಮಾನಗಳನ್ನು ಕೊಡಲಾಗುವದು.

(೧) ಬರಹಗಳನ್ನು ಕೆಳಗಿನ ವಿಳಾಸಕ್ಕೆ ತಾ. ೧೫—೧೦—೧೯೪೯ರೊಳಗೆ ತಲ್ಪುವಂತೆ ಕಳಿಸಬೇಕು.

(೨) ಬರಹಗಳು ಸ್ಪಷ್ಟವಾಗಿ ಕಾಗದದ ಒಂದೇ ಮಗ್ಗುಲಿಗೆ ಬರೆದವು ಇರಬೇಕು.

(೩) ಸ್ಪರ್ಧೆಗಾಗಿ ಕಳಿಸಿದ ಸಾಹಿತ್ಯವು ಮೊದಲು ಎಲ್ಲೂ ಪ್ರಸಿದ್ಧವಾದದ್ದಿರಬಾರದು; ಬೇರೆ ಯಾವುದೇ ಸ್ಪರ್ಧೆಗೆ ಕಳಿಸಲ್ಪಟ್ಟದ್ದು ಆಗಿರಬಾರದು; ಅನುವಾದವೂ ಆಗಿರಬಾರದು.

(೪) ನಾಟಕವು ಪ್ರಯೋಗಕ್ಕೆ ಯೋಗ್ಯವಾದುದಿರಬೇಕು. ಏಕಾಂಕ ನಾಟಕಗಳನ್ನೂ ಕಳಿಸಬಹುದು.

(೫) ಪಾರಿತೋಷಕ ಪಡೆದ ಸಾಹಿತ್ಯವನ್ನು ಪ್ರಕಟಿಸಲು ಯಾ ಅಭಿನಯಿಸಲು ನಮ್ಮ ಸಮಿತಿಗೆ ಅಧಿಕಾರವಿರುವದು.

(೬) ಸ್ಪರ್ಧೆಗಾಗಿ ಬಂದ ಬರಹಗಳನ್ನು ತಿರುಗಿ ಕೊಡಲಾರೆವು.

(೭) ಕಾನಡಾ ಜಿಲ್ಲೆಯವರಷ್ಟೇ ಈ ಸ್ಪರ್ಧೆಗಳಲ್ಲಿ ಸ್ಪರ್ಧಿಸಬಹುದು.

ಕಾರವಾರ, | ಎಚ್. ಎಮ್. ಮಾಂಜರೇಕರ,
೪-೮-೪೯ | ಜಿಲ್ಲಾ ಮದ್ಯನಿರೋಧನ ಅಧಿಕಾರಿ, ಕಾನಡಾ.

[illegible] ಒಂದು ಅರ್ಜಿ (ಪ್ರತಿ)ಯನ್ನು ಮುಂಬಯಿ ಸರಕಾರದ [illegible] ಕಳಿಸಿಕೊಡಬೇಕಾಗಿರುವುದೂ, ಹಾಗೆ ಕಳಿಸಿಕೊಟ್ಟ [illegible] ಯನ್ನು ತಮಗೆ ತಿಳಿಸಬೇಕಾಗಿರುವುದಾಗಿ [illegible] ರವು ಬಿನ್ನವಿಸುತ್ತಾರೆ.

ಶಿರಸಿ— [illegible]

(ತಾ [illegible]) ತಮ್ಮ [illegible] ಜನರಿಗೆ ಅತ್ಯವಶ್ಯವಸ್ತುಗಳಾದ ಕೋಟು, ಚಡ್ಡಿ, ಸಿಂಟುಗಳನ್ನು ಮಾಡಿಸಬೇಕಾದರೆ ೩೫ ವಾರ ಬಿನ್ನಿ ಅರಿವೆ ಬೇಕೆಂದೂ, ಅವರಿಗೆ ಮಾರುಬೇಕಾದರು ೩ ವಾರ ಕೋಟಿಗೆ ಮತ್ತು ೨ ವಾರ ಚಡ್ಡಿಗೆ ಇಷ್ಟೇ ಕೊಡಿಸಬೇಕೆಂದು ಅಪ್ಪಣೆ-ಚೀಟಿ ಕೊಟ್ಟಿದ್ದಾರೆ ಮತ್ತು ಪಂಚೆಗಳನ್ನು ಬಳಸಬೇಕಾಗಿರುವವರು ಹೇಳುತ್ತಾರೆ. ಈ ಒಂದೆ ಬಟ್ಟೆಯಿಂದ ಸಾಕು ಆದನ್ನು ತಾವು ಅಜ್ಞ-ತಪ್ಪು [illegible] ಯಾಕೆ ಹಂಚಿಕೊಳ್ಳಬೇಕು ಎಂದು ಅವರು ಪ್ರಶ್ನಿಸುತ್ತಾರೆ. ಬಿನ್ನಿ ಅರಿವೆಯು ಸಲುವಾಗಿ ತಮ್ಮ ಮನೆತನ ಒಡೆದು ಪಾಲು ಮಾಡಿಕೊಳ್ಳಬೇಕೋ ಎಂದೂ ಅವರು ಕೇಳುತ್ತಾರೆ.

[ಜನರಿಗೆ ಬೇಕಷ್ಟು ಬಿನ್ನಿ ಅರಿವೆ ಪೂರೈಸಲು ಸರಕಾರಕ್ಕೂ ಸಾಧ್ಯವಿಲ್ಲ, ಬಿನ್ನಿ ಕಂಪನಿಗೂ ಸಾಧ್ಯವಿಲ್ಲ ಇದ್ದ ಅರಿವೆಯನ್ನು ಹೇಗಾದರೂ ಜನರಿಗೆ ಹಂಚಿಕೊಡಬೇಕಾಗುತ್ತಿದೆ. ಆ ಬಗ್ಗೆ ವಿಚಾರಪೂರ್ವಕ ದೂರುವಂತಿಲ್ಲ, ದೂರಬಾರದು ದೂರುವಾರರು ಬಿನ್ನಿ ಅರಿವೆಯ ಬಗೆ ಮನೆಯಲ್ಲಿ ಪಾಲು ಮಾಡಿಕೊಳ್ಳುವದು ಬೇಡ. ೩ ವಾರ ಅರಿವೆಯನ್ನು ಒಬ್ಬರೇ ಉಪಯೋಗಿಸಿ ಮನೆಯ ಇತರರಲ್ಲಿ ಅಸೂಯೆ ಹುಟ್ಟಿಸುವದೂ ಬೇಡ. ಬಿನ್ನಿ ಅರಿವೆಯು ಗೋಜಿಗೆ ಅವರು ಹೋಗದಿರುವದು ಒಳಿತು. ಬಿನ್ನಿ ಬಟ್ಟೆ ಉಪಯೋಗಿಸದಿದ್ದರೆ ಅವರ ಶ್ರೀಮಂತಿಕೆಗೆ ಕುಂದು ಬರುವಂತಿಲ್ಲೆಂದು ನಾವು ಭರವಸೆ ಕೊಡಬಲ್ಲೆವು. ಬಿನ್ನಿ ಬಟ್ಟೆಯ ಬಗ್ಗೆ ದೂರುವ ಇನ್ನಿತರರಿಗೂ ಇದೇ ನಮ್ಮ ಉತ್ತರವಿದೆ. — ಸಂ.]

ಸಿದ್ದಾಪುರ— (ತಾ. ೨೨-೭-೪೮) ನಮ್ಮ ಜಿಲ್ಲೆಯಲ್ಲಿ ಉಗಿಬಂಡಿಯು ಮಾರ್ಗಗಳಲ್ಲದಿರುವದರಿಂದ ಸಾರಿಗೆ-ಸೌಕರ್ಯದ ಕೊರತೆಯಾಗಿದೆಂಬುದು ನಿಜ. ಮೋಟಾರ ಬಂಡಿಗಳ ಸಹಾಯದಿಂದ ಈ ಕೊರತೆಯನ್ನು ತುಂಬಿಕರಬಹುದಾಗಿದೆ. ಆದರೆ ವಾಹನ ನಿಯಂತ್ರಣಾಧಿಕಾರಿಗಳು ಆ ಮಾರ್ಗವನ್ನು ದುರ್ಗಮ ಮಾಡುತ್ತಿದ್ದಾರೆಂದು ನಮೂದಿಸಲು ವ್ಯಸನವಾಗುತ್ತಿದೆ. ಮೈಸೂರ ಸಂಸ್ಥಾನದೊಳಗಿನ ತಾಳಗುಪ್ಪಾ ರೇಲ್ವೆ ಸ್ಟೇಶನು ನಮ್ಮ ಸಿದ್ದಾಪುರ ತಾಲೂಕಿಗೆ ಹೊಂದಿಕೊಂಡಂತಿದೆ; ನಮ್ಮ ತಾಲೂಕಿನ ಗಡಿಯಿಂದ ಬರೇ ಅರ್ಧ ಮೈಲು ಅಂತರದಲ್ಲಿದೆ. ಸಿದ್ದಾಪುರದಿಂದ ತಾಳಗುಪ್ಪೆಯು ಏಳ ಮೋಟಾರ ರೋಡಿನ ಮಾರ್ಗವಿದೆ. ಅಂತರ ಬರೇ ೯ ಮೈಲುಗಳಷ್ಟಿಂಟು. ಅದರಿಂದ ರೇಲ್ವೆ ಮಾರ್ಗವಾಗಿ ಬರುವ ಸರಕುಗಳನ್ನು ದಕ್ಷಿಣ ಭಾರತದಿಂದ ಬರುವ ಸರಕುಗಳನ್ನು — ಸಿದ್ದಾಪುರ್ಕ್ಕಾಗಲಿ, ಶಿರಸಿಗಾಗಲಿ ಈ ತಾಳಗುಪ್ಪೆ ರೇಲ್ವೆ ಸ್ಟೇಶನಿಂದ ಮಾರ್ಗವಾಗಿ ತರಿಸಿಕೊಳ್ಳುವದು ಬಹಳ ಅನುಕೂಲವುಂಟು. ಆದರೆ [illegible] ಮಾರ್ಗದಲ್ಲಿ ಸರಕು ಒಯ್ಯುವ ಬಂಡಿಗಳನ್ನು ನಡಿಸಲಿಕ್ಕೆ ಜಿಲ್ಲೆಯ ರಾಂಗಲ ವಾಹನ ನಿಯಂತ್ರಣಾಧಿಕಾರಿಗಳವರಿಂದ ಅಪ್ಪಣೆಯನ್ನು ಕೊಟ್ಟಿದ್ದಿಲ್ಲ. ಇತ್ತೀಚಿಗೆ ಜಿಲ್ಲಾಧಿಕಾರಿಗಳು [illegible] ಭಾರದ ಬಂಡಿಗಳನ್ನು ನಡೆಸಬಹುದಾಗಿ ಅಪ್ಪಣೆ ಕೊಟ್ಟಿದ್ದಾರೆ. [illegible] ಟನ್ನಿನ ಈ ಬಂಡಿಗಳ ಖಾಸಗಿ ಬಂಡಿಗಳೆಗಷ್ಟೇ

ಅನ್ವಯಿಸುತ್ತದೆ. [illegible] ಗಳು ೩-೪ ಟನ್ನ ಭಾರವನ್ನು [illegible] ಕೇಳುವದಿಲ್ಲ. [illegible]

[illegible]

ಬಿಳಗಿಯ ಸಿಲ್ವಾ ಬಟ್ಟೆ [illegible] ಅಂಗಡಿಯು [illegible]

[illegible]

ಪತ್ರಿಕಾ—ಪ್ರಕಟನೆ.

ಶಿರಸಿಯ ಬಟ್ಟೆಯ ವ್ಯಾಪಾರಿಗಾರರಿಗೆ ಪರವಾನಗಿಗಳನ್ನು ಕೊಟ್ಟು, ಅವರಿಗೆ [illegible] ಸರಕಾರದವರ ರೇಷನ್ ಬಟ್ಟೆ-ವರ್ಗದ ಕಡೆ ಕಿಲ್ಲ ಉಳಿದಿರುವ ಬಟ್ಟೆಯನ್ನು ಕೇಂದ್ರೀಕರಿಸಲು [illegible] ಮಾಡಿ ಕೊಡಬೇಕೆಂದು ಮುಂಬಯಿ ಸರಕಾರದ [illegible] ಆದರೆ ಕರಾರ ಬಟ್ಟೆಯನ್ನು ಯಾವ ಪದ್ಧತಿಯಿಂದ ಪೂರೈಸುವರು ಎಂಬ ಬಗೆ ಶಿರಸಿಯ ವ್ಯಾಪಾರಿಗಾರರಲ್ಲಿ ಕೆಲವೊಂದು ತಪ್ಪು ತಿಳುವಳಿಕೆಯಾದದ್ದು ಕಂಡು ಬಂದಿದೆ. ಇದ್ದರಿಂದ ಕ [illegible] — ರೇಷನ್ ಕಾರ್ಡ ವ್ಯಾಪಾರದ ವಿಶೇಷ ಶಿರಸಿಯ ಹಂಚಿಕೆಗಾರರಿಗೆ ಜಿಲ್ಲಾ [illegible] ಊರ್ಗ್ರಾಗಗಳಲ್ಲಿ ದೊರೆಯುವಂತಹ ಯಾವತ್ತೂ ಬಗೆಯ ಕಿಲ್ಲ ಬಿದ್ದಿರುವ ಬಟ್ಟೆಯನ್ನು, ತಮಗೆ ಬೇಕಾದಷ್ಟು ಕೊಂಡುಕೊಳ್ಳಲು ಅಪ್ಪಣೆಯನ್ನೀಯಲಾಗುವದು. ಆದರೂ ಪರವಾನಗಿಗಳಿಗಾಗಿ ಅರ್ಜಿ ಮಾಡಬಯಸುವ ವಿಶೇಷ ಶಿರಸಿಯ ಹಂಚಿಕೆಗಾರರು ತಮ್ಮ ತಮ್ಮ ಪ್ರದೇಶದ ಪರವಾನಿ ಕೊಡುವ ಅಧಿಕಾರಿಗಳಿಗೆ (ಕೊಡಲೆ) ಅರ್ಜಿ ಮಾಡಿಕೊಳ್ಳಬಹುದು.

(ಜಿಲ್ಲಾಧಿಕಾರ ಕಚೇರಿಯಿಂದ ಬಂದದು)

THE BANK OF RURAL INDIA LTD.

(Incorporated in British India, Liability of Members limited)

HEAD OFFICE.— "Satyabhama Bhavan", KARWAR. N. K.

Offices at — KARWAR, KUMTA SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital	..	Rs 10,00,000;
Subscribed Capital	..	Rs 5,00,000;
Paid-up Capital & Reserves	..	Rs. 5,08,502-8-0

Rates of Interest on Deposits.

Current a/c @ 1% p. a. *Savings Bank a/c @ 2½%*

Fixed Deposits for 3 months @ 3% per annum.

" " for 6 months @ 3½%

" " for 12 months or more @ 4% "

All kinds of modern Banking business transacted

Karwar, 14-2-1948

P. X. GRACIOUS.
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಶಾಲಾಮಿಯಲ್ಲಿ ವರ್ಷಕ್ಕೆ ರೂ. ೩
ಅಂಚೆಯಿಂದ ವರ್ಷಕ್ಕೆ ೩-೧-೦
೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ವ್ಯವಸ್ಥಾಪಕರಿಂದ ಕೇಳಿದವರ
ಆಡ ಪಟ್ಟಿಗೆ ಬೇಕಾದ.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು

Reg. No. B. 1270. Monday, 22-8-1949.

ಕಾನಡಾವೃತ್ತ

ವರ್ಷ ೩೨.] THE KANARA NEWS. [ಸಂಚಿಕೆ ೮.

ಕುಮಟಾ: ಸೋಮವಾರ, ತಾ. ೨೨-೮-೧೯೪೯.

ಜಾಹೀರಾತುಗಳ ದರ:
೧ ಇಂಚ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ನಿರ್ಣಯಿಸಲಾಗುವದು.

ಅನ್ನ ಪೂರೈಕೆಯ ಸಮಸ್ಯೆ.

ಸ್ವಾತಂತ್ರ್ಯ-ಪ್ರಾಪ್ತಿಯ ನಂತರ ದೊಡ್ಡ ದೊಡ್ಡ ಸಮಸ್ಯೆಗಳು ಒಂದರ ಹಿಂದೊಂದು ಉಂಟಾಗಿ ಭಾರತದ ಲೋಕನಾಯಕರನ್ನು ದಣಿಸುತ್ತಿವೆ. ಅವುಗಳಲ್ಲಿ ಮುಖ್ಯ ಸಮಸ್ಯೆಯೆಂದರೆ ಅನ್ನ-ಧಾನ್ಯಗಳ ಪೂರೈಕೆಯು. ಪ್ರಜೆಗಳಿಗೆ ಬೇಕಾದಷ್ಟು ಅಶನ-ವಸನಗಳನ್ನು ಪೂರೈಸುವದು ರಾಜಧರ್ಮವಿರುತ್ತದೆ. ಅನ್ನ-ಧಾನ್ಯಗಳ ಉತ್ಪತ್ತಿ ಈಗ ಕಡಿಮೆಯಾಗಿರುವದರಿಂದ ಸಕಲ ಜನರಿಗೆ ಸರಿಯಾಗಿ ಅವನ್ನು ಹಂಚುವ ಬಗ್ಗೆ ಸರಕಾರವು ನಿಯಂತ್ರಣ-ನಿರ್ಬಂಧಗಳನ್ನು ವಿಧಿಸಿದೆ. ಈ ನಿಯಂತ್ರಣಗಳಿಂದ ದೇಶತುಂಬ ಕಳ್ಳಪೇಟೆ ಹಬ್ಬಿ ದೇಶದ ನೀತಿಮತ್ತೆ ಕುಗ್ಗಿದೆ. "ಹರಿಜನ" ಪತ್ರಿಕೆಯಲ್ಲಿ, ಈ ನಿಯಂತ್ರಣಗಳನ್ನು ರದ್ದುಪಡಿಸುವದು ಅವಶ್ಯವೆಂದು ಹಲವಾರು ವಿಚಾರವಂತರು ಬರೆಯತೊಡಗಿದ್ದಾರೆ. "ಹರಿಜನ" ಪತ್ರಕರ್ತರು ತಾ. ೭-೮-೪೯ರ ಸಂಚಿಕೆಯಲ್ಲಿ ತಮಗೆ ಬಂದ ಕೆಲವು ಪತ್ರ ತಾತ್ಪರ್ಯವನ್ನು ಪ್ರಕಟಿಸಿದ್ದಾರೆ. ವಿದ್ವಾಂಸರೂ ಸಾಮಾನ್ಯ ನಾಗರಿಕರೂ ಬರೆದ ಪತ್ರಗಳಲ್ಲಿ ಅನ್ನ-ಧಾನ್ಯಗಳ ಮೇಲಿನ ನಿಯಂತ್ರಣ ಕಟುವಾಗಿ ನಿಷೇಧಿಸಲ್ಪಟ್ಟಿದೆ. ನಿಯಂತ್ರಣದಿಂದ ಒದಗುವ ದುಃಸ್ಥಿತಿ ಸ್ವಯಂಸಿದ್ಧವಿದೆ, ಅವುಗಳಿಂದ ಹಿತವಾಗುವ ಲಕ್ಷಣ ಕಾಣುವದಿಲ್ಲ; ಹೀಗೆ "ಹರಿಜನ" ಪತ್ರಕರ್ತರು ಬರೆದಿದ್ದಾರೆ. ರಾಷ್ಟ್ರೀಯ ಸಭೆಯವರು ದೇಶದೊಳಗೆ ನೀತಿಮತ್ತೆ ಬೆಳೆಯುವ ನಿರ್ಧಾರ ಮಾಡಬೇಕಾಗಿ ರಾಷ್ಟ್ರೀಯ ಸಭೆಯ ಅಧ್ಯಕ್ಷ ಡಾ|| ಪಟ್ಟಾಭಿ ಸೀತಾರಾಮಯ್ಯನವರು ದಿಲ್ಲಿಯೊಳಗಿನ ಸ್ವಾತಂತ್ರ್ಯೋತ್ಸವದ ಸಭೆಯಲ್ಲಿ ಹೇಳಿದ ಸಾರವೇ ಅರುಹಿದ್ದಾರೆ. ಪ್ರಜೆಗಳಿಗೆ ಸರಿಯಾಗಿ ಅಶನ-ವಸನಗಳ ಪೂರೈಕೆಯಾಗದಿದ್ದರೆ ಪ್ರಜೆಗಳಲ್ಲಿ ಅಸಂತೋಷವುಂಟಾಗಿ ಅತ್ಯಾಚಾರಗಳಿಗೆ ಪ್ರೋತ್ಸಾಹ ದೊರೆಯುತ್ತದೆಂಬದೊಂದು ಸಾಮಾನ್ಯ ಸಿದ್ಧಾಂತವಿದೆ. ಕಲಕತ್ತೆಯ ಉಪಚುನಾವಣೆಯಲ್ಲಿ ರಾಷ್ಟ್ರೀಯ ಸಭೆಯ ಉಮೇದವಾರರು ಸೋಲಲಿಕ್ಕೆ ಅಲ್ಲಿಯ ಜನರಿಗೆ ಹೊಟ್ಟೆತುಂಬ ಆಹಾರ ಸಿಗದೆ ಕಷ್ಟವಾದದ್ದೇ ಮುಖ್ಯ ಕಾರಣವೆಂದು ಪಂ|| ಜವಾಹರಲಾಲರು ಮನಗಂಡು, ಅಲ್ಲಿಯ ಸೀಧಾ ಪರಿಮಾಣವನ್ನು ಹೆಚ್ಚಲಾಗಿ ವಿಧಿಸಿದ್ದಾರೆ. ಡಾ|| ಪಟ್ಟಾಭಿಯವರು ಹೇಳಿದ ಒಂದು ಮಾತು ನಿಜವಿದೆ. ಅನ್ನ-ಧಾನ್ಯಗಳೇನು ಸರಕಾರದ ಕಛೇರಿಗಳಲ್ಲಿ ಹುಟ್ಟುವದಿಲ್ಲ. ಅವನ್ನು ಜನರು ತಮ್ಮ ಶ್ರಮದಿಂದ ಹುಟ್ಟಿಸಬೇಕಾಗಿದೆ. ಅಂಕಿ-ಸಂಖ್ಯೆಗಳ ವಿಚಾರ ಮಾಡಿದರೆ ದೇಶದೊಳಗೆ ಅನ್ನ-ಧಾನ್ಯಗಳ ಬರಗಾಲ ಬೀಳುವ ಕಾರಣ ತೋರುವದಿಲ್ಲ. ಹಿಂದುಸ್ಥಾನದ ಲೋಕಸಂಖ್ಯೆ ೧೯೪೭-೪೮ನೇ ಸಾಲಿನಲ್ಲಿ ೩೪ ಕೋಟಿ ೨೦ ಲಕ್ಷವಿತ್ತು. ಪ್ರತಿ ೧೦೦ ಜನರಲ್ಲಿ ಸಾಮಾನ್ಯವಾಗಿ ೭೫ ಮಂದಿ ಪ್ರಾಯಸ್ಥರಿರುತ್ತಾರೆಂದಾಗಿ ಜನಗಣನೆಯ ಅಂಕಿಗಳ ಅಭ್ಯಾಸಕರು ಹೇಳುತ್ತಾರೆ. ಡಾ|| ರಾಜೇಂದ್ರಪ್ರಸಾದರು ಆಜೆಯ ವರ್ಷ ಆಹಾರ ಇಲಾಖೆಯ ಮಂತ್ರಿಗಳಾಗಿದ್ದರು. ಅವರು ಸಹ ಸರಾಸರಿ ಅನ್ನಧಾನ್ಯದ ಹಂಚಿಕೆಯ ಅಂಕಿಗಳನ್ನು ಪರಿಶೀಲಿಸಿ, ಹಿಂದುಸ್ಥಾನದೊಳಗೆ ೧೦೦ರಲ್ಲಿ ಸರಾಸರಿ ೭೫ ಜನ ಪ್ರಾಯಸ್ಥ (ಪೂರ್ಣ ಸೀಧಾ ಪಡೆಯಲು ಹಕ್ಕುಳ್ಳ ಜನ) ರಿರುತ್ತಾರೆಂದು ಲೆಕ್ಕ ಹಾಕಿದ್ದಾರೆ. ಸಾರ್ವತ್ರಿಕ ಜನಗಣನೆಯಲ್ಲಿ ಚಿಕ್ಕ ಮಕ್ಕಳೂ ಪ್ರಾಯಸ್ಥರೂ ವೃದ್ಧರೂ ಕೂಡಿರುತ್ತಾರೆ. ಆದರೆ ಚಿಕ್ಕ ಮಕ್ಕಳಿಗೂ ಪ್ರಾಯಸ್ಥ-ವೃದ್ಧರಿಗೂ ಅಷ್ಟೇ ಅನ್ನ-ಧಾನ್ಯಗಳು ಬೇಕಾಗುವದಿಲ್ಲ. ಅದರಿಂದ ಅಂಕಿ-ಶಾಸ್ತ್ರಜ್ಞರು ಇಡೀ ಜನಸಂಖ್ಯೆಯನ್ನು ಪ್ರಾಯಸ್ಥರ ಸಂಖ್ಯೆಯಲ್ಲಿ ರೂಪಾಂತರಿಸಿ, ಹಿಂದುಸ್ಥಾನದೊಳಗೆ ಹುಟ್ಟುವ ಆಹಾರ ಧಾನ್ಯ ಸಾಕಾಗುವದೇನೆಂಬುದರ ವಿಚಾರ ಮಾಡಿದ್ದಾರೆ. ೧೯೪೭-೪೮ರಲ್ಲಿ ಅಂತು ೪ ಕೋಟಿ ೭೫ ಲಕ್ಷ ೪೯ ಸಾವಿರ ಟನ್ ಧಾನ್ಯ ಹಿಂದುಸ್ಥಾನದೊಳಗೆ ಹುಟ್ಟಿತ್ತು. ೨೯ ಲಕ್ಷ ೭೦ ಸಾವಿರ ಟನ್ ಧಾನ್ಯ ಇದರೊಳಗಿಂದ ಬೀಜಕ್ಕಾಗಿ ತೆಗೆದಿಟ್ಟರೆ, ೪ ಕೋಟಿ ೧೭ ಲಕ್ಷ ೫೯ ಸಾವಿರ ಟನ್ ಧಾನ್ಯ ಜನರಿಗೆ ಉಣ್ಣಲಿಕ್ಕೆ ಸಿಗಬೇಕು. ಸರಕಾರವು ಈ ಧಾನ್ಯವನ್ನು ಬೇಕಾದಲ್ಲಿಗೆ ಒಯ್ದು ಸರಿಯಾಗಿ ಹಂಚಿದರೆ, ಅನ್ನ-ಧಾನ್ಯದ ಕೊರತೆಯಾಗಲು ಕಾರಣವಿಲ್ಲೆಂದು ಘಟನಾ ಸಮಿತಿಯ ಸದಸ್ಯರಾಗಿರುವ ಶ್ರೀ|| ಸಿಧ್ವಾರವರು ಪ್ರತಿಪಾದಿಸುತ್ತಾರೆ. ಹಿಂದುಸ್ಥಾನ ಸರಕಾರದ ಲೆಕ್ಕದಂತೆ ನಮ್ಮ ದೇಶದಲ್ಲಿ ಈಗ ಸುಮಾರು ೩೦ ಲಕ್ಷ ಟನ್ ಧಾನ್ಯ ಕಡಿಮೆ ಬೀಳುತ್ತದೆ. "ಹೆಚ್ಚೆಚ್ಚು ಧಾನ್ಯ ಬೆಳೆಸಿರಿ" ಎಂಬ ಸದ್ಯದ ಆಂದೋಲನ ಪ್ರಾರಂಭವಾಗುವ ಮುಂಚೆ ಎಕರೆ ೧ಕ್ಕೆ ಸರಾಸರಿ ೬೧೧ ರತ್ತಲುಗಳಂತೆ ಧಾನ್ಯ ಬೆಳೆಯುತ್ತಿತ್ತು. ಸದರಿ ಆಂದೋಲನಕ್ಕಾರಂಭವಾದ ನಂತರ ಸಾಗುವಳಿ ಕ್ಷೇತ್ರ ೧೫ ಕೋಟಿ ೯೦ ಲಕ್ಷ ಎಕರೆಗಳಿಂದ ೧೭ ಕೋಟಿ ೮೦ ಲಕ್ಷ ಎಕರೆಗೆ ಏರಿತು. ಆದರೆ ಉತ್ಪತ್ತಿಯು ಮಾತ್ರ ಎಕರೆ ೧ಕ್ಕೆ ೫೨೪ ರತ್ತಲುಗಳಿಗೆ ಇಳಿಯಿತು! ಸಾಗುವಳಿಯ ಕ್ಷೇತ್ರ ೧೦೦ಕ್ಕೆ ೧೨ರಷ್ಟು ಏರಿದರೂ ಉತ್ಪತ್ತಿಯು ನೂರಕ್ಕೆ ೧೪ರಷ್ಟು ಕಡಿಮೆಯಾಗಿದೆ! ಒಕ್ಕಲಿಗರು ತಮ್ಮ ಉತ್ಪತ್ತಿಯನ್ನು ಸರಿಯಾಗಿ ತೋರಿಸುವದಿಲ್ಲೆಂದೂ ಕಾಲಾಂತರ ಉತ್ಪತ್ತಿಯನ್ನು ಅಡಗಿಸುತ್ತಾರೆಂದೂ ೧೯೩೭ರಲ್ಲಿ ಸರ್ ಜ್ಹಾನ ರಸೆಲ್ಲರು ಚೌಕಶಿ ಮಾಡಿ ಸಿದ್ಧಾಂತ ಮಾಡಿದ್ದುಂಟು. ಈಗ ಅನ್ನ-ಧಾನ್ಯಗಳ ಬರಗಾಲ ಬಿದ್ದಿರುವದರಿಂದ ಒಕ್ಕಲಿಗರು ಬೆಳೆ ಅಡಗಿಸುವ ಪ್ರಮಾಣ ಇನ್ನೂ ಹೆಚ್ಚಿರುವದಾಗಿ ಶ್ರೀ|| ಸಿಧ್ವಾರವರ ಅಂಬೋಣವುಂಟು. ದೇಶದೊಳಗೆ ಹುಟ್ಟುವ ಹುಟ್ಟುವಳಿ ದೇಶದ ಜನರಿಗೆ ಅಶನಕ್ಕೆ ಸಾಲಬೇಕೆಂದೂ ಅವರ ಸಿದ್ಧಾಂತವುಂಟು.

ಶ್ರೀ|| ಸಿಧ್ವಾರವರ ಸಿದ್ಧಾಂತವೇನೇ ಇರಲಿ. ಅನ್ನ-ಧಾನ್ಯಗಳು ಮುಂಚಿನಷ್ಟು ಸುಲಭವಾಗಿ ಸಿಗುವದಿಲ್ಲೆಂಬ ಮಾತು ಸ್ವಯಂಸಿದ್ಧವಿದೆ. ಸರಾಸರಿಯ ಗಣಿತದಿಂದ ಲೆಕ್ಕ ಹಾಕಿ ಅನ್ನ-ಧಾನ್ಯಗಳ ಪೂರೈಕೆಯ ಕಡೆ ಅಲಕ್ಷ ಮಾಡಲು ಸಾಧ್ಯವಿಲ್ಲ. ಅನ್ನ-ಧಾನ್ಯಗಳ ಪೂರೈಕೆ ವಿಪುಲವಾಗುವಂತೆ ಏರ್ಪಾಟು ಮಾಡಲು ಸರಕಾರವು ಬದ್ಧವಿದೆ. ಹಿಂದುಸ್ಥಾನ ಸರಕಾರವು ಈ ಬಗ್ಗೆ ಆಹಾರ ಕಮಿಶನರ ಎಂಬ ಹೊಸ ಹುದ್ದೆದಾರರನ್ನು ನೇಮಿಸಿ, ಅವರಿಗೆ ಎಲ್ಲ ಪ್ರಾಂತಗಳಲ್ಲಿ ಒಂದೇ ರೀತಿ ಆಹಾರದ ಪೂರೈಕೆಯಾಗುವಂತೆ ಏರ್ಪಾಟು ಮಾಡಲು ಅಪ್ಪಣೆ ಕೊಟ್ಟಿದೆ. ಇಡೀ ಹಿಂದುಸ್ಥಾನದೊಳಗೆ ೫ ಕೋಟಿ ೯೦ ಲಕ್ಷ ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯುತ್ತದೆ. ೩|| ಕೋಟಿ ಎಕರೆ ಪ್ರದೇಶದಲ್ಲಿ ಗೋದಿ ಬೆಳೆಯುತ್ತದೆ. ಚಟೋ ಗೊಬ್ಬರ ಹಾಕಿ, ಸಾಗುವಳಿಯನ್ನು

FOR BANKING SERVICE
IN TRADE, INDUSTRY AND AGRICULTURE
APPROACH

The Agricultural & Industrial Bank, Ltd.,

(Established in 1934)

Head Office. **COONDAPOOR**, S Kanara.

Branches,

1 Ankola	7 Gokarn.	13 Nagar.
2. Belgaum.	8. Haveri.	14 Shimoga.
3. Bhatkal	9. Hubli.	15. Sirsi
4 Coondapoor.	10. Karwar	16. Somwarpet
5 Dharwar.	11. Kumta	17. Virajpet.
6 Gadag	12. Mangalore.	18 Honavar.

19 BOMBAY. (384 M, Jaipuria House, Kalbadevi Road).

CURRENT, SAVINGS BANK AND FIXED DEPOSITS ARE ACCEPTED.

For terms, apply to the nearest Branch.

Coondapoor, 1st June 1949 } **K. Vaman Shenai,** CHAIRMAN.

ಸುಧಾರಿಸಿ, ಆಸಕ್ತಿಯಿಂದ ಕೃಷಿ-ಕರ್ಮ ಮಾಡಿದರೆ ಈಗ ಕಂಡು ಬರುವ ಅನ್ನ ಧಾನ್ಯಗಳ ಕೊರತೆ ಸಹಜವಾಗಿ ತುಂಬಿ ಬರುವಂತುಂಟು ೧೯೫೧ನೇ ಇಸವಿಯೊಳಗೆ ಹುಟ್ಟುವಳಿಯನ್ನು ೪೫ ಲಕ್ಷ ಟನ್ನುಗಳಿಂದ ಬೆಳಸಿದರೆ ನಮ್ಮ ದೇಶಕ್ಕೆ ವಿದೇಶಗಳಿಂದ ಅನ್ನ-ಧಾನ್ಯಗಳನ್ನು ತರಿಸುವ ಅವಶ್ಯಕತೆ ಇರಲಾರದು ೮ ಕೋಟಿ ಎಕರೆ ಪ್ರದೇಶದಲ್ಲಿ ಸ್ವಲ್ಪ ಹೆಚ್ಚಿಗೆ ಪ್ರಯತ್ನ ಮಾಡಿದರೆ, ಎಕರೆ ೧ಕ್ಕೆ ಒಂದೊಂದು ಮಣ ಧಾನ್ಯವನ್ನು ಹೆಚ್ಚಿಗೆ ಬೆಳೆಸಿದರೆ ಕಾರ್ಯಭಾಗವಾಗುವಂತಿದೆ ಇದಲ್ಲದೆ ೮ ಲಕ್ಷ ಎಕರೆ ಬಂಜರ ಬಿದ್ದಿರುವ ಭೂಮಿಯುಂಟು ಅದನ್ನು ಸಾಗುವಳಿ ಮಾಡಿಸಿದರೆ ೩ ಲಕ್ಷ ಟನ್ ಧಾನ್ಯ ಸಹಜವಾಗಿ ಬೆಳೆಯುವಂತಿದೆ. ಜಲಾಶಯಗಳಲ್ಲಿ ಅವುಗಳನ್ನು ಸರಿಗೊಳಿಸಿ ಹೊಲಗಳಿಗೆ ನೀರಿನ ಪೂರೈಕೆ ಮಾಡಿಕೊಳ್ಳುವದಕ್ಕೆ, ಹಿಂಗಾರಿ ಬೆಳೆ ಮಾಡಲಿಕ್ಕೆ ಅನುಕೂಲವುಂಟು ಬೆಳೆಯ ರಕ್ಷಣೆ ಮಾಡಲಿಕ್ಕೆ ಹುಟ್ಟಿದ ಬೆಳೆ ಕಾಡು ಪಶುಗಳ ಪಾಲಾಗದಂತೆ ಕಾಪಾಡಿಕೊಳ್ಳಲಿಕ್ಕೆ ಸರಕಾರವು ಸಕಲ ಸಹಾಯ ನೀಡುವದಾಗಿ ಆಹಾರ ಕಮಿಶನರರು ದಿಲ್ಲಿಯೊಳಗಿನ ಪತ್ರ-ಪ್ರತಿನಿಧಿಗಳ ಸಭೆಯಲ್ಲಿ ಘೋಷಿಸಿದ್ದಾರೆ ಆಸಕ್ತಿಯಿಂದ ಕೃಷಿಕರ್ಮ ಮಾಡುವ ಕೃಷಿಕರಿಗೆ ಬೀಜ, ಗೊಬ್ಬರ, ಕೋವಿ ಮೊದಲಾದ ಸಕಲ ಸಾಹಿತ್ಯಗಳು ಕೊಡುಗೈಯಿಂದ ಪೂರೈಸಲ್ಪಡುವವಾಗಿಯೂ, ಕೃಷಿಕರ್ಮವೇ ಹಿಂದುಸ್ಥಾನದ ಸಾಂಪತ್ತಿಕ ಅಭ್ಯುದಯದ ಮೂಲಾಧಾರವೆಂದೂ, ಅದಕ್ಕಾಗಿ ಸಕಲರೂ ತತ್ಪರತೆಯಿಂದ ಪ್ರಯತ್ನ ಮಾಡಬೇಕೆಂದೂ ಆಹಾರ ಕಮಿಶನರರು ಒತ್ತೊತ್ತಿ ಹೇಳಿದರೆ, ಸರ್ವಾಧಿಪತಿಗಳಾದ ಶ್ರೀಮಾನ್ ಚಕ್ರವರ್ತಿ ರಾಜಗೋಪಾಲಾಚಾರ್ಯರು ಸ್ವತಃ ರಂಟೆ ಹೊಡೆದು ಈಗಿನ ಕಾಲಮಾನದಲ್ಲಿ ಕೃಷಿ-ಕರ್ಮ ಮಾಡುವದು ಗೌರವದ ಕಾರ್ಯವೆಂದು ಸಮಸ್ತ ಪ್ರಜೆಗಳಿಗೆ ಸ್ವೋದಾಹರಣೆಯಿಂದ ಬೋಧಿಸಿದ್ದಾರೆ ಮುಖ್ಯ ಮಂತ್ರಿಗಳಾದ ಪಂ॥ ಜವಾಹರಲಾಲ ನೆಹರುರವರೂ ಟ್ರೆಕ್ಟರದ ಸಹಾಯದಿಂದ ತಮ್ಮ ಬಂಗಲೆಯ ಆವಾರವನ್ನು ಹೂಡಿ ತಾವು ಸಹ ಕೃಷಿಕರ್ಮಕ್ಕೆ ಅದೇ ಗೌರವ ಸ್ಥಾನ ಕೊಡುತ್ತೇವಾಗಿ ಸಿದ್ಧಗೊಳಿಸಿದ್ದಾರೆ. ಕೃಷಿಕರ್ಮಕ್ಕೆ ಈಗ ಬಹಳ ಪ್ರಾಧಾನ್ಯವುಂಟು "ಹರಿಜನ" ಪತ್ರಕರ್ತರೂ ಕೂಡ ಆಹಾರ-ಧಾನ್ಯಗಳ ಉತ್ಪತ್ತಿ ಬೆಳಸಲು ಕೆಲವು ಸೂಚನೆಗಳನ್ನು ಮಾಡಿದ್ದಾರೆ ಭೂಕಂದಾಯವನ್ನು ಧಾನ್ಯ ರೂಪದಿಂದ ಎತ್ತುವಳಿ ಮಾಡಬೇಕು, ಸಣ್ಣ-ಸಣ್ಣ ಸಾಗುವಳಿದಾರರಿಗೆ ಸಕಲ ಅನುಕೂಲತೆಗಳನ್ನು ಪೂರೈಸಬೇಕು, ಸರಕಾರವು ಸೈನಿಕರ ಕಡೆಯಿಂದ ಕೃಷಿಕರ್ಮ ಮಾಡಿಸಿಕೊಳ್ಳಬೇಕು; ಗ್ರಾಮ ಸಂಸ್ಥೆಗಳಿಗೆ, ಗ್ರಾಮ-ಪಂಚಾಯತುಗಳಿಗೂ ರಾಜಾಶ್ರಯ ಕೊಡಬೇಕು, ಕೃಷಿಕರ್ಮಕ್ಕೆ ಸಂಬಂಧಿಸಿದ ಜನರ ಅರ್ಜಿಗಳನ್ನು ತತ್ಪರತೆಯಿಂದ ನಿರ್ಣಯಿಸಬೇಕು. ಸದ್ಯದ ಅಧಿಕಾರಿಗಳ ಜಾಡಿನಲ್ಲಿ ಇಂಥ ಅರ್ಜಿಗಳನ್ನು ನಿರ್ಣಯಿಸಲು ವಿಪರೀತ ಕಾಲಹರಣವಾಗುತ್ತಿದೆ ಇಂಥ ಪದ್ಧತಿ ಕೃಷಿಯ ಕೆಲಸಕ್ಕೆ ಪೋಷಕವಲ್ಲ, ಕೃಷಿಕರೊಡನೆ ಅಧಿಕಾರಿಗಳು ಪ್ರಾಮಾಣಿಕತೆಯಿಂದ ವರ್ತಿಸಬೇಕು, ಅವರೊಡನೆ ಅಧಿಕಾರಿಗಳು ನಡಿಸುವ ವ್ಯವಹಾರಗಳು ಚೊಕ್ಕವಾಗಿರಬೇಕು, ಬೀಜ, ಗೊಬ್ಬರ, ಸಿಮೆಂಟು, ಕಬ್ಬಿಣ ಮೊದಲಾದ ಕೃಷಿ-ಸಾಹಿತ್ಯಗಳನ್ನು ಪ್ರಾಮಾಣಿಕತೆಯಿಂದ ಪೂರೈಸಬೇಕು ಜನರ ಪ್ರಾಮಾಣಿಕತೆಯನ್ನು ಅಪೇಕ್ಷಿಸುವ ಸರಕಾರಿ ಅಧಿಕಾರಿಗಳು ಸ್ವತಃ ಪ್ರಾಮಾಣಿಕರಾಗಿ ವರ್ತಿಸಬೇಕು, ಕೃಷಿಕರಿಗೆ ಅಧಿಕಾರಿಗಳು ಅಗಿಂದಾಗ ನೆರವಾಗಬೇಕು ಕೃಷಿಕರಿಗೆ ಶಾಸನ ಮಾಡುವ ಪದ್ಧತಿಗಿಂತ ಇನಾಮು ಕೊಡುವ ಪದ್ಧತಿ ಶ್ರೇಯಸ್ಕರವಾದದ್ದು, ಇನಾಮುಗಳನ್ನು ಹಂಚಿ ಸರಕಾರವು ಆಹಾರೋತ್ಪತ್ತಿಯ ಪ್ರಮಾಣವನ್ನು ಬೆಳಸಿಕೊಳ್ಳಬೇಕು ಇತ್ಯಾದಿ ಮೊದಲಾದ ಸೂಚನೆಗಳನ್ನು 'ಹರಿಜನ' ಪತ್ರಕರ್ತರು ಮಾಡಿದ್ದಾರೆ

ಆಹಾರ ಕಮಿಶನರರು ಕೊಟ್ಟ ಮುಂಜಾಗ್ರತೆಯನ್ನು ಸಕಲರೂ ಲಕ್ಷಿಸಬೇಕು ಆಹಾರ ಧಾನ್ಯಗಳನ್ನು ಜತನದಿಂದ ಕಾಪಿಡಬೇಕು, ಅವುಗಳ ಅಪವ್ಯಯ ಮಾಡಗೊಡಕೂಡದು "ಹರಿಜನ"ದಲ್ಲಿ ಪತ್ರಕರ್ತರಾದ ಶ್ರೀ॥ ಕಿಶೋರಿಲಾಲ ಮಶ್ರುವಾಲಾರವರು ಆಹಾರ-ಸಂರಕ್ಷಣೆಯ ಸಂಬಂಧದಲ್ಲಿ ಮಾಡಿದ ಸೂಚನೆಗಳು ಮನನೀಯವಿವೆ ಹಿಂದುಸ್ಥಾನದೊಳಗೆ ಬೆಳೆದ ಹುಟ್ಟುವಳಿಯನ್ನು ಜನರಿಗೆ ಸರಿಯಾಗಿ ಹಂಚಿದರೆ ಪ್ರತಿ ವ್ಯಕ್ತಿಗೆ ಪ್ರತಿ ದಿನ ೧೦ ಔಂಸ ಅಂದರೆ ೧ ಪೌಂಡ ಆಹಾರ-ಧಾನ್ಯ ಸಿಗಲಿಕ್ಕೆ ಏನೂ ತೊಂದರೆಯಿಲ್ಲ ಒಂದೊಂದು ವ್ಯಕ್ತಿಯ ಪೂರ್ಣ ಅಶನಕ್ಕೆ ೧೦ ಔಂಸ ಅಂದರೆ ೫೦ ತೊಲೆ ಅನ್ನ ಧಾನ್ಯ ಬೇಕು ಆದರಿಂದ ನೂರಕ್ಕೆ ೧೦ರಷ್ಟೇ ಕೊರತೆಯಾಗುತ್ತಿದೆ ಆದರೆ ಹುಟ್ಟಿದ ಧಾನ್ಯವನ್ನು ಜತನದಿಂದ ಕಾಪಾಡಿಕೊಳ್ಳುವದಿಲ್ಲ, ಮಿತಿಯಿಂದ ಅವನ್ನು ಉಪಯೋಗಿಸುವದಿಲ್ಲ ಕೆಲವು ಪ್ರಸಂಗಗಳಲ್ಲಿ ಅವನ್ನು ತೂರಿಯುವ ಪರಿಪಾಠವೂ ಇಲ್ಲ, ಹೀಗೆಲ್ಲ ಹುಟ್ಟುವಳಿಯಾದ ಬೆಳೆಯನ್ನು ಜನರಿಗೆ ತಲ್ಪಿಸುವ ಕ್ರಮದಲ್ಲಿ ದೋಷಗಳುಂಟು ಅಡಿಗೆ ಭಟ್ಟರು ಅಡಿಗೆಯ ಮನೆಯಲ್ಲಿ ಬಹಳ ಅಜಾಗ್ರತೆಯಿಂದ ವರ್ತಿಸಿ ದುಂದುಗಾರಿಕೆ ನಡಿಸುತ್ತಾರೆ ಅನ್ನ ಧಾನ್ಯಗಳನ್ನು ಅವರು ಸರಿಯಾಗಿ ಜೋಪಾನ ಮಾಡುವದಿಲ್ಲ. ಅಡಿಗೆ ಮಾಡುವಾಗಲೂ ಎಷ್ಟೋ ಹಿಟ್ಟು ಧಾನ್ಯಗಳನ್ನು ಚೆಲ್ಲಿ ಬಿಡುತ್ತಾರೆ! ಬಡಿಸುವವರಲ್ಲೂ ಊಟ ಮಾಡುವವರಲ್ಲೂ ಜಾಗ್ರತೆ ಕೊಳ್ಳುವದಿಲ್ಲವಾದ್ದರಿಂದ ಹೊಟ್ಟೆಯೊಳಗೆ ಹೋಗುವಷ್ಟೇ ಅನ್ನಸಾಮುಗ್ರಿ ಹೊರಗೆ ಒಗೆಯಲ್ಪಡುತ್ತಿದೆ! ೧೯೪೩ನೇ ಇಸವಿಯಲ್ಲಿ ನಾಗಪುರದ ಜನರು ಅನ್ನಕ್ಕಾಗಿ ಪೇಚಾಡುತ್ತಿದ್ದಾಗ ಸಮೀಪದಲ್ಲಿದ್ದ ಸಂಟ್ರಲ್ ಜೈಲಿನಲ್ಲಿ ಚಪಾತಿ, ರೊಟ್ಟಿ ಮತ್ತಿತರ ಪದಾರ್ಥಗಳು ರಾಶಿರಾಶಿಯಾಗಿ ಹೊರಗೆ ಒಗೆಯಲ್ಪಡುತ್ತಿದ್ದವಂತೆ! ಅನ್ನ-ಧಾನ್ಯಗಳನ್ನು ೨-೩ ವರ್ಷಗಳ ವರೆಗೆ ಕಾಪಾಡಬಹುದಾಗಿದೆ ೮೦ ವರ್ಷಗಳ ೬ ದಿನ ಜನರು ಇವನ್ನು ಕಾಪಾಡುವ ಕ್ರಮದಲ್ಲಿ ಪರಿಣತರಾಗಿದ್ದರು. ಈಗಲೂ ಹಳೆಯ ಪದ್ಧತಿಯ ಹೆಂಗಸರು ಈ ಕ್ರಮವನ್ನು ಕೈಕೊಳ್ಳುತ್ತಾರೆ ಇಲಿ-ಕ್ರಿಮಿಗಳ ಕಾಟದಿಂದ ಕಾಳನ್ನು ಕಾಪಾಡಿಕೊಳ್ಳುವ ಕ್ರಮ ಹಿಂದಿನ ಕಾಲದ ರೈತರಿಗೆ ಚೆನ್ನಾಗಿ ಗೊತ್ತಿತ್ತು ಆ ಕಾಲದಲ್ಲಿ ಈಗಿನ ಕ್ರಿಮಿನಾಶಕಗಳೂ ಸಿಮೆಂಟಿನ ಉಗ್ರಾಣಗಳೂ ಇದ್ದಿಲ್ಲ! ಈಗ ಲೋಕ ವ್ಯವಹಾರ ಮಾಡುವವರಿಗೆ ಸಹ ಈ ಕ್ರಮಗಳ ಜ್ಞಾನವಿಲ್ಲ! ಹೇರಳ ಖರ್ಚು ಮಾಡಿ ಕಟ್ಟಿಸಿದ ಸರಕಾರಿ ಉಗ್ರಾಣಗಳಲ್ಲೂ ಊರಬಂಡಿಯ ಉಗ್ರಾಣಗಳಲ್ಲೂ ಹೇರಳ ಕಾಳು ನಾಶವಾಗುತ್ತಿದೆ! ಆಧುನಿಕ ವಿದ್ಯಾಸಂಪನ್ನ ಹೆಂಗಸು ಸೋಮಾರಿಯಾಗಿದ್ದಾಳೆ, ಆಹಾರ ಸಾಮುಗ್ರಿಗಳ ಜತನ ಮಾಡುವದು ಗೃಹರಕ್ಷಣೆಯ ಮುಖ್ಯ ಅಂಗವೆಂದು ಆಕೆ ಎಣಿಸುವದಿಲ್ಲ! ನಮ್ಮ ಹಿರಿಯರ ಕಾಲದಲ್ಲಿ ಅನ್ನವು ಪರಮ ಪವಿತ್ರ ವಸ್ತುವಾಗಿತ್ತು ಅನ್ನವು ದೇವರೆಂಬ ಭಾವನೆಯಿತ್ತು. ಅದನ್ನು ಕಾಲಿನಿಂದ ತುಳಿಯುತ್ತಿರಲಿಲ್ಲ ಅನ್ನ ಹಿಡಿದು ಹೇಳಿದ ಮಾತು ಪ್ರಮಾಣದ ಮಾತೆಂದು ಎಣಿಸಲ್ಪಡುತ್ತಿತ್ತು! ಎಲೆಯ ಮೇಲೆ ಅನ್ನ ಬಿಟ್ಟರೆ ಹಿರಿಯರು ಸಿಟ್ಟಾಗುತ್ತಿದ್ದರು ಅನ್ನ ಬಿಡುವದು ಅದೊಂದು ಕೆಟ್ಟ ಲಕ್ಷಣವಾಗಿದ್ದಿತು ಈಗ ಜನರ ಮನೋವೃತ್ತಿ ಬದಲಿದೆ! ಎಲೆಯ ಮೇಲೆ ಬಡಿಸಿದ್ದನ್ನು ಬಿಟ್ಟು ಏಳುವದು ಅದೊಂದು ಶಿಷ್ಟಾಚಾರವಾಗತೊಡಗಿದೆ! ಇಂಥ ಜನಾಂಗಕ್ಕೆ ಅನ್ನ-ಧಾನ್ಯಗಳ ಕೊರತೆಯಾದ ಬಗ್ಗೆ ದೂರುವ ಅಧಿಕಾರವಿಲ್ಲ, ಸಕಾಲದಲ್ಲಿ ಮಳೆಯಾಗದ ಬಗ್ಗೆ ದೇವರನ್ನು ಆಕ್ಷೇಪಿಸುವ ಅಧಿಕಾರವೂ ಇಲ್ಲ ಈ ಪ್ರಕಾರ ಆಹಾರವನ್ನು ರಕ್ಷಿಸಿಕೊಂಡು ಮಿತವ್ಯಯ ಮಾಡಿದರೆ ಅನ್ನ-ಧಾನ್ಯಗಳ ಕೊರತೆಯು ಕಷ್ಟ ವಿಶೇಷ ಕಾಡಲಿಕ್ಕಿಲ್ಲೆಂದು ಶ್ರೀ॥ ಮಶ್ರುವಾಲಾರವರು ಬೋಧಿಸಿದ್ದಾರೆ ಹುಟ್ಟುವಳಿಯನ್ನು ಹೆಚ್ಚಿಸುವ ಕ್ರಮಕ್ಕಿಂತ ಹುಟ್ಟಿಸಿದ ಹುಟ್ಟುವಳಿಯ ಜೋಪಾನ ಮಾಡಿಕೊಂಡು, ಮಿತವ್ಯಯದಿಂದ ಉಪಯೋಗಿಸುವದೂ ಅನ್ನ-ಧಾನ್ಯಗಳ ಬರಗಾಲದ ನಿವಾರಣೆಯ ಒಂದು ಉಪಾಯವದು ಅವರ ಅಂಬೋಣವುಂಟು ಗೃಹಕೃತ್ಯದ ದೃಷ್ಟಿಯಿಂದ ಅವರ ಟೀಕೆ ಹೆಂಗಸರಿಗಿಂತ ಪ್ರಾಚೀನ ಹೆಂಗಸರೇ ಶ್ರೇಷ್ಠರೆಂದೂ ಶ್ರೀ॥ ಮಶ್ರುವಾಲಾರವರು ಹೇಳಿದ್ದನ್ನು ಲಕ್ಷದಲ್ಲಿಡಬೇಕು

ಆಹಾರಧಾನ್ಯಗಳಲ್ಲಿ ಅಕ್ಕಿ ಮತ್ತು ಗೋಧಿ ಇವು ಮುಖ್ಯ. ಗೋಧಿಗಿಂತ ಅಕ್ಕಿಯ ಬರಗಾಲ ಹೆಚ್ಚಾಗಿದೆ ಅಕ್ಕಿ ತಿನ್ನುವ ಪ್ರದೇಶಗಳಲ್ಲಿ ನಿಯಂತ್ರ

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.
ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲಾಜಿಂಗ
ದಿ ಕೆನರಾ ಲಾಜ
[ಊಟ ಮತ್ತು ವಸತಿಗೃಹ]
ಮೋಟರ-ಸ್ಟ್ಯಾಂಡ, ಹುಬ್ಬಳ್ಳಿ.
ಮಾಲಕ:— ಮ್ಯಾಕನ್ನಾ ಸ್ವ.

ಪ್ರಕಟಣೆ ೬.

ಬಿನ್ನಹ.

ಕುಮಟಾ,
೨೫—೧೨—೧೯೫೫

ಬರುವ ಜನೇವರಿ ತಾ. ೧೬ಕ್ಕೆ ಮುಂಬಯಿ ಗ್ರಾಮೋದ್ಯೋಗ ಮಂಡಲದವರು ಕುಮಟೆಯಲ್ಲಿ ಏರ್ಪಡಿಸಿದ ಗ್ರಾಮೋದ್ಯೋಗ ಮತ್ತು ಒಕ್ಕಲತನ ಪ್ರದರ್ಶನದ ಆಶ್ರಯದಲ್ಲಿ ವಿದ್ಯಾರ್ಥಿ ಸಮ್ಮೇಲನವನ್ನು ಕರೆಯಲು ನಿರ್ಧರಿಸಲಾಗಿದೆ. ಜಿಲ್ಲೆಯ ವಿದ್ಯಾಸಂಸ್ಥೆಗಳ ನೇತೃಗಳೂ ವಿದ್ಯಾರ್ಥಿ ಸಂಘಗಳ ಚಾಲಕರೂ ತಮ್ಮ ತಮ್ಮ ಸಂಸ್ಥೆಗಳ ಪರವಾಗಿ ಇಚ್ಛಿಸ್ಪರು ಪ್ರತಿನಿಧಿಗಳನ್ನು ಆ ದಿನ ಇಲ್ಲಿಗೆ ಬೆಳಿಗ್ಗೆ ೯ ಘಂಟೆಯೊಳಗ ಕಳಿಸಿ ಉಪಕರಿಸಬೇಕು.

ಪ್ರತಿನಿಧಿ ಶುಲ್ಕ ಕೇವಲ ರೂ. ೨/— ೧೬ರ ದಿನ ಊಟ— ವಸತಿ ಸೌಕರ್ಯವನ್ನು ಪ್ರತಿನಿಧಿಗಳಿಗೆ ಪ್ರದರ್ಶನ ಸಮಿತಿಯು ಉಚಿತವಾಗಿ ಕೊಡಮಾಡಿದೆ.

ಅರ್ಥಶಾಸ್ತ್ರ, ಶಿಕ್ಷಣ, ಸಮಾಜ ನೀತಿಗಳಲ್ಲಿ ತಜ್ಞರಾದ ಸಂಸ್ಥೆಯ ಹಿರಿಯರೂ ಇತರರೂ ಪ್ರತಿನಿಧಿಗಳ ಮೂಲಕ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಸಮಸ್ಯೆ ಬಗ್ಗೆ, ಪಾಲಕ—ಸಂಸ್ಥಾನೇತೃಗಳ ಪರಿಸ್ಥಿತಿಯ ಬಗ್ಗೆ ಸೂಕ್ತ ಸಲಹೆಗಳನ್ನು ಕಳುಹುವುದಲ್ಲದೆ, ತಮ್ಮ ಸಹಕಾರ, ಬೆಂಬಲಗಳ ಸೂಚಕವಾದ ಸಂದೇಶಗಳನ್ನು ಕಳಿಸಬೇಕೆಂದು ನಮ್ರ ಪ್ರಾರ್ಥನೆ.

ಪ್ರತಿನಿಧಿಗಳಾಗಿ ಬರಲಿರುವರು ಮತ್ತು ಅವರ ಪರವಾಗಿ ಸಂಸ್ಥಾ ನೇತೃಗಳೂ ಬರುವ ಜನವರಿ ತಾ. ೮ರ ಒಳಗೆ ಪ್ರತಿನಿಧಿ ಶುಲ್ಕವನ್ನೂ ಸಲಹೆ-ಸೂಚನೆ-ಸಂದೇಶಗಳನ್ನೂ ಅಪೇಕ್ಷಾ-ಪತ್ರದೊಡನೆ ಮುಂಗಡವಾಗಿ ಕಳಿಸಬೇಕಾದುದು ಅನಿವಾರ್ಯ.

ಸಮ್ಮೇಲನದ ಕಾರ್ಯಕ್ರಮದ ವಿವರಗಳನ್ನು ಜನವರಿ ೧೦ರೊಳಗೆ ಪ್ರತಿನಿಧಿಗಳಿಗೆ ತಲ್ಪುವಂತೆ ಕಳಿಸಲಾಗುವದು.

ನವಭಾರತ ನಿರ್ಮಾಣದ ಈ ಸಂದರ್ಭದಲ್ಲಿ ಯುವಕ-ಯುವತಿಯರ ಸರಿಯಾದ ಪಾತ್ರವನ್ನು ಸರಿಯಾಗಿ ನಿರ್ಧರಿಸುವ ಈ ಸಮ್ಮೇಲನದಲ್ಲಿ ಸರ್ವರೂ ಸಹಕರಿಸುವುದಾಗಿ ನಂಬಿರುವ,

ಮ. ಗ. ಶೆಟ್ಟಿ ಜಿ. ಆರ್. ಗಲಗಲಿ — ಕಾರ್ಯದರ್ಶಿಗಳು, ಪ್ರದರ್ಶನ ಸಮಿತಿ.

ಎಂ. ವಿ. ಭಟ್ಟ — ಅಧ್ಯಕ್ಷ, ವಿದ್ಯಾರ್ಥಿ ಸಂಘ, ಕುಮಟಾ.

) ವಿದ್ಯಾರ್ಥಿಗಳೂ
ಮ್ಮೇಳನದ ಪ್ರತಿನಿಧಿ
ಮು, ಕುಮಟೆಯ
ಗಿ, ಅಲ್ಲಿಯ ಜನರ
ಜಂಟಿಯ ಕ್ರಮಗಳನ
ಗೊಟ್ಟರ ಮಾತ್ರ ವಿ
ಕೆ, ಆಹಾರೋತ್ಪಾದ
ಲ್ಲಿ ತಿಳಿದುಕೊಂಡ.

ತೇಶದಲ್ಲಿ ಮುಂಬಯಿ
ಅಧ್ಯಕ್ಷ ರಾ! ದೇವ
ನಿಯಾಮಿ. ಅವ
ಶ್ರೀ ಮ. ಹಾಬಲೇಶ್ವರನ
ನ ಮಾಡಿಕೊಂಡರು.
ಹೊಗೆ ಅಲ್ಲಿ ಸ್ವಾಸ್ಥ್ಯ
ದ ಆರೋಗ್ಯದಲ್ಲಿ
ಗಳ ವಿನೋದಾವಳಿಗಳು
ಚಾರದಲ್ಲಿ ರಾ! ವಿಶ್ವೇ
ಲ್ಲಿ ಸಾರ್ವಜನಿಕ ಸಭೆ
ಕೃ ಸಂಘಟನ ಬಂಟ
ಬಿತ್ತರಿಸಿದರು ರಾತ್ರಿ
ಕೂಲಿನ ವಿದ್ಯಾರ್ಥಿಗಳ
ಟ ನಡೆದವು.
ಯ ವಿದ್ಯಾರ್ಥಿಗಳೂ
ಪ್ರ ದಿನದ ಉತ್ಸವ
ವಿಷ್ಣು ದೇವರ ಮುಂದಿ
ಕ್ಕೆ ಕಾರ್ಯಕ್ರಮ
ಮ್ಮ ಮನೆಹಕ್ಕಲಗಳಲ್ಲಿ

ಪ್ರಕಂಪ್ರ ದಿನದ
ಧಿಯಕ್ಷ ರಾ! ರಾ! ಅಟ್ಟ
ಭಟ್ಟ, ಹಂಸರ ಭಟ್ಟ
ಸಂತೋಷಿಗರೂ ಮಾ
ಸ-ಭಸ್ತ ದಾಪತಿ
ತೆಯ ಮಾಡಬೇಕಾಗ

ರ್ಥಿಗಳೂ ಊರ ಜನ
ವನ, ಪ್ರತಿಸ್ಪರ್ಧೆ,
ಕ್ರಮಗಳನ್ನು ಜನ-ಗಿ
ಗಳು "ನಾಡದ ಗವ-
ಪ್ರಕಟಿಸಿದರು

ಬಳಕೆಯ ಅನ್ನಧಾನ್ಯಗಳ ಹುಟ್ಟುವಳಿಯ ಬಗ್ಗೆ ಸರಿ ನಿಗ್ರಹ ಒಡಿದ್ದರಿಂದ ಇನ್ನು ೧ ೨ ವರ್ಷಗಳಲ್ಲಿ ಹಿಂದುಸ್ಥಾನವು ಆಹಾರದ ವಿಷಯ ಸ್ವಯಂಪೂರ್ಣವಾಗುವದೆಂದು ನಮಗನಿಸಿದೆ.

ನಮ್ಮಲ್ಲಿ

ಲೆಂಬಾಕು ವ್ಯಾಪಾರಿಗಳಿಗೆ ಬೇಕಾಗುವ ಸೇಲ್ ಬುಕ್ಕುಗಳೂ, E B 3 ಸಣ್ಣ—ದೊಡ್ಡ ಬುಕ್ಕುಗಳೂ, ಗೇಣಿ—ರಶೀದಿ ಬುಕ್ಕುಗಳೂ, ಅಂಗಡಿಗಳಿಗೆ ಬೇಕಾಗುವ ಇಂಗ್ಲಿಷ-ಕನ್ನಡ ಕ್ಯಾಶಮೆಮೋ ಬುಕ್ಕುಗಳೂ ಸಿಗುತ್ತವೆ

ಸಿಟಿ ಆಫ್ ಕೆನರಾ ಪ್ರೆಸ್, ಕುಮಟಾ

ಅಭಿಮಾನವೇ ರಾಷ್ಟ್ರದ ಕೋಟೆ

ಶ್ರೇಷ್ಠ ಹಿಂದೂ ಕೈಗಾರಿಕೆಗೆ ಪ್ರೋತ್ಸಾಹ ಕೊಡಿರಿ.

ನಿಮ್ಮ ಪವಿತ್ರ ಗಣಪತಿ ಪೂಜೆಗೆ

ಮಹಾವೀರ ಅಗರಬತ್ತಿ

ಸುಂದರ ಸಾಗರ ಬತ್ತಿ

ಇವುಗಳನ್ನೇ ಉಪಯೋಗಿಸಿರಿ!

ಬಿ. ಆರ್. ರಾಮಯ್ಯ.

ಚಿತ್ರರಂಜನ ಕಂಪನಿ, ತುಮಕೂರು. (ಮೈಸೂರ).

ಸುಧಾರಿಸಿ, ಆಸಕ್ತಿಯಿಂದ ಕೃಷಿ-ಕರ್ಮ ಮಾಡಿದರೆ ಈಗ ಕಂಡು ಬರುವ ಅನ್ನ ಧಾನ್ಯಗಳ ಕೊರತೆ ಸಹಜವಾಗಿ ತುಂಬಿ ಬರುವಂತಿರುಂಟು. ೧೯೫೧ನೇ ಇಸವಿಯೊಳಗೆ ಹುಟ್ಟುವಳಿಯನ್ನು ೪೮ ಲಕ್ಷ ಟನ್ನುಗಳಿಂದ ಬೆಳೆಸಿದರೆ ನಮ್ಮ ದೇಶಕ್ಕೆ ವಿದೇಶಗಳಿಂದ ಅನ್ನ ಧಾನ್ಯಗಳನ್ನು ತರಿಸುವ ಆವಶ್ಯಕತೆ ಇರಲಾರದು. ೮ ಕೋಟಿ ಎಕರೆ ಪ್ರದೇಶದಲ್ಲಿ ಸ್ವಲ್ಪ ಹೆಚ್ಚಿಗೆ ಪ್ರಯತ್ನ ಮಾಡಿದರೆ, ಎಕರೆ ೧ಕ್ಕೆ ಒಂದೊಂದು ಮಣ ಧಾನ್ಯವನ್ನು ಹೆಚ್ಚಿಗೆ ಬೆಳೆಸಿದರೆ ಕಾರ್ಯಭಾಗವಾಗುವಂತಿದೆ. ಇದಲ್ಲದೆ ೮ ಲಕ್ಷ ಎಕರೆ ಬಂಜರ ಬಿದ್ದಿರುವ ಭೂಮಿಯುಂಟು. ಅದನ್ನು ಸಾಗುವಳಿ ಮಾಡಿಸಿದರೆ ೩ ಲಕ್ಷ ಟನ್ ಧಾನ್ಯ ಸಹಜವಾಗಿ ಬೆಳೆಯುವಂತಿದೆ. ಜಲಾಶಯಗಳಿದ್ದಲ್ಲಿ ಅವುಗಳನ್ನು ಸರಿಗೊಳಿಸಿ ಹೊಲಗಳಿಗೆ ನೀರಿನ ಪೂರೈಕೆ ಮಾಡಿಕೊಳ್ಳುವದಕ್ಕೆ, ಹಿಂಗಾರಿ ಬೆಳೆ ಮಾಡಲಿಕ್ಕೆ ಅನುಕೂಲವುಂಟು. ಬೆಳೆಯ ರಕ್ಷಣೆ ಮಾಡಲಿಕ್ಕೆ, ಹುಟ್ಟಿದ ಬೆಳೆ ಕಾಡು ಪಶುಗಳ ಪಾಲಾಗದಂತೆ ಕಾಪಾಡಿಕೊಳ್ಳಲಿಕ್ಕೆ ಸರಕಾರವು ಸಕಲ ಸಹಾಯ ನೀಡುವದಾಗಿ ಆಹಾರ ಕಮಿಶನರರು ದಿಲ್ಲಿಯೊಳಗಿನ ಪತ್ರ-ಪ್ರತಿನಿಧಿಗಳ ಸಭೆಯಲ್ಲಿ ಘೋಷಿಸಿದ್ದಾರೆ. ಆಸಕ್ತಿಯಿಂದ ಕೃಷಿಕರ್ಮ ಮಾಡುವ ಕೃಷಿಕರಿಗೆ ಬೀಜ, ಗೊಬ್ಬರ, ಕೋವಿ ಮೊದಲಾದ ಸಕಲ ಸಾಹಿತ್ಯಗಳು ಕೊಡುಗೈಯಿಂದ ಪೂರೈಸಲ್ಪಡುವವಾಗಿಯೂ, ಕೃಷಿಕರ್ಮವೇ ಹಿಂದುಸ್ಥಾನದ ಸಾಂಪತ್ತಿಕ ಅಭ್ಯುದಯದ ಮೂಲಾಧಾರವೆಂದೂ, ಅದಕ್ಕಾಗಿ ಸಕಲರೂ ತತ್ಪರತೆಯಿಂದ ಪ್ರಯತ್ನ ಮಾಡಬೇಕೆಂದೂ ಆಹಾರ ಕಮಿಶನರರು ಒತ್ತಿ ಹೇಳಿದರೆ, ಸರ್ವಾಧಿಪತಿಗಳಾದ ಶ್ರೀಮಾನ್ ಚಕ್ರವರ್ತಿ ರಾಜಗೋಪಾಲಾಚಾರ್ಯರು ಸ್ವತಃ ರಂಟೆ ಹೊಡೆದು ಈಗಿನ ಕಾಲಮಾನದಲ್ಲಿ ಕೃಷಿ-ಕರ್ಮ ಮಾಡುವದು ಗೌರವದ ಕಾರ್ಯವೆಂದು ಸಮಸ್ತ ಪ್ರಜೆಗಳಿಗೆ ಸ್ವೋದಾಹರಣೆಯಿಂದ ಬೋಧಿಸಿದ್ದಾರೆ. ಮುಖ್ಯ ಮಂತ್ರಿಗಳಾದ ಪಂ|| ಜವಾಹರಲಾಲ ನೆಹರುರವರೂ ಟ್ರ್ಯಾಕ್ಟರದ ಸಹಾಯದಿಂದ ತಮ್ಮ ಬಂಗಲೆಯ ಆವಾರವನ್ನು ಹೂಡಿ ತಾವು ಸಹ ಕೃಷಿಕರ್ಮಕ್ಕೆ ಅದೇ ಗೌರವ ಸ್ಥಾನ ಕೊಡುತ್ತೇವಾಗಿ ಸಿದ್ಧಗೊಳಿಸಿದ್ದಾರೆ. ಕೃಷಿಕರ್ಮಕ್ಕೆ ಈಗ ಬಹಳ ಪ್ರಾಧಾನ್ಯವುಂಟು. "ಹರಿಜನ" ಪತ್ರಕರ್ತರೂ ಕೂಡ ಆಹಾರ-ಧಾನ್ಯಗಳ ಉತ್ಪತ್ತಿ ಬೆಳೆಸಲು ಕೆಲವು ಸೂಚನೆಗಳನ್ನು ಮಾಡಿದ್ದಾರೆ. ಭೂಕಂದಾಯವನ್ನು ಧಾನ್ಯ ರೂಪದಿಂದ ಎತ್ತುವಳಿ ಮಾಡಬೇಕು, ಸಣ್ಣ-ಸಣ್ಣ ಸಾಗುವಳಿದಾರರಿಗೆ ಸಕಲ ಅನುಕೂಲತೆಗಳನ್ನು ಪೂರೈಸಬೇಕು; ಸರಕಾರವು ಸ್ವತಃ ತನ್ನ ಕಡೆಯಿಂದ ಕೃಷಿಕರ್ಮ ಮಾಡಿಸಿಕೊಳ್ಳಬೇಕು; ಗ್ರಾಮ ಸಂಸ್ಥೆಗಳಿಗೆ, ಗ್ರಾಮ-ಪಂಚಾಯತಗಳಿಗೂ ಸ್ವಾತಂತ್ರ್ಯ ಕೊಡಬೇಕು; ಕೃಷಿಕರ್ಮಕ್ಕೆ ಸಂಬಂಧಿಸಿದ ಜನರ ಅರ್ಜಿಗಳನ್ನು ತತ್ಪರತೆಯಿಂದ ನಿರ್ಣಯಿಸಬೇಕು, ಸದ್ಯದ ಸ್ಥಿತಿಯಲ್ಲಿ ಇಂಥ ಅರ್ಜಿಗಳನ್ನು ನಿರ್ಣಯಿಸಲು ಅತೀತ ಕಾಲಹರಣವಾಗುತ್ತಿದೆ, ಇಂಥ ಪದ್ಧತಿಯು ಕೆಲಸಕ್ಕೆ ಪೋಷಕವಲ್ಲ. ಕೃಷಿಕರೊಡನೆ ಅಧಿಕಾರಿಗಳು ಪ್ರಾಮಾಣಿಕತೆಯಿಂದ ವರ್ತಿಸಬೇಕು, ಅವರೊಡನೆ ಅಧಿಕಾರಿಗಳು ನಡಿಸುವ ವ್ಯವಹಾರವು ಚೊಕ್ಕವಾಗಿರಬೇಕು, ಬೀಜ, ಗೊಬ್ಬರ, ನೇಂಟೆ, ಕಬ್ಬಿಣ ಮೊದಲಾದ ಕೃಷಿ ಸಾಹಿತ್ಯಗಳನ್ನು ಪ್ರಾಮಾಣಿಕತೆಯಿಂದ ಪೂರೈಸಬೇಕು. ಜನರ ಪ್ರಾಮಾಣಿಕತೆಯನ್ನು ಅಪೇಕ್ಷಿಸುವ ಸರಕಾರಿ ಅಧಿಕಾರಿಗಳು ಸ್ವತಃ ಪ್ರಾಮಾಣಿಕರಾಗಿ ವರ್ತಿಸಬೇಕು. ಕೃಷಿಕರಿಗೆ ಅಧಿಕಾರಿಗಳು ಆಗಿಂದಾಗ ನೆರವಾಗಬೇಕು. ಕೃಷಿಕರಿಗೆ ಶಾಸನ ಮಾಡುವ ಪದ್ಧತಿಗಿಂತ ಇನಾಮು ಕೊಡುವ ಪದ್ಧತಿ ಶ್ರೇಯಸ್ಕರವಾದದ್ದು, ಇನಾಮುಗಳನ್ನು ಹಂಚಿ ಸರಕಾರವು ಆಹಾರೋತ್ಪತ್ತಿಯ ಪರಿಮಾಣವನ್ನು ಬೆಳಸಿಕೊಳ್ಳಬೇಕು, ಇವೇ ಮೊದಲಾದ ಸೂಚನೆಗಳನ್ನು "ಹರಿಜನ" ಪತ್ರಕರ್ತರು ಮಾಡಿದ್ದಾರೆ.

ಆಹಾರ ಕಮಿಶನರರು ಕೊಟ್ಟ ಮುಂಜಾಗ್ರತೆಯನ್ನು ಸಕಲರೂ ಲಕ್ಷಿಸಬೇಕು. ಆಹಾರ-ಧಾನ್ಯಗಳನ್ನು ಜತನದಿಂದ ಕಾಪಿಡಬೇಕು, ಅವುಗಳ ಅಪವ್ಯಯವಾಗಕೊಡಕೂಡದು. "ಹರಿಜನ"ದಲ್ಲಿ ಪತ್ರಕರ್ತರಾದ ಶ್ರೀ|| ಕಿಶೋರಿಲಾಲ ಮಶ್ರುವಾಲಾರವರು ಆಹಾರ-ಸಂರಕ್ಷಣೆಯ ಸಂಬಂಧದಲ್ಲಿ ಮಾಡಿದ ಸೂಚನೆಗಳು ಮನನೀಯವಿವೆ. ಹಿಂದುಸ್ಥಾನದೊಳಗೆ ಬೆಳೆದ ಹುಟ್ಟುವಳಿಯನ್ನು ಜನರಿಗೆ ಸರಿಯಾಗಿ ಹಂಚಿದರೆ ಪ್ರತಿ ವ್ಯಕ್ತಿಗೆ ಪ್ರತಿ ದಿನ ೧೬ ಔಂಸ ಅಂದರೆ ೪೨ ತೊಲೆ ಆಹಾರ-ಧಾನ್ಯ ಸಿಗಲಿಕ್ಕೆ ಏನೂ ತೊಂದರೆಯಿಲ್ಲ. ಒಂದೊಂದು ವ್ಯಕ್ತಿಯ ಪೂರ್ಣ ಜೀವನಕ್ಕೆ ೨೦ ಔಂಸ ಅಂದರೆ ೫೦ ತೊಲೆ ಅನ್ನ-ಧಾನ್ಯ ಬೇಕು. ಆದರಿಂದ ನೂರಕ್ಕೆ ೧೦ರಷ್ಟೇ ಕೊರತೆಯಾಗುತ್ತಿದೆ. ಆದರೆ ಹುಟ್ಟಿದ ಧಾನ್ಯವನ್ನು ಜತನದಿಂದ ಕಾಪಾಡಿಕೊಳ್ಳುವದಿಲ್ಲ; ಮಿತಿಯಿಂದ ಅವನ್ನು ಉಪಯೋಗಿಸುವದಿಲ್ಲ. ಕೆಲವು ಪ್ರಸಂಗಗಳಲ್ಲಿ ಅವನ್ನು ತೂರಿಯುವ ಪರಿಪಾಠವೂ ಇಲ್ಲ, ಹೀಗಲ್ಲ ಹುಟ್ಟುವಳಿಯಾದ ಬೆಳೆಯನ್ನು ಜನರಿಗೆ ತಲ್ಪಿಸುವ ಕ್ರಮದಲ್ಲಿ ದೋಷಗಳುಂಟು. ಅಡಿಗೆ ಭಟ್ಟರು ಅಡಿಗೆಯ ಮನೆಯಲ್ಲಿ ಬಹಳ ಅಜಾಗ್ರತೆಯಿಂದ ವರ್ತಿಸಿ ದುಂದುಗಾರಿಕೆ ನಡಿಸುತ್ತಾರೆ. ಅನ್ನ-ಧಾನ್ಯಗಳನ್ನು ಅವರು ಸರಿಯಾಗಿ ಜೋಪಾನ ಮಾಡುವದಿಲ್ಲ. ಅಡಿಗೆ ಮಾಡುವಾಗಲೂ ಎಷ್ಟೋ ಹಿಟ್ಟು-ಧಾನ್ಯಗಳನ್ನು ಚೆಲ್ಲಿ ಬಿಡುತ್ತಾರೆ! ಬಡಿಸುವದರಲ್ಲೂ ಊಟ ಮಾಡುವದರಲ್ಲೂ ಜಾಗ್ರತೆ ಕೊಳ್ಳುವದಿಲ್ಲವಾದ್ದರಿಂದ ಹೊಟ್ಟೆಯೊಳಗೆ ಹೋಗುವಷ್ಟೇ ಅನ್ನ ಸಾಮಗ್ರಿ ಹೊರಗೆ ಒಗೆಯಲ್ಪಡುತ್ತಿದೆ!! ೧೯೪೩ನೇ ಇಸವಿಯಲ್ಲಿ ನಾಗಪುರದ ಜನರು ಅನ್ನಕ್ಕಾಗಿ ಪೇಚಾಡುತ್ತಿದ್ದಾಗ ಸಮೀಪದಲ್ಲಿದ್ದ ಸೆಂಟ್ರಲ್ ಜೈಲಿನಲ್ಲಿ ಚಪಾತಿ, ರೊಟ್ಟಿ ವಗೈರೆ ಪದಾರ್ಥಗಳು ರಾಶಿರಾಶಿಯಾಗಿ ಹೊರಗೆ ಒಗೆಯಲ್ಪಡುತ್ತಿದ್ದವಂತೆ! ಅನ್ನ-ಧಾನ್ಯಗಳನ್ನು ೨-೩ ವರ್ಷಗಳ ವರೆಗೆ ಕಾಪಾಡಬಹುದು. ೪೦ ವರ್ಷಗಳ ಹಿಂದಿನ ಜನರು ಇವನ್ನು ಕಾಪಾಡಿಡುವ ಕ್ರಮದಲ್ಲಿ ನಿಶ್ಚಿತರಾಗಿದ್ದರು. ಈಗಲೂ ಹಳೆಯ ಪದ್ಧತಿಯ ಹೆಂಗಸರು ಈ ಕ್ರಮವನ್ನು ಕೈಕೊಳ್ಳುತ್ತಾರೆ. ಇಲಿ-ಕ್ರಿಮಿಗಳ ಕಾಟದಿಂದ ಕಾಳನ್ನು ಕಾಪಾಡಿಕೊಳ್ಳುವ ಕ್ರಮ ಹಿಂದಿನ ಕಾಲದ ರೈತರಿಗೆ ಚೆನ್ನಾಗಿ ಗೊತ್ತಿತ್ತು. ಆ ಕಾಲದಲ್ಲಿ ಈಗಿನ ಕ್ರಿಮಿನಾಶಕಗಳೂ ಸಿಮೆಂಟಿನ ಉಗ್ರಾಣಗಳೂ ಇದ್ದಿಲ್ಲ! ಈಗ ರೋಕ ವ್ಯವಹಾರ ಮಾಡುವವರಿಗೆ ಸಹ ಈ ಕ್ರಮಗಳ ಜ್ಞಾನವಿಲ್ಲ! ಹೇರಳ ಖರ್ಚು ಮಾಡಿ ಕಟ್ಟಿಸಿದ ಸರಕಾರಿ ಉಗ್ರಾಣಗಳಲ್ಲೂ ಉಗಿಬಂಡಿಯ ಉಗ್ರಾಣಗಳಲ್ಲೂ ಕೇ[illegible]ಳ ಕಾಳು ನಾಶವಾಗುತ್ತಿದೆ! ಆಧುನಿಕ ವಿದ್ಯಾಸಂಪನ್ನ ಹೆಂಗಸು ಸೋಮಾರಿಯಾಗಿದ್ದಾಳೆ; ಆಹಾರ ಸಾಮಗ್ರಿಗಳ ಜತನ ಮಾಡುವದು ಗೃಹರಕ್ಷಣೆಯ ಮುಖ್ಯ ಅಂಗವೆಂದು ಆಕೆ ಎಣಿಸುವದಿಲ್ಲ! ನಮ್ಮ ಹಿರಿಯರ ಕಾಲದಲ್ಲಿ ಅನ್ನವು ಪರಮ ಪವಿತ್ರ ವಸ್ತುವಾಗಿದ್ದಿತ್ತು. ಅನ್ನವು ದೇವರೆಂಬ ಭಾವನೆಯಿತ್ತು. ಅದನ್ನು ಕಾಲಿನಿಂದ ತುಳಿಯುತ್ತಿರಲಿಲ್ಲ. ಅನ್ನ ಹಿಡಿದು ಹೇಳಿದ ಮಾತು ಪ್ರಮಾಣದ ಮಾತೆಂದು ಎಣಿಸಲ್ಪಡುತ್ತಿತ್ತು. ಎಲೆಯ ಮೇಲೆ ಅನ್ನ ಬಿಟ್ಟರೆ ಹಿರಿಯರು ಸಿಟ್ಟಾಗುತ್ತಿದ್ದರು. ಅನ್ನ ಬಿಡುವದು ಅದೊಂದು ಕೆಟ್ಟ ಲಕ್ಷಣವಾಗಿದ್ದಿತು. ಈಗ ಜನರ ಮನೋವೃತ್ತಿ ಬದಲಿದೆ! ಎಲೆಯ ಮೇಲೆ ಬಡಿಸಿದ್ದನ್ನು ಬಿಟ್ಟು ಏಳುವದು ಅದೊಂದು ಶಿಷ್ಟಾಚಾರವಾಗತೊಡಗಿದೆ! ಇಂ[illegible] ಜನಾಂಗಕ್ಕೆ ಅನ್ನ-ಧಾನ್ಯಗಳ ಕೊರತೆಯಾದ ಬ[illegible] ದೂರುವ ಅಧಿಕಾರವಿಲ್ಲ, ಸಕಾಲದಲ್ಲಿ ಮಳೆಯಾಗ[illegible] ಬಗ್ಗೆ ದೇವರನ್ನು ಆಕ್ಷೇಪಿಸುವ ಅಧಿಕಾರವೂ ಇಲ್ಲ. ಈ ಪ್ರಕಾರ ಆಹಾರವನ್ನು ರಕ್ಷಿಸಿಕೊಂಡು ಮಿತವ್ಯಯ ಮಾಡಿದರೆ ಅನ್ನ-ಧಾನ್ಯಗಳ ಕೊರತೆಯ ಕಷ್ಟ ವಿಶೇಷ ಕಾಡಲಿಕ್ಕಿಲ್ಲೆಂದು ಶ್ರೀ|| ಮಶ್ರುವಾಲಾರವರು ಬೋಧಿಸಿದ್ದಾರೆ. ಹುಟ್ಟುವಳಿಯನ್ನು ಹೆಚ್ಚಿಸುವ ಕ್ರಮಕ್ಕಿಂತ ಹುಟ್ಟಿಸಿದ ಹುಟ್ಟುವಳಿಯ ಜೋಪಾನ ಮಾಡಿಕೊಂಡು, ಮಿತವ್ಯಯದಿಂದ ಉಪಯೋಗಿಸುವದೂ ಅನ್ನ-ಧಾನ್ಯಗಳ ಬರಗಾಲದ ನಿವಾರಣೆಯ ಒಂದು ಉಪಾಯವೆಂದು ಅವರ ಅಂಬೋಣವುಂಟು. ಗೃಹಕೃತ್ಯದ ದೃಷ್ಟಿಯಿಂದ ಅರ್ವಾಚೀನ ಹೆಂಗಸರಿಗಿಂತ ಪ್ರಾಚೀನ ಹೆಂಗಸರೇ ಶ್ರೇಷ್ಠರೆಂದೂ ಶ್ರೀ|| ಮಶ್ರುವಾಲಾರವರು ಹೇಳಿದ್ದನ್ನು ಲಕ್ಷದಲ್ಲಿಡಬೇಕು.

ಆಹಾರಧಾನ್ಯಗಳಲ್ಲಿ ಅಕ್ಕಿ ಮತ್ತು ಗೋದಿ ಇವು ಮುಖ್ಯ. ಗೋದಿಗಿಂತ ಅಕ್ಕಿಯ ಬರಗಾಲ ಈಗ ಹೆಚ್ಚಾಗಿದೆ. ಅಕ್ಕಿ ತಿನ್ನುವ ಪ್ರದೇಶಗಳಲ್ಲಿ ನಿಯಂತ್ರ[illegible]

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.
ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲಾಜಿಂಗ
ದಿ ಕೆನರಾ ಲಾಜ
[ಊಟ ಮತ್ತು ವಸತಿಗೃಹ]
ಮೋಟರ-ಸ್ಟ್ಯಾಂಡ, ಹುಬ್ಬಳ್ಳಿ.
ಮಾಲಕ:— ವ್ಯಾಂಕಪ್ಪಾ ಶೈ.

...ನಿರ್ಬಂಧಗಳಿಂದ ಕಟುತರ ಕಷ್ಟವಾಗಿದೆ. ಬಂಗಾಲದಲ್ಲಿಯ ದುರ್ಘಟನೆಗಳಿಗೆ ಅಕ್ಕಿಯ ಬಂಗಾಲವೇ ಕಾರಣವೆಂದು ಕಂಡು ಅಲ್ಲಿಯ ಅಕ್ಕಿಯ-ಸೀಧಾ-ಪರಿಮಾಣವನ್ನು ಈಗ ೧೨ ಔಂಸಗಳಿಂದ ೧೬ ಔಂಸಗಳಿಗೆ ಏರಿಸಿದ್ದಾರೆ ಈ ಏರಿಕೆಯಿಂದ ಬಂಗಾಲದಲ್ಲಿ ಕುಸು ಸಮಾಧಾನ ನೆಲಸಿದೆ ಆದರೆ ಎಲ್ಲ ಪ್ರಾಂತಗಳಲ್ಲಿ ಈ ಪ್ರಮಾಣದಿಂದ ಅಕ್ಕಿಯ ಸೀಧಾ ಸಿಗುವದಿಲ್ಲ. ನಮ್ಮಲ್ಲಿ ಕೆಲಾ ೬ ಔಂಸು ಅಕ್ಕಿ ಕೊಡುತ್ತಾರೆ. ಇದು ಎಷ್ಟಕ್ಕೂ ಸಾಲುವದಿಲ್ಲ ಅಂತು ಸಿಗುವ ಅನ್ನಧಾನ್ಯ ೧೬ ಔಂಸ ಬಂಗಾಲದೊಳಗೆ ಕೊಡುವಷ್ಟು ಅಕ್ಕಿ ನಮ್ಮ ಜಿಲ್ಲೆಯೊಳಗೂ ಹಂಚು ವ್ಯವಸ್ಥೆಯಾಗಬೇಕು ಹಿಂದುಸ್ಥಾನ ಸರಕಾರದ ಆಹಾರ ಸಮಿತಿಯವರು ಆಹಾರ-ಸಾಮುಗ್ರಿಗಳ ಹಂಚುವಿಕೆ ಎಲ್ಲ ಪ್ರಾಂತಗಳಲ್ಲಿ ಒಂದೇ ಪ್ರಮಾಣದಿಂದ ಆಗಬೇಕೆಂದು ಠರಾವ ಪಾಸು ಮಾಡಿದ್ದಾರೆ. ಈ ಠರಾವನ್ನು ಪ್ರಾಂತಿಕ ಸರಕಾರದಿಂದ ಪಾಲಿಸಿಕೊಳ್ಳಬೇಕಾದ್ದು ಅಕ್ಕಿಯ ಸೀಧಾ ಕಡಿಮೆಯಿರುವದರಿಂದ ಕಳ್ಳಾಟಕ್ಕೆ ನಿಮಂತ್ರಣ ಕೊಟ್ಟಂತಾಗುತ್ತದೆ. ಅಕ್ಕಿಯ ಹುಟ್ಟುವಳಿ ಈಗ ದೇಶ-ವಿದೇಶಗಳಲ್ಲಿ ಹೆಚ್ಚುತ್ತದಾಗ ತಿಳಿದು ಸಮಾಧಾನವಾಗುತ್ತದೆ ಯುದ್ಧಪೂರ್ವಕಾಲದಲ್ಲಿ ಹುಟ್ಟುವಳಿಕ್ಕಿಂತ ಈ ವರ್ಷ ಅಕ್ಕಿಯ ಬೆಳೆ ಹೆಚ್ಚಾಗಿದೆಯೆಂದು ಅಮೇರಿಕೆಯ ಬೇಸಾಯ ಇಲಾಖೆಯವರು ಪ್ರಕಟಿಸಿದ್ದಾರೆ. ಕಳೆದ ವರ್ಷಕ್ಕಿಂತ ಈ ವರ್ಷ ೧೦೦ಕ್ಕೆ ೪ರಷ್ಟು ಬೆಳೆ ಹೆಚ್ಚಾಗಿದೆಯಂತೆ ಕಳೆದ ವರ್ಷ ೭ ಅಬ್ಜ ೩೦ ಕೋಟಿ ಬುಶೆಲ (= ೬೩ ಪೌಂಡುಗಳು) ಅಕ್ಕಿಯಾಗಿತ್ತು ಈ ವರ್ಷ ೭ ಅಬ್ಜ 10 ಕೋಟಿ ಬುಶೆಲ ಅಕ್ಕಿಯಾಗುವದು ನಮ್ಮ ಹಿಂದುಸ್ಥಾನದೊಳಗೆ ೧೫|| ಕೋಟಿ ಬುಶೆಲ ಅಕ್ಕಿಯಾಗುವದಾಗಿ ಅಂದಾಜು ಮಾಡಲಾಗಿದೆ. ಯುದ್ಧ-ಪೂರ್ವ ಕಾಲದ ಉತ್ಪತ್ತಿಗಿಂತ ಈ ಉತ್ಪತ್ತಿ ೧೦೦ಕ್ಕೆ ೧೧ರಷ್ಟು ಹೆಚ್ಚಾಗಿದೆ ಈ ಮಾಲಕ ಬರುತ್ತಿರುವ ವರುಷದಲ್ಲಿ ಅಕ್ಕಿಯ ಬಂಗಾಲ ಬಹಳ ಮಟ್ಟಿಗೆ ಕಡಿಮೆಯಾಗುವದೆಂದು ಎಣಿಸಲಾಗಿದೆ. ಹಿಂದುಸ್ಥಾನದೊಳಗೆ ಅಕ್ಕಿಯ ಬೆಳೆ ಹೆಚ್ಚಿಸುವದಕ್ಕೂ ಅವಕಾಶವುಂಟೆಂದು ಆಹಾರ ಸಮಿತಿಯವರು ಹೇಳಿದ ಸಂಗತಿ ಮೇಲೆ ನಮೂದಿಸಲ್ಪಟ್ಟಿದೆ. ಆಹಾರ-ಧಾನ್ಯಗಳ ಬೆಳೆ ಹೆಚ್ಚಿಸಬೇಕೆಂಬ ಪ್ರಯತ್ನದಿಂದ ಕಳೆದ ವರ್ಷ ಹುಟ್ಟುವಳಿಯು ಸ್ವಲ್ಪ ಕಡಿಮೆಯಾದದ್ದು ಕಂಡುಬರುತ್ತದೆ! ಇದರ ಕಾರಣವನ್ನು ಸರಕಾರಿ ಅಧಿಕಾರಿಗಳು ಸ್ವತಃ ಅಭ್ಯಸಿಸಬೇಕಾಗಿದೆ "ಮುಂಬಯಿ ಕ್ರೊನಿಕಲ್" ಪತ್ರಿಕೆಯ ದಿಲ್ಲಿಯ ಸುದ್ದಿಗಾರರು ಬರೆಯುತ್ತಾರೆ ಹಿಂದುಸ್ಥಾನ ಸರಕಾರವು ಅನ್ನ ಧಾನ್ಯಗಳ ಹುಟ್ಟುವಳಿಯ ಬಗ್ಗೆ ನಿಗ್ರಹ ಹಿಡಿದದ್ದರಿಂದ ಇನ್ನು ೧೨ ವರುಷಗಳಲ್ಲಿ ಹಿಂದುಸ್ಥಾನವು ಆಹಾರದ ವಿಷಯದಲ್ಲಿ ಸ್ವಯಂಪೂರ್ಣವಾಗುವದೆಂದು ನಮಗನಿಸುತ್ತದೆ.

ನಮ್ಮಲ್ಲಿ

ತಂಬಾಕು ವ್ಯಾಪಾರಿಗಳಿಗೆ ಬೇಕಾಗುವ ಸೇಲ-ಡೀಡ ಬೂಕುಗಳೂ, E B 3 ಸಣ್ಣ-ದೊಡ್ಡ ಕ್ಯಾಶ ಬೂಕುಗಳೂ, ರೇಟು-ರಶೀದಿ ಬೂಕುಗಳೂ, ಅಂಗಡಿಗಳಿಗೆ ಬೇಕಾಗುವ ಇಂಗ್ಲಿಷ-ಕನ್ನಡ ಕ್ಯಾಶಮೆಮೋ ಬೂಕುಗಳೂ ಸಿಗುತ್ತವೆ

ಸ್ಟೋರ ಆಫ್ ಕೆನರಾ ಪ್ರೆಸ್, ಕುಮಟಾ

ಅಲ್ಲಲ್ಲಿಯ ಸ್ವಾತಂತ್ರ್ಯ ದಿನದ ಉತ್ಸವಗಳು.

ಕುಮಟಾ— ಮುಂಜಾನೆ ಆರ್ ಕಾಲಕ್ಕೆ ಕಚೇರಿಯಲ್ಲಿ ಧ್ವಜಾರೋಹಣ-ಧ್ವಜವಂದನೆಗಳಾದವು ಪೋಲೀಸರೂ ಗೃಹರಕ್ಷಕ ದಳದ ಸೈನಿಕರೂ ಧ್ವಜಕ್ಕೆ ಅಭಿವಂದನೆಯನ್ನು ಸಲ್ಲಿಸಿದರು. ಆ ಮೇಲೆ ಕಚೇರಿಯ ಆವಾರದಲ್ಲಿ ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮ ನಡೆಯಿತು ಬಹಳಷ್ಟು ಶಾಲಾ-ವಿದ್ಯಾರ್ಥಿಗಳೂ ಜನರೂ ಈ ಸಮಾರಂಭಕ್ಕೆ ಕೂಡಿದ್ದರು. ಕಚೇರಿಯೊಳಗಿನ ಕಾರ್ಯಕ್ರಮ ಮುಗಿದ ಮೇಲೆ ಎಲ್ಲ ಜನರು ಮೆರವಣಿಗೆಯಿಂದ ಗಾಂಧಿ ಚೌಕಿಗೆ ಹೋಗಿ, ಅಲ್ಲಿಯೂ ಧ್ವಜ ಹಾರಿಸಿ ಧ್ವಜವಂದನೆ ಮಾಡಿದರು. ಇದಾದ ನಂತರ ಟೌನ್‌ಹಾಲಿನ ಚಿತ್ರಮಂದಿರದಲ್ಲಿ ಮಾಮಲೇದಾರ ರಾವ ಸಾಹೇಬ ಪಾವಸಕರರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಈ ಸಭೆಯಲ್ಲಿ ಆಚಾರ್ಯ ಗೋರೆ ಪ್ರಭೃತಿ ಹಲವಾರು ಜನರು ಮಾತಾಡಿ, ಸ್ವಾತಂತ್ರ್ಯವನ್ನು ಭದ್ರಗೊಳಿಸಿಕೊಳ್ಳುವ ರೀತಿನೀತಿಗಳನ್ನೂ ಹೆಚ್ಚಿದ್ದ ಜವಾಬುದಾರಿಯನ್ನು ಮಾಡುವದರ ಆವಶ್ಯಕತೆಯನ್ನೂ ತಿಳಿಸಿ ಹೇಳಿದರು.

ದಿವಾಣಿ ಕೋರ್ಟಿನಲ್ಲಿ ಕೋರ್ಟಿನ ಸಿಬಂದಿಯವರೂ ವಕೀಲರೂ ಕೂಡಿ ಕೋರ್ಟಿನ ಆವಾರದಲ್ಲಿ ಧ್ವಜವಂದನ, ಸ್ವಾತಂತ್ರ್ಯೋತ್ಸವ ಮುಂತಾದ ಕಾರ್ಯಕ್ರಮಗಳನ್ನು ನೆರವೇರಿಸಿದರು.

ಕೆನರಾ ಕಾಲೇಜಿನ ಆವಾರದಲ್ಲಿ ಮುಂಜಾನೆ ಧ್ವಜವಂದನೆಯ ಕಾರ್ಯಕ್ರಮ ಮುಗಿಯುವಷ್ಟರಲ್ಲಿ ದುಲ್ಲಾಪುರದಿಂದ ಶ್ರೀಮತ್ ಆನಂದಾಶ್ರಮ ಗುರುಗಳ ಸ್ವಾರಿಯು ಬಂದು ತಲ್ಪಿತು. ಆಚಾರ್ಯ ಗೋರೆಯವರು ಸಂಸ್ಕೃತದಲ್ಲಿ ಮಾತಾಡಿ, ಶ್ರೀ ಗುರುಗಳನ್ನು ಸ್ವಾಗತಿಸಿ, ವಿದ್ಯಾರ್ಥಿಗಳಿಗೆ ನಾಲ್ಕು ಉಪದೇಶದ ಮಾತುಗಳನ್ನು ಹೇಳಲು ಬಿನ್ನವಿಸಿದರು. ಶ್ರೀ ಗುರುಗಳು ಕೊಂಕಣಿಯಲ್ಲಿ ಅಸ್ಖಲಿತಿಂದು ಭಾಷಣ ಮಾಡಿ, ಧರ್ಮವನ್ನು ಮರೆಯಬೇಡಿರೆಂದೂ, ಬುಡಾಲ್ಯಾ ಗಾಂಧಿಯವರು ಎಂದೆಂದೂ ಧರ್ಮದ ಮೇಲಿನ ತಮ್ಮ ದೃಷ್ಟಿಯನ್ನು ಚದರಿಸಗೊಟ್ಟಿದ್ದಿಲ್ಲೆಂದೂ, ಧರ್ಮವೇ ಕಾರಣವೆಂದೂ ಬೋಧಿಸಿದರು. ಆ ನಂತರ ಸ್ವಾಮಿಗಳಿಂದ ವಿಧಿ ನಡೆಯಿತು. ಶ್ರೀಗುರುಗಳ ಅಮೃತಹಸ್ತದಿಂದಲೂ ಒಂದು ಕಲ್ಪವೃಕ್ಷದ ಸಸಿಯನ್ನು ಇಡಿಸಲಾಯಿತು ಶ್ರೀ ಗುರುಗಳು ಹಾಗೆಯೇ ಸ್ವಸ್ಥಾನಕ್ಕೆ ತೆರಳಿದರು. ಮಧ್ಯಾಹ್ನದಲ್ಲಿ ಕಾಲೇಜಿನ ಆಟಗಾರರಿಗೂ ಗಿಬ್ಬ ಹಾಯಸ್ಕೂಲಿನ ಆಟಗಾರರಿಗೂ ಮಾತಿಸ್ಪರ್ಧೆದಲ್ಲಿ ಕ್ರಿಕೆಟ ಪಂದ್ಯಾಟ ನಡೆಯಿತು ಅದರಲ್ಲಿ ಕಾಲೇಜಿನವರು ಗೆದ್ದರು

ಇದ್ದಯ ಬೇಸಾಯ ಶಾಲೆಯ ವಿದ್ಯಾರ್ಥಿಗಳೂ ಶಿಕ್ಷಕರೂ ಸ್ವಾತಂತ್ರ್ಯ ದಿನದಂದು ತಮ್ಮೊಳಗಿನ ಪ್ರತಿಸ್ಪರ್ಧೆಯ ಗುಂಪುಗಳನ್ನು ಮಾಡಿಕೊಂಡು, ಊರಲ್ಲಿಯ ನರಿ ಹೊಡೆಯುತ್ತಿರುವ ಹಳ್ಳಗಳಲ್ಲಿ ಹೋಗಿ, ಅಲ್ಲಿಯ ಜನರಿಗೆ ಗಿಡಗಳಿಗೆ ಕೆಲವು ಹಣ್ಣಿನವು ಮೊದಲಾದ ಸಸಿಗಳನ್ನು ಕೊಡಿಸಿಕೊಟ್ಟರಲ್ಲದೆ, ತಂಬೋಸ, ಗೊಬ್ಬರ ಮಾಡು ವಿಕ್ರಗೊಬ್ಬರಗಳ ಮಹತ್ವ ತಿಳಿಸಿ, ಆರೋಗ್ಯವನ್ನು ಹೆಚ್ಚಿಸುವ ಬಂದ್ಯಕತೆಯನ್ನು ತಿಳಿ ಹೇಳಿದರೆಂದು ವರದಿಗಳು ಬಂದಿವೆ

ಗೋಕರ್ಣ— ಸಾರ್ವಜನಿಕ ಚೌಕದಲ್ಲಿ ಮುಂಜಾನೆ ಕಾಲಕ್ಕೆ ಕಾಂಗ್ರೆಸ ಸಮಿತಿಯ ಅಧ್ಯಕ್ಷ ರಾ। ದೇವರಾಯರ ಅಧ್ಯಕ್ಷತೆಯಲ್ಲಿ ಧ್ವಜವಂದನೆಯಾಯಿತು. ಆ ಮೇಲೆ ಜನರು ಮೆರವಣಿಗೆಯಿಂದ ಶ್ರೀ ಮಹಾಬಲೇಶ್ವರನ ಮಂದಿರಕ್ಕೆ ಹೋಗಿ ಪ್ರಾರ್ಥನೆ ಮಾಡಿಕೊಂಡರು. ಅಲ್ಲಿಂದ ಮುಂದೆ ಗ್ರಾಮಪಂಚಾಯತಿಗೆ ಹೋಗಿ ಅಲ್ಲಿ ಧ್ವಜಾರೋಹಣ (ತಿಂಗಿನ) ಮಾಡಿದರು. ಅಪರಾಹ್ನದಲ್ಲಿ ಶಾಲೆಗಳ ಬೇರೆ ಬೇರೆ ವಿದ್ಯಾರ್ಥಿಗಳ ವಿನೋದಾವಳಿಗಳು ನಡೆದವು ಸಂಜೆ ಪುನಃ ಸಾರ್ವಜನಿಕ ಚೌಕದಲ್ಲಿ ರಾ। ವಿಶ್ವೇಶ್ವರ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರುಗಿತು ರಾತ್ರಿಯ ಸಹಭೋಜನಕ್ಕೆ ಸಂಸ್ಥಾನದ ಜನರೂ ನೀಡಬೇಕೆಂದು ಅಧ್ಯಕ್ಷರು ಬಿನ್ನವಿಸಿದರು ರಾತ್ರಿಯಲ್ಲಿ ಶ್ರೀ ಭದ್ರಕಾಳಿ ಹಾಯಸ್ಕೂಲಿನ ವಿದ್ಯಾರ್ಥಿಗಳ ಮನರಂಜನೆಯ ಕಾರ್ಯಕ್ರಮಗಳು ನಡೆದವು.

ಉಂಚಗಿ— ಉಂಚಗಿ ಶಾಲೆಯ ವಿದ್ಯಾರ್ಥಿಗಳೂ ಅವರ ಪಾಲಕರೂ ಕೂಡಿ ಸ್ವಾತಂತ್ರ್ಯ ದಿನದ ಉತ್ಸವ ಮಾಡಿದರು. ಪ್ರಭಾತ ಫೇರಿ, ಶ್ರೀ ವಿಷ್ಣು ದೇವರ ಮಂದಿರದಲ್ಲಿ ಪ್ರಾರ್ಥನೆ, ಧ್ವಜವಂದನೆ ಮೊದಲಾದ ಕಾರ್ಯಕ್ರಮಗಳು ನಡೆದವು. ಜನರು ತಮ್ಮ ತಮ್ಮ ಮನೆಗಳಲ್ಲಿ ದೀಪಾಲಂಕಾರ ಮಾಡಿದರು.

ಊರಕೇರಿ— ಈ ಊರಿನ ಸ್ವಾತಂತ್ರ್ಯ ದಿನದ ಉತ್ಸವ ಸಡಗರದಿಂದ ನಡೆಯಿತು ಸಭೆಯಲ್ಲಿ ರಾ। ರಾ। ಅಟ್ಟಿ ಕೃಷ್ಣ ಭಟ್ಟ, ಅಪ್ಪೆ ಗಣಪತಿ ಭಟ್ಟ, ಹಂಜರ ಭಟ್ಟ ಮೊದಲಾದವರೂ ಲಿಂಗಪ್ಪ ನಾಯ್ಕ ಮುನಿಭೋಗರೂ ಮಾತಾಡಿ ಗಳಿಸಿದ ಸ್ವಾತಂತ್ರ್ಯವನ್ನು ಸುಭದ್ರ ಮಾಡಿಕೊಳ್ಳಲು ಎಲ್ಲರೂ ಸರಕಾರಕ್ಕೆ ಸಹಾಯ ಮಾಡಬೇಕಾಗಿ ಬೋಧಿಸಿದರು.

ಕೂಜಳ್ಳಿ— ಶಾಲೆಯ ವಿದ್ಯಾರ್ಥಿಗಳೂ ಊರ ಜನರೂ ಕೂಡಿ ಮೆರವಣಿಗೆ, ಧ್ವಜವಂದನೆ, ಪ್ರಭಾತಫೇರಿ, ಗ್ರಾಮ ಸ್ವಚ್ಛತೆ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಿದರು ಸಂಜೆಯ ಕಡೆ ವಿದ್ಯಾರ್ಥಿಗಳು "ನಾಡಿದ ಗರ್ವಭಂಗ"ವೆಂಬ ಏಕಾಂಕ ನಾಟಕವನ್ನು ಆಡಿತೋರಿಸಿದರು

ಜೈ ಹಿಂದ

ಅಭಿಮಾನವೇ ರಾಷ್ಟ್ರದ ಕೋಟೆ

ಶ್ರೇಷ್ಠ ಹಿಂದೂ ಕೈಗಾರಿಕೆಗೆ ಪ್ರೋತ್ಸಾಹ ಕೊಡಿರಿ.

ನಿಮ್ಮ ಪವಿತ್ರ ಗಣಪತಿ ಪೂಜೆಗೆ

ಮಹಾವೀರ ಅಗರಬತ್ತಿ

ಸುಂದರ ಸಾಗರ ಬತ್ತಿ

ಇವುಗಳನ್ನೇ ಉಪಯೋಗಿಸಿರಿ !

ಬಿ. ಆರ್. ರಾಮಯ್ಯ.

ಚಿತ್ರರಂಜನ ಕಂಪನಿ, ತುಮಕೂರು. (ಮೈಸೂರ).

ಹಿರೇಗುತ್ತಿ— ಇಲ್ಲಿಯ ಶಾಲೆಯವರು ಈ ವರ್ಷದ ಸ್ವಾತಂತ್ರ್ಯೋತ್ಸವದ ಸಪ್ತಾಹವನ್ನು ಬಹಳ ಉತ್ಸಾಹದಿಂದ ವಿವಿಧ ಕಾರ್ಯಕ್ರಮದೊಡನೆ ನಡೆಸಿದರು. ಈ ... ದಿನ ಬೆಳಿಗ್ಗೆ ಪ್ರಭಾತಫೇರಿ, ರಾ॥ ... ಅವರ ಅಧ್ಯಕ್ಷತೆಯಲ್ಲಿ ಗ್ರಾಮ ಸಂಕೀರ್ತನೆ, ಧ್ವಜವಂದನೆ, ವ್ಯಾಯಾಮ ..., ... ಬಗ್ಗೆ ಕಾರ್ಯಗಳಾದವು. ಸಂಜೆ ಸಭೆಯಾಗಿ ಸತ್ಯ, ಅಹಿಂಸೆ, ಸ್ವಚ್ಛತೆ, ಅಸ್ಪೃಶ್ಯತಾ-ನಿವಾರಣ ಮುಂತಾದ ವಿಷಯಗಳ ಮೇಲೆ ಶಾಲೆಯ ಹುಡುಗರ ಭಾಷಣಗಳಾದವು.

ಬೀವಗಿ— ಇಲ್ಲಿಯ ಶಾಲೆಯವರು ಪಟೇಲರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವ ಮಾಡಿದರು. ಮಹಾತ್ಮಾಜಿಯವರ ಭಾವಚಿತ್ರದೊಂದಿಗೆ ಮೆರವಣಿಗೆಯಾಯಿತು. ಧ್ವಜವಂದನೆಯಾದ ಮೇಲೆ ಶಾಲೆಯ ಮುಖ್ಯಾಧ್ಯಾಪಕರು ಭಾಷಣ ಮಾಡಿ ಆಹಾರಧಾನ್ಯಗಳನ್ನು ಹೆಚ್ಚಾಗಿ ಬೆಳೆಸುವದರ ಆವಶ್ಯಕತೆ, ಮದ್ಯನಿಷೇಧ, ಶಿಕ್ಷಣ ಪ್ರಸಾರ ಮುಂತಾದ ವಿಷಯಗಳನ್ನು ತಿಳಿಸಿಕೊಂಡರು.

ಅಂತ್ರವಳ್ಳಿ— ಇಲ್ಲಿಯ ಶಾಲೆಯವರು ರಾ॥ ಗಿರಿಧರ ಓಕಳೇ ಇವರ ಅಧ್ಯಕ್ಷತೆಯಲ್ಲಿ ಉತ್ಸವ ಮಾಡಿದರು. ಧ್ವಜವಂದನೆ, ವ್ಯಾಯಾಮ, ವಿದ್ಯಾರ್ಥಿಗಳ ನಾಟಕ, ಸಭೆ ವಗೈರೆ ಕಾರ್ಯಕ್ರಮ ನಡೆಯಿತು. ಸಂಜೆ ಶ್ರೀ ಈಶ್ವರ ದೇವಸ್ಥಾನದಲ್ಲಿ ಪಂಚರತ್ನಿಯ ಪೂಜೆಯಾಯಿತು.

ಹೊಸಾಕುಳಿ (ಸಂಕೀಗೋಳ)— ಇಲ್ಲಿಯ ಶಾಲೆಯವರ ಸಹಕಾರದಿಂದ ಜನರು ಉತ್ಸವ ಮಾಡಿದರು. ಪ್ರಭಾತ ಫೇರಿ, ಧ್ವಜವಂದನೆ, ಶಾಲೆಯಲ್ಲಿ ಸಭೆ ವಗೈರೆ ಕಾರ್ಯಕ್ರಮಗಳು ನಡೆದವು. ಮಧ್ಯಾಹ್ನದಲ್ಲಿ ಅಲ್ಲಲ್ಲಿ ಹಲಸು, ಮಾವು ಮೊದಲಾದ ಗಿಡಗಳನ್ನು ನೆಟ್ಟರು.

ಹೊನ್ನಾವರ— ಸ್ವಾತಂತ್ರ್ಯೋತ್ಸವದ ದಿನ ಮುಂಜಾನೆ ಧ್ವಜವಂದನೆ, ಮೆರವಣಿಗೆ, ವ್ಯಾಯಾಮ ಮೊದಲಾದ ಕಾರ್ಯಕ್ರಮಗಳಾದವು. ಮೆರವಣಿಗೆಯಲ್ಲಿ ಸೇಂಟ ಥೊಮಾಸ ಹಾಯಸ್ಕೂಲಿನ ಬಾಲ ಸೈನಿಕರು ಅಗ್ರಭಾಗದಲ್ಲಿದ್ದರು. ಸಂಜೆ ಟಿಪ್ಪರೆ ಸಭಾಗೃಹದಲ್ಲಿ ಸಾರ್ವಜನಿಕ ಸಭೆಯಾಗಿ ಹಲವಾರು ಜನರ ಭಾಷಣಗಳಾದವು.

ಹಳದೀಪುರ— ಸರಪಂಚ ರಾ॥ ಹಳದೀಪುರ ಇವರ ನೇತೃತ್ವದಲ್ಲಿ ಸ್ವಾತಂತ್ರ್ಯೋತ್ಸವವಾಯಿತು. ಬೆಳಿಗ್ಗೆ ಪ್ರಭಾತ ಫೇರಿ, ಶಾಲೆಯ ಹತ್ತಿರ ಧ್ವಜವಂದನೆ, ಆ ಮೇಲೆ ಅಲ್ಲಲ್ಲಿ ಸಸಿ-ಗಿಡಗಳನ್ನು ನೆಡುವದು ಹೀಗೆ ಮಧ್ಯಾಹ್ನದವರೆಗೂ ಸಂಭ್ರಮ ನಡೆಯಿತು. ಅಪರಾಹ್ನದಲ್ಲಿ ಶಾಲೆಯ ಹುಡುಗರ ಆಟ ಪಾಟಗಳಾದವು. ಆ ಮೇಲೆ ಸಭೆಯಾಗಿ ಭಾಷಣಗಳಾದವು.

ಹದಿನಬಾಳ— ಇಲ್ಲಿಯ ಶಾಲೆಯ ವಿದ್ಯಾರ್ಥಿಗಳೂ ಊರವರೂ ಕೂಡಿ ಸ್ವಾತಂತ್ರ್ಯೋತ್ಸವ ಮಾಡಿದರು. ಬೆಳಿಗ್ಗೆ ಧ್ವಜವಂದನೆ, ಪ್ರಭಾತ ಫೇರಿ ವಗೈರೆ ಕಾರ್ಯಗಳು ನಡೆದವು. ಸಂಜೆ ಶಾಲೆಯಲ್ಲಿ ಡಾ॥ ಎಸ್. ಆರ್. ಭಟ್ಟರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಶಾಲಾ ಶಿಕ್ಷಕರೂ ಪಟೇಲರೂ ಸ್ವಾತಂತ್ರ್ಯದ ಮಹತ್ವ ತಿಳಿಸಿ ಹೇಳಿದರು.

ನವಿಲಗೋಣ— ಊರವರೂ ಶಾಲೆಯವರೂ ಕೂಡಿ ಉತ್ಸವ ಮಾಡಿದರು. ಸಂಜೆಯಲ್ಲಿ ಶಾಲೆಯ ಹುಡುಗರ ಮನೋರಂಜನೆಗಳಾದ ಮೇಲೆ ಸಭೆಯಾಯಿತು. ರಾತ್ರಿ ಯಕ್ಷಗಾನ ಆಟವಾಯಿತು.

ಇಡಗುಂಜಿ— ಶಾಲೆಯ ವಿದ್ಯಾರ್ಥಿಗಳೂ ಊರವರೂ ಕೂಡಿ ಬೆಳಿಗ್ಗೆ ಪ್ರಭಾತ ಫೇರಿ, ಧ್ವಜವಂದನೆ, ಮೆರವಣಿಗೆ, ದೇವರಲ್ಲಿ ಪ್ರಾರ್ಥನೆ ಮುಂತಾದ್ದನ್ನು ಮಾಡಿದರು. ಸಂಜೆ ಶಾಲೆಯಲ್ಲಿ ಸಭೆಯಾಗಿ, ಸ್ವಚ್ಛತೆ, ಸಹಕಾರ, ಅಧಿಕಾಧಿಕ ಆಹಾರೋತ್ಪತ್ತಿ, ಮುಂತಾದ ವಿಷಯಗಳ ಮೇಲೆ ಭಾಷಣಗಳಾದವು.

ಜಲವಳ್ಳಿ— ಶಾಲೆಯ ವಿದ್ಯಾರ್ಥಿಗಳೂ, ಗ್ರಾಮಸ್ಥರೂ, ಗ್ರಾಮದ ಜನರೂ ಕೂಡಿ ಉತ್ಸವ ಮಾಡಿದರು. ಎಲ್ಲರೂ ಮೆರವಣಿಗೆಯಿಂದ ಶಂಭುಲಿಂಗ ಶ್ರೀ ಗೋಕರ್ಣ ಕ್ಷೇತ್ರಕ್ಕೆ ಹೋಗಿ ಪ್ರಾರ್ಥನೆ ಮಾಡಿ, ಧ್ವಜಾರೋಹಣ-ಧ್ವಜವಂದನೆಗಳನ್ನು ಮಾಡಿದರು. ನಂತರ ಸಭೆಯಾಗಿ ಭಾಷಣಗಳಾದವು. ರಾ॥ ... ಅವರು ಮಹಾತ್ಮರ ಜೀವನಚರಿತ್ರೆಯನ್ನು ಹೇಳಿದರು.

ಮಾಡಗೇರಿ— ಇಲ್ಲಿಯ ಗಾಂವಠಿ ಶಾಲೆಯವರೂ ಸ್ವಾತಂತ್ರ್ಯೋತ್ಸವ ಜರುಗಿಸಿದರು. ಮುಂಜಾನೆ ಧ್ವಜವಂದನಾದಿ ನಡೆಯಿತು. ಸಂಜೆ ರಾ॥ ಅವಧಾನಿಯವರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಆ ಮೇಲೆ ವ್ಯಾಯಾಮದ ಕಾರ್ಯ ನಡೆಯಿತು.

ಉಪ್ಪೋಣಿ— ಇಲ್ಲಿಯ ಶಾಲೆಯವರು ರಾ॥ ದೇವಿದಾಸ ಉಪ್ಪೋಣಿಯವರ ಅಧ್ಯಕ್ಷತೆಯಲ್ಲಿ ಉತ್ಸವ ಮಾಡಿದರು. ಶಾಲೆಯ ಸ್ವಚ್ಛತೆ, ಪ್ರಭಾತ ಫೇರಿ, ಧ್ವಜವಂದನೆ, ಗಿಡಗಳನ್ನು ನೆಡುವದು ವಗೈರೆ ಕಾರ್ಯಕ್ರಮವಾದ ಮೇಲೆ ಮಧ್ಯಾಹ್ನದ ಸುಮಾರಿಗೆ ಶಾಲೆಯಲ್ಲಿ ಸಾರ್ವಜನಿಕ ಸಭೆಯಾಯಿತು. ಕೆಲವರು ನಮ್ಮ ಸ್ವಾತಂತ್ರ್ಯದ ಮಹತ್ವ ತಿಳಿಸಿ ಹೇಳಿದರು.

ಶಿರಾಲಿ— ಶಾಲೆಯ ವಿದ್ಯಾರ್ಥಿಗಳು ತಮ್ಮ ಧ್ವಜವಂದನ ಮುಗಿಸಿ ಮೆರವಣಿಗೆಯಿಂದ ಅಕೋಳ ಬೈಲಿಗೆ ಬಂದರು. ಅಲ್ಲಿ ಸಾರ್ವಜನಿಕ ಧ್ವಜವಂದನೆಯಾಯಿತು. ಆ ಮೇಲೆ ಶ್ರೀ ಮಾರುತಿ ದೇವರ ಗುಡಿಯಲ್ಲಿ ಪ್ರಾರ್ಥನೆಯಾಯಿತು. ಸಂಜೆ ಶಾಲೆಯಲ್ಲಿ ರಾ॥ ಅಗ್ನಿಯವರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಚಿತ್ರಾಪುರ ಶಾಲೆಯವರೂ ಮೆರವಣಿಗೆ, ಧ್ವಜವಂದನೆ ವಗೈರೆ ಕಾರ್ಯಕ್ರಮಗಳನ್ನು ನೆರವೇರಿಸಿದರು.

ಕೊಪ್ಪ (ಭಟಕಳ ಪೇಟಾ)— ಇಲ್ಲಿಯ ಶಾನಭೋಗ-ಪಟೇಲರು ಜನರನ್ನು ಕೂಡಿಸಿ, ಧ್ವಜವಂದನೆ ವಗೈರೆ ಕಾರ್ಯಕ್ರಮ ಜರುಗಿಸಿದರು. ಕೆಲವು ಸಸಿಗಳನ್ನು ನೆಟ್ಟರು. ಇದೇ ವಾರ ಅಲ್ಲಲ್ಲಿ ಗಿಡಮರಗಳನ್ನು ಹಚ್ಚುವ ಕೆಲಸ ನಡೆಯುವದು.

ಶಿರಸಿ— ಸೋಂದಾ— ಶ್ರೀ ಸ್ವರ್ಣವಲ್ಲಿ ಮಠದಲ್ಲಿ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಶ್ರೀ ಮಠದ ವಿದ್ಯಾರ್ಥಿಗಳೂ ಸೋಂದಾ ಶಾಲೆಯ ವಿದ್ಯಾರ್ಥಿಗಳೂ ಕೂಡಿ ಧ್ವಜವಂದನಾದಿ ಕಾರ್ಯಕ್ರಮಗಳನ್ನು ಯಥಾವಿಧಿ ಜರುಗಿಸಿದರು. ಶ್ರೀ ಸ್ವಾಮಿಯವರು ಪ್ರಸಂಗೋಚಿತ ನಾಲ್ಕು ಮಾತು ಹೇಳಿದರು. ಊರವರ ಉತ್ಸವವೂ ನಡೆಯಿತು. ಮೆರವಣಿಗೆ, ಸಭೆ, ವ್ಯಾಯಾಮ ಮುಂತಾದ ಕಾರ್ಯಕ್ರಮಗಳು ನಡೆದವು. ಸುತ್ತಲಿನ ಹಳ್ಳಿಗಳ ಗ್ರಾಮದ ಜನರೂ ಈ ಉತ್ಸವದಲ್ಲಿ ಸೇರಿದ್ದರು.

ನೀಲೇಕಣಿ— ಶಾಲೆಯ ವಿದ್ಯಾರ್ಥಿಗಳೂ ಜನರೂ ಕೂಡಿ ಉತ್ಸವ ಮಾಡಿದರು. ಶಾಲೆಯಲ್ಲಿ ಮೊದಲು ಧ್ವಜವಂದನೆಯಾಯಿತು. ಆ ಮೇಲೆ ಜನರೆಲ್ಲ ಮೆರವಣಿಗೆಯಿಂದ ನೆಹರು ಚೌಕಿಗೆ ಬಂದು ಅಲ್ಲಿಯೂ ಧ್ವಜಾರೋಹಣ ನೆರವೇರಿಸಿದರು. ಸಂಜೆಯ ಹೊತ್ತು ವಿದ್ಯಾರ್ಥಿಗಳ ಆಟ-ಪಾಟಗಳು ನಡೆದವು. ಆ ನಂತರ ಮೆರವಣಿಗೆಯಿಂದ ಜನರು ಗುಡಿಗೆ ಹೋಗಿ ಪ್ರಾರ್ಥನೆ ಮಾಡಿಕೊಂಡರು.

ಸದಾಶಿವಳ್ಳಿ— ಗ್ರಾಮಸುಧಾರಣಾ ಸಮಿತಿಯವರ ನೇತೃತ್ವದಲ್ಲಿ ಉತ್ಸವ ನಡೆಯಿತು. ಶಾಲೆಯ ವಿದ್ಯಾರ್ಥಿಗಳೂ, ಅಧಿಕಾರಿಗಳೂ, ಊರ ಜನರೂ ಶಾಲೆಯಲ್ಲಿ ಕೂಡಿ ಧ್ವಜವಂದನೆ, ವ್ಯಾಯಾಮ, ಗ್ರಾಮಸ್ವಚ್ಛತೆ ಮುಂತಾದ ಕಾರ್ಯಕ್ರಮವನ್ನು ಜರುಗಿಸಿದರು. ಸ್ವಾತಂತ್ರ್ಯವು ಚಿರಸ್ಥಾಯಿಯಾಗಲೆಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡರು. ಈ ಉತ್ಸವದ ಜೊತೆಗೆ ಗ್ರಾಮ ಸುಧಾರಣಾ ಸಮಿತಿಯ ವಾರ್ಷಿಕ ಸಭೆಯೂ ಆಯಿತು. ಈ ಸಭೆಯಲ್ಲಿ ಬೇಸಾಯ ಇಲಾಖೆಯ ರಾ॥ ಭಟ್ಟ ಮತ್ತು ಭಟ್ಟರು ಹೆಚ್ಚಿನ ಆಹಾರ-ಧಾನ್ಯ ಬೆಳೆಸುವ ಮಹತ್ವ ತಿಳಿಸಿದರು.

ಹೆಬ್ಬತ್ತಿ— ಗ್ರಾಮಸ್ಥ ಜನರೂ ಶಾಲೆಗಳ ವಿದ್ಯಾರ್ಥಿಗಳೂ ಕೂಡಿ ವಿಜೃಂಭಣೆಯಿಂದ ಉತ್ಸವ ಜರುಗಿಸಿದರು. ಶಾಲೆಗಾಗಿ ಒಂದು ಹೊಸ ಕಟ್ಟಡ ಕಟ್ಟಿಸಬೇಕೆಂಬ ತೀರ್ಮಾನವಾಯಿತು. ಒಂದು "ಭಾರತ" ವಾಚನಾಲಯ ತೆರೆಯಬೇಕೆಂದೂ ಗೊತ್ತಾಯಿತು.

ತಿಬ್ಬಳ್ಳಿ— ತಿಬ್ಬಳ್ಳಿ, ಹೆಗಡೂರ, ಕಾನಗಲ್‌ಕೊಪ್ಪ, ಶಿವಗೋಡಬೈಲು ಈ ಗ್ರಾಮಗಳ ಗ್ರಾಮಸ್ಥರೂ ಜನರೂ ಕೂಡಿ ತಿಬ್ಬಳ್ಳಿ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ ಮಾಡಿದರು. ಶಾಲೆಯ ವಿದ್ಯಾರ್ಥಿಗಳೊಂದಿಗೆ ಜನರು ಗ್ರಾಮ ಸಂಕೀರ್ತನೆ, ಧ್ವಜವಂದನೆ, ವ್ಯಾಯಾಮ, ಸಭೆ ಮುಂತಾದ ಕಾರ್ಯಕ್ರಮಗಳನ್ನು ಜರುಗಿಸಿದರು.

ಹೊಸತೋಟ— ಶಾಲೆಯವರು ಸಂಭ್ರಮದ ಸ್ವಾತಂತ್ರ್ಯೋತ್ಸವ ಜರುಗಿಸಿದರು. ಸಂಜೆ ರಾ॥ ಗಣಪತಿ ಭಟ್ಟರ ಓಣಿಯ ಮನೆಯಲ್ಲಿ ಸಭೆಯಾಯಿತು. ಹೊಸತೋಟ, ಹೆಗ್ಗರ ಮತ್ತು ಬಾಳೆಕೊಪ್ಪ ಶಾಲೆಗಳ ಹುಡುಗರ ಆಟ ಪಾಟ-ಮನೋರಂಜನೆಗಳಾದವು.

ಸಿದ್ದಾಪುರ— ಮಲವಳ್ಳಿ— ಈ ಊರಲ್ಲಿ ಸಡಗರದ ಸ್ವಾತಂತ್ರ್ಯೋತ್ಸವ ನಡೆಯಿತು. ಕಲಗಾರ ಶಾಲೆಯ ಮುಂದೆ ಧ್ವಜವಂದನೆಯಾಯಿತು. ಸಂಜೆಯಲ್ಲಿ ಸಭೆಯಾಗಿ ಆಹಾರೋತ್ಪಾದನೆಯನ್ನು ಹೆಚ್ಚಿಸುವದು, ಗಿಡಮರಗಳನ್ನು ನೆಡುವದು ಮುಂತಾದ ವಿಷಯಗಳ ಮೇಲೆ ಹಲವರ ಭಾಷಣಗಳಾದವು.

ಹಿರೇಮಠ— ಇಲ್ಲಿಯ ಶಾಲೆಯಲ್ಲಿ ಊರವರು ವಿಜೃಂಭಣೆಯಿಂದ ಉತ್ಸವ ಮಾಡಿದರು. ಶಾಲೆಯಲ್ಲಿ ಒಂದು ವಾಚನಾಲಯ ತೆರೆಯಬೇಕೆಂದೂ ಗೊತ್ತಾಗಿದೆ.

ಹಲಗೇರಿ— ಜನರೂ ಶಾಲೆಯ ಶಿಕ್ಷಕ-ವಿದ್ಯಾರ್ಥಿಗಳೂ ಸಹಕಾರದಿಂದ ಉತ್ಸವ ಮಾಡಿದರು. ಶಾಲೆಯ ಮುಂದುಗಡೆ ಅಡಿಕೆ, ತೆಂಗು ಮುಂತಾದ ಹಲವು ಜಾತಿಯ ಹಲವಾರು ಗಿಡಗಳನ್ನು ನೆಡಲಾಯಿತು. ರಾ॥ ರಾ. ವೈ. ಪಾಲಗಳ್ಳಿಯವರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಅಹಂಭಾವವನ್ನು ಬಿಟ್ಟು ಬಾಳಲು ಅಧ್ಯಕ್ಷರು ಬೋಧಿಸಿದರು. ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳೂ ನಡೆದವು. ರಾತ್ರಿಯಲ್ಲಿ "ಕೃಷ್ಣ ಸಂಧಾನ" ಪ್ರಸಂಗ ನಡೆಯಿತು.

ಮುಂಡಗೋಡ— ಪಾತೂರ— ಈ ಊರಲ್ಲಿ ಉತ್ಸಾಹಪೂರ್ಣ ಸ್ವಾತಂತ್ರ್ಯೋತ್ಸವ ನಡೆಯಿತು. ಬೆಳಿಗ್ಗೆ ಫೇರಿ, ಧ್ವಜವಂದನೆ, ವ್ಯಾಯಾಮ ವಿಧಗಳು ನಡೆದವು. ಸಂಜೆ ವಾದ್ಯ-ಭಜನೆಗಳೊಂದಿಗೆ ದೇವರ ಪಲ್ಲಕ್ಕಿ ಉತ್ಸವವಾಯಿತು. ಉತ್ಸವ ತಿರುಗಿ ಗುಡಿಗೆ ಬಂದ ಮೇಲೆ ಅಲ್ಲಿ ಸಭೆಯಾಯಿತು. ರಾ॥ ಹಿರೇಮಠ ಇವರು ಆಹಾರೋತ್ಪಾದನೆ ಹೆಚ್ಚಿಸುವ ಕ್ರಮಗಳನ್ನು ತಿಳಿಸಿ ಹೇಳಿದರು.

ಮಳಗಿ— ಈ ಊರಲ್ಲಿ ಸಂಭ್ರಮದ ಸ್ವಾತಂತ್ರ್ಯೋತ್ಸವ ದಿನದ ಉತ್ಸವ ಜರುಗಿತು. ರಾ॥ ಸಿದ್ದಾಪುರ ಇವರು ೨ ತೆಂಗಿನ ಸಸಿಗಳನ್ನು ಶಾಲೆಗೆ ದಾನವಾಗಿ ಕೊಟ್ಟರು. ಸಭೆಯ ಕೆಲಸ ಮುಗಿದ ಮೇಲೆ ಅವನ್ನು ಪ್ರವಿಧಿಯಿಂದ ಶಾಲೆಯ ಆವಾರದಲ್ಲಿ ನೆಡಲಾಯಿತು. ಬಳಿಕ ಶಾಲೆಯಲ್ಲಿ ನಾನಾ ವಿನೋದಾವಳಿಗಳಾದವು. ರಾ॥ ಸಿದ್ದಾಪುರ ಇವರು ಹಿರಿಯ ಹಂಚಿದರು. ಅಲ್ಲದೆ ರಾ॥ ನಾಡಿಗರು ಹುಡುಗರಿಗಾಗಿ ರೂ. ೧೦ ಮುಂಗಡ ಧ್ಯಾನಕರ ಕಡೆ ಕೊಟ್ಟಿದ್ದಾರೆ.

ಹಳಿಯಾಳ— ದಾಂಡೇಲಿ— [illegible] ದ್ವಜವಂದನ ಮಾಡಿ, [illegible] ಬಳಿಕ ಎಲ್ಲರಿಗೆ ಸಿಹಿ ಹಂಚಲಾಯಿತು. [illegible] ಸಾರ್ವಜನಿಕರಿಗೆ ಒಂದು ಧ್ವಜಸ್ತಂಭ ಕಟ್ಟಿಸಿಕೊಟ್ಟಿದ್ದಾರೆ.

[illegible]— ಇಲ್ಲಿಯ ಜನರೂ ಶಾಲೆಯವರೂ [illegible] ಉತ್ಸವ ಮಾಡಿದರು. [illegible] ಧ್ವಜವಂದನೆ [illegible] ವಿದ್ಯಾರ್ಥಿಗಳ ನಾಟ್ಯ ಪ್ರಯೋಗಗಳಾದವು.

ಅಂಕೋಲಾ— ಅವರ್ಸಾ— [illegible] ಶಾಲೆಯಲ್ಲಿ ಆ ಶಾಲೆಯವರೂ [illegible] ಉತ್ಸವ ಮಾಡಿದರು. [illegible] ಧ್ವಜವಂದನೆಯಾದ ಮೇಲೆ ಶಾಲೆಯ [illegible] ಅಧ್ಯಕ್ಷತೆಯಲ್ಲಿ ಸಭೆಯಾಗಿ ಶಾಲೆ ಮಕ್ಕಳ ವಿವಿಧ [illegible] ಕೆಲವರ ಭಾಷಣಗಳೂ ಆದವು. [illegible] ಊರ ಮಹಾಜನರೂ ಈ ಉತ್ಸವದಲ್ಲಿ [illegible].

[illegible]— ಇಲ್ಲಿಯ ೨ನೇ ನಂಬರ ಶಾಲೆಯ [illegible] ಅಧ್ಯಕ್ಷತೆಯಲ್ಲಿ ಉತ್ಸವ [illegible] ಅಧ್ಯಕ್ಷರು ಸ್ವಾತಂತ್ರ್ಯದ ಮಹತಿಯನ್ನು [illegible].

[illegible]— [illegible] ಸಹಾಯದಿಂದ ಇಲ್ಲಿಯ ಶಾಲೆಯವರು [illegible] ಉತ್ಸವ ಮಾಡಿದರು. ಧ್ವಜವಂದನೆಯಾದ [illegible] ಮುಖ್ಯ [illegible] ದಿವಸ [illegible] ಕಾರ್ಯಕ್ರಮ ನಡೆಯಿತು.

[illegible]— ಇಲ್ಲಿಯ ಗಾಂವಠಿ ಶಾಲೆಯವರು [illegible] ಸಹಾಯದಿಂದ ಉತ್ಸವ ಮಾಡಿದರು.

ರೂ. ೨೫ ಇನಾಮು!

[illegible] ಎಮ್ಮೆಯು [illegible] ಎಮ್ಮೆಯು [illegible] ರೂ. [illegible] ಕೊಡುವೆವು.

[illegible], ತಾ. ೧೮-೮-೪೯

ಗೋವಿಂದ ವೆಂಕಟರಮಣ ರಾಯಕರ,

ಸಾ|| ಹರನೀರ, ಪೋ. ಧಾರೇಶ್ವರ.

ನಮ್ಮಲ್ಲಿ ಕತ್ತದಿಂದ ತಯಾರಿಸಿದಂಥ **ಚಕಾರ್** ಹುರಿ, ಬಾವಿ ಹಗ್ಗ, ಬ್ರಶ **ಮಟ್ಟ**, ಮೆಟಿಂಗ ಮುಂತಾದವುಗಳು **ಯೋಗ್ಯ** ದರದಲ್ಲಿ ಸಿಗುತ್ತವೆ.

[illegible]ಸನ್, ಕೊಯರ್ ಸೊಸೈಟಿ ಲಿಮಿಟೆಡ್,

ಹೊನ್ನಾವರ. (ಉ ಕ.)

ಸ್ಥಾನಿಕ ವೃತ್ತಾಂತ.

ಕುಮಟಾ— ಆಗಾಗ ಮಳೆಯಾಗುತ್ತಿದ್ದರೂ ಕಳೆದ ವಾರ ಮಳೆ ಕಡಿಮೆ [illegible] ಕಡಿಮೆಯಾಗಿಲ್ಲ. ಆದುದರಿಂದ ಈ ವಾರ ಮಳೆ ಹೆಚ್ಚಾಗುವ ಸಂಭವವಿದೆ.

ಶುಕ್ರವಾರ ದಿನ [illegible] ವ್ಯಾಖ್ಯಾನ [illegible].

ಕಳೆದ ಗುರುವಾರದಿಂದ [illegible] ಶಿಕ್ಷಕರ [illegible] ಕೇಂದ್ರವೊಂದು ತೆರೆಯಲ್ಪಟ್ಟಿದೆ. [illegible] ಕೇಂದ್ರದ ಉದ್ಘಾಟನೆಯಾಯಿತು.

[illegible] ಬೇಕಾಗಿ ಅವರ [illegible].

ಹೊನ್ನಾವರ— [illegible] ನ್ಯಾಯಾಸನದಲ್ಲಿ [illegible] ದಿವಾಣಿ [illegible] ಅಧಿಕಾರವಿಲ್ಲೆಂದು [illegible] ನ್ಯಾಯಾಧೀಶ ರಾ|| [illegible] ದಿವಾಣಿ ಕೋರ್ಟಿಗೆ ಅಧಿಕಾರವುಂಟೆಂದು [illegible].

[illegible] ಶಿಕ್ಷಕರ [illegible] ಕೇಂದ್ರದ ಉದ್ಘಾಟನೆಯು [illegible] ದಿವಾಣಿ ನ್ಯಾಯಾಧೀಶ ರಾ|| [illegible] ಅಧ್ಯಕ್ಷತೆಯಲ್ಲಿ ನೆರವೇರಿತು.

[illegible] ಸರಕಾರಿ ಸಂಘದ [illegible] ಬಹಳ ನಡೆಯುತ್ತದೆಂದೂ [illegible] ಧಾನ್ಯ [illegible] ಧಾನ್ಯ [illegible] ಗ್ರಾಮದ ಕೆಲವು [illegible].

ಕಳೆದ ನವಂಬರ ತಿಂಗಳಲ್ಲಿ ([illegible]) [illegible] ಅಕ್ಕಿ-ಭತ್ತವನ್ನು ಇಲ್ಲಿಯ ಅಧಿಕಾರಿಗಳು [illegible] ಇನ್ನೂ [illegible] ! [illegible] ಅಕ್ಕಿ-ಭತ್ತಗಳನ್ನು [illegible] ಸರಕಾರಕ್ಕೆ [illegible] ಅಕ್ಕಿ-ಭತ್ತಗಳನ್ನು ಹಾಗೆಯೇ [illegible] ಆಹಾರ ಧಾನ್ಯಗಳ [illegible] ? [illegible] ?

ಭಟಕಳ— ಇಲ್ಲಿಯ [illegible] ಕೋರ್ಟಿನ ನ್ಯಾಯಾಧೀಶರಾಗಿದ್ದ ರಾ|| [illegible] ಸುದ್ದಿ [illegible] ಕೋರ್ಟಿನಲ್ಲಿ ವ್ಯವಹಾರವುಳ್ಳ ಬಹಳ ಮಂದಿಗೆ ಆನಂದವಾಗಿದೆ !

— [illegible] ಕಳೆದ ವಾರ [illegible].

(೭ನೇ ಪುಟದಿಂದ ಮುಂದರಿಸಿದ್ದು.)

ಬೇಕೆಂದು ರಾ|| ನಾಡಿಗ ಶ್ರೀನಿವಾಸರಾಯರು ಸೂಚಿಸಿದರು. ಈ ವಿಷಯ ತಮಗೆ ಸಂಬಂಧಪಟ್ಟಿದ್ದಲ್ಲವೆಂದು ಹೇಳಿ ಮಂತ್ರಿಗಳು ಜಾರಿಕೊಳ್ಳಲು ಯತ್ನಿಸಿದರು ! ಎಲ್ಲ ಮಂತ್ರಿಗಳು ಸಾಮೂಹಿಕವಾಗಿ ಎಲ್ಲ ಖಾತೆಗಳ [illegible] ಬಗ್ಗೆ ಹೊಣೆಗಾರರಿರುತ್ತಾರೆಂದೂ ಆಹಾರೋತ್ಪತ್ತಿ ಹೆಚ್ಚಿಸುವ ಪ್ರತಿಯೊಂದು ಮಾರ್ಗ ಬೇಸಾಯ ಇಲಾಖೆಗೆ ಸಂಬಂಧಪಡುತ್ತದೆಂದಾಗಿ ಸಭಿಕರು ನಿರ್ಧಾರದಿಂದ ನುಡಿಯಲಾಗಿ, ಮಂತ್ರಿಗಳಿಗೆ ಸಿಟ್ಟು ಬಂತು. ಕೊನೆಗೆ ನಿರುಪಾಯರಾಗಿ, "ನೀವು ಅರ್ಜಿ ಕೊಟ್ಟಲ್ಲಿ ಶ್ರೀ|| ಮಂಡರಾಜ ದೇಸಾಯಿಯವರಿಗೆ ತಿಳಿಸುತ್ತೇನೆ"ಂದು ಹೇಳಿ ಆ ಪ್ರಕರಣ ಮುಗಿಸಿದರು !

ಗೆಣಸು ಬೆಳೆಸುವ ವಿಷಯ ಚರ್ಚೆಗೆ ಬರಲಾಗಿ, "ಗೆಣಸು ಬೆಳೆಸಲಿಕ್ಕೆ ಭೂಮಿಯನ್ನು ಹಸನ ಮಾಡಿದರೂ ಗೆಣಸಿನ ಬಳ್ಳಿ ಸಿಗದೆ ನಾವು ಮಾಡಿದ ಖರ್ಚು ಮತ್ತು ಪಟ್ಟ ಕಷ್ಟ ನಿರರ್ಥಕವಾಯಿತೆಂದು ರಾ|| ನಾಡಿಗರು ದೂರಿದರು. "ಮುಂದಿನ ವರ್ಷ ಬೇಕಷ್ಟು ಬಳ್ಳಿ ಪೂರೈಸುತ್ತೇವೆಂದು" ಮಂತ್ರಿಗಳು ಆಶ್ವಾಸನ ಕೊಟ್ಟರು ! ಬೇಸಾಯಗಾರರಿಗೆ ಅವಶ್ಯವುಳ್ಳ ಕಬ್ಬಿಣ, ಉಕ್ಕು, ಸಿಮೆಂಟಗಳು ಸಕಾಲದಲ್ಲಿ ಸಿಗದೆ ಇದ್ದದರಿಂದ ಅವನ್ನು ಪೂರೈಸಲಿಕ್ಕೆ ಸಾಧ್ಯವಾಗಲಿಲ್ಲೆಂದೂ ಇನ್ನು ಮುಂದೆ ಅವನ್ನು ಪೂರೈಸಲಾಗುವದೆಂದೂ ಆಶ್ವಾಸನ ಸಿಕ್ಕಿತು. ಸರಿಗೆ-ಬೇಲಿಯನ್ನು ಆಣೆ ೮ಕ್ಕೊಂದು ಚದುರ ಫೂಟಿನಂತೆ ಕೊಡುವೆವೆಂದೂ ಮಂತ್ರಿಗಳು ಹೇಳಿದರು. ಈ ದರ ಹೆಚ್ಚಾಯಿತೆಂದು ಸಭಿಕರು ದೂರಿದರು. ಫೂಟಿಗೆ ೧೨ ಆಣೆ ಬೆಲೆ ಬೀಳುತ್ತದೆಂದೂ ಸರಕಾರವು ೪ ಆಣೆ ನಷ್ಟ ಮಾಡಿಕೊಂಡು ೮ ಆಣೆಗೊಂದು ಫೂಟಿನಂತೆ ಮಾರುತ್ತವೆಂದೂ ಮಂತ್ರಿಗಳು ಪ್ರತ್ಯುತ್ತರ ಕೊಟ್ಟರು.

ಮುಂದಿನ ಬೇಸಾಯ ಪ್ರದರ್ಶನವನ್ನು ಕುಮಟೆಯಲ್ಲಿ ಏರ್ಪಡಿಸಬೇಕಾಗಿ ಹಿಂದೆ ತೀರ್ಮಾನವಾಗಿದ್ದರೂ ಅದನ್ನು ಇಂದೂರಿನಲ್ಲಿ ಮಾಡುವದು ಪ್ರಶಸ್ತವೆಂದು ಮಂತ್ರಿಗಳು ಹೇಳಿ, ಅಲ್ಲಿ ಪ್ರದರ್ಶನ ಆಗುವದಾದರೆ ಹಿಂದುಸ್ಥಾನ ಸರಕಾರದ ಆಹಾರ ಮಂತ್ರಿ ಮಾನ್ಯ ಜಯರಾಮದಾಸ ದೌಲತರಾಮರಿಗೆ ನಿಮಂತ್ರಿಸಬಹುದೆಂದೂ, ಪ್ರದರ್ಶನಕ್ಕೆ ಸೇರುವ ಜನರಿಗೆ ಅಲ್ಲಿಯ ಕಾರ್ಯ ನೋಡಿಕೊಳ್ಳಲು ಅವಸರ ಸಿಗುವದೆಂದೂ ನುಡಿದರು. ಕೊಂಗ್ರೆಸ ಸಮಿತಿಗಳೂ ಗ್ರಾಮೋದ್ಧಾರ ಮಂಡಳದವರೂ ಆಹಾರೋತ್ಪತ್ತಿ ಹೆಚ್ಚಿಸಲು ನಡಿಸುವ ಕಾರ್ಯದ ಪ್ರಗತಿಯನ್ನು ತಿಳಿಸಲಿಕ್ಕೆ ಜಿಲ್ಲಾ ಕೊಂಗ್ರೆಸ ಸಮಿತಿಯ ಅಧ್ಯಕ್ಷರಾದ ರಾ|| ಕೇಶವೈನರಿಗೆ ಆಜ್ಞಾಪಿಸಿದರು. "ಹೆಚ್ಚಿಚ್ಚು ಆಹಾರ-ಧಾನ್ಯ ಬೆಳೆಸುವದರ ಪ್ರಚಾರ ಮಾಡಲು ಪ್ರಥಮ ಪರಿಷತ್ತು ಇದೇ ಸ್ಥಳದಲ್ಲಿ ಕಳೆದ ಮೇ ತಿಂಗಳೊಳಗೆ ಕೂಡಿತ್ತು. ಅಂದಿನಿಂದ ಇಂದಿನ ತನಕ ಯಾವದೇ ಪ್ರತ್ಯಕ್ಷ ಯಾ ಅಪ್ರತ್ಯಕ್ಷ ಕೆಲಸ ನಡೆದದ್ದು ತೋರುವದಿಲ್ಲ. ಇನ್ನು ಮುಂದೆ ಮಂತ್ರಿಗಳ ಅನುಜ್ಞೆಯಂತೆ ಕೆಲಸ ಮಾಡತೊಡಗುತ್ತೇವೆ ತಿಂಗತಿಂಗಳಿಗೆ ವರದಿಯನ್ನೊಪ್ಪಿಸುತ್ತೇವೆ" ಎಂಬುದಾಗಿ ರಾ|| ಕೇಶವೈನವರು ನಂಬಿಗೆ ಕೊಟ್ಟರು. ಗ್ರಾಮೋದ್ಧಾರ ಮಂಡಳದ ಸಭಾಸದರು ಮಾತ್ರ ಏನೂ ನಂಬಿಗೆ ಕೊಡಲಿಲ್ಲ ! ಗ್ರಾಮೋದ್ಧಾರ ಮಂಡಳದ ಸಭಾಸದರು ಸ್ವಂತ ಉಪಯೋಗಕ್ಕೆ ಅವಶ್ಯವುಳ್ಳ ಕಾಯಿಪಲ್ಲೆಯನ್ನಾದರೂ ಬೆಳೆಸಿಕೊಳ್ಳಬೇಕೆಂದೂ ಅದನ್ನೂ ಅವರು ಮಾಡದಿದ್ದರೆ ಗ್ರಾಮೋದ್ಧಾರ ಮಂಡಳದಲ್ಲಿ ಉಳಿಯಲು ಅವರು ಅನರ್ಹರಾಗುವರೆಂದೂ ಮಂತ್ರಿಗಳು ಉದ್ಗರಿಸಿ ಸಭೆಯನ್ನು ವಿಸರ್ಜಿಸಿದರು. ಮರುದಿನ ಮಂತ್ರಿಗಳು ಇಂದೂರಿಗೆ ಭೆಟ್ಟಿ ಕೊಟ್ಟು ಧಾರವಾಡಕ್ಕೆ ಹೋದರು.

ಹೆಚ್ಚೆಚ್ಚು ಆಹಾರಧಾನ್ಯ ಬೆಳಸಿರಿ !

ಶಿರ್ಶಿಯಲ್ಲಿ ಮಾನ್ಯ ಮಲ್ಲನಗೌಡರು

ಮುಂಬಯಿ ಪ್ರಾಂತದ ಬೇಸಾಯ ಮಂತ್ರಿ ಮಾನ್ಯ ಮಲ್ಲನಗೌಡಾ ಪಾಟೀಲರು ಹೆಚ್ಚೆಚ್ಚು ಆಹಾರಧಾನ್ಯ ಬೆಳಸುವ ಯೋಜನೆಯ ಪ್ರಚಾರಕ್ಕಾಗಿ ತಾ. ೧೫-[illegible]೪೯ರಂದು ಶಿರ್ಶಿಯಲ್ಲಿ ಗ್ರಾಮೋದ್ಧಾರ ಮಂಡಳದ ಸಭೆ ಕರೆದಿದ್ದರು. ಸಂಜೆ ೫ ಘಂಟೆಗೆ ಸಭೆಯ ಕಾರ್ಯಕ್ಕೆ ಪ್ರಾರಂಭವಾಯಿತು. ಮಂಡಳದ ಸಭಾಸದರಲ್ಲದೆ ಅನೇಕ ಜಿಲ್ಹಾಧಿಕಾರಿಗಳೂ ಬೇಸಾಯ ಅಧಿಕಾರಿಗಳೂ ಬೇರೆ ಕೆಲವು ಪ್ರಮುಖರೂ ಈ ಸಭೆಗೆ ಬಂದಿದ್ದರು.

ಮಂಡಳದ ಕಾರ್ಯದರ್ಶಿ ರಾ|| ಸೊಳಗಾರ ವೆಂಕಟರಮಣ ಹೆಗಡೆಯವರು ಮಂತ್ರಿಗಳಿಗೆ ಸಭಿಕರ ಪರಿಚಯ ಮಾಡಿಕೊಟ್ಟ ಬಳಿಕ ಮಂತ್ರಿಗಳು ಪ್ರಾಸ್ತಾವಿಕ ಭಾಷಣ ಮಾಡಿ, ಉತ್ತರ ಜಿಲ್ಹಾ ಬೇಸಾಯ ಅಧಿಕಾರಿಗಳಾಗಿದ್ದ ಮತ್ತು ಈಗ ಮಲೆನಾಡಿನ ಅಭಿವೃದ್ಧಿ ಮಂಡಳದ ಕಾರ್ಯಕರ್ತರಾಗಿ ನೇಮಿಸಲ್ಪಟ್ಟಿರುವ ರಾ|| ಹಬ್ಬುರವರು ಎಲ್ಲ ವಿಷಯಗಳನ್ನು ತಿಳಿಹೇಳುವರೆಂದು ಹವಾಲೆ ಕೊಟ್ಟರು. ರಾ|| ಹಬ್ಬುರವರು ದಿಲ್ಲಿಯೊಳಗಿನ ಸಭೆಯ ವೃತ್ತಾಂತ ಹೇಳಿ, ಈ ಜಿಲ್ಹೆಯೊಳಗಿನ ಮಾಹಿತಿಯ ಕೆಲವು ಕೋಷ್ಟಕಗಳನ್ನು ಓದಿ ಹೇಳಿದರು. ಸುಧಾರಿಸಿದ ಬೀಜ, ರಸಾಯನ ಗೊಬ್ಬರ, ಮಿಶ್ರಣ ಗೊಬ್ಬರ, ಸಾಗುವಳಿಯ ಬಗ್ಗೆ ಕೊಟ್ಟ ಕ್ಷೇತ್ರ, ತಗಾವಿ ಸಾಲ ಮುಂತಾದವುಗಳ ವಿವರಗಳನ್ನು ಹೇಳಿದರು. ತಾ. ೫-೮-೪೯ನೇ ತನಕ ರೂ. ೩,೭೪,೩೩೧ರಷ್ಟು ತಗಾವಿ ಸಾಲ ಕೊಡಲಾಗಿದೆ. ಸರಕಾರಿ ಪಡ ಭೂಮಿ ೪೯,೨೫೭ ಎಕರೆಗಳಷ್ಟಿದ್ದು ಅದರಲ್ಲಿ ೪,೫೬೪ ಎಕರೆ ಭೂಮಿ ಈಗಾಗಲೇ ಸಾಗುವಳಿಗೆ ಕೊಟ್ಟಿದೆ. ೨೨೪೭ ಟನ್ ರಾಸಾಯನಿಕ ಗೊಬ್ಬರ ಹಂಚಬೇಕಾಗಿ ನಿರ್ಣಯಿಸಿ, ೨೨೨೪ ಟನ್ನ ಗೊಬ್ಬರ ೮೭ ಕೇಂದ್ರಗಳಲ್ಲಿ ತಂದಿಟ್ಟಿತ್ತು. ಅದರಲ್ಲಿ ೧೧೨೦ ಟನ್ನ ಹಂಚಲ್ಪಟ್ಟಿದೆ. ಹಳಿಯಾಳದೊಳಗೆ ೩೧೭ ಟನ್ನ ಗೊಬ್ಬರ ಹಂಚಬೇಕೆಂದು ನಿರ್ಣಯಿಸಿತ್ತು. ಆದರೆ ಈ ವರೆಗೆ ೨೧ ಟನ್ನ ಗೊಬ್ಬರ ಖರ್ಚಾಗಿದೆ! ಒಕ್ಕಲತನದ ಕಾನೂನಿನ ಮೂಲಕ ಒಡೆಯ-ಒಕ್ಕಲಿಗರೊಳಗೆ ತಂಟೆಗಳಾಗಿರುವದರಿಂದಲೇ ಅಪೇಕ್ಷಿಸಿದಷ್ಟು ಗೊಬ್ಬರ ಖರ್ಚಾಗಲಿಲ್ಲೆಂದು ರಾ|| ಹಬ್ಬುರವರು ಹೇಳಿದರು.

ಆ ಮೇಲೆ ಒಂದೊಂದೇ ವಿಷಯದ ಚರ್ಚೆಗಾರಂಭವಾಯಿತು. ಸುಧಾರಿಸಿದ ಬೀಜದ ಭತ್ತ ಕುಮಟೆಯೊಳಗಿನ ಬೇಸಾಯ ಪ್ರಯೋಗದ ಹೊಲದಲ್ಲಿ ಬೇಕಷ್ಟು ತಯಾರಾಗುವದಿಲ್ಲ. ಕಾರಣ ಹೊಲದಿಂದ ಸುಧಾರಿಸಿದ ಬೀಜಗಳನ್ನು ಕೊಂಡು ಹೋದ ರೈತರು ನಾಲ್ಮಡಿ ಬೀಜ ತಂದು ಕೊಡಬೇಕಾಗಿ ಬೇಸಾಯ ಇಲಾಖೆಯವರು ನಿಯಮ ಮಾಡಿದ್ದಾರೆ. ನಾಲ್ಮಡಿ ಬೀಜದ ಈ ಎತ್ತುವಳಿಯಿಂದ ರೈತರಿಗೆ ಕಷ್ಟವಾಗುತ್ತದಾಗಿ ಆಕ್ಷೇಪ ಬಂತು. ಈ ಬೀಜಕ್ಕಾಗಿ ೧೦೦ಕ್ಕೆ ೧೫ರಷ್ಟು ಹೆಚ್ಚಿನ ದರ ಕೊಡುತ್ತಿರುವದರಿಂದ ರೈತರಿಗೆ ಕಷ್ಟವಿಲ್ಲೆಂದು ಅಧಿಕಾರಿಗಳ ಖುಲಾಸೆಯಾಯಿತು.

ರಾಸಾಯನಿಕ ಗೊಬ್ಬರದಿಂದ ಭೂಮಿ ಸತ್ವಹೀನವಾಗುತ್ತದೆಂದು ಬೇಸಾಯ ಶಾಸ್ತ್ರಜ್ಞ ರಾ|| ನಾಡಿಗ ಶ್ರೀನಿವಾಸರಾಯರು ತಮ್ಮ ಅನುಭವದ ಆಧಾರದಿಂದ ಹೇಳಿದರು. ಗೊಬ್ಬರ ಹಾಕಿದ ವರ್ಷ ಉತ್ಪತ್ತಿ ಹೆಚ್ಚುತ್ತಿದೆ; ಆದರೆ ಮುಂದೆ ಬೆಳೆ ಕುಗ್ಗುತ್ತ ನಡೆಯುತ್ತಿದೆ! ಭೂಮಿಯಲ್ಲಿ ಕಾವು ಉಳಿಯುವದಿಲ್ಲ. ಈ ಬಗ್ಗೆ ಸಂಶೋಧನ ನಡೆಸಿ ರಸಾಯನದ ಗೊಬ್ಬರದಿಂದ ಭೂಮಿಯ ಸತ್ವಗಳ ಮೇಲೆ ಆಗುವ ಪರಿಣಾಮಗಳನ್ನು ನೋಡಲು [illegible] ನಾಡಿಗರು ವಿಗ್ರಹಿಸಿದ ಪ್ರತಿಪಾದಿಸಿದರು. ಎಲ್ಲ ಕಡೆ ರಸಾಯನದ ಗೊಬ್ಬರಕ್ಕೆ ಹೆಚ್ಚೆಚ್ಚು ಬೇಡಿಕೆ ಯಿರುವದರಿಂದ ರಾ|| ನಾಡಿಗರು ಇದರ ಪ್ರಚಾರ ಮಾಡಿ [illegible] ಮಂತ್ರಿಗಳು ಹೇಳಿದರು.

ಹೊಸ ಸಮೂಹದ ಗೊಬ್ಬರದ ಕುಣಿಗಳನ್ನು ತೋಡಿ ಗೊಬ್ಬರ ತಯಾರಿಸುವವರಿಗೆ ಕುಣಿ ಒಂದಕ್ಕೆ ರೂ. ೩ ರಂತೆ ಸಹಾಯ-ಧನ ಕೊಡಬೇಕೆಂದು ಗೊತ್ತಾಗಿದೆ. ಈ ಸಹಾಯ ಧನದ ಮಿತಿಯನ್ನು ರೂ. ೫ಕ್ಕೆ ಏರಿಸಬೇಕಾಗಿ ಬಂದ ಸೂಚನೆಯನ್ನು ಮಂತ್ರಿಗಳು ವಿರೋಧಿಸಿದರು. ೨೦,೦೦೦ ಕುಣಿಗಳನ್ನು ಕಟ್ಟಿಸಬೇಕಾಗಿ ಸಂಕಲ್ಪವಿತ್ತು. ಆದರೆ ಈತನಕ ಬರೇ ೫೬೦ ಕುಣಿಗಳು ತೋಡಲ್ಪಟ್ಟಿವೆ. ಕುಣಿ ಗೊಬ್ಬರದಿಂದ ಭೂಮಿಯ ಉತ್ಪತ್ತಿ ಬೆಳೆಯುವದಲ್ಲದೆ ಭೂಮಿಯ ತಂಪು ಹಾಗೆಯೇ ಉಳಿಯುತ್ತಿರುವದರಿಂದ ಹೆಚ್ಚೆಚ್ಚು ಗೊಬ್ಬರದ ಕುಣಿಗಳನ್ನು ತೋಡಿಸಬೇಕಾಗಿ ಸಭೆಯ ಅಭಿಪ್ರಾಯವಾಯಿತು. ಗ್ರಾಮೋದ್ಧಾರ ಮಂಡಳದವರು ಸ್ವತಃ ಶ್ರಮ ಮಾಡಿ ಕುಣಿಗಳನ್ನು ಅಗೆಸಬೇಕಾಗಿ ಮಂತ್ರಿಗಳು ಬೋಧಿಸಿದರು.

ಬಳಿಕ ಬಂಧಾರೆ ಯೋಜನೆ ಚರ್ಚೆಗೆ ಬಂತು. ಈ ಯೋಜನೆಗಾಗಿ ರೂ. ೫೦ ಸಾವಿರ ಸಹಾಯ-ಧನ ಮಂಜೂರಿ ಆಗಿದೆ. ಈತನಕ ೮೭೮ ಕಡೆ ಕಟ್ಟು ಹಾಕಿ ೩೮೦೭ ಎಕರೆ ಭೂಮಿಗೆ ನೀರು ಉಣಿಸಲಾಗಿದೆ. ಅಡಿಕೆ ತೋಟಗಳಿಗೂ ಬಾಳೆ ತೋಟಗಳಿಗೂ ಈ ಯೋಜನೆಯ ಪ್ರಯೋಜನ ಸಿಗಬೇಕಾಗಿ ಕೆಲವು ಸಭಿಕರು ವಾದಿಸಿದರು. ಆದರೆ ಅಡಿಕೆ-ಬಾಳೆಗಳು ಆಹಾರ-ಧಾನ್ಯಗಳಲ್ಲಿ ಸೇರ್ಪಡೆಯಾಗುವದಿಲ್ಲ, ಆದರೂ ಬಾಳೆಯು ಇತ್ತಲಾಗಿ ಆಹಾರ ಸಾಮಗ್ರಿಯಲ್ಲಿ ಸೇರುತ್ತದೆಂದು ಹಿಂದುಸ್ಥಾನ ಸರಕಾರದ ಮುಖ್ಯ ಮಂತ್ರಿಗಳು ಹೇಳಿರುವದರಿಂದ ಬಾಳೆಯ ತೋಟಗಳಿಗೆ ಯೋಜನೆಯ ಲಾಭ ಕೊಡುವೆನಾಗಿ ಮಂತ್ರಿಗಳು ನುಡಿದರು. ಅಡಿಕೆಯ ತೋಟಗಳಲ್ಲಿ ಬಾಳೆಗಳಿದ್ದರೆ ಆ ಲಾಭ ಸಿಗುವಂತಿಲ್ಲೆಂದೂ ಖುಲಾಸೆ ಮಾಡಿದರು.

ಕೆರೆ-ಬಾವಿಗಳನ್ನು ದುರುಸ್ತ ಮಾಡುವ ಕೆಲಸ ಈಗ ಪ್ರಾರಂಭವಾಗಿದೆ. ೮೦ ಕೆರೆ-ಬಾವಿಗಳು ನವಂಬರ ಕೊನೆಯೊಳಗೆ ದುರುಸ್ತ ಆಗುವವು. ಕೆರೆ-ಬಾವಿಗಳನ್ನು ಸರಕಾರವೇ ದುರುಸ ಮಾಡಬೇಕೆಂದೂ, ಈ ಕುರಿತು ಸರಕಾರವು ನೀರ್ತೆರಿಗೆ ವಸೂಲ ಮಾಡಬಾರದೆಂದೂ ಸಭಿಕರೆಂದರು. ಆದರೆ ಇಷ್ಟೆಲ್ಲ ಕೆಲಸ ಮಾಡಲಿಕ್ಕೆ ಸರಕಾರಕ್ಕೆ ಸಾಧ್ಯವಿಲ್ಲೆಂದೂ, ಅರ್ಧಾಂಶ ಹಣ ಜನರು ವರ್ಗಣಿ ಕೂಡಿಸಿ ಕೊಡಬೇಕೆಂದೂ, ಅವಶ್ಯವಿದ್ದರೆ ತಗಾವಿ ಸಾಲ ಪಡೆಯಬಹುದೆಂದೂ ಮಂತ್ರಿಗಳು ಹೇಳಿ ಈ ವಿಷಯವನ್ನು ಮುಗಿಸಿದರು.

ಈ ಜಿಲ್ಹೆಯೊಳಗಿನ ಬಂಜರ ಭೂಮಿಗಳನ್ನು ಸಾಗು ಮಾಡಲಿಕ್ಕೆ ಸರಕಾರವು ಟ್ರಾಕ್ಟರಗಳನ್ನು ಪೂರೈಸಬೇಕಾಗಿ ಸಭಿಕರು ಬಿನ್ನವಿಸಿದರು. ರೂ ೧೪,೦೦೦ ಕ್ಕೊಂದು ಟ್ರಾಕ್ಟರ ಸಿಗುವದೆಂದು ಮಂತ್ರಿಗಳೆಂದರು. ಸರಕಾರವೇ ಹಣ ಕೊಟ್ಟು [illegible] ಬೇಕೆಂದು ಸಭಿಕರ ಅಂಬೋಣವಾಯಿತು. ಇಂಥಾ [illegible]ರದಲ್ಲಿ ತಂದಿಟ್ಟ ಟ್ರಾಕ್ಟರ ಮತ್ತು ಬುಲ್-ಡೋಜರುಗಳನ್ನು ಬಾಡಿಗೆಗೆ ಕೊಡಬಹುದಲ್ಲ ಎಂಬ ಸೂಚನೆಯೂ ಬಂತು. ಆಗ ಅವು ನಾದುರುಸ್ತ ಆಗಿವೆಯೆಂದು ಮಂತ್ರಿಗಳು ಹೇಳಿದರು. ನಾದುರುಸ್ತ ಯಂತ್ರಗಳನ್ನು ಒಯ್ದು ದುರುಸ್ತ ಯಂತ್ರಗಳನ್ನು ತಂದಿಡಬೇಕಾಗಿ ಸಭಿಕರು ಸೂಚಿಸಿದಾಗ, ಒಂದೊಂದು ತಾಲೂಕಿಗೆ ಒಂದೊಂದು ಯಂತ್ರಕ್ಕಿಂತ ಹೆಚ್ಚಿಗೆ ಟ್ರಾಕ್ಟರ ಸಿಗುವದಿಲ್ಲವಾಗಿ ಮಂತ್ರಿಗಳು ಹೇಳಿ, ಈ ಜಿಲ್ಹೆಗೆ ಯಾವ ಜಿಲ್ಹೆಗಿಂತ ಹೆಚ್ಚಿಗೆ ಪೂರೈಸಿದೆ ನುಡಿದರು. ಯಂತ್ರ ಎಂದರೆ ಏನೆಂದು ಯಾ[illegible] ತಿಳಕೊಳ್ಳುವ ಪ್ರಯತ್ನ ಮಾಡಲಿಲ್ಲ!

ಜಂಗಲ ಕಟ್ಟಿಯ ವಿಷಯವನ್ನು ಓರ್ವರು [illegible]ವಾಗಿ ಮಂತ್ರಿಗಳು ಆ ವಿಷಯ ಈ ಸಭೆಗೆ ಅಪ್ರಸ್ತುತವೆಂದು ನುಡಿದರು !

ಭೂಸುಧಾರಣೆಗಾಗಿ ಸಾಲ ಬೇಕಾದರೆ ಸಾಲದ ಎರಡು ಪಟ್ಟು ಬೆಲೆಯುಳ್ಳ ಭೂಮಿಯ ಭದ್ರತೆ ಕೊಡಬೇಕೆಂಬ ನಿಯಮವನ್ನು ತಿದ್ದಬೇಕೆಂಬದೊಂದು ಸೂಚನೆ ಬಂತು. ಮಂತ್ರಿಗಳು ಅದಕ್ಕೆ ಒಪ್ಪಲಿಲ್ಲ. ಹಿಲ್ಲೂರ ಯೋಜನೆಯು ಖರ್ಚಿನ ಅಪವ್ಯಯವಾದ್ದಾಗಿ ರಾ|| ವೆಂಕಟರಮಣ ನಾಯ್ಕರು ದೂರಿ, ಈ ಯೋಜನೆ ಪುನರಾಲೋಚಿಸಲು ಒಂದು ಉಪಮಂಡಳ ನೇಮಿಸಬೇಕೆಂದೂ ಒತ್ತಿಹೇಳಿದರು. ಆ ಯೋಜನೆಯ ಮಂಡಳವೊಂದೇ ಉಂಟೆಂದು ಅದು ಚೌಕಶಿ ಮಾಡುವದೆಂದೂ ಮಂತ್ರಿಗಳು ಹೇಳಿ, ಇಂದೂರ ಯೋಜನೆಯ ರೂಪ ತಿಳಿಸಿದರು. ಇಂದೂರ ಗ್ರಾಮ ಒಂದು ಮಧ್ಯಬಿಂದುವೆಂದೆಣಿಸಿ, ಅದರ ಯೋಜನೆಯು ವಿಸ್ತಾರವಾಗಿ ಕ್ರಮವಾಗಿ ಬೆಳೆಸುವರೆಂದೂ, ಪ್ರತಿ ತಾಲೂಕಿನ ಇಂದೂರ ಗ್ರಾಮದ ಯೋಜನೆಯಂತೆ ಯೋಜನೆ ಕೈಕೊಳ್ಳಬರುವದಿಲ್ಲವೆಂದೂ ಅವರು ತಿಳಿಸಿದರು. ಇಂದೂರ ಯೋಜನೆ ಅದೊಂದು ಪುನರ್ನಿವೇಶನದ ಯೋಜನೆ; ಅಲ್ಲಿ ಹೋಗಿ ನೆಲೆಸುವವರಿಗೆ ವಸತಿ, ಶಾಲೆ, ಚಿಕಿತ್ಸಾಲಯ, ಸಾರಿಗೆ-ಸೌಕರ್ಯ ಮೊದಲಾದ ನಾಗರಿಕ ಅನುಕೂಲತೆಗಳನ್ನು ಪೂರೈಸಬೇಕಾಗುತ್ತಿದೆ, ಅದೊಂದು ಪುನಃಸೃಷ್ಟಿಯ ಕಾರ್ಯವಾಗುತ್ತದೆ; ಅದಕ್ಕೆ ಹೇರಳ ಖರ್ಚು ತಗಲುತ್ತದೆ, ಎಂದೂ ಮಂತ್ರಿಗಳು ಖುಲಾಸೆ ಮಾಡಿದರು.

ಸಭಿಕರೊಬ್ಬರು ಗಜನಿ ಭೂಮಿಗಳ ವಿಷಯ ಎತ್ತಿದಾಗ, ಈ ವಿಷಯವನ್ನು ಗಜನಿ-ಸುಧಾರಣ ಮಂಡಳದ ಕಡೆ ಹೇಳಿಕೊಳ್ಳಿರೆಂದೂ ಈ ವಿಷಯ ಸಂಬಂಧ ತಮಗಿಲ್ಲೆಂದೂ ಹೇಳಿ ಮಂತ್ರಿಗಳು ಸಾಗಲೆತ್ನಿಸಿದರು. ಹೆಚ್ಚೆಚ್ಚು ಆಹಾರ-ಧಾನ್ಯ ಬೆಳೆಸುವ ಯೋಜನೆಯಲ್ಲಿ ಈ ವಿಷಯ ಬರುತ್ತದೆಂದು ಅದನ್ನು ಚರ್ಚಿಸಲೇಬೇಕೆಂದೂ ಕೌನ್ಸಿಲ ಸದಸ್ಯ ರಾ|| ಗೋಪಿಯವರು ಒತ್ತಾಯ ಮಾಡಿದರು. ಆದರೂ ಮಂತ್ರಿಗಳು ಕಿವಿಗೊಡಲಿಲ್ಲ !!

ಒಕ್ಕಲತನದ ಕಾನೂನಿನಂತೆ ಹೊಲವನ್ನು [illegible] ಒಡೆಯನು ಮಾಮಲೇದಾರರಿಗೆ ಅರ್ಜಿ ಮಾಡಿ, ಅದನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳಬಹುದು [illegible] ಈ ಅಧಿಕಾರದ [illegible] ಪ್ರಾರಂಭವಾಗುತ್ತಿದೆ. ಹೆಚ್ಚೆಚ್ಚು ಆಹಾರ-ಧಾನ್ಯ ಬೆಳೆಸಬೇಕೆಂಬ ಸರಕಾರದ ಹುಕುಮಕ್ಕೆ ಇದು ಭಂಗ ಬರುತ್ತಿದೆ. ಈ ಆಪತ್ಕಾಲದಲ್ಲಿ [illegible] ಬೇಡುವದೇ ಉಪಾಯ. [illegible]

(೫ನೇ ಪುಟದ ಮೇಲೆ ಮುಂದರಿಕೆ.)

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ: ಕುಮಟೆಯಲ್ಲಿ ವರ್ಷಕ್ಕೆ ರೂ. ೨ ಅಂಚೆಯಿಂದ ವರ್ಷಕ್ಕೆ ೪-೧-೦ „ ೬ ತಿಂಗಳಿಗೆ ೧-೧೦-೦ ಬಿಡಿ ಸಂಚಿಕೆಗೆ ....೦-೧-೦ ವ್ಹಿ. ಪಿ.ಯಿಂದ ಕಳಿಸಿದರೆ ೬ ಆಣೆ ಹೆಚ್ಚಿಗೆ ಬೀಳುವದು. ವರ್ಗಣಿಯ ಹಣವನ್ನು ಮುಂಗಡ ಕಳಿಸತಕ್ಕದ್ದು.	Reg. No. B. 1270. Monday, 29-8-1949. # ಕಾನಡಾವೃತ್ತ ವರ್ಷ ೩೨.] **THE KANARA NEWS.** [ಸಂಚಿಕೆ ೯. ಕುಮಟಾ:- ಸೋಮವಾರ, ತಾ. ೨೯-೮-೧೯೪೯.	ಜಾಹೀರಾತುಗಳ ದರ: ೧೫ ಎಮ್ ಅಗಲ ಸ್ತಂಭದ ಪ್ರತಿ ಸಾಲಿಗೆ ೪ ಆಣೆಯಂತೆ. ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು

ವಿವಿಧ ವಿಷಯಗಳು

ಯುರೋಪದಲ್ಲಿ ಬೇಗನೇ ಯುದ್ಧದ ಕಿಡಿಗಳು ಹಾರುವ ಸಂಭವವಿದೆ. ಯುಗೋಸ್ಲಾವ್ಹಿಯಾ ದೇಶವು ಕಮ್ಯುನಿಸ್ಟ ಸಂಘಕ್ಕೆ ಸೇರಿದ್ದಾಗಿರುತ್ತದೆ. ಕಮ್ಯುನಿಸ್ಟ ಪಕ್ಷದ ಮುಂದಾಳಾಗಿರುವ ಸೇ|| ಟಿಟೋ ಇವನು ಉಪಾಯಾಂತರಗಳಿಂದ ಹಿಟ್ಲರನ ಅವನತಿಯ ಕಾಲದಲ್ಲಿ ದೇಶದ ರಾಜ್ಯಕಾರಭಾರವನ್ನು ತನ್ನ ಕೈಯಲ್ಲಿ ತಕ್ಕೊಂಡು, ಅದನ್ನೀಗ ಭದ್ರಪಡಿಸಿಕೊಂಡಿದ್ದಾನೆ. ಆದರೆ ಇನ್ನಿತರ ಕಮ್ಯುನಿಸ್ಟ ಸಂಘದ ರಾಜ್ಯಕರ್ತರಂತೆ ಟಿಟೋ ಇವನು ಸಂಪೂರ್ಣವಾಗಿ ರಶ್ಯ ಪ್ರಭು ಸ್ಟೆಲಿನ್ನನ ತಂತ್ರದಿಂದ ನಡೆಯಲು ಒಪ್ಪಲಿಲ್ಲ. ಸ್ಟೆಲಿನ್ನನ ಅಪೇಕ್ಷೆಯಂತೆ ಪಾಶ್ಚಾತ್ಯ ಜನಾಂಗಗಳ ವೈರ ಕಟ್ಟಿಕೊಳ್ಳಲಿಕ್ಕೆ ಅವನು ಸಿದ್ಧನಾಗಲಿಲ್ಲ. ಅಷ್ಟರಿಂದ ರಶ್ಯರು ಟಿಟೋ ಇವನಿಗೆ ತಮ್ಮ ಸಂಘದೊಳಗಿಂದ ಹೊರಗಟ್ಟಿ ಬಹಿಷ್ಕಾರ ಹಾಕಿದರು! ಆದರೆ ಟಿಟೋ ಈ ಬಹಿಷ್ಕಾರಕ್ಕೆ ಸೊಪ್ಪು ಹಾಕಲಿಲ್ಲ. ಸ್ಟೆಲಿನ್ನ ಮತ್ತು ಟಿಟೋ ಇವರೊಳಗಿನ ಆ ವೈಷಮ್ಯ ವೈಮನಸ್ಯಗಳು ಈಗ ವಿಕೋಪಕ್ಕೆ ಮುಟ್ಟಿರುತ್ತಿದ್ದು, ರಶ್ಯ ಸರಕಾರದ ಮುಖದಂತಿರುವ "ಪ್ರಾವದಾ" ಪತ್ರಿಕೆಯು ಟಿಟೋನಿಗೆ ಗಲ್ಲಿಗೇರಿಸಬೇಕೆಂದು ಸಾಧಿಸಹತ್ತಿದೆ! ಆದರಿಂದ ಟಿಟೋನ ವಜ್ರಮುಷ್ಟಿಯೊಳಗಿಂದ ಯುಗೋಸ್ಲಾವ್ಹಿಯವನ್ನು ವಿಮೋಚನಗೊಳಿಸುವದಕ್ಕಾಗಿ, ಆ ದೇಶವನ್ನು ತನ್ನ ಅಂಕೆಯಲ್ಲಿ ತಂದುಕೊಳ್ಳುವದಕ್ಕಾಗಿ ರಶ್ಯರು ಬೇಗನೇ ಆ ದೇಶದ ಮೇಲೆ ದಂಡೆತ್ತಿ ಹೋಗುವ ಭೀತಿಯುಂಟು. ರಶ್ಯ ಮಹಾಪ್ರಭು ಸ್ಟೆಲಿನ್ನನಿಗೆ ಎದುರಾಳಿಯಾಗಿ ನಿಲ್ಲಲು ಟಿಟೋನು ಸ್ವತಃ ಸಮರ್ಥನಿದ್ದಾನೆ. ಪಾಶ್ಚಾತ್ಯ ಮಿತ್ರರ ಸಹಾಯ ತನಗೆ ಸಿಗುವದೆಂಬ ಆಶೆ ಮತ್ತು ಅಪೇಕ್ಷೆಯಿಂದಲೇ ಅವನು ರಶ್ಯರನ್ನು ಧೈರ್ಯದಿಂದ ಪ್ರತಿಭಟಿಸುತ್ತಿದ್ದಾನೆ. "ಪಾಶ್ಚಾತ್ಯ ಮಿತ್ರ"ರಾದರೂ ಟಿಟೋನಿಗೆ ಸಹಾಯ ಮಾಡುವ ಆಶೆ ತೋರಿಸಿದ್ದಾರೆ; ಮತ್ತು ತೋರಿಸುತ್ತಿದ್ದಾರೆ. ಬೇಗನೇ ಒದಗಿಬರುವ ಸ್ಟೆಲಿನ್ನ-ಟಿಟೋ ದ್ವಂದ್ವವನ್ನು ಅನುಲಕ್ಷಿಸಿಯೇ ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು, ಯುರೋಪಕ್ಕೆ ಲಗುಬಗೆಯಿಂದ ರಣಸಾಹಿತ್ಯ ಮತ್ತು ಸೈನಿಕ ಬಲ ಕಳಿಸಿಕೊಡುವದವಶ್ಯವುಂಟೆಂದು ಹೇಳಿ ಆ ಬಗ್ಗೆ ತಮ್ಮ ಸಿನೇಟ-ಎಸೆಂಬ್ಲಿಗಳ ಮಂಜೂರಿಯನ್ನು ತೀವ್ರ ದೊರಕಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಹಂಗೇರಿಯು ಈಗ ರಶ್ಯರ ಪ್ರಭಾವಕ್ಕೊಳಪಟ್ಟಿದೆ. ಹಂಗೇರಿಗೂ ಯುಗೋಸ್ಲಾವ್ಹಿಯಕ್ಕೂ ಗಡಿ-ಪ್ರದೇಶದ ಬಗ್ಗೆ ಮೊದಲೇ ತಂಟೆಯುಂಟು. ಅದರಿಂದ ರಶ್ಯ-ಟಿಟೋರ ಕುಸ್ತಿಗೆ ಆರಂಭವಾದರೆ ಹಂಗೇರಿಯು ರಶ್ಯರ ಪಕ್ಷ ಹಿಡಿದು ಯುಗೋಸ್ಲಾವ್ಹಿಯದ ಮೇಲೆ ಬೀಳುವದೆಂದು ಹೇಳಲಡ್ಡಿಯಿಲ್ಲ. ಈಗಾಗಲೇ ೩೦೦ರಷ್ಟು ರಣ-ರಥ (ಟೆಂಕ) ಗಳ ಸಹಿತ ಹಂಗೇರಿಯ ಕೆಲವು ಸೈನ್ಯವು ಯುಗೋಸ್ಲಾವ್ಹಿಯಾದ ಗಡಿಯತ್ತ ಕೂಚು ಮಾಡುತ್ತದೆಂಬ ವಾರ್ತೆ ಬಂದಿದೆ. ಆದರೆ ಇದೀಗಲೇ ಯುದ್ಧ-ಸ್ಫೋಟವಾಗುವಂತಿಲ್ಲ. "ಕೇಸರಿ" ಪತ್ರಿಕೆಯ ಲಂಡನ ಪ್ರತಿನಿಧಿಗಳು ಬರೆಯುವಂತೆ, ಪೂರ್ವ ಯುರೋಪದಲ್ಲಿ ಈಗ ಹವಾಮಾನ ಯುದ್ಧಕ್ಕೆ ಅನುಕೂಲವಿರುವದಿಲ್ಲ, ಅದರಿಂದ ೨-೨|| ತಿಂಗಳ ತನಕ ಯುದ್ಧಸ್ಫೋಟವಾಗುವ ಸಂಭವವಿಲ್ಲ. ಅಲ್ಲಿಯ ತನಕ ಸ್ಟೆಲಿನ್ನ-ಟಿಟೋರೊಳಗೆ ಏನಾದರೂ ಪರಸ್ಪರ ತಿಳುವಳಿಕೆಯುಂಟಾಗದಿದ್ದರೆ ಮತ್ತು ಈಗಿನ ವಿವಾದ ಮತ್ತು ವಾಗ್ಯುದ್ಧ ಹಾಗೆಯೇ ಮುಂದರಿದರೆ ನವಂಬರ-ಡಿಸೆಂಬರ ತಿಂಗಳಲ್ಲಿ ಪೂರ್ವ ಯುರೋಪದೊಳಗೆ ರಣ-ಕುಂಡವು ಪ್ರಜ್ವಲಿಸುವದೆಂದು ಭವಿಷ್ಯ ವರ್ತಿಸಲೇನೂ ಅಡ್ಡಿ ತೋರುವದಿಲ್ಲ.

* *

ಪೂರ್ವ ಪಾಕಿಸ್ತಾನದಲ್ಲಿ ಅಂದರೆ ಪೂರ್ವ ಬಂಗಾಲದಲ್ಲಿ ದೇಶ-ವಿಭಜನೆಯ ಕಾಲಕ್ಕೆ ೧ ಕೋಟಿ ೨೦ ಲಕ್ಷ ಹಿಂದುಗಳಿದ್ದರು. ಅವರಲ್ಲಿ ಕಳೆದ ಏಪ್ರಿಲ ತಿಂಗಳ ತನಕ ೧೯|| ಲಕ್ಷ ಮಂದಿ ದೇಶತ್ಯಾಗ ಮಾಡಿ ಹಿಂದುಸ್ಥಾನಕ್ಕೊಪ್ಪಿದ ಪಶ್ಚಿಮ ಬಂಗಾಲಕ್ಕೆ ಬಂದು ಸೇರಿದ್ದಾರೆ; ೨|| ಲಕ್ಷ ಜನ ಆಸಾಮಕ್ಕೆ ಹೋಗಿದ್ದಾರೆ, ಸಾವಿರಾರು ಮಂದಿ ತ್ರಿಪುರಾ ಮತ್ತು ಕೂಚಬಿಹಾರ ಸಂಸ್ಥಾನಗಳನ್ನು ಸೇರಿದ್ದಾರೆ. ಈ ನಿರ್ವಾಸಿತರಲ್ಲಿ ಅರ್ಧದಷ್ಟು ಮಂದಿ ಕಲಕತ್ತಾ ನಗರಿಯ ಪರಿಸರದಲ್ಲಿರುತ್ತಾರೆ. ಪಾಕಿಸ್ತಾನದಲ್ಲಿ ತಮ್ಮ ವಿತ್ತ-ಜೀವಿತಗಳ ಸುರಕ್ಷಿತತೆಯಿಲ್ಲೆಂದು ಹಿಂದುಗಳು ದೇಶತ್ಯಾಗ ಮಾಡಿ ಬರುತ್ತಿದ್ದರೆ, ಪೂರ್ವ ಪಾಕಿಸ್ತಾನದಲ್ಲಿ ಉದರನಿರ್ವಾಹ ಮಾಡಿಕೊಳ್ಳುವದು ಕಠಿಣವೆನಿಸಿ ಲಕ್ಷಾವಧಿ ಮುಸಲ್ಮಾನರು ದೇಶತ್ಯಾಗ ಮಾಡಿ ಹಿಂದುಸ್ಥಾನವನ್ನು ಸೇರುತ್ತಿರುವರು! ಈ ವರೆಗೆ ಸುಮಾರು ೩ ಲಕ್ಷ ಮುಸಲ್ಮಾನರು ಹೀಗೆ ದೇಶ ಬಿಟ್ಟು ಹಿಂದುಸ್ಥಾನಕ್ಕೆ ಬಂದಿರುತ್ತಾರೆ. ಈ ಲಕ್ಷಾವಧಿ ನಿರ್ವಾಸಿತರನ್ನು ಅಲ್ಲಲ್ಲಿ ನೆಲಿಸಿ, ಅವರ ಯೋಗಕ್ಷೇಮದ ವ್ಯವಸ್ಥೆ ಮಾಡುವ ಭಾರ ಪಶ್ಚಿಮ ಬಂಗಾಲ ಸರಕಾರದ ಮೇಲೆ ಉಂಟು. ಅದನ್ನು ಅದು ಜಾಣ್ಮೆಯಿಂದ ನಿರ್ವಹಿಸುತ್ತಿದ್ದುದು ನಮೂದಿಸಲು ಸಂತೋಷವೆನಿಸುತ್ತದೆ.

* *

ಕಾಶ್ಮೀರ ಪ್ರಕರಣವು ಸಂಧಾನದಿಂದ ಬಗೆಹರಿಯುವ ಆಶೆ ಕೆಲವು ದಿನಗಳ ಹಿಂದೆ ತೋರಿಬಂದಿತ್ತು. ಆದರೆ ಈಗ ಆ ಆಶೆ ಬಯಲಾಗಿದೆ. ಸಂಧಾನಕ್ಕಾಗಿ ಸಂಯುಕ್ತ ರಾಷ್ಟ್ರಸಂಘದ ಕಾಶ್ಮೀರ ಮಂಡಳದವರು ಜುಲಾಯಿ ೩೦, ೩೧ಕ್ಕೆ ದಿಲ್ಲಿಯಲ್ಲಿ ಹಿಂದುಸ್ಥಾನ, ಪಾಕಿಸ್ತಾನ ಸರಕಾರಗಳ ಪ್ರತಿನಿಧಿಗಳ ಸಭೆ ಸೇರಿಸಲು ನಿರ್ಣಯಿಸಿದ್ದರು. ಆದರೆ ಪಾಕಿಸ್ತಾನವು ಆಯತ ಹೊತ್ತಿಗೆ ಇಲ್ಲದ ಸಲ್ಲದ ತಕರಾರುಗಳನ್ನು ಎಬ್ಬಿಸಿದ್ದರಿಂದ ಕಾಶ್ಮೀರ ಮಂಡಳವು ಆ ಸಭೆಯನ್ನು ರದ್ದುಗೊಳಿಸಿತು. ಮುಂದೇನು ಎಂಬುದರ ನಿರ್ಣಯವಿನ್ನೂ ಆಗಿಲ್ಲ! ಮಂಡಳದವರು ಇನ್ನೂ ಆಲೋಚನೆಯಲ್ಲಿದ್ದಾರೆ! ಒಟ್ಟಾರೆ ಈ ಕಾಶ್ಮೀರ ಪ್ರಕರಣವು ಪರಸ್ಪರ ಸಂಧಾನದಿಂದ ಇಲ್ಲವೆ ತ್ರಯಸ್ಥರ ಪಂಚಾಯತಿಯಿಂದ ನಿಕಾಲೆಯಾಗದೆ ಕೊನೆಗೆ ಶಕ್ತಿ-ಪ್ರಯೋಗದಿಂದಲೇ ಬಗೆಹರಿಸಲ್ಪಡುವದೆಂದು ಅನಿಸುತ್ತದೆ

ಸಕ್ಕರೆಯ ಉತ್ಪಾದಕರು ವರ್ತಕರು ಇತ್ತಲಾಗಿ ಸಕ್ಕರೆಯ ಧಾರಣೆಗಳನ್ನು ಯೋಗ್ಯ ಕಾರಣವಿಲ್ಲದೆ ಏರಿಸಹತ್ತಿರುವದರಿಂದ ಭಾರತ ಸರಕಾರವು ಸಕ್ಕರೆಯ ಮೇಲೆ ನಿಯಂತ್ರಣ ಹೇರುವ ವಿಚಾರ ನಡೆಸಿದೆ. ಸಂಯುಕ್ತ ಪ್ರಾಂತ ಸರಕಾರವು ಈಗಾಗಲೇ ದರ ನಿಯಂತ್ರಿಸಿ, ಬಂಗಾಲಿ ಮಣ ೧ರ ಬೆಲೆ ರೂ. ೩೯||ಗೆ ಮಾರತಕ್ಕದ್ದೆಂದು ವಿಧಿಸಿದೆ.

FOR BANKING SERVICE
IN TRADE, INDUSTRY AND AGRICULTURE
APPROACH

The Agricultural & Industrial Bank, Ltd.,

(Established in 1934)

Head Office : COONDAPOOR, S. Kanara.

Branches.

1. Ankola	7 Gokarn.	13. Nagar.
2. Belgaum.	8 Haveri.	14. Shimoga.
3. Bhatkal.	9. Hubli.	15. Sirsi.
4 Coondapoor	10. Karwar.	16. Somwarpet
5. Dharwar.	11. Kumta.	17. Virajpet.
6. Gadag.	12 Mangalore.	18. Honavar.

19 BOMBAY. (384-A. Jaipuria House, Kalbadevi Road).

CURRENT, SAVINGS BANK AND FIXED DEPOSITS ARE ACCEPTED.

For terms, apply to the nearest Branch

Coondapoor, 1st June. 1949. } **K. Vaman Shenai,** CHAIRMAN

ಜಿಲ್ಲಾ ಸಮಾಚಾರ.

(ಒನೇ ಪುಟದಿಂದ ಮುಂದ ಸಿದ್ದು)

ಅಂಕೋಲಾ— (ತಾ ೧೦ ೮–೪೯) ಈ ತಾಲೂಕಿನ ... [illegible]

ಹಳಿಯಾಳ— (ತಾ. ೧೮–೮ ೪೯) ... [illegible]

[illegible]

ಮುಂಡಗೋಡ— ... [illegible]

ಶಿರಸಿ— ... [illegible]

ಸ್ವಾತಂತ್ರ್ಯ-ದಿನದ ಉತ್ಸವಗಳು

[illegible]

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.

ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲಾಜಿಂಗ

ದಿ ಕೆನರಾ ಲಾಜ

[ಊಟ ಮತ್ತು ವಸತಿಗೃಹ]

ಮೋಟರ–ಸ್ಟ್ಯಾಂಡ, ಹುಬ್ಬಳ್ಳಿ.

ಮಾಲಕ: – ನ್ಯಾ. ಕಾಮತ್ ಪೈ.

ಜಿಲ್ಲಾ ಸಮಾಚಾರ.

ಕಾರವಾರ— [illegible]

[illegible]

... (metalled) ...

ನೋಟೀಸು.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್, ಲಿಮಿಟೆಡ್, ಶಿರಸಿ (ಉ. ಕ.)

[illegible]

V. R. Mudkery.
ಏಜಂಟ

THE BANK OF RURAL INDIA LTD,

(Incorporated in British India, Liability of Members limited)

HEAD OFFICE.— "Satyabhama Bhavan", KARWAR. N. K

Offices at.— KARWAR, KUMTA, SIRSI, HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital ., Rs. 10,00,000;
Subscribed Capital .. Rs 5,00,000,
Paid-up Capital & Reserves ., Rs. 5,08,502-8-0

Rtes of Interest on Deposits

Current a/c @ 1% p a. *Savings Bank a/c @ 2½%.*

Fixed Deposits for 3 months @ 3% per annum.
" " for 6 monnths @ 3½%
" " for 12 monhs or more @ 4% ..

All kinds of modern Banking business transacted

Karwar, 14-2-1948

P. X GACIROUS
MANAGING DIRECTOR

ಜುಲೈಯು ತಿಂಗಳೊಳಗೆ ಜಿಲ್ಲೆಯ ಎಲ್ಲ ತಾಲೂಕ-ಕಚೇರಿಗಳಲ್ಲಿ ಕೂಡಿ ೧೧೫೨ ಹೊಸ ಟೆನನ್ಸಿ ದಾವೆಗಳು ದಾಖಲಾಗಿದ್ದು, ೪೩೪ ದಾವೆಗಳ ನಿಕಾಲೆಯಾಗಿದೆ. ತಿಂಗಳ ಪ್ರಾರಂಭಕ್ಕೆ ೧೦೦೬ ವಹಿವಾಟ ದಾವೆಗಳು ಶಿಲ್ಕು ಇದ್ದವು. ಅವುಗಳಲ್ಲಿ ೩೨೭ ದಾವೆಗಳು ನಿರ್ಣಯಿಸಲ್ಪಟ್ಟವೆ. ಆದರಿಂದ ತಿಂಗಳ ಕೊನೆಗೆ ೧೪೬೬ ಟೆನನ್ಸಿ ದಾವೆಗಳೂ ೬೭೯ ವಹಿವಾಟ ದಾವೆಗಳೂ ಶಿಲ್ಕು ಉಳಿದಿವೆ.

ಗೋಕರ್ಣದೊಳಗಿನ ಸರಮೋಧದ ಪ್ರಕರಣದಲ್ಲಿ ಶಿಕ್ಷಿಸಲ್ಪಟ್ಟ ಈಗ ೪-೫ ತಿಂಗಳಿಂದ ಬಂಧನದಲ್ಲಿರುವ ಏಳೂ ಜನರನ್ನು ಜಾಮೀನಿನ ಮೇಲೆ ಬಿಡಬೇಕಾಗಿ ಜಿಲ್ಲಾ ನ್ಯಾಯಾಧೀಶರ ಮುಂದೆ ಒಂದು ಮನವಿ ದಾಖಲಾಗಿತ್ತು. ಕಳೆದ ಸೋಮವಾರ ಆ ಅರ್ಜಿಯು ವಿಚಾರವಾಗಿ, ನ್ಯಾಯಾಧೀಶ ಶ್ರೀ ಶ್ರೀಕೊಂಡೆಯವರು ೬ ಜನರ ಅರ್ಜಿಯನ್ನು ತಿರಸ್ಕರಿಸಿ, ಗಣಪತಿ ಎಂಬ ಎಳೆ ಪ್ರಾಯದ ವಿದ್ಯಾರ್ಥಿಯನ್ನು ಮಾತ್ರ ರೂ ೧೦೦೦ದ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಹುಕುಮು ಮಾಡಿರುತ್ತಾರೆ.

ಇಲ್ಲಿಯ ಜೇನು ಸಾಕುವವರ ಸಹಕಾರಿ ಸಂಘವು ಹುಟ್ಟಿ ಸುಮಾರು ಈಗ ೨ ವರ್ಷಗಳಾದವು. ೧೮ ಗ್ರಾಮಗಳಲ್ಲಿ ಸಂಘದ ಸದಸ್ಯರು ಪಸರಿಸಿದ್ದು, ೧೯೪೮-೪೯ನೇ ಸಾಲಿನ ಕೊನೆಗೆ ಸಂಘಕ್ಕೊಳಪಟ್ಟ ಜೇನುಗೂಡುಗಳ ಸಂಖ್ಯೆ ೨೭೫ಕ್ಕೆ ಮುಟ್ಟಿದೆ. ಕಳೆದ ವರ್ಷ ಒಡಿಮಾತಿಂದ ೮೪ ಜೇನು "ರಾಣಿ"ಗಳು ತಪ್ಪಿಸಿಕೊಂಡು ಹೋದ್ದರಿಂದಲೂ, ಕಳೆದ ಬೇಸಿಗೆಯಲ್ಲಿ ೨-೩ ವಾರಗಳಷ್ಟು ಮೊದಲೇ ಮಳೆ ಬೀಳಲಾರಂಭಿಸಿದ್ದರಿಂದಲೂ ಸಂಘದ ಸದಸ್ಯರ ಜೇನಿನ ಉತ್ಪತ್ತಿ ನಿರೀಕ್ಷಿಸಿದ್ದಕ್ಕಿಂತ ಕಡಿಮೆಯಾಗಿರುತ್ತದೆಂದು ಸಂಘದವರು ತಮ್ಮ ವರದಿಯಲ್ಲಿ ಹೇಳುತ್ತಾರೆ. ಸದ್ಯಕ್ಕೆ ಸಂಘವು ಸರಕಾರದವರ ಧನಸಹಾಯದ ಬಲದಿಂದ ಕಾರ್ಯ ಮಾಡುತ್ತಿದೆ. ಮುಂದಿನ ೨ ವರ್ಷಗಳಲ್ಲಿ ಜೇನುಗೂಡುಗಳ ಸಂಖ್ಯೆಯನ್ನು ೧೦೦೦ಕ್ಕೆ ಬೆಳೆಸಿ, ಪೂರ್ಣ ಸ್ವಾವಲಂಬಿಯಾಗಬೇಕೆಂದು ಸಂಘದವರ ಮನೀಷೆಯುಂಟು.

ಅವುದಳ್ಳಿ ಕನ್ನಡ ಶಾಲೆಯ ಕುಮಾರಿ ವಿಮಲಾ ಶೆಟ್ಟಿ ಎಂಬ ವಿದ್ಯಾರ್ಥಿನಿಗೆ ಕೆಲವು ದಿನಗಳ ಹಿಂದೆ ಮಾರ್ಗದ ಮೇಲೆ ಸುಮಾರು ರೂ ೭೫ ಬೆಲೆ ಇರುವ ಒಂದು ಚಿನ್ನದ ಮಣಿಗಳ ಸರ ಸಿಕ್ಕಿತ್ತು. ಅದನ್ನು ಅವಳು ಶಾಲೆಯ ಮುಖ್ಯಾಧ್ಯಾಪಕರ ಕಡೆ ತಂದು ಕೊಟ್ಟಳು, ಮುಖ್ಯಾಧ್ಯಾಪಕರು ಅದನ್ನು ಪಟೇಲರ ಕಡೆ ಕೊಟ್ಟರು. ಮುಂದೆ ಚೌಕಶಿಯಲ್ಲಿ ಆ ಸರವು ತೊರ್ಕೆ ಗ್ರಾಮದ ಓರ್ವ ಮಹಿಳೆಯದಿರುತ್ತದೆಂದು ತಿಳಿದುಬಂತು. ಸರದ ಮಾಲೀಕಳು ವಿಮಲೆಯ ಪ್ರಾಮಾಣಿಕತನಕ್ಕೆ ಮೆಚ್ಚಿ, ಅವಳಿಗೆ ರೂ. ೫ ಇನಾಮು ಕೊಟ್ಟಿದ್ದಾಳೆ.

ಕಡವಾಡ ಗ್ರಾಮದಲ್ಲಿ ಈಗ ಸಾರ್ವಜನಿಕ ಸಂಸ್ಥೆಗಳು ಹೆಚ್ಚಾಗಿವೆ! ಗ್ರಾಮಪಂಚಾಯತಿ ಉಂಟು, ಸಾರ್ವಜನಿಕ ವಾಚನಾಲಯವುಂಟು, ವಿವಿಧೋದ್ದೇಶಗಳ ಸಹಕಾರಿ ಸಂಘವುಂಟು, ಅಗ್ಗದರದ ಅಂಗಡಿಯುಂಟು! ಈ ಎಲ್ಲ ಸಂಘ-ಸಂಸ್ಥೆಗಳಿಗೆ ಸಿಕ್ಕಿರುವ ಕಾರ್ಯದರ್ಶಿ ಮಾತ್ರ ಒಬ್ಬನೇ! ಎಲ್ಲ ಸಂಸ್ಥೆಗಳಲ್ಲಿ ಈ ಕಾರ್ಯದರ್ಶಿಯದೇ ಪ್ರಭಾವ ಹೆಚ್ಚಿಗೆ! ಸದಸ್ಯರು ನಾಮಮಾತ್ರರು! ಈ ಎಲ್ಲ ಸಂಸ್ಥೆಗಳ ಕಾರಭಾರ ನಡೆಸಿ ಕಾರ್ಯದರ್ಶಿಯು ಮೇಲೆ ತನ್ನ ಹೋಟಲಿನ ವಹಿವಾಟು ಮಾಡುತ್ತಾನೆ! ತನ್ನದೊಂದು ಸ್ವತಂತ್ರ ಅಂಗಡಿಯನ್ನೂ ನಡೆಸುತ್ತಾನೆ! ಇಂಥ ಅಷ್ಟಾವಧಾನಿ ಕಾರ್ಯದರ್ಶಿಗೆ ಸರಕಾರವು ಯೋಗ್ಯ ಪದವಿಯೊಂದನ್ನು ಕೊಡಬೇಕಾಗಿ ಕಡವಾಡ ಗ್ರಾಮದ "ಗ್ರಾಮಹಿತೈಷಿ"ಯೊಬ್ಬನು ಕೋರುತ್ತಾನೆ.

(೨ನೇ ಪಾನಿನ ಮೇಲೆ ಮುಂದರಿಸಿದೆ)

C P C O 1 R 8ರ ಪ್ರಕಾರ ಮೂಲ ದಾವೆಯ ಜಾಹೀರ ನೋಟೀಸು.

ಹೊನ್ನಾವರ ಸಿವ್ಹಿಲ ಜಜ್ಜ ಕೋರ್ಟಿನಲ್ಲಿ

ಮೂಲ ದಾ. ನಂಬರ ೨೮—೧೯೪೯.

೧ ಕುಪ್ಪಯ್ಯ ರಾಮ ಯಾಜಿ
೨ ತ್ಯಬಾಜ್ಜಿ ಶಾಂತಪ್ಪ ಭಂಡಾರಿ
೩ ಶ್ರೀವಿಕ್ರಮ ಅನಂತನಾರಾಯಣ ಭಟ್ಟ
೪ ವಿಠ್ಠಲ ಗಣೇಶ ನಾಯಕ
೫ ಶ್ರೀಧರ ರಂಗ ಪೈ

{ ನಂಬರ ೧ ರಿಂದ ೪ನೆಯವರು ಬಳ್ಕೂರ, ೫ನೆಯವನು ಸಾ॥ ಇಡಗುಂಜಿ, ತಾಲೂಕ ಹೊನ್ನಾವರ } ವಾದಿರು.

ಈ ವಾದಿರು ಸ್ವತಃದ ಪತಿಯಿಂದ ಬಳ್ಕೂರ ಗ್ರಾಮದ ಮಾರಾ ಪಾಣೆ ಕಟ್ಟಿನಿಂದ ಕುಮಟಾ ಕುಮಾಡಿ ಅವಳಿಯಿಂದ ನಾಗ ಆಗುವ ಕರಿ ಜಮೀನುಗಳ ಯಾವತ್ತೂ ಕುಲಜಿದಾರರ ಪತಿಯಿಂದ ಸಹ

ವಿರುದ್ಧ

೧ ಗಣಪತಿ ಸುಬ್ರಹ್ಮ ಪೈ, ಸಾಕಿನ ಶಿರಾಲಿ
೨ ಮಾರ್ಕವಿ ನಾಗಪ್ಪ ಭಂಡಾರಕರ, ಸಾಕಿನ ಮುಂಬಯಿ
೩ ನಾಗೇಶ ರಾಮ ಪೈ ಸಾಕಿನ ಕುಂದಾಪುರ
೪ ಅಯ್ಯ ಮಂಜು ನಾಯಕ
೫ ರೇವಪ್ಪ ಅಯ್ಯ ನಾಯಕ
೬ ಮಮ್ಮದ ಘಣಿ ಮಮ್ಮದ ಮಿರಾ ಸಾಹೇಬ
೭ ರಾಮಾ ಗಣಪಯ್ಯ ಶೇಟ
೮ ಗೋವಿಂದರಾಯ ನಾಗಪ್ಪ ಭಂಡಾರಕರ
೯ ಕೇಶವ ವಾಮನ ಕಾನಭಾಗ
೧೦ ಪುಟ್ಟ ಗಣೇಶ ಮಡಿವಾಳ
೧೧ ಅನಂತ ತಿಮ್ಮಪ್ಪ ನಾಯಕ
೧೨ ಸುಬ್ಬ ಗಣಪಯ್ಯ ಶಾಂತ್ರಿ
೧೩ ಕನ್ನ ಮಂಜು ಶಾಂತ್ರಿ

{ ೬ನೇಯವನು ಸಾ॥ ಕವಾರ ಗ್ರಾಮದ ಪಲ್ಲಿ, ೭ನೇಯವನು ಸಾ॥ ಕಲಗೋಡ, ೮ನೇಯವನು ಸಾ॥ ಹೊನ್ನಾವರ, ಬಾಕಿಯವರು ಸಾ॥ ಬಳ್ಕೂರ, ತಾಲೂಕ ಹೊನ್ನಾವರ } ಪ್ರತಿವಾದಿರು.

ವಾದಿರು ಜಾಹೀರಪಡಿಸುವ ವಿವರ —

೧ ಬಳ್ಕೂರ ಗ್ರಾಮದ ಕರಿ ಜಮೀನುಗಳಲ್ಲಿ ಸುಗ್ಗಿ ವ ಧಾನ್ಯದ ಬೆಳೆಗಳ ಸೌಕರ್ಯದ ಬಗ್ಗೆ ಕಟ್ಟಬೇಕಾದ ಖಾರಾಪಾಣಿ ಕಟ್ಟ ವ ಕುಮಾಡಿ ಅವಳಿ ದುರುಸ್ತಿ ಮಾಡುವ ಖರ್ಚುಗಳ ಬಗ್ಗೆ ಬಳ್ಕೂರ ಗ್ರಾಮದ ಕುಲಜಿದಾರರು ಉತಾರವಾಗಿ ಬಿಟ್ಟುಕೊಟ್ಟ ಸರ್ವೇ ನಂಬರ 168/3, 300/1,2,3,4, 332, 352/1, 2, 3 ಇವುಗಳನ್ನು ೧ರಿಂದ ೩ನೇ ವರೇಗಿನ ಪ್ರತಿವಾದಿರು, ಕುಲಜಿದಾರ ನಾತೆಯಿಂದಲೂ ಇತರ ಪ್ರತಿವಾದಿರು ಸದರಿಯವರ ಒಳಗೆ ವಿವಿಧ ತರದ ಗೇಣಿ ಹಕ್ಕಿನಿಂದಲೂ, ಕೆಲಜಾ ಮಾಡಿಬರುವಲ್ಲಿ, ಉತಾರವಾಗಿ ಬಿಟ್ಟುಕೊಡುವ ಕಾಲಕ್ಕೆ ವಾದಿ-ಪ್ರತಿವಾದಿರ ಪೂರ್ವಾಧಿಕಾರಿಗಳ ಒಳಗೆ ಆದ ಕರಾರದಂತೆ ದಾವೆಯಲ್ಲಿ ಪೂರ್ಣ ವಾಗ್ನಿವಂಧಿಸಿದ ಸದರಿ ಆಸ್ತಿಗಳ ಮೇಲೆ ಜವಾಬದಾರಿ ಹೊರಿಸದ ಕೆಲಸಗಳನ್ನು ಈ ಪ್ರತಿವಾದಿರು ಸನ್ ೧೯೪೭-೧೯೪೮ನೇ ಸಾಲಿನಲ್ಲಿ ಯೋಗ್ಯ ವೇಳೆಗೆ ವ ದಕ್ಷತೆಯಿಂದ ಮಾಡಲಿಲ್ಲ. ಹೀಗಾಗಿ ಖಾರಾಪಾಣಿ ಹೊಳೆಯ ಉಪ್ಪು ನೀರು ಕರಿ ಜಮೀನುಗಳ ಮೇಲೆ ಪಸರಿಸಿ ಸದರಿ ಸಾಲಿನಲ್ಲಿ ಅಜಮಾಸ ೫೦ ಎಕರೆ ಕರಿ ಜಮೀನುಗಳಲ್ಲಿ ಏನೂ ಬೆಳೆ ಆಗಲಿಲ್ಲ. 100 ಎಕರೆ ಜಮೀನುಗಳ ಮೇಲೆ ಪ್ರತಿ ವರುಷಕ್ಕೆ ಆಗುವ ರೀತಿ ಬೆಳೆ ಬರಲಿಲ್ಲ. ಹೀಗಾಗಿ ಸದರಿ ಜಮೀನುಗಳ ಕುಲಜಿದಾರರಿಗೆ ರೂ 20000/— ದಷ್ಟಿಗೆ ನುಕ್ಸಾನ ಒದಗಿರುತ್ತದೆ. ಆದರೆ ಈ ಕೋರ್ಟಿನ ಅಧಿಕಾರದ ಮಿತ್ತಿಗೆ ರೂ 5000/— ಮಾತ್ರ ನುಕ್ಸಾನನ್ನು ಈ ದಾವೆಯಲ್ಲಿ ಬೇಡಿರುತ್ತದೆ. ಈ ನುಕ್ಸಾನಿನ ರಕಮಿನ ವಸೂಲಿಯ ಬಗ್ಗೆ ಜವಾಬದಾರರಾಗುವ ಪ್ರತಿವಾದಿಯರ ವಿರುದ್ಧ ಕ್ರಮ ಕೈಕೊಳ್ಳಬೇಕಾಗಿ ವಾದಿರು ವ ಇತರ ಕುಲಜಿದಾರರು ಸಹ ನಿರ್ಣಯಿಸಿದ ಪ್ರಕಾರ ವಾದಿರು ಇತರ ಎಲ್ಲಾ ಕುಲಜಿದಾರರ ಪತಿಯಿಂದ ಮೇಲ್ಕಂಡ ನಂಬರ ದಾವೆಯನ್ನು ದಾಖಲ ಮಾಡಿದ್ದಾರೆ ಮತ್ತು ಇತರ ಎಲ್ಲಾ ಕುಲಜಿದಾರರ ಪತಿಯಿಂದ ವಾದಿರಾಗಿ ವ್ಯವಹರಿಸಲಿಕ್ಕೆ ಈ ವಾದಿರು C P. C, O 1, R. 8ರ ಪ್ರಕಾರ ಕೋರ್ಟಿನ ಪರವಾನಗಿಯನ್ನು ಸಹ ಪಡೆದಿರುತ್ತಾರೆ.

ಕಾರಣ ಈ ಮೂಲಕ ಬಳ್ಕೂರ ಗ್ರಾಮದ ಖಾರಾಪಾಣಿ ಕಟ್ಟ ವ ಕುಮಾಡಿ ಅವಳಿಗೆ ಸಂಬಂಧಪಟ್ಟ ಕರಿ ಬಾಗಾಯತ ಸ್ಥಳಗಳ ಎಲ್ಲಾ ಕುಲಜಿದಾರರಿಗೆ ಅರಿಕೆ ಮಾಡಿಕೊಳ್ಳುವದೇನೆಂದರೆ — ಸದರಿಯವರ ಪೈಕಿ ಯಾರಿಗಾದರೂ ಮೇಲ್ಕಂಡ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಕೊಂಡು ವ್ಯವಹರಿಸುವ ಇಚ್ಛೆಯಿದ್ದಲ್ಲಿ ಅವರು ಈ ಪ್ರಕಟಣೆಯಾದ ಒಂದು ತಿಂಗಳ ಮುದ್ದತಿನಲ್ಲಿ ತಮ್ಮ ಹೇಳಿಕೆಯನ್ನು ಈ ಕೋರ್ಟಿಗೆ ಬರೆದು ಸ್ವತಃ ಅಥವಾ ವಕೀಲರ ಮುಖಾಂತರ ಹಾಜರ ಆಗ ತಕ್ಕದ್ದು. ಆ ರೀತಿ ತಪ್ಪಿದಲ್ಲಿ ಎಲ್ಲಾ ಕುಲಜಿದಾರರ ವಾದಿರ ಈ ದಾವೆಗೆ ಸಮ್ಮತಿಸಿದ್ದಾರಾಗಿ ಗ್ರಹಿಸಿ ಈ ದಾವೆಯು ವ್ಯವಹರಿಸುವದರಲ್ಲಿ ಬರುವದು.

ದಾವಾ ದಾಖಲ ತಾ. ೬—೪—೪೮

ಹಾಜರಪಡಿಸಿಕೊಂಡ ತಾ ೯—೮—೧೯೪೯

R. N. Kamat,
Pleader for Plaintiffs

ಕೋರ್ಟಿನ ಮೊಹರು

23—8—1949

H S. Baindur,
Clerk of the Court,
Civil Judge's Court, Honavar

9 Sections 14 and 34 deal with the question of terminating the tenancy of a tenant under certain circumstances The forum where an application is to be made for getting possession under the circumstances mentioned therein is not stated in these two Sections There are some other sections which say that an application should be made to the Mamlatdar for a particular purpose No such thing is mentioned either in Sec 14 or Sec 34 Further the jurisdiction of the Civil Court is not ousted in suits for recovery of rent If the tenant does not pay the rents then the necessary consequence will be that his tenancy comes to an end If a suit for rent is maintainable in a Civil Court then it follows that a suit for possession on the ground of non-payment of rent is also maintainable. I may here refer to Sec 29 (2) which says that no landlord shall obtain possession of any land held by a tenant except under an order of the Mamlatdar This again connotes an executive act It appears to me from a consideration of all these sections that the Mamlatdar can only take action to put the landlord or the tenant in possession of the property He has no power to decide or determine the question as to whether a person is entitled to possession of the property It is immaterial whether a person is entitled to possession of the property on the ground of non-payment of rent or on the ground of personal cultivation or on other grounds mentioned in section 14. In my opinion the jurisdiction of the Civil Court is not expressly or impliedly barred under the provisions of the B T & A L Act, 1948 At the most, when once a decree is passed the Civil Court may not be able to execute its own decree I hold, therefore, that suit for possession of the property against tenant is maintainable in a Civil Court and that the Civil Court has jurisdiction to try such suits

This judgment clears the air Until it is upset by a higher tribunal it must be accepted as authoritative even by the Tenancy Courts

ಕಬಜೆಯ ದಾವೆಗಳನ್ನು ದಿವಾಣಿ ಕೋರ್ಟುಗಳೇ ನಿರ್ಣಯಿಸಬಲ್ಲವು.

ಈ ಸಂಚಿಕೆಯ ೧ನೇ ಪುಟದಲ್ಲಿ ಪೂನಾ ಸ್ಮಾಲ ದಿವಾಣಿ ಕೋರ್ಟಿನವರು ಮೂಲ ನಂ. ೬೯–೧೯೪೯ (ಗಜರಿಯಾ ನಾನಾ ವಿ/ ಅಬ್ದು ಬಿನ್ ಅಬ್ದು)ನೇ ದಾವೆಯಲ್ಲಿ ಕೊಟ್ಟಿರುವ ಮಹತ್ವದ ತೀರ್ಮಾನದೊಳಗಿನ ಆಧಾರವಾಕ್ಯಗಳನ್ನು ಕೊಟ್ಟಿರುತ್ತೇವೆ. ಪ್ರತಿವಾದಿ–ರೈತನು ಹೊಸ ಟೆನನ್ಸಿ ಕಾನೂನಿನ (೧೯೪೮ರದು) ೧೪ನೇ ಕಲಮಿನಲ್ಲಿ ಹೇಳಿದ ಅವಧಿಯೊಳಗ ಗೇಣಿ ಕೊಟ್ಟಿದ್ದಿಲ್ಲವಾದ್ದರಿಂದ ವಾದಿ–ಒಡೆಯನು ಈ ದಾವೆಯಲ್ಲಿ ಗೇಣಿ-ಸ್ಥಳದ ಕಬಜಾ ಕೊಡಿಸಬೇಕೆಂದು ಬೇಡಿದ್ದನು. ಹೊಸ ಟೆನನ್ಸಿ ಕಾನೂನಿನ ಕಲಮು ೭೦ನೆಯದು ಇಂತಹ ದಾವೆಗಳನ್ನು ಸ್ವೀಕರಿಸಿ ನಿರ್ಣಯಿಸುವ ಅಧಿಕಾರ ದಿವಾಣಿ ನ್ಯಾಯಾಲಯಗಳಿಗೆ ಇರುವದಿಲ್ಲವೆಂದು ಪ್ರತಿವಾದಿ ಪಕ್ಷದ ಪ್ರತಿಪಾದನೆಯಿತ್ತು. ನ್ಯಾಯಾಧೀಶರು ಆ ಕಾಯಿದೆಯ ೧೪, ೩೪, ೨೯ (೨), ೭೦, ೮೫ನೇ ಕಲಮುಗಳನ್ನು ಕೂಲಂಕಷವಾಗಿ ಚರ್ಚಿಸಿ ಅಧಿಕಾರಪಟ್ಟ ನ್ಯಾಯಾಲಯಗಳು ಕಲಮು ೧೪ ಮತ್ತು ೩೪ ರನ್ವಯ (ರೈತನು ಗೇಣಿಯನ್ನು ಬಾಕಿಯಿಟ್ಟುಕೊಂಡಿದ್ದಾಗ ಅಥವಾ ಒಡೆಯನಿಗೆ ಸ್ವಂತ ಸಾಗುವಳಿಗೆ ಬೇಕಾಗಿ) ಕಬಜೆ ಕೊಡಿಸುವ ಹುಕುಮನಾಮೆಗಳನ್ನು ಮಾಡಿದ ಮೇಲೆ ಅವುಗಳ ಅಮಲಬಜಾವಣೆ ಮಾಡುವ ಅಧಿಕಾರವಷ್ಟೇ ೨೯(೨)ನೇ ಕಲಮಿನನ್ವಯ ಟೆನನ್ಸಿ ಮಾಮಲೇದಾರರದಿರುತ್ತದೆಂದೂ, "ಒಡೆಯನು ಕಬಜೆಗೆ ಯೋಗ್ಯನಿರುತ್ತಾನೋ ಅಲ್ಲವೋ ಎಂಬುದನ್ನು ನಿರ್ಣಯಿಸುವ ಅಧಿಕಾರ ಮಾಮಲೇದಾರರಿಗೆ ಇರುವದಿಲ್ಲ"ಎಂದೂ ಸ್ಪಷ್ಟ ನಿರ್ಣಯ ಕೊಟ್ಟಿರುತ್ತಾರೆ. ಕಾನೂನಿನ ಅರ್ಥವಿವರಣೆ ಮಾಡುವ ಅಧಿಕಾರ ನ್ಯಾಯಾಲಯಗಳಿಗಷ್ಟೇ ಉಂಟು. ಸರಕಾರಕ್ಕೆ ಆ ಅಧಿಕಾರವಿರುವದಿಲ್ಲ. ಆದ್ದರಿಂದ ಇಂತಹ ಕಬಜೆ ಕೊಡಿಸುವ ಅಧಿಕಾರ ನ್ಯಾಯಾಲಯಗಳಿಗಿರುವದಿಲ್ಲ, ೮೫ನೇ ಕಲಮಿನಂತೆ ಆ ಅಧಿಕಾರ ರದ್ದಾಗಿದೆ, ಕಬಜೆ ಬೇಕಾದವರು ಟೆನನ್ಸಿ ಮಾಮಲೇದಾರ ಯಾ ಅವ್ವಲ ಕಾರಕೂನರ ಕಡೆ ಅರ್ಜ ಮಾಡಬೇಕು ಎಂದು ಮುಂಬಯಿ ಸರಕಾರ ಇತ್ತೀಚೆಗೆ ಒಂದು ಪ್ರಸಿದ್ಧಿ-ಪತ್ರ ಹೊರಡಿಸಿ ಜನರು ಮಾರ್ಗದರ್ಶನದಿಂದ ಯಾರೂ ಮೋಸ ಹೋಗದಂತೆ ಕಾಳಜಿಯಿಡಿ.

— ಬ್ರಿಟನದೇಶವು ಕಳೆದ ಯುದ್ಧದಿಂದ ಒದಗಿದ ಆರ್ಥಿಕ ವಿಪತ್ತಿಯೊಳಗಿಂದ ಇನ್ನೂ ಪಾರಾಗಿಲ್ಲ. ಅದರ ನಿರ್ಯಾತ ವ್ಯಾಪಾರವು ಆಯಾತ ವ್ಯಾಪಾರವನ್ನು ಸರಿಗಟ್ಟುವದಿಲ್ಲ. ಅದರಿಂದ ಇತ್ತ ಕೆಲ ಕಾಲದಿಂದ ಅದು ಅಮೇರಿಕೆಯಿಂದ ಡಾಲರ–ಸಾಲ ಪಡೆಯುತ್ತ ಪ್ರಸಂಗ ನಿಭಾಯಿಸುತ್ತಿತ್ತು. ಆದರೂ ಪರಿಸ್ಥಿತಿಯು ಸುಧಾರಿಸದ್ದರಿಂದ ಬ್ರಿಟಿಶ ಸರಕಾರವು ಆಚೆಯ ರವಿವಾರದಿಂದ ತನ್ನ ಪೌಂಡಿನ (ಸ್ಟರ್ಲಿಂಗ–ಪೌಂಡಿನ) ಬೆಲೆಯನ್ನು ಇಳಿಸಿದೆ. ಒಂದು ೧ ಪೌಂಡಿನ ಬೆಲೆ ೪ ಡಾಲರ ೩ ಸೆಂಟ (= ೪೦೩ ಸೆಂಟ) ಇತ್ತು. ಈಗ ಅದು ೧ ಪೌಂಡಿಗೆ ೨ ಡಾಲರ ೮೦ ಸೆಂಟ (= ೨೮೦ ಸೆಂಟ) ಆಗಿದೆ. ಬ್ರಿಟನ್ನಿನ ಪೌಂಡಿಗೂ ನಮ್ಮ ರೂಪಾಯಿಗೂ ಗಂಟು ಇರುವದರಿಂದ ನಮ್ಮ ಹಿಂದುಸ್ಥಾನ ಸರಕಾರವು ಸಹ ಕಳೆದ ರವಿವಾರದಿಂದ ನಮ್ಮ ರೂಪಾಯಿಯ ಡಾಲರ ಬೆಲೆಯನ್ನು ಇಳಿಸಿದೆ. ಒಂದು ೧ ರೂಪಾಯಿಯ ಬೆಲೆ ೩೦| ಸೆಂಟ ಇತ್ತು. ಅದು ಈಗ ೨೧ ಸೆಂ ಆಗಿದೆ. ನಮ್ಮಂತೆ ಬೇರೆ ೨೪ ದೇಶಗಳೂ ತಮ್ಮ ನಾಣ್ಯ ಬೆಲೆಯನ್ನು ಇಳಿಸಿವೆ. ಪಾಕಿಸ್ಥಾನವು ಮಾತ್ರ ಇಳಿಸಿಲ್ಲ. ಬ್ರಿಟನ್ನಿನ ಪೌಂಡಿಗೂ ನಮ್ಮ ರೂಪಾಯಿಗೂ ಇರುವ ವಿನಿಮಯ–ಸಂಬಂಧ ಹಿಂದಿನಂತೆಯೇ ಇದೆ. ೧ ರೂ ೧ ಶಿಲಿಂಗು ಇಲ್ಲವೆ ೧ ಪೌಂಡಿಗೆ ರೂ ೧೩–೫–೧ ಬೆಲೆಯುಂಟು. ರೂಪಾಯಿಯ ಬೆಲೆಯನ್ನು ಹೀಗೆ ಇಳಿಸಿದ್ದರಿಂದ ಅಮೇರಿಕೆಯ ಸರಕು ನಮ್ಮಲ್ಲಿ ತುಟ್ಟಿಯಾಗುವದು, ನಮ್ಮ ಸರಕನ್ನು ಅಮೇರಿಕೆಯಲ್ಲಿ ಅಗ್ಗ ದರದಿಂದ ಮಾರಲು ಬರುವದು

The Regional Transport Authority, Karnatak Region, Belgaum.

NOTICE.

Applications in the prescribed forms which can be had from this office, are invited for permits to operate stage carriage services on the following routes, from the existing operators on the routes or from the Joint Stock Companies of all or majority of the existing operators operating in or around the area or route for which application is made or others including Local bodies in the Karnatak Region

S. No	Name of route.
1	Ilkal–Gajendragad via Hanumasagar
2	Karajgi Rly. Station Agadi via Karajgi.
3.	Karajgi–Haveri via Agadi
4	Hubli–Indoor via Tadas

All applications should be submitted so as to be received in this office on or before 13-10-1949, and those received after this date will not be entertained

Applications should clearly state the time-table proposed to be maintained They should be complete in all respects and if incomplete, they will be treated as invalid

Permits will be granted on temporary basis in accordance with the existing instructions from Government and issued on and when the petrol quota allotted to this Region permits

No. 6991/1-B/KR of 1949 **D. K. SUKHTANKAR**, CAPT

Regional Transport Office K. R., Secretary, Regional Transport Authority,

Belgaum, 21-9-1949 Karnatak Region, Belgaum

ಧರ್ಮ-ಪಾಲನೆಯಿಂದಲೇ ಉನ್ನತಿ! ಧರ್ಮಚ್ಯುತಿಯಾದರೆ ಅವನತಿ ಖಂಡಿತ!

ಶ್ರೀ ಗೋಕರ್ಣ ಮಠಾಧೀಶರ ಉಜ್ವಲ ಸಂದೇಶ.

ಶ್ರೀ ಗೋಕರ್ಣ ಮಠಾಧೀಶರಾದ ಶ್ರೀಮದ್-ದ್ವಾರಕಾನಾಥತೀರ್ಥ ಗುರುಗಳ ಮುಕ್ಕಾಮು ಈಗ ಮಂಗಳೂರಿನಲ್ಲಿಯೇ ಇದ್ದು ಈ ವರ್ಷದ ಅವರ ಚಾತುರ್ಮಾಸ್ಯ ವ್ರತವು ಮಂಗಳೂರಿನಲ್ಲಿರುವ "ಗೋಕರ್ಣ ಮಠ"ದಲ್ಲೇ ನಡೆಯಿತು. ತಾ ೧೫ ದ [illegible] ಇಸವಿಯೆಂದು ಈ ವ್ರತಕ್ಕಾರಂಭವಾಯಿತು. ಈ ಚಾತುರ್ಮಾಸ್ಯದ ಅವಧಿಯಲ್ಲಿ ಮಠದೊಳಗೆ ದಿನಾಲು ಪಾಠ-ಪ್ರವಚನಾದಿಗಳೂ ಶ್ರೀಮದ್ಭಾಗವತದ ಪುರಾಣವೂ ನಡೆಯುತ್ತಿದ್ದವು. ಶ್ರೀ ಸಂಸ್ಥಾನದ ಗಣೇಶ-ಚತುರ್ಥಿಯ ವ್ರತವೂ ಅನಂತ-ಚತುರ್ದಶಿ ವ್ರತವೂ ಒಳ್ಳೇ ವಿಜೃಂಭಣೆಯಿಂದ ಈ ಮಠದಲ್ಲೇ ನಡೆದುವು. ಮತ್ತು ಭಾದ್ರಪದ ಶು॥ ೧೫ ಯ ದಿನ ಶ್ರೀ ಗುರುಗಳ ಚಾತುರ್ಮಾಸ್ಯದ ಸಮಾಪ್ತಿಯಾಯಿತು. ಪೂರ್ವಪರಂಪರೆಯಂತೆ ಅಂದು ಮಧ್ಯಾಹ್ನದಲ್ಲಿ ಶ್ರೀ ಸಂಸ್ಥಾನದ ಇಷ್ಟದೇವತೆಯಾದ ಶ್ರೀವೀರ ವಿಟ್ಠಲನ ಸನ್ನಿಧಾನದೊಳಗೆ ವಿಶೇಷ ಮಹಾಪೂಜೆ, ಬ್ರಾಹ್ಮಣಸಂತರ್ಪಣೆಗಳು ಜರುಗಿದವು. ಸಂಜೆ ಶ್ರೀ ಗುರುಗಳು ಮೆರವಣಿಗೆಯಿಂದ ಸೀಮೋಲ್ಲಂಘನೆ ಮಾಡಿ, ಶ್ರೀವೆಂಕಟರಮಣ ದೇವರ ಕೆರೆಯಲ್ಲಿ ಶಾಸ್ತ್ರದಂತೆ ಗಂಗಾಪೂಜೆ, ಮೃತ್ತಿಕಾ-ವಿಸರ್ಜನೆ ಮುಂತಾದವನ್ನು ಮುಗಿಸಿ ತಮ್ಮ ವ್ರತದ ಉದ್ಯಾಪನೆ ಮಾಡಿದರು. ಅಲ್ಲಿಂದ ಸ್ವಾಮಿಗಳು ಶ್ರೀ ವೆಂಕಟರಮಣ ದೇವರ ಮಂದಿರಕ್ಕೆ ಬಂದು ದೇವದರ್ಶನ ಪಡೆದರು. ಆ ಬಳಿಕ ಅಲ್ಲೇ ದೇವಸ್ಥಾನದ ವಿಶಾಲ ಸಭಾಮಂಟಪದಲ್ಲಿ ಮಂಗಳೂರಿನ ಮಹಾಜನರು ಶ್ರೀ ಗುರುಗಳ ಪಾದಪೂಜೆಯನ್ನು ಮಾಡಿ ಪಾವನರಾದರು. ಸಾವಿರಗಟ್ಟಲೆ ಸ್ತ್ರೀ-ಪುರುಷರು ಈ ಉತ್ಸವಕ್ಕೆ ಕೂಡಿದ್ದರು. ಪಾದಪೂಜೆಯಾದ ಮೇಲೆ ಶ್ರೀ ಗುರುಗಳು ಚಿಕ್ಕದೊಂದು ಭಾಷಣ ಮಾಡಿ, ಕೂಡಿದ ಜನರಿಗೆ ತಮ್ಮ ಶಾಂತಿ-ಸಂದೇಶವನ್ನಿತ್ತರು. ಈ ಭಾಷಣ ಎಲ್ಲರಿಗೂ ಕೇಳಿ ಬರುವಂತೆ ಧ್ವನಿ-ವಿಸ್ತಾರಕ ಯಂತ್ರದ ವ್ಯವಸ್ಥೆ ಮಾಡಲ್ಪಟ್ಟಿತ್ತು. ಶ್ರೀ ಗುರುಗಳ ಭಾಷಣದ ಸಾರವಿಂತಿದೆ —

ಇಂದು ಚಾತುರ್ಮಾಸ್ಯದ ಮುಕ್ತಾಯದ ದಿನ. ವ್ಯಾಪಾರ-ವ್ಯವಹಾರಗಳಿಗೆ ಪ್ರತಿಕೂಲವಾಗಿರುವ ಮಳೆಗಾಲದ ದಿನಗಳು ಈಗ ಮುಗಿದು, ಮನುಷ್ಯನು ಹಟ್ಟಿನ ಚಟುವಟಿಕೆಗಳನ್ನು ಆರಂಭಿಸುವ ಕಾಲವೀಗ ಆರಂಭವಾಗಿದೆ. ಇದಕ್ಕೆ ಪೂರಕವಾಗಿ, ಪರಮಾತ್ಮನು ಮಳೆಗಾಲದ ೪ ಮಾಸಗಳಲ್ಲಿ "ಯೋಗನಿದ್ರೆ"ಯನ್ನು ಹೊಂದುತ್ತಾನೆಂದು ನಮ್ಮ ಶಾಸ್ತ್ರಗಳಲ್ಲಿ ಹೇಳಿದೆ. ಇದರ ತಾತ್ಪರ್ಯವಿಷ್ಟೇ. ದಿವಸದ ೨೪ ತಾಸುಗಳಲ್ಲಿ ೧೬ ತಾಸು ದುಡಿದ ಮಾನವನು ೮ ತಾಸು ವಿಶ್ರಾಂತಿಯನ್ನು ಹೇಗೆ ಪಡೆಯುವನೋ ಹಾಗೆಯೇ ವರ್ಷದ ೮ ಮಾಸಗಳಲ್ಲಿ ವ್ಯಾಪಾರ-ವ್ಯವಹಾರಾದಿಗಳನ್ನು ಮಾಡಿದ ಮನುಷ್ಯನಿಗೆ ವಿಶ್ರಾಂತಿ ಮತ್ತು ಧ್ಯಾನಗಳಿಗಾಗಿ ಚಾತುರ್ಮಾಸದ ೪ ತಿಂಗಳು ಪ್ರತ್ಯೇಕಿಸಿ ಕೊಡಲ್ಪಟ್ಟಿವೆ. ಈ ೪ ತಿಂಗಳಲ್ಲಿ ಮನುಷ್ಯನು ತನ್ನ ಹಿಂದಿನ ಕಾರ್ಯದ ಸಿಂಹಾವಲೋಕನ ಮಾಡಿ, ಅದರ ಅನುಭವದಿಂದ ಮುಂದಿನ ತನ್ನ ಚಟುವಟಿಕೆಗಳ ಮತ್ತು ಕರ್ತವ್ಯಕರ್ಮಗಳ ರೂಪರೇಷೆಯನ್ನು ರೂಪಿಸಿಕೊಳ್ಳಬೇಕು. ಈ ಸಮಯದಲ್ಲಿ ನಿಮಗೆ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ.

ಶ್ರೀ ಕಾಶೀ ಮಠಾಧೀಶರ ನಿರ್ಯಾಣ.

ಕಳೆದ ಆಷಾಢ ಶು॥ [illegible] ದಿನ ರಾತ್ರೆ ಶ್ರೀ ಕಾಶೀ ಮಠಾಧೀಶ ಶ್ರೀಮತ್ ಸುಕೃತೀಂದ್ರ ತೀರ್ಥರು ಕಣ್ಮರೆಯಾದ್ದರಿಂದ ನಮ್ಮ ವಿಶಾಲ ಸಮಾಜಕ್ಕೆ ಅತೀವ ದುಃಖವಾಗಿದೆ. ಅವರು ಬಹಳ ಸಾತ್ವಿಕರೂ, ಸಹನಶೀಲರೂ, ಧರ್ಮನಿಷ್ಠರೂ ಇದ್ದರು. ಶ್ರೀ ಸುಧೀಂದ್ರತೀರ್ಥರಿಗೆ ಅವರು ಆಶ್ರಮ ಕೊಟ್ಟು ಬಹಳ ಕಾಲವಾಗಿಲ್ಲ. ಶ್ರೀ ಸುಧೀಂದ್ರರಿಗೆ ಇನ್ನೂ ಕೆಲವು ವರ್ಷ ಗುರುಗಳ ಸಹವಾಸ ಲಭಿಸಬೇಕಿತ್ತು. ಶಿಷ್ಯಸಮಾಜವೂ ಕೂಡ ಶ್ರೀಮತ್-ಸುಕೃತೀಂದ್ರರ ಕಡೆಯಿಂದ ಸಮಾಜಾಭ್ಯುದಯದ ಎಷ್ಟೋ ಕಾರ್ಯಗಳನ್ನು ನಿರೀಕ್ಷಿಸಿತ್ತು. "ಜಾತಸ್ಯ ಹಿ ಧ್ರುವೋ ಮೃತ್ಯುಃ" ಎಂಬುದು ನಿಜ. ಆದರೂ ಶ್ರೀ ಸುಕೃತೀಂದ್ರರು ಮಹಾಸಮಾಧಿಯನ್ನು ಪಡೆಯಲು ಇದು ತಕ್ಕ ಕಾಲವಾಗಿದ್ದಿಲ್ಲ. ಆದರಿಂದ ಶ್ರೀಗಳ ಈ ಅಕಾಲಿಕ ಸಮಾಧಿಯು ಸಕಲರಿಗೂ ಅಪಾರ ವ್ಯಸನವನ್ನುಂಟು ಮಾಡಿದೆ. ಆದರೆ ಇನ್ನು ವ್ಯಸನಪಡುತ್ತ ಕೂತುಕೊಳ್ಳುವದರಿಂದ ಪ್ರಯೋಜನವಿಲ್ಲ! ಸಮಾಜದವರು ಈಗ ಕಾಶೀ ಮಠದ ವ್ಯವಹಾರವನ್ನು ತ್ರಿಕರಣಪೂರ್ವಕ ಸುಗಮಗೊಳಿಸಿ, ಮುಕ್ತ ಗುರುಗಳ ಉಪದೇಶದಂತೆ ವರ್ತಿಸಬೇಕು. ಅದೇ ಈಗ ಅವರ ಕರ್ತವ್ಯ. ಶ್ರೀಮತ್ ಸುಧೀಂದ್ರ ತೀರ್ಥರಿಗೆ ಜಗನ್ನಿಯಾಮಕನು ದೀರ್ಘಾಯುರಾರೋಗ್ಯವನ್ನೂ ವಿದ್ಯಾ-ಸಂಪತ್ತನ್ನೂ ದಯಪಾಲಿಸಿ, ಅವರ ಕೈಯಿಂದ ಸಮಾಜದ ಏಳಿಗೆಯನ್ನು ಮಾಡಿಸಲೆಂದು ನಾವು ಪ್ರಾರ್ಥಿಸುತ್ತೇವೆ.

ಈಗ ಎಲ್ಲೆಲ್ಲೂ ಅಶಾಂತಿ ಹಬ್ಬಿದೆ.

ಇಂದು ಜಗತ್ತಿನಲ್ಲಿ ಅಶಾಂತಿ ಹೆಚ್ಚಾಗಿದೆ. ಲೋಕ-ಶಾಂತಿಗಾಗಿ ಕೆಲವರು ಪ್ರಯತ್ನ ನಡೆಸಿರುತ್ತಿದ್ದರೂ ಅಶಾಂತಿಯು ಹೆಚ್ಚುತ್ತಲೇ ಇದೆ! ಕಡಿಮೆಯಾಗುತ್ತಿರುವದಿಲ್ಲ! ಸತ್ಯ, ಅಹಿಂಸೆಗಳಿಂದ ನಮ್ಮ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಸ್ವಾತಂತ್ರ್ಯ ಸಿಗುತ್ತಲೇ ತಮಗೆ ಸಾಕಷ್ಟು ಅಶನ-ವಸನಗಳು ದೊರೆತು ನೆಮ್ಮದಿಯಾಗುವದೆಂದು ಜನತೆ ನಂಬಿಕೊಂಡಿತ್ತು. ಅಧಿಕಾರಿಗಳಾದರೂ ಆ ದಿಸೆಯಿಂದ ಪ್ರಯತ್ನ ನಡೆಸಿದ್ದಾರೆ. ಆದರೂ ಅಶನ-ವಸನಗಳ ಆ ದಾರಿದ್ರ್ಯ ಇನ್ನೂ ಹಿಂಗಲೊಲ್ಲದು! ಯಾಕೆ? ಜಾತಿ-ಜಾತಿಗಳೊಳಗೆ ಐಕ್ಯ ಸಾಧಿಸಲು ಧುರೀಣರು ಮಾಡಿದ ಸಕಲ ಯತ್ನಗಳು ವಿಫಲವಾಗಿ ದೇಶವು ಕೊನೆಗೆ ಇಬ್ಭಾಗವಾಯಿತು! ಲಕ್ಷಗಟ್ಟಲೆ ಜನರು ದೇಶವಿಚ್ಛೇದನೆಯಿಂದಾದ ಹತ್ಯಾಕಾಂಡಕ್ಕೆ ಬಲಿಯಾದರು! ಕೋಟ್ಯಾವಧಿ ಜನ ನಿರ್ಗತಿಕರಾದರು! ಯಾಕೆ? ರೋಗರುಜಿನಗಳ ನಿವೃತ್ತಿಯ ಬಗ್ಗೆ ಈಗ ಹೊಸ ಹೊಸ "ಅದ್ಭುತ" ಶೋಧಗಳಾಗುತ್ತಿವೆ, ಡಾಕ್ಟರರು ಹೆಚ್ಚಾಗಿದ್ದಾರೆ, ಚಿಕಿತ್ಸಾಲಯಗಳೂ ಹೆಚ್ಚುತ್ತಿವೆ. ಆದರೂ ಕ್ಷೇಮವಾಗಲೊಲ್ಲದು. ಶೋಧಗಳು ಹೆಚ್ಚಾದಂತೆ ಹೊಸ ಹೊಸ ರೋಗಗಳೂ ತಲೆದೋರುತ್ತಿವೆ! ಹೃದ್ರೋಗ, ಕ್ಷಯರೋಗ ಮುಂತಾದ ಘೋರ ವ್ಯಾಧಿಗಳು ಹೆಚ್ಚುತ್ತಲಿವೆ! ಸಮಾಜದ ಸಂರಕ್ಷಣೆ ಮಾಡಿ ಜನರ ವಿತ್ತ-ಜೀವಿತಗಳನ್ನು ಕಾಪಾಡಲು ಎಲ್ಲೆಲ್ಲೂ ಪೋಲೀಸರಿದ್ದಾರೆ, ಗೃಹರಕ್ಷಕರಿದ್ದಾರೆ, ಸೈನ್ಯವಿದೆ. ಆದರೂ ಜನರ ಭೀತಿ ಕಡಿಮೆಯಾಗಿಲ್ಲ, ಅವರಿಗೆ ಸುರಕ್ಷಿತತೆಯೆನಿಸುವದಿಲ್ಲ! ಜನರು ತಮ್ಮ ರಕ್ಷಣೆ ತಾವೇ ಮಾಡಿಕೊಳ್ಳಬೇಕೆಂದು ಕೆಲವು ಕಡೆ ಮಂತ್ರಿಗಳು ಅಪ್ಪಣೆ ಮಾಡಿದ ಸುದ್ದಿಗಳು ಕೇಳಿ ಬರುತ್ತಿವೆ! ಈಗ ಶಾಲೆ-ಕಾಲೇಜುಗಳಿಗೆ ಕೊರತೆಯಿಲ್ಲ, ಅವುಗಳ ಸಂಖ್ಯೆ ಬೆಳೆಯುತ್ತಲಿದೆ. ಆದರೂ ಜನರಲ್ಲಿ ಅಜ್ಞಾನ ಕಡಿಮೆಯಾಗಿಲ್ಲ! ದುರ್ಮಾರ್ಗಗಾಮಿಗಳ ಸಂಖ್ಯೆಯಂತೂ ಹೆಚ್ಚುತ್ತ ನಡೆದಿದೆ! ಇದನ್ನೆಲ್ಲ ನೋಡಿದರೆ ಸಮಾಜವು ಈಗ ಉನ್ನತಿಯ ಕಡೆ ಸಾಗಿರದೆ ಅವನತಿಯ ಮಾರ್ಗ ಹಿಡಿದಿರುವಂತೆ ತೋರುತ್ತಿದೆ! ಇದರ ಕಾರಣವೇನು?

ಧರ್ಮಚ್ಯುತಿಯೇ ಇದಕ್ಕೆ ಕಾರಣ!

ನಿಜವಾದ ಉನ್ನತಿ ಮತ್ತು ಅವನತಿಗಳಿಗೆ ಅನುಕ್ರಮವಾಗಿ ಧರ್ಮರಕ್ಷಣೆ ಮತ್ತು ಧರ್ಮಚ್ಯುತಿ ಇವೇ ಕಾರಣಗಳಾಗಿವೆ. ಧರ್ಮವು ಮಾನವ-ಜೀವನದ ಉಸಿರು. ಆ ಧರ್ಮವಿಲ್ಲದರೆ ಜೀವನ ವ್ಯರ್ಥವಾಗುತ್ತಿದೆ, ಕ್ಲಿಷ್ಟವಾಗುತ್ತಿದೆ. ನಮ್ಮ ಶ್ರುತಿಗಳು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವೆಂಬ ಚತುರ್ವಿಧ ಪುರುಷಾರ್ಥಗಳನ್ನು ಹೇಳಿವೆ. ಜನರಿಗೆ ಅವುಗಳಲ್ಲಿ ಅರ್ಥ ಬೇಕು, ಕಾಮ ಬೇಕು. ಆದರೆ ಧರ್ಮ ಬೇಡ! ಧರ್ಮವೆಂದರೇನು ಎಂಬುದರ ಅರಿವು ಸಹ ಜನರಿಗೆ ಇಲ್ಲದಂತಾಗಿದೆ! ಎಂಥ ದುಃಸ್ಥಿತಿಯಿದು!! ದಯಾ, ಕ್ಷಮಾ, ಶಾಂತಿ ಮೊದಲಾದ ಸದ್ಗುಣಗಳಿಂದ ಭೂಷಿತವಾದ ಪವಿತ್ರ ಹಿಂದು ಧರ್ಮದ ನಾಡಿನಲ್ಲಿ ಈ ದುಃಸ್ಥಿತಿಯೇ?

ಧರ್ಮದ ರಹಸ್ಯ.

ಜನರು ಪರಸ್ಪರ ಸಹಕಾರ-ಸೌಹಾರ್ದದಿಂದ ನಡೆದು, ಆರೋಗ್ಯ, ಆಯುಷ್ಯ ಜ್ಞಾನ, ಸಂಪತ್ತಿ, ಸತ್ಸಂತತಿ ಮುಂತಾದ ಇಷ್ಟಾರ್ಥಗಳನ್ನು ಸಂಪಾದಿಸಿ, ಅವುಗಳನ್ನು ಅಬಾಧಿತವಾಗಿ ಕಾಪಾಡಿಕೊಳ್ಳುವಷ್ಟು ಆತ್ಮ-ಶಕ್ತಿಯನ್ನು ಬೆಳೆಸಿಕೊಳ್ಳುವದೇ ಧರ್ಮದ ರಹಸ್ಯವಾಗಿದೆ. "ಯತೋಽಭ್ಯುದಯ-ನಿಃಶ್ರೇಯಸಸಿದ್ಧಿಃ ಸ ಧರ್ಮಃ॥" ಯಾತರ ಸಹಾಯದಿಂದ ಮಾನವನು ಇಹದಲ್ಲಿ ಆಯುರಾರೋಗ್ಯ – ಐಶ್ವರ್ಯ – ಸಂತತಿ – ಸಂಪತ್ತಿಗಳನ್ನೂ ಪರದಲ್ಲಿ ನಿತಾಂತ ಸುಖವನ್ನೂ ಪಡೆಯಬಹುದೋ ಅದೇ ಧರ್ಮ – ಎಂದು ಕಣಾದ ಮುನಿಯು ಹೇಳಿರುತ್ತಾನೆ. ಧರ್ಮವು ಐಹಿಕ ಸುಖಸಾಧನೆಗೆ ವಿರುದ್ಧವಿರುವದಿಲ್ಲ. ಅಷ್ಟೇ ಅಲ್ಲ, ಆ ಸುಖವನ್ನು — ನಿಜವಾದ ಸುಖವನ್ನು — ಸಾಧಿಸಿಕೊಡಬಲ್ಲ ತತ್ವವೇ ಧರ್ಮವೆಂದು ನಮ್ಮ ಶ್ರುತಿ ಶಾಸ್ತ್ರ-ಪುರಾಣಗಳು ಬೋಧಿಸುತ್ತಿವೆ. ಅಂಥ ಸುಖ-ಸಾಧಕ ಧರ್ಮವನ್ನು ನಾವು ರಕ್ಷಿಸಬೇಕು, ಪಾಲಿಸಬೇಕು. "ಧರ್ಮೋ ರಕ್ಷತಿ ರಕ್ಷಿತಃ!" ಎಂದು ಮನುಮಹರ್ಷಿಯು ಬೋಧಿಸಿದ್ದಾನೆ. ನಮ್ಮ ರಕ್ಷಣೆಯಾಗಬೇಕಾದರೆ, ನಮಗೆ ನಿಜವಾದ, ನಿರ್ದುಷ್ಟ ಮತ್ತು [illegible] ಸುಖ ಬೇಕಾಗಿದ್ದರೆ ನಾವು ಧರ್ಮವನ್ನು ಕಾಪಾಡಬೇಕು.

ಷಡ್ವೈರಿಗಳನ್ನು ಜಯಿಸಿರಿ

[illegible]

ಆದ್ದರಿಂದ [illegible] ಧರ್ಮದ [illegible] ಜನನ್ನು [illegible]

ಎಂದು ಶ್ರೀ ಗುರುಗಳು [illegible] ಶ್ರೀ [illegible] ಸಕಲ [illegible]

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

ವಿಷಯದ [illegible] ಶನಿವಾರ ದಿನ [illegible] ಮತ್ತು ವ್ಯವಹಾರ" ಎಂಬ ವಿಷಯದ [illegible]

[illegible]

ಹೊನ್ನಾವರ— [illegible]

[illegible]

ಜಾಹೀರ ನೋಟೀಸು.

[illegible] ಶೆಟ್ಟಿ [illegible]

ಸದರ್ಹು [illegible] ಶೆಟ್ಟಿ [illegible] (೧) [illegible] (೨) [illegible] ಶೆಟ್ಟಿ (೩) [illegible]

[illegible]

ಕವಲಕ್ಕಿ [illegible]

[illegible] ನಾರಾಯಣ ಶೆಟ್ಟಿ

ನಮ್ಮಲ್ಲಿ ಕಸ್ತದಿಂದ ತಯಾರಿಸಿದಂಥ ಚಕಾಸ ಹುರಿ, ಬಾವಿ ಹಗ್ಗ, ಬ್ರಶ ಮೆಟ, ಮೆಟಿಂಗ ಮುಂತಾದವುಗಳು ಯೋಗ್ಯ ದರದಲ್ಲಿ ಸಿಗುತ್ತವೆ

ಚಿಕರಮನಿ ಕೊರಿಯರ್ ಸೊಸೈಟಿ ಲಿಮಿಟೆಡ್
ಹೊನ್ನಾವರ (ಉ. ಕ.)

ಪ್ರವಾಸಿಕರಿಗೆ ಯೂವತ್ತೂ ಆಧುನಿಕ ವ್ಯವಸ್ಥೆಗಳು.
ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲೊಜಿಂಗ

ದಿ ಶೆ ನ ರಾ ಲೊ ಜ

(ಊಟ ಮತ್ತು ವಸತಿಗೃಹ)
ವ್ಹೋಬಿರ-ಸ್ಟೆಂಡ, ಹುಬ್ಬಳ್ಳಿ.

ಮಾಲಕ:— ಮ್ಯಾನೆಜರ್.

[illegible] ಪ್ರಚಾರಕ ಮಂಡಳಿ.

[illegible] ವರ್ಷದ ಕಾರ್ಯದ ವರದಿ

[illegible]

ಟೆಂಡರ ನೋಟೀಸು

[illegible]

(೧) [illegible]

( ) [illegible]

(೩) [illegible]

(೪) [illegible]

(೫) [illegible]

(೬) [illegible]

(೭) [illegible]

(೮) [illegible]

M K JADHAV

[illegible]

ಸ್ಪ್ರೆಸಿಡೆನ್ಸಿ(?) ಬೋರ್ಡ ಆಫ್ ಸುಪರ ವ್ಹಾಜಿಂಗ ಯೂನಿಯನ್ಸ್, ಲಿ., ಎಜ್ಯುಕೇಶನಲ್ ಕಮಿಟಿ, ಕುಮಟಾ ಉ. ಕನ್ನಡ

ಸರಕ್ಯುಲರ ನಂ. ೮.

[illegible]

R V PANDIT

[illegible]

THE BANK OF RURAL INDIA LTD,

(*Incorporated in British India, Liability of Members limited*)

HEAD OFFICE — "Satvabhama Bhavan", KARWAR, N. K.

Offices at — KARWAR KUMTA SIRSI HONAVAR YELLAPUR, BHATKAL SIDDAPUR ANKOLA HUBLI & DHARWAR

Authorised Capital	Rs 10,00,000
Subscribed Capital	Rs 5,00,000,
Paid up Capital & Reserves	Rs 5,08,502-8-0

Rates of Interest on Deposits

Current a/c @ 1% p a, *Savings Bank a/c @ 2%*

Fixed Deposits for 3 months @ 3% per annum,

„ for 6 months @ 3½%

„ for 12 months or more, @ 4%

All kinds of modern Banking business transacted

Karwar
14-2-1948

P X GACIROUS
MANAGING DIRECTOR

— R —

ಸ್ಥಾನಿಕ ಬಟ್ಟೆ ನಿಯಂತ್ರಣಾಧಿಕಾರಿಗಳ ಕಚೇರಿ

ಬಟ್ಟೆ

[illegible]

(೧) [illegible] ... (ex-mill) ... [illegible]

(೨) [illegible] ... (process) ... [illegible]

(೩) [illegible] ... (surplus) ... [illegible]

[illegible]

(೫) [illegible]

(೬) [illegible]

(೪) [illegible]

(೫) [illegible] ... (power-looms) ... (release) ... [illegible]

(೬) [illegible]

(ಜಿಲ್ಹಾ ದಫರು ಅಧಿಕೃತ ಪ್ರಕಟಿಸಿದ್ದು)

— R —

ನೂಲು

[illegible]

(೧) [illegible]

THE AREA RATIONING AUTHORITY.

KARNATAK REGION BELGAUM

NOTICE.

All the Motor Vehicle Owners in the Karnatak Region(including South Satara District) are hereby informed that the issue of Basic Ration for motor vehicles for October—November and December 1949 quarter will be issued at the following centres on the dates and places shown against each centre —

Dist	Centre	Location	Date	Time
(1) Dharwar	Hubli	Travellers Bungalow	25th to 23th Sept 1949	11-30 a m to 4 p m
(2) Kanara	Karwar	Dist. Bungalow	28th & 29th Sept 1949	—do—
(3) Bijapur	Bijapur	Inspection Bungalow	29th Sept 49	—do—
(4) S Satara	Sangli	Travellers Bungalow	25th to 27th Sept 1949	—do—
(5) Belgaum	Belgaum	A R A 's Office	26th Sept 49 onwards	—do—

2 Supplementary ration for cars, special coupons for Police buses, Municipalities and Ambulances and ration for Trade Numbers will be issued only at the Head Office at Belgaum

3 The prescribed application forms can be had either at each distribution centre or from the Office of the Area Rationing Authority Belgaum

4 Conditions for issue of basic Ration will be the same as published in this office Notice No P R O — 2637 dated 15-5-49

No 6102 of 1949
Area Rationing Office, K R,
Belgaum 21-9-1949

D K SUKHTANKAR, CAPT
Area Rationing Authority
Karnatak Region, Belgaum

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಕುಮಟೆಯಲ್ಲಿ ವರ್ಷಕ್ಕೆ ರೂ. ೩
ಅಂಚೆಯಿಂದ ವರ್ಷಕ್ಕೆ ೩—೧—೦
೬ ತಿಂಗಳಿಗೆ ೧—೧೦—೦
ಬಿಡಿ ಸಂಚಿಕೆಗೆ ೦—೧—೦
ವ್ಹಿ. ಪಿ. ಯಿಂದ ಕಳಿಸುವದಿಲ್ಲ.
೬ ಆಣೆ ಅಚ್ಚಿಗೆ ಬೇಕು.
ವರ್ಗಣಿಯ ಹಣವನ್ನು
ಮುಂಗಡವಾಗಿ ಕೊಡತಕ್ಕದ್ದು

Reg. No. B. 1270. Monday, 3-10-1949.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೧೪.

ಕುಮಟಾ ಸೋಮವಾರ, ತಾ ೩—೧೦—೧೯೪೯

ಜಾಹೀರಾತುಗಳ ದರ.
೧೪ ಎಮ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಅಲ್ಪ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸವಿಸ್ತರ
ಅಲ್ಲದೆ ಪತ್ರದ್ವಾರಾ
ತಿಳಿಸಲಾಗುವದು.

ಸುದ್ದಿಗಳ ಸಂದೂಕ

— ನಿನ್ನೆಯ ದಿನ ಭಾರತದಲ್ಲೆಲ್ಲಾ ಪೂಜ್ಯ ಮಹಾತ್ಮಾ ಗಾಂಧಿಯವರ ಜಯಂತಿಯ ಉತ್ಸವನಾಯಿತು. ಮದ್ರಾಸಿನಲ್ಲಿ ಹೋದ ವರ್ಷ ಮಹಾತ್ಮಾಜಿಯವರ ಅಸ್ಥಿಗಳ ವಿಸರ್ಜನೆ ಮಾಡಿದ ಸ್ಥಳದಲ್ಲಿ ಒಂದು ಮಂಟಪ ಕಟ್ಟಿಸಿ ಅದರಲ್ಲಿ ಮಹಾತ್ಮರ ಮೂರ್ತಿಯನ್ನು ಸ್ಥಾಪಿಸಬೇಕೆಂದೂ, ಮಹಾತ್ಮರ ಪ್ರಾಯದ ರೂಪಕವಾಗಿ ೭೯ ಅಡಿ ಎತ್ತರವುಳ್ಳ ಒಂದು ಸ್ತೂಪವನ್ನು ಕಟ್ಟಿಸಬೇಕೆಂದೂ ನಿಶ್ಚಿತವಾಗಿದೆ. ಇದಕ್ಕೂ ಹೆಚ್ಚಿನ ಮಹತ್ವದ ವಾರ್ತೆಯೆಂದರೆ, ಅಮೇರಿಕೆಯ ರಾಜಧಾನಿಯಾದ ವಾಶಿಂಗ್ಟನ್‌ದಲ್ಲಿ ಮಹಾತ್ಮಾಜಿಯವರ ಭವ್ಯ ಸ್ಮಾರಕವನ್ನೊಂದು ರಚಿಸಲು ಅಮೇರಿಕೆಯ ಕಾನೂನು-ಸಭೆಗಳು ರಚಿಸಿರುವ ಕಾನೂನಿಗೆ ಕಳೆದ ಗುರುವಾರ ಅಧ್ಯಕ್ಷ ಹ್ಯಾರಿ ಟ್ರೂಮನ್ನರು, ಭಾರತದ ರಾಯಭಾರಿಣಿಯಾದ ಶ್ರೀಮತೀ ವಿಜಯಲಕ್ಷ್ಮಿ ಪಂಡಿತ, ಅಮೇರಿಕೆಯೊಳಗಿನ ಇಂಡಿಯಾ ಲೀಗದ ಅಧ್ಯಕ್ಷ ಶ್ರೀ|| ಜೇ ಜೇ ಸಿಂಗ, ಸದರಿ ಕಾನೂನಿನ ಮೂಲೋತ್ಪಾದಕ ಮಿ|| ಇಮ್ಯಾನ್ಯುಯಲ್ ಸೆಲ್ಲರ, ಭಾರತದೊಳಗಿನ ಅಮೇರಿಕೆಯ ರಾಯಭಾರಿ ಮಿ|| ಲೊಯ್ ಹೆಂಡರಸನ್ ಪ್ರಮುಖರ ಸಮಕ್ಷ ತಮ್ಮ ಅಂಕಿತವನ್ನು ಹಾಕಿ, ಮಹಾತ್ಮಾಜಿಯವರಿಗೆ ಅಮೇರಿಕೆಯವರ ಗೌರವದ ಅಭಿವಂದನೆಗಳನ್ನು ಸಲ್ಲಿಸಿದರು. ಗಾಂಧಿಜಿಯಂಥಹ ಅಲೌಕಿಕ, ಶಾಂತಿದೂತರನ್ನು ಗೌರವಿಸಿ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಜನರು ತಾವೂ ಲೋಕ-ಶಾಂತಿಗಾಗಿ ದುಡಿಯುವೆವೆಂದು ಜಗತ್ತಿಗೆ ಇಂದು ಸಾರಿ ಹೇಳುತ್ತಿದ್ದಾರೆಂದೂ, ಮಹಾತ್ಮರ ಆದರ್ಶ ನೀತಿ-ಮಾರ್ಗವನ್ನು ಅನುಸರಿಸಲು ಜಗತ್ತಿಗೆಲ್ಲ ಬೋಧಿಸುತ್ತಿರುವರೆಂದೂ ಈ ಸಮಾರಂಭದ ಕಾಲಕ್ಕೆ ಶ್ರೀ|| ಸಿಂಗರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ವಾಶಿಂಗ್ಟನ್ನಿನೊಳಗಿನ ಈ ಗಾಂಧಿ-ಸ್ಮಾರಕಕ್ಕಾಗಿ ೧ ಕೋಟಿ ಡೊಲರ (ಈಗಿನ ವಿನಿಮಯ ದರದಿಂದ ಸುಮಾರು ೪[illegible] ಕೆ [illegible] ರೂ.) ಹಣ ಕೂಡಿಸುವ ಸಂಕಲ್ಪವನ್ನು ಸ್ಮಾರಕದ ವ್ಯವಸ್ಥಾಪಕರು ಮಾಡಿರುತ್ತಾರೆ

— ಭಾರತದ ಮುಖ್ಯ ಪ್ರಧಾನ ಪಂ|| ಜವಾಹರಲಾಲ ನೆಹರುರವರು ಈ ವಾರ ಅಮೇರಿಕೆಗೆ ಹೊರಟು ಹೋಗುವವರಿದ್ದಾರೆ. ಅವರನ್ನು ಲಂಡನದಿಂದ ಅಮೇರಿಕೆಗೆ ಕರೆದೊಯ್ಯಲು ಸ್ವತಃ ಅಧ್ಯಕ್ಷ ಟ್ರೂಮನ್ನರ ಖಾಸಗಿ ವಿಮಾನವು ಬರುವದೆಂದು ಪ್ರಕಟವಾಗಿದೆ. ಪಂಡಿತಜಿಯವರು ಅಮೇರಿಕೆಯಲ್ಲಿ ಅಧ್ಯಕ್ಷ ಟ್ರೂಮನ್ನರ ಅಭ್ಯಾಗತರಾಗಿ, ಅಧ್ಯಕ್ಷರ ನಿವಾಸಸ್ಥಾನದ ಬಳಿಯಲ್ಲೇ ಇರುವ ಬ್ಲೇರ-ಹೌಸ ಎಂಬ ಪ್ರಾಸಾದದಲ್ಲಿ ಇಳಕೊಳ್ಳುವರೆಂದೂ ಪ್ರಕಟವಾಗಿದೆ. ಪಂಡಿತರು ಸುಮಾರು ೧ ತಿಂಗಳ ಕಾಲ ಅಮೇರಿಕೆಯಲ್ಲುಳಿಯುವರು. ಬೇರೆ ಬೇರೆ ಸಂಸ್ಥೆಗಳ ನಿಮಂತ್ರಣೆಯನ್ನು ಮನ್ನಿಸುವದಕ್ಕಾಗಿ ಅವರು ಸಂಯುಕ್ತ ಸಂಸ್ಥಾನಗಳ ದಕ್ಷಿಣ ಭಾಗದಲ್ಲೂ ಪಶ್ಚಿಮ ಭಾಗದಲ್ಲೂ ಕೆಲವು ದಿನ ಸಂಚರಿಸಬೇಕಾಗುವದು. ಲೇಕ ಸಕ್ಸೆಸದಲ್ಲಿ ಈಗ ಕೂಡಿರುವ ಸಂಯುಕ್ತ ರಾಷ್ಟ್ರಗಳ ಸಭೆಯ ಅಧಿವೇಶನಕ್ಕೂ ಒಂದೆರಡು ದಿನ ಪಂಡಿತಜಿಯವರು ಬೆಟ್ಟಿ ಕೊಟ್ಟು ಅದರಲ್ಲಿ ಭಾಗ ವಹಿಸುವಂತೆ ಆ ಸಭೆಯೊಳಗಿನ ಮಹಾನುಭಾವರು ಪ್ರಯತ್ನ ನಡಿಸಿದ್ದಾರೆ. ಈ ಸಂದರ್ಶನವನ್ನು ಮುಗಿಸಿಕೊಂಡು, ಕೇಂದ್ರ ಕಾನೂನ ಮಂಡಳದ ನವಂಬರ ಅಧಿವೇಶನದ ಪ್ರಾರಂಭಕ್ಕೆ ಸರಿಯಾಗಿ ಪಂಡಿತರು ಭಾರತಕ್ಕೆ ಮರಳಿ ಬರುವರು

— ಸಕ್ಕರೆಯ ಗಿರಣಿಗಳೂ ದೋಕ ವರ್ತಕರೂ ಸಕ್ಕರೆಯ ಧಾರಣೆಗಳನ್ನು ಯೋಗ್ಯ ಕಾರಣವಿಲ್ಲದೆ ಕಂಡಾಬಟ್ಟೆ ಏರಿಸಲಾರಂಭಿಸಿದ್ದರಿಂದ ಮೊದಲು ಸಂಯುಕ್ತ ಪ್ರಾಂತ ಸರಕಾರವೂ, ಹಿಂದಿನಿಂದ ಹಿಂದುಸ್ಥಾನ ಸರಕಾರವೂ ಗಿರಣಿಗಳಲ್ಲೂ ದೋಕ ವರ್ತಕರ ಸಂಗ್ರಹದಲ್ಲೂ ಇದ್ದ ಸಕ್ಕರೆಯ ಸಂಗ್ರಹಗಳನ್ನೆಲ್ಲ ಕಳೆದ ತಿಂಗಳ ಪ್ರಾರಂಭಕ್ಕೆ ಒಮ್ಮೆಲೇ ತಮ್ಮ ವಶಕ್ಕೆ ತಕ್ಕೊಂಡವು. ಈ ಬಗ್ಗೆ ಜನರು ಆಕ್ಷೇಪ ಕೊಳ್ಳಲಿಲ್ಲ. ಆಕ್ಷೇಪ ಕೊಳ್ಳುವ ಕಾರಣವೂ ಇದ್ದಿಲ್ಲ. ಆದರೆ ನಿಯಂತ್ರಣದ ಹಿಂದೆಯೇ ನಿಯಂತ್ರಿತ ಸರಕು ಕಣ್ಮರೆಯಾಗಿ ಕತ್ತಲೆಯ ಕೋಣೆಗಳನ್ನೂ ಅಲ್ಲಿಂದ ಕಳ್ಳ ಸಂತೆಯನ್ನೂ ಸೇರುತ್ತದೆಂಬುದನ್ನು ಅಧಿಕಾರಿಗಳು ಇನ್ನೂ — ನಿಯಂತ್ರಣದ ೪-೬ ವರ್ಷದ ಅನುಭವ ಸಿಕ್ಕ ಮೇಲೂ ಸಹ! — ಅರಿತುಕೊಂಡಿಲ್ಲೆಂಬಂತೆ ತೋರುತ್ತದೆ! ಇಲ್ಲದಿದ್ದರೆ ಕಳ್ಳಸಂತೆಗೆ ಆರಂಭವಾಗದಂತೆ ಮತ್ತು ಅಲ್ಲಲ್ಲಿಯ ಪೇಟೆಗಳಲ್ಲಿ ಸಕ್ಕರೆಯ ಕೊರತೆಯಾಗದಂತೆ ಸರಕಾರಿ ಅಧಿಕಾರಿಗಳು ತಾವು ವಶಕ್ಕೆ ಕೊಂಡ ಸಕ್ಕರೆಯನ್ನು ಆಯಾ ಪ್ರಾಂತಗಳಿಗೂ ಪೇಟೆಗಳಿಗೂ ಹಂಚಿಹಾಕಿ, ಅದನ್ನು ಅಲ್ಲಿಲ್ಲಿ ಮುಟ್ಟಿಸುವ ಏರ್ಪಾಟನ್ನು ಅವರು ಮಾಡುತ್ತಿದ್ದರು. ಸಕ್ಕರೆಯ ಸಂಗ್ರಹ ತಮ್ಮ ವಶಕ್ಕೆ ಒಂದು ಒಂದು ತಿಂಗಳಾಗುತ್ತ ಬಂದರೂ ಅವರು ಅಂತಹ ವ್ಯವಸ್ಥೆಯನ್ನು ಮಾಡಲೇ ಇಲ್ಲ! ಅದರಿಂದ ಮುಂಬಯಿ, ಅಹಮದಾಬಾದ ನಗರಗಳಲ್ಲೂ ಸಾಮಾನ್ಯವಾಗಿ ಮುಂಬಯಿ ಪ್ರಾಂತದ ಇತರ ಭಾಗಗಳಲ್ಲೂ ಈಗ ಸಕ್ಕರೆಯ ಕೊರತೆಯಾಗಿ ಜನರಿಗೆ ಸಕ್ಕರೆ ಸಿಗುವದು ಕಷ್ಟವಾಗಿದೆ. ಮುಂಬಯಿಯಲ್ಲಿ ನಿಯಂತ್ರಣ ಪ್ರಾರಂಭವಾದಾಗ ೬ ಆಣೆಗೊಂದು ರತ್ತಲಿನಂತೆ ಮಾರಬೇಕೆಂದು ನಿಶ್ಚಯಿಸಿದ ವರ್ತಕರೇ ಕಳೆದ ವಾರದ ಪ್ರಾರಂಭಕ್ಕೆ ೧ ರತ್ತಲ ಸಕ್ಕರೆಯ ಬೆಲೆಯನ್ನು ರೂ. ೧೦ ತನಕ ಬೆಳೆಸಿದರು! ಈ ಬೆಲೆಗೂ ಕೂಡ ಬೇಕಷ್ಟು ಮತ್ತು ಬೇಕಾದಾಗ ಸಕ್ಕರೆ ಸಿಗದಂತಾಯಿತು! ಅದರಿಂದ ಸಕ್ಕರೆಯ ಸವಿಯಿಲ್ಲದೆ ದಸರೆಯ ಹಬ್ಬ ಮಾಡುವ ಕಠಿಣ ಪ್ರಸಂಗ ಮುಂಬಾಪುರಸ್ಥರ ಮೇಲೆ ಬಂತು! ನಮ್ಮ ಕುಮಟೆಯಲ್ಲೂ ೮||—೯ ಆಣೆಗೊಂದು ರತ್ತಲಿನಂತೆ ಸಿಗುತ್ತಿದ್ದ ಸಕ್ಕರೆ ಈಗ ೧೨ ಆಣೆಗೊಂದು ರತ್ತಲಿನಂತೆ ಮಾರಲ್ಪಡುತ್ತಿದೆ! ಈ ಧಾರಣೆ ನಾಳೆ ೧ ರೂ. ಗೆ ಏರಿದರೂ ಏರಬಹುದು! "ಸಕ್ಕರೆ ಶಿಲ್ಕು ಇಲ್ಲ!" ಎಂಬ ಮಾತು ಕೆಲವು ಅಂಗಡಿಗಳಲ್ಲಿ ಈಗಾಗಲೇ ಕೇಳಬರಹತ್ತಿದೆ. ಸರಕಾರದವರು ಕಳೆದ ವಾರದಲ್ಲಿ ಮುಂಬಯಿಗೆ ಸಕ್ಕರೆ ತಂದ ವಾರ್ತೆಯುಂಟು. ಅದನ್ನು ಸೀಧಾ-ಅಂಗಡಿಗಳಲ್ಲಿ ೬|| ಆಣೆಗೊಂದು ರತ್ತಲಿನಂತೆ ಮಾರಾಟಕ್ಕೆ ಇಡುವ ನಿರ್ಣಯವಾಗಿದೆಯಂತೆ. ಸಕ್ಕರೆಯನ್ನು ಸೀಧಾ-ಪದಾರ್ಥದಲ್ಲಿ ಸೇರಿಸಿ ಸೀಧಾ-ಪದ್ಧತಿಯಿಂದ ಅದನ್ನು ಹಂಚಬೇಕೆಂಬ ವಿಚಾರ ಹಿಂದುಸ್ಥಾನ ಸರಕಾರದಲ್ಲಿ ನಡೆದಿದೆಯಂತೆ. ಸರಕಾರದವರ ಸಕ್ಕರೆ ನಮ್ಮಲ್ಲಿ ಎಂದು ಬಂದು ಮುಟ್ಟುವದೋ ದೇವರೇ ಬಲ್ಲ! ಅದು ಬಂದು ತಲ್ಪುವವರೆಗೆ ಜನರು "ಸಕ್ಕರೆ, ಸಕ್ಕರೆ!" ಎಂದು ಬಾಯ್ಬಿಡುವ ಪ್ರಸಂಗ ಒದಗುವದೆಂದು ತೋರುತ್ತದೆ!

BANKING SERVICE

The Agricultural & Industrial Bank, Ltd.,

(Established 1934)

Head Office COONDAPOOR, S Kanara.

We try to make our service a little different, a little better and we sincerely want to please you

An Account with us will provide you with the opportunity to secure all the things you may need for yourself and your family.

A. Madhava Pai, B.A., B.I.,
GENERAL MANAGER

ಶಾರದಾ ಸ್ಪರ್ಧೆ

ಕಳೆದ ವಾರ ಈ ಕೆಳಗಿನ ಶಾಲೆಗಳಲ್ಲಿ ಶಾರದಾ ಸ್ಪರ್ಧೆಗಳಾದ ವರದಿಗಳು ಬಂದಿವೆ. ಆ ಆ ಶಾಲೆಯವರು ವಿದ್ಯಾರ್ಥಿಗಳ ವಿನೋದಾವಳಿಗಳನ್ನು ಕೋಲಾಟ, ಲೇಝಿಮ ಮೊದಲಾದ ಶಾರೀರಿಕ ವ್ಯಾಯಾಮದ ಪ್ರದರ್ಶನ ಮೊದಲಾದವುಗಳನ್ನು, ನೃತ್ಯ-ನಾಟಕಗಳನ್ನೂ ಏರ್ಪಡಿಸಿದ್ದರು — ಮಾಲಿಗದ್ದೆ ಶಾಲೆ, ಹರೀಸರ ಶಾಲೆ, ಉಂಚಗಿ ಶಾಲೆ, ನಗರೆ ಗಾಂವಠಿ ಶಾಲೆ, ಶಿರಾಲಿ ಶಾಲೆ, ಚಿತ್ರಾಪುರ ಹೆಣ್ಣು ಮಕ್ಕಳ ಶಾಲೆ, ಅಂಕೋಲಾ ೨ನೇ ನಂಬರ ಕನ್ನಡ ಶಾಲೆ

ಹರಿಜನ ದಿನ

ಮುಂಬಯಿ ಸರಕಾರದ ಅನುಜ್ಞೆಗನುಸಾರವಾಗಿ ಪ್ರಾಂತದಲ್ಲೆಲ್ಲ ಕಳೆದ ತಾ ೨೦ನೇಕ್ಕೆ "ಹರಿಜನ ದಿನ"ವಾಚರಿಸಲ್ಪಟ್ಟಿತು. ಮೆರವಣಿಗೆ, ಧ್ವಜವಂದನೆ, ಸಾಮೂಹಿಕ ದೇವದರ್ಶನ ಭಜನ, ಸಂಜೆಯಲ್ಲಿ ಸಭೆ. ಸಭೆಯಲ್ಲಿ ಹರಿಜನರ ಉನ್ನತಿಗಾಗಿ ಮಹಾತ್ಮಾಜಿಯವರೂ ಕೊಂಗ್ರೆಸ ಸರಕಾರಗಳೂ ಮಾಡಿದ ಕಾರ್ಯದ ಗುಣಗಾನ, ಹರಿಜನರ ಅಸ್ಪೃಶ್ಯತೆಗಳನ್ನು ಕಿತ್ತೊಗೆಯಲು ಸರಕಾರವು ಮಾಡಿದ ಕಾಯಿದೆ ಕಾನೂನುಗಳ ವಿವರಣೆ ಮುಂತಾದ ಕಾರ್ಯಕ್ರಮಗಳು ನಡೆದವು. ಸ್ಥಾನಿಕ ಅಧಿಕಾರಿಗಳು ಕೂಡ ಎಲ್ಲ ಕಾರ್ಯಕ್ರಮಗಳಲ್ಲಿ ಸೇರಿದ್ದರು. ನಮ್ಮ ಜಿಲ್ಲೆಯೊಳಗೆ ಈ ಕೆಳಗಿನ ಊರುಗಳಲ್ಲಿ ಹರಿಜನ ದಿನವಾಚರಿಸಲ್ಪಟ್ಟ ವರದಿಗಳು ಬಂದಿವೆ —

ಮುರೂರ, ದೀವಗಿ (ಶಾಲೆ), ಕೋಡಕಣಿ, ಚಂದಾವರ (ಶಾಲೆ), ಹಡಿನಬಳ (ಶಾಲೆ), ಮುಂಡಗೋಡ, ಮುಗದ, ಹಳಿಯಾಳ, ಹಲಗೇರಿ, ಸಿದ್ದಾಪುರ, ದೊಡ್ಮನೆ, ಅಂಗಡಿ (ತಾ ಕಾರವಾರ)

— ಹಿಂದುಸ್ಥಾನದಂತೆ ಪಾಕಿಸ್ತಾನವು ತನ್ನ ರೂಪಾಯಿಯ ಬೆಲೆಯನ್ನು ಇಳಿಸದ್ದರಿಂದ ಹಿಂದುಸ್ಥಾನ ಪಾಕಿಸ್ತಾನಗಳ ನಡುವಿನ ವ್ಯವಹಾರಕ್ಕೂ ವ್ಯಾಪಾರಕ್ಕೂ ತೊಂದರೆಯಾಗಿದೆ. ಪಾಕಿಸ್ತಾನವು ತನ್ನ ೧೦೦ ರೂ ಗಳಿಗೆ ಹಿಂದುಸ್ಥಾನದ ೧೪೪ ರೂಗಳನ್ನು ಬೆಲೆಯೆಂದು ನಿರ್ಣಯಿಸಿದ್ದರಿಂದ ಪಾಕಿಸ್ತಾನದಿಂದ ನಮ್ಮಲ್ಲಿ ಬರುತ್ತಿದ್ದ ನಾರು, ಗೋದಿ ಮುಂತಾದವು ನಮಗೆ ಬಹಳ ತುಟ್ಟಿ ಬೀಳುತ್ತಿವೆ! ಇದೇ ರೀತಿ ಹಿಂದುಸ್ಥಾನ, ಪಾಕಿಸ್ತಾನಗಳಲ್ಲಿ ಶಾಖೆಗಳುಳ್ಳ ಸಣ್ಣ ದೊಡ್ಡ ಬೇಂಕುಗಳ ವ್ಯವಹಾರಕ್ಕೂ ತೊಂದರೆಯಾಗಿದೆ! ತನ್ನ ರೂಪಾಯಿಯ ಬೆಲೆಯನ್ನು ಇಳಿಸಿ ಹಿಂದುಸ್ಥಾನಕ್ಕೆ ತೊಂದರೆ ಕೊಡಬೇಕು ಎಂಬ ಅಂತಃಸ್ಥ ಉದ್ದೇಶದಿಂದಲೇ ಪಾಕಿಸ್ತಾನ ಸರಕಾರವು ತನ್ನ ರೂಪಾಯಿಯ ಬೆಲೆಯನ್ನು ಇಳಿಸಲಿಲ್ಲೆಂದು ದೂರದರ್ಶಿಗಳು ಊಹಿಸುತ್ತಾರೆ. ಭಾರತ ಸರಕಾರವು ಪಾಕಿಸ್ತಾನದ ಈ ಕುಚೋದ್ಯವನ್ನು ಅರಿತು ಪಾಕಿಸ್ತಾನಕ್ಕೆ ನಿರ್ಯಾತವಾಗುವ ಹಲವಾರು ಸರಕುಗಳ ಮೇಲೆ ಭಾರಿ ನಿರ್ಯಾತ ತೆರಿಗೆಯನ್ನು ಹೇರಲಾರಂಭಿಸಿದೆ. ಪಾಕಿಸ್ತಾನದಿಂದ ಬರಬೇಕಾದ ನಾರು ಮೊದಲಾದವುಗಳ ಮೇಲೆ ವಸ್ತುತಃ ಬಹಿಷ್ಕಾರ ಹಾಕಬೇಕೆಂಬ ವಿಚಾರ ನಮ್ಮ ಅಧಿಕಾರಿ ವರ್ಗದಲ್ಲೂ ವರ್ತಕರ ಲೋಕದಲ್ಲೂ ತಲೆದೋರಿದೆ. ತನ್ನ ರೂಪಾಯಿಯ ಬೆಲೆ ಇಳಿಸದೇ ಇದ್ದುದರಿಂದ ತಾನು [illegible] ಪಾಕಿಸ್ತಾನದ ಗರ್ವವು ಕೆಲವೇ ದಿನಗಳಲ್ಲಿ ಇಳಿಯುವದೆಂದು ಸೂಕ್ಷ್ಮದರ್ಶಿಗಳು ಸಿದ್ಧಾಂತ ಮಾಡಿರುತ್ತಾರೆ. ಬ್ರಿಟನದೇಶವು ಕೂಡ ಸದ್ಯಕ್ಕೆ ಪಾಕಿಸ್ತಾನಕ್ಕೆ ತನ್ನ ಅಕ್ಕಿ ಕಳಿಸಿಕೊಡುವದನ್ನು ನಿಲ್ಲಿಸಿದೆ

— ಕಾಶ್ಮೀರದಲ್ಲಿ ಶಾಂತತೆಯಾಗಬೇಕಾದರೆ ಪಾಕಿಸ್ತಾನವು ನಿರ್ಮಿಸಿದ "ಆಝಾದ ಕಾಶ್ಮೀರ ಸರಕಾರ" (ಸುಲಿಗೆಯ ಆಶೆಯಿಂದ ಒಟ್ಟುಗೂಡಿದ ಗುಂಡಾಗಿರಿ ಜನರ) ಗೊಂಬೆ ಸರಕಾರವನ್ನೂ ಅದರ ಸೈನ್ಯವನ್ನೂ ಮೊದಲು ವಿಸರ್ಜಿಸಬೇಕು ಎಂದು ಹಿಂದುಸ್ಥಾನವು ಮೊದಲಿನಿಂದಲೂ ಪ್ರತಿಪಾದಿಸುತ್ತಿದ್ದ ಮತ್ತು ಸಂಯುಕ್ತ ರಾಷ್ಟ್ರಗಳ ಕಾಶ್ಮೀರ ಮಂಡಳವು ವಸ್ತುತಃ ಒಪ್ಪಿಕೊಂಡ ಸೂಚನೆಯನ್ನು ಮಂಡಳವು ಪಾಕಿಸ್ತಾನದ ಕಡೆಯಿಂದ ಪಾಲಿಸಿಕೊಳ್ಳದೆ ಕೊನೆಗೆ ಈ ವಿವಾದವನ್ನು ಪಂಚರ ಮುಂದಿಟ್ಟು ಪಂಚರ ನಿರ್ಣಯದಂತೆ ಉಭಯತರೂ ನಡೆಯಬೇಕೆಂಬ ವಿಶಿಷ್ಟ ಸೂಚನೆಯನ್ನು ಮಾಡಿತು! ಭಾರತ ಸರಕಾರವು ಈ ಸೂಚನೆಯನ್ನು ನಿರಾಕರಿಸಬೇಕಾಯಿತು. ಕಾಶ್ಮೀರ ಮಂಡಳದ ಈ ನಡಾವಳಿಯಲ್ಲಿ ಪಾಕಿಸ್ತಾನದ ಪ್ರೇಮ ಸ್ಪಷ್ಟ ಕಂಡು ಬರುತ್ತಿದೆ [illegible] ಹೇಳಬೇಕಾಗಿಲ್ಲ. ಕಾಶ್ಮೀರ ಮಂಡಳದ ಸತ್ಯ ಶೋಧನ [illegible] ಈ ಪಾಕಿಸ್ತಾನ ಪ್ರೇಮದ ಮತ್ತು ಪಾಕಿಸ್ತಾನ-ಪಕ್ಷಪಾತದ ಪ್ರತ್ಯಕ್ಷ ಪ್ರಮಾಣವೆಂದು ಈಗ ಬೆಳಕಿಗೆ ಬಂದಿದೆ [illegible] ಸಂದೀಪದ ವಿರುದ್ಧ ಬಂಡಾಯವನ್ನು ಎಬ್ಬಿಸಿ "ಆಝಾದ ಕಾಶ್ಮೀರ" ದಾಳಿಗಾರರನ್ನು ಕೂಡಿಕೊಂಡ ಸರಕಾರದ [illegible] ಇರುವವರ ರತ್ನಾದಿ ಆಭರಣಗಳನ್ನೂ ಬೇರೆ ಬೆಲೆಯುಳ್ಳ ಚರಾಸ್ತಿಯನ್ನೂ ಕಾಶ್ಮೀರ ಸರಕಾರವು ೭ ಪೆಟ್ಟಿಗೆಗಳಲ್ಲಿ ತುಂಬಿ, ಮುದ್ರೆ ಮಾಡಿ, ಅವನ್ನು ಶ್ರೀನಗರ ಬೇಂಕಿನಲ್ಲಿಟ್ಟಿತ್ತು. ಮಂಡಳದ ಅಧಿಕಾರಿಗಳು ಈ ಪೆಟ್ಟಿಗೆಗಳನ್ನು ಹೇಗೋ ಕೈವಶಪಡಿಸಿಕೊಂಡು, ತಮ್ಮ ವಿಮಾನದಲ್ಲಿ ರಾವಲ್ಪಿಂಡಿಗೆ ಒಯ್ದಿರುತ್ತಾರೆ! ಸದರಿ ಸಂಘಾರದ ಕಲವು ಕಪಾಟುಗಳನ್ನು ಮೋಹರಬಂದ ಮಾಡಿ ಕಾಶ್ಮೀರ ಸರಕಾರವು ಮಂಡಳದ ಲಷ್ಕರಿ ಸಲಹೆಗಾರರಾದ ಸ್ಟ॥ ಡೆಲ್ವಾಯ ಇವರು ಇಳಿಕೊಂಡ ಭವನದಲ್ಲಿಟ್ಟಿತ್ತು. ಡೆಲ್ವಾಯರು ಈಗ ತಮ್ಮ ಸ್ಥಳಕ್ಕೆ ರಾಜೀನಾಮೆ ಕೊಟ್ಟು ಸ್ವದೇಶಕ್ಕೆ ಹೊರಟಿದ್ದರೆ ಅವರ ನಿವಾಸ ಸ್ಥಳದಲ್ಲಿದ್ದ ಸದರಿ ಕಪಾಟುಗಳ ಮುದ್ರೆಗಳೆಲ್ಲ ಈಗ ಮಾಯವಾಗಿವೆಂದೂ ಅದರೊಳಗಿನ ವಸ್ತು ಒಡವೆಗಳು ಕಣ್ಮರೆಯಾಗಿವೆಂದೂ ಸುದ್ದಿ ಹಬ್ಬಿದೆ! ಬಂಡುಗಾರ ಎನಿಸಿಕೊಂಡವರ ಆಸ್ತಿಯನ್ನು ಹೀಗೆ ಕಳ್ಳತನದಿಂದ ಅವರಿಗೆ ಒಯ್ದು ಕೊಡುತ್ತಿರುವ ಸಂಭಾವಿತ ಜನರುಳ್ಳ ಕಾಶ್ಮೀರ ಮಂಡಳವು ಭಾರತಕ್ಕೆ ಎಂಥ ನ್ಯಾಯ ದೊರಕಿಸಿ ಕೊಡಬಲ್ಲದೆಂಬುದನ್ನು ಓದುಗರೇ ಊಹಿಸಲಿ

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಮಳೆ ನಿಂತಿದೆ. ಬೆಳಗು ಮುಂಜಾನೆಯಲ್ಲಿ ಮಂಜು ಬೀಳಲಾರಂಭಿಸಿದೆ. ಗದ್ದೆ ಕೊಯಿಲಿಗೆ ಇನ್ನು ೨ ವಾರಗಳು ಹೋಗಬೇಕು

ನಿನ್ನೆ ಗಾಂಧಿ-ಜಯಂತಿಯ ಉತ್ಸವವಾಯಿತು. ಮುಂಜಾನೆ ಮೆರವಣಿಗೆ ಮತ್ತು ಧ್ವಜವಂದನೆಗಳಾದವು. ಅಪರಾಹ್ನದಲ್ಲಿ ವಿದ್ಯಾರ್ಥಿಗಳ ನಾಲ್ಕು ಪಂದ್ಯಾಟ ನಡೆಯಿತು. ಸಂಜೆ ಗಾಂಧಿ ಚೌಕಿನಲ್ಲಿ ಮ್ಯುನಿಸಿಪಾಲಿಟಿಯವರ ವ್ಯಾಯಾಮ ಪ್ರಯೋಗಗಳ ಪ್ರದರ್ಶನವಾಯಿತು. ಅದರ ಮೇಲೆ ನಾಲ್ಕು ಪಂದ್ಯಾಟದಲ್ಲಿ ಸ್ಪರ್ಧಿಸಿ ಗೆದ್ದವರಿಗೆ [illegible] ಶಾಲೆಯವರಿಗೂ ಬಹುಮಾನಗಳನ್ನು ಹಂಚಲಾಯಿತು

ಈ ಹಿಂದೆ ತಿಳಿಸಿದಂತೆ ಕಳೆದ ಮಂಗಳವಾರ ಬೆಳಗಿನ ಜಾವದಲ್ಲಿ ಬೆಂಗಳೂರಿನ ಸ್ಟ॥ ಉಭಯಾಂಕ [illegible] ರಾವ ಸಾ॥ ಚಂದ್ರಭಾಗಾಬಾಯಿಯವರೂ, ಶ್ರೀ [illegible] ನಾಯಕ ದೇವಸ್ಥಾನದ ಅರ್ಚಕ-ಸಿದ್ಧಿಯ [illegible] ಕಳಿಸಿದ ಬಾಲಕನ [illegible] ಬಹುಮಾನವಾಗಿ, ಆಸ್ಪತ್ರೆಯ [illegible] ಪ್ರಯೋಗಗಳನ್ನು ಮಾಡಿದರು. ಎರಡು ದಿನ ಮುಂದಿನವು ಪ್ರೇಕ್ಷಕರಿಂದ ತುಂಬಿಹೋಗಿತ್ತು. ಈ ಪ್ರಯೋಗಗಳಿಂದ ಮ್ಯುನಿಸಿಪಾಲಿಟಿಯ ಎರಡು ಶಾಲೆಗಳಿಗೆ ಹೊಸ ಪೆಟ್ಟಿಗೆಗಳು [illegible] ಗಳಿಗೆ ಸಾಕಷ್ಟು ಸಹಾಯವಾಗಬೇಕು

ಇನ್ನು ಮುಂದೆ ಸರಕಾರದ ಕಡೆ ರೂ ೫೦ ಇದ್ದು ಬಿಟ್ಟಿದ್ದು ಪರವಾನೆ ಪಡೆದವರಿಗಷ್ಟೇ ಅಮಲ ಪಟ್ಟಿ ಕಂಟ್ರೋಲಿನ ಏಜಂಟರು ಮಾರಾಟಕ್ಕಾಗಿ ಎಣ್ಣೆ ಕೊಡಬೇಕು; ಕಾರಣ ಹಳ್ಳಿಗಳೊಳಗಿನ ಎಣ್ಣೆಯ ಮಾರಾಟಗಾರರು ಕೂಡಲೆ ಪರವಾನೆ ಪಡೆಯಬೇಕು, ಪರವಾನೆ ಪಡೆದವರು ೩೦ ತಾರೀಖಿನೊಳಗೆ ತಮ್ಮ ಪರವಾನೆಗಳನ್ನು ಏಜಂಟರಿಗೆ ಯಾ ಅಮಲ ಎಣ್ಣೆಯ ಬಟವಡೆ ಮುಂತಾದವರಿಗೆ ತೋರಿಸಿ ಎಣ್ಣೆ ಪಡೆಕೊಳ್ಳಬೇಕೆಂದು ಮುಂತಾದವರು ಬಿನ್ನವಿಸುತ್ತಾರೆ

ಈ ಹೀಗೆ ಅನಂತೆ ಮೊನ್ನೆ ಶನಿವಾರ ಮೂರೂರ ಗ್ರಾಮದ ಶ್ರೀ ಅಪ್ಪು ನಾಯಕರ ಗುಡಿಯೊಳಗೆ ಹವ್ಯಕ ಪಂಚಾಯತೀ ಸಂಘದ ವಾರ್ಷಿಕೋತ್ಸವವು ಜರುಗಿತು. [illegible] ಸುಬ್ರಾಯ ಹೆಗಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಂಘಕ್ಕೆ ಕೈಲಾದಷ್ಟು ಸಹಾಯ ಮಾಡಿ ಸ್ವಸಮಾಜದ ಅಭಿವೃದ್ಧಿ ಮಾಡಲು ನೆರವಾಗಿರೆಂದು ಸಂಘದ [illegible] ಶ್ರೀ [illegible] ಹೆಗಡೆಯವರು ಸಭಿಕರಿಗೆ ಬಹಳ ಕಳಕಳಿಯಿಂದ ಬಿನ್ನವಿಸಿದರು

ಹೊನ್ನಾವರ— ಮ್ಯು॥ಯ [illegible] ಚುನಾವಣೆಯು [illegible] ತಾರೀಖಿನ ೯ನೇ [illegible] ಜರುಗುವದು. ಅದರಲ್ಲಿ ೪ ಮಂದಿ ಸ್ತ್ರೀಯರು [illegible] ಚುನಾವಣೆ [illegible] ಪ್ರಸಂಗವುಂಟಾಗಲಿಕ್ಕಿಲ್ಲ ಎಂಬ [illegible]

ಕಳೆದ ಬುಧವಾರ ರಾತ್ರಿ ಪೇಟೆಯೊಳಗಿನ [illegible] ಅಂಗಡಿಯೊಂದರಲ್ಲಿ ಕಳವಾಗಿದೆ. ಕಳ್ಳರು ಅಂಗಡಿಯ ಹಲಗೆ ತೆಗೆದು ಒಳಹೊಕ್ಕು ಕ್ರಿಯೆ ಮಾಡಿದರು. ಬೇಗ ಮುಂದೆ [illegible] ಬೆಲೆಯ ದಾಗಿನೆಗಳನ್ನು ಒಯ್ದಿರುತ್ತಾರಂತೆ

(ತಾ ೨-೧೦-೪೯) ಇಂದು ಊರಲ್ಲಿ ಗಾಂಧಿ ಜಯಂತಿ ಉತ್ಸವವಾಯಿತು. ಮೆರವಣಿಗೆ, ಧ್ವಜವಂದನೆ, ಸಾರ್ವಜನಿಕ ಸಭೆ ವಗೈರೆ ಕಾರ್ಯಕ್ರಮಗಳು ನಡೆದವು

ಕಾರವಾರ— (ತಾ ೩೦-೯-೪೯) ಕಳೆದ [illegible]ನೇ ರವಿವಾರ ಇಲ್ಲಿ "ಹರಿಜನ ದಿನ"ವು ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಮುಂಜಾನೆ [illegible] ಮಂಗಳ ದೇವಾಲಯದಿಂದ ಹರಿಜನರೂ ಬೇರೆ ಜನರೂ ಆಝಾದ [illegible] ಬಸ್ಸಿನ ವರೆಗೆ ಮೆರವಣಿಗೆಯಿಂದ ಹೋಗಿ ಅಲ್ಲಿ ಧ್ವಜವಂದನ ಮಾಡಿದರು. ಆ ನಂತರ ಎಲ್ಲ ಜನರೂ ಕೂಡಿ ಬೇರೆ ಬೇರೆ ಚಹಾ ಅಂಗಡಿಗಳಿಗೆ ಹೋಗಿ ಚಹಾ ಕುಡಿದರು. ಸಂಜೆ ಜಿ ಹೋಮ ಕಚೇರಿಯ ಬಟ್ಟೆ ಮೈಲಿ ರಾ॥ ಹಳದೀಪುರ ವಕೀಲರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆಯಾಯಿತು. ರಾ॥ [illegible] ವಕೀಲ, ಮಾನ್ಯ [illegible] ವಕೀಲ, [illegible] ಮೊದಲಾದವರು ಹಿಂದೂಗಳ ವರ್ಗಗಳ ಅಭೇದ ರೀತಿಯ ಸಭೆಯಲ್ಲಿ ಮಾತಾಡಿ, ಹರಿಜನರ ಬಗ್ಗೆ ಸರಕಾರವು ಅವರಿಗೆ ಮಾಡಿದ ಸಹಾಯದ ಬಗ್ಗೆ ಅವರ ಬಗ್ಗೆ ಮಾಡಿದ ಕಾಯಿದೆ-ಕಾನೂನುಗಳ ಮಾಹಿತಿಯನ್ನು ಹೇಳಿ, ಹರಿಜನರನ್ನು ಸಮಾಜವು ಹೇಗೆ ನಡೆಸಿಕೊಳ್ಳಬೇಕೆಂಬುದನ್ನು ತಿಳಿಸಿದರು. ಅಧ್ಯಕ್ಷ [illegible] ಮಾತಾಡುವಾಗ, ಹರಿಜನ ಬಂಧುಗಳು [illegible] ನಡಾವಳಿಯನ್ನು ಸುಧಾರಿಸಿಕೊಂಡು [illegible] ಗಳು ಇಲ್ಲವೆ ಸಮಾಜದವರು ತಮಗೆ ಕೊಟ್ಟ ಸವಲತ್ತುಗಳ ಪೂರ್ಣ ಪ್ರಯೋಜನ ಪಡೆಯಬೇಕಾಗಿ ಬೋಧಿಸಿದರು

ಮೇಲಿನಂತೆ ಹರಿಜನ ದಿನದ ಕಾರ್ಯಕ್ರಮವು ನಡೆಯುತ್ತಿರಲು ಪತ್ರ-ಸಂಪಾದಕ [illegible] ಬೈಲನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದವರ ಸಭೆ ನಡೆಯಿತು. ಸಂಘದ ಕ್ರಮ [illegible] ಕೆಲಸಗಾರರಿಗಿರುವ ೧೦ ಜನರನ್ನು ಬಿಡುಗಡೆ [illegible] ಭಾಷಣವಾಯಿತು. ಬಿಡುಗಡೆಯಾದರು ಸಂಘದವರ ನಡತೆ ನಿಷ್ಕಳಂಕವಿತ್ತೆಂದು ಪಾರಿಕ ಭಾರತ ಸ್ವತಂತ್ರ ಸಂಗ್ರಾಮದಲ್ಲಿ ಭಾಗವಹಿಸಿದವರ ಮಾತ್ರ [illegible] ಭಾರತದ ಉಜ್ವಲವಾಗುವದೆಂದು [illegible] ಅವರೆ ಈ ಸಭೆಯಲ್ಲಿ [illegible] ಯಾವ ಅನ್ಯಾಯಕ್ಕೆ ಅಂಜಬಾರದು ಎಂದು ಬಾಲಕ್ಷ್ಮಿ [illegible] (ಮಾರ್ಚ ತಾರೀಖಿನ ಭಗವದ್ಧ್ವಜ [illegible]) [illegible] ಸಂಘದವರ [illegible] ಅದರಿಂದ ಸಂಘದವರ [illegible] ಸಂಘದವರ [illegible] ಎಲ್ಲ [illegible] ನೋಡುತ್ತಾರೆ [illegible] ಭಾಷ್ಯ ಮಾಡಿದರು

ಜಿಲ್ಲಾ ಸಮಾಚಾರ

ಮುಂಡಗೋಡ— (ತಾ. ೨೮—೯—೪೯) [illegible]

ಯಲ್ಲಾಪುರ— (ತಾ ೨೮—೯—೪೯) [illegible]

ಹಳಿಯಾಳ— (ತಾ ೨ —೯—೪೯) [illegible]

ಸುಪಾ— ೧೯೪೮—೪೯ರಲ್ಲಿ [illegible]

ಕಾರವಾರ— (ತಾ. ೧೦—೯—೪೯) [illegible]

(ಮುಂದೆ ಆನೇ ಪುಟ ನೋಡಿರಿ)

ಕಾರವಾರದ ಸಿವ್ಹಿಲ್ ಜಜ್ಜ ಸೀ ಡಿ ಕೋರ್ಟಿನಲ್ಲಿ

ಮುಕ್ಕಾಮು-ಕಾರವಾರ ಜಿಲ್ಲೆ ನಿ|| ೬

ದಿವಾಣಿ ಮೊಕದ್ದಮೆ ನಂಬರು ೧೬೩ ಸನ್ ೧೯೪೯ ಪೈಕಿ

೧ [illegible]
೨ [illegible]
೩ [illegible]
೪ [illegible]
೫ [illegible]
[illegible] — ವಾದಿಯರು

— ವಿರುದ್ಧ —

೧ ದಿ [illegible] — ಪ್ರತಿವಾದಿ

[illegible] ಸನ್ ೧೯೪೯ನೇ ಅಕ್ಟೋಬರ ತಿಂಗಳ [illegible] ೧೧ ಘಂಟೆಗೆ ಈ ಕೋರ್ಟಿನಲ್ಲಿ [illegible]

[illegible]

[illegible]

ಈ ಕೋರ್ಟು ಸನ್ ೧೯೪೯ನೇ [illegible] ತಿಂಗಳ [illegible] ತಾರೀಖಿನಲ್ಲಿ ನನ್ನ ಸಹಿ ಮಾಡಿ ಮತ್ತು ಕೋರ್ಟಿನ [illegible] ಕೊಡಲ್ಪಟ್ಟಿದೆ

(ಕೋರ್ಟಿನ ಮೊಹರು)

R N. PHENANI,
Clerk of the Court

ಕಾರವಾರದ ಸಿವ್ಹಿಲ್ ಜಜ್ಜ ಸೀ ಡಿ ಕೋರ್ಟಿನಲ್ಲಿ

ಮೂಲ ನಂಬರು ೧೬೩—೧೯೪೯

೧ [illegible]
೨ [illegible]
೩ [illegible]
೪ [illegible]
೫ [illegible]
[illegible] — ವಾದಿಯರು

ವಿರುದ್ಧ

ದಿ [illegible] — ಪ್ರತಿವಾದಿ

ದಾವಾ ರೂಪಾಯಿ ೧೫೦—೦—೦

ವಾದಿಯು ಕೋರ್ಟಿಗೆ ತಿಳಿಸಿದ ವಿವರ —

೧ [illegible]

೨ [illegible]

ಶಾರದಾ ಪೂಜೆ

ಕಳೆದ ವಾರ ಈ ಕೆಳಗಿನ ಶಾಲೆಗಳಲ್ಲಿ ಶಾರದಾ ಪೂಜೆಗಳಾದ ವರದಿಗಳು ಬಂದಿವೆ. ಆ ಆ ಶಾಲೆಯವರು ವಿದ್ಯಾರ್ಥಿಗಳ ವಿನೋದಾವಳಿಗಳನ್ನು, ಕೋಲಾಟ, ಲೇಝಿಮು ಮೊದಲಾದ ಶಾರೀರಿಕ ವ್ಯಾಯಾಮದ ಪ್ರದರ್ಶನ ಮೊದಲಾದವುಗಳನ್ನೂ, ನಾಟ್ಯ-ನಾಟಕಗಳನ್ನೂ ಏರ್ಪಡಿಸಿದ್ದರು — ಮಾಬಗಿ ಶಾಲೆ, ಮರ್ಕೇರಿ ಶಾಲೆ, ಉಂಚಗಿ ಶಾಲೆ, ನಗರೆ ಗಾಂವಠಿ ಶಾಲೆ, ತಿರಾಲಿ ಶಾಲೆ, ಚಿತ್ರಾಪುರ ಹೆಣ್ಣು ಮಕ್ಕಳ ಶಾಲೆ, ಅಂಕೋಲಾ ಎಸ್. ನಂಬರ ಕನ್ನಡ ಶಾಲೆ

ಹರಿಜನ ದಿನ

ಮುಂಬಯಿ ಸರಕಾರದ ಆಜ್ಞೆಗನುಸಾರವಾಗಿ ಪ್ರಾಂತದಲ್ಲೆಲ್ಲ ಕಳೆದ ತಾ ೨೯ರಂದು "ಹರಿಜನ ದಿನ" ಆಚರಿಸಲ್ಪಟ್ಟಿತು. ಮೆರವಣಿಗೆ, ಧ್ವಜವಂದನೆ, ಸಾಮೂಹಿಕ ದೇವದರ್ಶನ ಭಜನೆ, ಸಂಜೆಯಲ್ಲಿ ಸಭೆ, ಸಭೆಯಲ್ಲಿ ಹರಿಜನರ ಒಳ್ಳಿಗೆ ಮಹಾತ್ಮಾಜಿಯವರೂ ಕಾಂಗ್ರೆಸ ಸರಕಾರಗಳೂ ಮಾಡಿದ ಕಾರ್ಯದ ಗುಣಗಾನ, ಹರಿಜನರ ಅಸ್ಪೃಶ್ಯತೆಗಳನ್ನು ತೆಗೆದೊಗೆಯಲು ಸರಕಾರವು ಮಾಡಿದ ಕಾಯಿದೆ ಕಾನೂನುಗಳ ವಿವರಣೆ ಮುಂತಾದ ಕಾರ್ಯಕ್ರಮಗಳು ನಡೆದವು. ಸ್ಥಾನಿಕ ಅಧಿಕಾರಿಗಳು ಕೂಡ ಎಲ್ಲ ಕಾರ್ಯಕ್ರಮಗಳಲ್ಲಿ ಸೇರಿದ್ದರು. ನಮ್ಮ ಜಿಲ್ಲೆಯೊಳಗೆ ಈ ಕೆಳಗಿನ ಊರುಗಳಲ್ಲಿ ಹರಿಜನ ದಿನವಾಚರಿಸಲ್ಪಟ್ಟ ವರದಿಗಳು ಬಂದಿವೆ -

ಮುರೂರ, ದೀವಗಿ (ಶಾಲೆ), ಕೋಡಕಣಿ, ಚಂದಾವರ (ಶಾಲೆ), ಹಡಿನಬಾಳ (ಶಾಲೆ), ಮುಂಡಗೋಡ, ಮಳಗಿ, ಹಳಿಯಾಳ, ಹಲಗೇರಿ, ಸಿದ್ದಾಪುರ, ದೊಡ್ಮನೆ, ಅಂಗಡಿ (ತಾ. ಕಾರವಾರ)

— ಹಿಂದುಸ್ಥಾನದಂತೆ ಪಾಕಿಸ್ತಾನವು ತನ್ನ ರೂಪಾಯಿಯ ಬೆಲೆಯನ್ನು ಇಳಿಸದ್ದರಿಂದ ಹಿಂದುಸ್ಥಾನ ಪಾಕಿಸ್ತಾನಗಳ ನಡುವಿನ ವ್ಯವಹಾರಕ್ಕೂ ವ್ಯಾಪಾರಕ್ಕೂ ತೊಂದರೆಯಾಗಿದೆ. ಪಾಕಿಸ್ತಾನವು ತನ್ನ ೧೦೦ ರೂ ಗಳಿಗೆ ಹಿಂದುಸ್ಥಾನದ ೧೪೪ ರೂ ಗಳಷ್ಟು ಬೆಲೆಯೆಂದು ನಿರ್ಣಯಿಸಿದ್ದರಿಂದ ಪಾಕಿಸ್ತಾನದಿಂದ ನಮ್ಮಲ್ಲಿ ಬರುತ್ತಿದ್ದ ನಾರು, ಗೋದಿ ಮುಂತಾದವು ನಮಗೆ ಬಹಳ ತುಟ್ಟಿ ಬೀಳುತ್ತಿವೆ! ಇದೇ ರೀತಿ ಹಿಂದುಸ್ಥಾನ, ಪಾಕಿಸ್ತಾನಗಳಲ್ಲಿ ಶಾಖೆಗಳಿರುವ ಸಣ್ಣ ದೊಡ್ಡ ಬೇಂಕುಗಳ ವ್ಯವಹಾರಕ್ಕೂ ತೊಂದರೆಯಾಗಿದೆ! ತನ್ನ ರೂಪಾಯಿಯ ಬೆಲೆಯನ್ನು ಇಳಿಸದೆ ಹಿಂದುಸ್ಥಾನಕ್ಕೆ ತೊಂದರೆ ಕೊಡಬೇಕು ಎಂಬ ಅಂತಃಸ್ಥ ಉದ್ದೇಶದಿಂದಲೇ ಪಾಕಿಸ್ತಾನ ಸರಕಾರವು ತನ್ನ ರೂಪಾಯಿಯ ಬೆಲೆಯನ್ನು ಇಳಿಸಲಿಲ್ಲೆಂದು ದೂರದರ್ಶಿಗಳು ಊಹಿಸಿರುತ್ತಾರೆ. ಭಾರತ ಸರಕಾರವು ಪಾಕಿಸ್ತಾನದ ಈ ಕುಚೋದ್ಯವನ್ನು ಅರಿತು ಪಾಕಿಸ್ತಾನಕ್ಕೆ ನಿರ್ಯಾತವಾಗುವ ಹಲವಾರು ಸರಕುಗಳ ಮೇಲೆ ಭಾರಿ ನಿರ್ಯಾತ ತೆರಿಗೆಯನ್ನು ಹೇರಲಾರಂಭಿಸಿದೆ. ಪಾಕಿಸ್ತಾನದಿಂದ ಬರಬೇಕಾದ ನಾರು ಮೊದಲಾದವುಗಳ ಮೇಲೆ ವಸ್ತುತಃ ಬಹಿಷ್ಕಾರ ಹಾಕಬೇಕೆಂಬ ವಿಚಾರ ಸಹ ಅಧಿಕಾರಿ ವರ್ಗದಲ್ಲೂ ವರ್ತಕಲೋಕದಲ್ಲೂ ತಲೆದೋರಿದೆ. ತನ್ನ ರೂಪಾಯಿಯ ಬೆಲೆ ಇಳಿಸಬೇಕಾಗಿಲ್ಲೆಂದು ಹೇಳುವ ಪಾಕಿಸ್ತಾನದ ದರ್ಪವು ಕೆಲವೇ ದಿನಗಳಲ್ಲಿ ಇಳಿಯುವದೆಂದು ಸೂಕ್ಷ್ಮದರ್ಶಿಗಳು ಸಿದ್ಧಾಂತ ಮಾಡಿರುತ್ತಾರೆ. ಬ್ರಿಟನದವರು ಕೂಡ ಸದ್ಯಕ್ಕೆ ಪಾಕಿಸ್ತಾನಕ್ಕೆ ತನ್ನ ಶಕ್ತಿ ಕಳಿಸಿಕೊಡುವದನ್ನು ನಿಲ್ಲಿಸಿದೆ.

— ಕಾಶ್ಮೀರದಲ್ಲಿ ಶಾಂತತೆಯಾಗಬೇಕಾದರೆ ಪಾಕಿಸ್ತಾನವು ನಿರ್ಮಿಸಿದ "ಆಝಾದ ಕಾಶ್ಮೀರ ಸರಕಾರ" (ಸುಲಿಗೆಯ ಆಶೆಯಿಂದ ಒಟ್ಟುಗೂಡಿದ ಗೂಂಡಾ ಜನರ) ಗೊಂಬೆ ಸರಕಾರವನ್ನೂ ಅದರ ಸೈನ್ಯವನ್ನೂ ಮೊದಲು ವಿಸರ್ಜಿಸಬೇಕು ಎಂದು ಹಿಂದುಸ್ಥಾನವು ಮೊದಲಿನಿಂದಲೂ ಪ್ರತಿಪಾದಿಸುತ್ತಿದ್ದ ಮಾತನ್ನು ಸಂಯುಕ್ತ ರಾಷ್ಟ್ರಗಳ ಕಾಶ್ಮೀರ ಮಂಡಳವು ವಸ್ತುತಃ ಒಪ್ಪಿಕೊಂಡ ಸೂಚನೆಯನ್ನು ಮಂಡಳವು ಪಾಕಿಸ್ತಾನದ ಕಡೆಯಿಂದ ಪಾಲಿಸಿಕೊಳ್ಳುವೆ, ಕೊನೆಗೆ ಈ ವಿವಾದವನ್ನು ಪಂಚರ ಮುಂದಿಟ್ಟು ಪಂಚರ ನಿರ್ಣಯದಂತೆ ಉಭಯತರೂ ನಡೆಯಬೇಕೆಂಬ ವಿಶಿಷ್ಟ ಸೂಚನೆಯನ್ನು ಮಾಡಿತು! ಭಾರತ ಸರಕಾರವು ಈ ಸೂಚನೆಯನ್ನು ನಿರಾಕರಿಸಬೇಕಾಯಿತು. ಕಾಶ್ಮೀರ ಮಂಡಳದ ಈ ನಡಾವಳಿಯಲ್ಲಿ ಪಾಕಿಸ್ತಾನದ ಪ್ರೇಮ ಸ್ಪಷ್ಟ ಕಂಡು ಒಂದು ಪಕ್ಷಪಾತವನ್ನು ಬೇರೆ ಬಿಡಿಸಿ ಹೇಳಬೇಕಾಗಿಲ್ಲ. ಕಾಶ್ಮೀರ ಮಂಡಳದ ಮಿತ್ರ ಇದರೊಡನೆ ಬಂದಿದ್ದ ಅಧಿಕಾರಿಗಳ ಈ ಪಾಕಿಸ್ತಾನ ಪ್ರೇಮದ ಮತ್ತು ಪಾಕಿಸ್ತಾನ-ಪಕ್ಷಪಾತದ ಪ್ರತ್ಯಕ್ಷ ಪುರಾವೆಯೊಂದು ಈಗ ಬೆಳಕಿಗೆ ಬಂದಿದೆ. ಕಾಶ್ಮೀರ ಸರಕಾರದ ವಿರುದ್ಧ ಬಂಡಾಯವನ್ನು ಎಬ್ಬಿಸಿ 'ಆಝಾದ ಕಾಶ್ಮೀರ' ದಾಳಿಗಾರರನ್ನು ಕೂಡಿಕೊಂಡ ಸರಕಾರ ಬಿಟ್ಟೋಡಿಯುವವರ ರತ್ನಾದಿ ಆಭರಣಗಳನ್ನೂ ದೊಡ್ಡ ಬೆಲೆಯುಳ್ಳ ಚರಾಸ್ತಿಯನ್ನೂ ಕಾಶ್ಮೀರ ಸರಕಾರವು ೭ ಪೆಟ್ಟಿಗೆಗಳಲ್ಲಿ ತುಂಬಿ, ಮುದ್ರೆ ಮಾಡಿ, ಅವನ್ನು ಶ್ರೀನಗರ ಬೇಂಕಿನಲ್ಲಿಟ್ಟಿತ್ತು. ಮಂಡಳದ ಅಧಿಕಾರಿಗಳು ಈ ಪೆಟ್ಟಿಗೆಗಳನ್ನು ಹೇಗೋ ಕೈವಶಪಡಿಸಿಕೊಂಡು, ತಮ್ಮ ವಿಮಾನದಲ್ಲಿ ರಾವಲಪಿಂಡಿಗೆ ಒಯ್ದಿರುತ್ತಾರೆ! ಸದರಿ ಸಂಪಾರದ ಕೆಲವು ಕಪಾಟುಗಳನ್ನು ಮೋಹರಬಂದ ಮಾಡಿ ಕಾಶ್ಮೀರ ಸರಕಾರವು ಮಂಡಳದ ಲಷ್ಕರಿ ಸಲಹೆಗಾರರಾದ ಲೆ॥ ಡೆಲ್ವಾಯ ಇವರು ಇಳಕೊಂಡ ಭವನದಲ್ಲಿಟ್ಟಿತ್ತು. ಡೆಲ್ವಾಯರು ಈಗ ತಮ್ಮ ಸ್ಥಳಕ್ಕೆ ರಾಜೀನಾಮೆ ಕೊಟ್ಟು ಸ್ವದೇಶಕ್ಕೆ ಹೊರಟಿದ್ದಾರೆ. ಅವರ ನಿವಾಸ ಸ್ಥಳದಲ್ಲಿದ್ದ ಸದರಿ ಕಪಾಟುಗಳ ಮುದ್ರೆಗಳೆಲ್ಲ ಈಗ ಮಾಯವಾಗಿವೆಂದೂ ಅದರೊಳಗಿನ ವಸ್ತು ಒಡವೆಗಳು ಕಣ್ಮರೆಯಾಗಿವೆಂದೂ ಸುದ್ದಿ ಹಬ್ಬಿದೆ! ಬಂಡುಗಾರ ಎಸೆಂಡಿಯುವರ ಆಸ್ತಿಯನ್ನು ಹೀಗೆ ಕಳ್ಳತನದಿಂದ ಅವರಿಗೆ ಒಯ್ದುಕೊಡುತ್ತಿರುವ ಸಂಭಾವಿತ ಜನರುಳ್ಳ ಕಾಶ್ಮೀರ ಮಂಡಳವು ಭಾರತಕ್ಕೆ ಎಂಥ ನ್ಯಾಯ ದೊರಕಿಸಿಕೊಡಬಲ್ಲದೆಂಬುದನ್ನು ಓದುಗರೇ ಊಹಿಸಲಿ.

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಮಳೆ ನಿಂತಿದೆ. ಬೆಳಗು ಮುಂಜಾನೆಯಲ್ಲಿ ಮಂಜುಗಾಲ ಬೀಳಲಾರಂಭಿಸಿದೆ. ಗದ್ದೆ ಕೊಯಿಲಿಗೆ ಇನ್ನು ೨ ವಾರಗಳು ಹೋಗಬೇಕು.

ನಿನ್ನೆ ಗಾಂಧಿ-ಜಯಂತಿಯ ಉತ್ಸವವಾಯಿತು. ಮುಂಜಾನೆ ಮೆರವಣಿಗೆ ಮತ್ತು ಧ್ವಜವಂದನೆಗಳು ಆದವು. ಅಪರಾಹ್ನದಲ್ಲಿ ವಿದ್ಯಾರ್ಥಿಗಳ ನೂಲುವ ಸಂದ್ಯಾಟ ನಡೆಯಿತು. ಸಂಜೆ ಗಾಂಧಿ-ಚೌಕದಲ್ಲಿ ವ್ಯಾಯಾಮ ಶಾಲೆಯವರ ವ್ಯಾಯಾಮ ಪ್ರಯೋಗಗಳ ಪ್ರದರ್ಶನವಾಯಿತು. ಅದಾದ ಮೇಲೆ ನೂಲುವ ಸಂದ್ಯಾಟದಲ್ಲಿ ಸ್ಪರ್ಧಿಸಿ ಗೆದ್ದವರಿಗೂ ವ್ಯಾಯಾಮ ಶಾಲೆಯವರಿಗೂ ಬಹುಮಾನಗಳನ್ನು ಹಂಚಲಾಯಿತು.

ಈ ಹಿಂದೆ ತಿಳಿಸಿದಂತೆ ಕಳೆದ ಮಂಗಳವಾರ ಮತ್ತು ಗುರುವಾರ ಬೆಂಗಳೂರಿನ ವ್ಯಾ॥ ಉಪಾಧ್ಯಾಯ [illegible] ರಾಮರಾವ ಸೌ॥ ಚಂದ್ರಭಾಗಾ [illegible], ಶ್ರೀ ಶಂಕರನಾರಾಯಣ ದೇವಸ್ಥಾನದ [illegible]-ನಿಧಿಯ ಸಹಾಯಾರ್ಥವಾಗಿ, [illegible] ಪ್ರಯೋಗಗಳನ್ನು ಮಾಡಿದರು. ಎರಡೂ ದಿನ ಮಂದಿರವು ಪ್ರೇಕ್ಷಕರಿಂದ ತುಂಬಿಹೋಗಿತ್ತು. ಈ ಪ್ರಯೋಗಗಳಿಂದ ಮೇಲ್ಕಂಡ ನಿಧಿ ಎರಡೂ ಸಂಸ್ಥೆಗಳಿಗೆ ಖರ್ಚು ವೆಚ್ಚ ಕಳೆದು [illegible] ಲಾಭವಾಗಿರಬೇಕು.

ಇನ್ನು ಮುಂದೆ ಸರಕಾರದ ಕಡೆ ರಾ. ೫೦ [illegible] ಟಿಕೀಟು ಪಡೆದವರಿಗಷ್ಟೇ [illegible] ನಗರ ಏಜಂಟರು [illegible] ಎಲ್ಲ [illegible] ಹಣ್ಣುಗಳೊಳಗಿನ ಎಲ್ಲವು [illegible] ಕೂಡಲೆ [illegible] ಪಡೆಯಬೇಕು, [illegible] ಬನ್ನವಿಸುತ್ತಾರೆ.

ಬಾಹೀರ ಆವಂತೆ ಪೊಸ್ಟ ಶನಿವಾರ [illegible] ದ ಶ್ರೀ ಅಪ್ಪಾ [illegible] ಗಾಡಿಯೊಳಗೆ [illegible] ವರ್ಧಕ ಸಂಘದ [illegible] ರಾ॥ ಸುಬ್ರಾಯ ಹೆಗಡೆಯವರ ಅಧ್ಯಕ್ಷತೆಯಲ್ಲಿ [illegible] ಸಂಘಕ್ಕೆ [illegible] ರಾ॥ ನಾರಾಯಣ ಹೆಗಡೆಯವರು [illegible] ಕೃತಜ್ಞತೆಯಿಂದ ಬನ್ನವಿಸಿದರು.

ಹೊನ್ನಾವರ— [illegible] ಕೊಟ್ಟಿರುತ್ತಾರೆ. [illegible] ಪ್ರಸಂಗವು [illegible]

ಕಳೆದ ಬುಧವಾರ ರಾತ್ರಿ ಪೇಟೆಯೊಳಗಿನ [illegible] ಅಂಗಡಿಯೊಂದರಲ್ಲಿ ಕಳವಾಗಿದೆ. ಕಳ್ಳರು ಅಂಗಡಿ [illegible] ತೆಗೆದು ಒಳಹೊಕ್ಕು [illegible] ಬೀಗ [illegible] ಒಯ್ದಿರುತ್ತಾರಂತೆ.

(ತಾ ೨-೧೦-೪೯) ಇಂದು ಊರಲ್ಲಿ ಗಾಂಧಿ ಜಯಂತಿ ಉತ್ಸವವಾಯಿತು. ಮೆರವಣಿಗೆ, ಧ್ವಜವಂದನೆ ಸಾರ್ವಜನಿಕ ಸಭೆ ಮೊದಲಾದ ಕಾರ್ಯಕ್ರಮಗಳು ನಡೆದವು.

ಕಾರವಾರ— (ತಾ. ೩೦-೯-೪೯) ಕಳೆದ [illegible] ಶನಿವಾರ ಇಲ್ಲಿ "ಹರಿಜನ ದಿನ"ವು ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಮುಂಜಾನೆ [illegible] ದೇವಸ್ಥಾನದಿಂದ ಹರಿಜನರೂ ಬೇರೆ ಜನರೂ [illegible] ಮೆರವಣಿಗೆಯಿಂದ [illegible] ಧ್ವಜವಂದನೆ ಮಾಡಿದರು. ಆ ನಂತರ [illegible] ಬೇರೆ ಬೇರೆ [illegible] ಸಂಜೆ [illegible] ರಾ॥ ಹಳದೀಪುರ ವಕೀಲರ ಅಧ್ಯಕ್ಷತೆಯಲ್ಲಿ [illegible] ಸಭೆಯಾಯಿತು. [illegible] ಹರಿಜನರ ಬಗ್ಗೆ ಸರಕಾರವು ಅವರಿಗೆ ಮಾಡಿದ ಸಹಾಯದ [illegible] ಕಾಯದೆ-ಕಾನೂನುಗಳ [illegible] ಹರಿಜನರನ್ನು ಸಮಾಜವು ಹೇಗೆ [illegible] ತಿಳಿಸಿದರು. ಅಧ್ಯಕ್ಷ [illegible] ಹರಿಜನ [illegible] ಪೂರ್ಣ ಪ್ರಯೋಜನ ಪಡೆಯಬೇಕೆಂದು ಬೋಧಿಸಿದರು.

ಮೇಲಿನಂತೆ ಹರಿಜನ ದಿನದ ಕಾರ್ಯಕ್ರಮವು [illegible] ಸಭೆ [illegible] ರಾ॥ [illegible] ಭಾಷಣವಾಯಿತು. [illegible] ಆದರೆ ಈ ಸಭೆಯಲ್ಲಿ [illegible] ! [illegible] ಅದರಿಂದ ಸಂಘದವರ [illegible]

ಜಿಲ್ಲಾ ಸಮಾಚಾರ.

ಗುಂಡಗೋಳ— (ತಾ. ೨೬-೯-೪೯) [illegible] "ಸರ್ವೋದಯ ಬಾನೆ ಕಟ್ಟುವ ಸಹಕಾರಿ ಸಂಘ" ವೆಂಬ ಅದರ ಹೆಸರು [illegible]

ಯಲ್ಲಾಪುರ— (ತಾ. ೨೮-೯-೪೯) [illegible]

ಹಳಿಯಾಳ— (ತಾ. ೨೭-೯-೪೯) [illegible]

ಶಿರಸಿ— [illegible]

ಕಾರವಾರ— (ತಾ. ೧೦-೯-೪೯) [illegible]

(ಮುಂದೆ ೫ನೇ ಪುಟ ನೋಡಿರಿ)

ಕಾರವಾರದ ಸಿವ್ಹಿಲ್ ಜಡ್ಜ ಸೀ. ಡಿ. ಕೋರ್ಟಿನಲ್ಲಿ.

ಮುಕ್ಕಾಮು-ಕಾರವಾರ ಇಲ್ಲಿ. ಸಿ|| ೬

ದಿವಾಣಿ ಮೊಕದ್ದಮೆ ನಂಬರು ೧೩೩ ಸನ್ ೧೯೪೯ ಪೈಕಿ

೧. [illegible]
೨. [illegible]
೩. [illegible]
೪. [illegible]
೫. [illegible]
[illegible] — ವಾದಿಯರು.

— ವಿರುದ್ಧ —

೧. [illegible] — ಪ್ರತಿವಾದಿ.

[illegible]

ಕೋರ್ಟಿನ ಮೊಹರು

R. N. PHENANI,
Clerk of the Court.

ಕಾರವಾರದ ಸಿವ್ಹಿಲ್ ಜಡ್ಜ ಸೀ. ಡಿ. ಕೋರ್ಟಿನಲ್ಲಿ.

ಮೂಲ ನಂಬರು ೧೩೩—೧೯೪೯.

೧. [illegible]
೨. [illegible]
೩. [illegible]
೪. [illegible]
೫. [illegible]
[illegible] — ವಾದಿಯರು

ವಿರುದ್ಧ

[illegible] — ಪ್ರತಿವಾದಿ.

ದಾವಾ ರಕಮು ರೂ ೧೫—೦—೦

ವಾದಿಯ ಕೋರ್ಟಿಗೆ ಕೊಟ್ಟ ವಿವರ —

೧ [illegible]

೨ [illegible]

ರಿಗೆ ಧರ್ಮದ ಕೆಲಸ ನಿರಾತಂಕ ಮಾಡುವಂತೆ ವ್ಯವಸ್ಥೆ ಮಾಡುವದು ವಿಕಾರ ಜನರಲ್ಲ ಪ್ರತಿವಾದಿಯು ತನ್ನ ಕರ್ಮದ ವಿಕಾರನಿಗೆ ಸಿಮೆಟ್ರಿಯಲ್ಲಿ ಕೆಲಸಗಳನ್ನು ಮಾಡಿಸತಕ್ಕದ್ದಿರುತ್ತದೆ

೩ ೧೯೪೪ನೇ ಇಸ್ವಿ ಸಪ್ಟಂಬರ ತಾ. ೩ನೇಯಿಂದ ಪ್ರತಿವಾದಿ ನೇಮಿಸಿದ ವಿಕಾರನು ಚರ್ಚ ವ ಸಿಮೆಟ್ರಿ ಬಂದ ಮಾಡಿಟ್ಟು ಜನರಿಗೆ ತಮ್ಮ ಧರ್ಮದ ಕೆಲಸಗಳನ್ನು ನಡಿಸಲಿಕ್ಕೆ ಆತಂಕ ಮಾಡಿದ್ದನು. ಈ ಬಗ್ಗೆ ಪ್ರತಿವಾದಿ ಪತ್ರ ವ್ಯವಹಾರ ಮಾಡಿದರೂ ಅವನು ಲಕ್ಷದಲ್ಲಿ ತಕ್ಕೊಳ್ಳಲಿಲ್ಲ. ಮರಣವಾದಾಗ ಸಿಮೆಟ್ರಿ ಬಂದ ಮಾಡಿ ಇಟ್ಟಿರುವ ಚರ್ಚದ ಬಾಗಿಲುಗಳನ್ನು ಮನದಾನೆ ಬಂದ ಇಟ್ಟು ಜನರ ಪೂಜಾ-ಪ್ರಾರ್ಥನೆ ವಗೈರೆ ಹಕ್ಕಿಗೆ ಆತಂಕ ಮಾಡಿದ್ದರಿಂದ ವಾ[illegible] ಈ ಸಂಬಂಧ ಮೂಲ ನಂಬರ ೨೦೮—೧೯೪೪ನೇ ದಾವಾ ಮಾಡಿ ಅದರಲ್ಲಿ ನಂಬರ ೧೬೨—೧೯೪೭ನೇ ಅಪೀಲ ಆಗಿ, ಎಲ್ಲಾ ಜನರ ಕರ್ಚಿನಿಂದ ದಾವಾ ನಡೆಯುವರೆ ಪರವಾನಗಿ ಪಡೆದು ವಾದಿಯು ಈ ದಾವಾ ಹಾಕಿಕೊಂಡರು. ಸದ್ರಿಚ ವಿಕಾರನ ಮೇಲೆ ಬಹಳ ಫಿರ್ಯಾದಿ ಆದ ಮೇಲೆ ಅವನಿಗೆ ವರ್ಗ ಮಾಡಲಾಯಿತು

೪ ಅವನ ನಂತರ ನೇಮಿಸಿದ ವಿಕಾರನು ಸಹ ಆಗಾಗ್ಗೆ ಚರ್ಚದ ಬಾಗಿಲುಗಳನ್ನು ಪೂಜಾ-ಪ್ರಾರ್ಥನೆ ಬಗ್ಗೆ ಆ ಆ ವೇಳೆಯಲ್ಲಿ ತೆರೆಯದೆ ಜನರ ಹಕ್ಕಿಗೆ ಬಾಧಕ ತರುವದಲ್ಲದೆ ಸ್ವತಃ ಪೂಜಾ ಮಾಡುವ ಕಾಲದಲ್ಲಿ ಚರ್ಚ ಬಂದ ಇಟ್ಟು ಮನದಾನೆ ಹಣ ದೇವರ ಭಕ್ತರಿಗೆ ಹೆಚ್ಚು ಹಣ ಕೊಟ್ಟ ಮೇಲೆ ವಿಕಾರನು ಕೆಲಸ ನಡಿಸಿದನು. ಈ ಪ್ರಕಾರ ಪ್ರತಿವಾದಿಯು ಉಪೇಕ್ಷೆಯಿಂದ ಅವನು ನೇಮಿಸಿದ ವಿಕಾರನು ಜನರ ಹಕ್ಕಿಗೆ ನಾನಾ ತರದಿಂದ ತೊಂದರೆ ಕೊಡುವದರಿಂದ ಈ ಹಕ್ಕು ಸ್ಥಿರಪಡಿಸಿ ಮಾಡಿಕೊಂಡು ಕೋರ್ಟ ಹುಕ್ಮಿ೦ ವಹಿಯುವ ಅವಶ್ಯವಿದೆ. ಆದ್ದರಿಂದ ಕಾಲದಿಂದ ಪ್ರತಿ ದಿವಸ ಬೆಳಗ್ಗೆ ೭ ಘಂಟೆಯಿಂದ ೯ ಘಂಟೆ ವರೆಗೆ ಮತ್ತು ಸಂಜೆ ಘಂಟೆಯಿಂದ ೭ ಘಂಟೆ ವರೆಗೆ ಪೂಜೆ, ಪ್ರಾರ್ಥನೆ ಬಗ್ಗೆ ಚರ್ಚನ್ನು ಮುಕ್ತ ಇಡುವ ಪ್ರವಾಹ ಇದೆ. ಅದೇ ಪ್ರಕಾರ ಬಾಕಿ ಹಬ್ಬಗಳಲ್ಲಿ ಜನರ ಬೇಡಿಕೆಯಂತೆ, ಪಾಡುವ ವಗೈರೆ ಸಂಸ್ಕಾರ ಸಮಯಗಳಲ್ಲಿ ಚರ್ಚ ಮುಕ್ತ ಇಡತಕ್ಕದ್ದಿರುತ್ತದೆ ಈ ಎಲ್ಲ ರಿವಾಜಿನ ಬಗ್ಗೆ ಡಿಕ್ಲೇರೇಶನ್ ಇಂಜಕ್ಷನ್ ಸಹಿತವಾಗಿ ವಾದಿಯು ಕಂಡ ಈ ದಾವೆಗೆ ೧೯೪೪ನೇ ಇಸವಿ ಸಪ್ಟಂಬರದಿಂದ ಈ ಕೋರ್ಟ ಹದ್ದಿಯ ಕವಾಸನದಲ್ಲಿ ಕೇಸು ಉಂಟಾಯಿತು

ಈ ಆದರಿಂದ ಫೈಸಲ ಬೇಡುವದೇನೆಂದರೆ —

ಪ್ರತಿವಾದಿ ಕಾರ್ಯದ ರದ್ದು ಪಡಿಸಿ ವಾದಿಯು ಚಿತಾಕುಲಾ ಸೇಂಟ ಜೋಸೆಫ ಚರ್ಚದಲ್ಲಿ ವಾದಿರಿಗೆ ವ ಚಿತಾಕುಲಿಯ ಎಲ್ಲಾ ಕ್ರಿಶ್ಚನ್ ಜನಗಳಿಗೆ ಪೂಜೆ-ಪ್ರಾರ್ಥನೆ ನಡಿಸುವ, ಹಬ್ಬಗಳನ್ನು ಆಚರಿಸುವ ಮತ್ತು ಮಾಸ-ಸೆಕ್ರಮೆಂಟ ತಕ್ಕೊಳ್ಳುವ ಮತ್ತು ಸಿಮೆಟ್ರಿಯಲ್ಲಿ ಶವ-ದಫನ ಮಾಡುವ ಸ್ವಕಗಳ ಹಕ್ಕು ಉಂಟೆಂ ಬ ಈ ಕೆಲಸಗಳನ್ನು ನಡಿಸುವ ಬಗ್ಗೆ ಪ್ರತಿವಾದಿಯು ಪ್ರತಿ ದಿವಸ ಬೆಳಗ್ಗೆ ೭ರಿಂದ ೯ ಮತ್ತು ಸಂಜೆಗೆ ೫ ರಿಂದ ೭ ಘಂಟೆ ವರೆಗೆ ವ ಬಾಕಿ ಹಬ್ಬಗಳ ವಗೈರೆ ಕೆಲಸಗಳ ಬಗ್ಗೆ ಅವಶ್ಯವಿದ್ದಾಗ ಅಥವಾ ಕೋರ್ಟ ನಿರ್ಧಾರ ಮಾಡುವ ವೇಳೆಗಳಲ್ಲಿ ದಾವೆಗೆ ಸಂಬಂಧಪಟ್ಟ ಚರ್ಚ ವ ಸಿಮೆಟ್ರಿ ಮುಕ್ತ ಇಡಲಿಕ್ಕೆ ಜವಾಬದಾರರಾಗಿ ನೇಮಕ ಮಾಡತಕ್ಕದ್ದು ಆ ಪ್ರಕಾರ ಕೋರ್ಟಿನಿಂದ ನಿರ್ಣಯಿಸುವ ವೇಳೆಯಲ್ಲಿ ಚರ್ಚದ ಬಾಗಿಲುಗಳನ್ನು ಮುಕ್ತ ಇಟ್ಟು ವಾದಿ ವ ಎಲ್ಲಾ ಕ್ರಿಶ್ಚನ್ ಜನರ ಪೂಜೆ-ಪ್ರಾರ್ಥನೆ ವಗೈರೆ ಕೆಲಸಗಳಿಗೆ ಆತಂಕ ಮಾಡದಂತೆ ಕಾಯಂ ಇಂಜಕ್ಷನ್ ಕೊಡಬೇಕು. ಇತರ ಅಕಾರ ರೂಪಾಯಿ ೧೫—೦—೦

ಈ ದಾವಾ ಖರ್ಚನ್ನು ವಾದಿರಿಗೆ ಪ್ರತಿವಾದಿಯಿಂದ ಕೊಡಿಸಬೇಕು.

ಚಿತಾಕುಲಾ ಸೇಂಟ ಜೋಸೆಫ ಚರ್ಚದ ಎಲ್ಲಾ ಭಜಕರಿಗೆ ತಿಳಿಸುವದೇನೆಂದರೆ—

ಮೇಲಿನಂತೆ ವಾದಿಯು ದಾವಾ ಮಾಡಿರುತ್ತದ್ದು ಅವಕ್ಕೆ ಯಾರದಾದರೂ ತಕರಾರ ಇದ್ದರೆ ತಾ. ೧೮—೧೦—೪೭ಕ್ಕೆ ಕೋರ್ಟಿನಲ್ಲಿ ಸ್ವತಃ ಯಾ ವಕೀಲರ ಮುಖಾಂತರ ಹಾಜರ ಮಾಡಬೇಕು.

ಕಾರವಾರ, ತಾ. ೨೪—೮—೧೯೪೭ **S. P. Rodrigues.**

ಜಾಹೀರಾತು.

ಕಾನಡಾ ಜಿಲ್ಲೆಯಲ್ಲಿ ಸಂಘಟಿಸಲ್ಪಡುತ್ತಿರುವ ಈ ಕೆಳಗಿನ ಸಂಸ್ಥೆಗಳಲ್ಲಿ ಕೆಲಸ ಉದ್ಯಮ ಕಲಿಯಬಯಸುವ ಉಮೇದವಾರರು ಕೆಳಗೆ ಅರ್ಜಿ ಮಾಡಬೇಕು.

(೧) ಹೊನ್ನಾವರದೊಳಗಿನ ಕಬ್ಬು ಕಬ್ಬಿಣಕಾರ ಮತ್ತು ಅದರ ಹುರಿ ಮಾಡುವ ಸಂಸ್ಥೆಗಳೆರಡು.

(೨) ಕತ್ತ ಕಬ್ಬಿಣ ಅದರ ಹುರಿ ಮಾಡುವ ಕುಮಟೆಯೊಳಗಿನ ಸಂಸ್ಥೆಯೊಂದು

ಮೇಲ್ಕಾಣಿಸಿದ ಪ್ರತಿಯೊಂದು ಸಂಸ್ಥೆಯಲ್ಲಿ ೩೦ ಮಂದಿ ಯನ್ನು ಸೇರಿಸಿಕೊಳ್ಳಲಾಗುವದು ಶಿಕ್ಷಣದ ಅವಧಿ ೩ ತಿಂಗಳಿನದಿರುತ್ತದೆ ಶಿಕ್ಷಣ ಪಡೆಯುವ ಪ್ರತಿಯೊಬ್ಬ ವ್ಯಕ್ತಿಗೆ ತಿಂಗಳಿಗೆ ರೂ ೧೫ರಂತೆ ಶಿಕ್ಷಣ-ವೇತನ ಕೊಡಲಾಗುವದು

(೩) ಕನ್ನಡ ಕೈಗಾರಿಕೆ ಕಲಿಸುವದರ ಜೊತೆಗೆ ಕಾರವಾರದಲ್ಲಿ ನಡಿಸುವ ಹೊನ್ನಾವರದೊಳಗಿನ ಸಂಸ್ಥೆ.

(೪) ಈ ಸಂಸ್ಥೆಯಲ್ಲಿ ಕನ್ನಡ ಚಾಪೆಗಳನ್ನು ನೇಯುವಂತಹ ಬೇರೆ ಪದಾರ್ಥ (matting) ಗಳನ್ನು ಸಿದ್ಧಗೊಳಿಸುವ ಬಗ್ಗೆ ಶಿಕ್ಷಣ ಕೊಡಲಾಗುತ್ತದೆ. ಈ ಸಂಸ್ಥೆಯಲ್ಲಿ ೩೦ ಮಂದಿಗೆ ಸೇರಿಸಿಕೊಳ್ಳಲಾಗುವದು. ಶಿಕ್ಷಣದ ಅವಧಿ ೧ ವರ್ಷ ಶಿಕ್ಷಣ ಪಡೆಯುವ ಪ್ರತಿಯೊಂದು ವ್ಯಕ್ತಿಗೆ ಪ್ರತಿ ತಿಂಗಳು ರೂ. ೨೦ ರಂತೆ ಶಿಕ್ಷಣ-ವೇತನ ಸಿಗುವದು. ಉಮೇದವಾರರು ಸರ್ವಸಾಮಾನ್ಯವಾಗಿ ೩೦ ವರ್ಷಗಳಿಗೂ ಕಡಿಮೆ ಪ್ರಾಯದವರಬೇಕು; ಮೆಟ್ರಿಕ ವರ್ಗದ ವರೆಗೆ (upto pre-matric standard) ಕಲಿತವರಬೇಕು.

(೫) ಕನ್ನಡ ಕಾರಖಾನೆಯಲ್ಲಿ ೬೦ ಮಂದಿ ಉಮೇದವಾರರನ್ನು ನೇಮಿಸಿಕೊಳ್ಳುವದಿದೆ ಉಮೇದವಾರರಿಗೆ ಮೊದಲಿನ ತಿಂಗಳಲ್ಲಿ ತಲಾ ರೂ ೧೫ರಂತೆ ಮಾಸಿಕ ಶಿಕ್ಷಣ ವೇತನ ಕೊಡಲಾಗುವದು ಆ ಮೇಲೆ ಅವರಿಗೆ ಸಂಬಳದ ಪದ್ಧತಿಯ ಮೇಲೆ ಕೆಲಸಕ್ಕೆ ನೇಮಿಸಿಕೊಳ್ಳಲಾಗುವದು

ಅರ್ಜಿ ಮಾಡಿರಿ— ಉಮೇದವಾರರು ತಮ್ಮ ವಯಸ್ಸು ಮತ್ತು ಪಾತ್ರತೆಗಳನ್ನು ನಮೂದಿಸಿ ಈ ಕೆಳಗಿನ ಅಧಿಕಾರಿಗಳಿಗೆ ಅರ್ಜಿ ಕಳಿಸಬೇಕು —

ಮೆ|| ಜೊಯಿಂಟ ರಜಿಸ್ಟ್ರಾರ, ಫೊರ್ ಇಂಡಸ್ಟ್ರಿಯಲ್ ಕೋ-ಒಪರೇಟಿವ್ಸ್ ಎಂಡ್ ವ್ಹಿಲೇಜ ಇಂಡಸ್ಟ್ರೀಸ್, ಪುಣೆ ೩.

ಚಂದಮಾಮ

(ಕನ್ನಡ ಮತ್ತು ಹಿಂದಿಯಲ್ಲಿ)

ಮಕ್ಕಳ ಅತ್ಯಂತ ಸುಂದರ ಮಾಸ ಪತ್ರಿಕೆಗಳು

ಊರೂರಲ್ಲಿ ಏಜಂಟರು ಬೇಕು ಮಾದರಿ ಪ್ರತಿಗೆ ಆಣೆ ಕಳಿಸಿರಿ

ಜಿಲ್ಲೆಯ ಪ್ರತಿನಿಧಿಗಳು— **ಹೆಗಡೆ ಬಂಧುಗಳು, ಕುಮಟಾ.**

ಕೊಂಕಣಿ ಭಾಷೆಯು ಪ್ರಚಾರಕ್ಕಾಗಿ ಮತ್ತು ಅದಕ್ಕೆ ದು ಘನತೆಯ ಸ್ಥಾನ ದೊರಕಿಸಿಕೊಡುವದಕ್ಕಾಗಿ ಮಹಾದ ಪ್ರಯತ್ನಗಳನ್ನು ಕೊಂಡಾಡಿ, ಅವರು ಪ್ರಾರಂಭಿಸಿದ ಕಾರ್ಯವನ್ನು ಕೊಂಕಣಿಗರು ಶ್ರದ್ಧಾಪೂರ್ವಕವಾಗಿ ಮುಂದರಿಸಬೇಕೆಂದು ಬೋಧಿಸಿದರು. ರಾ ಶಾನಭಾಗರು ಸಮಯೋಚಿತ ಉತ್ತರ ಕೊಟ್ಟು, ಕೊಂಕಣಿಯ ಗೌರವ ಬೆಳಸಿರೆಂದು ಉಪದೇಶ ಮಾಡಿದರು

(ತಾ. ೨೮—೯—೪೭) ಕಳೆದ ತಾ ೨೭ಕ್ಕೆ ಜಿಲ್ಲಾ ಮೆಜಿಸ್ಟ್ರೇಟರು ಶ್ರೀ. ಪ್ರೊ. ಕೋಟನ ೧೯೪೪ನೇ ಕಲಮಿನನ್ವಯ ಒಂದು ಹುಕುಮು ಹೊರಡಿಸಿ, ಮುಂದಿನ ತಿಳಿವಳಿಕೆ ಬರುತ್ತಿರುವ ವರೆಗೆ ಜಿಲ್ಲೆಯಲ್ಲಿ ಸೇರುವಾಗ ಒಬ್ಬ ತ್ರಿರುವ (ಮ.ಸಲ್ಮಾನರ) ಬಕರ-ಈದ ಹಬ್ಬದಲ್ಲಿ ಹಸುವಧೆಯಿಂದಲ್ಲಿ ಸಾರ್ವಜನಿಕರಿಗೆ ಮನೋವ್ಯಥೆಯಾಗಿ ಶಾಂತತಾಭಂಗವಾದೀತೆಂಬ ಭೀತಿಯುಂಟಾಗಿರುವದರಿಂದ ಅಂತಹ ದುರ್ಧರ ಪ್ರಸಂಗವನ್ನು ತಪ್ಪಿಸುವದಕ್ಕಾಗಿ ತಾ ೩೦—೯—೪೭ರಿಂದ ತಾ. ೪-೧೦-೪೭ರ ವರೆಗೆ ಜಿಲ್ಲೆಯಲ್ಲಿಯ ಯಾರೂ (೧) ದನಗಳನ್ನು ಹೊರಗೆ ಕೊಲ್ಲಬಾರದು ಮಾರಬಾರದೆಂದೂ, (೨) ರಸ್ತೆಯ ಮೇಲೆ, ರಸ್ತೆಯಿಂ ಕಾಣುವಂತಹ ಸ್ಥಳದಲ್ಲಿ ಅಥವಾ ಸಾರ್ವಜನಿಕರು ಮುಕ್ತದ್ವಾರವಿರುವ ಬೇರೆ ಯಾವದೇ ಸ್ಥಳದಲ್ಲಿ (ಕಂಪೌಂಡ ಮೊದಲಾದ) ಯಾವದೇ ಜಾತಿಯ ಪ್ರಾಣಿಯ ಹತ್ಯೆ ಮಾಡಬಾರದೆಂದೂ ಕಟ್ಟಪ್ಪಣೆ ಮಾಡಿದ್ದಾರೆ.

ಅಂತೆ ನಿಯಮಗಳನ್ನು ನಮಾಜು ಕಳೆ ತಾ. ೩-೧೦ ಉ ಕ್ಕೆ, ಅಸಾಂಪ್ರದ ೪ ಘಂಟೆಗೆ ಜಿಲ್ಲಾಧಿಕಾರಿಗಳಿಂದ ಕರೆದು ಜಿಲ್ಲೆಯ ಮುಸಲ್ಮಾನರ ಸಂಬಂಧದಲ್ಲಿ ಪ್ರ ಮುಖ ಮುಸಲ್ಮಾನರು ಬಂದ ನಿಯಮಗಳ ಪಾಲನ ಮಾಡಿ, ತಮಗೆ ಇಲ್ಲದ ತಮಿಳು ಸಹಾಯಕ್ಕೆ ತಕ್ಕ ಹಾಗೆಂದೂ ಜಿಲ್ಲಾಧಿಕಾರಿ ವಿನ್ನವಿಸಿದ್ದಾರೆ.

ಕೋಟಿಬಾಗದ ಪ್ರಸಿದ್ಧ ಅಂಗಲ-ವ್ಯಾಪಾರಿಗಳಾದ ರಾ ಅಯ್ಯಾತ ವೆಂಕಟೇಶ ಶೇಣ್ವಿಯವರು ಇಂದು ಅರುಣ ದಯಕ್ಕೆ, ನ್ಯಾಯದ ೫೦ನೇ ವರ್ಷದಲ್ಲಿ, ವೈಕುಂಠ ಸಿಗಳವರೆಂದು ತಿಳಿಸಲು ವ್ಯಸನವಾಗುತ್ತದೆ. ಇ ೧—೨ ತಿಂಗಳಿಂದ ಅವರು ಮಧುಮೇಹದ ಉಪದ ಯಿಂದ ಬಳಲುತ್ತಿದ್ದರು ಮೃತರಾಗ್ಗಲು ಬಹಳ ಪರೋ ಪಕಾರಿಗಳೂ ದೊಡ್ಡಸ್ತಿಕೆಯುಳ್ಳವರೂ ಆಗಿದ್ದರು ಅವರ ಅಂತ ಕಾಲದಲ್ಲಿ ಸಕಲ ಧರ್ಮಗಳ ಮತ್ತು ಜಾತಿಗಳ ಸ್ತ್ರೀ ಪುರುಷರು ಅವರ ದರ್ಶನ ಕೊಂಡು, ಅಂಥ ಉಪಕಾರಿ ವ್ಯಕ್ತಿಯು ಈ ಕಾಲದಲ್ಲಿ ತಮ್ಮನ್ನು ಅಗಲಿ ಹೋಗುತ್ತದೆ ಎಂದು ದುಃಖಿಸುತ್ತಿದ್ದರು. ಮೃತಾತ್ಮರ ಸ್ಮಶಾನಯಾತ್ರೆಯಲ್ಲಿ ೫—೬ ಸಾವಿರ ಜನರು ಸೇರಿದ್ದರು. ಭಂಡಾ ಚಾತಿಯವರು ತಾಳ-ಮೃದಂಗಗಳನ್ನು ಬಾರಿಸುತ್ತ ಭಜನ ಮಾಡುತ್ತಿದ್ದರು ಮೃತಾತ್ಮರಿಗೆ ಸದ್ಗತಿ ಕೊಡಲೆಂದು ಸದ ಯಿಸ್ತೇವೆ !

ನಮ್ಮಲ್ಲಿ ಕತ್ತದಿಂದ ತಯಾರಿಸಿದಂ ಚಕಾರ ಹುರಿ, ಬಾವಿ ಹಗ್ಗ, ಬ್ರ ಮೆಟ, ಮೆಟಂಗ ಮುಂತಾದವುಗಳ ಯೋಗ್ಯ ದರದಲ್ಲಿ ಸಿಗುತ್ತವೆ.

ಚಿತ್ತರಮೂನ್, ಕೊಯರ್ ಸೊಸೈಟಿ ಲಿಮಿಟೆಡ್ ಹೊನ್ನಾವರ. (ಉ ಕ)

ನಿಮಗೆ ಬೇಸರದ ಸಮಯ ಬಂದಾಗ

ಅದನ್ನು ರಸಮಯವಾಗಿ ಕಳೆಯುವದು ಹೇಗೆ ಎಂಬುದು ಗೊತ್ತೇ ?

ಹಾಗಾದರೆ —

ಸುರಿತ ಕೆಲಸಗಾರರಿಂದ ಶಾಸ್ತ್ರೋಕ್ತ ರೀತಿಯಲ್ಲಿ ತಯಾರಿಸಿದ ಕುಮಟಾ ನಸ್ಯವನ್ನು ಸೇವಿಸಿರಿ.

ಅದಕ್ಕಾಗಿ ಬರೆಯಿರಿ.—

Mangalore Snuff Works
Kumta, N Kanara.

ಜಿಲ್ಲಾ ಸಮಾಚಾರ

[illegible]

NOTICE.

The auction sale of the Sharawati Ferry in Honavar Taluka in the Kanara Division, for running a country craft service for the period from 15th November 1949 to 31st March 1950 will be held on 19th October 1949 in the Sub-Divisional Office, P.W.D. Kumta at 3 P.M. The conditions of sale and contract will be read out at the time of the auction sale. These conditions can also be seen in the Office of the Undersigned as well as in the Sub-Divisional Office, P.W.D. Kumta at any time during office hours except on Sundays and Holidays. On written application to the Undersigned, copies of detailed fahirrama and conditions can be had free of cost.

2. The intending bidders will be required to produce their solvency certificates, duly signed by the Mamlatdar or the Mahalkary and also to pay the security deposit of Rs. 200/- and 1/10th of the bid amount, in cash, on the spot.

No. G. 59/CB.
Ex. Engr's Office, Kan. Dn., Karwar
24th Sept., 1949.

G. N. GODSE.
Ex. Engineer,
Kanara Division

NOTICE.

The Collector of Kanara hereby notifies that a stock of 79 bags of wheat-flour, declared to be unfit for human consumption, in the Haliyal godown is to be sold for Industrial use or for use in Printing Presses at Rs. 306-10-8 per ton wholesale and Re. 0-2-10 per lb. retail.

Those who are desirous of purchasing the stock are requested to contact the Mamlatdar of Haliyal in this connection.

25-9-1949

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.

ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲೊಜಿಂಗ

ದಿ ಕೆನರಾ ಲೊಜ

[ಊಟ ಮತ್ತು ವಸತಿಗೃಹ]

ಮೋಟರ-ಸ್ಟೆಂಡ, ಹುಬ್ಬಳ್ಳಿ.

ಮಾಲಕ: — ಮ್ಹಾಳಪ್ಪಾ ಪೈ.

[illegible]

ಸಿದ್ದಾಪುರ— [illegible]

ಆಜ್ಞೆ

[illegible]

ಪರಿಶಿಷ್ಟ

[illegible]

ನಗರದ ಯಾ ಸ್ಥಳದ ಹೆಸರು		ಧಾರಣೆ
ಕಾರವಾರ	ರೂ	[illegible]
ಕುಮಟಾ	,,	[illegible]
ಶಿರಸಿ	,,	[illegible]

[illegible]

M. K. JADHAV.
ಜಿಲ್ಲಾ ಮ್ಯಾಜಿಸ್ಟ್ರೇಟ್, ಕಾನಡಾ.

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ ವರ್ಷಕ್ಕೆ ರೂ ೩-೦
ಹೊರಊರಿಂದ ವರ್ಷಕ್ಕೆ ೪-೧-೦
ಆರು ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೦
ವ್ಹಿ. ಪಿ. ಯಿಂದ ಕಳಿಸಿದರೆ
ಅದರ ವೆಚ್ಚಗೆ ಬೀಳುವದು.
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು.

Reg. No. B. 1270. Monday, 10-10-1949.

ಕಾನಡಾವೃತ್ತ

ವರ್ಷ ೩೨.] THE KANARA NEWS. [ಸಂಚಿಕೆ ೧೫.

ಕುಮಟಾ:- ಸೋಮವಾರ, ತಾ ೧೦-೧೦-೧೯೪೯

ಜಾಹೀರಾತುಗಳ ದರ
೧೫ ಎಚ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಅಲ್ಲದೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಲ್ಲದೆ ಪತ್ರದ್ವಾರಾ
ತಿಳಿಸಲಾಗುವದು.

ಕೇಳಿದ್ದು, ಕಂಡದ್ದು.

(ಜಿಲ್ಲಾ ಸಂಚಾರಿಯು ಬರೆದುದು)

ಮೊನ್ನೆ ಕಾರವಾರದ ರೆಸಿಡೆಂಟ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ಅದ್ಭುತ ಘಟನೆಯಾಯಿತು. ೧೭ ತಿಂಗಳ ಹಿಂದೆ ಓರ್ವ ವಿಮಾನಗಾರನು ಹೊತ್ತುಕೊಂಡು ಹೋಗುತ್ತಿದ್ದ ಸರಾಯಿಯ ಒಂದು ಕೂಜೆಯನ್ನು ಪೋಲೀಸರು ಹಿಡಿದು, ಪಂಚನಾಮೆ ಮಾಡಿ, ಜಪ್ತ ಮಾಡಿಟ್ಟಿದ್ದರು, ಮತ್ತು ಆ ವಿಮಾನಗಾರನ ಮೇಲೆ ಖಟ್ಲೆ ಮಾಡಿಕೊಟ್ಟಿದ್ದರು. ಕಳೆದ ವಾರ ಆ ಖಟ್ಲೆ ವಿಚಾರಕ್ಕೆ ಬಂತು. ವಿಚಾರದ ಕಾಲಕ್ಕೆ, ಸದರಿ ಕೂಜೆಗೆ ಪಂಚರು ಹಾಕಿದ ಮೊಹರನ್ನು ಒಡೆದು ನೋಡಲಾಗಿ, ಕೂಜೆಯಲ್ಲಿ ಸರಾಯಿ ಇದ್ದಿಲ್ಲ! ಶುದ್ಧ ತಿಳಿ ನೀರು ತುಂಬಿದ್ದಿತ್ತು!' ಆಗ ಎಲ್ಲರೂ ಚಕಿತರಾದರು! ಮೆಜಿಸ್ಟ್ರೇಟರು ಕೂಡಲೆ ಖಟ್ಲೆಯನ್ನು ತಿರಸ್ಕರಿಸಿ ಆರೋಪಿಯ ಬಿಡುಗಡೆ ಮಾಡಿದರು.

* * *

ಆದರೆ ಈ ಖಟ್ಲೆಯ ಪ್ರಕರಣವನ್ನು ಅಲ್ಲಿಗೇ ಬಿಡುವದು ಒಳಿತಲ್ಲ. ಕೂಜೆಯಲ್ಲಿದ್ದ ದ್ರವವು ಮೂಲತಃ ನೀರಾಗಿತ್ತೋ ಯಾ ನಡುವೆ ನೀರಾಯಿತೋ ಎಂಬುದರ ಚೌಕಶಿಯಾಗಬೇಕು. ನಡುವೆ ನೀರಾಗಿರುತ್ತಿದ್ದರೆ ಅದು ಎಂದು ನೀರಾಯಿತು, ಹ್ಯಾಗೆ ನೀರಾಯಿತು, ಎಲ್ಲಿ ನೀರಾಯಿತು ಮತ್ತು ಯಾರ ಕೈಯಿಂದ ನೀರಾಯಿತು ಎಂಬುದರ ಸಂಶೋಧನೆಯಾಗುವದವಶ್ಯವುಂಟು. ವಿಮಾನಗಾರರಲ್ಲೇ ಬ್ಲಸೇಕರು ಸಮುದ್ರಮಾರ್ಗವಾಗಿ ಗೋವೆಯಿಂದ ಅಥವಾ ಗೋವಾ ಸರಕಾರದ ಕಬಜೆಯಲ್ಲಿರುವ ಅಂಜಾದ್ವೀಪದಿಂದ ಕಳ್ಳಸರಾಯಿ ತರುತ್ತಿರುವದರಿಂದಲೂ, ಆರೋಪಿತ ವಿಮಾನಗಾರನು ನೀರನ್ನು ಕೂಜೆಯಲ್ಲಿ ಒಯ್ಯುವ — ಅದೂ ಕೂಡ ಕಳ್ಳನಂತೆ ಅಡಗಿಸುತ್ತ — ಕಾರಣವಿದ್ದಿಲ್ಲವಾದ್ದರಿಂದಲೂ ಪೋಲೀಸರು ಕೂಜೆಯನ್ನು ಹಿಡಿದ ಕಾಲಕ್ಕೆ ಅದರಲ್ಲಿ ಸರಾಯಿ ಇದ್ದಿರಬೇಕೆಂದೇ ಗೃಹೀತ ಹಿಡಿಯಬೇಕಾಗುತ್ತದೆ. ಮೇಲಾಗಿ ಕೂಜೆ ಹಿಡಿದ ಕಾಲಕ್ಕೆ ಪಂಚರು ಕೂಜೆಯ ಪರೀಕ್ಷೆ ಮಾಡಿ, ಅದರಲ್ಲಿದ್ದ ದ್ರವವನ್ನು ಒಳ್ಳೆತಾಗಿ ಮೂಸಿ ಪರೀಕ್ಷಿಸಿ ಅದು ಸರಾಯಿ ಯಿರುತ್ತದೆಂದು ಪಂಚನಾಮೆ ಮಾಡಿಕೊಟ್ಟಿದ್ದುಂಟು. ನೀರನ್ನೇ ಪಂಚರು ಸರಾಯಿಯೆಂದು ಠರಾಯಿಸಿದರೆಂದು ಹೇಳಬರುವಂತಿಲ್ಲ. ಪಂಚರ ಸಹಾಯಕ್ಕೆ ಬೇರೆ ಸರಾಯಿಯ ಪರೀಕ್ಷೆಯುಳ್ಳ ಅಧಿಕಾರಿಗಳು ಇದ್ದರು. ಅವರಿಗೂ ಜಪ್ತಿಯ ಕಾಲಕ್ಕೆ ಭ್ರಮೆಯಾಯಿತೆಂದು ತಿಳಿಯಬೇಕೇ? ಅದೂ ಸಾಧ್ಯವಿಲ್ಲ. ಆದರಿಂದ ಜಪ್ತಿಯ ಕಾಲಕ್ಕೆ ಕೂಜೆಯಲ್ಲಿ ಸರಾಯಿ ಇತ್ತೆಂದು ಗೃಹೀತ ಹಿಡಿಯಬೇಕಾಗುತ್ತದೆ. ಹಾಗಾದರೆ ಜಪ್ತಿಯ ನಂತರವೇ ಕೂಜೆಯಲ್ಲಿದ್ದ ಸರಾಯಿಯು ನೀರಾಯಿತೆಂದು ಹೇಳಬೇಕಾಗುತ್ತದೆ.

* * *

ಈಗ ಇನ್ನೊಂದು ಪ್ರಶ್ನೆ ಉದ್ಭವಿಸುತ್ತದೆ. ಜಪ್ತಿ ಮಾಡಲ್ಪಟ್ಟ ಮತ್ತು ಮೊಹರು ಹಾಕಿಟ್ಟ ಕೂಜೆಯೊಳಗಿನ ಸರಾಯಿಯು ನೀರಾಗಿರುತ್ತಿದ್ದರೆ ಅದು ಎಲ್ಲಿ ನೀರಾಯಿತು ಎಂಬುದೇ ಆ ಪ್ರಶ್ನೆ. ಜಪ್ತ ಆದ ಕೂಜೆಯು ಎಲ್ಲೆಲ್ಲಿ ಉಳಿದಿತ್ತು, ಯಾರ ಯಾರ ತಾಬೆಯಲ್ಲಿ ಉಳಿದಿತ್ತು, ಮತ್ತು ಜಪ್ತಿಯ ಕಾಲಕ್ಕೆ ಹಾಕಿದ ಪಂಚರ ಮೊಹರು, ಕೋರ್ಟಿನಲ್ಲಿ ಅದು ಒಡೆಯಲ್ಪಡುವ ವರೆಗೆ ಸರಿಯಾಗಿ ಉಳಿದಿತ್ತೋ ಹೇಗೆ ಎಂಬುದರ ಸೂಕ್ಷ್ಮ ಚೌಕಶಿಯನ್ನು ನ್ಯಾಯಾಧೀಶರೂ ಸರಕಾರದವರೂ ಮಾಡಿ, ಸರಾಯಿಯ ನೀರು ಮಾಡುವ "ಜಾದೂಗಾರ" ನಾರೆಂಬುದರ ಪತ್ತೆ ಹಚ್ಚಬೇಕಾಗಿ ನಾನು ವಿನಮ್ರವಾಗಿ ಸೂಚಿಸಬಯಸುತ್ತೇನೆ.

* * *

ಸರಾಯಿಯ ನೀರಾದ ಈ ಚಮತ್ಕಾರವೊಳಗಿನ ಘಟನೆ ಅಪೂರ್ವವಿರುತ್ತದೆಂದು ಯಾರೂ ತಿಳಿಯುವ ಕಾರಣವಿಲ್ಲ. ಅಬಕಾರಿ ಖಟ್ಲೆಗಳಲ್ಲಿ "ಮುದ್ದೇ ಮಾಲ" ಎಂದು ಹಾಜರ ಮಾಡಲ್ಪಟ್ಟ ಮತ್ತು ಕಚೇರಿಯ ಮುದ್ದೇಮಾಲಿನ ಕೋಣೆಯೊಳಗೆ ಇಡಲ್ಪಟ್ಟ ಸರಾಯಿಯ ಬಾಟ್ಲಿ-ಕೂಜೆಗಳೊಳಗಿನ ದ್ರವವು ಹವೆಯ ಪರಿಣಾಮದಿಂದಾಗಿಯೋ, ಜನರ ಕೈಚಳಕದಿಂದಲೋ ನೀರಾದುದನ್ನು ತಾವು ಕಂಡಿರುತ್ತೇವೆಂದು ಕುಮಟೆಯ ಗೆಳೆಯರೊಬ್ಬರು ಹೇಳುತ್ತಾರೆ. ೫-೬ ವರ್ಷಗಳ ಹಿಂದೆ ಒಂದು ದಿನ ಅವರು ಕಚೇರಿಗೆ ಹೋಗಿದ್ದರಂತೆ. ಆಗ ಮೆಜಿಸ್ಟ್ರೇಟರು ಹೊರಗಡೆ ಕುರ್ಚಿ ಹಾಕಿ ಕೂತುಕೊಂಡು, ವಿನಾಶ ಮಾಡಬೇಕೆಂದು ನಿರ್ಣಯವಾದ ಮುದ್ದೇ ಮಾಲನ್ನು ಪೇದೆಗಳ ಕಡೆಯಿಂದ ವಿನಾಶಗೊಳಿಸುತ್ತಿದ್ದರಂತೆ. ವಿನಾಶಗೊಳಿಸಬೇಕಾದ ಬಹುತೇಕ ಪದಾರ್ಥಗಳು ಅಬಕಾರಿ ಮೊಕದ್ದಮೆಗಳೊಳಗಿನ ಸರಾಯಿಯಾಗಿತ್ತು. ಮುದ್ದೇ ಮಾಲಿನ ಕೋಣೆಯ ಮುಂದುಗಡೆ ಜಗಲಿಯ ಮೇಲೆ ನೂರಾರು ಬಾಟ್ಲಿಗಳನ್ನು ಇಟ್ಟಿದ್ದರು. ಪೇದೆಗಳು ಒಂದೊಂದೇ ಬಾಟ್ಲಿಯ ಬೂಚು ತೆಗೆದು ಒಳಗಿದ್ದ ದ್ರವವನ್ನು ಕಚೇರಿಯ ಅಂಗಳದಲ್ಲಿ ಸುರುವುತ್ತಿದ್ದರು. ನನ್ನ ಗೆಳೆಯರು ಆಗ ಸರಾಯಿಯ ವಾಸನೆ ಯಾವ ಬಗೆಯದಿರುತ್ತದೆಂದು ನೋಡಿಕೊಳ್ಳಲು ಪೇದೆಗಳು ನಿಂತಲ್ಲಿ ಹೋಗಿ ನಿಂತರಂತೆ. ತನ್ನ ಮುಂದೆ ಸುಮಾರು ೨೫-೩೦ ಬಾಟ್ಲಿಗಳನ್ನು ಪೇದೆಗಳು ತೆರೆದು ಒಳಗಿದ್ದ "ಸರಾಯಿ"ಯನ್ನು ಧಾರೆವಾರೆಯಾಗಿ ನೆಲದ ಮೇಲೆ ಸುರುವಿದರೂ ತನಗೆ ಏನೊಂದೂ ವಾಸನೆ ಬರಲಿಲ್ಲವಾಗಿಯೂ ಕೊನೆಗೊಂದು ಬಾಟ್ಲಿಯೊಳಗಿನ ದ್ರವವನ್ನು ಸುರುವಿದಾಗ ಮಾತ್ರ ಉಗ್ರ ವಾಸನೆ ಬಂತೆಂದೂ, ಇದರಿಂದ ಮೊದಲು ಸುರುವಿದ ಬಾಟ್ಲಿಗಳೊಳಗಿನ ದ್ರವವೆಲ್ಲ ಮದ್ಯೇತರ ದ್ರವವಿತ್ತೆಂದು ತಾವು ಸಿದ್ಧಾಂತ ಮಾಡಿದೆನೆಂದೂ ಸದರಿ ಗೆಳೆಯರು ಹೇಳುತ್ತಾರೆ. ಮದ್ಯದ ರುಚಿಯುಳ್ಳ ಪೇದೆಗಳಾಗಲಿ ಬೇರೆಯವರಾಗಲಿ ಆ ಬಾಟಲಿಗಳೊಳಗಿನ ಸರಾಯಿಯ ನಿಕಾಲೆ ಮಾಡಿ ಅದರಲ್ಲಿ ನೀರು ತುಂಬಿಟ್ಟಿರಬೇಕೆಂದೂ ಅವರು ಸಿದ್ಧಾಂತ ಮಾಡಿದ್ದಾರೆ.

* * *

ಈ ಕಥೆಗಳ ಮೇಲಿಂದ ಅಬಕಾರಿ ಗುನ್ಹೆಗಳನ್ನು ಹಿಡಿಯುವವರಲ್ಲೂ ಅವುಗಳ ವಿಚಾರ ನಡೆಯುವ ನ್ಯಾಯಾಲಯಗಳ ಶಿಬಂದಿಯಲ್ಲೂ ಸರಾಯಿಯ ನೀರು ಮಾಡುವ ಜಾದೂಗಾರರಿರುತ್ತಾರೆಂಬ ಒಂದು ಅನುಮಾನ ಸಹಜವಾಗಿ ಹೊರಡುತ್ತದೆ. ಮದ್ಯನಿರೋಧನ ಕಾರ್ಯವು ಇಂತಹ ಜನರ ಕೈಯಿಂದ ಎಂದಾದರೂ ಯಶಸ್ವಿಯಾಗಿ ಸಾಧ್ಯವಾಗಬಲ್ಲದೇ? ಸರಕಾರದವರ ಮದ್ಯನಿರೋಧನ ಗುರಿಯು ಸಾಧ್ಯವಾಗಬೇಕಾಗಿರುತ್ತಿದ್ದರೆ, ಮದ್ಯದ ಪ್ರೀತಿಯುಳ್ಳ, ಇಲ್ಲವೆ ಮದ್ಯಸೇವನೆಯ ಬಗ್ಗೆ ಸಂಪೂರ್ಣ ತಿತಿಕ್ಷೆ ಮತ್ತು ತಿರಸ್ಕಾರವಿಲ್ಲದ ಜನರನ್ನು ಮದ್ಯನಿರೋಧನ ಶಿಬಂದಿಯಿಂದ ದೂರಗೊಳಿಸಿ, ಮದ್ಯದ ಮೋಹಕ್ಕೆ ಮರುಳಾಗದಂತಹ ನಿಗ್ರಹಿ ಜನರಿಗೇ ಮದ್ಯನಿರೋಧನದ ಕಾರ್ಯವನ್ನು ಸರಕಾರವು ಒಪ್ಪಿಸಬೇಕು. ಹಳೆಯ ಶಿಬಂದಿಯ ಕಡೆಯಿಂದ ಈ ಕೆಲಸವೆಂದೂ ಆಗುವಂತಿಲ್ಲ, ಆದೀತೆಂದು ಅಪೇಕ್ಷಿಸುವದೂ ವ್ಯರ್ಥ.

* * *

BANKING SERVICE

The Agricultural & Industrial Bank, Ltd.,

(Established 1934)

Head Office. COONDAPOOR, S Kanara.

We try to make our service a little different, a little better and we sincerely want to please you.

An Account with us will provide you with the opportunity to secure all the things you may need for yourself and your family.

A. Madhava Pai, B.A.,B.L.,
GENERAL MANAGER

ಅಂಕೋಲೆಯ ಮೂರನೇ ವರ್ಗದ ಮೆಜಿಸ್ಟ್ರೇಟರಾಗಿರುವ ಮಾನ ಲೇದಾರರ ಕೋರ್ಟಿನಲ್ಲಿ ಈಗ ಗುಂಡಬಾಳಿಯ ... ೨೦ ಜನರ ಮೇಲೆ ಜಂಗಲ ಗುನ್ಹೆಯ ಮೊಕದ್ದಮೆ ನಡೆಯುತ್ತಿದೆ ಇಷ್ಟರ ವಿಚಾರವೀಗ ಮುಗಿದಿರುತ್ತಿದ್ದು ವಕೀಲರ ಪ್ರತಿಪಾದನೆಗಳು ಮುಗಿದಿವೆ ಈ ಪ್ರತಿಪಾದನೆಗಳು ನಡೆಯುತ್ತಿದ್ದ ದಿನ ಅವನ್ನು ಕೇಳಲಿಕ್ಕೆಂದೂ ಅವನ್ನು ಕೇಳಿಕೊಂಡು ನ್ಯಾಯಾಧೀಶರು ಏನು ನಿರ್ಣಯ ಮಾಡಿಕೊಳ್ಳುತ್ತಾರೆಂಬುದನ್ನು ಅವರ ಮಾತುಗಳ ಇಲ್ಲವೆ ಮುಖಮುದ್ರೆಯ ಮೇಲಿಂದ ತಿಳಕೊಳ್ಳುವದಕ್ಕೆಂದು ಆರೋಪಿ ಜನರ ಅಪ್ಪರು ಒಬ್ಬೊಬ್ಬರ ಕೋರ್ಟಿಗೆ ಹೋಗಿದ್ದರಂತೆ ಕೋರ್ಟಿನಲ್ಲಿ ಅಂದು ಆರೋಪಿತರನ್ನು ಪ್ರತ್ಯೇಕವಾಗಿ ಕೂಡ್ರಿಸಲಿಕ್ಕೆ ಇಲ್ಲವೆ ಪ್ರೇಕ್ಷಕರನ್ನು ಬೇರೆಯಾಗಿ ಕೂಡ್ರಿಸಲಿಕ್ಕೆ ಏನೂ ವ್ಯವಸ್ಥೆ ಮಾಡಿದ್ದಿಲ್ಲ ಆದರಿಂದ ಈ ಪ್ರೇಕ್ಷಕ ಅಪ್ಪರು ಆರೋಪಿಗಳ ಜೊತೆಯಲ್ಲೇ ಮರೀಲಿನ ಕಟಿಯ ಹೀಚೆ ಗಡೆ ನಿಂತುಕೊಂಡರು ಈ ಖಟ್ಲೆಯ ವಿಚಾರ ಬಹಳ ದಿನ ನಡೆದಿರುವದರಿಂದ ಮಜಿಸ್ಟ್ರೇಟರಿಗೆ ಎಲ್ಲ ಆರೋಪಿಗಳ ಮುಖಪರಿಚಯವಾಗಿರಬೇಕು ಮತ್ತು ಆರೋಪಿಗಳಲ್ಲದ ಜನರನ್ನು ಅವರು ಆರೋಪಿಗಳೆಂದು ತಿಳಿಯಲಿಕ್ಕೆ ಕಾರಣವಿಲ್ಲ ಆದರಿಂದ ಪ್ರತಿಪಾದನೆ ನಡೆಯುತ್ತಿರುವಾಗಲೇ ನಡುವೆ ಮಜಿಸ್ಟ್ರೇಟರು ಪ್ರೇಕ್ಷಕ ಅಪ್ಪರೊಬ್ಬರನ್ನು ಪ್ರಶ್ನಿಸಿ "ಇವರು ಎಷ್ಟನೇ ಆರೋಪಿಗಳು?" ಎಂದು ಕೇಳಿದಾಗ ಕೋರ್ಟಿನಲ್ಲಿದ್ದ ಜನರಿಗೆ ಆಶ್ಚರ್ಯವಾಯಿತು ತಾವು ಆರೋಪಿಗಳಲ್ಲ, ಖಟ್ಲೆಯ ವಿಚಾರ ಕೇಳಬಂದ ಪ್ರೇಕ್ಷಕರಿರುತ್ತೇವೆಂದು ಆ ಅಪ್ಪರು ಉತ್ತರ ಕೊಟ್ಟ ಮೇಲಾದರೂ ಮಜಿಸ್ಟ್ರೇಟರು ಜಾಣರಾಗಿ ಸುಮ್ಮಗಿರಬೇಕಿತ್ತು ಆದರೆ ಅವರು ಸುಮ್ಮಗುಳಿಯಲಿಲ್ಲ! ನಿಮಗೆ ಆರೋಪಿಯಾಗುವ ಬಯಕೆಯುಂಟಾಗಿದೆಯೇನು? ಇಲ್ಲೇನು ನಾಟಕ ನಡೆಯುತ್ತದೆಂದು ನೋಡಬಂದಿರುವಿರಾ? ಎಂದು ಮುಂತಾಗಿ ಆ ಅಪ್ಪರಿಗೆ ಬೆದರಿಸಿದರಂತೆ! ಇದರ ಮೇಲಿಂದ ನ್ಯಾಯಾಲಯಗಳ ರೀತಿ ನೀತಿಗಳನ್ನು ಈ ಮಜಿಸ್ಟ್ರೇಟರು ಇನ್ನೂ ಕಲಿತಿಲ್ಲವೆಂಬಂತೆ ಭಾಸವಾಗುತ್ತಿದೆ ನ್ಯಾಯಾಲಯಗಳು ಸರ್ವಜನಿಕರಿಗೆ ಮುಕ್ತದ್ವಾರವಿರಬೇಕು ಗದ್ದಲ ಮುಂತಾದುದು ಮಾಡದೆ ಸಭ್ಯರೀತಿಯಿಂದ ನಡೆಯುವ ಪ್ರೇಕ್ಷಕರಿಗೆ — ಸ್ಥಳಾವಕಾಶವಿರುವ ಮಟ್ಟಿಗೆ — ನ್ಯಾಯಾಲಯದಲ್ಲಿ ಕೂಡ್ರಲಿಕ್ಕೆ ಯಾ ನಿಲ್ಲಲಿಕ್ಕೆ ಮತ್ತು ಅಲ್ಲಿ ನಡೆಯುತ್ತಿರುವ ನ್ಯಾಯದಾನದ ಕೆಲಸವನ್ನು ನೋಡಲಿಕ್ಕೆ — ಅಂತಹ ನೇ ವಿಶಿಷ್ಟ ಕಾರಣಗಳಿರದಿದ್ದರೆ — ಪ್ರತಿಬಂಧ ಮಾಡಕೂಡದು ಎಂಬ ಸರ್ವಸಾಮಾನ್ಯ ವಸ್ತು ಲೋಕಪ್ರಸಿದ್ಧ ಇರುವಾಗಿಯೂ ಕೂಡ ಈ ಮಜಿಸ್ಟ್ರೇಟರಿಗೆ ಗೊತ್ತಿಲ್ಲೆಂದು ತೋರುತ್ತದೆ ಮೇಲಧಿಕಾರಿಗಳು ಅವರಿಗೆ ನ್ಯಾಯಾಲಯಗಳ ರೀತಿ ನೀತಿಗಳ ಪರಿಜ್ಞಾನ ಮಾಡಿಕೊಡಬೇಕಾಗಿ ಸೂಚನೆಯಿದೆ

— ಗ್ರಾಮ ಕ್ಷಂಟ್ಲ ಗ್ರಾಮ ರಕ್ಷಕ ಎಷ್ಟೋ ಕಡೆ ಹಿರಿಯ ಪಿಕಾರ್ಡವಿಲ್ಲ ಹೊಸ ಹಕ್ಕುಗಳನ್ನು ಅವರು ದಾಖಲ ಮಾಡಿಲ್ಲ, ... ಬಗ್ಗೆ ಅವರು ಮುಂತಾದವುಗಳನ್ನು ಆಳಿಲ್ಲ ತುಂಡುಭೂಮಿಗಳನ್ನು ಒಟ್ಟುಗೂಡಿಸುವ ಕಾಯಿದೆಯ ಅಮಲಿನಲ್ಲಿ ಬಂದಾಗ ಗ್ರಾಮ ರಕ್ಷಕರು ಹೀಗೆ ಹರಿಯಬಿಡದಿದ್ದರೆ ಸಂಬಂಧಪಟ್ಟವರಿಗೆ ಬಹಳ ತೊಂದರೆಯಾಗ ಬಹುದು ಕಾರಣ ಸಮಸ್ತರೂ ತ್ವರೆಯಿಂದ ಈ ಬಗ್ಗೆ ಸಂಬಂಧವುಳ್ಳ ರಿಕಾರ್ಡನ್ನು ಸರಿಗೊಳಿಸಿಕೊಳ್ಳಬೇಕೆಂದು ಸರಕಾರವು ಸೂಚನೆ ಕೊಟ್ಟಿದೆ

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಮಳೆಯಿಲ್ಲ ಕಳೆಯಾಗಹತ್ತಿದೆ. ಸೀಧಾ ಅಂಗಡಿಗಳಲ್ಲಿ ಈಗ ಅಕ್ಕಿಯ ಪ್ರಮಾಣ ಹೆಚ್ಚಿ, ಗೋದಿಯ ಪ್ರಮಾಣ ಕಡಿಮೆ ಮಾಡಿದ್ದಾರೆ ನೂರಕ್ಕೆ ೬೦ರಷ್ಟು ಅಕ್ಕಿ, ೨೦ರಷ್ಟು ಗೋದಿ ಮತ್ತು ೨೦ರಷ್ಟು ಜೋಳ ಕೊಡುತ್ತಾರೆ ಈ ಜೋಳ ಕೆಂಜೋಳವಾಗಿರುತ್ತಿದ್ದು ಕೆಲ ಮಟ್ಟಿಗೆ ಸೊರಟು ಹಿಡಿದದ್ದಿರುತ್ತದೆ

ಸಕ್ಕರೆಯು ಜನವೀಗ ತಲೆಗೆ ೧ ದಿನ ಆಗಿದೆ! ಈ ದರದಿಂದ ಸಹ ಸಕ್ಕರೆ ಸಿಗಬೇಕಾದರೆ ಅಂಗಡಿಕಾರರಿಗೆ ನಾಲ್ಕು ನಮಸ್ಕಾರ ಹಾಕಬೇಕು!! ನಿಯಂತ್ರಣಾಧಿಕಾರಿಗಳ ಹಾಗೂ ಅವರನ್ನು ನಿಯಂತ್ರಿಸುತ್ತಿರುವ ಸರಕಾರದವರ ದಕ್ಷತೆಯು ಮತ್ತು ದೂರದರ್ಶಿತ್ವದ ಪರಿಣಾಮವಿದು!

ಇದೀಯ ಕೊಂಕಣ ಪ್ರಾಂತ ಮಂಡಳದ ಕಾರ್ಯಕಾರೀ ಸಭೆ ಇದೇ ಶನಿವಾರ ತಾ ೧೫ನೇ ಮಧ್ಯಾಹ್ನ ೩ಕ್ಕೆ ಗಟ್ಟಿ ಹಾಲಾಸ್ವಾಮಿನ ಧೇಂಪೇ ಮಂದಿರದಲ್ಲಿ ಕೂಡಲಿದೆ ಇದೇ ಕೊಂಕಣ ಪರಿಷತ್ತನ್ನು ಕುಮಟೆಯಲ್ಲಿ ಕೂಡಿಸುವ ವಿಚಾರ ಈ ಸಭೆಯಲ್ಲಿ ಬರಲಿದೆ ..., ಎಲ್ಲ ಕೊಂಕಣಿಗರೂ ಈ ಸಭೆಗೆ ಮುದ್ದಾಮ ಬರಬೇಕಾಗಿ ಅಧ್ಯಕ್ಷ ರಾ|| ನರಸಿಂಹ ಗೋವಿಂದ ಶಾನಭಾಗ ವಕೀಲ ಇವರು ಬಿನ್ನವಿಸುತ್ತಾರೆ

ಮೂರೂರ ಸಮೀಪದ ಮುಸಗುಪ್ಪೆಯಲ್ಲೂ ಅದರ ಸರಿಹೊರೆಯ ಪ್ರದೇಶಗಳಲ್ಲೂ ಅತಿ ಭಯಂಕರವಾದ ದನಗಳ ರೋಗವೊಂದು ಬಂದಿದೆ ಕಳೆದ ವಾರ ೧೫–೨೦ ದನಗಳು ಈ ರೋಗಕ್ಕೆ ಬಲಿಯಾದ ವಾರ್ತೆಯುಂಟು ಮೇಯಲು ಕಾಡಿಯುತ್ತ ಇರುವ ಸಶಕ್ತ ಮತ್ತು ಆರೋಗ್ಯವಂತ ದನಗಳು ಕೂಡ ಒಮ್ಮೆಲೇ ನಿಶ್ಚೇಷ್ಟವಾಗುತ್ತವೆ, ಅವುಗಳ ಕಾಲುಗಳು ಥರಥರ ನಡುಗುತ್ತವೆ! ಅದೇ ಒಂದೆರಡು ಗಳಿಗೆಯಲ್ಲಿ ಅವು ಪ್ರಾಣ ಬಿಡುತ್ತವೆ! ಚಿತ್ರಿಗೆಯಲ್ಲೂ ೧ ಗಬ್ಬದ ಎಳೆ ಆಕಳು ಹೀಗೆ ಸತ್ತ ಸುದ್ದಿಯಿದೆ ಇಲ್ಲಿಯ ದನಗಳ ವೈದ್ಯರು ಮುಸಗುಪ್ಪೆಗೆ ಹೋಗಿ ಸತ್ತ ದನಗಳ ರಕ್ತ ಮಾಂಸ ಮುಂತಾದವುಗಳ ಪರೀಕ್ಷೆ ಮಾಡಿನೋಡಿದರಂತೆ ಆದರೂ ಅವರಿಗೆ ಈ ರೋಗ ಯಾವದು ಎಂಬುದರ ಗ್ರಹಿಕೆಯಾಗಲಿಲ್ಲವಂತೆ. ಸರಕಾರದವರು ಕೂಡಲೇ ಯಾರೊಬ್ಬ ತಜ್ಞರಿಗೆ ಕಳಿಸಿಕೊಟ್ಟು ಈ ರೋಗದ ಪರೀಕ್ಷೆ ಮಾಡಿಸಿ, ಅದಕ್ಕೆ ತಕ್ಕ ಚಿಕಿತ್ಸಾ ಕ್ರಮವನ್ನೂ ಅದು ಬಾರದಂತಹ ಉಪಾಯ ಯೋಜನೆ ಮಾಡುವದಕ್ಕೂ ಜನರಿಗೆ ಹೇಳಿಕೊಡುವಂತೆ ಏರ್ಪಾಡು ಮಾಡಬೇಕೆಂದು ವಿನಂತಿಯಿದೆ

ಕಳೆದ ಸೋಮವಾರ ಸಂಜೆ ಗೋಕರ್ಣದ ಪೋಲೀಸರೂ ಗೃಹರಕ್ಷಕರೂ ಊರ ಹೊರಗೆ ಕೋಳೀಜೂಜು ನಡೆಯುತ್ತಿದ್ದ ಒಂದು ಸ್ಥಳಕ್ಕೆ ಮುತ್ತಿಗೆ ಹಾಕಿ ಕೋಳಿ ಜೂಜುಗಾರರನ್ನು ಜೂಜಿನ ಸಾಹಿತ್ಯವನ್ನು ಹಿಡಿದಿರುತ್ತಾರೆ ಎಷ್ಟೋ ಜೂಜುಗಾರರು ಓಡಿ ಹೋದರು. ಅವರನ್ನು ಹಿಡಿಯುವ ಪ್ರಯತ್ನ ನಡೆದಿದೆ

ಗಾಂಧಿ ಜಯಂತಿಯ ದಿನ ಕಲಬಾಗದ ಶ್ರೀ ರಾಮನಾಥ ದೇವರ ಗುಡಿಯಲ್ಲಿ ಕೆಲವು ತರುಣರು 'ಸತ್ಯವಾನ ಸಾವಿತ್ರೀ' ನಾಟಕವಾಡಿದರು

ಜಾಹೀರಾತು.

ಕಾನಡಾ ಜಿಲ್ಲೆಯಲ್ಲಿ ಸಂಘಟಿಸಲ್ಪಡುತ್ತಿರುವ ಈ ಕೆಳಗಿನ ಸಂಸ್ಥೆಗಳಲ್ಲಿ ಕೆಲಸ ಉದ್ದಿಮೆ ಕಲಿಯಬಯಸುವ ಉಮೇದವಾರರು ಕೂಡಲೆ ಅರ್ಜಿ ಮಾಡಬೇಕು

(೧) ಹೊನ್ನಾವರದೊಳಗಿನ ಕಲ್ಲು ಕಡಿಯುವ ಮತ್ತು ಅದರ ಕುರಿ ಮಾಡುವ ಸಂಸ್ಥೆಗಳೆರಡು

(೨) ಕತ್ತ ತಯಾರಿ ಅದರ ಹುರಿ ಮಾಡುವ ಕುಮಟೆಯೊಳಗಿನ ಸಂಸ್ಥೆಯೊಂದು

ಮೇಲ್ಕಾಣಿಸಿದ ಪ್ರತಿಯೊಂದು ಸಂಸ್ಥೆಯಲ್ಲಿ ೪೦ ಮಂದಿಯನ್ನು ಸೇರಿಸಿಕೊಳ್ಳಲಾಗುವದು ಶಿಕ್ಷಣದ ಅವಧಿ ೪ ತಿಂಗಳದಿರುತ್ತದೆ ಶಿಕ್ಷಣ ಪಡೆಯುವ ಪ್ರತಿಯೊಬ್ಬ ವ್ಯಕ್ತಿಗೆ ಪ್ರತಿ ದಿನಕ್ಕೆ ೦–೮–೦ರಂತೆ ಶಿಕ್ಷಣ ವೇತನ ಕೊಡಲಾಗುವದು

(೩) ಕತ್ತದ ಕೈಗಾರಿಕೆ ತಲೆಹಮದ ಜೊತೆಗೆ ಕಾರವಾರದಲ್ಲಿ ನಡೆಸುವ ಹೊನ್ನಾವರದೊಳಗಿನ ಸಂಸ್ಥೆ

(೪) ಈ ಸಂಸ್ಥೆಯಲ್ಲಿ ಕತ್ತದ ಚಾಪೆಗಳನ್ನು ಜಾಪೆಯಂತಹ ಬೇರೆ ಪದಾರ್ಥ (matting) ಗಳನ್ನು ಸಿದ್ಧಗೊಳಿಸುವ ಬಗ್ಗೆ ಶಿಕ್ಷಣ ಕೊಡಲಾಗುತ್ತದೆ ಈ ಸಂಸ್ಥೆಯಲ್ಲಿ ೪೦ ಮಂದಿಗೆ ಸೇರಿಸಿಕೊಳ್ಳಲಾಗುವದು ಶಿಕ್ಷಣದ ಅವಧಿ ೧ ವರ್ಷ ಶಿಕ್ಷಣ ಪಡೆಯುವ ಪ್ರತಿಯೊಂದು ವ್ಯಕ್ತಿಗೆ ಪ್ರತಿ ತಿಂಗಳು ೨೦ ರೂ. ರಂತೆ ಶಿಕ್ಷಣ ವೇತನ ಸಿಗುವದು ಉಮೇದವಾರರು ಸರ್ವಸಾಮಾನ್ಯವಾಗಿ ೪೦ ವರ್ಷಗಳಿಗೂ ಕಡಿಮೆ ಪ್ರಾಯದವರಿರಬೇಕು, ಮೆಟ್ರಿಕ್ ವರ್ಗದ ತನಕ (upto pre-matric standard) ಕಲಿತವರಿರಬೇಕು

(೫) ಕತ್ತದ ಕಾರಖಾನೆಯಲ್ಲಿ ೬೦ ಮಂದಿ ಉಮೇದವಾರರನ್ನು ನೇಮಿಸಿಕೊಳ್ಳುವದಿದೆ ಉಮೇದವಾರರಿಗೆ ಮೊದಲಿನ ತಿಂಗಳಲ್ಲಿ ತಿಂಗಳಿಗೆ ರೂ ೧೫ರಂತೆ ಮಾಸಿಕ ಶಿಕ್ಷಣ–ವೇತನ ಕೊಡಲಾಗುವದು ಆ ಮೇಲೆ ಅವರಿಗೆ ಸಂಬಳದ ಪದ್ಧತಿಯ ಮೇಲೆ ಕೆಲಸಕ್ಕೆ ನೇಮಿಸಿಕೊಳ್ಳಲಾಗುವದು

ಅರ್ಜಿ ಮಾಡಿರಿ— ಉಮೇದವಾರರು ತಮ್ಮ ವಯಸ್ಸು ಮತ್ತು ಪಾತ್ರತೆಗಳನ್ನು ನಮೂದಿಸಿ ಈ ಕೆಳಗಿನ ಅಧಿಕಾರಿಗಳಿಗೆ ಅರ್ಜಿ ಕಳಿಸಬೇಕು —

ಮೆ|| ಜ್ವಾಯಿಂಟ ರಜಿಸ್ಟ್ರಾರ ಫೊರ್ ಇಂಡಸ್ಟ್ರಿಯಲ್ ಕೋಓಪರೇಟಿವ್ಸ ಎಂಡ್ ವಿಲೇಜ ಇಂಡಸ್ಟ್ರೀಸ್, ಪುಣೆ ೩

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.

ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲೋಜಿಂಗ

ದಿ ಕೆನರಾ ಲೊಜ

[ಊಟ ಮತ್ತು ವಸತಿಗೃಹ]

ಮೋಟರ–ಸ್ಟೆಂಡ, ಹುಬ್ಬಳ್ಳಿ.

ಮಾಲಕ:— ವ್ಹಾಕೆನ್ನಾ ಪೈ.

ಶಾರದಾ ಪೂಜೆ

[illegible]

ಗಾಂಧಿ ಜಯಂತಿ

[illegible]

ಗೋಟಗೋಡಿ— [illegible]

ನಂದಿಗಡ್ಡೆ [illegible]

ಜಾಹೀರ ನೋಟೀಸಿಗೆ ಉತ್ತರ

[illegible]

ಗಣಪತಿ ವೆಂಕಪ್ಪಾ

ನಾಡಹಬ್ಬ

[illegible]

ಟೆಂಡರ ನೋಟೀಸು.

[illegible]

THE REGIONAL TRANSPORT AUTHORITY,
KARNATAK REGION BELGAUM

NOTICE.

In exercise of the powers conferred by Section 68 of the Motor Vehicles Act, 1939, all public service vehicles operators and goods trucks operators operating their vehicles to and from Nipani (Belgaum District), are hereby directed to stop their vehicles at the Tobacco checking Nakas established near Municipal Nakas at Nipani by the Central Excise Department and get their vehicles inspected by the Sepoys posted at the said Nakas without fail.

The above directions will come into effect immediately and failing to comply with these directions the goods trucks operators shall render their goods trucks or stage carriages permits liable for departmental action.

No 7624 / 4 B/KR of 1949
Regional Transport Office
Belgaum, 6-10-1949

D K SUKHTANKAR, CAPT
Secretary, R T Authority
Karnatak Region Belgaum

ಜಿಲ್ಲಾ ಸಮಾಚಾರ

ಕಾರವಾರ— (ತಾ. ೫–೧೦–೪೯) [illegible]

[illegible]

ಅವರ್ಸಾ— (ತಾ. ೨೮–೯–೪೯) [illegible]

ಹಳಿಯಾಳ— (ತಾ. ೬–೧೦–೪೯) [illegible]

ಮುಂಡಗೋಡ— (ತಾ. ೨೮–೯–೪೯) [illegible]

[illegible]

CIRCULAR

Subject - Permission to carry excess passengers in stage carriages.

In continuation of this office circular No 5034/4-B/KR dated 21-7-49, all stage carriage operators in the Karnatak Region are hereby informed that the Government of Bombay have extended the concession of carrying 20% overload in buses for a further period of 3 months from 1st October 1949 to 31st December 1949 subject to all the conditions mentioned in this office No 5034/4-B/KR dated 21—7—49

No 7625/4-B/KR of 1949
Regional Transport Office,
Belgaum, 6-10-1949

D. K. SUKHTANKAR, CAPT
Secretary, Regional Transport Authority
Karnatak Region, Belgaum

THE BANK OF RURAL INDIA LTD,

(Incorporated in British India, Liability of Members limited)

HEAD OFFICE — Satyabhama Bhavan, **KARWAR.** N. K

Offices at — KARWAR, KUMTA SIRSI, HONAVAR, YELLAPUR BHATKAL SIDDAPUR, ANKOLA, HUBLI & DHARWAR

Authorised Capital	,, Rs 10 00,000,
Subscribed Capital	,, Rs 5,00 000,
Paid-up Capital & Reserves	,, Rs. 5,08,502-8-0

Rates of Interest on Deposits

Current a/c @ 1% p a, ***Savings Bank a/c @ 2½%***

Fixed Deposits for 3 months @ 3% per annum.
,, ,, for 6 months @ 3½% ,
,, ,, for 12 months or more @ 4% ,

All kinds of modern Banking business transacted

Karwar,
14-2-1948

P X GACIROUS
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು

ರೆಜ್ಡ No. B. 1270 Monday, 17-10-1949.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೧೭

ಕುಂದಾಪುರ - ಸೋಮವಾರ, ತಾ ೧೭—೧೦—೧೯೪೯

ವರ್ಗಣಿಯ ದರ
ಮುಂಗಡವಾಗಿ ವರ್ಷಕ್ಕೆ ರೂ ೭-೦-೦
... ತಿಂಗಳಿಗೆ ೧-೧-೦
ಬಿಡಿ ಸಂಚಿಕೆ ೦-೧-೦
... ಯಿಂದ ಕಳಿಸಿದ
... ಹೆಚ್ಚಿಗೆ ಬೀಳುವದು.
ವರ್ಗಣಿಯು ಹಣವನ್ನು
ಮುಂಗಡ ಕಳಿಸತಕ್ಕದ್ದು.

ಜಾಹೀರಾತುಗಳ ದರ.
೧ನೆ ಎಪ್ಸ್ ... ಅಂಗುಲದ
ಪ್ರತಿ ಸಾಲಿಗೆ ೮ ಆಣೆಯಂತೆ
ವಿಶೇಷ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಪತ್ರ
ವ್ಯವಹಾರ ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು.

ಕೇಳಿದ್ದು, ಕಂಡದ್ದು.

(ಹದ್ದು ಸಂಚಾರಿಯು ಬರೆದುದು)

...ನು ಆಗಸ್ಟಿನಲ್ಲಿ ಪ್ರಾದುರ್ಭಾವಗೊಂಡು ಈಗ ...ಚಿ-ಈಚೆಯ ಊರುಗಳಲ್ಲಿ ಹಬ್ಬುತ್ತಿರುವ ದನ...ರೋಗವು ಒಂದು ಬಗೆಯ ವಾತ-ರೋಗವಿರು...ದು ಕಂಡುಬಂದಿದೆ. ಈ ರೋಗದಿಂದ ನರಳು...ರುವ ದನಗಳ ನಾಲಿಗೆಯು ಹೊಟ್ಟೆಯೊಳಗೆ ...ಹೋಗುತ್ತಿದೆ. ಇದು ಧನುರ್ವಾತದ ಲಕ್ಷಣವಂತೆ. ...ರೋಗ ಹಿಡಿದ ದನಗಳ ಕಾಲುಗಳು ಸೋತಾಗುತ್ತಿ...ವದರಿಂದ ಅದೊಂದು ಸಂಧಿವಾತವೆಂದು ಬೇರೆ ...ಲವರು ಹೇಳುತ್ತಾರೆ. ಸುಮಾರು ೪೦ ವರ್ಷಗಳ ...ದೆ ಇದೇ ಪ್ರಾಯದಲ್ಲಿ (ಶರದೃತುವಿನ ಪ್ರಾರಂ...) ಈ ಬೇನೆ ಕುಂದಾಪುರದಲ್ಲಿ ಬಂದಿತ್ತೆಂದೂ ...ರಾತ್ರಿಯಲ್ಲಿ ಆ ಕೊಟ್ಟಿಗೆಯೊಳಗಿನ ೧೦—೧೧ ...ಗಳು ಈ ರೋಗಕ್ಕೆ ಬಲಿಯಾಗಿದ್ದವೆಂದೂ ಮುದು...ರು ಹೇಳುತ್ತಾರೆ. ಶರದೃತುವಿನ ಪ್ರಾರಂಭವು ...ದೊಂದು ಸಂಧಿಕಾಲವಿರುತ್ತದೆಂದೂ ಈ ಸಂಧಿಕಾಲ...ದಲ್ಲಿ ಮಾನವನು ತನ್ನ ಆರೋಗ್ಯವನ್ನು ಜಾಗರೂಕತೆ...ಯಿಂದ ಕಾಪಾಡಿಕೊಳ್ಳುವದು ಅವಶ್ಯವಿರುತ್ತದೆಂ...ದು ನಮ್ಮ ಆಯುರ್ವೇದ ಶಾಸ್ತ್ರದಲ್ಲಿ ಹೇಳಿದೆ. ...ಪ್ರಾಯದಲ್ಲಿ ಹಸಿ ಹುಲ್ಲು ತಿಂದು ದನಗಳಿಗೆ ...ಅಜೀರ್ಣಬಾಧೆ ಮತ್ತು ಅದರಿಂದ ವಾತಬಾಧೆಯಾಗು...ವಹುದಾಗಿ ಆಯುರ್ವೇದ ಶಾಸ್ತ್ರಜ್ಞರು ಊಹಿ...ಸುತ್ತಾರೆ.

* *

ಅದೇನೂ ಇರಲಿ. ಈ ರೋಗದ ಬಾಧೆಯಾ...ದಂತೆ ದನಗಳಿಗೆ ಗೇರು (ಕೊಂಕಣಿಯಲ್ಲಿ ಬಿಬಯ್ಯಿ ...ಎಂದು ಕರೆಯುತ್ತಾರೆ) ಬೀಜ ತಿನ್ನಿಸುವದು ಹಿತವೆಂದು ದನಗಳ ರೋಗಗಳ ಚಿಕಿತ್ಸೆಯ ಅನು...ಭವವುಳ್ಳವರು ಹೇಳುತ್ತಾರೆ. ದನ ಒಂದಕ್ಕೆ ೧ ಗೇರು, ...ದೊಡ್ಡ ...ರುಗಳಿಗೆ ಅರ್ಧ ಗೇರು, ಸಣ್ಣ ಕರುಗಳಿಗೆ ...ಲು ಗೇರು ತಿನ್ನಿಸಬೇಕು. ಗೇರು ಬೀಜ ತಂದು ...ಒಲೆಯಿಂದ ಇಳಿಸಿದ ಆಡುಗೋಲಿನಿಂದ ಪುಡಿ ಮಾಡಿ, ಆ ಚೂರನ್ನು ಬಾಳೆಹಣ್ಣಿನಲ್ಲಿ ತುಂಬಿ, ...ಬೀಜದ ಚೂರಿಲ್ಲದ ಬದಿಯಿಂದ ಆ ಬಾಳೆಹಣ್ಣು ...ದನಗಳಿಗೆ ಕೊಟ್ಟರೆ ಅವು ಅದನ್ನು ತಿನ್ನುತ್ತವೆ. ...ರವನ್ನು ...ಜಾಸ್ತಿ — ದನಗಳಿಗೆ ... ಇಲ್ಲವೆ ಅಕ್ಕಚ್ಚು ಕೊಡುವ ಪೊದಲು — ...ಡುವದು ಉತ್ತಮ. ಗೇರು ಬೀಜವು ತಮ್ಮ... ...ರಿಸ್ಸದಂತೆ, ಕೆಲವುಟ್ಟಿಗೆ ಕ್ರಿಮಿನಾಶಕವೂ ...ತ ಕುಂದಾಪುರದಲ್ಲಿ ಬಹಳ ಜನರು ತಮ್ಮ ...ಗಳಿಗೆ ಈ ಉಪಚಾರವನ್ನು ಮಾಡಿರುತ್ತಾರೆ. ಈ ...ಚಾರದ ಜೊತೆಗೆ ದನಗಳಿಗೆ ಹಸಿ ಹುಲ್ಲು ಹಾಕ...ವ ಮತ್ತು ಮುಂಜಾವಿನಲ್ಲಿ ತೀರ ತಣ್ಣಗೆ ...ವ ಅಕ್ಕಚ್ಚು ಯಾ ಹಿಂಡಿನೀರು ಕುಡಿಸುವ ಕ್ರಮ ...ನಿಲ್ಲಿಸಿದರೆ ಮುಂದಿನ ಪ್ರಾರೋಗದ ಬಾಧೆಯು ...ಗಳಿಗೆ ಆಗುವಂತಿಲ್ಲೆಂದು ನನ್ನ ಮತವಿದೆ.

* *

ಕುಂದಾಪುರ ಮ್ಯುನಿಸಿಪಾಲಿಟಿಯವರು ಕಳೆದ ...ಗೆಯಲ್ಲಿ, ಈಗ ಅಂಕೋಲೆಯ ಮಾಮಲೇದಾರರಾಗಿರುವ ರಾ|| ಚಂದಶೇಖರ ಇವರನ್ನು ತಿದ್ದುಪಡಿ ಅಧಿಕಾರಿಗಳನ್ನಾಗಿ ನೇಮಿಸಿಕೊಂಡು ತಮ್ಮ ಹದ್ದಿನೊಳಗಿನ ಎಲ್ಲ ಮನೆಗಳ ತೆರಿಗೆಯು ತಿದ್ದುಪಡಿ ಮಾಡಿಸಿಕೊಂಡಿರುತ್ತಾರೆ. ಈ ತಿದ್ದುಪಡಿಯಲ್ಲಿ ಮನೆಗಳ ಬಾಡಿಗೆ ವರಮಾನವನ್ನು ನೂರಕ್ಕೆ ೧೧೦ರಿಂದ ೧೨೦ ತನಕ ಹೆಚ್ಚಿಸಿ ರಾ|| ಚಂದಶೇಖರ ಇವರು ತೆರಿಗೆಯನ್ನು ವಿಪರೀತ ಏರಿಸಿದ್ದಾರೆ! ಬಾಡಿಗೆಯ ಮಾನವನ್ನು ಕಟ್ಟಿಗೆ ಹಿಡಿಯುವಾಗ ರಾ|| ಚಂದಶೇಖರ ಇವರಾಗಲಿ ಅವರನ್ನು ನೇಮಿಸಿಕೊಂಡ ಮ್ಯುನಿಸಿಪಾಲಿಟಿಯವರಾಗಲಿ ೧೯೪೭ನೇ ಇಸವಿಯ ಮುಂಬಯಿ ಬಾಡಿಗೆ ನಿಯಂತ್ರಣ ಕಾನೂನನ್ನ (೭ನೇ ಕಾನೂನನ್ನು) ಸಂಪೂರ್ಣ ಮರೆತಿರುವಂತೆ ಕಾಣುತ್ತಿದೆ! ಈ ಕಾನೂನು ಕುಂದಾಪುರ ಮ್ಯುನಿಸಿಪಾಲಿಟಿಯ ಚತುರ್ಗಡಿಯೊಳಗಿನ ಎಲ್ಲ ಕ್ಷೇತ್ರಕ್ಕೂ ಅನ್ವಯಿಸುತ್ತಿದೆ. ೧೯೪೦ನೇ ಇಸವಿಯಲ್ಲಿ ತಕ್ಕೊಳ್ಳುತ್ತಿದ್ದ ಬಾಡಿಗೆಯನ್ನೇ ಮನೆಗಳ ಮಾಲಿಕರು ತಮ್ಮ ಬಾಡಿಗೆದಾರರಿಂದ ವಸೂಲ ಕೊಳ್ಳತಕ್ಕದೆಂದೂ, ಆ ಬಾಡಿಗೆಯ (ಮನೆಯ ದುರುಸ್ತಿ ಮಾಡಿದ್ದು, ಸುಧಾರಣೆ ಮಾಡಿದ್ದು ಸೌಕರ್ಯಗಳನ್ನು ಹೆಚ್ಚಿಸಿಕೊಟ್ಟದ್ದು ವಗೈರೆ ಬಾಡಿಗೆಯ ದರವನ್ನೇರಿಸುವದಕ್ಕೆ ಬೇರೆ ಸಬಲ ಕಾರಣಗಳಿದ್ದರೆ) ಸಮಂಜಸ (reasonable) ಬಾಡಿಗೆಯಿರುತ್ತದೆಂದು ತಿಳಿಯತಕ್ಕದ್ದೆಂದೂ ಈ ಕಾನೂನಿನಲ್ಲಿ ಹೇಳಿದೆ. ಕುಂದಾಪುರದಲ್ಲಿ ಇತ್ತಲಾಗಿ ಎಲ್ಲ ಮನೆಗಳ ದುರುಸ್ತಿಯಾಗಲಿ ಪುನರ್ರಚನೆಯಾಗಲಿ ಆದದ್ದು ತೋರುವದಿಲ್ಲ. ಆದರಿಂದ ಕೆಲವೊಂದು ಅಪವಾದಗಳನ್ನು ಬಿಟ್ಟರೆ ಬಹುತೇಕ ಮನೆಗಳ ಬಾಡಿಗೆ ಮಾನವು (ಯೋಗ್ಯ ಬಾಡಿಗೆಯ ದರ) ೧೯೪೦ರಲ್ಲಿ ಇದ್ದಷ್ಟೇ ಇರುತ್ತದೆಂದು ಒಪ್ಪಿಕೊಂಡು ನಡೆಯಬೇಕಾಗುತ್ತಿದೆ. ಹೀಗಿರುವಾಗ ರಾ|| ಚಂದಶೇಖರ ಇವರು ಮನೆಗಳ ಬಾಡಿಗೆಯ ಮಾನವೀಗ ಏರಿಸುತ್ತದೆಂದು ಯಾವ ಆಧಾರದಿಂದ ಕಂಡು ಹಿಡಿದರೋ ತಿಳಿಯದು. ರಾ|| ಚಂದ್ರಶೇಖರ ಇವರು ಮಾಡಿದ ಆಕರಣಿಯ ವಿರುದ್ಧ ಮನೆಗಳ ಮಾಲಿಕರು ಕಾಯಿದೆಯಂತೆ ಮ್ಯುನಿಸಿಪಾಲಿಟಿಯ ಅಧ್ಯಕ್ಷರ ಕಡೆ ನೂರಾರು ಅಪೀಲುಗಳನ್ನು ದಾಖಲಮಾಡಿರುತ್ತಾರೆಂದು ತಿಳಿಯುತ್ತದೆ. ಈ ಅಪೀಲುಗಳ ವಿಚಾರಣೆಯ ಕಾಲಕ್ಕೆ ಅಪೀಲುಗಳನ್ನು ಕೇಳಿಕೊಂಡು ತೀರ್ಮಾನ ಮಾಡಲು ಮುಂದಾಗುವ ಅಧಿಕಾರಿಗಳು ಮೇಲಿನ ಮಾತನ್ನು ಲಕ್ಷದಲ್ಲಿಟ್ಟು ವರ್ತಿಸಬೇಕಾಗಿ ಸೂಚನೆಯಿದೆ. ಇಲ್ಲದಿದ್ದರೆ ಲೋಕಕ್ಷೋಭೆ ಹೆಚ್ಚಾಗಿ, ಉಗ್ರ ಕ್ರಮಗಳ ಯೋಜನೆಯು ವಿನಹ ತೆರಿಗೆ ವಸೂಲ ಮಾಡುವದು ಮ್ಯುನಿಸಿಪಾಲಿಟಿಗೆ ಕಠಿಣವಾಗುವದು.

* *

ಗೋಕರ್ಣ ಗ್ರಾಮಕ್ಕೆ ಒಳಪಟ್ಟ ನೀರಹಳ್ಳ ಎಂಬ ಮಜರೆಯಲ್ಲಿ (ಗೋಕರ್ಣ ಪೇಟೆಯಿಂದ ಸುಮಾರು ೨ ಮೈಲು ಅಂತರದ ಮೇಲೆ) ಈಗ ೨-೩ ವರ್ಷಗಳಿಂದ ಒಂದು ಗಾಂವಠಿ ಶಾಲೆ ನಡೆಯುತ್ತಿದೆ. ಆ ಮಜರೆಯಲ್ಲಿರುವವರೆಲ್ಲರೂ ನಿರಕ್ಷರಕುಕ್ಷಿಗಳಾದ ರೈತರಿರುತ್ತಾರೆ. ಅವರ ಮಕ್ಕಳು ಈ ಶಾಲೆಯೊಳಗಿನ ವಿದ್ಯಾರ್ಥಿಗಳು. ಧಾರೇಶ್ವರ ಬದಿಯ ನಿವಾಸಿಯೊಬ್ಬನೆ ಬಹಾಲನು ಈ ಶಾಲೆಯ ಶಿಕ್ಷಕನಂತೆ. ಈ ಹುಡುಗನು ಕನ್ನಡ ಯಾ ಮರಾಠಿ ಯಾ ಬೇರೆ ಯಾವದೇ ಮುಲ್ಕೀ ಪರೀಕ್ಷೆ ಕೊಟ್ಟವನಿರುವದಿಲ್ಲ! ಪ್ರಾಥಮಿಕ ೪ ಇಯತ್ತೆಯ ತನಕ ಅವನ ಶಿಕ್ಷಣವಾದ ಪುರಾವೆಯುಂಟು. ಆದರೆ ಅವನು ಆ ಇಯತ್ತೆಯ ಪರೀಕ್ಷೆಯಲ್ಲಿ ತೇರ್ಗಡೆಯಾದ ಪುರಾವೆ ಸಿಗುವದಿಲ್ಲ! ಇಂತಹ ವಿದ್ವಾಂಸನು ಶಿಕ್ಷಕನು ನಡೆಸುತ್ತಿರುವ ಶಾಲೆಗೆ ವಿದ್ಯಾಧಿಕಾರಿಗಳು ಹೇಗೆ ಪ್ರ ತಿ ವ ರ್ಷ ನೂ ರಾ ರು ರೂ ಪಾ ಯಿ ಗ ಳ ಧನಸಹಾಯ ಕೊಡುತ್ತಿರುವರೋ ದೇವರೇ ಬಲ್ಲ.

The Agricultural & Industrial Bank, Ltd.

(Established 1934)

ಬ್ಯಾಂಕಿನವರಿಗೆ ಬರ ಯಾವತ್ತೂ ಸಾಲಗಳಿಗೆ ಜವಾಬ್ದಾರಿಯಿರುವ ಈ ಕೆಳಗೆ ನಮೂದಿಸಿದ ಶೇರುಗಳು ಇದೇ ತಾ. ೨೪—೧೦—೧೯೪೯ಕ್ಕೆ ಬ್ಯಾಂಕಿನ ರಿಜಿಸ್ಟರ್ಡ ಆಫೀಸು ಕುಂದಾಪುರದಲ್ಲಿ ೧೧ ಘಂಟೆಗೆ ಬಹಿರಂಗವಾಗಿ ಒಂದೇ ಲೊಟ್ ಆಗಲಿ, ಬೇರೆ ಬೇರೆ ಲೊಟ್‌ಗಳಾಗಿಯಾಗಲಿ ಮಾರಾಟ ಮಾಡಲಾಗುವದು. ಮಾರಾಟದ ಶರ್ತುಗಳಿಗೆ ಈ ಕೆಳಗೆ ಸಹಿ ಮಾಡಿದ ಆಫೀಸರರಿಗೆ ಬರೆದುಕೊಳ್ಳಿರಿ.

ದೇಣೆದಾರನ ಹೆಸರು	ವಿಕ್ರಯದ ಮಾಲು
ಗುಜ್ಜಾಡಿ ಬಾಲಕೃಷ್ಣ ಶೆಣೈ ನಾಯಕ.	ದಿ ಎಗ್ರಿಕಲ್ಚರಲ್ ಮತ್ತು ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್, ಎಂಬ ಸಂಸ್ಥೆಯಲ್ಲಿ, ರೂಪಾಯಿ ೫೦/— ರ ಶೇರುಗಳು ೧೨೦ ಪ್ರತಿಯೊಂದು ಶೇರಿನಲ್ಲಿ ರೂಪಾಯಿ ೨೫/— ತೆತ್ತಿದೆ ನಂಬರು ೧೧ರಿಂದ ೨೦ರ ತನಕ ಮತ್ತು ೧೩,೧೬೦ ರಿಂದ ೧೩,೨೭೦ ರ ತನಕ.

Coondapoor, 15-10-1949

A. Madhava Pai, B.A., B.L.,
GENERAL MANAGER

ನು! ಈ ಧನಸಹಾಯವನ್ನು ಅವರು ಶಾಲೆಯ ಶಿಕ್ಷಣದ ಪ್ರಗತಿಯನ್ನಾಗಲಿ, ಶಾಲೆಯ ಉಪಯುಕ್ತತೆಯನ್ನಾಗಲಿ, ಶಿಕ್ಷಕನ ಪಾತ್ರತೆಯನ್ನಾಗಲಿ ನೋಡಿ ಕೊಡದೆ, ಈ ಶಿಕ್ಷಕನ ಆಶ್ರಯದಾತ "ಉಗ್ಗಣ್ಣ"ನನ್ನು ನೋಡಿ — ಪ ಹಾಗಣದಯ ಅಂ ಧಕರು ಆ ದೇವರ [illegible] ನೋಡಿ ಆವನ ಇಲಿಗ ತಿಂಡಿ-ತಿನಸು ಕೊಡುವಂತೆ — ಕೊಡುತ್ತಿರ ಬೇಕೆಂದು ಸಂಶಯ ಬರುತ್ತಿದೆ!

***

ನಿರ್ವಾಣೇಶ್ವರನು ಶಾಲೆಯನ್ನಾದರೂ ಸರಿಯಾಗಿ ನಡೆಸುತ್ತಾನೆಯೋ? ಅದೂ ಇಲ್ಲ! ಅವನು ಮುಂಜಾವಿನಲ್ಲಿ ಮಾತ್ರ ಶಾಲೆ ಮಾಡುತ್ತಾನಂತೆ! ಆವನು ಶಾಲೆ ತೆರೆಯುವದು ಬೆಳಗ್ಗೆ ೮ರಿಂದ ೯ರ ನಡುವೆ, ಮುಚ್ಚುವದು ೧೦|| ಯಾ ೧೧ ಘಂಟೆಗೆ! ಮಧ್ಯಾಹ್ನದಲ್ಲಿ ಶಾಲೆಯೇ ಇಲ್ಲ! ಮಧ್ಯಾಹ್ನದಲ್ಲಿ ಈ ನಿರ್ವಾಣೇಶ್ವರನ ಉದ್ಯೋಗ ಎಂದರೆ ಗೋಸಿಭಟ್ಟರ ಮನೆಯಲ್ಲಿ ಸಹಜವಾಗಿ ಉಂಡು, ಸುಸ್ಥವಾಗಿ ಮಲಗುವದ, ಅಥವಾ ಗೋಪಿಯ ವರಲ್ಲಾಗಲಿ ನೆರೆಹೊರೆಯ ವೈದಿಕರಲ್ಲಾಗಲಿ ಬಂದ ಯಾತ್ರಿಕರಿಗೆ ತನ್ನ ಬಡತನ ಹಾಗೂ ತನ್ನ ಶಾಲೆಯ ಬಡತನ ಹೇಳಿಕೊಂಡು ಏನಾದರೂ "ಭಿಕ್ಷುಕಿ" ಮಾಡುವದು! ಈ "ಗುರುಜಿ"ಯು ಸರಕಾರದಿಂದ ಧನಸಹಾಯ ಎತ್ತಿ ಹಾಕುವದಕ್ಕಾಗಿ ಎಷ್ಟು ಮಕ್ಕಳ ಹೆಸರುಗಳನ್ನು ಶಾಲೆಯ ರಜಿಸ್ಟರದಲ್ಲಿ ಬರೆದಿಟ್ಟಿದಾನೆ, ಅವನು ಬರೆದಿಟ್ಟ ಹೆಸರುಗಳುಳ್ಳ ಎಲ್ಲ ಮಕ್ಕಳು ಊರಲ್ಲಿ ವಾಸ್ತವಿಕವಾಗಿ ಇದ್ದಾರೋ ಹೇಗೆ, ಪ್ರತ್ಯಕ್ಷ ಶಾಲೆಗೆ ಬರುವ ಮಕ್ಕಳೆಷ್ಟು ಮತ್ತು ಹಾಜರಿ-ಪಟ್ಟಿಯಲ್ಲಿ "ಹಾಜರ" ಹಾಕುತ್ತಿರುವ ಮಕ್ಕಳೆಷ್ಟು ಎಂಬುದನ್ನು ಪರೀಕ್ಷಿಸುವಾ ಎಂದರೆ ಇವನ ಶಾಲೆಯಲ್ಲಿ ಅಂತಹ ರಜಿಸ್ಟರವೇ ಇಲ್ಲ! ರಜಿಸ್ಟರ ತೋರಿಸು, ಹಾಜರಿ ಪಟ್ಟಿ ತೋರಿಸು ಅಂದರೆ, ಮನೆಯಲ್ಲಿ ಮರೆತು ಬಂದೆ ಎಂದು ಆತ ಹೇಳುತ್ತಾನಂತೆ! ಈ "ಗುರುಜಿ"ಯ ಈ ಮೋಸಗಾರಿಕೆಯನ್ನು ಕೊಂಕಣ ಕಾರ್ಯಕರ್ತರೂ ಪಟೇಲರೂ ಕಂಡುಹಿಡಿದು ಇದೇನೆಂದು ಕೇಳಲಾಗಿ, "ನನ್ನ ಉಗ್ಗಣ್ಣನಿದ್ದಾನೆ ಅವನ ಕೃಪೆಯಿಂದ ಯಾವ ಅಧಿಕಾರಿಯೂ ನನ್ನ ಶಾಲೆಯ ವಿರುದ್ಧ ನಿಮ್ಮ ದೂರು ಕೇಳುವಂತಿಲ್ಲ!" ಎಂದು ಮುಚ್ಚುಮರೆಯಿಲ್ಲದೆ ಆತ ಉತ್ತರ ಕೊಟ್ಟು ನಾಚದನಂತೆ! ಇವನ ಶಾಲೆಯಲ್ಲಿ ಬರೇ ೧೦ ೧೧ ಮಂದಿ ಮಕ್ಕಳು ಕಂಡು ಬರುತ್ತಿರುವರು ಆದರೂ ೫೦ ೬೦ ಮಕ್ಕಳಿರುವ ಶಾಲೆಗೆ ಸಿಗುವಷ್ಟು ಧನಸಹಾಯ ಇವನಿಗೆ ಕೊಡುತ್ತಾರೆಂದು ಕೇಳುತ್ತೇನೆ! ಇಂತಹ ಮೋಸಗಾರಿಕೆಯನ್ನು ನಡೆಯಗೊಟ್ಟಿರುವ ವಿದ್ಯಾಧಿಕಾರಿಗಳ ನಡತೆಯನ್ನೂ, ಆ ವಿದ್ಯಾಧಿಕಾರಿಗಳಿಗೂ ನಿರ್ವಾಣೇಶ್ವರ "ಉಗ್ಗಣ್ಣ"ನಿಗೂ ಇರುವ ಸ್ನೇಹ-ಸಂಬಂಧವನ್ನು ಸರಕಾರವು ತನ್ನ ಗುಪ್ತಚಾರರ ಕಡೆಯಿಂದ ಪರಿಶೋಧಿಸಿಕೊಳ್ಳಬೇಕೆಂದು ಅಂಕೆಯಿದೆ.

***

ಈಗ ಸುಮಾರು ೬ ತಿಂಗಳಿಂದ ರಾ|| ಸೌದಾಗರ ಎಂಬವರು ಸಿದ್ದಾಪುರ ತಾಲೂಕಿನ ಮಾಮಲೇದಾರರಾಗಿರುತ್ತಾರೆ. ಇವರ ಸ್ವಭಾವ ತೀರ ವಿಚಿತ್ರವಾದುದು! ತಾವು ಬಿ ಎ, ಎಲ್ ಎಲ್ ಬಿ ಇರುತ್ತೇನೆಂಬ ದರ್ಪ ಇವರಿಗೆ ಬಹಳವಿದೆ! ಆದರ ಆ ಪದವಿಗೆ ತಕ್ಕ ಕಾರ್ಯ-ಜ್ಞಾನ ಇವರಿಗೆ ಇದ್ದುದು ತೋರುವದಿಲ್ಲ! ವ್ಯವಹಾರಜ್ಞಾನವಂತೂ ಇಲ್ಲೇ ಇಲ್ಲೆಂದು ಹೇಳಬಹುದು! ಆದರೂ ತಾವು ಸರ್ವಜ್ಞರೆಂದೂ, ಅವಶ್ಯಕತೆಯ ಸಕಲ ತಂತ್ರಗಳಲ್ಲಿ ತಾವು ನಿಪುಣರೆಂದೂ ಇವರು ಭಾವಿಸಿ ಸಾಮಾನ್ಯ ವ್ಯವಹಾರ ಮತ್ತು ರೂಢಿ-ನೀತಿಗಳಂತೆ ನಡೆಯುವ ಕೈಕೆಳಗಿನ ನೌಕರರಿಗೂ ಅಧಿಕಾರಿಗಳಿಗೂ, ಸ್ಥಳ ಕಾಲಗಳನ್ನು ನಹ ಲೆಕ್ಕಿಸದೆ, ಮನಸ್ವಿ ಬೈಯ್ಯುತ್ತಾರೆ! ಗದರಿಸುತ್ತಾರೆ! ಇವರ ಕಾರಕೀರ್ದಿಯಲ್ಲಿ ಸಿದ್ದಾಪುರ ತಾಲೂಕಿನ ಮುಲ್ಕಿ ಮತ್ತು ಪೋಲೀಸ ಇಲಾಖೆಯು ಏಬಂದಿಗೆ ಏನು ಮಾಡಬೇಕು ಏನು ಮಾಡಬಾರದೆಂದು ತೋರದಂತಾಗಿದೆ! ರೂಢಿ, ರೀತಿ, ನೇಮ ಯಾ ಕಾಯಿದೆಗಳನ್ನು ನೋಡಿಕೊಳ್ಳದೆ ಇವರು ಏನಾದರೊಂದು ತೋರಿದ ಹುಕುಮು ಮಾಡುತ್ತಾರೆ! "ನೀವು ಹೀಗೆ ಯಾಕೆ ಮಾಡಿದಿರಿ?" ಎಂದು ಹಿಂದಿನಿಂದ ಮೇಲಧಿಕಾರಿಗಳು ಕೇಳಿದರೆ, ಮಾಮಲೇದಾರರ ಹುಕುಮಿನಂತೆ ಮಾಡಿದೆವು ಎಂದು ಹೇಳಿದರಾಯಿತ ಆ ಹುಕುಮು ನಮ್ಮನ್ನು ಕಾಯುವದು ಎಂದು ಈ ನೌಕರರು ನಂಬಿ ನಿಶ್ಚಿಂತರಿರಲಿಕ್ಕೂ ಸಾಧ್ಯವಿಲ್ಲ! ಏಕೆಂದರೆ ಮಾಮಲೇದಾರರು ಬಾಯಿ ಮಾತಿನಿಂದ ಕೊಟ್ಟ ಮತ್ತು ಹುಮಯಲ್ಲಿ ತೇಲಿಹೋದ ಆ ಹುಕುಮನ್ನ ಕಾಲಾಂತರದಲ್ಲಿ ಮೇಲಧಿಕಾರಿಗಳಿಗೆ ತೋರಿಸುವುದು ಎಷ್ಟಂದ? ಮಾಮಲೇದಾರರ ತೋರಿಕೆ ಅಜ್ಞೆಗಳನ್ನು ಪಾಲಿಸಿ ನಡೆದರೂ ಕಷ್ಟ! ಮಾಮಲೇದಾರರು ಕೂಡಲೆ ಅಪ್ರಸನ್ನರಾಗಿ, "ನಂಬಿಗಸ್ತ" ಪತ್ರಗಳನ್ನು ಬರೆದು ವರ್ಗಾವರ್ಗಿ ಮಾಡಿಸುತ್ತಾರೆ! ಮೇಲಧಿಕಾರಿಗಳ ಮನಸ್ಸನ್ನೂ ಕೆಡಿಸುತ್ತಾರೆ! ಹೀಗೆ, ಇವರು ೬ ೫ ತಿಂಗಳ ಕಾರಕೀರ್ದಿಯಲ್ಲಿ ೨ ಮಂದಿ ಪೂರೈಕೆ ಶಿರಸ್ತೇದಾರರಿಗೂ ೩ ಉಗ್ರಾಣದಾರರಿಗೂ ೨ ಶಿರಸ್ತೇದಾರರಿಗೂ ಆಕಾಲಿಕ ವರ್ಗಾವರ್ಗಿಗಳಾದ ಉದಾಹರಣೆಗಳಿವೆ ಆದರಿಂದ ಇಡೀ ತಾಲೂಕಿನ ಅಧಿಕಾರಿಗಳು ಬೇಗನೇ ಈ ಮಾಮಲೇದಾರರ ವರ್ಗಾವರ್ಗಿ ಮಾಡಿಸೆಂದು ದಿನಾಲೂ ದೇವರ ಕಡೆ ಪ್ರಾರ್ಥನೆಗೊಂಡು ಬೇಡಿಕೊಳ್ಳುತ್ತಿದ್ದಾರೆ

***

ಇವರಿಗೆ ಕಾಯಿದೆಯ ಜ್ಞಾನವೆಷ್ಟಿದೆಂಬುದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು ೩ ಸೇರಿನ ವಿರುದ್ಧವಾಗಿ ಸಂಗ್ರಹಿಸಲ್ಪಟ್ಟ ಇಲ್ಲವ ಸ್ಥಳಾಂತರಿಸಲ್ಪಡುತ್ತಿರುವ ಭತ್ತ, ಅಕ್ಕಿ, ಕಡ್ಲೆ ಮುಂತಾದ್ದನ್ನು ಪೋಲೀಸರು ಹಿಡಿದು ತಂದರೆ ಅದನ್ನು ಕೂಡಲೇ ಸರಕಾರಿ ಉಗ್ರಾಣದಲ್ಲಿ ಹಾಕಿ ಜಮೆ ಮಾಡಿರೆಂದು ಇವರು ಅಪ್ಪಣೆ ಮಾಡಿರುತ್ತಾರಂತೆ! ಪೋಲೀಸರು ಜಪ್ತ ಮಾಡಿದ ಸರಕು ನ್ಯಾಯ ವಿಚಾರ ಮಾಡುವ ಮೆಜಿಸ್ಟ್ರೇಟರ ಮುಂದ ಹಾಜರಾಗಬೇಕು, ಮತ್ತು ಅವರು ಆಗ ನಿರ್ಣಯ ಮಾಡಿ ಅಜ್ಞೆ ಮಾಡಿದರೆ ಮಾತ್ರ ಸರಕಾರಿ ಉಗ್ರಾಣದಲ್ಲಿ ಅದನ್ನು ತೆಗೆದ ಬಹುದು ತಜ್ಞ, ಇಲ್ಲವಿದ್ದರೆ ತಗೊಳ್ಳಬರುವದಿಲ್ಲ ಎಂದು ಕಚೇರಿಯವರು ರಾ|| ಸೌದಾಗರರಿಗೆ ಹೇಳಿದರೆ, "ನನಗೆ ನೀವ ಕಾಯಿದೆ ಕಲಿಸುವ ಬೇಕ ಕಾಯಿದೆಯಲ್ಲಿ ನಾನು ಪಾರಂಗತನಿದ್ದೇನೆ, ನನ್ನ ಸುಟ್ಟು ಮೆಜಿಸ್ಟ್ರೇಟನಿದ್ದೇನೆ! ನನ್ನ ಹುಕುಮು ನಂತೆ ನೀವ ವರ್ತಿಸತಕ್ಕದ್ದು." ಎಂದು ಅವರು ಗದರಿಸುತ್ತಾರಂತೆ!

***

ರಾ|| ಸೌದಾಗರರ ವ್ಯವಹಾರ ಜ್ಞಾನವೆಷ್ಟಿಂಬದನ್ನೂ ಕೇಳಿರಿ ಸಿದ್ದಾಪುರ ತಾಲೂಕಿನ ಹಳ್ಳಿಗಳಿಗೆ ಹೋಗುವ ಮಾರ್ಗಗಳೆಲ್ಲ ಮಳೆಗಾಲದ ವಾಹನಗಳ ರಹದಾರಿಗೆ ಕಟ್ಟಾಗುತ್ತಿರುವದರಿಂದ ಈ ಹಳ್ಳಿಗಳಿಗೆ ಮಳೆಗಾಲದ ೪ ತಿಂಗಳಿಗೆ ಬೇಕಾಗುವ ಆಹಾರ-ಧಾನ್ಯಗಳನ್ನು ಮೇ ತಿಂಗಳ ಒಳಗೆಯೇ ಒಯ್ದು ಸಂಗ್ರಹಿಸಿಡಬೇಕಾಗುತ್ತದೆ. ಅಧಿಕಾರಿಗಳ ಹುಕುಮಾದರೂ ಹಾಗಿದ್ದ ಉಂಟು. ಆದರೆ ಕಳೆದ ಬೇಸಿಗೆಯಲ್ಲಿ ರಾ|| ಸೌದಾಗರರು ತಮ್ಮ ಕೈಕೆಳಗಿನ ಎಲ್ಲ ಶಿಬ್ಬಂದಿಯನ್ನು ಅಕ್ಕಿ ಭತ್ತಗಳ ಖರೀದಿಯ ಕೆಲಸದಲ್ಲಿ ತೊಡಗಿಸಿ, ಪೂರೈಕೆಯ ಕೆಲಸವನ್ನು ಸಂಪೂರ್ಣ ಕಡೆಗಣಿಸಿಬಿಟ್ಟರು. "ಖರೀದ ವಸೂಲಿಯ ಕೆಲಸ ಮುಂಚೆ ಆಗಲಿ ಪೂರೈಕೆಯ ಕೆಲಸ ನಾವು ಮಾಡುತ್ತೇವೆ ನಿಮಗೆ ಅದರ ಕಾಳಜಿ ಬೇಡ!" ಎಂದು ಇವರು ಹೇಳಿ ಪೂರೈಕೆ ಶಿಬಂದಿಗೆ ಸಹ ಪೂರೈಕೆಯ ಕೆಲಸ ಮಾಡಗೊಡಲಿಲ್ಲ! ಹಳ್ಳಿಗಳಿಗೆ ಅಕ್ಕಿ ಕಳಿಸಲೆಂದು ತಂಕಿಯಿಂದ ಮೋಟಾರ-ಬಂಡಿಗಳನ್ನ ತರಿಸಿಕೊಂಡು ಅವನ್ನೂ ಹಳ್ಳಿಗಳಲ್ಲಿ ಖರೀದಿಯ ಭತ್ತ ಉಗ್ರಾಣಗಳಿಗೆ ಸಾಗಿಸುವ ಕೆಲಸಕ್ಕೆ ಹಚ್ಚಿದರು! ಹೀಗಾಗಿ ಮುಂದೆ ಮಳೆಗಾಲದಲ್ಲಿ ಹಳ್ಳಿಗಳಲ್ಲಿ ಅಕ್ಕಿಯ ಕೊರತೆಯಾಯಿತು! ಆ ಕೊರತೆಯನ್ನು ನೀಗಿಸಬೇಕಾದರೆ ಜಿಲ್ಲಾಧಿಕಾರಿಗಳ ಸಹಾಯ ಬೇಕಾಯಿತು!

***

ಮುಂದೆ ಗೋಕರ್ಣದಿಂದ ಸಿದ್ದಾಪುರ ತಾಲೂಕಿಗೆ ಜಿಲ್ಲಾಧಿಕಾರಿ ಕೊಡಿಸಿದ ಅಕ್ಕಿಯನ್ನು ನೇರವಾಗಿ ಸಿದ್ದಾಪುರಕ್ಕೆ ಒಯ್ದು, ಅಲ್ಲಿಂದ ಪುನಃ ಹಳ್ಳಿಗೆ ಕಳಿಸುವ ದುಃಖದೀರ್ಘ ಪ್ರಯಾಸ ಮಾಡುವದರ ಬದಲು ನೇರವಾಗಿ ಕೆಲವು ಅಕ್ಕಿಯನ್ನು ಹಳ್ಳಿಗಳಿಗೆ (ಅಂದರೆ ಹೇರೂರ, ಹೊಸತೋಟ, ನಿಲ್ಕುಂದ, ಕಾನಸೂರ ಮತ್ತು ತ್ಯಾಗ್ಲಿ ಈ ಕೇಂದ್ರಗಳೊಳಗಿನ ಉಗ್ರಾಣಗಳಿಗೆ) ಕಳಿಸಿಕೊಡುವದು ಹಿತಕರವೆಂದು ಭಾವಿಸಿ, ಗೋಕರ್ಣ-ಅಂಕೋಲದ ಅನುಭವ ನೋಡಿಕೊಂಡು, "ಸಿದ್ದಾಪುರದ ಪೂರೈಕೆ ಶಿರಸ್ತೇದಾರರು ಯಾವ ಯಾವ ಹಳ್ಳಿಗೆ ಎಷ್ಟೆಷ್ಟು ಚೀಲ ಅಕ್ಕಿ ಕಳಿಸಿಕೊಡಬೇಕೆಂಬುದರದೊಂದು ಯಾದಿಯನ್ನು ಮುಂಡಗೋಡ ತಾಲೂಕಾಧಿಕಾರಿಗೆ ಕೊಟ್ಟಿದ್ದರಂತೆ ಆದರೆ ರಾ|| ಸೌದಾಗರರು ಮುಂಡಗೋಡದ ಮಾಮಲೇದಾರರ ಕಾರವಾರದ ಕಾರ್ಯಾಲಯಕ್ಕಾಗಿ ಭೆಟ್ಟಿಯಾದಾಗ, "ನಮ್ಮ ಪೂರೈಕೆ ಶಿರಸ್ತೇದಾರರಿಗೆ ಬುದ್ಧಿಯಿಲ್ಲ! ಹಳ್ಳಿಗಳಲ್ಲಿ ಹೆಚ್ಚಿಗೆ ಅಕ್ಕಿ ಇಡುವದು ಯುಕ್ತವಲ್ಲ! ಎಲ್ಲ ಅಕ್ಕಿಯನ್ನು ನೀವು ಸಿದ್ದಾಪುರಕ್ಕೇ ಕಳಿಸಿರಿ" ಎಂದು ಹೇಳಿ ಶಿರಸ್ತೇದಾರರು ಮಾಡಿದ ಸುವ್ಯವಸ್ಥೆಯನ್ನು ಅವ್ಯವಸ್ಥಿತಗೊಳಿಸಿಬಿಟ್ಟರು! ಹೀಗಾದ್ದರಿಂದಾದದ ಈ ಭೆಟ್ಟಿಯ ಮೂಲಕ ದಸ್ತಿಗೆ ಹೋದ ೧ ಸಾವಿರ ಚೀಲ ಅಕ್ಕಿ ಮಾತ್ರ ಕಳ್ಳಗಳನ್ನು ಸೇರಿತು. ಮತ್ತು ಹಳ್ಳಿಗಳಿಗಾಗಿ ೬ ೭ ಟ್ಟ ಚೀಲ ಸಾವಿರ ಚೀಲ ಅಕ್ಕಿ ಸಿದ್ದಾಪುರವನ್ನು ಬಂದಿತು! ಮುಂದೆ ಈ ಅಕ್ಕಿಯನ್ನು ಕಳ್ಳ ಪಟ್ಟು ಮತ್ತು ಇವ್ವತ್ತಿ ಮುಂತಾದ ಉಪ ಮಾಡಿ ಹಳ್ಳಿಗಳಿಗೆ ಕಳಿಸಬೇಕಾಯಿತು! ಶಿರಸ್ತೇದಾರರು ಮಾಡಿದ ವ್ಯವಸ್ಥೆಯಲ್ಲಿ ರಾ|| ಸೌದಾ ರ ಕೈ ಹಾಕದೆ ಇರುತ್ತಿದ್ದರೆ ಮುಂಡಗೋಡದಿ ದ ನೇರವಾಗಿ ... ಹಳ್ಳಿಗಳಿಗೆ ನ್ಯಾಯ ... ಮಾಡಿಗೆ ತಪ್ಪುತ್ತ ...

ವ ನಗರದ ಅವ್ಯವಸ್ಥಿತ ವ್ಯವಸ್ಥೆಯಿಂದ ಮುಂದೆ ಡಿಗಳೂ ಒಂದಿಗೇನೂ ಸಿಗಲಿ. ಕಷ್ಟವಾದ ವಿವಕ್ಷೆ ಹೆಚ್ಚಿಗೆ ದರದಿಂದ ಥಡಿಗ ಕೊಟ್ಟು, ಅ ಯನ್ನು ಸಿದ್ಧಪುರದಿಂದ ಶಿರಸಿಗೆ ಶಿರ್ಸಿಗೂ— ಂದರೆ ಸಿದ್ಧಪುರದಿಂದ ನೇರವಾಗಿ ಅ ಹಳ್ಳಿಗಳಿಗೆ ಹೋಗುವ ಮಾರ್ಗಗಳಿಲ್ಲ —— ಅಲ್ಲಿಂದ ಮುಂದೆ ಅ ಳ್ಳಿಗಳಿಗೂ ಕಳಿಸಿಕೊಡಬೇಕಾದ ಪ್ರಸಂಗ ಬಂತು! ಸೌದಾಗರರ ಈ ವ್ಯವಹಾರ ಚಾತುರ್ಯದಿಂದ ಕಾರಕ್ಕೆ ಹಾಗೇನಿಲ್ಲದಿದ್ದರೂ ಸಾವಿರಾರು ರೂಪಾ ಗಳ ನಷ್ಟವಾಗಿರಬೇಕೆಂದು ನನ್ನ ಅಂದಾಜ. ಹಳ್ಳಿಗರಂತೂ ಅಕ್ಕಿಯ ಕಷ್ಟ ಅನುಭವಿಸ ಬೇಕಾಯಿತು. ಆದರೂ ೦॥ ಸೌದಾಗರರು ತಮ್ಮ ಜನರು ಬೇರೆ ಯಾರೂ ಇಲ್ಲೆಂದು ಇನ್ನೂ ಯುತ್ತಾರೆ!

ಶ್ರೀ ಲಲಿತಾನಂದ ಸ್ವಾಮಿಜಿಯವರ ಮಹಾಸಮಾಧಿ

ಇತ್ತ ೮–೯ ವರ್ಷಗಳಿಂದ ನಮ್ಮ ಕುಮಟೆಗೆ ಗ್ರಹಿಸಿ ಅಲ್ಲೇ ವಾಸ್ತವ್ಯ ಮಾಡಿಕೊಂಡಿದ್ದ ಶ್ರೀ ಲಲಿತಾನಂದ ಸ್ವಾಮಿಜಿಯವರು ನಿನ್ನೆ ಅಶ್ವಿನ ಕೃಷ್ಣ ಗುರುವಾರ ದಿನ ಮಧ್ಯಾಹ್ನ ೨ ಘಂಟೆಗೆ ಅನಪೇಕ್ಷಿತವಾಗಿ ಇಹಲೋಕದ ಯಾತ್ರೆಯನ್ನು ಮುಗಿಸಿದರು. ಕಳೆದ ೩ ತಿಂಗಳಿಂದ ಸ್ವಾಮಿಜಿಯವರಿಗೆ ಜ್ವರ ಬಂದು, ಅದು ಬರಬರುತ್ತ ಕ್ಷಯರೋಗದಲ್ಲಿ ಪರಿಣಮಿಸಿ ನಿನ್ನೆಯೇ ಕಾಲ ವಾದರೂ ಅವರಿಂದ ಸ್ವಾಮಿಜಿಯವರ ದೇಹಾವಸಾನವಾಯಿತೆಂದು ತಿಳಿಯುತ್ತದೆ.

ಸ್ವಾಮಿಜಿಯವರು ಬಾಲ್ಯದಲ್ಲೇ ತಮ್ಮ ತಾಯಿಯನ್ನು ಕಳೆದುಕೊಂಡಿದ್ದರು. ಮಾತೃವಾತ್ಸಲ್ಯವೆಂತಹದಿರುತ್ತದೆಂಬುವದರ ಅನುಭವ ಅವರಿಗಿದ್ದಿಲ್ಲ. ಮುಂದೆ ಮುಂಬಯಿಯಲ್ಲಿ ನೌಕರಿಯಲ್ಲಿರುವಾಗ ಆ ಮಾತೃವಾತ್ಸಲ್ಯದ ಸ್ವಾದ ಹೇಗಿರುತ್ತದೆಂಬುವದರ ಜ್ಞಾನ ಮಾಡಿಕೊಳ್ಳುವ ನಿದಿಧ್ಯಾಸವು ಅವರಿಗೆ ಹತ್ತಿತು. ತಮ್ಮ ಮಾತೋಶ್ರೀಯವರ ಛಾಯಾಚಿತ್ರವನ್ನು ಮುಂದಿಟ್ಟುಕೊಂಡು ಆಕೆಯ ಧ್ಯಾನ ಮತ್ತು ಸಾಧನೆ ಮಾಡಹತ್ತಿದರು. ಹೀಗೆ ಮಾಡುತ್ತಿರುವಾಗ ಅವರಿಗೆ ಒಂದು ದಿನ ಆ ಮಾತೆಯು ಕಾಣಿಸಿಕೊಂಡು ಸ್ವಪ್ನವನ್ನೂ ತನಗೆ ಅರ್ಪಿಸಲು ಆಜ್ಞಾಪಿಸಿದಳು. ಅವರು ಅದರಂತೆಯೇ ಮಾಡಿ, "ಶ್ರೀವಿದ್ಯೆ"ಯ ಸಾಧನೆಗಾಗಿ ಹಂಪೆಗೆ ಹೋಗಿ, ಶ್ರೀ ಸ್ವಾಮಿ ರಂಭಾನಂದ ಸ್ವಾಮಿಯವರ ಅನುಗ್ರಹದಿಂದ ಅದನ್ನೂ ಸಂಪಾದಿಸಿದರು.

ವಿದ್ಯೆಯ ಬಲದಿಂದ ಅವರು ಅನೇಕ ಜನರ ಅಸಾಧ್ಯ ರೋಗಗಳನ್ನು ಗುಣಪಡಿಸಿಕೊಟ್ಟಿದ್ದಾರೆ. ಸ್ವಾಮಿಜಿಯವರು ಯಾವಾಗಲೂ ಏಕಾಂತದಲ್ಲಾಗಲಿ ಸದಾಕಾಲ ತತ್ವಶೋಧನೆಯಲ್ಲೇ ತಮ್ಮ ಕಾಲ ಕಳೆಯುತ್ತಿದ್ದರು. ೧೯೩೦ರಲ್ಲಿ ಅವರು ಶ್ರೀ ಚಿತ್ರಾಪುರ ಮಠದ ಶ್ರೀಮದ್ ಆನಂದಾಶ್ರಮ ಗುರುಗಳ ಕಡೆಯಿಂದ ಸನ್ಯಾಸ ದೀಕ್ಷೆ ಪಡೆದು ಮಹಾವಾಕ್ಯಗಳ ಉಪದೇಶವನ್ನೂ ಪಡೆದು ಸನ್ಯಾಸಿಗಳಾದರು. ಶ್ರೀಗಳು ನಿಶಾಂತ ಸ್ವಭಾವದವರಿಂದಲೂ ಪ್ರಸಿದ್ಧಿಯನ್ನು ಪಡೆಯಬಯಸದ ನಿಃಸ್ಪೃಹ ವೃತ್ತಿಯವರಿಂದಲೂ ಅವರು ಕುಮಟೆಯಂತಹ ಜನನಿಬಿಡ ಊರಲ್ಲಿ ಕೂಡ ಅಪ್ರಸಿದ್ಧರಾಗಿಯೇ ಉಳಿದರು. ಅಂತಹ ವೈರಾಗ್ಯಮೂರ್ತಿಯು ಅಕಸ್ಮಾತ್ ಕಣ್ಮರೆಯಾದುದು ಕುಮಟೆಯ ದುರ್ದೈವವೇ ಸರಿ!

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಸಂಪೂರ್ಣ ನಿಂತಿದೆ. ಮನೆ ... ಇಲ್ಲದ ಕೊರತೆಯುಂಟಾಗಿದೆ. ಮುಕ್ಕಿ ಗದ್ದೆಗಳ ಕೊಯ್ಲು ನಡದಿದೆ.

ಹಿಂದೆ ತಿಳಿಸಿದಂತೆ ಶಾಂತಾದುರ್ಗಾ ಪ್ರಸಾದ ಮಂಡಳದವರು ಏರ್ಪಡಿಸಿದ ಸಭೆ ಗುರುವಾರ ಜರುಗಿತು. ಇದೇ ಬರುವ ಜನವರಿಯಲ್ಲಿ ಶಿಕ್ಷಕರ ಸಭೆಯ ತಾಲೂಕ ಪರಿಷತ್ತನ್ನು ಇಲ್ಲಿ ನೆರವೇರಿಸುವ ನಿರ್ಧಾರ ಮಾಡಿ, ಆ ಕುರಿತು ಒಂದು ತಾತ್ಕಾಲಿಕ ಸ್ವಾಗತ ಸಮಿತಿಯನ್ನು ನೇಮಿಸಿದರು.

ಇಲ್ಲಿಯ ದಿವಾಣಿ ಕೋರ್ಟಿನ ಜಜ್ಜರ ಸಹಾಯಕ್ಕಾಗಿ ಸರಕಾರವು ಮೊನ್ನೆಯೇ ದಿವಾಣಿ ಜಜ್ಜರ ಸ್ಥಳಕ್ಕೆ ಆರಿಸಲ್ಪಟ್ಟಿರುವ ಡಾ. ಗುರುಲಿಂಗ ಸದಾಶಿವ ಮುಸ್ಕೇರಿ ಇವರಿಗೆ ಜತೆ ಜಜ್ಜರೆಂದಾಗಿ ನೇಮಿಸಿದೆ. ರಾ॥ ಮುಸ್ಕೇರಿಯವರು ನಿನ್ನೆಯೇ ಬಂದು ಹಾಜರಾಗಿದ್ದಾರೆ.

ಈ ತಾಲೂಕಿನ ಪ್ರಾ. ಶಾ. ಶಿಕ್ಷಕರ ವಾರ್ಷಿಕ ಶಿಕ್ಷಣ ಶಿಬಿರದ ಮುಕ್ತಾಯದ ಸಮಾರಂಭವು ಮೊನ್ನೆ ಸಂಜೆ ಇಲ್ಲಿಯ ದಿವಾಣಿ ನ್ಯಾಯಾಧೀಶ ರಾ. ಚಿವುಟೀ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಶ್ರೀ ಶಂಕರ-ನಾರಾಯಣ ದೇವಸ್ಥಾನ ಮತ್ತು ಕೆನರಾ ಕಾಲೇಜ ಇವುಗಳ ಸಹಾಯಾರ್ಥ ಪ್ರಾ. ಉಭಯಕರ ಕೃಷ್ಣರಾಯರು ಇಲ್ಲಿ ಮಾಡಿದ ೨ ನಾಟ್ಯ-ಪ್ರದರ್ಶನಗಳಿಂದ (ತಿಕೀಟ ವಿಕ್ರಿಯಿಂದ) ಒಟ್ಟು ರೂಪಾಯಿ ೪೮೭॥ ಹುಟ್ಟಿದ್ದವು. ಅವರೊಳಗಿಂದ ಕೃಷ್ಣರಾಯರ ಹಾಗೂ ಅವರ ಪರಿವಾರದವರ ಪ್ರವಾಸ ವಗೈರೆ ವೆಚ್ಚಕ್ಕೆ ಕೊಟ್ಟ ರೂ ೬೦೦, ಬೆಂಗಳೂರಿನಲ್ಲಿ ಅತ್ಯವಶ್ಯಕ ತಂದ ವಸ್ತುಗಳ ಬಗ್ಗೆ ರೂ. ೬೦, ತಿಕೀಟ-ಪುಸ್ತಕಗಳ ಮುದ್ರಣದ ವೆಚ್ಚ ರೂ ೬೦॥, ನಾಟ್ಯ-ರಂಗದ ತಯಾರಿಗಾಗಿ ತಗಲಿದ ಒಟ್ಟು ವೆಚ್ಚ ರೂ ೯೭॥ ತಿಕೀಟ ವಿಕ್ರಿಗಾಗಿ ಮಾಡಿದ ಪ್ರವಾಸದ ವೆಚ್ಚ ರೂ ೧೮, ಹೂ, ಸಾಬೂನ, ಕಾಫಿ ಟಿಟ್ಟು ಮೊದಲಾದವುಗಳಿಗಾಗಿ ತಗಲಿದ ಚಿಲ್ಲರೆ ಖರ್ಚುಗಳು (ಒಟ್ಟು ವೆಚ್ಚ ರೂ ೯೬೫) ಹೋಗಲಾಗಿ ನಿವ್ವಳ ಉತ್ಪನ್ನ ರೂ ೩೯೬೦ ಉಳಿದಿದೆ. ಅದರಲ್ಲಿ ರೂ ೧೯೫೦। ಶ್ರೀ ದೇವಸ್ಥಾನಕ್ಕೂ ಉಳಿದ ರೂ ೧೯೫೦। ಕೆನರಾ ಕಾಲೇಜಿನ ನಿಧಿಗೂ ಒಪ್ಪಿಸಲ್ಪಟ್ಟಿವೆಂದು ಸದರಿ ನಾಟ್ಯ ಪ್ರದರ್ಶನದ ಯೋಜಕರಾದ ಆಚಾರ್ಯ ಗೋರೆ ಮತ್ತು ಡಾ॥ ಚಿಕ್ಕೆರೂರ ಇವರು ತಿಳಿಸುತ್ತಾರೆ.

ಇಲ್ಲಿಯ ಡಾ॥ ಮಹಾಬಲೇಶ್ವರರಾವ ಮಾಸೂರಕರ ಇವರ ಮಕ್ಕಳಾದ ಡಾ॥ ರಾಮದಾಸ ಮಾಸೂರಕರ ಇವರು ಕಳೆದ ವಿಜಯಾ ೧೦ಮಿಯಿಂದ ಬಸ್ತಿಪೇಟೆಯ ರಸ್ತೆಯ ಮೇಲೆ 'ಸಿದ್ಧಾರ್ಥ ದವಾಖಾನೆ' ಎಂಬ ಚಿಕಿತ್ಸಾಲಯ ತೆರೆದಿದ್ದಾರೆ. ಶಸ್ತ್ರಕ್ರಿಯೆ ಮಾಡುವ ಸೌಕರ್ಯವೂ ಈ ದವಾಖಾನೆಯಲ್ಲಿದೆ.

ಕುಮಟಾ ತಾ। ಕಾಂ। ಸಮಿತಿಯ ಸಭೆ ನಾಳೆ ಬುಧವಾರ (ತಾ ೧೯) ಸಂಜೆ ೪ ಗೆ ಗೋಕರ್ಣ ಶ್ರೀ ಭದ್ರಕಾಳಿ ದೇವಸ್ಥಾನದಲ್ಲಿ ಕೂಡಲಿದೆಯೆಂದೂ ಎಲ್ಲ ಸದಸ್ಯರು ಈ ಸಭೆಗೆ ಬರಬೇಕೆಂದೂ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಕಾರವಾರ— (ತಾ ೧೬-೧೦-೪೯) ಹೊಸ ಜಿಲ್ಲಾ ಶಾಲಾ ಬೋರ್ಡಿನ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ನಿನ್ನೆ ಆಯಿತು. ರಾ। ಗಣಪತಿ ಗಂಗೊಳ್ಳಿ ಇವರು ಚೇರಮನ್ನರಾಗಿಯೂ, ರಾ॥ ಕದಮ ವಕೀಲರು ವ್ಹಾಯ್ಸ್-ಚೇರಮನ್ನರಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟಿದ್ದಾರೆ.

ಮೊನ್ನೆಯೇ ಮುಂಬಯಿ ಸರಕಾರವು ೬೬ ಮಂದಿ ದಾಮೋದರ ದಿವಾಣಿ ಜಜ್ಜರನ್ನು ಆರಿಸಿ ನೇಮಿಸಿದೆ. ಈ ೪೭ ಮಂದಿಯಲ್ಲಿ ಇಲ್ಲಿಯ ವಕೀಲ ರಾ। ವೆಂಕಟ ವಿನಾಯಕ ಗೋಕರ್ಣ ಮತ್ತು ಹೊನ್ನಾವರದ ವಕೀಲ ರಾ। ಪರಮೇಶ್ವರ ಸುಬ್ರಾಯ ಭಟ್ಟ ಕರ್ಕಿ ಇವರಿದ್ದಾರೆ.

ಮುಂದಿನ ವಾರ ಮುಂಬಯಿಯಿಂದ ಈ ಜಿಲ್ಲೆಗೆ ೭೦೦ ಟನ್ನು ಸಕ್ಕರೆ ಬರುವದೆಂದೂ, ಜನರು ಅದರ ... ವರ್ತಕರು ... ಸಕ್ಕರೆಯನ್ನು ಬಚ್ಚಿಡದೆ ಯೋಗ್ಯ ... ಮಾರಬೇಕೆಂದೂ ಜಿಲ್ಹಾಧಿಕಾರಿ ವಿನಂತಿಸಿದ್ದಾರೆ.

ತನ್ನ ವಿರುದ್ಧ ಯಾವದೇ ಆರೋಪವಿಡದೆ ತನ್ನನ್ನು ೬ ತಿಂಗಳಷ್ಟು ದೀರ್ಘ ಕಾಲ ಬಂಧನದಲ್ಲಿಟ್ಟದ್ದಾರೆಂ

ದೂ ತನ್ನ ಬಿಡುಗಡೆ ಮಾಡಬೇಕೆಂದೂ ಗೋಕರ್ಣದೊಳಗಿನ ಸತ್ಯಶೋಧದ ಸಂಬಂಧದಲ್ಲಿ ಹಿಡಿದಿಟ್ಟ ಶಂಕರ ಭಟ್ಟ ಗೋಪಿ ವಗೈರೆ ಎಂಟು ಜನರು ಮುಂಬಯಿಯ ಹೈಕೋರ್ಟಿಗೆ ಅರ್ಜಿ ಮಾಡಿದ್ದರಂತೆ. ಸರಕಾರ ನ್ಯಾಯಾಧೀಶರ ಕಡೆ ಹೋಗಲು ಅರ್ಜಿ ಮಾಡಬೇಕಂತ ... ನ್ಯಾಯಮೂರ್ತಿಗಳು ಆ ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಪೊಲೀಸರು ... ಅರೆಸ್ಟ-ಪತ್ರಿಕೆಯನ್ನು ಹೊನ್ನಾವರದ ರೆಸಿಡೆಂಟ ಮೆಜಿಸ್ಟ್ರೇಟರ ಕಡೆ ಕಳಿಸಿ ಮತ್ತಾವುದೂ ಕಾರಕ್ಕೆ ಹೇಳಲ್ಪಟ್ಟ ಫಿರ್ಯಾದಿ ಕಡೆ ಸಾಕ್ಷಿ-ಪುರಾವೆಯನ್ನು ಕೊಟ್ಟಿರುವರೆಂದೂ ಇದೀಗ ತಿಳಿದು ಬಂದಿದೆ.

ಜಾಹೀರ ನೋಟೀಸು.

೧ ಗೋಪಿನಾಥ, ೨ ವಿಶ್ವನಾಥ, ೩ ಶಿವರಾಮ ಅಪ್ರಾಪ್ತ ವಯಸ್ಕರು ಇವರ ಬಗ್ಗೆ ರಕ್ಷಕ ೧-೨ನೇಯವರ ತಾಯಿ ಮತ್ತು ೩ನೇಯವರ ... ತಾಯಿ ... ಇವರಿಗೆ ಈ ಮೂಲಕ ತಿಳಿಸುವದೇನೆಂದರೆ—

ನಮ್ಮ ... ಜಮೀನುಗಳ ...

ಎ. ಜೆ. ಗಾಂವ್ಕರ ಚೌಡಿ ಕೊರಗ ...

ಶಿರಸಿ ...

ಜಾಹೀರನಾಮೆ.

ಕಾನಡಾ ಜಿಲ್ಹಾ ಲೋಕಲ್ ಬೋರ್ಡ ಕಚೇರಿಯಿಂದ—

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಸುವದರಲ್ಲಿ ಬರುತ್ತದಲ್ಲಾ ಏನಂದರೆ —

ಈ ಕೆಳಗೆ ನಮೂದಿಸಿರುವ ಲೋಕಲ ಬೋರ್ಡ ಕಾಮಗಾರಿಗಳನ್ನು ಕಂಟ್ರಾಕ್ಟಿಗೆ ಕೊಡತಕ್ಕದ್ದಿರುತ್ತದೆ. ಸದರಿ ಕಾಮಗಾರಿಗಳನ್ನು ಕಂಟ್ರಾಕ್ಟ ಪಡೆಯಲಿಚ್ಛಿಸುವವರು ಇದೇ ಬರುವ ತಾ ೭—೧೧—೪೯ನೇ ಸೋಮವಾರ ಮಧ್ಯಾನ್ಹ ೧೨ ಘಂಟೆಯೊಳಗೆ ಈ ಕೆಳಗೆ ಸಹಿ ಮಾಡುವ ಕಚೇರಿಯಲ್ಲಿ ಮುಟ್ಟುವಂತೆ ಮೋಹರಬಂದ ಮಾಡಿದ ಟೆಂಡರುಗಳನ್ನು ಕಂಟ್ರಾಕ್ಟ ರಕಮಿನ ಮೇಲೆ ಶೇಕಡಾ ೧೦-೦ ೦ ರಂತೆ "ಅರ್ನೆಸ್ಟ ಮನಿ ಸಹಿತ ತಂದ ಕೊಡಬೇಕು ಅವನ್ನು ಈ ಕೆಳಗೆ ಸಹಿ ಮಾಡುವವರು ತಾ. ೭—೧೧—೪೯ನೇ ಸೋಮವಾರ ಸಾಯಂಕಾಲ ೫ ಘಂಟೆಗೆ ಒಡೆದು ಅವಶ್ಯವಾದ ಮಂಜೂರಿಯ ಬಗ್ಗೆ ಕಾನಡಾ ಜಿಲ್ಹಾ ಲೋಕಲ್ ಬೋರ್ಡಿನ ಸ್ಟೆಂಡಿಂಗ ಕಮಿಟಿ ವ ಜನರಲ್ ಮಿಟಿಂಗಿನ ಮುಂದೆ ಇಡುವ ಟೆಂಡರ ಕೊಟ್ಟವರ ಕಂಟ್ರಾಕ್ಟ ಮಂಜೂರ ಮಾಡುವದು ಯಾ ಬಿಡುವದು ಸ್ಟೆಂಡಿಂಗ ಕಮಿಟಿ ವ ಬೋರ್ಡಿನವರ ಅಧಿಕಾರಕ್ಕೆ ಒಳಪಟ್ಟಿದ್ದಿರುತ್ತದೆ. ನಾಮಂಜೂರ ಮಾಡಿದ ಅರ್ಜಿಯ ಬಾಬತು ಕಾರಣ ತಿಳಿಸಲಿಕ್ಕೆ ಅವರು ಬದ್ಧರಾಗಲಿಕ್ಕಿಲ್ಲ ಕಾಮಗಾರಿ ಮಂಜೂರಾದ ಕೂಡಲೆ ಮಂಜೂರಾದ ಟೆಂಡರ ಅರ್ಜಿದಾರರಿಗೆ ತಿಳಿಸಲಾದೀತು ವ ಅವರು ಶೇಕಡಾ ೧೦ ೦-೦ರಂತೆ ಆಗುವ ಸೆಕ್ಯೂರಿಟಿ ಡಿಪೋಜಿಟ್ ರಕಮನ್ನು ಮಂಜೂರಿಯ ಹುಕುಂ ತಲುಪಿದ ಏಳು ದಿವಸಗಳೊಳಗೆ ಹಾಜರ ಮಾಡಬೇಕು ಮತ್ತು ಸ್ಟಾಂಪ ಕಾಗದದ ಮೇಲೆ ಕಾಯಿದೇಶೀರ ಕರಾರು ಸಹ ಬರೆಕೊಡತಕ್ಕದ್ದು ಇದಕ್ಕೆ ತಪ್ಪಿದರೆ ಅಂಥವರ ಟೆಂಡರು ಕೂಡಲೆ ರದ್ದು ಮಾಡಲಾದೀತು ಮತ್ತು ಕಟ್ಟಿದ ಅರ್ನೆಸ್ಟ ಮನಿ ಫೋರಫೀಟ್ ಮಾಡಲಾದೀತು.

ಪ್ಲೆನ ಎಸ್ಟಿಮೇಟು ವ ಕರಾರ ಶರ್ತ ವಗೈರೆ ಬೇಕಾದ ಮಾಹಿತಿಯನ್ನು ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಇಂಜನಿಯರರ ಕಚೇರಿಯಲ್ಲಿ ಯಾ ಸಂಬಂಧಪಟ್ಟ ಆಯಾ ಲೋಕಲ್ ಬೋರ್ಡ ಡಿವ್ಹಿಜನಲ್ ಓವ್ಹರಸೀಯರರ ಕಚೇರಿಯಲ್ಲಿ ಪಡಕೊಳ್ಳಬಹುದು.

ಕಾಮಗಾರಿಗಳ ವಿವರ:—

ನಂ	ಕಾಮಗಾರಿಗಳ ಹೆಸರು.	ಎಸ್ಟಿಮೇಟಿನ ಪೂರ್ಣ ರಕಂ
	ಕಾರವಾರ ಡಿವ್ಹಿಜನ.	
	ಅಂಕೋಲಾ ತಾಲೂಕ	
೧	ಗುಂಡಬಾಳಾ ತಾರಿಗೆ ಹೊಸ ದೋಣಿ ಪೂರೈಸುವದು	೧೫೦
	ಸುಪಾ ಪೇಟಾ	
೨	ದಾಂಡೇಲಿ ರಸ್ತೆ ಮೇಲಿನ ಕಲ್ವರ್ಟದ ಸ್ಪೆ॥ ರಿ॥	೧೮೮೮
	ಕುಮಟಾ ತಾಲೂಕ	
೩	ಕುಮಟಾ-ಸಿದ್ದಾಪುರ ರಸ್ತೆ ಮೈಲ ನಂಬರ ೧೩/೬ರಲ್ಲಿ ಡ್ರೇನ ಕಟ್ಟುವದು	೩೮೬೦
೪	ಬೆಟ್ಕುಳಿ ಹಳ್ಳಕ್ಕೆ ಕಾಯಂ ಕಾಲು ಸಂಕ ಕಟ್ಟುವದು	೬೦೭೪
	ಹೊನ್ನಾವರ ತಾಲೂಕ	
೫	ಮಂಕಿ ಕಡಗುಂದ ನಾಲೆಗೆ ಕಾಯಂ ಸಂಕ ಕಟ್ಟುವದು	೧೦,೧೫೩
	ಸಿದ್ದಾಪುರ ತಾಲೂಕ	
೬	ಸಿದ್ದಾಪುರ ಮೈಸೂರ ಫ್ರಂಟಿಯರ್ ರಸ್ತೆ ಮೈಲ ನಂಬರ ೧/೬ರಲ್ಲಿ ಕಲ್ವರ್ಟದ ಸ್ಪೆ॥ ರಿ॥	೨೧೩೧
೭	ಕೊಂಡ್ಲಿ ರಸ್ತೆ ಮೇಲಿನ ಮೇಸ್ತ್ರಿ ಕ್ವಾರ್ಟರ ಗಟಾರದ ಸ್ಪೆ॥ ರಿ॥	೩೮೧೦
	ಶಿರಸಿ ತಾಲೂಕ	
೮	ಕೊಳಗಿಬೀಸ ಹೇರೂರ ರಸ್ತೆ ಮೈಲ ನಂಬರ ೪/೬ ವ ೫/೮ರಲ್ಲಿಯ ಡಿಪ್ಪುಗಳ ಸ್ಪೆ॥ ರಿ॥ ...	೧೩೪
೯	ಬನವಾಸಿ-ಮಳಗಿ ರಸ್ತೆ ಮೈಲ ನಂಬರ ೩/೪ ವ ೬/೩ ರಲ್ಲಿ ಸ್ಪೆ॥ ರಿ॥ ..	೮೬೦
೧೦	ಬನವಾಸಿ-ಮಳಗಿ ರಸ್ತೆ ಮೈಲ ನಂಬರ ೦/೧ರಿಂದ ಮೈಲ ೫ರ ವರೆಗೆ ಸ್ಪೆ॥ ರಿ॥ ...	೧೫೭೯೦
೧೧	ಸಂಗಮಿಂಡ ಬಾವಿಯ ಸ್ಪೆ॥ ರಿ॥ ..	೩೬೦
೧೨	ರಾಗಿಹೊಸಳ್ಳಿ ಬಾವಿಯ ಸ್ಪೆ॥ ರಿ॥ ..	೪೮೦
೧೩	ಹೆಗಡೆಕಟ್ಟಾ ಬಾವಿಯ ಸ್ಪೆ॥ ರಿ॥ ..	೧೨೨
೧೪	ಖುರ್ಸಿ ಬಾವಿಯ ಸ್ಪೆ॥ ರಿ॥ .	೧೬೩
೧೫	ಅಮ್ಮಿನಳ್ಳಿ ನಿಲ್ಕುಂದ ರಸ್ತೆಯ ಸ್ಪೆ॥ ರಿ॥ ...	೧೦೦
೧೬	ಶಿರಸಿ ದೇವನಳ್ಳಿ ರಸ್ತೆ ಮೈಲ ನಂಬರ ೭/೫ರಲ್ಲಿ ಸ್ಲೆಬ ಡ್ರೇನ ಕಟ್ಟುವದು. ...	೧೧೩೦
	ಯಲ್ಲಾಪುರ ತಾಲೂಕ	
೧೭	ಯಲ್ಲಾಪುರ-ಇಡಗುಂದಿ ರಸ್ತೆ ಮೈಲ ನಂಬರ ೩/೪ರಲ್ಲಿ ಕಲ್ವರ್ಟ ತಿರುಗಿ ಕಟ್ಟುವದು ..	೫೧೦೦
೧೮	ಹಿತ್ಲಳ್ಳಿ-ಕಾಂಗದ್ದೆ ಮಾಗೋಡ ರಸ್ತೆ ಮೈಲ ನಂಬರ ೫/೭ರಲ್ಲಿ ಪೂಲಿನ ಸ್ಪೆ॥ ರಿ॥	೯೧೩೬
೧೯	ಯಲ್ಲಾಪೂರ ಇಡಗುಂದಿ ರಸ್ತೆ ಮೈಲ ನಂಬರ ೩೪/೧ರಲ್ಲಿ ಕೊಜವೇಗೆ ಹೆಚ್ಚಿನ ಗಾಳಿ ಪೂರೈಸುವದು.	೭೧೫೦
೨೦	ಅಂಬೇಗಾಂವ ಪ್ಲಿಲೇಜ ಏಪ್ರೋಚ ರಸ್ತೆ ತಯಾರಿಸುವದು	೧೧೪೩
	ಮುಂಡಗೋಡ ತಾಲೂಕ	
೨೧	ಗುಂಜಾವತಿ ಧರ್ಮಶಾಲೆ ಇಮಾರತಿಯ ಸ್ಪೆ॥ ರಿ॥	೧೨೪೦
೨೨	ಮುಂಡಗೋಡ ಧರ್ಮಶಾಲೆ ಇಮಾರತಿಯ ಸ್ಪೆ॥ ರಿ॥ ..	೨೧೫೩
	ಹಳಿಯಾಳ ತಾಲೂಕ	
೨೩	ತಟ್ಟಿಗೇರಿಯಲ್ಲಿ ಹೊಸದಾಗಿ ಬಾವಿ ತೆಗೆಯುವದು...	೨೮೪೮
೨೪	ಅದ್ನೆ ಹೊಸೂರ ಬಾವಿಯ ಸ್ಪೆ॥ ರಿ॥ ...	೫೯೦
೨೫	ಹೊಸೂರ ಬಾವಿಯ ಸ್ಪೆ॥ ರಿ॥ .	೫೮೦
೨೬	ಬಾಳಶೆಟ್ಟಿಕೊಪ್ಪ ಬಾವಿಯ ಸ್ಪೆ॥ ರಿ॥ ..	೫೪೨
೨೭	ಮುಲವಡಿ ಬಾವಿಯ ಸ್ಪೆ॥ ರಿ॥ ...	೯೦೦
೨೮	ಹಂಪೇಹಳ್ಳಿ ಬಾವಿಯ ಸ್ಪೆ॥ ರಿ॥ ...	೩೬೦
೨೯	ರಾಯಪಟ್ಟಣ ಬಾವಿಯ ಸ್ಪೆ॥ ರಿ॥ .	೧೬೦೦
೩೦	ಸಾಂಬ್ರಾಣಿ ಬಾವಿಯ ಸ್ಪೆ॥ ರಿ॥	೪೮೦

KARWAR, 11—10—49

V. K B. Balkur,
President,
D L B, Kanara

ಚಂದಮಾಮ

(ಕನ್ನಡ ಮತ್ತು ಹಿಂದಿಯಲ್ಲಿ)

ಮಕ್ಕಳ ಅತ್ಯಂತ ಸುಂದರ ಮಾಸ ಪತ್ರಿಕೆಗಳು.

ಊರೂರಲ್ಲಿ ಏಜಂಟರು ಬೇಕು ಮಾದರಿ ಪ್ರತಿಕೆಗೆ ಆರಾಣೆ ಕಳಿಸಿರಿ

ಜಿಲ್ಹೆಯ ಪ್ರತಿನಿಧಿಗಳು — **ಹೆಗಡೆ ಬಂಧುಗಳು, ಕುಮಟಾ.**

ನಮ್ಮಲ್ಲಿ

ತಂಬಾಕು ವ್ಯಾಪಾರಿಗಳಿಗೆ ಬೇಕಾಗುವ ನ ನೋಟ ಬೂಕುಗಳೂ, E B 3 ಪಟ್ಟ-ದ ಲೆಕ್ಕದ ಬೂಕುಗಳೂ, ಗೇಣಿ-ರಶೀದಿ ಬೂಕುಗ ಸೀಫ-ಅಂಗಡಿಗಳಿಗೆ ಬೇಕಾಗುವ ಇಂಗ್ಲಿಷ ದ ಕೆಶಮೆಮೋ ಬೂಕುಗಳೂ, ಸ್ಟಾಕ ರಜ ಪತ್ರಿ ರಜಿಸ್ಟರ ಬೂಕುಗಳೂ ಸಿಗುತ್ತವೆ

(ಸ್ಟಾರ ಆಫ ಕೆನರಾ ಪ್ರೆಸ್, ಕುಮಟಾ)

ಜಿಲ್ಲಾ ಸಮಾಚಾರ.

[illegible]

NOTIFICATION

Applications are invited for four temporary posts of typist clerks in the Judicial Department of the Kanara District. Minimum qualification required is Matriculation or other equivalent examination. Knowledge of Kannada essential. Candidates knowing short-hand will be given preference. Candidates after their enlistment will have to serve as section-writers till they are absorbed in clerical vacancies in their turn. Applications in candidates own hand-writing with copies of certificates regarding qualification and good moral character, should reach the undersigned on or before the 24th October 1949. Only those who are below the age of 22 in the case of Advanced Classes and 25 in the case of Intermediate and Backward Classes need apply.

District Court of Kanara, Karwar, 13-10-1949	N. S. Shrikhande, District Judge, Kanara

[illegible]

ಟೆಂಡರ ನೋಟೀಸು.

[illegible]

ಭತ್ತದ ತರಗತಿ	ಕನಿಷ್ಟ ಉತಾರಿನ ರೀಕೆಹಾವಾರಿ ಪ್ರಮಾಣ
(೧) ಉತ್ತಮ ಭತ್ತ ...	ಬೆಣತಿಗೆ ಅಕ್ಕಿ
(೨) ಮಧ್ಯಮ ಭತ್ತ ..	(೧) ಬೆಣತಿಗೆ ಅಕ್ಕಿ
	(೨) ಕುಚಗಿ ಅಕ್ಕಿ
(೩) ಕನಿಷ್ಟ ಜಾತಿಯ ಭತ್ತ	(೧) ಬೆಣತಿಗೆ ಅಕ್ಕಿ
	(೨) ಕುಚಗಿ ಅಕ್ಕಿ
(೪) ಮುಗ್ಗು ಭತ್ತ ...	(೧) ಬೆಣತಿಗೆ ಅಕ್ಕಿ
	(೨) ಕುಚಗಿ ಅಕ್ಕಿ

[illegible]

ಕಾರವಾರ, ೧೦-೧೦-೪೯ — M K JADHAV, ಕಾನಡಾ ಜಿಲ್ಲೆಯ ಕಲೆಕ್ಟರರು. (ಪ್ರಾಂತ್ಯಕ)

[illegible]

ಪತ್ರಿಕಾ-ಪ್ರಕಟನೆ.

[illegible] (folded) [illegible]

(ಜಿಲ್ಲಾಧಿಕಾರಿ ಅಪೇಕ್ಷೆಯಂತೆ ಪ್ರಕಟಿಸಿದ್ದು.)

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.

ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲೋಜಿಂಗ

ದಿ ಕೆನರಾ ಲೊಜ

[ಊಟ ಮತ್ತು ವಸತಿಗೃಹ]

ಮೋಟರ-ಸ್ಟೆಂಡ, ಹುಬ್ಬಳ್ಳಿ.

ಮಾಲಕ:— ಮ್ಯಾನೇಜರ ಪೈ.

[illegible]

ಸಿದ್ದಾಪುರ —

[illegible]

ಜಾಹೀರ ನೋಟೀಸು

[illegible]

ಜಾಹೀರ ನೋಟೀಸು.

[illegible]

V. R. KAMATH,
President,
Honavar Municipality

NOTICE.

The auction sale of the Sharawati ferry in Honavar Taluka as notified under this Office No. C 59/CB of 21-1-49 is postponed to 15th November 1949 and will be for running a country craft service for the period from 1st December 1949 to 31st March 1950 instead of from 15th November 1949 to 31st Mrach 1950 as previously notified, the time, place, conditions etc. remaining the same as before.

No. G-59 CB.
Ex. Engr's
Office, Kan. Dn.
Karwar 11-10-49

G. N. Godse
Executive Engr.,
Kanara Division.

ಇದನ್ನು ಪಾಂಡುರಂಗ ಕೃಷ್ಣ ಶಿನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270.   Monday, 24-10-1949.

ಚಂದಾ ದರ:
...ವರ್ಷಕ್ಕೆ ರೂ ೫-...
...ವರ್ಷಕ್ಕೆ ೩-೦-೦
...ಗೆ ೧-೦೦-೦
...ಪ್ರತಿಗೆ ...೦-೧-೦
...ಯಿಂದ ಕಳಿಸುವ
...ಪತ್ರಿಕೆ ಬೇಕಾದವರು,
...ರಿಯು ಹಣವನ್ನು
...ಗದ ಕಳಿಸತಕ್ಕದ್ದು.

ಕಾನಡಾವೃತ್ತ

ವರ್ಷ ೩೨.] THE KANARA NEWS. [ಸಂಚಿಕೆ ೧೭.

ಕುಮಟಾ- ಸೋಮವಾರ, ತಾ. ೨೪—೧೦—೧೯೪೯.

ಜಾಹೀರಾತುಗಳ ದರ:
೧೫ ಎಂಟ್ ಉದ್ದ ಕ್ಕಂದಕ
ಪ್ರತಿ ಸಾರಿಗೆ ೮ ಆಣೆಯಂತೆ.
ವಿಶೇಷ ಇದ್ದವರ ...
ಜಾಹೀರಾತುಗಳ ಬಗ್ಗೆ ...
...ವ್ಯವಸ್ಥಾಪಕರಿಗೆ
...ಬರೆಯಬೇಕು.

ಕೆನರಾ ಕಾಲೇಜನ್ನು ನೋಡಿಕೊಳ್ಳುವವರಾರು?

ಕೆನರಾ ಕಾಲೇಜು ಪ್ರಾರಂಭವಾಗಿ ಇಂದಿ...ಂಗಳ ಮೇಲಾಯಿತು. ವಿಶ್ವವಿದ್ಯಾಲಯದ ...ತೆ ೧೯೪೯—೫೦ ನೇ ವರ್ಷದ ಪ್ರಥಮಾ...ವಧೀ ಕಳೆದ ತಾ. ೧೦ ನೇಗೆ ಮುಗಿದು, ...ಪಾವಳಿಯ ರಜೆಗಾಗಿ ಕಾಲೇಜು ಮುಚ್ಚ... ವರ್ಷದ ದ್ವಿತೀಯಾರ್ಧ ... ಅಧ್ಯಾಪಕವರ್ಗ ... ಪುನಃ ಬರುವ ತಾ. ೧೦ ನೇಗೆ ತೆರೆಯುತ್ತ... ಈ ಸಮಯದಲ್ಲಿ ಕಾಲೇಜು ಎಷ್ಟು ...ಮಾಡಿದೆ, ಕಾಲೇಜಿನ ನಿಧಿ ಎಷ್ಟು ಕೂಡಿದೆ, ...ಜನ ಯೋಜನೆ ಹೇಗೆ ನಡೆದಿದೆ ಮತ್ತು ...ತನ ಬಗ್ಗೆ ಜಿಲ್ಲೆಯವರ ಕರ್ತವ್ಯವೇನು ಎಂ... ಸಂಕ್ಷಿಪ್ತ ಸಮಾಲೋಚನ ಮಾಡುವದ... ...ಗಿಕವಾಗಲಾರದು.

...ನ ತಾ. ೩೧ ನೇಗೆ ಕಾಲೇಜು ತೆರೆದ... ಕಾಲೇಜಿನಲ್ಲಿ ಯಾವದೇ ವ್ಯವಸ್ಥೆ...ಷ್ಟು ಆಗಿರಲಿಲ್ಲ. ಸದ್ಯಕ್ಕೆ ಕಾಲೇಜ ...ಪತ್ರಿಕೆಯ ಇನಸಂಕ್ಷಿಪ್ತ ಕೆಲವು ಕಾಡ ಪ್ರಾರ... ...ಲ್ಲಿ. ಅಲ್ಲಲ್ಲಿ ಸಣ್ಣ-ಮಣ್ಣುಗಳ ರಾಶಿಗಳು ...ತ್ತಿದ್ದವು. ಕಾಲೇಜಿನ ಸುತ್ತಮುತ್ತಲಿನ ...ವು ಇಂದಿದ್ದಂತೆ ಬೇಕಾಗಿಟ್ಟ ಪ್ರದೇಶವಾ... ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಮತ್ತು ...ಪಕರಿಗಾಗಿ ಕಟ್ಟಿಸಲಾರಂಭಿಸಿದ ವಸತಿ-... ಕೆಲಸ ಅರ್ಧಮರ್ಧವಾಗಿತ್ತು. ಕಾಲೇ...ಗೆ ಕಳಿಸಲ್ಪಟ್ಟ ಪ್ರಾಯೋಗಿಕ ಸಾಹಿತ್ಯದ ...ಗಳು ಅಲ್ಲಲ್ಲಿ ಬಿದ್ದುಕೊಂಡಿದ್ದವು! ಇಂತಹ ...ಯಲ್ಲಿ ಈ ವರ್ಷ ಕಾಲೇಜು ಹೇಗ...ರೀತು ಮತ್ತು ಅದರ ವ್ಯವಸ್ಥೆ ಎಂತ...ಧಾನವರವಾದೀತು ಎಂದು ಅನೇಕರು ಸಂಶ...ಯಿಸಿದ್ದರು.

...ವರೆ ಕಾಲೇಜಿನ ಚಾಲಕರ, ವ್ಯವಸ್ಥಾಪಕರ ...ರ್ಣ ಪ್ರಾಧ್ಯಾಪಕರ ಮತ್ತು ವಿದ್ಯಾರ್ಥಿ...ದ ಅವಿಶ್ರಾಂತ ಮತ್ತು ಉತ್ಸಾಹಪೂರ್ಣ ...ಮದ ಪರಿಣಾಮವಾಗಿ ಇಂದು ಆ ಸ್ಥಿತಿ ...ಕ ಪರಿಸ್ಥಿತಿ ಸಂಪೂರ್ಣ ಬದಲಾಗಿರುತ್ತಿದ್ದು, ...ಮ ನಮ್ಮ ಕಾಲೇಜನ್ನು ಪ್ರತ್ಯಕ್ಷ ...ಡವರು ಅದರ ಪ್ರಗತಿಯ ...ರ ಭವಿಷ್ಯದ ಬಗ್ಗೆ ನಿಃಶಂಕರಾಗುತ್ತಾರೆ. ...ಕಾಲೇಜಿನಲ್ಲಿ ಸಂಗ್ರಹಿಸಲ್ಪಟ್ಟ ಮತ್ತು ವ್ಯವ...ವಾಗಿ ಇಡಲ್ಪಟ್ಟ ಅತ್ಯಾಧುನಿಕ ಪ್ರಾಯೋಗಿಕ ...ಸ್ತ್ರವನ್ನು ಕಂಡು ಬೇರೆ ಕಾಲೇಜಗಳ ವಿದ್ಯಾ...ಗಳು ಮೂಗ್ಗರಾಗುತ್ತಾರೆ. ಈ ಸಾಹಿತ್ಯವನ್ನು ...ಯೋಗಾಲಯವನ್ನು ಕಂಡು, ಕಳೆದ ವಾರವೇ ...ಗೆ ಭೆಟ್ಟಿ ಕೊಟ್ಟ ಜಿಲ್ಲಾ ನ್ಯಾಯಾಧೀಶ ...ಶ್ರೀ ಮಂಡೇಯವರು, "The adjust... in the laboratory is modern ... the apparatus is nice" (ಪ್ರಯೋ...ಲಯ ರಚನೆ ಅತ್ಯಾಧುನಿಕ ಪದ್ಧತಿಯದಿದೆ. ಪ್ರಯೋಗ ಸಾಹಿತ್ಯವೂ ಅತಿ ಉತ್ಕೃಷ್ಟವಿದೆ) ಎಂದು ನಮೂದಿಸಿದ್ದಾರೆ. ಕಾಲೇಜಿನ ಗ್ರಂಥಾಲಯವು ಈಗ ಚಿಕ್ಕದಿದ್ದರೂ ಕಾಲೇಜಿನ ಅಭ್ಯಾಸಿ ವಿದ್ಯಾರ್ಥಿಗಳ ಇಲ್ಲವೆ ಪ್ರಾಧ್ಯಾಪಕರ ಅಪೇಕ್ಷೆಗಳನ್ನು ಪೂರೈಸುವಷ್ಟು ಸ್ವಯಂಪೂರ್ಣವಿದೆ. ಕಾಲೇಜ-ಕಟ್ಟಡದ ಮುಂದುಗಡೆಯೇ ಸುಂದರ ಉದ್ಯಾನದ ರಚನೆಯಾಗಿದೆ. ಈ ಉದ್ಯಾನವು ವನಸ್ಪತಿ-ಶಾಸ್ತ್ರದ ವಿದ್ಯಾರ್ಥಿಗಳಿಗೆ ಬೇಕಾಗುವ ಸಕಲ ವನಸ್ಪತಿಗಳನ್ನು ಪೂರೈಸುವಂತೆಯೂ ಕಟ್ಟಡಕ್ಕೆ ಹೃದಯಂಗಮ ತ್ವವನ್ನು ತರುವಂತೆಯೂ ರಚಿಸಲ್ಪಟ್ಟಿದೆ. ಈ ಉದ್ಯಾನದಿಂದಲೇ ರಂಜಸ್ತೆಗೆ ಹೋಗುವ ಕಾಲೇಜಿನ ಮುಖ್ಯ ಮಾರ್ಗವಿದೆ. ಈ ಮಾರ್ಗದ ಎರಡೂ ಪಕ್ಕಗಳಲ್ಲಿ ಕಳೆದ ವನಮಹೋತ್ಸವದ ಕಾಲಕ್ಕೆ ನೆಟ್ಟ ಕಲ್ಪವೃಕ್ಷಗಳ ಸಸಿಗಳಿವೆ. ಈ ಮಾರ್ಗದ ಅತ್ಯಂತ ಉಪಯುಕ್ತ ಸಾಲು ಮರಗಳನ್ನು ನಡುವೆ ಸಂಕಲ್ಪಿಸಿದೆಯಂತೆ. ಈ ಮಾರ್ಗ-ಉದ್ಯಾನಗಳಿಗೆ ಹೊಂದಿಯೇ ಕೆಲವು ಕ್ರೀಡಾಂಗಣಗಳು ಕಂಗೊಳಿಸುತ್ತಿವೆ. ವಿದ್ಯಾರ್ಥಿಗಳು ಪ್ರಾಧ್ಯಾಪಕರ ಸಹಾಯ-ಸಹಕಾರಗಳಿಂದ ಕಾಲೇಜಿನ ಬೈಲಿನಲ್ಲಿ ಕೆಲವು ಕಿರು-ಮಾರ್ಗ (approach roads) ಗಳನ್ನು ರಚಿಸಿದ್ದಾರೆ. ಕಾಲೇಜ ಕಟ್ಟಡದ ಬಾವಿಗೆ ಹೊಂದಿ ಕಾಯಿಪಲ್ಲೆ ಬೆಳೆಸುವ ಒಂದು ಉಪವನ ಕಂಗೊಳಿಸುತ್ತಿದೆ. ಈ ಉಪವನವನ್ನು ರಚಿಸಿದವರೂ ಅದರ ಆರೈಕೆ ಮಾಡುವವರೂ ಸ್ವತಃ ವಿದ್ಯಾರ್ಥಿಗಳು ಮತ್ತು ಅವರೊಡನೆ ಬೆರೆತು ಕೆಲಸ ಮಾಡುವ ಪ್ರಾಧ್ಯಾಪಕರು ಇರುತ್ತಾರೆಂಬುದು ಗಮನಾರ್ಹ ಮಾತು. ಕಾಲೇಜಿನ ವಿದ್ಯಾಭ್ಯಾಸ ಮುಗಿದ ನಂತರ ಪ್ರತಿದಿನ ಸಂಜೆ ವಿದ್ಯಾರ್ಥಿಗಳು ಈ ಉಪವನಕ್ಕೆ ನೀರು ಹಾಕುತ್ತಾರೆ, ಗೊಬ್ಬರ ಬೇಕಾದಲ್ಲಿ ಗೊಬ್ಬರ ತಂದು ಹಾಕುತ್ತಾರೆ; ನೆಟ್ಟಿ ಮಾಡುವಲ್ಲಿ ನೆಟ್ಟಿ ಮಾಡುತ್ತಾರೆ. ಈ ಪ್ರಕಾರ ವಿದ್ಯಾರ್ಥಿಗಳಲ್ಲಿ ಪ್ರಾಧ್ಯಾಪಕರು Dignity of Labour ಎಂಬ ಶಾರೀರಿಕ ದುಡಿತದ ಗೌರವವನ್ನು ಬಿಂಬಿಸುತ್ತಿರುವದು ಪ್ರಶಂಸನೀಯ ಸಂಗತಿಯಾಗಿದೆ. ಕಾಲೇಜಿನ ವಸತಿಗೃಹವು ಗುಡ್ಡದ ಅಂಚಿಗಿರುವ ಉನ್ನತ ಸ್ಥಳದಲ್ಲಿ ಕಟ್ಟಲ್ಪಟ್ಟಿದ್ದು, ಈ ಗೃಹದೊಳಗಿನ ಮೂಲೆಯ ಕೋಣೆಗಳಲ್ಲಿ ನಿಂತರೆ ಒಂದು ಬದಿಯಿಂದ ಅಘನಾಶಿನಿ ಹೊಳೆಯ ಕಂದರದ ಪ್ರದೇಶವೂ, ಇನ್ನೊಂದು ಬದಿಯಿಂದ ಕುಮಟಾ ನಗರದ ಶಿರೋಭಾಗವೂ ಕಣ್ಣಿಗೆ ಬೀಳುತ್ತವೆ. ಈ ವಸತಿ-ಗೃಹದ ಒಂದು ಭಾಗದಲ್ಲಿ ಪ್ರಾಧ್ಯಾಪಕರ ವಸತಿಯ ಏರ್ಪಾಟು ಮಾಡಲಾಗಿದೆ. ಅದರಿಂದ ವಸತಿಗೃಹದಲ್ಲಿ ಉಳಿಯುವ ವಿದ್ಯಾರ್ಥಿಗಳ ಮೇಲೆ ಅಂಕೆಯನ್ನಿಡಲಿಕ್ಕೂ, ಬೇಕಾದವರಿಗೆ ನೆರವನ್ನೀಯಲಿಕ್ಕೂ ಪ್ರಾಧ್ಯಾಪಕ-ವರ್ಗಕ್ಕೆ ಅನುಕೂಲವಾಗುವದು. ಈ ವ್ಯವಸ್ಥೆಯನ್ನು ಶ್ರೀ ಶ್ರೀ ಮಂಡೇಯವರು ಬಹಳ ಕೊಂಡಾಡಿ, "This arrangement, the surroundings and the free mixing of the staff with the disciples cannot but remind visitors of a 'Gurukula' in a modern garb. (ಈ ವ್ಯವಸ್ಥೆಯನ್ನೂ ಸುತ್ತುಮುತ್ತಲಿನ ಸನ್ನಿವೇಶವನ್ನೂ, ಅಧ್ಯಾಪಕರು ತಮ್ಮ ಶಿಷ್ಯರೊಂದಿಗೆ ಬೆರೆತು ದುಡಿಯುತ್ತಿರುವದನ್ನೂ ಕಂಡ ಸಂದರ್ಶಕರಿಗೆ ಆಧುನಿಕ ಗುರುಕುಲದ ಸ್ಮರಣೆಯಾಗದಿರದು) ಎಂದು ಹೇಳಿರುತ್ತಾರೆ. ಈ ಕಾಲೇಜಿನ ಸಮೀಪವೇ ನದಿಯೊಂದಿರುವದನ್ನು ಓದುಗರು ಅರಿತಿರಬಹುದು. ನದಿಯ ಈ ಸಾನ್ನಿಧ್ಯದ ಲಾಭ ಪಡೆದು, ಕಾಲೇಜಿನವರು ವಿದ್ಯಾರ್ಥಿಗಳ ಬಗ್ಗಾಗಿ ಒಂದು ನೌಕಾ-ವಿಹಾರ (boat-club) ಸಂಸ್ಥೆಯನ್ನು ಏರ್ಪಡಿಸುವ ಯೋಜನೆ ಮಾಡಿರುತ್ತಾರೆಂದು ತಿಳಿಯುತ್ತದೆ. ಇಂತಹ ಆಲ್ಹಾದಕರ ಸನ್ನಿವೇಶವುಳ್ಳ ಕಾಲೇಜಿನಲ್ಲಿ ಕಲಿಯುವ ಸುಸಂಧಿ ತಮಗೆ ಈ ಜನ್ಮದಲ್ಲಿ ಸಿಗುವಂತಿಲ್ಲೆಂದು ಶ್ರೀ ಶ್ರೀ ಮಂಡೇಯವರು

The Agricultural & Industrial Bank, Ltd.

(Established . 1934)

Head Office: COONDAPOOR,

We take this opportunity to wish all our Shareholders, Customers and Patrons

A HAPPY DIWALI

AND

a more prosperous New Year.

A. Madhava Pai, B.A., B.L.,

GENERAL MANAGER.

ವ್ಯಸನಪಡುತ್ತಿರುವದು ಆಶ್ಚರ್ಯಕರವಲ್ಲ! ಈ ಕಾಲೇಜನ್ನು ಸಂದರ್ಶಿಸುವ ಪ್ರತಿಯೊಬ್ಬ ಪ್ರಾಜ್ಞನಿಗೂ ಶ್ರೀಖಂಡೇಯವರಂತೆಯೇ ಅನಿಸುವದೆಂದು ಬೇರೆ ಹೇಳಬೇಕಾಗಿಲ್ಲ.

ಕಾಲೇಜಿನ ಈ ಪ್ರಗತಿಯು ಸಾಧ್ಯವಾಗಬೇಕಾದರೆ ಎಂತೆಂತಹ ಅಡಚಣೆಗಳನ್ನು ನಿವಾರಿಸಬೇಕಾಯಿತೆಂಬುದನ್ನು 'ವೃತ್ತ'ದ ವಾಚಕರಿಗೆ ಹೇಳುವದು ಅವಶ್ಯವಿಲ್ಲ. ದೇವರ ದಯೆಯಿಂದಲೂ ದಾನಿ ಬಾಳಿಗಾರವರಂತಹ ಪುಣ್ಯ ಪುರುಷರ ಸಹಾಯದಿಂದಲೂ, ಆಸ್ಥೆಯಿಂದ ಮತ್ತು ತನ್ಮಯ ಭಾವನೆಯಿಂದ ದುಡಿಯುತ್ತಿರುವ ಪ್ರಾಧ್ಯಾಪಕ ವೃಂದದ ಸಹಕಾರದಿಂದಲೂ ಕಾಲೇಜು ಆ ಎಲ್ಲ ಅಡಚಣೆಗಳನ್ನು ನಿವಾರಿಸಿ ಇಂದು ಪ್ರಗತಿ-ಪಥದ ಮೇಲೆ ಭರದಿಂದ ಪ್ರಗತಿಯನ್ನು ಸಾಧಿಸುತ್ತಿದೆ. ಇಂತಹ ಸಂಸ್ಥೆಯ ಭವಿತವ್ಯ ನಿಶ್ಚಯವಾಗಿಯೂ ಅತ್ಯಂತ ಉಜ್ವಲವಾಗುವದೆಂಬುದಕ್ಕೆ ಯಾರೂ ಸಂದೇಹಪಡುವ ಕಾರಣವಿಲ್ಲ. ಕಳೆದ ನವರಾತ್ರಿಯ ಪ್ರಾರಂಭಕ್ಕೆ ಕಾಲೇಜಿಗೆ ಭೆಟ್ಟಿ ಕೊಟ್ಟು ಎಲ್ಲ ವಿಜ್ಞಾನ ಲ್ಯಾಬೋರೇಟರಿಗಳನ್ನು ಕಂಡ ಧಾರವಾಡದ ಪ್ರಿ॥ ಎಸ್. ಆರ್. ಕುಲಕರ್ಣಿಯವರು ಈ ಮಾತನ್ನು ಸ್ಪಷ್ಟ ಉಲ್ಲೇಖಿಸಿದ್ದಾರೆ. ಅವರು ಹೇಳುವದೇನೆಂದರೆ — "In spite of the odds the young institution is clearly showing the signs of its future prosperity and sucess I have no doubt that it will soon blossom into a full-fledged college and form one of the brightest jewels in the crown of the Karnatak University" (ಎಂತಹ ಅಡಚಣೆಗಳಿದ್ದಾಗ್ಯೂ ಈ ತರುಣ ಸಂಸ್ಥೆಯು ಭವಿಷ್ಯ ಕಾಲವು ಉಜ್ವಲವಾಗುವದೆಂಬುದರ ಪೂರ್ವ ಚಿನ್ಹಗಳು ಈಗಾಗಲೇ ದೃಷ್ಟಿಗೋಚರವಾಗುತ್ತಿವೆ. ಬೇಗನೇ ಈ ಸಂಸ್ಥೆಯು ಸ್ವಯಂಪೂರ್ಣ ಮಹಾವಿದ್ಯಾಲಯವಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಮುಕುಟದಲ್ಲಿ ಒಂದು ತೇಜಃಪುಂಜ ರತ್ನವಾಗಿ ರಾರಾಜಿಸುವದೆಂದು ನಾನು ನಿಸಂದೇಹವಾಗಿ ಹೇಳಬಲ್ಲೆ) ಶ್ರೀ॥ ಶ್ರೀಖಂಡೇಯವರು ಕೂಡ "It has made a remarkably good beginning and I have no doubt whatever that it has a brilliant future before it" (ಈ ಸಂಸ್ಥೆಯು ಪ್ರಾರಂಭ ಉತ್ತಮವಾಗಿದೆ, ಅದರ ಭವಿತವ್ಯವು ಕೂಡ ಅತ್ಯಂತ ಉಜ್ವಲವಾಗುವದೆಂಬುದಕ್ಕೆ ನನಗೆ ಯಾವ ಸಂಶಯವೂ ಕಾಣುವದಿಲ್ಲ) ಎಂದು ಆಶೀರ್ವದಿಸುತ್ತಾರೆ.

ಆದರೆ ಕಾಲೇಜಿನ ಸ್ಥಿತಿಯು ಸಂಗ್ರಹ ಮಾತ್ರ ಆಶಾಜನಕವಾಗಿರುವದಿಲ್ಲ. ಕಳೆದ ತಿಂಗಳಲ್ಲಿ ಒಮ್ಮೆ "ವೃತ್ತ"ಕ್ಕಾಗಿ ಬಂದ ವರದಿಯು ಮೇಲಿಂದ ಇದು ಓದುಗರಿಗೆ ಚೆನ್ನಾಗಿ ಕಂಡುಬಂದಿರಬೇಕು. ಕಾಲೇಜಿನ ಕಾರ್ಯವು ಇಂದಿನ ತನಕ ಶ್ರೀ॥ ಬಾಳಿಗಾರವರು ಕಡ ಕೊಟ್ಟ ಹಣದಿಂದ ಸಾಗಿದೆಯೆಂದು ಹೇಳಬಹುದು. ಅವರ ಆ ಸಾಲ ತೀರಿಸಲು ಕಾಲೇಜಿನ ಕಡೆಗೆ ಜಿಲ್ಲೆಯವರು ಈಗಾಗಲೇ ಸಹಾಯ ಮಾಡಬೇಕಿತ್ತು. ಇದು ಅವರಿಂದ ಆಗಿಲ್ಲವೆನ್ನುವ ಮುಂದಿನ ಖರ್ಚಿನ ಹೊಣೆಯಾದರೂ ದಾನಿ ಬಾಳಿಗಾರವರ ಮೇಲೆ ಬೀಳದಂತೆ ನಾವು ನೋಡಿಕೊಳ್ಳಬೇಕಲ್ಲವೇ? ಕಾಲೇಜಿನ ಮುಖ್ಯ ಕಟ್ಟಡದ ರಚನೆಯಾಗಬೇಕಾಗಿದೆ, ವ್ಯಾಯಾಮಶಾಲೆಯು ವ್ಯವಸ್ಥೆಯಾಗಬೇಕು, ಆಟದ ಬೈಲಿನ ವ್ಯವಸ್ಥೆಯಾಗಬೇಕು, ಗ್ರಂಥಾಲಯವನ್ನು ಬೆಳೆಸುವದೂ ಅವಶ್ಯವುಂಟು. ಈ ಎಲ್ಲ ಕೊರತೆಗಳನ್ನು ಜಿಲ್ಲೆಯ ಜನರು ಪೂರೈಸದಿದ್ದರೆ ಮತ್ಯಾರು ಪೂರೈಸುವರು?

ಕೆನರಾ ಕಾಲೇಜು ಕುಮಟೆಯವರ ಕಾಲೇಜು ಘಟ್ಟದ ಕೆಳಗಿನವರ ಕಾಲೇಜು ಎಂಬದೊಂದು ಅದೂರದೃಷ್ಟಿಯ ಸಂಕುಚಿತ ಭಾವನೆ ಹಿಂದೊಮ್ಮೆ ನಮ್ಮ ಜಿಲ್ಲೆಯ ಜನರಲ್ಲಿ ಸುಳಿದಾಡಿಕೊಂಡಿತ್ತು. ಆ ಭಾವನೆಯು ಈಗ ಕಡಿಮೆಯಾಗುತ್ತಲಿದ್ದು, ಮತ್ತೂ ಕಡಿಮೆಯಾಗಬೇಕು. ಜಿಲ್ಲೆಯ ಎಲ್ಲ ಭಾಗಗಳ ಜನರು ಈ ಕಾಲೇಜಿನ ಪ್ರಯೋಜನ ಪಡೆಯುತ್ತಿದ್ದಾರೆ. ಇದು ಕುಮಟೆಯವರಿಗೆ ಅಥವಾ ಘಟ್ಟದ ಕೆಳಗಿನ ಮಂದಿಗೆ ವಿಶೇಷ ಸೌಕರ್ಯ-ಸೌಲಭ್ಯಗಳನ್ನು ಒದಗಿಸಿಕೊಡುತ್ತಿದೆ ಅಥವಾ ಹೊರಗಿನವರನ್ನು ಉಪೇಕ್ಷಿಸುತ್ತಿದೆ ಎಂದು ಯಾರೂ ದೂರುವಂತಿಲ್ಲ, ದೂರಲಿಕ್ಕೆ ಆಸ್ಪದವೂ ಇಲ್ಲ. ಚೆನ್ನ ಹೆಸರಿಗೊಪ್ಪುವಂತೆ ಇದು ಇಡೀ ಜಿಲ್ಲೆಯ ಕಾಲೇಜು ಆಗಿದೆ. ಇಂತಹ ಸಂಸ್ಥೆಯನ್ನು ಸ್ಥಾಪಿಸಿ ನಡೆಸುವ ಶಕ್ತಿ ನಮ್ಮಲ್ಲಿಲ್ಲದಿದ್ದರೂ ಡಾ॥ ಬಾಳಿಗಾರವರಂತಹ ವಿಭೂತಿಗಳು ಮುಂದಾಗಿ ಅದನ್ನು ನಮಗೆ ಸ್ಥಾಪಿಸಿ ಕೊಟ್ಟಿದ್ದಾರೆ. ಹಾಲು ಹಿಂಡುತ್ತಿರುವ ಉತ್ತಮ ಆಕಳು ನಮ್ಮ ಕೈ ಸೇರಿದೆ. ಅದನ್ನು ನಾವು ಸಾಕಿ ಸಲಹಬೇಕು. ಬೇರೆಯವರು ಅದನ್ನು ಸಲಹಬೇಕು, ನಾವು ಹಾಲು ಮಾತ್ರ ಉಣ್ಣುತ್ತೇವೆ ಎಂದು ಹೇಳಿದರೆ ಸರಿಯಾಗುವಂತಿಲ್ಲ. ಹಾಗೆ ಹೇಳುವದು ಧರ್ಮವೂ ಆಗುವಂತಿಲ್ಲ. ಕಾಲೇಜಿನ ಚಾಲಕರೂ ಪ್ರಾಧ್ಯಾಪಕರೂ ಬೇಗನೇ ನಿಧಿ-ಸಂಗ್ರಹಕ್ಕೆ ಹೊರಡುವವರಿದ್ದಾರೆ. ಆ ಕಾಲದಲ್ಲಿ ಜಿಲ್ಲೆಯ ಜನರು ಶಕ್ತಿಮೀರಿ ಅವರಿಗೆ ವಂತಿಗೆಗಳನ್ನು ಕೊಡಿಸಿಕೊಟ್ಟು, ಕಾಲೇಜಿನ ಪಾಲನ-ಪೋಷಣದ ಪೂರ್ಣ ಹೊಣೆಯನ್ನು ಹೊರಲು ಜಿಲ್ಲೆಯವರು ಸಿದ್ಧರಿದ್ದಾರೆಂಬ ಧರ್ಮ ಸಕ್ರಿಯ ಭರವಸೆಯನ್ನು ಅವರಿಗೆ ಕೊಡಬೇಕಾಗಿ ಅರಿಕೆಯುಂಟು.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಮಂಗಳವಾರದಿಂದ ಪುನಃ ಮಳೆ ಬೀಳಹತ್ತಿದೆ! ಆದರಿಂದ ಗದ್ದೆ-ಕೊಯಿಲಿಗೆ ಆತಂಕವಾಗಿದೆ. ಈ ಮಳೆ ಹೀಗೆಯೇ ಬೀಳುತ್ತಿದ್ದರೆ ಭತ್ತವೂ ಹುಲ್ಲೂ ಹುಗ್ಗುವ ಸಂಭವವುಂಟು.

ಇಂದಿನಿಂದ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಗೋಕರ್ಣದ ವೇ॥ ಮೂ॥ ಜಾಂಭವ ಭಟ್ಟರ ಭಾಗವತ-ಸಪ್ತಾಹ ನಡೆಯುವದು. ಪ್ರತಿದಿನ ಬೆಳಿಗ್ಗೆ ೮ ರಿಂದ ೧೨ರ ವರೆಗೆ ಭಾಗವತ ಪಾರಾಯಣವೂ ಸಂಜೆ ೪ ರಿಂದ ಮುಂದೆ ಅರ್ಥ ವಿವರಣೆಯೂ ನಡೆಯುವವು. ಭಾವಿಕರು ಭಾಗವತ ಶ್ರವಣದ ಲಾಭ ಪಡೆಯಬಹುದು.

ಕಳೆದ ವಾರ ಸರಕಾರದವರ ಸಕ್ಕರೆ ಬಂದಿದ್ದು, ದೀಪಾವಳಿಯ ಪ್ರಯುಕ್ತ ಪ್ರತಿ ಸಿಧಾ-ಅಂಗಡಿಗಳಲ್ಲಿ ಅರ್ಧ ರತ್ತಲದಂತೆ ಹಂಚಲಾಗುವದು. ಮುಂದೆ ಯಾವ ಪ್ರಮಾಣದಿಂದ ಕೊಡಲಾಗುವದೆಂಬುದು ತಿಳಿದಿಲ್ಲ.

ಸರಕಾರದವರನ್ನು ಇವರ ಅಂಗಡಿಗಳಿಂದಲೂ ಸರಕಾರಿ ಅಂಗಡಿಯಿಂದಲೂ ಸೀಮೆ ಎಣ್ಣೆ ಸಹ ಹಂಚಲಾಗುವದು. ಜನರಿಗೆ ೨೦೦ ಗಂಟೆಗಳು ಮಾಂಬಳ

ಗೆ ಹೋಗುವರೆ ಇವರಿಗೆ ಹಾಗೆ ಹಲಗದ ೩. ಕಾಯುತ್ತ ನಿಂತಿವೆ. ಇನ್ನೆ ಹೆಚ್ಚಿನ ಪ್ರಮಾಣದಲ್ಲಿ ಅವನ್ನು ಕೊಡುವ್ದು ಹೇಗೆ ಇರುವದೋ ದೇವರೇ ಬಲ್ಲ.

ಗೋಕರ್ಣಕ್ಕೆ ಹೋದ ಒಂದು ಸರಕಾರಿ ಸಸ್ಸಿನ ಬೇಲಸಕ್ಕೆ ಬತಳಕ್ಕೆ ಇಸ್ಸಲಿಯ ಕಾಮಾಕರಗಳು ಕಂಡು ಬಂದಿರಬೇಕೆಂದು ವಿಚಿತ್ರ ಸುದ್ದಿ ಬಂದಿದೆ.

ಈ ವರ್ಷದ ಜಿಲ್ಲಾ ಒಕ್ಕಲತನದ ಪ್ರದರ್ಶನವನ್ನು ಕುಮಟೆಯಲ್ಲೇ ಕೂಡಿಸುವ ನಿಶ್ಚಯ ಮಾಡಿದೆಂದು ಪ್ರದರ್ಶನ ಸಮಿತಿಯವರು ತಿಳಿಸುತ್ತಾರೆ.

ಜಿಲ್ಲಾ ಸಮಾಚಾರ

(೪ನೇ ಪುಟದಿಂದ ಮುಂದುವರಿದುದು)

ರು ರೂ ೩೫೦೦೦ ವೆಚ್ಚ ತಗಲಿತಂತೆ. ಹುಬ್ಬಳ್ಳಿ ಯಾತ್ರಿಕರಿಂದ ಕೂಡಿಸಿದ ಹಣ ರೂ ೩೦೦೦೦ ದಷ್ಟಾಗಿತ್ತು. ಹೀಗೆ ಉಳಿದ ರೂ ೫೦೦೦ನ್ನು ನಮ್ಮ ಜಿಲ್ಲೆಯವರು ಕೊಡಿಸಲು ಹುಬ್ಬಳ್ಳಿಯ ಡಾ॥ ಎಸ್ ಎನ್ ಕಾಮತ, ಡಾ॥ ನಾಡಕರ್ಣಿ, ಡಾ॥ ಬಿ ಎಸ್ ಬಾಳಿಗಾ, ಡಾ॥ ಆರ್ ಬಿ ಕಾಮತ ಇವರು ಈ ತಿಂಗಳ ಮೊದಲನೇ ವಾರದಲ್ಲಿ ಭಟಕಳ, ಹೊನ್ನಾವರ, ಕುಮಟಾ, ಕಾರವಾರ ಊರುಗಳಲ್ಲಿ ಸಂಚರಿಸಿ ರೂ ೪೦೫೦॥ ಕೂಡಿಸಿದ್ದಾರೆ. ಹೊನ್ನಾವರದಲ್ಲಿ ಡಾ॥ ಮಹಾಲೆ ನಾಯಕ, ಕುಮಟೆಯಲ್ಲಿ ರಾ॥ ಸಾ॥ ಅಣ್ಣಪ್ಪ ಪೈ, ಡಾ॥ ಬಾಳಿಗಾ, ರಾ॥ ಮಾಳಾಂದ ಶಾನಭಾಗ ಹೆಗಡೇಕರ ಮುಂತಾದವರು ಕೇಳದ ಹ್ಯೆ ಇವರು ಹಾಗೂ ಇಷ್ಟ ಕಾರವಾರದಲ್ಲಿ ಡಾ॥ ರಂಗ ಶಾನಭಾಗ ಇವರು ತಮಗೆ ನೆರವಾದ್ದರಿಂದ ತಮ್ಮ ಕಾರ್ಯ ಯಶಸ್ವಿಯಾಯಿತೆಂದು ಅವರು ಕೃತಜ್ಞತೆಯಿಂದ ಒಪ್ಪುತ್ತಾರೆ.

ಗ್ರಾಮ ಸುಧಾರಣಾ ಸಪ್ತಾಹ

ಮುಂಬಯಿ ಸರಕಾರದ ಆದೇಶದಂತೆ ಕಳೆದ ೩ (ಗಾಂಧಿ ಜಯಂತಿಯ ದಿನ) ರಿಂದ ೯ ರ ತನಕ ನಮ್ಮ ಜಿಲ್ಲೆಯಲ್ಲಿ ಗ್ರಾಮ ಸುಧಾರಣಾ ಸಪ್ತಾಹವು ಆಚರಿಸಲ್ಪಟ್ಟಿತು. ಅಧಿಕಾರಿಗಳೂ ಅಧಿಕಾರೇತರರೂ ಸಹಕರಿಸಿ ಆಯಾ ಗ್ರಾಮಗಳನ್ನು ಗ್ರಾಮಸಮೂಹಗಳನ್ನು ತಮ್ಮ ಸಂಚಾರದಿಂದ, ತಮ್ಮ ತಮ್ಮ ವಿಭಾಗಗಳಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ಪ್ರಚಾರ, ಕ್ರಿಮಿನಾಶಕ ಔಷಧಿಗಳನ್ನು ಕೀಟನಾಶಕ ಪದ್ಧತಿಯಿಂದ ಚಿಮ್ಮಿಸುವ (ಸ್ಪ್ರೇ) ರೀತಿ ತಿಳಿಸುವ ಪದ್ಧತಿಯ ಪ್ರಾತ್ಯಕ್ಷಿಕೆ, ಶಾಲೆಗಳಲ್ಲಿ ಗಿಡ ನೆಡುವದು, ಉದ್ಯಾನಗಳ ಸ್ವಚ್ಛತೆ, ಗ್ರಾಮ-ಪಂಚಾಯಗಳ ಉದ್ಘಾಟನೆ, ಹರಿಜನ ಕೇರಿಗಳ ಸ್ವಚ್ಛತೆ, ಆಸ್ಪೃಶ್ಯತಾ-ನಿವಾರಣ ಗ್ರಾಮ ಸ್ವಚ್ಛತೆ ಬಗ್ಗೆ (ಪ್ರಾತ್ಯಕ್ಷಿಕೆ) ಕಾರ್ಯಕ್ರಮಗಳನ್ನು ಜರುಗಿಸಿದರು. ಕೆಲವು ಕಡೆ ಈ ರಚನಾತ್ಮಕ ಕಾರ್ಯಕ್ರಮಗಳ ಜೊತೆಗೆ ವಿನೋದ-ಕಾರ್ಯಕ್ರಮಗಳೂ ನಡೆದವು. ಈ ಪ್ರಕಾರ ಕೆಲವು ಗ್ರಾಮಗಳಲ್ಲಿ ಸಪ್ತಾಹದ ಆಚರಣೆಯಾದ ವರದಿಗಳು ಬಂದಿವೆ. ಹಳಿಯಾಳ ತಾಲೂಕಿನ ಜನಗೆ, ಬೇಲವಡಗಿ, ಒಸವಳ್ಳಿ, ಸಾಂಬ್ರೇಗದ್ದೆ, ಕುಮಟಾ ತಾಲೂಕಿನ ಭಾವಿಕೇರಿ, ಮೂರೂರು, ನಾಡುಮಾಸ್ಕೇರಿ, ಹೊನ್ನಾವರ ತಾಲೂಕಿನ ಹೊಸಾಡ, ಹಳದೀಪುರ, ಗುಂದ, ಸಿದ್ದಾಪುರ ತಾಲೂಕಿನ ಶಿರಳಗಿ, ಕೋಲಸಿರ್ಸಿ, ಭಟಕಳ ಪೇಟೆ, ಹಡೀಲ, ಶಿರಾಲಿ, ಶಿರ್ಸಿ ತಾಲೂಕಿನ ಪಟ್ಟಣ, ಬನವಾಸಿ, ಕಾನಸೂರು, ಇಸಳೂರು, ಯಲ್ಲಾಪುರ ಬದಲಿಗೆ (ಈ ಗ್ರಾಮದಲ್ಲಿ ೫೦೦ ಗಿಡಗಳನ್ನು ನೆಡಲಾಯಿತಂತೆ), ಹ. ೧೦ ಮುಂತಾದವು.

ಜಿಲ್ಲಾ ಸಮಾಚಾರ

[illegible]

THE BANK OF RURAL INDIA LTD.

(Incorporated in British India, Liability of Members limited)

HEAD OFFICE — "Satyabhama Bhavan", KARWAR. N K

Offices at — KARWAR, KUMTA, SIRSI, HONAVAR, YELLAPUR, BHATKAL, SIDDAPUR, ANKOLA, HUBLI & DHARWAR

Authorised Capital	Rs. 10,00,000,
Subscribed Capital	Rs. 5,00,000,
Paid-up Capital & Reserves	Rs. 5,08,502-8-0

Rates of Interest on Deposits

Current a/c @ 1% p. a. *Savings Bank a/c @ 2½%*

Fixed Deposits for 3 months @ 3% per annum.

" for 6 months @ 3½% "

" for 12 months or more @ 4% "

All kinds of hole banking business transacted

Karwar, 14-2-1946

P X GACIROUS
MANAGING DIRECTOR

[illegible]

ಕಾರವಾರ— [illegible]

[illegible]

(೨ನೇ ಪುಟದ ಮೇಲೆ ಮುಂದರಿಸಿದೆ.)

ಪತ್ರಿಕಾ-ಪ್ರಕಟನೆ.

[illegible]

([illegible] ಪ್ರಕಟಿಸಿದ್ದು.)

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.

ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲೊಜಿಂಗ

ದಿ/ ಕೆನರಾ ಲೊಜ

[ಊಟ ಮತ್ತು ವಸತಿಗ್ರಹ]

ಮೋಟರ-ಸ್ಟ್ಯಾಂಡ, ಹುಬ್ಬಳ್ಳಿ.

ಮಾಲಕ:— ಮ್ಯಾನೇಜ್ಮೆಂಟ್.

ಇದನ್ನು ಪಾಂಡುರಂಗ ಕೃಷ್ಣ ಕಾನಡಭಾಗ (ಸಂಪಾದಕ) ಇವರು ಧಾರವಾಡದಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ
ಮುಂಗಡ ವರ್ಷಕ್ಕೆ ...
ಒಂದು ವರ್ಷಕ್ಕೆ ೩-೧-೦
೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ...೦-೧-೦
ಪ್ರತಿ ೬ ತಿಂಗಳ ಕಾಲಕ್ಕೆ
... ಬೇಕಾದವರು
ವರ್ಗಣಿಯ ಹಣವನ್ನು
ಮುಂಗಡ ಕಳಿಸತಕ್ಕದ್ದು.

Reg. No. B 1270 Monday, 31-10-949.

ಕಾನಡಾವೃತ್ತ

ವರ್ಷ ೩೨.] THE KANARA NEWS. [ಸಂಚಿಕೆ ೧೮.

ಕುಮಟಾ:- ಸೋಮವಾರ, ತಾ. ೩೧-೧೦-೧೯೪೯.

ಜಾಹೀರಾತುಗಳ ದರ.
೧೪ ಎಮ್ ಉದ್ದ ಸ್ತಂಭದ
ಪ್ರತಿ ಸಾಲಿಗೆ ೮ ಆಣೆಯಂತೆ.
ದೀರ್ಘ ಕಾಲದ [illegible]
ಜಾಹೀರಾತುಗಳ ಬಗ್ಗೆ ಪತ್ರ
ವ್ಯವಹಾರ
[illegible]

ಗಮನಾರ್ಹ ಮಾಹಿತಿ

ಸಪ್ಟಂಬರ ತಿಂಗಳಲ್ಲಿ ಪ್ರಾರಂಭವಾಗಿ ಈ ತಿಂಗಳ ೨ನೇ ವಾರದಲ್ಲಿ ಮುಕ್ತಾಯವಾದ ಮುಂಬಯಿ ಕಾನೂನು-ಮಂಡಳದ ಮೋಲ್ಮನೆಯ ಅಧಿವೇಶನದೊಳಗೆ ಶ್ರೀ|| ಮಹಾಬಲೇಶ್ವರ ಗಣಪತಿ ಭಟ್ಟ ಗೋಪಿಯವರು ಸರಕಾರಕ್ಕೆ ಕೆಲವು ಪ್ರಶ್ನೆಗಳನ್ನು ಕೇಳಿ, ನಮ್ಮ ಜಿಲ್ಲೆಯ ಸಂಬಂಧವಾಗಿ ದೊರಕಿಸಿದ ಮಾಹಿತಿಯು ಮನನೀಯವಿದೆ. ಅದನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

(೧) ದಾಂಡೇಲಿಯ ಬಳಿ ಒಂದು ಕಾಡು ಪಶುಗಳ ನಿಲಯ (Sanctuary) ರಚಿಸಬೇಕೆಂಬ ವಿಚಾರ ಸರಕಾರದ್ದಿದೆ. ಈ ಬಗ್ಗೆ ಅವಶ್ಯವುಳ್ಳ ಮಾಹಿತಿಯನ್ನು ಸರಕಾರವು ಸಂಪಾದಿಸುತ್ತಿದೆ. ಈ ಯೋಜನೆಗೆ ಎಷ್ಟು ಖರ್ಚು ತಗಲುವದೆಂಬುದರ ಅಂದಾಜು ಇನ್ನೂ ಮಾಡಲಾಗಿಲ್ಲ. ಈ ವರ್ಷದ ಅಂದಾಜ ಪತ್ರಿಕೆಯೊಳಗೆ ಈ ಬಗ್ಗೆ ಏನೂ ವ್ಯವಸ್ಥೆ ಮಾಡಿದ್ದು ಇರುವದಿಲ್ಲ. ಹಳ್ಳಿಕೇರಿಯಲ್ಲೂ ಒಂದು ಮೃಗ-ನಿಲಯ ರಚಿಸುವ ಆಲೋಚನೆ ನಡೆದಿದೆಂಬುದು ನಿಜವಲ್ಲ.

(೨) ಕಾನಡಾ ಜಿಲ್ಲೆಯಲ್ಲಿ ಕಾಡು-ಪಶುಗಳಿಂದ ಜನರ ಗೋ-ಸಂಪತ್ತಿಗೂ ಬೆಳೆಗಳಿಗೂ ಹಾನಿಯಾಗುತ್ತದೆಂಬುದು ನಿಜ. ಆದರೆ ಈ ಹಾನಿಯ ಇತಿಮಿತಿಗಳನ್ನು ತಿಳಿಸಲಿಕ್ಕೆ ಅವಶ್ಯವುಳ್ಳ ಅಂಕಿ-ಸಂಖ್ಯೆಗಳು ಸರಕಾರದ ಸಂಗ್ರಹದಲ್ಲಿಲ್ಲ. ಜಿಲ್ಲೆಯಲ್ಲಿ ೬೧ ಕೋವಿ-ಕೂಟಗಳಿವೆ. ಇವು ಹುಲಿಗಳ ನಾಶ ಮಾಡಿಲ್ಲವು. ಈ ಕೋವಿ-ಕೂಟಗಳಿಗೆ ನೆರವಾಗಲು ೬ ಶಿಕಾರಿ ಅಧಿಕಾರಿಗಳನ್ನೂ ನೇಮಿಸಲಾಗಿದೆ. ಕಾಡು ಹಂದಿಗಳು ಬಂದು ಭತ್ತದ ಬೆಳೆ ನಾಶ ಮಾಡುವಂತೆ ತಂತಿ-ಜಾಳಿಗೆಯ ಬೇಲಿಯನ್ನು ಹಾಕುವದು ಒಳಿತೆಂಬ ವಿಚಾರ ಬಂದದ್ದರಿಂದ ಸರಕಾರವು ೧ ಲಕ್ಷ ರೂ. ವಿನಿಯೋಗಿಸಿ ಅಂತಹ ಜಾಳಿಗೆಯನ್ನು ತಯಾರಿಸುವ ಯೋಜನೆಯೊಂದನ್ನು ಕೈಕೊಂಡಿದೆ. ಈ ಜಾಳಿಗೆಯ ವೆಚ್ಚ ಅಡಿ ೧ಕ್ಕೆ ೨ ಆಣೆಗಳಷ್ಟು ಬರುತ್ತಿದೆ. ಆದರೂ ಸರಕಾರವು ಇದನ್ನು ೮ ಆಣೆಗೊಂದು ಅಡಿಯಂತೆ ರೈತರಿಗೆ ಪೂರೈಸಲು ನಿರ್ಧರಿಸಿದೆ. ಇಂದೂರ ಗ್ರಾಮಕ್ಕೆ ಈಗಾಗಲೇ ೩ ಮೈಲುಗಳಷ್ಟು (೧೦೫೬೦ ಅಡಿ) ಉದ್ದ ಬೇಲಿ-ಜಾಳಿಗೆಯನ್ನು ಪೂರೈಸಲಾಗಿದೆ. ಈ ತಂತಿಯ ಪೂರೈಕೆ ಮಾಡುವಾಗ ಕಾನಡಾ ಜಿಲ್ಲೆಯ ಸಾಗುವಳಿದಾರರ ಬೇಡಿಕೆಗೆ ಮೊದಲ-ಮನ್ನಣೆ ಕೊಡಬೇಕೆಂದು ಸರಕಾರವು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದೆ.

(೩) ೧೯೩೭ರಿಂದ ೧೯೪೮ರ ವರೆಗೆ ಶಿರಸಿಯಲ್ಲಿ ನಡೆಸಿದ ಕೊಳೆ ರೋಗ-ಸಂಶೋಧನೆಗೆ ಅಂತು ೬೧ ಸಾವಿರ ಖರ್ಚು ಬಂತು. ಕೊಳೆ ರೋಗ-ಪ್ರತಿಬಂಧಕಾಧಿಕಾರಿಯು ೧೦೭ ಎಕರೆ ತೋಟಗಳಲ್ಲಷ್ಟೇ ತನ್ನ ಪ್ರಯೋಗ ಮಾಡುತ್ತಾನೆ. ತೋಟಗರಿಗೆ ಕಿತ್ತಿ ಹಾಕಿ ಕೊಡಲಷ್ಟೇ ಅವನ ಪ್ರಯೋಗಗಳು ನಡೆಯುತ್ತಿವೆ. ೬೦೦೦ ಎಕರೆ ತೋಟಗಳಲ್ಲಿ ಅವನ ಪ್ರಯೋಗ ನಡೆಸಲು ಸಾಧ್ಯವಿದೆಯೋ ಇಲ್ಲೋ ಎಂಬುದರ ಪ್ರಶ್ನೆಯಿಲ್ಲ. ಕೊಳೆ-ರೋಗ-ಪ್ರತಿಬಂಧಕ ಯೋಜನೆಯ ಈ ಕೆಲಸಕ್ಕೆ ಹಿಂದೆ ಅಸಿಸ್ಟಂಟ ಪ್ಲಾಂಟ ಪೆಥೋಲೊಜಿಸ್ಟ (ವನಸ್ಪತಿಗಳ ರೋಗಗಳನ್ನೂ ಅವುಗಳ ಪರಿಹಾರಕ್ರಮವನ್ನೂ ಕಂಡುಹಿಡಿಯುವ) ಎಂಬ ಅಧಿಕಾರಿಯನ್ನು ನೇಮಿಸಲಾಗಿತ್ತು. ಈಗ ಸಂಶೋಧನೆಯ ಕಾರ್ಯ ಮುಗಿದಿರುವದರಿಂದ ಮತ್ತು (ಕೊಳೆ-ರೋಗದ) ಮದ್ದಿನ ಪ್ರಯೋಗವನ್ನಷ್ಟೇ ತೋಟಗರಿಗೆ ಕಲಿಸುವದಿರುವದರಿಂದ ಸಂಶೋಧನೆಯ ಕೇಂದ್ರವನ್ನು ಮುಚ್ಚಲಾಗಿದೆ. ಪ್ರಯೋಗದ ಕೆಲಸ ಜಿಲ್ಲಾ ಕೃಷಿ ಸಹಾಯ ಅಧಿಕಾರಿಗೆ ಒಪ್ಪಿಸಲಾಗಿದೆ.

(೪) ಈಗ ಸರಕಾರಿ ಪಡಭೂಮಿಗಳನ್ನು ಸಾಗುವಳಿಗೆ ಪಡೆಯಬಯಸುವವರಿಂದ ಸರಕಾರವು ಹೊಸ ಶರ್ತುಗಳುಳ್ಳ ಹೊಸ ಬಗೆಯ ಲಾಗಣಿ ಕರಾರು ಬರೆಸಿಕೊಳ್ಳುತ್ತಿದೆ. ಲಾಗಣಿಗೆ ಪಡೆದ ಭೂಮಿಯ ಪಾಲು ಮಾಡಬಾರದು ಮತ್ತು ಪರಾಧೀನ ಮಾಡಕೂಡದು ಎಂಬಿವೇ ಮಹತ್ವದ ಹೊಸ ಶರ್ತುಗಳು. ಲಾಗಣಿದಾರನು ಈ ಕರಾರುಗಳನ್ನು ಉಲ್ಲಂಘಿಸಿದರೆ ಅವನ ಹಕ್ಕು ರದ್ದಾಗುವದು. ಲಾಗಣಿಗೆ ಭೂಮಿ ಪಡೆಯುವವರ ಹಿತಸಂರಕ್ಷಣೆಯ ದೃಷ್ಟಿಯಿಂದಲೇ ಈ ಹೊಸ ಕರಾರುಗಳನ್ನು ಸೇರಿಸಲಾಗಿದೆ.

ಕಾನಡಾ ಜಿಲ್ಲೆಯ ಕರಾವಳಿಯ ತಾಲೂಕುಗಳಲ್ಲಿ ಬಂಜರ ಬಿದ್ದಿರುವ ಹೊಲಗಳು ಬಹಳವಿವೆ. ಅವು ೫ರಿಂದ ೧೦-೧೫ ಎಕರೆಗಳಷ್ಟೇ ವಿಸ್ತೀರ್ಣವಿರುವದರಿಂದಲೂ ಸುತ್ತಲೂ ಅಡವಿ ಹಬ್ಬಿರುವದರಿಂದಲೂ ಅವುಗಳನ್ನು ಸಾಗುವಳಿಯಲ್ಲಿ ತರುವ ಬಗ್ಗೆ ಪ್ರತ್ಯೇಕ ಯೋಜನೆಗಳನ್ನು ಮಾಡುವದು ವ್ಯವಹಾರಿಕವಾಗದು.

(೫) ಕಾರವಾರ ಜಿಲ್ಲೆಯ ಘಟ್ಟದ ಕೆಳಗಿನ ತಾಲೂಕ-ಪೇಟೆಗಳಲ್ಲಿ, ೧೯೪೭-೧೯೪೮ರ ಗೇಣಿ ಬಾಕಿಯುಳ್ಳ ಕೊಂಡ ರೈತರ ವಿರುದ್ಧ ೨೬೦೩ ದಾವೆಗಳಾಗಿದ್ದವು. ಅವುಗಳಲ್ಲಿ ಈವರೆಗೆ ೨೩೦೪ ದಾವೆಗಳು ನಿಕಾಲೆಯಲ್ಲಿ ಬಂದಿವೆ. ೬೬ ಪ್ರಕರಣಗಳಲ್ಲಿ ಒಕ್ಕಲಿಗರಿಗೆ ಕಬಜಾ ಕೊಡಿಸಿದೆ. ೧೬೬೩ ದಾವೆಗಳಲ್ಲಿ ಒಕ್ಕಲಿಗರು ಗೇಣಿ-ಹಣ ವಸೂಲ ಕೊಟ್ಟು ಕಬಜೆ ಉಳಿಸಿಕೊಂಡರು.

(೬) ೧೯೧೪-೧೮ರ (ಮೊದಲನೇ) ಮಹಾಯುದ್ಧದ ಕಾಲಕ್ಕೆ ಕೊಂಕಣ-ಮರಾಠಾ ಜಾತಿಯವರು ಸರಕಾರಕ್ಕೆ ಸೇವೆ ಸಲ್ಲಿಸಿದ್ದರ ಬಗ್ಗೆ, ಸರಕಾರವು ೧೯೧೮ರಲ್ಲಿ ಒಂದು ಠರಾವ ಮಾಡಿ, ಆ ಜಾತಿಯ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಮಾಫಿ ಕೊಡಬೇಕೆಂದು ವಿಧಿಸಿದೆ. ಯುದ್ಧಕ್ಕೆ ಹೋದವರ ಮಕ್ಕಳು, ಹೋಗದಿದ್ದವರ ಮಕ್ಕಳು ಎಂಬ ಭೇದಭಾವವನ್ನು ಸರಕಾರವು ಮಾಡಿಲ್ಲ. ಕಳೆದ ಮಹಾಯುದ್ಧದಲ್ಲಿ ಇತರ ಸಮಾಜದವರೂ ಸರಕಾರ-ಸೇವೆ ಮಾಡಿದ್ದಾರೆ. ಆದರೆ ಅವರು ಮೇಲಿನಂತಹ ಸವಲತ್ತು ತಮಗೆ ಕೊಡಬೇಕೆಂದು ಬೇಡಿಕೆ ಮಾಡಿಲ್ಲ. ಆದರೂ ಕೊಂಕಣ-ಮರಾಠಾ ಜನರಿಗಷ್ಟೇ ಕೊಟ್ಟ ಸವಲತ್ತಿನಿಂದ ಜನರೊಳಗುಂಟಾಗಿರುವ ಅಸಮಾಧಾನವನ್ನು ಹೇಗೆ ಪರಿಹರಿಸಬಹುದೆಂಬುದರ ವಿಚಾರವನ್ನು ಸರಕಾರವು ನಡಿಸಿದೆ.

(೭) ಚಿಕ್ಕ ನೀರಾವರಿ ಜಲಾಶಯಗಳ ದುರುಸ್ತಿ ಮಾಡಿಸುವದಕ್ಕಾಗಿ ೧೯೪೮ರ ಏಪ್ರಿಲದೊಳಗೆ ಶಿರಸಿಯಲ್ಲಿ ಓವರ್ ಡೆಪ್ಯುಟಿ ಇಂಜನಿಯರರ ನೇಮಣೂಕಿಯಾಗಿತ್ತು. ನೇಮಣೂಕಿಯಾದ ಮೇಲೆ ಕೆಲವು ಕಾಲ ವ್ಯವಸ್ಥೆ ಮಾಡುವದರಲ್ಲಿ ಕಳೆಯಿತು. ಮುಂದೆ ತಂತ್ರಜ್ಞ ಸಿಬಂದಿಯ ಅಭಾವವೆನಿಸಿತು. ಹೀಗಾಗಿ ಅವರು ಮುಂಡಗೋಡ ತಾಲೂಕಿನ ಕೆರೆಗಳ ಕೆಲಸ ಕೈಕೊಂಡರು. ಜಿಲ್ಲಾ ಗ್ರಾಮೋದ್ಧಾರ ಮಂಡಳದವರು ಅವರಿಗೆ ಇಲ್ಲಿ ೧೦ ಕೆರೆಗಳನ್ನು ತೋರಿಸಿಕೊಟ್ಟರು. ಕಳೆದ ಮೇ ತಿಂಗಳಲ್ಲಿ ಈ ಅಧಿಕಾರಿಯ

The Agricultural & Industrial Bank, Ltd.

(Established . 1934.)

Head Office: **COONDAPOOR.**

We beg to intimate that the 110 shares pertaining to Mr Gujjadi Balakrishna Sheshagiri Nayak, were sold in Public auction on 24-10-1949 and as the debtor failed to produce the old certificates, **the Bank has cancelled** the said certificates Nos. 2 and 1269 pertaining to shares numbered from 11 to 20 and 13570 to 13669 and fresh certificates have been issued in favour of the auction purchasers bearing the same numbers.

The public are hereby warned not to deal with the aforesaid old share certificates.

Coondapoor,
Date:- 24-10-49.

A. Madhava Pai, B.A.,B.L.,
GENERAL MANAGER.

ಸ್ಥಳ ಕಡಿಮೆ ಮಾಡಿ ಅವರ ಕೆಲಸವನ್ನು ಇಂಜಿನಿಯರ ಇಲಾಖೆಗೆ ಒಪ್ಪಿಸಲಾಯಿತು.

ಕಾರವಾರ ಜಿಲ್ಲೆಯಲ್ಲಿ ಎಷ್ಟು ಚಿಕ್ಕ ನೀರಾವರಿ ಜಲಾಶಯಗಳಿವೆಂಬುದು ಸರಕಾರಕ್ಕೆ ಗೊತ್ತಿಲ್ಲ ಬಹಳಷ್ಟು ಇವೆಯೆಂಬುದು ಗೊತ್ತಿದೆ ಬಹಳ ಕೆರೆಗಳು ಹುಗಿದುಹೋಗಿವೆಯೆಂಬುದು ಗೊತ್ತಿಲ್ಲ. ಆಹಾರೋತ್ಪಾದನೆ ಹೆಚ್ಚಿಸುವ ದೃಷ್ಟಿಯಿಂದಷ್ಟೇ ಕೆರೆಗಳ ದುರುಸ್ತಿಯನ್ನು ಮಾಡಲಾಗದು. ಮಣ್ಣು ತೆಗೆಸುವರೆ ಖರ್ಚು ಎಷ್ಟು ಬರುವದು ಮತ್ತು ಅದಕ್ಕೆ ತಕ್ಕ ಪ್ರಯೋಜನ ಸಿಗುವದೇ ಎಂಬುದರ ವಿಚಾರ ಮಾಡಬೇಕಾಗುವದು

(೮) ಕಾಡು ಸವರುವ ಬಗ್ಗೆ ಹೊಲ ಊಳುವ ಬಗ್ಗೆ ತಮಗೆ ಟ್ರಾಕ್ಟರ ಮತ್ತು ಬುಲ್-ಡೋಝರ ಕೊಡಿಸಬೇಕೆಂದು ಕಾನಡಾ ಜಿಲ್ಲೆಯ ಇಬ್ಬ ವ್ಯಕ್ತಿಗಳು ಅರ್ಜಿ ಮಾಡಿದ್ದರು. ಆದರೆ ಇಂದೂರ ಗ್ರಾಮದೊಳಗಿನ ಕೆಲಸ ಒಹುವಿದ್ದುದರಿಂದ ಕೊಡಿಸುವದು ಸಾಧ್ಯವಿಲ್ಲೆಂದು ಅವರಿಗೆ ತಿಳಿಸಲಾಯಿತು. ಬೆಳಗಾಂವ ಜಿಲ್ಲೆಯಲ್ಲಿ ೨೧, ಧಾರವಾಡ ಜಿಲ್ಲೆಯಲ್ಲಿ ೨ ಹೀಗೆ ಕರ್ನಾಟಕ ವಿಭಾಗದೊಳಗೆ ೬ ಟ್ರಾಕ್ಟರ-ಕೂಟ (unit) ಗಳಿವೆ. ಹಾವೇರಿಯ ಕೂಟದವರು ಇಂದೂರ ಗ್ರಾಮದ ಕೆಲಸ ಮಾಡಿಕೊಟ್ಟರು ಈ ಟ್ರಾಕ್ಟರಗಳು ಅತಿಶಯ ದೊಡ್ಡವಿವೆ ಭತ್ತದ ಹೊಲಗಳನ್ನು ಹೂಡಿಕೊಡಲಿಕ್ಕೆ ಅವು ಪ್ರಯೋಜನಕಾರಿಯಾಗಲಾರವು. ಈ ಕೆಲಸಕ್ಕೆ ಚಿಕ್ಕ ಟ್ರಾಕ್ಟರಗಳು ಬೇಕು ಸರಕಾರವು ಇತ್ತಲಾಗಿ ಇಂತಹ ಸಣ್ಣ ಆಕಾರದ ೫೦ ಟ್ರಾಕ್ಟರಗಳನ್ನು ಕೊಂಡುಕೊಂಡಿದೆ. ಕೆಲವು ಟ್ರಾಕ್ಟರಗಳನ್ನು ಕಾನಡಾ ಜಿಲ್ಲೆಗೆ ಕೊಡಲಾಗುವದು.

(೯) ಕಾನಡಾ ಜಿಲ್ಲೆಯವರಿಗೆ ವರ್ಷ ೧ಕ್ಕೆ ಸರಾಸರಿ ೪ ಕೋಟಿ ತೆಂಗಿನಕಾಯಿಗಳು ಬೇಕು. ಆದರೆ ಜಿಲ್ಲೆಯಲ್ಲಿರುವ ೧೨೦೦೦ ಎಕರೆ ತೆಂಗಿನ ಬಾಗಾಯತುಗಳಲ್ಲಿ ಬರೀ ೨ ಕೋಟಿ ಕಾಯಿಗಳಾಗುತ್ತಿವೆ.

ಹಿಂದುಸ್ಥಾನ ಸರಕಾರದ ತೆಂಗು-ಸಂಶೋಧನ ಸಮಿತಿಯವರು ರತ್ನಾಗಿರಿಯಲ್ಲಿ ಒಂದು ತೆಂಗು-ಸಂಶೋಧನ ಕೇಂದ್ರ ಸ್ಥಾಪಿಸಿದ್ದಾರೆ. ಕಾನಡಾ ಜಿಲ್ಲೆಯಲ್ಲಿ ಈ ಕೇಂದ್ರವನ್ನು ತೆರೆಯುವದಕ್ಕಿಂತ ತೆಂಗು ಬೆಳೆಯುವ ಕೊಂಕಣಪಟ್ಟಿಯ ನಡುಮಧ್ಯದಲ್ಲಿರುವ ರತ್ನಾಗಿರಿಯಲ್ಲಿ ಅದನ್ನು ಇಡುವದು ಯುಕ್ತವೆಂದು ಸೂಚಿಸಿದವರು ಸಮಿತಿಯ ಓರ್ವ ಸದಸ್ಯರಾಗಿರುವ ರಾ॥ ಸಂಜೀವರಾವ ಕಲ್ಲಾಪುರರು

ಕುಮಟೆಯ ಬೇಸಾಯ ಹೊಲದಲ್ಲಿ ಚಲೋ ಜಾತಿಯ ತೆಂಗಿನ ಬೀಜಗಳನ್ನು ತಯಾರಿಸಿ ಬೇಕಾದವರಿಗೆ ಪೂರೈಸುವ ವ್ಯವಸ್ಥೆ ಮಾಡಲಾಗಿದೆ. ೮ ಆಣೆಗೊಂದು ಸಸಿಯಂತೆ ಹೊಲದವರು ಕೊಡುತ್ತಾರೆ

(೧೦) ಯಲ್ಲಾಪುರ ತಾಲೂಕಿನಲ್ಲಿ ಜನನಗಳಿಗಿಂತ ಮರಣಗಳ ಪ್ರಮಾಣ ಹೆಚ್ಚಿಗೆಯುಂಟು ಆ ತಾಲೂಕಿನ ೧೫೩ ಗ್ರಾಮಗಳ ಪೈಕಿ ೧೧೫ ಗ್ರಾಮಗಳಲ್ಲಿ ೨೦ಕ್ಕಿಂತ ಕಡಿಮೆ ಜನವಸತಿಯಿದೆ ಕಾರವಾರ ಜಿಲ್ಲೆಯಲ್ಲಿ ೧೦೦ಕ್ಕೂ ಹೆಚ್ಚಿಗೆ ಜನವಸತಿಯುಳ್ಳ ಎಲ್ಲ ಗ್ರಾಮಗಳಲ್ಲಿ ಡಿ. ಡಿ. ಟಿ. ಪ್ರಯೋಗವಾಗುತ್ತಿದೆ. ಇತರ ಹಳ್ಳಿಗಳಲ್ಲೂ ಈ ಪ್ರಯೋಗ ಮಾಡಬೇಕೆಂಬ ಆಲೋಚನೆಯುಂಟು.

ಯಲ್ಲಾಪುರ ತಾಲೂಕಿನ ಹಾಗೂ ಅದರ ನೆರೆಹೊರೆಯ ಪ್ರದೇಶದಲ್ಲಿ "ಬಿಳೀ ಜಡ್ಡು" ಎಂಬ ರಕ್ತಹೀನತೆಯ ರೋಗದಿಂದ ಬಹಳಷ್ಟು ಜನರು ಬಳಲುತ್ತಾರೆ. ಈ ರೋಗ ಗರ್ಭಿಣಿ ಹೆಂಗಸರಿಗೆ ಬಾಧಿಸುವದು ಹೆಚ್ಚು. ಪೌಷ್ಟಿಕ ಆಹಾರದ ಅಭಾವದಿಂದ ಈ ರೋಗವಾಗುತ್ತದೆಂದು ಕಂಡುಬಂದಿದೆ. ಆದಕಾರಣ ಸರಕಾರವು ಪೌಷ್ಟಿಕ ಆಹಾರದ ಇಲಾಖೆಯನ್ನು ತೆರೆದಿದೆ. ಯಲ್ಲಾಪುರ ತಾಲೂಕಿನ ಪ್ರಸವೋನ್ಮುಖ ಹೆಂಗಸರಿಗೆ ನೆರವಾಗಲು ಯಲ್ಲಾಪುರದಲ್ಲೂ ಮಂಚಿಕೇರಿಯಲ್ಲೂ ತಜ್ಞ ಶಿಬಂದಿಯನ್ನು ನೇಮಿಸಲಾಗಿದೆ. ಅಲ್ಲಿಯ ಸೂಲಗಿತ್ತಿಗಳು ನೆರೆ-ಹೊರೆಯ ಗ್ರಾಮಗಳಲ್ಲಿ ಸಂಚಾರ ಮಾಡಿ ಗರ್ಭಿಣಿ ಹೆಂಗಸರ ಆರೈಕೆ ಮಾಡಬೇಕೆಂದು ವಿಧಿಸಲಾಗಿದೆ, ಮತ್ತು ಗರ್ಭಿಣಿ ಹೆಂಗಸರಿಗೆ ಪುಕ್ಕಟೆಯಾಗಿ ಕೊಡಲೆಂದು ಹಾಲಿನ ಹುಡಿಯನ್ನೂ ಶರೀರ-ಪೋಷಕ ಸತ್ವಗಳುಳ್ಳ ಗುಳಿಗೆಗಳನ್ನೂ ಯಲ್ಲಾಪುರ ಮತ್ತು ಮಂಚಿಕೇರಿ ದವಾಖಾನೆಗಳಲ್ಲಿ ಇಡಲಾಗುತ್ತಿದೆ.

(೧೧) ೧೯೪೮ ಬೇಗಲ್ಲಿ ಕುಮಟಾ ತಾಲೂಕಿನೊಳಗೆ ೫೩೦ ಎಕರೆಗಳಷ್ಟು ಭೂಮಿಯಲ್ಲಿ ಉಪ್ಪುನೀರು ಸೇರಿತ್ತು. ಈ ಭೂಮಿಯೆಂದರೆ ಸಿದ್ಧೇಶ್ವರ, ಮೊರ್ಕೋಡ, ಮೊಳಕೆ ಮತ್ತು ಕಾಜ ಗಝನಿಗಳಿಗೊಳಪಟ್ಟದ್ದು. ಹಿಂದಿನ ವರುಷದಲ್ಲಿ ಇವು ನಾಗು ಆಗಿದ್ದವು ಆದರೆ ಬೆಳೆ ಚನ್ನಾಗಿ ಬಂದಿದ್ದಿಲ್ಲ ೧೯೪೮-೪೯ರಲ್ಲಿ ಎಲ್ಲ ಪ್ರದೇಶ ಪಡ ಬಿತ್ತು. ಈ ಗಜನಿಗಳ ೮ ಮಂದಿ ಮಾಲಿಕರು ಕಟ್ಟುಗಳ ದುರುಸ್ತಿಗಾಗಿ ರೂ ೫೨೦೦ ತಗಾವಿ ಸಾಲ ಬೇಡಿ ಅರ್ಜಿ ಮಾಡಿದ್ದರು. ತಾ. ೨೧-೧೨-೪೮ಕ್ಕೆ ಅದರ ಅರ್ಜಿ ಮಂಜೂರಾಯಿತು. ಆದರೆ ಕೆಲವರು ಈ ಸಾಲಕ್ಕೆ ಭದ್ರತೆ ಕೊಡಲು ಒಡಂಬಡದ್ದರಿಂದ ಅವರಿಗೆ ತಗಾವಿ ಸಿಗಲಿಲ್ಲ. ಈಗ ಅವರು ಭದ್ರತೆ ಕೊಡಲು ಒಪ್ಪಿದ್ದಾರಾದ್ದರಿಂದ ಅವರಿಗೆ ಸಾಲ ಸಿಗುವದು. ನಡುವೆ ೧೯೪೯ರ ಏಪ್ರಿಲದಲ್ಲಿ ಸಿದ್ಧೇಶ್ವರ ಗಜನಿಯ ಮಾಲಿಕರಲ್ಲೊಬ್ಬರಾದ ರಾ॥ ವೆಂಕಟರಮಣ ಭಟ್ಟ ಪ್ರಸಾದ ಮತ್ತು ಗಣೇಶ ಭಟ್ಟ ಕೊಪ್ಪಿಕರ ಇವರು ಈ ಸಾಲ ತಮಗೆ ಕೊಡಬೇಕಾಗಿಯೂ ತಾವು ಭದ್ರತೆ ಕೊಡಲು ಸಿದ್ಧರಿದ್ದೇವೆಂದೂ ತಿಳಿಸಿದ್ದರು. ಅವರ ಭದ್ರತೆ ಸಾಕಷ್ಟಿತ್ತು. ಆದರೆ ಎಲ್ಲ ಗಜನಿ ಭೂಮಿಗಳ ಸಮಾಯಿಕ ಭದ್ರತೆಯ ಮೇಲೆ ಸಾಲ ಕೊಡಬೇಕಾಗಿ ಸರಕಾರದ ಆಜ್ಞೆಯಿದ್ದುದರಿಂದ ಅವರಿಗೆ ಜಿಲ್ಲಾಧಿಕಾರಿ ಸಾಲ ಕೊಡಲೊಪ್ಪಲಿಲ್ಲ.

ಮಂತ್ರಿಗಳೂ ಉಪಮಂತ್ರಿಗಳೂ ಈ ಗಝನಿಗಳನ್ನು ನೋಡಿದ್ದಾರೆ. ಅವರ ಕಡೆಗೂ ತಗಾವಿಯ ಪ್ರಶ್ನೆ ಬಂದಿತ್ತು ಈ ಗಝನಿಗಳ ಕಟ್ಟುಗಳನ್ನು ಕಟ್ಟಿಸಲು ರೂ. ೧೫೦೦೦ ತನಕ ತಗಾವಿ ಕೊಡಬಹುದಾಗಿ ಬೇಸಾಯ ಮಂತ್ರಿಗಳು ಜಿಲ್ಲಾಧಿಕಾರಿಗೆ ತಿಳಿಸಿದ್ದಾರೆ. ಆದರೆ ಮಾಲಿಕರು ಕಂದರು ಬರಕೊಟ್ಟ ಹೊರತು ಈ ಸಾಲ ಸಿಗುವಂತಿಲ್ಲ. ಕಾನಡಾ ಜಿಲ್ಲೆಯ ವಿಶೇಷ ಭೂ-ಸುಧಾರಣಾ ಅಧಿಕಾರಿಗಳು ಗಝನಿ ಭೂಮಿಗಳ ಸಂಬಂಧದಲ್ಲಿ ತಯಾರಿಸಿರುವ ಯೋಜನೆಗಳನ್ನು ಪರಿಶೀಲಿಸಲು ೧೯೪೯ರ ಮಾರ್ಚದಲ್ಲಿ ಉಪಮಂತ್ರಿ ರಾ॥ ಕುಂಟೆಯವರು ಕಾನಡಾ ಜಿಲ್ಲೆಯಲ್ಲಿ ಸಂಚರಿಸುತ್ತಿದ್ದಾಗ ಸಿದ್ಧೇಶ್ವರ ಗಝನಿಗೆ ಹೋಗಿದ್ದರು. ಆಗ ಅಂಕೋಲೆಯ ರಾ॥ ಶ್ರೀನಿವಾಸ ಮಹಾಲೆಯವರು ತಮಗೆ ೩೦೦೦ ರೂ ಸಾಲ ಕೊಡಿಸಬೇಕೆಂದು ಬೇಡಿದರು ಆದರೆ ಗಝನಿ ಭೂಮಿಗಳ ಸುಧಾರಣೆಯ ಕಾನೂನು ಆಗ ಅಮಲಿನಲ್ಲಿ ಬಂದಿದ್ದಿಲ್ಲ. ಆದರಿಂದ ತ ಭದ್ರತೆ ಕೊಟ್ಟು ಭೂ-ಸುಧಾರಣಾ ಕಾನೂನಿನ ಯ ಜಿಲ್ಲಾಧಿಪರಿಂದ ಸಾಲ ಪಡೆಯಿರಿ ಎಂದು ರಾ॥ ಕುಂಟೆಯವರು ಮಹಾಲೆಯವರಿಗೆ ತಿಳಿಸಿದರು.

ಸದರಿ ಗಝನಿಗಳ—ಪೈಕಿಯೂ ಕೆಲವರು ತಮ ರೂ. ೮೯೦೦ ಸಾಲ ಕೊಡಿಸಬೇಕೆಂದು ಮನ ಮಾಡಿದ್ದರು. ಜಿಲ್ಲಾಧಿಕಾರಿಗೆ ಅರ್ಜಿ ಮಾಡಿಕೊಳ್ಳ ಅವರಿಗೆ ತಿಳಿಸಲಾಯಿತು. ಆದರೆ ಈ ಒಕ್ಕಲಿಗ ಜಿಲ್ಲಾಧಿಪರಿಗೆ ಅರ್ಜಿ ಮಾಡಲಿಲ್ಲ.

(೧೨) ಹೆಚ್ಚೆಚ್ಚು ಆಹಾರ-ಧಾನ್ಯ ಬೆಳೆ ಎಂದು ಪ್ರಚಾರ ಮಾಡುವ ಅಧಿಕಾರಿಗಳು ತಗಾ ಅರ್ಜಿಗಳನ್ನು ಸಕಾಲದಲ್ಲಿ ಮತ್ತು ಔದಾರ್ಯದಿ ನಿರ್ಣಯಿಸುವದಿಲ್ಲ ಎಂದು ಮುಂತಾಗಿ ತಾ. ೧ ೭-೪೯ರ "ಕಾನಡಾ ವೃತ್ತ"ದಲ್ಲಿ ಪ್ರಕಟವಾ ದೂರನ್ನು ಸರಕಾರವು ಓದಿದೆ, ಆದರೆ ಆ ದೂ ನಿರಾಧಾರವಾದದ್ದು. ರೈತರಿಗೂ ಕಬಜೆದಾರರಿ ಈ ವರ್ಷ ಹೆಚ್ಚೆಚ್ಚು ತಗಾವಿ ಸಾಲ ಕೊಡಲಾದೆ. ಯೋಗ್ಯ ಭದ್ರತೆ ಕೊಟ್ಟವರಿಗೆಲ್ಲ ತಗ ಸಿಕ್ಕಿದೆ. ಅಂಕೋಲಾ ತಾಲೂಕಿನಲ್ಲಿ ಹಿಂದಿ ವರ್ಷ ಕೊಟ್ಟ ತಗಾವಿಯ ಮುಮ್ಮಡಿ ತಗಾ ಈ ವರ್ಷ ಕೊಡಲಾಗಿದೆ. ತಗಾವಿ ಅರ್ಜಿ ವಿಚಾರಕ್ಕೆ ವಿಶೇಷ ಪ್ರಾಶಸ್ತ್ಯ ಕೊಡಬೇಕೆಂ ಕಲೆಕ್ಟರರಿಗೆ ಸರಕಾರವು ಅಪ್ಪಣೆ ಕೊಟ್ಟದ್ದುಂಟು

ಹೋದ ವರುಷ ಬಂಜರ ಭೂಮಿಗಳನ್ನು ಸಾ ಮಾಡಿದ ರೈತರಿಗೆ ಅವನ್ನು ಈ ವರ್ಷ ಸಾಗ ಳಿಗೆ ಕೊಡಲಿಲ್ಲೆಂಬುದು ನಿಜವಲ್ಲ. ಅಂಕೋ ತಾಲೂಕಿನಲ್ಲಿ ೧೦೦೪ ಎಕರೆಗಳಷ್ಟು ಭೂ ಯನ್ನು, ಆಹಾರೋತ್ಪಾದನೆ ಹೆಚ್ಚಿಸುವ ವಿ

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.

ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲೊಜಿಂಗ

ದಿ ಶೆನರಾ ಲೊಜ

[ಊಟ ಮತ್ತು ವಸತಿಗೃಹ]

ಮೋಟರ-ಸ್ಟೆಂಡ, ಹುಬ್ಬಳ್ಳಿ.

ಮಾಲಕ:— ನ್ಯಾಕಪ್ಪಾ ಪೈ.

ಸ್ಥಾನಿಕ ವೃತ್ತಾಂತ.

ಮಟಾ— ಇಸ್ಸಾ ಮಳೆಯ ಭೀತಿಯುಂಟು ...ಲ್ಲಿ ಉಷ್ಣತೆಯುಷ್ಟ ಆಗಿಂದಾಗ ಮೋಡಗಳಾಗುತ್ತಿ ...ದರಿಂದ ಬಿಸಿಲು ಬಿದ್ದಾಗ ಒಕ್ಕಲಿಗರು ಬರಭರನೆ ...ಲು ಮಾಡುತ್ತಿದ್ದಾರೆ.

...ಟೆಯ ಸರಕಾರಿ ಜವಳಿ ಅಂಗಡಿಯು ನಡುವೆ ... ತಿಂಗಳು ಮುಚ್ಚಲ್ಪಟ್ಟಿತ್ತು. ಇತ್ತಲಾಗಿ ಅದನ್ನು ತೆರೆದಿದ್ದಾರೆ. ಗಿರಣಿ-ದರದಿಂದಲೇ ಅಲ್ಲಿ ಜವಳಿ ...ತ್ತಾರೆ. ಅಂದರೆ ಸೀಧಾ ಜವಳಿ ಅಂಗಡಿಗಳಲ್ಲಿ ... ಪರಸೆ ೫/೬ ದರಕ್ಕೆ ಮಧ್ಯಮ ಮತ್ತು ಉರುಟು ...ಸಿಗುತ್ತಿವೆ. ಆದರೂ ಈ ಜವಳಿಗೆ ಗಿರಾಕಿಯಿಲ್ಲ ...ಂದಕ್ಕೆ ೧೧-೧೨ ನೂರು ರೂ. ಗಳ ವಿಕ್ರಿ ...ರೆ ಹೆಚ್ಚು.

...ದೂರದ ಸಮೀಪದ ಹಳ್ಳಿಕೇರಿಯಲ್ಲಿ ಹಲವು ಕಾಲ ಹುಲಿಗಳು ಹಾವಳಿ ಹಾಕುತ್ತಿದ್ದವು. ೮-೧೦ ದನ ಆವುಗಳಿಗೆ ಬಲಿಯಾಗಿದ್ದವು. ಸ್ಥಾನಿಕ ಒಕ್ಕಲಿಗರು ...ಗಿ ಕಳೆದ ಗುರುವಾರ "ಮೋಲ" ಹೊಡೆದರು ... ಹುಲಿಗಳು (೧ ಗಂಡು, ೧ ಹೆಣ್ಣು) ಬಲೆಯಲ್ಲಿ ... ಒಕ್ಕಲಿಗರು ತಮ್ಮ ಸಾಧನಗಳಿಂದ ಅವನ್ನು ...ದರು ಈ ಹುಲಿಗಳು ೧೨-೧೩ ಅಡಿ ಉದ್ದ ಇದ್ದವು. ...ಡಿದರು ಒಕ್ಕಲಿಗರಿಗೆ ಈ ಸಾಹಸಕ್ಕೆ ತಕ್ಕ ಪಾರಿ...ಷಿಕ ಕೊಡುವರೆಂಬ ಭರವಸೆಯಿದೆ.

...ಲ್ಲದ ಧಾರಣೆಯು ಯೋಗ್ಯ ಮಟ್ಟದಲ್ಲಿ ಉಳಿಯ... ಬ ದೃಷ್ಟಿಯಿಂದ ಮುಂಬಯಿ ಪ್ರಾಂತದಿಂದ ಬೆಲ್ಲ ...ರ್ಗತ ಮಾಡಕೂಡದೆಂದು ಸರಕಾರವು ನಿಯಂತ್ರ...ಣವನ್ನು ಹೊರಡಿಸಿದೆ.

ಹೊನ್ನಾವರ— ಮ್ಯುನಿಸಿಪಲ್ ಚುನಾವಣೆ ಶುಕ್ರವಾರ ನಡೆಯಿತು. ಎಲ್ಲೆಲ್ಲೂ ತುರಸಿನ ಹೋರಾಟ ನಡೆಯಿತು. ಸತ್ತುಹೋದ ಕೆಲ ಮತದಾರರು ಕೂಡ ಮತಗಳನ್ನು ಹಾಕಿದ್ದಾರೆ! ಉದಾ. ೫ನೇ ವಾರ್ಡಿನಲ್ಲಿ ಮೃತ-ಮತದಾರ ತಿಮ್ಮಣ ಪರಮೇಶ್ವರ ಹೆಗಡೆ ಇವರು — ತನ್ನ ಹೆಸರಿನ, ಬೇರೂರಿನ ಬೇರೊಬ್ಬರ ಮುಖಾಂತರ — ಮತ ಹಾಕಿರುತ್ತಾರೆ!! ಈ ಬಗ್ಗೆ ಕೆಲವರು ಫೌಜದಾರಿ ಕ್ರಮ ನಡೆಸಬೇಕೆಂಬ ಹವಣಿಕೆಯಲ್ಲಿದ್ದಾರೆ.

ನಿನ್ನೆ ಮತಗಳ ಎಣಿಕೆಯಾಯಿತು. ಈ ಕೆಳಗಿನ ಹುರಿಯಾಳುಗಳು ಆರಿಸಿಬಂದಿರುತ್ತಾರೆ— ೧ ಸಾ॥ ಕುಮಟ-ಎಸ್. ಬಳ್ಳಾರಿ, ೨ ರಾ॥ ಮನೋಹರ ಶ್ರೀಪಾದ ಶೇಟ, ೩ ರಾ॥ ಎಮ್. ವಿ. ಫರ್ನಾಂಡೀಸ, ೪ ರಾ॥ ನಾರಾಯಣ ಪಾಲೇಕರ, ೫ ರಾ॥ ಗಣಪತಿ ಮಂಜನಾಥ ಶೆಟ್ಟಿ, ೬ ಶ್ರೀ॥ ಸುಸೀಮಾ ದೇಸಾಯಿ, ೭ ರಾ॥ ಉಮೇಶ ಹಳದೀಪುರ, ೮ ರಾ॥ ವೆಂಕಟೇಶ ರಾಮಚಂದ್ರ ನಾಯಕ, ೯ ಸೈಯ್ಯದ ಫಕೀರ ಸೈಯ್ಯದ ಹಕೀಮ, ೧೦ ರಾ॥ ಗೋಪಾಳ ದಾಮೋದರ ನಾಯ್ಕ, ೧೧ ರಾ॥ ಬಾಳು ನಾರಾಯಣ ಪ್ರಭು, ೧೨ ಸಾ॥ ಜಾಲಿಸನಗಿ (ಸ್ತ್ರೀಯರ ಆಸನಕ್ಕೆ ಅವಿರೋಧ), ೧೩ ರಾ॥ ಎಮ್. ಎಸ್. ಜಾಲಿಸನಗಿ, ೧೪ ರಾ॥ ಉಪ್ಪಿನ ಕೇ. ಭಟ್ಟ, ೧೫ ರಾ॥ ಶ್ರೀಪಾದ ಅಷ್ಟಗಿ ಪಾಂಡವರು.

ಜಲವಳ್ಳಿಯ ಕಾನಫೋಗರ ವಿರುದ್ಧ ಆದ ಅರ್ಜಿಗಳ ವಿಚಾರಣೆಯನ್ನು ಇಲ್ಲಿಯ ನ್ಯಾಯಾಧೀಶರು ಮಾಡಿದರು. ಆ ಕಾಲದಲ್ಲಿ ಕಾನಫೋಗರ ವಿರುದ್ಧ ಜನರು ಬಿಟ್ಟಿದ ದೂರು ಬಹುವಿರುತ್ತವೆಂದು ಕಂಡು ಬಂದಿತ್ತೆಂದು ಬಲ್ಲವರು ಹೇಳುತ್ತಾರೆ. ಆದರೂ ಕಾನಫೋಗರು ಇನ್ನೂ ಆ ಗ್ರಾಮದಲ್ಲೇ ಇದ್ದಾರ! ಅವರಿಗೆ ಬೇಗನೇ ಹೊರಹಾಕಬೇಕೆಂಬುದು ಆ ಗ್ರಾಮದವರ ಬೇಡಿಕೆಯಿದೆ.

ಶಿರ್ಸಿ— (ತಾ. ೩೦—೧೦—೪೯) ಬನವಾಸಿ-ಬದನಗೋಡ ರಸ್ತೆ ೧೩ ಮೈಲು ಉದ್ದವಿದೆ. ಬೋರ್ಡಿನವರು ಬನವಾಸಿ ಬದಿಯ ೫-೬ ಮೈಲುದ್ದ ಭಾಗವನ್ನಷ್ಟೇ ದುರುಸ್ತಿ ಮಾಡುವ ಯೋಜನೆ ಮಾಡಿದ್ದಾರೆ. ಮುಂದಿನ ಮಾರ್ಗದ ದುರುಸ್ತಿಯ ಆಲೋಚನೆಯೇ ಅವರಿಗೆ ಅನವಶ್ಯವೆಂದು ಬದನಗೋಡ ಸೀಮೆಯವರಿಗೆ ದುಃಖ ಮತ್ತು ಆಶ್ಚರ್ಯವಾಗುತ್ತಿದೆ. ಈ ಭಾಗ ಪೂರ್ಣ ಕೆಟ್ಟು ಹೋಗಿದೆ. ಆ ಭಾಗದಲ್ಲಿ ವಾಹನಗಳು ನಡೆಯುವ ಮಾತು ಒತ್ತಟ್ಟಿಗಿರಲಿ, ಜನ-ಜಾನುವಾರುಗಳು ಕೂಡ ನಿರ್ಭಯವಾಗಿ ಓಡಾಡಲಾರವು. ಈ ಭಾಗವನ್ನು ಬೋರ್ಡಿನ ಸದಸ್ಯರೂ ಅಧಿಕಾರಿಗಳೂ ನೋಡಬಲ್ಲವರಾಗಿರಬಹುದು!

ಇದನ್ನು ಪಾಂಡುರಂಗ ಕೃಷ್ಣ ಕಾನಡಿಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತನ್ನ "ಸ್ಟಾರ ಆಫ್ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ಚಂದಾ ದರ
[illegible]

Reg. No. B. 1270. Monday, 5-12-1949.

ಕಾನಡಾವೃತ್ತ

ವರ್ಷ ೩೩] THE KANARA NEWS. [ಸಂಚಿಕೆ ೨೩.

ಕುಮಟಾ:- ಸೋಮವಾರ, ತಾ ೫-೧೨-೧೯೪೯.

ಜಾಹೀರಾತುಗಳ ದರ
[illegible]

ವಿವಿಧ ವಿಷಯಗಳು

...ದೆ ನಮ್ಮ ಜಿಲ್ಲೆಯನ್ನು ಪ್ರಾಪ್ತಿಯ ಮೇಲಿನ ಕರ ಆಕರಣೆಯ ಸಂಬಂಧದಲ್ಲಿ ೨ ಭಾಗಗಳಾಗಿ ಮಾಡಿ, ಘಟ್ಟದ ಕೆಳಗಿನ ಭಾಗವನ್ನು ...ವಿಯ ಇನಕಮ್ ಟೆಕ್ಸ ಕಚೇರಿಗೂ, ಘಟ್ಟದ ಮೇಲಿನ ಭಾಗವನ್ನು ಧಾರವಾಡದೊಳಗಿನ ಇನಕಮ್-ಟೆಕ್ಸ ಕಚೇರಿಗೂ ಜೋಡಿಸಿದ್ದರು ... ಇಡೀ ಜಿಲ್ಲೆಯನ್ನು ಧಾರವಾಡ ಕಚೇರಿಗೆ ...ಡಿಸಿ, ನಮ್ಮ ಜಿಲ್ಲೆಯ ಪ್ರಾಪ್ತಿಯ ಕರದ ... ವಸೂಲಿ ಮುಂತಾದವುಗಳನ್ನು ನಿರ್ವಹಿಸ ... ರಾತರ ಇನಕಮ್-ಟೆಕ್ಸ ಒಫಿಸರ ಎಂಬ ... ಅಧಿಕಾರಿಯನ್ನು ನೇಮಿಸುತ್ತಾರೆ ನಮ್ಮ ...ಯವರ ಪ್ರಾಪ್ತಿಯ ಕರದ ಅರ್ಥಕತೆಗಾಗಿ ...ದ ಈ ಅಧಿಕಾರಿಯ ಕಚೇರಿಯನ್ನು ಜಿಲ್ಲೆಯಲ್ಲೇ ಒಂದು ಕಡೆ — ಜಿಲ್ಲೆಯ ಮಧ್ಯಸ್ಥಳವಾದ ...ಯಲ್ಲಿ ಅಥವಾ ಜಿಲ್ಲೆಯ ಮುಖ್ಯ ಸ್ಥಳವಾದ ...ರದಲ್ಲಿ ಅಥವಾ ಜಿಲ್ಲೆಯ ಘಟ್ಟದ ಮೇಲಿನ ... ಕೇಂದ್ರದಂತಿರುವ ಶಿರ್ಸಿಯಲ್ಲಿ—ಇಡದೆ ...ವನ್ನು ಧಾರವಾಡದಲ್ಲಿ ಯಾಕೆ ಇಟ್ಟಿರುವರೋ ... ಇದರ ಅಧಿಕಾರಿಯ ಕಚೇರಿಯನ್ನು ... ಜಿಲ್ಲೆಯಲ್ಲೇ ಇಟ್ಟರೆ ಸರಕಾರಕ್ಕೂ ಹಿತವಾಗು... ಪ್ರಾಪ್ತಿಯ ಕರ ತೆರುವ ಜನರಿಗೂ ಅನು...ಲವಾಗುವಂತಿದೆ. ಅಧಿಕಾರಿಯ ಕಚೇರಿ ಜಿಲ್ಲೆಯಲ್ಲೇ ಉಳಿದರೆ, ಜಿಲ್ಲೆಯ ಜನರೊಡನೆ ಈ ಅಧಿಕಾರಿಗೆ ನಿಕಟ ಪರಿಚಯ ಬೆಳೆಸಿಕೊಂಡು, ಪ್ರಾಪ್ತಿ... ಕರ ತೆರಲು ಅರ್ಹರಿರುವ ಜನರ ಪರಿಚಯ ...ವಂತಿದೆ, ಜಿಲ್ಲೆಯ ಬೇರೆ ಬೇರೆ ಜನರ ವ್ಯಾಪಾರ-ವ್ಯವಹಾರಗಳ ಪರಿಮಿತಿಯ ಜ್ಞಾನವೂ ...ವಂತಿರೆ ... ಈಗ ಪ್ರಾಪ್ತಿಯ ಕರದ ... ಅಧಿಕಾರಿಗಳ ಕಣ್ಣು ತಪ್ಪಿಸಿಕೊಂಡು ...ದ ಜನರಿಂದಲೂ ಪ್ರಾಪ್ತಿಯ ಕರ ವಸೂಲ ಮಾಡಲು ಸರಕಾರಕ್ಕೆ ಅನುಕೂಲವಾಗುವಂತಿದೆ. ...ಕ ಜನರು ಈಗ ನಮ್ಮ ಜಿಲ್ಲೆಯಲ್ಲಿ ಎಷ್ಟೋ ...ವಿ ಇದ್ದಾರೆ ನಮ್ಮ ಜಿಲ್ಲೆಯಲ್ಲಿ ಇನಕಮ್-... ಕಚೇರಿಯನ್ನು ತೆರೆದರೆ ಸರಕಾರಕ್ಕೆ ಬರಬಹು...ದ ಹೆಚ್ಚಿಗೆ ವೆಚ್ಚವು, ಕರ ತಪ್ಪಿಸಿಕೊಂಡು ಉಳಿ... ಜನರನ್ನು ಕರದ ವ್ಯಾಪ್ತಿಯಲ್ಲಿ ತಂದಲ್ಲಿ ...ವ ಹೆಚ್ಚಿನ ಆದಾಯದಿಂದ ಪರಸ್ಪರ ಸಾಗುವಂತಿದೆ. ಆದಾಂದ ಸದರಿ ಅಧಿಕಾರಿಯ ಕಚೇರಿಯನ್ನು ನಮ್ಮ ಜಿಲ್ಲೆಯಲ್ಲೇ ಒಂದು ಕಡೆ ತೆರೆ...ದರಿಂದ ಸರಕಾರಕ್ಕೆ ಏನೂ ನಷ್ಟವಾಗುವಂ... ಹೆಚ್ಚಿನ ಕರದ ಆಕರಣೆಯಾಗಿ ಲಾಭ... ಆಗುವದೆಂದೂ ಹೇಳಬಹುದು.

ಈ ಕರದ ವಿಷಯದ ನೇಮಗಳ ಯಥಾರ್ಥ ಜ್ಞಾನ ನಮ್ಮ ಜಿಲ್ಲೆಯ ವ್ಯಾಪಾರಿಗಳಿಗೆ ಇಲ್ಲ. ಆ ಜ್ಞಾನ ಮಾಡಿಕೊಳ್ಳುವಾ ಎಂದರೆ ಅವರು ಧಾರವಾಡ-ಬೆಳಗಾಂವಿಗಳಲ್ಲಿನ ಕಚೇರಿಗಳಿಗೆ ಹೋಗಬೇಕು. ... ಅಲ್ಲಿನವರೊಡನೆ ಪತ್ರ-ವ್ಯವಹಾರ ಮಾಡಬೇಕು. ಇಷ್ಟೆಲ್ಲ ಉಪಟಳವನ್ನು ಅವರು ಯಾರ ಮಾಡುವರು? ಇದೇ ಇನಕಮ್-ಟೆಕ್ಸ ಅಧಿಕಾರಿಯ ಕಚೇರಿಯು ಜಿಲ್ಲೆಯಲ್ಲೇ ಉಳಿದರೆ ಜನರು ಅವರೊಡನೆ ಸಹಜವಾಗಿ ಸಂಪರ್ಕ ಬೆಳೆಸಿಕೊಂಡು ತಮಗೆ ತಿಳಿಯದ ವಿಷಯಗಳನ್ನು ತಿಳಿದುಕೊಂಡು ಸಜ್ಞಾನರಾಗಬಲ್ಲರು. ತಮಗೆ ಬೇಕಾದ ಫಾರಮ್ ನೋಟೀಸು ಮುಂತಾದವುಗಳನ್ನು ಸುಲಭವಾಗಿ ಮತ್ತು ವಿಳಂಬವಿಲ್ಲದೆ ದೊರಕಿಸಿಕೊಳ್ಳಬಲ್ಲರು. ಹೀಗೆ ಕಚೇರಿಯನ್ನು ನಮ್ಮ ಜಿಲ್ಲೆಯಲ್ಲೇ ಇಟ್ಟರೆ ಸರಕಾರಕ್ಕೂ ಲಾಭವಿದೆ, ಜನರಿಗೂ ಲಾಭವಿದೆ. ಹಿಂದುಸ್ಥಾನ ಸರಕಾರದವರು ಈ ವಿಷಯವನ್ನು ಆಲೋಚಿಸಬೇಕಾಗಿ ಸೂಚನೆಯಿದೆ.

∴

ಇನ್ನೊಂದು ಸೂಚನೆಯೂ ಉಂಟು. ಹಿಂದೆ ೧೦-೧೧ ವರ್ಷಗಳ ಹಿಂದೆ ಬೆಳಗಾಂವಿಯ ಇನಕಮ್-ಟೆಕ್ಸ ಅಧಿಕಾರಿಗಳು ಲೆಕ್ಕ-ತಪಾಸಣೆ ಮಾಡಿ ಕರ-ನಿರ್ಧರಣ ಮಾಡುವದಕ್ಕಾಗಿ ನಮ್ಮ ಜಿಲ್ಲೆಯಲ್ಲಿ ಸಂಚಾರಕ್ಕೆ ಬಂದಾಗ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ಊರುಗಳಲ್ಲಿ ಮುಕ್ಕಾಮು ಮಾಡಿ, ಆ ಆ ತಾಲೂಕಿನವರೆಯ ಕರ ಕೊಡುವವರಿಗೆ ಆ ಆ ತಾಲೂಕಿನವರೆಯ ಕೇಂದ್ರದಲ್ಲೇ ಕರೆಯುತ್ತಿದ್ದರು. ಇದರಿಂದ ಅಧಿಕಾರಿಗಳಿಗೆ ಲೆಕ್ಕ ತೋರಿಸಲು ಜನರಿಗೆ ಬಹಳ ಅನುಕೂಲವಾಗುತ್ತಿತ್ತು. ತಪಾಸಣೆಯ ಕಾಲಕ್ಕೆ ಒಯ್ದ ಕಾಗದ-ಪತ್ರಗಳು ಇಲ್ಲವೆ ಲೆಕ್ಕದ ಪುಸ್ತಕಗಳು ಕಡಿಮೆ ಬಿದ್ದು, ತಪಾಸಣೆಯ ಅಧಿಕಾರಿಗಳಿಗೆ ಬೇರೆ ಕೆಲವು ಕಾಗದ-ಪತ್ರ ಯಾ ಲೆಕ್ಕದ ಪುಸ್ತಕಗಳು ಬೇಕಾದಲ್ಲಿ ಅವನ್ನು ಕೂಡಲೆ ತರಿಸಿಕೊಂಡು ಅವಶ್ಯವುಳ್ಳ ಎಲ್ಲ ಮಾಹಿತಿಯನ್ನು ವಿಶೇಷ ಪ್ರಯಾಸ ಇಲ್ಲದೆ ವೆಚ್ಚವಿಲ್ಲದೆ ಪೂರೈಸಲಿಕ್ಕೂ ಅನುಕೂಲವಾಗುತ್ತಿತ್ತು. ಆದರೆ ಎರಡು-ಮೂರು ವರ್ಷಗಳಿಂದ ಇನಕಮ್-ಟೆಕ್ಸ ಅಧಿಕಾರಿಗಳು ತಮ್ಮ ಮುಕ್ಕಾಮುಗಳ ಸಂಖ್ಯೆ ಕಡಿಮೆ ಮಾಡಿ ಕಾರವಾರ ಮತ್ತು ಹೊನ್ನಾವರ ಈ ಊರುಗಳಲ್ಲಷ್ಟೇ ಮುಕ್ಕಾಮು ಮಾಡುವ ಹೊಸ ಪ್ರವೆಯನ್ನು ಪ್ರಾರಂಭಿಸಿದ್ದಾರೆ! ಹೀಗೇಕೆ ಮಾಡುತ್ತೀರೆಂದು ಯಾರಾದರೂ ಕೇಳಿದರೆ "ಪ್ರವಾಸದ ಖರ್ಚನ್ನು ಉಳಿತಾಯ ಮಾಡುವದಕ್ಕಾಗಿ" ಎಂದು ಉತ್ತರ ಕೊಡುತ್ತಿದ್ದರು! "ಸರಕಾರದವರು ನಮಗೆ ಪ್ರವಾಸದ ವೆಚ್ಚ ಕಡಿಮೆ ಮಾಡಲಿಕ್ಕೆ ಆಜ್ಞಾಪಿಸಿದ್ದಾರೆ" ಎಂದೂ ಹೇಳುತ್ತಿದ್ದರು! ಈ ಮಾತು ಎಷ್ಟರ ಮಟ್ಟಿಗೆ ನಿಜವಿದೆಯೋ ನಾವರಿಯೆವು. ಒಂದು ವೇಳೆ ಇದು ನಿಜವಿರುತ್ತಿದ್ದರೆ ಸರಕಾರದವರ ಆಜ್ಞೆ ಅವಿಚಾರದ್ದಾಗುತ್ತದೆಂದು ನಾವು ಧಾರಾಳವಾಗಿ ಹೇಳಬಲ್ಲೆವು. ಇನಕಮ್-ಟೆಕ್ಸ ಅಧಿಕಾರಿಯು ಕಚೇರಿಯವರು ಕಾರವಾರ, ಹೊನ್ನಾವರಗಳ ಜೊತೆಗೆ ಕುಮಟಾ, ಅಂಕೋಲಾ, ಭಟ್ಕಳಗಳಲ್ಲೂ ಮುಕ್ಕಾಮು ಮಾಡಿದರೆ ಕಚೇರಿಯವರ ಪ್ರವಾಸದ ವೆಚ್ಚ ಹೆಚ್ಚೆಂದರೆ ಈಗ ಬರುತ್ತಿರುವ ವೆಚ್ಚಕ್ಕೂ ೩೦೦-೪೦೦ ರೂ ಹೆಚ್ಚಿಗೆ ಬರಬಹುದು. ಆ ೩೦೦ ೪೦೦ ರೂ. ಸರಕಾರಕ್ಕೆ ಉಳಿಸುವದಕ್ಕಾಗಿ ಜನರಿಗೆ ಸಾವಿರಗಟ್ಟಲೆ ರೂಪಾಯಿ ಖರ್ಚಿಗೆ ಹಾಕುವದು ಎಂದೆಂದಿಗೂ ಜಾಣತನದ್ದಾಗುವಂತಿಲ್ಲ. ಒಂದು ಉದಾಹರಣೆಯನ್ನೇ ಕೊಳ್ಳುವಾ. ಕುಮಟಾ ತಾಲೂಕಿನಲ್ಲಿ ಹಾಗೇ ನಿಲ್ಲೆಂದರೂ ೭೫-೮೦ ಮಂದಿ ಪ್ರಾಪ್ತಿಯ ಕರ ಕೊಡುವವರಿದ್ದಾರೆ. ಇವರೆಲ್ಲರೂ ಕಾರವಾರಕ್ಕೆ ಕರೆದರೆ ಅವರಿಗೆ ಎಷ್ಟು ಖರ್ಚು ಮತ್ತು ಕಷ್ಟವಾಗುತ್ತದೆಂಬುದರ ಲೆಕ್ಕ ಹಾಕಬೇಕವೇ? ಈ ೭೫-೮೦ ಮಂದಿಯ ಲೆಕ್ಕವನ್ನು ಕಾರವಾರದಲ್ಲಿ ತೋರಿಸಬೇಕು. (ಕರ ಕೊಡುವ ಬಹಳ ಮಂದಿ ಲೆಕ್ಕ ಮಾಡು

The Agricultural & Industrial Bank, Ltd.

(Established 1934)

Head Office : COONDAPOOR.

BRANCHES in all parts of Karnataka and at 384, M. Jaipuria House, Dabholkarwadi, Kalbadevi Road, Bombay 2.

The very existence of Modern Society is based on confidence and confidence can exist only where Governments, Institutions, Corporations and Individuals keep their promises and commitments

An Account with the Bank will save you a good deal of labour and correspondence We should like the privilege of serving you frequently and we assure you that a friendly and cordial welcome always awaits you at any of our offices.

Coondapoor, 9-11-49

A MADHAVA PAI, B.A., B.L., GENERAL MANAGER

ತಿಯುಳ್ಳ ಕಾರಕೂನ ಮೊದಲಾದವರನ್ನು ಜೊತೆಗೆ ಕರೆದೊಯ್ಯಬೇಕಾಗುತ್ತಿರುವದರಿಂದ) ಸುಮಾರು ೧೫೦ ಮಂದಿ ಕಾರವಾರ್‍ದ ಯಾತ್ರೆ ಮಾಡಬೇಕು. ಅವರ ವಾಹನ ವೆಚ್ಚ [illegible] ಗಾಕ್ಕೆ ಬೀಳ್ಕೊಡುತ್ತಿದೆ [illegible] ಬಿಡುಗಡೆ ಯಾಗಲು ವಿಳಂಬ [illegible] ದಲ್ಲಿ ಬಿಡಾರ ಮಾಡಬೇಕು. ಅವ [illegible] ಬೇರೆ ಇನ್ನಿತರ ಅನುಷಂಗಿಕ ವೆಚ್ಚವೂ [illegible] ಹೀಗಾಗಿ ಸರಕಾರಕ್ಕೆ ರೂ ೧೨೦—೧೫೫ ಉತ್ಪನ್ನವಾದರೆ ಕರ ಕೊಡುವ ಜನರಿಗೆ ರೂ ೧೦೦೦ಕ್ಕೆ ಮೇಲ್ಪಟ್ಟು ಅನವಶ್ಯಕ ಖರ್ಚು ಬರುತ್ತಿದೆ! ಸರಕಾರವು ಜನರ ಮೇಲೆ ಈ ಅಪ್ರತ್ಯಕ್ಷ ಕರದ ಭಾರವನ್ನು ಹೊರಿಸುವದು ಯಾಕ್ಕವೇನೆಂಬುದರ ವಿಚಾರವನ್ನೂ ಸರಕಾರವು ಮಾಡಬೇಕಾಗಿ ಅರಿಕೆಯುಂಟು.

* * *

ಈ ವರ್ಷ ಧಾರವಾಡದೊಳಗಿನ ಹೊಸ ಅಧಿಕಾರಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕರ ಕೊಡುವ ಜನರಿಗೆ ಲೆಕ್ಕ ತಪಾಸಣೆಗಾಗಿ ಲೆಕ್ಕದ ಪುಸ್ತಕಗಳನ್ನು ಸಹಿತ ಧಾರವಾಡಕ್ಕೇ ಕರೆಯಲಾರಂಭಿಸಿದ್ದರಿಂದ ಅಂಕೋಲೆಯಿಂದ ಸಕ್ಷ್ [illegible] ಬಂದಿವೆ! ಈ ಪ್ರಥೆ ಮುಂದರಿದರೆ ಕುಮಟೆಯ ಕರ ಕೊಡುವವನಿಗೆ ಧಾರವಾಡಕ್ಕೆ ಹೋಗಿ ಬರಲು ರೂ ೩೦ [illegible] ವೆಚ್ಚ ಬರುವದು ಧಾರವಾಡಕ್ಕೆ ಹೋಗಲು ೧ ದಿನ [illegible] ತೋರಿಸಲು ೧ ದಿನ (ಅಂತಹ ಪ್ರಸಂಗವಿದ್ದರೆ ಈ ಅವಧಿ ಬೆಳೆಯಲೂ ಬಹುದು!) ಮತ್ತು ಧಾರವಾಡದಿಂದ ತಿರುಗಿ ಮನೆಗೆ ಬರಲು ೧ ದಿನ ಹೀಗೆ ಕನಿಷ್ಠ ೩ ದಿನ ವ್ಯಾಪಾರ-ಉದ್ಯೋಗವಿಲ್ಲದೆ ಪ್ರವಾಸದಲ್ಲೋ ಪರಸ್ಥಳದಲ್ಲೋ ಕಳೆಯಬೇಕಾಗುವದು! ನಮ್ಮಲ್ಲಿ ಕರ ಕೊಡುವ ಹೆಚ್ಚಿನ ಜನರು ತೆರಬೇಕಾದ ಕರ ರೂ ೧೦ [illegible] ಸುತ್ತಮುತ್ತ ಇರುತ್ತದೆ ಈ ಕರದ ಜೊತೆಗೆ ಅವರು ಧಾರವಾಡ-ಯಾತ್ರೆಯ ವೆಚ್ಚಕ್ಕಾಗಿ ೩೦-೩೫ ರೂ ತೆರಬೇಕಾಗುವದು ೩ ದಿನ ಉದ್ಯೋಗ ವ್ಯವಹಾರವಿಲ್ಲದೆ ಕಳೆಯಬೇಕಾಗುವದೂ ವಿಚಾರದ ಮಹತ್ವದ್ದೆಂಬುದರ ವಿಚಾರವನ್ನು ಸರಕಾರವು ಮಾಡಬೇಕು ಇನಕಮ್ ಟೆಕ್ಸ ಅಧಿಕಾರಿಗಳು ಇತ್ತಲಾಗಿ, ೧ ಅಥವಾ ೨ ವರ್ಷಗಳ ಅಭ್ಯಾಸದಿಂದ, ಕರ ಕೊಡಲು ಅರ್ಹರಿರುವ ಎಷ್ಟೋ ಜನರಿಗೆ ಉತ್ಪನ್ನದ ಪತ್ರಿಕೆ ಕಳಿಸಿಕೊಡಲು ಆಜ್ಞಾಪಿಸಿದ್ದಾರೆ ಲೆಕ್ಕದ ತಪಾಸಣೆಯಲ್ಲಿ ಅವರ ಉತ್ಪನ್ನ ಕರ-ಆಕರಣೆಗೆ ಪಾತ್ರವಿಲ್ಲೆಂದು ನಿರ್ಣಯ ವಾಗುವಂತಿದೆ ಆದರೆ ಈ ನಿರ್ಣಯವನ್ನು ಪಡೆಕೊಳ್ಳಲು ಆ ಜನರು ಅನವ್ಯಯ ಖರ್ಚು ಮಾಡಿ ಧಾರವಾಡ ಯಾತ್ರೆ ಮಾಡಬೇಕು! ಇಲ್ಲದಿದ್ದರೆ ಇನಕಮ್ ಟೆಕ್ಸ ಅಧಿಕಾರಿಗಳು ಅವರ ಪರೋಕ್ಷ ಮನಸ್ವಿ ಉತ್ಪನ್ನ ಹಿಡಿದು ಕರ-ಆಕರಣೆ ಮಾಡುವರು! ಇಂತಹ ಜನರಿಗೆ ಧಾರವಾಡ ಯಾತ್ರೆಯ ಭೂರ್ದಂಡ ತೆರಲು ಒತ್ತಾಯಪಡಿಸುವದು ನ್ಯಾಯ [illegible] ಗಳಿಗೆ ಒಪ್ಪುತ್ತದೆಯೇ? ಹಿಂದಿನ ಪರಕೀಯ ಸರಕಾರವು ಜನರಿಗೆ ನೀಡುತ್ತಿದ್ದ ಸೌಕರ್ಯ-ಸೌಲಭ್ಯಗಳು ಈಗ ಜನತಾ-ಸರಕಾರ ರಾಜ್ಯದಲ್ಲಿ ಹೋಗಿ ಹೊಂದುತ್ತಿರುವದೂ, ಜನರಿಗೆ ವಿನಾಕಾರಣ ಕಷ್ಟ ನಷ್ಟಗಳಾಗುತ್ತಿರುವದೂ ಒಂದು ವಿಧಿ-ವಿಲಾಸವಲ್ಲವೇ?

* * *

ಇನಕಮ್ ಟೆಕ್ಸ ಅಧಿಕಾರಿಗಳ ನಡತೆಯಂತೆಯೇ ಇತ್ತೀಚೆಗೆ ನಮ್ಮಲ್ಲಿಯ ಕೆಲವು ಅಧಿಕಾರಿಗಳ ನಡತೆಯಾಗಿದೆ ಜಿಲ್ಹಾಧಿಪರೂ ಪ್ರಾಂತ ಸಾಹೇಬರೂ ವರ್ಷದ ೮ ತಿಂಗಳು ಜಿಲ್ಹೆಯಲ್ಲಿ ಸಂಚಾರ ಮಾಡತಕ್ಕವರು ಬೇಕೆಂಬುದೊಂದು ನಿಯಮವುಂಟು ಜಿಲ್ಹೆಯ ಜನರೊಡನೆ ಸಂಪರ್ಕ ಬೆಳಸಿಕೊಂಡು, ಅಲ್ಲಲ್ಲಿಯ ಪ್ರತ್ಯಕ್ಷ ಪರಿಚಯವನ್ನು ಈ ಅಧಿಕಾರಿಗಳು ಮಾಡಿಕೊಳ್ಳಬೇಕೆಂಬುದೊಂದು ಈ ನಿಯಮದ ಮೂಲ ಉದ್ದೇಶ ಅಲ್ಲಲ್ಲಿಯ ಪ್ರಕರಣಗಳನ್ನು ಅಲ್ಲಲ್ಲೇ — ಆಯಾ ಗ್ರಾಮ-ಪಟ್ಟಣಗಳ ಸಮೀಪದಲ್ಲೇ — ವಿಚಾರಿಸಬೇಕು, ಪ್ರಕರಣಗಳಿಗೆ ಸಂಬಂಧಪಟ್ಟ ಪಕ್ಷಗಾರ-ಸಾಕ್ಷಿಗಾರರಿಗೆ ಉದ್ಭವಿಸುವ ಪ್ರವಾಸದ ಕಷ್ಟನಷ್ಟಗಳನ್ನು ಸಹಿಸಬೇಕಾಗದ ಎಂಬುದೂ ಇನ್ನೊಂದು ಅಷ್ಟೇ ಮಹತ್ವದ ಉದ್ದೇಶ [illegible] ಗೊಳಿಸಿದ ನಿಯಮದ್ದಿರುತ್ತದೆ ಅಧಿಕಾರಿಗಳು ಈಗ ಈ ಉದ್ದೇಶವನ್ನು ಸಂಪೂರ್ಣ ಮರೆತಿದ್ದಾರೆ! ಸಿದ್ದಾಪುರದ ಪ್ರಕರಣಗಳನ್ನು ಕುಮಟಾದಲ್ಲಿ, ಕಾರವಾರದವರನ್ನು [illegible] ದಲ್ಲಿ, ಹಳಿಯಾಳದವರನ್ನು ಭಟ್ಕಳದಲ್ಲಿ ವಿಚಾರಿಸುತ್ತಿದ್ದವರು ಜನರನ್ನು — ಬುದ್ಧಿಪೂರ್ವಕವಾಗಿ ಇಲ್ಲದಿದ್ದರೂ ನಿರ್ಲಕ್ಷದಿಂದ — ದಣಿಸುತ್ತಿದ್ದಾರೆ! ಕಳೆದ ಜೂನ ತಿಂಗಳ ಎರಡನೇ ವಾರದಲ್ಲಿ ಸಿದ್ದಾಪುರದೊಳಗೆ ಶಿರ್ಸಿ ವಿಭಾಗದ ಪ್ರಾಂತ ಸಾಹೇಬರ ಮುಂದೆ ಗೋಕರ್ಣದ ಒಂದು ಖಟ್ಲೆಯ ವಿಚಾರಣೆ ನಡೆದಿತ್ತಂತೆ ಆ ಖಟ್ಲೆಯಲ್ಲಿ ಗೋಕರ್ಣದ ೬-೭ ಜನ [illegible] ಸಾಕ್ಷಿದಾರರಿದ್ದರು ಈ ಸಾಕ್ಷಿ ಕೊಡಲು ಅವರು ಖಟ್ಲೆ ವಿಚಾರಕ್ಕಿಟ್ಟ ದಿವಸದ ೩-೪ ದಿನ ಮೊದಲೇ — ಮೋಟಾರಿನಲ್ಲಿ ಈ ಬಡ ಜನರಿಗೆ ಸ್ಥಳ ಸಿಗುವದು ಕಠಿಣ ವಾಗುತ್ತಿದ್ದುದರಿಂದ — ಗೋಕರ್ಣದಿಂದ ಹೊರಡಬೇಕು! ಮತ್ತು ಸಾಕ್ಷಿ ಮುಗಿದ ೩-೩ ದಿನಗಳ ನಂತರ ತಮ್ಮ ತಮ್ಮ ಮನೆ ಮುಟ್ಟಬೇಕು! ಜೂನ ತಿಂಗಳ ೨ನೇ ವಾರ ಬೇಸಾಯದ ದೊಡ್ಡ ಹಂಗಾಮು ಇಂತಹ ಹಂಗಾಮಿನಲ್ಲಿ ಆ ಗೌಡರಿಗೆ ೬-೮ ದಿನ ತಮ್ಮ ಹೊಲಗದ್ದೆಗಳನ್ನು ಬಿಟ್ಟು ಸಿದ್ದಾಪುರ-ಯಾತ್ರೆ ಮಾಡಹಚ್ಚಿದುದು ಯುಕ್ತವಿರುತ್ತದೆಯೇ? ಮೇಲಾಗಿ ಸರಕಾರಕ್ಕೂ ಇದರಲ್ಲಿ ನಷ್ಟವಿದೆ ಆ ಸಾಕ್ಷಿಗಾರರ ದೀರ್ಘ ಪ್ರವಾಸದ ವೆಚ್ಚ ಮತ್ತು ೬-೮ ದಿನಗಳ ಹೊಟ್ಟೆಯ ವೆಚ್ಚ ಸರಕಾರವು ತೆರಬೇಕಾಯಿತು! ಕಳೆದ ತಿಂಗಳ ಪ್ರಾರಂಭಕ್ಕೆ ಇದೇ ಪ್ರಾಂತ ಸಾಹೇಬರು ಕುಮಟಾ ತಾಲೂಕಿನ ಕೆಲವು ವಹಿವಾಟ ದಾವೆಗಳ ಅಪೀಲುಗಳನ್ನು ಭಟಕಳದಲ್ಲಿ ವಿಚಾರಕ್ಕಿಟ್ಟಿದ್ದರಂತೆ! ಅದೂ ಸುಗ್ಗಿ-ಹಬ್ಬದ ಸಮಯದಲ್ಲಿ! ಇವು ಬರೇ ಉದಾಹರಣೆಗಳಾಗಿವೆ ಅಪವಾದ-ಭೂತ ಸಂಗತಿಗಳಲ್ಲ ಸರಕಾರದವರೂ ಅಧಿಕಾರಿಗಳೂ ಇತ್ತ ಗಮನ ಕೊಟ್ಟು, ಖಟ್ಲೆಗಳನ್ನಾಗಲಿ ಬೇರೆ ಬಗೆಯ ಪ್ರಕರಣಗಳನ್ನಾಗಲಿ ವಿಚಾರಕ್ಕಿಡುವಾಗ ಪಕ್ಷಗಾರ-ಸಾಕ್ಷಿಗಾರರಿಗೆ ಅನವಶ್ಯಕ ತೊಂದರೆ, ಖರ್ಚು ಮತ್ತು ಕಷ್ಟಗಳಾಗದಂತೆ ನೋಡಿಕೊಳ್ಳಬೇಕಾಗಿ ಸೂಚನೆಯಿದೆ ಅಲ್ಲಲ್ಲಿಯ ಪ್ರಕರಣಗಳನ್ನು ಶಕ್ಯವಿದ್ದಷ್ಟರಮಟ್ಟಿಗೆ ಅಲ್ಲಲ್ಲೇ ವಿಚಾರಕ್ಕಿಡುವ ನೇಮವನ್ನು ಅವರು ಇಟ್ಟುಕೊಳ್ಳಬೇಕು

* * *

ಕಳೆದ ಮಂಗಳವಾರ ಜಿಲ್ಹಾಧಿಪರ ಕಚೇರಿಯಲ್ಲಿ ಸೇರಿದ ಪತ್ರಿಕಾ-ಪ್ರತಿನಿಧಿಗಳೆದುರು ಜಿಲ್ಹಾಧಿಪರು ಜಿಲ್ಹೆಯೊಳಗಿನ ಆಹಾರ-ಪರಿಸ್ಥಿತಿಯನ್ನು ವಿವರಿಸುತ್ತ, ಜಿಲ್ಹೆಯಲ್ಲಿ ಸರಕಾರದ ಕಡೆ ೨೧೬೯ ಟನ್ ಅಕ್ಕಿ, ೩೧೪ ಟನ್ನು ಗೋದಿ, ೩೦೫ ಟನ್ನು ಜೋಳ, ೩೩೩ ಟನ್ನು ಮರಾಯಿ ಮತ್ತು ೧೬ ಟನ್ನು ಕಡ್ಲೆ-ಕಡ್ಲೆಬೇಳೆಗಳುಂಟೆಂದೂ, ೧೦೦ ಟನ್ನು ಗೋದಿ ಇದೀಗ ಬಂದಿದೆಂದೂ ಇನ್ನೂ ೫೦೦ ಟನ್ನು ಬರಲಿದೆಂದೂ, ೩೦೦ ಟನ್ನು ಜೋಳ ವಿಜಾಪುರದಿಂದ ಬರಲಿದೆಂದೂ, ಮುಂಬಯಿಯಿಂದ ೩೦೦ ಟನ್ನು ಕಡ್ಲೆ ಮತ್ತು ೩೦೦ ಟನ್ನು ಕಡ್ಲೆಬೇಳೆ ಬರಲಿವೆಂದೂ ಹೇಳಿದರು ಸರಕಾರದ ಕಡೆ ಮೇಲಿನಂತೆ ಶಿಲ್ಕು ಇರುವ ಅಕ್ಕಿಯಲ್ಲಿ ೧೧೫೦ ಟನ್ನು ಅಕ್ಕಿ ಮಾತ್ರ ಇಲ್ಲಿ ಖರ್ಚಾಗದೆ ಬಿದ್ದಿರುವ ೩೩೦ ಟನ್ನು ಮರಾಯಿಯನ್ನು ರಫ್ತಾಗಿ ಕಳಿಸಿಕೊಡಲು ಪ್ರಾಂತಿಕ ಸರಕಾರದ ಅಪ್ಪಣೆಯಾಗಿದೆ. ಆದರಿಂದ ನಮ್ಮಲ್ಲೀಗ ಅಂತು ೫೧೯೯ ಟನ್ನು (= ಸುಮಾರು ೧॥ ಲಕ್ಷ ಮಾನಗಿ) ಅಕ್ಕಿ ೨೧೪ ಟನ್ನು ಗೋದಿ, ೫೦೫ ಟನ್ನು ಜೋಳ ಇಷ್ಟು ಸೀಧಾ-ಧಾನ್ಯಗಳ ಸಂಗ್ರಹವುಂಟೆಂದೂ ಗೃಹೀತಹಿಡಿದು ನಡೆಯಬಹುದು ಇದರೊಳಗಿಂದ ಪ್ರತಿ ತಿಂಗಳು ೧೫೦೦ ಟನ್ನು ಅಕ್ಕಿ, ೩೬೦ ಟನ್ನು ಗೋದಿ ಮತ್ತು ೩೬೦ ಟನ್ನು ಜೋಳ ಸೀಧಾ-ಅಂಗಡಿಗಳ ಮುಖಾಂತರ ಹಂಚಲ್ಪಡುತ್ತಿವೆ. ಈ ಲೆಕ್ಕದಂತೆ ಅಕ್ಕಿಯ ಸಂಗ್ರಹ ಫೆಬ್ರುವರಿ ಮಧ್ಯದ ವರೆಗೆ, ಗೋದಿ-ಜೋಳಗಳ ಸಂಗ್ರಹ ಜನವರಿ ಮಧ್ಯದ ವರೆಗೆ ಸಾಕಾಗುವಂತಿವೆ ಆಹಾರ-ಧಾನ್ಯಗಳ ಜೊತೆಗೆ ಗೆಣಸನ್ನು ಪೂರೈಸಬೇಕೆಂದು ಸರಕಾರದ ಸಂಕಲ್ಪವಾಗಿದೆ. ಗೆಣಸು ಕಳಿಸಲು ಬೇಗಾರಂಭಿಸಿ ಒರೆಸು ಸಹ ಹೋಗಿದಯಂತೆ ಎಲ್ಲ ಸೀಧಾ ಅಂಗಡಿಗಳಲ್ಲಿ ಇವನ್ನು ಮಾರಾಟಕ್ಕೆ ಇಡಲಾಗುವದು ದರ ರತ್ತಲ ೧ಕ್ಕೆ ೩ ಬಿಲ್ಲೆ ಜನರು ಗೆಣಸಿನ ಉಪಯೋಗ ಮಾಡಿ ಆಹಾರ-ಧಾನ್ಯಗಳ ಉಳಿತಾಯ ಮಾಡಬೇಕಾಗಿ ಜಿಲ್ಹಾಧಿಪರು ಬಿನ್ನವಿಸಿದ್ದಾರೆ

* * *

THE BANK OF RURAL INDIA LTD.

(Incorporated in British India, Liability of Members limited)

HEAD OFFICE — "Satyabhama Bhavan", KARWAR. N. K.

Offices at — KARWAR, KUMTA SIRSI, HONAVAR, YELLAPUR, BHATKAL SIDDAPUR, ANKOLA, HUBLI & DHARWAR

Authorised Capital . Rs 10,00,000
Subscribed Capital . Rs 5,00,000
Paid-up Capital & Reserves . Rs. 5,08,502-8-0

Rates of Interest on Deposits.

Current a/c @ 1% p. a. Savings Bank a/c @ 2½%
Fixed Deposits for 3 months @ 3% per annum.
" " for 6 months @ 3½%
" " for 12 months or more @ 4% "

All kinds of modern Banking business transacted

Karwar, 14-2-1948

P X GRACIOUS
MANAGING DIRECTOR

ಸೇವಾನಿವೃತ್ತ ಜನರಿಗೆ ಸೇವಾನಿವೃತ್ತಿ ವೇತನ ದೊರೆಯುವದರಲ್ಲಿ ವಿಳಂಬವಾಗುತ್ತಿದೆಂಬುವೊಂದು ದೂರು ಸರಕಾರದ ಕಿವಿಯ ಮೇಲೆ ಬಿದ್ದುದರಿಂದ, ಸೇವಾನಿವೃತ್ತಿಯನ್ನು ಮಂಜೂರಿಸುವ ಅಧಿಕಾರಿಗಳ ಕರೆಯ ಕಾಗದ-ಪತ್ರಗಳನ್ನು ಅವರು ಸೇವಾ ನಿವೃತ್ತರಾಗುವ ದಿನದ ೬ ತಿಂಗಳು ಮುಂಚೆನಿಂದಲೇ ಒಪ್ಪಿಸಿ ಮತ್ತು ಅವಶ್ಯವಿದ್ದ ಮಾಹಿತಿಪತ್ರಿಕೆಗಳನ್ನು ತಯಾರಿಸಿ ಮುಂಬಯಿಯಲ್ಲಿರುವ ಸರಕಾರಿ ಲೆಕ್ಕ-ರಕ್ಷಕ (ಎಕೌಂಟ್ಸ ಆಫೀಸ) ಕಚೇರಿಗೆ ಕಳಿಸಬೇಕಾಗಿಯೂ, ಪ್ರತಿಯೊಬ್ಬ ಸೇವಾನಿವೃತ್ತ ನೌಕರನಿಗೆ ನಿವೃತ್ತಿಯ ಮರುದಿನದಿಂದಲೇ ನಿವೃತ್ತಿ ವೇತನ ಸಿಗಲಾರಂಭಿಸುವಂತೆ ಜೋಕೆ ವಹಿಸಬೇಕೆಂದೂ ಸರಕಾರವು ಕೆಲ ಕಾಲ ಹಿಂದೆ ಒಂದು ಆಜ್ಞಾಪತ್ರವನ್ನು ಹೊರಡಿಸಿತ್ತು. ಆದರೆ ಈ ಆಜ್ಞಾಪತ್ರದ ಇಷ್ಟ ಪರಿಣಾಮ ಇನ್ನೂ ಸೇವಾನಿವೃತ್ತ ನೌಕರರಿಗೆ ನಿವೃತ್ತಿ ವೇತನ ನಗದಾಗಿ ಮತ್ತು ಮಂಜೂರಾಗಿ ಬರಬೇಕಾದ ತಿಂಗಳುಗಟ್ಟಲೆಯಲ್ಲ, ವರ್ಷಗಟ್ಟಲೆ ಕಳೆಯುತ್ತಿದೆಂಬ ದೂರು ಅಲ್ಲಲ್ಲಿ ಕೇಳಿಬರುತ್ತದೆ! ಸಿದ್ದಾಪುರದಲ್ಲಿ ಶಿರಸ್ತೇದಾರರಾಗಿದ್ದ ರಾ|| ಸಿದ್ದೇಶ್ವರಿಯವರು ೧೯೪೮ನೇ ಇಸವಿಯ ಜುಲೈ ತಿಂಗಳಲ್ಲಿ ಸೇವಾನಿವೃತ್ತರಾಗಿದ್ದರು. ಅವರ ನಿವೃತ್ತಿ-ವೇತನ ಇನ್ನೂ ಮಂಜೂರಾಗಿ ಬಂದಿಲ್ಲವಂತೆ! ಅವರು ಅರ್ಜಿಗಳ ಮೇಲೆ ಅರ್ಜಿಗಳನ್ನು ಮಾಡುತ್ತಿದ್ದಾರೆ. ಈ ಅರ್ಜಿಗಳಿಗೆ "ಚೌಕಶಿ ನಡೆದಿದೆ" "ಲೆಕ್ಕಾಚಾರ ತಯಾರಾಗಿದೆ ಬೇಗನೆ ನಿಮ್ಮ ನಿವೃತ್ತಿ-ವೇತನ ಪತ್ರ ಕಳಿಸಲಾಗುತ್ತದೆ" ಎಂದು ಮುಂತಾಗಿ ಉತ್ತರಗಳು ಬರುತ್ತಿವೆಯೇ ವಿನಹ ಮಂಜೂರಾದ ನಿವೃತ್ತಿ-ವೇತನ ಪತ್ರ ಇನ್ನೂ ಬರುವದಿಲ್ಲ! ಅದೇ ಮೇರೆಗೆ ಸಿದ್ದಾಪುರದಲ್ಲಿ ಸರ್ಕಲ್ ಇನ್ಸಪೆಕ್ಟರರಾಗಿದ್ದ ರಾ|| ...ಕರ ಇವರು ಕಳೆದ ಮೇ ತಿಂಗಳಲ್ಲಿ ನಿವೃತ್ತರಾಗಿದ್ದರು. ಅವರಿಗೂ ನಿವೃತ್ತಿ-ವೇತನ ಮಂಜೂರಾಗಿ ಬಂದಿಲ್ಲ! ನಿವೃತ್ತಿ-ವೇತನದ ಲೆಕ್ಕಾಚಾರವಾಗುವ ವರೆಗೆ ಮಧ್ಯಂತರದಲ್ಲಿ, ಸೇವಾನಿವೃತ್ತ ನೌಕರರಿಗೆ ಅಡಚಣೆ ಮತ್ತು ಕಷ್ಟವಾಗಬಾರದೆಂಬ ದೃಷ್ಟಿಯಿಂದ, ತಾತ್ಕಾಲಿಕವಾಗಿ ಒಂದು ಅಂದಾಜು ನಿವೃತ್ತಿ-ವೇತನದ ಅಂಕೆಯನ್ನು ಲೆಕ್ಕ-ರಕ್ಷಕರ ಕಚೇರಿಯವರು ತಿಳಿಸಿ, ಅದರಂತೆ ನಿವೃತ್ತಿ-ವೇತನ ಕೊಡಿಸುವ ವ್ಯವಸ್ಥೆ ಮಾಡಿಸಬಹುದಿತ್ತು. ರಾ|| ...ರವರಿಗೆ ಅಂಥಹ ವ್ಯವಸ್ಥೆಯನ್ನೂ ಮಾಡಿಸಿ ಕೊಟ್ಟಿಲ್ಲವಂತೆ! ಇದೆಲ್ಲ ನೋಡಲಾಗಿ ಸರಕಾರಿ ಲೆಕ್ಕ-ರಕ್ಷಕರ ಕಚೇರಿಯಲ್ಲಿ ಮತ್ತೆ ತಲೆಯ ಪೆಟ್ಟರೇ ಹೆಚ್ಚಾಗಿರಬೇಕೆಂಬವೊಂದು ಸಂಶಯ ಬರುತ್ತಿದೆ. ಸರಕಾರದವರು ಈ ಕಚೇರಿಯನ್ನು ಕೂಡಲೇ ಸ್ವಚ್ಛಗೊಳಿಸುವ ಮತ್ತು ತತ್ಪರತೆಯಿಂದಲೂ ದಕ್ಷತೆಯಿಂದಲೂ ಕಾರ್ಯ ಮಾಡುವ ಜನರಿಂದ ಅದನ್ನು ತುಂಬುವ ವ್ಯವಸ್ಥೆ ಮಾಡಬಹುದು.

* *

ಮುಂಬಯಿ ಸರಕಾರವು ಇತ್ತಲಾಗಿ ಮುಂಬಯಿ, ಅಹಮದಾಬಾದ, ಪುಣೆ ಮೊದಲಾದ ದೊಡ್ಡ ನಗರಗಳಲ್ಲಿ ಸಾವಿರಾರು ಮನೆಗಳನ್ನು ಕಟ್ಟಿಸಿ ಅಲ್ಲಿಯ ಜನರಿಗೆ ವಾಸ್ತವ್ಯದ ಸ್ಥಳಗಳ ಕೊರತೆಯಿಂದಾಗುತ್ತಿರುವ ಕಷ್ಟಗಳನ್ನು ಪರಿಹರಿಸುವ ಮಹೋದ್ಯೋಗವೊಂದನ್ನು ಕೈಕೊಂಡಿದೆ. ಈ ಬಗ್ಗೆ ಒಂದು ವಿಶೇಷ ಖಾತೆಯನ್ನೂ ತಿಬಂದಿಯನ್ನೂ ನೇಮಿಸಿದೆಯಲ್ಲದೆ ಮನೆ ನಿರ್ಮಿತಿಯ ಈ ಯೋಜನೆಗಳಿಗೆ ಕೋಟ್ಯಾವಧಿ ರೂಪಾಯಿಗಳ ವೆಚ್ಚ ಬರುವದು. ಈ ಉದ್ಯೋಗದೊಡನೆಯೇ ಸರಕಾರವು ತಮ್ಮ ಪ್ರಾಂತದೊಳಗಿನ ತಮ್ಮ ಕೆಲವೊಂದು ವರ್ಗಗಳ ನೌಕರರಿಗೆ ವಸತಿಯ ಸ್ವತಂತ್ರ ಸೌಕರ್ಯಗಳನ್ನು ಒದಗಿಸಿಕೊಡುವ ಉದ್ಯೋಗವನ್ನು ಕೈಕೊಂಡಿದ್ದು ಬಹಳ ಒಳ್ಳೆಯದಾಗುತ್ತಿತ್ತು. ಯಂತ್ರೋತ್ಪಾದನ ಪ್ರಸಂಗ ನಿಯೋಜನೆಗಳಲ್ಲಿ ಈ ಉದ್ಯೋಗವನ್ನೂ ಸೇರಿಸಿ ಇದಕ್ಕೆ ವಿಶೇಷ ಪ್ರಾಶಸ್ತ್ಯ ಕೊಟ್ಟರಂತೂ ಉತ್ತಮವಾಗುತ್ತಿತ್ತು. ಇತ್ತಲಾಗಿ ಮುಂಬಯಿಯಂತೆ ಚಿಕ್ಕ ಪುಟ್ಟ ನಗರಗಳಲ್ಲೂ ಮನೆಗಳ ಕೊರತೆಯಾಗಿದೆ. ಹುಬ್ಬಳ್ಳಿಯ ಉದಾಹರಣೆಯನ್ನೇ ತೆಗೆದುಕೊಂಡರೆ ಸುಮಾರಾಗಿ ಯಲ್ಲಿಗೆ ವಸತಿಯ ಸ್ಥಳಗಳು ಸಿಗಬೇಕಾದರೆ ಬಹಳ ಕಷ್ಟವಾಗುತ್ತಿದೆ. ಸರಕಾರಿ ನೌಕರರ ಸಂಖ್ಯೆ ಈಗ ಹಿಂದಿನ ಸಂಖ್ಯೆಯ ಇಮ್ಮಡಿಯಾಗಿದೆ. ಅವರಿಗೆ ಬಿಡಾರ ಮಾಡಲಿಕ್ಕೆ ಮನೆಗಳಿಲ್ಲ. ಮನೆಯು ಸಿಗಲು ಸಹ ಸಿಗುವದು ಕಠಿಣವಾಗಿದೆ! ಆದರಿಂದ ವರ್ಗವಾಗಿ ಬರುತ್ತಿರುವ ಎಷ್ಟೋ ಸರಕಾರಿ ನೌಕರರು ಬಿಡಾರ ಮಾಡಲಿಕ್ಕೆ ಎಷ್ಟೋ ಕಾಲ ಧರ್ಮಶಾಲೆಗಳಲ್ಲಿ, ಪಾನಶಾಲೆಗಳಲ್ಲಿ ಉಳಿಯುತ್ತಾರೆ. ಈ ಮತ್ತು ಮನೆಗಳಲ್ಲಿ ಹೆಚ್ಚು ಬಾಡಿಗೆ ಕೊಟ್ಟು ವಸತಿಯ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ! ತನ್ನ ಸ್ವಂತ ನೌಕರರಿಗೆ ಉಂಟಾಗುತ್ತಿರುವ ಈ ಕಷ್ಟ ತೊಂದರೆಯನ್ನು ಪರಿಹರಿಸುವ ಹೊಣೆ ಸರಕಾರದ ಮೇಲಿಲ್ಲವೇ? ಸರಕಾರಿ ನೌಕರರಿಗಾಗಿ ಮನೆಗಳನ್ನು ಇಲ್ಲವೆ "ಚಾಳ"ಗಳನ್ನು ಕಟ್ಟಿಸುವ ಈ ಕಾರ್ಯವು ಒಂದು ಮಹೋದ್ಯೋಗವೆನ್ನುವದೇನು? ಅದಕ್ಕೆ ಲಕ್ಷ ಗಟ್ಟಲೆ ರೂಪಾಯಿಯ ವೆಚ್ಚ ಬರುವದೆಂಬುದೂ ನಿಜ. ೧೦-೨ ವರ್ಷಗಳಲ್ಲಿ ಈ ಕಾರ್ಯ ಪೂರ್ತಿಯಾಗುವಂತೆ ಇಲ್ಲೆಂಬುದೂ ಒಪ್ಪಿಗೆ. ಆದರೆ ಈಗಲೇ ಈ ಯೋಜನೆಯನ್ನು ಕೈಕೊಂಡು ಅದರ ಪ್ರಾರಂಭವನ್ನು ಮಾಡಬಹುದಲ್ಲವೇ? ತಾಲೂಕಿನ ಸ್ಥಳಗಳ ಕೇಂದ್ರಗಳಲ್ಲಿ ಮುಖ್ಯ ಮುಖ್ಯ ಅಧಿಕಾರಿಗಳಿಗಾಗಿ ಮತ್ತು ಹಳ್ಳಿಗಳಲ್ಲಿ ಕಾರಭಾರಿಗಳಿಗಾಗಿ ಮನೆಗಳನ್ನು ಕಟ್ಟಿಸುವ ಯೋಜನೆಯನ್ನು ಸರಕಾರದವರು ಪ್ರಥಮತಃ ಮತ್ತು ಕೂಡಲೆ ಕೈಕೊಳ್ಳಬೇಕಾಗಿ ವಿನಂತಿ ನಮ್ಮ ಸೂಚನೆಯಿದೆ. ಮುಖ್ಯ ಮುಖ್ಯ ಅಧಿಕಾರಿಗಳು ಈಗ ತಮ್ಮ ವಾಸ್ತವ್ಯಕ್ಕಾಗಿ ಖಾಸಗಿ ಮಾಲೀಕರ ಮನೆಗಳನ್ನು ಬಾಡಿಗೆಯಿಂದ ಹಿಡಿದು ಅಲ್ಲಿ ಅವರಿಗೆ ಬೇಕಾದ ಸೌಕರ್ಯಗಳು ಇರುತ್ತವೆಂಬ ನೇಮವಿಲ್ಲ. ಆ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಅವರು "ಮನೆಯೊಡೆಯ"ನ ಕಡೆ ಪ್ರಾರ್ಥನೆ ಮಾಡಿಕೊಳ್ಳಬೇಕಾಗುತ್ತದೆ. ಅದರಿಂದ ಅಧಿಕಾರಿಗಳಿಗೆ ಆ ಮನೆಯೊಡೆಯನ ಹಂಗು ಉಂಟಾಗುತ್ತದೆ. ಈ ಹಂಗಿನಿಂದಾಗಿ ... ನ್ಯಾಯದಾನದಲ್ಲಾಗಲಿ ನಿಷ್ಪಕ್ಷಪಾತ ... ಗಳಲ್ಲಾಗಲಿ ಪ್ರಾಮಾಣಿಕ ನಿಷ್ಪಕ್ಷಪಾತ ರೀತಿಯಿಂದ ... ಇರುವದಿಲ್ಲ! ಮನೆಯೊಡೆಯನು ... ಲಕ್ಷ್ಮೀಪತಿ ಲಕ್ಷಣ-ವಂತನಾಗಿ ಇಲ್ಲವೆ ... ವಾಗಿ ಮುಂದೆ ಒಂದಂಗ ಈ ಹಂಗು ನ್ಯಾಯದಾನದ ಕಂಟಕ ವೆಂದಿಲ್ಲೊಂದು ಪರಿಸ್ಥಿತಿಯಲ್ಲಿ ತನ್ನ ಅವ್ಯಕ್ತ ಭಾರವನ್ನು ಹಾಕುತ್ತಿದ್ದರೆ ಅದೊಂದು ಅಸ್ವಾಭಾವಿಕ ಸಂಗತಿಯೆಂದು ಹೇಳಬರುವಂತಿಲ್ಲ. ಆದರಿಂದ ನ್ಯಾಯದಾನ ಅದಾಗ ಉಚ್ಚ ಕಾರ್ಯಾಚರಣ ಮಾಡುವ ತನ್ನ ಅಧಿಕಾರಿಗಳಿಗೆ ಊರಲ್ಲಿ ಯಾವದೇ ಬಗೆಯ ಹಂಗು ಉಂಟಾಗದಂತೆ ಸರಕಾರವು ದಕ್ಷತೆಯನ್ನು ಕೊಳ್ಳುವದು ಆವಶ್ಯವುಂಟು. ಉಚ್ಚ ಸರಕಾರಿ ಅಧಿಕಾರಿಗಳಿಗೆ ಸ್ವತಂತ್ರ ಸರಕಾರಿ ಮನೆಗಳನ್ನು ಕಟ್ಟಿಸಿಕೊಡುವದು ಈ ದೃಷ್ಟಿಯಿಂದ ಅತ್ಯವಶ್ಯವಿರುತ್ತದೆ. ಈ ಮನೆಗಳನ್ನು ಕಟ್ಟಿಸುವದರಿಂದ ಸರಕಾರಕ್ಕೆ ನಷ್ಟವೇನೂ ಆಗುವಂತಿಲ್ಲ. ಸರಕಾರಿ ದೃಷ್ಟಿಯಿಂದ ಈ ಉದ್ಯೋಗ ಕೈಕೊಳ್ಳಬಹುದು. ಮನೆಗಳನ್ನು ಕಟ್ಟಿಸುವದಕ್ಕಾಗಿ ಖರ್ಚಾಗುವ ಹಣವನ್ನೂ ಅದರ ಬಡ್ಡಿಯನ್ನೂ ಆವುಗಳಲ್ಲಿರುವ ಅಧಿಕಾರಿಗಳ ಕಡೆಯಿಂದ ವಸೂಲಾಗುವ ಬಾಡಿಗೆಯಿಂದ ತುಂಬಿಕೊಳ್ಳಬಹುದು ವಂತಿದೆ.

* *

ಹಳ್ಳಿಗಳಲ್ಲಿ ಶಾನಭೋಗರಿಗಾಗಿ ಮನೆಗಳನ್ನು ಕಟ್ಟಿಸುವದೂ ಈವಾಗ ಅತ್ಯವಶ್ಯವಿರುತ್ತದೆ. ಶಾನಭೋಗರಿಗೆ ಹಳ್ಳಿಗಳಲ್ಲಿ ಮನೆಗಳು ಸಿಗುವದು ಮೊದಲೇ ಕಷ್ಟ. ಒಂದು ವೇಳೆ ಸಿಕ್ಕರೂ ಅವರು ಆ ಮನೆ ಮಾಲೀಕರ ಹಂಗಿಗರಾಗುತ್ತಾರೆ. ಹಳ್ಳಿಗಳಲ್ಲಿ ಆ ... ವಾಸ್ತವ್ಯಕ್ಕೆ ತಕ್ಕ ಮನೆಗಳನ್ನು ಇಟ್ಟುಕೊಳ್ಳಲಿಕ್ಕೆ ಮನೆಗಳು ಸಿಗುವದಿಲ್ಲೆಂದೂ, ಪ್ರತಿಯೊಂದು ಫಿರ್ಕೆಯ ಶಾಲೆ-ದವಾಖಾನೆಗಳು ಕೈ ಗ್ರಾಮದೊಳಗ ತಮ್ಮ ವಾಸ್ತವ್ಯ ಮತ್ತು ಕಚೇರಿಯ ಉಪಯೋಗಕ್ಕಾಗಿ ಸರಕಾರವು ಕೂಡಲೇ ಇಮಾರತುಗಳನ್ನು ಕಟ್ಟಿಸಿಕೊಡಬೇಕೆಂದೂ ಕಳೆದ ವರ್ಷದ ನಾತಾಳದೊಳಗೆ ಹಳಿಯಾಳದಲ್ಲಿ, ತಮ್ಮ ಸಂಘದ ವಾರ್ಷಿಕ ಅಧಿವೇಶನಕ್ಕಾಗಿ ಕೂಡಿದ ಜಿಲ್ಲೆಯ ಶಾನಭೋಗರು ಒಂದು ಗೊತ್ತುವಳಿ ಮಾಡಿ ಸರಕಾರಕ್ಕೆ ಸ್ಪಷ್ಟ ವಿನಂತಿ ಮಾಡಿದ್ದರು. ಆ ಕಡೆ ಸರಕಾರವು ಇನ್ನೂ ಲಕ್ಷ್ಯ ಗಮನವಿತ್ತಿಲ್ಲ! ಆ ಸುಧಾರಣೆ ಈ ಸುಧಾರಣೆಯೆಂದು ಹಲವಾರು

ಪ್ರವಾಸಿಕರಿಗೆ ಯಾವತ್ತೂ ಆಧುನಿಕ ವ್ಯವಸ್ಥೆಗಳು.
ಶ್ರೇಷ್ಠ ತರದ ಬೋರ್ಡಿಂಗ ಮತ್ತು ಲೊಜಿಂಗ

ದಿ ಕೆನರಾ ಲೊಜ

[ಉಪಾಹಾರ ಮತ್ತು ವಸತಿಗೃಹ]
ಮೋಟರ-ಸ್ಟೆಂಡ, ಹುಬ್ಬಳ್ಳಿ.

ಮಾಲಕ:— ಮ್ಹಾಳಪ್ಪಾ ಪೈ.

ಬಾಹ್ಯ ಆಡಂಬರದ ಸುಧಾರಣೆಗಳಿಗಾಗಿ ಕೋಟ್ಯಾವಧಿ ರೂಪಾಯಿಗಳನ್ನು ಸ್ವಲ್ಪ ವ್ಯಯಮಾಡುವ ಸರಕಾರಕ್ಕೆ ಈ ಅನ್ಯಾಯದ [illegible] ವಿಚಾರ ಹೊಳೆಯದಿರುವ[illegible]ದಂತಲ್ಲವೇ! ಶಾನಭೋಗರು [illegible] ಮನೆಗಳು ಸಿಗುವದಿಲ್ಲೆಂದು [illegible]ವಾಗಿ ಆ ದೂರನ್ನು ಪರಿಹರಿಸುವ ಪ್ರಯತ್ನವನ್ನು ಎಳ್ಳಷ್ಟೂ ಮಾಡದೆ, ಗ್ರಾಮಗಳಲ್ಲಿ ಅವರಿಗೆ ಮನೆಗಳನ್ನು ದೊರಕಿಸಿಕೊಡುವ ವ್ಯವಸ್ಥೆಯನ್ನೂ ಮಾಡದೆ ಅಥವಾ ಅವರು ಯಾಕೆ ತಮ್ಮ ಗ್ರಾಮಗಳಲ್ಲಿಯೇ ವಾಸಿಸುವದಿಲ್ಲೆಂಬುದರ ಚೌಕಶಿಯನ್ನೂ ಮಾಡದೆ, ಗ್ರಾಮಗಳಲ್ಲಿಯೇ ಉಳಿಯದ ಶಾನಭೋಗರ ವಿರುದ್ಧ ಈಗ ಸರಕಾರವು ಕ್ರಮ ಕೈಕೊಳ್ಳಲು ಸಿದ್ಧವಾಗಿದೆಯಂತೆ! ಹಸಿವೆಯಿಂದ ಬಳಲಿ ಅಳುತ್ತಿರುವ ಕೂಸಿಗೆ ಉಣ್ಣಹಾಕದ ಮೇಲೆ ಅತ್ತ ಬಗ್ಗೆ ಶಿಕ್ಷೆ ಮಾಡುವ ರಾಕ್ಷಸೀ ತಾಯಿಯ ಉಪಮೆಯನ್ನೇ ನಮ್ಮ ಪ್ರಾಂತಿಕ ಸರಕಾರಕ್ಕೆ ಕೊಡಬಹುದಲ್ಲವೇ?

***

ಗ್ರಾಮಸ್ಥರ ಕೆಲಸವೀಗ ಇಮ್ಮಡಿ, ಮುಮ್ಮಡಿಯಾಗಿದೆ. ಮುಂಜಾವಿನಲ್ಲಿ ಎದ್ದಂದಿನಿಂದ ರಾತ್ರೆ ಮಲಗುವ ವರೆಗೆ ದುಡಿದರೂ ಅವರ ಕೆಲಸ ತೀರುವದಿಲ್ಲ. ಆ ಪತ್ರಕ ಕಳಿಸಿರಿ, ಈ ಮಾಹಿತಿ ಕಳಿಸಿರಿ ಎಂದು ಮೇಲಿಂದ ದಿನಾಲು ಹೊಸ ಹೊಸ ಹುಕುಮುಗಳು ಬರುತ್ತಿವೆ. ಆ ಮಾಹಿತಿಯನ್ನು ಕಳಿಸಲು ಉಗ್ರಾಣಿಗಳ ಸಹಾಯ ಬೇಕು. ಆದರೆ ಉಗ್ರಾಣಿಗಳು ಇಡೀ ದಿನ ದುಡಿಯುವ ಸರಕಾರಿ ನೌಕರರಲ್ಲೆಂದು ಸರಕಾರದವರ ಅಂಬೋಣ! ಉಗ್ರಾಣಿಗಳಷ್ಟು ದುಡಿಯುವ ಸರಕಾರಿ ನೌಕರರು ಬೇರೆ ಯಾರೂ ಇಲ್ಲೆಂಬುದನ್ನು ಉಗ್ರಾಣಿಗಳ ಕೆಲಸದ ಮತ್ತು ಅವರ ದುಡಿಮೆಯ ಪ್ರತ್ಯಕ್ಷ ಪರಿಚಯವುಳ್ಳ ಹಳ್ಳಿಗಳ ಜನರು ಒಳಿತಾಗಿ ಅರಿಯುತ್ತಾರೆ; ಅವರಿಂದ ಕೆಲಸ ಕೊಳ್ಳುವ ಗ್ರಾಮಸ್ಥರೂ ಅರಿಯುತ್ತಾರೆ. ಆದರೆ ಸರಕಾರವು ಈ ಮಾತನ್ನು ಒಪ್ಪಲು ಸಿದ್ಧವಿಲ್ಲ! ಮತ್ತು ಈ ಬಡಪಾಯಿಗಳ ಹೊಟ್ಟೆಬಟ್ಟೆಗಳಿಗೆ ಸಾಕಷ್ಟು ಸಂಬಳ ಕೊಡಲು [illegible]ವದಿಲ್ಲ! ಈ ಬಗ್ಗೆ ಶಾಸನ ಮಂಡಳದಲ್ಲಿ ಪ್ರಶ್ನೆ ಕೇಳಿದರೆ, ಉಗ್ರಾಣಿಗಳನ್ನು ಇಡೀ ದಿನ ದುಡಿಸಿಕೊಳ್ಳಬಾರದೆಂದು ತಾವು ರೆ.-ಆಫೀಸರರಿಗೆ ಅಪ್ಪಣೆ ಮಾಡಿದ್ದೇವೆಂದು ಕಂದಾಯ ಮಂತ್ರಿಗಳು ಪ್ರತ್ಯುತ್ತರ ಕೊಡುತ್ತಾರೆ! ಇಂತಹ ಪರಿಸ್ಥಿತಿಯಲ್ಲಿ ಅರೆಹೊಟ್ಟೆ ಉಣ್ಣುವ ಉಗ್ರಾಣಿಗಳಿಂದ ಶಾನಭೋಗರು ಎಂತಹ ಕೆಲಸ ಮಾಡಿಕೊಳ್ಳಬಲ್ಲರು? ಕೆಲವು ಉಗ್ರಾಣಿಗಳೂ ಈಗ ಜಾಣರಾಗಿದ್ದಾರೆ. ಉಗ್ರಾಣಿಗಳಿಂದ ಇಡೀ ದಿನ ದುಡಿಸಿಕೊಳ್ಳಬಾರದೆಂದು ಮಂತ್ರಿಗಳು ಶಾಸನ ಸಭೆಯಲ್ಲಿ ಹೇಳಿದ ಮಾತು ಕೇಳಿ ಅವರು ಒಪ್ಪತ್ತೇ ಕೆಲಸಕ್ಕೆ ಬರುತ್ತಾರಂತೆ. ಹೀಗಾದ ಮೇಲೆ ಗ್ರಾಮಸ್ಥರ ಕೆಲಸ ಸುಲಭ ಮತ್ತು ಸಮಾಧಾನಕರವಾಗಿ ಹ್ಯಾಗೆ ಸಾಗಬೇಕು? ಉಗ್ರಾಣಿಗಳ ಪ್ರಶ್ನೆ ನಮ್ಮ ಜಿಲ್ಲೆಗಷ್ಟೇ ಮರ್ಯಾದಿತವಿದೆ. ಇಡೀ ಜಿಲ್ಲೆಯಲ್ಲಿ ಕೂಡ ೬-೭ ನೂರು ಉಗ್ರಾಣಿಗಳಿರಬಹುದು. ಇಷ್ಟು ಜನರನ್ನು ಕಾಯಂ ನೌಕರರೆಂದು ಎಣಿಸಿ, ಅವರ ಸ್ಥಿತಿಯ ಪೂರಾ ಸಂಬಳ ಮತ್ತು ಭತ್ತೆ ಅವರಿಗೆ ಕೊಟ್ಟರೆ, ವರ್ಷದ ತಿಜೋರಿಯ ಮೇಲೆ ಸರಕಾರಕ್ಕೆ ೨-೩ ಲಕ್ಷ ರೂ. ಹೆಚ್ಚಿಗೆ ವೆಚ್ಚ ಬರಬಹುದು. ಜನೋಪಯೋಗದ ಕೆಲಸಗಳಲ್ಲಿ, ಹಳ್ಳಿಗರ ಮನರಂಜನೆಗಾಗಿ ರೇಡಿಯೋಸೆಟಗಳನ್ನು ಪೂರೈಸುವದಕ್ಕೆಂದು ಲಕ್ಷಾವಧಿ ರೂಪಾಯಿಗಳನ್ನು ಬರಿದು ಮಾಡುತ್ತಿರುವ ಸರಕಾರಕ್ಕೆ ಈ ೨-೩ ಲಕ್ಷ ರೂಪಾಯಿಗಳ ಖರ್ಚು ಕಲೆಭಾರವಾಗುವದೆಂದು ಹೇಳಬರದು. ಆದ್ದರಿಂದ ಜಿಲ್ಲಾ ಶಾನಭೋಗರ ಸಂಘದ ಬೇಡಿಕೆಯನ್ನು ಮಾನ್ಯ ಮಾಡಿ, ಗ್ರಾಮ-ದಪ್ತರಗಳ ಕೆಲಸ ಸುಲಭ ಸಾಗಬೇಕೆಂಬ ದೃಷ್ಟಿಯಿಂದ ಸರಕಾರವು ಉಗ್ರಾಣಿಗಳನ್ನು ಸರಕಾರದ ಕಾಯಂ ನೌಕರರೆಂದು ಎಣಿಸಬೇಕಾಗಿಯೂ ಅವರಿಗೆ ಯೋಗ್ಯ ತರಗತಿಯ ಸಂಬಳ-ಭತ್ತೆಗಳನ್ನು ಕೊಡಿಸುವ ವ್ಯವಸ್ಥೆ ಕೂಡಲೆ ಮಾಡಬೇಕಾಗಿಯೂ ಅರಿಕೆಯಿದೆ.

***

ನಾಳೆ ತಾ. ೭ನೇಗೆ ಪ್ರಾಂತಗಳಲ್ಲೆಲ್ಲ "ಧ್ವಜ-ದಿನ" ವನ್ನಾಚರಿಸಿ, ಮಹಾಯುದ್ಧಗಳಲ್ಲಿ ಧೈರ್ಯದಿಂದ ಹೋರಾಡಿ ಬಲಿದಾನ ಮಾಡಿದ ಸೈನಿಕ-ಕುಟುಂಬದವರಿಗೆ ಸಹಾಯ ಮಾಡಲು ನಿಧಿಯನ್ನು ಸಂಗ್ರಹಿಸಬೇಕಾಗಿ ಮುಂಬಯಿಯ ಮಹಾಮಂತ್ರಿ ಮಾನ್ಯ ಖೇರ ಸಾಹೇಬರು ಬಿನ್ನವಿಸಿರುತ್ತಾರೆ. ದೇಶದ ರಕ್ಷಣೆಗಾಗಿ ಕಷ್ಟ-ನಷ್ಟಪಟ್ಟ ಜನರಿಗೆ ನಾವು ಸಹಾಯ ಮಾಡದಿದ್ದರೆ ಕೃತಘ್ನತೆಯ ದೋಷ ನಮ್ಮ ಮೇಲೆ ಬರುವದೆಂದೂ, ಸಕಲರೂ ಧ್ವಜಗಳನ್ನು ಕೊಂಡುಕೊಂಡು ಯಥಾಶಕ್ತಿ ಸೈನಿಕರ ಕುಟುಂಬಗಳ ಸಹಾಯದ ನಿಧಿಗೆ ಕಾಣಿಕೆಗಳನ್ನು ಸಲ್ಲಿಸಬೇಕೆಂದೂ ಮಾನ್ಯ ಖೇರ ವಿನಂತಿಯುಂಟು.

ಸ್ಥಾನಿಕ ವೃತ್ತಾಂತ.

(೬ನೇ ಪುಟದಿಂದ ಮುಂದುವರಿದದ್ದು)

[illegible] ಸುದ್ದಿ ಬಂದಿದೆ. ಒಂದು ತಿಂಗಳಿನ [illegible] ಮೇಲೆ [illegible] ಖಜಾನೆಯ [illegible] ಮೇಲಿಂದ ಮೇಲೆ ಖಜಾನೆಯ [illegible] ಅಧಿಕಾರಿಗಳು ಖಜಾನೆಯೊಳಗಿನ ಎಲ್ಲ ನೋಟುಗಳನ್ನು ಎಣಿಸಿದ. ನೋಟಿನ ಕಟ್ಟುಗಳಲ್ಲಿ ನೋಟುಗಳೇ ಇವೆಯೋ ಮತ್ತೇನು ಇದೆಯೋ ಎಂಬುದರ ಪತ್ತೆ ಹಚ್ಚದೆ, ನೋಟುಗಳ ಕಟ್ಟುಗಳನ್ನು ಎಣಿಸಿ ಲೆಕ್ಕ ಒಪ್ಪಿಸಿಕೊಳ್ಳುವ ಪ್ರಸಂಗ [illegible] ಅನೇಕ [illegible] ಇದ್ದರು [illegible] ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆಂದೂ ತಿಳಿಯುತ್ತದೆ.

ಶಿರಸಿ— (ತಾ. ೨೮-೧೧-೪೯) ನಿನ್ನೆ ಇಲ್ಲಿನ ಮುನಿಸಿಪಾಲಿಟಿಯ ಪ್ರಾ. ಶಾ. ಶಿಕ್ಷಕರ ಶಾರೀರಿಕ ಶಿಕ್ಷಣದ ಶಿಬಿರದ ಶಿಬಿರಾಗ್ನಿಯ ಸಮಾರಂಭ ರಾ॥ ಗಂಗೊಳ್ಳಿ[illegible]ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷರು ರಾ॥ ನಾಗರಕಟ್ಟೆ ಎಂಬ ಶಿಕ್ಷಕರ "ಧ್ಯಾನ" ಎಂಬ ವಿನೋದ[illegible]ಕ್ಕೆ ಮೆಚ್ಚಿ ಅವರಿಗೆ ರೂ. ೫ ಇನಾಮು ಕೊಟ್ಟರು.

(ತಾ. ೨೫-೧೧-೪೯) ಬನವಾಸಿಯ ಅಂಚೆಕಚೇರಿ ಮೊದಲು ಕೋಟೆಯಲ್ಲಿತ್ತು; ಮತ್ತು ಹೊರಗೆ ಪೇಟೆಯಲ್ಲಿ ಬಂದು ಪತ್ರಗಳನ್ನು ಹಾಕುವ ಪೆಟ್ಟಿಗೆಯನ್ನು ಇಟ್ಟಿದ್ದರು. ಕೆಲವು ತಿಂಗಳಿಂದ ಅಂಚೆಕಚೇರಿಯು ಪೇಟೆಗೆ ಬಂದಿದೆ. ಅದರಿಂದ ಕೋಟೆ[illegible] ಪೆಟ್ಟಿಗೆಯನ್ನು [illegible] ಉಪಯೋಗದ ಬಗ್ಗೆ [illegible] ಸಂಘದ ಕಚೇರಿಯ ಸಮೀಪ [illegible] ಅಂಚೆ[illegible] ಮತ್ತು ಅವರಿಂದ ಟಪಾಲು ಅಧಿಕಾರಿಗಳಿಗೆ ಅರ್ಜಿಯು ಮಾಡಲ್ಪಟ್ಟಿತು. ಆದರೆ ಆ ಅಧಿಕಾರಿಗಳಿಗೆ ಜನರ ಅರ್ಜಿ ಮಾನ್ಯವಾಗಲಿಲ್ಲ! [illegible] ನಿರ್ಜನ ಪ್ರದೇಶದಲ್ಲಿ ಪತ್ರದ ಪೆಟ್ಟಿಗೆಯನ್ನಿಡಬೇಕಾಗಿ ಅವರ ಹಟವು ಬಂದಿದೆಯಂತೆ! ಆ ನಿರ್ಜನ ಪ್ರದೇಶದಲ್ಲಿ ಪೆಟ್ಟಿಗೆಯೊಳಗೆ ವಾರದಲ್ಲಿ ೧-೨ ಪತ್ರಗಳು ಸಹ ಬೀಳುವದಿಲ್ಲ! ಈ ಪೆಟ್ಟಿಗೆಯನ್ನು ಇಡುವದು ಜನರ ಉಪಯೋಗದ ಬಗ್ಗೆಯೋ ಅಥವಾ ಶೋಭೆಗಾಗಿಯೋ ಎಂಬುದು ತಿಳಿಯದಂತಾಗಿದೆ! ಮೇಲಧಿಕಾರಿಗಳು ಇದರ ಬಗ್ಗೆ ವಿಚಾರಿಸಬೇಕು.

[illegible] ಅಂಚೆ-ಕಚೇರಿಯ ಟಪಾಲ ಪೇಟಿಯು [illegible] ಗ್ರಾಮಕ್ಕೆ ಸರಿಯಾಗಿ ಹೋಗುವದಿಲ್ಲೆಂಬ ದೂರೊಂದು ಬಂದಿದೆ. ತಾವು ೨ ತಿಂಗಳಿಂದ ತಮ್ಮ ಟಪಾಲ ಪೇಟಿಯ ಮೋರೆಯನ್ನೇ ನೋಡಿಲ್ಲೆಂದು [illegible] ಗ್ರಾಮದವರು ಹೇಳುತ್ತಾರೆ.

ಸಿದ್ಧಾಪುರ— (ತಾ. ೨೮-೧೧-೪೯) [illegible] ರಸ್ತೆಯಲ್ಲಿ [illegible] ದುರಸ್ತಿಯ ಕೆಲಸ ನಡೆಯಲಿಲ್ಲ. ೨ ತಿಂಗಳ ಹಿಂದೆ [illegible] ಗುತ್ತಿಗೆದಾರನು ೨ ಮೈಲು ರಸ್ತೆಯಲ್ಲಿ ಕಲ್ಲೊಂದು [illegible] ಅದೂ ಮುಂದೆ ಸಾಗಲು! ಈ ಸಾರೆ [illegible] ಗಾಡಿಗಳ ಓಡಾಟ ಬಹಳವಿದೆ. ರಸ್ತೆಯು ಸರಿಯಾಗಿಲ್ಲದ್ದರಿಂದ [illegible] ಅಪಘಾತವಾದ ಸುದ್ದಿ ಬರುತ್ತದೆ. [illegible] ದುರುಸ್ತಿಯ ಬಗ್ಗೆ ವಿಶೇಷ ದುರ್ಲಕ್ಷ್ಯದ ಬಗ್ಗೆ [illegible] ಹೇಳುತ್ತಾರೆ. ಆ [illegible] ಹೋಗುತ್ತದೋ ಏನೋ!

ಕೆಲವು ಗ್ರಾಮದಲ್ಲಿ ಹಗಲು-ರಾತ್ರಿ [illegible] ಅದರಿಂದ ಊರವರು ಈಗ [illegible] ಶಾಲೆ ತೆರೆದಿದ್ದಾರೆ. ಶಾಲೆಯಲ್ಲೀಗ [illegible] ಕಲಿಯುತ್ತಾರೆ.

ಮಳಗಿ— (ತಾ. ೧-೧೨-೪೯) [illegible] ಗ್ರಾಮದಲ್ಲಿ ಕೆಲ ತಿಂಗಳಿಂದ ಒಂದು [illegible] ಶಾಲೆ ತೆರೆಯಲ್ಪಟ್ಟಿದೆ.

ಯಲ್ಲಾಪುರ— (ತಾ. ೨-೧೨-೪೯) [illegible] ಕಾರ್ಯಕರ್ತ [illegible] ಸಮಿತಿಯ ಸಭೆ ಸಮಿತಿಯ ಉಪಾಧ್ಯಕ್ಷರಾಗಿರುವ [illegible] ರಾ॥ ಪಿ. ಎಸ್. [illegible] ಅಧ್ಯಕ್ಷತೆಯಲ್ಲಿ, ಕೆಲ [illegible] ಈ ಊರಲ್ಲಿ ಕೂಡಿತ್ತು. ಈ ಸಭೆಯಲ್ಲಿ [illegible] ಪ್ರಮುಖ ನಿರ್ಧರಿಸಲ್ಪಟ್ಟಿತ್ತಲ್ಲದೆ, ಈಗ [illegible] ಎಲ್ಲ [illegible] ಜನರ [illegible] ಈ ಜಿಲ್ಲೆಗೆ ಹೆಚ್ಚು ಎಷ್ಟು [illegible] ಸರಕಾರವು ಎಲ್ಲ [illegible] ಗಳಿಗೆ [illegible] ಒಂದು [illegible] ಅಂಗಡಿಯನ್ನು [illegible] ಗ್ರಾಮದ ಅಂಗಡಿಯನ್ನು [illegible] ಸಂಘದವರ [illegible] ಸಂಘಕ್ಕೆ ೨ ತಿಂಗಳ [illegible] ಆ ಅಂಗಡಿಯನ್ನು ಸಂಘದಿಂದ [illegible] ಆಯಿತು. [illegible] ಭತ್ತವನ್ನು [illegible] ಸೇರಿಸಿದ [illegible] ದರವನ್ನು [illegible] ೧೧-೪೯ರಿಂದ ಮುಂದೆ [illegible] ಭತ್ತವನ್ನು [illegible] ಭತ್ತದ ಬೆಲೆ [illegible]

ಸ್ಥಾನಿಕ ವೃತ್ತಾಂತ.

[illegible]

[illegible]

[illegible]

NOTIFICATION.

No. 4905/Est.

The Collector of Kanara (Supply) invites applications for the following temporary posts in the Supply Department so as to reach this office on or before 10—12—1949.

(1) District Godown Inspector—1 post in the grade of Rs. 140—10—150 plus P. T. A. of Rs. 105/- and D. A according to rules.

Qualification:— B.Ag or B Sc. of a recognised University.

(2) Godown Managers-In the grade of Rs. 100-5-140 plus D. A. according to rules

Qualification:— Matriculation. Graduates will be given preference.

(3) Senior Godown Keepers — in the grade of Rs. 46-3-85 plus D. A. according to rules.

Qualification.— Matriculation.

Persons with higher qualifications will be preferred and given higher starting pay according to qualifications.

Applications in the applicant's own hand-writing containing in brief information regarding age, educational qualificatiosn, previous experience, if any, should be sent so as to reach this office before 10th December, 1949 by registered post. Persons with previous supply experience or experience in trade will be given preference. Selected applicants will have to appear for an interview, if called, at their own expense. Rejected-applications will not be given any reply and applications received after 10th December 1949 will not be considered.

Karwar, 2—12—49. } **M. K. JADHAV,** Collector of Kanara

ಕುಮಟೆಯ ... ಉಗ್ರಾಣದ ಮನೇಜರರ ... ಕೈಕೆಳಗಿನ ನೌಕರರಿಗೆ ... ಅಸಭ್ಯ ಮಾತು ... [illegible]

ಹೊನ್ನಾವರದ ನೋಟೀಸ್ ... [illegible]

ಹಳಿಯಾಳ — (ತಾ. ೧ ೧೨ ೪೯) ... [illegible]

ಭಟಕಳ — (ತಾ ೮-೧೧-೪೯) ... [illegible]

ಹೊನ್ನಾವರ — ... [illegible]

(ಮುಂದೆ ನೋಡಿರಿ)

ಪತ್ರಿಕಾ—ಪ್ರಕಟನೆ.

೧೯೪೯ನೇ ಇಸವಿಯ ... [illegible]

೧. ... [illegible]

೨. ... [illegible]

೩. ... [illegible]

೪. ... [illegible]

೫. ... [illegible]

೬. ... [illegible]

೭. ... (processor) ... [illegible]

... (Toxmarks) ... (screen) ... (valid) ... [illegible]

(... ಪ್ರಕಟಿಸಿದ್ದು)

ವರ್ಗಣಿಯ ದರ.
ಕುಮುಟೆಯಲ್ಲಿ ವರ್ಷಕ್ಕೆ ರೂ ೩
ಹೊರಗಿನವರಿಗೆ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧ ೧೦-೦
೩ ತಿಂಗಳಿಗೆ ೧-೦
ಬಿಡಿ ಪ್ರತಿ
ವರ್ಗಣಿಯು ಮುಂಗಡ ಕಳಿಸಬೇಕು

Reg. No. B. 1270 Monday, 12-12-1949.

ಕಾನಡಾವೃತ್ತ

ವರ್ಷ ೩೨] THE KANARA NEWS. [ಸಂಚಿಕೆ ೨೮

ಕುಮುಟಾ ಸೋಮವಾರ, ತಾ ೧೨—೧೨—೧೯೪೯

ಜಾಹೀರಾತುಗಳ ದರ:
೧೦ ಲೈನು ಉದ್ದ ಪ್ರತಿಸಲ
ಪ್ರತಿ ಸಾಲಿಗೆ ೦ ಆಣೆಯಂತೆ.
ಹೆಚ್ಚು ಅವಧಿ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಹಾಯ
ಪತ್ರವ್ಯವಹಾರ
ತಿಳಿಸಲಾಗುವದು.

ವಿವಿಧ ವಿಷಯಗಳು

—*—

೧೯೪೮ನೇ ಇಸವಿಯ ಹೊಸ ಭೂ-ಸಾಗುವಳಿ ಮತ್ತು ಸಾಗುವಳಿ ಭೂಮಿಗಳ ಕಾನೂನಿನನ್ವಯ ಕೂಡ ಒಡೆಯರು ಸ್ವಂತ ಸಾಗುವಳಿಗಾಗಿ ಹೊಲಗಳ ಕಬಜೆ ಬೇಡಿ ಮಾಡಿದ ದಾವೆಗಳನ್ನೂ, ಕಾಲದಲ್ಲಿ ಗೇಣಿ ಸಲ್ಲಿಸದೆ ಒಕ್ಕಲತನ ಕಳೆದುಕೊಂಡ ಒಕ್ಕಲಿಗರ ಕಡೆಯ ಕಬಜೆಯನ್ನು ತಪ್ಪಿಸುವ ಸಲುವಾಗಿ ಒಡೆಯರು ತಂದ ದಾವೆಗಳನ್ನೂ ನಿರ್ಣಯಿಸಲು ದಿವಾಣಿ ಕೋರ್ಟಿಗೆ ಅಧಿಕಾರವಿರುತ್ತದೆಂದೂ, ಇಂತಹ ದಾವೆಗಳನ್ನು ನಿರ್ಣಯಿಸುವ ಅಧಿಕಾರ ಟೆನನ್ಸಿ ಮಾಮಲೇದಾರರಿಗೆ ಇರುವದಿಲ್ಲೆಂದೂ ಹೊನ್ನಾವರ ದಿವಾಣಿ ನ್ಯಾಯಾಲಯದ ಹಿಂದಿನ ನ್ಯಾಯಾಧೀಶ ರಾ|| ದೇಶಪಾಂಡೇಯವರು ಕಳೆದ ಆಗೋಸ್ತ ತಿಂಗಳಲ್ಲಿ (ಮೂಲ ದಾವೆ ನಂ. ೯ ೧೯೪೯ರೊಳಗೆ) ತೀರ್ಮಾನಿಸಿದ್ದರಷ್ಟೇ (ಈ ನಿರ್ಣಯದ ಮಹತ್ವದ ಅವತರಣಿಕೆಗಳು ತಾ ೭-೯-೪೯ರ "ವೃತ್ತ"ದಲ್ಲಿ ಪ್ರಕಟವಾಗಿವೆ.) ರಾ|| ದೇಶಪಾಂಡೇಯವರ ತರುವಾಯ ಸದರಿ ನ್ಯಾಯಾಲಯದ ನ್ಯಾಯಾಧೀಶರಾಗಿ ಬಂದಿರುವ ರಾ|| ಕುಲಕರ್ಣಿಯವರು ಕಳೆದ ಅಕ್ಟೋಬರ ತಾರೀಕಿನಲ್ಲಿ (ಮೂಲ ದಾವೆ ನಂ. ೧೩೩-೪೯ ರೊಳಗೆ) ಮೇಲಿನ ತೀರ್ಮಾನಕ್ಕೆ ಸರಿ ವಿರುದ್ಧ ಮತ್ತು ವಿಸಂಗತವಿರುವ ತೀರ್ಮಾನ ಕೊಟ್ಟು, ಮೇಲ್ಕಾಣಿಸಿದ ಸ್ವರೂಪದ ದಾವೆಗಳನ್ನು ಹಿಡಿಯಲು ಅಥವಾ ನಿರ್ಣಯಿಸಲು ದಿವಾಣಿ ಕೋರ್ಟುಗಳಿಗೆ ಅಧಿಕಾರವಿಲ್ಲೆಂದು ನಿರ್ಣಯಿಸಿರುತ್ತಾರೆ. ಕಲಮು ೮ದಲ್ಲಿರುವ "ನಿಕಾಲಿ ಮಾಡುವ, ನಿರ್ಣಯಿಸುವ ಯಾ ವಿಚಾರ ಮಾಡುವ (settle, decide or deal)" ಎಂಬ ಶಬ್ದಗಳು ಕಲಮು ೭೦ರಲ್ಲಿ ನಿರ್ದೇಶಿಸಿದ ಹಲವಾರು ವಿಷಯಗಳನ್ನು ವಿಚಾರಿಸುವ, ನಿರ್ಣಯಿಸುವ ಮತ್ತು ನಿಕಾಲೆ ಮಾಡುವ ಅಧಿಕಾರವನ್ನು ಮಾಮಲೇದಾರರಿಗೆ ಕೊಟ್ಟವೆಂದು ಅರ್ಥ ಮಾಡಬೇಕಾಗಿಯೂ, ಕಲಮು ೭೦ (ನ) ದಲ್ಲಿರುವ "to take measures for putting a person in possession" (ಯಾವನೊಬ್ಬ ವ್ಯಕ್ತಿಗೆ ಕಬಜೆ ಕೊಡಿಸುವ ಕ್ರಮ ಕೈಕೊಳ್ಳುವದು) ಎಂಬ ಶಬ್ದ ಸಮುಚ್ಚಯವು (ರಾ|| ದೇಶಪಾಂಡೇಯವರು ಅರ್ಥ ಮಾಡಿದಂತೆ) ಅಮಲ-ಬಜಾವಣಿಯ ಅಧಿಕಾರವನ್ನಷ್ಟೇ ಸೂಚಿಸದೆ, "ಕಬಜೆ ಕೊಡಿಸುವ ಬಗ್ಗಾಗಿ ನಡಿಸಬೇಕಾದ ಎಲ್ಲ ಕ್ರಮಗಳನ್ನು ನಡಿಸುವದು" ಎಂಬ ವಿಶಾಲ ಅರ್ಥವನ್ನು ಸೂಚಿಸುತ್ತವೆಂದೂ ರಾ|| ಕುಲಕರ್ಣಿಯವರು ಅಭಿಪ್ರಾಯ ವ್ಯಕ್ತಗೊಳಿಸಿರುತ್ತಾರೆ. ಈ ರೀತಿ ಕಬಜೆ ಕೊಡಿಸುವ ಅಧಿಕಾರ ಮಾಮಲೇದಾರರಿಗೆ ಕೊಟ್ಟಿರುವದರಿಂದ ಮತ್ತು ಮಾಮಲೇದಾರ ಮೊದಲಾದವರು ಮಾಡಬರುವ ನಿರ್ಣಯ, ನಿಕಾಲೆ, ಮತ್ತು ವಿಚಾರಗಳನ್ನು ದಿವಾಣಿ ನ್ಯಾಯಾಲಯಗಳು ಮಾಡಕೂಡದು ಎಂದು ೮೫ನೇ ಕಲಮು ಸ್ಪಷ್ಟ ಹೇಳುವದರಿಂದ ಮೇಲ್ಕಾಣಿಸಿದಂತಹ ದಾವೆಗಳ ವಿಚಾರ ಮಾಡುವ ಅಧಿಕಾರವನ್ನು "ಸ್ಪಷ್ಟ ಶಬ್ದಗಳಿಂದ" ಕಸಿದುಕೊಳ್ಳಲಾಗಿದೆಂದೂ ಅವರು ಪ್ರತಿಪಾದಿಸುತ್ತಾರೆ. ಸ್ವಂತ ಸಾಗುವಳಿಗಾಗಿ ಕಬಜೆಯನ್ನು ಬೇಡುವ ಮತ್ತು ಗೇಣಿ ಬಾಕಿಯಿಟ್ಟುಕೊಂಡ ರೈತರ ಕಬಜೆಯನ್ನು ತಪ್ಪಿಸುವ ಹಕ್ಕುಗಳು ಒಡೆಯರಿಗೆ ಟೆನನ್ಸಿ ಕಾಯದೆಗಳಿಂದ ದೊರೆತ ಹೊಸ ಹಕ್ಕುಗಳಾಗಿರುತ್ತವೆಂದೂ, ಈ ಹೊಸ ಹಕ್ಕುಗಳ ವಿಚಾರ-ನಿರ್ಣಯವನ್ನು ಅವನ್ನು ನಿರ್ಮಿಸಿದ ಟೆನನ್ಸಿ ಕಾಯದೆಯೊಳಗಿನ ಕ್ರಮದಿಂದಲೇ ನಡಿಸಬೇಕೆಂದೂ, ದಿವಾಣಿ ಕೋರ್ಟುಗಳ ಅಧಿಕಾರವನ್ನು ಅಬಾಧಿತವಿಡುವದಾವದಲ್ಲಿ ಕಾನೂನಕರ್ತರು ಆ ರೀತಿ ಒಂದಿಲ್ಲೊಂದು ಕಲಮಿನಲ್ಲಿ ಹೇಳುತ್ತಿದ್ದರೆಂದೂ ಹಾಗೆ ಅವರು ಹೇಳಿಲ್ಲೆಂದೂ, ಆ ಕಾರಣದಿಂದ ದಿವಾಣಿ ನ್ಯಾಯಾಲಯದ ಅಧಿಕಾರವು ಗರ್ಭಿತಾರ್ಥದಿಂದ (impliedly) ಸಹ ಕಸಿದುಕೊಳ್ಳಲ್ಪಟ್ಟಿದೆಂದೂ ರಾ|| ಕುಲಕರ್ಣಿಯವರ ಮತವಿದೆ.

ನ್ಯಾಯಾಧೀಶ-ನ್ಯಾಯಾಧೀಶರೊಳಗೆ ಈ ರೀತಿ ಮತಭೇದವಾಗುತ್ತಿರುವದರಿಂದ ಜನರಿಗೆ ಗೊಂದಲವಾಗಿದೆ. ಯಾವ ಕೋರ್ಟಿಗೆ ಹೋಗಬೇಕು, ಎಲ್ಲಿ ಹೋದರೆ ಇಷ್ಟ ಪರಿಣಾಮ ಸಿಗುವದು ಎಂಬುದು ಅವರಿಗೆ ತಿಳಿಯದಂತಾಗಿದೆ. ಯಾವದೊಂದು ನ್ಯಾಯಾಲಯದವರು ಸದರಿ ೮೫ನೇ ಕಲಮಿನ ಅರ್ಥದ ವ್ಯಾಪ್ತಿಯ ಪ್ರಶ್ನೆಯನ್ನು ನೇರವಾಗಿ ನಾಮದಾರ ಹಾಯಕೋರ್ಟಿನ ಮುಂದಿಟ್ಟು (reference ಮಾಡಿ), ಆ ವರಿಷ್ಠ ನ್ಯಾಯಾಲಯದ ಕೊನೆಯ ನಿರ್ಣಯವನ್ನು ಪಡಕೊಳ್ಳುವದು ಚಿತ. ಇಲ್ಲದಿದ್ದರೆ ಜನರೊಳಗೆ ಅರ್ಥದ ಗೊಂದಲದ ಜೊತೆಗೆ, ನ್ಯಾಯಾಧೀಶರು ತಲೆಗೊಂದು ನ್ಯಾಯ ಕೊಡುತ್ತಾರೆಂಬ ಲೋಕಾಪವಾದವೂ, ನ್ಯಾಯದಾನದ ಬಗ್ಗೆ ಅನಾದರ ಅವಿಶ್ವಾಸಗಳೂ ಹುಟ್ಟದಿರಲಾರವು.

* * *

ಕರ್ನಾಟಕ ಏಕೀಕರಣದ ಮತ್ತು ಪ್ರತ್ಯೇಕ ಕರ್ನಾಟಕ ಪ್ರಾಂತ-ರಚನೆಯ ಪ್ರಶ್ನೆ ಈಗ ವಿಕೋಪಕ್ಕೆ ಮುಟ್ಟಿದೆ. ಭಾಷಾನುಗುಣ ಪ್ರಾಂತಗಳನ್ನು ರಚಿಸಬೇಕೆಂಬ ಬೇಡಿಕೆಯನ್ನು ಮುಂದೊಡ್ಡಿದವರು ಆಂಧ್ರರು, ಕೇರಳೀಯರು, ಕರ್ನಾಟಕದವರು ಮತ್ತು ಮಹಾರಾಷ್ಟ್ರೀಯರಾಗಿರುತ್ತಾರೆ. ಈ ಬೇಡಿಕೆಗಳನ್ನು ಮನ್ನಿಸುವದು ಎಷ್ಟರ ಮಟ್ಟಿಗೆ ಹಿತ ಮತ್ತು ಸಮಂಜಸವಾಗುವದೆಂಬುದರ ಚೌಕಶಿ ಮಾಡಲು ಮೊದಲು ಘಟನಾ ಸಮಿತಿಯವರು, ಹಿಂದುಸ್ಥಾನ ಸರಕಾರದ ಒಪ್ಪಿಗೆಯಿಂದ, ದಾರ-ಸಮಿತಿಯನ್ನು ನೇಮಿಸಿದರು. ರಾಷ್ಟ್ರದ ಸದ್ಯದ ಪರಿಸ್ಥಿತಿಯಲ್ಲಿ ಭಾಷಾನುಗುಣ ಪ್ರಾಂತರಚನೆಯು ಇಷ್ಟವಲ್ಲೆಂದೂ ಹೊಸ ಪ್ರಾಂತಗಳನ್ನು ರಚಿಸಿದಲ್ಲಿ ಗಡಿಗಳ ವಿವಾದಗಳೆದ್ದು ಅನರ್ಥವಾಗುವದೆಂದೂ ಆ ದಾರ-ಸಮಿತಿಯು ವರದಿ ಮಾಡಿತು. ಈ ವರದಿಯಿಂದ ಭಾಷಾನುಗುಣ ಪ್ರಾಂತ-ರಚನೆಯಾಗಬೇಕೆಂದು ಹಟ ಹಿಡಿದ ಜನರಿಗೆ ತೀವ್ರ ಅಸಮಾಧಾನವಾಯಿತು! ಅವರ ಸಮಾಧಾನ ಮಾಡಲು ಕಳೆದ ವರ್ಷ ಜಯಪುರದಲ್ಲಿ ಕೂಡಿದ ರಾಷ್ಟ್ರೀಯ ಸಭೆಯು ನೆಹರು-ಪಟ್ಟಾಭಿ-ಪಟೇಲ ತ್ರಿಮೂರ್ತಿಗಳ ಹೊಸದೊಂದು ಸಮಿತಿಯನ್ನು ನೇಮಿಸಿ, ಭಾಷಾನುಗುಣ ಪ್ರಾಂತ-ರಚನೆಯ ಪ್ರಶ್ನೆಯನ್ನು ಪುನಃ ಆಮೂಲಾಗ್ರ ಪರಾಂಬರಿಸಿ, ಅದರ ಸಾಧ್ಯಾಸಾಧ್ಯತೆ ಮತ್ತು ಇಷ್ಟಾನಿಷ್ಟತೆಗಳನ್ನು ಕುರಿತು ವರದಿಯನ್ನೊಪ್ಪಿಸಲು ಆದೇಶ ಕೊಟ್ಟಿತು. ಈ ತ್ರಿಮೂರ್ತಿಗಳೂ ಕೂಡ, ಭಾಷಾನುಗುಣ ಪ್ರಾಂತ

The Agricultural & Industrial Bank, Ltd.

(Established · 1934)

Head Office · **COONDAPOOR.**

BRANCHES in all parts of Karnataka and at 384, M. Jaipuria House, Dabholkarwadi, Kalbadevi Road, Bombay 2.

The very existence of Modern Society is based on confidence and confidence can exist only where Governments, Institutions, Corporations and Individuals keep their promises and commitments

An Account with the Bank will save you a good deal of labour and correspondence We should like the privilege of serving you frequently and we assure you that a friendly and cordial welcome always awaits you at any of our offices

Coondapoor, 9-11-49

A. MADHAVA PAI, B.A., B.L., GENERAL MANAGER

ರಚನೆಯಿಂದ ಈಗ ಮೊದಲೇ ಜಟಿಲವಾಗಿ ಕೂತ ಪರಿಸ್ಥಿತಿ ಇನ್ನಷ್ಟು ಜಟಿಲವಾಗುವದೆಂದೂ, ಆದರೂ ಜನತೆಯ [illegible] ಹಿಡಿದರೆ ಅವರ ಬೇಡಿಕೆಯನ್ನು ತಿರಸ್ಕ[illegible]ಲ್ಲೆಂದೂ ಅಭಿಪ್ರಾಯಪಟ್ಟರು [illegible] ಎಂದೆ ಹೋಗಿ ಆಂಧ್ರರು ಮದ್ರಾಸದ ಬಗ್ಗೆ ತ[illegible] ಹಕ್ಕು ಹೇಳದೆ ತಮಿಳರೊಡನೆ ಸೌಹಾರ್ದದಿಂದಲೂ ಸಹಕಾರದಿಂದಲೂ ಗಡಿ ಮೊದಲಾದವುಗಳ ಪ್ರಶ್ನೆಗಳನ್ನು ನಿರ್ಣಯಿಸಿಕೊಳ್ಳಲು ಸಿದ್ಧರಾದಲ್ಲಿ ಆಂಧ್ರ ಪ್ರಾಂತದ ರಚನೆಗೆ ಪ್ರಾಶಸ್ತ್ಯ ಕೊಡಬಹುದೆಂದು ತ್ರಿಮೂರ್ತಿಗಳು ಸೂಚಿಸಿದ್ದರು, ಕರ್ನಾಟಕ ಪ್ರಾಂತದ ಪ್ರಶ್ನೆ ಮೈಸೂರಿನ ಭವಿತವ್ಯದ ಮೇಲೆ ಅವಲಂಬಿಸಿರುತ್ತದೆಂದೂ ಮೈಸೂರ ಹೊರಗಿನ ಕರ್ನಾಟಕದ ಭಾಗಗಳನ್ನು ಮೈಸೂರಿಗೆ ಜೋಡಿಸುವದು ಸಾಧ್ಯವಿಲ್ಲೆಂದೂ, ಮೈಸೂರಿನವರು ತಮ್ಮ ಅರಸರಿಗೆ ರಜೆ ಕೊಟ್ಟು ಇನ್ನುಳಿದ ಕರ್ನಾಟಕದಲ್ಲಿ ಸೇರಲು ಒಪ್ಪಿದರೆ ಕರ್ನಾಟಕ ಪ್ರಾಂತ-ರಚನೆ ಸಾಧ್ಯವಾಗಬಹುದೆಂದೂ ಅವರ ವರದಿಯಲ್ಲಿತ್ತು. ತ್ರಿಮೂರ್ತಿಗಳ ಈ ವರದಿಯೂ ಹೊಸ ಪ್ರಾಂತಗಳನ್ನು ಬೇಡುವವರಿಗೆ ರುಚಿಸಲಿಲ್ಲ! ಆದರೂ ಆಂಧ್ರರು "ಹೌದು ಇಲ್ಲ" ಎಂದು ಹೇಳುತ್ತ ಕೊನೆಗೆ ತ್ರಿಮೂರ್ತಿಗಳ ವರದಿಯೊಳಗಿನ ಎಲ್ಲ ಅಂಶಗಳನ್ನು ಒಪ್ಪಲು ಒಡಂಬಟ್ಟಿದ್ದರಿಂದ ಕಳೆದ ತಿಂಗಳಲ್ಲಿ ಕೊಂಗ್ರೆಸ ಕಾರ್ಯಕಾರಿ ಸಮಿತಿಯೂ ಭಾರತ ಸರಕಾರವೂ ಆಂಧ್ರ-ಪ್ರಾಂತ-ರಚನೆಗೆ ಸಮ್ಮತಿಯನ್ನು ಕೊಟ್ಟವು ಮತ್ತು ಈಗ ಆ ಪ್ರಾಂತ-ರಚನೆಯ ಪೂರ್ವ ಸಿದ್ಧತೆಯ ಕೆಲಸಗಳು ಭರದಿಂದ ಸಾಗಿವೆ.

* * *

ಆಂಧ್ರರಂತೆ ಕರ್ನಾಟಕದವರೂ ತ್ರಿಮೂರ್ತಿಗಳ ವರದಿಯೊಳಗಿನ ಆಕ್ಷೇಪಗಳನ್ನು ಪರಿಹರಿಸಿ ಕರ್ನಾಟಕ ಪ್ರಾಂತ ರಚನೆಯ ಮಾರ್ಗ ಸುಗಮಗೊಳಿಸಿಕೊಳ್ಳಲು ಯತ್ನ ನಡಿಸಿದ್ದರು ಆದರೆ ಅವರ ಯತ್ನ ಸಫಲವಾಗಲಿಲ್ಲ. ಮೈಸೂರಿನವರು ಹಿಂದೆ ಕರ್ನಾಟಕ ಏಕೀಕರಣದ ಮಾತನ್ನು ಆಡುತ್ತಿದ್ದರೂ ಈಗ ಅವರು ಏಕೀಕರಣದ ಬಗ್ಗೆ ಉತ್ಸಾಹವನ್ನೂ ಪಡುವದಿಲ್ಲ, ಆಸಕ್ತಿಯನ್ನೂ ತೋರುವದಿಲ್ಲ! ತಮ್ಮ ಅರಸರನ್ನು ಬಿಟ್ಟುಕೊಡಲು ಅವರು ಒಪ್ಪುವದಿಲ್ಲ. ತಮ್ಮ ಸಂಸ್ಥಾನ ಮುಂದುವರಿದಿದೆ, ಹಾಗೇ ಉಳಿದ ಕರ್ನಾಟಕದ ದೀನ-ದರಿದ್ರ ಭಾಗಗಳ ಕಂಟಿಯನ್ನು ಕೊರಳಿಗೆ ಕಟ್ಟಿಕೊಳ್ಳಬೇಕೆಂದೂ ಉತ್ತರ ಕರ್ನಾಟಕದ ಅಧಿಕಾರ ಲೋಲುಪರಿಗೆ ಮೈಸೂರಿನ ಮೇಲೆ ಅಧಿಕಾರ ನಡಿಸಲು ಹಾದಿ ಹಾಕಿಕೊಡಬೇಕೆಂದೂ ಅವರು ಆಲೋಚಿಸುತ್ತಾರೆ. ಮೈಸೂರಿನವರ ಈ ಡೋಲಾಯಮಾನ ಸ್ಥಿತಿಯನ್ನು ಕಂಡು ಕರ್ನಾಟಕ ಏಕೀಕರಣವಾದಿಗಳು ಕಿಡಿ ಕಿಡಿ ಕಾರುತ್ತಾರೆ! ಹಿಂದೆ ಏಕೀಕರಣಕ್ಕೆ ಬೆಂಬಲ ಕೊಡುತ್ತ ಮೈಸೂರಿನವರು ತಮ್ಮ ನೆರವಿನಿಂದ ಪ್ರಜಾಪ್ರಭುತ್ವವುಳ್ಳ ಸರಕಾರವನ್ನು ಪಡೆಕೊಂಡು, ಈಗ ತಮ್ಮ ಆಸೆ ಕೈಗೂಡಿದ ಮೇಲೆ ಏಕೀಕರಣದ ಮಾತು ಎತ್ತದಷ್ಟು ಕೃತಘ್ನರಾಗಿದ್ದಾರೆಂಬ ಆರೋಪವನ್ನೂ ಹೊರಿಸುತ್ತಿದ್ದಾರೆ! ಮೈಸೂರನ್ನು ಬಲಾತ್ಕಾರದಿಂದ ಕರ್ನಾಟಕದಲ್ಲಿ ಸೇರಿಸುವ ಮಾತೂ ಒಮ್ಮೆ ಕೇಳಿಬರುತ್ತಿತ್ತು! ಹೊರಗಿನ ಕೆಲವು ಏಕೀಕರಣವಾದಿಗಳು ಮೈಸೂರಿನವರಲ್ಲಿ ಒಡಕು ಹುಟ್ಟಿಸಿ, ಅವರನ್ನು ಆ ಹಿಂದ ಕರ್ನಾಟಕದಲ್ಲಿ ಸೇರಿಸಿಕೊಳ್ಳುವ ಪ್ರಯತ್ನ ಸಹ ನಡಿಸಿದ್ದಾರೆ! ಮೈಸೂರ ಮಹಾರಾಜರು ರಾಜಪದವನ್ನು ಬಿಟ್ಟು ಕರ್ನಾಟಕ ಏಕೀಕರಣಕ್ಕಾಗಿ "ತ್ಯಾಗ" ಮಾಡಿ ಇತಿಹಾಸದಲ್ಲಿ ಚಿರಸ್ಮರಣೀಯರಾಗಬೇಕೆಂದು ವಾದಿಸುವವರೂ ಕೆಲವರಿದ್ದಾರೆ! "ಸ್ವಯಂನಿರ್ಣಯ" "ಲೋಕಮತ" ಮೊದಲಾದ ತತ್ವಗಳೆಲ್ಲ ಈ ಏಕೀಕರಣದ ಜಂಜಾಟದಲ್ಲಿ ಮರೆತು ಹೋಗಿವೆ! ಈ ಪರಿ ಪರಿಸ್ಥಿತಿಯಿದ್ದಾಗ್ಯೂ, ಕರ್ನಾಟಕ ಏಕೀಕರಣಕ್ಕೆ ಒಮ್ಮತದ ಬೆಂಬಲವಷ್ಟೇ ಅಲ್ಲ, ಬಹುಮತದ ಬೆಂಬಲ ಕೂಡ ಇಲ್ಲದಿದ್ದಾಗ್ಯೂ ಏಕೀಕರಣವಾದಿಗಳು ತ್ರಿಮೂರ್ತಿಗಳ ವರದಿಯೊಳಗಿನ ಕರಾರುಗಳನ್ನು ಪಾಲಿಸುವ ಗೋಜಿಗೆ ಹೋಗದೆ ಕರ್ನಾಟಕ ಪ್ರಾಂತ ರಚನೆಗೆ ಕೊಂಗ್ರೆಸ ಕಾರ್ಯಕಾರಿ ಮಂಡಳವೂ, ಕೊಂಗ್ರೆಸ ಪರಿಷತ್ತೂ, ಭಾರತ ಸರಕಾರದ ಶ್ರೇಷ್ಠಿಗಳೂ ಕಲ್ಲು ಹಾಕುತ್ತಾರೆಂಬ ಕೂಗನ್ನು ಎಬ್ಬಿಸಿ ಆ ಶ್ರೇಷ್ಠಿ-ಪರಿಷ್ಕಾರ ಕೃತಿಯ ನಿಷೇಧಕ್ಕಾಗಿ ಕರ್ನಾಟಕದ ಶಾಸನ-ಸಭಾ-ಸದಸ್ಯರು ತಮ್ಮ ಸ್ಥಳಗಳಿಗೆ ರಾಜಿನಾಮೆ ಯಿತ್ತು ಹೊರಟು ಬರಬೇಕಾಗಿ ಆಜ್ಞೆಯ ಶನಿವಾರ (ತಾ ೩) ಹುಬ್ಬಳ್ಳಿಯಲ್ಲಿ ಕೂಡಿದ ಕರ್ನಾಟಕ ಪ್ರಾಂ॥ ಕೊಂ॥ ಸಮಿತಿಯ ಕಾರ್ಯಕಾರಿ ಮಂಡಳದ ಸಭೆಯಲ್ಲಿ ಒಂದು ಪ್ರಕ್ಷೋಭಕಾರಕ ಗೊತ್ತುವಳಿಯನ್ನು ಮಾಡಿಸಿಕೊಂಡಿರುತ್ತಾರೆ. ಈ ಗೊತ್ತುವಳಿಯಂತೆ ಘಟನಾ ಸಮಿತಿಯಲ್ಲಿ ಕರ್ನಾಟಕದ ಪ್ರತಿನಿಧಿಗಳಾಗಿದ್ದ ಶ್ರೀ॥ ನಿಜಲಿಂಗಪ್ಪನವರೂ, ಮುಂಬಯಿ ಎಸೆಂಬ್ಲಿ ಮತ್ತು ಕೌನ್ಸಿಲುಗಳ ೧೯ ಸದಸ್ಯರೂ, ಮದ್ರಾಸ ಶಾಸನ ಸಭೆಯ ಈರ್ವ ಸದಸ್ಯರೂ ತಮ್ಮ ರಾಜಿನಾಮೆಯ ಪತ್ರಗಳನ್ನು ಆ ದಿವಸ ಕರ್ನಾಟಕ ಪ್ರಾಂ॥ ಕೊಂ॥ ಕಾರ್ಯಕಾರಿ ಸಮಿತಿಯ ಕೈಯಲ್ಲಿ ಕೊಟ್ಟಿರುತ್ತಾರೆ. ರಾಜಿನಾಮೆ ಕೊಟ್ಟವರಲ್ಲಿ ನಮ್ಮ ಜಿಲ್ಲೆಯ ಎಸೆಂಬ್ಲಿ ಸದಸ್ಯರಾಗಿರುವ ಶ್ರೀ॥ ಶಾಸ್ತ್ರಿ ಮತ್ತು ಗಾಂವಕಾರರೂ ಇರುತ್ತಾರೆ. ಮುಂಬಯಿ ಮಂತ್ರಿಮಂಡಳದಲ್ಲಿ ಕರ್ನಾಟಕದ ಏಕಮೇವಾದ್ವಿತೀಯ ಪ್ರತಿನಿಧಿಗಳಾಗಿದ್ದ ಶ್ರೀ॥ ಮಲ್ಲನಗೌಡಾ ಪಾಟೀಲರೂ, ಉಪಮಂತ್ರಿಗಳಾದ ಶ್ರೀ॥ ಕಲ್ಲನಗೌಡಾ ಪಾಟೀಲ, ಜತ್ತಿ ಮತ್ತು ಕಂಠಿ ಇವರೂ, ಎಸೆಂಬ್ಲಿಯ ಉಪಾಧ್ಯಕ್ಷರಾಗಿರುವ ಶ್ರೀ ಷಣ್ಮುಖಪ್ಪಾ ಅಂಗಡಿಯವರೂ ರಾಜಿನಾಮೆ ಕೊಟ್ಟವರಲ್ಲಿದ್ದಾರೆ. ಈ ರಾಜಿನಾಮೆಗಳ ಪ್ರತಿಕ್ರಿಯೆ ಏನಾಗುವದೆಂಬುದನ್ನು ನೋಡಬೇಕಾಗಿದೆ. ಈ ರಾಜಿನಾಮೆಗಳಿಗೆ ಬೆದರಿ, ಮೈಸೂರಿನ ಜನಮತ ತಿಳಕೊಳ್ಳದೆ ಮೈಸೂರಿನ ಸಂಬಂಧದಲ್ಲಿ ಯಾವದೇ ನಿರ್ಣಯ ಮಾಡಕೂಡದೆಂದು ಮೈಸೂರಿನ ಕೆಲವು ಪ್ರಮುಖರು ಮೊನ್ನೆಯೇ ಭಾರತದ ಉಪಮಂತ್ರಿಗಳಾಗಿರುವ ಸರದಾರ ವಲ್ಲಭಭಾಯಿ ಪಟೇಲರಿಗೆ ತಂತಿಯಿಂದ ಮುಂಜಾಗ್ರತೆ ಕೊಟ್ಟಿದ್ದ ವಾರ್ತೆಯುಂಟು.

* * *

ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವದಾದರೆ ನಮ್ಮ ಜಿಲ್ಲೆಯ ಬಹುಸಂಖ್ಯ ಜನರು ಕರ್ನಾಟಕ ಏಕೀಕರಣದ ಬಗ್ಗಾಗಲಿ, ಸ್ವತಂತ್ರ ಕರ್ನಾಟಕ ಪ್ರಾಂತ ರಚನೆಯ ಬಗ್ಗಾಗಲಿ ಆಸಕ್ತಿಯನ್ನೂ ತೋರಿಸುವದಿಲ್ಲ, ಆತುರತೆಯನ್ನೂ ಪಡುವದಿಲ್ಲ. ಸ್ವತಂತ್ರ ಕರ್ನಾಟಕದಲ್ಲಾದರೂ ನಮ್ಮ ಜಿಲ್ಲೆಯು ತನ್ನ ಹಿತಸಾಧನೆಗಾಗಿ ಈಗಿನಷ್ಟೇ, ಒಂದೊಮ್ಮೆ ಈಗಿನಕಿಂತಲೂ ಹೆಚ್ಚು ಹೋರಾಡಬೇಕಾದೀತೆಂದು ನಮ್ಮ ಜಿಲ್ಲೆಯ ಸುಬುದ್ಧರು ಆದಾಗಲೇ ಕಂಡು ಹಿಡಿದಿದ್ದಾರೆ. ಕರ್ನಾಟಕ ಪ್ರಾಂತರಚನೆಯ ಬಗ್ಗೆ ಸಾಮಾನ್ಯವಾಗಿ ನಮ್ಮ ಜಿಲ್ಲೆಯಲ್ಲಿ ಔದಾಸೀನ್ಯವೇ ಕಂಡುಬರುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ॥ ಶಾಸ್ತ್ರಿ ಮತ್ತು ಗಾಂವಕಾರರು ತಮ್ಮನ್ನು ಆರಿಸಿಕೊಟ್ಟ ಜನರ ಅಭಿಪ್ರಾಯವನ್ನು ಎಳ್ಳಷ್ಟೂ ತಿಳಕೊಳ್ಳದೆ, ಅವರಿಗೆ ಹೇಳದೆಕೇಳದೆ ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟು, ಕರ್ನಾಟಕ ಪ್ರಾಂತರಚನೆಯ ಬಗ್ಗಾಗಿ ಕಾರವಾರ ಜಿಲ್ಲೆಯವರೂ ತಪಿಸುತ್ತಿದ್ದಾರೆಂಬ ಸುಳ್ಳು ತಿಳುವಳಿಕೆಯನ್ನು ಪರಿಸ್ಥಿತಿಯನ್ನರಿಯದ ಪರಸ್ಥರಿಗೂ, ಕೊಂಗ್ರೆಸ್ಸಿನ ಮೇಲ್ವರಿಗೂ, ಭಾರತ ಸರಕಾರಕ್ಕೂ ಮಾಡಿಕೊಡಲೆತ್ನಿಸಿದುದು ಯುಕ್ತವೇನೆಂಬುದರ ವಿಚಾರವನ್ನು ನಮ್ಮ ಜಿಲ್ಲೆಯ ಜನರು ಮಾಡಬೇಕು.

ಪತ್ರಿಕಾ-ಪ್ರಕಟನೆ.

ಬಟ್ಟೆಯ ಕಂಟ್ರೋಲ ಪದ್ಧತಿಯಲ್ಲಿ ಗಿರಣಿ ಬೆಲೆಯ ಮೇಲೆ ನೂರಕ್ಕೆ ೨೦ರವರೆಗೆ [illegible] ಲಾಭಾಂಶದ ಪ್ರಮಾಣವನ್ನು ನೂರಕ್ಕೆ ೧೪ರಷ್ಟಕ್ಕೆ ಇಳಿಸಬೇಕಾಗಿ ಭಾರತ ಸರಕಾರವು ಮಾಡಿರುವ ತೀರ್ಮಾನ (ತಾ ೨೪-೧೦-೧೯೪೯ ರ (ಅ)- ಟೆಕ್ಸ ೧/೪೯ನೇ ಪ್ರಕಟನೆ) ಕ್ಕನುಗುಣವಾಗಿ ಮುಂಬಯಿ ಸರಕಾರವೂ ತನ್ನ ಪ್ರಾಂತದಲ್ಲಿ ತಾ ೧೦-೧೦-೧೯೪೯ ರ ನಂತರ ಗಂಟು ಕಟ್ಟಿ ಗಿರಣಿಗಳಿಂದ ಹೊರಬೀಳುತ್ತಿರುವ ಎಲ್ಲ ಬಗೆಯ ಬಟ್ಟೆಗಳು — [illegible]

[illegible]

[illegible] ಒಂದು ಪ್ರಕಟನೆಯನ್ನು [illegible]

([illegible])

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

Karnatak legislators resignations are prompted by anti national anti-social and unpatriotic motives of power seeking and self seeking group Masses are indifferent Linguistic provincialism is akin to Communalism Pray do not attach importance to resignations Accept them coolly ([illegible])

[illegible]

([illegible])

ಸಮ್ಮಿಶ್ರ

[illegible]

"ಚಹಾ"

[illegible]

L G Mahale,

Merchant & Agent, ANKOLA N K

ಟೆಂಡರ ನೋಟೀಸ್ಸು

ಕಾನಡಾ ಜಿಲ್ಲಾ ಬೆಸ್ಕೂಲಬೋರ್ಡ ಕಚೇರಿಯಿಂದ ತಿಳಿಸುವದೇನಂದರೆ—

[illegible]

[illegible] (D S B, Kanara, 1950) [illegible]

[illegible]

ನೂಲುವ ಸಾಮಾನು	ಅಂದಾಜ ಸಂಖ್ಯೆ	ದರ
[illegible]		
[illegible]	[illegible]	
[illegible]	[illegible]	
[illegible]		
[illegible]	[illegible]	
[illegible]	[illegible]	
[illegible]	[illegible]	
[illegible]	[illegible]	
[illegible]	[illegible]	
[illegible]	[illegible]	
[illegible]	[illegible]	
[illegible]	[illegible]	
[illegible]	[illegible]	
[illegible]	[illegible]	
[illegible]	[illegible]	
[illegible]		
[illegible]		
[illegible]	[illegible]	
[illegible]	[illegible]	

[illegible]

— ಮಗ್ಗದ ಸಾಮಾನು —	ಸಂಖ್ಯೆ	ದರ
ಫ್ಲೈ ಶಟಲ್ ಮಗ್ಗ ಪೂರ್ಣ (ಹಲಗಿ, ಫ್ರೇಮು ಶಾಂಟ್ಸ್ ಕೋಲು, ಎರಡು ಕೋಲು, ಆದದ್ದು ಆದ ಪಟ್ಟಿ, ಗೂಡ್ಸ್ ಗಣ್ಣ್ ಬಂಡಿ ಶಾಂಟ ವಂ[illegible] ಸಹಿತ)	೪೭	
ಪಟಲ್ ೧೨ ಇಂಚಿನದು	೯೪	
ರಾಟಾಳ (ಸ್ಟಂಡ ಸಹಿತ)	೪೭೦	
ಹಣಿಗೆ	೮೪	
ಗತ್ತೆ	೫೬೪	
ಹುರಿ ಹಾಕುವ ಕಂಬ	೪೭	
ಗಂಟುಗಳು	೮೪	
ಕೀಲುಪಟ್ಟಿಗೆ	೪೭	
ತಾಳ್ಳು	೪೭	
ಹಾಸು (ಹಾಸಪಟ್ಟಿ)	೪೭	
ದಬ್ಬ	೫೬೪	
ದಬ್ಬಾ ಸ್ಟಂಡ	೨	
ಕುಂಡ	೮೨	
"	೭೫೨	
ಉಂಡಿಕೋಲು	೬೪	
ಸುಂಡಿಗೋಲು	೧೮೪	
ನೂಲು ಎಡಿಯುವ ಹಿಡಿಕೆ	೪೭	
ಕೋಲು	೪	
ಹಗ್ಗ ಸುತ್ತುವ ಗಾಲಿ	೪೭	
ಕುಂಚಿಗೆ (Sizing Brush)	೧೫	
ಹುರಿಗೆ ಕಾಲು (Sizing Bracket)	೧೫	
ಕಬ್ಬಿಣದ ಬುಟ್ಟಿ	೧೫	
ತಾಮ್ರದ ಚಕ್ರ ಕಡಾಯಿ	೧೫	
ಹಿತ್ತಾಳಿ ಪಾತ್ರೆ	೧೫	
ಹಿತ್ತಾಳಿ ಚರಿಗೆ	೧೫	
ಬಾಲದಿ (Bucket)	೧೫	

ಟೆಂಡರ ನಮೂದಿಸತಕ್ಕದ್ದು
_____ ರು _____
_____ ರು _____
_____ ರು _____
_____ ರು _____

ಸಪ್ಲಾಯ ಆಫೀಸರ ಕಚೇರಿ, ಕಾರವಾರ,
ದಿನಾಂಕ ೯—೧೨—೧೯೪೯

ಜಿ ಜೇ. ಗಂಜೀಕರ.
ಎಡ್ಮಿನಿಸ್ಟ್ರೇಟಿವ್ ಆಫೀಸರ, ಡಿ ಸಪ್ಲೈ ಬೋರ್ಡ, ಕಾನಡಾ.

ಸ್ಥಾನಿಕ ವೃತ್ತಾಂತ

(೧ನೇ ಪುಟದಿಂದ ಮುಂದುವರಿದಿದ್ದು)

ಯನ್ನು ನಡಿದ ವ್ಯಾಯಾಮ ಶಾಲೆಯ ನಿರ್ದೇಶಕರು ಈ ಪ್ರಯೋಗವನ್ನು ಮಾಡಿದ್ದು ನವಶಕ್ತಿ [illegible] ವ್ಯಾಯಾಮ ಶಾಲೆಯ ಚಾಲಕರು ಧನ್ಯವಾದಗಳನ್ನು ಅರ್ಪಿಸುತ್ತಾರೆ

ಇದೇ ಬರುವ ಜನವರಿ ತಿಂಗಳಿಂದ [illegible] ಶಾಲೆಗಳಿಗೆ ಇದರ ಸಂಬಂಧದಲ್ಲಿ [illegible] ಎಂಬ ಶಿಕ್ಷಣ ಪದ್ಧತಿ [illegible] ಇದರ ಪ್ರಾರಂಭವನ್ನು ಕಾರ್ಯಕಾರಿ ಮಂಡಳದಿಂದ ಕೊಡಲು ಮುಂದಾಗಿದ್ದು ಮತ್ತು ಅದಕ್ಕಾಗಿ ಕೆಲವೊಂದು ನಿಧಿಯನ್ನು ಸಂಗ್ರಹಿಸಿದರೆ ಶಾಲೆಯ ಈ ನಿಧಿಯನ್ನು ಈ ಶಿಕ್ಷಣಕ್ಕಾಗಿ ಬಳಸಬೇಕೆಂದು ತೀರ್ಮಾನಿಸಿದ್ದಾರೆಂತೆ [illegible] ಬಂದದ್ದರಿಂದ, [illegible] ಪ್ರಾರಂಭಿಸಿದ ನಿಧಿಯನ್ನು ಹಾಗೆಯೇ ಕಾಯ್ದಿಟ್ಟಿದ್ದಾರೆ

ಎಲ್ಲ ಕಿರಾಣಿ ಅಂಗಡಿಗಳಲ್ಲಿ ಅಕ್ಕಿಯ ಕೊರತೆ ಬಹಳವಿದ್ದು ಜನರಿಗೆ [illegible] ಅಕ್ಕಿಯ ಬದಲು [illegible] ಕೊಡಲು ಅಪೇಕ್ಷಿಸುವವರಿಗೆ [illegible] ಹೇಳುತ್ತಾರೆ ಇದ್ದದ್ದರಿಂದ ಈ ವ್ಯವಸ್ಥೆಯ ಲಾಭ ಪಡೆಯ ಬಹುದು

[illegible] ಪರೀಕ್ಷೆಯ ಕೇಂದ್ರವನ್ನು [illegible] ವಿದ್ಯಾರ್ಥಿ [illegible] ಕಳೆದ ವರ್ಷ [illegible] ವಿದ್ಯಾರ್ಥಿಗಳಿಗೆ [illegible] ಕೇಂದ್ರವನ್ನು [illegible] ವಿದ್ಯಾ [illegible] ಮಾತ್ರ ಪರೀಕ್ಷೆಗಳನ್ನು [illegible] ಹುಡುಗರಿಗೂ [illegible] ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಗೆ ಹೋಗುವ [illegible] ವಿದ್ಯಾರ್ಥಿ [illegible] ಗೊತ್ತುಪಡಿಸಲಾಗಿದೆ

[illegible] ಕಿರಾಣಿ ಅಂಗಡಿಗೆ [illegible] ಬಂದ [illegible] ಅಂಗಡಿ [illegible] ೨೦೦ ಚೀಲಗಳು [illegible] ಅಂಗಡಿಯಲ್ಲಿ [illegible] ಚೀಲಗಳು [illegible] ಆಗುತ್ತದೆ [illegible] ಆಗುತ್ತದೆ ಅಕ್ಕಿ

ಗೋಕರ್ಣದೊಳಗಿನ ಶ್ರೀ ಮಹಾಬಲೇಶ್ವರ ಮತ್ತು [illegible] ದೇವಾಲಯಗಳ [illegible] ಅಂಗಡಿಕಾರರು [illegible] ಹಾಗೂ [illegible] ಮಾಡಿದ್ದಾರೆ [illegible] ಆಗುತ್ತದೆ

ಕಳೆದ ಸೋಮವಾರ (ತಾ. ೫) ರಂದ ಗೋಕರ್ಣ ದೊಳಗೆ ಪ್ರಾಥಮಿಕ ಶಿಕ್ಷಕರ ಸಹಾಯಕ ತರಬೇತಿ ವರ್ಗ ವೊಂದು ತೆರೆಯಲ್ಪಟ್ಟಿದೆ ಈ ವರ್ಗ ೩ ತಿಂಗಳು ನಡೆಯುವದಂತೆ ಶಾಲೆಗಳಲ್ಲಿ [illegible] ಶಿಕ್ಷಣ [illegible] ಪದ್ಧತಿಯನ್ನು [illegible] ವರ್ಗಗಳು ನಡೆ [illegible] ಗೋಕರ್ಣದೊಳಗಿನ ವರ್ಗದ ಪ್ರಾರಂಭೋತ್ಸವವು ರಾ॥ [illegible] ಅಧ್ಯಕ್ಷತೆಯಲ್ಲಿ ನಡೆಯಿತು ಈ ಸಮಾರಂಭಕ್ಕಾಗಿ ಬಂದ ವಿದ್ಯಾರ್ಥಿಗಳು ಹೊಸ ಯೋಜನೆಯ ಸ್ವರೂಪ, ಉದ್ದೇಶ ಮತ್ತು ಫಲಪ್ರಾಪ್ತಿಗಳನ್ನು ಸಭೆಯರಿಗೆ ತಿಳಿಸಿಕೊಟ್ಟರು

ಹೊನ್ನಾವರ— (ತಾ ೧೧-೧೨-೪೯) ರಾ॥ [illegible] ಎಂಬವರು ಇಲ್ಲಿ ರೆಸಿಡೆಂಟ ಮೆಜಿಸ್ಟ್ರೇಟರಾಗಿ ಬಂದಿದ್ದಾರೆ

ಮೊನ್ನೆ [illegible] ಪೋಲೀಸರು ಒಂದು [illegible] ಜನರನ್ನು ಬಂಧಿಸಿದ್ದಾರೆ ಈ ವಾಂಡ [illegible] ಸಂಬಂಧ ಕೆಲವು ಬುಟ್ಟಿಗಳೂ [illegible]

ಕಳೆದ ತಾ. ೩ನೇಕ್ಕೆ ಇಲ್ಲಿಂದು ಸಂಸ್ಥೆಯ [illegible] ಸ್ಥಾಪನೆಯಾಗಿದೆ ರಾ॥ ಲಕ್ಷ್ಮಣ [illegible] ಈ ಸಂಸ್ಥೆಯ ಅಧ್ಯಕ್ಷರು, ರಾ॥ [illegible] ಕಾರ್ಯದರ್ಶಿಗಳು ಸಂಸ್ಥೆಯ ಪ್ರಾರಂಭೋತ್ಸವದ [illegible] ಕಾಲೇಜಿನ [illegible] ಗೋರೆಯವರು "[illegible] ಸುಧಾರಣೆಯೂ" ಎಂಬ ವಿಷಯದ ಮೇಲೆ ಒಂದು ವಿದ್ವತ್ಪೂರ್ಣ ವ್ಯಾಖ್ಯಾನ ಕೊಟ್ಟು, [illegible] ಭಗವದ್ಗೀತೆಯಿಂದಲೂ ಆಧಾರಗಳನ್ನು ಕೊಟ್ಟು ಒಂದು ಸಂಸ್ಥೆಯ ವೈಶಿಷ್ಟ್ಯಗಳನ್ನು ತೋರಿಸಿಕೊಟ್ಟರು

ಗೇರಸಪ್ಪಾ— (ತಾ ೭-೧೨-೪೯) [illegible] ರಕ್ತಿಯು ಈ ವರ್ಷ ಪ್ರದರ್ಶನಕ್ಕೆ [illegible] ದ್ದಾಗಿದೆ! ನಮ್ಮ ಜಿಲ್ಲೆಯ [illegible] ಮೇಲೆ [illegible] ಮುಂದಿನ [illegible] ನಮ್ಮ ಜಿಲ್ಲೆಯ [illegible] ಇದರ [illegible] ಹೇಳಲು [illegible] ಒಂದು [illegible] ದಿನ [illegible] ವರ್ಷದ [illegible] ಜಿಲ್ಲಾ ಕಾಂಗ್ರೆಸ ಸಮಿತಿಯ ಶ್ರೀ [illegible] ಮಂತ್ರಿಗಳ [illegible] ಕಾಂಗ್ರೆಸ್ [illegible] ಮಂತ್ರಿಗಳನ್ನು [illegible] ಈ ವರ್ಗದ [illegible] ಪ್ರಯತ್ನಿಸಿ [illegible] ಪ್ರಯತ್ನಗಳು ಕಾಣುತ್ತವೆ [illegible] ಹೇಳಲಾಗುವದಿಲ್ಲ

ನಮ್ಮಲ್ಲಿ ಕತ್ತದಿಂದ ತಯಾರಿಸಿದಂಥ
ಚೆರ್ಕಾ ಹುರಿ, ಬಾವಿ ಹಗ್ಗ, ಬ್ರಶ್
ಮೆಟ್, ಮೆಟಿಂಗ ಮುಂತಾದವುಗಳು
ಯೋಗ್ಯ ದರದಲ್ಲಿ ಸಿಗುತ್ತವೆ
ಚೇರಮನ್, ಕೋ ಆ ಸೊಸೈಟಿ ಲಿಮಿಟೆಡ
ಹೊನ್ನಾವರ (ಉ ಕ)

ಶ್ರೀ ದತ್ತ ದೇವರ ಉತ್ಪತ್ತಿ ಮತ್ತು ವಿಕಾಸ.

[illegible]

ಜಾಹೀರ ಪ್ರಕಟನೆ.

[illegible]

V S HABBU,

[illegible]

APPLICATIONS are invited from female Candidates between the age of 21 and 30 for training in Secondary Dais Course of six months at the Civil Hospital Karwar from 1st January 1950 on stipend of Rs 40/- p m and Uniform Allowance of Rs 5/- p m

Only those who have passed fourth Standard Kannad Marathi or English and who are domiciled in North Kanara District need apply to the CIVIL SURGEON KARWAR before 20th December 1949 The Candidates if called for interview will have to come to Karwar at their own cost No guarantee of selection is given

Karwar, 23rd November 1949

